ಇ. 375

ಕಥಾಂತರಂಗ

ಡಾ. ವಿಜಯಾ ಸುಬ್ಬರಾಜ್ ಅವರ ಸಮಗ್ರ ಕತೆಗಳು



ಕಣ್ವ ಪಬ್ಲಿಕೇಷನ್ಸ್ ಪ್ರೈವೇಟ್ ಲಿ.
ಬೆಂಗಳೂರು

ಡಾ॥ ವಿಜಯಾ ಸುಬ್ಬರಾಜ್
ನಂ. ೫೧, ೫೦೩, 'ಎ' ಕ್ರಾಸ್, ೩೫ನೇ ಮೈನ್,
ಅತ್ತಿಮಬ್ಬೆ ರಸ್ತೆ, ಬನಗಿರಿ ನಗರ, ಬನಶಂಕರಿ ೩ನೇ ಸ್ಟೇಜ್,
ಬೆಂಗಳೂರು - ೫೬೦ ೦೮೫
ಫೋನ್: ೨೬೭೯೩೨೦೯ ಮೊಬೈಲ್: ೯೯೮೬೯ ೨೦೮೭೬

ಇ-375

ಕಥಾಂತರಂಗ

(ಡಾ.ವಿಜಯಾ ಸುಬ್ಬರಾಜ್ ಅವರ ಸಮಗ್ರ ಕತೆಗಳು)

ಡಾ॥ ವಿಜಯಾ ಸುಬ್ಬರಾಜ್

ಕಣ್ವ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
ಬೆಂಗಳೂರು

KATHAANTHARANGA

By:
Dr. Vijaya Subbaraj
51, Hamsi, 1-A Cross
35th Main, Banagirinagara
Banashankari 3rd Stage
Bangalore - 560085
Phone : 080-26793219

Published by
Kanva Publications Pvt Ltd.
"Kaala Kanasu", No.894
1 st Main, Nisarga Badavane
Chandra Layout
Bengaluru - 560 072
Ph: 080 - 23426778
E-mail : giriraju@kanvaprakashana.com
web : www.kanvaprakashana.com

Publisher: M.R.Giriraju
M : 98450 52481

© **Author**

First Impression : 2010
Price : Rs.290 /-
Pages : XX +456=476

Paper Used : 70 GSM Maplitho
Book Size : Demy 1/8
Cover page Art : **K.V.Pundalika**

Printed At
Akshara Printers
Bengaluru

ಅರ್ಪಣೆ

ನನ್ನ ಬಾಳ ಸಖನಾದ
ಸುಬ್ಬರಾಜ್. ಎಸ್. ಅವರಿಗೂ
ಮತ್ತು
ನನ್ನ ಪ್ರೀತಿಯ ಮಗಳಾದ
ಮೃಣಾಲಿನಿ ಗೂ
ನನ್ನ ಸ್ನೇಹದ ಕಾಣಿಕೆ

KATHAANTHARANGA

By:
Dr. Vinaya [illegible]
51, [illegible]
13th Main, [illegible]
Banashankari 3rd Stage
Bangalore - [illegible]
Phone: 080-[illegible]

Published by:
Kanva Publications Pvt. Ltd.
[illegible]
[illegible]
Chandra Layout
Bangalore - 560 072
Ph: 080-[illegible]
E-mail: [illegible]
web: [illegible]

Publisher: N.S.Ganesh
M: [illegible]

© Author

First Impression: 2016
[illegible]
[illegible]

ಮುನ್ನುಡಿ

ಪ್ರೀತಿಯ ವಿಜಯಾ ಸುಬ್ಬರಾಜ್,

ನಿಮಗೊಂದು ಅಭಿಮಾನದ ಪತ್ರ ಬರೆಯುವ ಈ ಸುಸಂದರ್ಭವನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ನಿಮ್ಮನ್ನು ಸುಮಾರು ಎಂಬತ್ತರ ದಶಕದ ಆರಂಭದಿಂದಲೂ ಗುರುತಿಸಿಕೊಂಡು ಬಂದಿದ್ದೇನೆ. ಅಪರೂಪವೆನಿಸುವ ಚೈತನ್ಯ. ಲೋಕದ ಎಲ್ಲ ಆಗುಹೋಗುಗಳನ್ನು ಪರಿಚಯಿಸಿಕೊಳ್ಳುವ, ಅವುಗಳ ಒಳಹೊಕ್ಕು ಶೋಧಿಸುವ, ಇದು ನನಗೆ ತಿಳಿಯದು ಎಂದು ಯಾವ ವಿಷಯದಲ್ಲೂ ವಿಮುಖವಾಗದ ಹಾಗೆ ಎಚ್ಚರ ವಹಿಸುವ ನಿಮ್ಮ ಸ್ವಭಾವವೇ ನನಗೆ ತುಂಬ ಇಷ್ಟವಾಗುತ್ತದೆ. ವೃತ್ತಿ, ಕುಟುಂಬ, ಬರಹ, ಹವ್ಯಾಸ, ವಿಶೇಷ ಆಸಕ್ತಿಗಳು ಎಲ್ಲವನ್ನೂ ಉಡಿಯಲ್ಲಿಟ್ಟುಕೊಂಡ ಸ್ನೇಹಮಯಿ ನೀವು. ನಿಮ್ಮ ಅನೇಕ ಬರಹಗಳನ್ನು ಅಯಾಚಿತವಾಗಿ ಕೂಡಾ ಅನೇಕ ಸಂದರ್ಭಗಳಲ್ಲಿ ಓದಿ, ಅಭಿಪ್ರಾಯ ತಿಳಿಸುವ ಅವಕಾಶಗಳೂ ನನಗೆ ಒದಗಿದ್ದವು. ಹಾಗಾಗಿ ನನಗೆ ನಿಮ್ಮ ಪ್ರೌಢಪ್ರಬಂಧ, ಬಾನುಲಿ ನಾಟಕಗಳು, ನಾಟಕಗಳು, ಕವಿತೆ, ವಿಮರ್ಶೆ ಹೀಗೆ ಹಲವು ಬರಹಗಳ ಪರಿಚಯವೂ ಇದೆ. ನಿಮ್ಮ ಉಪನ್ಯಾಸಗಳನ್ನು ಕೇಳಿದಾಗ ನಿಮ್ಮ ನಿಲುವುಗಳು ಕೂಡಾ ಕೆಲವೊಮ್ಮೆ ತುಂಬ ಪ್ರಿಯವಾಗಿವೆ. ಹಲವು ಬಾರಿ ನನಗೆ ಒಪ್ಪಿಗೆಯೂ ಆಗಿಲ್ಲ, ಅವೆಲ್ಲ ಸಹಜ, ಅಲ್ಲವೆ? ಸಂಪೂರ್ಣವಾಗಿ ಅಕಾಡಮಿಕ್ ವಲಯವನ್ನು ಅಪ್ಪಿಕೊಂಡ ನೀವೊಂದು ಕಡೆ, ಸಾರ್ವಜನಿಕವಾಗಿಯೂ ತೊಡಗಿಕೊಂಡ ನಾನೊಂದು ಕಡೆ, ಅಲ್ಲವೆ?

ಇದೀಗ ನಾನು ಹಿಂದೆಂದೂ ಗಮನಿಸಿಯೇ ಇದ್ದಿರದ ಬಹಳ ವರ್ಷಗಳ ಹಿಂದೆ ಪ್ರಕಟವಾದ ಮೊದಲ ಕಥಾ ಸಂಕಲನವನ್ನು ಮರು ಮುದ್ರಣಕ್ಕೆ ಸಿದ್ಧಗೊಳಿಸಿ ಕೈಗಿಟ್ಟು "ನಾಲ್ಕು ಮಾತು ಹೇಳು" ಅಂದಿರಿ. ಖುಷಿಯಿಂದಲೇ ಓದಿದ್ದೇನೆ. ಕಥಾ ಪ್ರಕಾರದಲ್ಲಿ ನಿಮ್ಮ ಮನೋಧರ್ಮ, ಆಳದಲ್ಲಿರುವ ತುಡಿತಗಳನ್ನು ಗ್ರಹಿಸಲು, ಈ

ದೀರ್ಘ ಕಾಲಘಟ್ಟದಲ್ಲಿ ನಿಮ್ಮ ಆಲೋಚನೆ, ನಿಲುವುಗಳಲ್ಲಿ ಏನೆಂಥ ಬದಲಾವಣೆಗಳನ್ನು ಕಾಣಬಹುದು ಎನ್ನುವ ಕುತೂಹಲ ನನಗೆ. ಅದು ಬದುಕನ್ನು ಗ್ರಹಿಸುತ್ತ ಹೋದಂತೆ ಬೆಳೆಯುವ ಬದಲಾಗುವ ಸ್ತ್ರೀ ಮನೋಧರ್ಮವನ್ನು ಗ್ರಹಿಸಲು ಸರಿಯಾದ ದಾರಿ ಎಂದು ನಾನು ಭಾವಿಸುತ್ತೇನೆ. ಹಳೆಯದೆಲ್ಲ ಅಪಕ್ವ ಎಂಬುದನ್ನು ನಾನು ಒಪ್ಪುವುದಿಲ್ಲ. ಜೀವನಾನುಭವ ಯಾವ ಯಾವ ಘಟ್ಟದಲ್ಲಿ ಯಾವ ಯಾವ ನೆಲೆಯಲ್ಲಿ ನಮ್ಮ ಗ್ರಹಿಕೆಯ ಸೂಕ್ಷ್ಮಗಳನ್ನು ಎಚ್ಚರಿಸುತ್ತದೋ ಆ ಮಟ್ಟಿನ ಮಿತಿಗಳಂತೂ ಇದ್ದೇ ಇರುತ್ತದಲ್ಲ.

ಈ ಸಂಕಲನದ ಬಹುತೇಕ ಕಥೆಗಳಲ್ಲಿ ಕಥೆಯೊಳಗೊಂದು ಕಥೆಯಂತೆ, ಒಮ್ಮೊಮ್ಮೆ ಹಲವು ಕಥೆಗಳು ಸುರುಳಿ ಬಿಚ್ಚಿಕೊಳ್ಳುತ್ತವೆ. ಅಲ್ಲೆಲ್ಲ ದಾಂಪತ್ಯದ ಸಾಧ್ಯತೆಗಳನ್ನು ಕಂಡುಕೊಳ್ಳುವ ಪ್ರಯತ್ನದ ಜೊತೆಗೇ ಪ್ರತಿಯೊಂದು ಹೆಣ್ಣಿನ ಬದುಕಿಗೆ ಪುರುಷ ಸಂಗಾತಿ ಅನಿವಾರ್ಯ ಮತ್ತು ಅದು ವೈವಾಹಿಕ ಸಂಬಂಧವಾದರೆ ವಿಹಿತ ಎಂಬ ನಿಲುವಿದೆ. ಒಮ್ಮೊಮ್ಮೆ ಈ ಉತ್ಸಾಹ ಗಂಡು-ಹೆಣ್ಣಿನ ಸಂಬಂಧ ಎಂದರೆ ದೇಹದ ಬಯಕೆಯೇ ಎಂಬ ಹಟವೂ ತೂರಿ ಬಿಡುತ್ತದೆ. ಇಂಥಲ್ಲಿ ಲೈಂಗಿಕತೆಯೇ ಪ್ರಧಾನವಾಗುವ ವಿವಾಹಿತ ಚೌಕಟ್ಟು, ವಿವಾಹೇತರ ಸಂಬಂಧಗಳ ನಡುವಿನ ಗೆರೆಯೂ ಮರೆಯಾಗಿ ಬಿಡುವಷ್ಟು ಆತುರದ ನಿರ್ಧಾರಗಳೂ ನುಗ್ಗಿ ಬಿಡುವುದುಂಟು.

ನೀವು ನಿಮ್ಮ ಮೊದಲ ಸಂಕಲನದಲ್ಲೇ ಕೆಲವೊಮ್ಮೆ ಪ್ರಜ್ಞಾಪೂರ್ವಕವಾಗೋ ಅಪ್ರಜ್ಞಾಪೂರ್ವಕವಾಗೋ ಓದುಗನ ಅಪೇಕ್ಷೆ, ನಿರೀಕ್ಷೆಗೆ ಬರೆಯುವ ಅಂದು ಪ್ರಚಲಿತವಿದ್ದ 'ಜನಪ್ರಿಯ' ಧೋರಣೆಯನ್ನು ನಿರಾಕರಿಸುವ ಪ್ರಯತ್ನ ಮಾಡಿದಾಗ ಖುಷಿಯೆನ್ನಿಸುತ್ತದೆ. ಏಕೆಂದರೆ ಅದು ಈಗಾಗಲೇ ನಮಗೆ ಪರಿಚಿತವಾಗಿರುವ ವಿಷಯದ ಮರುನಿರೂಪಣೆಯೇ ಆಗಿರದೆ ಸೃಜನಶೀಲತೆಯ ಹೊಸ ಮುಂಗಾಣ್ಕೆಯ ಅಗತ್ಯವನ್ನು ಹೇಳುತ್ತದೆಂಬ ಸಮಾಧಾನ.

ದೇಹ-ಕಾಮನೆಗಳೇ ಪ್ರಧಾನವಾದ ಬದುಕಿನ 'ಗಂಟುಗಳ'ನ್ನು ಬಿಡಿಸಲು ಅಧೀನರ ಸಾವು ಮಾತ್ರ ಪರಿಹಾರ ಎಂಬ ನಿಲುವಾಗಲೀ, ದುಡಿಯುವ ಪರಿಸರದ ಒಳರಾಜಕೀಯ, ಅಧಿಕಾರಿ-ಉದ್ಯೋಗಿಯ ನಡುವಿನ ಸಂಬಂಧಗಳು ವಿಧವೆಯ ಬದುಕಿಗೆ ಮಾತ್ರ ಬರುವ ಸಮಸ್ಯೆಗಳೆಂದೂ ತತ್ಸಂಬಂಧೀ ಅಪಪ್ರಚಾರ ಇತ್ಯಾದಿ ತಪ್ಪಿಸಲು ಇಷ್ಟಾನಿಷ್ಟದಾಚೆಗೆ ವ್ಯಕ್ತಿಯೊಂದಿಗೆ ವಿವಾಹ ಬಂಧನದ ಒಳಸುಳಿಗೆ ಸರ್‍ರನೆ ಸರಿಯುವುದೇ ಪರಿಹಾರವೆಂಬಂತೆ 'ರಾಜೀನಾಮೆ' ಕತೆಗೆ ತಿರುವು ಕೊಟ್ಟು ಹುಬ್ಬೇರಿಸುವಂತೆ ಮಾಡಿಬಿಡುತ್ತೀರಿ.

"ಹಾಳು ಮುಂಡೇವು ನಮ್ಮ ಹಿಂದೂ ಹೆಣ್ಣುಗಳು! ಗಂಡಂದಿರು ಚಂಡಾಲರಾದರೂ ಬಾಯಿ ಬಿಡೋಲ್ಲ, ಧೈರ್ಯಮಾಡಿ ಇನ್ನೊಬ್ಬನ್ನ ಮದುವೆಯಾಗೊಲ್ಲ... ಸುಮ್ಮನೆ

ಬಿದ್ದುಕೊಂಡು, ನೊಣದ ಹಾಗೆ ಸಾಯೋತನಕ ಒದ್ದಾಡ್ತಲೇ ಇರ್ತವೆ" ಎನ್ನುತ್ತ 'ನೊಣ'ನೇ ಮೆಟಫರ್ ಮಾಡಿಕೊಳ್ಳುತ್ತ ಗೆಳತಿ ರಮಾಳ ದುರಂತವನ್ನು ಹೇಳುತ್ತೀರಿ. ಆಕೆಯ ಸಲಿಂಗರತಿಯಲ್ಲಿ ಒಲವಿದ್ದ ಪತಿಯ ವರ್ತನೆ ಕೇಳಿ "ಇಂಥ ಗಂಡು ಹುಳುಗಳನ್ನೆಲ್ಲ ಕ್ರಿಮಿನಾಶಕಗಳಿಂದ ಕೊಲ್ಲಬೇಕೆನ್ನುವ" ನಿಮ್ಮ ಸಿಟ್ಟು, ಮೊದಮೊದಲು ಸಿಕ್ಕಿಕೊಂಡ ನೊಣಗಳೆಲ್ಲ ಗಂಡಸರೇ ಅಂದುಕೊಂಡು ಸಿಟ್ಟು-ಸೆಡವಿನಿಂದ ಗೋಣಗಿ ಖುಷಿಯೂ ಪಟ್ಟ ನೀವು ಸಿಕ್ಕಿಕೊಂಡಿರುವುದೆಲ್ಲ ನಮ್ಮ ಜಾತಿಯ ಹೆಣ್ಣುಗಳೇ ಎಂದು ಗ್ರಹಿಸಿದಾಗ ಪೆಚ್ಚಾಗಿ ಹಳಹಳಿಸುತ್ತಲೇ ಹಳ್ಳಿಯ ಪಟೇಲನ ತೆಕ್ಕೆಗೆ ಬಿದ್ದು ತಪ್ಪಿಸಿಕೊಳ್ಳಲಾಗದೇ ತಾನೇ 'ನೊಣ'ವಾಗಿ ಹೋದ ಬಗೆ ಸೊಗಸಾದ ಚಿತ್ರಣ. ಇವೆಲ್ಲ ಬದುಕು 'ಎಲ್ಲೆಲ್ಲಿಯೋ ಹರಿಯುತ್ತಾ, ಹಂಚಿಕೊಳ್ಳುತ್ತಾ' 'ತಾನೇ ಅದು ಅದೇ ತಾನು' ಆಗಿ ಬಿಡುವ ರೀತಿ. ಈ ಆಲೋಚನಾ ವಿಧಾನದಲ್ಲಿ ಅತಿ ತೀಕ್ಷ್ಣ ನೋಟವಿದೆ.

ನಿಮ್ಮ 'ನಿರ್ಧಾರ' ಕತೆಯಲ್ಲಿ ನಿಮ್ಮ ಕಾವ್ಯಪ್ರೇಮ, ಶುದ್ಧ ಅಭಿರುಚಿ ಎದ್ದು ಕಾಣುತ್ತದೆ. ಕತೆಗೊಂದು 'ಮರುಮದುವೆಯ ನಿರ್ಧಾರ'ದ ತಿರುವು ಕೊಟ್ಟು ಅಂಥ ನಿರ್ಧಾರಗಳ ಜೊತೆಗೇ ಇದ್ದಿರಬಹುದಾದ ಸಂಕೀರ್ಣ ಮನಃಸ್ಥಿತಿಯ ತಳಮಳವನ್ನು ಗುರುತಿಸದೆ ಕೈಬಿಡುತ್ತೀರಲ್ಲ ವಿಜಯಾ. ಅಂತರ್ಜಾತೀಯ ದಾಂಪತ್ಯವನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದ ಕತೆಯ ನಾಯಕ ಸಲೀಮನ "ಅನೂ ನಿನ್ನ ಬಾಳನ್ನು ಗೋಳು ಮಾಡಿಕೊಳ್ಳಬೇಡ ಸುವರ್ಣ ಸಂಜೆಗಳು ಸಿಕ್ಕಾಗ ರಾತ್ರಿಗಳನ್ನು ಕರೆಯಬೇಡ" ಅಂದದ್ದನ್ನೇ ಆಧಾರವಾಗಿಟ್ಟುಕೊಂಡು ಸೋಮನಾಥನಲ್ಲಿ ಸುವರ್ಣ ಸಂಜೆ ಕಾಣುವ, ಅವನು ನೆನ್ನೆಗಳನ್ನು ಇಂದಾಗಿ ಅರಳಿಸುತ್ತಾನೆಂಬ ನಂಬಿಕೆ ಪ್ರಕಟಿಸುವ ಅನೂಳ ಚಿತ್ರಣ ಕೊಂಚ ಸೊರಗಿತೆನಿಸಲಿಲ್ಲವೆ?

ಫ್ಯೂಡಲ್ ಸಂಸ್ಕೃತಿಯೊಂದರ ಪಳೆಯುಳಿಕೆಯಂತಿರುವ 'ವಿಪರೀತ' ಕತೆಯ ನಾಯಕನ ಲಂಪಟತೆ, ಅಧಿಕಾರವೆಂದರೆ ಹೆಣ್ಣಿನ ಸಂಗವೆಂಬ ನಿಲುವು ಅವನೆದುರು ಇನ್ನೂ ಪ್ರಾಯ ಬಂದಿರದ ಎಳೆಬಾಳೆಯಂಥ ಮೊದಲ ರಾತ್ರಿಯ ಘೋರ-ಕಣ್ಣೀರಿನ ಚಿತ್ರಣ ಜನಪ್ರಿಯ ಚಲನಚಿತ್ರವನ್ನು ನೆನಪಿಸುತ್ತಿತ್ತು. ಆದರೆ ಲೈಂಗಿಕ ರೋಗದಲ್ಲಿ ಸೋತು ಬಿದ್ದ ಗಂಡನೊಂದಿಗೇ ಒಂದು ಕ್ಷಣ ತನ್ನನ್ನು ಒಪ್ಪಿಸಿಕೊಂಡು ತನ್ನ ಕಸುವೇನೆಂದು ಸಾಬೀತು ಮಾಡ ಹೊರಟ ಅದೇ ಬಾಲೆ ಯೌವನಸ್ಥೆಯಾದಾಗಿನ ಮನಃಸ್ಥಿತಿ-ಛಲವನ್ನು ಚಿತ್ರಿಸಿದಾಗ ಅಲ್ಲೊಂದು 'ಹೆಣ್ಣು ಮಗು' ತನ್ನ ಅಸ್ತಿತ್ವ ಸ್ಥಾಪನೆಗೆ ಹೋರಾಟ ಮಾಡುತ್ತಿದೆ. ಅದಕ್ಕೆಷ್ಟೊ ಮಿತಿ, ಅಪಾಯಗಳಿವೆ. ಆದರೂ ಅದೊಂದು ಸಣ್ಣ ಕಿಡಿ ಅನ್ನಿಸಿತು.

'ಒಳದನಿ' ಕತೆಯು ಉದ್ದಕ್ಕೂ ಕತೆಯೊಳಗೊಂದು ಕತೆಯಂತೆ, ಹಲವು ಬದುಕಿನ ಕತೆಗಳು ಬೆಸೆದುಕೊಂಡಿವೆ. ಆದರೆ ಅವು ಬಿಚ್ಚಿಕೊಳ್ಳುವ ಬಗೆ 'ಅನೈತಿಕ ಬದುಕೇ

ಲೋಕದ ನಡೆ' ಅನ್ನಿಸಿ ಬಿಡುತ್ತದೆ. ಅದರ ಅನಿವಾರ್ಯತೆ–ಒತ್ತಡಗಳ ಸಮರ್ಥನೆಯೂ ಸಿಕ್ಕುವುದೇ ಇಲ್ಲ.

'ಮಾನಿಷಾದ' ಕತೆಯ ವಸ್ತು ಕೊಂಚ ಯೋಚನೆಗೆ ಹಚ್ಚುತ್ತದೆ. ಪ್ರತಿಯೊಂದು ಮಾತೂ ಕಾವ್ಯ ಪ್ರತಿಮೆಗಳಂತೆ ಹಲವು ಅರ್ಥಗಳನ್ನು ಧ್ವನಿಸುತ್ತವೆ. ಬಿಡಿಸಿ ಹೇಳದೆಯೇ ಒಂದು ಬದುಕಿನ ಸಂಕಟವನ್ನು, ಅದನ್ನೆಲ್ಲ ದಾಟಿ ಅನಂತದಲ್ಲಿ ಲೀನವಾಗಿ ಬಿಡುವ ಜೀವದ ತವಕವನ್ನು ದರ್ಶಿಸುವಂತೆ ಮಾಡುತ್ತದೆ. "ಕತ್ತಲನ್ನು ಉಗುಳಿಬಿಟ್ಟು ಬೆಳಕನ್ನು ಹೀರಿ, ಅದರಲ್ಲಿ ಮೀರುವ ಬಯಕೆ" "ಸಮುದ್ರದ ಆಳದಲ್ಲಿ ಉರಿಯುವ ಬೆಳಕಿನ ಉಂಡೆ"ಯಂಥ ಅನೇಕ ಸಾಲುಗಳು ಮತ್ತೆ ಮತ್ತೆ ಆ ತಲ್ಲಣಿಸುತ್ತಿರುವ ಜೀವವನ್ನು ಅಪ್ಪಿ ಸಂತೈಸಬೇಕೆನ್ನುವಂತೆ ಒಳಗನ್ನು ಕದಲಿಸುತ್ತದೆ. ನಿಮ್ಮ ಲೇಖನಿಗೆ ಇಲ್ಲಿ ವಿಶಿಷ್ಟ ಶೈಲಿಯೊಂದು ಸಿದ್ಧಿಸಿದೆ. ಇದನ್ನೇಕೆ ನೀವು ಹಿಡಿದಿಟ್ಟುಕೊಳ್ಳಲಿಲ್ಲ, ಮುಂದುವರಿಸಲಿಲ್ಲ ಅನ್ನಿಸಿತು.

"ಗಂಡಸಿನ ಗುಲಾಮಳಾಗಿ ಇರುವುದು ಒಗ್ಗದಕ್ಕೆ ತಾನೇ ಆರಿಸಿಕೊಂಡದ್ದು ಒಂಟಿತನ. ಆದರೆ ಕೂಡಿ ಬಾಳುವ ಬದುಕು ಬೇಡವೆಂದರೂ ಕಾಮನೆಗಳನ್ನು ತಣಿಸುವಲ್ಲಿ ತಿರಸ್ಕಾರವಿಲ್ಲ" ಎಂಬ ನಿಲುವಿಗೆ 'ತಾನೊಂದು ಹಿಪೋಕ್ರಿಟ್' ಎಂಬ ಎಚ್ಚರ ಮೂಡಿದ ನಂತರದ ಬದುಕಿನ ಮುಂಗಾಣ್ಕೆ ಏನು?

ಕೆಲವು ಕತೆಗಳು ನಿಮ್ಮ ವ್ಯಕ್ತಿ ಸಂಬಂಧವಾದ ಅನುಭವವನ್ನು ಹೇಳುತ್ತ ಸರಳ ರೂಪ ಪಡೆದಿವೆ. ಇರಲಿ.

ಒಟ್ಟಾರೆ ನಿಮ್ಮ ಕತೆಗಳಲ್ಲಿ ಒಳ್ಳೆಯತನ–ಕೆಟ್ಟತನಗಳ ಆಯ್ಕೆಯ ಆಚೆಗೆ ಹುಸಿ ಮೌಲ್ಯಗಳಿಗೆ ಒಡ್ಡಿಕೊಳ್ಳಲೇಬೇಕಾದ ಅನಿವಾರ್ಯಗಳು ಸೃಷ್ಟಿಯಾಗುತ್ತವೆ. ಆದರೆ ನೀವು ವಿವರಣೆಗಳಲ್ಲಿ ತರುವ ಎಲ್ಲವೂ ಸಾಮುದಾಯಿಕ ಸತ್ಯದ ಪ್ರತಿನಿಧೀಕರಣವಾಗುವುದಿಲ್ಲ. ಅಂಥ ಎಲ್ಲ ಅನುಭವಗಳ ಹಿಂದೆ ಆಳವಾದ ಇನ್ನಾವುದೊ ಸತ್ಯ, ಮನಸ್ಥಿತಿ, ಪರಿಸ್ಥಿತಿ ವಾತಾವರಣ ಇರಬಹುದು; ಇರುತ್ತದೆ. ಬಹಳ ಹಿಂದೆ ಹುಟ್ಟಿದ ಕತೆಗಳಿವು. ಇನ್ನೂ ಹೊಸ ದಿಕ್ಕುಗಳು ಅಗೋಚರವಾಗೇ ಉಳಿದಿರಬಹುದಾದ ಅನುಭವದ ಮಿತಿಗಳೂ ಇದ್ದಿರಬಹುದು. ಅವೆಲ್ಲವನ್ನೂ ಮೀರಿದ ಬದುಕಿದ ವಾಸ್ತವವೂ ಇದೆ. ಈ ಎಲ್ಲವನ್ನೂ ಮೀರಿ ನಿಲ್ಲುವ ಸಾಹಸಿಗಳೇ ಬೇರೆ. ಇದೇ ಕಥಾವಸ್ತುವನ್ನು ಈ ಸುದೀರ್ಘ ಕಾಲಾವಧಿಯಲ್ಲಿ ನೀವು ಕಂಡ ಹಲವು ಸತ್ಯಗಳೆದುರು ನಿಕಷವಾಗಿಟ್ಟು ಅದು ನಿಜವಾದ ಸಮಯ ಪರೀಕ್ಷೆಯಾಗುತ್ತದೆ. ನಿಮ್ಮ ಲೇಖಣಿಯ ಕಸುವು ಇದರಾಚೆಗೆ ಜಿಗಿದು ಮತ್ತೊಂದು ಬದುಕನ್ನು ಕಟ್ಟುತ್ತದೆ; ಕಟ್ಟಲಿ. ಇಲ್ಲಿರುವ ಎಲ್ಲ ಕತೆಗಳ ಬಗೆಗೂ ಹೇಳುವ ಅಗತ್ಯ ಕಾಣುತ್ತಿಲ್ಲ ವಿಜಯಾ. ಬರೆಯಿರಿ, ಈಗ ಮತ್ತೆ ಇದೇ ಅನುಭವಗಳನ್ನು ಮರುಪರಿಶೀಲಿಸಿದಾಗ ಮಾಗಿದ ಮನಸ್ಸು ಈ ಕತೆಗಳಲ್ಲಿ ಅಲ್ಲಲ್ಲಿ

ಒಂದು ಸಣ್ಣ ಮಿಂಚಿನ ಸೆಳಕಂತೆ ಸುಳಿದು ಸರಿದು ಹೋದದ್ದನ್ನು ಹಿಡಿತಕ್ಕೆ ತಂದಿಟ್ಟುಕೊಂಡು ಹೊಸ ದಿಕ್ಕಿನಲ್ಲಿ–ಅರ್ಥದಲ್ಲಿ ಸತ್ಯದ ಒಳನೋಟಗಳಲ್ಲಿ ನಡೆಸಿಕೊಂಡು ಹೋಗುತ್ತದೆ.

ಹಲವು ಕ್ಷೇತ್ರಗಳ ಆಸಕ್ತಿಯಲ್ಲಿ ಸಣ್ಣಕತೆಯ ಪ್ರಕಾರವನ್ನು ಕೈಬಿಡಬೇಡಿ ವಿಜಯಾ. ಮುಂದುವರೆಸಿ. ಸಿದ್ಧಿಸಲಿ. ನಿಮ್ಮೆಲ್ಲ ಒಳಿತನ್ನು ಬಯಸುತ್ತ ನನ್ನ ಈ ಪತ್ರವನ್ನು ಮುಗಿಸುತ್ತೇನೆ.

ಡಾ.ವಿಜಯಾ

ನನಗೆ ತಿಳಿದ ಮಟ್ಟಿಗೆ ಕನ್ನಡದ ಯಾವುದೇ ಹೆಣ್ಣು ಹೃದಯ ಹೀಗೆ ತೀವ್ರತೆಯಿಂದ ತನ್ನ ಅನುಭವಗಳಿಗೆ ಸ್ವರೂಪವನ್ನು ಕೊಟ್ಟಿರುವ ನೆನಪಿಲ್ಲ. ಇಂತಹ ಶೈಲಿಯಂತೂ ಬೇರೆ ಯಾವ ಸ್ತ್ರೀ ಬರಹಗಾರರಲ್ಲೂ ಇರುವುದಿಲ್ಲ ಎನ್ನಿಸಿದೆ. ಅವರೆಲ್ಲಾ ಸಾಮಾನ್ಯವಾಗಿ ಪೂರ್ಣ ಜಾಗೃತ ಮನಸ್ಸಿನಿಂದ ಕಾರ್ಯನಿರತರಾದವರು. ಈ ವಿಷಯದಲ್ಲಿ ಜಾಗೃತಿ ಮತ್ತು ಆಂತರಂಗಿಕತೆ ಎರಡನ್ನೂ ಅಚ್ಚುಕಟ್ಟಾಗಿ ಬಳಸುವ ಏಕಮಾತ್ರ ಲೇಖಕಿ ಶ್ರೀಮತಿ ವೀಣಾ ಎಲಬುರ್ಗಿಯವರನ್ನು ಬಿಟ್ಟರೆ, ಇನ್ನೂ ಜಾಗೃತಿಯನ್ನು ಸರಿಯಾಗಿ ಬಳಸಿಕೊಳ್ಳಬೇಕಾದವರು ವಿಜಯಾ ಸುಬ್ಬರಾಜ್ ಒಬ್ಬರೇ. ಅಂತಹ ಎಚ್ಚರಿಕೆಯನ್ನು ಬಳಸದಿದ್ದರೆ ಈ ಕತೆಗಳು ಅಸ್ಪಷ್ಟವಾಗುತ್ತಿರಲಿಲ್ಲ. ಎಲ್ಲವೂ "ಒಳದನಿ"ಗಳಂತೆ ತೋರುತ್ತಿರಲಿಲ್ಲ.

ಅನೇಕ ವೇಳೆ ಈ ಕತೆಗಳು ಕೇವಲ ಘಟನಾವಳಿಗಳ ಜೋಡಣೆಯಾಗುತ್ತದೆ. ಕತೆಯ ಹೇಳಿಕೆಯು ಉದ್ದವಾಗಿರುವ ಕಡೆಗಳಲ್ಲೆಲ್ಲಾ ಈ ಜೋಡಣೆಯಾಗಿದ್ದು ಇವರ ಭಾವುಕತೆ ಮಾತ್ರವೇ ಅತಿಯಾಗುತ್ತದೆ. ಅಲ್ಲದೆ ಕತೆಯ ಪಾತಳಿಯು ಬದುಕಿನ ಬಗ್ಗಡದ ತಳವನ್ನು ಮುಟ್ಟುವುದೇ ಇಲ್ಲ. ಹೀಗಾಗಿ ಇಲ್ಲಿಯ ಅನೇಕ ರಚನೆಗಳು ಪ್ರಬಂಧಗಳಂತೆ ತೋರಬಹುದು.

ವಿಜಯಾ ಸುಬ್ಬರಾಜ್‌ರವರು ಮಾನಿಷಾದ, ಬೀಳ್ಕೊಡುಗೆ, ಗಂಟುಗಳು, ನೊಣ ಈ ನಾಲ್ಕು ಘಟನೆಗಳಲ್ಲಿ ಓದುಗರ ಆತ್ಮೀಯತೆಯನ್ನು ಪಡೆದುಕೊಳ್ಳುತ್ತಾರೆ ಎನ್ನಿಸಿದೆ. ಇವುಗಳಲ್ಲಿ ಒಂದೊಂದು ಉದ್ದಿಶ್ಯವೂ ಹೊಳೆಯುವುದರಿಂದ ಈಕೆ ಮನಸ್ಸು ಮಾಡಿದರೆ ಅಂದರೆ ವಿಮರ್ಶಾ ಪ್ರಜ್ಞೆಯನ್ನು ಹರಿತ ಮಾಡಿಕೊಂಡರೆ ಒಳ್ಳೆಯ ಹೊಸ ರೀತಿಯ ಸಣ್ಣ ಕತೆಗಳನ್ನು ರಚಿಸಬಲ್ಲರು ಎನ್ನಿಸುತ್ತದೆ.

"ಗಂಟುಗಳು" ನಿಜಕ್ಕೂ ಗಮನಿಸಬೇಕಾದ ಕೃತಿ. ಯುವತಿಯೊಬ್ಬಳಿಗೆ ಬದುಕು ಇಂದಿನ ಪರಿಸರದಲ್ಲಿ ಅದರ ಅಸ್ಪಷ್ಟ ಆಶಯಗಳಲ್ಲಿ ಹಲವು ಬಗೆಯ ಗೋಜಲಿನಲ್ಲಿ ಅರ್ಥವಾಗದ (ಕತೆಯ ಉದ್ದೇಶವೇ ಅದು) ಒಂದು ಮಾಲೆಯಾಗಿ ಕಣ್ಣೆದುರಿಗೆ ತೂಗುತ್ತದೆ. ಈ ಕತೆಯ ವಿಶೇಷವೇ ಇಂಥ ವಸ್ತುವಿನಲ್ಲಿದೆ.

ವಿಜಯಾ ಸುಬ್ಬರಾಜ್‌ರವರ ಈ ಸಂಗ್ರಹವನ್ನು ಕನ್ನಡಿಗರು ಕೊಂಚ ವಿಶಾಲ ಹೃದಯದಿಂದಲೇ ಸ್ವಾಗತಿಸಬೇಕಾದೀತು. ಆದರೂ ಇವರು ಕಥನ ಕಲೆಯಲ್ಲಿ ಕೈ ಪಳಗಿಸಿಕೊಂಡು ನಿಜಕ್ಕೂ ಚಿರಕಾಲ ಉಳಿಯಬಲ್ಲ ರಚನೆಗಳನ್ನು ನೀಡುತ್ತಾರೆಂದು ನಂಬಬಹುದಾಗಿದೆ. ಈಚಿನ ದಿನಗಳಲ್ಲಿ ಸಣ್ಣ ಕತೆಯು ಭಾವಗೀತೆಯಂತೆ ಪ್ರಕಾಶಕರ ಅನಾದರಣೆಗೆ ಗುರಿಯಾಗುತ್ತಿದೆ. ಇವುಗಳಿಗೆ ಮಾರುಕಟ್ಟೆಯಿಲ್ಲವೆಂಬುದು ವ್ಯಾಪಾರಿಗಳ ಆಕ್ಷೇಪ. ಆದುದರಿಂದ ಸಣ್ಣ ಕತೆಗಾರರು ಸ್ವಂತ ಪ್ರಯತ್ನ ಮತ್ತು ಪ್ರೇರಣೆಗಳಿಗೆ ಮಾತ್ರ ಮಾರು ಹೋಗಬೇಕಾಗುತ್ತದೆ. ಈ ಕತೆಗಾರ್ತಿಯರಲ್ಲಿ ಅಂತಹ ಛಲವೇನೋ ಇದೆ. ಅದರ ಬಲದ ಮೇಲೆ ಮುಂದುವರಿದಾರೆಂದೂ ಅನ್ನಿಸಿದೆ.

ಈ ಕತೆಗಳಲ್ಲಿ ಕಂಡು ಬರುವ ಅಸ್ಪಷ್ಟತೆಗೆ ಶೈಲಿಯು ಕಾರಣವಾಗಿಲ್ಲ ಎಂಬುದು ಒಂದು ಸಮಾಧಾನ. ಹೆಣ್ಣು ಹೆಂಗಸಾಗಿ ಬದುಕಿನ ಪದರಗಳನ್ನು ಬಿಡಿಸುವಲ್ಲಿ ಇನ್ನಷ್ಟು ಅನುಭವ ಕೊಡಬೇಕಾದೀತು. ನಮ್ಮ ಗಂಡು ಬರಹಗಾರರು ಹೆಣ್ಣನ್ನು ಚಿತ್ರಿಸುವ. ಅರ್ಥೈಸುವ ರೀತಿಯಲ್ಲಿಯೇ ವಿಜಯಾ ಸುಬ್ಬರಾಜ್‌ರವರು ಗಂಡನ್ನು ಕುರಿತು ಬರೆಯುತ್ತಿದ್ದಾರೆ. ಇದರಿಂದ ಒಳ್ಳೆಯ ಸಾಹಿತ್ಯವು ಒಡಮೂಡಲು ಇಂತಹ ಮಿತಿಯನ್ನು ದಾಟದ ಮತ್ತು ಬದುಕನ್ನು ಅದರ ತಿರುಳಿನ ಪದರಗಳಲ್ಲಿ ಪ್ರಯತ್ನವಾದರೂ ಆಗಬೇಕಾಗುತ್ತದೆ. ಇವರ 'ಗಂಟುಗಳು' ಈ ಕಾಣುವ ನಿಟ್ಟಿನಲ್ಲಿ ಹೊಸ ಆಸೆಯೊಂದನ್ನು ಮೂಡಿಸುತ್ತದೆ.

ಹೀಗೆಯಾದರೂ ಇವರು ಬೆಳೆಯಲಿ ಎಂದು ಆಶಿಸುತ್ತೇನೆ.

ಕ.ವೆಂ. ರಾಜಗೋಪಾಲ

ದಿನಾಂಕ: ೫-೧೨-೧೯೮೦

ಭಾವನಾತ್ಮಕತೆ, ರೂಪಕಾತ್ಮಕತೆಗಳಿವೆ. -ಅನುದ್ದೇಶ ಪೂರ್ವಕವಾಗಿಯೇ ಇವೆಲ್ಲವೂ ಹೇಗೋ ಕತೆಗಳಲ್ಲಿ ನುಸುಳಿವೆ.

ನನ್ನ 'ಮಾನಿಷಾದ', ೧೯೮೦ರಲ್ಲಿ ಬಂದ ಕಥಾ ಸಂಕಲನ ಕುರಿತು ಸಾಕಷ್ಟು ಒಳ್ಳೆಯ ಅಭಿಪ್ರಾಯಗಳನ್ನೇ ವ್ಯಕ್ತಪಡಿಸಿದ್ದಾರೆ. ನನ್ನ ಅಂತರ್ಮುಖತೆಯನ್ನು ಪ್ರಸ್ತಾಪಿಸುತ್ತಲೇ, ಈ ಕತೆಗಳಲ್ಲಿ ನನ್ನ ಹಲವು ಭಾವಸ್ಥಿತಿಗಳನ್ನು ನನ್ನ ಗುರು ಸಮಾನರಾದ ಮತ್ತು ನನ್ನ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರೂ, ಪ್ರಾಂಶುಪಾಲರೂ (ಸಂಜೆ ಕಾಲೇಜಿನ), ಕನ್ನಡದ ಹಿರಿಯ ಲೇಖಕರೂ, ನಾಟಕ ನಿರ್ದೇಶಕರೂ ಎಲ್ಲಕ್ಕಿಂತ ಹೆಚ್ಚಾಗಿ ನನ್ನ ಶ್ರೇಯೋಭಿಲಾಷಿಗಳೂ ಆಗಿದ್ದ ಪ್ರೊ.ಕ.ವೆಂ.ರಾಜಗೋಪಾಲರು ಹೀಗೆ ಗುರುತಿಸುತ್ತಾರೆ – "ಡಾ.ವಿಜಯಾ ಸುಬ್ಬರಾಜ್ ಸಂಪೂರ್ಣವಾಗಿ ಅಂತರ್ಮುಖಿಗಳು. ಈ ಕಾರಣದಿಂದ ಅವರ ಕನಸುಗಳು, ಅನಿಸಿಕೆಗಳು, ಆಸೆಗಳು ಕವಲು ಕವಲಾಗಿ ಹರಿದು ಬರುತ್ತವೆ. ಇದರಲ್ಲಿ ಭಯವಿದೆ; ನೋವಿದೆ; ಹೆಣ್ಣಿನ ದೌರ್ಬಲ್ಯ ಸಹಿತವಾದ ಬದುಕಿನ ಬಯಕೆಯಿದೆ. ನಾಟಕೀಯತೆ ಕೂಡಾ ಸ್ವಗತದ ರೀತಿಯಲ್ಲಿ ಸೇರಿಕೊಂಡಿದೆ."... ಎಂದು ಹೇಳುತ್ತಾ ಹೋಗುತ್ತಾರೆ.

ಹಾಗೆಯೇ ಡಾ.ವಿಜಯಾ ಅವರೂ ಕೂಡಾ ನನ್ನ ಕತೆಗಳಲ್ಲಿನ ಮೌಲಿಕ ಅಂಶಗಳನ್ನೂ, ಕೊರತೆಗಳನ್ನೂ ಗುರುತಿಸುವುದರ ಜೊತೆಗೆ ಒಳ್ಳೆಯ ಕತೆಗಳನ್ನು ಬರೆಯಬಲ್ಲೆನೆಂಬ ಭರವಸೆಯ ಮಾತುಗಳನ್ನು ಆಡಿದ್ದಾರೆ.

ನನಗೆ ಹತ್ತು ಹಲವು ಕ್ಷೇತ್ರಗಳಲ್ಲಿ ಬೇರೆ ಬೇರೆ ಭಾಷೆಗಳಲ್ಲಿನ ಸಾಹಿತ್ಯದಲ್ಲಿ ತುಂಬಾ ಆಸಕ್ತಿ ಇರುವುದರಿಂದ, ಆ ಭಾಷಾ ಸಾಹಿತ್ಯದಲ್ಲಿ ಒಳ್ಳೆಯ ಕತೆಗಳು ಕಾಣಿಸಿಕೊಂಡಾಗ, ಸಾಂದರ್ಭಿಕವಾಗಿ ಅವುಗಳನ್ನು ಅನುವಾದಿಸಿದ್ದೇನೆ. ಹಿಂದಿ ಕತೆಗಳ, ಚೀನೀ ಕತೆಗಳ ಮತ್ತು ಒಂದೇ ಒಂದು ಜಪಾನೀ ಕತೆಯ ಅನುವಾದಗಳಿವೆ.

ಚೀನೀ ಭಾಷೆಯ ನಿಯತಕಾಲಿಕವಾದ ಚೈನೀಸ್ ಲಿಟರೇಚರ್ ಓದುತ್ತಿದ್ದೆ. ನಂತರ, ಲುಷನ್‌ರ ಜೀವನ ಚರಿತ್ರೆ, ಸಾಹಿತ್ಯವನ್ನು ಓದುವಾಗ ನನಗೆ ಅಚ್ಚರಿಯೆನಿಸುವಂತೆ ಅಲ್ಲಿನ ಸಾಮಾಜಿಕ, ಸಾಂಸ್ಕೃತಿಕ, ಸಾಂಪ್ರದಾಯಿಕ ಬದುಕು, ಭಾರತೀಯ ಸಮಾಜ, ಸಂಸ್ಕೃತಿ, ಸಾಂಪ್ರದಾಯಿಕ ನಂಬಿಕೆಗಳು ಸಮಾನವಾಗಿದ್ದವು. ಅದೇ ಕಾರಣಕ್ಕೆ ಚೀನಾದೇಶದ, ೧೮೮೧-೧೯೩೬ರ ನಡುವೆ ಬದುಕಿದ್ದ, ಅತ್ಯಂತ ಪ್ರಭಾವಿ ವ್ಯಕ್ತಿ, ಚಿಂತಕ, ಕ್ರಾಂತಿಕಾರಿಯಾಗಿದ್ದ ಲುಷನ್‌ರ ಕತೆಗಳನ್ನು ಆಯ್ದುಕೊಂಡು ಅನುವಾದಿಸಿದೆ. ಆತನಲ್ಲಿನ ಅದ್ಭುತ ಸೃಜನಶೀಲತೆಯನ್ನೂ, ಅತ್ಯಂತ ಸರಳ ನಿರೂಪಣೆಯನ್ನೂ ಮತ್ತು ವಾಸ್ತವ ಬದುಕಿನ ಚಿತ್ರಣವನ್ನೂ ಮೆಚ್ಚಿಕೊಂಡು ಅನುವಾದಿಸಲು ತೊಡಗಿದೆ. ಚೀನಾ ಸಾಹಿತ್ಯಕ್ಕೆ ಲುಷನ್ ಅಪಾರವಾದ ಕೊಡುಗೆ ನೀಡಿದ್ದಾನೆ. ಹಿಂದಿ ಸಾಹಿತ್ಯದ ಅಭಿಮಾನಿಯೂ ಆದ ನಾನು ಪ್ರೇಮಚಂದ್,

ಜಯಶಂಕರ ಪ್ರಸಾದ್‌ರನ್ನು ತುಂಬಾ ಮೆಚ್ಚಿಕೊಂಡಿದ್ದೆ. ಹಾಗೆಯೇ ಹಿಂದಿ ಸಾಹಿತ್ಯದ ಮಹತ್ವದ ಲೇಖಕಿಯರೆನಿಸಿಕೊಂಡ ಶ್ರೀಮತಿ ಮೈತ್ರೇಯಿ ಪುಷ್ಪಾ ಮತ್ತು ಮೃದುಲಾ ಗರ್ಗ್ ಅವರು ನನ್ನ ಸಾಹಿತ್ಯ ಗೆಳತಿಯರೂ ಆಗಿರುವುದರ ಜೊತೆಗೆ ನನ್ನನ್ನು ಅತಿಯಾಗಿ ಪ್ರಭಾವಿಸಿದ್ದಾರೆ ಕೂಡಾ. ಅವರ ಒಂದೆರಡು ಕತೆಗಳನ್ನೂ ಈ ಸಮಗ್ರ ಕಥಾ ಸಂಕಲನದಲ್ಲಿ ಸೇರಿಸಿದ್ದೇನೆ.

ಅಲ್ಲಲ್ಲಿ ಚದುರಿ ಹೋಗಿದ್ದ ಮತ್ತು ಕೃತಿಗಳೂ ಅಲಭ್ಯವಾಗಿದ್ದುದರಿಂದ, ಒಂದು ಸಮಗ್ರ ಕಥಾ ಸಂಕಲನ ತರಬೇಕೆಂಬ ನನ್ನ ಆಸೆಯನ್ನು ಕಣ್ವ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್‌ನ ಎಂ.ಆರ್.ಗಿರಿರಾಜು ಅವರು ಸಾಕಾರಗೊಳಿಸುತ್ತಿರುವುದು ನನಗೆ ತುಂಬಾ ಸಂತೋಷವಾಗಿದೆ. ಅವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ನನ್ನ ಈ ಕೃತಿಯನ್ನು ಅಚ್ಚುಕಟ್ಟಾಗಿ, ಶ್ರಮವಹಿಸಿ ಡಿ.ಟಿ.ಪಿ. ಮಾಡಿ ಸಹಕರಿಸಿದ ಸೌಮ್ಯಳಿಗೂ ನನ್ನ ಧನ್ಯವಾದಗಳು.

ಎಲ್ಲಕ್ಕೂ ಮಿಗಿಲಾಗಿ ಈ ಕೃತಿಗೆ ಮೂವತ್ತು ವರ್ಷಗಳ ಹಿಂದೆಯೇ, ತಮ್ಮ ಪ್ರಾಮಾಣಿಕ ಅನಿಸಿಕೆಗಳನ್ನು (ಮಾನಿಷಾದ ಸಂಕಲನಕ್ಕೆ) ಬರೆದುಕೊಟ್ಟು ಕೃತಿಯ ಮೌಲ್ಯವನ್ನು ಹೆಚ್ಚಿಸಿದ ಹಿರಿಯರೂ ಗುರು ಸಮಾನರೂ ಆದ ಪ್ರೊ.ಕ.ವೆಂ.ರಾಜಗೋಪಾಲ್ ಅವರಿಗೂ. ಇತ್ತೀಚೆಗೆ 'ಮಾನಿಷಾದ' ಸಂಕಲನ ಕುರಿತು ತುಂಬ ಆತ್ಮೀಯವಾಗಿ, ಸುದೀರ್ಘವಾಗಿ ಪತ್ರ ರೀತಿಯ ಮುನ್ನುಡಿಯನ್ನು ಬರೆದು ಕೊಟ್ಟ ನನ್ನಕ್ಕನ ಸಮಾನರಾದ ಡಾ.ವಿಜಯಾ ಅವರಿಗೂ ನನ್ನ ಮನಃಪೂರ್ವಕ ಕೃತಜ್ಞತೆಗಳು. ಮಿತಿಗಳನ್ನೂ ಹೇಳುತ್ತಲೇ ಅಂತಃಸ್ಸತ್ವವನ್ನು ಎತ್ತಿ ಹಿಡಿದು ಉತ್ತಮ ಕತೆಗಳನ್ನು ನೀಡಬಲ್ಲೆನೆಂಬ ಭರವಸೆ ವ್ಯಕ್ತಪಡಿಸುವುದರ ಮೂಲಕ ಡಾ.ವಿಜಯಾ ಕತೆಗಳನ್ನು ಬರೆಯಲು ಬೇಕಾದ ಉತ್ಸಾಹಕ್ಕೆ ಮರು ಜೀವ ನೀಡಿದ್ದಾರೆ. ಅದಕ್ಕಾಗಿ ಮತ್ತೊಮ್ಮೆ ಅವರಿಗೆ ನನ್ನ ಧನ್ಯವಾದಗಳು.

ಡಾ॥ ವಿಜಯಾ ಸುಬ್ಬರಾಜ್

ಪರಿವಿಡಿ

ಮಾನಿಷಾದ

ಅದೇಮುಖ

ಚೀನೀ ಕತೆಗಳು (ಲುಷನ್‌ರ ಎರಡು ನೀಳ್ಗತೆಗಳು)

ಹುಚ್ಚನ ದಿನಚರಿ ಮತ್ತು ಇತರ ಕತೆಗಳು

ಮಾನಿಷಾದ

ಮಾನಿಷಾದ

ಮೇಲೆ ವಿಸ್ತಾರವಾದ ಬೋಳು ಆಕಾಶ. ಆಗೊಮ್ಮೆ ಈಗೊಮ್ಮೆ ಹರಿದು ಹೋಗುವ ಬಿಳಿಯ ಮೋಡಗಳು, ಬೋಳು ತಲೆಯ ಮೇಲೆ ಮರೆತು ಬಿಟ್ಟ ಬಿಳಿ ಕೂದಲಿನಂತೆ ಕಾಣುತ್ತಿತ್ತು. ಕೆಳಗೆ ನಾನು ತುಂಬು ಪ್ರವಾಹದಲ್ಲಿ ತೇಲಿ ಹೋಗುತ್ತಿದ್ದೇನೆ. ದೊಡ್ಡದಾಗಿ ಏಳುತ್ತಿರುವ ಅಲೆಗಳು ಕಾಲ್ಚೆಂಡಿನಂತೆ ನನ್ನನ್ನು ಎತ್ತಿ ಎತ್ತಿ ಮೇಲಕ್ಕೆ ಎಸೆಯುತ್ತಿವೆ. ಮೇಲೆ ಎಸೆದಾಗ ಗಟ್ಟಿಯಾಗಿ ಆಕಾಶವನ್ನಾದರೂ ಹಿಡಿಯೋಣವೆಂದರೆ ಶೂನ್ಯತೆಯು ಕೈಗೆ ಸಿಗುತ್ತಿತ್ತು. ಜೀವನ ಪರ್ಯಂತದ ಶಕ್ತಿ ಸಂಚಯಿಸಿ ಗಟ್ಟಿಯಾಗಿ ಯಾರನ್ನಾದರೂ ಸಹಾಯಕ್ಕೆ ಕೂಗೋಣವೆಂದರೆ ಒಂದು ಕೀಟವೂ ಕಾಣುತ್ತಿರಲಿಲ್ಲ. ಕಣ್ಣು ಹರಿದಲ್ಲೆಲ್ಲ ಬರಿ ನೀರು ಉಪ್ಪು ನೀರು. ಅಲೆಗಳ ಜೊತೆಗೆ ಗುದ್ದಾಡಿ ಗುದ್ದಾಡಿ ಕೈ ಕಾಲು ಸೋತವು. ಏದುಸಿರು ಬಿಡುವಂತಾಗುತ್ತಿತ್ತು. ಸಮುದ್ರಕ್ಕೆ ದಂಡೆಯೇ ಇಲ್ಲವೇನೋ ಎನಿಸುತ್ತಿತ್ತು. ಸಾವಿನ ಸಮುದ್ರದಿಂದ ಹೇಗೆ ತಪ್ಪಿಸಿಕೊಳ್ಳುವುದು – ಎನಿಸುತ್ತಿತ್ತು. ಜಲಸಮಾಧಿ ನನಗೆ ಗಟ್ಟಿ ಅನಿಸಿತು. ಭಯಂಕರ ಜಲವಿದ್ಯುತ್ ಪ್ರವಾಹದಲ್ಲಿ, ಸೋತ ಪ್ರಯತ್ನದಲ್ಲಿ, ನನ್ನ ಸುತ್ತ ನೆರಳು ಕೈಯೊಳಗೆ ಧಗಧಗ ಉರಿಯುವ ಪಂಜುಗಳು. ಅಸಹ್ಯ ಮೈ. ವಿಕರಾಳ ರೂಪ, ವಿಕಟನಗೆ ನಕ್ಕು ಕುಣಿಯುತ್ತಿದ್ದವು. ಕುದಿದು ಕೆಂಪಾದ ಕಣ್ಣುಗಳಿಂದ ನನ್ನನ್ನು ಇರಿಯುವಂತೆ ನೋಡುತ್ತಾ, ಒಂದೊಂದಾಗಿ ನನ್ನ ಕಾಲಿನಡಿಯಿಂದ ಪಂಜಿನ ಸ್ಪರ್ಶ ಮಾಡಿಸಿದರು. ಬಿಸಿ ಬಿಸಿ ರಕ್ತಕ್ಕೆ ಬೆಂಕಿಯ ಸ್ಪರ್ಶ ಚಟಚಟ ಶಬ್ದ. ನೋವು. ಕ್ರಮೇಣ ಉರಿಯತೊಡಗಿದೆ. ಜ್ವಾಲೆಗಳ ನಡುವೆ ಅಸ್ಪಷ್ಟ ಆಕೃತಿಯಾಗಿ ಕಾಣುವ ನಾನು ಪೂರ್ತಿಯಾಗಿ ಬೆಂಕಿಯುಂಡೆಯಾದೆ. ಭೂ ವಿಕಾಸದ ಮೊದಲಿಗೆ ಭೂಮಿಯೂ ಬೆಂಕಿಯುಂಡೆಯಾಗಿದ್ದುದು ನೆನಪಾಯಿತು. ಹಾಗಾದರೆ ನಾನು ಭೂಮಿ! ನಾನು ಭೂಮಿ! ಸಂತೋಷವಾಯಿತು. ಬೆಂಕಿಯುಂಡೆಯಾಗಿದ್ದರೂ ನನ್ನ ಸಂವೇದನೆಗಳು ಕಳೆದಿರಲಿಲ್ಲ. ಏನಾಗುತ್ತಿದೆಯೆಂಬುದರ ಪತ್ತೆ ಇತ್ತು. ನೋಡ ನೋಡುತ್ತಿದ್ದಂತೆ ನೆರಳುಗಳ ನರ್ತನ ನಿಂತಿತು. ತೃಪ್ತಿಯಾದಂತೆ ಕುಣಿದವು, ಕ್ರಮೇಣ ಕರಗುತ್ತಾ ಮರೆಯಾದವು. ನೀರಿನ ಪದರದ ಮೇಲೆ ಗುಳು ಗುಳು ಮುಳುಗುತ್ತಾ ಹೋದೆ.

ಹೀಗಾದರೂ ದಂಡೆ ತಲುಪಬಹುದೇನೋ ಎಂಬ ಆಸೆ ಮೂಡಿತು. ಮನಸ್ಸು ಹಗುರವಾಯಿತು. ಹಿಂದೆ ತಿರುಗಿ ನೋಡಿದೆ. ಓಹ್ ಊಹಿಸಲಾಗದಷ್ಟು ದೂರ ಸವೆದಿದ್ದೇನೆ. ಹಾಗಾದರೆ ಎಷ್ಟು ದಿವಸದಿಂದ ಈ ಪ್ರವಾಹದ ಒಡಲಲ್ಲಿ ಬದುಕಿದ್ದೇನೆ! ನನ್ನ ತಾಳ್ಮೆಗೆ ನಾನೇ ಮೆಚ್ಚಿದೆ. ಬೀಸುವ ಗಾಳಿ ಸತ್ತಿತು! ಹೆಬ್ಬುಲಿಯಲೆಗಳು ಸೋತವು! ಕಡಲೂ ಮೌನ!

ನಿರಾಳ ಉಸಿರಾಡಿದೆ. ಧಗ ಧಗ ಉರಿಯುತ್ತ ಉರುಳುತ್ತಿದ್ದ ಉಂಡೆ ನಾನು ತಣ್ಣಗಾಗಿದ್ದೆ. ಆ ಉಂಡೆ ಮೈಯೊಳಗಿಂದ ಎರಡು ಕೈ ಎರಡು ಕಾಲು ಹೊರಗೆ ಬಂತು. ದೂರದಲ್ಲಿ ದಂಡೆ ಕಾಣಿಸಿತು. ಈಗ ಅವನು ಸಿಗಬಾರದೆ? ಎನಿಸಿತು. ನೆಮ್ಮದಿಯ ಉಸಿರಾಡುತ್ತಿರುವಷ್ಟರಲ್ಲಿ ಅನಿರೀಕ್ಷಿತವಾಗಿ ದೊಡ್ಡದೊಂದು ಅಲೆ ಬಂದು ಅಪ್ಪಳಿಸಿತು. ಮನುಷ್ಯ ದೇಹದ ಸ್ಪರ್ಶ. ಆಶ್ಚರ್ಯ, ನನ್ನ ಹಾಗೆ ಸೆಳವಿಗೆ ಸಿಕ್ಕವರು ಯಾರಿರಬಹುದು? ಯೋಚಿಸಿದೆ. ಆ ದೇಹ ಕೈಯಾಗಿ ಮೂಡಿದ ನನ್ನ ಕೈಗಳನ್ನು ಹಿಡಿಯಿತು. ನನ್ನ ಬೆಂಕಿದೇಹ ಮಾಯವಾಯಿತು. ದಾಹ ವಿಪರೀತವಾಗಿದ್ದುದರ ನೆನಪಾಯಿತು. ಆ ಮೃದುವಾಗಿದ್ದ ಕೈಗಳಪ್ಪುಗೆಯಿಂದ ಸ್ವಲ್ಪ ದಣಿವಾರಿತು. ಪರವಾಗಿಲ್ಲ. ಒಬ್ಬರಿಗೊಬ್ಬರ ಸಹಾಯ ಸಿಕ್ಕುತ್ತದೆ ಎಂದುಕೊಂಡೆ. ಅಷ್ಟರಲ್ಲಿ ಆ ಕೈಗಳು ನನ್ನ ಮುಖವನ್ನು ತನ್ನತ್ತ ತಿರುಗಿಸಿದವು. ನೋಡುತ್ತೇನೆ, ಅವನೇ. ಅರೇ ಇವನು ಇಲ್ಲಿಗೆ ಹೇಗೆ ಬಂದ! ಕಣ್ಣು ಮೋಸ ಮಾಡಿದವೇನೋ ಕೇಳಿ ಖಚಿತಪಡಿಸಿಕೊಳ್ಳೋಣವೆಂದು ಕೇಳಿದೆ, 'ಯಾರು ನೀನು?' ಅವನು ಆ ಪ್ರಶ್ನೆಗೆ ನಕ್ಕನಲ್ಲದೆ ಉತ್ತರ ಕೊಡಲಿಲ್ಲ. ಮತ್ತೆ ಕೇಳಿದೆ, ಅವನು ಮೊದಲು ದಂಡೆ ಸೇರೋಣ, ಆಮೇಲೆ ಪರಿಚಯ ಎಂದ. ಸುಮ್ಮನಾದೆ. ನೀರು ಬೇಸರ ಬರಿಸಿತ್ತು. ಎಂದು ನೆಲ ಕಂಡೀತು ಎಂದು ಹಂಬಲಿಸಿತು ನನ್ನ ಮನಸ್ಸು.

ದಂಡೆಯನ್ನು ದಾಟಿ ಹರಿದ ನನ್ನ ಕಣ್ಣಿಗೆ ದೂರದಲ್ಲಿ ಮಂದ ಬೆಳಕು ಕಾಣಿಸಿತು ನಾನು ದಡ ಮುಟ್ಟಿದ್ದೆ. ಖುಷಿಯಿಂದ ಕುಣಿಯುವಂತಾಯಿತು. ನನ್ನನ್ನು ಹಿಡಿದುಕೊಂಡು ದಂಡೆವರೆಗೂ ಬಂದ ವ್ಯಕ್ತಿ ನನ್ನನ್ನು ಎಸೆದು ಒಂದೇ ಓಟ ಓಡಿದ. ಯಾಕೆ ಹೀಗೆ ಓಡುತ್ತಿದ್ದಾನೆ ಈ ಮನುಷ್ಯ, ಬಡಪಾಯಿ ಎಂದುಕೊಂಡೆ. ಗಟ್ಟಿಯಾಗಿ ಕುತ್ತಿಗೆ ಪಟ್ಟಿಯನ್ನು ಹಿಡಿದಾದರೂ ಎಳೆಯೋಣವೆಂದು ಕೈ ಚಾಚಿದರೆ ಒಂದೇ ಸಮನೆ ಬೊಗಳುವ ನಾಯಿಯೊಂದೇ ಇತ್ತು. ಅವನು ಇರಲಿಲ್ಲ.

* * *

ಹಗಲು ರಾತ್ರಿಗಳೆಲ್ಲ ನನ್ನ ಪಾಲಿಗೆ ಒಂದೇ ಆಗಿದ್ದವು. ಒಮ್ಮೆಯಾದರೂ ಅವುಗಳ ವ್ಯತ್ಯಾಸ ಅರಿವಿಗೆ ಬರಬಾರದೇ ಎನಿಸಿತು. ದಿನಗಳು ಕಳೆಯುವುದು ಅವನ ಜತೆ ಅಸಹ್ಯವೆನಿಸಿತ್ತು. ಅವನು ಸುಳಿದರೆ ದೈತ್ಯ ನೆರಳುಗಳ ಭೀತಿಯೆನಿಸಿತ್ತು.

ದಿನಂಪ್ರತಿ ಹಸಿದು ಬರುತ್ತಿದ್ದ ಅವನಿಗೆ ನೀಡುವಷ್ಟು ಮಾಂಸ ನನ್ನಲ್ಲಿರಲಿಲ್ಲ, ಗರ್ಜಿಸುತ್ತಿದ್ದ. ಹೆದರಿ ಮೂಲೆ ಸೇರುತ್ತಿದ್ದ ನನಗೆ ಈ ಗುಹೆಯಿಂದ ತಪ್ಪಿಸಿಕೊಂಡು ಹೋಗುವುದಕ್ಕೆ ಸಾಧ್ಯವೇ ಇಲ್ಲವೆನಿಸಿತ್ತು. ದೊಡ್ಡವರ ಒಪ್ಪಿಗೆಯಿಂದ ಈ ಗುಹೆ ಸೇರಿದ್ದೆ. ಒಳಗೆ ಸೇರಿಸಿದ್ದೇ ಬಾಯಿಗೆ ದೊಡ್ಡ ಬಂಡೆಯನ್ನು ಅಡ್ಡಲಿಟ್ಟಿದ್ದರು. ಇವನು ಹೇಗೋ ಬಂಡೆಯನ್ನು ಒತ್ತರಿಸಿ ಹೊರಗೆ ಸುತ್ತಾಡಿ ಕಂಡ ಕಂಡದ್ದನ್ನು ಮೂಸಿ ಮೇದು ಬರುತ್ತಿದ್ದ. ಬಕಾಸುರ ಹೊಟ್ಟೆಗೆ ಅಷ್ಟು ಸಾಕಾಗದೆ ನನ್ನ ಮಾಂಸ ಬೇರೆ ಬೇಕಿತ್ತು. ಮಿರ ಮಿರ ಮಿಂಚುತ್ತ ಸುಪುಷ್ಟವಾಗಿದ್ದ ನನ್ನ ಮಾಂಸ ಕಂಡೊಡನೆ ಜೊಲ್ಲು ಸುರಿಸುತ್ತಿದ್ದ. ಆ ಕಣ್ಣುಗಳಲ್ಲಿ ಕೊಳ್ಳಿ ಬೆಂಕಿ ಉರಿಯುತ್ತಿತ್ತು.

ಹೊರಗಿನ ಪ್ರಪಂಚದ ಬೆಳಕೇ ನನ್ನಿಂದ ದೂರವಾಗಿತ್ತು. ಕಣ್ಣರಳಿಸಿ ದೊಡ್ಡದಾಗಿ ಕಾಣುವ ಅದ್ಭುತಗಳನ್ನು ನೋಡಬೇಕೆಂದು ಬಯಸಿತ್ತು. ಕತ್ತಲು, ಜವಗು, ಬೆವರವಾಸನೆ, ಕೊಳಕು ದಟ್ಟಯಿಸಿತು. ಆ ಪರಿಸರದಲ್ಲಿ ಉದುರಿದ್ದೆಂದರೆ ಕೀಟಗಳು, ಕ್ರಿಮಿಗಳು! ಧೂಳು ಝಾಡಿಸಲೂ ಆಗದ ಆ ಸಂಕೀರ್ಣ ಗುಹೆಯಲ್ಲಿ ನಮ್ಮ ಸುತ್ತ ಜೇಡ ಬಲೆ ಹೆಣೆಯಿತು. ಬಲೆಯೊಳಗೆ ಕೀಟಗಳು–ಕೀಟಗಳ ಮಧ್ಯೆ ನಾನು. ನನ್ನನ್ನು ಕೀಟಗಳು ಕಡಿದು ಕಡಿದು ರಕ್ತ ಹೀರತೊಡಗಿದವು. ತೇಲುಗಣ್ಣು ಬೀಳತೊಡಗಿತು. ಹೇಗಾದರೂ ಗುಹೆಯ ಬಾಯಿ ತೆರೆದಾಗ ಬಲೆ ಕಡಿದು ಹೊರಗೆ ಓಡಿಬಿಡಬೇಕೆಂದುಕೊಂಡೆ!

ಎಷ್ಟು ಚೆನ್ನಾಗಿರುತ್ತೆ! ಕತ್ತಲನ್ನು ಉಗುಳಿಬಿಟ್ಟು ಬೆಳಕನ್ನು ಹೀರಿ, ಅದರಲ್ಲಿ ಮೀಯಬೇಕು, ವಿಚಿತ್ರ ದೃಶ್ಯಗಳನ್ನು ಕಾಣಬೇಕು, ದೊಡ್ಡ ಕಾಡಿನಲ್ಲಿ ಸ್ವಚ್ಛಂದ ಸುಳಿದಾಡಬೇಕು, ನನಗಿಂತ ಭಿನ್ನರಾದವರನ್ನು ನೋಡಬೇಕು. ಹಾಯಬೇಕು, ತಿವಿಯಬೇಕು. ಎಷ್ಟು ಖುಷಿಯಾಗಬಹುದು. ಅವನ ಆ ಹಳಸಿದ ನಾಲಗೆಯ ವಾಸನೆ ಓಕರಿಕೆ ಬರಿಸುತ್ತಿತ್ತು. ರೆಕ್ಕೆ ಪಟಪಟನೆ ಹೊಡದೆ ಕಾದೆ, ಕಾಯುತ್ತಲೇ ಕುಳಿತೆ.

* * *

ನನಗೂ ಸಿಟ್ಟು ಬಂದಿತ್ತು. ಕಿರುಚಿದೆ. ನನ್ನ ಬಾಯ ಬಡಿದು ನಿರ್ಬಂಧಿಸಬೇಡ. ನಿನ್ನಷ್ಟೇ ಸ್ವಾತಂತ್ರ್ಯ ನನಗಿದೆ. ಜೇನು ಸವರಿದ ನಿನ್ನ ನಾಲಿಗೆ ವಿಷ. ನಿನ್ನ ಖುಷಿಗೆ ನಾನು ಪೆಂಡ. ನಿನ್ನ ಸ್ವಾರ್ಥಕ್ಕೆ ನಾನು ದಲಾಲಿ. ನಿನ್ನ ಮೋಜಿಗೆ ನಾನು ಮಾಂಸ. ತಿಳೀತು... ಅದಕ್ಕೇ ನೀನು ನನ್ನ ಮೇಲೆ ನೇಣು ಎಸೆದದ್ದು. ಹಸುರಾಗಿದೆ ಎಂದುಕೊಂಡೆ. ಸುಸ್ಕಾಳ ಊಟ ಸಿಗುತ್ತೆ ಎಂದುಕೊಂಡೆ. ನಿನ್ನ ದುರಭ್ಯಾಸ, ದುಷ್ಟತನ ಅಸಲಿ ಬಣ್ಣ. ಮುಖವಾಡ ಹಾಕಿಕೊಂಡು ಮೋಸಮಾಡಿದೆ.

ನನ್ನ ಮಾತು ಅವನ ಮೇಲೆ ಯಾವ ಪರಿಣಾಮವನ್ನೂ ಬೀರಲಿಲ್ಲ. ಕೆಟ್ಟದಾಗಿ ನಗತೊಡಗಿದ. ಅಸಹ್ಯವಾಯಿತು. ಸಾಯಿಸಿಬಿಡುವ ಯೋಚನೆ ಬಂತು. ಮರುಗಳಿಗೆ ನಾನು ದುರ್ಬಲ ಜಾತಿ ಎಂದು ಗೊತ್ತಾಯಿತು. ನಿನ್ನ ಪಂಜುಗಳಿಂದ ನಿನ್ನ ಹಲ್ಲುಗಳಿಂದ ತಪ್ಪಿಸಿಕೊಳ್ಳುತ್ತೇನೆ. ನೋಡುತ್ತಿರು ಎಂದು ಕೂಗಿ ಹೇಳಬೇಕೆಂದಿದ್ದೆ. ಆದರೆ ಕೆಲಸ ಕೆಡುತ್ತೆ ಅಂತ ಅನ್ನಿಸಿ ಸುಮ್ಮನಾದೆ.

ನಾನೇ ಹೆಣೆದುಕೊಂಡ ಬಲೆ. ಒಳಗೇ ವಿಲಿವಿಲಿ ಒದ್ದಾಡಿದೆ. ದಟ್ಟವಾಗಿ ಬೆಳೆದ ಪೊದೆಗಳನ್ನು ಕಡಿದು ನಾನೇ ಹಾದಿಯನ್ನು ನಿರ್ಮಿಸಿಕೊಳ್ಳಬೇಕು. ಕಿಷ್ಕಿಂಧೆಯ ಕಲ್ಲು ನೆಲದಲ್ಲಿ ಯಕ್ಷಲೋಕದ ಕನಸುಗಳ ಕಳೆ ತೆಗೆಯಬೇಕು.

ಹೊಂಚಿ ಕಾದಿದ್ದು ಒಂದಿಷ್ಟು ಚಿಕ್ಕಕಿಂಡಿಯಾದರೂ ನುಸುಳಿ ಹೋಗಬೇಕು. ನಿರ್ಧಾರ ಗಟ್ಟಿಯಾಗುತ್ತಾ ಬಂತು. ಹೊಗೆಯಾಡುತ್ತಿರುವ ಸಿಗರೇಟು ಹಾಗೆಯೇ ಹಾವಾಗಿ ಹಿಂದಿರುಗಿ ಅವನ ತುಟಿ ಕಚ್ಚಬೇಕೆಂದು ಹಿಡಿ ಶಾಪ ಹಾಕಿದೆ.

ನನ್ನ ಅಸಹಾಯಕತೆ ನಾನು ಹಾರಿಹೋಗಲಾರೆ–ಅನ್ನುವ ಭರವಸೆಯನ್ನು ಅವನಿಗೆ ಕೊಟ್ಟ ಹಾಗಿತ್ತು. ಅದಕ್ಕೆ ಪ್ರತಿಭಟನೆಯಿಲ್ಲದೆ ನನ್ನ ಸಿಡುಕು ಬೈಗಳನ್ನು ತಣ್ಣಗೆ ಸ್ವೀಕರಿಸಿದ.

ಎಷ್ಟು ದೊಡ್ಡದಾಗಿದೆ ಈ ಪ್ರಪಂಚ. ಮೈಮನಸ್ಸು ರೋಮಾಂಚಿತವಾಯಿತು. ನಾನು ಸುರಕ್ಷಿತ. ಇಷ್ಟ ಬಂದಂತೆ ಅಲೆದಾಡಬಹುದು. ಈ ಕಾಡಿನಲ್ಲಿ ಏನೆಲ್ಲ ವೈವಿಧ್ಯತೆಯಿದೆ! ಈ ಪ್ರಾಣಿಗಳು ಬೇರೆ ಬೇರೆಯಾಗಿಯೇ ಇವೆಯಲ್ಲ! ಒಂದೊಂದರ ಬಳಿಯೂ ನಿಂತು ನಿಂತು ಮುಂದೆ ಹೋದೆ.

ಬೆಳಗಿನಿಂದ ಒಂದೇ ಸಮನೆ ಸುತ್ತಾಡಿದೆ. ಹೊಟ್ಟೆ ಚುರುಗುಟ್ಟಿತು. ಮೇವಿಗೆ ಸಮಸ್ಯೆ ಬಂತು. ಹಸಿವಿನ ಅನುಭವ ನನಗೆ. ಮೊಟ್ಟಮೊದಲೆ ಈಗ ಆಗಿತ್ತು. ಆ ಕತ್ತಲಲ್ಲಿ, ಜೀವರಲ್ಲಿ, ಅವರ ಹಿಂಸೆಯಲ್ಲಿ ನಾನು ನಿಸ್ಪಂದ ಜಡವಾಗಿದ್ದೆ. ಹೊರಗೆ ಬಿದ್ದದ್ದೇ ಏನೇನೋ ಭಾವನೆಗಳು, ಬಯಕೆಗಳು. ಅವುಗಳ ಪೂರ್ತಿಗೆ ಸಾಹಸ ಪ್ರಯತ್ನಗಳು. ಪ್ರತಿಯೊಂದು ಗಿಡ ಮರದ ಹಣ್ಣುಗಳ ರುಚಿ ನೋಡಿದೆ. ಸಾಕಾಗಲಿಲ್ಲ. ನಡೆಯುತ್ತಾ ನಡೆಯುತ್ತಾ ಕಾಲು ಚುರುಕುಗೊಂಡು ಓಡತೊಡಗಿದೆ. ಆ ವೇಗಕ್ಕೆ ನನಗೇ ಮುಗ್ಗರಿಸುವಂತೆ ಆಗುತ್ತಿತ್ತಲ್ಲದೆ ಎದುರು ಬಂದದ್ದೆಲ್ಲಾ ಜೋಲಿ ಹೊಡೆದು ಮುಂದಕ್ಕೆ ಜೋರಲಾಗಿ ಬೀಳುತ್ತಿತ್ತು. ಓಡುವ ನನಗೆ ಪ್ರಪಂಚ, ಕಾಡು ನನಗಿಂತ ವೇಗವಾಗಿ ಸ್ಪರ್ಧಿಸಿ ಓಡುವಂತಿತ್ತು.

ಓಡಿದಷ್ಟೂ ನಿಲ್ಲುವುದಕ್ಕೆ ನೆಲೆಯೇ ಸಿಗಲಿಲ್ಲ. ಹೀಗೆಯೇ ಓಡುತ್ತಿದ್ದರೆ ಭೂಮಿಯ ತುದಿಯೂ ತಪ್ಪಿ ಹೋಗುತ್ತದೆ ಅನ್ನಿಸಿತು. ಯಾರಾದರೂ ಸಿಕ್ಕಿದರೆ ಆಶ್ರಯ

ಪಡೆಯಬಹುದು... ಛಿ! ಆಶ್ರಯವೇ? ಆಶ್ರಯದಿಂದ ತಪ್ಪಿಸಿಕೊಂಡೇ ಬಂದಿರುವಾಗ ಮತ್ತೆ ಆಶ್ರಯ ಬಯಸಿತ್ತೇ ಮನಸ್ಸು! ನಾನು ಬಿಟ್ಟು ಬಂದ ಗುಹೆಯೇ ಮತ್ತೆ ಸಿಕ್ಕರೆ ಖಂಡಿತ ಸಮಾಧಿ!

ಮೈ ಕಂಪಿಸಿತು. ಎದೆ ನಡುಗಿತು. ಅವನೇನಾದರೂ ಬೆನ್ನಟ್ಟಿದರೆ! ನನ್ನಿಂದ ಅವನಿಗೆ ಲಾಭವೇ. ಸುಮ್ಮನೆ ಬಿಡಲಾರ. ಅವನ ವ್ಯವಹಾರಗಳು ಕುಸಿಯುತ್ತವೆ. ಹಸಿವಿನಿಂದ ಸಾಯಬೇಕಾಗುತ್ತದೆ. ನನ್ನನ್ನು ಹಿಂಸಿಸುವುದೆಂದರೆ ಒಂದು ಥರಾ ಖುಷಿ. ನನ್ನನ್ನು ಕಾಡುವ ಕ್ಯಾಲಿಬಾನ್. ನನ್ನಲ್ಲಿನ ಮಿರಾಂಡ ಸತ್ತು ಹೋಗಿದ್ದಾಳೆ!

ಹಾವು ಮೊಸಳೆಗಳಿಂದ ಬಿಡಿಸಿ ರಕ್ಷಿಸುವುದಕ್ಕೆ ಪರ್ಸಿಯಸ್ಸಾಗಿ ಬರುವ ಮಹಾನುಭಾವ ಇಲ್ಲ. ನಾನು ಪುರಾಣದ ಹೆಣ್ಣಲ್ಲ! ಈ ಲೋಕದ್ದು! ದೇವರು ಬರಲಾರ. ಮೊರೆಯಿಡುವುದು ಬೇಡ.

ಅವನ ನೆನಪಿನ ನೆರಳು ನನ್ನನ್ನ ಹಿಂಬಾಲಿಸುತ್ತಿತ್ತು. ಭೂತವಾಗಿ ಯಾವ ಕ್ಷಣದಲ್ಲಾದರೂ ನುಂಗಬಹುದಿತ್ತು. ದಟ್ಟವಾದ ಕಾಡು. ಬಹುಶಃ ಬರಲಾರ. ನಾನು ಅವನ ಕಣ್ಣಿಂದ ತಪ್ಪಿ ಹೋಗುತ್ತೇನೆ. ನೊರೆ ಕಾರುತ್ತಾ ಏದುಸಿರು ಬಿಡುತ್ತಾ ಬಾಲ ಸುತ್ತಿಕೊಂಡು ಹೊರಟುಹೋಗುತ್ತೇನೆ – ಭಾವನೆ ಸ್ವಲ್ಪ ಸಮಾಧಾನ.

ಕತ್ತಲು ಬೀಳುವುದೇ ಇಲ್ಲ ಈ ಕಾಡಿನಲ್ಲಿ ಎಂದುಕೊಂಡಿದ್ದೆ. ಆದರೆ ಆಶ್ಚರ್ಯ. ಇಲ್ಲೂ ಕತ್ತಲು. ಅಲ್ಲೂ ಗುಹೆಯಲ್ಲೂ ಕತ್ತಲು. ಇದ್ಯಾಕೆ ಇದು ಹೀಗೆ ಎಂದು ಯೋಚಿಸಿತು ಬುದ್ಧಿ– ಭಟ್ಟಿ ಇಳಿಸಿದ ಮಸಿಗತ್ತಲಲ್ಲಿ. ಜೊಲ್ಲು ಸುರಿಸುತ್ತಾ ನಾಲಿಗೆ ಚಾಚಿದ ಪ್ರಾಣಿಗಳು. ಡೇಂಜರ್ ಲೈಟ್‌ಗಳಂತೆ ಉರಿಯುತ್ತಿರುವ ಕಣ್ಣುಗಳು. ಒಂದೇ ಎರಡೇ, ಪಿಲಪಿಲನೆ ಮರಿ ಇಟ್ಟಂತೆ ಅಸಂಖ್ಯಾತ ಕಣ್ಣು ದೀಪಗಳು ಹೊತ್ತಿ ಉರಿಯತೊಡಗಿದವು. ಭಯವಾಯಿತು ಸ್ವಚ್ಛಂದವಾಗಿ, ಸುರಕ್ಷಿತವಾಗಿ ಈ ಕಾಡಿನಲ್ಲಿ ಅಲೆದಾಡಬಹುದು – ಎಂದುಕೊಂಡು ಗುಹೆ ದಾಟಿ ಬಂದಿದ್ದೆ. ನಾನು ಹೋದ ಕಡೆಯಲ್ಲೆಲ್ಲ ಅವು ನನ್ನ ಬೆನ್ನಟ್ಟಿದ್ದವು. ಇವುಗಳಲ್ಲಿ ಅವನವೂ ಇರಬಹುದೇ ಎನಿಸಿತು. ಆದರೆ ಹೇಗೆ ಎಲ್ಲವೂ ಇರಬಹುದೇ ಎನಿಸಿತು. ಆದರೆ ಹೇಗೆ? ಎಲ್ಲವು ಒಂದೇ ಸಮನೆ ಇದ್ದವು. ಯಾರ ಕಣ್ಣುಗಳು ಯಾರದೋ? ಮುಖಗಳೇ ಕಾಣುತ್ತಿಲ್ಲ. ಪೆಂಡುಲಮ್‌ನಂತೆ, ಕೆಂಪು ನಾಲಿಗೆಗಳು ಜೋತಾಡುತ್ತಿವೆ. ಸುತ್ತಲೂ ಕಣ್ಣುಗಳು ಬೇಟೆಯಾಡುತ್ತಿವೆ. ತಿರುಗಿ ನೋಡಲೂ ಸಾಹಸ ಸಾಕಾಗಲಿಲ್ಲ. ಬೆಳಗ್ಗೆ ತಂಪಾಗಿದ್ದ ಬಿಳುಪು ದೀಪಗಳಾಗಿದ್ದು ಕತ್ತಲಲ್ಲಿ ಮಾತ್ರ ಕೆಂಪು ದೀಪಗಳಾಗಿ ಭೀತಿ ಹುಟ್ಟಿಸತೊಡಗಿದವು. ನಡಿಗೆ ತಡವರಿಸಿತು. ಗಟ್ಟಿಯಾಗಿ ಕಣ್ಣು ಮುಚ್ಚಿಕೊಂಡರೆ. ಈ ಕಣ್ಣುಗಳು ಮರೆಯಾಗುವುವೇನೋ ಎಂದುಕೊಂಡೆ. ಆದರೆ ಕಣ್ಣು ಮುಚ್ಚಿದರೆ ಮನಸ್ಸಿಗೆ ಬಳಿಯಾದ ಪರಿಯಿಂದ ನೋಡುತ್ತಲೇ ಇದ್ದೆ. ಹುಲಿ, ಸಿಂಹ, ತೋಳ, ಹಸು ಎಲ್ಲಾ ಒಂದೇ ಒಂದೇ ಒಂದು ಜೊತೆ ಕಣ್ಣುಗಳು ಹತ್ತಿರ ಹತ್ತಿರ ಬರತೊಡಗಿದವು.

ನಿಂತಲ್ಲೇ ಕಾಲು ಕುಸಿಯಿತು. ಉಳಿದ ಕಣ್ಣುಗಳು ಕೆಂಪು ಬೆಳಕಲ್ಲಿ ಬರುತ್ತಿರುವ ಕಣ್ಣುಗಳ ಮುಖ ಕಾಣಿಸಿತು. ಬರುತ್ತಾ ಬರುತ್ತಾ ಸ್ಪಷ್ಟವಾಯಿತು. ಅದು ತೋಳ ಮುದಿ ತೋಳ. ಕೈ ಚಾಚಿ ಹಿಡಿಯಿತು. ಚಿಟ್ಟನೆ ಚೀರಿ ಕಣ್ಣು ಮುಚ್ಚಿದೆ.

* * *

ಇಷ್ಟು ದಿವಸ ಅಲೆದಾಡಿದ್ದು ಸಾರ್ಥಕವಾಯಿತು. ತಲೆಗೊಂದು ನೆರಳು ಸಿಕ್ಕಿತು. ಅಜೀರ್ಣದಿಂದ ಹಣ್ಣಾದ ದೇಹ ಸೋತಿದೆ. ಕೊನೆಗಾಲ. ಮನೆ ತುಂಬ ಪುಟ ಪುಟ ಕೆನೆವ ಮರಿಗಳು. ಯಾರದು ಇಷ್ಟೊಂದು ಅನಿಸಿತ್ತು. ಆಮೇಲೆ ತಿಳಿಯಿತು, ಇವನದೇ ಎಂದು. ಒಳಗೆ ಹೊರಗೆ ಸುಳಿದಾಡಿದೆ. ವಿಶಾಲವಾಗಿದೆ ಕೋಟೆ, ಇದರಲ್ಲಿ ನಾನು ಸುರಕ್ಷಿತ. ಅಭೇದ್ಯ ಕೋಟೆಯಲ್ಲಿ ನೆಲೆಸಿಕ್ಕಿದ್ದು ಆಶ್ಚರ್ಯ! ಪಾಪ ಸೋತು ಸಿಪ್ಪೆಯಾದ ಈ ನನ್ನ ಬಗ್ಗೆ ಮರುಕ ತುಂಬಿತ್ತು. 'ಕಾಡು' ಎಂದರೆ ಹಿಂಸ ಪಶುಗಳೇ ಇರುತ್ತವೆ ಎಂದುಕೊಂಡಿದ್ದೆ. ಈಗ ಅವನು ಬಂದರೂ ಏನೂ ಮಾಡಲಾರ ನನ್ನ ಪಿಳ್ಳೆಗಳು ನರಳಿ ನರಳಿ ಸತ್ತಿರಬೇಕು. ಪೀಡೆ ಕಳೆಯಿತು ಎಂದುಕೊಂಡೆ.

ನಿರುಪದ್ರವಿ ಪ್ರಾಣಿ ಜೊತೆ ವಾಸಕ್ಕೆ ಸಿಕ್ಕಿದ್ದು ಅದೃಷ್ಟ. ಸ್ವಲ್ಪ ಸ್ವಲ್ಪ ಸುಧಾರಿಸಿಕೊಂಡೆ. ಹೊಸ ಜಾಗದಲ್ಲಿ ಹೊಂದಿಕೊಳ್ಳಲಾರೆ ಎನಿಸಿತು. ಆದರೆ ಕ್ರಮೇಣ ಸುಧಾರಣೆ ಸಾಧ್ಯ ಎನಿಸಿತು. ಮೈ ತುಂಬಾ ಮಲ ಮಲ ಅರಳಿದ ಮೊಗ್ಗುಗಳು. ಬತ್ತಿಹೋದ ನದಿಗಳೆಲ್ಲ ಮತ್ತೆ ತುಂಬಿಕೊಂಡು ಉಕ್ಕಿ ಹರಿದವು. ಮಳೆ ಬಿದ್ದು ಮೆದುವಾದ ನೆಲ ಮಣ್ಣಿನ ವಾಸನೆ ಹೊರಡಿಸಿತು. ಮೂಗರಳಿಸುವಂತಹ ಪರಿಮಳ. ಹುಚ್ಚು ಹಿಡಿಸುವ ಮಾದಕ ಮಧುರ ಋತು.

ಗುಹೆಯ ಕೊಳಕಿನಲ್ಲಿ ನಾರುವ ಬಾಡುವ ಋತು, ಕಾಡಿನಲ್ಲಿ, ಗೂಡಿನಲ್ಲಿ, ಸ್ವಚ್ಛಂದವಾಗಿ ಗಾಳಿಗೆ ತೂಗಿ ತೊನೆಯುತ್ತಾ ಅರಳಿತು! ಸಣ್ಣಗೆ ಬಯಕೆಯ ನೆರಳು ಹೊರಟಿತು. ಎಲ್ಲಿಂದ ಬಂದುದೋ ಅರ್ಥವಾಗಲಿಲ್ಲ.

ಗಂಟೆಯಾಗಲೇ ಹತ್ತಾಯಿತು. ಮರಿಗಳು ಮಲಗಿದ್ದವು. ಕತ್ತಲೆಂದರೆ ಭಯವಾಗಿತ್ತು. ಮತ್ತೆಲ್ಲಿ ಕೆಂಪು ಕಣ್ಣುಗಳು ಬೆನ್ನಟ್ಟುವವೋ ಎಂದು ಸಂಶಯ ಬಂತು. ನೆರಳುಕೊಳ್ಳಿ ಪ್ರಾಣಿ ಇನ್ನೂ ಬಂದಿರಲಿಲ್ಲ. ಆ ಪ್ರಾಣಿಯ ಭೀತಿ ನನಗೆ ಇರಲಿಲ್ಲ. ಅಕಸ್ಮಾತ್ತಾಗಿ ಬೇರೆ ಪ್ರಾಣಿಗಳೇನಾದರೂ ವಾಸನೆ ಹಿಡಿದು ನುಗ್ಗಿ ಬಂದರೆ ಎಂದು ಮಾತ್ರ ತಲ್ಲಣಿಸಿದೆ. ಒಂದೇ ಸಮನೆ ಗಾಳಿ ಬೀಸತೊಡಗಿತು. ರಭಸದಿಂದ ಬೀಸುತ್ತಿರುವ ಗಾಳಿಗೆ ಈ ಮನೆ-ಅಂದರೆ ಈ ಗೂಡು ಹಾರಿಹೋಗುವುದೇನೋ ಎನಿಸಿತು. ಗಟ್ಟಿಯಾಗಿ ಹಾಸಿಗೆಯನ್ನು ಹಿಡಿದೆ.

ಒಂದು ಗಂಟೆಯ ನಂತರ ಗಾಳಿ ಬೀಸುವುದು ನಿಂತುಹೋಯಿತು. ದಣಿದ ಕಣ್ಣುಗಳು ಹಾಗೇ ಮುಚ್ಚಿದವು. ನಾನು, ನನ್ನ ಗುಹೆ. ಆ ಗುಹೆಗೆ ಬಂದದ್ದು ಅವನ ಸರ್ಪಕಾವಲಿನಲ್ಲಿ ನರಳಿದ್ದು, ಗೃಧ್ರ ಕೊಕ್ಕೆಗೆ ಸಿಕ್ಕಿ ಕುಕ್ಕಿಸಿಕೊಂಡದ್ದು ರಾಕ್ಷಸ ಕೈಗಳಲ್ಲಿ ಉಂಡೆಯಾದದ್ದು, ಪಂಜು ಕಣ್ಣುಗಳಲ್ಲಿ ನನ್ನ ಕನಸುಗಳನ್ನು ಸುಟ್ಟಿದ್ದು, ಕತ್ತಲು, ಕವರು ವಾಸನೆಗಳಲ್ಲಿ ಕ್ರಿಮಿ ಕೀಟಗಳನ್ನು ಹುಟ್ಟಿಸಿದ್ದು- ಎಲ್ಲಾ... ಎಲ್ಲಾ ಒಂದೊಂದಾಗಿ ನೆನಪಾಯಿತು. ಅವನಿಂದ ದೂರ ದೂರ ತಪ್ಪಿಸಿಕೊಂಡು ಭಯಂಕರ ಕಾಡಿನಲ್ಲಿ ಅಲೆದಾಡಿದ್ದು... ಕಣ್ಣುಗಳು ಬೇಟೆಯಾಡಿದ್ದು... ತಪ್ಪಿಸಿಕೊಂಡು ನೆರಳಲ್ಲಿ ಕೊನೆಗೆ ನಿಂತದ್ದು.. ಅಲ್ಲಿಂದ ಮುಂದೆ... ಮುಂದೆ... ಅಸ್ಪಷ್ಟ.

'ಕಟ್' 'ಕಟ್' ಬಾಗಿಲು ಬಡಿದ ಶಬ್ದ. ಅರೆ! ಕಾಡಿಗೆ ಬಾಗಿಲಿದೆಯೇ ಎನಿಸಿತು. ಹೆಜ್ಜೆ ಸಪ್ಪುಳಿರಬೇಕು. ಮತ್ತೊಮ್ಮೆ ಗಾಳಿ ಬೀಸಿತು. ಪೊದೆಗಳು ದಟ್ಟವಾಗಿ ಬೆಳೆದಿದ್ದವು. ಆದರೂ ಗಾಳಿ ಬೀಸಿ ಸಪ್ಪಳ ಮಾಡಿತು. ರಾತ್ರಿಯಲ್ಲಿ ಎಲ್ಲಾ ಪ್ರಾಣಿಗಳು ಮಲಗಿರಬೇಕು ಅಲ್ಲವೇ ಎಂದುಕೊಂಡೆ. ಹಾಗಾದರೆ ನೆಮ್ಮದಿಯಿಂದ ಇರಬಹುದು. ನನ್ನ ಮನೆ ಮುಂದೆ ಬೇಲಿ ಇದೆ. ದೊಡ್ಡ ಬಂಡೆ ಬಾಗಿಲಿದೆ. ಯಾರೂ ಬರೊಲ್ಲ. ಬಂದರೆ ನೆರಳು ನೀಡಿದ ಪ್ರಾಣಿ ಬರಬಹುದು. ಅಷ್ಟರಲ್ಲಿ... ಮನಸ್ಸಿಗೆ ಇನ್ನೊಂದು ಯೋಚನೆ ಬಂತು. ಅಕಸ್ಮಾತ್ತಾಗಿ ನೆರಳು ನೀಡಿದ ಪ್ರಾಣಿಗೆ ಅವನು ಸ್ನೇಹಿತನಾಗಿದ್ದರೆ? ಈ ವಿಚಾರ ಸುಳಿದು ಸುಂಟರಗಾಳಿಗೆ ಸಿಕ್ಕಿ ತರಗೆಲೆಯಂತೆ ನಡುಗಿದೆ. ಈ ಎರಡು ಪ್ರಾಣಿಗಳು ಸಂಚುಹೂಡಿ ಹಲ್ಲೆ ನಡೆಸಿದರೆ...?

ಏನನ್ನೂ ನಿರ್ಧರಿಸಲು ಸಾಧ್ಯವಾಗಲಿಲ್ಲ. ಕಳೆದ ದಿನಗಳೆಲ್ಲ ನನ್ನ ಬದುಕಿನ ಹಾದಿಯ ಅವಶೇಷಗಳಂತೆ ಕಂಡವು. ನನ್ನ ಬದುಕೇ ನನಗೆ ಶೃಂಖಲೆಯಾಯಿತು.

ಹೆಜ್ಜೆ ಹೆಜ್ಜೆಗೆ ಒಂದು ಕಮರಿ ಬಾಯಿ ತೆರೆದಂತೆ ತೋರಿತು. ನನ್ನ ಹುಟ್ಟೇ ನನಗೆ ನೆಟ್ಟ ಗೋರಿಯಾಯಿತು.

ಮೆಲ್ಲನೆ ಬಾಗಿಲು ತೆರೆದ ಶಬ್ದ. ವಿಕಟ ನಗೆ! ಬೆಚ್ಚಿದೆ. ನಗು ಮತ್ತಷ್ಟು ಜೋರಾಯಿತು. ಹತ್ತಿರ ಹತ್ತಿರ ಬಂತು. ಭಯಂಕರ ಆಕೃತಿ. ವಿಚಿತ್ರ ವೇಷ. ಕ್ರಮೇಣ ಹೆಜ್ಜೆ ಸಪ್ಪಳ ಮತ್ತಷ್ಟು ಒಳಗೆ ಬಂತು. ಯಾರೋ ನನ್ನ ಮೇಲೆ ಬಾಗುತ್ತಿರುವುದರ ಅನುಭವ. ಬಿಸಿಯುಸಿರಿನ ರಭಸದಿಂದ ಕಣ್ಣು ಬಿಟ್ಟು ನೋಡಿದೆ. ಇಬ್ಬರು ಬೇಡರು! ಕುಂಚಿಸಿ ಹೋದೆ. ಆ ಕಣ್ಣುಗಳು ಪರಿಚಿತವೇ. ನಾನು ಕತ್ತಲಲ್ಲಿ ಕಂಡ ಕೆಂಪು ಕಣ್ಣುಗಳು. ಕ್ರೂರ ಕಣ್ಣುಗಳು. ನಿಷಾದ ಕಣ್ಣುಗಳು. ಇನ್ನೊಂದು ಜೊತೆ ಕಣ್ಣುಗಳು ಸ್ವಲ್ಪ ದೂರದಲ್ಲಿ ಹೊಳೆಯುತ್ತಿವೆ. ಬೇಟೆಯನ್ನು ಪರಿಚಯಿಸುವಂತೆ ಕಂಡಿತು. ನನ್ನ ಬಂದು ಅವನ ಕಣ್ಣುಗಳು ಮೆಲ್ಲಗೆ ತೋರುತ್ತಿರುವಂತೆ ಅನಿಸಿತು. ಬೇಟೆ ತಯಾರಾದರು.

ಬಾಣ ಹೂಡಿ ಸಿದ್ಧಪಡಿಸಿಕೊಂಡ. ನನ್ನ ಹೆಣ್ಣು ಹೃದಯ ಕಂಪಿಸಿತು. ಅಂಗಲಾಚಿದೆ. ಪ್ರಯೋಜನವಾಗಲಿಲ್ಲ. ನನ್ನ ವಾಲ್ಮೀಕಿ ಮನಸ್ಸು ಮಾ ನಿಷಾದ! ಮಾ ನಿಷಾದ! ಎಂದು ಗೋಗರೆಯಿತು. ಇದ್ದಕ್ಕಿದ್ದಂತೆ ಮಳೆ ಹನಿಯಿಟ್ಟಿತು. ಚಾವಣಿ ಕುಸಿಯಿತು. ವಿಪರೀತವಾದ ಮಳೆ. ಒಳಗೂ ನೀರು ಬರತೊಡಗಿತು. ಸ್ವಲ್ಪ ಕಾಲದಲ್ಲೇ ದೊಡ್ಡ ಪ್ರವಾಹವಾಯಿತು. ಆ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗುತ್ತಿದ್ದೇನೆ. ನಿಷಾದನಿಲ್ಲ. ನೆರಳು ಪ್ರಾಣಿಯೂ ಇಲ್ಲ.

ಸಾಯುವ ಹಂಬಲ ಸತ್ತಿತು. ಬದುಕಬೇಕೆಂಬ ಆಸೆ ಚಿಗುರಿತು. ನಿಷಾದನ ಭೀತಿ ಮಾತ್ರ ನನ್ನಲ್ಲಿ ಶಾಶ್ವತವಾಗಿ ಉಳಿಯಿತು. ಮಾ ನಿಷಾದ! ಮಾ ನಿಷಾದ!... ಅನುರಣನ ಮುಗಿಲು ನೆಲಗಳನ್ನು ತುಂಬಿತು. ಮೋಡಗಳ ಎದೆಯೊಳಗೆ, ಅಲೆಗಳ ಪುಟಗಳೊಳಗೆ ನನ್ನ ಕತೆ ಬರೆದಿದ್ದೇನೆ.

ಕಾಡು ಬಿಟ್ಟು ಕಾಡನ್ನೇ ಹೊಕ್ಕಿದ್ದೇನೆ. ಅಸಹಾಯಕತೆಯಲ್ಲೇ ಅಲೆಯುತ್ತಿದ್ದೇನೆ. ನಿಷಾದನ ನೆನಪು ಹೋಗಿಲ್ಲ. ಪಂಜು ಕಣ್ಣುಗಳ ಆ ವಿಕರಾಳ ಬರುವುದಿಲ್ಲವೆಂಬ ಭರವಸೆಯಿಲ್ಲ.

ನಿರ್ಧಾರ

ಹನಿ ಹನಿಯಾಗಿ ಉದುರಿದ ಮಳೆ ಬರಬರುತ್ತಾ, ಆಕಾಶವನ್ನು ಸೀಳಿಕೊಂಡು ಆನೆ ಸೊಂಡಿಲ ಗಾತ್ರದ ಧಾರೆಗಳಾಗಿ ಬೀಳತೊಡಗಿತು. ಸೃಷ್ಟಿಯ ಚಟುವಟಿಕೆಗಳೆಲ್ಲ ಒಮ್ಮೆಲೇ ಸ್ಥಗಿತಗೊಂಡಂತಿತ್ತು. ಧಾರಾಕಾರವಾಗಿ ಬೀಳುವ ಮಳೆ ಪ್ರವಾಹದಂತೆ ಉಕ್ಕಿ ಹರಿಯುವ ಮಳೆ ನೀರಿನ ಹೊಳೆ... ಇವೆರಡೇ ಆ ಕ್ಷಣಕ್ಕೆ.

ಚಿಕ್ಕಂದಿನಿಂದ ಮಳೆಯೆಂದರೆ ಅನುಪಮಳಿಗೆ ಎಲ್ಲಿಲ್ಲದ ಖುಷಿ. ಅಪ್ಪ ಅಮ್ಮನ ಬೆದರಿಕೆಯನ್ನೂ ನಿರ್ಲಕ್ಷಿಸಿ ಜಡಿಯುವ ಮಳೆಗೆ ಮೈ ಒಡ್ಡಿ ಚನ್ನಾಗಿ ತೊಯ್ದು ಬಂದು ಅಪ್ಪ ಅಮ್ಮನಿಂದ ಬೈಸಿಕೊಂಡು, ಒಂದೆರಡು ದಿನ ಜ್ವರದಿಂದ ಮಲಗಿದ ಹೊರತು ಅವಳ ಮನಸ್ಸು ಸಮಾಧಾನಗೊಳ್ಳುತ್ತಿರಲಿಲ್ಲ.

ಕೋಣೆಯ ಕಿಟಕಿಯ ಸರಳುಗಳ ಮೇಲೆ ಮುಖವಿಟ್ಟು ಅವುಗಳ ನಡುವಿನಿಂದ, ಕೆಳಗೆ ರಸ್ತೆಯಲ್ಲಿ ಹರಿಯುವ ಮಳೆ ಮಣ್ಣಿನ ಹೊಳೆಯನ್ನು ತದೇಕದೃಷ್ಟಿಯಿಂದ ನೋಡುತ್ತಾ ನಿಂತಿದ್ದಾಳೆ. ಬೆಳಗಿನಿಂದಾದ ಬೇಸರ ಈ ದೃಶ್ಯಾವಲೋಕನದಿಂದ ದೂರವಾದೀತೇನೋ ಎಂದೆನಿಸಿತು-ಅವಳ ಮನಸ್ಸಿಗೆ. ಆದರೆ ಶಾಲೆಯಿಂದ ಇನ್ನೂ ಹಿಂದಿರುಗದ ಪ್ರಮದಾಳ ಬಗ್ಗೆ ಯೋಚನೆ ಹತ್ತಿತು. ಈ ವಿಪರೀತ ಮಳೇಲಿ ಹೇಗೆ ತಾನೇ ಬಂದಾಳು? ಶಾಲೆಗೆ ಹೋಗುವಾಗ ಮಳೆ ಬರುವ ಸೂಚನೆಯೂ ಇರಲಿಲ್ಲ. ಇಲ್ಲವಾದರೆ ರೈನ್ ಕೋಟನ್ನು ಕೊಟ್ಟು ಕಳಿಸಬಹುದಾಗಿತ್ತು. ಅವಳೇನು ಹಾಗೆಯೇ ಬಂದಾಳು. ಆದರೆ ನಂತರ ಅನುಭವಿಸುವವಳು ತಾನಲ್ಲವೆ? ಎಂದು ಅವಳ ತಾಯಿ ಹೃದಯ ಚಡಪಡಿಸಿತು. ತಾನು ನೆನೆದು ಬಂದರೆ ಅಪ್ಪ ಅಮ್ಮ ಬೈಯುತ್ತಿದ್ದುದರ ಅರ್ಥ ಈಗ ಅವಳಿಗೆ ಹೊಳೆದಿತ್ತು. ಮನಸ್ಸು ಮಗಳಿಗಾಗಿ ಕಾತರಿಸಿತು. ಬೀಗ ಜಡಿದು ಕೊಡೆ ಹಿಡಿದು ತಾನೇ ಹೋಗಿ ಕರೆತರಲೇ ಎಂದು ಯೋಚಿಸಿದಳು. ಆದರೆ ಈಗಾಗಲೇ ಒಂದು ತಿಂಗಳ ಜ್ವರದ ಬಾಧೆಯಿಂದ ತಪ್ಪಿಸಿಕೊಂಡು ಚೇತರಿಸಿಕೊಳ್ಳುತ್ತಿದ್ದಳು. ಮೈಯಲ್ಲಿನ ದೌರ್ಬಲ್ಯದ ಜೊತೆಗೆ ಮನಸ್ಸಿನ ಒಂಟಿತನದ ಬೇಸರ ಅವಳನ್ನು,

ಮತ್ತಷ್ಟು ಕುಗ್ಗಿಸಿತ್ತು. ಸರಿ, ಅವಳೇ ಬರುತ್ತಾಳೆ. ಮಳೆಯಲ್ಲಿ ಬರಬೇಡವೆಂದು ಸಾಕಷ್ಟು ಸಲ ಎಚ್ಚರಿಸಿದ್ದೀನಿ. ಮಳೆ ನಿಂತಮೇಲೆ ಬರುತ್ತಾಳೆ ಎಂದು ತನಗೆ ತಾನೇ ಸಮಾಧಾನ ತಂದುಕೊಂಡಳು.

ಮತ್ತೆ ರಭಸದಿಂದ ಹರಿಯುವ ನೀರಿನತ್ತ ದೃಷ್ಟಿ ಹರಿಸಿದಳು. ಒಂದೇ ಸಮನೆ ನೆಟ್ಟ ನೋಟದಿಂದಾಗಿ ತಾನೂ ಅದರೊಂದಿಗೆ ಕೊಚ್ಚಿ ಹೋಗುತ್ತಿರುವಂತೆ ಭಾಸವಾಯಿತು.

ಇದ್ದಕ್ಕಿದ್ದಂತೆ ಮನಸ್ಸಿನಲ್ಲಿ ಸಣ್ಣಗೆ ನೋವು ಕಾಣಿಸಿಕೊಂಡಿತು. ಆ ನೋವೇ ಕರಗಿ ಕಂಬನಿ ಮುತ್ತಾಗಿ ಪಟಪಟನೆ ಉದುರಿದವು. ಕಣ್ಣು ಮಂಜಾಯಿತು. ಸಲೀಮನ ನಗುವ ಮುಖ ಕಣ್ಮುಂದೆ ನಿಂತಿತು. 'ಸಾರಿ ಡಾರ್ಲಿಂಗ್', ನನ್ನಿಂದ ನಿನಗಾದ ಅನ್ಯಾಯಕ್ಕೆ ಪ್ರತಿಯಿಲ್ಲದಂತಾಗಿದೆ. ಬಂಗಾರದಂತಹ ನಿನ್ನ ಬಾಳನ್ನು ಮಣ್ಣುಗೂಡಿಸಿದ್ದೇ ಅಲ್ಲದೆ ದಿಕ್ಕಿಲ್ಲದ ಪರದೇಶಿಯನ್ನಾಗಿಸಿದೆ. ಕ್ಷಮಿಸು ಅನು ಡಾರ್ಲಿಂಗ್, ಮಾತು ಕಿವಿಯಲ್ಲಿ ಪ್ರತಿಧ್ವನಿಸಿತು. ಮೌನ ಅಳು ಮಳೆಯಷ್ಟೇ ಅಬ್ಬರಿಸಿತು. ಬಿಕ್ಕುವ ದನಿ ಅಬ್ಬರದಲಿ ಕಿವುಡಾಯಿತು.

'ಸಲೀಂ, ಸಲೀಂ–ನನ್ನನ್ನೇಕೆ ಇನ್ನೂ ಬದುಕಿಸಿದ್ದೀ? ನೀನಿದ್ದಲ್ಲಿ ನಾನಿರಬೇಕೆಂದಲ್ಲವೇ ನೀನು ಬಯಸಿದ್ದು. ನನ್ನನ್ನು ಮಾತ್ರ ಈ ಪ್ರಪಂಚದಲ್ಲಿ ಎಸೆದು ನೀನು ನೆಮ್ಮದಿಯಾಗಿರುವುದು ನಿನಗೆ ನ್ಯಾಯವೇ? ನಮ್ಮಿಬ್ಬರದು ಅಮರ ಪ್ರೇಮ, ಲೈಲಾ ಮಜ್ನೂರಂತಹುದು. ಯಾರಿಂದಲೂ ನಮ್ಮನ್ನಗಲಿಸಲು ಸಾಧ್ಯವಿಲ್ಲ ಎಂದು ಹೇಳಿರಲಿಲ್ಲವೇ. ಈಗೇನಾಯಿತು. ಭಯಂಕರ ಒಂಟಿತನದ ಪ್ರಪಾತದಲ್ಲಿ ನನ್ನನ್ನು ದೂಡಿಲ್ಲವೇ?' ತನ್ನಲ್ಲಿ ಮಾತನಾಡಿಕೊಂಡಳು.

ಮರುಗಳಿಗೆಯೇ ತಾನೇಕೆ ಸಾಯಬಾರದು? ಹೇಗಿದ್ದರೂ ಈಗ ಮನೆಯಲ್ಲಿ ತಡೆಯುವವರು ಯಾರೂ ಇಲ್ಲ. ಇದ್ದರೂ ಯಾರಿಗೂ ನಾನು ಬೇಕಿಲ್ಲ–ಎಂದು ವ್ಯಂಗ್ಯವಾಗಿ ನಕ್ಕಳು. ಮಳೆ ಬರುತ್ತಲೇ ಇತ್ತು.

ಸರಸರನೆ ಒಳಗೆ ನಡೆದು ಒಂದು ಸೀರೆ ತಂದು ಮುದುರಿ ಸುರುಳಿ ಸುತ್ತಿ ಕುಣಿಕೆ ಹಾಕಿ, ಮೇಲೆ ಎಲ್ಲಿ ಕಟ್ಟುವುದೆಂದು ಸುತ್ತಲೂ ಪರಿವೀಕ್ಷಿಸಿದಳು. ಥಟ್ಟನೆ ಗೋಡೆಯ ಮೇಲಿನ ಪ್ರಮದಾಳ ಫೋಟೋ ಕಣ್ಣಿಗೆ ಬಿತ್ತು. 'ಅಮ್ಮ' ನಾನು... ನಾನು... ನಾನು ಬೇಡವೇ?... ಎಂದು ಅಂಗಲಾಚಿದಂತೆ ಎನಿಸಿತು. ಕೈಲಿ ಹಿಡಿದ ಸೀರೆಯ ಕುಣಿಕೆಯನ್ನು ಎಸೆದು ಮಂಚದ ಮೇಲೆ ದೊಪ್ಪನೆ ಬಿದ್ದು ಹೊರಳಾಡಿದಳು.

ಪ್ರಮದಾ ಸಲೀಮನ ಸ್ನೇಹಪು. ಅದು ಅವನ ವಸ್ತು. ಅದನ್ನು ಜೋಪಾನವಾಗಿ ಕಾಪಾಡಿದರೆ ಮಾತ್ರ ಸಲೀಮನಿಗೆ ಸಂತೋಷವಾದೀತು. ತಾನು ಸತ್ತು ಪ್ರಮದಾ

ಜೀವಿ ಪಾಲಾದರೆ?... ಇಲ್ಲ... ಇಲ್ಲ.. ಖಂಡಿತ ಬದುಕುತ್ತೇನೆ. ನನ್ನನ್ನು ನಿಕೃಷ್ಟವಾಗಿ ಕಂಡ ಮಡಿವಂತ ಸಮಾಜಕ್ಕೆ, ನಾನು ಸತ್ತನೆಂದು ಸುಳ್ಳು ಸುಳ್ಳು ಪ್ರಚಾರ ಮಾಡಿದ ಅಪ್ಪ ಅಮ್ಮನಿಗೆ ತೋರಿಸುತ್ತೇನೆ... ಯಾರೂ ಇಲ್ಲದೆಯೂ ನಾನು ಬದುಕಬಲ್ಲೆನೆಂದು.

ಅದು ಕಾಲೇಜು ಓದುವ ದಿನಗಳು. ಅಪ್ಪ ಅಮ್ಮನಿಗೆ 'ಅನುಪಮ' ಎಂದರೆ ಉಳಿದ ಮಕ್ಕಳಿಗಿಂತ ಪ್ರೀತಿ. ಅನುಪಮಳ ಅಕ್ಕ ರಜನಿ ಎಸ್.ಎಸ್.ಎಲ್.ಸಿಗೆ ನಿಲ್ಲಿಸಿದ್ದಳು ಓದನ್ನು. ಅಣ್ಣ ರಾಜೇಂದ್ರ ಇಂಜಿನಿಯರಿಂಗ್ ಮುಗಿಸಿ ರೂರ್‌ಕೆಲಾದಲ್ಲಿ ಕೆಲಸದಲ್ಲಿದ್ದ. ಅನುಪಮಾಳನ್ನು ಎಸ್.ಎಸ್.ಎಲ್.ಸಿ. ಆದ ಕೂಡಲೇ ನಿಲ್ಲಿಸಬೇಕೆಂದು ಯೋಚಿಸಿದರು. ಆದರೆ ಹಟ ಹಿಡಿದು ಕಾಲೇಜು ಮೆಟ್ಟಿಲು ಹತ್ತಿದಳು. ಅನುಪಮಾಳದು ತೀರಾ ಅಂತರ್ಮುಖಿ ವ್ಯಕ್ತಿತ್ವ. ಅಷ್ಟಾಗಿ ಮೈಚಳಿ ಬಿಟ್ಟು ತನ್ನ ಜೊತೆಯವರೊಂದಿಗೆ ಬೆರೆಯುತ್ತಿರಲಿಲ್ಲ. ತಾನಾಯ್ತು ತನ್ನ ಕ್ಲಾಸಾಯ್ತು. ಇಲ್ಲವಾದರೆ ಯಾವುದೋ ಒಂದು ಮರದಡಿಯಲ್ಲಿ ಕುಳಿತು ಪುಸ್ತಕಕ್ಕೆ ಅಂಟಿಬಿಡುತ್ತಿದ್ದಳು. ಹುಡುಗರು ಬೇಕೆಂತಲೇ ವನದೇವತೆ, ಮಹಾ ಶ್ವೇತೆ-ತಪೋನಿರತೆ ಎಂದೆಲ್ಲಾ ಚುಡಾಯಿಸುತ್ತಿದ್ದರು. ಆದರೆ ಅನುಪಮಾಳ ತಣ್ಣನೆಯ ನೋಟ ಅವರ ಉತ್ಸಾಹದ ಕಾವಾರಿಸುತ್ತಿತ್ತು.

ಒಮ್ಮೆ ಯಾರೋ ಒಬ್ಬ ಹುಡುಗ ಕೀಟಲೆಗೆ 'ಇದೆಲ್ಲಾ ಪೋಸಮ್ಮ. ಯಾರೋ ಲವರ್‌ಗೆ ಹೀಗೆ ಕಾಯ್ತಿರ್ತಾಳೆ-ಎಂದಿದ್ದ. ಅನುಪಮಾಳಿಗೆ ಈ ಮಾತು ಮುಳ್ಳಿನಂತೆ ಇರಿದು ಕಂಬನಿ ಬರಿಸಿತು. ಅವರ ಗುಂಪಿನಲ್ಲಿದ್ದ ಸಲೀಮನಿಗೆ ಏನೆನ್ನಿಸಿತೋ, ತನ್ನ ಗೆಳೆಯರಿಗೆಲ್ಲಾ ಬೈದ. ಅವನ ಮನಸ್ಸಿಗೆ ಆಕೆಯ ಕಣ್ಣಲ್ಲಿ ನೀರೂರುವುದನ್ನು ನೋಡಿ ತೀರಾ ಕೆಡುಕೆನಿಸಿತು. ತಾನೇ ತಪ್ಪು ಮಾಡಿದಂತೆ ವ್ಯಥೆಪಟ್ಟ, ಹೋಗಿ ಕ್ಷಮೆ ಕೇಳಲೇ-ಎಂದು ಆಲೋಚಿಸಿದ. ಆದರೆ ಗೆಳೆಯರೆದುರಿಗೆ ಹಾಗೆ ಮಾಡಿದರೆ ಅವರ ದೃಷ್ಟಿಯಲ್ಲಿ ಹಾಸ್ಯಾಸ್ಪದ ವ್ಯಕ್ತಿಯಾಗುತ್ತೇನೆಂದು ಸುಮ್ಮನಿದ್ದ. ಗೆಳೆಯರೆಲ್ಲಾ ನಗುತ್ತಾ ಹೊರಟು ಹೋದರು.

ಒಮ್ಮೆ ಕಾಲೇಜಿನಿಂದ 'ಕೃಷ್ಣರಾಜಸಾಗರಕ್ಕೆ' ಪಿಕ್‌ನಿಕ್ ಹೊರಟರು. ಬಸ್ಸಲ್ಲಿ ಕುಳಿತ ಹುಡುಗರ ಸಂತೋಷ, ಸಂಭ್ರಮಗಳಿಗೆ ಕೊನೆಯೇ ಇಲ್ಲ. ಗಂಟಲು ಹರಿಯುವಂತೆ ಕಿರುಚಿಕೊಂಡರು. ಕದಲುವ ಬಸ್ಸಿನಲ್ಲೇ ರಾಕ್-ಅನ್-ರೋಲ್ ಡ್ಯಾನ್ಸ್ ಮಾಡಿದರು. ಎಲೆಯಾಟ ಸ್ವಲ್ಪ ಹೊತ್ತು ಆಡಿದರು. ಹಾಡಿ, ಕುಣಿದು ಸುಸ್ತಾದ ನಂತರ ತಿಂಡಿ ಪೊಟ್ಟಣಗಳನ್ನು- ಜಿದ್ದಿ ಬಕಾಸುರರಂತೆ ಕಿತ್ತಾಡಿಕೊಂಡು ತಿಂದರು. ಸಲೀಂ ಮಾತ್ರ ಇವ್ಯಾವುದರ ಕಡೆಗೆ ಲಕ್ಷ್ಯವಿಲ್ಲದೆ ಕಿಟಕಿಯಿಂದ ಹೊರಗೆ ನೋಡುತ್ತಿದ್ದ.

'ಲೋ ಸಲೀಂ. ಏನೋ ಅದು ನಿನ್ನ ಜಂಬ. ನಾವೆಲ್ಲ ಫ್ರೆಂಡ್ಲಿಯಾಗಿ ಜಾಲಿಯಾಗಿ ನೀನು ಇದ್ದಿದ್ದರೆ ನೀನೇನೋ ಮಹಾ ಕನಸು ಕಾಣ್ತಿರೋ ಹಾಗೆ ನೋಡ್ತಿದ್ದೀಯಲ್ಲ. ಕೋ-ಆಪರೇಟ್ ಆಗಿ ಇರೋದು ಇಷ್ಟವಿಲ್ಲದಿದ್ದರೆ ನೀನ್ಯಾಕೋ ಪಿಕ್‌ನಿಕ್‌ಗೆ ಬಂದೆ?' – [illegible]ವಂತೆ ಬದರಿನಾಥ ನುಡಿದ.

'ಲೋ ಅವನ್ಯಾಕೆ ಸತಾಯಿಸ್ತಿ' ಮಸಾಲೆ ಹಾಕಿದ ಮಧುಸೂದನ, ಸಲೀಂ ಮಾತ್ರ ಸುಮ್ಮನೆ ಅವರ ಕಡೆ ನೋಡಿ ನಕ್ಕು, 'ನಿಮಗಿಷ್ಟ ಬಂದ ಹಾಗೆ ಅಂದ್ಕೊಳ್ರೋ'– ಎಂದು ಮತ್ತೆ ಮುಖ ತಿರುಗಿಸಿದ.

ಸಲೀಮನ ವಿಚಾರ ಬರುತ್ತಲೇ ಅನುಪಮಳ ಕಿವಿ ನಿಮಿರಿತು. ಇಡೀ ಕ್ಲಾಸಿನಲ್ಲೇ ಅವನು ನೋಡೋದಕ್ಕೆ ಚೆನ್ನಾಗಿದ್ದ. ಬುದ್ಧಿವಂತನಾಗಿದ್ದ. ಅಲ್ದೆ ಗಂಭೀರ ಸ್ವಭಾವದವನಾಗಿದ್ದ. ಮಾತು ಬರುತ್ತದೆಯೇ ಎನ್ನುವ ಶಂಕೆ ಉಂಟಾಗುತ್ತಿದ್ದವರಿಗೆ, ಅವನು ವಾದಕ್ಕೆ ನಿಂತಾಗ ಮೂಗಿನ ಮೇಲೆ ಬೆರಳಿಟ್ಟುಕೊಳ್ಳುತ್ತಿದ್ದರು. ಪಟಪಟ ಮಾತಿನ ಮಧ್ಯೆ ಪದ್ಯದ ಸಾಲುಗಳು ಸುರಿಯುತ್ತಿದ್ದವು.

ಅನುಪಮಳ ಪಕ್ಕದಲ್ಲಿ ಕುಳಿತಿದ್ದ ನೀರಜ ಅನುಪಮಳಿಗೆ ತಿವಿದು ಹೇಳಿದಳು. ಲೇ ಅವನಿಗೆ ಉಮರನ ಪದ್ಯಗಳನ್ನು ಹೇಳಲು ಹೇಳೇ, ತುಂಬಾ ಚೆನ್ನಾಗಿ ಹೇಳ್ತಾನೆ– ಎಂದಳು.

'ನಿನಗೆ ಹೇಗೆ ಗೊತ್ತು ಅದೆಲ್ಲ?'– ಕಣ್ಣರಳಿಸಿ ಕುತೂಹಲದಿಂದ ಕೇಳಿದಳು ಅನುಪಮಾ. 'ನನ್ನ ಫ್ರೆಂಡ್‌ಗೆ ಅವನು ತುಂಬಾ ಫ್ರೆಂಡ್' ಇಬ್ಬರೂ ರೂಮ್‌ಮೇಟ್ಸ್. ನಾನು ಅವರ ರೂಮಿಗೆ ಒಮ್ಮೆ ಹೋಗಿದ್ದಾಗ ಸಲೀಂ ಉಮರನ ಪದ್ಯಗಳನ್ನು ಎಷ್ಟು ಭಾವಪೂರ್ಣವಾಗಿ ಹಾಡುತ್ತಿದ್ದ ಗೊತ್ತಾ?'

'ಹಾಗಾದರೆ ನೀನೇ ನಿನ್ನ ಫ್ರೆಂಡ್‌ಗೆ ಹೇಳುವುದಕ್ಕೆ ಹೇಳೆ' ಎಂದು ಕಣ್ಣರಳಿಸಿ ಕೇಳಿದಳು. 'ಉಹುಂ' ನಾ ಹೇಳೊಲ್ಲ. ನನಗೆ ನಾಚಿಕೆಯಾಗುತ್ತೆ ಎಂದಳು ನೀರಜ.

'ಹಾಗಾದರೆ ಒಂದು ಕೆಲಸ ಮಾಡೋಣ. ಒಂದು ಚೀಟಿ ಬರೆದು ಮೇಷ್ಟ್ರ ಕೈಗೆ ಕೊಡೋಣ' ಎಂದು ಸೂಚಿಸಿದಳು ಅನುಪಮಾ. ನೀರಜಳಿಗೂ ಇದೇ ಸರಿಯೆಂದು ತೋರಿತು. ಹಾಗೇ ಒಂದು ಚೀಟಿಯಲ್ಲಿ ತಮ್ಮ ಕೋರಿಕೆಯನ್ನು ಬರೆದು ಮೇಷ್ಟ್ರ ಕೈಲಿ ಕೊಟ್ಟರು.

'ಶಂಕರ ಪ್ರಸಾದ'ರು ಅದನ್ನು ಓದಿ ಮುಗುಳ್ನಕ್ಕು ಸಲೀಮನ ಕಡೆ ತಿರುಗಿ, 'ಸಲೀಂ ಹುಡುಗಿಯರ ಕಡೆಯಿಂದ ಒಂದು ಸಣ್ಣ ಕೋರಿಕೆಯಿದೆ... ನೀನು ಉಮರನ ಪದ್ಯಗಳನ್ನು ಹಾಡಬೇಕಂತೆ... ನೋಡು ಅವರ ಕೋರಿಕೆಯನ್ನು ತಳ್ಳಿಹಾಕಬೇಡ. ಅವರದರ ಜೊತೆಗೆ ನನ್ನದೂ ಇದೆ... ಹಾಡುತ್ತೀ ತಾನೇ?'... ಎಂದು ಕೇಳಿದರು.

ಪ್ರಯಾಣದ ಉದ್ದಕ್ಕೂ ಆಚೆನೆಟ್ಟ ಕಣ್ಣುಗಳು ಇತ್ತ ತಿರುಗಿದ್ದವು. ಹುಡುಗಿಯರ ಕೋರಿಕೆ ಎಂದಾಗ ಅವನು ನಾಚಿ ನೀರಾದ... ತಕ್ಷಣ ಅವನಿಗೆ ಏನು ಹೇಳಬೇಕೋ ತೋಚಲಿಲ್ಲ. ಕೋರಿದ ಹುಡುಗಿಯರಲ್ಲಿ ಅನುಪಮಳೂ ಸೇರಿರಬಹುದೇ?– ಎಂಬ ಆಲೋಚನೆ ಬಂದ ಕೂಡಲೇ 'ಸಾರ್ ಹಾಡುವುದಕ್ಕೆ ನನಗೆ ಅಷ್ಟು ಚೆನ್ನಾಗಿ ಬರುವುದಿಲ್ಲ'– ಎಂದ.

'ಪರವಾಗಿಲ್ಲ. ಆಫ್ಟರಾಲ್ ನಾವೆಲ್ಲಾ ಒಂದೇ ಮನೆಯವರಿದ್ದ ಹಾಗೆ. ಯಾರನ್ನೂ ಮೆಚ್ಚಿಸಬೇಕಾದ್ದಿಲ್ಲ. ಹೊರಗಿನವರು ಯಾರೂ ಇಲ್ಲ. ನಿನಗೆ ಬಂದ ಹಾಗೆ ಹೇಳು'– ಎಂದರು.

'ಹೇಳು ಸಲೀಂ ಅಷ್ಟು ಕೇಳ್ತಿರೋವಾ!' ಎಂದು ದನಿಗೂಡಿಸಿದರು. ಪರಮಶಿವಯ್ಯ. ಸಲೀಮ್ ಒಂದು ಕ್ಷಣ ಬಿಟ್ಟು ಗಂಟಲು ಸರಿಮಾಡಿಕೊಂಡು

'ಏಳೆನ್ನ ಮನದನ್ನೆ! ನೋಡು ಪೊಳ್ತರೆ ಬಂದು
ನಿಶಿಯ ಬೋಗುಣಿಯೊಳಕೆ ಹೊಂಬುಗುರಿ ಎಸೆದು
ತಾರೆಯರಳುಗಳನಲ್ಲಿರಿದೆ ಚೆಲ್ಲಾಡಿಹನು;
ನಿದ್ದೆ ಸಾಕಿನ್ನೀಗ, ಮುದ್ದಣುಗಿ ಬಾರ'

– ಎಂದು ಅನುಪಲ್ಲವಿ, ಪಲ್ಲವಿಯಲ್ಲಿ ಹಾಡಿದ. ಗಲಾಟೆ ಮಾಡುವ ಗೋಲಾಂಗೂಲಗಳೆಲ್ಲ ಸುಮ್ಮನಾಗಿದ್ದವು. ಹುಡುಗಿಯರ ಎದೆ ಕುಟ್ಟತೊಡಗಿದವು. ಅನುಪಮಳ ಕಣ್ಣಲ್ಲಿ ಆನಂದದ ಬೆಳಕು ಮೂಡಿತು. 'ಏಳೆನ್ನ ಮನದನ್ನೆ'– ಎಂದು ತಾರಸ್ಥಾಯಿಯಲ್ಲಿ ಹಾಡುತ್ತಿದ್ದಾಗ ಸಲೀಮ ಅನುಪಮಳ ಮೇಲೆ ದೃಷ್ಟಿ ನೆಟ್ಟಿದ್ದ. ಅಂದು ಎಂದಿಗಿಂತ ಇಂಪಾಗಿರಲು ಅನುಪಮಳೆ ಸ್ಫೂರ್ತಿಯಾಗಿದ್ದಳು. ಅವಳಿಗಾದ ಆನಂದ ಮರೆಯಾಗಿರಲು ಸಾಧ್ಯವಾಗಲಿಲ್ಲ. ಸಲೀಮನಿಗೆ ನೆಮ್ಮದಿಯಾಯಿತು. ಆ ದಿನ ಅವಳಿಗಾದ ನೋವು ಇದರಿಂದ ವಾಸಿಯಾಯಿತೆಂದುಕೊಂಡ.

ಅನುಪಮಾಳಿಗೆ ಆ ಕ್ಷಣ ಅನಿಸಿದ್ದು ಅವನು ನಮ್ಮ ಜಾತಿಯವನಾಗಿರಬಾರದಿತ್ತೇ? ಎಂದು. ಆದರೆ ಅವಳ ಹೃದಯ ಅವಳಿಗರಿವಿಲ್ಲದೇ ಸೋಲುತ್ತಿತ್ತು.

'ಪಿಕ್‌ನಿಕ್' ನಿಂದ ಮನೆಗೆ ಮರಳಿದಾಗ ತಲೆ ತುಂಬ ಸಲೀಮನ ವಿಚಾರಗಳು! ಕಣ್ತುಂಬ ಅವನ ಕನಸುಗಳು!!

* * *

ಯಾಂತ್ರಿಕವಾದ ಕಾಲೇಜು ಜೀವನ ಕೊನೆಯ ಘಟ್ಟವನ್ನು ಮುಟ್ಟಿತ್ತು. ಫಲಿತಾಂಶ ಹೊರಬಿದ್ದು ಮಾಮೂಲಿನಂತೆ ಸಲೀಮ ಫಸ್ಟ್‌ಕ್ಲಾಸಿನಲ್ಲಿ ಪಾಸಾಗಿದ್ದ. ಅನುಪಮಾಳಿಗೂ ಫಸ್ಟ್‌ಕ್ಲಾಸ್ ಬಂದಿತ್ತು.

ಗೆಳೆಯರೆಲ್ಲ ಅವರವರ ಭವಿಷ್ಯವನ್ನು ಹುಡುಕುತ್ತಾ ಚದುರಿಹೋದರು. ಸಲೀಮ್ ಅನುಪಮಾರ ಅನುಬಂಧ ಕಳಚಿಕೊಳ್ಳಲಾಗದಷ್ಟು ಬಿಗಿಯಿತ್ತು.

ಎಲ್ಲರಿಗಿಂತ ಜೋರಾಗಿ ಈ ಇಬ್ಬರೂ ಪ್ರೇಮಪಕ್ಷಿಗಳಾಗಿದ್ದರು. ಪತ್ರ ವ್ಯವಹಾರದ ಹೊರತಾಗಿ ಎಂದೂ ಜೊತೆಯಾಗಿ ಅಲೆದಾಡಲಿಲ್ಲ.

ಸಲೀಮ ಅನಾಥ, ನನ್ನವರು, ತನ್ನವರು–ಎನ್ನುವವರು ಯಾರೂ ಇಲ್ಲ, ದೂರದ ಸಂಬಂಧಿಯೊಬ್ಬರು, ಅವನ ತಂದೆಯಿಂದ ಯಾವುದೋ ಸಂದರ್ಭದಲ್ಲಿ ಉಪಕೃತರಾಗಿದ್ದ ಕಾರಣ, ಸಲೀಮನ ಓದಿಗೆ ಸಹಾಯ ಮಾಡಿ ಋಣ ತೀರಿಸಿಕೊಳ್ಳುವುದಾಗಿ ಹೇಳಿದ್ದರು. ಅವರ ಆದೇಶದ ಮೇರೆಗೆ ಇಲ್ಲಿಗೆ ಬಂದು ಹಾಸ್ಟೆಲಲ್ಲಿದ್ದು ಓದುತ್ತಿದ್ದ. ಜೀವನದ ಬಗ್ಗೆ ನಿಲಿಪ್ತನಾಗಿದ್ದ. ಯಾವುದಕ್ಕೂ ಹೆಚ್ಚಿನ ಆಸಕ್ತಿ ತೋರುತ್ತಿರಲಿಲ್ಲ. ಹಿಂದು ಮುಂದುಗಳಿಗಿಂತ ಇಂದಷ್ಟೇ ಅವನು ಯೋಚಿಸುತ್ತಿದ್ದದ್ದು. 'ನಾಳೆ ಬೆಳಗಾಗ ನಾವಿರುವ ಭರವಸೆಯಿಲ್ಲ;... ಬಾ ಕುಡಿವಮ್ ಇಂದು ರುಚಿಯಲಿ ಮಧುವ... ನಾಳೆ ಬರುವಿಂದು ವೇಂ ನಮ್ಮ ಕಾಣುವನೇ?... ಎನ್ನುವ ಉಮರನ ತತ್ವದಂತೆ ಅವನೆದುರಿಗಿರುವ ವರ್ತಮಾನವಷ್ಟೇ ಸತ್ಯ.

ಉಮರನ ಆರಾಧಕ, ಕನಸುಗಾರಿಕೆಯಲ್ಲಿ ಮೈ ಮರೆಯುವ ಅವನಿಗೊಬ್ಬ ಪ್ರೇಯಸಿಯ ಪ್ರತ್ಯಕ್ಷ ಪ್ರೇಮದ ಅನುಭವ ಬೇಕಿತ್ತು. ಆ ಪ್ರೇಯಸಿಯನ್ನು ಅನುಪಮಳಲ್ಲಿ ಕಂಡ. ಎಷ್ಟೋ ಸಲ ಅವಳ ಕಣ್ಣುಗಳನ್ನು ಮದಿರೆಯ ಬಟ್ಟಲೆಂದು; ಅವಳ ಆ ಮಾದಕ ನೋಟವನ್ನೇ ಮಧುವೆಂದು ವಿವರಿಸಿದ್ದ.

'ಹೂವಿದ್ದಲ್ಲಿ ವಾಸನೆ; ಚಂದ್ರನಿದ್ದಲ್ಲಿ ಬೆಳ್ದಿಂಗಳೂ; ನೀನಿದ್ದಲ್ಲಿ ನಾನು'– ಹೀಗೆ ಏನೇನೋ ಬರೆಯುತ್ತಿದ್ದ.

ಅವನಿಗೆ ತನ್ನ ಧರ್ಮಕ್ಕಿಂತ ಹಿಂದೂ ಧರ್ಮದಲ್ಲಿ ಆಸಕ್ತಿ. ದೇವರ ನಿರಾಕಾರ ಅಸ್ತಿತ್ವಕ್ಕಿಂತ ಸಾಕಾರ ಅಸ್ತಿತ್ವವೇ ಮನುಷ್ಯನ ಮನಸ್ಸಿನ ಏಕಾಗ್ರತೆಯನ್ನು ರೂಢಿಸುವಲ್ಲಿ ಸಾರ್ಥಕ.

'ಅನು, ನಾನು ಮುಸ್ಲಿಮನೆನ್ನುವ ಒಂದು ಕಾರಣ ಬಿಟ್ಟು ನಿನ್ನ ಪ್ರೀತಿಯನ್ನು ಗಳಿಸಿಕೊಳ್ಳಲು ಅಭ್ಯಂತರವಿಲ್ಲವೆಂದು ಭಾವಿಸುತ್ತೇನೆ. ನಿನ್ನ ತಿರಸ್ಕಾರವೇ ನನ್ನ ಬದುಕಿನ ಹಂಸಗೀತೆಯಾಗುತ್ತದೆ'–ಎಂದೂ ತಿಳಿಸಿದ್ದ.

ಅನುಪಮಾಳ ದೇಹದ ಕಣ ಕಣವೂ ಸಲೀಮನ ಹೆಸರನ್ನು ಪಿಸುಗುಟ್ಟುತ್ತಿತ್ತು. ಅವಳಿಗೂ ಅವನ ಪ್ರೀತಿ ಇಲ್ಲದೆ ಬಾಳು ಶೂನ್ಯವೆಂದೆನಿಸಿತ್ತು. ಈ ಉಮರನೊಂದಿಗೆ ಬದುಕು ಸ್ವರ್ಗಸಮವೇ ಎಂದು ನಿರ್ಧರಿಸಿದ್ದಳು. ಆದರೆ; ಅಪ್ಪ ಅಮ್ಮ ಅಣ್ಣ ಅಕ್ಕ–ಇವರ ಭೀತಿ ಅವಳಲ್ಲಿ ನೂರು ಭೂಕಂಪಗಳನ್ನು ಉಂಟು ಮಾಡಿತು. ಈಗೆಲ್ಲಾ ಮುಗಿದಿದೆ. ಮತ್ತೆ ಅವನನ್ನು ಕಾಣುವ ಅವಕಾಶ ಸಿಗುವುದಿಲ್ಲ. ತಾನು ಅಪ್ಪ, ಅಮ್ಮ, ಅಣ್ಣ, ಅಕ್ಕ, ಸಲೀಮ ಇವರಲ್ಲಿ ಯಾರನ್ನು ಆರಿಸಿಕೊಳ್ಳುವುದು? ಸಲೀಮ ತನಗೆ ಬೇಕೆಂದೇ ಎನಿಸಿದರೆ ಅಷ್ಟೂ ಮಂದಿಯನ್ನು ಬಿಡುವುದಕ್ಕೆ ಸಿದ್ಧವಾಗಿರಬೇಕು. ಆ ಸಿದ್ಧತೆಯನ್ನು ರೂಢಿಸಿಕೊಳ್ಳಬಹುದಾದರೂ ಅಪ್ಪ, ಅಮ್ಮನ ಸಿಟ್ಟನ್ನು ಎದುರಿಸುವಷ್ಟು ಎದೆಗಾರಿಕೆಯಿದೆಯೇ? ತಮ್ಮ ಜಾತಿಯವನಾಗಿದ್ದರೆ ಹೇಗೋ ಪರಿಸ್ಥಿತಿಯನ್ನು

ಕುದುರಿಸಬಹುದಿತ್ತು. ಆದರೆ ಜಾತಿ ತನ್ನದಲ್ಲ! ಗೋಮಾಂಸವನ್ನು ತಿನ್ನುವ ತುರುಕ ಮುಂಡೇ ಮಕ್ಕಳೆಂದು ಬೈಯುತ್ತಿದ್ದ ಅಪ್ಪನ ರೋಷದ ಜ್ವಾಲಾಮುಖಿಯ ಸಿಡಿತವನ್ನು ಎದುರಿಸುವುದೆಂದರೆ ಮತ್ತೆ ಹುಟ್ಟಿ ಬಂದಂತೆ.

ಸಲೀಮ ತನ್ನಲ್ಲಿ ಚೈತನ್ಯ ತುಂಬಿದ್ದ. ಪ್ರೀತಿ ಪ್ರೇಮದ ಗುರುವಾಗಿದ್ದ. ಇಂದಿನ ಬದುಕಿನಲ್ಲಿ ಆಸಕ್ತಿ ಕೆರಳಿಸಿದ್ದ. ನೂರು ಸ್ವರ್ಗಗಳ ಭರವಸೆ ತುಂಬಿದ್ದ. 'ಬಾ ತುಂಬು ಬಟ್ಟಲನ್ನು; ಮಧುಮಾಸದಗ್ನಿಯಲಿ ಚಿಂತೆ ಬೆಸನೆಂಬ ಚಳಿ ಬೊಂತೆಯನು ಬಿಸುಡು' ಎಂದು ಅವನು ಹೇಳಿದ ಉಮರನ ಮಾತಿನ ಸತ್ಯದಲ್ಲಿ ನಂಬಿಕೆಯಿಟ್ಟು ನಡೆಯಬೇಕೆಂದುಕೊಂಡ. ಸಲೀಮ ಕವಿ; ನಾನು ಸ್ಫೂರ್ತಿ– ಸಂಯೋಗದಿಂದ ರಸಕಾವ್ಯ... ಅವನು ಹೇಳಿದ ಈ ಮಾತುಗಳು ನೆನಪಿಗೆ ಬಂದರೆ ಭೀತಿಯೂ ಒತ್ತರಿಸಿ ನಡೆದು, ರೋಮಾಂಚದ ಬುದ್ಬುದಗಳೇಳುತ್ತಿದ್ದವು.

ಅವನೊಂದಿಗೆ ಮಾತಾಡಿ ಯಾವುದನ್ನೂ ನಿರ್ಧರಿಸಬೇಕು. ಅಪ್ಪನಿಗೆ ಸುಳಿವು ಹತ್ತಬಾರದು. ಹತ್ತಿದರೆ ಹಗರಣವಾದೀತು– ಎಂದುಕೊಂಡು ಸಲೀಮನಿಗೆ ಪತ್ರ ಬರೆದಳು:–

'ನನ್ನ ಸ್ವರ್ಗದೇವರೆ,

ಸಿಹಿ ಕನಸುಗಳನ್ನು ಬಿತ್ತಿ, ನೈಜ ಬದುಕಿನ ನೋವುಗಳನ್ನು ಮರೆಸಿದ ಧನ್ವಂತರಿಯ ಮುಂದೆ ಮತ್ತೊಂದು ಸಮಸ್ಯೆ. ಬದುಕಿನ ಪ್ರಾರಂಭದ ಘಟ್ಟದಲ್ಲಿ ಮಾತ್ರ ನಾವಿಬ್ಬರೂ ನಿಂತಿದ್ದೇವೆ. ದಾರಿ ಸವೆಸಬೇಕಾದ್ದು ಇನ್ನೂ ಸಾಕಷ್ಟಿದೆ. ನೀವೆಷ್ಟೋ ಸಲ ನನ್ನ ಪ್ರೀತಿಯ ವಿಷಯದಲ್ಲಿ ಶಂಕೆ ತಳೆದುದನ್ನು ಸೂಕ್ಷ್ಮವಾಗಿ ತಿಳಿಸಿದ್ದೀರಿ. ನಿಜ ಹೃದಯದ ಭಾವನೆಗೆ ಪ್ರೀತಿ ವಾತ್ಸಲ್ಯಗಳಿಗೆ ಜಾತಿಯ ಹಣೆ ಪಟ್ಟಿ ಇಲ್ಲವಾದರೂ ಕಣ್ಣಿಗೆ ಕಾಣದ ತರ್ಕಕ್ಕೆ ಮೀರದ 'ಜಾತಿ'ಯ ಚೀಟಿಗಳನ್ನು ಮನುಷ್ಯನಿಗೆ ಅಂಟಿಸಿದ್ದಾರೆ. ಆದರೆ ನೀವೇ ಒಮ್ಮೆ ದೇವರಿಗೆ 'ಜಾತಿ–ಕುಲಗಳ' ಅಂಟಿಲ್ಲವೆಂದು ಹೇಳಿದ್ದೀರಿ. ನಾನು ನಿಮ್ಮನ್ನು ದೇವರೆಂದು ಭಾವಿಸಿರುವಾಗ ನಿಮಗೆ ಜಾತಿಯಿಲ್ಲ. ಜೊತೆಗೆ ನಮ್ಮಿಬ್ಬರ ಪ್ರೀತಿಗೆ ಲೋಕ ರೀತಿಯಿಲ್ಲ. ಆದರೂ ನನಗೇನೊಂದೂ ದಾರಿ ಕಾಣುತ್ತಿಲ್ಲ. ಕತ್ತಲ ಗವಿಯಲ್ಲಿ ತಡವರಿಸುತ್ತಾ ನಡೆದಿದ್ದೇನೆ. ನೀವು ಬೆಳಕಾಗಿ ಬೆರಳು ತೋರಿದರೆ ಭವಿಷ್ಯವನ್ನು ಕಂಡುಕೊಂಡೇನು.

ನಕ್ಷತ್ರ ಸಂಖ್ಯೆಯ ಕಣ್ಣುಗಳಿಂದ ಕಾಣುವ ಕಾತರತೆಯಲ್ಲಿ
ನೀವಂದಂತೆ ನಿಮ್ಮ ತುಟಿಯ ಜೇನಾದ
ಬದುಕ ಬಟ್ಟಲ ಮಧುವಾದ
'ನಿಮ್ಮ ಅನುಪಮಾ'

* * *

ಅಪ್ಪ ಅಮ್ಮನ ಆಶೀರ್ವಾದ ಕೋರಿ ಹೋದಾಗ ಅಪ್ಪನಿಂದ ಪಾದಪೂಜೆಯಾಯಿತು. ಅಮ್ಮ ಒಳಗೊಳಗೇ ಅತ್ತಳು. ತನ್ನ ಮದುವೆಗೆ ಅಡ್ಡ ಬರಬಹುದಾದ ಅನಿಷ್ಟಕ್ಕೆ ಕಾರಣಳಾದ ತಂಗಿಯನ್ನು ನೋಡಲೂ ಅಸಹ್ಯ ಪಟ್ಟುಕೊಂಡು ಅಕ್ಕ ಹೊರಗೇ ಬರಲಿಲ್ಲ. ಈ ಪ್ರತಿಕ್ರಿಯೆ ನಿರೀಕ್ಷಿಸಿದ್ದೇ ಆದರೂ ಹೆಪ್ಪುಗಟ್ಟಿದ ದುಃಖ ಕರಗಿ ದಡ ದಾಟಿಕೊಂಡು ಉಕ್ಕಿ ಹರಿಯಿತು. ಸಲೀಮ ಎರಡೂ ಕೈಗಳಿಂದ ಅವಳ ಭುಜ ಹಿಡಿದು ಮೆಲ್ಲನೆ ನಡೆಸಿಕೊಂಡು ಹೊರಗೆ ಕರೆತಂದ. ಆರ್ಯಸಮಾಜದಲ್ಲಿ ವೈದಿಕ ರೀತಿಯಲ್ಲಿಯೇ ಮದುವೆ ನಡೆದು ಸಲೀಮನಿಗೆ ಸತೀಶನೆಂದು ಹೊಸ ನಾಮಕರಣವಾಗಿತ್ತು.

'ಅನು ನಾನು ನಿನ್ನ ಧರ್ಮಕ್ಕೆ ಸೇರಿಬಿಟ್ಟಿದ್ದೇನೆ. ಇನ್ನು ನಿನಗಾವ ಪಾಪಭೀತಿಯೂ ಇಲ್ಲ ಎಂದುಕೊಳ್ಳುತ್ತೇನೆ!' ಅರ್ಥಪೂರ್ಣವಾಗಿ ಹೇಳಿದ.

"ಬೇಡ ಬೇಡ 'ಸತೀಶ' ಹೆಸರಿಗಿಂತಲೂ 'ಸಲೀಮ' ಎಂಬ ಹೆಸರಿನಲ್ಲಿ ಮಾದಕತೆ ಇದೆ. ಇರುವುದೆಲ್ಲ ಇದ್ದಂತೆ ಇರಲಿ. ಬದಲಾವಣೆಯೇ ಬೇಡ."

'ನಿನ್ನಿಷ್ಟ ಅನು. ಸೂಜಿ ಮೊನೆಯಷ್ಟೂ ನಿನ್ನ ಮನಸ್ಸನ್ನು ನೋಯಿಸುವುದಿಲ್ಲ. ನಿನಗಿಷ್ಟವಾದರೆ ನಮ್ಮೂರಿಗೆ ಹೋಗೋಣ. ಇಲ್ಲವಾದರೆ ಇಲ್ಲೇ ಎಲ್ಲಾದರೂ ಕೆಲಸ ನೋಡಿಕೊಂಡು ಇದ್ದು ಬಿಡೋಣ– ಏನಂತಿ?'

'ಯಾರೂ ಇಲ್ಲದ ನೆಂಟರ ನೆರಳೂ ಬೀಳದ ದೂರದ ಊರಿಗೆ ಹೋಗಿ ಬಿಡೋಣ. ನಾನೂ ನಿಮ್ಮೊಂದಿಗೆ ದುಡಿಯುತ್ತೇನೆ. ಇಬ್ಬರ ಬದುಕೂ ಹೇಗೋ ಕಳೆದುಹೋಗುತ್ತೆ'–ಎಂದಳು.

ಸಲೀಮ ಅವಳ ಇಷ್ಟದಂತೆ ದೂರದ ಊರುಗಳಲ್ಲಿ ಕೆಲಸಕ್ಕೆ ಅರ್ಜಿಗಳನ್ನು ಹಾಕತೊಡಗಿದ. ಅಲ್ಲಿಯವರೆಗೆ ತನ್ನ ಬಂಧುವಿನಿಂದ ತನಗೊಬ್ಬನಿಗೇ ಬರುತ್ತಿದ್ದ ಹಣದಷ್ಟರಲ್ಲಿ ಇಬ್ಬರೂ ಸಮಾಳಿಸಿಕೊಂಡು ಹೋದರು.

ಒಂದು ಪುಟ್ಟ ಕೋಣೆಯೇ ಅವರ ಪ್ರೇಮ ಪ್ರಪಂಚ. ಆದರೆ ಅಷ್ಟರಲ್ಲಿಯೇ ಸಲೀಮ ಅನುಪಮಾಳಿಗೆ ಏನೆಲ್ಲ ಕಥೆ ಹೇಳಿ, ಪದ ಹಾಡಿ ಮೈಮರೆಸಿ ಸ್ವರ್ಗವೂ ಸಹಿಸದ ಸುಖವನ್ನೂ ಕಾಣಿಸಿದ.

ಸದಾ ಹಸನ್ಮುಖಿ, ಚುರುಕುತನ, ಜೇನುಮಾತು, ಬೆಣ್ಣೆ ಹೃದಯ, ಬೆಳಿಗ್ಗೆ ಅನು ಏಳುವುದಕ್ಕೆ ಮೊದಲೇ ಎದ್ದು, ಮಡದಿಯ ಮಂಚದ ಬಳಿ ಬಂದು 'ಏಳೆನ್ನ ಮನದನ್ನೆ! ನೋಡು ಪೊಳ್ತರೆ ಬಂದು ನಿಶಿಯು ಬೋಗುಣಿಯೊಳಕೆ ಹೊಂಬುಗುರಿಯೆಸೆದಿರೆ' ಎಂದು ಕೈ ಕೊಟ್ಟು ಎಬ್ಬಿಸುತ್ತಿದ್ದ. ಎದ್ದು ಅನು ಮುಖ ತೊಳೆದು ಕಾಫಿಗೆ ಸಿದ್ಧ ಮಾಡಿ ಸಲೀಮನನ್ನು ಕರೆದಾಗ ಬಾ ತುಂಬು ಬಟ್ಟಲನು;

ಜಾರೆನ್ನ ಚೆನ್ನ, ಎಂದು ಕೆನ್ನೆ ಹಿಂಡುತ್ತಿದ್ದ. ಅಷ್ಟಕ್ಕೇ ಬಿಡದೆ ತುಂಬಿದ ಕಾಫಿ ಲೋಟವನ್ನು ಬದಿಗಿಕ್ಕಿ, ಬರಸೆಳೆದು ಬಿಗಿದಪ್ಪಿ ಮುತ್ತುಗಳ ಮಳೆಗರೆದು ಸಾಕು ಸಾಕೆನಿಸುವಂತೆ ಮಾಡುತ್ತಿದ್ದ.

ಕಷ್ಟದಲ್ಲಿ ಕುಂಟುತ್ತಾ ನಡೆಯುವ ಬದುಕಾದರೂ ಇಬ್ಬರ ಒಲವಿನ ಅಮೃತವೇ ಸಂಜೀವಿನಿ ಶಕ್ತಿಯನ್ನು ಕೊಡುತ್ತಿತ್ತು. ಆದರೆ ಪ್ರೀತಿ ಒಲವುಗಳಿಂದ ಎಷ್ಟು ಕಾಲ ಹೊಟ್ಟೆ ತುಂಬಿಕೊಂಡಿರಲು ಸಾಧ್ಯ? ಕೆಲಸವೊಂದಿರಲೇಬೇಕು. ಸಂಪಾದನೆಯಾಗಲೇ ಬೇಕು. ನಾಳೆಗಳ ಚಿಂತೆ ಸಲೀಮನೆನ್ನುತ್ತಿದ್ದಂತೆ ಬೇಡವೆಂದು ಬಿಟ್ಟರೂ 'ಇಂದು'ಗಳ ಚಿಂತೆ ತಪ್ಪಿಸಲು ಅಸಾಧ್ಯ.

'ಸಲೀಂ ನೀವು ಬರೀ ಪ್ರೀತಿಯ ಮಧುವನ್ನು ಕುಡಿಸುತ್ತಲೇ ಇರುತ್ತೀರೋ ಅಥವಾ 'ಊಟಗೀಟದ ಚಿಂತೆ ಮಾಡುತ್ತೀರೋ' ಎಂದು ಅರ್ಧ ಗಂಭೀರವಾಗಿ ಅರ್ಧ ವಿನೋದವಾಗಿ ಕೇಳಿದರೆ,

"ಬುಂಡೆಯ ತುಂಬಾ ಹೆಂಡ. ಪಕ್ಕದಲ್ಲಿ ನಿನ್ನಂತಹ ಹೆಂಡತಿಯಿದ್ದರೆ ಏನೂ ಬೇಡ ಅನೂ. ಕಾಡೂ ಸ್ವರ್ಗಕ್ಕೆ ಸಮಾನವಾಗಿರುತ್ತದೆ. ನೀನಿದ್ದರೆ ಹಸಿವು ನೀರಡಿಕೆಗಳನ್ನೂ ಮರೆತ ಅತಿ ಮಾನವನಾಗುತ್ತೇನೆ. ನಿನಗೆ ಹಾಗೆ ಅನಿಸುವುದಿಲ್ಲವೇ?"

'ಸಲೀಮ್, ನೀವು ಮಾತಿನಿಂದ ನನ್ನನ್ನು ಮೂಕಳನ್ನಾಗಿ ಮಾಡುತ್ತೀರಿ' ಎಂದು ನಕ್ಕಳು.

'ಸರಿ ಹಾಗಾದರೆ ಮತ್ತೂ ಒಳ್ಳೆಯದಾಯಿತು. ನೀನು ಮೂಕ ಪ್ರತಿಮೆಯಾದರೆ ನಾನು ಪ್ರೇಮ ಮಂತ್ರಗಳಿಂದ ಮಾತಾಡಿಸುವ ಪೂಜಾರಿಯಾಗುತ್ತೇನೆ.'

"ಪ್ರತಿಮೆಗಳನ್ನು ಪೂಜಿಸಿದರೆ ನಿಮ್ಮ 'ಅಲ್ಲಾ' ಸಿಟ್ಟಾಗುತ್ತಾನೆ".

'ಪ್ರೀತಿ ಪ್ರೇಮಾರಾಧಕರಿಗೆ ಅಲ್ಲಾನೂ ಇಲ್ಲ ಮುಲ್ಲಾನೂ ಇಲ್ಲ. ನಾನು ನಂಬುವ ಸೂಫಿ ಧರ್ಮ ಮಧುಮಯವಾದುದು. ಮನುಷ್ಯ ಹೃದಯವೇ ಬಟ್ಟಲು; ಮದ್ಯವೇ ಭಗವಂತನ ಭಕ್ತಿ; ಉಪಾಸನೆಯೇ ಸುರಾಪಾನ. ಪ್ರಿಯೆಯೇ ವಿಚಾರ ಸಹಚರಿ- ಗೊತ್ತೇನು ನಿನಗೇ' ಎಂದದ್ದಕ್ಕೆ 'ಅಬ್ಬಬ್ಬ ನಿಮ್ಮನ್ನು ಅರ್ಥಮಾಡಿಕೊಳ್ಳುವುದೇ ಕಷ್ಟ. ನೀವು ಎಷ್ಟು ಆಳದ ವ್ಯಕ್ತಿಗಳೋ ಇನ್ನೂ ತಿಳಿಯಲು ಸಾಧ್ಯವಿಲ್ಲ'- ಎಂದು ಹುಸಿ ಮನಸಿನಿಂದ ನುಡಿಯುತ್ತಿದ್ದಳು.

ಮದುವೆಯ ಮೊದಲ ದಿನಗಳು ಮಧುಮಯ ಯಾತ್ರೆಯಾಗಿತ್ತು. ಆದರೆ ಮುಂದೆ, ಮುಂದೆ, ಎಂದೋ ಒಮ್ಮೆ ಅನುಪಮಳಿಗೆ ಮನೆಯ ನೆನಪಾಗಿ ಮಧುರ ಜೀವನದಲ್ಲಿ. ಹೂ ಮಂಚದಲ್ಲಿ ಮೂಡಿದ ಮುಳ್ಳಿನಂತಾಗುತ್ತಿತ್ತು.

ಇಬ್ಬರಿಗೂ ಹೊರಗಿನ ಪ್ರಪಂಚದ ಪರಿವೆಯಿಲ್ಲದೆ ಪ್ರಶಾಂತ ಪರಿಸರದಲ್ಲಿ ವಿಹರಿಸುವ ವಿಹಂಗಮಗಳಾದರು. ದಿನ ಕಳೆದದ್ದು, ತಿಂಗಳು ಉರುಳಿದ್ದು, ವರುಷಗಳು ಸಂದದ್ದೂ ಯಾವುದೂ ಅಷ್ಟೊಂದು ಗಮನೀಯವೆನಿಸಲಿಲ್ಲ ಅವರಿಗೆ.

ಸಲೀಮನಿಗೆ ಅನುಪಮಳನ್ನು ಮಹಾರಾಣಿಯಂತೆ ಮೆರೆಸಬೇಕು. ಅವಳಿಗಾವ ಕೊರತೆಯು ಅನುಭವವಾಗಬಾರದು ಎನ್ನುವ ಅಭಿಲಾಷೆ ತನ್ನ ನಂಬಿಕೆಗೆ ವಿರೋಧವಾದರೂ ಅನಿವಾರ್ಯವೆನಿಸತೊಡಗಿತು. ಅದಕ್ಕಾಗಿ ದುಡಿಯಬೇಕು. ಆದರೆ ದುಡಿಯಲು ಕೆಲಸ ಸಿಕ್ಕಿರಲಿಲ್ಲ.

ಮದುವೆಯಾದ ಎರಡು ವರ್ಷಕ್ಕೆ ಸಲೀಮನಿಗೆ ಕೆಲಸ ಸಿಕ್ಕಿತು. ಕೈ ತುಂಬಾ ಸಂಬಳ! ಕುಣಿದಾಡಿ ಅನುಪಮಳನ್ನು ಎತ್ತಿ ಮುದ್ದಾಡಿದ. ಗಿರಿಗಿರನೆ ತಿರುಗಿಸಿದ. ಈ ಹೆಚ್ಚು ಸಂತೋಷ ಅವಳಲ್ಲಿ ಭೀತಿ ಗಾಬರಿಗಳನ್ನು ಮೂಡಿಸಿತು.

ಹೊಸ ಊರು ಹೊಸ ಬದುಕು, ರಜೆ ಸಿಕ್ಕಾಗಲೆಲ್ಲ ಸುಂದರ ಪ್ರದೇಶಗಳಿಗೆ ಕರೆದೊಯ್ದು ನದಿ, ನಾಲೆ, ಪಶು, ಪಕ್ಷಿ ಯಾವೊಂದು ಸುಂದರ ವಸ್ತುವೂ ಸಲೀಮನಲ್ಲಿ ಕಾವ್ಯಮಯ ಉದ್ಗಾರಗಳನ್ನು ಪ್ರೇರೇಪಿಸುತ್ತಿದ್ದುವು. 'ಅಬ್ಬ! ಇಷ್ಟೊಂದು ಸುಂದರ ಬದುಕನ್ನು ನಿರೀಕ್ಷಿಸಿರಲಿಲ್ಲ. ಯಾವ ಜನ್ಮದ ಅನುಬಂಧವೋ! ಜಾತಿ–ನೀತಿಗಳನ್ನು ಮೀರಿ ಬೆಸೆಯಿವೆ. ಈ ನಮ್ಮ ಹೃದಯಗಳನ್ನು!' ಎಂದು ಅಚ್ಚರಿಪಡುತ್ತಿದ್ದಳು.

ಸಲೀಮ–ಅನೂರ ಸಂತೋಷಕ್ಕೆ ಗರಿ ಮೂಡಿವೆ. ಹೊಸ ಸುದ್ದಿಯಿಂದ ಅನೂಳಲ್ಲಿ ಆಗುತ್ತಿದ್ದ ಪರಿವರ್ತನೆಯನ್ನು ಗಮನಿಸಿದ. ಊಹಿಸಿಕೊಂಡು ನಗುತ್ತಿದ್ದ. ಅನೂ ನಾಚಿಕೆಯಿಂದ ಅವನ ಮುಂದೆ ಸುಳಿಯುವುದನ್ನು ತಪ್ಪಿಸಿದ್ದಳು. ಕಂಡರೆ ಕಾವ್ಯ ಹಾಡಿ ಕೀಟಲೆ ಮಾಡುವ ಅವನ ಸಹವಾಸ ಹಿತವಾದರೂ ಈಗ ಅವಳಿಗೆ ಬೇಡವಾಗಿತ್ತು. ತನ್ನದೇ ಆದ ಆಲೋಚನೆಗಳ ಗೂಡು ಕಟ್ಟಿಕೊಂಡಿರತೊಡಗಿದಳು.

ಕಲ್ಪನೆಗಳ ಹಂದರ ನಿರ್ಮಿಸುವ ಕವಿ ಹೃದಯದವನು, ಕೆಲಸವನ್ನೂ ಸಮರ್ಥವಾಗಿ ನಿರ್ವಹಿಸಬಲ್ಲ ಎಂಬುದನ್ನು ತೋರಿಸಿದ. ಅವನ ಬಾಸ್‌ಗೆ ಸಲೀಮ ತೀರ ಹತ್ತಿರವಾಗಿದ್ದ. ಸಲೀಮನು ಆಫೀಸಿಗೆ ಬರದಿದ್ದರೆ ಆಫೀಸೆಲ್ಲಾ ಹಾಳುಗುಡುವಂತಿತ್ತು. ಒಮ್ಮೆ ನಗುತ್ತ ಕೀಟಲೆಗಾಗಿ ಕೇಳಿದ: ಸಲೀಮ ನಿನ್ನ ಕೈಹಿಡಿದವಳನ್ನೂ ಹೀಗೇ ಕವಿತೆಗಳನ್ನು ಹಾಡಿ ಮೈ ಮರೆಸುತ್ತೀಯಾ? ಎಂದು.

ಸಾರ್ ನಮ್ಮ ಬದುಕೊಂದು ಸುಂದರ ಕವನ. ನಾನು ಕವಿಯಾದರೆ ನನ್ನವಳೇ ನನಗೆ ಸ್ಫೂರ್ತಿಯ ವಸ್ತು. ನಮ್ಮ ಪ್ರೀತಿಯೊಂದಕ್ಕೇ ನನಗೆ ಈ ಜಗತ್ತಿನಲ್ಲಿ ಬೆಲೆ; ಬೇರೆ ಯಾವುದಕ್ಕೂ ನಾನು ಬೆಲೆ ಕೊಡುವುದಿಲ್ಲ ಸಾರ್" ಎಂದ.

"ಸಲೀಮ್, ನಿಮ್ಮಿಬ್ಬರ ಈ ಅನ್ಯೋನ್ಯ ದಾಂಪತ್ಯಕ್ಕೆ, ನಿನ್ನ ಭಾವುಕ ಬದುಕಿಗೆ ನನ್ನ ಕಂಗ್ರಾಜ್ಯುಲೇಷನ್ಸ್. ಒಮ್ಮೆಯಾದರೂ ನಿಮ್ಮ ಮನೆಗೆ ನನ್ನನ್ನು ಆಹ್ವಾನಿಸುವುದಿಲ್ಲವೇ ಸಲೀಂ?

"ಸಾರ್ ನನ್ನದು ಬಡ ಕುಟೀರ. ನಿಮ್ಮಂಥವರನ್ನು ಅಲ್ಲಿಗೆ ಕರೆದೊಯ್ಯುವುದಕ್ಕೇ ನಾಚಿಕೆಯಾಗುತ್ತೇ" ಎಂದ.

"ಡೋಂಟ್ ವರಿ ಸಲೀಮ್- ನಾನು ಅಂತಹ 'ಸ್ನಾಬ್' ವ್ಯಕ್ತಿಯಲ್ಲ. ನನಗೂ ಮನುಷ್ಯ ಭಾವನೆಗಳಲ್ಲಿ ಪ್ರೀತಿ ಇದೆ. ಹಣ ಅಂತಸ್ತನ್ನು ನಾನು ನೋಡುವುದಿಲ್ಲ" ಎಂದ.

"ಹಾಗಾದರೆ ಖಂಡಿತ ತಮಗೆ ಸ್ವಾಗತ. ನಾನು ಆಫೀಸಿನಿಂದ ಹೋಗುವಾಗ ನನ್ನ ಜೊತೆಗೇ ಬನ್ನಿ ಸಾರ್" ಎಂದ.

"ಸರಿ ಹಾಗಾದರೆ ನಾಳೆ ಹೋಗೋಣ" ಎಂದ.

ಸಲೀಮನು ಆಗಬಹುದೆಂದು ಒಪ್ಪಿಗೆಯಿತ್ತ.

* * *

ಮರುದಿವಸ ಆಫೀಸರ್ ಬಾಸ್ ಆದ ಮುಖರ್ಜಿಯವರನ್ನು ಕರೆತರುವುದಾಗಿತ್ತು. ಅನುಪಮ ಇದ್ದುದನ್ನೆಲ್ಲಾ ಓರಣವಾಗಿ ಜೋಡಿಸಿದಳು. ಪುಟ್ಟ ಹಜಾರದಲ್ಲಿ ಎರಡು ಕುರ್ಚಿಗಳು ಒಂದು ಸಣ್ಣ ಸ್ಟೂಲನ್ನೇ ಟೀ ಟೇಬಲ್ ಆಗಿ ಮಧ್ಯೆ ಇಟ್ಟು ಅದರ ಮೇಲೊಂದು ಕಸೂತಿಯ ಬಟ್ಟೆಯನ್ನು ಹೊದಿಸಿದಳು. ಅದರಲ್ಲಿದ್ದುದು ಪ್ರಿಯ ಪ್ರೇಯಸಿಯರ ಚಿತ್ರ, ಪ್ರಿಯನ ಎದೆಗೆ ಹೊಂದಿಕೊಂಡಿರುವ ಪ್ರೇಯಸಿ, ಪ್ರಿಯನ ಕೈಲೊಂದು ಹೆಂಡದ ಹೂಜಿ. ತುಂಬಾ ಮುದ್ದಾಗಿ ಬಿಡಿಸಲಾಗಿತ್ತು. ಮಧ್ಯದಲ್ಲಿ ಹೂದಾನಿ. ಒಂದು ಗೊಂಚಲು ಗುಲಾಬಿಯನ್ನು ತಂದು ಅದರಲ್ಲಿಟ್ಟಳು.

ಐದು ಗಂಟೆಯಾಗುತ್ತಿದ್ದಂತೆ ಅನು ಅವರ ನಿರೀಕ್ಷೆಯಲ್ಲಿ ಕಾಯತೊಡಗಿದಳು. ಅವರು ಬರುವಷ್ಟು ಹೊತ್ತಿಗೆ ತಾನು ಎಲ್ಲವನ್ನೂ ಸಿದ್ಧಗೊಳಿಸಿ, ತೆಳುಗುಲಾಬಿ ಬಣ್ಣದ ಸೀರೆಯುಟ್ಟು ಅದೇ ಬಣ್ಣದ ರವಿಕೆ ತೊಟ್ಟು, ಹಣೆಗೆ ಕೆಂಪು ಕುಂಕುಮ ಧರಿಸಿದ್ದಳು. "ಹಣೆಯ ಕುಂಕುಮ ಚೆಂದ"- ಎಂದು ಕೀಟಲೆಗೆ ಸಲೀಮ ಹೇಳಿದ್ದು ನೆನಪಾಗಿ ನಕ್ಕಳು.

ಹೊರಗೆ ಕಾರು ನಿಂತ ಶಬ್ದವಾಯಿತು. ಕಾರಿನಲ್ಲಿ ತನ್ನ ಮನೆಗೆ ಬರುವವರಾರೂ ಇಲ್ಲದಿದ್ದರೂ ಈ ದಿನ ಬಂದವರು ಸಲೀಮನ ಬಾಸ್ ಇರಬೇಕೆಂದುಕೊಂಡು ಅವರ ಸ್ವಾಗತಕ್ಕೆ ಸಿದ್ಧಳಾದಳು.

ಸಲೀಮ ಬಾಸ್‌ನೊಂದಿಗೆ ಇಳಿದು ನೇರವಾಗಿ ಹಜಾರಕ್ಕೆ ಕರೆತಂದ. ಒಳಗೆ ಕಾಲಿಡುತ್ತಿದ್ದಂತೆಯೇ ಘಮ ಘಮ ಅತ್ತರಿನ ವಾಸನೆಯೆನಿಸಿತು. ಬುರ್ಕಾದಲ್ಲಿ ಎದುರಾಗಬಹುದೆಂದು ನಿರೀಕ್ಷಿದ ಬಾಸ್ ಮುಖರ್ಜಿಯವರಿಗೆ ಅನುಪಮಾ ಎದುರಿಗೆ ಕೈ ಜೋಡಿಸಿ ನಮಸ್ಕರಿಸಿದಾಗ ಆಶ್ಚರ್ಯವಾಯಿತು. ಅವಳು ಹಿಂದೂತನಕ್ಕೆ ಪ್ರತೀಕದಂತೆ ಇದ್ದಾಳೆ. ಹಣೆಯು ಕುಂಕುಮದಿಂದ ಆಶ್ಚರ್ಯವಾಯಿತು. ಸಲೀಮನಿಗೆ ಮುಖರ್ಜಿಯವರ ಬೆಪ್ಪು ಕಣ್ಣುಗಳು ಅರ್ಥವಾಗಿ, ನಕ್ಕು- ಸಾರ್ ಈಕೆ ನನ್ನ ಹೆಂಡತಿ ಅನುಪಮಾ. ನನ್ನ ದೇವತೆಯೆಂದರೆ ಇವಳೇ ಎಂದ.

"ಸಲೀಂ ಈ ಹೆಸರು ನಮ್ಮ ಹಿಂದೂ ಹೆಸರಲ್ಲವೇ?" ಎಂದು ಅನುಮಾನದಿಂದಲೇ ಕೇಳಿದ. ಹೌದು ಸಾರ್. ನಿಮ್ಮ ಅನುಮಾನ ನನಗರ್ಥವಾಯಿತು. ನೀವು ನನಗೆ ಬೇಕಾದವರು. ನನ್ನ ವೈಯಕ್ತಿಕ ಬದುಕಿಗೆ ಸಂಬಂಧಿಸಿದ ಕಥೆ ಹೇಳುತ್ತೇನೆಂದು, ಅನುಪಮಾ ಮತ್ತು ತಮ್ಮಿಬ್ಬರ ಪ್ರೇಮಕಥೆಯನ್ನು ವಿವರಿಸಿದ. ಸಲೀಮನಲ್ಲಿ ಭಾವೋದ್ವೇಗ ಹೆಚ್ಚಾಗುತ್ತಿತ್ತು.

ಪ್ರಪಂಚವೇ ಎದುರು ಬಿದ್ದರೂ ನಮ್ಮನ್ನು ಯಾರೂ ಬೇರೆ ಮಾಡಲಾರರು. ಪ್ರೀತಿ ಮೈತ್ರಿಗಳಿಂದ ರಚಿತವಾಗಿರುವ ಹೃದಯಗಳಿಗೆ ಹಿಂದೂ ಮುಸಲ್ಮಾನ್- ಎಂಬ ಮಡಿವಂತಿಕೆಯಿಲ್ಲ ಸಾರ್ ಎಂದ.

ಮುಖರ್ಜಿಯವರ ಕಣ್ಣಲ್ಲಿ ನೀರೂರಿತು. "ನಿಮ್ಮನ್ನು ಹೃದಯಪೂರ್ವಕವಾಗಿ ಅಭಿನಂದಿಸುತ್ತೇನೆ ಸಲೀಮ್. ಈ ಪ್ರಪಂಚದಲ್ಲಿ ಪ್ರೇಮಾದರ್ಶದಿಂದ ಬದುಕುವ ದಂಪತಿಗಳೇ ದುರ್ಲಭ. ಜಾತಿ-ನೀತಿಗಳನ್ನೂ ಮೀರಿ ಬೆಸೆದ ನಿಮ್ಮ ಬದುಕು ಚಿರಾಯುವಾಗಲಿ ಎಂದು ಹೃತ್ಪೂರ್ವಕವಾಗಿ ನುಡಿದ. ನನ್ನ ಪ್ರೀತಿಯ ಜ್ಞಾಪಕವಾಗಿ ಇವುಗಳನ್ನು ಸ್ವೀಕರಿಸಿ ಎಂದು ಡ್ರೈವರನು ತಂದಿಟ್ಟಿದ್ದ ಸೇಬಿನ ಬುಟ್ಟಿಯನ್ನು, ಒಂದು ಸೀರೆಯ ಪೊಟ್ಟಣವನ್ನೂ ಅವರಿಗೊಪ್ಪಿಸಿದ, ಅನುಪಮಾ ಹಿಂದು ಮುಂದು ನೋಡಿದಳು. "ಪರವಾಗಿಲ್ಲಮ್ಮ, ಸಲೀಮ ನನ್ನ ಸೋದರನಂತೆ. ಬೇರ್‍ಯಾರೂ ನಿನಗೆ ಕೊಡುತ್ತಿಲ್ಲ. ತೆಗೆದಿಟ್ಟುಕೋ" ಎಂದರು. ಸಲೀಮನೂ ಅನುಪಮಳಿಗೆ "ಮುಖರ್ಜಿಯವರ ಮನಸ್ಸು ನೋಯಿಸಬೇಡ. ತೆಗೆದಿಡು" ಎಂದು ಹೇಳಿದ.

ಅವುಗಳನ್ನು ಅನುಪಮಾಳು ತೆಗೆದಿಟ್ಟು ಎರಡು ತಟ್ಟೆಗಳಲ್ಲಿ ತಿಂಡಿಯನ್ನು ತಂದಿಟ್ಟು, ನೀರಿನ ಗ್ಲಾಸುಗಳಿಗಾಗಿ ಒಳಗೆ ಹೋಗಿ ಗ್ಲಾಸುಗಳನ್ನು ಮತ್ತು ನೀರಿನ ಹೂಜಿಯನ್ನು ತಂದಿಟ್ಟಳು. ಗ್ಲಾಸುಗಳೊಳಕ್ಕೆ ನೀರನ್ನು ಬಗ್ಗಿಸಿ ಇರಿಸಿದಳು.

ತಿಂಡಿ ತಿಂದಾದ ಮೇಲೆ ಎರಡು ಕಪ್ಪುಗಳಲ್ಲಿ ಚಹಾ ತಂದಿರಿಸಿದಳು.

"ಸಲೀಮ್ ನಿಮ್ಮ ಫಿಲಾಸಫಿಕ್ ಔಟ್‌ಲುಕ್ ಆಫ್ ಲೈಫ್ ನನ್ನನ್ನು ತರ್ಕಶೂನ್ಯನನ್ನಾಗಿ ಮಾಡಿದೆ. ಪ್ರೀತಿಗೆ ಜಾತಿ ಬಿಟ್ಟು ಬದುಕು ಬದುಕುತ್ತೇವೆಂದು ಹೇಳಿ ಹೊರಟವರು ಬಹಳ ಮಂದಿ ಇದ್ದರೂ ಅವರ ನಂಬಿಕೆಗಳಿಗೆ ಬಲವಾದ ನೆಲೆಯಿಲ್ಲ. ಆದರೆ ನಿಮ್ಮ ಪ್ರೀತಿಯ ತತ್ವ, ಇರುವುದರಲ್ಲಿ ನಂಬಿಕೆ– ನನಗೆ ತುಂಬಾ ಹಿಡಿಸಿದುವು. ಭವಿಷ್ಯದ ಚಿಂತೆ ಬಿಟ್ಟು ಇಂದಿನದಷ್ಟನ್ನೇ ಯೋಚಿಸುತ್ತಿರುವ ನಿಮ್ಮದು ಸುಖದ ವರ್ತಮಾನಗಳೇ ಆಗಿರಲಿ... ನಾನಿನ್ನು ಬರುತ್ತೇನೆ ಸಲೀಮ್. ಒಮ್ಮೆ ನಿಮ್ಮಾಕೆಯನ್ನು ಕರೆದು ತನ್ನಿ ನಮ್ಮ ಮನೆಗೆ".

"ಆಗಬಹುದು ಸಾರ್, ನೀವು ಬಂದದ್ದು ನಮಗೆಷ್ಟೋ ಸಂತೋಷ. ಯಾರೂ ಇಲ್ಲದ ಅನಾಥರಂತಿದ್ದ ನಮಗೆ ನೀವೊಬ್ಬ ಬಂಧು. ನಿಮ್ಮ ಪ್ರೀತಿ ಸ್ನೇಹಗಳು ಸದಾ ಇರಲಿ" ಎಂದು ಬೇಡಿದ.

"ಗುಡ್‌ಲಕ್ ಸಲೀಮ್. ಬರುತ್ತೇನಮ್ಮ" ಎಂದು ನಮಸ್ಕರಿಸಿ ಹೊರಗೆ ನಡೆದರು. ಡ್ರೈವರ್ ಕಾರಿನ ಬಾಗಿಲು ತೆರೆದ. ಮುಖರ್ಜಿ ಒಳಗೆ ಕುಳಿತರು. ಸಲೀಮ್–ಅನೂ ಅವರಿಬ್ಬರಿಗೂ ವಂದಿಸಿ, ಕಾರು ಕಣ್ಮರೆಯಾಗುವವರೆಗೂ ಅಲ್ಲಿಯೇ ಇದ್ದು ಒಳಗೆ ಬಂದು ಬಾಗಿಲು ಹಾಕಿಕೊಂಡರು.

ಅನೂಳ ಮುಖವನ್ನು ಕೈಗೆ ತೆಗೆದುಕೊಂಡು ಕಣ್ಣು ರೆಪ್ಪೆ ಮಿಟುಕಿಸದೆ ನೋಡತೊಡಗಿದ. ಮೆಲ್ಲನೆ ಅವಳ ಕೆಂಪು ತುಟಿಗೆ ತುಟಿಯೊತ್ತಿದ. "ಇದೇನು ಸಲೀಮ್ ಬರಬರುತ್ತಾ ಹೀಗಾಗುತ್ತಿದ್ದೀರಿ. ನಾಳೆ ನಮ್ಮ ನಡುವೆ ಒಂದು ಮಗು ಬಂದರೆ ಹೀಗೆಲ್ಲಾ ಆಡಿದರೆ ಚೆನ್ನಾಗಿರುತ್ತದೆಯೇ ನಿಮಗೆ ಸ್ವಲ್ಪವೂ ನಾಚಿಕೆಯಿಲ್ಲ"

"ನಾಚಿಕೆ!!"– ಗಹಗಹಿಸಿ ನಕ್ಕು ಹೇಳಿದ. ಸ್ವರ್ಗದ ಅಪ್ಸರೆಯರಿಂದ ದೇವತೆಗಳು, ಮಾನವರು, ಈ ಮಧುವನ್ನು ಬಯಸುವುದರಲ್ಲಿ ತಪ್ಪಿಲ್ಲ. ನಾನು ನಿನ್ನಿಂದ ಬಯಸುವುದು ನಿನಗೆ ತಪ್ಪೆನಿಸುವುದೇ?

"ಕ್ಷಮಿಸಿ ಸಲೀಮ್, ನಾನು ನಿಮ್ಮವಳು. ನೀವಂದಂತೆ ನಾನೊಂದು ಮಧುಕುಂಭ. ನನ್ನಿಂದ ಪಡೆಯಬಹುದಾದ ಆನಂದವೇ ನಿಮ್ಮ ಮಧುವಾದರೆ ಇದೋ ನಿಮಗೆ ಸಮರ್ಪಿತ"– ಎಂದು ಹತ್ತಿರ ಬಂದು ಪೂರ್ತಿಯಾಗಿ ಬಿಗಿದಪ್ಪಿದಳು. ಹಾಗೆಯೇ ಮೈಮರೆತು ಕಣ್ಣು ಮುಚ್ಚಿದಳು.

* * *

ನದೀಮಾಳು ಹುಟ್ಟಿ ಒಂದು ವರ್ಷವಾಗಿದೆ. ಅವಳ ಹುಟ್ಟು ಹಬ್ಬವನ್ನು ಮನೆಯಲ್ಲಿಯೇ ಸಡಗರದಿಂದ ಆಚರಿಸಿದರು. ಗೆಳೆಯರಿಗೆಲ್ಲ ಭರ್ಜರಿ ಔತಣ

ಕೊಡಿಸಿದ. ಬಂಧುಗಳಿಲ್ಲದಿದ್ದರೂ ಗೆಳೆಯರ ಸಂಖ್ಯೆಗೆ ಕಡಿಮೆಯಿರಲಿಲ್ಲ. ಪ್ರಮದಾಳಿಗೆ ಉಡುಗೊರೆಗಳ ರಾಶಿಯೇ ಬಂತು. ಓ ದೇವರೇ ನೀನೆಷ್ಟು ಕರುಣಿ. ತುಂಬಿ ಬರುವ ಈ ಆನಂದಾತಿರೇಖವನ್ನು ತಡೆದುಕೊಳ್ಳುವ ಶಕ್ತಿ ಕೊಡು. ನನ್ನ ಸಲೀಮ ನೂರು ವರ್ಷ ಬಾಳಲಿ, ಮರಳುಗಾಡುಗಳಲ್ಲಿ ಅಮೃತದ ಹೊನಲುಗಳನ್ನೇ ಹರಿಸಿಯಾನು!- ಎಂದು ದೇವರಲ್ಲಿ ಮೊರೆಯಿಟ್ಟಳು.

ಒತ್ತಡದ ಕೆಲಸಗಳಿದ್ದರೂ ಆಫೀಸಿನಲ್ಲಿ ಸಲೀಮನ ಪರಿಸ್ಥಿತಿ ಮಾತ್ರ ಇನಿತೂ ವಿಚಲಿತವಾಗುತ್ತಿರಲಿಲ್ಲ. ತೀರಾ ಪ್ರಶಾಂತವಾದ ಧೋರಣೆಯಿಂದಲೇ ಗೋಜಲು ಸಮಸ್ಯೆಗಳನ್ನು ಸ್ವೀಕರಿಸಿ ಬಿಡಿಸುತ್ತಿದ್ದ. ಆಫೀಸು-ಮನೆ-ಮಡದಿ-ಮಗು ಈ ವೃತ್ತದ ಪರಿಧಿಯೊಳಗೇ ಪರಿಭ್ರಮಿಸುತ್ತಿದ್ದ. ದಿನಗಳು, ವರ್ಷಗಳು, ಬೇಕಾದರೆ ಯುಗಗಳೂ ಕ್ಷಣಗಳಂತೆ ಉರುಳಿ ಹೋಗುತ್ತಿದ್ದುವು. ಬೆಳಗು-ರಾತ್ರಿಗಳು, ಆಫೀಸಿನ ಕೆಲಸದ ನೆನಪಿಲ್ಲದಿದ್ದರೆ ಅವರ ಪರಿವೆಗೇ ಬರುತ್ತಿರಲಿಲ್ಲವೆನೋ!

ಪ್ರಮದಾಳ ಬಗ್ಗೆ ಅನುಪಮಾ ಗಗನಚುಂಬಿ ಕನಸಿನ ಗೋಪುರಗಳನ್ನು ಕಟ್ಟಿಕೊಂಡಳು. ಇದು ಹೂ-ಜೇನುಗಳನ್ನು ಬೆರೆಸಿ ಮಾಡಿದ ಮಗು. ಇವಳು ಬೆಳೆಯಬೇಕು. ವಿಶ್ವದಗಲ, ಆಕಾಶದೆತ್ತರ ಬೆಳೆಯುವಂತೆ ನೋಡಿಕೊಳ್ಳಬೇಕು. ಸಲೀಮನಿಗೆ ನಾಳಿನ ಚಿಂತೆಯಿಲ್ಲ. 'ಇಂದು'ಗಳನ್ನು ಜೋಪಾನವಾಗಿ ಕಾಪಾಡಿದರೆ ಮಾತ್ರ 'ನಾಳೆ' ಸುನಿಧಿಯಾದೀತು- ಎಂದು ತೀರಾ ವ್ಯವಹಾರದ ಲೆಕ್ಕಾಚಾರಕ್ಕೆ ಇಳಿದಳು.

ಮೋಜಿನ ಖರ್ಚುಗಳನ್ನು ಮೊಟಕು ಮಾಡಿದಳು. ಸಲೀಮನಿಗೆ ಪ್ರತಿದಿನವೂ ವ್ಯವಹಾರದ ಪಾಠವಾಗತೊಡಗಿತು. ಅವರೆ ಹೇಳಿದಾಗ ಕೇಳಿ ಮರುಕ್ಷಣ ಮರೆತುಬಿಡುತ್ತಿದ್ದ. "ನನ್ನ ಪ್ರಮದಾ ಇಂದರಳಿ ನಾಳೆ ಬಾಡುವ ಹೂವಾಗಬಾರದು. ಅವಳು ಚಿರನೂತನವಾಗಿ ಉಳಿಯಬೇಕು. ಯೌವನದ ದೇಹಕಾಂತಿ ಇಷ್ಟಾದರೂ ಮಸುಕಾಗಬಾರದು. ಇಂದುಗಳೆಂದೂ ನಾಳೆಗಳಾಗಿ ಹಳಸಬಾರದು-" ಎಂದು ಪ್ರಕೃತಿ ನಿಯಮವನ್ನೇ ಕಾಲದ ಹರಿತವನ್ನೇ ಬದಲಾಯಿಸಿ ನಿಲ್ಲಿಸುವಂತೆ ಯೋಚಿಸಿದ.

ಪ್ರಮದಾಳ ಹುಟ್ಟು ಹಬ್ಬವಾಗಿ ಮೂರು ತಿಂಗಳಾಗಿದೆ. ಅವರ ಜೀವ ನದಿ ಎಲ್ಲಿಯೂ ತಡೆಗಾಣದೆ ಅವ್ಯಾಹತವಾಗಿ ಹರಿದೋಡುತ್ತಿದೆ. ಆದರೆ ಆ ಪರಿವೆ ಮಾತ್ರ ಅವರಿಗಿಲ್ಲ.

ಸಲೀಮ ಒಂದು ದಿನ ಎಂದಿನಂತೆ ಆಫೀಸಿಗೆ ಹೋಗಲಿಲ್ಲ. ಮನೆಯಲ್ಲಿಯೇ ಉಳಿದ. ಅನುಪಮಳಿಗೆ ಯಾಕೆಂದು ತಿಳಿಯಲಿಲ್ಲ. "ಆಗಲೇ ೯-೩೦ ಆಯಿತು, ಊಟ ರೆಡಿಯಾಗಿದೆ. ನೀವೆದ್ದರೆ ಈಗಲೇ ಬಡಿಸಿಬಿಡುತ್ತೇನೆ" ಎಂದಳು ಮಾಮೂಲಿನಂತೆ.

"ಇಲ್ಲ ಅನೂ ಆಫೀಸಿಗೆ ಹೋಗುವ ಮನಸ್ಸಿಲ್ಲ. ಈ ದಿನವಿಡೀ ನಿನ್ನೊಂದಿಗೆ, ಪ್ರಮಿಯೊಂದಿಗೆ ಇದ್ದು ಬಿಡೋಣವೆಂದುಕೊಂಡಿದ್ದೇನೆ. ಈ ದಿನ ನನ್ನ ಕೈಯಿಂದ ತಪ್ಪಿಹೋದರೆ ಏನೋ ಅನಾಹುತವೆನಿಸುತ್ತಿದೆ. ಇಂದಿನ 'ಇಂದು' ನನಗೆ ಅಮೂಲ್ಯ. ನನ್ನ ಮನದಾಳದಿಂದ ಏಳುತ್ತಿರುವ ಹುಚ್ಚು ಸಂತಸದ ಅಲೆಗಳಿದ ನಿಮ್ಮನ್ನು ಕೊಚ್ಚಿ ಹಾಕಬೇಕೆಂದಿದ್ದೇನೆ. ಇಂದಿನ ಈ ಖುಷಿ ನಾಳೆಗಿರುವುದಿಲ್ಲ. ಅದಕ್ಕೆ ಈ ದಿನ ನಮ್ಮ ಕೈ ಜಾರಿಹೋಗದಂತೆ ಭದ್ರವಾಗಿ ಬಿಗಿ ಹಿಡಿದಿಟ್ಟುಕೊಳ್ಳಬೇಕೆಂದೇ ಉಳಿದಿದ್ದೇನೆ" ಎಂದು ಒಂದೇ ಸಮನೆ ಬಡಬಡಿಸಿದ.

"ಸಲೀಮ್ ನಿಮಗೇನಾಗಿದೆ. ಮಾಮೂಲಿನಂತೆ ನೀವಿಲ್ಲ. ಇಷ್ಟೊಂದು ಭಾವುಕತೆಯೇಕೆ. ನಾಳೆ ಹಾವಳಿಯ ಚಿಂತೆಯೇಕೆ? ನೀವೇ ಹೇಳುತ್ತೀರಿ ನಮಗೆಂದೆಂದಿಗೂ ನಾಳೆಗಳು ಬರಲಾರವೆಂದು, ಇನ್ನೇಕೆ ನಿಮಗೆ ಭೀತಿ?"

"ಇಲ್ಲ ಅನೂ, ಇಂದಿನವರೆಗೂ ನನ್ನನ್ನು ಕಾಡದಿದ್ದ ನಾಳೆಗಳ ನೆನ್ನೆಗಳ ಅಳುಕು ನನ್ನನ್ನು ಬಾಧಿಸುತ್ತಿದೆ. ಅದನ್ನು ಮರೆಯಲು ಸಹಾಯ ಮಾಡು ಅನು- ಪ್ಲೀಸ್ ಸಹಾಯ ಮಾಡು. ಹತ್ತಿರ ಬಾ, ನನ್ನನ್ನು ಒಂದರಗಳಿಗೆಯೂ ಬಿಟ್ಟು ಹೋಗಬಾರದು. ನಿನ್ನ ತುಟಿ ಬಟ್ಟಲನ್ನು ಹತ್ತಿರ ತಾ. ನಾಳೆಗೆ ನಾನು ನೂರ್ಕೋಟಿ ನೆನ್ನೆಗಳ ಜೊತೆಗೆ ಸೇರಿ ಹೋಗುತ್ತೇನೆ. ನೀನಿದ್ದರೆ ಆ ಭೀತಿ ಹತ್ತಿರ ಸುಳಿಯಲಾರದು."

ಅನೂಳ ಹೃದಯ ಕಂಪಿಸಿತು. ಗಿರಗಿರನೆ ತಲೆ ತಿರುಗಿದಂತೆ ಆಯಿತು. ಯಾರನ್ನಾದರೂ ಕರೆದು ತರೋಣವೆಂದರೆ ತನ್ನನ್ನು ಕಪಿ ಮುಷ್ಟಿಯಲ್ಲಿ ಬಿಗಿದು ಹಿಡಿದಿದ್ದಾನೆ. ಅವನಿಗೆ ತಿಳಿಸಿ ಹೇಳುವುದು ಈ ಕ್ಷಣಕ್ಕೆ ಅಸಾಧ್ಯ... ಸಲೀಮ್ ಒಂದು ನಿಮಿಷ ಹೊರಗೆ ಹಜಾರದಲ್ಲಿ 'ಪ್ರಮಿ' ಒಬ್ಬಳೇ ಆಡಿಕೊಳ್ಳುತ್ತಿದ್ದಾಳೆ. ಅವಳನ್ನು ಎತ್ತಿಕೊಂಡು ಬರುತ್ತೇನೆ' ಎಂದು ಬಿಡಿಸಿಕೊಂಡು ಮಂಚದಿಂದ ಜಗ್ಗನೆದ್ದು ಹೊರಗೆ ಬಾಗಿಲಿನ ಕಡೆಗೆ ನಡೆದಳು.

ಸಲೀಮನ ಸೂಕ್ಷ್ಮ ಕಿವಿಗಳಿಗೆ ಚಿಲಕ ತೆಗೆಯುವ ಶಬ್ದ ಕೇಳಿಸಿತು. ಅವನೂ ಎದ್ದು ಹಿಂದಿನಿಂದ ಓಡಿ ಚಿಲಕ ತೆಗೆಯಲು ಪ್ರಯತ್ನಿಸುತ್ತಿದ್ದ ಅನೂಳ ಜಡೆ ಹಿಡಿದು ಎಳೆದು 'ಅನೂ' ಎಂದು ಅಬ್ಬರಿಸಿದ. ಅನೂ ತಿರುಗಿ ನೋಡಿದಳು. ಅವನನ್ನು ನೋಡುತ್ತಿದ್ದಂತೆ ಜಳ್ಳನೆ ಕಣ್ಣೀರು ಹರಿಯಿತು. ಸಲೀಮನ ಕಣ್ಣಲ್ಲಿ ಕೋಪದ ಕೆಂಡ!! ಅನೂಳಿಗೆ ನಂಬಲಾಗಲಿಲ್ಲ. ಇಷ್ಟು ವರ್ಷಗಳಲ್ಲಿ ಕಾಣದ ಈ ಸೆಡವು ಇಂದು ಮೂಡಿದ್ದು ಉಲ್ಕಾಪಾತದಂತೆ ಅನಿಸಿತು.

ಅವಳ ಕಣ್ಣಲ್ಲಿ ಹನಿ ಕಂಡ ಸಲೀಮ "ಅನೂ. ಪ್ರಿಯೆ... ಕ್ಷಮಿಸು. ದಯವಿಟ್ಟು ಕ್ಷಮಿಸು. ಅಪರಾಧವಾಯಿತು... ಈ ಮಧುರ ಗಳಿಗೆಗಳಲ್ಲಿ ಮೂರನೆಯವರ ಪ್ರವೇಶ ಬೇಡವೆಂದು ಹೀಗೆ ಹೇಳಿದೆ. ಮತ್ತೇನೂ ಇಲ್ಲ. ಬಾ. ನನಗೇನೂ ಆಗಿಲ್ಲ. ಆದರೆ

ಒಂದು ಸತ್ಯ ಮಾತ್ರ ನನಗೀಗ ಕಾಣುತ್ತಿದೆ. ಹಿಂದೆಗಳು ಇಂದುಗಳಾಗುವುದಿಲ್ಲ ಮತ್ತು 'ಇಂದು'ಗಳು ಎಂದಿಗೂ 'ನಾಳೆ'ಗಳಾಗದೆ ಉಳಿಯುವುದಿಲ್ಲ. ಋತು ಧರ್ಮದ ತಿರುವನ್ನು ಬದಲಾಯಿಸುವುದು ಸಾಧ್ಯವಿಲ್ಲ. ನಾನು ಇಲ್ಲಿಗೆ ಬಂದದ್ದೂ ಗೊತ್ತಿಲ್ಲ. ನಾಳೆಗೆಲ್ಲಿ ಹೋಗುವೆನೋ ತಿಳಿದಿಲ್ಲ. ಹೇಳುವವರೂ ಇಲ್ಲ. ಗುಟ್ಟರಿಯುವುದು ಸಾಧ್ಯವಿಲ್ಲ. ಕೇವಲ ನಾನೊಂದು, ಮರುಭೂಮಿಯಲ್ಲಿ ಭೋರಿಡುವ ಬಿರುಗಾಳಿಯೆನಿಸುತ್ತದೆ. ಬಾ ಇರುವ ಈ ಕ್ಷಣಗಳನ್ನು ವ್ಯರ್ಥ ಮಾಡುವುದು ಬೇಡ– ಎಂದು ಕೈ ಹಿಡಿದು ಎಳೆದುಕೊಂಡು ಹೋದ. ತಾವಿದ್ದ ವಾಸ್ತವ ಲೋಕವನ್ನು ಮರೆತು ಎಷ್ಟು ಹೊತ್ತು ಮರೆತಿದ್ದರೋ 'ಪ್ರಮಿ'ಯ ಅಳು ಕೇಳಿಸಿತು. ಥಟ್ಟನೆ ಕನಸೊಡೆದು, ಕಳೆದು ಹೋಗಬಹುದಾದ ವಾಸ್ತವ ಬದುಕಿನ ಎಳೆಯ ಸೆಳೆತಕ್ಕೆ ಬಂದಳು. ಸರಸರನೆ ಪ್ರಮಿಯು ಇದ್ದಲ್ಲಿಗೆ ಹೋಗಿ ಅವಳನ್ನು ಅಪ್ಪಿ ಹಿಡಿದಳು.

ಬೆಳಗಿನ ಹೀಚು ಮಧ್ಯಾಹ್ನ ಕಾಯಾಗಿ, ಸಂಜೆಗೆ ಪಕ್ವಕ್ಕೆ ಬಂದಿತ್ತು. ಆಕಸ್ಮಿಕವಾಗಿ ದೊಡ್ಡ ಬಿರುಗಾಳಿಯೆದ್ದಿತು. ಕಿಟಕಿ ಬಾಗಿಲುಗಳು ರಪರಪನೆ ಹೊಡೆದುಕೊಂಡವು. ನೆಲದ ಮಣ್ಣು ಸುಳಿಗಾಳಿಯ ಜೊತೆಗೆದ್ದು ಸುರುಳಿಯಾಗಿ ಎತ್ತರಕ್ಕೆ ಹಾರಿತು.

ಅರ್ಧ ಗಂಟೆಯ ನಂತರ ಬುಸುಗುಟ್ಟಿ ಸೋತು ಸಪ್ಪಗಾದ ಹಾವಿನಂತೆ ವಾತಾವರಣ ತೆಪ್ಪಗಾಯಿತು. ಆದರೆ ಬಿಳುಪಾದ ಮೋಡಗಳ ಮೈ ಬಣ್ಣ ಇದ್ದಕ್ಕಿದ್ದಂತೆ ಕಪ್ಪಿಟ್ಟಿತು. ಕ್ಷಣಕ್ಷಣಕ್ಕೆ ಅವು ಉಬ್ಬುತ್ತಿದ್ದವು. ದಟ್ಟವಾಗಿ ಕವಿದ ಅವುಗಳಿಂದಾಗಿ ಸಂಜೆಯೇ ರಾತ್ರಿಯಾಗಿತ್ತು. ರಾತ್ರಿಗೆ ಹಣ್ಣಾಗಬೇಕಾದ್ದು ಬಿರುಗಾಳಿಗೆ ಈಗಲೇ ತೊಟ್ಟು ಕಳಚಿ ಬಿದ್ದಿತ್ತು. ಇನ್ನೇನು ಮಳೆ ಬಂದೇ ಬರುತ್ತದೆ. ಸೀದು ಬತ್ತಿದ ಎದೆಗಳು ತಂಪಾಗುತ್ತವೆ.

ಅನೂ 'ಪ್ರಮಿ'ಗೆ ಹಾಲು ಕುಡಿಸಿ 'ಜೋ' ತಟ್ಟಿ ಮಲಗಿಸಿದಳು. ಸಲೀಮನಿಗೆ ಒಂದು ಲೋಟದ ತುಂಬಾ ಹಾಲು, ಸುಲಿದಿದ್ದ ಕಿತ್ತಲೆಯ ತೊಳೆಗಳನ್ನು ಒಂದು ಸಣ್ಣ ಪ್ಲೇಟಿನಲ್ಲಿ ತೆಗೆದುಕೊಂಡು ನಡೆದಳು. ಅವನ ಪಕ್ಕದಲ್ಲಿ ಕುಳಿತು, ಒಂದೊಂದಾಗಿ ತೊಳೆಗಳನ್ನು ಬಿಡಿಸಿ ಕುಸುರಿಗಳನ್ನು ಮಾತ್ರ ತಿನ್ನಿಸಿದಳು. ತಿನ್ನುತ್ತಲೇ ಅವಳ ಕೈ ಹಿಡಿದು "ಅನೂ ಸತ್ತ ನೆನ್ನೆಯ ಚಿಂತೆ ಬಿಟ್ಟು, ಹುಟ್ಟದಿರುವ ನಾಳೆಯ ಕೊರಗನ್ನಟ್ಟಿ, ಇವತ್ತಿನ ಸುಖವನ್ನು ಮಾತ್ರ ಉಳಿಸಿಕೊಳ್ಳುತ್ತೀಯಾ. ಜೀವನದ ಸಾರವೆಲ್ಲ ಇನ್ನೊಂದಷ್ಟು ಕ್ಷಣಗಳು ಮಾತ್ರ. ಮರುಕ್ಷಣದಲ್ಲಿ ನನಗಿನ್ನು ಸುಡುಗಾಡ ಕರೆಯಿದೆ" ಎಂದ.

"ಸಲೀಂ ಅಪಶಬ್ದಗಳನ್ನು, ಅನಿಷ್ಟಗಳನ್ನು ನುಡಿಯಬೇಡ"– ಎಂದು ಅವನ ತುಟಿಯ ಮೇಲೆ ಕೈಯಿಟ್ಟು ಬಾಯಿ ಮುಚ್ಚಿದಳು. "ಹುಟ್ಟಿದ ಪ್ರತಿಯೊಂದೂ ಶೂನ್ಯದತ್ತ ಸಾಗುವುದನ್ನು ತಪ್ಪಿಸುವುದು ಅಸಾಧ್ಯ ಅನೂ"– ರಸಿಕತೆಯ ದನಿಯಲ್ಲಿ ವೇದಾಂತದ ಸುಳುಹಿತ್ತು.

"ಇಷ್ಟು ದಿವಸ ನಾನು ಹಾಡುತ್ತಿದ್ದೆ ನಿನಗೆ ಬುಲ್ ಬುಲ್, ಈಗ ನೀನಿಂದು ನನಗಾಗಿ ಹಾಡಲಾರೆಯಾ?" ಆ ದನಿಯಲ್ಲಿ ಪ್ರಾರ್ಥನೆಯಿತ್ತು.

"ಏನು ಹಾಡಲಿ ಸಲೀಂ, ಹಡಗು ಮುಳುಗುತ್ತಿದೆ. ಪ್ರಾಣಾಪಾಯದಿಂದ ತಪ್ಪಿಸಿಕೊಳ್ಳುವುದು ಹೇಗೆಂಬ ವಿಚಾರದ ಹುಳು ಕೊರೆಯುತ್ತಿರುವಾಗ ಕೊರಲ ಕದ ಮುಚ್ಚಿದೆ"– ಬಿಕ್ಕುತ್ತ ಹೇಳಿದಳು.

"ಪ್ಲೀಸ್ ಅನೂ, ಇದೊಂದು ಪ್ರಾರ್ಥನೆ" ಎಂದು ಮತ್ತೆ ಅಂಗಲಾಚಿದ. ಅನೂ ಅಳುತ್ತಲೇ 'ಕರುಣಾಳು ಬಾ ಬೆಳಕೆ, ಮುಸುಕಿದೀ ಮಬ್ಬಿನಲ್ಲಿ ಕೈ ಹಿಡಿದು ನಡೆಸೆನ್ನನು'– ಎಂದು ಹಾಡುತ್ತಿರುವಾಗ ಸಲೀಮ ಕಣ್ಣುಮುಚ್ಚಿದ. ಅನೂಗೆ ಗಾಬರಿಯಾಗಿ 'ಸಲೀಮ್, ಸಲೀಮ್'– ಎಂದು ಕೂಗಿದಳು. ಅವಳ ಕೂಗಿಗೆ ಮೆಲ್ಲನೆ ಕಣ್ಣು ಬಿಟ್ಟ. ಇನ್ನೂ ಅವನ ಮುಖದಲ್ಲಿ ನಗೆಯ ಹೊಳಪಿತ್ತು.

ಕತ್ತಲಾಯಿತು ಹೆಣ್ಣೆ
ಮತ್ತೆ ಉದಯಿಸಿ ಬರುವೆ
ಪ್ರಮದಳನು ಕರೆತರಲು
ಮುತ್ತಿಡುವೆನೊಮ್ಮೆ'

– ಎಂದೇ ಹಾಡಿನ ದಾಟಿಯಲ್ಲಿ ಹೇಳಿದ. ಶೂಲದಂತಿರಿದ ದುಃಖವಾದರೂ ಎದ್ದು ಹೋಗಿ ಪ್ರಮದಳನ್ನು ಎಬ್ಬಿಸಿಕೊಂಡು ಬಂದಳು.

ಸಲೀಮ್ ಒಂದು ಕೈಯಿಂದ ಪ್ರಮದಳನ್ನು, ಮತ್ತೊಂದು ಕೈಯಿಂದ ಅನೂಳನ್ನು ಬರಸೆಳೆದು ಬಿಗಿದಪ್ಪಿ ನುಡಿದ– 'ಅನೂ ನನ್ನ ಪಯಣ ಮುಗಿಯಿತು. ನಾಳೆಗೆ ನಾನು ಕಥೆ. ಪ್ರಮಿಯ ಭವಿಷ್ಯತ್ತು ನಿನ್ನ ಕೈಲಿದೆ. ಅದು ನನ್ನ ಕಾಣಿಕೆ ನಿನಗೆ. ಜೋಪಾನವಾಗಿರಿಸು ಬರುತ್ತೇನೆ' ಎಂದು ಹೇಳುತ್ತಿರುವಂತೆ ತೇಲುಗಣ್ಣು ಹಾಕಿದ.

"ಸಲೀಂ"– ಗಟ್ಟಿಯಾಗಿ ಕಿರುಚಿದಳು. "ನಮ್ಮಿಬ್ಬರನ್ನು ಯಾರೂ ಬೇರೆ ಮಾಡಲಾರರು. ಸಾವು ನಮ್ಮನ್ನು ಬೇರೆ ಬೇರೆಯಾಗಿ ಕಡಿಯದು. ಸತ್ತರೂ ಇಬ್ಬರೂ ಒಟ್ಟಿಗೇ ಸಾಯೋಣವೆಂದಿರಲಿಲ್ಲವೇ?... ನಾನೂ ಬರುತ್ತೇನೆ" ಎಂದು ಬಿಕ್ಕಿ ಬಿಕ್ಕಿ ಅತ್ತಳು. 'ಅದೂ ವಿಧಿಗೆ ಇಷ್ಟವಿಲ್ಲ. ಸಾವಿಗೂ ಅಸೂಯೆ ನಮ್ಮ ಒಲವಿನ ಬದುಕನ್ನು ಕಂಡು... ಈ ದೊಡ್ಡ ಪ್ರಪಂಚದಲ್ಲಿ ಪ್ರಮಿ ತಾಯಿಯ ನೆರಳಿಲ್ಲದೆ ಬಾಡಿ ಹುಡಿಗೂಡುವುದೇ ಇಷ್ಟವೇ?' ನೀನೇ ಯೋಚಿಸೆಂದು ಕಣ್ಮುಚ್ಚಿದ.

ಹೊರಗೆ ಮಳೆ ಬರುತ್ತಲೇ ಇತ್ತು......

ಅಂತಹದೇ ಮಳೆ. ಸೂಜಿ ಸಾವಿರ ಚುಚ್ಚಿದಂತೆ ನೋವಾಯಿತು. ಹೊರಗೆ ಯಾರೋ ಬಡಿದ ಶಬ್ದವಾಯಿತು. ಕಣ್ಣೊರೆಸಿಕೊಂಡು ಹೋಗಿ ಬಾಗಿಲು ತೆರೆದಳು.

ಪ್ರಮುದಾ ಕಾರಿನಿಂದ ಇಳಿದು 'ಅಮ್ಮಾ' ಎಂದು ಬೆಸೆದುಕೊಂಡಳು. 'ಅಮ್ಮಾ ಇವರು ನಮ್ಮ ಪ್ರಿನ್ಸಿಪಾಲರು. ತುಂಬಾ ಹೊತ್ತಾದರೂ ಮಳೆ ನಿಲ್ಲಲಿಲ್ಲ. ಮಳೆಯಲ್ಲಿ ಬಂದರೆ ನೀನು ಬೈಯ್ಯುತ್ತೀಯಂತ ತುಂಬಾ ಹೊತ್ತು ಕಾದೆ. ನಿಲ್ಲಲೇ ಇಲ್ಲ. ನನ್ನ ಗೆಳೆಯರೆಲ್ಲ ಹೊರಟುಹೋದರು. ಅವರ ಡ್ಯಾಡಿಯರು ಬಂದು ಕರ್ಕೊಂಡು ಹೋದರು. ನಾನೊಬ್ಬಳೇ ಆಗಿಬಿಟ್ಟೆ. ಇನ್ನೇನು ನಾನು ಬಂದುಬಿಡೋಣಾಂತ ಆಚೆಗೆ ಬಂದೆ. ನಮ್ಮ ಸಾರ್, 'ಇನ್ನೂ ಹೋಗಲಿಲ್ವಾ ಪ್ರಮದಾ?'- ಅಂತ ಕೇಳಿದರು. 'ಇಲ್ಲಾ ಸಾರ್, ಮಳೆ ಬರ್ತಿದೆ' ಅಂಧೆ. ಅದಕ್ಕವರು ಹಾಗಾದರೆ ಬಾ ನಂ ಜೊತೆ. ನಿಮ್ಮ ಮನೆ ಗುರುತು ಹೇಳು, ಕರೆದುಕೊಂಡು ಹೋಗಿಬಿಡ್ತೀನಂದ್ರು. ಅದಕ್ಕೆ ಅವರ ಜೊತೆ ಬಂದುಬಿಟ್ಟೆ'- ಎಂದಳು. 'ಬರ್ತೀನಿ ಪ್ರಮದಾ, ಟಾ ಟಾ' ಎಂದು ಕೈಬೀಸಿ ಕಾರು ಹತ್ತಲು ಹೋದಾಗ, ಇಷ್ಟು ಹೊತ್ತಾದರೂ ಅವರನ್ನು ಒಳಗೆ ಕರೆಯದೆ ಅಸಭ್ಯತೆಯಿಂದ ನಿಂತ ತನ್ನ ಬಗ್ಗೆ ತೀರಾ ಕೆಡುಕೆನಿಸಿತು. 'ತುಂಬಾ ಉಪಕಾರವಾಯ್ತು ಸಾರ್. ನೀವು ಕರೆತಂದು ಬಿಡದಿದ್ದರೆ ಬಹುಶಃ ಕತ್ತಲಾದರೂ ಮನೆ ಸೇರುತ್ತಿರಲಿಲ್ಲವೇನೋ?- ಒಳಗೆ ಬನ್ನಿ ಸಾರ್. ಒಂದು ನಿಮಿಷ ಕೂತು ಹೋಗಬಹುದಲ್ಲ?'- ಪ್ರಾರ್ಥನೆಯ ದನಿಯಲ್ಲಿ ಹೇಳಿದಳು.

ಇಲ್ಲಮ್ಮ ಇನ್ನೊಮ್ಮೆ ಎಂದಾದರೂ ಬರುತ್ತೇನೆ. ಈಗ ಹೊತ್ತಾಯ್ತು. ತಮ್ಮ ಇನ್ವಿಟೇಷನ್‌ಗೆ ಧನ್ಯವಾದ- ಎಂದು ಮತ್ತೊಮ್ಮೆ ಪ್ರಮದಳತ್ತ ಮುಗುಳ್ನಗೆ ಬೀರಿ ಕಾರು ಸ್ಟಾರ್ಟ್ ಮಾಡಿದ.

* * *

ಪ್ರಮದಳೇ ಈಗ ಅವಳ ಬದುಕಿನ ಆಕರ್ಷಣೆ. ಬದುಕುವ ಆಸೆಯಿಲ್ಲವಾದರೂ ಸಲೀಮನ ಪ್ರಾರ್ಥನೆಯಂತೆ ಅವಳಿಗಾಗಿ ಬದುಕಲು ನಿರ್ಧರಿಸಿದ್ದಳು.

ಮುಖರ್ಜಿಯವರು ತಮ್ಮ ಆಫೀಸಿನಲ್ಲೇ ಆಕೆಗೊಂದು ಕೆಲಸ ಕೊಡಿಸಿದ್ದರು. ಅವರಿಬ್ಬರ ಪೋಷಣೆಗೆ ತೊಂದರೆಯಿಲ್ಲವಾಗಿತ್ತು. ಆಗಾಗ ಮುಖರ್ಜಿಯವರು, ಅವರ ಕುಟುಂಬ, ಬಂದು ಯೋಗಕ್ಷೇಮವನ್ನು ವಿಚಾರಿಸಿಕೊಂಡು ಹೋಗುತ್ತಿದ್ದರು. ಅವರ ಸಹಾಯ ಮುಳುಗುವವರಿಗೊಂದು ದಡ ಸಿಕ್ಕ ಹಾಗಿತ್ತು. ಏನೊಂದು ಸಮಸ್ಯೆ ಬರಲಿ ಮುಖರ್ಜಿಯವರ ಸಲಹೆಯಂತೆ ನಡೆಯುತ್ತಿದ್ದಳು.

ಮುಖರ್ಜಿಯವರಿಗೆ ಅನುಪಮಾಳ ಬದುಕಿಗೊದಗಿದ ಆಘಾತದ ನೆನಪೂ ಜರ್ಝರಿತರನ್ನಾಗಿ ಮಾಡುತ್ತಿತ್ತು. ಅವರ ಸಹಾನುಭೂತಿ, ಅನುಕಂಪಗಳಿಗೆ ಕೊನೆಯಿರಲಿಲ್ಲ. ಸ್ವಂತ ತಂಗಿಗಿಂತಲೂ ಹೆಚ್ಚಿನ ಗಮನದಿಂದ ನೋಡಿಕೊಳ್ಳುತ್ತಿದ್ದರು. ಅವರ ದೃಷ್ಟಿಯಲ್ಲಿ ತುಂಬಿದ ಜೇನುಗೂಡು ಒಡೆದು ಮಣ್ಣಲ್ಲಿ ಬೆರೆತಂತಾಗಿತ್ತು.

ಅವಳ ಅಸಹಾಯಕ ಬದುಕಿಗೊಂದು ಆಶ್ರಯ ಕಲ್ಪಿಸುವ ಮನಸಿದ್ದರೂ, ಸಲೀಮನೊಂದಿಗೆ ಬಾಳ್ವೆ ನಡೆಸಿದ ಯಾವ ಹೆಣ್ಣೂ ಇನ್ನೊಬ್ಬ ಗಂಡಸನ್ನು ಅಷ್ಟು ಸುಲಭವಾಗಿ ಸ್ವೀಕರಿಸಲಾರಳು. ಮರುಮದುವೆಗೆ ಒಪ್ಪುವುದಾದರೆ ಮುಖರ್ಜಿಯವರು ತಮಗೆ ತಿಳಿದವರಲ್ಲಿ ಯಾರನ್ನಾದರೂ ಪ್ರಯತ್ನಿಸುತ್ತಿದ್ದರು. ಆದರೆ ಮದುವೆಯ ಪ್ರಸ್ತಾಪವೇ, ಮೊದಲೇ ಘಾಯಗೊಂಡ ಮನಸ್ಸಿಗೆ ಬರೆ ಎಳೆದಂತಾಗಬಹುದೆಂದು ಸುಮ್ಮನಿದ್ದರು.

ಮುಖರ್ಜಿಯವರ ಮಡದಿ ಸುನೀತಾದೇವಿಯಂತೂ ಸ್ವಂತ ತನ್ನ ತಂಗಿಯಂತೆಯೇ ಅನುಪಮಳನ್ನು ಭಾವಿಸಿಕೊಂಡು ನೋಡಿಕೊಳ್ಳುತ್ತಿದ್ದರು. ಪ್ರಮದಾಗೆ ಬುದ್ಧಿ ತಿಳಿದಂದಿನಿಂದ 'ಸುನ್ನಿ ಆಂಟಿ'ಯೆಂದರೆ ಪ್ರಾಣ ಬಿಡುತ್ತಿದ್ದಳು. ಅವರ ಮಕ್ಕಳ ಜೊತೆ ಆಟಕ್ಕೆ ಬಿದ್ದರೆ. ಅವಳಿಗೆ ಮನೆಗೆ ಬರುವುದಕ್ಕೇ ಮನಸ್ಸು ಬರುತ್ತಿರಲಿಲ್ಲ.

ಮೊದಲ ಬಾರಿಗೆ ಪ್ರಮದಾ ರಜದಲ್ಲಿ ಅವರ ಮನೆಯಲ್ಲೇ ಇದ್ದಳು. ಅನೂಳಿಗೆ ಮನೆ ಭಯಂಕರ ಸ್ಮಶಾನದಂತೆನಿಸಿತ್ತು. ಒಂಟಿ ಪಿಶಾಚಿಯ ಬದುಕಿನ ಏಕಾಂತತೆಯನ್ನು ಕೆಡಿಸುತ್ತಿದ್ದುದೆಂದರೆ ಅರ್ಥವಿಲ್ಲದ ಆಲೋಚನೆಗಳು. ಕಳೆದ ದಿನಗಳ ಸಿಹಿ ನೆನಪುಗಳು, ಅವಳೆದೆಯಲ್ಲಿ ಪಳೆಯುಳಿಕೆಗಳಂತೆ ಉಳಿದವು. ತನಗೆ ತಾನೇ ಹುಚ್ಚುಚ್ಚಾಗಿ ಮಾತಾಡಿಕೊಳ್ಳುತ್ತಿದ್ದಳು. 'ಸಲೀಂ, ಸಲೀಂ' ಎಂದು ಚೀರಿಡುತ್ತಿದ್ದಳು.

ಪ್ರಮದಳು ಜೊತೆಗಿದ್ದರೆ ಏಕಾಕಿತನದ ಬೇಸರವಿರುತ್ತಿರಲಿಲ್ಲ. ಅವಳಾಟ ಪಾಠ–ಮುದ್ದು ಮಾತುಗಳು ಭಯಂಕರ ಶೂನ್ಯತೆಯನ್ನು ಸೀಳಿ ಸರಿಸಿ ಉಲ್ಲಾಸದ ಸೌರಭವನ್ನು ಪಸರಿಸುತ್ತಿತ್ತು. ಅವಳ ನಗುವಿನ ಅಲೆಗಳು ಸಂಗೀತದ ಗುಂಜಾರವದಂತಿರುತ್ತಿತ್ತು. ಎರಡು ದಿನ ಕಳೆಯುವುದೂ ಅವಳಿಗೆ ಅಸಾಧ್ಯವಾಯಿತು. ಮುಖರ್ಜಿಯವರಿಗೆ ಫೋನ್ ಮಾಡಿ ಪ್ರಮದಳನ್ನು ಕರೆಸಿಕೊಂಡಳು. ಅವಳು ಅಲ್ಲಿಗೆ ಬರುವುದಿಲ್ಲವೆಂದು ಒಂದೇ ಸಮನೆ ಹಟ ಹಿಡಿದಳು. ಆದರೆ ಮುಖರ್ಜಿಯವರೇ ಒತ್ತಾಯಪಡಿಸಿ ಮನೆಗೆ ಕರೆದು ತಂದು ಬಿಟ್ಟರು. ಮನೆಗೆ ಬರುತ್ತಿದ್ದಂತೆಯೇ ಪ್ರಮದಾ ಉಮ್ಮಳದಿಂದ 'ಏನಮ್ಮಾ ಆಂಟೀ ಮನೆಯಲ್ಲಿ ಇರೋಕೆ ಬಿಡೋಲ್ಲ. ಅಲ್ಲಿ ಬಾಬು, ಲಲ್ಲಿ ಎಲ್ಲಾ ಇದ್ದಾರೆ. ಇಲ್ಲೋಕೆ ಇಲ್ಲಾರಿದ್ದಾರೆ? ನನಗೆ ಬೇಜಾರಾಗುತ್ತಮ್ಮ ಇಲ್ಲಿ'– ಎಂದು ಅಳುವಂತೆ ಮುಖ ಮಾಡಿದಳು.

"ಪ್ರಮಿ ಹಾಗಾದರೆ ನಾನು ನಿನಗೆ ಬೇಡವಾದೆನೇ?"– ಎಂದು ಸಪ್ಪಗಿನ ಮುಖ ಹಾಕಿಕೊಂಡು ಕೇಳಿದಳು.

"ಹಾಗೆಲ್ಲಾ ಮಾತಾಡಬಾರದು ಮರಿ. ಅಮ್ಮನ ಮನಸ್ಸಿಗೆ ನೋವಾಗುತ್ತೆ"– ಎಂದರು ಮುಖರ್ಜಿ.

"ಸಾರಿ ಅಮ್ಮ, ನಮ್ಮ ಟೀಚರ್ ಹೇಳಿದ್ದರು. ಯಾರಿಗಾದರೂ ನೋವು ಮಾಡಿದರೆ ಜೀಸಸ್‌ಗೆ ಕೋಪ ಬರುತ್ತಂತೆ, ನಮ್ಮನ್ನು ಕ್ಷಮಿಸೋಲ್ವಂತೆ" ಎಂದಳು.

'ಸರಿ ಆಯ್ತು. ಇನ್ಮೇಲೆ ಹಾಗೆಲ್ಲ ಮಾತಾಡಬೇಡ' ಎಂದು ಅವಳಿಗೆ ತಿಳಿಸಿ ಹೇಳಿದ್ದಳು.

ಬರಬರುತ್ತಾ ಒಂಟಿತನದ ಬದುಕಿಗೆ ಹೊಂದಿಕೊಳ್ಳತೊಡಗಿದಳು. ಬೆಳಗ್ಗೆ ಪ್ರಮದಳನ್ನು ಸ್ಕೂಲಿಗೆ ಕಳಿಸಿ, ತಾನೂ ಊಟಮಾಡಿ ಕೆಲಸಕ್ಕೆ ಹೊರಟು ಹೋಗುತ್ತಿದ್ದಳು. ಪ್ರಮದಳ ಶಾಲೆ ಬೇಗ ಮುಗಿಯುತ್ತಿತ್ತು. ಅವಳು ಹಿಂತಿರುಗಿ ಪಕ್ಕದ ಮನೆಯ ಲಲಿತಮ್ಮನ ಮನೆಯಲ್ಲಿ ಅವರ ಮಗಳು ಪದ್ಮಿಯ ಜೊತೆಗೆ ಅನುಪಮಾ ಕೆಲಸದಿಂದ ಹಿಂದಿರುಗಿ ಬರುವವರೆಗೂ ಆಡಿಕೊಂಡಿರುತ್ತಿದ್ದಳು. ಅನುಪಮಾ ಬಂದು ಪ್ರಮದಳನ್ನು ಅವರ ಮನೆಯಿಂದ ಕರೆತರುತ್ತಿದ್ದಳು. ಅವಳಿಗೆ ಹಾಲು ಕೊಟ್ಟು, ತಾನು ಕಾಫಿ ಕುಡಿದು ರಾತ್ರಿಯ ಅಡುಗೆ ಕೆಲಸಕ್ಕೆ ಇಳಿಯುತ್ತಿದ್ದಳು.

ಹೆಜ್ಜೆ ಹೆಜ್ಜೆಗೆ 'ಪ್ರಮಿ' ತಾಯಿಗೆ ಸಹಾಯ ಮಾಡುತ್ತೇನೆಂದು ಬರುತ್ತಿದ್ದಳು. ಅನೂಳಿಗೆ ಅವಳ ಆ ಮಾತಿಗೇ ಹಿಗ್ಗೆನಿಸುತ್ತಿತ್ತು.

* * *

ಭಾನುವಾರ ಮುಖರ್ಜಿಯವರ ಮನೆಯಲ್ಲಿ ಒಂದು ಸಣ್ಣ ಪಾರ್ಟಿ. ಮುಖರ್ಜಿಯ ತಮ್ಮ ಸೋಮನಾಥ್ ಒಂದೆರಡು ತಿಂಗಳಿಗಾಗಿ ಇಂಡಿಯಾಕ್ಕೆ ಬಂದಿದ್ದಾನೆ. ಅಮೆರಿಕಾದಲ್ಲಿ 'ಮೆಡಿಸನ್'ನಲ್ಲಿ ಹೆಚ್ಚಿನ ವಿದ್ಯಾಭ್ಯಾಸ ಮಾಡುತ್ತಿದ್ದಾನೆ. ಅಲ್ಲಿಗೆ ಹೋಗಿ ಮೂರು ವರ್ಷಗಳಾದರೂ ಇಂಡಿಯಾಕ್ಕೆ ಬಂದಿರಲಿಲ್ಲ. ಅಪ್ಪ ಅಮ್ಮ, ಅಣ್ಣ ಅತ್ತಿಗೆಯರನ್ನು ನೋಡಿಕೊಂಡು ಹೋಗೋಣವೆನಿಸಿ ಬಂದಿದ್ದಾನೆ. ಅಣ್ಣನ ಮನೆಯಲ್ಲಿ ಒಂದೆರಡು ದಿನವಿದ್ದು ಕಲ್ಕತ್ತೆಗೆ ಹೋಗುವುದಾಗಿ ಅಂದುಕೊಂಡಿದ್ದ. ಅಣ್ಣನ ಒತ್ತಾಯಕ್ಕೆ ಒಂದು ವಾರ ಅಣ್ಣನ ಮನೆಯಲ್ಲಿ ಉಳಿದ.

ತಮ್ಮನನ್ನು ಕಳಿಸಿಕೊಡುವುದಕ್ಕೆ ಮುಂಚೆ ಒಂದು ಸಂತೋಷಕೂಟವನ್ನು ಏರ್ಪಡಿಸಿ ಅನುಪಮಾಳನ್ನು ಕರೆಯೋಣವೆನಿಸಿತ್ತು. ಎಷ್ಟು ಸಲ ಮನೆಗೆ ಕರೆಯುತ್ತಿದ್ದರೂ ಅವಳು ಬರುವುದೇ ಅಪರೂಪ. ಈ ನೆವದಿಂದಲಾದರೂ ಬಂದಾಳೆಂದುಕೊಂಡರು. ಮುಖರ್ಜಿಯವರ ಒತ್ತಾಯಕ್ಕೆ ಕಟ್ಟು ಬಿದ್ದು 'ಅನೂ'ಳಿಗೆ ಹೋಗಲೇಬೇಕಾಯಿತು. ಪ್ರಮಿಯ ಸಂತೋಷ ಹೇಳತೀರದು. ಆಂಟಿಯ ಮನೆಗೆ ಹೋಗುವುದೆಂದರೆ ಸ್ವರ್ಗ ಸಿಕ್ಕಂಗೆ. ಅದೂ ಜೊತೆಗೆ ಅಮ್ಮ ಬರುತ್ತಿದ್ದಾಳೆ. ಅವಳಿಗೆಷ್ಟೋ ಸಮಾಧಾನ.

ಮುಖರ್ಜಿಯವರು ಡ್ರೈವರನನ್ನು ಅನೂಳ ಮನೆಗೆ ಕಳಿಸಿ ಅವಳನ್ನು ಕರೆತರಲು ಹೇಳಿದ್ದರು. ನಾಲ್ಕು ಗಂಟೆಗೆ ಸರಿಯಾಗಿ ಡ್ರೈವರನು ಬಂದು ಇವರನ್ನು ಕಾರಿನಲ್ಲಿ

ಕರೆದೊಯ್ದ. ಕಾರಿನಲ್ಲಿ ಹೋಗುವುದು ಪ್ರಮದಳಿಗೆ ಪ್ರಾಣ. 'ಅಮ್ಮ ಕಾರಿನಲ್ಲಿ ಹೋಗೋಕೆ ಎಷ್ಟು ಚೆನ್ನಾಗಿರುತ್ತೆ ಅಲ್ವಾ?' – ಅಂದಳು ಮುಗ್ಧ ಕುತೂಹಲದಿಂದ.

ಅನುಪಮಾ ಉತ್ತರ ಕೊಡಲಿಲ್ಲ. ಪ್ರಮದಾ ಕಾರಿನ ಕನ್ನಡಿಯಲ್ಲಿ ಪ್ರತಿಬಿಂಬಿತವಾದ ತಾಯಿಯ ಮುಖವನ್ನು ನೋಡಿದಳು, ಆ ಮುಖದಲ್ಲಿ ಅಷ್ಟಾಗಿ ಗೆಲುವಿದ್ದಂತೆ ಕಾಣಲಿಲ್ಲ. ಅಮ್ಮನಿಗೆ ಬೇಜಾರಾಗಿದೆಯೆಂದು ತಾನೂ ಗಂಭೀರವಾಗಿ ಕುಳಿತಳು.

ಹತ್ತು ನಿಮಿಷಗಳಲ್ಲಿ ಮುಖರ್ಜಿಯವರ ಮನೆ ಸೇರಿದರು. ಸುನಿತಾದೇವಿ ನಗುನಗುತ್ತಾ ಎದುರು ಬಂದು 'ಬಾ ಅನುಪಮಾ ನೀನು ಬರುತ್ತೀಯೋ ಇಲ್ಲವೋ ಎಂದುಕೊಂಡಿದ್ದೆ. ಸದ್ಯ ಬಂದೆಯಲ್ಲ!'

'ಅದೇನತ್ತಿಗೆ ನೀವು ಕರೆದಾಗ ನಾನು ಬರುವುದಿಲ್ಲವೇ?' ಎಂದು ನಗುತ್ತಲೇ ಉತ್ತರಿಸಿದಳು.

'ಹೋಗಲಿ ಅಷ್ಟಾದರೂ ಅಭಿಮಾನ ಇಟ್ಟುಕೊಂಡಿದ್ದೀಯಲ್ಲ' ಎಂದು ಹೇಳಿ–ಗೆಳೆಯರೆಲ್ಲ ಸೇರಿದ್ದ ಕಡೆಗೆ ಕರೆದೊಯ್ದಳು. ಖಾಲಿಯಾಗಿದ್ದ ಕುರ್ಚಿಯಲ್ಲಿ ಕುಳಿತಳು. 'ಪ್ರಮಿ' ಗೆಳೆಯರ ಜೊತೆಗೆ ಆಡಲು ಹೊರಟು ಹೋದಳು.

ಮುಖರ್ಜಿಯವರು ಅಲ್ಲಿ ನೆರೆದಿದ್ದ ಗೆಳೆಯರ ಪರಸ್ಪರ ಪರಿಚಯ ಮಾಡಿಸಿದರು. ಬಂದಿದ್ದವರು ಕೇವಲ ಎಂಟು ಮಂದಿ ಮಾತ್ರ, ಅದರಲ್ಲಿ ಮುಖರ್ಜಿಯ ಆಫೀಸಿನಿಂದ ಮೂವರು, ಬಂಧುಗಳಿಬ್ಬರು ಮತ್ತೆ ಪ್ರಮದಳ ಸ್ಕೂಲಿನ ಪ್ರಿನ್ಸಿಪಾಲರು. ಅನುಪಮಾಳಿಗೆ ಪ್ರಿನ್ಸಿಪಾಲರ ಪರಿಚಯ ಮಾಡಿಸುತ್ತಿದ್ದಂತೆ ಆಕೆಗೆ ಥಟ್ಟನೆ ತನ್ನ ಮಗಳನ್ನು ಸುರಿಮಳೆಯಲ್ಲಿ ಕಾರಲ್ಲಿ ಕರೆತಂದ ವ್ಯಕ್ತಿಯ ಮುಖ ನೆನಪಿಗೆ ಬಂತು. ಪರಸ್ಪರ ಕುಶಲ ಪ್ರಶ್ನೆಗಳಾದವು. ಪ್ರಮದಳೆಲ್ಲೆಂದು ವಿಚಾರಿಸಿದರು. 'ಇಲ್ಲೇ ಹೊರಗೆ ಗೆಳೆಯರೊಂದಿಗೆ ಆಡಲು ಹೋಗಿದ್ದಾಳೆ... ನೀವು ಆ ದಿನ ಎಂದಾದರೂ ಬರುತ್ತೇನೆಂದು ಹೇಳಿದವರು ಬರಲೇ ಇಲ್ಲ'– ಆಕ್ಷೇಪಿಸಿದಳು ಅನುಪಮಾ.

ಮುಖರ್ಜಿಯವರು 'ನಿನಗೆ ಇವರ ಪರಿಚಯವಿತ್ತೇನು ಅನು?– ಎಂದು ಪ್ರಶ್ನಿಸಿದ್ದಕ್ಕೆ ಮಗಳನ್ನು ಮಳೆಯಲ್ಲಿ. ಕಾರಲ್ಲಿ ತಂದುಬಿಟ್ಟ ಸಂಗತಿಯನ್ನು ವಿವರಿಸಿದಳು.

'ದಟ್ ಈಸ್ ಗುಡ್'– ಎಂದು ಮುಖರ್ಜಿಯವರು ನಕ್ಕು. ಅನೂಳನ್ನು ಕರೆದು. 'ತಮ್ಮ' ಸೋಮನಾಥನಿಗೆ ಪರಿಚಯ ಮಾಡಿಸಿದರು.

ಕಾಂತಿಹೀನ ಕಣ್ಣುಗಳು ಜಗ್ಗನೆ ಬೆಳಗಿದವು. ಆದರೆ ನಿರ್ವಿಕಾರ ಮನಸ್ಸಿನಿಂದ ಅವನನ್ನು ದಿಟ್ಟಿಸಿ ನೋಡಿದಳು. ಸೋಮನಾಥನೂ ಆಕೆಯ ನೋಟದ ಅರ್ಥವೇನೆಂದು ತಿಳಿಯಲಾರದೆ ತಡವರಿಸಿದ.

ನಿಟ್ಟುಸಿರಿನೊಂದಿಗೆ ದೃಷ್ಟಿ ಬದಲಿಸಿದಳು.

'ಕ್ಷಮಿಸಿ, ಅತ್ತಿಗೆಗೆ ಸ್ವಲ್ಪ ಸಹಾಯ ಮಾಡಿ ಬರುತ್ತೇನೆ'- ಎಂದು ಎದ್ದು ಹೋದಳು. ತನ್ನ ಮನೆಯಷ್ಟೇ ಸ್ವತಂತ್ರವಾಗಿ ಓಡಾಡಿದಳು, ಬಂದ ಅತಿಥಿಗಳಿಗೆಲ್ಲಾ ಸಿಹಿ-ಖಾರದ ತಿಂಡಿಗಳಾದವು. ಮತ್ತೆ ಚಹಾ, ಅದಾದ ನಂತರ ಸ್ವಲ್ಪ ಮಾತುಕತೆ, ಹರಟೆ.

೭ ಗಂಟೆಯಾಗಲಿತ್ತು. ಆಹ್ವಾನಿತರೆಲ್ಲ ಸೋಮನಾಥನಿಗೆ ಶುಭಾಶಯಗಳನ್ನು, ವಿದ್ಯಾಭ್ಯಾಸದ ಯಶಸ್ಸನ್ನು ಕೋರಿ, ಹರಸಿ ಹೊರಟರು.

ಅನೂಳು ಹೊರಡುತ್ತೇನೆಂದಳು. ಆದರೆ ದಂಪತಿಗಳು ಒತ್ತಾಯಪಡಿಸಿ ಆ ದಿನ ಅಲ್ಲೇ ಅವರನ್ನು ಉಳಿಸಿಕೊಂಡರು. ಬೆಳಗೆದ್ದ ಕೂಡಲೇ ಕಳಿಸಿಕೊಡಬೇಕೆಂದು ಶರತ್ತು ಹಾಕಿ ಅವರ ಮನೆಯಲ್ಲಿ ಆ ರಾತ್ರಿ ಉಳಿದುಕೊಂಡಳು. ಪ್ರಮದಳ ಸಂಭ್ರಮಕ್ಕೆ ಎಲ್ಲೆ ಇಲ್ಲವಾಯಿತು ಸುದ್ದಿಯಿಂದ.

* * *

ಸೋಮನಾಥ ಕಲ್ಕತ್ತಾದಿಂದ ಅನೂಳಿಗೆ ಕಾಗದ ಬರೆದಿದ್ದ. ಅಣ್ಣನಿಂದ ವಿಷಯವೆಲ್ಲಾ ತಿಳಿದಂತೆಯೂ ಅದನ್ನು ತಾಯಿಗೆ ಹೇಳಿದಾಗ ಆಕೆಯೂ ಸಂತೋಷ ಪಟ್ಟಳೆಂದೂ, ಒಪ್ಪುವುದಾದರೆ ತಾನು ಮದುವೆಯಾಗಲೂ ಸಿದ್ಧವಾಗಿರುವನೆಂದೂ ಬರೆದಿದ್ದ.

ಅದನ್ನು ಓದಿ ಅವಳಿಗೆ ಮೊದಲು ಕಸಿವಿಸಿಯಾಯಿತು. ಆದರೆ ತನ್ನ ವಿಷಯವೆಲ್ಲ ತಿಳಿದೂ ಮದುವೆಯಾಗಲು ಮುಂದೆ ಬರುವ ಈತನ ಔದಾರ್ಯ ದೊಡ್ಡದೆನ್ನುವುದು ನಿಜವೇ ಆದರೂ ಸಲೀಮನ ಜಾಗಕ್ಕೆ ಇನ್ನೊಬ್ಬರನ್ನು ಬರಮಾಡಿಕೊಳ್ಳಲು ಅವಳ ಮನಸ್ಸು ಕೂಡಲೇ ಒಪ್ಪದಾಯಿತು. ಮುಖರ್ಜಿಯವರ ಸೂಚನೆಯನ್ನೂ ಒಂದೆರಡು ಬಾರಿ ನಿರ್ಲಕ್ಷಿಸಿದ್ದಳು. ಆದರೆ ಈಗ ಮತ್ತೆ ಅದೇ... ಅದೇ... ಸೂಚನೆಗಳು ಮೇಲಿಂದ ಮೇಲೆ ಬರುತ್ತಿವೆ... ರಾತ್ರಿಯೆಲ್ಲಾ ನಿದ್ದೆಗೆಟ್ಟು ಹೊರಳಾಡಿದಳು. ತಲೆಗೆಟ್ಟು ಯೋಚಿಸಿದಳು. ಕತ್ತಲು ಹಾದಿಯಲ್ಲಿ ಬೆಳಕೇ ಕಾಣಲಿಲ್ಲ. ನನ್ನ ಸ್ವಾರ್ಥಕ್ಕೆ ನಾನು ಒಪ್ಪಿದರೆ ಸಲೀಮನ ಮನಸ್ಸಿಗೆ ನೋವಾಗುವುದಿಲ್ಲವೆ? ಸಲೀಮ ಸುಖಕ್ಕಾಗಿ ಅರಸುತ್ತಿದ್ದ. ಸುಂದರ ಸುಖಕ್ಕಾಗಿಯೇ ಅವನು ಬಾಳಿದ್ದ. ಇವತ್ತಿನ ಅರಳಿ ನಿಂತ ಹೂಗಳು ನಾಳೆಗೆ ಬಾಡುವುದೆಂದು ಅವನು ಅರಳಿ ನಿಂತ ಹೂ ಬದುಕನ್ನು ಗಟ್ಟಿಯಾಗಿ ಅಪ್ಪಿದ್ದ. ನನ್ನ ಸುಖಕ್ಕಾಗಿ ಅವನು ಬಳಲಿದ್ದ, ಅಳಲಿದ್ದ. ಸಾಯುವಾಗ ಅನೂ ನಿನ್ನ ಬಾಳನ್ನು ಗೋಳು ಮಾಡಿಕೊಳ್ಳಬೇಡ. ಸುವರ್ಣ ಸಂಜೆಗಳು ಸಿಕ್ಕಾಗ ರಾತ್ರೆಗಳನ್ನು ಕರೆಯಬೇಡ'- ಎಂದಿದ್ದ. ಇದರರ್ಥವೇನೆಂದು ತಿಳಿಯುವುದು? ಸೋಮನಾಥ ಸುವರ್ಣ ಸಂಜೆಯೇ?- ಬಾಡಿ ಬಿದ್ದ ನನ್ನ ಬದುಕಿನ 'ನೆನ್ನೆ'ಯನ್ನು 'ಇಂದಾ'ಗಿ ಅರಳಿಸುತ್ತಾನೆಯೆ?

ಅವಳ ಕಣ್ಮುಂದೆ ಏನೂ ಕಾಣಲಿಲ್ಲ. ದೊಡ್ಡ ಕಂದರವೊಂದು ಮಾತ್ರವೇ ಮೃತ್ಯುವಿನ ಬಾಯಂತೆ ತೆರೆದಿದೆ. ಇವಳದಕ್ಕೆ ತೀರಾ ಹತ್ತಿರದಲ್ಲಿದ್ದಾಳೆ. ಬಿದ್ದು ಸತ್ತರೆ ಎಲ್ಲಕ್ಕೂ ಪರಿಹಾರವೆಂದು ಬೀಳಲು ಬಗ್ಗಿದಳು. ಜಗ್ಗನೆ ಬೆಳಕು ಹೊತ್ತಿಕೊಂಡಿತು. ಅವಳನ್ನು ಎರಡು ಕೈಗಳು ತಬ್ಬಿ ಹಿಡಿದವು. "ಅನೂ, ಇದೆಂಥ ಹುಚ್ಚು ಪ್ರಯತ್ನ? ನಿನ್ನ ಉಮರ್ ನೋಡು, ಇಲ್ಲಿ ನಿಂತಿದ್ದಾನೆ"- ಎಂದಾಗ ಕಣ್ಣು ಬಿಟ್ಟಳು. "ನಾನೂ ನಿನ್ನ ಜೊತೆಗೇ ಬರುತ್ತೇನೆ, ಉಮರ್ ನನ್ನ ತಲೆ ಚಿಟ್ಟು ಹಿಡಿದಿದೆ. ಏನೊಂದೂ ದಾರಿ ಕಾಣುತ್ತಿಲ್ಲ"- ಎಂದು ಅತ್ತಳು.

ನನಗೆ ಗೊತ್ತು ನಿನ್ನ ಸಮಸ್ಯೆ, ಸಾವು ಸಮಸ್ಯೆಗೆ ಪರಿಹಾರವಲ್ಲ. ಅಂಗೈಯಲ್ಲಿ ಅರಳಿದ ಸುಖದ ಸುವಾಸನೆಯಿರುವಾಗ ಅದನ್ನು ಹೊಲಸು ಮಾಡಿಕೊಳ್ಳುವುದು ಮೂರ್ಖತನ. ಏಳು ಅನೂ, ಕತ್ತಲೆ ಹಾದಿಯಲ್ಲಿ ಮಣಿ ದೀಪದ ಬೆಳಕಿದೆ. ಅಮಾವಾಸ್ಯೆಯ ಕಾರ್ಗತ್ತಲ ಗರ್ಭದಾಳದಿಂದ ಶರದ್ ಪೌರ್ಣಿಮೆಯ ಆ ಲೋಕವಿದೆ. ಮಧು ಭಾಂಡ ದೊಡಲು ಹೊಡೆದು ಮಧು ಮಣ್ಣಲಿ ಹರಿದಾಗ, ಯಾರ ಸುಖಕ್ಕೆ ಹೇಳು? ನೀನು ನಗುತ್ತಿದ್ದರೆ. ಬದುಕಿನಲ್ಲಿ ನೂರು ಹುಣ್ಣಿಮೆಗಳು ಕರಗಿ ಹೋನಲಾದರೇ ನನಗೆ ಸಂತೋಷ." ಅಷ್ಟೆ! ಅಷ್ಟೆ!! ಅಷ್ಟೆ!!!

ತಟ್ಟನೆ ಎದ್ದು ಸಾವರಿಸಿಕೊಂಡಳು. ಮನಸ್ಸು ನಿರ್ಧಾರದ ತುದಿ ಮುಟ್ಟಿತ್ತು. ಮುಖರ್ಜಿಯವರೊಂದಿಗೆ ಸಲಹೆ ಕೇಳುವುದೆಂದು ಅಂದುಕೊಳ್ಳುತ್ತಿದ್ದಂತೆ, ಅನಿರೀಕ್ಷಿತವಾಗಿ ಮುಖರ್ಜಿಯವರ ಆಗಮನವಾಯಿತು.

ನಗು ಮುಖದಿಂದಲೇ ಸ್ವಾಗತಿಸಿದಳು. ಮುಖರ್ಜಿಯವರಿಗೆ ಅವಳ ಮುಖದಲ್ಲಿ ವಿಶೇಷ ಗೆಲುವಿದ್ದಂತೆನಿಸಿತು. ಕಾರಣ ಏನೆಂದು ಕೇಳುವ ಕುತೂಹಲವಾದರೂ, ಏನಾದರಾಗಲಿ ಸದ್ಯ ಸಂತೋಷದಿಂದ ಇದ್ದಾಳಲ್ಲ!-ಎಂದುಕೊಂಡು ಸುಮ್ಮನಾದರು.

ಮುಖರ್ಜಿಯವರು ಅವಳ ಮಾತಿಗೆ ಕಾಯದೆ ತಾವೇ ಒಂದು ಕುರ್ಚಿ ಎಳೆದುಕೊಂಡು ಕುಳಿತರು. ಅನೂ ಅವರಿಗೆದುರಾಗೇ ಕುಳಿತಳು.

"ಅನೂ ನಾನು ಯಾಕೆ ಬಂದೆ ಅಂತ ಗೊತ್ತಾ?"

"ಇಲ್ಲ ಅಣ್ಣಾ, ನನಗೆ ಹೇಗೆ ಗೊತ್ತಾಗೋಕೆ ಸಾಧ್ಯ?" ಎಂದು ಮರು ಪ್ರಶ್ನಿಸಿದಳು.

"ಅನೂ ಎಷ್ಟೋ ದಿವಸದಿಂದ ನಿನ್ನಲ್ಲಿ ಒಂದು ವಿಷಯ ಪ್ರಸ್ತಾಪಿಸಬೇಕೆಂದಿದ್ದೆ. ಆದರೆ ಧೈರ್ಯ ಬರಲಿಲ್ಲ. ಈಗ ಮೊಂಡು ಧೈರ್ಯದಿಂದ ಬಂದಿದ್ದೀನಿ. ನನ್ನ ಸೋಮು ಮತ್ತು ಅಮ್ಮ ಇಬ್ಬರಿಂದ ಉತ್ತರ ಬಂದಿದೆ. ನೀನಿಚ್ಛೆಪಡುವುದಾದರೆ ಸೋಮು ನಿನ್ನನ್ನು ಮದುವೆಯಾಗುತ್ತಾನಂತೆ. ನಿನ್ನ ಕಥೆಯೆಲ್ಲ ಅವನಿಗೆ ಹೇಳಿದ್ದೆ. ಇಂತಹ ಹೃದಯಕ್ಕೆ ನೆಮ್ಮದಿ ಕೊಡಲು ಸಾಧ್ಯವಾದರೆ ನಾನು ಸಿದ್ಧ-ಹಳೆಯ

ಗೊಡ್ಡು ವಿಚಾರಗಳಲ್ಲಿ ನನಗೆ ನಂಬಿಕೆಯಿಲ್ಲ. ಹೃದಯವಂತಿಕೆಯಿಂದ ಕೂಡಿದ ಒಂದು ಹೆಣ್ಣಾದರೆ ಸಾಕು. ಅದನ್ನು ಆಕೆಯಲ್ಲಿ ಕಂಡಿದ್ದೇನೆ. ಮೊದಲು ಅಮ್ಮ ವಿರೋಧಿಸಿದರೂ ನಿನಗೆ ಸಂತೋಷವಾಗುವುದಾದರೆ ಹಾಗೆ ಮಾಡು–ಎಂದಳಂತೆ. ಇದೆಲ್ಲಾ ಬರೆದಿದ್ದಾನೆ. ಏನು ಹೇಳುತ್ತೀ ಅನೂ?"

"ಅಣ್ಣ ನಿಮಗಿಂತ ಶ್ರೇಯೋಭಿಲಾಷಿಗಳು ನನಗೆ ಬೇರೆ ಇಲ್ಲ. ನೀವು ದಾರಿ ತೋರಿಸಿದ ಕಡೆಗೆ ಸಾಗುತ್ತೇನೆ" ಎಂದಷ್ಟೇ ಸುಮ್ಮನಾದಳು.

ಅರಳಿದ ಕಣ್ಣುಗಳಿಂದ ಕೇಳಿದ "ಅನೂ ಇದು ನಿಜವೇ?" – ಎಂದು.

ಅನುಪಮ ನಕ್ಕಳು. ಸೋಮನಾಥನಲ್ಲಿ ಸಲೀಮನನ್ನು ಕಂಡಳು. ಮೋಡಗಳು ಚೆದುರಿ ಮಳೆನಿಂತು ಆಕಾಶ ಶುಭ್ರವಾಗಿತ್ತು. ಶುಭ್ರ ನೀಲಾಕಾಶದಲ್ಲಿ ನಕ್ಷತ್ರ ರಾಜಿಯ ನಡುವಿನಿಂದ ಶಾರದ ಪೌರ್ಣಿಮೆಯ ಸ್ವಚ್ಛ ಬೆಳ್ದಿಂಗಳ ಚಿಲುಮೆಯೊಡೆದಿತ್ತು.

* * *

ವಿಪರೀತ

ರಾಮೇಗೌಡ ಮಲಗಿ ಎರಡು ತಿಂಗಳಾಯಿತು. "ಏನೇನು ಚಿಕಿತ್ಸೆ ಮಾಡಿದರೂ ವಾಸಿಯಾಗದ ಹಾಗೆ ಆಗಿದೆ. ಈ ಐದಾರು ವರ್ಷಗಳಿಂದ ಆಗಾಗ ಫಿಟ್ಸ್ ಬರುತ್ತಿತ್ತು. ಆದರೆ ಈ ಸಲ ಪರಾಲಿಸಿಸ್ ಆಗಿ ಕೈ ಕಾಲು ಬಿದ್ದು ಹೋಗಿದೆ. ಹಿಡಿದ ಹಾಸಿಗೆ ಬಿಟ್ಟು ಏಳಲಿಲ್ಲ. ಊರ ದೇವರಿಗೆ ಚೆನ್ನಮ್ಮ ಹರಕೆ ಹೊತ್ತಳು. ಬಿದ್ದ ಕೈಕಾಲುಗಳು ಮತ್ತೆ ಮಾಮೂಲಿನಂತೆ ಬಂದರೆ ಬೆಳ್ಳಿ ಕೈಕಾಲು ಮಾಡಿಸಿ ಕೊಡುವುದಾಗಿ ಮುಡುಪು ಕಟ್ಟಿ ಹರಸಿಕೊಂಡಳು. ಆದರೂ ಸಮಾಧಾನವಿಲ್ಲ. ಏನೋ ಭೀತಿ, ಕಳವಳ, ರಾತ್ರಿ ಇಡೀ ಗಂಡನ ಬಳಿ ಎಚ್ಚರವಾಗಿ ಕುಳಿತು ಕಣ್ಣೀರು ಸುರಿಸುತ್ತಿದ್ದಳು. ಅವಳ ಮನಸ್ಸಿನ ಆತಂಕ ಅವಳಿಗೆ, ಬಾಯಿಬಿಟ್ಟು ಯಾರಲ್ಲಿಯೂ ಹೇಳಿಕೊಳ್ಳುವ ಹಾಗಿಲ್ಲ. ಗಂಡನ ಬಳಿ ಆತ್ಮೀಯವಾಗಿ ಮಾತನಾಡುವ ಅಧಿಕಾರವೇ ಇರಲಿಲ್ಲ. ಮದುವೆಯಾದಂದಿನಿಂದ ಒಂದು ದಿವಸವಾದರೂ 'ಚೆನ್ನಿ' ಅಂತ ಕೂಗಿದ್ದಲ್ಲ. ಅಷ್ಟ್ಯಾಕೆ ಮದುವೆಯ ರಾತ್ರಿಯೇ ವಿರಸದಲ್ಲಿ ಕಳೆಯಿತು.

ಆ ದಿನ ರಾತ್ರಿ... ಚೆನ್ನಮ್ಮ ಯಾಕೋ ನೆನೆಸಿಕೊಂಡಳು. ಕಹಿ ಘಟನೆಗಳನ್ನು ಮರೆಯುವುದಕ್ಕೆ ಪ್ರಯತ್ನಿಸಿದರೂ ವಿರಾಮವಾಗಿ ಕುಳಿತ ಚೆನ್ನಮ್ಮನನ್ನು ಕಾಡತೊಡಗಿತು.

ಬೆಳಗ್ಗೆ ಮದುವೆ ಸಂಭ್ರಮ ಎಲ್ಲಾ ಮುಗಿದಿತ್ತು. ಅವರವರ ಪಾಡಿಗೆ ಎಲ್ಲರೂ ಹೊರಟುಹೋದರು. ರಾತ್ರಿಯ ಕಾರ್ಯಕ್ರಮ ಯಾರಿಗೂ ಮುಖ್ಯವೆನಿಸದಿದ್ದರೂ ದಂಪತಿಗಳ ಬದುಕಿನ ಮಧುರ ಕನಸುಗಳು ನನಸಾಗುವುದು ಬೇಕಿತ್ತು. ಸಾಮಾನ್ಯವಾಗಿ ಮದುವೆಯಾಗಿ ಒಂದು ವರ್ಷಕ್ಕೆ 'ಪ್ರಸ್ತ'ದ ಕಾರ್ಯಕ್ರಮ. ಆದರೆ ರಾಮೇಗೌಡರ ತಂದೆ ಬಸವೇಗೌಡರಿಗೆ ಮೊಮ್ಮಗನನ್ನು ಕಾಣಬೇಕೆನ್ನುವ ಆತುರದ ಜೊತೆಗೆ ಹಾದಿ ತಪ್ಪಿದ ಮಗ ಹದ್ದುಬಸ್ತಿಗೆ ಬರ್ತಾನೆ ಅನ್ನೋ ಅಂತರಂಗದ ಬಯಕೆ. ಈ ಕಾರ್ಯವನ್ನು ಮಾಡಿ ಮುಗಿಸುವುದಕ್ಕೆ ಪ್ರೇರೇಪಿಸಿತ್ತು. ಚೆನ್ನಮ್ಮ ತಂದೆಗೆ ಈಗಲೇ ಈ ಕಾರ್ಯ ಬೇಡವೆನ್ನಿಸಿತ್ತು. ಚೆನ್ನಮ್ಮ ದೊಡ್ಡವಳಾಗಿ ಕೇವಲ ಆರು ತಿಂಗಳು ಮಾತ್ರವಾಗಿತ್ತು. ಮಗಳು ಇನ್ನು ಸ್ವಲ್ಪ ದಿವಸ ಮನೇಲೇ ಇರಲಿ. ಈಗಲೇ ಜವಾಬ್ದಾರಿಯ ಹೊಣೆ

ಆ ಎಳೇ ಹೆಗಲಿಗೆ ಬೇಡವೆಂದೆನಿಸಿತ್ತು. ಇಬ್ಬರು ಬೀಗರ ನಡುವೆ ಬೇಕು ಬೇಡಗಳ ವಿಚಾರವಾಗಿ ವಾಗ್ವಾದ ನಡೆಯಿತು.

ಚೆನ್ನಮ್ಮನ ತಂದೆ ಚಂದ್ರೇಗೌಡರು ಬೇಡ ಅಂದಿದ್ದಕ್ಕೆ ಬಸವೇಗೌಡರಿಗೆ ವಿಪರೀತ ಸಿಟ್ಟು. ಮದುವೆ ಮನೆಯಲ್ಲೇ ತಮ್ಮ ದರ್ಪದ ಪ್ರದರ್ಶನ ಮೊದಲು ಮಾಡಿದರು. ಬೀಗರನ್ನು ಉದ್ದೇಶಿಸಿ ಹೇಳಿದರು. "ಗೌಡರೇ ಇವತ್ತಿನವರೆಗೂ ಈ ಊರಾಗೆ ನಾನು ಹೇಳಿದ ಮಾತಿಗೆ ಎಳ್ಳಷ್ಟೂ ಎತ್ಯಾಸ ಬಂದಿಲ್ಲ. ಇನ್ನು ಮುಂದೇನೂ ನನ್ಮಾತ್ಗೆ ಎತ್ಯಾಸ ಬರಬಾರದು. ಬೀಗರಂತಾ ಮರ್ಯಾದೆಯಿಂದ ಹೇಳ್ತಿದ್ದೀನಿ, ಈವತ್ತು ಪ್ರಸ್ತದ ಕಾರ್ಯ ನಡೀಲೇ ಬೇಕು. ಇಲ್ಲದಿದ್ದರೆ ನಿಮ್ಮುಡ್ಗೀನ್ ನೀವೇ ಇಟ್ಕೊಳ್ಳಿ. ನಮ್ಮ ರಾಮಗಾ ಎಣ್ಣುಗಳನ್ನ ಕೊಡಾಕೆ ಸಾಲಾಗಿ ನಿಂತಿದ್ದಾರೆ." ಒಂದೊಂದು ಮಾತು ಮಾತನಾಡುವಾಗಲೂ ದರ್ಪ ಪ್ರತಿಫಲಿಸುತ್ತಿತ್ತು.

ಚಂದ್ರೇಗೌಡರೂ ಕಡಿಮೆಯೇನಲ್ಲ. ಆ ಊರಿಗೇ ಭಾರಿ ಕುಳ. ಬಸವೇಗೌಡರಿಗಿಂತ ಬುದ್ಧಿವಂತರು. ಜೊತೆಗೆ ಸ್ವಲ್ಪ ಓದಿಕೊಂಡಿದ್ದಾರೆ. ವಿಚಾರಗಳನ್ನು ಚೆನ್ನಾಗಿ ತಿಳಿದುಕೊಂಡಿದ್ದಾರೆ. ಹೆಣ್ಣು ಕೊಟ್ಟ ತಂದೆ, ಗಂಡಿನ ತಂದೆಗೆ ಹೆದರಬೇಕು, ಅವರು ಹೇಳಿದ್ದಂಗೆ ನಡೀಬೇಕು ಅನ್ನೋ ಸಾಮಾನ್ಯ ಭಾವನೆಗೆ ಸ್ವಲ್ಪ ಭಿನ್ನವಾಗಿದ್ದರು. ಇನ್ನೂ ವಯಸ್ಸು ಚಿಕ್ಕದು, ನೋಡೋಕೆ ಮಾಟವಾಗಿ ಬೊಂಬೆಯ ಹಾಗೆ ಇದ್ದಾಳೆ. ಬುಗುಡಿ, ಲೋಲಾಕು, ನತ್ತು, ಕಾಸಿನಸರ, ಬೆಂಡೋಲೆ, ಕೆನ್ನೆ ಸರಗಳಿಂದ ಅಲಂಕೃತಳಾಗಿ, ದಂಡೆ ಹೂ ಮುಡಿದು ಕೈತುಂಬ ತೊಟ್ಟ ಬಳೆಗಳ, ಕಾಲುಗಳನ್ನು ಅಲಂಕರಿಸಿದ್ದ ಗೆಜ್ಜೆ, ಕಾಲಂದಿಗೆಯ ಸದ್ದು ಮಾಡುತ್ತಾ ಹಸೆ ಮಣೆಗೆ ನಡೆದು ಬಂದ ಮಗಳ ಮುದ್ದುಮುಖ ನೆನಪಿಗೆ ಬಂದರೆ 'ಅಂಥ ಮಗಳ ತಂದೆ' ಅನ್ನುವ ಅಭಿಮಾನದ ಛಾಯೆ ಮೂಡುತ್ತಿತ್ತು. ಬಸವೇಗೌಡರ ಅಹಂಕಾರದ ಮಾತು ತಿವಿದ ಹಾಗಾಯಿತು. ತಮ್ಮ ಅಭಿಮಾನವನ್ನು ಕೆರಳಿಸಿದ ಹಾಗಾಯಿತು. ಹೆಣ್ಣಿನ ತಂದೆ ತಗ್ಗಿ ನಡೀಬೇಕು ಅನ್ನುವ ವಿಚಾರವನ್ನೂ ಮರೆತು,

ಗೌಡರೇ ಈಗ್ಲೇ ಆ ಕೆಲಸ ಮಾಡೋಕೆ ಏನವಸರ? ಇನ್ನೂ ಒಂದು ಸ್ವಲ್ಪ ದಿವಸ ತಡೆಯೋಣ. ಅಷ್ಟರಲ್ಲಿ ಕೊಳ್ಳೆ ಹೊಡೆಯೋಂಥಾದ್ದೇನೂ ಇಲ್ಲ. ಇನ್ನಾ ಮಗೀ ಹಸೀದು. ನಂಗಿರೋವ್ಳು ಒಬ್ಬಳೇ ಮಗಳು. ಮನೇಲಿ ಇನ್ನೂ ಸ್ವಲ್ಪ ದಿವಸ ಇರಲಿ. ನೀವು ಸಿಟ್ಟು ಮಾಡಿಕೊಂಡು ಕೂಗಾಡಿದರೆ ಏನೂ ಪ್ರಯೋಜನವಿಲ್ಲ. ನಿಮಗೆ ನಿಮ್ಮ ಅಧಿಕಾರ ನಡೀಬೇಕನ್ನೋದು ಹ್ಯಾಗೆ ಬೇಕೋ ನಂಗೂ ಅಷ್ಟೇ. ಸುಮ್ಮನೆ ಬಂದ ನೆಂಟ್ರ ಮುಂದೆ ಕೂಗಾಡಿ ಮಾನ ಕಳ್ಕೊಳ್ಳೋದು ಬೇಡ" ಅಂತ ಹೇಳಿದ್ರು.

ಬಸವೇಗೌಡರು ಬಡಪೆಟ್ಟಿಗೆ ಬೀಳೊಂತ ವ್ಯಕ್ತಿಯಲ್ಲ. ಊರಾಗಿರೋ ಜನಕ್ಕೆಲ್ಲಾ ರಾಮೇಗೌಡರ ವಿಚಾರ ತಿಳಿದಿತ್ತು. ಹೆಣ್ಣು ಕೊಡೋಕೆ ಯಾರೂ ಮುಂದು ಬರಲಿಲ್ಲ. ತಡಮಾಡಿದ್ರೆ, ರಾಮೇಗೌಡರ ವಿಚಾರ ತಿಳಿದ್ರೆ ಬಂದ ಸಂಬಂಧ ಮುರೀಬಹುದಿತ್ತು. ದಳ್ಳಾಳಿ ವೆಂಕಣ್ಣ ಶಾಸ್ತ್ರಿಗಳ ಪ್ರಯತ್ನದಿಂದ ಈ ಸಂಬಂಧ ಕುದುರಿತ್ತು. ಇಷ್ಟೆಲ್ಲಾ ತಿಳಿದಿದ್ರೂ, ಮಗನ ಮೇಲಿನ ಅಭಿಮಾನ ಅವನ ಆಕ್ರೋಶಕ್ಕೆ ಗುರಿ ಮಾಡಿತ್ತು. ಚಂದ್ರೇಗೌಡರು ಸಮಾಧಾನವಾಗಿ ಹೇಳಿದರೂ, ಇವರಿಗೆ ಮೈ ಪರಚಿದ ಹಾಗಾಯಿತು. ಉದ್ವೇಗದಿಂದಲೇ ಎದುರು ಬಿದ್ದರು.

'ಏನ್ ಚಂದ್ರೇಗೌಡರೇ ನನಗೆ ಬುದ್ಧಿ ಹೇಳೋ ಹಾಂಗಾದ್ರಾ? ನೀವು ಹೆಣ್ಣಿನ ತಂದೆ ಅನ್ನೋದ ಮರೆತ್ಬಿಟ್ಟಂಗಿದೆ. ಸ್ವಲ್ಪ ತಗ್ಗಿ ಬಗ್ಗಿ ನಡೆಯೋದ್ಬಿಟ್ಟು ತುಂಬಾ ಉದ್ದಾ ಮಾತಾಡ್ತೀರಿ. ನಾನೇಳ್ದಂಗೆ ಈಗಲೇ ನಿಮ್ಮ ಮಗಳ ನಿಷೇಕ ಪ್ರಸ್ತ ಮಾಡಿ ಕಳಿಸಿಕೊಟ್ರೆ ಕೊಡಿ. ಇಲ್ಲ ನಿಮ್ಮ ಮಗಳ್ನ ನೀವು ನಿಮ್ಮ ಮನೆಗೇ ಕರೆದುಕೊಂಡು ಹೋಗಿ ಎಷ್ಟು ದಿವ್ಸ ಬೇಕಾದರೂ ಇಟ್ಕೊಳ್ಳಿ. ನಮ್ಮ ಮಗಂಗೆ ಹುಡುಗೀರ ದಾರಿದ್ರ ಇಲ್ಲ. ಚಿಟಿಕೆ ಹೊಡೆದರೆ ಸಾವಿರ ಮಂದಿ ಸಿಗ್ತಾರೆ. ಏನೋ ವೆಂಕಣ್ಣಶಾಸ್ತ್ರಿಗಳು ಒಳ್ಳೇ ಮನೆತನ, ಹುಡುಗಿ ಲಕ್ಷಣವಾಗಿದ್ದಾಳೆ, ತುಂಬಾ ಒಳ್ಳೇ ಜನ ಮಾಡ್ಕೊಳ್ಳಿ ಅಂತ ಹೇಳಿದ್ದಕ್ಕೆ ಒಪ್ಪಿದ್ನೇ ಹೊರತಾಗಿ ಇನ್ನೇನೂ ಇಲ್ಲ. ನುಗ್ಗೇಹಳ್ಳಿ ಈರಣ್ಣಗೌಡ್ರು ಹೊಲಾ, ಮನಿ, ನಗದು ಹಣ ಎಲ್ಲಾ ಕೊಟ್ಟು ಮದ್ವಿ ಮಾಡ್ಕೋತೀವಂತ ಏಳಿದ್ರು, ಏನೋ ನಿಮಗೆ ಮಾತು ಕೊಟ್ಟಾಯಿತಲ್ಲ ಅಂತ ಒಪ್ಕೊಂಡಿದ್ದೀವಿ. ಅಷ್ಟೇ ತಿಳೀತ? ಸುಮ್ಕೆ ಸುಮ್ಕೆ ಯಾಜ್ಯ ಮಾಡಿ ಎಲ್ಲರ ಮುಂದೆ ನಮ್ಮಾನ ಕಳೀಬೇಡ್ರಿ'.

ಮಾತು ಮಾಡಬೇಕಾದ ಕೆಲ್ಸ ಮಾಡಿತು. ಅವರ ಮಾತಿನಲ್ಲಿ ತುಂಬಿದ ಅಹಂಕಾರ ತಮ್ಮ ಬಗ್ಗೆ ತಳೆದಿದ್ದ ನಿರ್ಲಕ್ಷಭಾವ, ಚಂದ್ರೇಗೌಡರ ಮನಸ್ಸನ್ನು ಕೊರೆಯಿತು. ಸ್ವಾಭಿಮಾನಕ್ಕೆ ಸವಾಲಿನಂತೆ ಈ ಮಾತು ಇದ್ದರೂ ಮಗಳ ಬದುಕಿನ ಪ್ರಶ್ನೆ ಅವರ ಆವೇಶವನ್ನು ತಡೆಯಿತು. ಹೆಂಗಸರ ಮಧ್ಯದಲ್ಲಿ ಕುಳಿತು ಅವರೆಲ್ಲ ಚೇಷ್ಟೆ ಮಾಡುತ್ತಿದ್ದರೂ, ಅರ್ಥವಾಗದ ಮುಗ್ಧತೆಯಲ್ಲಿ ನಸುನಾಚುತ್ತಿದ್ದರೂ ಅವಳ ಮುಖದ ಮೇಲೆ ಭಾವೀ ಸುಖದ ಕಲ್ಪನೆಯಿಂದಲೋ ಏನೋ ಎಂಬಂತೆ ಆಗಾಗ ಮೂಡುತ್ತಿದ್ದ ಮಂದಹಾಸ, ಚಂದ್ರೇಗೌಡರ ಕಣ್ಮುಂದೆ ಸುಳಿಯಿತು. ಈಗ ಸ್ವಲ್ಪ ಹೆಚ್ಚು ಕಡಿಮೆಯಾದರೂ ಕೆಲಸ ಕೆಟ್ಟಿತು ಅಂತ ಅನಿಸಿ ತಮಗೆ ತಾವೇ ಸಮಾಧಾನ ಮಾಡಿಕೊಂಡರು. ಒಮ್ಮೆ ಏನಾದರೂ ಸರಿ ಈ ದುರಹಂಕಾರಿಗಳಿಗೆ ಬುದ್ಧಿ ಕಲಿಸಲೇಬೇಕು. ಇವರಲ್ಲದಿದ್ದರೆ ಇನ್ನೊಬ್ಬರು ರಾಜರಂತಹವರು ತಮ್ಮ ಮಗಳ ಸಂಬಂಧವನ್ನು ಕೋರಿ ಬಂದಾರು. ಅಂತ ಅನಿಸಿದರೆ, ಮತ್ತೊಮ್ಮೆ ಮದುವೆ ತಪ್ಪಿದರೆ. ಇಲ್ಲ ಸಲ್ಲದ ಕಟ್ಟು ಕತೆಗಳು ಹಬ್ಬಿ, ಮಗಳಿಗೆ ಸಂಬಂಧ ಕುದುರುವುದು ಸಾಧ್ಯವಾಗದೇ ಹೋಗಬಹುದು. ಜೊತೆಗೆ

ಬಸವೇಗೌಡರು ಊರಿಗೆ ಭಾರಿ ಕುಳ, ಅಕ್ಕ ಪಕ್ಕದ ಊರುಗಳಲ್ಲಿಯೂ ಅವರ ವರ್ಚಸ್ಸು ನಡೆಯುತ್ತೆ. ಒಂದು ವೇಳೆ ತಮ್ಮ ಮಗಳ ಭವಿಷ್ಯವನ್ನೇ ಹಾಳು ಮಾಡುವುದಕ್ಕೆ ಪಣ ತೊಟ್ಟರೆ?- ಎಂದು ತುಂಬಾ ರೀತಿಯಲ್ಲಿ ಮನಸ್ಸು ಆಲೋಚಿಸಿ ಒಂದು ನಿರ್ಧಾರಕ್ಕೆ ಬಂದು ಹೇಳಿದರು.

"ಬಸವೇಗೌಡರೇ, ಸ್ವಲ್ಪ ತಾಳ್ಮೆಯಿಂದ ಮಾತಾಡಿ. ಇಷ್ಟು ಸಣ್ಣ ವಿಷಯಕ್ಕೆ ಹೋರಾಡಬೇಕಿಲ್ಲ. ಒಂದು ನಿಮಿಷ ತಡೆಯಿರಿ, ನಮ್ಮನಿಯಾಕೇನ ಕೇಳಿ ಬರ್ತೀನಿ. ಅಲ್ಲೀವರೆಗೆ ಸ್ವಲ್ಪ ಸಮಾಧಾನವಾಗಿರಿ" ಎಂದು ಹೇಳಿ ಹೆಂಗಸರೆಲ್ಲ ಕೂತಿದ್ದ ಕೋಣೆಯ ಹತ್ತಿರ ಹೋದರು. ಒಂದು ದಂಡು ಹೆಂಗಸರು ಕೂತು ಗಿಜಿ ಗಿಜ ಮಾತಾಡುತ್ತಾ ಇದ್ದರು. ಅವರ ಮಧ್ಯೆ ಕುಳಿತು ಮಗಳಿಗೆ ಜಡೆ ಹೆಣೀತಿದ್ದ ಹೆಂಡ್ತೀನ ಹೇಗೆ ಕೂಗೋದೋ ಗೊತ್ತಾಗಲಿಲ್ಲ. ಆದರೆ ತುಂಬಾ ಹೊತ್ತು ತಡೆಯುವುದಕ್ಕೂ ಅವಕಾಶವಿಲ್ಲ. ತಮ್ಮ ತಮ್ಮ ಪುರಾಣಗಳನ್ನು ಹೇಳಿಕೊಂಡು ತಮಾಷೆ ಮಾಡುತ್ತಾ ನಗುತ್ತಾ ಇದ್ದ ಹೆಂಗಸರ ಕಣ್ಣಿಗೆ ಚಂದ್ರೇಗೌಡರು ಬಂದು ಬಾಗಿಲಲ್ಲಿ ನಿಂತಿದ್ದೂ ಗೊತ್ತಾಗಲಿಲ್ಲ. ಇನ್ನು ತಡ ಮಾಡಬಾರದೆಂದು, ಚಂದ್ರೇಗೌಡರು ಸಣ್ಣಗೆ ಕೆಮ್ಮಿದರು. ಗಂಡಸಿನ ಕೆಮ್ಮಿನ ಶಬ್ದ ಕೇಳಿ ಹೆಂಗಸರೆಲ್ಲಾ ಸ್ತಬ್ಧರಾಗಿ ಬಾಗಿಲತ್ತ ತಿರುಗಿ ನೋಡಿದರು. ಚಂದ್ರೇಗೌಡರು ಕಣ್ಣಿಗೆ ಬಿದ್ದದ್ದೇ ತಡ ಎಲ್ಲರೂ ಸೆರಗೆಳೆದು ಮೈ ತುಂಬಾ ಹೊದ್ದುಕೊಂಡು ಅಲ್ಲಿಂದ ಮೆಲ್ಲನೆ ಜಾರಿದರು. ಆದರೆ ಹೋಗುವವರು ಸುಮ್ಮನೆ ಹೋಗಲಿಲ್ಲ. ಗಂಡ ಬಂದದ್ದು ಯಾಕೋ ಎಂದು ಕುತೂಹಲದಿಂದ ಜಡೆ ಹೆಣೆಯುತ್ತಿದ್ದುದನ್ನೂ ಬಿಟ್ಟು ಎದ್ದು ನಿಂತ ಗೌರಮ್ಮನಿಗೆ,

"ಗೌರಕ್ಕ ಆದಷ್ಟು ಬೇಗ ಪ್ರಸ್ತದ ಸಿಹಿ ತಿನ್ನಿಸಿ ನಮಗೆಲ್ಲಾ. ಬರೋವರ್ಷಕ್ಕೆ ಅಜ್ಜೀ, ತಾತ ಆಗೀರಂತೆ"- ಅಂತ ಮುಸಿ ಮುಸಿ ನಗುತ್ತಾ ಹೊರಟರು.

ಗೌರಮ್ಮ ಅದಕ್ಕೆ ತೋರಿಸಿದ ಪ್ರತಿಕ್ರಿಯೆ ಎಂದರೆ,

"ಆಗಲೇಳ್ರಕ್ಕ ಶಿವ ಕೊಟ್ಟರೆ ಬೇಡಾನ್ನೋಕೆ ಆಗ್ತದ. ದೊಡ್ಡೋರು, ಬೀಗರು ಎಂಗೆ ನಿಶ್ಚಯಿಸಿದ್ರೆ ಅಂಗೆ"- ಅಂತ ಹೇಳುವಷ್ಟರಲ್ಲಿ ನಿಜವಾಗಿಯೂ ಗೌರಮ್ಮನ ಕಣ್ಣಲ್ಲಿ ಮೊಮ್ಮಗನ ಕಲ್ಪನೆ, ಸಂತೋಷ ಸಂಭ್ರಮಗಳನ್ನು ತುಂಬಿಸಿತು.

ನಿಂತು ಕೇಳುತ್ತಿದ್ದ ಚಂದ್ರೇಗೌಡರಿಗೆ, ಥೂ ಇವರಾ, ಇನ್ನು ಮದುವೆ ಆಗಾಕಿಲ್ಲ ಆಗ್ಲೇ ಮಗು ಯೋಚ್ನೆ ಮಾಡ್ತವೆ. ಇವಕ್ಕೆ ಪ್ರಸ್ತ, ಪ್ರಸ್ತ ಅನ್ನೋ ಗೀಳು ಬಿಟ್ಟರೆ ಬೇರೇನೂ ಇಲ್ವೇನೋ ಅಂದುಕೊಂಡರು. ಆದರೆ ಹೆಂಡತಿ ಕಣ್ಣಲ್ಲಿ ತುಂಬಿದ್ದ ಸಂತೋಷವನ್ನು ಗಮನಿಸದೆ ಹೋಗಲಿಲ್ಲ. ಆಗಲೇ ಅವರಿಗೆ ಅನುಮಾನ, ಹೆಂಡತಿ ತಮ್ಮ ಮಾತಿಗೆ ಸಮ್ಮತಿ ಕೊಡೋದಿಲ್ಲ ಅನಿಸಿತು. ಇವರೆಲ್ಲಾ ಹಾಳಾದೋವ್ರು ಒಂದೇ ಜಾತಿ. ನಾನೊಬ್ಬನೇ ಸೋಲಬೇಕಾಗಿರೋವ್ನು. ಆ ಬಸವೇಗೌಡ ಶತಾಯ ಗತಾಯ,

ಅಂದುಕೊಂಡಿದ್ದನ್ನು ನಡೆಸಿಯೇ ಬಿಡುತ್ತಾನೆ ಅನ್ನೋದು ಮನಸ್ಸಿಗೆ ಗೊತ್ತಿತ್ತು. ಹೆಂಡತಿಯ ಅಭಿಪ್ರಾಯ ಕೇಳಿ ಬರ್ತೀನಿ ಅಂತ ಹೇಳಿ ಬಂದಿದ್ರು, ಅದು ಈಗಾಗಲೇ ಚಂದ್ರೇಗೌಡರಿಗ ಹೆಂಡತಿಯ ಅಭಿಪ್ರಾಯ ಸೂಕ್ಷ್ಮವಾಗಿ ತಿಳಿದು ಹೋಯ್ತು.

ಬಸವೇಗೌಡರಿಗೂ ತಮಗೂ ನಡೆದ ಮಾತುಕತೇನೆಲ್ಲ ವಿವರವಾಗಿ ಹೇಳಿದರು. ಅಲ್ಲಿದ್ದ ಮಗಳನ್ನು ಕೆಂಪನ ತಂಗಿ ಪುಟ್ಟೀ ಜೊತೇಲಿ ಬೇರೊಂದು ಕೋಣೆಗೆ ಕಳುಹಿಸಿಬಿಟ್ಟು ಮಾತಾಡೋವಷ್ಟು ಮುತುವರ್ಜಿ ವಹಿಸಿದ್ದರು. ಚಿನ್ನೀಗೆ ಅದೆಲ್ಲಾ ಏನೂಂತ ತಿಳಿಯೋ ಸಂಭವ ಇಲ್ಲದೇ ಹೋದ್ರೂ ತಿಳೀತಿತ್ತೋ ಇಲ್ವೋ, ಬೇರೆ ಕಡೆ ಕಳುಹಿಸುವ ಎಚ್ಚರಿಕೆ ಮಾತ್ರ ತಗೊಂಡಿದ್ದರು ಚಂದ್ರೇಗೌಡರು.

ಗೌರಕ್ಕ ಗಂಡ ಹೇಳಿದ ಮಾತನ್ನೆಲ್ಲಾ ತಾಳ್ಮೆಯಿಂದ ಕೇಳಿದ್ಲು. ಗಂಡ ತನ್ನ ಅಭಿಪ್ರಾಯ ಕೇಳುತ್ತಿದ್ದಾನೇಂತ ಅನಿಸಿ ಒಂದು ಕ್ಷಣ ತಡವರಿಸಿದಳು. ಆದರೂ ಪರಿಸ್ಥಿತೀನ ಚಂದ್ರೇಗೌಡರಿಗಿಂತಲೂ ಚೆನ್ನಾಗಿ ಅರ್ಥ ಮಾಡಿಕೊಂಡಳು. ಈಗಲ್ಲದಿದ್ದರೆ ಇನ್ನು ಸ್ವಲ್ಪ ದಿವಸಕ್ಕಾದರೂ ಮಗಳನ್ನು ಕಳುಹಿಸಿಕೊಡಲೇ ಬೇಕು. ಇದು ವಾಸ್ತವ ಸತ್ಯ. ಬಸವೇಗೌಡರು ಅವಳ ದೃಷ್ಟಿಯಲ್ಲಿ ಭಾರೀ ಶ್ರೀಮಂತರು. ತಾವಿರುವುದಕ್ಕಿಂತ ಹತ್ತು ಪಾಲು ಹೆಚ್ಚು ಆಸ್ತಿ ಪಾಸ್ತಿ, ಹೊಲಗದ್ದೆ, ಮನೆ ತುಂಬಾ ಆಳುಕಾಳು– ಎಲ್ಲಾ ಇವೆ. ಮನೇ ನೋಡಿದರೆ ರಾಜರ ಮನೆ ಹಾಗಿದೆ. ಅಳಿಯ ರಾಮೇಗೌಡ ರಾಜಕುಮಾರನ ಥರಾ ಇದ್ದಾನೆ. ಜರಿ ಅಂಚಿನ ಪಂಚೆ, ರೇಶಿಮೆ ವಲ್ಲಿ, ಜರೀಪೇಟ ಎಡಗೈನ ನಾಲ್ಕು ಬೆರಳುಗಳಿಗೂ ವಜ್ರದುಂಗುರಗಳು. ಬಲಗೈಲಿ ಉಂಗುರದ ಬೆರಳಿಗೆ ಬರೀ ಚಿನ್ನದಲ್ಲಿ ಮಾಡಿಸಿದ ನಕಾಶೆಯುಂಗುರ, ಕಿವಿಯಲ್ಲಿ ಚಿನ್ನದ ಕಡಕು–ಕತ್ತಿನಲ್ಲಿ ದಪ್ಪವಾಗಿ ಮಾಡಿಸಿದ ಚಿನ್ನದ ಸರ ಇವೆಲ್ಲಾ ನೋಡಿದ ಗೌರಕ್ಕನಿಗೆ ಕಣ್ಣು ತಿರುಗಿದಂತಾಯಿತು ದಿಗ್ಭ್ರಮೆಯಿಂದ. ಮಗಳು ಈ ಮನೆಗೆ ಸೊಸೆಯಾದರೆ ಎಂಥ ಪುಣ್ಯ, ಮಹಾರಾಣಿಯ ಹಾಗೆ ಆಳ್ತಾಳೆ. ದೇವರೇ ಈ ಸಂಬಂಧಾನ ಹೇಗಾದರೂ ಕುದುರಿಸು "ನಿನಗೆ ಲಕ್ಷದೀಪ" ಸೇವೆ ಮಾಡಿಸ್ತೀನಿ ಅಂತ ಹರಕೆ ಹೊತ್ತಿದ್ದಳು.

ಇಷ್ಟು ಉಚ್ಚ ಆಸೆಗಳನ್ನು ಮಗಳ ವಿಷಯದಲ್ಲಿ ಇಟ್ಟುಕೊಂಡಿದ್ದ ಗೌರಮ್ಮ ಈ ಒಂದು ಸಣ್ಣ ಕಾರಣಕ್ಕಾಗಿ ಮದುವೆ ಮುರಿಯುವುದನ್ನು ಸಹಿಸುವುದಿಲ್ಲ. ಗಂಡನಿಗೆ ತಿಳಿಸಿ, ಹೇಳಬೇಕು ಅಷ್ಟೆ! ಎಂದುಕೊಂಡಳು.

"ನೋಡಿ ಒಂದ್ಮಾತು. ನಮ್ಮ ಮಗಳು ಚೆನ್ನಾಗಿ ಬದುಕೋದು ನಮಗೆ ಮುಖ್ಯ. ಏನು ಪುಣ್ಯ ಮಾಡಿದ್ವೇವೋ ನಮಗೆ ಅನಾಯಾಸವಾಗಿ ಈ ಸಂಬಂಧ ಸಿಕ್ಕೈತಿ. ಹುಚ್ಚುಚ್ಚಾಗಿ ಹಿಟ್ಟು ಮಾಡ್ಕೊಂಡು ಈ ಸಂಬಂಧಾನ ಆಳ್ಕಾಡಬೇಡಿ. ತಾಳಿ ಕಟ್ಟಿದ್ದಾಗೈತಿ. ನಮ್ಮ ಚಿನ್ನಿ ಅವರಿಗೆ ಸೇರಿದ್ದು. ಈಗ ಬ್ಯಾಡಾಂದ್ರೂ ಇನ್ನು ಸ್ವಲ್ಪ ದಿವ್ಸಕ್ಕಾದ್ರೂ ಈ ಕನ್ಯಾದಾನ ಮಾಡಿ ಕೊಡ್ಬೇಕು. ಅದೂ ಅಲ್ಲದೆ "ಚಿನ್ನಿ"ಗೆ ಅಂಥ ಸಣ್ಣ ವಯಸ್ಸೇನೂ

ಅಲ್ಲ. ಹನ್ನೆರಡು ವರ್ಷ ಆಗಯ್ತೆ. ಅರ್ಥ ಮಾಡ್ಕೋತಾಳೆ ಅಲ್ದೆ ಅಳಿಯಂದಿರು ಬರೋದು ವೋಗೋದು ಇದ್ದೇ ಇರುತ್ತೆ. ನಾಳೆ ಏನಾರಾ ಹೆಚ್ಚು ಕಮ್ಮಿ ಆದ್ರೆ ಜನರ ಬಾಯಿ ಮುಚ್ಕೋಕಾಗುತ್ಯೆ. ಬೀಗರು ಏಳ್ದಂಗೆ ಕೇಳಿ ಮುಂದಿನವಾರ ಬೇಕಾರೆ ಮನೇಲೇ ಈ ಕೆಲ್ಸ ಮುಗಿಸಿಬಿಡಾನಾ". ಹೆಂಡತಿಯ ಮಾತನ್ನು ಕೇಳಿದ ಚಂದ್ರೇಗೌಡರಿಗೆ ಸರಿ ಎನಿಸಿತು. ಬಸವೇಗೌಡರು ಇವತ್ತೇ ಆಗ್ಬೇಕಂತ ಹೇಳ್ತಾರೆ. ಆದ್ರೂ ಪರವಾಯಿಲ್ಲ. ಮುಂದಿನ ವಾರ ಇಟ್ಕೊಂಡ್ರೆ ಆದೀತು. ಇದಕ್ಕೆ ಬೀಗರು ಒಪ್ಪಿಯೇ ಒಪ್ತಾರೆ ಅನಿಸಿ ಸರಿ, ಗೌರ ಈಗಲೇ ಬೀಗರಿಗೆ ಹೇಳಿ ಬರ್ತೀನಿ. ನೀನು ಹೇಳೋದು ಸರಿ ಇಷ್ಟು ಸಣ್ಣ ವಯಸ್ಸಿಗೇ ಮಕ್ಕಳ್ನೆರೋ ಕಷ್ಟ ಯಾಕಂತ ನಾನು ಇದನ್ನು ಬೇಡಾಂದ್ಕೊಂಡೆ. ನೀನು ಹೇಳೋ ಹಾಗೇ ವಾಡೋಣ. ಈಗಲೇ ಬಸವೇಗೌಡರು ಮುಖ ಊದಿಸ್ಕೊಂಡವ್ರೆ, ಅವರಿಗೆ ಭಾಳ ಜಂಭ. ಸಿರಿವಂತಿಕೆ ದುರಭಿಮಾನ ಅವರ ನೆತ್ತಿಯ ಮೇಲೆ ಕುಂತಿದೆ! ಹೇಳುವಾಗ ದುಮುದುಮುಗುಡುತ್ತಿದ್ದರು.

ಗೌರಮ್ಮ ಗಂಡನ ವಿಚಾರವಾಗಿ ಬಹಳ ಹೆಮ್ಮೆ ತಳೆದಿದ್ದರು. ಈ ಸಂದರ್ಭದಲ್ಲಿ ತಮ್ಮ ಮದುವೆ ಪ್ರಸ್ತದ ದಿನ ಅವರು ಮಾಡಿದ ಚೇಷ್ಟೆ ನೆನಪಾಯಿತು. ಮುಗುಳ್ನಕ್ಕಳು. ತನಗೆ ಸಿಟ್ಟು ಬರ್ತಿದ್ರೆ ಹೆಂಡತಿ ನಗುತ್ತಿದ್ದುದು ಅವರಿಗೆ ಆಶ್ಚರ್ಯವಾಯಿತು.

"ಏನೇ ಅದು ಅಂಗೆ ನಗ್ತಾ ಇದ್ದೀಯ, ನೀನೆ "ಮದುವೆಣ್ಣು" ಅಂತ ಅಂದ್ಕೊಂಬಿಟ್ಟಿದ್ದೀಯಾ?"

"ಸಾಕು ಸುಮ್ಮನಿರಿ ಅಂದ್ರೆ, ನೀವು ಇಂಗೆ ಮಾತಾಡೋದು ನೋಡಿದ್ರೆ ನಗು ಬರ್ದೆ ಇರುತ್ಯಾ? ಈಗ ನಿಮ್ಮ ಮಗಳ ಇಚಾರವಾಗಿ ತಲೆ ಕೆಡಿಸ್ಕೊಂಡ್ರಲ್ಲಾ? ನೀವು ನಂ ಜೊತೆ ಮಲಗಿದಾಗ ಏನು ವಯಸ್ಸಾಗಿತ್ತಂತ? ಈಗ ಚೆನ್ನಿಗಾಗಿರೋ ವಯಸ್ಸಿಗಿಂತ ಇನ್ನೊಂದಾರು ತಿಂಗಳು ಜಾಸ್ತಿ ಇರಬಹದು. ಅಷ್ಟೇ ತಾನೇ?"

ಸರಿ ಸರಿ ನಿಂಗೆ ಮಾಡೋಕೆ ಬೇರೆ ಕೆಲಸ ಇಲ್ಲ. ಆಗಿನ ಕಾಲಕ್ಕೂ ಈಗಿನ ಕಾಲಕ್ಕೂ ಒಂದೇನಾ? ಏನು ಮಗಳು ಇನ್ನೂ ಸ್ವಲ್ಪ ದಿವ್ಸ ಮನೆಯಾಗೇ ಇರಲೀಂತ ಈಂಗೇಳ್ದೆ. ನನಗೇನು, ಈಗ್ಲೆ ವೋಗಿ ಏಳಿ ಬಂದ್ಬುಡ್ತೀನಿ- ಅಂತ ಬೀಗರಿದ್ದಲ್ಲಿಗೆ ಹೊರಟರು ಚಂದ್ರೇಗೌಡರು. ಮಗನ ಜೊತೆ ಏನೋ ಗಂಭೀರವಾಗಿ ಮಾತನಾಡುತ್ತಿದ್ದ ಬಸವೇಗೌಡರಿಗೆ ಮಗ ರಾಮೇಗೌಡನೇ, ಅಪ್ಪ ನೋಡು ಇಂದೆ ಅವರು ಬಂದವ್ರೆ ಅಂದ.

ತಿರುಗಿದ ಚಂದ್ರೇಗೌಡರು ಬಸವೇಗೌಡರನ್ನು ಸನ್ನೆಯಿಂದ ಕರೆದರು. ಈಗಲೇ ಬರ್ತೀನಿಂತ ಹೇಳಿ ಕೆಳಗಿದ್ದ ವಲ್ಲಿ ಕೊಡವಿ ಹೆಗಲ ಮೇಲೆ ಹಾಕಿಕೊಂಡು ಚಂದ್ರೇಗೌಡರನ್ನು ಹಿಂಬಾಲಿಸಿದರು.

"ನೋಡಿ ಬಸವೇಗೌಡರೇ. ನಮ್ಮಾಕೆ ಅಭಿಪ್ರಾಯಾನೂ ನೀವೇಳ್ದಂಗೆ ಅಯ್ತೆ. ಇನ್ನೇನು ಎಲ್ಲರಭಿಪ್ರಾಯ ಇದೇ ಇರೋದಾದ್ರೆ ನಾನ್ಯಾಕೆ ಬೇಡಾಂತೇಳ್ಲಿ? ಆದರೆ ನಮ್ಮಾಕೆ ಈ ಕಾರ್ಯಾನ ಮುಂದಿನ ವಾರ ಇಟ್ಕೊಳ್ಳಾನಾಂತ ಏಳ್ತಾಳೆ. ನೋಡಿ ಯೋಚ್ನೆ ಮಾಡಿ ಒಂದು ವಾರದಾಗೆ ಏನೂ ಆಗಾಕಿಲ್ಲ. ಮನೇಲೇ ಈ ಕಾರ್ಯ ಮುಗಿಸಿಬಿಡಾನ, ಆಗಬೌದ?"

ಬಸವೇಗೌಡರು ಯೋಚಿಸಿದರು. ಸದ್ಯ ಇಷ್ಟಕ್ಕಾದರೂ ನಿರ್ಧಾರ ಆಯ್ತಲ್ಲಾಂತ ಸಂತೋಷ. ಮದುವೆ ಮನೇಲಿ ಹಗರಣ ಆಗುತ್ತೇಂತ ಅನಿಸಿದ್ದು ಸಮಾಧಾನದಿಂದಲೇ ತೀರ್ಮಾನ ಆಯ್ತು.

ರಾತ್ರಿ ಹೆಣ್ಣು ಗಂಡಿಗೆ ಆರತಿಯಾಯ್ತು. ರಾಮೇಗೌಡ ಹಸಿದ ಕಣ್ಣುಗಳಿಂದ ಚಿನ್ನಿಯತ್ತ ನೋಡಿದ. ಆದರೆ ಚಿನ್ನಿಗೆ ಪಕ್ಕದಲ್ಲಿ ಕೂತ ರಾಮೇಗೌಡನಿಗಿಂತ ತಾನುಟ್ಟ ಸೀರೆ, ತಾನು ತೊಟ್ಟ ಒಡವೆ ಬಗ್ಗೆ ನೋಡಿಕೊಂಡು ಖುಷಿ ಪಡೋದೇ ಸಾಕಾಯ್ತು. ಎದುರುಗಡೆ ಕೂತ ಗೆಳತಿಯರು ಚಿನ್ನಿಯತ್ತ ನೋಡಿ ನೋಡಿ ನಗುತ್ತಿದ್ದರು. ಚಿನ್ನಿ ಸನ್ನೆಯಿಂದಲೇ ಗೆಳತಿಯರಿಗೆ ಏನೇನೋ ಹೇಳಲು ಪ್ರಯತ್ನಿಸಿದಳು. ಅವರ ಮುಂದೆ ತನಗೆ ದೊರೆಯುತ್ತಿದ್ದ ವಿಶೇಷ ಗಮನಕ್ಕೆ ಹೆಮ್ಮೆ ಪಟ್ಟಿದ್ದಳು.

* * *

ಮಾತುಕತೆ ನಡೆದಂತೆ ಮುಂದಿನವಾರ ಪ್ರಸ್ತದ ಕಾರ್ಯ. ಬಸವೇಗೌಡರು ಬಯಸಿದ್ದಂತೆ ಅವರ ಮನೆಯಲ್ಲೇ ಈ ಕಾರ್ಯ ಜರುಗಲಿತ್ತು. ಬಸವೇಗೌಡರು ಅರಮನೆಯಷ್ಟು ವಿಶಾಲವಾಗಿರೋ ಮನೆ ಸಾಲದೂಂತ ಮನೆಯಿಂದ ಒಂದೆರಡು ಕಿಲೋಮೀಟರ್ ದೂರದಲ್ಲಿದ್ದ ಮಾವಿನ ತೋಪಿನಲ್ಲಿ ದೊಡ್ಡ ಡೇರೆ ಹಾಕಿದ್ದರು. ಊರ ಮಂದೀನೆಲ್ಲಾ ಕರೆದಿದ್ದರು.

ಭರ್ಜರಿ ಊಟ ಆರು ತರದ ಸಿಹಿ, 5-6 ರೀತಿಯ ಕಾಯಿಪಲ್ಲೆ ಉಂಡವರು ಮೂರು ತಿಂಗಳು ಮರೆಯುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಬಂದವರೆಲ್ಲಾ ದಂಪತಿಗಳಿಗೆ ಏನಾದರೊಂದು ಉಡುಗೊರೆ ಕೊಟ್ಟೇ ಹೋದರು. ಬಂದ ಬಹುಮಾನಗಳು ಎರಡು ಕೋಣೆ ತುಂಬಾ ಆದವು. ದಂಪತಿಗಳ ಕೈಯಿಂದ ಬಸವೇಗೌಡರು. ಬಂದು ಆಶೀರ್ವಾದ ಮಾಡಿದವರಿಗೆಲ್ಲಾ ಒಂದೊಂದು ಜೊತೆ ಪಂಚೆ ಕೊಡಿಸಿದರು. ಹೆಂಗಸರಿಗೆ ಎರಡೆರಡು ರವಿಕೆ ಕಣ ಕೊಡಿಸಿದರು. ಬಂದವರೆಲ್ಲ ಕಂಠಪೂರ್ತಿ ತಿಂದು ತೃಪ್ತಿಯಿಂದ ಹರಸಿ ಹೋದರು.

ಸಂಭ್ರಮದ ಸದ್ದುಗದ್ದಲ ನಿಂತು ತಣ್ಣಗಾಗುವುದಕ್ಕೆ ರಾತ್ರಿ ಹತ್ತು ಗಂಟೆ ದಾಟಿತ್ತು. ಹಿರಿಯರು ಪ್ರಸ್ಥದ ಮುಹೂರ್ತ ಹತ್ತಿರ ಬರುತ್ತಿದೆಯೆಂದು ಆತುರಪಡಿಸಿದರು.

ಗೌರಕ್ಕನಿಗೆ ಆ ದೊಡ್ಡ ಬಂಗಲೆ ಮನೆಯಲ್ಲಿ ಎಷ್ಟು ಓಡಾಡಿದರೂ ತೃಪ್ತಿಯಿಲ್ಲ. ಶ್ರೀಮಂತ ಅಳಿಯ ಸಿಕ್ಕಿರುವುದು ಅವಳಿಗೆ ಸ್ವರ್ಗ ಮೂರೇ ಗೇಣು. ನೆರೆ ಹೊರೆಯವರಿಗೆ, ಮದುವೆಗೆ ಬಂದವರಿಗೆ ಅಳಿಯಂದಿರ ಶ್ರೀಮಂತಿಕೆ, ಗುಣ ಹೊಗಳುವುದಕ್ಕೆಲ್ಲ ಬಿಡುವೇ ಇಲ್ಲದಾಗಿತ್ತು.

ಕೋಣೆಯನ್ನು ಸಜ್ಜುಗೊಳಿಸಿ ದಂಪತಿಗಳನ್ನು ಒಳಗೆ ಕರೆದೊಯ್ದು ಕೂಡಿಸಿದರು. ಮುತ್ತೈದೆಯವರಿಗೆ ತಾಂಬೂಲ ಕೊಡಿಸಿದ ಮೇಲೆ ಹೂವಿನ ಚೆಂಡಾಟ ಆಡಿಸಿದರು. 'ಚಿನ್ನಿ ಗಂಡನಿಗೆ ಒಂದಾಡು ಏಳು' ಎಂದು ಯಾರೋ ನೆರೆದ ಮಂದಿಯಲ್ಲಿ ಕೂಗಿ ಹೇಳಿದರು. ಹೌದು ಹೌದು ಚಿನ್ನಿ ಹಾಡು ಹೇಳಲೇಬೇಕು ಎಂದು ಸಾಮೂಹಿಕವಾಗಿ ಕೂಗಿದರು. ಚಿನ್ನಿ ಇದೆಲ್ಲಾ ಏನೂ ಅರ್ಥವಾಗದಂತೆ ಬೆಕ್ಕಸ ಬೆರಗಾಗಿ ಕೂತಿದ್ದಾಳೆ. ಚಿನ್ನಿಗೆ ಹಾಡು ಹೇಳೋದೂಂದ್ರೆ ಬಹಳ ಪ್ರೀತಿ. ತನಗೆ ಹಾಡು ಹೇಳುವುದಕ್ಕೆ ಹೇಳಿದ್ದೇ ಸಾಕು, "ಅಮ್ಮ ಆಡು ಏಳ್ಲೇನೆ?"– ರಾಗ ಎಳೆಯುತ್ತಾ ಕೇಳಿದಳು. ಹೆಂಡತಿಯ ಬಾಯಿಂದ ಹೊರಟ ಮಾತನ್ನು ಕೇಳಿ ರಾಮೇಗೌಡರು ಮೆಲ್ಲನೆ ನಕ್ಕರು. ರಾಮೇಗೌಡನ ಗೆಳೆಯರ ದಂಡು ಒಂದು ಬಂದಿತ್ತು. ಕೋಣೆ ಹುಗಿಸುವುದಕ್ಕೆ ಮುಂಚೆ ಪೋಲಿ ಪೋಲಿಯಾಗಿ ಮಾತಾಡಿ ಚುಡಾಯಿಸಿ ರಾಮೇಗೌಡನನ್ನು ಕಳಿಸಿದ್ದರು.

ಎಷ್ಟು ಹೊತ್ತಾದರೂ ಈ ಹೆಂಗಸರ ಹಾವಳಿ ಮುಗಿಯುವುದಿಲ್ಲ– ಹಾಳಾದವ್ರು ಇನ್ನಾದರೂ ನಮ್ಮಿಬ್ಬರನ್ನ ಏಕಾಂತವಾಗಿ ಬಿಟ್ಟು ಹೋಗಬಾರದೆ ಬೇಗ"– ಎಂದು ಆಲೋಚಿಸುತ್ತಿತ್ತು, ರಾಮೇಗೌಡನ ಮನಸ್ಸು.

ಅಷ್ಟರಲ್ಲಿ ಬಸವೇಗೌಡರು ಬಂದು ಎಲ್ಲರನ್ನೂ ಮೆಲ್ಲಗೆ ಮಾತಾಡಿ ಸಾಗಿಸಿದರು. ಅಲ್ಲಿಂದ ಎಲ್ಲಾ ಹೊರಟ ಮೇಲೆ, "ಮಗಾ ಸ್ವಲ್ಪ ಜಾಗ್ರತೆ ವಹಿಸು, ಎಚ್ಚು ಕಮ್ಮಿ ನಡಕೊಂಡೀಯ? ಎಂದು ಪಿಸುಗುಟ್ಟಿ ಅಲ್ಲಿಂದ ಕಾಲ್ತೆಗೆದರು. ಎರಡೇ ಎರಡು ಕ್ಷಣ ಸುಮ್ಮನಿದ್ದ ರಾಮೆಗೌಡರಿಗೆ ಚಿನ್ನಿ ಮಂಚ ಇಳಿದು ಹೊರಡುವ ಪ್ರಯತ್ನದಲ್ಲಿದ್ದದ್ದು ಕಣ್ಣಿಗೆ ಬಿತ್ತು. ರಾಮೇಗೌಡ ಎದ್ದ. ಎದ್ದವನೇ ಬಾಗಿಲ ಬಳಿ ಬಂದಿದ್ದ. ಚಿನ್ನಿಯ ರಟ್ಟೆ ಹಿಡಿದು ಹಿಂದಕ್ಕೆ ಎಳೆದು ಚಿಲಕ ಹಾಕಿದ. ಚಿನ್ನಿಯ ಎದೆ ಹೊಡೆದುಕೊಳ್ಳತೊಡಗಿತು. ಮೈ ಬೆವರಿತು. ತುಟಿ ಅದುರತೊಡಗಿತು. ದೈನ್ಯವಾಗಿ ರಾಮೇಗೌಡರತ್ತ ನೋಡುತ್ತಾ, ಬಾಗಿಲ ತೆಗೀರಿ ನಾ ಹೋಗ್ತೀನಿ, ನಮ್ಮಮ್ಮನ ತಾವ ಮಲಕ್ಕೋತೀನಿ.

ನಿಮ್ಮಮ್ಮನ ತಾವ ಮಲಗೋಕ್ಕೋಸ್ಕರ ಅಲ್ಲ, ನಿನ್ನ ಇಲ್ಲಿ ಬಿಟ್ಟಿರೋದು. ಇವತ್ತು ನಂತಾವ ಮಲಕ್ಕೋಬೇಕು. ತಿಳೀತಾ. ಸುಮ್ಗೆ ಗಲಾಟೆ ಮಾಡ್ಬೇಡ, ಹತ್ತು ಮಂಚಾನ.

ಈ ಮಾತು ಕೇಳಿದ ಚೆನ್ನಿ ರಾಮೇಗೌಡನತ್ತ ನೋಡಿದಳು. ಇಲ್ಲೀವರೆಗೆ ಅವನ ಮುಖದಲ್ಲಿದ್ದ ಸೌಮ್ಯತೆ ಮಾಯವಾಗಿ ಭೀತಿ ಹುಟ್ಟಿಸುವಂತ ರೌದ್ರತೆ ತಲೆದೋರಿತು. ಕೆಂಪನೆಯ ಕಣ್ಣು ಸೊಂಪಾಗಿ ಬೆಳೆಸಿ ಅಚ್ಚುಕಟ್ಟಾಗಿ ಕತ್ತರಿಸಿದ ಮೀಸೆ ನೋಡುತ್ತಿದ್ದಂತೆ ಚೆನ್ನಿಯ ಭೀತಿ ಹೆಚ್ಚಾಗತೊಡಗಿತು. ಅನಿಷ್ಟದ ಕಲ್ಪನೆಯಿಂದ ಅವಳ ಮನಸ್ಸು ಕಂಪಿಸಿತು. ಹಸಿದ ಕಣ್ಣುಗಳಿಂದ ರಾಮೇಗೌಡ ಬೆಳ್ಳನೆಯ ಬೊಂಬೆ ಹಾಗಿರುವ ಚೆನ್ನಿಯ ಎಳೆಯ ಆ ಅಂಗಾಂಗಗಳನ್ನು ನೋಡತೊಡಗಿದ್ದ. ಬೆದರಿದ ಚೆನ್ನಿ ಸೆರಗನ್ನು ಪೂರ್ತಿಯಾಗಿ ಎಳೆದುಕೊಂಡು ಎದೆಯ ಭಾಗವನ್ನು ಮುಚ್ಚಿಕೊಂಡಳು. ಹತ್ತಿರ ಬಂದ ರಾಮೇಗೌಡ ಮೊದಲು ಮೆಲ್ಲನೆ ಕೈ ಹಾಕಿದ. ಕೈ ಬಿದ್ದದ್ದಕ್ಕೆ ಮತ್ತಷ್ಟು ಮುದುಡಿಕೊಂಡು ಬಾಗಿಲಿನ ಕಡೆ ಓಡಿದಳು. ಆದರೆ ರಾಮೇಗೌಡನ ಸುದೀರ್ಘ ಬಲಿಷ್ಠ ತೋಳುಗಳು ಕಬಂಧ ಕೈಗಳಂತೆ ಮುಂದಕ್ಕೆ ಹರಿದು ಚೆನ್ನಿಯನ್ನು ಎಳೆದವು. ರಾಕ್ಷಸನ ಕೈಯೊಳಗೆ ಪುಟ್ಟ ಮೊಲದಂತೆ, ರಾಮೇಗೌಡನ ಕೈಯೊಳಗೆ ಚೆನ್ನಿ ಸೆರೆಯಾದಳು. ಅನಾಮತ್ತಾಗಿ ಎತ್ತಿಕೊಂಡು ಮಂಚದ ಮೇಲೆ ಮಲಗಿಸಿದ. ಅವನ ಬಿಗಿ ಬಂಧದೊಳಗೆ ಚೆನ್ನಿಗೆ ಉಸಿರು ಕಟ್ಟಿ ಸಾಯುವಂತೆ ಅನಿಸಿತು.

ಇಷ್ಟು ದಿವಸ ಮದುವೆಯ ಸಂಭ್ರಮವನ್ನು ಅನುಭವಿಸಿದ್ದ ಚೆನ್ನಿಗೆ, ಮದುವೆಯ ಸಂಭ್ರಮದ ಸಮಾಪ್ತಿ ಈ ರೀತಿಯಲ್ಲಿ ಕೊನೆಯಾಗುವುದೆಂದು ನಿರೀಕ್ಷಿಸಿರಲಿಲ್ಲ. ಅಪ್ಪ ಅಮ್ಮನ ನೆನಪಿನಿಂದ ಬಿಕ್ಕಿ ಬಿಕ್ಕಿ ಅಳತೊಡಗಿದಳು. ರಾಮೇಗೌಡನಿಗೆ ಹೆಂಡತಿ ಅಳುತ್ತಿರುವುದಿರಿಂದ ಸಮಾಧಾನ ಮಾಡಬೇಕೆನ್ನಿಸುವುದಕ್ಕಿಂತ ಮತ್ತಷ್ಟು ಸಿಟ್ಟು ಬಂತು. ಚೆನ್ನಿಯ ಸೆರಗನ್ನು ಹಿಡಿದೆಳೆದ. ಚೆನ್ನಿ ಬಿಕ್ಕಿ ಬಿಕ್ಕಿ ಅಳುತ್ತಿದ್ದರೂ ಅದಕ್ಕೆ ಅವಕಾಶ ಕೊಡದೆ ಗಟ್ಟಿಯಾಗಿ ಸೆರಗನ್ನು ಹಿಡಿದುಕೊಂಡು ತನ್ನೆಡೆಗೆ ಜಗ್ಗಿದಳು. ರಾಮೇಗೌಡನ ತಾಳ್ಮೆ ಮುರಿಯಿತು. ಎರಡು ಕೈಗಳಿಂದಲೂ ಚೆನ್ನಿಯ ಕೈಗಳನ್ನು ಬಿಡಿಸಿ ವಿವಸ್ತ್ರಗೊಳಿಸಿದ. ಚೆನ್ನಿ ಚಿಟ್ಟನೆ ಚೀರಿದಳು. ಅದೇ ಹೊತ್ತಿಗೆ ಗೌರಕ್ಕ ನಿದ್ದೆಯಲ್ಲಿ ಬೆಚ್ಚಿದಳು. ಕೂಗಲು ಆಗದಂತೆ ಚೆನ್ನಿಯ ಕುಪ್ಪಸವನ್ನೇ ಬಾಯಿಗೆ ತುರುಕಿದ. ಪ್ರಜ್ಞೆಯಿಲ್ಲದೆ ಬಿದ್ದಿದ್ದ ಚೆನ್ನಿಗೆ ಎಚ್ಚರವಾದಾಗ ಮೈ ಮೇಲೆಲ್ಲಾ ಬಿದ್ದ ಗುರುತುಗಳನ್ನು ನೋಡಿದಾಗ ಅಳು ತಡೆಯಲಾಗಲಿಲ್ಲ. ಪಕ್ಕದಲ್ಲಿ ರಾಮೇಗೌಡ ಆರಾಮವಾಗಿ ಮಲಗಿದ್ದಾನೆ. ಚೆನ್ನಿಗೆ ಕತ್ತು ಹಿಸುಕಿಬಿಡೋಣವೇ ಎನ್ನುವಷ್ಟು ಸಿಟ್ಟು ಬಂತು. ಆದರೆ ರಾಮೇಗೌಡ ತನಗಿಂತ ಬಲಿಷ್ಠ ಎನ್ನುವುದರ ಅನುಭವವಾಗಿದ್ದರಿಂದ ಹುಲ್ಲು ಕಚ್ಚಿಕೊಂಡು ಎದ್ದು, ಸೀರೆ ಸರಿ ಮಾಡಿಕೊಂಡು ದೂರ ನೆಲದ ಮೇಲೆ ಕುಳಿತು ಬೆಳಗಾಗುವುದನ್ನೇ ಹಾರೈಸತೊಡಗಿದಳು.

* * *

ಚಿನ್ನಿ ಬಸವೇಗೌಡರ ಮನೆ ತುಂಬಿದಳು. ಆದರೆ ಉಡಿ ತುಂಬಿರಲಿಲ್ಲ. ರಾಮೇಗೌಡನ ನಡತೆ ಮದುವೆಯಾಗಿ ಮಡದಿ ಮನೆಗೆ ಬಂದರೆ ಸರಿಹೋದೀತೆಂದು ಭಾವಿಸಿದ್ದ ಬಸವೇಗೌಡರಿಗೆ ಈಗ ಅವನ ವರ್ತನೆಯಿಂದ ಮತ್ತಷ್ಟು ಚಿಂತೆಗಿಟ್ಟುಕೊಂಡಿತು. ಪಟ್ಟಣದಲ್ಲಿ ಓದಿ ಬರಲೀಂತ ಆಸೆ ಪಟ್ಟು ಕಳುಹಿಸಿದರೆ ರಾಮೇಗೌಡ ಕಲಿತು ಬಂದದ್ದೇ ಬೇರೆ. ಹೆಂಗಸರ ವಿಷಯದಲ್ಲಿ ಪ್ರವೀಣನಾದ. ಪೇಟೆಯಲ್ಲಿ ದಿನಕ್ಕೊಂದು ಹೆಣ್ಣಿನ ರುಚಿ ಕಂಡ ರಾಮೇಗೌಡನಿಗೆ ಹಳ್ಳಿಯ ವಾತಾವರಣ ಒಗ್ಗಲಿಲ್ಲ. ಮೊದಲ ರಾತ್ರಿಯ ಅನುಭವದಿಂದ ಹೆಂಡತಿಯ ವಿಷಯದಲ್ಲಿ ಅನಾಸಕ್ತನಾದ. ಚಿನ್ನಮ್ಮನೂ ಆದಷ್ಟೂ ರಾಮೇಗೌಡನಿಂದ ತಪ್ಪಿಸಿಕೊಂಡೇ ತಿರುಗುತ್ತಿದ್ದಳು.

ರಂಗು ಹಚ್ಚಿದ ತುಟಿಗಳ ಮೇಲೆ ಮುಗುಳು ನಗೆ ತಂದುಕೊಂಡು ರಾಮೇಗೌಡನ ಇಂಗಿತವರಿತು ಸ್ವಾಗತಿಸುತ್ತಿದ್ದ ಲಿಲ್ಲಿ, ಪುತಳಿ, ಜಾನಕಿ ಇವರ ನೆನಪಾಯಿತು. ವೃತ್ತಿಯಲ್ಲಿ ಪಳಗಿದ ಇವರೆಲ್ಲ ರಾಮೇಗೌಡನನ್ನು ಖುಷಿಪಡಿಸುತ್ತಿದ್ದರು.

ಇತ್ತೀಚೆಗೆ ಮನೆ ಊಳಿಗಕ್ಕೂ, ಗದ್ದೇಲಿ ಕೆಲಸ ಮಾಡುವುದಕ್ಕೂ ಒಂದೆರಡು ಹೆಣ್ಣಾಳುಗಳು ಬಂದಿದ್ದರು. ಇವರಲ್ಲಿ ಚೆಲುವಿ ರಾಮೇಗೌಡನನ್ನು ನಿರಾಯಾಸವಾಗಿ ಆಕರ್ಷಿಸಿದಳು. ಕಸೆಗಚ್ಚೆ ಹಾಕಿ ಬಿಗಿಯಾಗಿ ಗಂಟು ಹಾಕಿದ ಕುಪ್ಪುಸದೊಳಗಿಂದ ಹೊರಗೆ ಚೆಲ್ಲುತ್ತಿದ್ದ ಅವಳೆದೆಯ ಸೌಂದರ್ಯ, ಎಲೆಯಡಿಕೆ ಹಾಕುತ್ತಿದ್ದುದರಿಂದ ಬಣ್ಣಗಟ್ಟಿದ ತುಟಿ, ಸದಾ ಸುಳಿಯುತ್ತಿದ್ದ ತುಂಟನಗೆ, ಆಸೆಗಳನ್ನು ಹೊತ್ತ ಬೊಗಸೆಗಣ್ಣುಗಳು, ಇವಿಷ್ಟೂ ಗೌಡನನ್ನು ಆಕರ್ಷಿಸಲು ಸಾಕಾಗಿತ್ತು.

ಬತ್ತದ ಗದ್ದೇಲಿ ಸಸಿ ನೆಡ್ತಾ ಯಾವುದೋ ಒಂದು ಹಾಡನ್ನು ಗುಂಯ್ ಗುಡುತ್ತಿದ್ದಳು. ಕಾಳೇಗೌಡರ ಮನೆಗೆ ಹೋಗಬೇಕಾದರೆ ಆ ಗದ್ದೇನ ಹಾದು ಹೋಗ್ಬೇಕಿತ್ತು. ರಾಮೇಗೌಡ, ಕಾಳೇಗೌಡನ ಮಗ ಶಂಕರನ್ನ ಭೇಟಿಯಾಗಬೇಕಂತ ಆ ಕಡೇನೇ ಹೊರಟ. ಬತ್ತದ ಗದ್ದೆಯಿಂದ ಹಾಡಿನ ದನಿ ಕೇಳಿದ. ರಾಮೇಗೌಡ ಸ್ವಲ್ಪ ಹೊತ್ತು ಹಾಗೇ ನಿಂತು ಕೇಳಿದ. ತಮ್ಮ ಗದ್ದೆಯಿಂದಲೆ ಆ ಹಾಡು ಹೊರಟಿದೆ ಅನ್ನೋದೇನೋ ತಿಳೀತು. ಆದರೆ ಹಾಡಿದ್ದ್ಯಾರು ಗೊತ್ತಾಗಲಿಲ್ಲ. ಎಷ್ಟೋ ಮಂದಿ ಕೆಲಸ ಮಾಡ್ತಿದ್ರು, ಅವರಲ್ಲಿ ಯಾರಿರಬಹುದೂಂತ ಕಣ್ಣು ಹುಡುಕಾಡಿತು. ಅಷ್ಟರಲ್ಲಿ ಹಿಂದಿನಿಂದ 'ಬುದ್ಧಿಯವ್ರೆ' ಅನ್ನೋ ಕೂಗು ಕೇಳಿ ಹಿಂದೆ ತಿರುಗಿದರು. ಒಂದು ಕ್ಷಣ ಅವನೆದುರು ನಿಂತ ಹೆಣ್ಣನ್ನು ನೋಡಿ ಸ್ತಬ್ಧರಾದರು. ಸರಸರನೆ ಕಣ್ಣು ಹರಿದಾಡಿತು. ಗಂಟುಬಿಗಿದ ಕುಪ್ಪಸದ ಮರೆಯಿಂದ ಇಣುಕುತ್ತಿದ್ದ ಅವಳ ಮೊಲೆಗಳು ಸೀರೆಯ ಸೆರಗನ್ನು ಮಧ್ಯದಿಂದ ಎಳೆದು ಸೊಂಟಕ್ಕೆ ಸಿಕ್ಕಿಸಿದ್ದರಿಂದ ಮತ್ತಷ್ಟು ಸ್ಪಷ್ಟವಾಗಿ ಕಂಡಿತು. ರಾಮೇಗೌಡರು ಪುಲಕಿತರಾದರು. ಕ್ಷಣ ಮಾತ್ರವಲ್ಲಿ ಕಾಮನೆಗಳು ಕೆರಳಿದವು.

ಜೊಲ್ಲು ಸುರಿಸಿದರು. ಇಂಥ ಹೆಣ್ಣು ಊರಲ್ಲಿದ್ರೂ ತಮ್ಮ ಕಣ್ಣಿಗೆ ಇಷ್ಟು ದಿವಸ ಬೀಳದಿದ್ದುದಕ್ಕೆ ಶಪಿಸಿದರು.

ಬಿಟ್ಟ ಬಾಯಿ. ಬಿಟ್ಟ ಕಣ್ಣಿಂದ ನೋಡುತ್ತಿದ್ದ ರಾಮೇಗೌಡರ ಅವಸ್ಥೆ ನೋಡಿ ಚೆಲುವಿಗೆ ನಗು ತಡೆಯಲಾಗಲಿಲ್ಲ. 'ಬಿದ್ದ ಬುಟ್ಟಿಗೆ ಗೌಡ' ಎಂದುಕೊಂಡಳು ಮನಸ್ಸಿನಲ್ಲಿ. ಕೆಣಕುವ, ಆಸೆಯಾಯ್ತು ಕೇಳಿದಳು.

ಬುದ್ಧಿ ಗೌಡರೇ, ಬಾಯೊಳಗೆ ನೊಣ ಓದೀತು, ಏನನ್ನ ಅಂಗೆ ಕಣ್ ಕಣ್ ಬಿಟ್ಟು ನೋಡ್ತಿದ್ದೀರಿ. ಇತ್ಲಾಗೇನೂ ಇಲ್ವಲ್ಲ- ಎಂದು ಕಿಸಿ ಕಿಸಿ ನಕ್ಕಳು.

'ಅಯ್ಯೋ ಹೆಣ್ಣೇ ನಿನ್ನ ಕಣ್ಣಿಗೆ ಕಾಣೊಲ್ಲ. ಅದು ನಮಗೆ ಮಾತ್ರ ಕಾಣುತ್ತೆ' ಹುಸಿ ನಕ್ಕು ಉತ್ತರಿಸಿದ. 'ಅಂಜನ ಹಾಕ್ಕೊಂಡಿವ್ರೇನೋ? ನಿಮಗೆ ಕಾಣೋದು ಎಂಗೈತೆ, ಇವರಿಸ್ತೀರಾ?' ಎಂದು ಮೈ ಕುಲುಕುತ್ತ ಕೇಳಿದಳು.

ಓ ಅದಕ್ಕೇನಂತೆ, ಆದರೆ ಇರೋತಾವ ಕಾಣೋದಿಲ್ಲ.

ನಾ ಕರೆದೆಡೆಗೆ ಬಂದರೆ ಇನ್ನೂ ಏನೇನೋ ಭಾಳ ತೋರಿಸ್ತೀನಿ ಬರ್ತೀಯಾ? ತುಂಟ ನಗೆ ನಗುತ್ತಾ ಕೇಳಿದ.

'ಓಗಿ ಬುದ್ಧಿ, ಜ್ಯಾಷ್ಟೆ ಮಾಡ್ತೀರ ನಾ ನಿಂ ಜೊತೆ ಬಂದ್ರೆ ನಿಜವಾಗಿ ನೀವು ನೋಡಿದ್ದೆಲ್ಲ ನಂಗೂ ತೋರಿಸ್ತೀರಾ?'-ಕೇಳಿದ ದನಿಯಲ್ಲಿ ತುಂಟ ಬೇಡಿಕೆಯಿತ್ತು.

'ನಂ ಜೊತೆ ಬರೋಕೆ ನಿನಗೆ ಹೆದರಿಕೆ ಅಲ್ಲ, ನಾ ಗಂಡಸು, ನೀ ಹೆಂಗಸು!'

"ಅದೇನ್ಮಾತು, ಬುದ್ಧಿ- ನೀವು ನಮ್ಮ ಧಣೀರು, ಧಣೀರು ಕರೆದರೆ ಹೋಗಾಕೆ ಯಾಕೆ ಎದರಿಕೆ ಆಗುತ್ತೆ ನೀವೇ ಏಳಿ."

"ಏನಂದೆ? ನಾನು ನಿಮ್ಮ ಧಣೀರ?" ಆಶ್ಚರ್ಯವಿತ್ತು ಪ್ರಶ್ನೆಯಲ್ಲಿ.

"ಹೌದು ಬುದ್ಧಿ ಧಣೀರಾದ ನಿಮಗೇ ನಾವು ಯಾರಂತ ಗೊತ್ತಾಗಲಿಲ್ವಾ? ಹೊಸದಾಗಿ ಬಂದು ಸೇರಿದ ಆಳುಗಳು."

"ಹಂ ಸರಿ ಹಂಗಾರ ನಾಳೆಯಿಂದ ಈ ಹೊಲದ ಕೆಲಸ ನಾನು ನೋಡ್ಕೋತೀನಿ ಮಧ್ಯಾಹ್ನ ಮನೇಂದ ಊಟಾನ ಇಲ್ಲಿಗೇ ತಂದ್ಬಿಡು" ಎಂದ.

"ಬುದ್ಧಿ ಅದೇನ್ಮಾತು? ನಾನು ನಿಮಗೆ ಅನ್ನ ತಗಂಬರೋದಾ?" ಕಣ್ಣು ಕೆಕ್ಕರಿಸಿ ಕೇಳಿದಳು.

"ಓಗ್ಲಿ ನಾಳೆ ಕೇಳು"- ಎಂದವನೇ ಅಲ್ಲಿಂದ ಕಾಳೇಗೌಡನ ಮನೆಗೆ ಹೋಗೋದು ಮರೆತು ಮನೆಗೆ ಮರಳಿದ.

ಮಗ ಇವೊತ್ತು ಮನೇಲಿರುವುದನ್ನು ನೋಡಿದ ಬಸವೇಗೌಡನಿಗೆ ಆಶ್ಚರ್ಯವಾಯಿತು. ಒಳಗೆ ಬರುತ್ತಿದ್ದಂತೆ ತಂದೆ ಮಗನನ್ನು ಪ್ರಶ್ನಿಸಿದ.

"ರಾಮಣ್ಣ ಯಾಕೆ ಇವೊತ್ತು ಎಲ್ಲೂ ಓಗಿಲ್ವೇನು, ಯಾರೂ ಜೊತೆ ಸಿಕ್ಕಲಿಲ್ವಾ? ಯಾಕೆ ಒಂಥರಾ ಇದ್ದಿ? ಏನಾಯ್ತು ರಾಮಣ್ಣ? ಬಿಸಿಲಲ್ಲಿ ಸುತ್ತಾಡಿ ಬಂದಿದ್ದೀಂತ ಕಾಣುತ್ತೆ. ಇರು ಈಗಲೇ ಚಿನ್ನವ್ವನಿಗೆ ಹೇಳಿ ಪಾನಕ ತರಿಸ್ತೀನಿ" ಎಂದು 'ಚಿನ್ನವ್ವ' 'ಚಿನ್ನವ್ವ' ಎಂದು ಕೂಗಿದ. ದೇವರ ಮನೆಯಾಗಿ ಸಾಮಾನು ಒರಸುತ್ತ ಕೂತಿದ್ದ, 'ಚಿನ್ನಮ್ಮ' ಮಾವನವರ ಧ್ವನಿ ಕೇಳಿ ಎದ್ದು ಓಡಿ ಬಂದಿದ್ದಳು.

'ಕರೆದ್ರಾ ಮಾವಯ್ಯ?'

"ಔದಮ್ಮ ನೋಡು, ನಿನ್ನ ಗೌಡನಿಗೆ ಬಾಯಾರಿಕೆ ಆಗಯ್ತೆ, ಒಂದು ಚೊಂಬಿನಾಗೆ ಪಾನಕ ತಂದು ಕೊಡವ್ವ."

ಮಾವನ ಮಾತು ಕೇಳಿ, ತಲೆ ತುಂಬಾ ಹೊದ್ದುಕೊಂಡಿದ್ದ ಸೆರಗನ್ನು ಸರಿಸಿ ಗಂಡನತ್ತ ನೋಡಿದಳು. ಆದರೆ ಗಂಡ ತನ್ನ ಕಡೆ ತಿರುಗಲೇ ಇಲ್ಲ. ಬೀದಿ ಕಡೆಗೆ ಮುಖ ಮಾಡಿ ನೋಡುತ್ತಿದ್ದ. ಕಣ್ಣು ಹನಿ ತುಂಬಿತು. ತುಂಬು ಪ್ರಾಯದ ಮೈ. ಮನಸಿನೊಳಗೆ ಮಾಗದ ಬಯಕೆಗಳು ಕೆರಳಿದ್ದುವು. ಮದುವೆಯ ಹೊಸದರಲ್ಲಿ ಹುಡುಗತನ ಅರ್ಥವಾಗದ ಬಯಕೆಗಳು. ಆದರೆ ವರ್ಷ ಕಳೆದಂತೆ ಅರಳಿದ್ದ ಯೌವನ ಕಾಮನೆಗಳ ಕಾವಿನಲ್ಲಿ ಚಡಪಡಿಸುತ್ತಿತ್ತು. ಗೌಡನ ಸಹವಾಸಕ್ಕಾಗಿ ಹಂಬಲಿಸುತ್ತಿತ್ತು. ಒಂದು ಸಲ ಗೌಡ ಅವಕಾಶ ಕೊಟ್ಟಿದ್ದರೂ ಸಾಕಾಗಿತ್ತು. ಹೆಣ್ತನವನ್ನು ಸಾಬೀತು ಮಾಡಿ ಬಾಡಿದ ಚಲುವಿನ ಸೆರೆಯಲ್ಲಿ ಇಡಬಹುದಾಗಿತ್ತು. ಮದುವೆಯಾದಾಗ ಅರ್ಥವಾಗದ ಭಾವನೆಗಳು ಈಗ ಹಂಬಲವಾಗಿವೆ. ಗೌಡ ಕಣ್ಣಿಗೆ ಬಿದ್ದ ಕ್ಷಣ ಅದುಮಿಟ್ಟ ಅವಳ ಆಕಾಂಕ್ಷೆಗಳು ಗರಿ ಬಿಚ್ಚಿದುವು. ಸಣ್ಣದಾಗಿ ಒಳಗೊಳಗೇ ನೆನಪಿನಿಂದ ಪುಳಕ. ಆಸೆ ಕಣ್ಣುಗಳಿಂದ ನೋಡಿದ್ದ ಅವಳಿಗೆ ಕಂಡದ್ದು ಗೌಡನ ಔದಾಸೀನ. ಮನಸ್ಸು ಮುಲುಗಿತು. ಒಂದು ಮಾತು ಧೈರ್ಯವಾಗಿ ಕೇಳೋಣವೆನಿಸಿತು. ಆದರೆ ಮಾವನವರು ಎದುರು ಇರುವುದು ಗಮನಕ್ಕೆ ಬಂದು ಸುಮ್ಮನೆ ತಂದ ಚೊಂಬು, ಲೋಟಗಳನ್ನು ಇಟ್ಟಳು.

ಮಗ ಸೊಸೆಯರ ವಿಷಯ ತಿಳಿದ ಬಸವೇಗೌಡರು ಇಬ್ಬರ ನಡುವಿನ ಬಿರುಕನ್ನು ಬೆಸೆಯಲು ಪ್ರಯತ್ನಿಸಿ ಸೋತರು. ಪಾಪ! ಚಿನ್ನಿಯದು ತಪ್ಪಿಲ್ಲ, ಆದರೂ ಹಾಳಾಗುವುದು ಅವಳ ಬದುಕೇ. ಗಂಡಸಿಗೇನು ನೂರು ಕಡೆ ಹೋಗಿ ತೀಟೆ ತೀರಿಸಿಕೊಳ್ಳುತ್ತಾನೆ. ಅದರಲ್ಲೂ ಮಗನ ವ್ಯವಹಾರದ ವಿಚಾರ ತಿಳಿಯದ್ದೇನೂ ಅಲ್ಲ.

ಸುಮ್ಮನೆ ನಿಂತ ಸೊಸೆಗೆ ಮಾವ ಹೇಳಿದ.

"ಬಗ್ಗಿಸಿ ಗಂಡನಿಗೆ ಕೊಡವ್ವ"

ಅಷ್ಟರಲ್ಲಿ ರಾಮೇಗೌಡ ಕತ್ತರಿಸಿ ಹೇಳಿದ.

ನಾನೇ ಬಗ್ಗಿಸ್ಕೋತೇನೆ ಬಿಡಪ್ಪ– ಎಂದು ಚೊಂಬಿನಲ್ಲಿದ್ದ ಪಾನಕವನ್ನು ಲೋಟಕ್ಕೆ ಬಗ್ಗಿಸಿಕೊಂಡು ಗಟಗಟನೆ ಕುಡಿದು ಎದ್ದ. ಹೊರಡುವ ಪ್ರಯತ್ನದಲ್ಲಿದ್ದ ಗೌಡ ಮಗನನ್ನು ತಡೆದು ನಿಲ್ಲಿಸಿ, ಸೊಸೆಯನ್ನು ಒಳಕ್ಕೆ ಹೋಗೆಂದು ಸನ್ನೆ ಮಾಡಿದ.

ಅಪ್ಪನ ಜೊತೆಗೂ ಹೆಚ್ಚು ಮಾತಾಡದೆ ಇರುತ್ತಿದ್ದ ಮಗನಿಗೆ ಅಪ್ಪನ ಜೊತೆ ವಾದ ಮಾಡೋ ಇಷ್ಟವಿರಲಿಲ್ಲ. ತನ್ನನ್ನು ಉಳಿಸಿಕೊಂಡದ್ದರ ಕಾರಣ ಸೂಕ್ಷ್ಮವಾಗಿ ಅರ್ಥವಾಯಿತು. ಮಾಮೂಲಿನಂತೆ ಈ ದಿನವೂ ಉಪದೇಶಕ್ಕೇ ಇರಬಹುದೆಂದು ಊಹಿಸಿದ.

"ಮಗಾ ನೋಡು, ನನಗೂ ವಯಸ್ಸಾಯಿತು. ಇನ್ನೇಟು ದಿವ್ಸಾಂತ ಬದುಕಿರ್ತೀನಿ, ಮಗ ಸೊಸಿ ಚಂದಾಗಿ ಒಂದಾಗಿ ಬಾಳೋದ್ನ ನೋಡ್ಬೇಕಂತ ಕಾದು ಕಾದು ಸಾಕಾಯ್ತು. ಒಬ್ಬ ಮೊಮ್ಮಗ ಈ ಅರಮನೇ ತುಂಬಾ ಓಡಾಡ್ತಾನೆ, ತಾತ, ತಾತ ಅಂತ ಪ್ರೀತಿಯಿಂದ ಕರೀತಾನೆ, ನನ್ನ ಸಂಜೆ ಬದುಕಿನಲ್ಲಿ ಬರುವ ಕತ್ತಲ್ನ ಬೆಳಗತಾನೇಂತ ಏಟೊಂದು ಆಸೆ ಇಟಗೊಂಡಿದ್ದೆ. ಆದರೆ ನಿನ್ನ ಯವಾರ ನಿನ್ನ ಬುದ್ಧಿ ಮೊದಲಿನಾಗೇ ಇದೆ. ನಿನ್ನ ಯೆಂಡ್ತಿ ಹರೆಯದ ಈ ವಯಸಿನಾಗೇ ಏಟು ನೋವು ತಿಂದಿದ್ದಾಳೋ ಯಾರಿಗ್ಗೊತ್ತು! ಎರವರ ಎಣ್ಣ ಮಗೀನ ಕರಕೊಂಬಂದು ಈಂಗ ಬಾಡಿಸೋದು ನ್ಯಾಯ ಅಲ್ಲ. ಕೊರಗಿ ಕೊರಗಿ ಬಡವಾಗ್ಬಿಟ್ಟಿದ್ದಾಳೆ. ನೀನು ಅವಳ್ನ ಈಂಗ ಸಾಯಿಸೋದು ನಿಂದು ಧರ್ಮ ಅಲ್ಲ. ದ್ಯಾವರು, ದಿಂಡ್ರು ಅನ್ನೋ ಭಯ ಇಲ್ಲ ನಿನಗ. ರಾಮಣ್ಣ ಅಪ್ಪನಾಗಿ ನಿನ್ನ ನಾನೇನೂ ಕೇಳ್ಕೊಳ್ಳಾಕಿಲ್ಲ, ಆ ಮಗೀಗೆ ಜೀವ ಕೊಡು. ಬದುಕೋಕ ಆಸೆ ಕೊಡು." ಎಂದು ಬೇಡಿದ. ಬಸವೇಗೌಡನ ದೈನ್ಯ ಮುಖ ಯಾರನ್ನಾದರೂ ಕರಗುವಂತೆ ಮಾಡುತ್ತಿತ್ತು. ಆದರೆ ರಾಮೇಗೌಡ ಮಾತ್ರ ಹಾಂ, ಹೂಂ ಅನ್ನದೆ ಅಪ್ಪನ ಮಾತಿಗೆ ಕಿವಿ ಕೊಡದೆ ಸರಕ್ಕನೆ ಅಲ್ಲಿಂದ ತಿರುಗಿ ನಡೆದ.

ಮಗನ ಈ ಉದ್ದಟತನ ಮುದಿ ಕಣ್ಣುಗಳಲ್ಲಿ ಕಂಬನಿ ತುಂಬಿತು. ಮಗನ ಯೋಚನೆಯಿಂದಾಗಿ ತೀರಾ ಕೃಶವಾಗಿ ಬಿಟ್ಟಿದ್ದರು. ಮೊದಲಿನ ದರ್ಪವಾಗಲೀ, ಅಹಂ ಆಗಲಿ ಬಸವೇಗೌಡರಲ್ಲಿ ಉಳಿದಿರಲಿಲ್ಲ. ಮಗ ಎಂದಿಗಾದರೂ ದಾರಿಗೆ ಬಂದಾನೆಂಬ ಆಸೆ ಸಂಪೂರ್ಣವಾಗಿ ಸೀದು ಹೋಯಿತು. ಮಗ ಹೊರಟ ದಿಕ್ಕನ್ನೇ ದಿಟ್ಟಿಸುತ್ತಾ ಕುಳಿತರು.

* * *

ಊಟಕ್ಕೆ ಅಪ್ಪ ಮಗ ಇಬ್ಬರೂ ಒಟ್ಟಿಗೆ ಕೂತಿದ್ದರು. ಮಾಮೂಲಿನಂತೆ ಚಿನ್ನಮ್ಮ ಮೌನವಾಗಿ ಬಡಿಸುತ್ತಿದ್ದಳು. ಸ್ವಲ್ಪ ಹೊತ್ತು ಯಾರೂ ಮಾತಾಡಲಿಲ್ಲ. ಆದರೆ ಮಗನ ಮುಖದಲ್ಲಿ ಈ ದಿನ ಬಹಳ ಗೆಲುವಿದ್ದ ಹಾಗಿತ್ತು. ಬಸವೇಗೌಡರು ಮೆಲ್ಲನೆ ನಕ್ಕರು. ಮಾವ ನಕ್ಕಿದ್ದನ್ನು ತನ್ನ ಗೌಡನ ಮುಖದಲ್ಲಿ ಗೆಲುವಿದ್ದುದನ್ನು ಗಮನಿಸಿದಳು. ದೇವರೇ ನನ್ನ ಗೌಡ ನನ್ನವರಾಗಲಿ ಎಂದು ಬೇಡಿಕೊಂಡಳು. 'ಕರಿಯಮ್ಮ' ದೇವರಿಗೆ ತನ್ನ ಗಂಡ ಸರಿಹೋಗಿ ನನ್ನ ಹತ್ತಿರ ಬಂದರೆ ಸೀರೆ ಕುಪ್ಪಸ ಕೊಡುವುದಾಗಿ ಹರಕೆ ಹಟತ್ತಳು.

ಊಟ ಮಾಡುತ್ತಲೇ ಮಗ ಗೌಡ ಮಾತು ತೆಗೆದ.

'ಅಪ್ಪ, ಇನ್ಮೇಲೆ ನಾನಿಲ್ಲಿ ಇದ್ದುಕೊಂಡೇ ಹೊಲಗದ್ದೆ ವ್ಯಾಪಾರ ನೋಡ್ಕೋತೀನಿ, ಅದರ ಬಗ್ಗೆ ನೀವೇನೂ ಯೋಚನೆ ಮಾಡ್ಬೇಡಿ' ಎಂದ.

ಬಸವೇಗೌಡರು ಮುಖ ಎತ್ತಿ ಮಗನನ್ನು ನೋಡಿದರು. ತಮ್ಮ ಕಿವಿಗಳನ್ನು ತಾವೇ ನಂಬಲಾಗಲಿಲ್ಲ. ಮಗ ಹೇಳುತ್ತಿರುವ ಮಾತು ನಿಜವೇನೋ ಎಂದು, ಅವನ ಮುಖ ನೋಡಿದರು. ಹೌದು ಗೌಡನ ಮಾತಿನಲ್ಲಿ ಪ್ರಾಮಾಣಿಕತೆ ಇತ್ತು. ಮಾತು ಕೇಳಿ ಆಶ್ಚರ್ಯವಾದರೂ ಇದ್ದಕ್ಕಿದ್ದಂತೆ ಈ ಮಾರ್ಪಾಟು ಸಂಶಯಪಡುವಂತಾಗಿಸಿತ್ತು. "ಇದು ಚಿನ್ನಮ್ಮನ ಪುಣ್ಯವೇ ಇಲ್ಲ ನನ್ನ ಪುಣ್ಯವೇ?" ಎಂದು ಆಲೋಚಿಸಿದರು. ಏನೇ ಆದರೂ ಈ ದಿನ ಮಗನಾಡಿದ ಮಾತು ನಿಜವೇ ಆಗಿತ್ತು. ಮನಸ್ಸಿಗೆ ತುಂಬಾ ಉಲ್ಲಾಸವಾಯಿತು. ಮತ್ತಷ್ಟು ಊಟ ಮಾಡಬೇಕೆನ್ನಿಸಿತು. "ಚಿನ್ನವ್ವ"ನನ್ನು ಕರೆದು ಇನ್ನೂ ಕೊಂಚ ಅನ್ನವನ್ನು ಬಡಿಸಿಕೊಂಡರು.

ಇಷ್ಟಕ್ಕೇ ಬಸವೇಗೌಡರು ಸುಮ್ಮನಾದರು. ಇನ್ನು ಕೆಣಕುವುದರಿಂದ ಕೆಡುತ್ತೆ ಅಂತ ಅನ್ನಿಸಿ ಹೊಟ್ಟೆ ತುಂಬಾ ಊಟ ಮಾಡಿ ಕೈ ತೊಳೆದು ಎದ್ದರು.

ಶುಕ್ರವಾರ ಚಿನ್ನಮ್ಮನಿಗೆ ಐದು ನೀರು. ನಸುಕು ಬೆಳಕಿನಲ್ಲಿ ಬೇಗ ಎದ್ದು ಸ್ನಾನ ಮಾಡಿದಳು. ಪೂಜೆ ಮಾಡುವ ಹಾಗಿರಲಿಲ್ಲ. ತನ್ನ ಗೌಡನನ್ನಾದರೂ ವಿಚಾರಿಸಿ ಬರೋಣವೆಂದು ಮಹಡಿ ಮೆಟ್ಟಲು ಹತ್ತಿದಳು. ಮೆಟ್ಟಿಲ ಮೇಲೇ ಬಾಡಿದ ಮಲ್ಲಿಗೆ ಹೂ ಚೆಲ್ಲಿತ್ತು. ಚಿನ್ನಮ್ಮನಿಗೆ ಏನೋ ಕಸಿವಿಸಿಯಾಯಿತು. ಅಷ್ಟರಲ್ಲಿ ಯಾರದೋ ಹೆಜ್ಜೆ ಸಪ್ಪಳ, ವ್ಯಕ್ತಿಯೊಂದು ಮೆಲ್ಲನೆ ಬಾಗಿಲು ತೆರೆದುಕೊಂಡು ದಡ ದಡ ಓಡಿದ ಶಬ್ಧವಾಯಿತು. ಮಹಡಿ ಇಳಿಯುವುದಕ್ಕೆ ಬೇರೊಂದು ದಾರಿ ಬೀದಿಯ ಕಡೆಯಿಂದ ಇತ್ತು. ಇನ್ನೂ ಅಷ್ಟಾಗಿ ಬೆಳಕಾಗಿರಲಿಲ್ಲ. ಇದೆಲ್ಲ ಏನೆಂದು ಯೋಚಿಸುತ್ತಿರುವಷ್ಟರಲ್ಲಿ ಜೋರಾಗಿ ಬೀದಿ ಬಾಗಿಲ ಸಪ್ಪಳವಾಯಿತು. ಮೆಟ್ಟಲೇರಿ ಗೌಡನ ಕೋಣೆಗೆ ಹೋಗಲಿಲ್ಲ. ಬದಲಾಗಿ ಬೀದಿ ಬಾಗಿಲು ತೆಗೆಯಲು ಬಂದಳು.

ಬಾಗಿಲಲ್ಲಿ ನಿಂತಿದ್ದು ಚೆಲುವಿ. "ಚೆಲುವಿ ಯಾಕೆ ಇಷ್ಟು ಬೇಗ ಬಂದಿದ್ದಾಳೆ" ಎಂದು ಮನಸ್ಸು ಪ್ರಶ್ನಿಸಿತು. ಕೇಳಿಯೇ ಬಿಡೋಣವೆನಿಸಿ,

"ಇದೇನ್ ಚೆಲುವಿ, ಮುಂಜಾವಿನಾಗೇ ಬಂದು ಬಿಟ್ಟಿದ್ದಿ? ಅಲ್ದೆ ಇವತ್ತು ಆದರೆ ಬರ್ತೀನಿ ಇಲ್ಲಾಂದ್ರೆ ಇಲ್ಲ ಹೊಟ್ಟೆ ನೋಯ್ತಿದೆ ಅಂತ ಹೇಳಿದ್ದೆ!" ಕುತೂಹಲದಿಂದ ಕೇಳಿದ ಪ್ರಶ್ನೆಯಾಗಿತ್ತು.

"ಏಳೆದ್ದೇನೋ ನಿಜ ಅವ್ವಾವ್ರೆ, ಹೊಟ್ಟೆ ನೋವು ಸ್ವಲ್ಪ ಕಮ್ಮಿಯಾಯ್ತು. ಭರಮಣ್ಣ ಔಷಧಿ ಕೊಟ್ಟ, ತಗೊಂಡೆ. ಜೊತೆಗೆ ಬುದ್ದೀವ್ರು ಇವತ್ತು ಒಲ್ದಾಗೆ ತುಂಬ ಕೆಲ್ಸ ಐತೆ, ನೀ ಬ್ಯಾಗ ಬಂದು ಗೌಡತಿಗೆ ಏನೇನ್ಬೇಕೋ ಕೆಲಸ ಎಲ್ಲ ಮಾಡಿ ಕೊಟ್ಬಿಟ್ಟು ಒಲಕ್ಕೆ ಬಂದ್ಬುಡಂತ ಏಳಿದ್ರು."

ಚಿನ್ನಮ್ಮ ಚೆಲುವಿಯನ್ನು ನೋಡಿದಳು. ನಿಜವಾಗಿ ಚೆಲುವೀನೇ. ಅವಳ ಮೈ ಮನಸ್ಸಿನ ತುಂಬಾ ಉತ್ಸಾಹ ಉಕ್ಕಿ ಹರೀತಿರೋ ಹಾಗಿತ್ತು. ಚಿನ್ನಮ್ಮನಿಗೆ ತನ್ನೊಂದಿಗಿನ ಪ್ರತಿಸ್ಪರ್ಧಿ ಎನಿಸಿತು. ದಿನಾ ಕೆಲಸಕ್ಕೆ ಬರುತ್ತಿದ್ದ ಚೆಲುವಿಯನ್ನು ಈಗ ಮತ್ತೆ ಮತ್ತೆ ನೋಡಿದಳು. ಎಂದೂ ನೋಡದಿರುವವಳಂತೆ ನೋಡಿದಳು. ಇವತ್ತು ಹಿಂದೆ ಎಂದೂ ಕಾಣದ ಚೆಲುವು ಚೆಲುವಿಯ ಮೈಯಿಂದ ತೊಟ್ಟಿಕ್ಕುತ್ತಿರುವಂತೆ ತೋರಿತು. ಕಣ್ಣು, ತುಟಿಗಳು, ಮೈಮಾಟದಲ್ಲಿ ಬಲವತ್ತರ ಆಕರ್ಷಣೆಯಿದೆ. "ನಮ್ಮಿಬ್ಬರ ನಡುವಿನ ಬಿರುಕಿಗೆ ಇವಳೂ ಏಕೆ ಕಾರಣವಿರಬಾರದು" ಎಂದು ಯೋಚಿಸಿದಳು.

ಶಾಮಣ್ಣನ ಹೆಂಡತಿ ಮೊನ್ನೆ ಬಾಳೆಲೆ ಕೇಳೋಕೆ ಬಂದಿದ್ದಾಗ, ಕೆರೆಯಾಚೆಗಿನ ಮಾವಿನ ತೋಪಿನಲ್ಲಿ ದಟ್ಟ ಮರಗಳ ನಡುವೆ ತನ್ನ ಗೌಡ ಮತ್ತು ಈ ಚೆಲುವಿಯನ್ನು ಕಂಡಂತಾಯಿತೆಂದು ಹೇಳಿದ್ದು ನಿಜವಿರಬಹುದೇ? ಸ್ವಲ್ಪ ಹೊತ್ತಿಗೆ ಮುಂಚೆ ಗೌಡನ ಕೋಣೆಯ ಕಡೆಯಿಂದ ಸುಳಿದಂತಾದ ಆಕಾರ ಚೆಲುವಿಯದೇ ಏಕಿರಬಾರದು? ಆ ಮಲ್ಲಿಗೆ? ಹೌದು ನಿಸ್ಸಂಶಯವಾಗಿ ಚೆಲುವಿಯೇ ಎಂದು ಮನಸ್ಸು ಕೂಗಿ ಹೇಳಿತು. ಇಷ್ಟು ನಸುಕಿನಲ್ಲಿ ಬಂದಿರುವ ಕಾರಣ ಅದೇ ಇರಬಹುದೇ. ಗೌಡನ ಬಳಿ ಮಲಗಿದ್ದು ಎದ್ದು ಬಂದಿರಬೇಕು ಎನಿಸಿತು.

ಎಷ್ಟು ಯೋಚಿಸಿದರೂ ಈ ಚೆಲುವಿಯೇ ತನ್ನ ಪ್ರತಿದ್ವಂದಿ ಎಂಬುದು ಖಚಿತವಾಗತೊಡಗಿತು. ಆದರೆ ಇದರಿಂದ ಮಾಡುವುದಾದರೂ ಏನು? ಗಟ್ಟಿಯಾಗಿ ಹೇಳುವ ಹಾಗಿಲ್ಲ. ಗೌಡನಿಗೆ ಅವಳು ಸತ್ತಂತೆಯೇ. ಇವಳನ್ನು ಕೆಲಸದಿಂದ ಬಿಡಿಸಿದರೆ ಹೇಗೆ?- ಎಂದು ವಿವೇಕದ ಆಲೋಚನೆ ಹೊಳೆಯಿತು. ಆಲೋಚನೆ ಒಳ್ಳೇದಾದ್ರೂ ಕಾರ್ಯಗತ ಮಾಡುವುದಕ್ಕೆ ಸಾಧ್ಯವಿಲ್ಲವಾಗಿತ್ತು. ಇದರಿಂದ ಗೌಡನ ಮನಸ್ಸು ಮತ್ತಷ್ಟು ಕೆಡಬಹುದು. ಇದಕ್ಕಿಂತ ಪ್ರಯತ್ನಪಟ್ಟು ಗೌಡನನ್ನು ಒಲಿಸಿಕೊಳ್ಳಬೇಕು. ಮೇಲೆ [illegible] ನಾನು ಹೆಣ್ಣು. ಅವನನ್ನು ಸಂತೋಷಪಡಿಸಬಲ್ಲೆ? ಅನ್ನುವುದನ್ನು

ತೋರಿಸಿಕೊಡಬೇಕು. ಆಗೇನಾದರೂ ಸರಿಹೋದೀತು, ಎಂದು ಅಂದುಕೊಂಡು ಚೆಲುವಿ ಇನ್ನೂ ಹಾಗೇ ನಿಂತಿರುವುದನ್ನು ನೋಡಿದಳು.

ಚೆಲುವಿ, ನೀನು ಈಗ ಮನೆಗೆ ಹೋಗು. ಸದ್ಯಕ್ಕೆ ನಿನಗೇನೂ ಕೆಲಸವಿಲ್ಲ. ಬೇಕಾರೆ ಏಳಿ ಕಳಿಸ್ತೇನೆ- ಎಂದಳು. ಚೆಲುವಿ ಚಿನ್ನಮ್ಮನ ಮಾತಿಗೆ ಹುಂಗುಟ್ಟಿ ಹೊರಟು ಹೋದಳು.

ಒಂದೆರಡು ತಿಂಗಳಾದ ಮೇಲೆ ಚೆಲುವಿ ಕೆಲಸಕ್ಕೆ ಬರೋದನ್ನ ನಿಲ್ಲಿಸಿದಳು. ಮೈಗೆ ಆಲಸ್ಯ ಅಂತ ಹೇಳಿ ಬಿಟ್ಟಳು. ಆದರೆ ಚೆಲುವಿಯಲ್ಲಿ ಆಗುತ್ತಿದ್ದ ಪರಿವರ್ತನೆ ಉಳಿದವರೆಲ್ಲ ಗಮನಿಸಿದರು. ಜೊತೆ ಆಳುಗಳು ಬೇರೆಯವರ ಗದ್ದೆ ಮನೆ ಆಳುಗಳಿಗೆಲ್ಲ ಕಿವಿಯಿಂದ ಕಿವಿಗೆ ಬಿದ್ದು ಗೌಡರ ಮತ್ತು ಚೆಲುವಿಯ ವಿಷಯ ಪುಕಾರಾಯಿತು.

ಹರಕು ಮುರುಕು ಸೀರೆ ಉಡುತ್ತಿದ್ದ ಚೆಲುವಿ ಈಗ ಚೆನ್ನಾಗಿರುವ ಸೀರೆ ಉಡುವುದಿರಲಿ ಅಲ್ಪ ಸ್ವಲ್ಪ ಚಿನ್ನದ ಒಡವೆಗಳೂ ಮೈ ಅಲಂಕರಿಸದ್ದುವು. ಎಲ್ಲಕ್ಕಿಂತ ಚೆನ್ನಾಗಿ ಕಂಡದ್ದು ಕೆಂಪಿನ ಓಲೆ ಚಿನ್ನಮ್ಮನ ಕಿವಿಯಲ್ಲಿ ನೋಡಿದ್ದವರಿಗೆ ಗುರುತು ಹಚ್ಚುವುದು ಕಷ್ಟವೇನೂ ಆಗಲಿಲ್ಲ. ಚೆಲುವಿ ಕಿವಿಗೆ ಬಂದದ್ದು ಹೀಗೆ,

ಚಿನ್ನಮ್ಮನ ಕಿವಿಯ ಓಲೆಯನ್ನು ನೋಡಿದಾಗಿನಿಂದಲೂ ಚೆಲುವಿಯ ಕಣ್ಣು ಕರುಬುತ್ತಿತ್ತು. ತುಂಬಾ ಚೆನ್ನಾಗಿದೆಯೆಂದು ಅದನ್ನು ಮೆಚ್ಚಿದ್ದಳು. ಆ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಕ್ಕೆ "ಚಿನ್ನಮ್ಮ" ನಿನ್ನ ಗಂಡನ್ನ ಕೇಳಿ ಮಾಡಿಸಿಕೋ ಎಂದು ಹೇಳಿದ್ದಳು. ಆ ಪ್ರಸಂಗ ಅಷ್ಟಕ್ಕೇ ಮುಗಿಯಿತು. ಕೆಂಪಿನ ಓಲೆ ಅತ್ತೆಯವರದು, ಎಂದೋ ಒಮ್ಮೆ ಹಾಕಿಕೊಂಡು ತೆಗೆದಿರಿಸುತ್ತಿದ್ದಳು.ಆದರೆ ಈ ಒಂದು ತಿಂಗಳಿಂದ ಆ ಓಲೆ ಕಾಣಲಿಲ್ಲ. ಹುಡುಕಾಡಿದರೆ ಸಿಕ್ಕಲಿಲ್ಲ. ಚಿನ್ನಮ್ಮನಿಗೆ ನೆಮ್ಮದಿಯಿಲ್ಲದೆ ಹೋಯಿತು. ಬಸವೇಗೌಡರಿಗೆ ಓಲೆ ಹೋದದ್ದು ಬಾಧೆಯಿಲ್ಲ. ಹೆಂಡತಿಯ ನೆನಪಿಗೆ ಉಳಿದಿದ್ದುದು ಅದು ಒಂದೇ. ಮೊಟ್ಟ ಮೊದಲ ಬಾರಿ ಮಡದಿಗೆ ಮಾಡಿಸಿಕೊಟ್ಟ ಪ್ರೀತಿಯ ಕಾಣಿಕೆ. ಅದಕ್ಕೇ ಅವರಿಗೆ ಅಷ್ಟು ನೋವಾದ್ದು. ಆದರೆ ಆ ನೋವಿನಲ್ಲಿ ರಾಮೇಗೌಡ ಬೇರೆಯಾಗಿಯೇ ಉಳಿದ. ಬರೀ ಒಂದು ಜೊತೆ ಓಲೆಗೆ ಏನೋ ಮುಳುಗಿ ಹೋದಂಗೆ ಆಡುತ್ತಿದ್ದೀರಿಂತ ಪರೋಕ್ಷವಾಗಿ ಬೈದು ಹೋಗಿದ್ದ. ಆದರೆ ಆಮೇಲೆ ಊರವರಿಂದ ಕೇಳಿದ ಗುಸು ಗುಸು ಮಾತು. ಈಗ ನೋಡಿದರೆ ಧೈರ್ಯವಾಗಿ ಚೆಲುವಿ ಅದನ್ನು ಹಾಕಿಕೊಂಡು ಚಿಕ್ಕ ಧಣೀರು ಕೊಡಿಸಿಕೊಟ್ಟರು ಅನ್ನೋದನ್ನೂ ಪ್ರಚಾರ ಮಾಡೋದಿಕ್ಕೆ ಶುರು ಮಾಡಿದ್ದಳು. ಗೌಡನ್ನ ಕೇಳಿದ್ದಕ್ಕೆ, ಹೌದು ಕೊಟ್ಟೆ ನನ್ನ ಅಮ್ಮನ ವಸ್ತು ನಾನು ಯಾರಿಗಾದರೂ ಕೊಡ್ತೇನೆ, ನೀನ್ಯಾರು ಕೇಳೋಕೆ ಅಂತ ಬಾಯಿ ಬಡಿದಿದ್ದ. ಹೀಗಾಗಿ ತಿಳಿದೂ ತಿಳಿದೂ ಚಿನ್ನಮ್ಮ ಸುಮ್ಮನೆ ಬಾಯಿಗೆ ಬೀಗ ಹಾಕಿಕೊಂಡಿದ್ದಳು.

ಇ-375

ಗೌಡನಿಗೆ ಚೆಲುವಿ ತನ್ನ ಬಸಿರಿನ ವಿಷಯ ಹೇಳಿದಾಗ ಬೆಚ್ಚಿಬಿದ್ದ. ಗೌಡನಿಗೆ ಅನಿಸಿತ್ತು. ಈ ಚೆಲುವಿ ಭಾಳ ಸಲುಗೆ ತಗೋತಿದ್ದಾಳೇಂತ. ನೇರಾಗೇ ಇದು ರಾಮೇಗೌಡನ ಮಗ ಅಂತ ಬೇಕು ಬೇಕಂತ್ಲೆ ಡಂಗೂರ ಸಾರಿಕೊಂಡು ಬರ್ತಾಳೆ. ಆಳುಗಳ ಜೊತೆಯಲ್ಲಿ ಚೆಲುವಿಯ ಅಂತಸ್ತು ಬೆಳೆದಿತ್ತು. "ರಾಮಣ್ಣಗೌಡರು ಮಡಿಕೊಂಡವ್ರೆ" ಅನ್ನೋದು ಎಲ್ಲರಿಗೂ ಗೊತ್ತಿತ್ತು. ಚೆಲುವಿಯ ತಲೇನೆ ನಿಲ್ಲುತ್ತಿರಲಿಲ್ಲ. ಉಳಿದ ಆಳುಗಳ ಮೇಲೆ ದರ್ಪ ಚಲಾಯಿಸುವುದಕ್ಕೂ ಪ್ರಯತ್ನಿಸಿದಳು. ಕೆಲಸಕ್ಕೆ ಎಷ್ಟೋ ದಿವಸದಿಂದ ಬಂದಿರಲಿಲ್ಲ. ಚೆಲುವಿ ಹಟ್ಟಿ ಪಕ್ಕದಲ್ಲಿರುವವರು ಗುಟ್ಟಾಗಿ ಪಿಸುಗುಟ್ಟಿದರು, ಚೆಲುವಿ ನೋವು ತಿಂತಿದ್ದಾಳೆ ಅಂತ. ಎಲ್ಲರೂ ಊಹಿಸಿದ್ದ ವಿಷಯವಾದ್ದರಿಂದ ಯಾರೂ ಆಶ್ಚರ್ಯ ಪಡಲಿಲ್ಲ.

ರಾತ್ರಿ ಗುಟ್ಟಾಗಿ ಗೌಡ ಎದ್ದು ಚೆಲುವಿ ಮನೆಗೆ ಹೋದ. ಹಟ್ಟಿ ತುಂಬಾ ಜನ ತುಂಬಿದ್ದರು. ಎಲ್ಲಾ ನೋಡ್ತಾರೇಂತ ಅಲ್ಲಿಂದ ಮತ್ತೆ ಕಾಲ್ತೆಗೆದು ಕೆರೆ ಏರಿ ಉದ್ದಕ್ಕೂ ನಡೆದುಕೊಂಡು ಹೋಗಿ ಹನುಮಂತರಾಯನ ಗುಡಿ ಜಗುಲಿ ಮೇಲೆ ಕೂತ.

ಯಾವೊತ್ತೂ ಗೌಡನ ಮನಸ್ಸು "ಚಿನ್ನಮ್ಮ"ನ ವಿಚಾರ ಯೋಚಿಸಿರಲಿಲ್ಲ. ಇವತ್ತು "ಚಿನ್ನಮ್ಮ" ಗೌಡರ ಕಣ್ಣಲ್ಲಿ ನಿಂತಳು. ಮನಸ್ಸಿನೊಳಗೆ ಇಳಿದಳು. ಕತ್ತು ಹಿಸುಕಿ ಎಸೆದ ಭಾವನೆಗಳನ್ನು ಬದುಕಿಸಿದಳು. ಅರಿವಿಲ್ಲದೆ ಗೌಡನ ಬಾಯಿಂದ "ಚಿನ್ನಿ" "ಚಿನ್ನಿ" ಅನ್ನುವ ಎರಡು ಮಾತು ಹೊರಟಿತು. ಚೆಲುವಿ ಚಿನ್ನಿ ಮನಸ್ಸಿನಲ್ಲಿ ಇಬ್ಬರೂ ಸುಳಿದಾಡಿದರು.

ಎತ್ತಿನ ಗಾಡಿ ಸದ್ದಾಯಿತು. ಗೌಡನ ಆಲೋಚನೆಗಳು ಮುಗಿದಿರಲಿಲ್ಲ. ಎತ್ತಿನಗಾಡಿ ಹತ್ತಿರ ಬಂತು. ಗಾಡಿಗೆ ತಗುಲಿಸಿದ್ದ ಲಾಟೀನ್ ದೀಪದ ಬೆಳಕು ಸ್ವಲ್ಪವಾಗಿ ಗೌಡನ ಮೇಲೆ ಬಿತ್ತು. ಭರಮಣ್ಣ ಆ ಬೆಳಕಿನಲ್ಲಿ ಅಷ್ಟು ಹೊತ್ತಿನಲ್ಲಿ ಕಟ್ಟೆಯ ಮೇಲೆ ಕೂತಿರುವ ವ್ಯಕ್ತಿ ಯಾರೆಂದು ಬಗ್ಗಿ ಗಮನಿಸಿ ನೋಡಿದ ಗೌಡ, ಊರ ಧಣಿ ಬಸವೇಗೌಡರ ಮಗ ರಾಮೇಗೌಡರು. ಗಾಡಿಯಿಂದಲೇ ಕೂಗಿದ "ಚಿಕ್ಕ ಧಣೇರ"!

ಕೂಗಿನಿಂದ ಎಚ್ಚೆತ್ತವನಾಗಿ ಕೇಳಿದ–ಯಾರದು?

"ನಾನು ಭರಮಣ್ಣ. ಪ್ಯಾಟೆಯಿಂದ ಸಾಮಾನ ತರಬೇಕಿತ್ತು. ತಡವಾಗೋಯ್ತು. ಧಣೇರೆ ಇದೇನು ನೀವೊಬ್ರೇ ಇಲ್ಲಿ. ಇಷ್ಟು ಹೊತ್ತಿನಾಗೆ ಬಂದು ಕುಂತೀರಿ. ಮೈಗೆ ಚಂದಾಕಿಲ್ವ?"

ಗೌಡನಿಗೆ ಏನುತ್ತರ ಕೊಡುವುದೆಂದು ತೋಚಲಿಲ್ಲ. ಆದರೂ ಏನಾದರೂ "ಹೇಳ್ಬೇಕಲ್ಲ" ಅಂದುಕೊಂಡ.

"ಅಂಥದ್ದೇನೂ ಇಲ್ಲ ಭರಮ, ಯಾಕೋ ಸರಿಯಾಗಿ ನಿದ್ದೆ ಬರಲಿಲ್ಲ. ಹಾಗೇ ದಾರಿಗುಂಟ ನಡೀತಾ ಬಂದೆ. ಕಾಲು ಸೋತಿತು. ಅದಕ್ಕೆ ಹಾಗೇ ಇಲ್ಲಿ ಸ್ವಲ್ಪ ಹೊತ್ತು ಕೂತುಕೊಂಡೆ" ಅಂತ ಹೇಳಿದ.

ಆದರೆ ಆ ಮಾತು ಅಷ್ಟು ಸಮಾಧಾನಕರವಾಗಿರಲಿಲ್ಲ. ಭರಮನಿಗೆ ಸಂದೇಹ ಬಂತು ತೋರಿಸಿಕೊಳ್ಳಲಿಲ್ಲ.

"ಬನ್ನಿ ಧಣೇರೆ ಮನೆತಾವ ಇಳಿಸಿ ಓಯ್ತೇನೆ" ಅಂದ. ಗೌಡ ಪ್ರತಿ ಆಡಲಿಲ್ಲ. ಸುಮ್ಮನೆ ಎದ್ದು ಬಂದು, "ಹಾಗೆ ಮಾಡು ಭರಮ, ಮನೇತಾವ ಇಳಿಸಿ ಹೋಗು" ಗಾಡಿ ಹೊರಟಿತು. ರಾತ್ರಿಯ ಮೌನವನ್ನು ಕದಡಿದ ಸದ್ದೆಂದರೆ ಕೊರಳಿಗೆ ಕಟ್ಟಿದ್ದ ಗೆಜ್ಜೆ, ಗಂಟೆ ಶಬ್ದ ದಾರಿಯಲ್ಲಿ ಯಾರೂ ಮಾತಾಡಲಿಲ್ಲ.

ಭರಮನಿಗೂ ಗೌಡ, ಚೆಲುವಿಯ ವಿಷಯ ತಿಳಿದಿತ್ತು. ಹೆಂಡತಿ ಗಂಗಿ ಭರಮನಿಗೆ ಸುದ್ದಿ ಮುಟ್ಟಿಸಿದ್ದಳು. ಚೆಲುವಿಗೆ ಒಂದೆರಡು ದಿವ್ಸದಾಗೆ ಮಗು ಉಟ್ಟತ್ತೈತೆ, ಅಂತ ಹೇಳಿದ್ದಳು. ಅದರ ಪ್ರಕಾರ ಇವತ್ತು ಆಗಿದ್ದರೂ ಆಗಿರಬಹುದು. ಚೆಲುವಿ ಹಟ್ಟಿಗೆ ಈ ಹನುಮಂತರಾಯನ ಗುಡಿ, ಹತ್ತಿರವೂ ಇತ್ತು. ಭರಮ ಲೆಕ್ಕಾಚಾರ ಹಾಕಿದ.

ಮನೆ ಬಂತು, ಗೌಡ ಭರಮನಿಗೆ ನಿಲ್ಲಿಸುವುದಕ್ಕೆ ಹೇಳಿದ. ಗೌಡ ಇಳಿದು ಭರಮನಿಗೆ ನಾಳೆ ಬೆಳಗ್ಗೆ ಬಂದು ನೋಡುವುದಕ್ಕೆ ಹೇಳಿ; ಅಂಗಳ ದಾಟಿ ಒಳಗೆ ಹೋದ. ಹಿತ್ತಲಿನಿಂದ ಹತ್ತಿ ಒಳಗೆ ಹೋಗೋಣವೆಂದೆನ್ನಿಸಿತು. ಮರುಕ್ಷಣದಲ್ಲಿಯೇ ತನ್ನಂಥವನು ಕಳ್ಳತನದಿಂದ ಹೋಗುವುದು ಅಪಮಾನವೆಂದೆನಿಸಿ ಬಾಗಿಲು ತಟ್ಟಿದ. ಹೊರಗೆ ನಾಯಿಗಳು ಒಂದೇ ಸಮನೆ ಬೊಗಳುತ್ತಿದ್ದವು. ಯಾರಿಗೂ ಎಚ್ಚರವಾದ ಹಾಗೆ ತೋರಲಿಲ್ಲ. ಮತ್ತೊಮ್ಮೆ ಜೋರಾಗಿ ತಟ್ಟಿದ. ಸಾಮಾನ್ಯವಾಗಿ ಹಾಲಲ್ಲೇ ಹಗ್ಗದ ಮಂಚದ ಮೇಲೆ ಮಲಗುತ್ತಿದ್ದ, ಇತ್ತೀಚೆಗೆ ವಿಪರೀತ ಉಬ್ಬಸ ಕೆಮ್ಮುಗಳಿಂದಾಗಿ ನಿದ್ದೆ ಹತ್ತುತ್ತಿರಲಿಲ್ಲ, ಹಾಗಾಗಿ ಎಚ್ಚರಿಕೆಯಿಂದಲೇ ಇರುತ್ತಿದ್ದರು. ಈಗಲೇ ಇನ್ನೂ ರೆಪ್ಪೆ ಹತ್ತಿತು. ಬಾಗಿಲ ಬಡಿತ ಹೆಚ್ಚಾದಾಗ ಬಸವೇಗೌಡರು ಎಚ್ಚರಗೊಂಡರು. ಜೊತೆಗೆ ಕೆಮ್ಮು ಶುರುವಾಯಿತು. ಕೆಮ್ಮಿದ ಶಬ್ದದಿಂದ ಗೌಡ, "ಅಪ್ಪ" ಎಚ್ಚೆತ್ತಿದ್ದಾರೆ ಅಂದುಕೊಂಡ. ಬಸವೇಗೌಡರು ತಡವರಿಸುತ್ತಲೇ ಎದ್ದು ಬಂದು ಬಾಗಿಲ ಚಿಲಕ ತೆಗೆದು ನಿದ್ದೆಗಣ್ಣಲ್ಲೇ ಮಗನನ್ನು ನೋಡಿದರು. "ಇಷ್ಟೊತ್ತಿನಾಗೆ ಎಲ್ಲೋಗಿದ್ದೆ ರಾಮ"– ಎಂದು ಕೇಳಿದರು. ಗೌಡ ಕೇಳಿಯೂ ಕೇಳದವನಂತೆ, ನೀ ಸುಮ್ಮನೆ ವೋಗಿ ಮಲಕ್ಕೊ, ಬೆಳಗ್ಗೆಗೆಲ್ಲ ಮಾತು" ಎಂದು ಸರಸರನೆ ತನ್ನ ಕೋಣೆಯ ಕಡೆಗೆ ಹೆಜ್ಜೆಯಿಟ್ಟ.

ಕೋಣೆ ಒಳಗಡೆ ಯಾರೋ ಇದ್ದ ಹಾಗಿತ್ತು. ಯಾವಾಗಲಾದರೂ ಚಿನ್ನಮ್ಮ ಹಾಸಿಗೆ ತೆಗೆದು ಶುಚಿ ಮಾಡೋಕೆ ಬರುತ್ತಿದ್ದುದುಂಟು. ಆದರೆ ಇಷ್ಟು ಹೊತ್ತಿನಲ್ಲಿ

ಯಾವಾಗಲೂ ಯಾರೂ ತನ್ನ ಕೋಣೆಯನ್ನು ಪ್ರವೇಶಿಸುತ್ತಿರಲಿಲ್ಲ. ಚೆನ್ನಮ್ಮನೇ ಇರಬೇಕೆಂದುಕೊಂಡ. ಚೆನ್ನಮ್ಮ ಈ ದಿನ ಮೊಂಡು ಧೈರ್ಯ ಮಾಡಿ ಕೋಣೆಯನ್ನು ಪ್ರವೇಶಿಸಿ ಗೌಡನ ಬರುವಿಗಾಗಿ ಕಾದು ಕುಳಿತಳು. ನಿದ್ದೆಯಿಂದ ಕಣ್ಣು ಎಳೆದುಕೊಂಡು ಹೋಗುತ್ತಿತ್ತು. ರೆಪ್ಪೆ ಭಾರವಾಗಿತ್ತು. ಆದರೂ ತಡೆದುಕೊಂಡು ಕಾದು ಕುಳಿತಳು. ಇವತ್ತು ಯಾವುದೂ ನಿರ್ಧಾರವಾಗಬೇಕಿತ್ತು. ಗೌಡ ತನ್ನವನಾಗಲೇಬೇಕು, ಇಲ್ಲ ಊರ ಕೆರೆಗೆ ಹಾರಬೇಕು. ಈ ನಿರ್ಧಾರಕ್ಕೆ ಬಂದೇ ಇಂಥ ಸಾಹಸಕ್ಕೆ ನುಗ್ಗಿದಳು. ಗೌಡನನ್ನು ಎದುರಿಸುವ ಸಾಹಸಕ್ಕೆ ಹೋಗಿರಲಿಲ್ಲ. ಗೌಡನಿಗಂತೂ ಹೆಂಡತಿಯೆಂದರೆ ಲಕ್ಷ್ಯವೇ ಇಲ್ಲ. ಅಪರಿಚಿತರಂತೆ ಒಬ್ಬರಿಗೊಬ್ಬರು ಒಂದು ಮನೆಯಲ್ಲಿದ್ದರು. ಚರಕು ಬರಕು ಎಂದು ಗಂಡನ ಚಪ್ಪಲಿ ಶಬ್ದ ಕೇಳಿ ಹಾಸಿಗೆಯ ಮೇಲೆ ಕುಳಿತ ಚೆನ್ನಮ್ಮ ಎದ್ದಳು. ಎದೆ ಡವಡವಗುಟ್ಟುತ್ತಿತ್ತು. ಪ್ರಸ್ತದ ರಾತ್ರಿಯಂತೆಯೇ ಕೋಣೆಯನ್ನು ಅಲಂಕರಿಸಿಕೊಂಡಿದ್ದಳು. ಎದ್ದು ಬಂದು ಬಾಗಿಲು ತೆಗೆದಳು. ಸೂಚ್ಯವಾಗಿ ಗೌಡನಿಗೆ ಆಹ್ವಾನ. ಗೌಡ ಒಂದೊಂದು ಹೆಜ್ಜೆ ಮುಂದೆ ಇಡುವಲ್ಲಿ. ಹೋಗುವುದೋ ಬೇಡವೇ ಎಂದು ತಲೆ ಯೋಚಿಸಿದರೂ. ಮನಸ್ಸು ಅವನನ್ನು ದೂಡುತ್ತಿತ್ತು; ಮುಂದು ಮುಂದಕ್ಕೆ. ಹೊಸ್ತಿಲಲ್ಲಿ ನಿಂತ ಗೌಡನ ಬಳಿಗೆ ಬಂದ ಚೆನ್ನಮ್ಮ ಗೌಡನ ಕಾಲಿಗೆ ಬಿದ್ದಳು. ಹಿಂಜರಿದು ನಿಂತ. ಕುಳಿತೇ ಇದ್ದ ಚೆನ್ನಮ್ಮನನ್ನು ಎಬ್ಬಿಸಲು ಕೈ ಮುಂದೆ ಬಂದು ಹಿಂದೆ ಸರಿಯಿತು. ಎಷ್ಟು ಹೊತ್ತು ಈ ದೃಶ್ಯವಿತ್ತೋ! ಗೌಡನಿಗೆ ತಡೆಯಲಾಗಲಿಲ್ಲ. ಮದುವೆಯ ದಿನಗಳು ನೆನಪಾದವು. ಚೆನ್ನಿಯ ಮುಗ್ಧ ಮುಖ ನೆನಪಾಯಿತು. ಆದರೆ ಈಗ ನೋಡಿದ. ಚೆನ್ನಿ ಎಷ್ಟು ಸೊಂಪಾಗಿ ಬೆಳೆದವಳೇ! ಮೊದಲಿನ ಹಾಗಿಲ್ಲ. ಈಗ ಹೆಂಗಸಂತೆ ಇದ್ದಾಳೆ. ಗೌಡನ ಸಂಯಮ ಮುರಿಯತೊಡಗಿತು. ಪ್ರಬುದ್ಧ ಚೆನ್ನಿ ಗೌಡನ ದುರ್ಬಲತೆಯನ್ನು ಅರಿತಳು. ಕಣ್ಣುಗಳಿಂದಲೇ ಗೌಡನನ್ನು ಆಹ್ವಾನಿಸಿದಳು. ಮೋಹಕ ಭಂಗಿಯಲ್ಲಿ ನಿಂತ ಚೆನ್ನಿಯನ್ನು ಬಿಗಿದಪ್ಪಿದ. ಚೆನ್ನಿ ಅವನ ಅಪ್ಪುಗೆಯಲ್ಲಿ ಏನೋ ಹೊಸತನವನ್ನು ಅನುಭವಿಸಿದಳು. ವಂಚಿತ ಮಾದಕ ಅನುಭವ ಅವಳ ಆಸೆಯನ್ನು ಮತ್ತಷ್ಟು ಕೆರಳಿಸಿದುವು. ಗೌಡನ ಸಂತೋಷಕ್ಕೆ ಸಹಕರಿಸಿದಳು. ಗೌಡನ ಮನಸ್ಸಿನಲ್ಲಿ ರಾಸವಾಡುತ್ತಿದ್ದ ಹೆಣ್ಣುಗಳೆಲ್ಲ ಕರಗಿ ಮರೆಯಾಗುತ್ತಿರುವಂತೆನಿಸಿತು. ಬುಗುರಿಯಂತೆ ಸುತ್ತುತ್ತಿರುವ ಅನುಭವ. ಎಷ್ಟೊಂದು ಹೆಣ್ಣುಗಳನ್ನು ಕಂಡಿಲ್ಲ ಗೌಡ! ಯಾರಲ್ಲಿಯೂ ಕಾಣದ ತೃಪ್ತಿ! "ಚೆನ್ನಿ" ಎಂದು ಕರುಳಾಳದಿಂದ ಕೂಗಬೇಕೆನಿಸಿತು. ಗೌಡ ತನಗೆ ಸೋತಿದ್ದಾನೆ. ಇನ್ನು ಖಂಡಿತ ತನ್ನನ್ನು ಬಿಡುವುದಿಲ್ಲ. ಕಪ್ಪು ಬದುಕಿನಲ್ಲಿ ಬಂದ ಬೆಳಗೆರೆ. ಬಂಜರು ಭೂಮಿಯಲ್ಲಿ ಮೊಳಕೆ ಬೆಳೆ. ಗೌಡನ ದೃಷ್ಟಿಯಲ್ಲಿ "ಬದುಕ್ತೀನೆ" ಎನ್ನುವ ಭಾವ ಚೆನ್ನಿಯನ್ನು ಮುತ್ತಿತು. ಇಷ್ಟು ವರ್ಷ ಎಂಥ ಅನುಭವದಿಂದ ವಂಚಿತಳಾಗಿದ್ದೆ ಎಂದುಕೊಂಡಳು ಚೆನ್ನಿ.....

* * *

ಕೃಶವಾಗಿ ಮಂಚದ ಮೇಲೆ ಮಲಗಿದ್ದ ಗೌಡನತ್ತ ನೋಡಿದಳು. ಪಟ್ಟಣದಿಂದ ದೊಡ್ಡ ದೊಡ್ಡ ಡಾಕ್ಟರು ಬಂದು ಚಿಕಿತ್ಸೆ ನೀಡುತ್ತಿದ್ದಾರೆ. ಗೌಡನಿಗೆ ಹೆಣ್ಣಿನ ಸಹವಾಸವೇ ಕೂಡದು. ತನ್ನ ಭಾಗ್ಯದ ಕಣ್ಣು ತೆರೆದಿದೆ ಎಂದುಕೊಂಡ ಚಿನ್ನಿಗೆ ಈ ಆಘಾತ ಸಹಿಸುವುದಕ್ಕೆ ಮೀರಿದ್ದಾಗಿತ್ತು. ಆದರೆ ವಸ್ತು ಸ್ಥಿತಿ ಒಪ್ಪಿಕೊಳ್ಳಲೇಬೇಕಾಗಿತ್ತು.

ಗೌಡ ಚಿನ್ನಿಯ ಸಂಬಂಧ ಏನಿದ್ದರೂ ಒಂದು ಸತ್ತ ಮಗುವಿನ ಸೂತಕದ್ದಾಗಿತ್ತು. ಇನ್ನು ಮುಂದಾದರೂ ವಂಶದ ಬಳ್ಳಿ ಚಿಗುರುತ್ತೆಂದು ಭಾವಿಸಿದ್ದ ಬಸವೇಗೌಡನಿಗೆ ಮಗನ ಪರಿಸ್ಥಿತಿಯಿಂದ ಆಶಾಭಂಗವಾಯಿತು. ಇದೇ ಕೊರಗಿನಲ್ಲಿ ಹೋದ ವರುಷ ತೀರಿಕೊಂಡ. ಡಾಕ್ಟರ ಮಾತು ಮೀರಿ ನಡೆದರೆ ಗಂಡ ಹೆಂಡರಿಬ್ಬರಿಗೂ ಅಪಾಯವಿದೆಯೆಂಬ ಎಚ್ಚರಿಕೆಯ ಮಾತು ಭೀತಿಯ ಕಡಿವಾಣವನ್ನು ಹಾಕಿತ್ತು.

ಗೌಡನಲ್ಲಿ ಯೋಜನದಂತರದ ಬದಲಾವಣೆಯಾಗಿತ್ತು. ಹುಲಿಯಂತಹ ವ್ಯಕ್ತಿ ಹಸುವಾಗಿದ್ದ. ಕಲ್ಲು ಕರಗುವ ಮೇಣವಾಗಿತ್ತು. ಗಂಡು ಗೌಡನ ಕಣ್ಣು ನೀರೂಟೆಗಳಾಗಿದ್ದವು. ಹೆದರಿ ಸಾಯುತ್ತಿದ್ದ ಚಿನ್ನಿ ಈಗೀಗ ಆತ್ಮೀಯತೆ ಬೆಳೆಸಿಕೊಂಡಿದ್ದಳುಯ. ಮೊದಲೇ ಮೂಟೆ ರೋಗಗಳಿದ್ದ ಗೌಡನಿಗೆ ಫೆರಾಲಿಸಿಸ್ ಬೇರೆ.

ದಿನ ಬೆಳಗಾದರೆ ದೇವರಲ್ಲಿ ಹರಕೆ ಹೊರುವುದಷ್ಟೇ ಚಿನ್ನಿಯ ಪಾಲಿಗೆ. ಇದ್ದ ಬದ್ದದ್ದೆಲ್ಲ ಗೌಡನ ಚಿಕಿತ್ಸೆಗೆ ಖರ್ಚಾಗುತ್ತಿತ್ತು. ನೋಡಿಕೊಳ್ಳುವುದಕ್ಕೆ ಯಾರೂ ಇಲ್ಲದೆ, ಗವಿಣಿ ವಸೂಲಾಗದೆ, ಗೇಣಿದಾರರಿಗೆ ಹೇಳುವವರು ಕೇಳುವವರು ಇಲ್ಲದೆ ಮನಸ್ವಿ ವ್ಯವಹರಿಸುತ್ತಿದ್ದರು.

ಇದ್ದದ್ದು ಬರೀ ಕೊಂಪೆಯೊಂದೇ. ಗೌಡನಿಗೆ ವಾಸಿಯಾದರೆ ಸಾಕು. ಗಂಜಿ ಬದುಕಾದರೂ ಬದುಕಬಹುದಾಗಿತ್ತು. ಆದರೆ ಆದರೆ... ತನ್ನ ಕುಂಕುಮ ಬಲ ಕುಸಿಯುತ್ತಿತ್ತು. ದೊಡ್ಡದಾಗಿ ಪ್ರಪಾತದ ಬಾಯೊಂದು ತೆರೆದಂತಾಯಿತು. ಗೌಡ ನರಳುತ್ತಲೇ, 'ಚಿನ್ನಿ' ಎಂದು ಕರೆದ. ಆ ಕೂಗಿನಲ್ಲಿ ಯುಗ ಯುಗದಿಂದ ಸಂಚಿತ ಪ್ರೀತಿಯ ಮಾರ್ದನಿಯಿತ್ತು. ಮರಣಾಂತಿಕ ವೇದನೆಯ ಮರೆಯಿಂದಲೂ ಗೌಡನ "ಪ್ರೇಮದ" ಬೆಳಕು ಚಿನ್ನಿಯ ಮುಖವನ್ನು ಬೆಳಗಿಸಿತು. ಆ ಕರೆ ಮಧುರ ಸ್ಮೃತಿಯಾಗಿ ಮಾತ್ರ ಉಳಿಯುವುದೆಂಬ ಪರಿವೆ ಚಿನ್ನಿಗೆ ಬರುವ ಸಾಧ್ಯತೆಯೂ ಇರಲಿಲ್ಲ.

ಕಣ್ಣೀರ ಕೋಡಿ ಹರಿಸಿ ಕರೆಗಟ್ಟಿದ್ದ ಮುಖದ ಮೇಲೊಂದು ತಿಳಿಯಾದ ನಗೆಮಿಂಚು ಮೂಡಿ ಮರೆಯಾಯಿತು.

* * *

ಒಳದನಿ

ರಾತ್ರಿಯೆಲ್ಲ ಹಾಳಾದ್ದು ನಿದ್ದೇನೆ ಬರಲಿಲ್ಲ. ತಲೆ ಚಚ್ಚಿಕೊಂಡರೂ ಒಂದು ತೂಕಡಿಕೇನೂ ಇಲ್ಲ. ಪುಸ್ತಕವಾದರೂ ಕೈಗೆ ತೆಗೆದುಕೊಂಡರೆ ನಿದ್ದೆ ಬರುತ್ತೇನೋ ಎಂದುಕೊಂಡು ಜಾಯ್ಸ್‌ನ "ಯೂಲಿಸಸ್" ಕಾದಂಬರಿಯನ್ನು ಓದುವುದಕ್ಕೆ ಪ್ರಯತ್ನಪಟ್ಟೆ. ಆದರೆ ದರಿದ್ರದ್ದು, ಓದಿದರೆ ಅರ್ಥವೇ ಆಗುತ್ತಿಲ್ಲ. ಕಣ್ಣು ಅಕ್ಷರಗಳ ಮೇಲೆ ಇರುವುದಾದರೂ ತಲೆ ತುಂಬಾ ಈಡಿಯಟ್ ಆಲೋಚನೆಗಳು– ಸುಮ್ಮಿ ಜೀವನದ ರಸಾನೆಲ್ಲಾ ಹೀರಿಕೊಂಡು ಈಗ ಹಣ್ಣಾಗಿರಬಹುದೇ! ಇಲ್ಲಾ ಇನ್ನೂ ಹೊಸ ರಸಿಕತನದ ಹೋಳುಗಳನ್ನು ಚಪ್ಪರಿಸುತ್ತಿರಬಹುದೇ! ಹೌದು ದೇವಿಗೆ ಮದುವೆಯಾದ ಗಳಿಗೆಯಿಂದ ಗಾಣದ ಎತ್ತಾಗಿದ್ದಾಳೆ. ಎಷ್ಟು ಲವಲವಿಕೆಯಿಂದ ಕಾಲೇಜು ತುಂಬೆಲ್ಲಾ ಅವಳೇ ಗಾಳಿಯಾಗಿ ಬೀಸುತ್ತಿದ್ದಳು. ಅಪ್ಪ ಚೆನ್ನಾಗಿ ದುಡ್ಡು ಕೊಡುತ್ತಿದ್ದ. ಲಂಗು ಲಗಾಮಿಲ್ಲದೆ ಎಲ್ಲಿಗಂದರೆ ಅಲ್ಲಿಗೆ ಸುಂಟರಗಾಳಿಯಾಗಿ ಹೊರಟು ಹೋಗಿ ಮಜ ಮಾಡಿ ಬರುತ್ತಿದ್ದಳು. ಇಷ್ಟ ಬಂದರೆ ಫ್ರೆಂಡ್ಸ್‌ನ ಜೊತೆಗೆ ಕರೆದುಕೊಂಡು ಹೋಗ್ತಿದ್ಲು. ಇಲ್ಲ ಒಬ್ಬಳೇ ಬಾಯ್ ಫ್ರೆಂಡ್ಸ್ ಜೊತೆಗೆ ನಿರ್ಭಯವಾಗಿ ಓಡಾಡುತ್ತಿದ್ದಳು. ಅಪ್ಪನ ಕಣ್ಣಿಗೂ ಒಂದೆರಡು ಸಲ ಇವಳು ಬಾಯ್ ಫ್ರೆಂಡ್ ಜೊತೆಗೆ ಫ್ರೀಯಾಗಿ ಓಡಾಡುತ್ತಿದ್ದದ್ದು ಬಿದ್ದಿತ್ತು. ಆದರೆ ಮಾತಿನಲ್ಲಿನ ಚಾಣಕ್ಯತನ ಅಪ್ಪನ ಆಗ್ರಹದಿಂದ ತಪ್ಪಿಸಿತ್ತು. ನಾನೆಷ್ಟೋ ಸಲ ಅವಳ ಈ ಸ್ವಚ್ಛಂದ ರೀತಿಯನ್ನು ಖಂಡಿಸಿ ಬುದ್ಧಿ ಹೇಳಿದರೆ ಜೋರಾಗಿ ನಕ್ಕು ಬಿಟ್ಟು– "ಇಷ್ಟು ಸೆಂಟಿಮೆಂಟಲ್ ಆಗಬೇಡ"– ಎಂದು ಕೆನ್ನೆ ಚಿವುಟುತ್ತಿದ್ದಳು... ಆದರೆ ಇವತ್ತು ಅವಳಿಗೆ ಉಸಿರಾಡುವ ಧೈರ್ಯ ಕೂಡಾ ಇಲ್ಲ. ಅಪ್ಪನ ಮಾತು ಮೀರಿ ಅಯೋಗ್ಯನೊಬ್ಬನನ್ನು ಮದುವೆಯಾಗಿ ನರಸತ್ತವಳಾಗಿ ಬದುಕಿದ್ದಾಳೆ. ಮೊದಲೆಷ್ಟು ಸುಖವಾಗಿ. ಖುಷಿಯಾಗಿ ಇದ್ದಳೋ ಅದಕ್ಕೆ ಹತ್ತರಷ್ಟು ಹೆಚ್ಚಾಗಿ ಅಳುತ್ತಿದ್ದಾಳೆ. ಗಂಡ ಅನ್ನಿಸಿಕೊಂಡವನಿಂದಲೂ ಬಯಸಿದ ಸುಖ ಸಿಗದೆ. ಸ್ವತಂತ್ರವಾಗಿ ಬದುಕುವ ಅವಕಾಶವಿಲ್ಲದೆ ಬಂಜರು ಬಾಳು ಕಳೆದುಕೊಳ್ಳುವುದರಲ್ಲೇ [illegible] ಮನಸ್ಸು... [illegible] ಗೋಳು

ಒಂದೇ ಆಗಿದ್ದರೂ ಗೋಳಿನ ರೀತಿಗಳು ಮಾತ್ರ ಬೇರೆಯಾಗಿವೆ... ಇನ್ನು ಚಂದ್ರು ಕತೆ... ಅವನೊಬ್ಬ ಫೂಲ್. ಲವ್ ಮಾಡೋಕೆ ಬರುತ್ತೇ ಹೊರತಾಗಿ ಅದನ್ನು ಉಳಿಸಿಕೊಳ್ಳೋದಕ್ಕೆ ಬರೋಲ್ಲ. ಕಾಪುರುಷನಂತೆ ಹೆದರ್‍ತಾನೆ. ತಾನು ಪ್ರೀತಿಸೋ ಹುಡುಗಿ ತನಗಿಂತ ಎಲ್ಲ ವಿಷಯದಲ್ಲಿ ಕೆಳಗೆ ಇರಬೇಕನ್ನೋದು ಅವನ ಸಿದ್ಧಾಂತ. ಸ್ವಲ್ಪ ಪ್ರೋಗ್ರೆಸ್ ಇದ್ದರೂ ಬಸವನ ಹುಳುವಿನ ತರ ಒಳಗೊಳಗೇ ಸರಿಯುತ್ತಾ ಚಿಪ್ಪಿನಲ್ಲಿ ಮುಖ ಮುಚ್ಚಿಕೋತಾನೆ... ತಾನೇ ಬುದ್ಧಿವಂತ- ಅನ್ನೋ ಭಾವನೆಗೆ ಎಲ್ಲಿ ಅಡ್ಡಿ ಬರುತ್ತೋ ಅಂತ್ಲೆ...ಬುದ್ಧಿವಂತರಂತೆ ಲೋಕ ಹೇಳಿದವರ ವಿಷಯದಲ್ಲಿ ತುಂಬಾ ಜಾಗ್ರತೆ ವಹಿಸಿ ಅವರಿಂದ ದೂರ ಇರ್‍ತಾನೆ.

ಅಬ್ಬ! ಎಷ್ಟು ಚೆನ್ನಾಗಿ ಮಾತಾಡಿದ! ಅವನ ಜೊತೆ ಮಾತಾಡೋದೊಂದ್ರೇನೆ ಖುಷಿ! ಈ ಪ್ರಪಂಚದಿಂದ ದೂರ ಕರೆದುಕೊಂಡು ಹೋಗ್ತಾನೆ. ಫೇರಿಟೇಲ್‌ನಲ್ಲಿ ಬರುವ ರೋಮಾಂಚಕ ದೃಶ್ಯಗಳು? ಅವನ ಜೊತೆಗಿನ ಬಾಳು ಬರಡಾಗದೆ ನಿರಂತರ ಅಚ್ಚ ಹಸುರಾಗಿರುವ ಹುಲ್ಲುಗಾವಲು. ದಟ್ಟವಾಗಿ ಬೆಳೆದ ಹುಲ್ಲಿನ ಹಾಸಿಗೆಯ ಮೇಲೆ ಆಕಾಶದತ್ತ ಮುಖ ಮಾಡಿ ಮಲಗಿರುವಾಗ ಒಂದೊಂದೇ... ಒಂದೊಂದೇ ಹಳೆಯ ಉಡುಪುಗಳು ಕಳಚಿ... ರಾಜಕುಮಾರನ ವೇಷದಲ್ಲಿದ್ದಾನೆ... ಮುಗುಳುನಗೆ ಬೆಳಕನ್ನು ಪ್ರಸಾರ ಮಾಡುತ್ತಿದೆ. ಚಂದ್ರು ತುಂಬಾ ಮುದ್ದಾಗಿ ಕಾಣುತ್ತಿದ್ದಾನೆ.. ಬಿಗಿಯಾಗಿ ಹಿಡಿಯಬೇಕೆಂದು ಕೈ ಚಾಚಿದೆ... ಬಿಗಿದೆ... ಒತ್ತಿ ಬಿಗಿದೆ... ಬಿಗಿಯುತ್ತಲೇ ಹೋದೆ... ಚಂದ್ರು ಕಿರುಚಿಕೊಂಡ ಬಿಡಿಸಿಕೊಳ್ಳಲು ಚಡಪಡಿಸಿದ... ಉಸಿರು ಕಟ್ಟಿದ ಹಾಗಾಗಿ ಕೂಗುವುದಕ್ಕೂ ಆಗದೆ ಹೋಯಿತು. ನನ್ನ ಬಂಧನದಲ್ಲಿದ್ದ ಚಂದ್ರು ಬೇರೆಯವರಿಗೆ ಸಿಗಬಾರದು ಎಂದುಕೊಂಡು ಮತ್ತಷ್ಟು ಬಿಗಿಯಾಗಿ ಬಂಧಿಸಿದೆ... ಬಂಧನದ ಒಳಗಡೆ ತೆಳುವಾಗಬೇಕು... ಚಂದ್ರು... ಚಂದ್ರುವಾಗಿರಬಾರದು... ಚಂದ್ರುವಿಗೆ ಬೇರೆ ಅಸ್ತಿತ್ವ ಬೇಡವೆನಿಸಿತು. ನನ್ನ ಸ್ವಾರ್ಥ ಬುದ್ಧಿಗೆ... ಹೀಗೇ ... ಹೀಗೇ ಕರಗಿಹೋಗಲಿ... ಎಂದುಕೊಂಡೆ. ಉನ್ಮತ್ತತೆಯಿಂದ ಗೆದ್ದೆನೆಂಬ ಅಹಮ್ಮಿನಿಂದ ಬಿಗಿಯಾಗಿ ಕಣ್ಣು ಮುಚ್ಚಿದೆ... 'ಫಳ್' ಅಂತ ಕೆನ್ನೆ ಏಟು ಬಿತ್ತು. ತಲೆಸುತ್ತಿ ಬಂದಂತಾಯಿತು. ಸಾವರಿಸಿಕೊಂಡು ಕಣ್ಣು ಬಿಟ್ಟೆ. ನಗುತ್ತಾ ಇತ್ತು ಆ ಮುಖ... ಚಂದ್ರುವಿನದಲ್ಲ... ನನ್ನ ಗೆಳತೀದು. ... 'ಮಹಾ ನನಗೆ, ಪಾಠ ಹೇಳೋಕೆ ಹೊರಟವಳು ನೀನು ಅಲ್ವೇ'- ವ್ಯಂಗ್ಯವಾಗಿತ್ತು ಮಾತು. ವಾಸ್ತವವಾಗಿ ನೀನು ಹೀಗೆ ಭಾವನೆಗಳಲ್ಲಿ ಕಳೆದುಹೋಗ್ತಿಯೇನೆ? ಯಾಕೆ ಆ ಚಂದ್ರೂನ ಕಂಡ್ರೆ ಪ್ರಾಣ ಬಿಡ್ತೀಯ? ಚಂದ್ರು ಖಂಡಿತ ನಿನ್ನನ್ನು ಪ್ರೀತಿಸ್ತಿಲ್ವೆ! ಸುಮ್ಮನೆ ಕೈ ತೋರಿಸಿ ಅವಲಕ್ಷಣ ಅಂತ ಅನ್ನಿಸ್ಕೋಬೇಡ. ಒಂದು ವೇಳೆ ಅವನು ನಿನಗೆ ಪ್ರೀತಿ ತೋರಿಸಿದರೂ ಅದು ಬರೀ ಸುಳ್ಳು... ನಂಬಿದ್ರೆ ಹಾಳಾಗ್ತೀಯ ನೆನಪಿರಲಿ...

ಹೌದು ಸುಮಾ ಹೇಳಿದ್ದೂ ನಿಜ. ನನಗೆ ನಾಚಿಕೆಯಾಯ್ತು. ಚಂದ್ರೂನ ಪ್ರೀತಿಸಿದ್ದಕ್ಕೆ ಅವನಿಗೆ ಪ್ರೀತಿ ಮಾಡೋದೂ, ಒದೆಯೋದೂ ಎರಡೂ ತುಂಬಾ ಸುಲಭಾನೇ... ಇನ್ನು ಅವನ ಯೋಚ್ನೇನೇ ಮಾಡಬಾರದು– ಎಂದು ನಿರ್ಧಾರವಾಗಿ ಹೇಳುತ್ತಾ ಎದ್ದು ದೀಪ ಆರಿಸಿ ಕಂಬಳಿ ತುಂಬಾ ಹೊದ್ದುಕೊಂಡು, ಕತ್ತಲು ಪ್ರಪಂಚಾನೇ ಸಾಕು ಅನ್ನೋ ಹಾಗೆ ಮಲಗಿದಳು.

ಕಂಬಳಿ ಮುಸುಕಿನಲ್ಲಿ ಬೆಳಗಾದದ್ದೇ ತಿಳಿಯಲಿಲ್ಲ. ಎದ್ದಾಗ 7-30 ದಾಟಿತ್ತು. ಆದರೂ ಹಾಸಿಗೆ ಬಿಟ್ಟು ಏಳುವ ಮನಸ್ಸಾಗಲಿಲ್ಲ. ಜಡತರ ಆವರಿಸಿಕೊಂಡಂತೆ ಅನ್ನಿಸಿತು. ತುಂಬಾ ವೀಕ್‌ನೆಸ್‌ನ ಅನುಭವ. ಎಷ್ಟು ಪ್ರಯತ್ನಿಸಿದರೂ ಏಳುವುದಕ್ಕೇ ಆಗಲಿಲ್ಲ. ಕಣ್ಣುಗಳು ಎಳೆಯುತ್ತಿದ್ದವು. ರಜ ಹಾಕೋಣವೆನ್ನಸಿತು. ಇವತ್ತು ಭಾನುವಾರವೆನ್ನುವುದು ನೆನಪಾಯಿತು.

ಇವತ್ತೇ ರಾಧಿಕಾ ಮನೇಲಿ ಮಗೂಗೆ ನಾಮಕರಣ. ಬರಲೇಬೇಕೂಂತ ತುಂಬಾ ಒತ್ತಾಯ ಮಾಡಿದ್ದಳು. ಹತ್ತೂವರೆಗೆಲ್ಲ ಅವರ ಮನೇಲಿರಬೇಕೂಂತ ಹೇಳಿದ್ದಳು. ಒಂದು ಸಲ ಹೋಗಿ ಬರೋಣಾಂತ ಅನ್ನಿಸಿದರೆ ಮತ್ತೊಂದು ಸಲ ಬೇಡಾ, ಈ ರಜಾ ದಿನಾನ ಹೀಗೇ ಹಾಸಿಗೆಯಲ್ಲೇ ಹಿತವಾದ ಆಲೋಚನೆಗಳನ್ನು ಮಾಡ್ತಾ ಕಳೆದುಬಿಡೋಣ ಅಂತ ಅನ್ನಿಸಿತು. ಮೀನ ಮೇಷ ನೋಡುವುದರಲ್ಲೇ ಇನ್ನರ್ಧ ಗಂಟೆ ಕಳೆದು ಗಂಟೆ ಎಂಟಾಯಿತು. ಮೃದು ಇದ್ದಿದ್ದರೆ ಇಷ್ಟು ಹೊತ್ತು ಮಲಗೋಕೆ ಬಿಡ್ತಿರಲಿಲ್ಲ. ಅವಳು ಊರಿಗೆ ಹೋಗಿ ನಾಲ್ಕು ದಿವಸವಾಯಿತು. ಅವರಪ್ಪ ಯಾವ ಯಾವದೋ ಗಂಡುಗಳನ್ನು ನೋಡಿ ಇಟ್ಟಿದ್ದಾನಂತೆ. ಈಗ ಇವಳು ಅವರ ಮುಂದೆ ಪ್ರದರ್ಶಿತವಾಗೋದಕ್ಕೆ ಹೊರಟಿದ್ದಾಳೆ. ಒಂದು... ಎರಡು... ಮೂರು... ಹೀಗೆ ಎಷ್ಟೋ ಗಂಡುಗಳು ನೋಡಿ–ಪರೀಕ್ಷಿಸಿ–ಮಾಲು ಚೆನ್ನಾಗಿದೇಂದ್ರೆ ಬೆಲೆ ಕಟ್ತಾರೆ. ಹುಡುಗನ ಕಡೆಯವರು ಕೂಡಿ ವ್ಯಾಪಾರ ಕುದುರಿಸಿ, ಇವಳನ್ನು ಕುಣಿಕೆ ಹಾಕಿ ಕರೆದುಕೊಂಡು ಹೋಗ್ತಾರೆ...ಅಲ್ಲಿಂದ ಮುಂದೆ ಮಾಮೂಲೇ... ಬದುಕಿನ ಪ್ರವಾಹದಲ್ಲಿ ಒಂದು ನಿರ್ಲಕ್ಷ್ಯ ಬಿಂದುವಾಗಿ ಕೊಚ್ಚಿ ಹೋಗುತ್ತಾಳೆ. ಇಷ್ಟರಲ್ಲಿ ಬಾಗಿಲು ಬಡಿದ ಶಬ್ದ. ಹೊದ್ದ ಕಂಬಳಿ ಒದ್ದು ಚಕಚಕ ಎದ್ದು ಕನ್ನಡಿ ಮುಂದೆ ನಿಂತು ಕೆದರಿದ ಕೂದಲನ್ನು ಸಾವರಿಸಿಕೊಂಡೆ. ಅಸ್ತವ್ಯಸ್ತವಾಗಿದ್ದ ಸೀರೆಯ ನಿರಿಗೆಯನ್ನು ಸರಿಪಡಿಸಿಕೊಂಡೆ. ಬ್ಲೌಸ್ ಮೇಲೆ ಸರಿದು ಸ್ತನಗಳು ಅರ್ಧಂಬರ್ಧ ಕಾಣುವಂತಾಗಿತ್ತು. ತೆಳು ಸೀರೆಯಾದ್ದರಿಂದ ಸೆರಗು ಮುಚ್ಚಿಕೊಂಡರೂ ಅಸ್ಪಷ್ಟವಾಗಿ ಕಾಣುವ ಸಂಭವವಿತ್ತು. ಅದಕ್ಕೇ ಆತುರವಿದ್ದರೂ ಒಂದು ಕ್ಷಣ ಬ್ಲೌಸನ್ನು ಸರಿಪಡಿಸಿಕೊಂಡೆ. ಕಳಚಿಕೊಂಡಿದ್ದ ಹುಕ್ಕನ್ನು ಹಾಕಿಕೊಂಡೆ. ಅಷ್ಟರಲ್ಲಿ ಮತ್ತೊಮ್ಮೆ ದಬ ದಬ ಬಾಗಿಲು ಬಡಿದ ಶಬ್ದವಾಯಿತು. ಸರಸರ ಹೋಗಿ ಬಾಗಿಲು ತೆರೆದೆ. ವಾರ್ಡನ್ ನಿಂತಿದ್ದಳು. ನಾನೇ ಮಾತನಾಡಿಸಿದೆ. ಏನ್ ಮೇಡಂ ಬೆಳಿಗ್ಗೆ ಬಂದಿದ್ದೀರಾ. ಅರ್ಜೆಂಟ್ ಕೆಲಸವೇನಾದರೂ ಇತ್ತೇ?

ಏನಿಲ್ಲ ಇಷ್ಟು ಹೊತ್ತಾದರೂ ನೀನು ಕಾಫಿಗೂ ಎದ್ದು ಬರಲಿಲ್ವಲ್ಲಾ ಯಾಕೇಂತ ವಿಚಾರಿಸಿಕೊಂಡು ಹೋಗೋಣಾಂತ ಬಂದೆ... ಆಮೇಲೆ ಇನ್ನೊಂದು ವಿಷಯ. ನೆನ್ನೆ ಯಾರೋ ಒಬ್ಬರು ನಿನ್ನನ್ನು ನೋಡ್ಬೇಕೂಂತ ಬಂದಿದ್ದರು. ನೋಡೋಕೆ ತುಂಬಾ ಜಂಟಲ್‌ಮನ್ ಥರಾ ಇದ್ದರು. ಬಹಳ ಅಂದವಾಗಿದ್ದರು. ನಾನು ನಿಮ್ಮ ವುಡ್‌ಬೀನೇನೋ ಅಂತ ಅಂದ್ಕೊಂಡೆ. ಬೆಳ್ಳಗೆ ಎತ್ತರವಾಗಿ ಮಾಟವಾಗಿ ಇದ್ದರು. ತುಂಬಾ ಗುಂಗುರು ಕೂದಲು ಸಣ್ಣ ಮೀಸೆ ಮುಖಕ್ಕೆ ಮುತ್ತಿಡಬೇಕೆನ್ನುವಷ್ಟು ಮುದ್ದಾಗಿತ್ತು– ಇನ್ನೂ ಸ್ವಲ್ಪ ಹೊತ್ತಿದ್ದರೆ ತಲೆ ಎಲ್ಲಾ ಮಾತಾಡ್ತಾಳೇಂತ ಅನ್ನಿಸ್ತು. ಅದಕ್ಕೆ ನಾನೇ ತಡೆದು, ಕೇಳಿದೆ... ಅದೆಲ್ಲಾ ಸರಿ ಅವರು ಯಾರೂಂತ ವಿಚಾರಿಸಿದೆಯೇನು?

"ಇಲ್ಲ ಮರೆತೇ ಹೋಯಿತು. ನಿಮಗೆ ಒಂದು ಚೀಟಿ ಕೊಟ್ಟು ಹೋಗಿದ್ದಾರೆ ಅರ್ಜೆಂಟಾಗಿ ಅವರನ್ನ ಇವತ್ತು ನೋಡ್ಲೇಬೇಕಂತೆ. ಚೀಟಿ ತರೋದು ಮರೆತು ಹೋಯ್ತು. ಈಗಲೇ ಹೋಗಿ ತಂದು ಕೊಡ್ತೀನಿ. ನನ್ನ ಪರ್ಸ್‌ನಲ್ಲಿದೆ"– ಎಂದು ಹೊರಟಳು.

ಮೇಡಂ ಒಂದ್ಮಾತು. ಹಾಗೇ ಬರುವಾಗ ನನಗೊಂದು ಗ್ಲಾಸ್ ಕಾಫಿ ಸಿಗುತ್ತಾ ನೋಡಿ, ಪ್ಲೀಸ್ ಎಂದೆ.

ಮೇರಿ ಮುಗುಳ್ನಕ್ಕಳು. ಅದರರ್ಥ ಸಿಗುತ್ತೆಂತ. ನನಗೂ, ವಾರ್ಡನ್‌ಗೂ ಯಾಕೋ ಸ್ವಲ್ಪ ಸಲುಗೆ ಜಾಸ್ತಿ. ಯಾರ ಹತ್ತಿರವೂ ಅಷ್ಟೊಂದು ಸಲುಗೆಯಿಂದ ಇರ್ತಿರ್ಲಿಲ್ಲ. ಎಲ್ಲರಿಗೂ ಅವರವರ ಪ್ರಪಂಚವೇ ಪ್ರಧಾನವಾಗಿತ್ತು. ಅವರ ಜೊತೆ ಮಾತಾಡೋಕೆ ವೈಯಕ್ತಿಕ ಕಥೆಗಳನ್ನು ಕೇಳೋದಕ್ಕೆ ಪುರುಸೊತ್ತಿರಲಿಲ್ಲ. ನಾನು ಅವಳ ಕತೆ ಕೇಳಿದೆ. ಸದಾ ನಗು ನಗುತ್ತಾ ಇರೋ ವಾರ್ಡನ್‌ನ ಬದುಕಿನಲ್ಲಿ ಎಷ್ಟೊಂದು ಕೊರಕಲುಗಳಿವೆ! ಇದನ್ನೆಲ್ಲ ಸಹಿಸಿಕೊಂಡೂ ಈ ನಗುವನ್ನು ತಂದುಕೊಳ್ಳೋಕೆ ಹೇಗೆ ಸಾಧ್ಯ? ಅಂತ ನನಗೆ ಅನ್ನಿಸಿತು. ಅವರ ಕಥೆ ನೆನಪಾಯಿತು.

ಅಮ್ಮ ಕ್ರಿಶ್ಚಿಯನ್, ಅಪ್ಪ ಹಿಂದು ನೋಡೋಕೆ ಇಬ್ಬರೂ ತುಂಬಾ ಚೆನ್ನಾಗಿದ್ದರು. ಅಕ್ಕಪಕ್ಕದಲ್ಲೇ ಮನೆಗಳು. ಅಮ್ಮ ಸೋದರ ಮಾವನ ಮನೆಯಲ್ಲಿ ಬೆಳೀತಿದ್ದಳು. ಅತ್ತೆ ಹೆರಿಗೆಗೆ ತವರಿಗೆ ಹೋದಾಗ ಸೋದರ ಮಾವನ ಹದ್ದು ಕಣ್ಣು ಅಮ್ಮನ ಅಂಗಾಂಗಗಳ ಮೇಲೇ ಇತ್ತು. ಆ ದೃಷ್ಟೀನ ಕಂಡರೇನೇ ಅಮ್ಮನಿಗೆ ಭಯವಾಗುತ್ತಿತ್ತಂತೆ. ಊರಿಗೆ ಅತ್ತೆ ಬರೋತನಕ ಅಪ್ಪನ ಹತ್ತಿರ ಬಂದು ಇರೋಣಾಂತ ಅಮ್ಮ ಅಂದುಕೊಳ್ಳುತ್ತಿದ್ದಳಂತೆ. ಆದರೆ ಮಾವನ್ನ ಕೇಳೋಕೆ ಭಯ. ಎದುರು ನಿಲ್ಲೋಕು ಭಯ. ೬ ವರ್ಷದ ಲಲ್ಲಿ ಕಾನ್ವೆಂಟಿಗೆ ಹೊರಟು ಹೋಗಿ ನಾಲ್ಕು ಗಂಟೆಗೆ ಮರಳುತ್ತಿದ್ದಳು. ಅಮ್ಮ, ಮಾವ ಇರೋವಾಗ ಬೇರೆ ಯಾವುದಾದರೂ ಒಂದು ಕೀಟ ಇದ್ದರೂ ಸ್ವಲ್ಪ

ನೆಮ್ಮದಿ ಇರುತ್ತೇಂತ ಅಂದ್ಕೊಂತಿದ್ಲು. ರಾತ್ರಿಗಳನ್ನು ಕಳೆಯೋದು ಇದ್ದದ್ದೂ ಭಯಂಕರ. ಅಷ್ಟರಲ್ಲಿ ಒಂದು ದಿನ ಮಾವ ಲೇಟಾಗಿ ಬಂದನಂತೆ. ಲಲ್ಲಿ ಬೇರೆ ಮನೇಲಿ ಇರಲಿಲ್ಲ. ಅವಳ ಸ್ಕೂಲ್‌ನಲ್ಲಿ ಮಕ್ಕಳನ್ನೆಲ್ಲಾ ಪ್ರವಾಸಕ್ಕೆ ಕರೆದುಕೊಂಡು ಹೋಗಿದ್ದರು. ಅಮ್ಮನೊಬ್ಬಳಿಗೇ ಎದ್ದು ಬಾಗಿಲು ತೆಗೆಯೋದಕ್ಕೆ ಭಯವಾಯ್ತಂತೆ. ಆದರೂ ಒಂದೇ ಸಮ ಬಾಗಿಲ ಬಡಿತ ಕೇಳಿ ಹೆದರುತ್ತಾ ಹೆದರುತ್ತಾ ಎದ್ದು ಬಾಗಿಲು ತೆಗೆದಳಂತೆ. ಒಳಗೆ ಬಂದ ಮಾವ ಮತ್ತೆ ಬಾಗಿಲು ಭದ್ರಪಡಿಸಿ ಕಿರುಚುವುದಕ್ಕೂ ಆಗದಂತೆ ಅಮ್ಮನಿಗೆ ಪ್ರಜ್ಞೆ ತಪ್ಪಿಸಿ ನಿರಾತಂಕವಾಗಿ ಭೋಗಿಸಿಬಿಟ್ಟು ಎದ್ದು ಹೋಗಿ ತನ್ನ ಕೊಠಡಿಯ ಚಿಲಕ ಹಾಕಿಕೊಂಡು ಮಲಗಿಬಿಟ್ಟನಂತೆ. ಇಡೀ ರಾತ್ರಿ ಬಿಕ್ಕಿ ಬಿಕ್ಕಿ ಅಳುತ್ತಿದ್ದು ಬೆಳಗಾದ ಕೂಡಲೇ ಅಮ್ಮನಿಗೆ ತನ್ನ ಸ್ಥಿತಿ ಅರ್ಥವಾಯ್ತಂತೆ.

ಅಮ್ಮ ಅಪ್ಪನ ಬಳಿಗೆ ಬಂದು ಬಿಟ್ಟಳಂತೆ. ಶಾತ ಮೊದಲಿನಿಂದಲೂ ಕುಡುಕ. ಮಗಳು ಬಂದ ಕಾರಣ ಕೇಳೋದು ಬಿಟ್ಟು, ಬಂದದ್ದಕ್ಕೆ ಸಿಟ್ಟಗೆದ್ದು ಕಾಲು ಕಾಲಲ್ಲೇ ಒದ್ದನಂತೆ. ಪಕ್ಕದ ಮನೆಯಲ್ಲಿದ್ದ ಆ ಹಿಂದೂ ವ್ಯಕ್ತಿಗೆ ಈ ಗಲಾಟೆ ಎಲ್ಲಾ ಕೇಳಿಸಿ, ಮನೆಗೆ ಬಂದು ವಿಚಾರಿಸುವುದಕ್ಕೆ ಪ್ರಯತ್ನಪಟ್ಟದ್ದಕ್ಕೆ ಶಾತ ಇವರನ್ನೂ ಚೆನ್ನಾಗಿ ಬಾಸ್ಟರ್ಡ್ ಗೀಸ್ಟರ್ಡ್ ಅಂತ ಬೈದು ಬಿಟ್ಟನಂತೆ. ಬಂದಾತ ಸುಮ್ಮನೇ ಹಾಗೇ ಹೊರಟು ಹೋದ. ಅವತ್ತಿನ ಹಗರಣ ಅಲ್ಲಿಗೆ ಮುಗೀತು. ಒಂದೆರಡು ದಿವಸ ಹಾಗೇ ಕಳೀತು. ಅಮ್ಮ ಯಾವುದೋ ಕೆಲಸಕ್ಕೆ ಅರ್ಜಿ ಬರೆದು ಕವರಿನಲ್ಲಿ ಹಾಕಿ ಅಂಟಿಸಿ ಪಕ್ಕದ ಮನೆಯ ಆ ಹಿಂದೂ ವ್ಯಕ್ತಿಯಲ್ಲಿಗೆ ಪೋಸ್ಟ್ ಮಾಡೋಕೆ ಹೇಳಿ ಬರೋಣಾಂತ ಹೋದಾಗ ಆತ ಇನ್ನೂ ಅಡಿಗೆ ಮಾಡುತ್ತಿದ್ದನಂತೆ. ಅಮ್ಮ ಹೋದದ್ದು ನೋಡಿ ಆ ವ್ಯಕ್ತಿಗೆ ಆಶ್ಚರ್ಯವಾಯಿತಂತೆ. ಬೆಕ್ಕಸ ಬೆರಗಾಗಿ ಅಮ್ಮನನ್ನು ನೋಡುತ್ತಾ, ಬಂದ ಕಾರಣ ಕೇಳೋದನ್ನೂ ಮರೆತುಬಿಟ್ಟಿದ್ದನಂತೆ.

"Excuse me ಸ್ವಲ್ಪ ಈ ಲೆಟರ್ ಪೋಸ್ಟ್ ಮಾಡಬೇಕಲ್ಲ? ಮಾಡ್ತೀರ?" ಎಂದು ಅಮ್ಮನೇ ಮಾತು ತೆಗೆದಳಂತೆ.

"ಓಹೋಹೋ ಅದಕ್ಕೇನಂತೆ. ಧಾರಾಳವಾಗಿ ಆಗಬಹುದು. ನಿಂತೇ ಇದ್ದೀರಲ್ಲ ಕೂತ್ಕೊಳ್ಳಿ" ಅಂತ ಕುರ್ಚಿ ತೋರಿಸಿದ. "ಇಲ್ಲ, ಹೋಗ್ಬೇಕು. ಅಪ್ಪ ಬಂದರೆ ಬೈಯ್ತಾರೆ ಪ್ಲೀಸ್" ಅಂತ ಅಮ್ಮ ಹೊರಡೋದ್ರಲ್ಲಿದ್ದಳು. ಅಷ್ಟರಲ್ಲಿ ಆತ ಕಾಫಿ ಕಪ್ ಹಿಡಿದು ಅಮ್ಮ ನಿಂತಿದ್ದಲ್ಲಿಗೆ ಬಂದು ಅಮ್ಮನ ಕೈಗೆ ಕೊಡುತ್ತಾ–

"ಒಂದು ವಿಷಯ. ನಾನು ಕೇಳಿದರೆ ನೀವು ತಪ್ಪು ತಿಳಿದುಕೊಳ್ಳಬಾರದು. ನಿಮ್ಮನ್ನ ಇದಕ್ಕೆ ಮುಂಚೆ ಈ ಮನೇಲಿ ನೋಡಿರಲಿಲ್ಲ. ಮೊನ್ನೆ ಮೊದಲನೇ ಸಲವೇ ನಿಮ್ಮನ್ನ ನೋಡಿದ್ದು. ನಿಮ್ಮನ್ನು ನೋಡಿದ್ದೇ ತೀರಾ ಭಯಂಕರ ಸ್ಥಿತಿಯಲ್ಲಿ. ಅವರು ನಿಮಗೇನಾಗಬೇಕು? ಯಾಕೆ ಅವರು ನಿಮ್ಮನ್ನು ಹಾಗೆ ಹೊಡೀತಿದ್ರು– ನಿಮಗೆ

ಸಂಕೋಚವಾದ್ರೆ ಬೇಡ, ಹೇಳ್ಬೇಡಿ. ಸುಮ್ಮನೆ ಕುತೂಹಲಕ್ಕೆ ಕೇಳಿದೆ... ಈ ಕಾಫಿ ತಗೊಳ್ಳಿ. ನಮ್ಮ ಮನೆಗೆ ಅನಿರೀಕ್ಷಿತವಾಗಿ ಮೊದಲನೇ ಸಲ ಬಂದಿದ್ದೀರಿ" ಅಂತ ತುಂಬಾ ವಿನಯವಾಗಿ ಹೇಳಿದ್ರು. ಅಮ್ಮ ಅಭ್ಯಂತರ ಹೇಳದೆ ಕಾಫಿ ಕುಡಿದು, thanks ಹೇಳಿ, ಇನ್ನೊಮ್ಮೆ ತನ್ನ ಕತೆ ಹೇಳುವುದಾಗಿ ಪ್ರಾಮಿಸ್ ಮಾಡಿ ಅಲ್ಲಿಂದ ಹೊರಟು ಬಿಟ್ಟಳು.

ಅಮ್ಮ ಅಲ್ಲಿಗೆ ಹೋಗಿ ಬರೋದು ಮಾಮೂಲಾಗಿ ಹೋಯ್ತು. ಅಪ್ಪ ಮನೇಲಿರುತ್ತಿದ್ದುದೇ ಅಪರೂಪ. ಹಿಂದೂ ವ್ಯಕ್ತಿಯ ಮಾತಿನ ಮೋಹಕ್ಕೆ ಅಮ್ಮ ಬಿದ್ದಳು. ಪಾಪವನನ್ನು ಪ್ರತಿಭಟಿಸಿದ ಅಮ್ಮ ಆ ವ್ಯಕ್ತಿಗೆ ಸ್ವ ಇಚ್ಛೆಯಿಂದ ಮೈ ಕೊಟ್ಟಳು. ಪಾದ್ರಿಗೆ ಹೇಳಿ ಇಬ್ಬರೂ ಮದುವೆಯಾಗಬೇಕಂತ ಅಮ್ಮ ಹಟ ಹಿಡಿದ್ರೆ, ಆ ವ್ಯಕ್ತಿ ನಕ್ಕು, ಮದುವೆಯ ಮಾತನ್ನು ಮುಂದು ಹಾಕುತ್ತಿದ್ದನಂತೆ. ಅಮ್ಮನಂಗುಲಂಗುಲ ದೇಹವೂ ಆ ವ್ಯಕ್ತಿಯ ಗ್ರಾಸವಾಯಿತಂತೆ. ತನಗೆ ಮೋಸ ಮಾಡುವುದಿಲ್ಲ ಅನ್ನೋ ಭರವಸೆ ಅಮ್ಮನಿಗೆ ಬಂದದ್ದರಿಂದ ಚಕಾರವೆತ್ತದೆ ದಿನಾ ಬಂದು ಖುಷಿ ಪಡಿಸಿ ಹೋಗುತ್ತಿದ್ದಳಂತೆ. ಅಮ್ಮನ ಹೊಟ್ಟೆಯಲ್ಲಿ ಇವರಿಬ್ಬರ ಕಾಮದ ಫಲ ಮೊಳಕೆಯೊಡೆದು ಹುಲುಸಾಗಿ ಚಿಗುರುತ್ತಿತ್ತು. ಮುಚ್ಚಿಡಬೇಕೆಂದರೂ, ಮುಚ್ಚಿಡಲಾಗದ ಕುರುಹುಗಳು ಕಂಡು ಬಂದಾಗ ಅಮ್ಮನಿಗೆ ಭಯವಾಯಿತಂತೆ. ಹೇಗಾದರೂ ಈ ದಿನ ಅವರನ್ನು ಒಪ್ಪಿಸಿ ಮದುವೆಯಾಗಲೇ ಬೇಕಂತ ಗಟ್ಟಿ ಮನಸ್ಸು ಮಾಡಿ ಮಾರನೆಯ ದಿನ ಅವನ ಮನೆಗೆ ಹೋದಾಗ ಬಾಗಿಲಿಗೆ ಬೀಗ ಹಾಕಿತ್ತಂತೆ. ಅಮ್ಮನಿಗೆ ಅಲ್ಲಿಯೇ ಕುಸಿದು ಬೀಳುವಂತಾಯಿತು. ಭವಿಷ್ಯ ಕತ್ತಲಿನ ಹೆಗ್ಗವಿಯಂತೆ ಇತ್ತು. ಅಮ್ಮನಿಗೆ ಅಮ್ಮ ಇರಲಿಲ್ಲ. ಅಪ್ಪ ಅಯೋಗ್ಯ. ಗಿರಾಕಿಗಳನ್ನು ಹುಡುಕಿಕೊಟ್ಟು ಕಮೀಷನ್ ಹೊಡೆಯುತ್ತಿದ್ದ. ಅಮ್ಮನನ್ನೂ ಅದೇ ಉದ್ಯೋಗಕ್ಕೆ ಹಚ್ಚಬೇಕೂಂತ ಪ್ರಯತ್ನಿಸಿದ್ದ. ಅಮ್ಮ ಒಪ್ಪಿರಲಿಲ್ಲ. ಅದಕ್ಕೇ ಅಪ್ಪನಿಗೆ ಮಗಳ ಮೇಲೆ ಅಷ್ಟು ಸಿಟ್ಟು. ಅಮ್ಮ ಯೋಚಿಸಿದಷ್ಟೂ ಭವಿಷ್ಯ ಅಸ್ಪಷ್ಟ ಭಯಂಕರ ಅನ್ನಿಸುತ್ತಿತ್ತು.

ಸ್ವಲ್ಪ ದಿವಸ ಅಮ್ಮ ಒಬ್ಬಳೇ ಕುಳಿತು ಒಂದೇ ಸಮನೆ ಅಳುತ್ತಿದ್ದಳಂತೆ, ಮುಖವಿಟ್ಟುಕೊಂಡು ತಿರುಗಾಡಲು ನಾಚಿಕೆ, ಹೆದರಿಕೆ, ಕೊನೆಗೆ ವಿಧಿಯಿಲ್ಲದೆ ಅಪ್ಪನ ದಾರಿಗೆ ಒಪ್ಪಬೇಕಾಯಿತು. ಅಪ್ಪನಿಗೂ ಖುಷಿಯಾಯಿತು.

ದಿನಗಳು ಉರುಳಿದವು. ಪಾದ್ರಿಗಳೂ ಅಮ್ಮನ ಬಳಿಗೆ ಬರುತ್ತಿದ್ದುದುಂಟು. ಅಮ್ಮ ಕೊಟ್ಟ ಸುಖಕ್ಕೆ ಪಾದ್ರಿಗಳೊಬ್ಬರು ತುಂಬಾ ಉಪಕಾರ ಮಾಡಿದರಂತೆ. ದೇವರು ಎದ್ದು ನಿಂತ ಕೂಡಲೇ ಪಾದ್ರಿಗಳು ಪವಿತ್ರರಾಗಿ ಬಿಡುತ್ತಾರೆ. ಆದರೆ ನಮ್ಮಂಥ ಪಾಪಿಗಳಿಗೆ ಪುಣ್ಯ ಬರೋದು ಬಹಳ ದೂರ.

ಅಮ್ಮನಿಗೆ ಹೆರಿಗೆ ಕಷ್ಟವಾಯಿತು. ಕ್ರಿಶ್ಚಿಯನ್ ಆಸ್ಪತ್ರೆಯಲ್ಲಿ ಪಾದ್ರಿಗಳ ರೆಕಮೆಂಡೇಶನ್ ಮೇಲೆ ಅಮ್ಮನ ಚಿಕಿತ್ಸೆಯಾಗಿ ಸಾವಿನಿಂದ ಪಾರಾದರು. ಅಮ್ಮನಿಗೆ ಸಾಯುವುದು ಬೇಕಾಗಿತ್ತು. ಆದರೆ ನನ್ನ ಅದೃಷ್ಟ ಚೆನ್ನಾಗಿದ್ದು ಬದುಕಿಕೊಂಡರು! ಹೇಸಿಗೆಯ ಬದುಕು ಜರ್ಝರಿತಳನ್ನಾಗಿ ಮಾಡಿಬಿಟ್ಟಿತ್ತು. ನೋಡೋಕೆ ರಾಜಕುಮಾರಿ ಥರಾ ಇದ್ದ ಅಮ್ಮನ ಮುಖದ ತುಂಬೆಲ್ಲಾ ಮುಪ್ಪಿನ ಸುಕ್ಕುಗಳು ಮೂಡಿದುವಂತೆ. ಮೈಯಲ್ಲಿ ಕಸುವು ಉಳಿದಿರಲಿಲ್ಲ. ಆದರೆ ಬದುಕುವುದಕ್ಕೆ ಅಮ್ಮನಿಗೆ ಎಷ್ಟು ಪ್ರಯತ್ನಿಸಿದರೂ ಬೇರೆ ಮಾರ್ಗವೇ ಕಾಣದೆ ಹೇಸಿದ ಹಾದಿಯನ್ನೇ ಆರಿಸಿಕೊಳ್ಳಬೇಕಾಯಿತಂತೆ! ನನ್ನನ್ನೇನೋ ಚೆನ್ನಾಗಿ ಬೆಳೆಸಿದರು. ನನಗೆ ಬುದ್ಧಿ ಬರುವವರೆಗೂ ಇದ್ದ ಅಮ್ಮನಿಗೆ ಬೆಳೆದ ಮಗಳ ಮುಂದೆ ಅಸಹ್ಯ ಬದುಕನ್ನು ಹೊತ್ತು ಬಾಳುವುದಕ್ಕಾಗದೆ, "ಹೊರಟು ಹೋಗುತ್ತಿದ್ದೀನೆಂದು" ಒಂದು ಲೆಟರ್ ಬರೆದು ಇಟ್ಟು ಹೊರಟು ಹೋದರು. ಸಂಜೆ ಮನೆಗೆ ಮರಳಿದ ನನಗೆ ಅಮ್ಮ ಕಾಣಿಸಲಿಲ್ಲ. ಸ್ಕೂಲಿಂದ ಬರುವಷ್ಟು ಹೊತ್ತಿಗೆ ಮೇಜಿನ ಮೇಲೆ ಹಾಲು, ಬ್ರೆಡ್ ಇಟ್ಟುಕೊಂಡು ಕೂತಿರುತ್ತಿದ್ದ ಅಮ್ಮ ನನಗೆ ಕಾಣದೆ ಹೋದದ್ದು ಭಯವಾಯಿತು. "ಅಮ್ಮ" "ಅಮ್ಮ" ಅಂತ ಹತ್ತು ಸಲ ಕೂಗಿದರೂ ಓಗೊಡುವುದು ಕೇಳಬರಲಿಲ್ಲ. ಮೇಜಿನ ಮೇಲೆ ಕವರೊಂದು ಕಣ್ಣಿಗೆ ಬಿತ್ತು. ಬಿಚ್ಚಿ ಓದಿದೆ. ನನಗೇನೂ ಅರ್ಥವಾಗಲಿಲ್ಲ. ಮತ್ತೆ ಮತ್ತೆ ಪುರುಸೊತ್ತಾದಾಗಲೆಲ್ಲ ಓದುತ್ತಿದ್ದೆ. ಸ್ವಲ್ಪ ಸ್ವಲ್ಪವಾಗಿ ಪರಿಸ್ಥಿತಿ ಅರ್ಥವಾಯಿತು. ಅಮ್ಮ ನನ್ನನ್ನು ಅನಾಥಳನ್ನಾಗಿ ಮಾಡಿಹೋದಳು ಅನ್ನೋ ಸಿಟ್ಟು. ಆದರೆ ಈಗ ಏನು ಮಾಡುವುದು ಅಂತ ಯೋಚನೆಗಿಟ್ಟುಕೊಂಡು ಕೆಲಸಕ್ಕಾಗಿ ಹುಡುಕಾಡತೊಡಗಿದೆ. ನನ್ನ ಗೆಳತಿಯ ಅಣ್ಣ ಕೆಲಸ ಕೊಡಿಸುವುದಾಗಿ ಕರೆದುಕೊಂಡು ಹೋಗಿ ನನ್ನ ಮೇಲೆ ಹಲ್ಲೆ ಮಾಡಿದ. ನಾನು ಅತ್ತೆ, ಅಂಗಲಾಚಿದೆ– ಅವನು ಸಮಾಧಾನ ಮಾಡಿ ಮದುವೆ ಮಾಡಿಕೊಳ್ಳುತ್ತೇನೆಂದು ಧೈರ್ಯ ತುಂಬಿದ. ಅದೃಷ್ಟಕ್ಕೆ ಹೇಳಿದಂತೆ ನಡೆದುಕೊಂಡ. ಅವರೇನು ಬರೀ ನರಕ. ಅವನ ಹಸಿವಿನಿಂದ ಇಬ್ಬರು ಮಕ್ಕಳನ್ನು ಪಡೆದೆ. ಒಂದು ಸತ್ತು ಹುಟ್ಟಿದ್ದು. ಎರಡನೇದು ಕಾಲಿಲ್ಲದ ಕುಂಟು ಮಗು. ಬರುಬರುತ್ತಾ ಬದುಕು ನನಗೆ ಭರಿಸುವುದಕ್ಕೆ ಆಗಲಿಲ್ಲ. ಕಷ್ಟಪಟ್ಟು ಡೈವೋರ್ಸ್ ಪಡೆದೆ. ನನ್ನ ಕುಂಟು ಮಗುವನ್ನು "ಚಾರಿಟಿ ಹೋಂ"ನಲ್ಲಿ ಸೇರಿಸಿಬಿಟ್ಟೆ. ಈಗ ಕೆಲಸ ಮಾಡ್ತಿದ್ದೀನಿ. ನೆನಪಾದಾಗ ಹೋಗಿ ನನ್ನ ಮಗುವನ್ನು ನೋಡಿ ಬರ್ತೀನಿ. ಆಗಾಗ ಅಮ್ಮನ ಕತೆ ನೆನಪಾಗುತ್ತೆ. ಈಗಲೂ ಕಾಗದ ನನ್ನ ಬಳಿ ಇದ್ದೇ ಇದೆ. ಬೇಕಾದರೆ ನೀನೇ ಓದು [illegible] ಕತೆ ಹೇಗೆ [illegible] ಮುಖ ಇನ್ನೂ ನೆನಪಿದೆ. ಪಾಪ ಅಂತ [illegible] ಅವಳ ಕಥೆ ನೆನಪಿಗೆ ಬರುತ್ತೆ. ಛೆ! "ಎಂಥ [illegible]" [illegible] ಯಾಕೆ [illegible] ಕೆಲವರಿಗೆ ಕಷ್ಟ ಕೊಡ್ತಾನೋ ಅಂತ. [illegible]

"ಏನಮ್ಮ ಇನ್ನೂ ಯೋಚಿಸ್ತಿದ್ದೀಯ? ತಗೋ ಕಾಫಿ. ನಿನಗೆ ಬೇಕಾಗುತ್ತೆ ಅಂತ ನಾನೇ ಫ್ಲಾಸ್ಕನಲ್ಲಿ ತೆಗೆದಿರಿಸಿದ್ದೆ. ಹಾಗೇ ಈ ಚೀಟೀನೂ ತಗೋ– ಅಂತ ಅವಳ ಕೈಗೆ ಚೀಟಿ ಕೊಟ್ಟಳು. ಹಾಗೆಯೇ ನನ್ನ ರೂಮಿನಲ್ಲಿದ್ದ ಗ್ಲಾಸೊಂದರಲ್ಲಿ ಕಾಫಿ ಬಗ್ಗಿಸಿಕೊಟ್ಟಳು.

ಚೀಟಿಯನ್ನು ತೆಗೆದು ಬಿಚ್ಚಿ ಓದೋಣವೆನಿಸಿತು. ಆದರೆ ಇವಳೆದುರು ಹೇಗೆ ಓದುವುದೆಂದು ಸಂಕೋಚವಾಯಿತು. ಮಡಚಿದ್ದ ಚೀಟಿಯನ್ನು ಬಿಚ್ಚಿ ಇವಳೇನಾದರೂ ಬಿಡಿಸಿ ಓದಿರಬಹುದೇ ಎನಿಸಿತು. ಓದಿದ್ದರೆ! ಛಿ! ಅಂಥ ಕೆಲಸ ಮಾಡಿರಲಾರಳು ಎನಿಸಿತು. ಒಂದು ವೇಳೆ ಓದಿದ್ದರೆ?... ಮತ್ತೆ ಸಂಶಯ. ಬರಿಯ ಚೀಟಿ ತಾನೆ? ಓಪನ್ ಆಗಿ ಕೊಟ್ಟಿರುವುದರಿಂದ– ಓದಿದರೂ ಏನೂ ತಿಳಿದುಕೊಳ್ಳಲಾರಳು. ಅಲ್ದೆ ತಪ್ಪು ತಿಳಿದುಕೊಳ್ಳುವಂತಹುದೇನೂ ಇಲ್ಲವಲ್ಲ ಅನ್ನೋ ಧೈರ್ಯ.

'ಕಾಫಿ ತಣ್ಣಗಾಗುತ್ತೆ. ಕುಡಿದ್ಬಿಡು ಮಮತಾ" ಆ ಮಾತಿನಲ್ಲಿ ವಾತ್ಸಲ್ಯದ ಮಿಂಚಿದ್ದಂತೆ ಅನಿಸಿತು. ಅವಳ ಮುಖ ನೋಡಿದೆ. ಸಂತೋಷ ಕಣ್ಣಲ್ಲಿ ತುಂಬಿತ್ತು.

'Thanks ಮೇಡಂ'– ಅಂತ ಹೇಳಿ ಕಾಫಿ ಹೀರಿದೆ. ವಾರ್ಡನ್ ಹಾಗೇ ಸ್ವಲ್ಪ ಹೊತ್ತು ನಿಂತಿದ್ದಳು. ಅವಳನ್ನು ಹೇಗೆ ಹೋಗೂಂತ ಹೇಳೋದು? ಯಾಕೋ ನನಗೆ ಯಾರನ್ನೂ ತುಂಬಾ–ಹೊತ್ತು ಸಹಿಸುವುದಕ್ಕೆ ಆಗುತ್ತಿರಲಿಲ್ಲ. ಆದಷ್ಟು ಬೇಗ ಅವಳು ಹೋದರೆ ಸಾಕು– ಅಂತ ಅನ್ನಿಸಿತು. ಅದಕ್ಕೆ ಕೇಳಿದೆ. 'ಇನ್ನೂ ಏನಾದ್ರೂ ಕೆಲಸವಿದೆಯಾ ಮೇಡಂ? ಹಾಗೇ ನಿಂತಿದ್ದೀರಿ, ಏನಾದರೂ ಹೇಳ್ಬೇಕಾಗಿದೆಯೇ?'

ಸಂಕೋಚದಿಂದ ಹೇಳಿದಳು. 'ಒಂದೈದು ರೂಪಾಯಿ ಇದ್ದರೆ ಕೊಡು ಮಮತ, ನನ್ನ ಮಗೂನ ನೋಡೋಕೆ ಹೋಗ್ತೀನಿ. ಬಿಸ್ಕೆಟ್, ಚಾಕಲೇಟ್ಸ್ ತೆಗೆದುಕೊಂಡು ಹೋಗೋಣಾಂತ. ಫಸ್ಟ್‌ಗೆ ಕೊಟ್ಟಿಡ್ತೀನಿ, ಪ್ಲೀಸ್?'

ಅವಳ ದೈನ್ಯ ಬೇಡಿಕೆಯನ್ನು ತಿರಸ್ಕರಿಸುವುದಕ್ಕೆ ಆಗಲಿಲ್ಲ. ಪರ್ಸನಿಂದ ಐದು ರೂಪಾಯಿ ನೋಟನ್ನು ಕೊಟ್ಟು ಹೇಳಿದೆ– ನಿಮ್ಮ ಮಗೂಗೆ ನನ್ನ ಪರವಾಗಿ ಸ್ವೀಟ್ಸ್ ಕೊಡ್ಸಿ. ನನಗೆ ನೀವೇನೂ ಇದನ್ನು ಹಿಂತಿರುಗಿಸಬೇಕಾದ್ದಿಲ್ಲ.

ವಾರ್ಡನ್‌ಗೆ ತುಂಬಾ ಖುಷಿಯಾಯ್ತು. ಉದ್ವಿಗ್ನಳಾಗಿ, 'ಓಹ್ ಮಮತಾ ಥ್ಯಾಂಕ್ಯು ವೆರಿಮಚ್' ಅಂತ ಹೇಳಿ ಅಲ್ಲಿಂದ ಹೊರಟಳು.

ನಾನು ಬೇಗ ಬೇಗ ಸ್ನಾನ ಮಾಡಿ ಬರೋಣಾಂತ ಟವೆಲ್, ಸೋಪು, ಬ್ರಷ್, ಪೇಸ್ಟ್ ಹಿಡಿದು ಬಾಗಿಲಿಗೆ ಚಿಲಕ ಹಾಕಿ ಬಾತ್ ರೂಂನತ್ತ ನಡೆದೆ.

ಉದ್ದ ಜಡೇನ ಸುತ್ತಿ ಮುಡಿ ಹಾಕಿದೆ. ತೆಳುವಾಗಿ ಮುಖಕ್ಕೆ ಮೇಕಪ್ ಬೇಸ್ ಪಚ್ಚಿ ಪೌಡರ್ ಹೊಡೆದೆ, ತಿಳಿಕೆಂಪು ಲಿಪ್‌ಸ್ಟಿಕ್ ತುಟಿಗೆ ಹಚ್ಚಿದೆ. ಸೀರೆ ಉಟ್ಟ ಮೇಲೆ

ಮ್ಯಾಚಿಂಗ್ ಜಿಂದಿ. ಮೂವತ್ತರ ಹೊಸ್ತಿಲಲ್ಲಿದ್ದ ನನ್ನ ಮೈ ಬಡಕಲಾಗಿದ್ದ ಕಾರಣ ಫಿಗರ್ ಅಟ್ರಾಕ್ಟಿವ್ ಆಗಿರಲಿಲ್ಲ. ಬಿಗಿಯಾಗಿ ಬ್ರಾ ಬಿಗಿದೆ. ಆಕಾಶ ನೀಲಿ ಬಣ್ಣದ ಜಾರ್ಜೆಟ್ ಸೀರೆ ಉಟ್ಟು ಮ್ಯಾಚಿಂಗ್ ಬ್ಲೌಸ್ ಹಾಕಿದೆ.... ನನ್ನ ಶೃಂಗಾರ ಮುಗಿದು ಹೊರಡುವುದಕ್ಕೆ ಒಂದೂವರೆ ಗಂಟೆ ಬೇಕಾಯಿತು.

ಚೀಟಿ ಕೊಟ್ಟಿದ್ದು ಚಂದ್ರುವೇ ಇರಬೇಕಂತ ಗೆಸ್ ಮಾಡಿದೆ. ಮಗುವಿನ ತಂದೆಯಾಗಿರೋ ಅವನಿಗೆ ನನ್ನನ್ನು ನೋಡೋ ಅವಶ್ಯಕತೆ ಏನಿರಬಹುದು ಅಂತ ನನಗೆ ಹೊಳೆಯಲಿಲ್ಲ. ಅಡ್ರೆಸ್ ನೋಡಿದೆ. Hotel international, room no.900. ಹೋಗೋಣವೇ, ಬೇಡವೇ ಅಂತ ಆಲೋಚಿಸಿದೆ, ಮನಸ್ಸು ಅಳುಕಿತು. ಬೇಡ ಅವನನ್ನು ನೋಡುವುದೇ ಬೇಡ. ಸತ್ತ ಭಾವನೆಗಳನ್ನು ಕೆಣಕುವುದರಲ್ಲಿ ಅರ್ಥವಿಲ್ಲ. ರಾಧಿಕಾ ಮನೆಗೇ ಹೋಗೋಣವೆಂದು ನಿರ್ಧರಿಸಿ ಆಟೋ ಹತ್ತಿದೆ.

ಸಂಜೆ ೬ ಗಂಟೆಗೆ ಮನಸ್ಸು ತುಂಬಾ ಭಾರವಾಗಿತ್ತು. ರಾಧಿಕಾಗೆ ಹೀಗೆ ಆಗಬಾರದಿತ್ತು. ಅಪರೂಪಕ್ಕೆ ಮಗು ಹುಟ್ಟಿದೆ ಅಂತ ಅಬ್ಬರದಿಂದ, ಅದ್ದೂರಿಯಿಂದ ನಾಮಕರಣ ಮಾಡಬೇಕಂತ ನಿಶ್ಚಯ ಮಾಡಿದ್ದರು. ನಾಮಕರಣ ಮುಗಿಸಿಕೊಂಡು ಅವಳೂ ಮಗೂ ಸ್ಟೇಟ್ಸ್‌ಗೆ ಹೋಗಬೇಕೆಂದುಕೊಂಡಿದ್ದರು. ರಾಧಿಕಾ ಗಂಡ ಹೊರಟಿದ್ದ ಪ್ಲೇನ್ ಕ್ರ್ಯಾಷ್ ಆದ ಸುದ್ದಿ ಮನೆಯವರಿಗೆಲ್ಲಾ ಕಳವಳಕ್ಕಿಟ್ಟುಕೊಂಡಿತ್ತು. ಸಂತೋಷ ಸಂಭ್ರಮ ನಿರೀಕ್ಷಿಸಿ ಹೊರಟಿದ್ದ ನನಗೆ ಕಂಡದ್ದು ಸ್ಮಶಾನ ಭಯಂಕರತೆ. ರಾಧಿಕಾ ಮೂರ್ಛೆ ಬಿದ್ದಿದ್ದಾಳೆ. ಮಗು ಗಂಟಲು ಹೂತು ಹೋಗುವ ಹಾಗೆ ಅಳುತ್ತಿದೆ. ಅವರವರ ದುಃಖದಲ್ಲಿ ಅವರವರು ಇದ್ದಾರೆ. ಯಾರಿಗೂ ಯಾರೂ ಸಮಾಧಾನ ಮಾಡುತ್ತಿಲ್ಲ. ಪ್ರೇತ ಕಣ್ಣುಗಳಿಂದ ನೋಡುತ್ತಿರುವ ರಾಧಿಕಾಳನ್ನು ಮಾತಾಡಿಸುವ ಧೈರ್ಯ ಬರಲಿಲ್ಲ... ನೆನಸಿಕೊಂಡರೆ ನೂರು ವೇದನೆಗಳು. ಈ ನೋವು ಸಾವುಗಳ ಬದುಕಿನ ಅರ್ಥವೇನು? ಇದೊಂದು ಯಕ್ಷಪ್ರಶ್ನೆ. ಇದಕ್ಕೆ ಸಮಾಧಾನ ದೊರೆಯಲಾರದು. ಕನಸುಗಳನ್ನು ಕಟ್ಟಿಕೊಂಡು ಅರಳುವ ಯೌವನ ಮಂಜು ಬಿದ್ದು ಮುದುಡಿ ಹೋಗುತ್ತೆ. ಹಗುರವೆನಿಸುವ ಆ ವಯಸ್ಸಿನ ಬದುಕನ್ನು ಮೀರಿದರೆ ಬದುಕಿನ ತುಂಬೆಲ್ಲಾ ತಾಪತ್ರಯದ ಮುಳ್ಳುಗಳು. ಕಣ್ಣು ಹನಿಯಿಟ್ಟಿತು. ತುಟಿಯ ಬಣ್ಣಚೆದುರಿತ್ತು. ಮುಖದ ಮೇಕಪ್ ಕರಗಿತ್ತು. ಕನ್ನಡಿ ನೋಡಿಕೊಂಡೆ ಕಣ್ಣು ಕೆಳಗಡೆ ಗೆರೆಗಳು ಮೂಡಿದ್ದವು. ಇಷ್ಟೇ ಹೆಣ್ಣು ಸೃಷ್ಟಿ. ಓಟಕ್ಕೆ ಯೌವನ ಕೇವಲ ಒಂದು ನೆನಪು. ಇತಿಹಾಸದ ಒಂದು ಪುಟ. ಬಾಡುವುದು ಋತು ಧರ್ಮ. ಬಾಡುವ ಸತ್ಯಲೋಕ ವಿದಿತವಾಗಿರುವುದರಿಂದಲೇ, ಬಾಡುವುದಕ್ಕೆ ಮುಂಚೆ ಗಂಡು ಜಾತಿ ಕೊಳ್ಳೆ ಹೊಡೆಯುತ್ತದೆ... ಆದರೆ ತನ್ನದು? ತನ್ನದಾಗಿಯೇ ಉಳಿಯುತ್ತದೆಯೇ? ಪ್ರಮಾಣಿಕವಾಗಿ ಪ್ರಶ್ನಿಸಿಕೊಂಡಾಗ ಉತ್ತರ ಇಲ್ಲ. ನಾನೂ ಎಲ್ಲರಂತೆ!... ಹಾಗಾದರೆ ಯಾಕೆ ಈ ನನ್ನ ಸೋಗು! ಆಕಾಂಕ್ಷೆಗಳನ್ನು ಅದುಮಿಟ್ಟುಕೊಳ್ಳಲು ಪ್ರಯತ್ನಿಸಿದ್ದೇಕೆ? ಆ ಫೂಲ್ ಚಂದ್ರು... ಥುತ್... ಅವನ್ಯಾಕೆ

ನನ್ನ ಹಕ್ಕಿನ ಸಂತೋಷಕ್ಕೆ ಧಕ್ಕೆಯಾಗಿದ್ದಾನೆ?.. ಯೋಚಿಸಿದರೆ ಅವನಲ್ಲ ಫೂಲ್ ಅನ್ನಿಸಿತು. ವ್ಯಕ್ತಿತ್ವವಿಲ್ಲದ ಚಂದ್ರುವನ್ನು ನಂಬಿದ್ದು ತನ್ನ ದಡ್ಡತನ. ಅವನ ಪಾಡಿಗೆ ಅವನು ಮದುವೆಯಾಗಿ ಜಾಲಿಯಾಗಿದ್ದಾನೆ. ಅವನೇನೂ ತನ್ನನ್ನು ಮದುವೆಯಾಗಬೇಡಾಂತ ಹೇಳಿರಲಿಲ್ಲವಲ್ಲ! ಗಂಡಸಿನ ಗುಲಾಮಳಾಗಿ ಇರುವುದು ಒಗ್ಗದ್ದಕ್ಕೆ ತಾನೇ ಆವರಿಸಿಕೊಂಡದ್ದು ಒಂಟಿತನ. ಕೂಡಿ ಬಾಳುವ ಬದುಕು ಬೇಡವೆಂದರೂ ಕಾಮನೆಗಳ ತಣಿವನ್ನು ತಿಸ್ಕರಿಸಲಿಲ್ಲವಲ್ಲ! ಬಹಿರಂಗವಾಗಿ ಗಂಡಸನ್ನು ದ್ವೇಷಿಸುವ ನಾನು ನಿಜವಾಗಿಯೂ ಹಿಪೋಕ್ರೇಟ್... ಹಿಪೋಕ್ರೇಟ್... ಮತ್ತೆ ಮತ್ತೆ ನನ್ನ ಕಿವಿಗಳಲ್ಲಿ ಪ್ರತಿಧ್ವನಿಸಿತು. ನನ್ನದು ವಿಪರೀತ ವ್ಯಕ್ತಿತ್ವ, ಅಸಂಬದ್ಧ.

ನನ್ನ ಮನಸ್ಸಿನ ಕೇವಲ ಕ್ರಾಂತಿಕಾರಿ ಭಾವನೆಗಳೇ, ನನ್ನದು ಸ್ವಚ್ಛಂದ ಪ್ರವೃತ್ತಿಗಳೇ, ಅಮ್ಮನ ಹದ್ದು ಬಸ್ತಿಲ್ಲದೆ ಅಪ್ಪನ ನಿಸ್ಸಹಾಯಕತೆಯ ದುರುಪಯೋಗ ಪಡಿಸಿಕೊಂಡನೇ– ಎಂದು ಆಲೋಚಿಸುವಂತಾಗಿತ್ತು. ಮೊದ ಮೊದಲು ಸೆಂಟಿಮೆಂಟಲ್ ನಾನು ಅನ್ನುವ ಭಾವನೆ ನನಗೆ ಬಂದಿತ್ತು. ನನ್ನ ಗೆಳತಿಯರ ಸ್ವಚ್ಛಂದ ವರ್ತನೆಯನ್ನು ವಿರೋಧಿಸುತ್ತಿದ್ದೆ. ನನ್ನ ನಡತೆ ಅವರಂತೆ ಸ್ವಚ್ಛಂದವಾಗಿಲ್ಲದಿದ್ದರೂ ನನ್ನ ಮನಸ್ಸು ಅವರೆಲ್ಲರಿಗಿಂತ ಸ್ವಚ್ಛಂದವಾಗಿತ್ತು. ಮಾನಸಿಕ ಸ್ವಚ್ಛಂದತೆ ನಿಜವಾಗಿಯೂ ಅಪಾಯಕಾರಿ ಅಂತ ಒಮ್ಮೊಮ್ಮೆ ಅನ್ನಿಸುತ್ತಿತ್ತು.

ನನ್ನ ಗೆಳತಿಯರು ಪರಿಸ್ಥಿತಿಯನ್ನು ಸ್ವೀಕರಿಸಿದ್ದರು. ಮೌನ ಬಸವಗಳಂತೆ ವಿರೋಧವಿಲ್ಲದೆ ಪಾಲಿಗೆ ಬಂದಿದ್ದನ್ನು ಸ್ವೀಕರಿಸುತ್ತಿದ್ದರು. ಅವರು ನನಗೆ ಸಿಕ್ಕಾಗಲೆಲ್ಲ ಅವರನ್ನು ಗೇಲಿ ಮಾಡುತ್ತಿದ್ದೆ. ತುಳಿಯುವವರ ವಿರೋಧ, ಬಂಡೇಳಲು ಪ್ರಚೋದಿಸುತ್ತಿದ್ದೆ. ಆದರೆ ನನ್ನ ಮಾತುಗಳೆಲ್ಲ ಅವರಿಗೆ ಅಸಾಧ್ಯವೆನಿಸಿತ್ತು. ನಕ್ಕ ನಿಟ್ಟುಸಿರು ಬಿಡುತ್ತಿದ್ದರೇ ಹೊರತು ಯಾರ ಮೇಲೂ ಪ್ರಭಾವ ಬೀರಲಿಲ್ಲ.

ಅರ್ಥವಿಲ್ಲದ ಹೋರಾಟದಲ್ಲಿ ನಾನು ಒಂಟಿಯಾಗಿ ಉಳಿದೆ. ಅವರಿಗೆ ದೊರೆತಷ್ಟು ಸುಖವೂ ನನ್ನ ಪಾಲಿಗೆ ಸೊನ್ನೆಯಾಯಿತು... ಹಾಳಾಗಿ ಹೋಗಲಿ... ನಾನೇನೂ ಪ್ರಪಂಚದ ಹೊರೆ ಹೊತ್ತಿಲ್ಲ. ಇವರೆಲ್ಲ ಸಾಯಲಿ– ಮನಸ್ಸು ಸಿಡಿಮಿಡಿಗೊಳ್ಳುತ್ತಿತ್ತು. ವ್ಯಾನಿಟಿ ಬ್ಯಾಗ್‌ನಿಂದ ಡಾಟ್ ಪೆನ್ ಹೊರತೆಗೆದೆ. ಅಲ್ಲಿಯೇ shelfನಿಂದ ಒಂದು ಪುಸ್ತಕ ತೆಗೆದು ಅದರ ಒಂದು ಸೊನ್ನೆ ಕಣ್ಣ, ಮೂಗು, ಬಾಯಿ, ಸರಸರ xಗಳನ್ನು ಹಾಕಿ-ಪುಟ ಹರಿದು ಉಂಡೆ ಸುತ್ತಿ ಡಸ್ಟ್‌ಬಿನ್‌ನಲ್ಲಿ ಎಸೆದೆ. ಚೀರುವಂತಹ ಒಂಟಿತನ. ಹೊತ್ತು ಹೋಗದು. ಹಾಳಾದವಳು ರೂಮ್‌ಮೇಟ್ ಮೃದು ಆದರೂ ಇದ್ದಿದ್ದರೆ ಎಲ್ಲಾದರೂ ಸುತ್ತಾಡಿ ಬರಬಹುದಿತ್ತು. ಸುತ್ತಬೇಕು... ತುಂಬ ಸುತ್ತಬೇಕು. ಪ್ರಪಂಚವೆಲ್ಲಾ ಸುತ್ತಬೇಕು. ಹೊತ್ತು ಗೊತ್ತಿಲ್ಲದ ರಾತ್ರಿಗಳಲ್ಲಿ ಅಲೆದಾಡಬೇಕು. ಏನೇನೋ ಆಸೆಗಳು! ನಾನು ಗಂಡಸಾಗಿದ್ದರೆ? ಛೀ! ನನಗ್ಯಾಕೆ ಈ ಹುಚ್ಚು ಬಯಕೆ? ಊರೆಲ್ಲಾ

ಸುತ್ತಬಹುದೂಂತಲೇ?– ಎಲ್ಲ ಹುಡುಗಿಯರ ಜೀವನದೊಂದಿಗೆ ಕಣ್ಣು ಮುಚ್ಚಾಲೆಯಾಡಬೇಕಂತಲೇ? ಯಾತಕ್ಕೆ?... ಪ್ರಶ್ನೆಗೆ ಉತ್ತರವಿಲ್ಲದಿದ್ದರೂ ಇಂಥ ಹುಚ್ಚು ಬಯಕೆ ಆಗಾಗ ನನ್ನ ಮನಸ್ಸಿಗೆ ಬರುವುದುಂಟು.

ನಾಳೆ ಬೆಳಿಗ್ಗೆ ಕೆಲಸಕ್ಕೆ ಹೋಗ್ಬೇಕು. ನಾಳೆ ಬರುವುದೇ ಬೇಡ ಅಂತ ಬಯಸುತ್ತಿದ್ದೆ. ಆದರೆ ಅರಿಯುವ ಕಾಲ ಪ್ರವಾಹವನ್ನು ತಡೆಯುವುದಕ್ಕೆ ಯಾರಿಗೆ ತಾನೇ ಸಾಧ್ಯ? ಈ ಕಾಲ ಪ್ರವಾಹದಲ್ಲಿ ಎಲ್ಲವೂ ಕೊಚ್ಚಿಕೊಂಡು ಹೋಗುತ್ತೆ ಸ್ಮೃತಿಗಳು. ಸ್ಮೃತಿಗಳು ಕೆರಳಿಸುವ ವ್ಯಕ್ತಿಗಳು? ಮನುಷ್ಯನ ಅವಸ್ಥೆಗಳು!... ನಾನೂ ಎಲ್ಲವೂ!! ಗಿರಗಿರನೆ ತಿರುಗುತ್ತಿರುವ ಅನುಭವ ಸೂಜಿ ಮೊನೆ ಮೇಲೆ ನಿಂತ ಕಾಲು... ತಿರುಗುವ ಗತಿ ಹೆಚ್ಚಿದಂತಾಯಿತು. ಕತ್ತಲು.... ಕತ್ತಲು ಏನೂ ಇಲ್ಲ... ಬರೀ ಭಯಂಕರ ಕತ್ತಲು. ಆದರೂ ಹಿತವಾದ ಕತ್ತಲು... ಏನೂ ಕಾಣಿಸದಂತಾದ ಕಣ್ಣಿಗೆ ನಿದ್ದೆ ಹತ್ತಿತು.

ಸ್ವಲ್ಪ ಹೊತ್ತಾದ ಮೇಲೆ ಎಚ್ಚರವಾಯಿತು. ನೋಡುತ್ತೇನೆ ದೀಪ ಹಾಗೆ ಉರಿಯುತ್ತಿದೆ. ಬಾಗಿಲು ಚಿಲಕವನ್ನೂ ಹಾಕಿರಲಿಲ್ಲ. ಆಶ್ಚರ್ಯವೆಂದರೆ ಮೃದು ಯಾವಾಗಲೋ ಬಂದಿದ್ದಾಳೆ. ಗೊತ್ತೇ ಆಗಲಿಲ್ಲ. ಅವಳ ಮಂಚದ ಮೇಲೆ ಸಾಮಾನೆಲ್ಲ ಹಾಗೆ ಇರೋದ್ರಿಂದ ಈ ಸ್ವಲ್ಪ ಹೊತ್ತಿಗೆ ಮುಂಚೆ ಬಂದಿರಬೇಕೂಂತ, ಊಹಿಸಿದೆ. ಪ್ರಯಾಣದ ಆಯಾಸ ಬೆವರಿಟ್ಟ ಮೈ, ಸ್ನಾನ ಮಾಡಿದರೆ ಸ್ವಲ್ಪ ಮನಸ್ಸು ಹಗುರಾಗುತ್ತೇಂತ, ಮೃದು ಸ್ನಾನಕ್ಕೆ ಹೊರಟಿದ್ದಳು. ಈಗ ಮೃದು ಮೆಲ್ಲಗೆ ಬಾಗಿಲು ತೆಗೆದುಕೊಂಡು ಒಳಗಡೆ ಬಂದಳು. ಬಂದವಳೇ ನಗುತ್ತಾ ಕೇಳಿದಳು, "ಏನೇ ೭ ಗಂಟೆಗೇ ನಿದ್ದೆ ಬಂದ್ಬಿಟ್ತಾ, ನಾನು ಬಂದು ಆಗಲೇ ಒಂದೂವರೆ ಗಂಟೆಯಾಯ್ತು. ಕುಂಭಕರ್ಣನ ಹಾಗೆ ಗೊರಕೆ ಹೊಡೀತಿದ್ದಿ. ಎಚ್ಚಿಸೋದು ಬೇಡಾಂತ ನಾನೇ ಸುಮ್ಮನಿದ್ದೆ. ಏನೇನು ಕನಸು ಬಿತ್ತು? ನಮಗೂ ಹೇಳು"– ಎಂದ ಮೃದೂನ ಮುಖದೆಡೆ ನೋಡಿದೆ. ತುಂಬಾ ಉಲ್ಲಾಸವಾಗಿರುವ ಹಾಗೆ ಕಾಣಿಸಿತು. ಆಗ ತಾನೇ ಸ್ನಾನ ಮಾಡಿ ಬಂದವಳಾದ್ದರಿಂದ ತುಂಬಾ ಫ್ರೆಷ್ ಆಗಿದ್ದಳು. ಎದ್ದವಳೇ ಮೃದುವನ್ನು ಬಿಗಿಯಾಗಿ ಅಪ್ಪಿದೆ. ತುಂಬಾ ಹಿತವಾಗಿದೆ ಅನ್ನಿಸಿತು. ನಾನು ಎದ್ದು ಹೋಗಿ ಹಿಡಿದ ರಭಸಕ್ಕೆ ಜೋಲು ಹೊಡೆದು ಹಾಸಿಗೆ ಮೇಲೆ ಬಿದ್ದಳು. ಅವಳ ಮುಖಕ್ಕೊಂದು ಮುತ್ತು ಕೊಟ್ಟೆ. ಮೃದು ತಬ್ಬಿಬ್ಬಾದಳು. "ಏಯ್ ಮುಮ್ಮ ನಿನಗೇನ್ಬಂತೆ ಈವತ್ತು. ಹೀಗೆ ಮುದ್ದುಮುದ್ದಾಗಿ ಆಡ್ತಿದ್ದಿ?" ಅವಳ ಪ್ರಶ್ನೆಯನ್ನು ಕೇಳಿಸಿಕೊಳ್ಳದೇನೇ ಉತ್ತರಿಸಿದೆ. "ಸುಮ್ಮನಾಗಿ. ಶುಭವಾಗಿರೋದನ್ನು ಎಂಜಲಾಗುವುದಕ್ಕೆ ಮುಂಚೆ ಸ್ವಲ್ಪ ಟೇಸ್ಟ್ ನೋಡ್ತಿದ್ದೀನಿ ಅಷ್ಟೆ" ಎಂದೆ.

ಮೃದು ನಸುನಗುತ್ತ ನಾಚಿಕೊಂಡಳು! ನಾಚಿಕೊಂಡು ಎದ್ದು ಕುಳಿತಳು. ಏನೂ, ಸುಸ್ತಿನಿಂದ ಏದುಸಿರು ಬಿಡುತ್ತಿದ್ದಳು.

"ಲೇ ಮಮ್ಮಿ ಯಾವತ್ತಿನಿಂದ ನಮ್ಮಂಥವರನ್ನು ಲವ್ ಮಾಡೋದು ಕಲಿತೆಯೇ? ಇದ್ಯಾಕೆ ನಿನಗೆ ಈ ಹಾಳು ಬುದ್ಧಿ"– ನಗುತ್ತಲೇ ಕೇಳಿದಳು.

ಅದನ್ನ ಆಮೇಲೆ ಹೇಳ್ತೀನಿ. ಮೊದಲು ಮಾಲು ಯಾರು ಕೊಂಡರು ವ್ಯಾಪಾರ ಎಷ್ಟಕ್ಕೆ ಕುದುರಿತು? ಮಾಲು ಕೊಳ್ಳೊ ಮಾಲೀಕ ಯಾರು? ಎಲ್ಲ ವಿವರ ಹೇಳಮ್ಮ.

"ಅಬ್ಬಬ್ಬ! ನಿನಗೆ ಅದೇನು ಅರ್ಜೆಂಟೇ? ಬಾ ಮೊದಲು ಊಟ ಮಾಡಿಕೊಂಡು ಬಂದು ಆಮೇಲೆ ಇಬ್ಬರೂ ಮಾತಾಡ್ತಾ ಜಾಗರಣೆ ಮಾಡೋಣ" ಅಂತ ಹೇಳಿ ಬಲವಂತವಾಗಿ ನನ್ನನ್ನು ಎಳೆದುಕೊಂಡು ಮೆಸ್ಸ್ ಕಡೆಗೆ ನಡೆದಳು.

ರಾತ್ರಿ ತುಂಬಾ ಹೊತ್ತು ಮಾತಾಡ್ತಾ ಇದ್ದಿವಿ. ಮೃದು ಗಂಡ ದೊಡ್ಡ ಶ್ರೀಮಂತ ಕಾಫಿ ಪ್ಲಾಂಟರ್ಸ್. ದೊಡ್ಡ ಬಂಗಲೆ, ಕಾರು, ಮೃದು ಹುಡುಗನ ಫೋಟೋ ತೋರಿಸಿದಳು. ತುಂಬಾ ಚೆನ್ನಾಗಿದ್ದ. ಫಿಲ್ಮಿ ಹೀರೋ ಹಾಗೆ ಇದ್ದ. ಮುಂದಿನ ತಿಂಗಳು ಮದುವೆ. ನನ್ನ ಬದುಕಿನ ರೆಂಬೆಯ ಎಲೆಗಳೂ ಹೂವುಗಳು! ಎಲ್ಲ ತುಂಬಿದ್ದಾಗ ತುಂಬಾ ಚೆನ್ನಾಗಿತ್ತು. ಒಂದೊಂದೇ ಎಲೆ, ಒಂದೊಂದೇ ಹೂವು... ಎಲ್ಲ ಉದುರಿ ಹೋದ ಬೋಳು ರೆಂಬೆ ನಾನು. ನನಗೆ ಸಂಬಂಧವೇ ಬೇಡ. ಯಾವ ನಂಟೂ ಇಲ್ಲದ ನಡುಗಡ್ಡೆಯಾಗಿ ಉಳಿಯಬೇಕೆಂಬ ನನ್ನ ಅಂದಂದಿನ ಅನಿಸಿಕೆ ಮಾತ್ರ ನಿಜವಾಗುತ್ತಿದೆಯೇ? ಇನ್ನೆರಡು ದಿನಗಳಲ್ಲಿ ಮೃದು ಊರಿಗೆ ಹೊರಟು ಹೋಗುತ್ತಾಳೆ. ಆಗ ನಾನು– ಈ ರೂಮು, ಹಾಳುಸುರಿಸುವ ಚಡಪಡಿಸುವ ನನ್ನ ಮನಸ್ಸು. ಒಂದು ಬುಟ್ಟಿ ಕಣ್ಣೀರ ಕತೆಗಳನ್ನು ತುಂಬಿಸಿಕೊಂಡ ವಾರ್ಡನ್... ಇಷ್ಟೇ ಕೊನೆಗೆ ಉಳಿಯುವುದು... ಇಷ್ಟೇ ಕೊನೆಗೆ ಉಳಿಯುವುದು"– ಸುತ್ತಿಗೆಯೊಡೆತದ ಅನುಭವ.

ಮೃದು ಹೊರಟು ಹೋಗಿದ್ದಾಳೆ. ತುಂಬಾ ಬೇಸರವಾಗುತ್ತಿದೆ. ನಾನು ರೂಮು, ಕೆಲಸ. ಸುತ್ತಿ ಸುತ್ತಿ ಅವೇ ನನ್ನ ಪಾಲಿಗೆ. ಹಾಯಾಗಿ ಒಂದೊಂದು ಸಲ ಮದುವೆಯಾಗಿ ಅವರಂತಹ ಬದುಕನ್ನೇ ಒಪ್ಪಿಕೊಳ್ಳೋಣವೇ, ಎನ್ನಿಸುತ್ತೆ. ಆದರೆ ಯಾರನ್ನು ಹುಡುಕಿಕೊಂಡು ಹೋಗಲಿ? ನನಗೆ ಮದುವೆ ಮಾಡುವವರು ಯಾರು?... ಚಂದ್ರು ನನಗೆ ಮೋಸ ಮಾಡದಿದ್ದರೆ?... ಮೋಸ ಮಾಡದಿದ್ದರೆ... ಓಹ್... ಎಂತಹ ವಂಚಕ... ಮಾತಿಲ್ಲದೆ ಮೋಸ ಮಾಡಿದ... ಮತ್ತೆ ಯಾಕೆ ಬಂದಿದ್ದಾನೋ–idiot ಹೊಟ್ಟೆ ಉರಿಸಿಹೋಗೋಕೆ! ಅಸಮಾಧಾನದಿಂದ ಸಿಡಿಮಿಡಿದೆ. ಆದರೆ ಮರುಕ್ಷಣದಲ್ಲಿಯೇ. ಅವನು ಹೇಳಿದ ಅಡ್ರೆಸ್‌ಗೆ ಹೋಗಬೇಕಿತ್ತು. ಯಾಕೆ ನನ್ನನ್ನು ಕರೆದಿದ್ದ ಅಂತಲಾದರೂ ತಿಳೀತಿತ್ತು... ಹೂಂ! ಈಗ ಯೋಚನೆ ಮಾಡಿದರೆ ಏನು ಬಂತು? ಅಂತ ಅಂದುಕೊಂಡು ನಿರಾಸೆಯ ನಿಟ್ಟುಸಿರುಬಿಟ್ಟೆ.

ಮೊನ್ನೆ ಅನಿರೀಕ್ಷಿತವಾಗಿ ಪ್ರೊಫೆಸರ್ ಸಿಕ್ಕಿದ್ದರು. ಅವರ ಮಗ ಸ್ಟೇಟ್ಸ್‌ನಿಂದ ಬಂದನಂತೆ. ಸಂತೋಷ ಕೂಟ ಒಂದನ್ನು ಏರ್ಪಡಿಸಿದ್ದಾರೆ. ಅದಕ್ಕೆ ನನ್ನನ್ನು invite ಮಾಡಿದ್ರು, ಬೇರೆ ಯಾರೂ guests ಇಲ್ಲ. ಬರೀ ಮನೆಯವರು ಮತ್ತು ಅವರ ಮಗನ ಕೆಲವು friends ಅಷ್ಟೇ. ಸಾಳೀನೇ ಪಾರ್ಟಿ, ಹೋಗ್ಲೇಬೇಕು! ಅಂತ ನಿರ್ಧಾರ ಮಾಡಿ ಮರೆಯದಿರುವ ಹಾಗೆ ಕ್ಯಾಲೆಂಡರಿನಲ್ಲಿ ತಾರೀಖನ್ನು ಗುರುತು ಮಾಡಿದ್ದೆ.

ತುಂಬಾ ಜನ ಅಂತೂ ಇಲ್ಲದಿದ್ದರೂ ಸಾಕಷ್ಟು ಮಂದಿ ಬಂದಿದ್ದರು. ಬರೀ ಕೈಲಿ ಹೋಗಬಾರದಂತ, ನಿರ್ಮಲ್ ಪೈಂಟಿಂಗ್ ಫಲಕವನ್ನು ಕೊಂಡುಕೊಂಡು ಪ್ಯಾಕ್ ಮಾಡಿಸಿ ತೆಗೆದುಕೊಂಡು ಹೋಗಿದ್ದೆ. ಹೋಗಿ ಪ್ರೊಫೆಸರನ್ನು ಮೊದಲು ಕಂಡು ನಮಸ್ಕಾರ ಮಾಡಿದೆ. ಅವರು ನನ್ನನ್ನು ಮಗನಿಗೆ introduce ಮಾಡಿದರು. ಅವರು ನಗುತ್ತಾ ಕೈ ಚಾಚಿದರು. ಒಂದು ಕ್ಷಣ ತಡವರಿಸಿದಂತೆ ಆಯಿತು. Presentation ಅವರ ಕೈಗೆ ಕೊಟ್ಟು ಶುಭಾಶಯ ಕೋರಿ ಮತ್ತೊಮ್ಮೆ ನಮಸ್ಕರಿಸಿ ಹಿಂತಿರುಗಿದೆ. ಪ್ರೊಫೆಸರರ ಹೆಂಡತಿ ಬೇರೆ ಗಂಡಸರೊಂದಿಗೆ ತುಂಬಾ ಫ್ರೀಯಾಗಿ ವರ್ತಿಸುತ್ತಿದ್ದುದನ್ನು ನೋಡಿ ಆಶ್ಚರ್ಯವಾಯಿತು. ಆ ವಯಸ್ಸಿನಲ್ಲೂ ಆಕೆಯಲ್ಲಿದ್ದ ಉತ್ಸಾಹ, ಬದುಕಿನಲ್ಲಿರೋ ಆಸಕ್ತಿ, ನನ್ನಲ್ಲಿ ಸಾಯುತ್ತಿವದ ಜೀವನಾಸಕ್ತಿಯನ್ನು ಕೆರಳಿಸಿತು. ನನ್ನ ಬದುಕಿನಲ್ಲಿ ಮಧುರ ಸ್ಮೃತಿಯಾಗಿ ಉಳಿಯುವಂತಹ ಯಾವ ಘಟನೆಯೂ ಘಟಿಸಿಲ್ಲ. ಯಾವ ವ್ಯಕ್ತಿಯೂ ಇಲ್ಲ. ಅಲ್ಲಿ ನೆರೆದಿರುವ ಅಷ್ಟು ಮಂದಿಯಲ್ಲೂ ತುಂಬಿರುವ ಜೀವನೋತ್ಸಾಹ ನನ್ನ ಪೆಸಿಮಿಸ್ಟಿಕ್ ಅಭಿಪ್ರಾಯಗಳು ಸುಳ್ಳೆಂದು ಸಾರುವಂತಿತ್ತು.

ಮಾಗಿಯಲ್ಲೂ ವಸಂತದ ಉಲ್ಲಾಸ! ಇವರೊಂದಿಗೆ ಬೆರೆಯಬೇಕು. ಕುಣಿಯಬೇಕು ಅನ್ನಿಸುತ್ತಿತ್ತು. ಆದರೆ ಅವರು ಮಾಡುತ್ತಿರುವ ನರ್ತನದ ಹೆಜ್ಜೆಯ ಗತಿಗೆ ನನ್ನ ಹೆಜ್ಜೆಯ ಗತಿ ಹೊಂದಲಾರದು. ಅವರದು ಪಳಗಿದ ಹೆಜ್ಜೆ. ನನ್ನದು ಇನ್ನೂ ಪರಿಚಯವೇ ಇಲ್ಲದ ತಪ್ಪು ಹೆಜ್ಜೆ. ನಾನು ಸೇರಿಸಿದರೆ, ಶ್ರುತಿ ತಪ್ಪುತ್ತದೆ. ಲಯ ತಪ್ಪುತ್ತದೆ. ಹೆಜ್ಜೆ ತಪ್ಪುತ್ತದೆ... ಬೇಡ... ಬೇಡ... ಸಮಶ್ರುತಿಯ ತನ್ಮಯತೆಯಲ್ಲಿ ಬರುವ ಶ್ರುತಿಯನ್ನು ಬೆರೆಸುವುದು ಬೇಡ. ಕಲಿತು ಪಳಗಿದ ಮೇಲೆ ಕೂಡಿಸಬೇಕೇ ಹೊರತು. ಈಗ ಅವರ ಹೊಂದಿದ ಹೆಜ್ಜೆಗಳೊಂದಿಗೆ ಹೊಂದದ ತನ್ನ ತೊದಲು ಹೆಜ್ಜೆ ಬೇಡವೇ ಬೇಡವೆನಿಸಿತು. ಅಲ್ಲಿರುವುದಕ್ಕೂ ಮನಸ್ಸಾಗಲಿಲ್ಲ. ಪ್ರೊಫೆಸರರಿಗೆ, ಅರ್ಜೆಂಟ್ ಕೆಲಸದ ನೆಪ ಹೇಳಿ ತಪ್ಪಿಸಿಕೊಂಡು ಓಡಿಬಂದೆ.

'ಸ್ವಾಮಿ' ಮಾಮನೆಯಾಗಿ ಹೋಗಿದೆ. ಗಂಡನ ಮನೆಗೆ ಹೋಗಿರುತ್ತಾಳೆ. ಅವಳ ಹಿಂದು ಪ್ರಶಾಂತ ಕಾಣೆ. ಜಾಲಿಯಾಗಿ ಊರೆಲ್ಲ ಸುತ್ತಿ ಬರುತ್ತಾಳೆ. ಅವನ

ಬಾಹುಗಳ ಸೆರೆಯಲ್ಲಿ ಎಲ್ಲವನ್ನೂ ಮರೆತು ಬಿಡುತ್ತಾಳೆ. ಎಂದೂ ನನ್ನ ನೆನಪು ಅವಳಿಗೆ ಬರಲಾರದು. ಒಂದೊಂದು ರಾತ್ರಿಯೂ ಮೃದುಗೆ ಹೊಸ ಹೊಸದಾಗಿ ಅನುಭವಕ್ಕೆ ಬರುತ್ತೆ! ಅವಳಿಗೆ ಭಾರವಾದ ಮನಸ್ಸಿಲ್ಲ. ಪ್ರೊಫೆಸರ ಮನೆಯಲ್ಲಿ ನೋಡಿದಷ್ಟೇ ಉಲ್ಲಾಸ, ಉತ್ಸಾಹ ಅವಳ ಪಾಲಿಗಿರುತ್ತೇ! ಅವಳ ಗಂಡ ಮಲ್ಲಿಗೆ ದಂಡೆ ಹಿಡಿದು, ಹತ್ತಿರ... ಹತ್ತಿರ... ಹತ್ತಿರ ತೀರಾ ಹತ್ತಿರ ಬರುತ್ತಾನೆ. ದಂಡೆ ಮುಡಿಸುತ್ತಾನೆ. ಮುಡಿದು ದಂಡೆಯ ಪರಿಮಳಕ್ಕೆ ಮನಸೋತು ಕಣ್ಣು ಮುಚ್ಚುತ್ತಾಳೆ ಮೃದು. ಆಗ ಅವನು... ಅವಳನ್ನು ಹತ್ತಿರಕ್ಕೆಳೆದುಕೊಂಡು ಕರಗಿಸಿಕೊಂಡು ಬಿಡುತ್ತಾನೆ... ಮೃದು ಇಲ್ಲ... ಮೃದು ಅವನಲ್ಲಿ ಅವಳು ಉಸಿರಾಡುತ್ತಾಳೆ, ಬದುಕುತ್ತಾಳೆ. ಹಾಗಾದರೆ ಅವಳ ವ್ಯಕ್ತಿತ್ವ, ಅವಳು ಸುಳ್ಳೇ? ಅವಳ ವ್ಯಕ್ತಿತ್ವ ಸುಳ್ಳೇ?

ನನ್ನ ಒಂಟಿತನದಲ್ಲಿ ನಾನು ಕಂಡದ್ದೇನು? ಸಾಧಿಸಿದ್ದೇನು? ಮೃದು ಗಂಡನನ್ನು ಒಪ್ಪಿಕೊಂಡು ಕಳಕೊಂಡಿದ್ದೇನು? ಅಸ್ತಿತ್ವವನ್ನು, ವ್ಯಕ್ತಿತ್ವವನ್ನು ಉಳಿಸಿಕೊಂಡೆನೆಂಬ ನನ್ನ ಆತ್ಮ ಪ್ರತಿಷ್ಠೆ ನಿಜವಾದದ್ದೆ? ಅಥವಾ ದೊರೆಯದ್ದಕ್ಕಾಗಿ ಈ ವೈರಾಗ್ಯದ ಮನಃಸ್ಥಿತಿಯೆ?

ಹುಡುಕಾಡಿದಷ್ಟೂ, ತಡಕಾಡಿದಷ್ಟೂ ನನ್ನ ಪ್ರತಿಷ್ಠೆ ಸುಳ್ಳು, ಪೊಳ್ಳು ಅನ್ನುವುದು ಸತ್ಯವಾಗುತ್ತಿತ್ತು. ಸೋತ ನಿರ್ಧಾರ ನನ್ನದು. ಯಾಕೋ ಅಪ್ಪ ಅಮ್ಮನ ನೆನಪಾಯಿತು. ಕಣ್ಣು ಒದ್ದೆಯಾಯಿತು. ಅಳುವುದು ದುರ್ಬಲ ಮನಸ್ಸಿನ ಲಕ್ಷಣ ಎಂದು ನಾನೇ ಹೇಳುತ್ತಿದ್ದೆ. ಆದರೆ ನಾನು ದುರ್ಬಲವಾಗುತ್ತಿರುವುದು, ಸೋಲುತ್ತಿರುವುದು ನೂರಕ್ಕೆ ನೂರು ನಿಜ. ಚಂದ್ರು.... ಚಂದ್ರು, ಅಂತ ಅರಚಬೇಕೆನ್ನಿಸಿತು.

ರಾತ್ರಿಯೆಲ್ಲ ಪ್ರಜ್ಞೆಯಿಲ್ಲದೆ ಬಿದ್ದಿದ್ದೆ. ಬೆಳಗ್ಗೆ ಏಳಲು ಪ್ರಯತ್ನಿಸಿದಾಗ ಸಾಧ್ಯವೇ ಆಗಲಿಲ್ಲ. ತಲೆ ವಿಪರೀತ ಭಾರವಾಗಿತ್ತು. ಹಿಮದಲ್ಲಿದ್ದರೆ ಎಷ್ಟು ಚಳಿಯೋ ಅಷ್ಟು ಚಳಿ. ಇದ್ದ ಒಂದೆರಡು ಕಂಬಳಿಗಳನ್ನು ಹೊದ್ದುಕೊಂಡರೂ ಸಾಕಾಗಲಿಲ್ಲ. ಮೈ ಸುಡುತ್ತಿತ್ತು. ಮೃದು ನೆನಪಾಯಿತು. ಅವಳಿದ್ದಿದ್ದರೆ ನನ್ನನ್ನು ನೋಡಿಕೊಳ್ಳುತ್ತಿದ್ದಳು. ಆದರೆ ಈಗ ಏಳುವುದಕ್ಕೂ ಆಗದೆ, ನನ್ನ ವಿಷಯ ಯಾರಿಗೂ ತಿಳಿಯಲಿಲ್ಲ. ಮಧ್ಯಾಹ್ನದವರೆಗೂ ನರಳುತ್ತಲೇ ಇದ್ದೆ. ವಾರ್ಡನ್ ಬಂದು ಬಾಗಿಲು ತಟ್ಟಿದಳು. ಶಕ್ತಿಯನ್ನು ಕೂಡಿಸಿಕೊಂಡು ಕಾಲುಗಳನ್ನು ಎಳೆದುಕೊಳ್ಳುತ್ತಾ ಬಂದು ಬಾಗಿಲು ತೆಗೆದೆ. ನಿಲ್ಲುವುದಕ್ಕೂ ಶಕ್ತಿಯಿಲ್ಲದೆ ಬಿದ್ದೆ. ವಾರ್ಡನ್ ಗಾಬರಿಯಾಗಿ ಬಗ್ಗಿ ಕೈಕೊಟ್ಟು ಎಬ್ಬಿಸಿದಳು. ಮೇರಿಯ ದಯಾರ್ದ್ರ ಕಣ್ಣುಗಳನ್ನು ನೋಡುತ್ತಿದ್ದರೆ ಅವಳಲ್ಲಿ ತಾಯಿಯ ಮುಖ ಕಾಣಿಸಿತು. 'ಅಮ್ಮ' ಎಂದು ನರಳಿದೆ. ವಾರ್ಡನ್ ಮೇರಿ ಒಂದೈದು ನಿಮಿಷದಲ್ಲಿ ಬರುತ್ತೇನೆಂದು ಹೇಳಿ ಹೊರಗೆ ಹೊರಟಳು.

ಐದು ನಿಮಿಷಗಳೊಳಗಾಗಿ ವಾರ್ಡನ್, ಚಂದ್ರು ಜೊತೆಗೆ ಬಂದಳು. ಚಂದ್ರು... ಚಂದ್ರು... ಅಸ್ಪಷ್ಟವಾಗಿ ಕಾಣಿಸಿತು. ನನಗೆ ನಂಬಿಕೆ ಬರಲಿಲ್ಲ. ಚಂದ್ರು ಇಲ್ಲಿಗ್ಯಾಕೆ ಬಂದ? ಎಂದು ಪ್ರಶ್ನಿಸಿತು ಮನಸ್ಸು.... ಇನ್ನೊಂದು ಐದು ನಿಮಿಷದಲ್ಲಿ ಡಾಕ್ಟರೂ ಬಂದರು. ಪರೀಕ್ಷಿಸಿ, ಕೂಡಲೇ ಆಸ್ಪತ್ರೆಗೆ ಸೇರಿಸಲು ಹೇಳಿದರು. ವಾರ್ಡನ್ ಚಂದ್ರುವಿನೆಡೆಗೆ ನೋಡಿದಳು. ಅರ್ಥಮಾಡಿಕೊಂಡ ಚಂದ್ರು ಹೊರಗೆ ಹೊರಟ.

ವಾರ್ಡನ್, ಚಂದ್ರು ಮಮತಾ ಮೂವರೂ ಟ್ಯಾಕ್ಸಿಯಲ್ಲಿ ಹೊರಟರು. ಚಂದ್ರು ಏನೇನೋ ಹೇಳ್ಬೇಕೂಂತ ಬಂದಿದ್ದ.. ಮುರಿದ ನಂಟನ್ನು ಸರಿಪಡಿಸಲು ಯೋಚಿಸಿದ್ದ. ಆದ ಅನ್ಯಾಯಕ್ಕೆ ಪರಿಹಾರ ನೀಡಲು ಯೋಚಿಸಿದ್ದ. ಆದರೆ ಮಮತಾ ಈಗ ಕೇಳುವ ಸ್ಥಿತಿಯಲ್ಲಿಲ್ಲ. ಇನ್ನೂ ಕಾಯಬೇಕು. ನಿಶ್ಚೇಷ್ಟಿತಳಾಗಿ ಬಿದ್ದಿದ್ದ ಮಮತಳತ್ತ ನೋಡುತ್ತಿದ್ದ. ಆ ವಯಸ್ಸಿನ ಕಾವು ಕಳೆದದ್ದರಿಂದ ಸಮಾಧಾನವಾಗಿ ಯೋಚಿಸಿದ. ಮಮತಳ ಮುಂದೆ ಪ್ರಸ್ತಾಪ ಮಾಡಲು ಬಂದಿದ್ದ.

ಟ್ಯಾಕ್ಸಿಯ ವೇಗ ಹೆಚ್ಚಿತು. ಮಮತಳಲ್ಲಿ ಚಲನೆಯೇ ಇರಲಿಲ್ಲ. ವಾರ್ಡನ್‌ಗೆ ಭಯವಾಯಿತು. ಆಸ್ಪತ್ರೆ ಸೇರುವವರೆಗೆ ಮನಸ್ಸಿನಲ್ಲಿಯೇ ಪ್ರಾರ್ಥಿಸಿದಳು. ಚಂದ್ರುವಿನ ಎದೆ ಡವ ಡವ ಹೊಡೆದುಕೊಳ್ಳುತ್ತಿತ್ತು.

ಆಸ್ಪತ್ರೆಗೆ ಸೇರಿದ ಒಂದು ವಾರದ ಮೇಲೆ ನನ್ನ ಪರಿಸ್ಥಿತಿ ಸುಧಾರಿಸಿತು. ತುಂಬಾ ಸಂತೋಷವಾದದ್ದೆಂದರೆ ವಾರ್ಡನ್‌ಗೆ. ಮಗುವಿಗಿಂತ ಹೆಚ್ಚಿನ ವಾತ್ಸಲ್ಯವನ್ನು ತೋರಿಸಿ ನನ್ನ ಪ್ರಾಣವನ್ನೇ ಉಳಿಸಿದಳು. ನನ್ನ ಮನಸ್ಸು ಕೃತಜ್ಞತೆಯಿಂದ ತುಂಬಿ ಹೋಯಿತು.

ಚಂದ್ರೂ ಮಾಮೂಲಿನಂತೆ ಬಂದು ಹೋಗುತ್ತಾನೆ. ವಾರ್ಡನ್ ಮೇರಿಯಿಂದ ಚಂದ್ರುವಿನ ವಿಷಯ ತಿಳಿಯಿತು. ಮೊದಮೊದಲು ಮುಖ ನೋಡಲು ಅಸಹ್ಯಪಟ್ಟುಕೊಂಡರೂ, ಸೌಜನ್ಯಕ್ಕಾಗಿ ಒಂದೆರಡು ಮಾತಾಡುತ್ತಿದ್ದೆ. ಮದುವೆಯಾಗಿರೋ ಚಂದ್ರು ಹೀಗ್ಯಾಕೆ ತನ್ನ ಬೆನ್ನ ಹಿಂದೆ ಬಿದ್ದಿದ್ದಾನೆಂದು ಅನಿಸಿದರೂ ಕೇಳಲಿಲ್ಲ. ಚಂದ್ರುವಿನಲ್ಲಿ ತುಂಬಾ ಬದಲಾವಣೆಯಾಗಿದೆ. ಮುಖದಲ್ಲಿ ದೈನ್ಯತೆ ತುಂಬಿದೆ. ಮೊದಲಿದ್ದ ನಗುವಿನ ಮುಖ ಅಲ್ಲವೇ ಅಲ್ಲ. ತೀರಾ ಬಡಕಲಾಗಿದ್ದಾನೆ. ಒಂದು ಸಲ ನೋಡಿದರೆ "ಅಯ್ಯೋ" ಎನಿಸುತ್ತೆ!

ಸ್ಪೆಷಲ್ ವಾರ್ಡ್ ತೆಗೆದುಕೊಂಡಿದ್ದ ನನಗೆ ಯಾವ ಡಿಸ್ಟರ್‌ಬೆನ್ಸೂ ಇರಲಿಲ್ಲ. ಆ ದಿನ ವಾರ್ಡನ್ ನನ್ನನ್ನು ನೋಡೋಕೆ ಇನ್ನೂ ಬಂದೇ ಇರಲಿಲ್ಲ. ಒಬ್ಬಳೇ ಮಲಗಿದ್ದೆ... ಚಂದ್ರು ಬಂದ... ಹಾಸಿಗೆಗೆ ತೀರಾ ಸಮೀಪ ಬಂದು ಏನೋ ಹೇಳಬೇಕೆಂದು ಪ್ರಯತ್ನಿಸುತ್ತಿದ್ದಂತೆ ತೋರಿತು. ನಾನಾಗಿ ನಾನು ಕೇಳಲಿಲ್ಲ. ಪ್ರಯಾಣ ಮಾಡುವಾಗ

ಮಾಡಿಕೊಂಡ ಸ್ನೇಹದಂತೆ, ಚಂದ್ರು ಮತ್ತು ನನ್ನ ಸ್ನೇಹ ಎಂದುಕೊಂಡಿದ್ದೆ. ಆದ್ದರಿಂದಲೇ ಹೆಚ್ಚಿನ ಸ್ನೇಹ ಬೇಡವೆಂದು, ಅವನು ಹೇಳಬೇಕೆನ್ನುವುದನ್ನು ಹೇಳುವಂತೆ ಪ್ರೋತ್ಸಾಹ ನೀಡಲಿಲ್ಲ. ನನ್ನಿಂದ ಉತ್ತೇಜನ ದೊರೆಯಬಹುದೆಂದು ನಿರೀಕ್ಷಿಸಿದ ಚಂದ್ರುಗೆ ನನ್ನ ಕೃತಜ್ಞತೆಯಷ್ಟೇ ದೊರೆತದ್ದು. ಚಂದ್ರುವೇ ಮುಂದಾಗಿ ಮಾತನಾಡಬೇಕೆಂದು ಬಾಯಿ ತೆಗೆದ. ಅಷ್ಟರಲ್ಲಿ ವಾರ್ಡನ್ ಮೇರಿಯ ಕೆಮ್ಮು ಕೇಳಿಸಿ, ಚಂದ್ರುವಿನ ಮಾತು ಗಂಟಲಲ್ಲೇ ಉಳಿಯಿತು.

* * *

ಬೀಳ್ಕೊಡುಗೆ

ಕಾಲೇಜು ವಾತಾವರಣ ಬಿಸಿಬಿಸಿಯಾಗಿತ್ತು. ಕ್ಲಾಸುಗಳಲ್ಲೆಲ್ಲ ಗುಸು ಗುಸು ಪಿಸ ಪಿಸ. ಪ್ರೊಫೆಸರ್ ನೀಲಕಂಠರಾಯರಿಗೆ ಸನ್ಮಾನ ಸಮಾರಂಭ. ಯಾಕೆ. ಏನು? ಯಾರಿಗೂ ಸರಿಯಾದ ಕಾರಣ ಗೊತ್ತಿರಲಿಲ್ಲ. ಹುಡುಗರಿಗೆ ತಲೆಗೊಂದರಂತೆ ಊಹಾಪೋಹಗಳು. ಘಟಿಂಗ ಹುಡುಗರು 'ನೀಲಕಂಠರಾಯರನ್ನೇ ಕೇಳಿಬಿಡುವುದು'– ಎಂದುಕೊಂಡರು. ಹುಡುಗಿಯರಿಗೂ ಆಸಕ್ತಿ ಮೊದಲು ಇದ್ದಿತಾದರೂ, ನಂತರ ಯಾಕೋ ಅನಾಸಕ್ತರಾಗಿ ಉಳಿದರು.

ಸಹೋದ್ಯೋಗಿಗಳಿಗೇ ಸರಿಯಾಗಿ ಗೊತ್ತಿರಲಿಲ್ಲ. ಕಾಂಟ್ರಿಬ್ಯೂಷನ್ ಮಾಡಬೇಕಾಗಿ ಒಂದಾಗಿ ಬಂದಾಗ ಸ್ವಲ್ಪ ಸ್ವಲ್ಪ ಗೊತ್ತಾಯಿತು. ಅದಕ್ಕೆ ಪ್ರೊಫೆಸರರು ಇತ್ತೀಚೆಗೆ ಒಂದು ಥರ ಇದ್ದರು. ಮುಖದಲ್ಲಿ ಮೊದಲು ಇರುತ್ತಿದ್ದ ನಗುವಾಗಲೀ, ಗೆಲುವಾಗಲಿ ಕಾಣಿಸುತ್ತಿರಲಿಲ್ಲ. ವಯಸ್ಸಾಗಿದ್ದರೂ ಅವರಲ್ಲಿದ್ದ ಲವಲವಿಕೆ ಯುವಕರನ್ನು ನಾಚಿಸುವಂತಿತ್ತು. ಅಲ್ಲದೆ ಅವರಿಲ್ಲದಿದ್ದರೆ staff room ಏನೋ ಒಂದು ರೀತಿಯಲ್ಲಿ ಮಂಕಾಗಿ ನಿಶ್ಚೇಷ್ಟ ರೋಗಿಯಂತೆ ಇರುತ್ತಿತ್ತು.

ಪ್ರೊಫೆಸರರು ಎಲ್ಲರಿಗೂ ಬೇಕಾಗಿದ್ದರೂ, ಆದರೆ ಯಾಕೋ ಆಡಳಿತ ವರ್ಗಕ್ಕೆ ಅದರಲ್ಲೂ ಪ್ರಿನ್ಸಿಪಾಲರಿಗೆ ಏನೋ ಒಂದು ರೀತಿಯ ಮನಸ್ತಾಪ ಇದ್ದ ಹಾಗಿತ್ತು. ಆದರೆ ಇದು ಅವ್ಯಕ್ತ. ಮೇಲೆ ಮೇಲೆ ಮಾತನಾಡುವ ಸೌಜನ್ಯವಿದ್ದರೂ ಒಳಗೊಳಗೇ ಪ್ರೊಫೆಸರರ ಬಗ್ಗೆ ಅಸಮಾಧಾನವಿತ್ತು. ಆ ಅಸಮಾಧಾನ ಯಾವ ರೀತಿಯಲ್ಲೂ ನೇರವಾಗಿ ವ್ಯಕ್ತಪಡಿಸುವ ಹಾಗಿರಲಿಲ್ಲ. ಈ ಸತ್ಯ ಇಬ್ಬರಿಗೂ ಗೊತ್ತು. ಪ್ರತಿಭಾವಂತ ಪ್ರೊಫೆಸರರು ಎಲ್ಲರ ಮನಸ್ಸಿನಲ್ಲಿಯೂ ಒಂದೊಂದು ಭದ್ರವಾದ ನೆಲೆಯನ್ನು ಗಳಿಸಿಕೊಂಡಿದ್ದರು. ಸ್ಪಷ್ಟವಾದಿ ಮನುಷ್ಯರಾದ್ದರಿಂದ, ಸ್ವಲ್ಪ ನಿಷ್ಠೂರವಾಗಿ ಎದುರಿನವರಿಗೆ ಅನಿಸುತ್ತಿದ್ದುದು ಸ್ವಾಭಾವಿಕ. ಅವರ ಶತ್ರುಗಳಿಂದ ಅವರನ್ನೇ ಕೆಡವಿಕಟ್ಟುವುದಂತೂ ಅಸಂಭವವಾಗಿತ್ತು, ಅದಕ್ಕೇ ಹಲ್ಲು ಕಚ್ಚಿಕೊಂಡು ಅವರ Franknessನ

ಸಹಿಸಿಕೊಳ್ಳಬೇಕಾಗಿತ್ತು. ಪ್ರೊಫೆಸರರೇ ಪ್ರಿನ್ಸಿಪಾಲರಿಗೆ ಸಿಂಹಸ್ವಪ್ನವಾಗಿದ್ದರೂ ಪ್ರೊಫೆಸರರು ತಮ್ಮ ಕೆಲಸವನ್ನು ತಾವು ಬಹಳ ಕರ್ತವ್ಯ ಪ್ರಜ್ಞೆಯಿಂದ ಯಾರೂ ಅವರತ್ತ ಬೆರಳು ತೋರಿಸಲು ಅವಕಾಶವಿಲ್ಲದವರಂತೆ ಮಾಡಿಕೊಂಡು ಹೋಗುತ್ತಿದ್ದುದರಿಂದ ಪ್ರಿನ್ಸಿಪಾಲರಿಗೂ ಅವರನ್ನು ಪ್ರಶ್ನಿಸುವ ಎದೆಗಾರಿಕೆಯಿರಲಿಲ್ಲ.

ನೇರವಾಗಿ ಆಗದ್ದಕ್ಕೆ ಬಳಸು ದಾರಿಗಳನ್ನು ಹುಡುಕಬೇಕಾಗಿತ್ತು. ಪ್ರಿನ್ಸಿಪಾಲರಿಗೆ ಅದಕ್ಕೇ ಷೆರ್ಲಾಕ್ ಹೋಮ್ಸ್‌ನಂಥ ಪತ್ತೇದಾರಿಗಳು ಉದ್ಯೋಗಿಗಳಲ್ಲೇ ಹುಟ್ಟಿಕೊಂಡರು. ಪ್ರೊಫೆಸರರ ಮಾತುಕತೆ, ನಡವಳಿಕೆ, ಯಾರ್ಯಾರೊಂದಿಗೆ ಅವರ ಸಂಬಂಧ, ಪ್ರತಿಯೊಬ್ಬರೊಡನೆಯೂ ಅವರ ಚಲನವಲನ– ಎಲ್ಲಾ ಸಾಹೇಬರಿಗೆ ವರದಿಯಾಗುತ್ತಿತ್ತು. ಪ್ರೊಫೆಸರರ ಪಾಲಿಗೆ ನಿರಂತರ ಎಮೆರ್ಜೆನ್ಸಿ ಇದ್ದ ಹಾಗೇ ಇತ್ತು. ಅವರ ವೀಕ್ ಪಾಯಿಂಟ್ಸ್ ಮತ್ತು ಸ್ಟ್ರಾಂಗ್ ಪಾಯಿಂಟ್ಸ್ ಏನೇನು ಅನ್ನುವುದೆಲ್ಲ ಸಾಹೇಬರ ಫೈಲಲ್ಲಿ ದಾಖಲೆಯಾಗಿತ್ತು.

ಇಂತಹ ಒತ್ತಡದ ವಾತಾವರಣದಲ್ಲಿ ಪ್ರೊಫೆಸರರಿಗೆ ಸಮಾರಂಭ ಅದೂ ಬೀಳ್ಕೊಡುಗೆ. ಮೊದ ಮೊದಲು ಯಾರಿಗೂ ಅರ್ಥವಾಗದಿದ್ದರೂ ಕ್ರಮೇಣ ಎಲ್ಲ ವಿವರಣೆಗಳು ಒಂದೊಂದಾಗಿ ಹೊರಬಂದವು.

ಪ್ರೊಫೆಸರರಿಗೆ ದೂರದ ಯಾವುದೋ ಒಂದು ಹಳ್ಳಿಯಲ್ಲಿನ ಕಾಲೇಜಿಗೆ ಟ್ರಾನ್ಸ್‌ಫರ್! ಅವರ ನಿವೃತ್ತಿಗೆ ಕೇವಲ ಒಂದೋ ಎರಡೋ ವರ್ಷಗಳು ಇರಬೇಕಾಗಿರುವಾಗ ಟ್ರಾನ್ಸ್‌ಫರ್! ಎಲ್ಲರಿಗೂ ಆಶ್ಚರ್ಯ. ಆದರೆ ಇದರ ಹಿಂದೆ ರಾಜಕೀಯ ಇದೆ ಎನ್ನುವುದು ಎಲ್ಲರಿಗೂ ಅಸ್ಪಷ್ಟವಾಗಿ ತಿಳಿದಿತ್ತು.

ಪ್ರೊಫೆಸರರು ಹೆಚ್ಚು ವರ್ಷ ಇದ್ದದ್ದು ಇದೇ ಕಾಲೇಜಿನಲ್ಲಿಯೇ. ಅವರಿಗೆ ಇದರೊಂದಿಗೆ ನೆಚ್ಚಿಕೆ ಬಹಳ. ಈ ಕಾಲೇಜಿನ ವಿದ್ಯಾರ್ಥಿಗಳು ಸಹೋದ್ಯೋಗಿ ಗಳೊಂದಿಗೆ ಅವರದು ಅವಿಭಾಜ್ಯ ಆತ್ಮೀಯತೆ. ಕೊನೆ ನಿಮಿಷದವರೆವಿಗೂ ಇದರೊಂದಿಗೇ ಇದ್ದು ಈ ಕಾಲೇಜಿನಿಂದಲೇ ನಿವೃತ್ತಿಯನ್ನು ಪಡೆಯಬೇಕೆಂಬುದು ಅವರ ಹೆಬ್ಬಯಕೆ. ಆದರೆ ಈಗ ಅನಿವಾರ್ಯ ಪರಿಸ್ಥಿತಿ ಸೃಷ್ಟಿಯಾಗಿತ್ತು. ಪ್ರೊಫೆಸರರು ಅಲ್ಲಿ ಉಳಿಯುವುದು ಕಾಲೇಜಿನ ಪ್ರಿನ್ಸಿಪಾಲರಿಗೇ ಬೇಕಿರಲಿಲ್ಲ. ಅವರೇನಿದ್ದರೂ ತಮ್ಮ ಪಕ್ಷ ಗಟ್ಟಿ ಬೀಳುವುದಷ್ಟನ್ನೇ ಕಾಯುತ್ತಿದ್ದರು.

ಪ್ರೊಫೆಸರರಿಗೆ ತಮಗೆ ಸನ್ಮಾನ ಮಾಡುವರೆಂಬ ಸುದ್ದಿ ಹಿತಕರವೆನಿಸಿರಲಿಲ್ಲ. ಒರಟಾಗಿ ಅವು ಯಾವುದೂ ಬೇಡವೆಂದು ಹೇಳಿಬಿಡೋಣವೆನಿಸಿತ್ತು. ಆದರೆ ಉಳಿದವರೊಂದಿಗೆ ಅವರಿಗಿದ್ದ ಆತ್ಮೀಯತೆ ಕಟ್ಟಿ ಹಾಕಿತ್ತು. ಪ್ರಿನ್ಸಿಪಾಲರ ನೆರಳೂ ಅಸಹ್ಯವೆನಿಸುತ್ತಿದ್ದಾಗಲೂ ವಿವಶರಾಗಿ ಒಪ್ಪಿಕೊಳ್ಳಲೇಬೇಕಾದ ಸಂದರ್ಭವೊದಗಿತು. ಮನಸ್ಸಿಲ್ಲದ ಮನಸಸಿನಿಂದ ಹೂಂ ಅಂದಿದ್ದರು.

ಕಾಲೇಜಿನಲ್ಲಿ ಹಬ್ಬದ ವಾತಾವರಣ ಹರಡಿದೆ. ವಿದ್ಯಾರ್ಥಿಗಳೆಲ್ಲ ಪ್ರೊಫೆಸರರ ಬಗೆಗಿನ ಅಭಿಮಾನವನ್ನು ಒಂದಲ್ಲ ಒಂದು ಕೆಲಸ ಮಾಡಿ ವ್ಯಕ್ತಪಡಿಸುತ್ತಿದ್ದಾರೆ. ಕಾಲೇಜಿನ ದೊಡ್ಡ ಗೇಟನ್ನು ತಳಿರು ತೋರಣಗಳಿಂದ ಅಲಂಕರಿಸಿದ್ದರು. ೪೦ನೇ ನಂಬರಿನ ಕೊಠಡಿಯನ್ನಂತೂ ಅದ್ಭುತವಾಗಿ ಅಲಂಕರಿಸಿದ್ದರು. ಪರಮಶಿವನ್ ಬ್ಲಾಕ್ ಬೋರ್ಡ್ ತುಂಬಾ ಬಣ್ಣ ಬಣ್ಣದ ಚಾಕ್‌ಪೀಸ್‌ಗಳಿಂದ ತನ್ನ ಅದ್ಭುತ ಕಲೆಗೆ ಫ್ರೀಡಮ್ ಕೊಟ್ಟಿರುವ ಹಾಗೆ ಅನಿಸುತ್ತಿತ್ತು. "ಆರಾಧ್ಯ ಅಭಿಮಾನಿ ಎನ್. ರಾಯರಿಗೆ ವಿದ್ಯಾರ್ಥಿಗಳ ಭಕ್ತಿಯ ಬೀಳ್ಕೊಡುಗೆ" ಎಂದು ಹೂಬಳ್ಳಿಗಳಿಂದಲೇ ಬಿಡಿಸಲಾಗಿತ್ತು. ಒಂದೊಂದು ತರಗತಿಯವರೂ ತಾವು ಅರ್ಪಿಸಲೆಂದು ತಂದಿದ್ದ ಭವ್ಯ ಪುಷ್ಪಮಾಲೆಗಳು ವೇದಿಕೆಯ ಬಲಮೂಲೆಯಲ್ಲಿ ಒಂದು ಸಣ್ಣ ಹೂಗುಡ್ಡದಂತೆ ಕಾಣಿಸುತ್ತಿತ್ತು.

ವೇದಿಕೆಯ ಮೇಲೆ ದೊಡ್ಡದಾದ ಟೇಬಲ್ಲೊಂದನ್ನು ಅಳವಡಿಸಿ, ಹೂ ಚಿಟ್ಟೆಗಳ ಟೇಬಲ್ ಕ್ಲಾತನ್ನು ಹಾಸಲಾಗಿತ್ತು. ಅದರ ಮೇಲೆ ಮೈಕ್‌ಗಳು, ಕಾರ್ಯಕ್ರಮದ ಹಾಳೆಗಳು, ಅವುಗಳ ಮೇಲೊಂದು ಭಾರಕಲ್ಲು. ಹಿಂಬದಿಯಲ್ಲಿ ಎರಡು ಕುರ್ಚಿಗಳು ಒಂದು ಪ್ರೊಫೆಸರಿಗೆ ಮತ್ತೊಂದು ಪ್ರಿನ್ಸಿಪಾಲರಿಗೆ.

ಪ್ರಿನ್ಸಿಪಾಲರು ಪ್ರೊಫೆಸರನ್ನು ಹಸನ್ಮುಖದಿಂದಲೇ ವೇದಿಕೆಯ ಮೇಲೆ ಕರೆದುಕೊಂಡು ಹೋಗಿ ಅವರಿಗಾಗಿ ಮೀಸಲಾಗಿದ್ದ ಕುರ್ಚಿಯನ್ನು ತೋರಿಸುತ್ತಿದ್ದರು. ಆದರೆ ಪ್ರೊಫೆಸರರು ಅನ್ಯ ಮನಸ್ಕರಾಗಿರುವುದು ಎಲ್ಲರಿಗೂ ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಈ ಕಾಲೇಜಿನಲ್ಲಿ ಕಳೆದ ದಿನಗಳ ನೆನಪುಗಳು ಒಂದೊಂದಾಗಿ ಅವರ ಕಣ್ಮುಂದೆ ಸುಳಿಯತೊಡಗಿದವು. ವಿದ್ಯಾರ್ಥಿಗಳಿಗೆ ತಾವು ಕೊಡುತ್ತಿದ್ದ ಸಲುಗೆ ಇದರಿಂದಾಗಿ ತಮ್ಮ ಮೇಲೆ ಅವರು ಬೆಳೆಸಿಕೊಂಡ ವಿಶ್ವಾಸ, ಸ್ನೇಹ, ವಯಸ್ಸಿನಲ್ಲಿ ಹಿರಿಯರಾದರೂ ಕಿರಿಯ ಸಹೋದ್ಯೋಗಿಗಳೊಂದಿಗೆ ಸರಸವಾಗಿಯೇ ಇರುತ್ತ, ವಯಸ್ಸಿನ ಅಂತರವೇನೆಂಬುದನ್ನು ಮರೆಯುತ್ತಿದ್ದ ಮಧುರ ಕ್ಷಣಗಳು, staff ರೂಂನಲ್ಲಿ ಅವರು ಮಾತನಾಡುತ್ತಿದ್ದ ವಿಷಯಗಳು ಒಂದೇ ಎರಡೇ!! ರಾಜಕೀಯ, ಅರ್ಥಶಾಸ್ತ್ರ, ಇತಿಹಾಸ, ಧರ್ಮ, ಸಂಸ್ಕೃತಿ ಇತ್ಯಾದಿ.

ಕೊನೆಗೆ ತಮ್ಮ ಸ್ವಂತ ಕುಟುಂಬದ ವಿಷಯಗಳನ್ನೂ ಸಹ ಮುಚ್ಚು ಮರೆಯಿಲ್ಲದೆ ಹೇಳುತ್ತಿದ್ದರು. ಕಿರಿಯ ಸಹೋದ್ಯೋಗಿಗಳಂತೂ ಅವರ ಉಪಸ್ಥಿತಿಯಲ್ಲಿ [illegible] ಪಾನೀಯ ಕುಡಿದ ಹಾಗೆ. ಆದರೆ ಪ್ರಿನ್ಸಿಪಾಲರೊಬ್ಬರಿಗೆ ಇವರು ಮೆಚ್ಚಿಗೆಯಾಗದೆ ಹೋದರು. ಅದಕ್ಕೆ ಕಾರಣ, ರಾಯರ ವಿರೋಧ ಪ್ರವೃತ್ತಿ. ಎಂದಾದರೂ ಯಾರಿಗಾದರೂ ಅನ್ಯಾಯವಾಯಿತೆಂದು ತಿಳಿದ ಕೂಡಲೇ ಪ್ರೊಫೆಸರರು ಹಾಜರು. [illegible] ನೇರವಾಗಿ ಮಾತನಾಡಿ ಬಿಡುತ್ತಿದ್ದರು. ಪ್ರಿನ್ಸಿಪಾಲರ ನಿರಂಕುಶತೆಗೆ, ದಬ್ಬಾಳಿಕೆಗೆ [illegible] ಪ್ರೊಫೆಸರರು ಇರುವಷ್ಟು ಕಾಲ ಪ್ರಿನ್ಸಿಪಾಲರು ಬಾಲ

ಕತ್ತರಿಸಿದ ನರಿಯಂತಾಗಿ ಸಮಯಕ್ಕಾಗಿ ಹೊಂಚಿದ್ದು, ಪ್ರೊಫೆಸರರ ಪ್ರಭಾವ ವೈಸ್ ಛಾನ್ಸಲರ್ ಮತ್ತು ಡೈರೆಕ್ಟರ್ ಆಫ್ ಕಾಲೇಜಿಯೇಟ್ ಎಡ್ಯುಕೇಷನ್‌ರವರಿಗೂ ಇದ್ದದ್ದರಿಂದ ಅವರನ್ನು ಟ್ರಾನ್ಸ್‌ಫರ್ ಮಾಡಿಸಿ ತಮಗೆ ಬೇಕಾದವರನ್ನು ತಮ್ಮಲ್ಲಿಗೆ ಕರೆಸಿಕೊಳ್ಳಲು ಆಗಿರಲಿಲ್ಲ. ಆದರೆ ಈಗ ಡೈರೆಕ್ಟರ್ ಬದಲಾದ್ದರಿಂದ ಪ್ರಿನ್ಸಿಪಾಲರು ಡೊಂಕು ಹಾದಿಗಳನ್ನು ಹಿಡಿದು ಪ್ರೊಫೆಸರರ ಟ್ರಾನ್ಸ್‌ಫರ್ ಆರ್ಡರನ್ನು ಗಿಟ್ಟಿಸಿಕೊಂಡಿದ್ದರು.

ಅಂಥಾದ್ದರಲ್ಲಿ ಈಗ ಪ್ರಿನ್ಸಿಪಾಲರು ತಮಗೆ ತೋರುತ್ತಿರುವ ಗೌರವ ಬೇರುಗಳಲ್ಲೇ ಕೊಳೆತಿರುವುದೆಂದು ತಿಳಿದಿದ್ದರು. ಪ್ರಾರ್ಥನೆಯಿಂದ ಪ್ರಾರಂಭವಾದ ಕಾರ್ಯಕ್ರಮ ವಿದ್ಯಾರ್ಥಿ ಪ್ರತಿನಿಧಿಗಳಿಂದ ಮುಂದುವರಿಯಿತು. ಕೊನೆಗೆ ಪ್ರಿನ್ಸಿಪಾಲರು ಎದ್ದು ನಿಂತು ಒಂದು ಕ್ಷಣ ಗಂಭೀರವಾದ ಆಲೋಚನೆಯಲ್ಲಿ ಇರುವಂತೆ ಕಂಡರು. ಗಂಟಲು ಸಾವರಿಸಿಕೊಂಡು ಮಾತಿಗೆ ಮೊದಲಿಟ್ಟರು.

ಪ್ರೀತಿಯ ಪ್ರೊಫೆಸರರೇ, ನೆಚ್ಚಿನ ವಿದ್ಯಾರ್ಥಿಗಳೇ ಇಂದು ನಾವು ಇಲ್ಲಿ ಸಮಾವೇಶಗೊಂಡಿರುವುದರ ಕಾರಣ ತಮಗೆಲ್ಲರಿಗೂ ವೇದ್ಯವೆಂದೇ ನನ್ನ ಭಾವನೆ. ಈ ಸಂದರ್ಭವನ್ನು ಸಂಭ್ರಮದಿಂದ ಆಚರಿಸಬೇಕಾದ್ದಲ್ಲ. ನಿಜವಾಗಿಯೂ ನಮಗೆಲ್ಲ ಪ್ರೊಫೆಸರನ್ನು ಬೀಳ್ಕೊಡಬೇಕೆಂದರೆ, ತುಂಬಾ ವಿಷಾದವೆನಿಸುತ್ತದೆ. ಅವರ ಸಹವಾಸ, ಸ್ನೇಹ, ಸೌಜನ್ಯ, ಪ್ರತಿಭೆಗಳ ವಿಷಯವಾಗಿ ಮಾತನಾಡಿದರೆ ನಿಮಗೆ ಅತಿಷಯೋಕ್ತಿ ಎನಿಸಬಹುದು. ಅವರ ಬಗ್ಗೆ ನನಗಿರುವ ಪ್ರೇಮ, ಆದರ, ಸ್ನೇಹಗಳು ಎಷ್ಟಿವೆಯೆಂದು ಶಬ್ಧಗಳಲ್ಲಿ ಹೇಳಲುಸಾಧ್ಯವಿಲ್ಲ. ಒಂದು ಮಾತಿನಲ್ಲಿ ಸಂಕ್ಷಿಪ್ತವಾಗಿ ಹೇಳಬೇಕೆಂದರೆ ನನ್ನ ಪ್ರಾಣವೇ ಅವರಾಗಿದ್ದರು. ಪ್ರೊಫೆಸರರ ಆದರ್ಶಗಳು ಅವರ ಸಂಯಮ ಬದುಕು ಪ್ರತಿಯೊಬ್ಬರಿಗೂ ಮಾದರಿಯಾಗಿದೆಯೆಂದೇ ಹೇಳಬಹುದು. ವಯಸ್ಸು ಅವರಿಗೆ ಹೊರೆಯಲ್ಲ. ಕ್ರಿಯಾಶೀಲತೆಯೇ ಅವರ ಬದುಕಿನ ಗುರಿ. ಅವರ ಲವಲವಿಕೆಯ ಬದುಕು ಯುವ ಜನಾಂಗವನ್ನೇ ನಾಚಿಸುವಂಥಾದ್ದು. ಇಂತಹ ವ್ಯಕ್ತಿ ನಮ್ಮ ನಡುವೆ ಇದ್ದದ್ದು ನಮ್ಮ ಸೌಭಾಗ್ಯ. ಇವರು ವ್ಯಕ್ತಿಯಲ್ಲ. ಒಂದು ಪರಂಪರೆ ಹೀಗಿರುವಲ್ಲಿ ಇವರನ್ನು ಬೀಳ್ಕೊಡುವುದೆಂದರೆ ನಮ್ಮಿಂದ ನಮ್ಮ ಪ್ರಾಣ ಅಗಲಿದಂತೆಯೇ. ಇವರ ವಿಷಯವಾಗಿ ಹೇಳುತ್ತಾ ಹೋದರೆ ಕೊನೆಯಿಲ್ಲವೆಂದೇ ಅನ್ನಿಸುತ್ತದೆ. ನಾವೇನಿದ್ದರೂ ಅವರಲ್ಲಿ ಬೇಡಿಕೊಳ್ಳಬೇಕಾಗಿರುವುದು, "ನಮ್ಮಿಂದ ನಮ್ಮರಿವಿಲ್ಲದೆ ಅವರ ಮನಸ್ಸಿಗೆ ನೋವಾಗುವಂತಹ ರೀತಿಯಲ್ಲಿ ವರ್ತಿಸಿದ್ದರೆ ಅದನ್ನು ಮುಕ್ತ ಮನಸ್ಸಿನಿಂದ ಮನ್ನಿಸುವುದು ಮತ್ತು ಅವರೆಲ್ಲಿದ್ದರೂ ನಮ್ಮನ್ನು ಅಂದರೆ ನಮ್ಮ ನೆನಪುಗಳನ್ನು ಅವರ ಹೃದಯದ ತಿಜೋರಿಯಲ್ಲಿ ಭದ್ರಪಡಿಸುವುದು"- ಎಂದು ವಿನಯವೇ ಸಾಕಾರಗೊಂಡಂತೆ ಅಭಿನಯಿಸಿದರು.

ವಿದ್ಯಾರ್ಥಿಗಳು ಬಯಸುವುದಾದರೆ ಬಂದು ಪ್ರೊಫೆಸರರಿಗೆ ತಮ್ಮ ಭಕ್ತಿ ಗೌರವಗಳನ್ನು ಸಮರ್ಪಿಸಬಹುದೆಂದ ಕೂಡಲೇ ಒಬ್ಬೊಬ್ಬರಾಗಿ ವಿದ್ಯಾರ್ಥಿ ಪ್ರತಿನಿಧಿಗಳು ಬಣ್ಣ ಬಣ್ಣದ ಹೂವಮಾಲೆಗಳನ್ನು ಪ್ರೊಫೆಸರರ ಕೊರಳಿಗೆ ಹಾಕುತ್ತಿದ್ದಂತೆ ಕಿವಿಗಡಚಿಕ್ಕುವಂತೆ ಚಪ್ಪಾಳೆ ತಟ್ಟಿದರು. ಪ್ರೊಫೆಸರರು ಪ್ರತಿಸಲವೂ ಎದ್ದು ನಿಂತು ಕೈ ಮುಗಿದು ಮುಗುಳ್ ನಗೆಯನ್ನು ಸೂಚಿಸಿದರು.

ಪ್ರೊಫೆಸರರು ಒಂದೆರಡು ಮಾತುಗಳನ್ನು ಹೇಳಬೇಕೆಂದು ಪ್ರಿನ್ಸಿಪಾಲರು ವಿದ್ಯಾರ್ಥಿಗಳ ಪರವಾಗಿ ಪ್ರಾರ್ಥಿಸಿದರು. ಆದರೆ ಪ್ರೊಫೆಸರರು ಏನು ತಾನೇ ಮಾತಾಡಿಯಾರು? ಅಂತರಂಗದ ಆತ್ಮೀಯತೆಯನ್ನು ಬಹಿರಂಗಪಡಿಸಿ ಚಪ್ಪಾಳೆ ತಟ್ಟಿಸಿಕೊಳ್ಳುವ ಸ್ವಭಾವವಲ್ಲ ಅವರದು. ನಡೆಯಲ್ಲೊಂದು ಮಾತಿನಲ್ಲೊಂದು ನೀತಿಯಲ್ಲ. ಪ್ರಿನ್ಸಿಪಾಲರು ತಮಗೆ ಕೊಟ್ಟ ಕಿರುಕುಳದ ಪ್ರಜ್ಞೆ ಅವರಿಂದ ದೂರವಾಗಿಲ್ಲ. ತನ್ನ ಕೆಡುಕನ್ನು ಬಯಸಿ ಈಗ ಮುಂದೆ ಮುಖಸ್ತುತಿ ಮಾಡುತ್ತಿರುವ ಪ್ರಿನ್ಸಿಪಾಲರಂತಾಗಲು ಅವರಿಂದ ಸಾಧ್ಯವಿಲ್ಲ. ನಿಷ್ಠುರವಾದರೂ ಸ್ಪಷ್ಟವಾಗಿ ಮಾತನಾಡುವುದಷ್ಟೇ ಅವರಿಗೆ ಪರಿಚಯ, ಒಂದೆರಡು ನಿಮಿಷ ಮಾತಾಡಬೇಕೆಂದು ಬಹಿರಂಗವಾಗಿ ತಮ್ಮನ್ನು ಕೇಳಿಕೊಂಡಾಗ ಪ್ರೊಫೆಸರರಿಗೆ ಕಸಿವಿಸಿಯಾಯಿತು. ಹೇಗೆ ಪಾರಾಗಬೇಕೆಂಬುದೇ ತಿಳಿಯಲಿಲ್ಲ. ಪ್ರಿನ್ಸಿಪಾಲರಾದರೋ ಜೇನಿನಲ್ಲಿ ಅದ್ದಿ ತೆಗೆದ ನಾಲಿಗೆಯಿಂದ ಮಾತನಾಡಿದರು. ಅವರ ಆಷಾಡಭೂತಿತನ ತಮಗೆ ಬಾರದೆಂಬ ಚಿಂತೆ. ಜೂಲಿಯಸ್ ಸೀಸರ್ ನಾಟಕದ ನೆನಪಾಯಿತು! ಪ್ರೇಕ್ಷಕ ವಿದ್ಯಾರ್ಥಿಗಳಂತೂ ಪ್ರಿನ್ಸಿಪಾಲರ ಮಾತನ್ನು ಚಪ್ಪರಿಸಿದ್ದಾರೆ, ಅವರ ಮಾತುಗಳೆಲ್ಲ ಅಕ್ಷರಶಃ ನಿಜವೆಂದೇ ನಂಬುತ್ತಾರೆ. ಇದು ನಿಜವಾಗಿಯೂ ಚಾಣಕ್ಯ ನೀತಿ!!

"ದೇವರೇ ಈ ಸಂಕಟದಿಂದ ಪಾರಾಗಲು ಸಾಧ್ಯವೇ ಇಲ್ಲವೇ"- ಎಂದು ಮನಸ್ಸಿನಲ್ಲಿಯೇ ಪ್ರಾರ್ಥಿಸಿದರು. ಒಂದು ವೇಳೆ ಮಾತನಾಡದಿದ್ದರೂ ಎಲ್ಲರೂ ತಮ್ಮ ಬಗ್ಗೆ ಅನ್ಯಥಾ ಭಾವಿಸುವಂತಾಗುತ್ತೆ. ಆದ್ದರಿಂದ ಯೋಚಿಸಿದಷ್ಟೂ ಮಾತನಾಡಲೇ ಬೇಕಾದ್ದು ಅನಿವಾರ್ಯವೆನಿಸಲು ತೊಡಗಿತು.

ಮನಸ್ಸಿಲ್ಲದ ಮನಸ್ಸಿನಿಂದ ಎದ್ದರು. ಮೊದಲಿಗೆ ವಿದ್ಯಾರ್ಥಿಗಳನ್ನು ಮನಃಪೂರ್ವಕವಾಗಿ ಶ್ಲಾಘಿಸಿದರು. ನಂತರ ಉಳಿದವರು ಎಂದರೆ ಪ್ರಿನ್ಸಿಪಾಲರ ವಿಷಯವಾಗಿ ಏನೇನನ್ನೋ ತಿಳಿಸಬೇಕೆಂದುಕೊಂಡರು. ಆದರೆ ಮಾತು ಅನಾಯಾಸವಾಗಿ ಹೊರಬಿತ್ತು. "ಪ್ರಿನ್ಸಿಪಾಲರು ನನ್ನ ಬಗ್ಗೆ ತೋರುತ್ತಿರುವ ಅಭಿಮಾನ, ಆದರಗಳಿಗೆ ನಾನು ಕೃತಜ್ಞ (ಅವರ ಮಾತಿನಲ್ಲಿ ಒಂದಕ್ಷರವಾದರೂ ನಿಜವಾದುದಾದರೆ!) ಅವರ ವಿಷಯವಾಗಿ ನಾನು ಏನಾದರೂ ಹೇಳಿದರೆ ಆಷಾಢಭೂತಿತನವಾಗುತ್ತದೆ. ಆದ್ದರಿಂದಲೇ ಹೇಳುವುದಕ್ಕಿಂತ ಹೇಳದೇ ಇರುವುದೇ ಅರ್ಥಪೂರ್ಣವಾಗಿರುವುದೆಂದು

ಭಾವಿಸುತ್ತೇನೆ"– ಎಂದು ಹೇಳುತ್ತಾ ಕುಳಿತರು. ಪ್ರಿನ್ಸಿಪಾಲರಿಗೆ ತಿವಿದ ಹಾಗಾಯಿತು. ಮುಖ ಹುಳಿಯದರೂ ಸಾವರಿಸಿಕೊಂಡರು. ಕಾರ್ಯಕ್ರಮ ಮುಗಿದ ಕೂಡಲೇ ಬೇಗ ಬೇಗನೆ ಮನೆ ಕಡೆ ಹೆಜ್ಜೆ ಹಾಕಿದರು. ಮನಸ್ಸಿಗೆ ಏನೋ ಅಸಮಾಧಾನ, ಯಾರ ಮೇಲೋ ಸಿಟ್ಟು. ಮನುಷ್ಯನ ಛಿದ್ರ ವ್ಯಕ್ತಿತ್ವಕ್ಕೆ ಬಹುಮುಖ ಪಾತ್ರಕ್ಕೆ ಅಚ್ಚರಿಯೆನಿಸುತ್ತಿತ್ತು. ಪ್ರಪಂಚದಲ್ಲಿ ಯಾವುದಾದರೂ ರಹಸ್ಯವನ್ನಾದರೂ ತಿಳಿಯಬಹುದು. ಆದರೆ ಮನುಷ್ಯನ ಮನಸ್ಸಿನ ಮೂಲ ಮಾತ್ರ ಶೋಧಿಸಲು ಸಾಧ್ಯವೇ ಇಲ್ಲ ಎಂದೆನಿಸುತ್ತಿತ್ತು. ಪ್ರೊಫೆಸರರಿಗೆ, ಮನುಷ್ಯ ಮೇಲೆ ಕಾಣುವುದಷ್ಟೂ ಸುಳ್ಳು. ಅರ್ಥವಾಗದೆ ಅಡಗಿ ಕುಳಿತಿರುವ ಸ್ವಭಾವವಷ್ಟೇ ನಿಜ. ಯಾವ ಪೂರ್ವಗ್ರಹಪೀಡನೆಯಿಂದ ತಮ್ಮಿಬ್ಬರ ಸಂಬಂಧದಲ್ಲಿ ಈ ಒಂದು ಬಿರುಕು?– ಯೋಚಿಸುವುದು ಮನಸ್ಸು. ಹೌದು ಯಾವ ವಾತಾವರಣವೂ ಪರಿಶುದ್ಧವಾಗಿರಲು ಸಾಧ್ಯವಿಲ್ಲ. ವಿದ್ಯೆ, ವಿದ್ಯಾಕೇಂದ್ರಗಳ ಪಾವಿತ್ರ್ಯತೆ, ಎಂದೋ ಕಾಣದಾಗಿರುವಾಗ ತಮ್ಮ ಆಲೋಚನೆಗಳು ಅನವಶ್ಯಕ. ಯಾವ ಕಾಲೇಜಾಗಲೀ, ಆಫೀಸಾಗಲೀ, ಪ್ರಿನ್ಸಿಪಾಲರಾಗಲಿ, ಅಧಿಕಾರಿಯಾಗಲಿ, ನಿಷ್ಪಕ್ಷಪಾತವಾಗಿ ರಾಜಕೀಯದಿಂದ ಮುಕ್ತವಾಗಿ ಇರಲು ಸಾಧ್ಯವೇ ಇಲ್ಲವೆಂದು ದೃಢವಾಗಿ ನಂಬುವುದಕ್ಕೆ ಪ್ರಯತ್ನಪಟ್ಟರು. ಅತ್ಯಲ್ಪ ಕಾಲದ ಮಟ್ಟಿಗೆ ಮಾತ್ರ ಉಳಿದಿರುವ ತಮ್ಮ ಸೇವೆಯನ್ನು ನಿಸ್ವಾರ್ಥವಾಗಿ ಮುಗಿಸಿ ತಮ್ಮ ಉದ್ಧಾರವನ್ನು ತಾವು ಮಾಡಿಕೊಂಡರೆ ಸಾಕು– ಎಂದು ಯೋಚಿಸಿದರು. ಯಾರೊಬ್ಬರನ್ನೋ ತಿದಿದ್ದರೆ ಸಾಧ್ಯವಾಗದು– ಎಲ್ಲೆಲ್ಲೂ ಕಲುಷಿತ ವಾತಾವರಣವೇ ಇರುವಾಗ, ವ್ಯಕ್ತಿ ಸ್ವಚ್ಛವಾಗಿರಲು ಸಾಧ್ಯವಿಲ್ಲ– ಎಂದು ತಮ್ಮನ್ನು ತಾವೇ ಸಮಾಧಾನ ಪಡಿಸಿಕೊಳ್ಳಲು ಪ್ರಯತ್ನಿಸಿದರು. ದೂರದಲ್ಲಿ ಇಂಜಿನ್ನಿನ ಸದ್ದಾಗಲು, ಆಲೋಚನೆಗಳ ಸುಳಿಯಿಂದ ಎದ್ದು ಬಂದರು. ಗೇಟ್ ಹಾಕಿದ್ದುದರಿಂದ ಟ್ರೈನ್ ಹಾದು ಹೋಗುವವರೆಗೂ ಅಲ್ಲೇ ನಿಂತರು.

* * *

ಗಂಟುಗಳು

ಗೋಡೆ ಮೇಲಿನ ಗಡಿಯಾರ ತನ್ನ ಪಾಡಿಗೆ ತಾನು ಯಾವುದರ ಕಡೆಯೂ ಲಕ್ಷ್ಯವಿಲ್ಲದೆ 'ಟಿಕ್ ಟಿಕ್' ಎಂದು ಚಕ್ರಗತಿಯ ಮಿತಿಗೆ ತಲೆ ಬಾಗಿದೆ. ಆಗಲೇ ಸಂಜೆ ೬ ಗಂಟೆಗೂ ಹೆಚ್ಚು ಹೊತ್ತು ಮೀರಿದೆ. ವಸ್ತುಗಳು ಹೆಚ್ಚಾಗಿ ಇಲ್ಲದೆ ಮನೆ ಓರಣವಾಗಿದ್ದರೂ, ಬದುಕಿನ ಕುರುಹೂ ಇಲ್ಲದಂತೆ ಉರಿಬಿಸಿಲ ಬೇಸಿಗೆಯ ರೌದ್ರ ಮೌನ ಮನೆಯ ಮೂಲೆ ಮೂಲೆಯನ್ನೂ ಬಾಚಿ ತಬ್ಬಿಕೊಂಡಿದೆ.

ಪದ್ಮ ಹಾಲಿಗೂ ಹೊರ ಅಂಗಳಕ್ಕೂ ನಡುವಿನ ವರಾಂಡದೊಳಗೆ ಕೈಗೂಸಿಗೆ ಮೊಲೆ ಕೊಡುತ್ತಿದ್ದಳಾದರೂ ಅವಳ ದೃಷ್ಟಿ ಮತ್ತೆಲ್ಲೋ ಏನನ್ನೋ ಅರಸುತ್ತಿರುವಂತೆ ತೋರುತ್ತಿದೆ. ಒಂದೊಂದಾಗಿ ಅವಳ ಬದುಕಿನ ಅಧ್ಯಾಯಗಳನ್ನು ತಿರುವಿ ಓದುತ್ತಿರುವಂತೆ ಅನಿಸುತ್ತಿದೆ. ಬತ್ತಿದ ಮೊಲೆಗಳನ್ನು ಜಗ್ಗಿ ಎಳೆದರೂ ಬಾಯಿ ಒದ್ದೆಯಾಗದೆ ಮಗು ಮುನಿದು ಕಿರುಚುತ್ತಿದ್ದರೂ ಅವಳ ಪ್ರಜ್ಞೆ ವಾಸ್ತವ ಲೋಕದ ಕಡೆ ಇರುವಂತಿಲ್ಲ.

ಚಲನೆಯಿಲ್ಲದ ಅವಳ ಕಣ್ಣೆದುರು ಹಿಂದಿನ ಅನುಭವಗಳ ಮೂಟೆ ಬಿಚ್ಚಿಕೊಳ್ಳುತ್ತಿದೆ. ಒಂದೊಂದೇ ಅನುಭವ. ಕೆಲಸ ಮುಗಿಸಿ ಮನೆಗೆ ಬಂದ ಒಂದು ದಿನ ತಂದೆ, ಒರಟಾಗಿ ನನ್ನನ್ನು ಕೂಗಿದರು. ತಂದೆಯ ಧ್ವನಿಗೆ ಬೆದರಿದ ಮನಸ್ಸು, ತನ್ನನ್ನು ಕರೆಯಲು ಕಾರಣವೇನಿರಬಹುದು- ಎಂದು ಕಾರಣ ಹುಡುಕಲು ಪ್ರಯತ್ನಿಸಿತು. ತಂದೆಯಾದರೂ ಎಂದು ಸಲಿಗೆಯಿಂದ ಯಾರನ್ನೂ ಮಾತಾಡಿಸಿದ್ದಿಲ್ಲ. ತಮ್ಮ ತಂಗಿಯಂತೂ ತಂದೆಯಿಂದ ತಪ್ಪಿಸಿಕೊಂಡೇ ಓಡಾಡುತ್ತಿದ್ದರು. ಅಮ್ಮನಿಗಂತೂ ತಂದೆಯ ಜೊತೆ ಬದುಕು ಅಸಹ್ಯವೆನಿಸಿತ್ತು. ದುಡಿದು ದುಡಿದು ಜೀವ ಜೀರ್ಣವಾಗಿತ್ತು.

ಅಮ್ಮಯೇನಾದರೂ ಇನ್ನೂ ಬದುಕಿದ್ದುದು ಎಂದರೆ ನಮಗೋಸ್ಕರ. ಈ ಸ್ವಭಾವದ ಮನೋವೃತ್ತಿಯ ತಂದೆಯ ಕೈಯಲ್ಲಿ ಮಕ್ಕಳು ಸುರಕ್ಷಿತವಾಗಿರಲಾರರು ಎನ್ನುವುದೇ ಅವಳ ಬಲವಾದ ಭಾವನೆ. ತನ್ನ ಕಣ್ಮುಂದೆಯೇ ಮಕ್ಕಳಿಗೊಂದೊಂದು ದಾರಿಯಾಗಲೆಂದು ದೇವರಿಗೆ ಮೂಕ ಪ್ರಾರ್ಥನೆಯನ್ನು ಸಲ್ಲಿಸುತ್ತಿದ್ದಳು. ಸ್ವಲ್ಪ

ಬುದ್ಧಿ ತಿಳಿದ ನನಗೆ, ಯಾಕೋ ಅಮ್ಮ ದೇವರಿಗೆ ಕೈ ಮುಗಿದರೆ ಸಿಟ್ಟು ಬರುತ್ತಿತ್ತು. ದೇವರ ಮೇಲೆ ನನಗೆ ಆಕ್ರೋಶ. ನಮ್ಮ ಪ್ರಾರ್ಥನೆಯನ್ನು ಕೇಳೋ ಹಾಗಿದ್ದಿದ್ದರೆ ನಮಗೆ ಯಾವ ಕಷ್ಟವೂ ಇರುತ್ತಿರಲಿಲ್ಲ. ಸೆನ್ಸಿಟಿವ್‌ನೆಸ್ ಇಲ್ಲದೆ ಕಲ್ಲಾಗಿ ಕುಳಿತಿರುವ ದೇವರಿಂದ ಏನಾದರೂ ಆಗುತ್ತೆ ಅನ್ನೋದನ್ನ ಊಹಿಸಿಕೊಂಡರೇನೇ ನಗು ಬರುತ್ತಿತ್ತು. ಇದನ್ನೇ ಅಮ್ಮನಿಗೂ ಹೇಳುತ್ತಿದ್ದೆ. ಆದರೆ ಅಮ್ಮನಿಗೆ ಹೆಚ್ಚು ನೋವಾಗುತ್ತಿತ್ತೇ ಹೊರತಾಗಿ ಇನ್ನೇನೂ ಆಗುತ್ತಿರಲಿಲ್ಲ.

ತಂದೆಯ ದೌರ್ಜನ್ಯವನ್ನು ಅಮ್ಮ ಬಹಳ ವರ್ಷ ಅನುಭವಿಸಿದಳು. ನಮ್ಮೆಲ್ಲರ ಮನಸ್ಸಿನಲ್ಲೂ ತಂದೆ ಎಂದರೆ ಮನುಷ್ಯ ರೂಪದಲ್ಲಿ ಇರೋ ರಾಕ್ಷಸ ಅನ್ನುವ ಭಾವನೇನೆ ಬಲವಾಗಿ ಉಳಿದುಬಿಡ್ತು. ಒಂದು ದಿನ... ಓಹ್... ಊಹಿಸಿಕೊಂಡರೇನೇ ಮೈ ನಡುಗುತ್ತೆ... ನಾನು, ತಂಗಿ,· ತಮ್ಮ ಎಲ್ಲಾ ಊಟ ಮಾಡಿ ತಂದೆಯಿಲ್ಲದೆ ಇರೋ ಕಾರಣ ಧೈರ್ಯದಿಂದ ಗಟ್ಟಿಯಾಗಿ ಮಾತಾಡಿಕೊಳ್ಳುತ್ತಾ ಜೋರಾಗಿ ನಗುತ್ತ ಅಲ್ಲಿಯವರೆಗೂ ಒಳಗೇ ಅದುಮಿಟ್ಟುಕೊಂಡಿದ್ದ ಸಂತೋಷವನ್ನು ಸಿಡಿಯುವ ಹಾಗೆ ಮಾಡಿದ್ದೆವು. 'ಅಪ್ಪ' ಬಂದಿರಲಿಲ್ಲವಾಗಿ 'ಅಮ್ಮ' ಊಟ ಮಾಡದೆ ಎದುರು ಕಾಯುತ್ತಿದ್ದರು. ಕಾದು ಕಾದು ಸಾಕಾಗಿದ್ದ ಅಮ್ಮನಿಗೆ ಕಣ್ಣು ಹತ್ತಿತ್ತು. ದಿಢೀರೆಂದು ಬಾಗಿಲು ತೆಗೆದುಕೊಂಡಿತು. ರೌದ್ರಾವತಾರ ತಾಳಿ ಒಳಗೆ ಹಜ್ಜೆಯಿಟ್ಟ ಅಪ್ಪನನ್ನು ನೋಡಿ ನನಗೆ ಸಿಟ್ಟು ಬಂತಾದರೂ ಭೀತಿಯಿಂದ ಅದನ್ನು ಹಾಗೇ ಅದುಮಿಟ್ಟುಕೊಂಡೆ. ಬಂದವನೇ ಅಮ್ಮನನ್ನು 'ದಬ ದಬ' ಬಾರಿಸಿ ಬಿರುಸಾಗಿ ಒಂದು ಸಲ ಕಾಲಿನಿಂದ ಒದ್ದದ್ದೆ ಅಮ್ಮ ಒಂದು ಸಲ ಕಣ್ತೆರೆದು ನನ್ನತ್ತ ಸನ್ನೆ ಮಾಡಿ ಕರೆದಳು. ಯಾಂತ್ರಿಕವಾಗಿ ಒಳಗೆ ಹೋದೆ. ಅಮ್ಮನಿಗೆ ಬಹುಶಃ ಅನಿಸಿರಬೇಕು. ಇನ್ನು ತಾನಿಲ್ಲಿ ಇರುವುದಿಲ್ಲವೆಂದು: ಒದೆ ತಿಂದರೂ ಸಣ್ಣದಾಗಿ ಮುಲುಗಲಿಲ್ಲ. ತಂದೆಯ ಬಗ್ಗೆ ಪ್ರತಿಭಟನೆಯಿಲ್ಲ. ಮೆಲ್ಲನೆ ಹೇಳಿದಳು,-

ಪದ್ಮ, ನಿನ್ನ ತಂಗಿ, ತಮ್ಮ ನಿನ್ನ ಜವಾಬ್ದಾರಿ. ನನ್ನ ತುಂಬದ ಆಸೆಗಳು ನಿನ್ನಿಂದ ಪೂರ್ತಿಯಾಗಬೇಕು. ಮೂಕಳಾಗಿ ಕೇಳುತ್ತಿದ್ದೆ. ಪ್ರತಿಯಾಗಿ ಏನು ಹೇಳಬೇಕೆಂದರೂ ಆಗುತ್ತಿರಲಿಲ್ಲ. ಅಪ್ಪನಿಗೆ ಅರ್ಥವಾಯಿತೋ ಏನೋ... ಅಮ್ಮನ ಕಣ್ಣಲ್ಲಿ ಬಗ್ಗಿ ನೋಡಿದ. ಅಷ್ಟರಿಂದಲೇ ಅಮ್ಮನಿಗೆ ಸಂತೋಷವಾಗಿರಬೇಕು. ಮೃದುವಾಗಿ ನಕ್ಕು "ಮಕ್ಕಳು" ಎಂದು ಹೇಳುತ್ತಲೇ ಕಣ್ಣು ಮುಚ್ಚಿದಳು.

ತಂದೆಯ ಕಣ್ಣಿಂದ ಹನಿ ಉದುರಿದ್ದನ್ನು ಕಂಡ ನನಗೆ ಚಂದ್ರಲೋಕಕ್ಕೆ ಹೋಗಿ ಬಂದಷ್ಟು ಹಿಗ್ಗೆನಿಸಿತು. ಇನ್ನು ಅಪ್ಪ ಬದಲಾಗುತ್ತಾನೆ ಎಂದು ಆರಸಿದ್ದೆ. ಆದರೆ ನನ್ನಾಸೆ ನನ್ನ ನಿರೀಕ್ಷೆಗೆ ವ್ಯತಿರೇಕವಾಗಿ ಅಪ್ಪ ಇನ್ನೂ ಕೆಳ ಜಾರಿದ.

ಮನೆಗೆ ಬರುವುದೇ ಅಪರೂಪವಾಗಿತ್ತು. ಈ ವರ್ಷ ನನ್ನ ಫೈನಲ್. ಹಾಗೂ ಹೀಗೂ ಕಷ್ಟಪಟ್ಟರೆ ಎಲ್ಲಾದರೂ ಒಂದು ಉದ್ಯೋಗ ಗಿಟ್ಟಿಸಿ ತಂಗಿ ತಮ್ಮನ ಪೋಷಣೆ

ಮಾಡಬೇಕೆಂದುಕೊಂಡೆ. ಎದುರು ಮನೆ ವಾಸುಗೆ ನಮ್ಮ ವಿಷಯ ತಿಳಿದಿತ್ತು. ಅಪ್ಪ ಇಲ್ಲದ ವೇಳೆಯಲ್ಲಿ ಬಂದು ಏನಾದರೂ ಸಹಾಯ ಮಾಡಿ ಹೋಗುತ್ತಿದ್ದ.

ಬೆಳಿಗ್ಗೆ ಆದಷ್ಟು ಬೇಗ ಎದ್ದು ಅಡಿಗೆ ಮಾಡಿ ತಂಗಿ ತಮ್ಮನನ್ನು ಸ್ಕೂಲಿಗೆ ರೆಡಿಮಾಡಿ ಕ್ಯಾರಿಯರ್ ತೆಗೆದುಕೊಂಡು ೯ ಗಂಟೆಗೆ ಕಾಲೇಜು ಹೊರಟರೆ ಬರುವಾಗ ಟ್ಯೂಷನ್ ಮುಗಿಸಿ ಮನೆ ಸೇರುವ ವೇಳೆಗೆ ರಾತ್ರಿ ಎಂಟು ಗಂಟೆಯಾಗಿರುತ್ತಿತ್ತು. ತುಂಬಾ tired ಆಗಿ ಇರುತ್ತಿದ್ದುದರಿಂದ ಆದಷ್ಟು ಬೇಗನೆ ಊಟಕ್ಕೂ ಆಸೆ ಪಡದೆ ಮಲಗಿ ಬಿಡುತ್ತಿದ್ದೆ. ಒಂದೊಂದು ದಿನ ನಾನು ಬರುವ ವೇಳೆಗೆ ಅಪ್ಪ ಇರುತ್ತಿದ್ದ. ಆದರೆ ನಮ್ಮಿಬ್ಬರ ನಡುವೆ ಮಾತುಕತೆಯೇ ಇರುತ್ತಿರಲಿಲ್ಲ. 'ಅಪ್ಪ'ನೆಂದು ಕರೆಸಿಕೊಳ್ಳುವವನು ಮಕ್ಕಳ ಚಿಂತೆಯೂ ಇಲ್ಲದೆ. ಹೇಗೆ ಜೀವನ ಮಾಡುತ್ತಿದ್ದಾರೆ ಅನ್ನುವುದನ್ನೂ ತಿಳಿದುಕೊಳ್ಳದ ಅಪ್ಪನ ಬಗ್ಗೆ ಗೌರವ, ಲಕ್ಷ್ಯ ಅನ್ನುವುದು ಅಸಹ್ಯವೆನಿಸಿತ್ತು. ಆದರೂ ತಟ್ಟೆ ಹಾಕಿ ಊಟ ಬಡಿಸಿದರೆ ಮಾತಿಲ್ಲದೆ ಬಂದು ಊಟ ಮಾಡಿ ಎದ್ದು ಹೋಗುತ್ತಿದ್ದ.

ಒಂದು ದಿನ ಇದ್ದಕ್ಕಿದ್ದಂತೆ ಅಪ್ಪ ನನಗೆ ಸೀರೆ. ಉಳಿದ ಆ ಇಬ್ಬರಿಗೆ ಬಟ್ಟೆ ತೆಗೆದುಕೊಂಡು ನನ್ನ ದಾರಿ ಕಾಯುತ್ತಿದ್ದುದನ್ನು ನೋಡಿ ನನಗೆ ಆಶ್ಚರ್ಯವಾಯಿತು. ಪ್ರಶ್ನಾರ್ಥಕವಾಗಿ ಅಪ್ಪನ ಕಡೆ ನೋಡಿದಾಗ ಸೌಮ್ಯವಾಗೇ ಉತ್ತರಿಸಿದ.

ನೋಡು ಪದ್ಮ. ಏನೋ ಇಲ್ಲೀವರೆಗೆ ನಾನು ನಿಮ್ಮನ್ನು ಶತ್ರುವಿನ ಮಕ್ಕಳಂತೆ ನೋಡಿಕೊಂಡೆ. ನಿಮ್ಮ ತಾಯಿಯನ್ನೂ ಕೊಂದ 'ವ್ಯಾಧ' ಅಂದರೂ ಸಲ್ಲುತ್ತೆ. ನನಗೇ ನನ್ನ ವಿಷಯವಾಗಿ ಬೇಜಾರಾಗಿದೆ. ಇನ್ನಾದರೂ ತಂದೆಯ ಕರ್ತವ್ಯದಿಂದ ತಪ್ಪಿಸಿಕೊಳ್ಳೋದು ಬೇಡಾಂತ ಅನ್ನಿಸುತ್ತಿದೆ. ನಿನಗೂ ಕೆಲಸ ಸಿಕ್ಕಿದೆಯಂತೆ ಪುಟ್ಟು ಹೇಳಿದ... ನೋಡು ನೀನು ನನಗೆ ಅವಕಾಶ ಕೊಟ್ಟರೆ ನಾನು ಇಲ್ಲಿ ಇರುತ್ತೇನೆ, ಇಲ್ಲ ಬಿಟ್ಟರೆ ದೂರದ ಯಾವುದಾದರೂ ಊರಿಗೆ ಹೊರಟು ಹೋಗುತ್ತೇನೆ. ದೈನ್ಯತೆ ಇರುವ ಹಾಗೆ ಅನಿಸಿತು.

ಅಪ್ಪನ ವಿಚಿತ್ರ ಪರಿವರ್ತನೆ ಪ್ರಶ್ನೆಯಾಗಿತ್ತು. ಅಪ್ಪನಿಗೆ ಮಕ್ಕಳನ್ನು ನೋಡಿಕೊಳ್ಳುವ ಪ್ರಯಾಸ ಬೇಡವೆಂದು ಹೇಳಿದೆ. ಅಪ್ಪ ಕೊಟ್ಟ ಬಟ್ಟೆಗಳನ್ನು ತೆಗೆದಿಟ್ಟೆ.

ಹಿಂದಿನ ರಕ್ತಂಚ ರಂಗಪ್ಪನ ಸ್ನೇಹವಿದೆಯೆಂದು ಜನ ಅಪ್ಪನ ಬಗ್ಗೆ ಆಡಿಕೊಳ್ಳುತ್ತಿದ್ದರು. ಆದರೆ ನನಗೆ ಆ ವಿಷಯಗಳೆಲ್ಲಾ ಬೇಕಾಗಿರಲಿಲ್ಲ. ಬೀದಿಯವರಿಗೆಲ್ಲಾ ನಾವೇನೋ ವಿಚಿತ್ರ ಪ್ರಾಣಿಗಳಂತೆ ಕಾಣುತ್ತಿದ್ದರೇನೋ. ಹಾಗೊಂದು ವಿಷಯದ [illegible] ನನಗೆ ಬೇಕಾಗಿತ್ತು. ಅವರಲ್ಲಿ ನನ್ನ [illegible] ಆಸೆಯಲ್ಲಿಯೂ ನನಗೆ [illegible]. ಕೆಲಸಕ್ಕೆ ಸೇರುವ... [illegible]

ಅವರಿಗೆ ವಿಚಿತ್ರವಾಗಿ ಅನಿಸಿರಬೇಕು. ನನ್ನ ತಂಗಿ ತಮ್ಮನಿಂದ ನನ್ನ ವಿಷಯವಾಗಿ. ನಾನು ಕೆಲಸಕ್ಕೆ ಹೋಗುವ ಜಾಗ, ಬರುವ ಸಂಬಳ. ನನ್ನೊಂದಿಗೆ ಕೆಲಸ ಮಾಡುವವರು ಗಂಡಸರೇ, ಹೆಂಗಸರೇ ಅನ್ನುವ clarification... ಎಲ್ಲವನ್ನೂ ಕೇಳಿ ತಿಳಿದುಕೊಳ್ಳುತ್ತಿದ್ದರು. 'ತಥ್' ಈ ಜನಕ್ಕೆ ಮಾಡುವುದಕ್ಕೆ ಮತ್ತೇನೂ ಕೆಲಸವಿಲ್ಲವೇ ಎನಿಸುತ್ತಿತ್ತು.

ಬೇಕಾಗಿ ಅವರನ್ನು ಪ್ರಚೋದಿಸಲು ಅವರಿಂದ ಬರುವ ವಿಮರ್ಶೆಯನ್ನು ಶೇಖರಿಸಲು ನಾನು ಇತ್ತೀಚೆಗೆ ನನ್ನ ಬಾಯ್ ಫ್ರೆಂಡ್ಸನ್ನು ಕರೆದು ತರುತ್ತಿದ್ದೆ. ಎಲ್ಲವನ್ನೂ ಬಹಳ ಕಷ್ಟದಿಂದ ಸಹಿಸಿಕೊಂಡಿರುತ್ತಿದ್ದೆ. ಬೀದಿ ಮಂದಿಯೆಲ್ಲಾ ಏನೋ ಅನಾಹುತವಾದ ಹಾಗೆ ಸಾಮೂಹಿಕವಾಗಿ, ಒಂದು ದಿನ ಬಂದು ನಮ್ಮಪ್ಪನಿಗೆ ನನ್ನ ನಡತೆಯ ಬಗ್ಗೆ ದೂರು ಕೊಟ್ಟರು... ನನಗೆ ಬೀದಿಗಿಳಿಯುವುದೇ ಕಷ್ಟವಾಯಿತು. ಬೀದಿ ಪೋಲಿ ದನಗಳೆಲ್ಲಾ ನನ್ನ ಹೆಸರು ಹಿಡಿದು ಕೂಗುವುದು, ಚುಡಾಯಿಸುವುದು ಮೊದಲಾಯಿತು. ಅಪ್ಪನಿಗೆ ಇದು ನುಂಗಲಾರದ ತುತ್ತಾಗಿತ್ತು. ಅವರಿಗೂ ಒಳಗೊಳಗೆ ಇದು ಸರಿಯಲ್ಲವೆನಿಸಿರಬೇಕು. ಆದರೆ ಅಸಹಾಯಕತೆ ಅವರ ಬಾಯನ್ನು ಕಟ್ಟಿ ಹಾಕಿತ್ತು. ನಾನು ಸಂಪಾದನೆಗೆ ಮೊದಲಿಟ್ಟಾಗಿನಿಂದ ನನಗೆ ಯಾರ ಹಂಗೂ ಇಲ್ಲ ಅನ್ನೋ ಭಾವನೆ ಬರತೊಡಗಿತ್ತು. ಯಾರೂ ನನಗೆ ಲೆಕ್ಕಕ್ಕಿರಲಿಲ್ಲ. ನನ್ನ ಬದುಕಿಗೆ ಲಂಗು ಲಗಾಮಿಲ್ಲದೆ ಹೋಯಿತು. ನೋಡುವುದಕ್ಕೆ ಸ್ವಲ್ಪ ಚೆನ್ನಾಗಿದ್ದ ನನ್ನನ್ನು ಫ್ರೆಂಡ್ಸ್ ಹೊಗಳಿ ಉಬ್ಬಿಸಿದರು. ನನ್ನ ಅಲಂಕಾರ ಸಾಮಗ್ರಿಗಳು ಹೆಚ್ಚಾದವು. simplicityನ ತುಂಬಾ like ಮಾಡುತ್ತಿದ್ದ ನನಗೆ ಯಾಕೆ ಈ ಅಲಂಕಾರದ ಭೂತ ಬೆನ್ನು ಬಿತ್ತೋ? ತಿಳಿಯದಾಯಿತು.

ತಂಗಿ ತಮ್ಮನ ಕಡೆ ಸಂಪೂರ್ಣವಾಗಿ ನಿರ್ಲಕ್ಷ್ಯಭಾವ ತಾಳಿದೆ. ಹೇಳುವವರಿಲ್ಲದೆ ತಮ್ಮ ಅಡ್ಡ ದಾರಿಗೆ ಬಿದ್ದ. ಸ್ಕೂಲಿಗೆ ಚಕ್ರ ಸುತ್ತಿ ಪೋಲಿ ತಿರುಗ ಹತ್ತಿದ. ನನಗೇ ಒರಟು ಒರಟಾಗಿ ಉತ್ತರ ಕೊಡುತ್ತಿದ್ದ. ಚಿಗುರು ಮೀಸೆ ಮೂಡುತ್ತಿದ್ದ ಅವನಿಗೆ ಸಿನೇಮಾ, ಸಿಗರೇಟು ಷೋಕಿ ಹತ್ತಿತು. ನೋಡುತ್ತಿದ್ದರೆ ಇವನೂ ಅಪ್ಪನ ಬಣ್ಣಕ್ಕೇ ತಿರುಗುತ್ತಿದ್ದ. ಯಾಕೋ ಅವನ ವಿಷಯದಲ್ಲಿ ತುಂಬಾ ಭಯವೆನ್ನಿಸ್ತಾ ಇತ್ತು. ಅವನಲ್ಲಿ ತನ್ನ ಮಾತಿಗೆ ಬೆಲೆಯಿಲ್ಲವೆನಿಸಿದಾಗ ತುಂಬಾ ನೋವಾಗುತ್ತಿತ್ತು. ಆದರೂ ಮಾಡುವುದೇನೂ ಇರಲಿಲ್ಲ. ಇದರಲ್ಲಿ ನನ್ನದೇ ತಪ್ಪು. ಎಳೆಯ ವಯಸ್ಸಿನಿಂದಲೇ ಅವರಿಗೆ ಸರಿಯಾದ ಬುದ್ಧಿ ಕಲಿಸಿದ್ದರೆ ಹೀಗಾಗುತ್ತಿರಲಿಲ್ಲ.

ತಂಗಿಯ ವಿಷಯದಲ್ಲಿ ಆ ರೀತಿಯ ಭೀತಿ ಇಲ್ಲದೇ ಹೋದರೂ ಅವಳ ಭವಿಷ್ಯದ ಬಗ್ಗೆ ಯೋಚನೆ ಕಾಡುತ್ತಿತ್ತು. "ಅಕ್ಕ ನನಗೆ ಸ್ಕೂಲಿಗೆ ಹೋಗೋಕೆ ಇಷ್ಟವಿಲ್ಲ. ಓದುವುದು ನನ್ನಿಂದ ಆಗುವುದಿಲ್ಲ"– ಎಂದು ಸ್ಪಷ್ಟವಾಗಿ ಹೇಳಿದ್ದರಿಂದ ನಾನೂ ಸಹ ಬಲವಂತವಾಗಿ ಓದಿಸುವುದರಲ್ಲಿ ಅರ್ಥವಿಲ್ಲವೆಂದುಕೊಂಡು ಒಪ್ಪಿಗೆ

ಕೊಟ್ಟೆ. ಈಗ ಅವಳೂ ವಯಸ್ಸಿಗೆ ಬಂದಿದ್ದಾಳೆ. ಮುಂದೆ ಹೇಗೆ... ಅವಳ ಬದುಕಿನ ನೆಲೆ ಯಾವುದು?... ಪರಿಹಾರ ಕಾಣುತ್ತಿಲ್ಲ. ಓದಿಲ್ಲ, ದುಡ್ಡಿಲ್ಲ, ನನಗಿಂತ ಹೆಚ್ಚಾಗಿ ಸುಂದರವಾಗಿಯೂ ಇಲ್ಲ. ಅಂಥಾದ್ದರಲ್ಲಿ ಇವಳನ್ನು ಮದುವೆಯಾಗಲು ಯಾವ ಮಗರಾಯ ಬರುತ್ತಾನೋ ಎಂದು ಮನಸ್ಸು ಚಿಂತಿಸುತ್ತಿತ್ತು. ಅಪ್ಪ ಆ ಚಿಂತೆಯನ್ನು ಹಚ್ಚಿಕೊಂಡರೆ ನನಗೆ ಸ್ವಲ್ಪ ಹಾಯೆನಿಸುತ್ತಿತ್ತು. ಆದರೆ... ಆದರೆ... ಅಪ್ಪನಿಗೆ ಈಗೀಗ ಏನೂ ಬೇಡ. ಯಾವುದರಲ್ಲೂ ಆಸಕ್ತಿಯಿರಲಿಲ್ಲ. ಬಂದರೆ ಮುದುಡಿಕೊಂಡು ಮೂಲೆಯಲ್ಲಿ ಮಲಗುತ್ತಿದ್ದ. ಆದ್ದರಿಂದಲೇ ಅಪ್ಪ ಇದ್ದರೂ ಇಲ್ಲದಂತೆ ಭಾವಿಸಿ ನಾನು ಸ್ವಚ್ಛಂದವಾಗಿ ವರ್ತಿಸುತ್ತಿದ್ದೆ. ಈದಿನ ಬೆಳಿಗ್ಗೆ ಏಳು ಗಂಟೆಗೆ ಮನೆಬಿಟ್ಟು ಈಗ ರಾತ್ರಿ ಹೊತ್ತು ಮೀರಿ ಮನೆಗೆ ಬಂದಿದ್ದೆ. ಬಹುಶಃ ಅದಕ್ಕೇ ಅಪ್ಪ ನನ್ನನ್ನು ಕೂಗಿದ್ದಿರಬೇಕೆಂದುಕೊಂಡೆ... ಅಪ್ಪನಿಗೆ ಸಮಾಧಾನ ಹೇಳಬೇಕಾಗಿಲ್ಲವೆಂದುಕೊಂಡೆ. ಅದಕ್ಕೇ ಸುಮ್ಮನೆ ನಿಂತೆ. ಅಪ್ಪನೇ ಬಾಯಿ ತೆಗೆದ,

"ನೋಡು ಪದ್ಮ, ಈಗೀಗ ನೀನು ಬಹಳ ಹದ್ದು ಮೀರಿ ನಡೆಯುತ್ತಿರುವಂತಿದೆ. ನಿಮ್ಮಪ್ಪ ಜೀವಂತವಾಗಿದ್ದುಕೊಂಡೂ ನೀನು ಈ ರೀತಿ ನಡೆದುಕೊಳ್ಳುವುದು ನೋಡಿದರೆ. ನಿನಗೆ ಎಳ್ಳಷ್ಟೂ ನನ್ನ ಕಡೆ ಲಕ್ಷ್ಯವಿಲ್ಲವೆನಿಸುತ್ತೆ. ಹೌದು ತಾನೇ?"– ಎಂದ.

ಏನು ಸಮಾಧಾನ ಹೇಳಬೇಕೋ ತಿಳಿಯಲಿಲ್ಲ. ಇವತ್ತು ಲಕ್ಷ್ಯವಿಲ್ಲದಿರುವುದು ತಿಳಿಯೋದು. ಎಂದಾದರೂ ಲಕ್ಷ್ಯವಿದ್ದಿದ್ದರೆ ತಾನೇ– ಎಂದುಕೊಂಡೆ.

ಆದರೂ ಹೇಳಿದೆ–

"ಅಪ್ಪ ನನ್ನ ಒಳ್ಳೇದು ಕೆಟ್ಟದ್ದರ ಬಗ್ಗೆ ನನಗೆ ಪ್ರಜ್ಞೆಯಿದೆ. ದಾರಿ ತಪ್ಪುವ ಭಯವಿರುವುದಾದರೆ... ನಾನು ಎಂದೋ ದಾರಿ ತಪ್ಪುತ್ತಿದ್ದೆ. ನನ್ನ ವ್ಯಕ್ತಿತ್ವವನ್ನು ಉಳಿಸಿಕೊಂಡು ಭದ್ರವಾಗಿ ಕಾಯುತ್ತಿದ್ದೇನೆ. ಅದರ ಬಗ್ಗೆ ನೀನು ಸುಮ್ಮನೆ ತಲೆ ಕೆಡಿಸಿಕೊಳ್ಳಬೇಡ"– ಸ್ಪಷ್ಟವಾಗಿತ್ತು ನನ್ನ ಮಾತು.

"ನಿನಗೆ ಮದುವೆ ಮಾಡಬೇಕೆಂದು ನಿಶ್ಚಯಿಸಿದ್ದೇನೆ"– ನಿರ್ಧಾರದ ಧ್ವನಿಯಲ್ಲಿ ಹೇಳಿದ.

ನನಗೆ ಮದುವೆ ಅನ್ನೋ ಮಾತನ್ನು ಕೇಳಿ ಬಿದ್ದು ಬಿದ್ದು ನಗತೊಡಗಿದೆ. ಈ ಮಾತು... ಅದೂ ಅಪ್ಪನ ಬಾಯಿಂದ ತೀರ ತಮಾಷೆಯೆನಿಸಿತು. ಹೇಳಿದೆ–

ಅಪ್ಪ, ಇದ್ದಕ್ಕಿದ್ದಂತೆ ನನ್ನ ಮದುವೆ ವಿಚಾರ ನಿನ್ನ ತಲೆಗೆ ಹೊಳೆದು ಬಿಟ್ಟಿದೆ.

ನನಗೆ ಮದುವೆ... ಎಲ್ಲಿಂದ... ಹೇಗೆ ಮಾಡ್ತೀಯಪ್ಪ. ಯಾರವನು ಮಹಾನುಭಾವ ನನ್ನನ್ನು ಮದುವೆಯಾಗುವವನು?... ಎಂದು ಒತ್ತಾಯಿಸಿ ಪ್ರಶ್ನಿಸುತ್ತಿರಲು ಹೊರಗಿನಿಂದ ನಾಣಿ ಬಂದು. "ನಾನೇ ಪದ್ಮ"– ಎಂದು ಉತ್ತರಿಸಿದ.

"Dramatic change" – ವ್ಯಂಗ್ಯವಾಗಿ ಹೇಳಿದಳು.

"ಯಾಕೆ ಪದ್ಮ ನಾನು ನಿನ್ನನ್ನು ಮದುವೆಯಾಗ್ತೀನಿ ಅಂದದ್ದು 'ಅನ್ ನ್ಯಾಚುರಲ್' ಅನ್ನಿಸುತ್ತಾ?" ಪ್ರಶ್ನಿಸಿದ.

"ಛೆ ಛೆ, ಅಂಥಾದ್ದೇನೂ ಇಲ್ಲ. ಆದರೂ ಸ್ವಲ್ಪವೂ ಕ್ಲೂ ಇಲ್ಲದೆ ಹೀಗೆ ಇದ್ದಕ್ಕಿದ್ದ ಹಾಗೆ ಸಿನಿಮಾದಲ್ಲಿ ಬರೋ ಹೀರೋ ಹಾಗೆ ಬಂದರೆ... ನಿಮಗೆ ಏನು ಅನ್ನಿಸುತ್ತೆ? ನೀವೇ ಹೇಳಿ?"

'ವಾಸು ಮನಸ್ಸಿನಲ್ಲಿಯೇ ಲಾಜಿಕಲ್ ಪ್ರಶ್ನೆ'- ಎಂದುಕೊಂಡ. ವಿಶ್ಲೇಷಣೆಗೆ ತೊಡಗಿದ... 'ಹೌದು ತಾನು ಯಾಕೆ ಪದ್ಮಳನ್ನು ಮದುವೆಯಾಗ್ತೀನಿ' ಎಂದೆ? ಔದಾರ್ಯವೇ ಇಲ್ಲ ತ್ಯಾಗವೇ?... ತಾನೇನೂ ಪದ್ಮಳನ್ನು ಪ್ರೀತಿಸಿಲ್ಲ. ಬೀದಿ ಜನವೆಲ್ಲ ಅವಳ ವಿಷಯವಾಗಿ, ತುಚ್ಛವಾಗಿ ಮಾತಾಡಿಕೊಂಡಾಗ ಇವನಿಗೆ ಕುಟುಕಿದಂತಾಗಿ ಹೇಗಾದರೂ ಅವಳಿಗೆ ಬುದ್ಧಿ ಹೇಳಬೇಕು- ಅಂದುಕೊಂಡವನು ಸುಮ್ಮನಾಗಿದ್ದ. ಆದ್ದರಿಂದಲೇ ಪದ್ಮಳ ತಾರ್ಕಿಕ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ತಡಬಡಿಸಬೇಕಾಗಿ ಬಂದಿದೆ.

ಅಪ್ಪ, ವಾಸು ಮಧ್ಯೆ ಪ್ರವೇಶಿಸಿ ತನ್ನ ಅಭಿಪ್ರಾಯವನ್ನು ತಿಳಿಸಿದಾಗ ಸ್ವಲ್ಪ ಹಿಗ್ಗಿದ. ಪದ್ಮಳ ಅಡ್ಡ ಪ್ರಶ್ನೆಗಳಿಗೆ ಮುಗ್ಗರಿಸಿದಂತಾಗಿದ್ದ ವಾಸುವನ್ನು ಕಂಡು ಅಪ್ಪನಿಗೆ ಕನಿಕರವೆನಿಸಿತು. ಇಷ್ಟು ದಿವಸಗಳ ಮೇಲೆ ಕನಿಕರಕ್ಕೆ ಅಪ್ಪನಲ್ಲಿ ಜಾಗ ಸಿಕ್ಕಿತು. ಅದಕ್ಕೆ ಅವನ ಪರವಾಗಿ ಹೇಳಿದ.

"ವಾಸುಗಿಂತ ಗಂಡ ನಿನಗೆ ಈ ಜನ್ಮದಲ್ಲಿ ಸಿಗುವುದಿಲ್ಲ. ತಲೆಯೆಲ್ಲ ಮಾತಾಡಿ. ಬಂದಿರೋ ಅವಕಾಶವನ್ನು ಹಾಳು ಮಾಡಬೇಡ"

"ಮದುವೆ ನನ್ನ ವೈಯುಕ್ತಿಕ ವಿಷಯ. ಅದರಲ್ಲಿ ಯಾರಿಗೂ ತೊಂದರೆ ಬೇಡ. ವಾಸು, ಸ್ನೇಹಕ್ಕೂ ಮದುವೆಗೂ ವ್ಯತ್ಯಾಸವಿದೆ. ಸ್ನೇಹ ಯಾರೊಂದಿಗಾದರೂ ಸರಿ. ಆದರೆ ಇದು ಎರಡು ಜೀವಿಗಳ ಶಾಶ್ವತ ಬೆಸುಗೆ. First of all ನಿಮ್ಮ ಅಪ್ಪ ಅಮ್ಮನನ್ನು ಎದುರಿಸಿ ನಿಲ್ಲುವ ಶಕ್ತಿಯಿದೆಯೇ ನೋಡಿಕೊಳ್ಳಿ. ಎಲ್ಲೋ ನೀವು ಕನಸಿನಿಂದ ಎದ್ದು ಬಂದು ಮಾತನಾಡುತ್ತಿರಬೇಕು... ಮದುವೆ ಮಾತು ಮರೆತುಬಿಡಿ'- ತುಂಡಾಗಿ ನುಡಿದಳು.

ಅಲ್ಲಿಗೇ ಅಧ್ಯಾಯ ಮುಗಿಯಿತು. ವಾಸುವಿಗೆ ಮನಸ್ಸು ಮೋಸ ಮಾಡಿತೆಂದು ಅರ್ಥವಾಯಿತು. ಅಪ್ಪ ಒಂದು ರಾತ್ರಿ ಮಲಗಿದವನು ಬೆಳಿಗ್ಗೆ ಏಳಲೇ ಇಲ್ಲ.

ಈಗೀಗ ತಮ್ಮನಿಂದಾಗಿ ಹಳೆಯ ವಿಷಯಗಳನ್ನು ಎಳೆದು ನನ್ನನ್ನು ಆಡಿಕೊಳ್ಳುತ್ತಾ ಜನ ಬಾಯಿ ತೀಟೆ ತೀರಿಸಿಕೊಳ್ಳುತ್ತಿದ್ದರು. ನನಗೆ ವಯಸ್ಸು ಇಪ್ಪತ್ತೈದು ದಾಟಿತ್ತು. ಮನಸ್ಸು ತೀರಾ ಹುಣ್ಣಾಗಿತ್ತು. ನನ್ನ ಬಾಳಿನ ಸುತ್ತ ಗೋಜಲು ಗೋಜಲಾದ ಬಲೆ ಹೆಣೆದುಕೊಂಡಿರುವಂತೆ ಅನಿಸುತ್ತಿತ್ತು. ಯಾವುದೋ ಹುಡುಗಿಯನ್ನು ಕೆಡಿಸಿ ತಮ್ಮ ಮನೆ ಬಿಟ್ಟು ಓಡಿದ್ದ. ತಮ್ಮ, ತಂಗಿ, ಅಮ್ಮ, ಅಪ್ಪ– ಈ ಕರುಳ ಬಂಧುತ್ವ ಸೆಳೆತ ಯಾವುದೂ ನನಗಿಲ್ಲವೆನಿಸಿತ್ತು. ಇರುವ ತಂಗಿ ಎದುರು ಬಂದಾಗ ತಂಗಿ ಬಂಧುತ್ವ ನೆನಪಿಗೆ ಬರುತ್ತಿತ್ತು. ಇಲ್ಲವಾದರೆ ತೀರ ಒಂಟಿತನದ ಅರಿವಾಗಿ ನೇಣು ಹಾಕಿ ಕೊಳ್ಳಬೇಕೆನಿಸುತ್ತಿತ್ತು.

Officeನಲ್ಲಿಯೂ ಯಾರೊಂದಿಗೂ ಮಾತಾಡುತ್ತಿರಲಿಲ್ಲ. ಯಾರಾದರೂ ಅಕಸ್ಮಾತ್ತಾಗಿ ಮಾತನಾಡಿದರೆ ಒಳಗೆ ಹೆಪ್ಪುಗಟ್ಟಿದ ದುಃಖ ಕರಗಿ ಹರಿಯುತ್ತಿತ್ತು. ಆದರೂ ಯಾರ ದಯೆಯೂ ನನಗೆ ಬೇಡವಾಗಿತ್ತು. ಅವರ ಮರುಕ ನನ್ನ ಅಸಹಾಯಕತೆಯನ್ನು ಗುರುತಿಗೆ ತರುತ್ತಿದ್ದುದರಿಂದ ಅಸಹ್ಯವಾಗುತ್ತಿತ್ತು. ನನ್ನ office colleague ಶಂಕರ್, ನನ್ನನ್ನು ಮದುವೆಯಾಗುತ್ತೇನೆಂದಾಗ ಯಾಕೋ ಈ ಬಾರಿ ಯಾವ ಪ್ರತಿಭಟನೆಯೂ ಇಲ್ಲದೆ, ಕೊಸರಾಟವಿಲ್ಲದೆ ಮೂಕ ಸಮ್ಮತಿ ಕೊಟ್ಟೆ. ಮದುವೆಯಾಗಬೇಕಿದ್ದ ತಂಗಿಯಿರುವುದನ್ನೂ, ಅವಳ ಜವಾಬ್ದಾರಿ ತನ್ನ ಮೇಲಿರುವುದನ್ನೂ ಮರೆತು ಸ್ವಾರ್ಥದ ಮೊಟ್ಟೆಯಾಗಿ ಕೆರಳುತ್ತಿರುವ ಕಾಮನೆಗಳನ್ನು ತೃಪ್ತಿಪಡಿಸುವುದಕ್ಕಾಗಿ ಒಪ್ಪಿಗೆ ಕೊಟ್ಟು ದೇವಸ್ಥಾನವೊಂದರಲ್ಲಿ ಮದುವೆಯಾದೆ

* * *

ಹತ್ತು ವರ್ಷಗಳು ದಾಟಿವೆ. ಮದುವೆಯಾಗಿ ಮೊದಲೆರಡು ವರ್ಷಗಳು ಸುಖವಾಗಿಯೇ ಕಳೆದು ಹೋಗಿದ್ದವು. ಮೂರು ಮಕ್ಕಳಾಗಿದ್ದರೂ ಈಗ ಉಳಿದಿರುವುದು ಒಂದೇ. ಶಂಕರ್ ಪದ್ಮ ಉದ್ಯೋಗ ಮಾಡುವುದನ್ನು ವಿರೋಧಿಸಿದ. ಕೆಲಸ ಬಿಟ್ಟು ಮನೆ ಚಾಕರಿಗೆ ಮಾತ್ರ ಉಳಿದಳು. ತಂಗಿ ಅವಳಿಗೆ ಹೊರೆಯೆನಿಸುತ್ತಿತ್ತು. ಶಂಕರ್ ಮನೆಗೆ ಸರಿಯಾಗಿ ದುಡ್ಡು ಕೊಡದೆ office ಕೆಲಸದ ನೆಪ ಹೇಳಿ ತಿಂಗಳುಗಟ್ಟಲೆ ಊರು ಬಿಟ್ಟು ಹೊರಡುತ್ತಿದ್ದ. ಕೆಲಸ ಬಿಟ್ಟ ಮೂರ್ಖತನಕ್ಕೆ ತನ್ನನ್ನೇ ನಿಂದಿಸಿಕೊಂಡಳು. ತಂಗಿ ಮೂಕವೇದನೆಯೊಂದಿಗೆ ಹೊತ್ತು ಕಳೆಯುತ್ತಿದ್ದಳು. ಆದರೆ ಮನುಷ್ಯನ ಮನಸ್ಸು ತೀರಾ ಸೂಕ್ಷ್ಮವಾದುದು. ಸಾಮರ್ಥ್ಯಕ್ಕಿಂತ ಹೆಚ್ಚು ಸಹಿಸಲು ಆಗುವುದಿಲ್ಲ.

ತಂಗಿ ಜ್ವರದಿಂದ ನರಳಿ ಔಷಧಿ ಉಪಚಾರಕ್ಕೆ ಅನುಕೂಲವಿಲ್ಲದೆ. ಅಕ್ಕನಿಂದ ಈ ಪ್ರಪಂಚದಿಂದ ಬೀಳ್ಕೊಂಡಳು. ಪದ್ಮಳಿಗೆ... ಹಾಯೆನಿಸಿತ್ತು.

ತಮ್ಮ, ತಂಗಿ, ಅಮ್ಮ, ಅಪ್ಪ... ಚಕ್ರಾಕಾರದಲ್ಲಿ ಅವಳ ಕಣ್ಮುಂದೆ ತಿರುಗುತ್ತಿದ್ದರು.

ಜೀವನವೆಲ್ಲಾ ಬರಿಯ ಗಂಟುಗಳು ಸಿಕ್ಕು. ಸಿಕ್ಕು ಬಿಡಿಸಲು ಪ್ರಯತ್ನಿಸಿದಷ್ಟೂ ಹೆಚ್ಚು ಹೆಚ್ಚಾಗಿ ಬಿಗಿದುಕೊಳ್ಳುತ್ತದೆ. ಸುಲಭವಾಗಿ ಬಿಡಿಸಲು ಸಾಧ್ಯವಿಲ್ಲವೇ?... ಸಾಧ್ಯವೇ ಇಲ್ಲವೇ ಎಂದು ಮತ್ತೆ ಮತ್ತೆ ಕೇಳುತ್ತಿದ್ದಳು.

ಪದ್ಮಳು ಶಂಕರ್ ಬಂದು ಅಲುಗಿಸಿದಾಗಲೇ ಕಣ್ಣು ರೆಪ್ಪೆ ಮಿಟುಕಿಸಿದ್ದು! ತೊಡೆಯ ಮೇಲೆ ಮಲಗಿದ್ದ ಮಗುವಿನ ನೆನಪು ಬಂದದ್ದು!... ಆದರೆ ಮಗು ಮಲಗೇ ಇತ್ತು... ಎಬ್ಬಿಸಿದರೂ ಏಳದ ನಿದ್ದೆಯಲ್ಲಿ ಮುಳುಗಿತ್ತು. ಮೊಲೆಗಾಗಿ ತೆರೆದ ತುಟಿ ಹಾಗೇ ಇತ್ತು...

'ಪದ್ಮ' ಎಂದು ಕಿರುಚಿದ ಶಂಕರ್. ಪ್ರಜ್ಞೆ ತಿಳಿದ ಪದ್ಮಳಿಗೆ ತೊಡೆಯ ಮೇಲಿನ ಮಗು ಕಣ್ಣಿಗೆ ಬಿತ್ತು. 'ಪುಟ್ಟಿ, ಪುಟ್ಟಿ' ಎಂದು ಅಲುಗಾಡಿಸಿದಳು. ಆದರೆ ನಿಶ್ಚಲವಾಗಿ ಮಲಗಿದ್ದ ಮಗುವೇ ತನ್ನ ಸ್ಥಿತಿಯನ್ನು ಅರ್ಥ ಮಾಡಿಸಿತು. ಬಿಕ್ಕಿ ಬಿಕ್ಕಿ ಅತ್ತಳು.

'ಏನಾಯ್ತು ಮಗುವಿಗೆ? ಬಂಡೆಕಲ್ಲಿನ ಹಾಗೆ ಕುಳಿತಿದ್ದೆಯಲ್ಲ... ತಿಳಿದುಕೊಳ್ಳೋಕೆ ಆಗಲಿಲ್ಲವಾ?– ಎಂದು ಬೇಸರ ಸಿಟ್ಟಿನ ಧ್ವನಿಯಲ್ಲಿ ನುಡಿದ.

ಪದ್ಮ ನಿರುತ್ತರಳಾಗಿದ್ದಳು. ಮಗುವಿನಗಲಿಕೆಗೆ ನೊಂದ ತನ್ನ ದುರ್ಬಲ ಮನಸ್ಸನ್ನು ಹಳಿದಳು. ತನಗೇನೋ ತುಂಬಾ ಅಕ್ಕರೆಯಿದ್ದಂತೆ ಮಾತಾಡಿದ ಗಂಡನ ಬಗ್ಗೆ ರೋಷದ ಬೆಂಕಿ ಭುಗಿಲೆದ್ದಿತು, ವಾರದ ಮೇಲೆ ಮರಳಿದ ಅವನ ಬಗ್ಗೆ ತಾತ್ಸಾರ ಮೂಡಿತು. ಸಂಬಂಧಗಳನ್ನೆಲ್ಲ ಕಳೆದುಕೊಂಡು ಜಡವಾಗಬೇಕೆಂದುಕೊಂಡ ತನ್ನ ಕೊರಲಿಗೆ, ಅವನು ಕ್ಷಣದ ಕಾಮದ ಪರಿಣಾಮದ ಉರುಲು ಹಾಕಿದ್ದ. ತೇವಗೊಂಡ ಕಣ್ಣುಗಳು ಬತ್ತಿದ್ದವು. ಮಗುವಿನ ಸಾವೂ ಅವಳಿಗೆ ಗೋಜಲು ಗಂಟು ಬಿಡಿಸಿಕೊಂಡಂತಾಯಿತು.

ರಾಜೀನಾಮೆ

ಗಂಟೆ ಹತ್ತಾಗಿತ್ತು. ಆಫೀಸ್ ಟೈಂ ೧೦.೩೦ ಆದರೂ ಮಾಲತಿ ಹತ್ತು ಗಂಟೆಗೆ ಹಾಜರಿದ್ದಳು. ಇನ್ನೂ ಬೇರೆ ಯಾರೂ ತನ್ನ ಕೊಲೀಗ್ಸ್ ಬಂದಿರಲಿಲ್ಲ. ಮಾಡುವುದೇನೆಂದು ತೋಚದೆ ಕ್ಯಾಂಟೀನ್‌ಗೆ ಹೋಗಿ ಕುಳಿತಳು. ಗೆಳತಿಯರು ಯಾರೂ ಜೊತೆಗಿಲ್ಲದೆ ಕ್ಯಾಂಟೀನ್‌ಗೆ ಹೋಗುವುದೆಂದರೆ ಕಸಿವಿಸಿ. ಬೇರೆ ದಾರಿಯಿಲ್ಲದೆ ಹೋಗಿ ಮೂಲೆಯ ಟೇಬಲ್ ಒಂದರ ಮುಂದೆ ಕುಳಿತಳು. ಅಕ್ಕಪಕ್ಕದ ಕೆಲವು ಆಫೀಸ್‌ಗಳು ಬೆಳಿಗ್ಗೆ ೯ಕ್ಕೆ ಪ್ರಾರಂಭವಾಗಿರುತ್ತಿದ್ದುದರಿಂದ ಸ್ವಲ್ಪ ಗಲಿಬಿಲಿ ಇತ್ತು. ಕಾಫಿ ಕುಡಿಯುವ ಅಭ್ಯಾಸ ಇಲ್ಲದಿದ್ದರೂ ಕ್ಯಾಂಟೀನ್‌ಗೆ ಸುಮ್ಮನೆ ಬಂದು ಕೂಡುವುದು ಸರಿಯಲ್ಲಂತ ಅನಿಸಿ ಪರಿಚಯದ ಮಾಣಿಯನ್ನು ಕರೆದು ಕಾಫಿಗೆ ಆರ್ಡರ್ ಮಾಡಿದಳು. ಮಾಣಿಗೆ ಮಾಲತಿ ಒಬ್ಬಳೇ ಬಂದದ್ದು ಆಶ್ಚರ್ಯ. ಅವನ ಕುತೂಹಲ ತಡೆಯುವಂಥಾದ್ದಲ್ಲ. ಅದಕ್ಕೇ "ಇದ್ಯಾಕೆ ಮೇಡಂ ಇವತ್ತು ನಿಂ ಜೊತೆಯವರು ಯಾರೂ ಬರಲಿಲ್ವೆ? ಅಲ್ದೇ ಇವತ್ತು ಆಫೀಸ್‌ಗೆ ತುಂಬ ಬೇಗ ಬಂದಂಗಿದೆ!" ಎಂದು ಕೇಳಿಯೇ ಬಿಟ್ಟ.

"ಹೌದಪ್ಪ ಬಸ್ ಸಿಕ್ತು, ಹತ್ತಿ ಬಂದ್ಬಿಟ್ಟೆ, ಇನ್ನೊಂದು ಅರ್ಧ ಗಂಟೇನೇ ಅಲ್ವ? ಕಾಫಿ ಕುಡ್ದು ಹೋಗೋಷ್ಟೊತ್ತಿಗೆ ಟೈಂ ಸರಿ ಹೋಗುತ್ತೆ"- ಸಮಾಧಾನವಾಗಿಯೇ ಉತ್ತರಿಸಿದಳು.

ಮಾಣಿ ಮರುಮಾತನಾಡದೆ ಸಮಾಧಾನಗೊಂಡಂತೆ ಹೋಗಿ ಒಂದೆರಡು ಸೆಕೆಂಡುಗಳಲ್ಲಿ ಕಾಫಿ ಗ್ಲಾಸ್ ಹಿಡಿದು ಬಂದ. ಇನ್ನೊಂದರಲ್ಲಿ ಸ್ವಲ್ಪ ಡಿಕಾಕ್ಷನ್ ತಂದಿದ್ದ. ಕಾಫಿಗೆ ಸಕ್ಕರೆ ವಿಪರೀತವಾಗಿರುತ್ತೆಂತ, ಮಾಲತಿ ಯಾವಾಗ್ಲೂ ಒಂದು ಸ್ವಲ್ಪ ಎಕ್ಸ್ಟ್ರಾ ಡಿಕಾಕ್ಷನ್ ಕೇಳೋದು ವಾಡಿಕೆ. ಅದಕ್ಕೇ ತುಂಬಾ ಬುದ್ಧಿವಂತಿಕೆಯಿಂದ ಮಾಣಿ ಕೇಳಿಸಿಕೊಳ್ಳದೆ ತಂದಿಟ್ಟ. ಕಾಫಿ ಗ್ಲಾಸಿಗೆ ಡಿಕಾಕ್ಷನ್ ಬೆರೆಸಿ ಒಂದು ಗ್ಲಾಸ್ [illegible] ಕಾಫಿ ಮಾಡಿಕೊಂಡಳು. ಒಂದೊಂದೇ ಗುಟುಕು ಗುಟುಕರಿಸುತ್ತಾ ಆಲೋಚನೆಗೆ

ಬಿದ್ದಳು. ಯಾಂತ್ರಿಕವಾಗಿ ಕಾಫಿ ಗ್ಲಾಸ್ ಹಿಡಿದ ಕೈ ತುಟಿಯ ಬಳಿಗೆ ಹೋಗುತ್ತಿತ್ತು. ಆದರೆ ಅವಳಿಗೆ ಮಾತ್ರ ಪರಿವೆ ಇದ್ದಂತೆ ಇಲ್ಲ.

ಸುಮಾರು ಎಂಟು ಹತ್ತು ವರ್ಷಗಳಿಂದ ಒಂದೇ ಆಫೀಸಿನಲ್ಲಿ ಗಾಣದೆತ್ತಿನ ಹಾಗೆ ದುಡೀತಿದ್ದಾಳೆ. ಯಾವ ಕೆಲಸಕ್ಕೆ ಸೇರಿದ್ದಳೋ ಅದೇ ಕೆಲಸದಲ್ಲಿ ಕೊಳೆತು ನಾರುತ್ತಿದ್ದಾಳೆ. ತನ್ನ ಹಿಂದೆ ಬಂದವರೆಲ್ಲ ತನ್ನನ್ನು ದಾಟಿ ಮೇಲೇರುತ್ತಿದ್ದರೂ ತನಗೆ ಹತ್ತಲಿಕ್ಕೆ ಆಗದಷ್ಟು ದುರ್ಬಲವೇನೋ ಎನಿಸಿತ್ತು. ಪ್ರಮೋಶನ್ ಇವಳ ನೆರಳಿಗೇ ಹೆದರುತ್ತಿತ್ತೇನೋ ಎನಿಸಿತ್ತು.

ಎಲ್ಲರ ಬದುಕಿನಲ್ಲಾಗುತ್ತಿದ್ದ ಬದಲಾವಣೆಗಳಿಗೆ ಜೀವಂತ ಮೂಕ ಸಾಕ್ಷಿಯಾಗಿದ್ದಳು. ಎಲ್ಲರ ಅಣಕ ಅಪಹಾಸ್ಯಗಳ ಹಾವಳಿಗೆ ತುತ್ತಾಗಿದ್ದಳು. ಕಾರಣ ಎಲ್ಲರಂತೆ ತಾನಿಲ್ಲದಿರುವುದೇ ಆಗಿತ್ತು. ಅವರ ನಗುವಿನಲ್ಲಿ ನಗು, ಅಳುವಿನಲ್ಲಿ ಅಳು, ಅಪಮಾನದಲ್ಲಿ ಅಪಮಾನ, ಮಾನದಲ್ಲಿ ಮಾನ ಕಾಣಬೇಕಿತ್ತು. ಸ್ವಂತ ವ್ಯಕ್ತಿತ್ವದಿಂದ ನಿಂತ ಅವಳ ಮನಸ್ಸನ್ನು ಇನ್ನೊಬ್ಬರ ಇಚ್ಛೆ ಅನಿಚ್ಛೆಗಳಿಗೆ ಹೊಂದಿಸುವುದು ಅವಳಿಂದ ಆಗದಾಗಿತ್ತು. ಮುಂದುವರಿಯಬೇಕಾದರೆ ಬಾಲ ಮೂಸಬೇಕಿತ್ತು. ಹಾಗೆ ಮಾಡದೆ ಬೇರೆ ರೀತಿಯಿದ್ದರೆ ವಿಚಿತ್ರ ಮೃಗದ ಹಾಗೆ ಕಾಣುವ ದೃಷ್ಟಿಯನ್ನು ಎದುರಿಸಬೇಕಿತ್ತು. ಒಳ್ಳೆಯುವರೆಂದು ಕೊಂಡವರೇ ಕೆಟ್ಟವರಾಗಿ ನಿರೂಪಿತರಾದಾಗ ಆಗುವ ಘಾತ ಎಲ್ಲಕ್ಕಿಂತ ಹೆಚ್ಚಿನದು. ತನ್ನ ಸುತ್ತಲ ಬಳಗದವರು ಯಾರು? ಕಮಲಾ, ರಂಜನಿ, ಫಾತಿಮಾ, ಪಿಂಟೋ, ಆರ್ಮುಗಂ, ಪೀಟರ್... ಒಬ್ಬೊಬ್ಬರ ಮುಖವಾಡದ ಪದರಗಳನ್ನು ಕಳಚಬೇಕು. ಹೌದು ಅವರೇ ಸುತ್ತುತ್ತಾ ಇದ್ದಾರೆ. ಆ ನಗು... ವಿಕಟನಗು... ಮುಳ್ಳು ಮುಳ್ಳಾಗಿ ಚುಚ್ಚಿ... ರಕ್ತ ಸುರಿಸುತ್ತಿವೆ. ಇವರು ಯಾರಿಗೂ ಹೃದಯ ಇಲ್ಲ... ಬರಿಗೊಂಬೆಗಳು... ಅದೂ ಕಲ್ಲಿನವು... ಕುಸ್ತಿಗೆ ನಿಂತರೆ ತಲೆಗೆ ಹೊಡೆಯುತ್ತವೆ... ಅಬ್ಬಬ್ಬ; ಇವರು.. ಇವರನ್ನೆಲ್ಲಾ ಸಾಲಾಗಿ ನಿಲ್ಲಿಸಿ ರೋಪ್ಷ್ಮನ್ ಕೊಂದ ಹಾಗೆ ಕೊಲ್ಬೇಕು. ಸಾಯ್ತಿರೋಮ ತಿಳಿಯೋ ಹಾಗೆ ಕೊಲ್ಬೇಕು. ತಲೆಕೆಳಗಾಗಿ ನೇತು ಬಿಟ್ಟು ಅಕ್ಯುಪಂಕ್ಚರ್ ಮಾಡ್ಬೇಕು. ಅಸಲಿ ಬಣ್ಣದವರೆಗೆ ಹೋಗ್ಬೇಕಾದ್ರೆ ತುಂಬಾ ಪದರ ಹರೀಬೇಕು. ಅವರ ಬಣ್ಣ ಆಳಕ್ಕಿದೆ ಗೊತ್ತಾಗೊಲ್ಲ.. ಅರೆ ಎಲ್ಲಾ ಒಟ್ಟಾಗಿ ಅದೇನು ಸಂಚು ಮಾಡ್ತಿದ್ದಾರೆ... ಹೌದು ನನ್ನನ್ನು ಕೊಂದ್ಬಿಡ್ತಾರೆ. ಯು ಆರ್ ಅನ್ ಫಿಟ್ ಅಂತ ಬೋರ್ಡು ಕಟ್ಟಿ ನನ್ನನ್ನ ಮುಳುಗಿಸ್ತಾರೆ. ನನ್ನ ಕತ್ತು ಹಿಸುಕೋಕೆ ಬರ್ತಿದ್ದಾರೆ... ಅಯ್ಯೋ ಕ್ರೂರವಾಗಿ ನೋಡ್ತಿದ್ದಾರೆ. ದೇವರೇ... ದೇವರೇ ನಾನು ಹೇಗೆ ಇವರಿಂದ ತಪ್ಪಿಸ್ಕೊಳ್ಲಿ?... ಬಂದ್ರು ಬಂದ್ರು...ಅಯ್ಯೋ ಬಂದ್ಬಿಟ್ರು... ಪಳ್ ಅಂತ ಗ್ಲಾಸ್ ಒಡೆದ ಶಬ್ದಕ್ಕೆ ಜನರೆಲ್ಲ ಈ ದಿಕ್ಕಿಗೆ ತಿರುಗಿದ್ರು. ತನ್ನ ವರ್ತನೆ ತೀರಾ ಸಿಲ್ಲಿ ಅನ್ನಿಸ್ತು. ಆದರೂ ಅಸಹ್ಯವಾಗಿದ್ದ ಅವರೆಲ್ಲರ ದೃಷ್ಟಿಯನ್ನು ಎದುರಿಸದೆ ಗತ್ಯಂತರವಿರಲಿಲ್ಲ. ತಾನು

ಆಲೋಚನೆಯಲ್ಲಿ ಮೈ ಮರೆತಿದ್ದಾಗ ಮಾಣಿ ಬಿಲ್ ತಂದಿಟ್ಟಿದ್ದೂ ಗೊತ್ತಾಗಿರಲಿಲ್ಲ. ಪರ್ಸ್ ತೆಗೆದು ಎಂಟಾಣೆ ಚಿಲ್ಲರೆಯನ್ನು ಆ ಬಿಲ್ ಮೇಲಿಟ್ಟು ಚಕಚಕನೆ ಹೊರಗೆ ನಡೆದಳು. ಹತ್ತೂವರೆ ಗಂಟೆಗೆ ಇನ್ನೊಂದೆರಡು ಸೆಕೆಂಡ್ ಇತ್ತು. ಮೈ ಬೆವರುತ್ತಿತ್ತು. ತುಟಿ ಕಂಪಿಸುತ್ತಿತ್ತು. ಭೀತಿ ಕಣ್ಣಲ್ಲಿ ತುಂಬಿದ ಹಾಗಿತ್ತು. ಯಾರಾದರೂ ನೋಡಿದರೆ ಮಾಲತಿ ಸ್ವಸ್ಥವಾಗಿಲ್ಲ ಅನ್ನೋದು ಸ್ಪಷ್ಟವಾಗಿ ತಿಳೀತಿತ್ತು. ಆಫೀಸ್ ಮೆಟ್ಟಿಲು ಹತ್ತುತ್ತಿದ್ದ ಹಾಗೆ ಗೀತಾ ಎದುರಾದಳು. ಮಾಲತಿಯ ಮುಖ ನೋಡಿ ಆಶ್ಚರ್ಯವಾಯಿತು. ಆಗ ತಾನೆ ಆಫೀಸ್‌ಗೆ ಬರುತ್ತಿದ್ದ ಮಾಲತಿ ಮಾಮೂಲಿನಂತೆ ಫ್ರೆಷ್ ಆಗಿ ಇರಬೇಕಿತ್ತು.

ಆದರೆ ಈಗ ನೋಡಿದರೆ ದಿನ ಪೂರ್ತಿ ದುಡಿದು ಬೆಂದ ಮುಖದ ಹಾಗಿದ್ದುದಲ್ಲದೆ ಅವಳ ಮುಖದಲ್ಲಿ ಪ್ರೇತಕಳೆ ತುಂಬಿದ ಹಾಗಿತ್ತು. ಮೈಗೆ ಹುಷಾರಿಲ್ಲದಿರಬಹುದೆಂದು ಭಾವಿಸಿದ ಗೀತಾ 'ಲೀವ್ ಯಾಕೆ ಅಪ್ಲೈ ಮಾಡ್ಬಾರ್ದಾಗಿತ್ತೇ ಮಾಲತಿ? ಪ್ರಪಂಚ ಮುಳುಗಿ ಹೋಗೋಂತ ಕೆಲಸವೇನೂ ಇಲ್ವಲ್ಲ ಆಫೀಸ್‌ನಲ್ಲಿ! ಅಥವಾ ನನಗೆ ತಿಳೀದೇ ಏನಾದ್ರೂ ಇದೆಯೋ' ಅರ್ಥಗರ್ಭಿತವಾಗಿ ಹುಸಿನಗುತ್ತಾ ಕೇಳಿದಳು.

ಮಾಲತಿಯ ಹೃದಯದ ತಂತಿಗಳು ಮುರಿದು ಹೋಗುವಷ್ಟು ಬಿಗಿಯಾಗಿದ್ದವು. ಬೇರೆ ಯಾರಾದರೂ ಅವಳನ್ನು ಮಾತಾಡಿಸಿದ್ದರೂ ಸಿಡಿದು ಬೀಳುತ್ತಿದ್ದಳು. ಆದರೆ ಮಾಲತಿಗೆ 'ತನ್ನವರು' ಎಂದು ಹೇಳಿಕೊಳ್ಳೋಕೆ ಗೀತಾ, ಗೋಪಿ ಇಬ್ಬರೇ. ಈಗ ಗೀತಾಳ ಮೇಲೆ ಸಿಟ್ಟಾದರೆ ಕೆಲ್ಸ ಕೆಡುತ್ತೆ. ಅದಕ್ಕೇ ಮನಸ್ಸಿಲ್ಲದ ಮನಸ್ಸಿನಿಂದ ಉತ್ತರಿಸಿದಳು. 'ನಿನಗ್ಗೊತ್ತಿದ್ದೂ ನನ್ನನ್ನು ಲೀವ್ ಅಪ್ಲೈ ಮಾಡೋಕೆ ಹೇಳ್ತೀಯಲ್ಲೇ. ಈ ಹೊಸಾ ಬಾಸ್ ಬಂದಾಗಿಂದ ಮನುಷ್ಯರನ್ನು ನೋಡಿದ್ರೆ ಅಸಹ್ಯ ಹುಟ್ಟೋ ಹಾಗೆ ಆಗ್ತಿದೆ. ನಿನಗೇ ಗೊತ್ತಲ್ಲ. ಒಂದು ದಿವ್ಸ ಲೀವ್ ಹಾಕಿದರೆ ಎಷ್ಟು ರಂಪಾ ಮಾಡ್ತಾನೇಂತ...' ಹೇಳುತ್ತಲೇ ಗೀತೆಯ ಜೊತೆಗೆ ತನ್ನ ಕೊಠಡಿಯತ್ತ ಹೆಜ್ಜೆಯಿಟ್ಟಳು. ಸಂಜೆ ಮನೆಗೆ ಹೋಗುವಾಗ ಭೇಟಿಯಾಗೋಣಾಂತ ಹೇಳಿ ಬೇರೆ ಬೇರೆಯಾದರು.

ಮೊದಲು ಗೀತಾ, ಮಾಲತಿ, ಗೋಪಿ ಮೂವರೂ ಒಂದೇ ಸೆಕ್ಷನ್‌ನಲ್ಲಿದ್ದರು. ಆದರೆ ಯಾಕೋ ಹೊಸಾ ಬಾಸ್ ಬಂದಾಗಿನಿಂದ ಈ ಮೂವರನ್ನೂ [illegible] ಬಂದಿಗಳನ್ನು ಬೇರೆ ಬೇರೆಯಾಗಿ ಇಡೋ ಹಾಗೆ, ಬೇರೆ ಬೇರೆ ಸೆಕ್ಷನ್‌ಗೆ ಟ್ರಾನ್ಸ್‌ಫರ್ ಮಾಡಿದ್ದ. ಊಟದ ಹೊತ್ತಲ್ಲಿ ಮೂವರೂ ಒಂದು ಕಡೆ ಸೇರಿ ಆಯಾ ದಿನದ ತಮ್ಮ ಸೆಕ್ಷನ್‌ಗಳಲ್ಲಿ ನಡೆದ ಘಟನೆಗಳು, ಅನುಭವಗಳು, ಜೋಕ್ಸ್– ಎಲ್ಲಾನ್ನೂ ಎಕ್ಸ್‌ಛೇಂಜ್ ಮಾಡ್ಕೊಳ್ತಿದ್ರು.

ಗೋಪಿ ತುಂಬಾ active. ಅವನ ಪರಿಚಯ ಎಲ್ಲರಿಗೂ ಅನಿವಾರ್ಯವಾಗಿ [illegible] [illegible] Union ಅದೂ ಇದೂಂತ ಇಲ್ಲದಿರೋ ಉಸಾಬರಿಗಳೆಲ್ಲ ಇಟ್ಕೊಂಡಿದ್ದ.

ಜೊತೆಗೇ ಕೆಲಸದಲ್ಲಿ ತುಂಬಾ ಶಿಸ್ತಿನಿಂದ ಇರ್ತಿದ್ದ. Files ಎಲ್ಲಾ ಅವತ್ತಿಂದು ಅವತ್ತೆ clear ಮಾಡಿ ಇಟ್ಟಿಡ್ತಿದ್ದ. ಅಕಸ್ಮಾತ್ ಆಗದಿದ್ದರೂ ಸಂಜೆ ಹೊತ್ತು ಕೂತೋ ಇಲ್ಲ ಬಾಸ್ ಪರ್ಮಿಷನ್ ತಗೊಂಡು ಬೆಳಿಗ್ಗೆ ಬೇಗ ಬಂದು ಮಉಗಿಸಿಬಿಡುತ್ತಿದ್ದ. ಅಧಿಕಾರಿಗಳು ಬಂದರೆ ತುಂಬಾ frank ಆಗೇ ಆಫೀಸಿನ ಹುಳುಕುಗಳನ್ನೆಲ್ಲಾ ಅವರ ಗಮನಕ್ಕೆ ತಂದು ಬಿಡುತ್ತಿದ್ದುದರಿಂದಲೇ ತುಂಬಾ ಜನಕ್ಕೆ 'ಗೋಪಿ' ಅಸಹ್ಯವಾಗಿದ್ದ. ಅಸೂಯೆಯಿಂದ ಅವನನ್ನು ಸಿಕ್ಕಿಸುವುದಕ್ಕೆ ಶತ ಪ್ರಯತ್ನ ಮಾಡಿದ್ರೂ ಆಗುತ್ತಿರಲಿಲ್ಲ. ಹಳೇ Bossಗೆ ಅಧಕ್ಕೇ ಗೋಪೀನ ಕಂಡರೆ ತುಂಬಾ ಇಷ್ಟ– ಮನಸ್ಸು ಮೃದುವಾಗಿದ್ದರೂ ಮಾತು ಕ್ರೂರವಾಗಿ ಇರುತ್ತಿತ್ತು. ಅವನ ಒಂದೊಂದು ಅಕ್ಷರಾನೂ ಎದುರಾಳಿಗಳಿಗೆ ಖಾರವಾಗಿ ಇರುತ್ತಿತ್ತು. ಅದಕ್ಕೇ ಗೋಪಿಗೆ ಸ್ನೇಹಿತರ ಬರ. ಸ್ನೇಹಿತರು ಬೇಕೂಂತ ಬಯಸಲೂ ಇಲ್ಲ ಗೋಪಿ.

ಮಾಲತಿಗೆ ಇದೇ ಗೋಪಿಯ ಮನಸ್ಸತ್ವಗಳು ಹೆಚ್ಚು ಸಾಮಿಪ್ಯಕ್ಕೆ ದಾರಿ. ಅವಳಿಗೆ ಇವನ ಈ ಸಾಮಾನ್ಯ ನಂಬಿಕೆಗಳಿಗಿಂತ ಬೇರೇನೂ ಬೇಕಿರಲಿಲ್ಲ. ಇವರಿಬ್ಬರ ಪರಿಚಯ ಆದದ್ದೂ ಒಂದು ವಿಚಿತ್ರ ರೀತಿಯಲ್ಲಿ.

ಮದುವೆಯಾದ ಹೊಸದಿನಗಳು. ಮಾಲತಿಯ ಮನಸ್ಸು ಗರಿಗೆದರಿ ಹಾರಾಡುವಷ್ಟು ಹಗುರವಾಗಿರುತ್ತಿತ್ತು. ಸುಂದರ ಕಲ್ಪನೆಗಳ ಬೆನ್ನು ಹತ್ತುವುದರಲ್ಲಿ ಆಫೀಸಿನ ಕಹಿ ಅನುಭವಗಳು ಮರೆತು ಹೋಗುತ್ತಿದ್ದವು. ಆದಷ್ಟೂ ಆ ಕಹಿಯನ್ನು ಆಫೀಸಿಗೆ ಸೀಮಿತಗೊಳಿಸಬೇಕೆಂಬ ನಿರ್ಧಾರವನ್ನು ಮಾಡಿದ್ದಳು.

ಸಂಜೆ ಐದರ ಮೇಲೆ ಆಫೀಸಿನ executive ಮೀಟಿಂಗಿತ್ತು. ಮಾಲತಿ ಸ್ಟೆನೋ ಆಗಿದ್ದುದರಿಂದ Boss ಜೊತೆಗೇ ಇದ್ದು ಮೀಟಿಂಗ್‌ನ Proceding Resolutions ಎಲ್ಲವನ್ನೂ ರೆಕಾರ್ಡ್ ಮಾಡ್ಬೇಕಿತ್ತು. ಸಂಜೆ ಬರುವುದು ತಡವಾಗುತ್ತೇಂತ ಮನೆಯಲ್ಲಿ ಹೇಳಿದ್ದು ಸುಮಾರು ೭ ಗಂಟೆ ಹೊತ್ತಿಗೆ ಆಫೀಸ್ ಬಳಿ ಬರಬೇಕೆಂದು ಗಂಡನಿಗೆ ಹೇಳಿದ್ದಳು.

ತಿಳಿ ನೀಲಿ ಸೀರೆಯುಟ್ಟು ಉದ್ದವಾಗಿ ಸೆರಗು ಬಿಟ್ಟಿದ್ದಳು. ಮೊದಲೇ ಉದ್ದ ಕೂದಲು ಜಡೆಗೆ ಸ್ವಚ್ಛ ಬಿಳುಪಿನ ಗುಲಾಬಿ ಮುಡಿದಿದ್ದಳು. ಸಂಜೆ ಐದು ಗಂಟೆಗೆ ಆಫೀಸ್ ಮುಗಿದ ಮೇಲೆ ಲೇಡೀಸ್ ರೂಂಗೆ ಹೋಗಿ ನೀಟಾಗಿ ಬಾಚಿ ಹೆರಳು ಹೆಣೆದುಕೊಂಡಳು. ಪರ್ಸ್ ಒಳಗಿಂದ compact powder ಬಳಿದುಕೊಂಡಳು. ಪರಡಿದ ಕಣ್ಣು ಕಾಡಿಗೆಯನ್ನು ಕರವಸ್ತ್ರದಿಂದ ಒರೆಸಿ, ಹೊಸದಾಗಿ ಉಗುರಿನಿಂದಲೇ ಬ್ರಷ್‌ಗಿಂತ ನೀಟಾಗಿ ಕಾಡಿಗೆ ತೀಡಿದಳು. High heels ಚಪ್ಪಲಿಯೇರಿಸಿ ಹೆಜ್ಜೆಯಿಡುತ್ತಾ ಹೊರಟರೆ ಅಪ್ರಯತ್ನವಾಗಿ ಹೆಣ್ಣು ಗಂಡು ಭೇದವಿಲ್ಲದೆ ಎಲ್ಲರ ಕಣ್ಣೂ ಇವಳೆಡೆ ತಿರುಗಿ ಅರಳುತ್ತಿದ್ದುವು.

ಮೀಟಿಂಗ್ ಹಾಲೊಳಗೆ ಕಾಲಿಡುತ್ತಿದ್ದಂತೆಯೇ ಬಾಸ್ ಪ್ರಶಂಸಾತ್ಮಕವಾಗಿ ನೋಡಿದ. ಅವಳಂದವನ್ನು acknowledge ಮಾಡಿದನೇ ಹೊರತು ಆ ದೃಷ್ಟಿಯಲ್ಲಿ ಹೊಲಸು ವಾಸನೆಯಿರಲಿಲ್ಲ. ಇಂಥ ಸೆಕ್ರೆಟರಿ ಇರುವುದು ಹೆಮ್ಮೆ ವಿಷಯ ಅನ್ನೋ ಹಾಗೆ ವರ್ತಿಸಿದ.

ಒಬ್ಬೊಬ್ಬರೇ ಬರತೊಡಗಿದರು. ಮಾಲತಿ ತನ್ನ ಜಾಗದಲ್ಲಿ ಪೇಪರ್ ಪೆನ್ ರೆಡಿ ಮಾಡಿಕೊಂಡು ಕುಳಿತಳು.ಕಂಪೆನಿಯ ಆಯವ್ಯಯ ಪ್ರಗತಿಗೆ ಮುಂದು ಕೈಗೊಳ್ಳಬೇಕಾದ ಯೋಜನೆಗಳು- ಎಲ್ಲಾ ವಿಚಾರಗಳೂ ಚರ್ಚೆಗೆ ಬಂದುವು. ಒಮ್ಮತ ನಿರ್ಣಯಗಳಿಗೆ ಬರುವುದು ಸ್ವಲ್ಪ ಕಷ್ಟವೇ ಆಯಿತು. ಎಲ್ಲಾ ಮುಕ್ತಾಯವಾಗುವಷ್ಟು ಹೊತ್ತಿಗೆ ನಿರೀಕ್ಷಿಸಿದ್ದಕ್ಕಿಂತ ಹೆಚ್ಚಿನ ವೇಳೆಯಾಗಿ ಹೋಗಿತ್ತು. ಸಂದೀಪ್ (ಮಾಲತಿಯ ಗಂಡ)ನಿಗೇನೋ ೭ ಗಂಟೆಗೆ ಬರ ಹೇಳಿದ್ದಳು. ಆದರೆ ಎಂಟು ಗಂಟೆ ಆಗಿದೆ. ಎಂದೂ ಇಷ್ಟು ತಡವಾಗಿರ್ಲಿಲ್ಲ. ಸಂದೀಪ್ ಬಂದು ಕಾದಿದ್ದರೆ ಸರಿ ಹೋಗುತ್ತೆ, ಇಲ್ಲದಿದ್ದರೆ ತನ್ನ ಗತಿ? ಸಂದೀಪ್ ಬಂದೇ ಬರುತ್ತಾನೆ- ಅನ್ನೋ ಭರವಸೆಯೇನೋ ಇದ್ದೇ ಇತ್ತು. ಗೇಟು ದಾಟಿ ಮುಂದಿನ ಫುಟ್ಪಾತ್ ಮೇಲೆ ನಿಂತಳು. ಸುತ್ತಲೂ ನೋಡಿದಳು. ಸಂದೀಪ್ ಎಲ್ಲಿಯೂ ಕಾಣಲಿಲ್ಲ. ಯಾಕೋ ಎದೆ ಡವಗುಟ್ಟತೊಡಗಿತು. ತನ್ನುಸಿರಾಟದೊಂದಿಗೆ ಸಣ್ಣದಾಗಿ ಇನ್ನೊಬ್ಬರ ಉಸಿರಾಟ ಕೇಳಿಸಿತು. ಹೊಟ್ಟೆಯತ್ತ ದೃಷ್ಟಿ ಹರಿಸಿ ಮುಸಿನಗೆ ನಕ್ಕಳು. ಸ್ವಲ್ಪ ಮನಸ್ಸಿಗೆ ಹಿತ ಅನ್ನಿಸಿತು. ಏನೋ ಮಧುರ ಅನುಭವ? ಇನ್ನೂ ಸ್ವಲ್ಪ ದಿವಸ ಹೋದ ಮೇಲೆ surprise ಕೊಡಬೇಕಂತ ಅಂದುಕೊಂಡದ್ದರಿಂದ ಸಂದೀಪನಿಗೆ ಹೇಳಿರಲಿಲ್ಲ. ಅಕಸ್ಮಾತ್ ಹೇಳಿದರೂ ಅವನ ಕುಚೇಷ್ಟೆಗಳು ಸಹಿಸುವುದಕ್ಕೆ ಆಗುತ್ತಿರಲಿಲ್ಲ. ಅಮ್ಮನಿಗೇ ಅಂಟಿಕೊಂಡಿರುವ ಮಗುವಿನ ಹಾಗೆ ಸಂದೀಪ್ ತನಗೆ ಬೆನ್ನು ಬೀಳುತ್ತಿದ್ದ, ಆಫೀಸಿನಲ್ಲಿ ಇರುವಷ್ಟು ಕಾಲ ಅದು ಹೇಗೆ ತನ್ನನ್ನು ಬಿಟ್ಟಿರುತ್ತಾನೋ, ಅಂತ ಆಶ್ಚರ್ಯವಾದರೆ ಇನ್ನೊಂದು ಕಡೆ ಪಾಪ! ಎನ್ನಿಸಿತ್ತು. ಹೀಗಿರೋ ಸಂದೀಪ್ ತನ್ನನ್ನು ಕರೆದುಕೊಂಡು ಹೋಗೋದಕ್ಕೆ ಯಾಕೆ ಬರಲಿಲ್ಲವೋ ಎಂದು ಚಿಂತಿಸುತ್ತಿತ್ತು ಮಾಲತಿಯ ಮೆದುಳು. ಆಫೀಸಿನಿಂದ ಬರುವುದು ಒಂದೈದು ನಿಮಿಷ ತಡವಾದರೆ ಏನೋ ಆಗಿ ಹೋದವರ ಹಾಗೆ ಆಡ್ತಿದ್ದ.... ಇರಲಿ ಇವತ್ತು ಮನೆಗೆ ಹೋದ್ಮೇಲೆ ಮಾತೇ ಆಡಿಸೋಲ್ಲ. ಹೇಳ್ತೀನಿ ನಿನ್ನ ಪ್ರೀತಿ ಎಲ್ಲಾ ನಾಟಕ. ನಿನ್ಮೇಲೆ ನನಗೆ ನಂಬಿಕೆಯಿಲ್ಲ. ನಿನ್ನೊಂದಿಗೆ ನಾನು ಇರೋದೇ ಇಲ್ಲ ಅಂತ ಹಟ ಹಿಡೀತೀನಿ. ಆಗ ಗೊತ್ತಾಗುತ್ತೆ ಕಾಲು ಹಿಡಿದರೂ ಮೂರು ದಿವಸ ಮಾತಾಡದೆ ಇದ್ದು ಬಿಡ್ತೀನಿ- ಅಂತ ಏನೇನೋ ಸೇಡು ತೀರಿಸಿಕೊಳ್ಳುವ ವಿಧಾನಗಳನ್ನು ಆಲೋಚಿಸುವಳು... ಗಂಟೆ ೯ ಆಯಿತು. ಅಲ್ಲಿಗೆ ಬಂದು ನಿಂತು ಒಂದು ಗಂಟೆಯಾದ್ರೂ ಇನ್ನು ಬರುವ ಭರವಸೆಯಿಲ್ಲ... ಒಂದು ಮನಸ್ಸು ಆಲೋಚಿಸಿತು. ಬರುವ ತನಕ ಎಷ್ಟು ಹೊತ್ತಾದರೂ ಇಲ್ಲಿಯೇ ಕಾಯುತ್ತಾ ಬಿದ್ದಿರೋಣ. ಮುಂದಾ

ಹೊತ್ತಾಗೋ ತನಕ ಮನೆ ಸೇರದಿದ್ರೆ ಹುಡುಕಿಕೊಂಡು ಬಂದೇ ಬರ್‍ತಾನೆ. ಹುಚ್ಚು ಹಟ ತಲೆಗೆ ಹೋಗುತ್ತಿತ್ತು. ಹೆಂಗಸು ಅಷ್ಟು ಹೊತ್ತು ಅದೂ ನೀರೆರೆದುಕೊಂಡವಳು, ಅಲ್ಲಿ ಮರಗಳಡಿಯಲ್ಲಿ ಇರುವುದು ಸರಿಯಲ್ಲ ಅನ್ನೋ ವಿವೇಕ ಮರೆತು ಹೋಗಿದ್ದಳು. ಜಗುಲಿಯ ಹಾಗೆ ಚಾಚಿದ್ದ ಗೋಡೆಯ ಮೇಲೆ ಕುಳಿತುಕೊಂಡಳು. ೯-೩೦ ಆಯ್ತು. ಆಗ ತಾನೇ ಸಿನಿಮಾ ಬಿಟ್ಟಿದ್ದರು. ತನಗೆ ಪರಿಚಯದವರ್‍ಯಾರಾದರೂ ಸಿಕ್ಕುತ್ತಾರೇನೋ ಎಂದು ನೋಡಿದಳು. ದೂರದಲ್ಲಿ ವ್ಯಕ್ತಿಯ ನೆರಳೊಂದು ಚಲಿಸುತ್ತಾ ಇವಳೆಡೆಗೆ ಬರುವಂತಿತ್ತು. ಕತ್ತಲಲ್ಲಿ ಯಾರೆಂದು ಗುರುತು ಹತ್ತದೆ ಸ್ವಲ್ಪ ಸ್ವಲ್ಪವಾಗಿ ಕಾಲು ಕಂಪಿಸತೊಡಗಿತು. ತಲೆ ಸುತ್ತಿ ಬರುವಂತಾಯಿತು. ಹೊಟ್ಟೆಯಲ್ಲಿ ಸಂಕಟ. ಕ್ರಮೇಣ ನೋವಿಗೆ ತಿರುಗಿತು. ಏನೋ ಭೀತಿ. ಕಪ್ಪನೆಯ ಆಕಾರದ ಆ ನೆರಳು ವ್ಯಕ್ತಿ ಹತ್ತಿರ ಬಂದಾಗ ಕಂಬದ ಬೆಳಕು ಬಿದ್ದು ಗೋಪಿ ಎಂಬುದು ಗೊತ್ತಾಯಿತು. ಸ್ವಲ್ಪ ಸಮಾಧಾನವಾಯಿತು. ಆದರೆ ಗೋಪಿಗೆ ಮಾತ್ರ ಮಾಲತಿ ಇಷ್ಟು ಹೊತ್ತಿನಲ್ಲಿ ಇನ್ನೂ ಆಫೀಸ್ ಬಳಿ ಒಬ್ಬಳೇ ಇದ್ದುದು ತೀರಾ ವಿಚಿತ್ರವೆನಿಸಿತು.

ಹೊಟ್ಟೆ ಹೊಸಕಿಕೊಳ್ಳೋಣ ಎನಿಸುವಂತಾಗುತ್ತಿತ್ತು. ಮುಖ ಬರಬರುತ್ತಾ ಕಪ್ಪಿಡತೊಡಗಿತು. ಗೋಪಿ ಮಂದ ಬೆಳಕಲ್ಲಿ ಅವಳ ಮುಖವನ್ನು ಗಮನಿಸಿದ. 'ಯಾಕೆ ಇಷ್ಟು ಹೊತ್ತಲ್ಲಿ ಈ ಸ್ಥಿತೀಲಿ ಇಲ್ಲಿ ನಿಂತಿದ್ದೀರಿ ಮೇಡಂ' ಅಂತ ಕೇಳೋಣಾಂತ ಅನಿಸಿದರೆ ಅವಳು ಪಡುತ್ತಿರುವ ಬಾಧೆ ನೋಡಿ ಗೋಪಿಗೆ ಏನೂ ತೋಚದಾಯಿತು. ಅವಳ ಒದ್ದಾಟ ಕರುಳು ಹಿಂಡುವಂತಾಗುತ್ತಿತ್ತು. 'ಮೇಡಂ, ಮೇಡಂ, ನಾನು ಗೋಪಾಲ, ಇಲ್ಲಿ ನೋಡಿ, ನಿಮ್ಮನ್ನು ಮನೆ ತಲುಪಿಸುತ್ತೇನೆ. ನಂ ಜೊತೆ ಬನ್ನಿ' ಎಂದು ಕರೆದ. ಮಾಲತಿಗೆ ಉತ್ತರಿಸುವಷ್ಟು ಶಕ್ತಿ ಇಲ್ಲದಾಗುತ್ತಿತ್ತು. ಮೌನ ಬಾಧೆ ನೋಡಿ. ಇನ್ನು ಬೇರೆ ದಾರಿ ಕಾಣದೆ ಹತ್ತಿರದಲ್ಲಿ ಸುಳಿದ ಆಟೋವನ್ನು ಕರೆದು ಹತ್ತಿಸಿದ. ತಾನೂ ಒಳಗೆ ಕುಳಿತುಕೊಳ್ಳುವುದು ಅನಿವಾರ್ಯವಾಗಿದ್ದರೂ ಮನಸ್ಸಿಗೆ ಯಾಕೋ ಅಳುಕು. ಯಾರಾದರೂ ನೋಡಿದವರು ಏನಂದುಕೊಂಡಾರು?- ಅನ್ನೋ ಕಳವಳ. 'ದೇವರೇ! ಕಾಪಾಡು' ಎಂದು ಮೊರೆಯಿಟ್ಟು ಕೊಂಡು ಹತ್ತಿದ. ಆಟೋ ಡ್ರೈವರ್ 'ಎಲ್ಲಿಗೆ ಸಾರ್' ಎಂದು ಕೇಳಿದ. ಗೋಪಿಗೆ ಮಾಲತಿಯ ಮನೆ ಗೊತ್ತಿಲ್ಲ. ಮಾಲತಿಯನ್ನು ಮಾತಾಡಿಸಿದರೆ ಮಾತಾಡುತ್ತಿಲ್ಲ. ವಿಪರೀತ ನೋವಿನಿಂದಾಗಿ ಪ್ರಜ್ಞೆ ತಪ್ಪಿದಂತಾಗಿತ್ತು. ಗೋಪಿಗೆ ಗಾಬರಿಯಾಯಿತು. 'ಎಲ್ಲೆಂದು ಅವರ ಮನೆ ಹುಡುಕೋದು? ಯಾರನ್ನು ವಿಚಾರಿಸುವುದು?' ಒಂದೂ ಬಗೆ ಹರಿಯುತ್ತಿಲ್ಲ... 'ಎಲ್ಲಿಗೆ ಸಾರ್'- ಮತ್ತೊಮ್ಮೆ ಡ್ರೈವರ್‌ನ ಧ್ವನಿ ಪ್ರಶ್ನಿಸಿತು... ಸಮಯ ಸ್ಫೂರ್ತಿಯಿಂದ ಹೇಳಿದ- 'ಯಾವುದಾದರೂ ನರ್ಸಿಂಗ್ ಹೋಂ ಹತ್ತಿರದಲ್ಲಿದ್ದರೆ ನಡೆಯಪ್ಪ'. ಡ್ರೈವರ್ ಯೋಚಿಸಿ. 'ಇಲ್ಲೇ ಒಂದೆರಡು ಫರ್ಲಾಂಗ್ ದೂರದಲ್ಲಿ 'ನಂದಿನಿ ನರ್ಸಿಂಗ್ ಹೋಂ'

ಇವೆ. ಅಲ್ಲಿಗೆ ಬಿಡ್ಲಾ ಸಾರ್' ಎಂದ. ಯಾವುದಾದರೂ ಸರಿ ಬೇಗ ನಡೆ ಅಂತ ಗೋಪಿ ಆತುರ ಪಡಿಸಿದ.

ನರ್ಸಿಂಗ್ ಹೋಂ ಬಾಗಿಲು ಮುಚ್ಚಿತ್ತು. ಹೊರಗೆ ಘೂರ್ಕ ನಿಂತಿದ್ದ. ತುಂಬಾ ಅರ್ಜೆಂಟ್ ಕೇಸ್ ಒಳಗೆ ಬಿಡು ಅಂತ ಕೇಳಿದ್ದಕ್ಕೆ ಅವನು ಒಳಗೆ ಹೋಗಿ ಒಂದೆರಡು ನಿಮಿಷದಲ್ಲಿ ಬಂದು ಇವರನ್ನು ಕರೆದುಕೊಂಡು ಹೋದ. ಗೋಪಿ ಆಟೋದವನಿಗೆ ಮೀಟರ್ ಛಾರ್ಜು ಕೊಡುತ್ತಾ ಥ್ಯಾಂಕ್ಸ್ ಹೇಳ ಹೋದ. ಆದರೆ ವಿಚಿತ್ರವಾಗಿ ಆಟೋದವನು ದುಡ್ಡು ತೆಗೆದುಕೊಳ್ಳದೆ 'ಬೇಡ ಸಾರ್. ಪಾಪ ಪೇಶಂಟ್ ತುಂಬಾ ಸೀರಿಯಸ್ಸಾಗಿ ಇರೋ ಹಾಗಿದೆ. ನೀವು ಅವರನ್ನು ಚೆನ್ನಾಗಿ ಗಮನಿಸಿಕೊಳ್ಳಿ'- ಅಂತ ಹೇಳಿ ಗೋಪಿಯ ಮಾತಿಗೂ ಅವಕಾಶ ಕೊಡದೆ ಗಾಡಿ ಸ್ಟಾರ್ಟ್ ಮಾಡಿದ. ಗೋಪಿ ತಬ್ಬಿಬ್ಬಾದ. ಅವನ ವರ್ತನೆ ಅವನಿಗೆ ತೀರಾ ವಿಚಿತ್ರ ಅನ್ನಿಸಿತು. ಹೊತ್ತಲ್ಲದ ಹೊತ್ತಲ್ಲಿ ಒಂದಕ್ಕೆರಡರಷ್ಟು ಮೀಟರ್ ಬಾಡಿಗೆ ಕೇಳೋ ಕಾಲದಲ್ಲಿ ಇವನಂಥಾ ಪೆದ್ದ. ಕೊಟ್ಟಿದ್ದನ್ನು ಬೇಡಾಂತಾನೆ, ಅನ್ನಿಸಿತು. ಘೂರ್ಕ ತಂದ wheel chairನಲ್ಲಿ ಮಾಲತಿಯನ್ನು ಕೂಡಿಸಿದ. ಘೂರ್ಕ ಆ ಚೇರನ್ನು ಸ್ವಲ್ಪ ದೂರ ತಳ್ಳಿಕೊಂಡು ಹೋಗಿ ನರ್ಸಿಂಗ್ ಹೋಂ ಆಯಾ ಕೈಗೆ ಒಪ್ಪಿಸಿದ. ಅವಳು Emergency ವಾರ್ಡೊಳಗೆ ಮಾಲತಿಯನ್ನು ಕರೆದುಕೊಂಡು ಹೋಗಿ ಮೊದಲ ಚಿಕಿತ್ಸೆಗಳನ್ನೆಲ್ಲಾ ಮಾಡಿ, oxygen ಕೊಟ್ಟು ಹೊರಗೆ ಬಂದಳು. ಡಾ॥ ಬರ್ತಾರೆ. ಈಗ ಫೋನ್ ಮಾಡಿದ್ದೇನೆ. ನೀವು ಕುಳಿತುಕೊಳ್ಳಿ ಎಂದು ಹೇಳಿ ಹೊರಟು ಹೋದಳು.

ಸ್ವಲ್ಪ ಹೊತ್ತಿಗೆ ಡಾ॥ ಬಂದು ನೋಡಿದ ಮೇಲೆ, ಗೋಪಿಗೆ ಡಾ॥ ಕರೆ ಕಳುಹಿಸಿದಳು. ಗೋಪಿ ಡಾಕ್ಟರಿಗೆ ಮಾಲತಿಯ ವಿಚಾರವಾಗಿ ಎಲ್ಲ ಹೇಳಿದ. ನಾಳೆ ಆಫೀಸಿನಲ್ಲಿ ಅಡ್ರೆಸ್ ತಿಳಿದುಕೊಂಡು ಅವರ ಮನೆಯವರಿಗೆ ತಿಳಿಸಿ. ಆಕೆಗೆ ಸ್ಮೃಹೆ ಬಂದರೆ ನಾನೂ ಕೇಳ್ತ, ಅವರ ಮನೆಯಲ್ಲಿ phone ಇದ್ದರೆ ಫೋನ್ ಮಾಡುತ್ತೇನೆ. ನೀವೇನೂ ಹೆದರಬೇಡಿ. just simple ಎಲ್ಲ ಸರಿಹೋಗುತ್ತೆ. ತುಂಬಾ ವೀಕ್ ಆಗಿ ಇರೋದ್ರಿಂದ ಹಾಗಾಗಿದೆ ಅಷ್ಟೇ ಅಂತ ಧೈರ್ಯ ಹೇಳಿದ. ಆಮೇಲೆ ಮಾಲತಿಯನ್ನು ಇನ್ನೊಮ್ಮೆ ನೋಡಿ ಮನೆಗೆ ಮರಳಿದ.

* * *

ಸಂದೀಪನ ಮೌನವನ್ನು ಎಷ್ಟು ಹೊತ್ತು ಹಾಗೆ ಇಟ್ಟಿರಬೇಕೋ ತಿಳಿಯಲಿಲ್ಲ. ಒಂದು ಕಡೆ ಸಂದೀಪನ ಸಾಹಸ [illegible]. ಮಾಲತಿ ಕಾಣದೆ ಹೋದದ್ದು [illegible] ಸಮಸ್ಯೆಯಾಗಿತ್ತು. ಒಟ್ಟಾರೆ ಒಂದೊಂದು ಕಡೆ [illegible] ಪರಿಹಾರವಾಗಲಿಲ್ಲ.

ಬೆಳಗಾಗುವುದೇ ಆಫೀಸಿಗೆ ಫೋನ್ ಮಾಡಿದಾಗ ಆಶಾದಾಯಕ ಉತ್ತರವೇನೂ ಸಿಗಲಿಲ್ಲ. ಬಾಸ್ ಇನ್ನೂ ಬಂದಿರಲಿಲ್ಲ. ಮಾಲತಿಯ ವಿಚಾರವಾಗಿ ಆಫೀಸಿನಲ್ಲಿ ಗುಲ್ಲೊ ಗುಲ್ಲು. ಪರವಾಗಿ ಕೆಲವರು ಮಾತನಾಡಿದರೆ ಇಲ್ಲ ಸಲ್ಲದ ಊಹಾಪೋಹಗಳಿಂದ ಕತೆ ಕಟ್ಟಿ ಅವಳ ನಡತೆಯ ಬಗ್ಗೆ ಕ್ಷುಲ್ಲಕವಾಗಿ ಮಾತನಾಡುತ್ತಾ ನಾಲಗೆಯ ತೀಟೆ ತೀರಿಸಿಕೊಂಡರು.

ಗೋಪಿ ಬೆಳಿಗ್ಗೆ ನರ್ಸಿಂಗ್ ಹೋಂಗೆ ಹೋಗಿದ್ದ. ಮಾಲತಿಗೆ ಗೋಪಿಯನ್ನು ನೋಡುತ್ತಿದ್ದ ಹಾಗೆ ಅಳು ಉಕ್ಕಿ ಬಂತು. ಎಷ್ಟು ಅಸಹ್ಯವಾಗಿ ನಡೆದುಕೊಂಡೆ! ಆ ಗೋಪಿ ನನ್ನ ವಿಚಾರದಲ್ಲಿ ಹೇಗೆ ಭಾವಿಸಿರಬೇಕು. ತಾನು ಸಂದೀಪ್‌ನಿಗೆ ಕಾದಿದ್ದು, ಹೊಟ್ಟೆ ಬೇನೆ ಶುರುವಾದುದ್ದರ ನೆನಪು ಮಾತ್ರವೇ ಇತ್ತು. 'ಇಲ್ಲಿಗೆ ಹೇಗೆ ಬಂದೆ' ಎಂದು ಕೇಳಬೇಕೆನಿಸಿದರೂ ಕೇಳುವ ಮನಸ್ಸಾಗಲಿಲ್ಲ. ಮನೆಯವರ ಗಾಬರಿ ನೆನಪಿಗೆ ಬಂದು ಗಡಗಡನೆ ನಡುಗಿದಳು. 'Mr. ಗೋಪಿ, ಡಾಕ್ಟರ್‌ನ ಕೇಳಿ ನನ್ನನ್ನು ಮನೆಗೆ ತಲುಪಿಸಿ. ನಾನು ಸಂದೀಪನನ್ನು ನೋಡಲೇಬೇಕು. ಯಾಕೋ ನನ್ನ ಮನಸ್ಸಿಗೆ ತುಂಬಾ ಭೀತಿಯಾಗ್ತಿದೆ' ಎಂದು ಅಂಗಲಾಚಿದಳು. ಗೋಪಿ ಅವಳ ಮುಖ ನೋಡಿದ. ಮುದುಡಿದ್ದ ಗುಲಾಬಿಯಷ್ಟೇ ಬಾಡಿದ ಮುಖ. ಹೊರಳಾಡಿ ಅಸ್ತವ್ಯಸ್ತವಾದ ಕೂದಲು. ಬಿಳಿಯ ಮುಖದ ಮೇಲೆ ಬಿದ್ದುದರಿಂದ ಮುಖ ಅಸ್ಪಷ್ಟ ಚಂದ್ರನ ಹಾಗಿತ್ತು. ನೋಡಿದರೆ ತುಂಬಾ ವೀಕಾಗಿದ್ದ ಅವಳನ್ನು ಹೇಗೆ ಕರೆದುಕೊಂಡು ಹೋಗುವುದು? ಯೋಚಿಸಿದ ಗೋಪಿ. ಆದರೆ ಮನೆಯವರ ಕಳವಳದ ಗಂಭೀರತೆ ಮನಸ್ಸಿಗೆ ಬಂದ ಕೂಡಲೇ ಹೇಗಾದರೂ ಸುರಕ್ಷಿತವಾಗಿ ಮನೆ ತಲುಪಿಸಿದರೆ ತನ್ನ ಜವಾಬ್ದಾರಿ ತೀರುತ್ತದೆಂದು ಭಾವಿಸಿ, ಡಾಕ್ಟರ ಬಳಿಗೆ ಬಂದು ಮಾಲತಿಯನ್ನು ಕಳುಹಿಸಿಕೊಡಲು ಕೇಳಿ ಅವಳ ವಿಷಯವನ್ನು ಪೂರ್ತಿಯಾಗಿ ತಿಳಿಸಿದ.

ಡಾಕ್ಟರೂ ಒಪ್ಪಿದರು. ಗೋಪಿ ಬಿಲ್ ಹಣವನ್ನು ಕೊಟ್ಟು ಮಾಲತಿಗೆ ವಿಷಯ ತಿಳಿಸಲು ನಡೆದ. "ತುಂಬಾ ಥ್ಯಾಂಕ್ಸ್ ಗೋಪಿ. ನಿಮ್ಮ ಉಪಕಾರಾನ ಎಂದೂ ಮರೆಯೋಲ್ಲ. ನನಗೆ ಆಟೋ ತರಿಸಿಕೊಡಿ ನಾನೇ ಹೋಗ್ತೇನೆ. ಈಗ ಅಷ್ಟೇನೂ ನನಗೆ ವೀಕ್‌ನೆಸ್ ಇಲ್ಲ" ಎಂದು ಮೆಲ್ಲನೆ ನಕ್ಕಳು. ಈ ನಗುವಿನ ಅರ್ಥ ಆಗ ಏನೆಂದು ಯಾರಿಗೂ ಊಹಿಸಿಕೊಳ್ಳಲಾಗುವುದಿಲ್ಲ. ಸಂದೀಪನೊಂದಿಗೆ ಸೇಡು ತೀರಿಸಿಕೊಳ್ಳುವುದಕ್ಕೆ ಪೂರ್ವಭಾವಿ ಸಿದ್ದತೆಯೋ ಅಥವಾ ಬದುಕಿನಲ್ಲಿ ನಗುವುದೇ ಕೊನೆ ಎಂದು ಅರ್ಥವೋ ತಿಳಿಯಲಿಲ್ಲ.

ಆಟೋ ಬಂದು ನಿಂತಿತು. ಡಾಕ್ಟರಿಗೆ ಗೋಪಿಗೆ ಥ್ಯಾಂಕ್ಸ್ ಹೇಳಿ ಆಟೋ ಹತ್ತಿದಳು. ಗೋಪಿ ತಾನು ಬಂದು ಬಿಡುತ್ತೇನೆಂದು ಎಷ್ಟು ಹೇಳಿದರೂ ಕೇಳಲಿಲ್ಲ. ಆಫೀಸಿಗೆ ತಾನು ಬರುವುದಿಲ್ಲವೆಂಬುದನ್ನು ತಿಳಿಸುವುದಕ್ಕೆ ಹೇಳಿ, ದಿಗ್ವಿಜಯವನ್ನು

ಸಾಧಿಸಿದಷ್ಟು ಹೆಮ್ಮೆಯಿಂದ ಜೀಗಿ ಕುಳಿತು ಗೋಪಿಗೆ ಕೈ ಬೀಸಿ ಡ್ರೈವರ್‌ಗೆ "ಕಮಲಾ ಪಾರ್ಕ್ ರೋಡ್" ಎಂದಳು.

* * *

ಒಂದು ತಿಂಗಳು ರಜೆ ಮುಗಿಯಿತು. ಅವಳ ಮುಂದೆ ಒಂದು ಪ್ರಪಾತವೇ ಬಾಯಿ ತೆರೆದ ಹಾಗಿತ್ತು. ಸಂದೀಪನ ನೆನಪು ಕರಗುವುದು ಇಷ್ಟು ಬೇಗ ಸಾಧ್ಯವೂ ಇರಲಿಲ್ಲ. ತನ್ನ ಉತ್ಸಾಹ, ಖುಷಿ ಎಲ್ಲಕ್ಕೂ ಪೂರ್ಣವಿರಾಮ. ಯಾಂತ್ರಿಕವಾಗಿ ಆಫೀಸಿನ ಕೆಲಸ ನಿರ್ವಹಿಸುತ್ತಿದ್ದಳು. ಸ್ಟಾಯಿಕ್ ಆಗಿ ಇರಬೇಕೆಂದು ಎಷ್ಟು ಪ್ರಯತ್ನಿಸಿದರೂ ಇನ್ನೂ ಹಸಿಯಾಗಿದ್ದ ನೆನಪುಗಳು ಮನಸ್ಸನ್ನು ಸಡಿಲಿಸುತ್ತಿತ್ತು. ಮೊದಲೇ ಸ್ಟ್ರಿಕ್ಟ್ ಆಗಿ ಇರುತ್ತಿದ್ದ ಮಾಲತಿ ಈಗ ಮತ್ತಷ್ಟು ಬಿಗಿಯಾದಳು. ಬಾಸ್ ಜೊತೆಗೆ ಕ್ಯಾಂಪುಗಳ ಮೇಲೂ ಹೋದಳು. ಮಾಲತಿಗೆ ಈ ಬಾಸ್‌ನ ಕಂಡರೆ ತುಂಬಾ ಗೌರವ. ಹರೆಯದಲ್ಲಿರುವ ತಾನು ಹೇಗೆ ಬಾಸ್ ಜೊತೆ ಹೋಗುವುದೆಂದು ಮೊದಮೊದಲು ಯೋಚಿಸಿದರೂ ಬಾಸ್‌ನೊಂದಿಗೆ ಪರಿಚಯ ಹೆಚ್ಚಾದ ಮೇಲೆ ನಿರ್ಭಯವಾಗಿ ಕ್ಯಾಂಪ್ಸ್‌ಗೆ ಹೋಗುತ್ತಿದ್ದಳು. ಬಾಸ್ ಅವಿವಾಹಿತ. ಹೆಣ್ಣಿನ ಬಗ್ಗೆ ಬಾಸ್‌ನ ವಿಚಾರಗಳು ಉದಾತ್ತವಾಗಿದ್ದವು. ಹೆಣ್ಣು ಕೇವಲ ಗಂಡಸಿನ ಅಲಂಕಾರ ವಸ್ತುವಾಗಲೀ ಅಥವಾ ಸೆಕ್ಸ್‌ಟಾಯ್ ಆಗಲಿ ಅಲ್ಲ. ಗಂಡಸಿನಷ್ಟೇ ಗೌರವ ಮಾನ್ಯತೆಗಳಿಗೆ ಪಾಲುದಾರಳಾಗಿರುವುದಲ್ಲದೆ ಸ್ವತಂತ್ರ ವಿಚಾರ ಶಕ್ತಿ, ವಿವೇಕ, ಹೃದಯಗಳಿರುವ ಮನುಷ್ಯಳು. ಮದುವೆ ಅದಕ್ಕೇ ಅವನಿಗೆ ತ್ಯಾಜ್ಯ ವಿಷಯವಾಗಿತ್ತು. ಎಷ್ಟು ಓದಿದ್ದರೂ ಎಷ್ಟು ಪ್ರಗತಿಪರಳಾಗಿದ್ದರೂ ಹೆಣ್ಣು ಒಂದಲ್ಲ ಒಂದು ರೀತಿಯಲ್ಲಿ ಮದುವೆಯಿಂದ ಗುಲಾಮಳಾಗುತ್ತಾಳೆಂದು ಭಾವಿಸಿದ್ದ. ಹೆಣ್ಣು ಭೋಗದ ವಸ್ತುವಾಗಿರುವುದಕ್ಕಿಂತ ಹೆಚ್ಚಾಗಿ ಸೃಷ್ಟಿಯ ಅದ್ಭುತ ಕಲಾಕೃತಿ ಅನ್ನೋ ಭಾವನೆಯಿತ್ತು. ಒಂದೊಂದು ಸಲ ಬಾಸ್ ಮಾತಾಡುತ್ತಿದ್ದರೆ ಮಾಲತಿಗೆ ಚಪ್ಪಾಳೆ ಹೊಡೆದು ಕುಣಿದು ಕುಪ್ಪಳಿಸಬೇಕು ಎನಿಸುತ್ತಿತ್ತು; ಅಷ್ಟು ಮೃದು. ಒಂದೊಂದು ಅಕ್ಷರ ಒಂದೊಂದು ರಸಬಿಂದುವಾಗಿರುತ್ತಿತ್ತು. "ಇವರ‍್ಯಾಕೆ ಈ ಶುಷ್ಕವಾದ ಆಫೀಸರ್ ಬದುಕಿಗೆ ಜೋತು ಬಿದ್ದಿದ್ದಾರೆ? ಪಂಡಿತರಾಗಿಯೂ ಒಬ್ಬ ರಸಿಕ ಕವಿಯಾಗಿರುವುದಕ್ಕೆ ಲಾಯಕ್ಕಾಗಿದ್ದಾರಲ್ಲ!" ಎಂದು ಯೋಚಿಸುತ್ತಿದ್ದಳು. ಮಾಲತಿ ಬಾಸ್ ತುಂಬಾ ಚೆನ್ನಾಗಿ ಹೊಂದಿಕೆಯಾಗಿದ್ದರೆ, ಬೇರೆ ಯಾರಿಗೂ ಸರಿಹೋಗುತ್ತಿರಲಿಲ್ಲ. ಕೆಲಸದ ವಿಷಯದಲ್ಲಿ ತಾತ್ಸಾರದಿಂದ ಇರೋದಕ್ಕೆ ಈಗ ಯಾರಿಗೂ ಸಾಧ್ಯವಿರಲಿಲ್ಲ. ರೇಖಾಗಂತೂ ಒಳಗೊಳಗೇ ಉರಿ. ಪತಂಗದ ಹಾಗೆ ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ಓಡಾಡುತ್ತಾ ಎಲ್ಲ ಬಾಸ್‌ಗಳನ್ನೂ ಬೆರಳಲ್ಲಿ ಕುಣಿಸುತ್ತಿದ್ದ. ಅವಳಿಗೆ ಈ ಬಾಸ್ ಬಂದದ್ದೇ ಬಾಲ ಕತ್ತರಿಸಿಕೊಂಡಂತಾಗಿತ್ತು. ಬಾಸ್ ಮಾಲತಿ– ಮಾಲತಿ ಗೋಪಿ– ಮಾಲತಿ ಗೋಪಿ. ಗೋ... ಗುತಾ... ಹೀಗೆ

ಜೊತೆ ಕಟ್ಟಿ ತೀರಾ vulgar ಆಗಿ ಕತೆಗಳನ್ನು ಹಬ್ಬಿದರು. ಹೇಗಾದರೂ ಮಾಡಿ ಈ ಬಾಸ್‌ನ ವರ್ಗಾಯಿಸಬೇಕು. ಸಂಚಿಗೆ ಸಂಘ ಕಟ್ಟಿದರು. ಮಂತ್ರಿಗಳ ಪರಿಚಯದವರು ಮಂತ್ರಿಗಳ ಮೂಲಕ ಸನ್ನಾಹ ನಡೆಸಿದರು. 'ಮಂತ್ರಿ' ಅನ್ನೋ 'ದ್ವಕ್ಷ್ಯರ' ಬೀಜ ಮಂತ್ರಕ್ಕೆ ಶರಣು ಹೋದರೆ ಕೆಲಸ ಆಗದಿರುವುದು ಊಹೆಗೆ ಮೀರಿದ್ದು! ಅಂತೂ ಇಂತೂ ಅಂದುಕೊಂಡಂತೆ ಹೊಸಬ ಬಂದ.

ವರ್ಷಗಳು ಉರುಳಿದವು. ಹೊಸ ಬಾಸ್ ಬಂದಿದ್ದಾನೆ. ಹುಡುಗು ಬುದ್ಧಿ. ಹೇಳಿದವರ ಮಾತೆಲ್ಲ ಕೇಳೋದು. ಚಾರ್ಜ್ ತೆಗೆದುಕೊಳ್ಳೋ ಮುಂಚೇನೆ ಎಲ್ಲರ ಜಾತಕಗಳ ಪರಿಚಯ ಮಾಡಿಸಿದ್ದಾರೆ. ಹೀಗೆ ಒಬ್ಬೊಬ್ಬರ ವಿಷಯದಲ್ಲೂ ಒಂದೊಂದು ಮನೋಭಾವ ಏರ್ಪಡಿಸಿಕೊಂಡಿದ್ದಾನೆ. ಪಿಂಟೋ, ಪೀಟರ್, ಆರ್ಮುಗಂ, ಕಮಲಾ, ರೆಹಾನಾ ಇವರಿಗೆಲ್ಲಾ ಸುಗ್ಗಿ. ಆಫೀಸಿಗೆ ಎಷ್ಟು ಹೊತ್ತಿಗಾದರೂ ಬರಬಹುದು. ಒಂದು ಸಹಿ ಹಾಕಿ ಕಾಫಿಗೆ ಹೋದರೆ ಎರಡು ಮೂರು ಗಂಟೆ ಬಿಟ್ಟು ಬರೋದು. ಪೀಟರ್ ಅಂತೂ ಬಾಸ್‌ನನ್ನು ಜೇಬಿನಲ್ಲಿ ಇಟ್ಟುಕೊಂಡಿದ್ದಾನೆ. ಬಾಸ್‌ನ ವಿಲಾಸಿ ಮನಸ್ಸಿಗೆ ರೆಹಾನಾ ತುಂಬ ಹಿಡಿಸಿದಳು. "She is very free, I love her very much" ಅಂತ ಪಬ್ಲಿಕ್ಕಾಗೆ ಸ್ತುತಿ ಮಾಡ್ತಿರ್‍ತಾನೆ.

ಇಂಥಾ ಬಾಸ್‌ಗೆ ತಾನು ಸ್ಟೆನೋ ಆಗಿ ಸೆಕ್ರೆಟರಿಯಾಗಿ ಕೆಲಸ ಮಾಡುವುದು ಕುತ್ತಿಗೆಗೆ ಬಂದ ಹಾಗಿದೆ. ಗಂಡಸಿನ ರಕ್ಷಣೆಯಿಲ್ಲದೆ ಪ್ರಪಂಚದಲ್ಲಿ ಅದೂ ಈ ರೀತಿಯ ವಿಷಜಂತುಗಳ ನಡುವೆ ಬಂದುದು ತೀರಾ ಪ್ರಯಾಸವೆಂಬ ಭಾವನೆ ಬಂದಾಗ ಸಂದೀಪನ ನೆನಪು ಮತ್ತೆ ಮತ್ತೆ ತಿವಿಯುತ್ತಿದೆ. 'ಸಂದೀಪ ಯಾಕೆ ಸಾಯಬೇಕಿತ್ತು' ಎಂದು ಯೋಚಿಸುತ್ತಾಳೆ. ಸಾವು ಬದುಕು ನಮ್ಮ ಕೈಯಲ್ಲಿ ಇಲ್ಲವೆಂದು ತಿಳಿದಿದ್ದರೂ ವೃಥಾ ಸಂದೀಪನ ವಿಚಾರವಾಗಿ ಸಿಡಿಮಿಡಿಗೊಳ್ಳುತ್ತದೆ ಮನಸ್ಸು. ಸಂದೀಪ ತಾನೇ ಸ್ವ ಇಚ್ಛೆಯಿಂದ ಸತ್ತ ಹಾಗೆ, ಸಾವಿನ ಆಪಾದನೆಯನ್ನು ಅವನ ಮೇಲೇ ಹಾಕುತ್ತಾಳೆ. ಒಂಟಿಯಾಗಿದ್ದಾಗ ಇಳಿದ ಬಸಿರಿನತ್ತ ದೃಷ್ಟಿ ಹರಿಸಿ, 'ಒಳ್ಳೇದೇ ಆಯಿತು. ಇದೊಂದು ಅವನ ಸ್ಮೃತಿಯಾಗಿ ಉಳಿದಿದ್ದರೆ, ಮರೆಯಬೇಕೆಂದರೂ, ಮರೆಯಲಾಗುತ್ತಿರಲಿಲ್ಲ' ಎಂದು ಗೊಣಗಿಕೊಂಡರೂ. ಪುಟಿ ಪುಟಿದು ಕೆನೆಯುತ್ತಾ ಬರುತ್ತಿರುವ ಮಗುವಿನ ಚಿತ್ರ ಕಣ್ಮುಂದೆ ಸುಳಿದಾಗ ಹೃದಯದ ಮೂಲೆಯಲ್ಲೆಲ್ಲೋ ಸಣ್ಣಗೆ ನೋವಾಗಿ ಕಣ್ಣು ಹನಿಯುತ್ತದೆ.

ಬಾಸ್‌ನ ಹಾವಳಿ ತುಂಬಾ ಹೆಚ್ಚಾಗುತ್ತಿತ್ತು. ವಿನಾ ಕಾರಣ ಸಿಡಿಮಿಡಿಗೊಳ್ಳುವುದು, ಡಿಕ್ಟೇಷನ್‌ನಲ್ಲಿ ತಪ್ಪುಗಳಿಲ್ಲದಿದ್ದರೂ ತಪ್ಪಿದೆ ಅಂತಾ ಕಿರುಚಾಡುವುದು, ಆಫೀಸ್ ಟೈಂಗೆ ಕರೆಕ್ಟಾಗಿ ಬರುತ್ತಿಲ್ಲಾಂತ ದೂರುವುದು– ಇದು ವಹಿವಾಟು ಕಾರ್ಯಕ್ರಮವಾಯಿತು. ಅದೂ ಮೊನ್ನೆ ನಡೆದ ಘಟನೆಯಿಂದ ಮತ್ತಷ್ಟು ಹೆಚ್ಚಾಯಿತು.

ಬಾಸ್ ಕ್ಯಾಂಪ್ ಕೆಲಸದ ಮೇಲೆ ಬರಬೇಕಂತ ಮಾಲತಿಗೆ ತಿಳಿಸಿದ ಸುದ್ದಿ ಕೇಳಿದಾಗಿನಿಂದ ವಿಪರೀತ ಭಯಕ್ಕಿಟ್ಟುಕೊಂಡಿತು. ತನಗೆ ಮೈ ಹುಷಾರಿಲ್ಲವಾದ್ದರಿಂದ ಬರಲಿಕ್ಕೆ ಆಗುವುದಿಲ್ಲವೆಂದು ಹೇಳಿದಳು. ಮೊದಲೇ ಬಾಸ್ ಹಠವಾದಿ. ಹೇಗಾದರೂ ಸರಿ ಬರಲೇಬೇಕು. ಇಲ್ಲ ಅವಳನ್ನು ಡಿಸ್‌ಮಿಸ್ ಮಾಡುತ್ತೇನೆಂದ ಬೆದರಿಸಿದ. ಯಾವುದಕ್ಕೂ ಬಗ್ಗದ ಮಾಲತಿ 'ಡಿಸ್‌ಮಿಸ್' ಅನ್ನೋ ಶಬ್ದ ಕೇಳಿದ್ದೇ ಸೋತಳು. ಅಮ್ಮ ಅಪ್ಪ ಇಲ್ಲದ ಮಾಲತಿಗೆ ಮುದಿ ಅತ್ತೆ ಮಾವ ಇದ್ದರು. ಮಾವ ರಿಟೈರ್ಡ್ ಆಗಿದ್ದ. ಆ ಎರಡು ಮುದಿ ಜೀವಿಗಳಿಗೆ ಆಧಾರ ಮಾಲತೀನೇ. ಹೀಗಿರುವಾಗ ಕೆಲಸ ಹೋದರೆ ಬದುಕಿಗೆ ಮಾರ್ಗ? ಚಿಂತೆಗಿಟ್ಟುಕೊಂಡಿತು.

ಶನಿವಾರ ಮಧ್ಯಾಹ್ನ ಆಫೀಸ್ ಮುಗಿದ ಮೇಲೆ ಮಾಲತಿ ಗೋಪಿಯನ್ನು ಕಂಡು ವಿಷಯ ಹೇಳಿದಳು. ಗೋಪಿಗೂ ಈ ಬಾಸ್‌ನ ವಿಚಾರವಾಗಿ ಒಳ್ಳೇ ಅಭಿಪ್ರಾಯವೇ ಉಳಿದಿರಲಿಲ್ಲ. ಬಾಸ್ ಬಳಿ ಹೋಗಿ ಮಾಲತಿ ವಿಷಯವಾಗಿ ಮಾತನಾಡುವುದು ಮತ್ತೂ ಅಪಾಯ. ಈ ವಿಷಯದಲ್ಲಿ ಏನು ಹೇಳಲೂ ಆಗದೆ ತನ್ನ ಅಸಹಾಯಕತೆಯನ್ನು ವ್ಯಕ್ತಪಡಿಸಿದ. ಈ ಒಂದು ಸಲ ಮಾಲತಿ risk ತೆಗೆದುಕೊಳ್ಳದೆ ತಪ್ಪಿದಲ್ಲ' ಎಂದೆನಿಸಿ ಧೈರ್ಯವಾಗಿ ಹೋಗಿ ಬಾ. ಮುಂದೆ ಏನಾದರೂ ಆದರೆ, ಅವನೇನಾದರೂ ವಿಪರೀತವಾಗಿ ನಡೆದುಕೊಂಡರೆ, ಏನ್ಮಾಡಬೇಕು ಆಲೋಚಿಸೋಣ' ಅಂದ.

ಮಂಗಳವಾರ ಮಾಮೂಲಿನಂತೆ ಆಫೀಸಿಗೆ ಬಂದಳು. ತನ್ನ ಸೀಟಲ್ಲಿ ಕುಳಿತು ಹಳೆಯ ಡಿಕ್ಟೇಷನ್‌ನ ಟೈಪ್ ಮಾಡತೊಡಗಿದಳು. ಸ್ತಬ್ಧ ಮೌನ. ಆ ನಿಸ್ತಬ್ಧತೆ ಹಿತವಾಗಿರಲಿಲ್ಲ. ಗುಡುಗು ಸಿಡಿಲು ಮಳೆಗೆ ಮೊದಲಿನ ಪ್ರಶಾಂತತೆಯಂತಿತ್ತು. ಬರುವ ಭಯಂಕರ ಘಟನೆಗೆ ನಾಂದಿಯಂತಿತ್ತು. ಈ ನಿಶ್ಶಬ್ಧತೆಯನ್ನು ಟೈಪ್‌ರೈಟರ್ ಕೀಗಳ ಟಕ್ ಟಕ್ ಟಕ್ ಶಬ್ದವೊಂದೇ ಕೆಡಿಸುತ್ತಿದ್ದುದು. ಸೆಕ್ಷನ್‌ನಲ್ಲಿ ಯಾರೂ ಮಾತಾಡಿಸಲಿಲ್ಲ. ಆದರೆ ಮಾಲತಿ ಬಂದದ್ದು ಎಲ್ಲರ ಗಮನವನ್ನೂ ಸೆಳೆಯಿತು. ಒಬ್ಬೊಬ್ಬರೂ ಪರಸ್ಪರ ಅರ್ಥಗರ್ಭಿತವಾಗಿ ನೋಡಿಕೊಂಡರು.

"ಇವರೆಲ್ಲ ಯಾಕಿರಬಹುದು ಹೀಗೆ? ಅವರಿಗೇನಾದರೂ ವಿಷಯ ತಿಳಿಯಿತಾ?" ಎಂದು ಯೋಚಿಸುತ್ತಿರುವಷ್ಟರಲ್ಲಿ ಕಿಸಕಿಸ ನಗು ಕಪಳಿಸಿತು. ತಲೆಯೆತ್ತಿದಳು. ರೆಹನಾ [illegible] ನಗುತ್ತಿದ್ದಾಳೆ. ಸಿಟ್ಟು ನೆತ್ತಿಗೇರಿತು. ಕೆನ್ನೆಗೆ ಥಳಿಸೋಣವೆನಿಸಿತು. ಉದ್ವಿಗ್ನಳಾಗಿ ಗುಡುಗಿದಳು. 'Stop that hateful laugh' ಎಂದು. ಎಲ್ಲರೂ ಬೆಪ್ಪಾಗಿ ಇವಳತ್ತ ನೋಡಿದರು. [illegible] ಅವರ ಪರವಾಗಿ "ನೀವು ಬಿಡಿ ಮೇಡಂ. ಅವರ ಪಾಡಿಗೆ ಅವರು ನಕ್ಕರೆ ನಿಮಗೇನಾಯಿತು! ನೀವು ಸೆಕ್ಷನ್ ಹೆಡ್ ಇರಬಹುದು. ಆದರೆ ನಮ್ಮ ಭಾವನೆಗಳಿಗೆ ನೀವು ಹೆಡ್ ಅಲ್ಲ. ನಮ್ಮ ವ್ಯಕ್ತಿತ್ವಕ್ಕೆ ನೀವು com-

mand ಮಾಡಬೇಡಿ" ಎಂದು ವಾದಿಸಿದ. 'ಆ ಪಾಠಾನ ನೀವು ನನಗೆ ಹೇಳಿಕೊಡಬೇಕಿಲ್ಲ. ಆಫೀಸಿನಲ್ಲಿ ನಿಮಗೆ ಇಷ್ಟ ಬಂದ ಹಾಗೆ ನಡೆದುಕೊಳ್ಳೋಕೆ ಇದು ಮನೆಯಲ್ಲ. ಆಫೀಸ್ ತಿಳೀತಾ? ಇಲ್ಲಿ ಬೇಕಾಗಿರೋದು ಶಿಸ್ತು, ಸಂಯಮ ಮರ್ಯಾದೆ, ವ್ಯವಹಾರ ಅರ್ಥವಾಯಿತಾ! ನಿಮ್ಮ ನಿಮ್ಮ ಕೆಲಸ ನೀವು ನೋಡ್ಕೊಳ್ಳಿ" ಎಚ್ಚರಿಸುವ ಧ್ವನಿಯಾಗಿತ್ತು. ರೆಹನಾಗೆ ಇವಳ ಸಿಟ್ಟು ಕಚಕುಳಿಯಿಟ್ಟ ಹಾಗಿತ್ತು. ಇಲ್ಲರೂ ಒಟ್ಟಾಗಿ ಇವಳನ್ನು attack ಮಾಡೋಕೆ ಮೊದಲೇ ತಯಾರಿ ಮಾಡಿಕೊಂಡಂತಿತ್ತು. ಎಲ್ಲ ಒಟ್ಟಿಗೆ ತಿರುಗಿ ಬಿದ್ದರು. "ನಮಗ್ಗೊತ್ತು ನಿಮ್ಮ ಶಿಸ್ತು ಮರ್ಯಾದೆ. ಮೊದಲಿದ್ದ ಬಾಸ್ ನೀವು ಹೇಳಿದ ಹಾಗೆ ಕುಣೀತಿದ್ದ. ನೀವೂ ಅದಕ್ಕೇ ತುಂಬಾ ಹೆಚ್ಚಿದ್ದಿರಿ. ಈ ಬಾಸ್‌ಗೆ ನಿಮ್ಮ ವಿಷಯ ಎಲ್ಲ ಗೊತ್ತಿದೆ. ನಮಗೂ ನಿಮ್ಮ ವಿಚಾರ ಎಲ್ಲಾ ಗೊತ್ತಿದೆ. ಅವತ್ತು ರಾತ್ರಿ ಗೋಪಿ ಜೊತೆ ತಿರುಗಾಡಿ ಆಸ್ಪತ್ರೆಗೆ ಹೋಗಿದ್ದು, ಗಂಡನನ್ನು ವಿಷಕೊಟ್ಟು ಕೊಂದು ಏನೂ ತಿಳೀದಂತೆ ಬಾಸ್‌ನ ಬುಟ್ಟೀಗೆ ಹಾಕ್ಕೊಂಡಿದ್ದು, ಸಾಲದ್ದಕ್ಕೆ ಈಗ ಈ ಬಾಸ್‌ನೂ ಹಾಗೇ ಕೈಯಲ್ಲಿ ಇಟ್ಕೋಳ್ಳೋಕೆ ಮೊನ್ನೆ ಕ್ಯಾಂಪಿಗೆ ಹೋದಾಗ ಪ್ರಯತ್ನಿಸಿದ್ದು, ಎಲ್ಲಾ ಗೊತ್ತಿದೆ. ಸುಮ್ನೆ ನಮಗೆ ಬುದ್ಧಿ ಹೇಳೋಕೆ ಬರಬೇಡಿ.

ಏನನ್ನಾದರೂ ಸಹಿಸಬಹುದು. ಆದರೆ ಇವರು ತನ್ನ ಶೀಲದ ಬಗ್ಗೆ ಕೀಟಲೆ ಮಾಡುತ್ತಿದ್ದಾರೆ. ಮನಸ್ಸು ಕುದಿಯತೊಡಗಿತು. ಹಲ್ಲು ಕಟಕಟ ಕಡಿದಳು. "ಓಹ್ ಇದನ್ನು ಸಹಿಸೋದು ಹೇಗೆ ದೇವರೇ" ಎಂದು ದೈನ್ಯವಾಗಿ ಮೊರೆಯಿಟ್ಟಳು. ಜ್ವಾಲಾಮುಖಿ ಮನಸ್ಸು ಸ್ಫೋಟಕ್ಕೆ ಸಿದ್ಧವಾಯಿತು. ಒಬ್ಬೊಬ್ಬರ ತಲೆಯನ್ನು ಬಂಡೆಗಪ್ಪಳಿಸಬೇಕೆನಿಸಿತು. ಬುರುಡೆಗಳೊಳಗಿಂದ ಗುಂಡು ಹಾರಿಸಬೇಕೆನಿಸಿತು. ಇವರ ನಾಲಿಗೆಗಳನ್ನು ಕಿತ್ತು ಉರಿಯುವ ಚಿತೆಗೆ ಎಸೆಯಬೇಕೆನಿಸಿತು. ದೇಹದ ಒಂದೊಂದು ಭಾಗವನ್ನೇ ಮುರಿ ಮುರಿದು ಮೆಣಸಿನ ಖಾರ ಹಚ್ಚಬೇಕೆನಿಸಿತು. ಆದರೆ... ಆದರೆ... ತನ್ನ ಅಧಿಕಾರ ಸೀಮಿತ. ಮೊದಲಿನ ಬಾಸ್ ಇದ್ದಿದ್ದರೆ ಇವರಿಗೆ ಬುದ್ಧಿ ಕಲಿಸಬಹುದಾಗಿತ್ತು. ಈ ಹೊಸ ಬಾಸ್ ಇದ್ದರೂ ಅಷ್ಟೇ ಇಲ್ಲದಿದ್ದರೂ ಅಷ್ಟೇ. ಮೊನ್ನಿನ ಘಟನೆಯಿಂದ ಮತ್ತಷ್ಟು ಮನಸ್ಸು ರೋಸಿ ಹೋಗಿತ್ತು. ಆರ್ಥಿಕ ಮುಗ್ಗಟ್ಟು ಇಲ್ಲದಿದ್ದರೆ ಎಂದೋ ರಾಜೀನಾಮೆ ಕೊಟ್ಟು ಹೊರಟು ಹೋಗುತ್ತಿದ್ದಳು. ಈಗ ಇವರ ಮೇಲೆ ಹಾರಾಡಿದರೆ ಪ್ರಯೋಜನವಿಲ್ಲ. ನನ್ನ ಕೋಪ, ಅಸಹಾಯಕತೆ ಇವರಿಗೆ ಮೋಜಾಗಿದೆ. ನಾನು ನೊಂದಷ್ಟೂ ಈ ಈಡಿಯಟ್ಸ್‌ಗೆ ಖುಷಿಯಾಗುತ್ತೆ. ಏನೂ ಮಾಡಲಾಗದೆ ಹಲ್ಲು ಕಿತ್ತ ಹಾವಿನಂತೆ ಬುಸ್ ಎಂದು ಹೆಡೆ ಬಿಚ್ಚಿದಷ್ಟೇ ಸಪ್ಪಗೆ ಕುಸಿದಳು. ಇನ್ನು ಆ ಸೀಟಲ್ಲಿ ಕುಳಿತುಕೊಳ್ಳುವುದಕ್ಕೇ ಸಾಧ್ಯವಾಗಲಿಲ್ಲ. ಮುಳ್ಳಿನ ಮೇಲೆ ಕುಳಿತಷ್ಟೇ ಹಿಂಸೆಯಾಗಿತ್ತು. ಈಗೊಂದು ವೇಳೆ ರಾಜೀನಾಮೆ ಕೊಡಲೇಬೇಕಾದ ಸಂದರ್ಭ ಬಂದರೆ...? ಭಯಂಕರ... ಒಂಟಿಯಾಗಿ ಸಹರಾದೊಳಗೆ ಅಲೆಯುತ್ತಿದ್ದಾಳೆ. ಬಿರುಗಾಳಿ... ಅವಳನ್ನು ಹಾರಿಸಿಕೊಂಡು ಹೋಗುವಷ್ಟು ಜೋರಾಗಿದೆ.

ಬೀಸುವ ಗಾಳಿಯಲ್ಲಿ ಅಸಹ್ಯ ಕರ್ಕಶ ಶಬ್ದಗಳು ಕೇಳಿ ಬರುತ್ತಿವೆ. ಜೋರಾಗಿ ಒಮ್ಮೆ ಗಾಳಿ ಬೀಸಿತು. ಮಾಲತಿ ತರಗೆಲೆಯಂತೆ ಆ ಗಾಳಿಯಲ್ಲಿ ತೇಲುತ್ತಾ ಹೋಗುತ್ತಿದ್ದಾಳೆ. ಕೆಳಗೆ ಘೋರ ಕಂದಕಗಳು, ಪ್ರಪಾತಗಳು, ಕೆಳಗೆ ಕಣ್ಣು ಹಾಯಿಸಿದಾಗ ತಲೆ ಸುತ್ತಿ ಬರುತ್ತಿವೆ. ದೇವರೇ ಈ ಗಾಳಿ ಎಲ್ಲಿಗೆ ಕರೆದೊಯ್ದು ಅಪ್ಪಳಿಸುತ್ತೋ ಇಲ್ಲ ಯಾವುದಾದರೂ ಪ್ರಪಾತದಲ್ಲಿ ಎಸೆಯುತ್ತೋ? ಗಾಳಿಯ ಬಿರುಸು ಕಡಿಮೆಯಾಯಿತು. ಹಾರಿಸಿಕೊಂಡು ಹೋಗುವುದಿಲ್ಲ. ನೆಲದ ಮೇಲೆ ಅದೂ ಓಯಸಿಸ್ ಇರೋ ಜಾಗದಲ್ಲೇ ಬೀಳುತ್ತೇನೆ ಅನ್ನೋ ಭಾವನೆ ಬಲವಾಗುತ್ತಿದೆ. ಹೌದು ನಿಜ ನಾನಂದುಕೊಂಡಷ್ಟು ಪ್ರಕೃತಿ ವಿರೋಧವಾಗಿಲ್ಲ. .ಇದೋ ಇಲ್ಲೇ ಇದೆ ಓಯಸಿಸ್ ಅಂತ ಕಣ್ಣು ಬಿಟ್ಟು ಸಮಾಧಾನದ ನಿಟ್ಟುಸಿರುಬಿಟ್ಟಳು.

ಜವಾನ ಬಂದು ಮಾಲತಿಯ ಟೇಬಲ್ ಮುಂದೆ ನಿಂತಿದ್ದಾನೆ. 'ಏನ್ಬೇಕು ರಾಮಯ್ಯ' ಅಂತ ಮೃದುವಾಗಿಯೇ ಕೇಳಿದಳು.

"ಬಾಸ್, ನಿಮ್ಮನ್ನ ಬಾ ಅಂತ ಕರೀತಾವ್ರೆ" ಎಂದ.

ರಾಮಯ್ಯನಿಗೆ ಅವಳನ್ನು ನೋಡುತ್ತಿದ್ದಂತೆ "ಅಯ್ಯೋ" ಎನಿಸಿತು. ಅವನಿಗೆ ಅವಳ ಬಗ್ಗೆ ಏನೋ ವಾತ್ಸಲ್ಯ. ಮೊದಲಿನಿಂದಲೂ ಅವಳನ್ನು ನೋಡುತ್ತಿದ್ದಾನೆ. ಯಾರು ಏಷ್ಟು ಹೇಳಿದರೂ ಮಾಲತಿಯ ಬಗ್ಗೆ ಆದರ ಪ್ರೀತಿ ಇದೆ. ಎಷ್ಟೋ ಸಲ ಸಿಡಿಮಿಡಿಗೊಂಡಿದ್ದಾಗ ಮಾಲತಿ, ರಾಮಯ್ಯ ಆಕೇನ ಸಮಾಧಾನ ಮಾಡಿ, "ಮಾಲತಮ್ಮ ನೀವು ಸುಮ್ನೆ ಇದ್ದು ಬಿಡಿ. ಇವರ ಸಹವಾಸ ಅಂದ್ರೆ ಹೇಲ ಮೇಲೆ ಕಲ್ಲು ಹಾಕಿ ಮುಖದ ಮೇಲೆ ಸಿಡಿಸಿಕೊಂಡ ಹಾಗೆ. ಕೆಟ್ಟ ಜನಗೋಳು. ಒಳ್ಳೇ ಥರಾ ಇದ್ದರೇ ಈ ಆಫೀಸ್ನಾಗೆ ಉಳಿಯೋಲ್ಲ. ನಿಮ್ಮ ಪಾಡಿಗೆ ನೀವು ಕೆಲಸ ಮುಗಿಸ್ಕೊಂಡು ಬಂಟೋಗಿ. ಎಲುಬಿಲ್ಲದ ನಾಲಗೆ. ಏನೇನೋ ಮಾತಾಡ್ಕೋತಾರೆ. ಒಳ್ಳೇವ್ರ್ನು ಯಾರ್ನೂ ಬಿಡಾಕಿಲ್ಲ ಇವ್ರು ಸುಂಕೆ ಉರಸ್ಕೋತಾರೆ. ದೇವರಂಥಾ ಮನುಷ್ಯ ಗೋಪಣ್ಣ ಅವರ ಸಂಬ್ಳದಾಗೆ ಎಷ್ಟು ಇವ್ರು ಉಪಯೋಗಿಸ್ಕೋತಾರೋ ಏನೋ. "ಅಯ್ಯೋ ಅಂದ್ರೆ" ಮೂತಿ ಮುಕಾ ನೋಡ್ದೆ ಕೊಟ್ಟಿದ್ದಾರೆ. ನಾನು ಬುದ್ಧಿ ಏಳಿದ್ರೆ, ನನಗ್ಯಾಕೆ ರಾಮಯ್ಯ. ನನಗೇನು ಎಂಡ್ತಿ ಮಕ್ಳು, ಅಪ್ಪಾ, ಅಮ್ಮಾಪ್ಪಾ. ನಾನು ದುಡಿದು ಸಂಪಾದ್ಸೋದು ನನ್ನೊಬ್ಬನಿಗೆ ಜಾಸ್ತೀನೆ ಆಗುತ್ತೆ. ಅದಕ್ಕೆ ಯಾರಿಗೆ ಅಗತ್ಯ ಬೀಳುತ್ತೋ ಅವರಿಕ್ಕೊಡ್ತೀನಿ" ಅಂತ ಬಾಯುಬ್ಬಿಸ್ಬಿಡ್ತಿದ್ದು! ಅಂತ ಹೇಳ್ತಾಲೇ ಇದ್ದ.

ಅಲ್ಲ ರಾಮಯ್ಯ, ಈಗಲೇ ಬರಬೇಕಂತೇನೂ? ಒಂದೆರಡು ಲೆಟರ್ಸ್ ಟೈಪ್ ಮಾಡಬೇಕಿದೆ. ಮಾಡ್ಬಿಟ್ಟು ಬರಲಾ?

“ಬೇಡಿ ಅಮ್ಮ, ಈಗಲೇ ಸಾಹೇಬ್ರು ಬರೇಳಿದ್ದಾರೆ. ಯಾಕೋ ಧುಮಧುಮಾಂತ ಇದ್ರು. ಅವರೇನಾದರೂ ಮಾತಾಡಿದರೆ ತುಟಿ ಪಿಟಕ್ಕನ್ನೇಡಿ ಸುಮ್ಕೆ ಇದ್ಬಿಡಿ. ಸಿಟ್ಟು ತಾನಾಗೇ ಇಳಿಯುತ್ತೆ” ಅಂತ ಮುನ್ನೆಚ್ಚರಿಕೆ ಕೊಟ್ಟು ತನ್ನ ಜೊತೆಗೆ ಕರೆದುಕೊಂಡು ಹೋದ.

ಮಾಲತಿಗೆ ಗೊತ್ತಿತ್ತು. ಈ ಹಗರಣ ಎಲ್ಲ ತಾನು ಅವನಿಗೆ ಬಗ್ಗದ್ದು. ಹೆಣ್ಣು ಅನ್ನೋದು ಅಗ್ಗದ ಮಾಲು ಅಂದ್ಕೊಂಡಿರಬೇಕು. ಎಂದಾದರೂ ಒಂದು ದಿನ ಅವನಿಗೆ ಹೆಣ್ಣಿನ ಬಗ್ಗೆ ಇರೋ ಈ ಭಾವನೇನ ತಿದ್ದಿ ಬುದ್ಧಿ ಕಲಿಸಬೇಕಾಗಿತ್ತು. ಅದಕ್ಕೆ ಒಳ್ಳೆ ಅವಕಾಶ ಸಿಕ್ತು. ಸರಿಯಾಗಿ ಬುದ್ಧಿ ಕಲಿಸಿದ್ದೇನೆ ಅಂದುಕೊಂಡಳು. ಆದರೆ ಆವೇಶದಲ್ಲಿ ಹಾವಿನ ಜೊತೆಗೆ ಸೆಣಸಾಟವಾಡುತ್ತಿದ್ದೇನೆ ಅನ್ನೋ ಪ್ರಜ್ಞೆ ಜಾರಿದಂತಿತ್ತು. ಚೆನ್ನಾಗಿ ಬಲ ಪ್ರಯೋಗಿಸಿ ಹಸಿದ ಹುಲಿ ಹಾಗೆ ಬಿದ್ದ ಬಾಸ್ ಕೆನ್ನೆ ಥಳಿಸಿದ್ದಳು; ಬಹುಶಃ ಇನ್ನೂ ಮುದ್ರೆ ಇತ್ತೋ ಏನೋ! ಹೊಸಾ ಬಾಸ್‌ಗೆ ಇದು ಭರಿಸಲಾಗದಿತ್ತು. ಮಾಲತಿ ಪರಿಣಾಮವನ್ನು ನಿರ್ಧರಿಸಿಕೊಂಡೇ ಒಳಗೆ ಹೋದಳು. ‘Goodmorning Sir’ ನಯವಾಗಿ ನುಡಿದಳು. Revolving chairನಲ್ಲಿ ಕುಳಿತಿದ್ದ ಬಾಸ್ ಗೋಡೆಯ ಕಡೆಗೆ ಮುಖ ತಿರುಗಿಸಿದ್ದ. ಮಾಲತಿಯ ಅಭಿವಂದನೆಗೆ ಉತ್ತರ ಬರಲಿಲ್ಲ. ಬಾಸ್ ಗಮನವನ್ನು ತಿರುಗಿಸಲು ಸಣ್ಣಗೆ ಕೆಮ್ಮಿದಳು. ‘sit down silently’ ಹೂಂಕಾರದಿಂದ ನುಡಿದ. ಹಾಗೆಯೇ ಒಂದು ಕುರ್ಚಿ ಎಳೆದುಕೊಂಡು ಕುಳಿತಳು. ರೊಯ್ಯಂತ ಕುರ್ಚಿಯನ್ನು ಇವಳಿಗೆ ಎದುರಾಗಿ ತಿರುಗಿಸಿದ. ಕಿಡಿಯುಗುಳುವಂತಿದ್ದ ಆ ಭಯಂಕರ ಕಣ್ಣುಗಳನ್ನು ನೋಡುತ್ತಿದ್ದ ಹಾಗೆ ಗುಂಡಿಗೆ ಬಡಿತ ನಿಂತ ಹಾಗಾಯಿತು. ಆದರೂ ಹೃದಯವನ್ನು ಒತ್ತಿ ಹಿಡಿದಳು. ಬಡಿತದ ವೇಗ ಹೆಚ್ಚುತ್ತಿತ್ತು. ಏನು ಕೇಳುತ್ತಾನೋ ಅನ್ನೋ ಕುತೂಹಲ. ರಾಮಯ್ಯನ ಕೆಮ್ಮು ಕೇಳಿಸಿತು. ‘ಮಾಲತಮ್ಮ ಹೆದರ್ಬೇಡ. ಏನಾದರೂ ಹೆಚ್ಚು ಕಡಿಮೆಯಾದರೆ ನಾನು ನೋಡ್ಕೊಳ್ತೇನೆ’ ಅನ್ನುವ ಅರ್ಥ ಇರೋ ಹಾಗಿತ್ತು! ಆ ಕೆಮ್ಮಿನ ಅರ್ಥ. ಸ್ವಲ್ಪ ಧೈರ್ಯ ಬಂತು. ಬಾಸ್‌ನ ಎದುರಿಸುವುದಕ್ಕೆ ಸಿದ್ಧತೆಯನ್ನು ಮಾಡಿಕೊಂಡಳು. ‘ಲೆಟರ್ಸ್ ಎಲ್ಲಾ ಟೈಪ್ ಮಾಡಿಯಾಯ್ತಾ’– ಮೊಟಕಾಗಿ ಪ್ರಶ್ನಿಸಿದ. ‘ಒಂದೋ ಎರಡೋ ಉಳಿದಿದೆ ಸಾರ್’– ವಿನಯವಾಗಿತ್ತು ಉತ್ತರ. ‘ಅಪ್‌ಟು ಡೇಟ್ ಮಾಡ್ಬೇಕಂತ ಹೇಳಿರಲಿಲ್ಲ ನಿನಗೆ?... ನನಗೊತ್ತು ನಿನಗೆಲ್ಲಿ ಬಿಡುಪಿರುತ್ತೆ? ಗಿರಾಕಿಗಳನ್ನು ಹುಡುಕುವುದಕ್ಕೇ ಸಾಕಾಗೊಲ್ಲ ನಿನಗೆ ಟೈಂ. ಆಫೀಸ್ ಕೆಲಸಕ್ಕೆ ಇನ್ನು ಹೇಗೆ ಸಾಕಾಗುತ್ತೆ?’– ವ್ಯಂಗ್ಯ ತುಂಬಿತ್ತು ಧ್ವನಿಯಲ್ಲಿ. ನಿನ್ಮೇಲೆ ನನಗೆ ಸಾಕಷ್ಟು ಕಂಪ್ಲೈಂಟ್ಸ್ ಬಂದಿದೆ. ನಿನ್ನ ಸಬಾರ್ಡಿನೇಟ್ಸೆಲ್ಲಾ, ನೀನು ಅವರ ಜೊತೆಗೆ ಡೀಸೆಂಟಾಗಿ ನಡಕೊಳ್ಳಲ್ಲಾಂತ ಹೇಳ್ತಿದ್ದಾರೆ. ಅಲ್ದೆ ಆಫೀಸ್ ಅವರ್ಸ್‌ಲ್ಲಿ ನೀನು ಗೋಪಾಲನ್ನ ನೋಡೋಕೆ ಅವನ ಸೆಕ್ಷನ್‌ಗೆ ಹೋಗ್ತಿರ್ತೀಯಂತೆ. ನನಗ ಆ ಸೆಕ್ಷನ್‌ನವರೂ ಸಾಕ್ಷಿ ಹೇಳಿದ್ದಾರೆ. ಇನ್ಮೇಲೆ ಹೀಗೆಲ್ಲ ಮಾಡಿದರೆ ಖಂಡಿತ ನೀನು ಆಫೀಸ್‌ನಲ್ಲಿ ಇರೋಕೆ

ಸಾಧ್ಯವಿಲ್ಲ. understand? ಗದ್ದರಿಸಿದ. ಇನ್ನೂ ಒಂದು ವಿಷಯ. ನೀನು ಅಪಾಲಜಿ ಲೆಟರ್ ಕೊಡಬೇಕು. `I will dictate, take down'– ಅಧಿಕಾರವಾಣಿಯಲ್ಲಿ ನುಡಿದ. ಮತ್ತೆ ಚೇರನ್ನು ತಿರುಗಿಸಿ ಗೋಡೆಯ ಕಡೆಗೆ ಮುಖ ಮಾಡಿ ಹೇಳತೊಡಗಿದ. ಮಾಲತಿ ಪೇಪರೊಂದನ್ನು ಟ್ರೇಯಿಂದ ತೆಗೆದುಕೊಂಡು ಕುಳಿತಳು. 'ಡ್ರಾಫ್ಟ್ ಮಾಡು ನಾನು ವಿಷಯ ಏನು ಬರೀಬೇಕು ಅಂತ ಹೇಳ್ತೀನಿ' ಮತ್ತೊಮ್ಮೆ ನುಡಿದ. ಒಂದೆರಡು ನಿಮಿಷಗಳ ತರುವಾಯ ಮಾಲತಿ 'ರೆಡಿ ಸರ್' ಅಂದಳು. ಇಷ್ಟು ಸುಲಭವಾಗಿ ಮಾಲತಿ ಮುದುಡಿದ್ದು ನೋಡಿ ಬಾಸ್‌ಗೆ ಆಶ್ಚರ್ಯ. ಮೂಗಿನ ಮೇಲೇ ಕೋಪ. ಜೊತೆಗೆ ಅಂಥಾ ಹ್ಯುಮಿಲಿಯೇಷನ್ ಅವಳಿಗೆ ಒಗ್ಗದ್ದು. ಅಂಥಾದ್ದರಲ್ಲಿ ಅಪಾಲಜಿ ಲೆಟರ್ ಬರೆದುಕೊಡೋಕೆ ಹೇಗೆ ಒಪ್ಪಿದ್ದಾಳೆನ್ನೋದು ಆಶ್ಚರ್ಯವಾಗಿ ಅವಳ ಮುಖ ನೋಡಬೇಕೆನಿಸಿತು. ಆದರೆ ಧೈರ್ಯ ಬರಲಿಲ್ಲ. ಕೊಟ್ಟು ಹೋಗುವ ತನಕವೂ ಸಂಜಿಕೆಯಿರಲಿಲ್ಲ. ಹೊಂಚಿದ್ದು ಎದುರು ಬೀಳುವ ಸ್ವಭಾವ. ಅದಕ್ಕೆ ಮುಖ ತಿರುಗಿಸದೆ ಹೇಳತೊಡಗಿದ. 'ಸರ್' ಆಯ್ತು ಮುಂದೆ ಹೇಳಿ ನಿಶ್ಚಲವಾಗಿ ನುಡಿದರು. 'ನಾನು, ಮಾಲತಿ, ನನ್ನ ಸಹೋದ್ಯೋಗಿಗಳೊಂದಿಗೆ ಸರಿಯಾಗಿ ನಡೆದುಕೊಳ್ಳದಿದ್ದುದಕ್ಕಾಗಿ ತಮ್ಮಲ್ಲಿ ಕ್ಷಮೆ ಯಾಚಿಸುತ್ತೇನೆ. ಅಲ್ಲದೆ ಇಂದಿನಿಂದ ನನ್ನ ದುರ್ನಡತೆಯನ್ನು ತಿದ್ದಿಕೊಂಡು ಮರ್ಯಾದೆಯಿಂದ ಇದ್ದು ಆಫೀಸಿನ ಗೌರವವನ್ನು ಕಾಪಾಡುತ್ತೇನೆ ಮತ್ತು ಆಫೀಸಿನ ವೇಳೆಗೆ ಸರಿಯಾಗಿ ಬಂದು ಕೆಲಸ ನಿರ್ವಹಿಸುತ್ತೇನೆ. ಮತ್ತೊಮ್ಮೆ ಕ್ಷಮೆಯಿರಲಿ'– ಡಿಕ್ಟೇಷನ್ ಮುಗಿಸಿ ಇವಳತ್ತ ತಿರುಗಿದ. ಸ್ಫೋಟಕ್ಕೆ ಸಿದ್ಧವಾಗಿರುವ ಜ್ವಾಲಾಮುಖಿಯಂತಿದ್ದಾಳೆ. ಆ ಲೆಟರನ್ನು ಮತ್ತೊಮ್ಮೆ ಓದಿ ತೋರಿಸಲು ಹೇಳಿದ. 'ಮಾಲತಿ, ಬೇಕಾದರೆ ನೀವೇ ಓದಿಕೊಳ್ಳಿ' ಎಂದು ರೊಯ್ಯಂತ ಅವನ ಮುಂದೆ ಎಸೆದಳು. ಬಾಸ್ ಕೈಗೆ ತೆಗೆದುಕೊಂಡು ನೋಡಿ ಸ್ತಂಭಿಸಿದ. `What is this nonsence'– ಕಿರುಚಿದ.

'ಓದಿದರೆ ತಿಳಿಯೊಲ್ವೆ ಏನೂಂತ? ಬಾಯ್ಬಿಟ್ಟು ಹೇಳಬೇಕೇ?'

'ತಲೆಯಿದ್ದು ಮಾತಾಡ್ತಿದ್ದೀಯಾ? ಇಲ್ಲ...'

'ಇದ್ದೇಂದ್ರೆ ಇದೆ. ಇಲ್ಲಾಂದ್ರೆ ಇಲ್ಲ'– ಕಡಿದಾಗಿ ಉತ್ತರಿಸಿದಳು.

'ತಕ್ಷಣ Resign ಮಾಡಿದ್ರೆ ಹೇಗೆ? ಅರ್ಜೆಂಟ್ ಲೆಟರ್ ಇದೆ'

'ಪ್ರಪಂಚ ವಿಶಾಲವಾಗಿದೆ. ಯಾರು ಬೇಕಾದರೂ ಸಿಕ್ತಾರೆ'

'ಮಾಲತಿ [illegible] ಬೇಡ [illegible] ನನ್ನ ಮಾತು ಕೇಳು. ಯಾರಿಂದಲೂ [illegible]

ಇನ್ನು ಮಾಲತಿಗೆ ತಡೆಯಲು ಆಗಲಿಲ್ಲ. 'You dirty dog' ಎಂದು ಆಫೀಸೇ ನಡುಗುವ ಹಾಗೆ ಕಿರುಚಿದಳು.

'You bitch– ಇದು ಆಫೀಸು ಬಾಯ್ಮುಚ್ಚು. ನೀನು ಅಬ್ಬರಿಸಿದರೆ ಅಪಮಾನ ಆಗೋದು ನಿನಗೇನೇ mind that' ಎಚ್ಚರಿಸಿದ.

'Resignation ಕೊಟ್ಟಾಯ್ತು. ನನ್ನ ಮೇಲೆ ನಿಮಗೆ ಅಧಿಕಾರ ಇಲ್ಲ. ನೀವೆಲ್ಲಾ ಮನುಷ್ಯ ರೂಪದಲ್ಲಿರೋ ರಾಕ್ಷಸರು. Gentleman ಸೋಗಲ್ಲಿರುವ ಕೀಟಗಳು. ಹೊಲಸು ಹುಳುಗಳು. ನಿಮ್ಮಂಥ ನೀತಿಗೆಟ್ಟವರು ಒಂದೊಂದು ಆಫೀಸಿಗೆ ಒಬ್ಬೊಬ್ಬರಿದ್ದರೂ ಸಾಕು. ದ್ರೌಪದೀ ರಕ್ಷಣೆಗೆ ಕೀಚಕರನ್ನು ಕಾವಲಿಟ್ಟ ಹಾಗೆ. ಒಂದು ಹೆಣ್ಣೂ ಮರ್ಯಾದೆಯಿಂದ ಇರೋಕೆ ಸಾಧ್ಯವಿಲ್ಲ. ನೀವೆಲ್ಲ ಹಸಿದವರು. 'ಥೂ' ನಿಮ್ಮಂಥವರ ನೆರಳೂ ಅಪಾಯಕರ' ಎಂದು ಥೂಕರಿಸಿ ಸರಸರ ನಡೆದುಬಿಟ್ಟಳು. ಬಿರುಗಾಳಿಯಂತೆ ಹೊರಟ ಮಾಲತಿಯನ್ನು ತಡೆಯಲು ಯಾವ ಜೆಟ್ಟವೂ ಅಡ್ಡ ಬರಲಿಲ್ಲ.

ಚೌಕದಲ್ಲಿ ಬಸ್ಸಿಗಾಗಿ ಬಂದು ನಿಂತಳು. ಶೂನ್ಯ ಆಕಾಶದ ಕೊನೆ ಮೊದಲು ಕಾಣಲಿಲ್ಲ. ಒಂದು ಮನಸ್ಸು ದುಡುಕಿದೆ ಎಂದು ಸಿಡುಗುಟ್ಟಿದರೆ ಮತ್ತೊಂದು ಮಾಡಿದ್ದು ಸರಿಯೆಂದು ತನ್ನ ಪ್ರತಿಯಾಗಿ ಪಿಸುಮಾತಿನಲ್ಲಿ ಸಮರ್ಥಿಸುವಂತಿತ್ತು. ಇವಳು ಆಲೋಚನೆಯಲ್ಲಿರಬೇಕಾದರೆ ಬಸ್ಸುಗಳು ಎರಡು ಮೂರು ಬಂದು ಹೋದವು. ಏನನ್ನೂ ಗಮನಿಸುವ ಸ್ಥಿತಿಯಲ್ಲಿರಲಿಲ್ಲ.

ಆಫೀಸಲ್ಲಿ ವಿಷಯ ಒಬ್ಬರಿಂದ ಒಬ್ಬರಿಗೆ ತಿಳಿಯಿತು. ಮಾಲತಿಯ ಸೆಕ್ಷನ್‌ನವರಿಗೆ ಲಡ್ಡು ತಿಂದಷ್ಟು ಖುಷಿಯಾಯಿತು. ಗೀತಾಗೂ ತಿಳಿಯಿತು. ಗೋಪಿಗೂ ತಿಳಿಯಿತು. ಗೀತಾಗೆ ಎದ್ದು ಹೋಗಿ ಮಾಲತಿಯನ್ನು ನೋಡಿ ಮಾತಾಡಿಸಬೇಕೆನಿಸಿತು. ಆದರೆ ಅವಳಿಗಾದ ಗತಿ ತನಗೂ ಆದರೆ ಅನ್ನೋ ಭಯ ಅವಳನ್ನು ಅಲ್ಲಿಯೇ ಉಳಿಯುವಂತೆ ಮಾಡಿತು. ಆದರೆ ಗೋಪಿಗೆ ನಿಲ್ಲಲಾಗಲಿಲ್ಲ. ಮೊದಲಿನಿಂದಲೂ ಮಾಲತಿಯ ಗಂಭೀರ ಸ್ಥಿತಿ ತಿಳಿದಿತ್ತು. ತುಂಬಾ ಸೆಂಟಿಮೆಂಟಲ್. ಘಾಯಗೊಂಡ ಮನಸ್ಸು. ಮಾಮೂಲಾಗಿ ಅವಳು ಬಸ್ಸಿಗೆ ಕಾಯುವ ಜಾಗ ಗೊತ್ತು. ಎದ್ದವನೇ ಅರ್ಧ ದಿನಕ್ಕೆ ರಜೆ ಬರೆದು ಗೆಳೆಯನ ಕೈಲಿ ಬಾಸ್‌ಗೆ ಕೊಡಲು ಹೇಳಿ ಈಚೆಗೆ ಬಂದ. ಅಷ್ಟರಲ್ಲಿ ರಾಮಯ್ಯ ಎದುರು ಬಿದ್ದು ಮಾಲತಿಯ ವಿಚಾರ ಮತ್ತು ಅವರಿಬ್ಬರಿಗೆ ನಡೆದ ಘರ್ಷಣೆಯನ್ನು ಸೂಕ್ಷ್ಮವಾಗಿ ತಿಳಿಸಿದ.

ಗೋಪಿ ನೇರಾಗಿ ಬಸ್ ಸ್ಟಾಪಿಗೆ ಬಂದ. ಅವನ ನಿರೀಕ್ಷೆ ಸರಿಯಾಗಿತ್ತು. ಮಾಲತಿ ಇನ್ನೂ ಅಲ್ಲೇ ಕಂಬಕ್ಕೊರಗಿಕೊಂಡು ಶೂನ್ಯದಲ್ಲೆಲ್ಲೋ ನೋಡುತ್ತಾ ನಿಂತಿದ್ದಳು.

ಗೋಪಿ ಹತ್ತಿರ ಬಂದು ಮೆಲ್ಲನೆ 'ಮೇಡಂ' ಅಂದ. ಪರಿಚಿತ ಧ್ವನಿ ಅದೂ ಆತ್ಮೀಯತೆಯಿಂದ ತುಂಬಿದ ಧ್ವನಿ ಅವಳನ್ನು ಕೂಡಲೇ ಎಚ್ಚರಿಸಿತು. 'ನನಗೆ ವಿಷಯ ಎಲ್ಲ ತಿಳೀತು. ಆದರೆ ನೀವು ಈ ಕೆಲಸ ಮಾಡೋಕೆ ಮುಂಚೆ ಸ್ವಲ್ಪ ಯೋಚಿಸಬೇಕಿತ್ತು ಅನ್ಸುತ್ತೆ.'

'ಮಿ॥ ಗೋಪಿ ಆ ಪರಿಸ್ಥಿತೀಲಿ ಅದಕ್ಕಿಂತ ಬೇರೇನೂ ಮಾಡೋದು ಸಾಧ್ಯವಿರಲಿಲ್ಲ. ನನ್ನೊಬ್ಬಳ ವಿಷಯವಲ್ಲದೆ ನಿಮ್ಮನ್ನೂ ಮಾತಿನಲ್ಲಿ ಎಳೆದರು. ಎಲ್ಲಕ್ಕಿಂತ ಹೆಚ್ಚಾಗಿ ಅದು ಹಸಿದ ತೋಳ ಅಂತ ನನಗೆ ಖಚಿತವಾಯಿತು. ಅವನು ಇರೋತನಕ ನನ್ನ ಸ್ಥಿತಿ ಅಭದ್ರ, ನನ್ನ ಹೆಣ್ತನಕ್ಕೆ ಅಪಾಯ. ಹೋದರೆ ಬಂದರೆ ಆ ಹಸಿದ ಕಣ್ಣುಗಳನ್ನು ಎದುರಿಸಲಾರೆ.'

'ಹಾಗಾದರೆ ಈಗ ಮುಂದೆ ದಾರಿ? ನಿಮ್ಮನ್ನು ಆಶ್ರಯಿಸಿ ಗುಟುಕಿಗೆ ಎದುರು ನೋಡೋ ಎರಡು ಮುದಿ ಹಕ್ಕಿಗಳಿವೆ. ಅವುಗಳ ಗತಿ?'

'ಹೌದು ಅವರದೇ ಯೋಚನೆಯಾಗಿದೆ ನನಗೆ. ನಾನಾದರೆ ಈ ವಿಶಾಲವಾದ ಪ್ರಪಂಚದಲ್ಲಿ ಯಾವುದೋ ಮೂಲೆಯಲ್ಲಿ ಏನಾದರೂ ಮಾಡಿಕೊಂಡು ಬದುಕುತ್ತೇನೆ. ಬೇಕಾದರೆ ತಿರಿದಾದರೂ ತಿಂತೇನೆ. ಈಗ ನನಗೆ ನಾನು ಮಾಡಿದ್ದು ತುಂಬಾ ತಪ್ಪೇನೋ ಅಂತ ಅನ್ನಿಸ್ತಿದೆ. ಆದರೂ ಆ ಬಾಸ್ ಮುಖ ನೆನಪಿಗೆ ಬಂದರೆ ಮುಳ್ಳು ಹಂದಿಯಾಗುತ್ತೇನೆ' ಅಸಹಾಯಕತೆ ಬೆರೆತಿತ್ತು ಆ ಧ್ವನಿಯಲ್ಲಿ.

ನೋಡಿ ಮೇಡಂ ಆದದ್ದು ಆಗಿ ಹೋಯ್ತು. ನಾನೊಂದು suggestion ಕೊಡ್ತೇನೆ. ನಿಮಗೆ ಇಷ್ಟವಾಗಬಹುದು ಆಗದೆ ಹೋಗಬಹುದು. ನಿಮ್ಮ ಒಳ್ಳೇದಕ್ಕೆ ಹೇಳ್ತೇನೆ...' ಹಿಂಜರಿಯುತ್ತ ನುಡಿದ.

ಮಿ॥ ಗೋಪಿ, ನೋಡಿ. ನನ್ನಂಥವರು ಬಹು ಸುಲಭವಾಗಿ ಕಳೆದು ಹೋಗೋ ಈ ಪ್ರಪಂಚದಲ್ಲಿ ನಿಮಗಿಂತ ನನಗೆ ಬೇರೆ ಯಾರೂ ಇಲ್ಲ. ಈಗಾಗಲೇ ನಿಮ್ಮಿಂದ ಒಂದು ಸಲ ಉಪಕೃತಳಾಗಿದ್ದೇನೆ. ಈಗಲೂ ನೀವೇನು ಹೇಳ್ತೀರೋ ಅದನ್ನೇ ಕೇಳೋದಿಕ್ಕೆ ಪ್ರಯತ್ನಿಸ್ತೇನೆ. ಕೊಟ್ಟ ಕೊನೆಯ ಆಸರೆ ನೀವೇ ಅನ್ನೋ ದೈನ್ಯತೆ ಇತ್ತು ಆ ಮಾತುಗಳಲ್ಲಿ.

ಹಾಗಾದ್ರೆ ನೀವು ನಿಮ್ಮ ಮುದಿ ಅತ್ತೆ ಮಾವಂದಿರೊಂದಿಗೆ ನನ್ನ ಜೊತೆಗೆ ಬಂದು ಬಿಟ್ಟುಬಿಡಿ. ಹೇಗಿದ್ದರೂ ಇರೋದು ನಾನೊಬ್ಬನೇ. ನೀವು ಏಕಾಂಗಿಯಾಗಿ ಇರೋದಕ್ಕಿಂತ ಹೆಚ್ಚಾಗಿ ಏಕಾಕಿತನ ನನ್ನದಾಗಿದೆ. ಹುಟ್ಟೋಕ್ಕುಂಚೆ ಅಪ್ಪ, ಹುಟ್ಟಿದ್ಮೇಲೆ ಅಮ್ಮನ್ನ ಕಳ್ಕೊಂಡೆ. ಹಿಂದಿಲ್ಲ ಮುಂದಿಲ್ಲ. ಪರಪುಟ್ಟನ ಹಾಗೆ ಬೆಳೆದೆ. ಓದ್ಬೇಕನ್ನೋ ಆಸ್ಥೆಗೆ ಗುರುಗಳು, ತಂದೆ ಗೆಳೆಯರು ಓದಿಗೆ ಸಹಕರಿಸಿದರು. ನಸೀಬ್ ಚೆನ್ನಾಗಿತ್ತು.

ಉದ್ಯೋಗ ಸಿಕ್ತು. ಸಂತೋಷವಾಗಿದ್ದೀನಿ. ಉಳಿದಿರೋದು ನಾಲ್ಕು ಜನರಿಗೆ ಒಳ್ಳೇವ್ನಾಗಿ ಇರೋದು. ಅಷ್ಟೇ ನನ್ನ ಧ್ಯೇಯ.

ಅದು ಒಪ್ಪಿಕೊಂಡೆ ಮಿ॥ ಗೋಪಿ. ಆದರೆ ನಿಮ್ಮ ಒಳ್ಳೇತನಾನ್ನೇ ನಿಮಗೆ ಮಾರಕ ಅಸ್ತ್ರವಾಗಿ ಮಾಡೋಕೆ ಕಾದಿರೋ ಜನ ಸುಮ್ನಿರ್ತಾರೆಯೇ? ನೀವಂತೂ ಶುಚಿ ಮನಸ್ಸಿನಿಂದ ನನ್ನ ಸಹಾಯಕ್ಕೆ ಮುಂದಾಗಿದ್ದೀರಿ. ಆದರೆ ಮೊದಲೆ ನಾಲಗೆ ತೀಟೆ ತೀರಿಸ್ಕೊಳ್ಳೋಕೆ ಕಾದಿರೋ ಆಫೀಸಿನವರು ಸುಮ್ನಿರ್ತಾರೆಯೇ, ಕಥೆ ಕಟ್ಟಿ ರೆಕ್ಕೆ ಪುಕ್ಕಹಚ್ಚಿ ಪ್ರಪಂಚದಲ್ಲೆಲ್ಲ ಹಾರಿಬಿಡ್ತಾರೆ. ಆಗೇನು? ಸಂಶಯ ಭೀತಿಯಿಂದ ಕೇಳಿದಳು.

'ಅದಕ್ಕೂ ಒಂದು ದಾರಿ ಹೇಳ್ತೇನೆ. ನಿಮ್ಮ ಮನಸ್ಸು ನೋಯಿಸೋದು ನನ್ನ ಉದ್ದೇಶ ಅಲ್ಲ. ನೀವು ಒಪ್ಪುವುದಾದರೆ ನಾನು ನಿಮ್ಮನ್ನು ಪಬ್ಲಿಕ್ಕಾಗಿ ಮದುವೆಯಾಗ್ತೇನೆ. ಹೊರಳಾಡೋ ನಾಲಗೆಗಳಿಗೆ ಪರಾಲಿಸಿಸ್ ಹೊಡೆದ ಹಾಗೆ ಆಗುತ್ತೆ. ನಿಮ್ಮಿಂದ ಇದಕ್ಕಿಂತ ಹೆಚ್ಚಾಗಿ ಏನನ್ನೂ ಯಾಚಿಸೊಲ್ಲ. ಸಂದೀಪ್‌ರಿಗೆ ನೀವು ಕೊಟ್ಟ ಸ್ಥಾನವನ್ನು ನಾನು ಬಯಸೊಲ್ಲ. ನನಗೆ ಅಂಥಾ ಸ್ವಾರ್ಥ ಇಲ್ಲ.

ಗೋಪಾಲನಿಂದ ಈ ಮಾತು ಬರುತ್ತೇಂತ ನಿರೀಕ್ಷಿಸಿರಲಿಲ್ಲ. ಹಾಗೇ ಮಾಡೋದೇ ಒಳ್ಳೇದು. ನೆರಳಿಲ್ಲದೆ ಹೆಣ್ಣು ಬದುಕೋದು, ಅದೂ ಮರ್ಯಾದೆಯಿಂದ, ಆಗದ್ದು. ತನ್ನಂಥ ಅಪಾಯಕರ ಸ್ಥಿತಿ ಮತ್ತೂ ಭಯಂಕರವಾಗುತ್ತೆ. ಮನಸ್ಸು ತುಂಬಿ ಬಂತು. ಅತ್ತೆ ಮಾವರಿಗೆ ತಿಳಿಯುವಂತೆ ಮಾಡಬೇಕು. ಅದನ್ನು ಹೇಗಾದರೂ ಸಾಧಿಸಬಲ್ಲೆ ಅನ್ನೋ ನಂಬಿಕೆ ಇತ್ತು. ಗಟ್ಟಿಯಾಗಿ 'ಗೋಪಿ ನೀವು ನನ್ನ ಓಯಸಿಸ್' ಅಂತ ಕಿರುಚಬೇಕೆನಿಸಿತು. ಆದರೆ ಭಾವಾವೇಶವನ್ನು ಹತ್ತಿಕ್ಕಿದಳು. ನಾಳೆ ಖಂಡಿತ ಮನೆಗೆ ಬರಲೇಬೇಕೆಂದು ಆಹ್ವಾನಿಸಿ ವ್ಯಾನಿಟಿ ಬ್ಯಾಗೊಳಗಿಂದ ತುಂಡು ಕಾಗದ ತೆಗೆದು ಅಡ್ರೆಸ್ ಬರೆದುಕೊಟ್ಟಳು. ಅಷ್ಟರಲ್ಲಿ ಬಸ್ ಬಂದು ನಿಂತಿತು. ಸರಸರನೆ ಹತ್ತಿ ಒಳಗೆ ಮರೆಯಾದಳು. ಬಸ್ ಹೊರಟಿತು. ಅದರೊಂದಿಗೆ ಗೋಪಿಯ ಮನಸ್ಸೂ ಚಲಿಸಿತು. ಬಸ್ಸಲ್ಲಿ ಕೂತಿದ್ದರೂ ಮಾಲತಿಗೆ ಕನಸು ತಪ್ಪಲಿಲ್ಲ. ಅದೇ ಆಫೀಸು–ಅದೇ ಬಾಸ್–ರಾಜೀನಾಮೆ. ಮರಳುಗಾಡು–ಪಿಂಟೋ... ಪೀಟರ್, ರೆಹಾನಾ... ಅವರೇ... ಮುಳ್ಳು ಪೊದೆಗಳು... ದೂರದಲ್ಲಿ ಓಯಸಿಸ್–ಗೋಪಿ... ತಾನು. ಓಯಸಿಸ್... ಮರದ ನೆರಳು–ವಿಶ್ರಾಂತಿ... ಅದೇ ಅದೇ ನೆನಪು ಪುನರಾವರ್ತನೆಯಾಯ್ತು. ಸಂದೀಪ ಮಾಲತಿಗೆ ರಾಜೀನಾಮೆ ಕೊಟ್ಟ– ಮಾಲತಿ ಕೆಲಸಕ್ಕೆ ರಾಜೀನಾಮೆ ಕೊಟ್ಟಳು. ಗುಂಡಗಿರೋ ಭೂಮಿಯ ಸುತ್ತ ಬದಲಾಯಿಸುತ್ತೆ' ಅಂದುಕೊಂಡಳು.

* * *

ನೊಣ

ಸಿಂಬಳದಲ್ಲಿ ಸಿಕ್ಕಿ ಹಾಕಿಕೊಂಡು ವಿಲಿ ವಿಲಿ ಒದ್ದಾಡುತ್ತಿದ್ದ ನೊಣವನ್ನು ನೋಡುತ್ತಾ ಇದ್ದ ಹಾಗೆಲ್ಲ ನನಗೊಂದು ಖುಷಿ. ಅದಕ್ಕೇ ಆಗಬೇಕು. ಕೆಟ್ಟ ಕೀಟ! ಹಾಳು ಸುರಿಯುವ ಕಡೆಯೆಲ್ಲ ಕೂತು ಹೊರಬಾರದ ರೋಗಾಣುಗಳನ್ನು ಹೊತ್ತು ಮನುಷ್ಯ ಜೀವಕ್ಕೇ ಮಾರಕವಾಗಿದೆ. ಇದು ಸಾಯಲೇಬೇಕು. 'ಥುತ್' ಎನಿಸಿತು. ಇದ್ದಕ್ಕಿದ್ದಂತೆ ಮನಸ್ಸು ಆ ನೊಣದ ಬಗ್ಗೆ ಮರುಕ ತಳೆಯಿತು. ಯಾವನಾದರೂ ವ್ಯಕ್ತಿಯೊಬ್ಬ ಇದೇ ರೀತಿ ಇಂತಹುದೇ ಪರಿಸ್ಥಿತಿಯಲ್ಲಿ ಸಿಕ್ಕಿ ಹಾಕಿಕೊಂಡಿದ್ದರೆ ನನಗೆ ನಿಜವಾಗಿಯೂ ಖುಷಿಯಾಗುತ್ತಿತ್ತೆ? ನನ್ನ ಮನಸ್ಸನ್ನೇ ಪ್ರಶ್ನಿಸಿಕೊಂಡೆ. ನನ್ನನ್ನೇ ನೊಣವಾಗಿಸಿಕೊಂಡೆ. ಬಿದ್ದೆ, ಒದ್ದಾಡಿದೆ. ದೇವರು ಗಂಟಲು ಕೊಟ್ಟಿದ್ದ. ಕಿರುಚಿದೆ. ಸಹಾಯ ಮಾಡಿ ಎಂದು ಹಾದುಹೋಗುವವರನ್ನೆಲ್ಲಾ ಬೇಡಿಕೊಂಡೆ. ಆದರೆ ಯಾರಿಗೆ ತಾನೇ ಕಿವಿ ಕೇಳಿಸೀತು. ತಮ್ಮ ತಮ್ಮ ಸ್ವಾರ್ಥದ ವಲಯದಲ್ಲಿ ಮಾತ್ರ ಅವರು ನಿಮಗ್ನರು. ವಲಯದಾಚೆಗಿನ ವ್ಯಕ್ತಿಗಳಾಗಲಿ, ವಸ್ತುಗಳಾಗಲೀ ತಮಗೆ ಬೇಕಿಲ್ಲ. ಛೀ! ಎಷ್ಟು ಸ್ವಾರ್ಥಿಗಳು ಈ ಜನ.

ನಾಜೂಕಿನ ಉಡುಪಿನಲ್ಲಿ ನೊಣಕ್ಕಿಂತ ಅಸಹ್ಯ ಮನುಷ್ಯರು. ಒಳಗು ಕಾಣದೆ ಇರುವಾಗ. ಬುದ್ಧಿಯಿಲ್ಲದ, ನೊಣದಂತೆ ಜನ ಸುಲಭವಾಗಿ ಅವರು ಹರಡಿರುವ ಕೆಸರಿನ ಗುಂಡಿಯಲ್ಲಿ ಬಿದ್ದು ಸತ್ತವರು ಎಷ್ಟು ಜನ ಇಲ್ಲ- ಎಂದು ಯೋಚಿಸುತ್ತಿದ್ದಂತೆ ಮೈಮೇಲೆ ಏನೋ ಹರಿದಾಡಿದ ಅನುಭವವಾಯ್ತು. ಆ ಜಾಗಕ್ಕೆ ಕೈ ಹಾಕಿದೆ. ಒಂದು ಸಣ್ಣ ಇರುವೆ. ಅದೂ ಕೆಂಪಿರುವೆ. ಬೆರಳುಗಳಿಂದ ತೆಗೆದು ಒಂದು ಕ್ಷಣ ಅದರತ್ತ ನೋಡಿ ಅದನ್ನು ಇಲ್ಲ ಅನ್ನುವಂತೆ ಹೊಸಕಿಬಿಟ್ಟೆ. ತೃಪ್ತಿಯ ನಿಟ್ಟುಸಿರು!... ನಾನು ಏನೋ ಯೋಚಿಸುತ್ತಿದ್ದೆ?- 'ನೊಣ'... 'ನೊಣ'ದ ಬಗ್ಗೆ ಯಾರಾದರೂ ನನ್ನನ್ನು ಭಾಷಣಕ್ಕೆ ಯಾಕೆ ಕರೆಯಬಾರದು- ಎಂದು ನನಗೆ ನಾನೇ ಪ್ರಶ್ನಿಸಿಕೊಂಡೆ.

ಇದ್ದಕ್ಕಿದ್ದಂತೆ ಗೆಳತಿ [illegible] ನೆನಪು ಬಂತು. ಯಾಕೆಂದೋ ಗೊತ್ತಾಗಲಿಲ್ಲ. [illegible] ಬಗ್ಗೆ [illegible]

ಹಾಗಾದರೆ ಇಷ್ಟು ದಿವಸ ಅವಳ ನೆನಪೇ ನನಗ್ಯಾಕೆ ಬರಲಿಲ್ಲ ಎಂದುಕೊಂಡೆ. ಅಪ್ಪ ಅಮ್ಮ ಮೋಸ ಹೋದರು. ಅವಳನ್ನ ಒಬ್ಬ ಹೋಮೋಸೆಕ್ಷುಯಲ್ ವ್ಯಕ್ತಿಗೆ ಕೊಟ್ಟು ಮದುವೆ ಮಾಡಿದರು– ಅಂತ ಯಾರೋ ಹೇಳಿದ್ದರ ನೆನಪು ಬಂತು... ಮಕ್ಕಳು? ಇನ್ನು ಮಕ್ಕಳು ಎಲ್ಲಿಂದ ಬರಬೇಕು? ತುಂಬಾ ಒಳ್ಳೆ ಅಳಿಯ– Mr. International ಗಂಡ ಸಿಕ್ಕಿದ ಅಂತ ಅವಳಿಗೆ ತುಂಬಾ ಜಂಬ ಬಂದಿದ್ದಿರಬೇಕು. ಈಗ ಹೋಗಿ ನೋಡ್ಬೇಕು ಅವಳು ಹೇಗಿದ್ದಾಳೇಂತ. ಗಂಡನ ವಿಷಯವಾಗಿ ಏನಾದ್ರೂ ಹೇಳ್ತಾಳೇನೋ ಕೇಳ್ಬೇಕು. ಆದರೆ ಹಾಳು ಮುಂಡೇವು ನಮ್ಮ ಹಿಂದೂ ಹೆಣ್ಣುಗಳು! ಗಂಡಂದಿರು ಚಂಡಾಲರಾದರೂ ಬಾಯಿ ಬಿಡೊಲ್ಲ. ಧೈರ್ಯ ಮಾಡಿ ಇನ್ನೊಬ್ಬನ್ನ ಮದುವೆಯಾಗೊಲ್ಲ. ಸುಮ್ಮನೆ ಬಿದ್ದುಕೊಂಡು ಈ ನೊಣದ ಹಾಗೆ ಸಾಯೋ ತನಕ ಒದ್ದಾಡುತ್ತಲೇ ಇರುತ್ತವೆ!! ಇವಳಿಗಾದರೂ ನಾನು ಬುದ್ಧಿ ಹೇಳ್ಬೇಕು– ಅಂದುಕೊಂಡೆ.

ಹಳೆಯ ಡೈರಿಗಳಲ್ಲೆಲ್ಲಾ ಹುಡುಕಿ ಅವಳ ಅಡ್ರೆಸ್ ಪತ್ತೆ ಹಚ್ಚಿದೆ. ನಂ.6, 10ನೇ ಬ್ಲಾಕ್, ಜಯನಗರ. ಆ ಅಡ್ರೆಸ್ಸಿನ ಪುಟವನ್ನು ಹರಿದು ಮಡಿಚಿ ವ್ಯಾನಿಟಿ ಬ್ಯಾಗಿನಲ್ಲಿ ಇಟ್ಟುಕೊಂಡೆ. ರಜ ಸಿಗುತ್ತಿರಲಿಲ್ಲ. ಆದರೂ ಒಂದು ದಿನ ರಜೆ ಹಾಕಿ ಅವಳ ಮನೆಗೆ ಹೋಗುವ ಸಾಹಸ ಮಾಡಿದೆ. ತುಂಬಾ ಸುತ್ತಾಡಿ ಅಲೆದ ಮೇಲೆ ಮನೆ ಪತ್ತೆ ಆಯಿತು. ಬಾಗಿಲ ಬಳಿ ಹೋಗಿ ನಿಂತೆ. ಕಾಲಿಂಗ್ ಬೆಲ್ ಒತ್ತಬೇಕಾಗಿ ಬಂತು. ಯಾಕೋ ಎದೆ ದಡದಡ ಗುಟ್ಟುತ್ತಿತ್ತು. 'ನನ್ನನ್ನು ನೋಡಿ ತುಂಬಾ ಆಶ್ಚರ್ಯಪಡ್ತಾಳೆ. ಅಪ್ಪಿಕೊಂಡು ಅಳ್ತಾಳೆ' ಎಂದು ನಿರೀಕ್ಷಿಸಿದ್ದೆ. ಆದರೆ ಬಾಗಿಲು ತೆಗೆದಾಗ ನಾನು ಕಂಡ ದೃಶ್ಯ ನನ್ನನ್ನೇ ಸ್ತಂಭೀ ಭೂತವಾಗಿ ಮಾಡಿಬಿಟ್ಟಿತು. ಅಸ್ಥಿಪಂಜರ ಚರ್ಮ ಹೊದ್ದು ನಿಂತಂತೆ ಇತ್ತು. ಒಂದು ಕ್ಷಣ ಪರಸ್ಪರರಿಗೆ ಗುರುತು ಹತ್ತುವುದು ಕಷ್ಟವಾಯ್ತು. ನಂತರ ರಮಾಗೆ ನನ್ನ ಗುರುತು ಹತ್ತಿತ್ತು. 'ಓ ನೀನಾ ಬಾ ಒಳಗೆ, ಎಷ್ಟು ವರ್ಷಗಳಾದವು ನಿನ್ನನ್ನು ನೋಡಿ? ಏನೇ ನೀ ಸ್ವಲ್ಪಾನೂ ಬದಲಾವಣೇನೇ ಆಗಿಲ್ಲ. ಮೊದಲು ಹೇಗಿದ್ದೇಯೋ ಹಾಗೇ ಇದ್ದೀಯಲ್ಲೇ!'– ಬಲವಂತದಿಂದ ನಗು ತಂದುಕೊಂಡು ಮಾತನಾಡಿಸಲು ಯತ್ನಿಸುತ್ತಿದ್ದರೂ, ಬಾಡಿ ಬತ್ತಿದ ಸಿಪ್ಪೆಗಳಂತಿದ್ದ ತುಟಿಗಳ ಮೇಲಿನ ನಗು ಮತ್ತಷ್ಟು ಹಾಸ್ಯಾಸ್ಪದವಾಗಿ ಕಾಣಿಸಿತು.

ನನಗೆ ಸ್ವಲ್ಪವೂ ಸಹನೆಯಿರಲಿಲ್ಲ. ನೇರಾಗಿ ನನ್ನ ಸಂಶಯಗಳಿಗೆ ಸಮಾಧಾನ ಗಿಟ್ಟಿಸಿಕೊಳ್ಳುವ ಆತುರದಲ್ಲಿದ್ದೆ. ನನ್ನ ಆತುರ ಅವಳ ದೃಷ್ಟಿಗೆ ಬಿತ್ತು. ಯಾಕೆ ಹಾಗಾಡ್ತಾ ಇದ್ದೀಯಾ? ಏನೋ ಕೇಳ್ಬೇಕೂಂತಿರೋ ಹಾಗಿದೆ. ಹೌದೇನೇ? ಎಂದಳು. 'ಹೌದು'– ಎಂದು ತಲೆಯಾಡಿಸಿದೆನೇ ಹೊರತಾಗಿ ಜಪ್ಪನೆ ಕೇಳಿಬಿಡಲಿಲ್ಲ. ವ್ಯಾನಿಟಿ ಬ್ಯಾಗಿನಿಂದ ಬಿಸ್ಕತ್ ಪ್ಯಾಕೆಟ್ ತೆಗೆದು 'ಎಲ್ಲೇ ನಿನ್ನ ಮಕ್ಕಳು? ಕಾಣೋದಿಲ್ಲವಲ್ಲ?– ಎಂದೆ ಸುತ್ತಲೂ ನೋಡುತ್ತಾ. ನನ್ನ ಅನಿರೀಕ್ಷಿತ ಪ್ರಶ್ನೆಗೆ ಸಿದ್ಧಳಿರಲಿಲ್ಲ ರಮಾ. ಸ್ವಲ್ಪ ತಬ್ಬಿಬ್ಬಾದಳು. ಹಾಂ, ಹುಂ ಎಂದು ಮೇಲೆ ಕೆಳಗೆ ನೋಡುತ್ತಾ, ಮರೆಸುವುದಕ್ಕೆ ಪ್ರಯತ್ನಿಸಿ.

ಕೇಳಿದಳು- ಅಂದ ಹಾಗೆ ನೀನೇನು ಮದುವೆಗಿದುವೆ ಮಾಡಕೊಳ್ತಿಯೋ ಇಲ್ಲ ಇನ್ನೂ ಮೊದ್ಲಿನ ಹಾಗೆ 'ಸುಧಾರಣೆ' 'ಸುಧಾರಣೆ' ಅಂತ ಹಾರಾಡ್ತಾ ಮುದುಕಿಯಾದ್ರೂ ಕುಮಾರಿ ಅಂತ ಕರೆಸಿಕೊಳ್ಳಲು ಇಷ್ಟ ಪಡುತ್ತೀಯಾ?

ನನಗ್ಯಾಕೋ ಅವಳ ಪ್ರಶ್ನೆಯಿಂದ ತುಂಬಾ ಸಿಟ್ಟು ಬಂತು. ಏನೋ ತಾನು ಮಾತ್ರ ಮದುವೆಯಾಗಿ ಮಹಾ ಸಾಧಿಸಿರೋ ಹಾಗೆ. ಈಗಂತೂ ನೇರಾಗಿ ಕೇಳಿ ಬಿಡೋಣವೆನ್ನಿಸಿತು. ಆದರೂ ಮನಸ್ಸು ಯಾಕೋ ಬೇಡ ಅನ್ನಿಸಿ, ಸುತ್ತಿಸಿ ಅವಳನ್ನೇ ಬಾಯಿ ಬಿಡುವಂತೆ ಮಾಡೋಣವೆನಿಸಿತು.

ಅಲ್ವೆ, ಮದುವೆಯಾದವಳು ನೀನು, ನಿನ್ನ ಅನುಭವ, ಅನಿಸಿಕೆಗಳನ್ನು ನಮ್ಮಂಥವರಿಗೆ ಹೇಳಿದ್ರೆ ತಾನೇ, ನಾವು ಸಹ ಧೈರ್ಯ ಮಾಡೋಕೆ ಪ್ರಯತ್ನ ಪಡಬಹುದು. ನಿನ್ನ ಗಂಡ ನಿಂ ಜೊತೆ ಹೇಗಿರ್ತಾನೆ. ಅವನ ಬಗ್ಗೆ ನಿನ್ನ ಅಭಿಪ್ರಾಯವೇನಿದೇಂತ್ಲಾದ್ರೂ ತಿಳಿಸು. ಎಷ್ಟರಮಟ್ಟಿಗೆ ನನ್ನ ಮಾತು ಅವಳ ಕಿವಿಗೆ ಬಿತ್ತೊ ಏನೋ ಗೊತ್ತಿಲ್ಲ. ಆದರೆ ಒಂದು ನಿಟ್ಟುಸಿರು ಹೊರಡಿಸಿ ಹಾಗೇ ಸೋಫಾದಲ್ಲಿ ಹಿಂದಕ್ಕೆ ಒರಗಿದಳು.

ಕ್ಷಣ ಕಾಲ ನಾನು ಅವಳನ್ನು disturb ಮಾಡಬಾರ್ದು ಅಂದುಕೊಂಡೆ... ಒಂದು ಎರಡು... ಮೂರು ನಿಮಿಷಗಳು ಕಳೆದಿರಬಹುದು. ಅವಳೇ ಬಾಯಿಬಿಟ್ಟಳು. ಕತೆ ಕೇಳುವುದಕ್ಕೆ ನಾನೂ ಸಿದ್ಧವಾಗಿ ಕುಳಿತೆ.

'ನೋಡೇ, ಮದುವೆಯ ಮಧುರ ರಾತ್ರಿ ನೂರಾರು ಆಸೆಗಳನ್ನು ಅದುಮಿಟ್ಟುಕೊಂಡು ಆ ಕ್ಷಣಗಳನ್ನು ಎದುರು ನೋಡುತ್ತಿದ್ದೆ, ನಮ್ಮ ಪಾಡಿಗೆ ನಮ್ಮನ್ನು ಬಿಟ್ಟು ಹೋದರು. ಯಾರೂ ಇಲ್ಲದಾದಾಗ ಒಂದು ಸಲ ಅರ್ಧ ಮಾತ್ರ ತಲೆಯೆತ್ತಿ ಅವರತ್ತ ನೋಡಿದೆ. ಅವರು ಮೇಲೆ ನೋಡುತ್ತಾ ತೊಲೆಗಳನ್ನು ಎಣಿಸುತ್ತಿರುವಂತೆ ಕಂಡರು. ನಾನು ಅವರ ಬಳಿ ಇರುವುದರ ಪರಿವೆಯೂ ಇಲ್ಲದೆ ಅನ್ಯ ಮನಸ್ಕರಾಗಿ ಕೂತಿದ್ದಾರೆ. ಅವರನ್ನು ಆಕರ್ಷಿಸಲು ಕೆಮ್ಮಿದೆ. ಆದರೆ ಅವರ ದೃಷ್ಟಿ ನನ್ನತ್ತ ಬಿದ್ದಿತೋ ಇಲ್ಲವೋ ರಾಹು ಬಡಿದ ಮುಖದಂತಾಗಿ ಬೆವರತೊಡಗಿದರು. ಏನಾಯಿತೋ ಏನೋ ಹತ್ತಿರ ಸರಿದರೆ ಸರನೆ ಎದ್ದು ನಿಂತು ಅಸ್ಪೃಶ್ಯರಿಂದ ದೂರ ಸರಿಯುವ ಹಾಗೆ ಸರಿದು ನಿಂತರು. ನನ್ನ ಸ್ಥಿತಿಯನ್ನು ನೀನೇ ಊಹಿಸಿಕೋ. ಕಾರಣ ತಿಳಿಯದೆ ಒಂದು ಕಡೆ ಆಶ್ಚರ್ಯ ದಿಗ್ಭ್ರಮೆಯಾದರೆ ಮತ್ತೊಂದೆಡೆ ತಡೆಯಲಾರದಷ್ಟು ಅಳು ಉಕ್ಕಿ ಬಂತು. ನನ್ನ ಸ್ಥಿತಿಯನ್ನು ನೋಡಿ ಅವರಿಗೆ ಮರುಕವೆನಿಸಿರಬೇಕು. ಒಂದು ಹೆಜ್ಜೆ ಮುಂದೆ ಬಂದರೇ ಹೊರತಾಗಿ ನನ್ನನ್ನು ಮುಟ್ಟಲಿಲ್ಲ. ಅಷ್ಟೂ ಆದರಿಸಲಿಲ್ಲ. ಅಳಬೇಡವೆಂದು ಮೆಲ್ಲನೆ ಉಸುರಿದರು. ಕಣ್ಣೊರೆಸಿಕೊಳ್ಳಲು ಕರವಸ್ತ್ರ ನೀಡಿದರು. ಅಷ್ಟೇ [illegible] ಹಾಸಿಗೆ [illegible] ಕಂಬಳಿ ಎಳೆದುಕೊಂಡು ದೂರದ ಮೂಲೆಯೊಂದರಲ್ಲಿ [illegible] ರಾತ್ರಿ ಕಳೆದರು. ಅತ್ತು ಅತ್ತು ಕಣ್ಣು ಬಾತಿತ್ತು.

ಅವತ್ತಿನಿಂದ ಇವತ್ತಿನವರೆಗೂ ಅವರ ಸ್ಪರ್ಶ ಸುಖವನ್ನು ಅನುಭವಿಸಿಯೇ ಇಲ್ಲ. ಅವರ ದೌರ್ಬಲ್ಯ ಏನೂಂತ ಮನೆಯವರಿಗೂ ತಿಳಿಯದು. ನನ್ನನ್ನು ಕಂಡರೆ ಅಪರಾಧಿಯಂತೆ ದೂರ ಸರಿಯುತ್ತಾರೆ. ಮದುವೆಯಾದ ಹೊಸದರಲ್ಲಿ ದಿನಾ ದೇವರಲ್ಲಿ ಮೊರೆಯಿಟ್ಟುಕೊಂಡು ಅಳುತ್ತಿದ್ದೆ. ಆದರೆ ಈಗೀಗ ಹೊಂದಿಕೊಂಡು ಬಿಟ್ಟಿದ್ದೇನೆ. ಅವರಿಗೂ ಹೆಣ್ಣಿಗೂ ಬದ್ಧ ವೈರ. ಹೆಣ್ಣಿನ ಬಗ್ಗೆ ಕನಿಕರವಿದೆಯೇ ಹೊರತಾಗಿ ಪ್ರೀತಿ, ಪ್ರೇಮಗಳಿಲ್ಲ. ಅವರ ಗೆಳೆಯ 'ನಾಗರಾಜ' ಅಂತ ಇದ್ದ. ಅವನನ್ನು ಕಂಡರೆ ಅವನ ಹಿಂದೆ ಬಿದ್ದು ಸಾಯ್ತಿದ್ರು. ಎಷ್ಟೋ ರಾತ್ರಿಗಳು ಇಬ್ಬರೂ ಎಲ್ಲಿಗೋ ಹೊರಟು ಕಳೆದು ಬರುತ್ತಿದ್ದರು. ಕಣ್ಣೆದುರಿಗೆ ಅವರಿಲ್ಲದಾದ ರಾತ್ರಿಗಳನ್ನು ನೆಮ್ಮದಿಯಿಂದ ಕಳೆಯುತ್ತಿದ್ದೆ. ಅವರು ಬಂದರೆಂದರೆ ನನಗೆ ವಿಪರೀತ ಅಸಹ್ಯವುಂಟಾಗುತ್ತೆ. ಅತ್ತೆ, ಮಾವ, ಅಮ್ಮ, ಅಪ್ಪ ಎಲ್ಲರಿಗೂ ನನಗೆ ಮಕ್ಕಳಾಗಲಿಲ್ಲ ಯಾಕೋ, ಅನ್ನೋ ಚಿಂತೆ. ಎಷ್ಟೋ ಸಲ ಬಾಯ್ಬಿಟ್ಟು ಅತ್ತೆ ಮಾವನಿಗೆ ಮಗನ ದೌರ್ಬಲ್ಯ ಹೇಳೋಣಾಂತ ಅಂದುಕೊಳ್ತೀನೆ. ಆದರೆ ಸಂಪ್ರದಾಯ ಮಾನ, ಮರ್ಯಾದೆ. ಮದುವೆಯಾಗಬೇಕಾಗಿರುವ ನಾದಿನಿಯರು, ತಂಗಿಯರು ನನ್ನ ಕಣ್ಮುಂದೆ ಸುಳಿದು ಸುಮ್ಮನಾಗುತ್ತೇನೆ. ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ಅಂದುಕೊಂಡರೂ ಧೈರ್ಯ ಬರುತ್ತಿಲ್ಲ. ನನ್ನ ಹಸಿವು ತೀರಿಲ್ಲ. ಸ್ವಾರ್ಥದ ಮೊಟ್ಟೆಯಾಗಿ ಎಲ್ಲರನ್ನು ಧಿಕ್ಕರಿಸಿ ನಿಜವಾದ ಗಂಡಸಿನ ತೋಳುಗಳಲ್ಲಿ ಸೆರೆಯಾಗಬೇಕೆಂದು ಅಂದುಕೊಳ್ಳುತ್ತೇನೆ. ಆದರೆ ಮದುವೆಯಾಗಿರುವ ನನ್ನನ್ನು ಸ್ವೀಕರಿಸುವ ಗಂಡಸರಾದರೂ ಯಾರಿದ್ದಾರೆ. ಅಥವ ಯಾರಿಗೆ ತಾನೇ ನನ್ನ ತೀರ ವೈಯಕ್ತಿಕ ಸಮಸ್ಯೆ ಅರ್ಥವಾಗಿರುತ್ತೆ?... ನೀನೇ ಹೇಳು, ನಾನು ಇಂಥ ಪರಿಸ್ಥಿತಿಯಲ್ಲಿ ಏನ್ಮಾಡಬೇಕು. ಎಲ್ಲ ಕಡೆಯಿಂದಲೂ ಬಂಧಿತಳಾದ ನಾನು ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ಸಾಯುವುದೊಂದೇ ನನಗಿರುವ ಮಾರ್ಗ. ಇಲ್ಲವೇ ಹೀಗೆಯೇ ಒದ್ದಾಡುತ್ತಾ ಎಲ್ಲರೂ ಆಡುವ ಚುಚ್ಚು ಮಾತುಗಳನ್ನು ಕೇಳುತ್ತಾ ಬಿದ್ದುಕೊಂಡಿರುವುದು ಅರೆಸತ್ತ ಹುಳುವಿನಂತೆ'- ಎಂದು ಹೇಳುತ್ತಿದ್ದಂತೆ ಬಳಬಳನೆ ಅತ್ತುಬಿಟ್ಟಳು... ಮತ್ತೆ ನನಗೆ ಒದ್ದಾಡುತ್ತಿದ್ದ ಆ ನೊಣದ ನೆನಪಾಯಿತು. ವಿಲಿ ವಿಲಿ ಒದ್ದಾಡುತ್ತಿದ್ದ ಆ ದೃಶ್ಯ. ಈಗ ಆ ದೃಶ್ಯವಲ್ಲಿ ನೊಣವಿಲ್ಲ. ರಮಾ ಇದ್ದಾಳೆ. ಅಸಹಾಯಕ ಕಣ್ಣುಗಳಿಂದ ತಪ್ಪಿಸಿಕೊಳ್ಳುವ ದಾರಿ ಯಾವುದೆಂದು ಕೇಳುತ್ತಿದ್ದಾಳೆ. ದೂರದಲ್ಲಿ ಅವಳ ಗಂಡ ನರಸತ್ತವನಂತೆ ನಿಂತು ನೋಡುತ್ತಿದ್ದಾನೆ. ಅವನ ಕಪಾಳಕ್ಕೆ ಒಡೆದುಬಿಡುವಷ್ಟು ಸಿಟ್ಟು ಬಂತು, ಮುಂಡೇದಕ್ಕೆ ತಿಳಿದಿದ್ದೂ ಹೆಂಡತಿಯಾಕೆ ಬೇಕಾಯ್ತು? ಅಂತ ಕೇಳ್ಬೇಕು ಅಂತ ಅನ್ನಿಸ್ತು. ರಮಾ... ರಮಾ... ಇಗೋ ಬಂದೆ... ನಾನು ಕೈ ನೀಡುತ್ತೇನೆ. ಕೆಸರಿನ ಗುಂಡಿಯಿಂದ ಎದ್ದು ಬಾ ಗಟ್ಟಿಯಾಗಿ ಹಿಡಿದುಕೋ ಎಂದು ಹೇಳುತ್ತಿದ್ದೆ. ಪ್ರಯತ್ನಿಸಿದಷ್ಟೂ ಕೆಸರಿನಲ್ಲಿ ಇನ್ನೂ ಹೂತುಹೋಗುತ್ತಿದ್ದಳು. ಅವಳೊಂದಿಗೇ ನನಗೂ ಅದರಲ್ಲಿಯೇ ಮುಗ್ಗರಿಸುವಂತಾಗುತ್ತಿತ್ತು. ಬೇಡ ಬೇಡ ನಾನೂ ಬಿದ್ದೇನು? ಎಂದು

ಭಯವಾಗಿ ಕೈಬಿಟ್ಟೆ. ರಮಾ ಮತ್ತಷ್ಟು ಹೂತು ಹೋಗುತ್ತಾ ಕಣ್ಣಿಗೆ ಕಾಣಿಸದಂತಾದಳು. ಅಯ್ಯೋ ರಮಾ! ಎಂದು ಕೂಗಿದೆ... ಟ್ರೇನಲ್ಲಿ ಕಾಫಿ ಕಪ್ಪುಗಳನ್ನು ಹಿಡಿದು ತಂದ ರಮಾ ನನ್ನನ್ನು ಅಲುಗಿಸಿದಾಗಲೇ ನನಗೆ ಪ್ರಜ್ಞೆ ಮರಳಿದ್ದು. ರಮಾ ಈ ಬದುಕಿನೊಂದಿಗೆ ಒಪ್ಪಂದ ಮಾಡಿಕೊಂಡಂತಿತ್ತು. ಕತೆ ಹೇಳುವಾಗಿನ ನೋವಾಗಲಿ, ಉದ್ವೇಗವಾಗಲಿ ಅವಳಲ್ಲಿ ಉಳಿದಿರಲಿಲ್ಲ. ಅವಳ ಸೌಮ್ಯತೆಯನ್ನು ಕಂಡಷ್ಟೂ ನನ್ನ ಕರುಳು ಕುದಿಯುತ್ತಿತ್ತು. ಈ ಗಂಡು ಹುಳುಗಳನ್ನೆಲ್ಲಾ ಕ್ರಿಮಿನಾಶಕ ಔಷಧಿಯಿಂದ ಕೊಲ್ಲಬೇಕೆನಿಸಿತು. ನೊಣದ ಒದ್ದಾಟ ನೋಡಿ ಖುಷಿಪಟ್ಟ ಮನಸ್ಸು ರಮಾಳ ವಿಷಯದಲ್ಲಿ ತುಂಬಾ ಮೃದುವಾಯಿತು. ಗಂಡುಗಳು ಅನುಭವಿಸುವುದನ್ನು ನೋಡಿ ನಲಿಯಬೇಕೆಂದಿದ್ದ ಮನಸ್ಸಿಗೆ ನನ್ನ ಜಾತಿಯದೇ ಒದ್ದಾಡುತ್ತಿರುವುದನ್ನು ಕಂಡಾಗ ಕಾದ ಕಬ್ಬಿಣದ ಸಲಾಕೆಯಿಂದ ಕರುಳನ್ನು 'ಚುರ್' ಎನಿಸಿದಂತಾಯಿತು.

ಅಲ್ಲಿರುವುದಕ್ಕೆ ಮನಸ್ಸು ಬರಲಿಲ್ಲ. ನನ್ನ ಮನೆಗೆ ಬರಬೇಕೆಂದು ಅವಳನ್ನು ಆಹ್ವಾನಿಸಿ ಅವಳ ಗಂಡನ ಸಂಪಾದನೆಯಿಂದ ಮಾಡಿದ ಕಾಫಿಯಾದ್ದರಿಂದ ಮುಟ್ಟುವುದಕ್ಕೇ ಅಸಹ್ಯವಾಯಿತು. ಕುಂಟು ನೆಪ ಹೇಳಿ ಓಂದಕ್ಕೆ ಕಳುಹಿಸಿಬಿಟ್ಟೆ. ಎದ್ದವಳೇ ಬೇಗ ಬೇಗನೆ ಬಸ್ ಸ್ಟಾಂಡಿನತ್ತ ನಡೆದೆ. ಹಾಗೂ ಮನೆ ಸೇರುವಷ್ಟು ಹೊತ್ತಿಗೆ ರಾತ್ರಿ ೮ ಘಂಟೆ ದಾಟಿತ್ತು. ತಿನ್ನುವುದಕ್ಕೂ ಮನಸ್ಸಿಲ್ಲದೆ ಮೈ ಚಾಚಿದೆ. ನಿದ್ದೆ ಹತ್ತಿತ್ತು.

* * *

ರಮಾಳ ವಿಷಯ ಮರೆತೇ ಹೋಯಿತು. ಸ್ವಲ್ಪ ನೆಮ್ಮದಿ ದೊರೆಯಿತು. ರಮಾಳ ಗಂಡನ ಬಗೆಗಿಂತ ರಮಾಳ ಬಗ್ಗೆಯೇ ನನಗೆ ಸಿಟ್ಟು ಬರುತ್ತಿತ್ತು. ಇಷ್ಟು ಓದಿಕೊಂಡು ಹಾಳು ನೊಣದ ಹಾಗೆ ಸಾಯ್ತಾಳಲ್ಲ, ತನ್ನ ಕಾಲ ಮೇಲೆ ತಾನು ನಿಲ್ಲುವ ಧೈರ್ಯವಿಲ್ಲವೇ ಇವಳಿಗೆ– ಎಂದು ಸಿಡಿಮಿಡಿಗೊಳ್ಳುತ್ತಿದ್ದೆನಾದರೂ ನಾನೇನೂ ಮಾಡುವಂತೆ ಇರಲಿಲ್ಲ. ಅದಕ್ಕೇ ಹಾಳಾಗಿಹೋಗಲಿ ಅಂತ ಸುಮ್ಮನೆ ಮರೆಯುವುದಕ್ಕೆ ಪ್ರಯತ್ನಿಸಿದೆ.

ರಮಾಳ ಸ್ಥಿತಿ ನನಗೂ ಬಂದರೆ?... ನಾನೇ ಪ್ರಶ್ನಿಸಿಕೊಂಡಾಗ ಅಷ್ಟು ಸುಲಭವಾಗಿ ಹೊಳೆಯಲಿಲ್ಲ. ರಮಾಳ ಗಂಡನ ಹಾಗೇ ಎಲ್ಲರೂ ಇರುವುದಿಲ್ಲ. ನಾನೂ ಯಾಕೆ ಪ್ರಯತ್ನಿಸಬಾರದು! ಎಂದುಕೊಂಡೆ. ನನಗೆ ವಯಸ್ಸಾಗಿದ್ದರೂ ನನ್ನ ಕಾಮನೆಗಳು ಪೂರ್ಣವಾಗಿ ಸತ್ತಿರಲಿಲ್ಲ. ಒಮ್ಮೊಮ್ಮೆ ಮದುವೆಯಾಗುವವರೆಗೆ ಮುದುಕಿಯಾಗುತ್ತೇನೇನೋ ಅನ್ನಿಸುತ್ತಿತ್ತು. ಆದರೆ ಈ ವಯಸ್ಸಿನಲ್ಲಿ ಯಾರನ್ನು ಬಲೆಗೆ ಕೆಡವಲಿ? ನನಗೆ ತಿಳಿದವರೆಲ್ಲ [illegible] ಮದುವೆಯಾಗಿದೆ. ಅದರೇನಂತೆ ಪ್ರಯತ್ನಿಸಿ ನೋಡೋಣವೆಂದುಕೊಂಡೆ.

ಒಮ್ಮೆ ಊರ ಪಟೇಲ ಪಟ್ಟಣಕ್ಕೆ ಬಂದಾಗ ನನ್ನನ್ನು ಕಂಡು, ಪಾಪ ಅಪ್ಪ ಅಮ್ಮ ಇಬ್ಬರನ್ನೂ ಕಳೆದುಕೊಂಡು ಒಬ್ಬಳೇ ಹ್ಯಾಗಿರ್ತೀಯ ಮಗು?– ಎಂದೇನೋ ವಿಚಾರಿಸಿದ್ದರು. ಆದರೆ ಅವರ ಧ್ವನಿಯಲ್ಲಿ ವಾತ್ಸಲ್ಯದ ವಾಸನೆಯಿರಲಿಲ್ಲ. ಮುಂದುವರಿಸಿದ.

'ಹಳ್ಳೀ ಕಡೆ ಬಂದಾಗ ಒಂದ್ಸಲ ಮನೇತಂಕ ಬಂದುಹೋಗು. ನೀನು ಓದಿರೋವ್ಳು, ನಮ್ಮಂಥಾ ಹಳ್ಳೀ ಮುದಕ್ಕರ್ನ ಮರೀಬೇಡ'... ಎಂದು ಹೇಳುತ್ತಾ, ಏನನ್ನೋ ನೆನಪು ಮಾಡಿಕೊಂಡು, ಅಂದ್ಹಾಗೆ, ನನ್ನ ಮೂರನೇ ಹೆಂಡ್ರು ತೀರಿಹೋದ್ಲು. ಮಕ್ಕಳಿಗೆಲ್ಲ ಮದುವೆ ಆಗೇದ. ಮನೆಯಾಗ ಒಂಟಿ ಜೀವನ ಬೇಸರ ಬರ್ತಾದ. ಏನ್ಮಾಡ್ಲೇಕೋ ಅಂದ– ಇಷ್ಟೆಲ್ಲಾ ನನ್ಹತ್ರ ಹೇಳೋದ್ರಲ್ಲಿ ಏನೂ ಪ್ರಯೋಜನವಿಲ್ಲವೆಂದುಕೊಂಡೆ. ಆದರೂ ನಿರಾಸೆಗೊಳಿಸಬಾರದೂಂತ, ಅಯ್ಯೋ ಪಾಪ! ತುಂಬಾ ದಾರುಣವಾಗೋಯ್ತಲ್ಲ, ನಿಮ್ಮ ಜೀವನ ಪಟೇಲರೇ?– ಎಂದು ಪ್ರತಿಕ್ರಿಯೆ ತೋರಿಸಿದ್ದೆ.

ಯಾರಿಲ್ಲದಿದ್ದರೂ ಒಮ್ಮೆ ಊರ ಕಡೆ ಹೊರಟು ಬರೋಣವೆನಿಸಿತು. ಆದರೆ ಪಟೇಲರ ಮನೆಗೆ ಹೋಗಬೇಕೆಂದರೆ ಧೈರ್ಯ ಸಾಲದು ಅನ್ನಿಸಿತು. ಪಟೇಲರು ಒಬ್ಬರೇ ಮನೆಯಲ್ಲಿದ್ದರೆ?– ಬಯಸಿದರೂ ಹೆದರಿಕೆಯಾಯಿತು. ಪಟೇಲರು ಸಾಮಾನ್ಯರಲ್ಲ. ಹಳ್ಳಿಯ ಹೆಣ್ಮಕ್ಕಳು ಪಟೇಲರ ನೆರಳು ಕಂಡರೆ ಹೆದರುತ್ತಿದ್ದರು. ಅವರ ಕಣ್ಣು ಬಿದ್ದ ಹೆಣ್ಣು ಯಾವುದೂ ಉಳಿಯುವುದಿಲ್ಲ. ಅದಕ್ಕೇ ಇರ್ಬೇಕು ಅಮ್ಮ ಅಪ್ಪ ವಯಸ್ಸಿಗೆ ಬಂದ ಹುಡುಗಿಯಾದರೂ ಪಟ್ಟಣದಲ್ಲಿ ಓದುವುದಕ್ಕೆ ಕಳುಹಿಸಿದ್ದು! ಅಂಥಾದ್ದರಲ್ಲಿ ನಾನು ಈಗೇನಾದರೂ'ಹೋದರೆ–ಅದೇ ಥರದ ನೊಣವಾಗುತ್ತೇನೇನೋ. ಆ ನೊಣದ ಒದ್ದಾಟದ ದೃಶ್ಯ ಕಣ್ಮುಂದೆ ಬಂದರೇನೇ ಈಗ ಭಯವಾಗುತ್ತಿತ್ತು. ನೊಣ ಸತ್ತರೆ ನೋವಿಲ್ಲ ನಾನೇ ನೊಣವಾದರೆ??–ರೆ? ಎಂದು ಪ್ರಶ್ನಿಸಿಕೊಳ್ಳುತ್ತಲೇ ಇದ್ದೆ.

ಒಂದು ವೇಳೆ ಧೈರ್ಯ ಮಾಡಿ ಹೋದರೂ, ಸುತ್ತಲಿನ ಜನ ಏನೆಂದುಕೊಂಡಾರು? ಜನದ ಭಯವನ್ನು ಹೇಗೋ ತಳ್ಳಿ ಹಾ ಕಿದೆ. ಅನುಭವಕ್ಕಾಗಿ ತೆರಬೇಕಾಗಿ ಬರುವ ಬೆಲೆಯ ಪರಿವೆಯಿಲ್ಲದೆ ಒಂದು ದಿನ ಹೊರಟೇ ಹೊರಟೆ.

* * *

ಪಟೇಲರಿಗೆ ಸಂತೋಷವೋ ಸಂತೋಷ. ಆಳು ಮಾದನ ಕೈಯಲ್ಲಿ ಎಳನೀರು ತರಿಸಿಕೊಟ್ಟರು. ಮಾದ ಒಂದು ತರದ ಭೀತಿಯ ಕಣ್ಣುಗಳಿಂದ ನನ್ನತ್ತ ನೋಡಿ ಕೇಳಿದ. "ಅಮ್ಮಾವ್ರೆ ನೀವೊಬ್ರೆ ಬಂದ್ರಾ? ನಿಮ್ಮ ಕೂಡ ಬೇರೆ ಯಾರಾದ್ರೂ ಬಂದಿದ್ರೆ ಚೆನ್ನಾಗಿತ್ತೇನೊ!"

ನನಗೆ ಯಾಕೇಂತ ಕೇಳಬೇಕೆನಿಸಿತು. ಇವರ ಹತ್ರ ಎಲ್ಲ ನನಗೇನು ಮಾತು ಎಂದು 'ಹೌದು ಮಾದ ನನಗೇನೂ ಭಯವಿಲ್ಲ. ಅದಕ್ಕೇ ನಾನೊಬ್ಬಳೇ ಬಂದೆ! ನೀನ್ಯಾಕೆ ಹೀಗೆ ಹೆದರಿದ ಹಾಗಿದ್ದಿ?' ಅಂತ ಪ್ರಶ್ನಿಸಿದ್ದಕ್ಕೆ ಬೆಪ್ಪಾಗಿ ಮಾದ ಸುಮ್ಮನೆ. ಪಟೇಲರು ಒಪ್ಪಿಸಿದ ಬೇರೊಂದು ಕೆಲಸದ ಮೇಲೆ ಹೊರಟು ಬಿಟ್ಟ.

ಪಟೇಲರು ಈಗ ತಾರಸಿ ಮನೆ ಕಟ್ಟಿಸಿದ್ದರು. ಮನೆ ನೋಡಲು ಆಹ್ವಾನಿಸಿದರು. ನಿರ್ಭಯವಾಗಿ ಹೊರಟೆ. ಸುತ್ತ ಎಲ್ಲ ಕೋಣೆಗಳನ್ನೂ ತೋರಿಸಿದರು. ಒಂದು ನಿಮಿಷ ಬರುತ್ತೇನೆಂದು ಹೇಳಿ ಹೊರಟು ಐದು ನಿಮಿಷಗಳ ನಂತರ ನಾನಿದ್ದೆಡೆಗೆ ಬಂದು ಹಿಂದಿನಿಂದ ನನ್ನನ್ನು ಬಳಸಿದರು. ಬಿಗಿಯಾಗಿ ಹಿಡಿದರು. ಐವತ್ತರ ಗಡಿ ಮುಟ್ಟುತ್ತಿದ್ದರೂ ಕೈಯಲ್ಲಿ ಪೈಲ್ವಾನ್ ಬಲ ಇದ್ದ ಹಾಗೆ ಇತ್ತು. ಭಯವಾಯಿತು. ತಲೆ ತಿರುಗಿಸಿ ಮುಖದ ಮೇಲೆ ಹೊಡೆಯಲು ಪ್ರಯತ್ನಿಸಿದೆ. ಆದರೆ ಆ ಬಿಗಿಯಾದ ಬಂಧನದಲ್ಲಿ ಸಿಲುಕಿದ ನನಗೆ ತಲೆ ತಿರುಗಿಸಲು ಆಗಲಿಲ್ಲ. ಒದ್ದಾಡಿದೆ. ಕಚ್ಚಲು ಪ್ರಯತ್ನಿಸಿದೆ. ಯಾವುದಕ್ಕೂ ಆಸ್ಪದವಿಲ್ಲದಂತೆ ಬಿಗಿದು ಹಿಡಿದಿದ್ದರು. ಕೂಗಲೂ ಆಗದಂತೆ ರುಮಾಲನ್ನು ಬಾಯಿಗೆ ತುರುಕಿದರು. ವಿಲಿ ವಿಲಿ ಒದ್ದಾಡಿದೆ. ನೊಣದ ನೆನಪಾಯಿತು. ಬರಬರುತ್ತಾ ನಾನೇ ನೊಣವಾದೆ, ನೊಣವಾದೆ... ಒದ್ದಾಡಿ ಒದ್ದಾಡಿ ತಣ್ಣಗಾದೆ.

* * *

ಮತ್ತೆ ಮರಳಲಾರೆ

ಬೆಳಗಿನ ಜಾವ ನಾಲ್ಕು ಗಂಟೆಯಿರಬಹುದು. ದೂರದಲ್ಲಿ ಆಂಬ್ಯುಲೆನ್ಸ್ ವ್ಯಾನಿನ ಗಂಟೆ ಶಬ್ದ. ಟ್ರಾನ್ಸಲ್ಯೂಸೆಂಟ್ ಕತ್ತಲು ಅಸ್ಪಷ್ಟವಾಗಿ ಕಾಗೆಯ 'ಕಾಕಾ' ಧ್ವನಿ. ಪಕ್ಕದ ಕೋಣೆಯೊಳಗಿಂದ ಗಂಡಸು ವ್ಯಕ್ತಿಯ ನರಳಾಟದ ಧ್ವನಿ. ಆ ಮೌನ ಮುಂಜಾನೆಯ ಎದೆ ಸೀಳಿ ಕೇಳಿ ಬರುತ್ತಿದೆ. ಮಧ್ಯೆ ಮಧ್ಯೆ ನರಜೀವಿಗಳ ಅಸ್ತಿತ್ವದ ನೆನಪು ತರುವುದಕ್ಕೆಂಬಂತೆ ಗಸ್ತು ತಿರುಗುತ್ತಿರುವ ಘೂರ್ಖಾನ ಬೂಟು ಕಾಲಿನ ಸಪ್ಪಳ ಕೇಳಿ ಬರುತ್ತಿವೆ. ನಿದ್ದೆ ಹತ್ತಿದ್ದ ಸುನೀತ ಹಾಸಿಗೆಯ ಮೇಲೆ ಹೊರಳಾಡುತ್ತಿದ್ದವಳು ಏನೇನೋ ನೆನಸಿಕೊಂಡವಳಂತೆ ಆತುರಾತುರವಾಗಿ ಎದ್ದು ಎದುರಿಗೇ ಗೋಡೆಗಿದ್ದ ವಾಷ್ ಬೇಸಿನ್‌ನಲ್ಲಿ ಬಾಯಿ ಮುಕ್ಕಳಿಸಿ ಮುಖ ಒರೆಸಿಕೊಂಡು, ಒಳಕೋಣೆಯ ಪೆಟ್ಟಿಗೆಯಲ್ಲಿದ್ದ ವೀಣೆಯನ್ನು ಹೊರ ತೆಗೆದು ಶೃತಿ ಮಾಡತೊಡಗಿದಳು. ಆ ಪ್ರಶಾಂತ ವಾತಾವರಣದಿಂದ ಸ್ಫೂರ್ತಿಗೊಂಡ ಅವಳ ಬೆರಳುಗಳು ವೀಣೆಯ ತಂತಿಗಳ ಮೇಲೆ ಅನಾಯಾಸವಾಗಿ ನಡೆಯತೊಡಗಿ ಮಧುರ ಭಾವ ತರಂಗಗಳು ತೇಲಿ ತೇಲಿ ತನ್ಮಯತೆಯಲ್ಲಿ ಅವಳ ಮನಸ್ಸನ್ನು ಮುಳುಗಿಸಿಬಿಟ್ಟಿತು.

ಉದಯರಾಗದಿಂದ ಆರಂಭವಾದುದು ಬರಬರುತ್ತಾ ಬಿರುಸಾಗತೊಡಗಿತ್ತು. ಮೂಕ ಮನಸ್ಸಿನ ಉದ್ವಿಗ್ನತೆ, ಆವೇಶ, ಉನ್ಮತ್ತತೆ, ನಾದ ಮಾಧ್ಯಮದಲ್ಲಿ ಹೊರಗೆಡಹಲು ಮೊದಲಿಟ್ಟವು. ಪರವಶತೆಯ ಸೆರೆಗೊಳಗಾದ ಅವಳಿಗೆ ಹೊರ ಜಗತ್ತಿನ ಅರಿವಿದ್ದಂತೆ ಅನಿಸಲಿಲ್ಲ.

'ಸುನೀತ'... 'ಸುನೀತ'... ಎಂದು ಅಪ್ಪ ಕೂಗಿದರೂ ಪರವಶತೆಯಲ್ಲಿ ಅದು ಕಿವಿಗೆ ಬೀಳಲಿಲ್ಲ. ಕಷ್ಟದಿಂದ ಅಪ್ಪನೇ ಎದ್ದು ಬರುತ್ತಾ ಹೊಸ್ತಿಲು ಎಡವಿ, ತೂಕ ತಪ್ಪಿ, 'ದೊಪ್ಪೆಂದು' ಬಿದ್ದ ಸದ್ದಾದಾಗಲೇ ಅವಳಿಗೆ ಪರವಶತೆಯ ಮಂತ್ರ ಬಿಟ್ಟಿದ್ದು. ತಡವರಿಸುತ್ತಾ ಏಳುವ ಪ್ರಯತ್ನದಲ್ಲಿದ್ದ ಅಪ್ಪನ ಹತ್ತಿರಕ್ಕೆ ಓಡಿ ಹೆಗಲುಕೊಟ್ಟು ಎಬ್ಬಿಸಿ ಮತ್ತೆ ಅವನ ಹಾಸಿಗೆಯತ್ತ ನಡೆಸಿಕೊಂಡು ಹೊರಟಳು.

ಹೇಳದೆ ಕೇಳದೆ ಎದ್ದು ಬಂದದ್ದು ಕೆಡುಕೆನಿಸಿ ಸ್ವಲ್ಪ ಸಿಟ್ಟು ಮಾಡಿಕೊಂಡು ಅಪ್ಪನನ್ನು, 'ನೀನು ಯಾಕೆ ಎದ್ದು ಬಂದೆಯಪ್ಪಾ ಎಷ್ಟು ಸಲ ಹೇಳಿದರೂ ನೀನು ಹೀಗೇ'– ಎಂದು ದೂರುವ ಧ್ವನಿಯಿಂದ ಕೇಳಿದಳು. "ಇಲ್ಲಮ್ಮ ನಾನು ಮೂರು ನಾಲ್ಕು ಸಲ ಕೂಗಿದೆ. ಆದರೆ ನಿನಗೆ ಸರಿಯಾಗಿ ಕೇಳಿಸಲಿಲ್ಲ'– ಸ್ಪಷ್ಟಪಡಿಸುವವನಂತೆ ಹೇಳಿದ.

"ಇನ್ನೊಂದು ಸಲ ಹೀಗೆ ಎದ್ದೇಳ ಬೇಡಪ್ಪ, ಏನಾದರು ಬೇಕಿದ್ದರೆ ನನ್ನನ್ನೇ ಕರಿ. ನೀನಾಗಿ ಯಾವ ಸಾಹಸವನ್ನೂ ಮಾಡಬೇಡ"– ಮೃದುವಾಗಿ ಹೇಳಿದಳು.

"ಸುನೀತ. ಇವತ್ತು ನನಗೆ ಕನಸು ಬಿತ್ತು, ರಾಜು ಬಂದಿದ್ದಾನಂತೆ. ನನ್ನನ್ನು ನೋಡಿ, ತುಂಬಾ ಬೇಜಾರು ಮಾಡಿಕೊಂಡು, 'ಅಪ್ಪ ಇಷ್ಟು ದಿವಸ, ನಿನ್ನನ್ನು ನಾನು ನೋಡಿಕೊಳ್ಳಲಿಲ್ಲ. ಸುನೀ ಜವಾಬ್ದಾರೀನೂ ತಪ್ಪಿಸಿಕೊಂಡು ತಲೆ ಮರೆಸಿಕೊಂಡಿದ್ದೆ. ನನಗೀ ನನ್ನ ವರ್ತನೆ ತೀರಾ ಕ್ರೂರ ಅನ್ನಿಸಿಬಿಟ್ಟಿದೆ. ಇನ್ನೇನೂ ನೀನು ಯೋಚ್ನೆ ಇಟ್ಕೊಳ್ಳಬೇಡಾಂತ'– ನನಗೆ ಸಮಾಧಾನ ಹೇಳ್ತಿದ್ದ."

ಅಪ್ಪನ ಆಸೆ ತುಂಬಿದ ಮಾತನ್ನು ಕೇಳಿ ಸುಮ್ಮನೆ, ವ್ಯಂಗ್ಯವಾಗಿ 'ಹೂಂ'. ಎಂದಳು, ಆಸೆ, ಭರವಸೆಗಳನ್ನು ತುಂಬಿಕೊಂಡು ಉಸಿರಾಡುತ್ತಿದ್ದ ಅಪ್ಪನ ಮನಸ್ಸನ್ನು ಛಿದ್ರಗೊಳಿಸಲು ಇಷ್ಟವಾಗಲಿಲ್ಲ, ಆದಕ್ಕೇ ಸುನೀತಳು ಕೇಳಿಯೂ ಕೇಳದಂತೆ ವರ್ತಿಸಿದಳು.

ಶರೀರ ಜೀರ್ಣವಾಗಿದ್ದರೂ, ಪಾತಾಳಗುಹೆಯ ಮಣಿಗಳಂತಿರುವ ಅಪ್ಪನ ಕಣ್ಣುಗಳ ದೃಷ್ಟಿಯಿಂದ ಅವಳ ಅನ್ಯಮನಸ್ಕತೆ ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ, ಸುನೀತೆಯ ಅಪನಂಬಿಕೆಯ ಮನೋಭಾವ ಅಪ್ಪನ ಮನಸ್ಸಿಗೆ ನೋವುಂಟುಮಾಡಿತು.

"ಯಾಕೆ ಸುನೀತ. ನನ್ನ ಮಾತಿನಲ್ಲಿ. ನಂಬಿಕೆಯಲ್ಲಿ ನಿನಗೆ ವಿಶ್ವಾಸವಿಲ್ಲವೇ" ಎಂದು ನೊಂದ ಧ್ವನಿಯಲ್ಲಿ ಪ್ರಶ್ನಿಸಿದ.

ಇದೆ, ಇಲ್ಲ ಎಂದು ಸ್ಪಷ್ಟವಾಗಿ ಹೇಳುವುದು ಹೇಗೆ? ಅಪ್ಪನ ದೃಷ್ಟಿಯಲ್ಲಿ. ನಂಬಿಕೆ. ಭರವಸೆಗಳೇ ಬದುಕನ್ನು ಸಹನೀಯವಾಗುವಂತೆ ಮಾಡುತ್ತವೆ. ಅದೊಂದೂ ಇಲ್ಲವಲ್ಲಿ ಪಕ್ಷದ ಬದುಕುವುದು ಭಯಂಕರವೆನಿಸುತ್ತದೆ. ಬಾಳಿಗೆ ಒಂದು ನಂಬಿಕೆ. ಆಸೆ ಇವುಗಳ ಆಧಾರ ಬೇಕು. ಅಸಾಧ್ಯವೆಲ್ಲವೂ ಸಾಧ್ಯವೆಂಬ ಬಲವಾದ ನಂಬಿಕೆಗೆ ಜೋತುಬಿದ್ದರೆ ಬಾಳು ಸಹ್ಯ. ಆದರೆ ಸುನೀತಳಿಗೆ ಆಸೆ. ಭರವಸೆಗಳಲ್ಲಿ ವಿಶ್ವಾಸವಿಲ್ಲ. ಅವಳದು ನಿರಾಶಾವಾದ. ಆಶಾವಾದಕ್ಕೆ ಅಂಟುಕೊಂಡಿದ್ದರಿಂದಲೇ ಅಪ್ಪನಿಗೆ ಇಷ್ಟು ವಯಸ್ಸಾದರೂ. ಹೊಡೆತಗಳು ಬಿರುಸಾದರೂ ಬದುಕಿದ್ದಾರೆ. ಆದರೆ 'ನಿರಾಶಾವಾದಿ' ಸುನೀತಳಿಗೆ ಬದುಕೆಂದರೇನೇ ಭಯಂಕರ ಸ್ವಪ್ನವೆನಿಸುತ್ತದೆ. ದೇವರು. ಪಾಪ. ಪುಣ್ಯ, ಇಂತಹ ಅಮೂರ್ತ ಶಬ್ದಗಳಿಗೆ ಏನಾದರೂ ಅರ್ಥವಿದ್ದ ಕರ್ಮ ಸಿದ್ಧಾಂತ-

ನಿಜವಾದರೆ, ಪುಣ್ಯ ಮಾಡಿದರೆ ಮನುಷ್ಯ ಜನ್ಮ ಎಂಬ ಸಿದ್ಧಾಂತಕ್ಕೆ ವಿರೋಧವಾಗಿ ಪಾಪ ಮಾಡಿದರೆ ಮನುಷ್ಯ ಜನ್ಮ ಬರುವುದು ಎಂದು ನಂಬಿದ್ದಳು.

ಬಂಧುತ್ವ, ರಕ್ತ ಸಂಬಂಧ ಅನ್ನುವುದೆಲ್ಲ ಬರಿ ಸುಳ್ಳು. ಮಾಡುವುದಕ್ಕೆ ಕೆಲಸವಿಲ್ಲದೆ ಇಂತಹ ಅರ್ಥಹೀನ ಪದಗಳ ಕೋಶವನ್ನು ಸೃಷ್ಟಿ ಮಾಡಿರುವುದು ಎಂದೇ ತಿಳಿದಿದ್ದಳು. ಸ್ವಾರ್ಥದ ಸಮಸ್ಯೆಗೆ ಪರಿಹಾರ 'ಕರುಳ ಕೊರಳಿನ ಕೊಲೆ' ಇದಕ್ಕೆಲ್ಲಾ ಒಂದು ಅರ್ಥವಿದೆ ಎಂದು ಭಾವಿಸಿ ಬೆಲೆ ಕೊಡಲು ಹೊರಟರೆ ವೈಯಕ್ತಿಕವಾದ ಸುಖಕ್ಕೆ 'ತಿಲಾಂಜಲಿ' ಕೊಡಬೇಕಾದ್ದೆ!

ಮೊದಲಿನಿಂದಲೂ ಇಂತಹ ಕ್ರಾಂತಿವಿಚಾರಗಳಿಗೆ ನೆಲೆ ಬೆಲೆ ಕೊಟ್ಟ ಇವಳ ಅಸಹಾಯಕ, ರೋಗಪೀಡಿತ ಅಪ್ಪನನ್ನು ಹತ್ತಿರ ಇಟ್ಟುಕೊಂಡು ಪೋಷಿಸಿ ಆದರಿಸುತ್ತಿರುವುದೇ ಬಿಡಿಸಲಾಗದ ಒಗಟು. ಯಾರಾದರೂ ಈ ವಿಷಯವಾಗಿ ಕೇಳಿದರೆ, ಮಾತನ್ನೇ ತೇಲಿಸಿಬಿಡುತ್ತಿದ್ದಳು. ಅವಳಿಗೇ ಈ ವಿಷಯವಾಗಿ ಏನೂ ಸ್ಪಷ್ಟವಿರಲಿಲ್ಲ. 'ತಂದೆ' ಎನ್ನುವ ಬಂಧುತ್ವಕ್ಕೋ, ಇಲ್ಲ ಅರಿವಿಲ್ಲದ ಆಂತರ್ಯದ ಸೆಳೆತಕ್ಕೋ... ಒಂದೂ ತಿಳಿಯುತ್ತಿರಲಿಲ್ಲ.

'ಮಕ್ಕಳು' ಎನ್ನುವ ಒಂದು ಕಾರಣಕ್ಕೆ 'ಅಪ್ಪ' ಅಣ್ಣನ ಕೃತಘ್ನತೆಯನ್ನು ಮರೆಯಬಹುದು ಮತ್ತೆ ಬಳಿಗೆ ಕರೆದುಕೊಳ್ಳಲೂಬಹುದು. ಆದರೆ ತನಗೇನು? 'ತಂಗಿ' ಅನ್ನೋ ಸೆಳೆತ ಅವನಿಗಿಲ್ಲದ ಮೇಲೆ, ತಾನು ಮಾತ್ರ ಅವನ ವಿಚಾರವಾಗಿ ತಲೆಕೆಡಿಸಿಕೊಳ್ಳಬೇಕಾದ ಅವಶ್ಯಕತೆಯಿಲ್ಲ- ಎಂದೇ ಸಾಧಿಸುತ್ತಿದ್ದಳು...

"ಅಮ್ಮ" ಇದ್ದಿದ್ದರೆ ಹೀಗೆ ಅವರೆಲ್ಲಾ ದಿಕ್ಕಾಪಾಲಾಗಿ ಹೋಗಬೇಕಾದ ಪರಿಸ್ಥಿತಿ ಬರುತ್ತಿರಲಿಲ್ಲ. ಅಮ್ಮನಿಗೆ ಬ್ರೆಸ್ಟ್ ಕ್ಯಾನ್ಸರ್. ಬದುಕುವುದು ಸಾಧ್ಯವಿಲ್ಲವೆನ್ನುವುದು ಎಲ್ಲರಿಗೂ ತಿಳಿದದ್ದೆ. ಅಪ್ಪನಿಗೊಬ್ಬರಿಗೇ ಅಮ್ಮನ ವಿಷಯದಿಂದ ತೀರಾ ನೋವಾಗಿದ್ದು. ಮಕ್ಕಳು ವಯಸ್ಸಿಗೆ ಬಂದ ಮೇಲೆ ಅವರನ್ನು ನೋಡಿಕೊಳ್ಳುತ್ತಾರೆ ಅನ್ನುವ ಭ್ರಮೆ ಅವರಿಗೆ ಇದ್ದಿರಲಿಲ್ಲ. "ಗಂಡ ಹೆಂಡತಿ ಅವಿಭಾಜ್ಯ ಅಂಕಿಗಳಿದ್ದ ಹಾಗೆ" ಎಂದು ಭಾಷಿಸಿದ್ದ "ಅಪ್ಪ"ನಿಗೆ ಅಮ್ಮನ ಖಾಯಿಲೆ ಏನೆಂದು ತಿಳಿದಂದಿನಿಂದಲೇ "ಒಂಟಿತನ"ದ ಭಯ ಪೀಡಿಸತೊಡಗಿತ್ತು. ಅದಕ್ಕೇ ಅಮ್ಮನಿಗಿಂತ ಮುಂಚೆ ತಾನೇ ಸಾಯಬೇಕೆಂದು ಪಾರ್ಥಿಸುತ್ತಿದ್ದ ಅಪ್ಪನನ್ನು ಕಂಡು ವಿಚಿತ್ರವೆನಿಸುತ್ತಿತ್ತು ಸುನೀತಳಿಗೆ. ಗಡುಸಾದ "ಅಪ್ಪ"ನೇ ಹೀಗೆ ಆಲೋಚಿಸಿದರೆ ಮದುವೆಯಿಲ್ಲದ ತಮ್ಮ ಪಾಡೇನೆಂದು ಒಮ್ಮೊಮ್ಮೆ ಸುನೀತಳು ಚಿಂತಿಸುತ್ತಿದ್ದಳು. ಅಮ್ಮ ಅಪ್ಪನನ್ನು ಅವರ ಮದುವೆಯ ವಿಚಾರವಾಗಿ ಒತ್ತಾಯಿಸುತ್ತಿರುವಷ್ಟರಲ್ಲಿಯೇ ಕೊನೆಯುಸಿರೆಳೆದಳು.

ಸುನೀತ, ಸುನೀತಳ ಅಕ್ಕ ರೇಣುಗೆ ಮಾತ್ರ ಮೊದಲೆರಡು ದಿನ ಅಮ್ಮನ ಅಗಲಿಕೆಯ ನೋವು ಸ್ವಾಭಾವಿಕವಾಗಿತ್ತು. ಅವರಿಬ್ಬರ ಓದೂ ಮುಗಿದು, ಕೆಲಸ ಸಿಕ್ಕಿದುದರಿಂದ ಹೊಟ್ಟೇಪಾಡಿನ ಸಮಸ್ಯೆಯಿರಲಿಲ್ಲ. ಅಣ್ಣ ರಾಜು. "ಅಮ್ಮ"ನ ಅಗಲಿಕೆಯನ್ನು ಅಷ್ಟಾಗಿ ಹಚ್ಚಿಕೊಂಡಂತೇನೂ ಇರಲಿಲ್ಲ. ಈ ಒಂದೆರಡು ತಿಂಗಳಿಂದ ಬಹಳ ಬಿರುಸಾಗಿ ಓಡಾಡುತ್ತಿರುವ ಹಾಗೇ ಅನಿಸಿದರೂ ಯಾರೂ ಎದೆಗಾರಿಕೆಯಿಂದ ಅವನ ವಿಷಯವನ್ನು ಕೇಳುತ್ತಿರಲಿಲ್ಲ. ಆದರೆ ಅವನಾಗಿ ಒಂದು ದಿನ, "ಅಪ್ಪ"ನಿಗೆ ನಾನು "ಫಾರಿನ್"ಗೆ ಹೋಗುತ್ತಿರುವುದಾಗಿ ತಿಳಿಸಿದ. ಅಪ್ಪನೂ ಯಾಕೆ, ಏನೂ ಅಂತ ವಿಚಾರಿಸಲಿಲ್ಲ. ಬೆಳೆದವರು ಅವರವರ ಜವಾಬ್ದಾರಿ ಅವರವರಿಗೆ ಸೇರಿದ್ದು ಎಂದು ಭಾವಿಸಿದ್ದರಿಂದ ಯಾವ ವಿಷಯದಲ್ಲಿಯೂ ಪ್ರವೇಶ ಮಾಡುತ್ತಿರಲಿಲ್ಲ.

ರೇಣುಗೆ ಅಹಮದಾಬಾದಿಗೆ ಹೋಗಬೇಕಾಗಿ ಬಂತು. ಮೆಡಿಕಲ್ ಆಫೀಸರಾಗಿ ತೃಪ್ತಿಯಿಂದ ಹೊರಟು ಹೋದಳು. ಇನ್ನುಳಿದಿದ್ದವರೆಂದರೆ ಸುನೀತ, ನರಳುತ್ತಿರುವ ಅಪ್ಪ. ಪೂರ್ವಿಕರಿಂದ ಬಂದ ದೊಡ್ಡದಾದ ಆ ಹಳೆಯ ಬಂಗಲೆ. ರೇಣು ಹೋದಂದಿನಿಂದ ಸುನೀತಳಿಗೆ ಹುಚ್ಚು ಹಿಡಿದಂತಾಗಿತ್ತು. ಕೆಲಸ ಮಾಡಲು ದಿಕ್ಕು ತೋಚದಂತಾಯಿತು. ಕೆಲಸಕ್ಕೆ ಸೇರಿದರೆ ಸ್ವಲ್ಪವಾದರೂ ವಾಸಿ. ಹೇಗೋ ದಿನ ಕಳೆದು ಹೋಗುತ್ತೆ ಎಂದುಕೊಳ್ಳುತ್ತಿದ್ದಳು. "ಅಮ್ಮ"ನಿಂದ ಸುನೀತ ಸಂಗೀತದ ಅಭಿರುಚಿಯನ್ನು ಬೆಳೆಸಿಕೊಂಡಿದ್ದಳು. ಅಷ್ಟೆ ಅಲ್ಲ ಅಲ್ಪ ಸ್ವಲ್ಪ ಕಲಿತಿದ್ದನ್ನು ಈಗ ಅಭ್ಯಾಸಕ್ಕೆ ಹಚ್ಚಿ, ಹೊಸ ಹೊಸದಾಗಿ ರಾಗಸೃಷ್ಟಿಯ ಪ್ರಯೋಗಕ್ಕೆ ತೊಡಗಿದಳು. ಕ್ರಮವಾಗಿ ಯಶಸ್ಸು ಅವಳದಾಯಿತು. ಮನಸ್ಸಿನ ಒಂಟಿತನವನ್ನು ಅವ್ಯಕ್ತವೇದನೆಯನ್ನು ಮರೆಯುತ್ತಿದ್ದಳು. ಕೊನೆ ಕೊನೆಗೆ ಅದೊಂದೇ ಅವಳಿಗೆ ಆಸರೆಯೆನ್ನುವಷ್ಟು ಆತ್ಮೀಯತೆ ಬೆಳೆಯಿತು–ಅವಳಿಗೂ ಅವಳ ಸಂಗೀತಕ್ಕೂ. ಹೀಗಾಗಿ ಒಮ್ಮೊಮ್ಮೆ ಇದ್ದಕ್ಕಿದ್ದಂತೆ, ಯಾವುದೋ ಭೂತ ಹೊಕ್ಕಂತೆ ಹೊತ್ತಲ್ಲದ ಹೊತ್ತಿನಲ್ಲಿ ಎದ್ದು ವೀಣೆ ಹಿಡಿದು ಕೂಡುತ್ತಿದ್ದಳು.

ಅಪ್ಪನಿಗೆ ಅವಳ ಮೇಲೆ ಅಸಮಾಧಾನ. ಅವನು ಬಂದ ಕೂಡಲೇ ಸುನೀತಳಿಗೆ ಯಾವುದಾದರೂ ಸಂಬಂಧವನ್ನು ನೋಡಿ ಮದುವೆ ಮಾಡಬೇಕೆಂದು ಯೋಚಿಸಿದ್ದರು. "ಬೇಬಿ" ತನಗೆ ಮದುವೆ ಬೇಡವೆಂದು ಸ್ಪಷ್ಟವಾಗಿ ಹೇಳಿಬಿಟ್ಟಿದ್ದಳು. ರಾಜುವಿನ ಬಗ್ಗೆ ಸುನೀತಳಿಗೆ ಒಳ್ಳೆಯ ಭಾವನೆಯಿಲ್ಲ. ಅದೂ ಮೊನ್ನೆ ತಾನೆ ಮದುವೆಯಾಯಿತೆಂಬ ಸುದ್ದಿ ಕೇಳಿದಂದಿನಿಂದ ಗುಮುಗುಟ್ಟುತ್ತಿದ್ದಳು. "ಇದೋ ನಿನ್ನ ಮಗ ಕೆಂಪು ಕೋತಿಯನ್ನು ಮದುವೆಯಾಗಿದ್ದಾನಂತೆ" ಎಂದು ಹೇಳಬೇಕೆಂದು ನಾಲಿಗೆ ತುದಿವರೆಗೂ ಬಂದರೂ ಸುಮ್ಮನಿದ್ದಳು. ಅದಾಕ್ಕೋ ಎಷ್ಟು ಪ್ರಯತ್ನಿಸಿದರೂ "ಅಪ್ಪ"ನ ಮನಸ್ಸನ್ನು ನೋಯಿಸುವುದಕ್ಕೆ ಇಷ್ಟವಿರಲಿಲ್ಲ. ಅದಕ್ಕೇ ಅವಳು ಮೌನವಾಗಿ.

"ನೋಡಪ್ಪ, ರಾಜು ಬಂದರೆ ನನಗೂ ಸಂತೋಷವೇ" (ಸುಳ್ಳು ಹೇಳುತ್ತಿರುವುದಕ್ಕೆ ತನಗೇ ಅಸಹ್ಯವೆನಿಸಿತು) ಆದರೆ ನೀನು ಮಾತ್ರ ಇಷ್ಟಕ್ಕೆಲ್ಲಾ excite ಆಗಬಾರದು. ಮೊದಲು ಬರಲಿ, ನಿನ್ನ ಕನಸು ನಿಜವಾದರೂ ಆಗಬಹುದು. (ಅವಳಿಗೆ ಎಳ್ಳಷ್ಟೂ ನಂಬಿಕೆಯಿರಲಿಲ್ಲ) ನೀನೀಗ ಸ್ವಲ್ಪ ರೆಸ್ಟ್ ತಗೋ, ಈಗಲೇ ಹಾಲು ಕಾಸಿ ತಂದುಬಿಡುತ್ತೇನೆ" ಎಂದು ಹೇಳಿದವಳೇ ಸರಸರನೆ ಒಳನಡೆದಳು.

ಕಡ್ಡಿ ಗೀರಿ ಹೊತ್ತಿಸಲು ಭುಗಿಲೆಂದು ಹೊತ್ತಿಕೊಂಡ ಬೆಂಕಿ ಒಂದು ಕ್ಷಣ ಹಾಂಯೆನಿಸುವಂತೆ ಇವಳ ಮುಖಕ್ಕೆ ಕಾವು ಕಟಟ್ಟಿತು. Bournvita ಡಬ್ಬ ತೆಗೆದಿಟ್ಟುಕೊಂಡಳು. ಹಾಲು ಕಾಯಿಸಲು ಇಟ್ಟ ಸುನೀತಳ ಮನಸ್ಸು ಮತ್ತೆ ವಿಚಾರದ ಸುಳಿಯಲ್ಲಿ ಸಿಕ್ಕಿತು. "ನಾನು ಆಜೀವಪರ್ಯಂತ, ಹತ್ತಿಕ್ಕಲಾಗದ, ಭೇಧಿಸಲಾಗದ ಸಾವಿರ ಸುತ್ತಿನ ಕೋಟೆಯೊಳಗೆ ಬಂಧಿಯಾಗಿದ್ದೇನೆ. ನನ್ನಂತೆ ಬಂಧಿಯಾಗಿದ್ದು ತಪ್ಪಿಸಿಕೊಳ್ಳಲಾರದೆ ಅಲ್ಲಿಯೇ ಸತ್ತು ಕೊಳೆತು ನಾರುವ ಹೆಣಗಳೇ ಗಾಳಿಯಲ್ಲಿ ತೇಲುತ್ತಿರುವಂತಿದೆ. ಆದರೆ ನಾನು ಹಾಗಾಗಬಾರದು. ಹೇಗಾಗದರೂ ತಪ್ಪಿಸಿಕೊಂಡು ಹೊರಗೆ ಹೋಗಲೇಬೇಕು. ಸ್ವಚ್ಛವಾದ ಗಾಳಿ ಬೆಳಕನ್ನು ಕುಡಿಯಬೇಕು; ಆದರೆ... ಆದರೆ... ಏನದು... ಭಯಂಕರವಾಗಿದೆ... ಚಿಂತೆ ಬೆಂಕಿಯಂತೆ ಕಾಣುತ್ತಿದೆ... ನನ್ನತ್ತಲೇ ಬರುತ್ತಿದೆ ಅಯ್ಯೋ... ಸಿಕ್ಕಿಬಿದ್ದೆ... ಎಂದು ಚೀರಿ, ಕೈಯನ್ನು ಅಡ್ಡವಾಗಿಡಲು ಪ್ರಯತ್ನಿಸುವಾಗ, ಹಾಲುಕ್ಕಿ ತಣ್ಣಗಾಗಿದ್ದ ಒಲೆಯ ಮೇಲಿನ ಪಾತ್ರೆಯ ಬಿಸಿ ತಾಕಿತು, shock ಆದಂತಾಗಿ ಮತ್ತೆ ಮರಳಿತು ಅವಳ ಕಳೆದ ಪ್ರಜ್ಞೆ. "ದರಿದ್ರ ಮನಸ್ಸು"– ಎಂದು ಬೈದುಕೊಳ್ಳುತ್ತ ಹಾಲಿನ ಲೋಟವನ್ನು ಹಿಡಿದುಕೊಂಡು ನಡೆದಳು. ಇಷ್ಟು ಹೊತ್ತು ಮಾಡಿದ ಮಗಳತ್ತ ಏನೋ ಪ್ರಶ್ನಿಸುವವನಂತೆ ನೋಡಿದ ಅಪ್ಪನ ದೃಷ್ಟಿಯನ್ನು ಎದುರಿಸಲಾರದೆ ಸುನೀತ ಮುಖ ಕೆಳಗೆ ಮಾಡಿದಳು. ಮಗಳ ಮನಸ್ಸಿನ ಭಾವನೆಗಳನ್ನು ಗ್ರಹಿಸಲು ಪ್ರಯತ್ನಿಸಿದ. ಆದರೆ ಒಬ್ಬರ ಅಂತರ್ಯವನ್ನು ಇನ್ನೊಬ್ಬರು ಅರ್ಥ ಮಾಡಿಕೊಳ್ಳುವುದು ಕಷ್ಟ. ಕೈಲಾಗದ ಅಪ್ಪ ಚಡಪಡಿಸಿದ. ತನ್ನ ಅಸಮರ್ಥೆಯ ಬಗ್ಗೆ ಮಗಳ ಆಶ್ರಯದಲ್ಲಿ ಅವಳಿಗೆ ಹೊರೆಯಾಗಿ ಬದುಕುತ್ತಿರುವುದರ ಬಗ್ಗೆ ತೀರಾ ಕಸಿವಿಸಿಯೆನಿಸಿತು. ಏನಾದರೇನು? ಅಸಹಾಯಕನಾಗಿ ಇರುವುದರಿಂದ ಅನುಭವಿಸದೆ ಗತ್ಯಂತರವಿಲ್ಲ. ಎಷ್ಟೇ ಭಯಂಕರವೆನಿಸಿದರೂ ಸ್ವಾಭಿಮಾನದ ಗಂಟಲಿರಿದು–ದೇವರು ಕರೆ ಕಳುಹಿಸುವವರೆಗೂ ಇರದೆ ವಿಧಿಯಿಲ್ಲವೆಂದುಕೊಳ್ಳುತ್ತಿದ್ದ.

ಸುನೀತಳ ಮನಸ್ಸು ಜ್ವಾಲಾಮುಖಿಯಾಗ ತೊಡಗಿತು. ಒಳಗೊಳಗೇ ಉಕ್ಕುತ್ತಿರುವ ಲಾವಾರಸ ಹೊರಗೆ ಸಿಡಿದಂತೆ ತಣ್ಣಗೆ ಮಾಡಬೇಕಾದರೆ ಖಾಂಡವ ದಹನದ ಬೆಂಕಿಯಾರಿಸಲು ಬೇಕಾದ್ದಕ್ಕಿಂತ ಎರಡರಷ್ಟು ಬೇಕೆನಿಸಿತ್ತು ಮಳೆ.

ಅಕ್ಕನಿಂದ ಲೆಟರ್ ಬಂತು. ರೆಡ್‌ಕ್ರಾಸ್ ಮೂಲಕ ತಾನು ಆಸ್ಟ್ರೇಲಿಯಕ್ಕೆ ಹೋಗುತ್ತಿರುವುದಾಗಿಯೂ ತನ್ನ ಮನಸ್ಸಿಗೆ ಒಪ್ಪುವ ಕೆಲಸವೇ ತನಗೆ ಸಿಕ್ಕಿರುವುದಾಗಿಯೂ

ತಿಳಿಸಿದ್ದಳು– ಪತ್ರ ಓದಿದಳು. ಅಷ್ಟೇ! excitement ಏನೂ ಇಲ್ಲ. ತೀರಾ flat ಆಗಿ ಈ ಸುದ್ದಿಯನ್ನು ಸ್ವೀಕರಿಸಿದಳು. ಅಪ್ಪನಿಗೂ ಹೇಳಿದಳು. ಅಪ್ಪನಿಂದ ಉತ್ತರ ಇಲ್ಲ. ಪ್ರತಿಕ್ರಿಯೆ ಎಂದರೆ ನಿಟ್ಟುಸಿರು!

ಮನೆಯಲ್ಲಿ ಜೋರ್, ಕೆಲಸಕ್ಕೆ ಅಪ್ಲಿಕೇಷನ್ ಬರೆದು ಬರೆದು ready ಮಾಡಿದರೂ ಯಾಕೋ ಪೋಸ್ಟ್ ಮಾಡುವ ಹೊತ್ತಿಗೆ ಮನಸ್ಸು ಬಾರದೆ ಹರಿದು ಹಾಕಿ ಬಿಡುತ್ತಿದ್ದಳು. ಮನೆಯಿಂದ ಬಾಡಿಗೆ, ಅಕ್ಕನಿಂದ ಬರುವ ದುಡ್ಡು ಇಬ್ಬರಿಗೂ ಬದುಕಲು ಸಾಕಾಗುತ್ತಿತ್ತು. ಆದರೆ ಈಗ–? ಕೆಲಸಕ್ಕೆ ಹೋಗದೆ ವಿಧಿಯಿಲ್ಲ. ತಾನು ಕೆಲಸಕ್ಕೆ ಹೋದರೆ ಅಪ್ಪನನ್ನು ನೋಡಿಕೊಳ್ಳುವವರು ಯಾರು? ಇದೇ ಅವಳನ್ನು ಕಾಡುತ್ತಿದ್ದ ಪ್ರಶ್ನೆ. ಅಪ್ಪನನ್ನು ಕೆಲಸಕ್ಕೆ ಹೋಗಲು ಪರ್ಮೀಷನ್ ಕೇಳಬೇಕೆಂದು ಕೊಂಡಳು.

ಹೇಗಾದರೂ ಅಪ್ಪ ಪರ್ಮೀಷನ್ ಕೊಟ್ಟಾನು. ಆದರೆ ಬೇಕೆಂದಾಗ ಕೆಲಸ ಸಿಗುವುದು ಸಾಧ್ಯವೆ?... ಪ್ರಯತ್ನಗಳನ್ನೇನೋ ಮಾಡತೊಡಗಿದಳು. ಕೆಲಸ ಸಿಕ್ಕಿದ ಮೇಲೆ ಅಪ್ಪನಿಗೆ ತಿಳಿಸಿದರಾಯಿತು ಎಂದುಕೊಂಡು ಆ ಪ್ರಸ್ತಾಪವನ್ನೇ ಮಾಡದೆ ಸುಮ್ಮನಾದಳು. ಆದರೆ ಅಪ್ಪನ ಆಲೋಚನೆಗಳೂ ಇದೇ ದಿಕ್ಕಿನಲ್ಲಿ ಹೊರ ಬಿದ್ದವು. ದೇಹದಲ್ಲಿ ದೌರ್ಬಲ್ಯ ಅಷ್ಟೆ, ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳದೇ ಇರುವಷ್ಟು ಬೌದ್ಧಿಕವಾಗಿ ಜೀರ್ಣವಾಗಿರಲಿಲ್ಲ. ಅಪ್ಪನ ಹೃದಯ ಬಹಳ ಮೃದು ಯಾರಿಗಾದರೂ ಕಷ್ಟವೆಂದು ತಿಳಿದು ಬಂದರೆ, ಅವರಿಗಿಂತ ಇವರೇ ಹೆಚ್ಚು ತಲೆ ಕೆಡಿಸಿಕೊಳ್ಳುತ್ತಿದ್ದರು. ತಮ್ಮ ಕೈಲಾದಷ್ಟು ಸಹಾಯ ಮಾಡುತ್ತಿದ್ದರು. ಇದ್ದದ್ದು ಸಂಪಾದಿಸಿದ್ದು, ಧರ್ಮಕ್ಕಾಯಿತು. ಎಷ್ಟೋ ಸಲ ಸುನೀತ ಅಪ್ಪನ ತೀರಾ ಒಳ್ಳೇತನವನ್ನು ಪ್ರತಿಭಟಿಸಿದ್ದುಂಟು... ಈಗ ಸುನೀತಳಿಗೆ, ತನ್ನ ಧೋರಣೆಯೇ ಸರಿಯೆನಿಸುತ್ತಿದೆ. ತಿಂದವರು ತೇಗಿದವರು, ಅಪ್ಪನನ್ನೂ ಇಲ್ಲದಂತೆ ನಾಪತ್ತೆ. ಸಾಯುತ್ತಿದ್ದರೂ, ಸಾಸಿವೆ ಕಾಳಿನಷ್ಟೂ ಸಹಾಯವಿಲ್ಲದಿರುವುದನ್ನು ಕಂಡು, ಕಿಡಿಕಿಡಿಯಾಗುತ್ತಾಳೆ. "ಮಕ್ಕಳು ಮನೆ ಅನ್ನುವುದನ್ನು ಮರೆತ ಪರೋಪಕಾರಿಯಾಗಿ ವರ್ತಿಸಿದ ಅಪ್ಪನ ಮೇಲೂ, ಹದ್ದು, ಕಾಗೆಗಳ ಹಾಗೆ ತಿಂದು ಹೋದ ಜನದ ಮೇಲೂ ಬೆಂಕಿಯಾಗುತ್ತಾಳೆ." ಅಪ್ಪ ಸುನೀತಳನ್ನು ಕೂಗಿದಾಗ, ಧುಮುಗುಟ್ಟುತ್ತಲೇ ಹತ್ತಿರ ಹೋದಳು. 'ನೋಡಮ್ಮ ಸುನೀತ, ನಿಷ್ಠುರವಾಗಿ ಹಾರಾಡುವುದರಿಂದ ಆಗುವುದೇನೂ ಇಲ್ಲ. ಈಗ ನಾನು ಹೇಳುವುದನ್ನು ಸ್ವಲ್ಪ ಗಮನವಿಟ್ಟು ಕೇಳು, ನನ್ನ ಕತೆ ಇನ್ನಿದ್ದರೂ ದಿನಗಳಲ್ಲಿ ಮುಗಿಯುತ್ತೆ, ಆದರೆ ಕ್ರೂರ ಸಮಾಜದ ಮಧ್ಯ ನಿನ್ನನ್ನು ಒಂಟಿಯಾಗಿ ಬಿಟ್ಟು ಹೋಗಬೇಕಾಗಿರುವುದಕ್ಕೆ ನನಗೆ ತುಂಬಾ ನೋವೆನಿಸುತ್ತೆ. ಯಾವಾಗಲೂ ಹೆಣ್ಣಿಗೆ ಗಂಡಿನ ರಕ್ಷಣೆ ಬೇಕು... ಈ ಮಾತು ನಿನಗೆ ಹಳೆಯದಾಗಿ, ಅರ್ಥವಿಲ್ಲದ್ದಾಗಿ ಅನಿಸಬಹುದು. ಆದರೆ ನಿನಗೆ ಕ್ರಮೇಣ ಅರ್ಥವಾಗುತ್ತೆ. ನೀನೇ ನಿನ್ನ ತಪ್ಪನ್ನು ತಿಳಿದುಕೊಂಡು ಬೇಜಾರುಪಡುತ್ತೀ'... ಎಂದು ಹೇಳುತ್ತಿರುವಾಗಲೇ ಅವಳು ಮನಸ್ಸಿನಲ್ಲಿ ಅಪ್ಪನ ಮಾತನ್ನು ವಿಶ್ಲೇಷಿಸತೊಡಗಿದ್ದಳು.

ಅಪ್ಪನಿಗೆ ನಾನೇನೂ ಖಂಡಿತವಾಗಿ ಮದುವೆ ಬೇಡವೆಂದು ಹೇಳಿರಲಿಲ್ಲ... ಗಂಡಸಿನ ರಕ್ಷಣೆ ಇಲ್ಲದೆ ಹೆಣ್ಣು ಬಾಳುವುದಕ್ಕೆ ಸಾಧ್ಯವಿಲ್ಲವೇ ಇಷ್ಟು ವಿಶಾಲವಾದ ಪ್ರಪಂಚದಲ್ಲಿ?... ಎಂದು ಒಮ್ಮೆ ಅನಿಸಿದರೆ, ಇನ್ನೊಂದು ಕ್ಷಣದಲ್ಲಿ ಅಪ್ಪನ ಮಾತಿನಂತೆ ಗಂಡಸಿನೊಡನೆ ಬಾಳುವ ಅನುಭವಕ್ಕೇ ಒಪ್ಪಿಗೆ ಕೊಡೋಣವೆಂದು ಆಲೋಚಿಸುತ್ತಾಳೆ....

ಅಪ್ಪ ಮಾತು ಮುಂದುವರೆಸಿದ. ಸುನೀತ ಆಲೋಚಿಸುತ್ತಿರುವುದು ಏನೆಂದು ಅಪ್ಪನ ಮನಸ್ಸು ಆಗಲೇ ಲೆಕ್ಕ ಹಾಕಿತು. "ನೀನು ನನ್ನ ಫ್ರೆಂಡ್ ಜಗನ್ನಾಥರಾಯರು ಇದ್ದಾರೆ ನೋಡು, ಅವರ ಬಳಿ ಹೋಗಿ ನನ್ನನ್ನು ಕಾಣಬೇಕೆಂದು ಹೇಳು. ಇದ್ದ ನನ್ನ ಫ್ರೆಂಡ್ಸಿನಲ್ಲಿ ಇವರೇ ನಂಬಿಕೆಗೆ ಸ್ವಲ್ಪ ಲಾಯಕ್ಕು. ನನ್ನ ಪ್ರಾವಿಡೆಂಟ್ ಫಂಡ್ ವಿಷಯವಾಗಿ ವ್ಯವಸ್ಥೆ ಮಾಡ್ತಾರೆ. ಅದರ ಹಣದಿಂದ ನಿನ್ನ ಮದುವೆಯನ್ನು ಮಾಡಿಯೇ ಬಿಡುತ್ತೇನೆ"– ಎಂದು ಭೀಷ್ಮನಂತೆ ಪ್ರತಿಜ್ಞೆ ಮಾಡಿದ. ಮಾತಿನಲ್ಲಿ ನಿರ್ಧಾರವಿತ್ತು. ಭವಿಷ್ಯವನ್ನು ಯೋಚಿಸಿಕೊಂಡಂತಿತ್ತು. ಅಪ್ಪ ಅವಳ ಮದುವೆಯ ವಿಚಾರವಾಗಿ ಕಾತುರರಾಗುತ್ತಿದ್ದರೆ ತಾನು ಕೆಲಸವನ್ನು ಸಂಪಾದಿಸಿಕೊಳ್ಳುವ ಪ್ರಯತ್ನದಲ್ಲಿದ್ದಳು. ಅಪ್ಪನ ಮನಸ್ಸಿಗೆ ನೋವಾಗಬಾರದು ಎಂದು ಯಾವೊಂದು ವಿರೋಧವನ್ನು ತೋರದೆ ಸುಮ್ಮನಾದಳು.

* * *

ಜಗನ್ನಾಥರಾಯನಂಥ ಅಪರೂಪದ ವ್ಯಕ್ತಿಯ ಒಳ್ಳೆತನದಿಂದ ನಿರೀಕ್ಷಿಸಿದ ಹಣದ ವ್ಯವಸ್ಥೆಯಾಯಿತು. ಜೊತೆಗೆ ಅವರಿಗೆ ತಿಳಿದ ಇಂಜನಿಯರ್ ಹುಡುಗನೊಂದಿಗೆ ಸಂಬಂಧದ ನಿಶ್ಚಯವು ಆಯಿತು. ಇಂಥ ಹೊತ್ತಿನಲ್ಲಿ 'ಅಪ್ಪ'ನಿಗೆ ಮಗನ ನೆನಪು ಮೊನಚಾಗಿ ಕಾಡುತ್ತಿತ್ತು. ಆದರೆ ಜೀವನದಲ್ಲಿ ಒಂದು ಕರ್ತವ್ಯವನ್ನಾದರೂ ಸಾರ್ಥಕವಾಗಿ ಸಾಧಿಸಲು ಸಾಧ್ಯವಾಯಿತು ಅನ್ನೋ ಸಂತೋಷವೇ ಸಾಕಾಯಿತು.

ಸುನೀತಳಿಗೆ ಸಂತೋಷವೋ, ದುಃಖವೋ ತಿಳಿಯುವುದು ಕಷ್ಟವಾಗುತ್ತಿತ್ತು. ನಿಲುಗನ್ನಡಿ ಮುಂದೆ ನಿಂತು ನೋಡಿಕೊಂಡ ಸುನೀತಳಿಗೆ ಛಿ! ಛಿ! ಅನ್ನಿಸಿತು. ಅರಳಿದ ಹೊಚ್ಚ ಹೊಸ ಹೂವಿನ ಕಂಪು ತಾಜಾತನ ಏನೂ ತನ್ನಲ್ಲಿ ಕಾಣಲಿಲ್ಲ ಎನ್ನಿಸಿತು. ಅಲ್ಲಲ್ಲಿ ಎದ್ದು ಕಾಣುತ್ತಿದ್ದ ಸುಕ್ಕುಗಳು, ಹೌಹಾರುವಂತೆ ಮಾಡಿದವು. ಮರೆತಿದ್ದ ವಯಸ್ಸಿನ ನೆನಪಾಯಿತು... ಎಷ್ಟಿರಬಹುದು?... ಲೆಕ್ಕ ಸರಿಯಾಗಿ ಗೊತ್ತಿಲ್ಲ... ಮೂವತ್ತನ್ನು ದಾಟಿರಬಹುದೇ?– ಎಂದು ಸಂದೇಹಿಸಿದ ಅವಳಿಗೆ ಮದುವೆ ಬೇಡವೆನಿಸಿತು. ತಲೆ ಭಾರವೆನಿಸಿ ಅಲ್ಲೇ ಮಂಚದ ಮೇಲೆ ಒರಗಿದಳು.

* * *

ರಾತ್ರಿ ಅಪ್ಪನಿಗೆ ಇದ್ದಕ್ಕಿದ್ದಂತೆ stroke ಹೊಡೆಯಿತು. ಸರಿ ರಾತ್ರಿಯಲ್ಲಿ ಸುನೀತಳು ಒಂಟಿಯಾಗಿ ಹೊರಗೆ ಹೋಗಿ ಡಾಕ್ಟರನ್ನು ಕರೆ ತರಲು ಹೆದರಿದಳು. ಆದರೆ ಮದುಗಳಿಗೆಯಲ್ಲೇ ಇಷ್ಟಕ್ಕೇ ಹೆದರಿದರೆ ಮುಂದೆ ಇರುವ, ಕೊನೆಯಿಲ್ಲದ ಇಂತಹ ಪರಿಸ್ಥಿತಿಗಳನ್ನು ಎದುರಿಸಬೇಕಾಗಿದೆಯೆಂಬುದರ ಅರಿವಿನಿಂದ ಹೊರಗಡೆಯಿಂದ ಬೋಲ್ಟ್ ಹಾಕಿಕೊಂಡು ಓಡಿದಳು. ಓಡುತ್ತಿದ್ದ ಓಟ ತನಗೇ ವಿಚಿತ್ರೆನಿಸಿತ್ತು. ಸದ್ಯಕ್ಕೆ ಹೇಗೋ ಡಾಕ್ಟರನ್ನು ಮನೆಗೆ ಕರೆತಂದಳು.

ಡಾಕ್ಟರು ಪರೀಕ್ಷೆ ಮಾಡಿ ಜೋಲು ಮುಖ ಹಾಕಿ ಕೂಡಲೆ ಆಸ್ಪತ್ರೆಗೆ ಅಡ್ಮಿಟ್ ಮಾಡುವಂತೆ ಹೇಳಿದ... ಆದರೆ ಹೇಗೆ... ತಂದೆಗೆ ಯಾರು ಸಹಾಯಕ್ಕೆ? ಡಾಕ್ಟರನ್ನೇ ಅಂಗಲಾಚಿದಳು. ಪುಣ್ಯಕ್ಕೆ ಆ ಡಾಕ್ಟರಿಗೆ ಹೃದಯ ಅನ್ನೋದು ಇದ್ದಂತಿತ್ತು. ಕೂಡಲೇ ಒಪ್ಪಿಕೊಂಡ. ಸುನೀತ ಡಾಕ್ಟರೂ ಇಬ್ಬರೂ ಕಷ್ಟಪಟ್ಟು ಕಾರಲ್ಲಿ ಮಲಗಿಸಿದರು. ಸರಸರನೆ ಸುನೀತ ಇಳಿದು ಮನೆ ಬಾಗಿಲುಗಳನ್ನು ಭದ್ರಪಡಿಸಿಕೊಂಡು ಬಂದಳು. ಕಾರು ಸ್ಟಾರ್ಟಾಯಿತು.

* * *

ಅಪ್ಪ ಉಳಿಯಲಿಲ್ಲ. ಈಗ ಸುನೀತ ಒಬ್ಬಳೇ. ಅವಳ ಸುತ್ತಲೂ ಭಯಂಕರ ಶೂನ್ಯತೆ. ತಲೆ ತಲೆ ಚಚ್ಚಿಕೊಂಡಳು. ಮದುವೆ ಮುರಿದಿತ್ತು. ಅಸ್ತವ್ಯಸ್ತ ಮನಸ್ಸಿಗೆ, ಮನೆ ತುಂಬ ನೆರಳುಗಳು ಓಡಾಡಿದಂತೆ. ಅಸ್ಪಷ್ಟ ಧ್ವನಿಗಳು ಕೇಳಿಸುತ್ತಿರುವಂತೆ ಅನಿಸಿತ್ತು. "ಯಾವ ಪಾಪಕ್ಕಾಗಿ ಪ್ರಾಯಶ್ಚಿತ್ತ?" ಎಂದು ಪದೇ ಪದೇ ಮನಸ್ಸು ಕೇಳುತ್ತಿತ್ತು. ಪ್ರಪಂಚದಲ್ಲಿ ಇಷ್ಟು ಮಂದಿ ಇರುವಾಗ ತನ್ನೊಬ್ಬಳಿಗೇ ಏಕೆ suffering ಎಂದು ಯಾರೊಂದಿಗೋ ವಾದಿಸುತ್ತಿರುವಂತೆ ತೋರುತ್ತಿತ್ತು. ತನಗೆ... ತನಗೆ... ತನಗೊಂದು ಕೆಲಸ ಸಿಕ್ಕಿದರೆ. ಮನಸ್ಸಿಗೆ ಸಮಾಧಾನವಾಗಬಹುದೇನೋ" ಎಂದುಕೊಳ್ಳುತ್ತಿದ್ದಳು. ಆದರೆ... ಸಿಗುವವರೆಗೂ...?

ಈ ಪ್ರೇತ ಮನೆಯಲ್ಲಿ. ಎಂದೋ ಕತೆಯಲ್ಲಿ ಓದಿದ್ದ ಗುಹೆಯಂತಿರುವ ರಾಕ್ಷಸನ ಬಾಯಲ್ಲಿ ಚಿತ್ರಹಿಂಸೆ ಅನುಭವಿಸುತ್ತ... ಬದುಕುವುದು ಸಾಧ್ಯವೇ ಇಲ್ಲವೆಂದು ಅವಳಿಗೆ ತೋರಿತು. ಒಂಟಿಯಾಗಿ ಬಾಳಲು ಅಸಮರ್ಥರಾದ ಹೆಣ್ಣುಗಳ ಭಯಂಕರ ನರಕಗಳು!

ಕೊನೆಗೆ ಏನೋ ನಿರ್ಧಾರವನ್ನು ಕೈಗೊಂಡಂತೆ, ಒಂದೆರಡು ಬಟ್ಟೆಗಳನ್ನು ತುಂಬಿಕೊಂಡು ಕೈಚೀಲ ಒಂದನ್ನು ಹಿಡಿದು, ತನ್ನ ಬದುಕಿನ ಭವಿಷ್ಯದಲ್ಲಿಯೆಂಬುದು [illegible] [illegible].

ಮನೆಯೊಳಗಿಂದ ಬಿರಬಿರನೆ ನಡೆದು ಹೊರಟಳು.

ಎಲ್ಲಿಗೆ-? ಎನ್ನುವುದು ಅವಳಿಗೂ ಪ್ರಶ್ನೆಯಾಗಿ ಉಳಿಯಿತು. ಆದರೆ ಆ ಹೆಜ್ಜೆಯ ನಡೆಯಲ್ಲಿ ಮತ್ತೆ ಈ ಭಯಂಕರ ಬದುಕಿಗೆ 'ಮರಳಲಾರೆ' ಎನ್ನುವ ದೃಢ ನಿರ್ಧಾರದ ಧ್ವನಿಯಿತ್ತು.

* * *

ಉದ್ವಿಗ್ನೆ

ಕಾಲೇಜಿಗೆ ಹೊರಟಿದ್ದ ವೀಣಾ ಒಂದೆರಡು ಗಂಟೆಗಳಲ್ಲೇ ಹಿಂತಿರುಗಿದ್ದನ್ನು ನೋಡಿ ತಾಯಿಗೆ ಆಶ್ಚರ್ಯವಾಯಿತು. ಬಂದವಳೇ ಸಿಡಿಮಿಡಿಗೊಳ್ಳುತ್ತಾ ಕೈಲಿದ ಪುಸ್ತಕಗಳನ್ನು ಎಸೆದು ಮಂಚದ ಮೇಲೆ ಬಿದ್ದುಕೊಂಡು, Brutes ‘idiots’ಎಂದು ಬಡಬಡಿಸತೊಡಗಿದಳು. ತಾಯಿಗೆ ಕೂಡಲೇ ಅರ್ಥವಾಯಿತು. ‘ಕಾಲೇಜಿನಲ್ಲಿ ಏನಾದರೂ ಬಿರುಗಾಳಿ ಎಬ್ಬಿಸಿಯೇ ಬಂದಿರುವಳು!’ ಅಂದುಕೊಂಡರು. ಆದರೆ ಏನೆಂದು ಕೇಳುವ ಸಾಹಸಕ್ಕೆ ಹೋಗಲಿಲ್ಲ, ಆಕೆಗೆ ಗೊತ್ತು. ಈಗ ಕೇಳುವುದಕ್ಕಿಂತ ಸುಮ್ಮನೆ ಇರುವುದೇ ಮೇಲು ಎಂದು. ಈಗೇನಾದರೂ ಅವಳನ್ನು ಪ್ರಶ್ನಿಸಿ ಕೆಣಕಿದರೆ ಲಾವಾರಸ ಸಿಡಿಯುತ್ತದೆಂದು ಹೆದರಿ ಸುಮ್ಮನಾದರು.

ಯಾರನ್ನೋ ಕುರಿತು ಕಿಡಿಕಾರುತ್ತಿದ್ದ ವೀಣಾ ಈಗ ನೇರಾಗಿ ಮನೆಯವರ ಮೇಲೆಯೇ ಜಿಗಿದಳು. ಸಿಡಿಮಿಡಿಯಿಂದಲೇ ಅಂದಳು. ಈ ಮನೆಯಲ್ಲಿ ಯಾರಿಗೇನಗತ್ಯವಿದೆ. ನಾವು ಸಾಯುತ್ತೇವೋ, ಬದುಕುತ್ತೇವೋ ಯಾರಿಗೆ ಬೇಕಾಗಿದೆ? ಎಲ್ಲಾ selfish. ಅಮ್ಮ, ಅಕ್ಕ, ಅಣ್ಣ, ತಮ್ಮ ಎಲ್ಲಾ ಸುಳ್ಳು. ಅವರವರ ಸ್ವಾರ್ಥ ತೀರಿದರೆ ಸಾಕು. ನಾವಿಲ್ಲಿ ಸಾಯುತಾ ಬಿದ್ದಿದ್ದರೂ ಯಾರಿಗೂ ವಿಚಾರಿಸಿಕೊಳ್ಳಬೇಕು ಅನ್ನೋ ಜ್ಞಾನ ಇಲ್ಲ. ಹೆಸರಿಗೆ ಅಮ್ಮ ಅಂತೆ. ಅಪ್ಪ ಅಂತೆ!’ ಅವಳ ಅಣಕದ ಮಾತು ನೇರಾಗಿ ತಮ್ಮನ್ನು ಕುರಿತದ್ದು ಎಂದು ತಿಳಿದ ತಾಯಿ ತುಂಬಾ ನೊಂದುಕೊಂಡರು. ಅವರೂ ನೋವನ್ನು ಮನಸ್ಸಿನಲ್ಲಿಯೇ ನುಂಗಿಕೊಂಡು ಸಮಾಧಾನವಾಗಿಯೇ ನುಡಿದರು.

“ಅಲ್ಲ ವೀಣಾ ನೀನು ಹೊರಗಡೆ ಯಾರ ಯಾರ ಮೇಲೋ ಸಿಟ್ಟು ಮಾಡಿಕೊಂಡು ಬಂದು ಇಲ್ಲಿ ನಮ್ಮ ಮೇಲೆ ಹಾರಾಡಿದರೆ ಮಾಡುವುದಾದರೂ ಏನು? ಇಲ್ಲದ ಅರ್ಥವಿಲ್ಲದೆ. ಕಾರಣವಿಲ್ಲದೆ ಹೀಗೆ ಹುಚ್ಚುಚ್ಚಾಗಿ ಕಂಡವರ ಮೇಲೆಲ್ಲಾ ಕೂಗಾಡಿದರೆ ಹೇಗಂತ?”- ನೊಂದ ದನಿಯಾಗಿತ್ತು.

"ನಾನಿಷ್ಟು ಬೇಸರದಿಂದ ಮನೆಗೆ ಬಂದರೆ ಯಾಕೆ ಹಾಗಿದ್ದಿ- ಅಂತಲಾದರೂ ಕೇಳಿದೆಯಾ? ಹೌದು ಯಾಕೆ ಕೇಳ್ತಿ? ನಾನು ಯಾಕೆ ಬೇಕು ನಿಮಗೆ? ಏನಿದ್ದರೂ ದುಡ್ಕೊಂಡು ಬಂದು ಹಾಕಿದ್ರೆ ಸಾಕು!- ಅಷ್ಟೇ ತಾನೇ" ಮಾತಿನಲ್ಲಿ ವ್ಯಂಗ್ಯವಿತ್ತು.

ತಾಯಿ ಏನನ್ನಾದರೂ ಸಹಿಸುತ್ತಿದ್ದಳು, ಆದರೆ ವೀಣಾಳ ಈ ಮಾತು ಅವಳ ಅಂತರಂಗವನ್ನು ಸೀಳಿತು. ಅವಳಿಗೆ ತನ್ನ ಅಸಹಾಯಕತೆಯನ್ನು ಕೆಣಕಿದಂತಾಯಿತು. ಮಗಳ ಬಾಯಿಂದ ಹೊರಟ ಈ ಮಾತು ಕಿವಿಯಲ್ಲಿ ಮಾರ್ದನಿಗುಟ್ಟಿತು. ಕಂಗಳು ಕಂಬನಿಯ ಮಡುಗಳಾದವು.

'ವೀಣಾ'- ಆ ಕೂಗಿನಲ್ಲಿ ತುಂಬಿದ್ದ ದೈನ್ಯ ವೀಣಾಳ ಎದೆ ಕಲಕಿತು. ನಾಲಗೆ ಕಚ್ಚಿಕೊಂಡಳು. ತಾಯಿಯ ಕಂಬನಿ ತುಂಬಿದ ಕಣ್ಣುಗಳನ್ನು ಎದುರಿಸಲಾರದೆ ತಲೆ ಬಗ್ಗಿಸಿದಳು. ಸಿಟ್ಟಿನ ಸೆರೆಯಿಂದ ಸಮಾಧಾನದ ಬಯಲಿಗೆ ಬಂದಳು. ಆವೇಶದಲ್ಲಿ ಬಾಯಿ ಜಾರಿದ್ದನ್ನು ನೆನೆದು ಮನಸ್ಸು ಸಂಕುಚಿತವಾಯಿತು. ನನ್ನ ಮೇಲೆ ತನಗೇ ಅಸಹ್ಯವೆನಿಸಿತು. ತಾಯಿಯ ಮನಸ್ಸಿಗೆ ಈ ಮಾತಿನಿಂದ ಆಗಿರಬಹುದಾದ ಘಾಯದ ತೀವ್ರತೆಯ ಅರಿವಿನಿಂದ- ತಾನೆಷ್ಟು ತುಚ್ಛವೆನಿಸಿತು. ಆಕಾಶದಷ್ಟು ಅಗಲದ ತಾಯ ಹೃದಯದಲ್ಲಿ ತಾನೆಲ್ಲೋ ತೇಲುವ ಒಂದು ಧೂಳಿನ ಕಣ! ಅಂಥಾದ್ದರಲ್ಲಿ ಇಂದು ಈ ಮಾತನ್ನು ಆಡುವುದಕ್ಕೆ ಹೇಗೆ ತನಗೆ ಸಾಹಸ ಬಂತೆಂಬುದನ್ನೇ ತಿಳಿಯಲಾರದೆ ಚಡಪಡಿಸಿದಳು. ನಿಧಾನವಾಗಿ ಅಮ್ಮನ ಬಳಿಗೆ ಸರಿದಳು.

"ನನ್ನನ್ನು ಕ್ಷಮಿಸಮ್ಮ ಉದ್ದೇಶಪೂರ್ವಕವಾಗಿ ನಾನು ಈ ಮಾತನ್ನು ಆಡಲಿಲ್ಲ. ಏನೋ ಆವೇಶದಲ್ಲಿ ಅಂದುಬಿಟ್ಟೆ, ಯಾಕೋ ಕಾಲೇಜಿನಲ್ಲಿ ನನಗೆ ಸ್ವಲ್ಪ ಅಸಮಾಧಾನವಾಗಿತ್ತು. ಇರುವುದಕ್ಕೇ ಆಗಲಿಲ್ಲ. ರಜೆ ಚೀಟಿ ಬರೆದು ಬಿಸಾಕಿ ಬಂದು ಬಿಟ್ಟೆ. ಮನಸ್ಸು ತೀರ ಅಸ್ತವ್ಯಸ್ತವಾಗಿತ್ತು. ಆವೇಶದ ಆತುರದಲ್ಲಿ ಅರ್ಥವಿಲ್ಲದ, ಆಡಬಾರದ ಮಾತನ್ನು ಆಡಿಬಿಟ್ಟೆ, ನಿನ್ನ ಮನಸ್ಸಿಗೆ ತುಂಬಾ ನೋವಾಗಿದೆ. ಅದನ್ನು ಹೇಗೂ ನಾನು ತೊಡೆದು ಹಾಕಲಾರೆ. ನೀನು ಒಂದು ಸಲ ಕ್ಷಮಿಸಿದ್ದೇನೆಂದು ಹೇಳು. ಇನ್ನೆಂದೂ ಈ ರೀತಿಯಾಗಿ ಮಾತಾಡೊಲ್ಲ. Please ಹೇಳಮ್ಮ"- ಯಾಚಿಸುವಂತಿತ್ತು.

ವೀಣಾಳ ಯಾಚನೆ ತಾಯಿಯ ಮನಸ್ಸನ್ನು ಕರಗಿಸಿತು. ಬಿಸಿ ರಕ್ತದ ವಯಸ್ಸು ಸಂಪಾದಿಸುವ ಸಾಮರ್ಥ್ಯವಿರುವ ಮಗಳ ಧೋರಣೆ ಅವಳಿಗೆ ಅಸಹಜವೆನಿಸಲಿಲ್ಲ. ಅವಳನ್ನೇ ಬಳಸಿ ಆಧರಿಸಿರುವ ತಾವು ಅವಳ ಮಾತಿನ ನಂಜನ್ನು ನಗುನಗುತ್ತಲೇ ನುಂಗುತ್ತಿದ್ದರು. ಸ್ವಭಾವತಃ ಕೆಟ್ಟವಳೇನೂ ಅಲ್ಲ. ಆದರೆ ಸ್ವಲ್ಪ ಒರಟು ಹಟಮಾರಿತನ. ತನ್ನದೇ ಗೆಲ್ಲಬೇಕು. ತಾನೇ ದೊಡ್ಡವಳೆನಿಸಿಕೊಳ್ಳಬೇಕೆನ್ನುವ ವಿಚಿತ್ರ ಸ್ವಭಾವ. ಅವಳ ಮಾತಿಗೆ ಯಾರೂ ವಿರೋಧ ಸೂಚಿಸದಿದ್ದರೆ ಸನ್ನಿವೇಶಗಳು ಸರಳವಾಗೇ ಇರುತ್ತಿದ್ದವು.

ಮನೆಯಲ್ಲಿ ಇವಳ Ego ನಡೆಯಬಹುದಾಗಿದ್ದರೂ ಹೊರಗಡೆಯೂ ತನ್ನಂತೆಯೇ ನಡೆಯಬೇಕೆನ್ನುವ ಛಲ ಸ್ವಲ್ಪ ಮೂರ್ಖತನವೆಂದೇ ಎನಿಸುತ್ತಿತ್ತು.

ಗಂಡನನ್ನು ಕಳೆದುಕೊಂಡಂದಿನಿಂದ ತಾಯಿ, ತಮ್ಮಂದಿರು, ತಂಗಿಯರು ತನ್ನನ್ನೇ ಆಶ್ರಯಿಸಿರುವುದು ಅವಳಿಗೆ ಒಂದು ತರಹ ಒಳಗೇ ಖುಷಿಯಾಗಿತ್ತು. ಅಪ್ಪ ಸತ್ತಾಗ ಎಂ.ಎ. ಫೈನಲ್‌ನಲ್ಲಿ ಓದುತ್ತಿದ್ದ ವೀಣಾಗೆ, ಪರೀಕ್ಷೆಗಳು ಮುಗಿದು ಫಲಿತಾಂಶ ಹೊರಬಿದ್ದ ಕೂಡಲೇ ಕೆಲಸ ಸಿಕ್ಕಿದ್ದು ಒಂದು ಸಮಾಧಾನವಾಗಿತ್ತು. ತಾಯಿಗೆ ಭವಿಷ್ಯವೇ ಭಯಂಕರವೆನಿಸಿತ್ತು. ಆದರೆ ವೀಣಾಗೆ ಕೆಲಸ ಸಿಕ್ಕಿದ್ದು ಸ್ವಲ್ಪ ನೆಮ್ಮದಿಯಾಗಿತ್ತು. ಹೊಟ್ಟೆ ಪಾಡಿನ ಸಮಸ್ಯೆಗೆ ಸ್ವಲ್ಪ ಪರಿಹಾರ ದೊರೆತಂತಾಗಿತ್ತು. ವೀಣಾಗೆ ಬರುವ ಸಂಬಳ ಊಟಕ್ಕೆ, ತಂಗಿ ತಮ್ಮಂದಿರ ಓದಿಗೆ ಸಾಕಾಗುತ್ತಿತ್ತು. ತಾಯಿಯ ಎಚ್ಚರಿಕೆಯ ನಿರ್ವಹಣೆ ಹೇಗೋ ಬದುಕನ್ನು ಸಾಗಿಸುತ್ತಿತ್ತು, ಮುಂದಕ್ಕೆ.

ವೀಣಾಳ ಸ್ವಭಾವವೇ ವಿಚಿತ್ರ. ಇಡೀ ಪ್ರಪಂಚದ ವಿಷಯಗಳನ್ನು ವೈಯುಕ್ತಿಕವಾಗಿ, ಇಲ್ಲವೇ ಸ್ವಂತ ವಿಷಯಗಳಂತೆ ಭಾವಿಸುತ್ತಿದ್ದಳು. ಯುಗಾಂಡದಲ್ಲೋ, ಅಮೇರಿಕಾದಲ್ಲೋ, ರಷ್ಯಾದಲ್ಲೋ, ಇಂಗ್ಲೆಂಡಿನಲ್ಲೋ ಜರ್ಮನಿಯಲ್ಲೋ, ಇಂಡಿಯಾದಲ್ಲೋ- ಎಲ್ಲೇ ಏನೇ ಅನಾಚಾರ ಅವ್ಯವಸ್ಥೆ ಉಂಟಾದರೂ, ಮನೆಯಲ್ಲಿ ಕೂತು ವಿಮರ್ಶೆ ಮಾಡುವುದು. ಯಾರಿಗಾದರೂ ಯಾರಿಂದಲಾದರೂ ಅನ್ಯಾಯವಾದರೂ ಎದುರಿಗಿದ್ದವರ ಮೇಲೆ ಸಿಡಿಮಿಡಿಗೊಳ್ಳುವುದು, ಇಲ್ಲೇ ಕಾಲೇಜಿಗೆ ಹೋದರೆ, ಲಕ್ಷ್ಮೀದೇವಿಗೆ ಪ್ರಿನ್ಸಿಪಾಲರು ಲೀವ್ ಕೊಡದಿದ್ದರೆ ಸಿಟ್ಟು. ಜಾನಕಿಗೆ ವರ್ಷಗಟ್ಟಲೆ ಲೀವ್ ಕೊಡೋದು ಕಂಡರೆ ಸಿಟ್ಟು; ಪಾಠ ಮಾಡುವ ಟೀಚರ್ಸ್ ಕೆಲಸ ಮಾಡುವ ಅಟೆಂಡರ್ಸ್, ಕಕ್ಕಸು ತೊಳೆಯುವ ಭಂಗಿಗಳೂ- ಎಲ್ಲರೂ ಒಂದೇ ಪ್ರಿನ್ಸಿಪಾಲರಿಗೆ ಅಬ್ಬಬ್ಬ!... ಅದಕ್ಕೆ ತಕ್ಕ ಹಾಗೆ ಛಿ! ಛಿ! ಅಂತ ಅಪಾದಭೂತಿ ನಗೆ ನಕ್ಕೊಂಡು. ಸೊಂಟ ಬಗ್ಗಿಸಿ ಸಲಾಮು ಹೊಡೆಯುತ್ತ ಕೋಲೆ ಬಸವನ ಹಾಗೆ ಪ್ರಿನ್ಸಿಪಾಲರು ಹೇಳಿದ್ದಕ್ಕೆಲ್ಲಾ ಹೌದು ಸಾರ್, ಇಲ್ಲಾ ಸಾರ್- ಅಂತ ತಲೆ ತೂಗೋ ಈ ಹಾಳು ನರಸತ್ತ ಮೇಷ್ಟ್ರುಗಳನ್ನು ಕಂಡರೆ ಮೈಯೆಲ್ಲಾ ಉರಿದುಹೋದಂತಾಗಿ ಬಿಡುತ್ತಿತ್ತು.

ಪ್ರಿನ್ಸಿಪಾಲರು ಎದುರಿಗಿದ್ದರೆ ತಮ್ಮ ಅಲ್ಪತನವನ್ನು ಅವರ ಅಡಿಗಳಿಗೆ ಅರ್ಪಿಸಿ ಅವರ ಮಾತನ್ನು ವೇದವಾಕ್ಯ... ಓಹೋ ನಿಮ್ಮ ಐಡಿಯಾ ಅದ್ಭುತವಾಗಿದೆ. ಹೌದು ಸಾರ್... ನಮ್ಮ ನಮ್ಮ ಕೆಲಸ ನಾವು ಮಾಡಿಕೊಳ್ಳೋದು ತಪ್ಪೇನಲ್ಲ ನೀವು ಹೇಳೋದು ಸರಿ ಸಾರ್ 'Dignity of Labour' ಅನ್ನೋದು ಇದ್ಕೇ ಅಲ್ವೇನು' ಎಂದು ಹೇಳುತ್ತ ಅವರ ಮಾತನ್ನು ಅನುಮೋದಿಸುತ್ತ. 'Latrines ಕ್ಲೀನಾಗಿರೋದನ್ನು ನೋಡಿಕೊಳ್ಳೋಕೆ' [illegible] ಆಗಲಿ ಸಾರ್- ಅಂತ ತಲೆ ತೂಗೋ [illegible] [illegible] [illegible] [illegible]!

ಮೊನ್ನೆ ಪಾಪ, ಹಿಸ್ಟರಿ ಮೇಷ್ಟ್ರು ಜ್ವರ ಬರುತ್ತೇಂತ ರಜ ಹಾಕಿದ್ರೆ, ಕರೆದು ಕಂಡಾಬಟ್ಟೆ ಬೈದು ಸರ್ವೀಸ್ ರಿಜಿಸ್ಟರಲ್ಲಿ ರಿಮಾರ್ಕ್ ಬರೀತೆನೆ- ಅಂತ ಬಾಯಿ ಬಡಿದು ಮುಖದ ನೀರಿಳಿಸಿ ಕಳಿಸುವ ಕಟುಕ ಪ್ರಿನ್ಸಿಪಾಲರನ್ನು ನೋಡಿದರೆ ಮೈಯೆಲ್ಲಾ ಮುಳ್ಳಾಗುತ್ತಿತ್ತು.

ಮೇಷ್ಟ್ರುಗಳಿಗೆ ಮರ್ಯಾದೆ ಅನ್ನುವುದೇ ಇಲ್ಲ. ಕ್ಲಾಸ್ ಕ್ಲಾಸ್‌ಗೆ ಇಷ್ಟ ಬಂದ ಹಾಗೆ ನುಗ್ಗಿ ವಿದ್ಯಾರ್ಥಿಗಳ ಮುಂದೆ ಮೇಷ್ಟ್ರ ಮಾನ ಮಣ್ಣು ಪಾಲು ಮಾಡುವ ಹಕ್ಕಿದೆ ಅಂತ ಭಾವಿಸುವ ಅಧಿಕಾರಿಗಳಿಗೆ ಅವರ ನಿರಂಕುಶ ಪ್ರವೃತ್ತಿಗೆ ಕಾಯಿದೆ ಕಟ್ಟಳೆ ಇಲ್ಲವೇ, ಅನ್ನೋ ಯೋಚ್ನೆ ಬರುತ್ತಿತ್ತು. ಆದರೆ ಮೊನ್ನೆ ತಾನೇ ಸೇರಿಕೊಂಡ ವೀಣಾಗೆ ಇಂತಹ ಅವ್ಯವಸ್ಥೆಯನ್ನು, ಉದ್ಧಟತನವನ್ನು ಪ್ರತಿಭಟಿಸುವ ಎದೆಗಾರಿಕೆಯಿಲ್ಲದ್ದಕ್ಕಾಗಿ ಒಳಗೊಳಗೇ ಹಲ್ಲು ಕಟ ಕಟ ಕಡಿಯುತ್ತಿದ್ದಳು. "ತಥ್ ಈ ಹಾಳು ಗುಲಾಮತನಕ್ಕೇ ಮುಕ್ತಿ. ಅನ್ನುವುದೇ ಇಲ್ಲವೇ" ಎಂದು ಯೋಚಿಸುತ್ತಿದ್ದಳು.

ಅಧಿಕಾರ, ಹಣ, ಬೆಂಬಲ ಯಾವುದರಲ್ಲಿಯೂ ಹೇಳಿಕೊಳ್ಳುವ ಹಾಗೆ ಇರಲಿಲ್ಲವಾಗಿ ಮನಸ್ಸು ಅಸಮಾಧಾನದ ಹಾವಾಗಿ ಬುಸು ಬುಸು ಗುಟ್ಟುತ್ತಿತ್ತು. ಆದರೂ ವಾತಾವರಣಕ್ಕೆ ಹೊಂದಿಕೊಳ್ಳದೆ, ಹೊಲಸನ್ನು ವರಿಸುವ ಸೊಣವಾಗದೆ ವಿಧಿಯಿರಲಿಲ್ಲ. ಅದಕ್ಕೇ ಒಳಗೆ ಹುದಿಗಿಟ್ಟುಕೊಂಡ ಉದ್ವೇಗವನ್ನು ಮೂಕ ಪಶುವಿನಂತೆ ಪರಿಸ್ಥಿತಿಗಳ ಭಯಂಕರತೆಯನ್ನು ಭರಿಸುತ್ತಿದ್ದ ತಾಯಿಯ ಮೇಲೆ ಕಾರುತ್ತಿದ್ದಳು. ತಾಯಿಗೆ ಮಗಳ ದೌರ್ಬಲ್ಯ, ಅವಳ ಅಪರಿಪಕ್ವ ಅನುಭವ ತಿಳಿದದ್ದರಿಂದಲೇ ಪ್ರತ್ಯುತ್ತರ ಕೊಡದೇ ಅವಳ ಒಡನಾಟ, ಹಾರಾಟಗಳತ್ತ, ನಿರ್ಲಕ್ಷ್ಯ ಭಾವವನ್ನು ತಾಳುತ್ತಿದ್ದಳು. ಆದರೆ ವೀಣಾಗೆ ತಾಯಿಯ ನಿರ್ಲಕ್ಷ್ಯ ಭಾವ, ವಿರೋಧಾರ್ಥವನ್ನೇ ಪಿಸುಗುಟ್ಟುತ್ತಿತ್ತು.

ಅವಳ ಸಿಟ್ಟು ಸಹಜವಾಗಿ ತಾಯಿಯ ಮೇಲಲ್ಲದೆ ಊಟದ ಮೋಲೂ ಇರುತ್ತಿತ್ತು. ಆದರೆ ಈಗ ತಾಯಿಯ ಮನಸ್ಸನ್ನು ನೋಯಿಸಿದ್ದಕ್ಕಾಗಿ ತಪ್ಪು ಕಾಣಿಕೆಯನ್ನು ಒಪ್ಪಿಕೊಳ್ಳುವ ಹಾಗೆ, ಊಟಕ್ಕೆ ಕರೆದದ್ದೇ ಸಾಕು, ಯಾಂತ್ರಿಕವಾಗಿ ಎದ್ದು ನಡೆದಳು.

ಕಮಂಗಿ ಕೇಶವನಿಗೆ ಮೇಷ್ಟ್ರು ಅನ್ನೋ ಸೀರಿಯಸ್‌ನೆಸ್ ಇಲ್ಲ. ಕಂಡ ಕಂಡ ಹುಡುಗಿಯರ ಜೊತೆಗೆ ಮಜ್ನೂ ಪಾರ್ಟ್ ಮಾಡೋಕೆ ನೋಡ್ತಾನೆ. ಆದರೆ ಹಲ್ಲು ಉದುರಿಸಿಕೊಂಡು ಬರ್ತಾನೆ, ಕಾಲೇಜಲ್ಲೆಲ್ಲಾ ಗುಲ್ಲೋ ಗುಲ್ಲು, ಪ್ರಿನ್ಸಿಪಾಲರು ಕರೆದು ಕೇಳಿದ್ದಕ್ಕೆ, 'ನೀನು ಮುದುಕ, ನಿಮಗೇನು ಗೊತ್ತು ಪ್ರೇಮ ಮಾಡೋದು, ವಯಸ್ಸಿನಲ್ಲಿ ಇರೋ ನಾವು ಈಗ ಇಂಥ ಕೆಲಸ ಮಾಡದೆ ನಿಮ್ಮ ವಯಸ್ಸಿನಲ್ಲಿ ಮಾಡೋಕೆ ಆಗುತ್ಯೆ! ಅಂಥ ಧೈರ್ಯವಾಗಿ ಉತ್ತರಿಸಿದ. ಜೊತೆಗೆ ನನ್ನ ಲೈಫು ನನಗೆ ಇಷ್ಟ ಬಂದ ಹಾಗೆ ಇರ್ತೀನಿ. ನೀವೇನೂ ಕೇಳಬೇಕಾದ್ದಿಲ್ಲ ಅಲ್ಲದೆ ಹುಡುಗಿಯರೇ ನನ್ನ ಹಿಂದೆ ಬಿದ್ದರೆ ನಾನೇನು ಮಾಡ್ಲಿ'- ಅಂತ ರೊಯ್ಯಂತ ಮಾತಾಡಿ ಬಾಯಿ

ಮುಚ್ಚಿಸಿಬಿಟ್ಟ;– ವೀಣಾಗೆ ಒಳಗೊಳಗೇ ಖುಷಿ. ಹೀಗೆ ಬಾಯಿ ಬಡಿಯೋ ಜನ ಒಬ್ಬರಿಬ್ಬರಾದರೂ ಇದಾರಲ್ಲಾಂತ ರಸಗುಲ್ಲ ತಿಂದಷ್ಟು ಸಂತೋಷ. "Dirty fellow" ಎಂದು ಬಯ್ಯುತ್ತಿದ್ದ ವೀಣಾಳಿಗೆ ಬೇಡ ಬೇಡವೆಂದರೂ ಕೇಶವನ ನೆನಪು ಬಂದಿತ್ತು. ಪ್ರಿನ್ಸಿಪಾಲರನ್ನು ಪ್ರತಿಭಟಿಸುವಾಗ ಕೇಶವನು ಬೇಕೆನಿಸುತ್ತಿದ್ದರೂ, ಉಳಿದ ವೇಳೆಯಲ್ಲಿ ಕೇಶವನನ್ನು ಕಂಡರೆ ಸಿಡುಕುತ್ತಿದ್ದಳು. ಕೇಶವನೂ ಸುಮ್ಮನೆ ಇರುತ್ತಿರಲಿಲ್ಲ. ಬೇಕಂತಲೇ ಅವಳನ್ನು ರೇಗಿಸುವುದಕ್ಕೆ, ಯಾವಾಗಲೂ ಅವಳ ಬಳಿಗೆ ಬಂದು, Hello darling ಹೇಗಿದ್ದೀಯಮ್ಮಾ? ಎಂದೇ ಸಂಬೋಧಿಸುತ್ತಿದ್ದ. ಕೂಡಲೇ ಜ್ವಾಲಾಮುಖಿಯಾಗಿ, 'you idiot, rogue ಎಂದು ಬೈಗಳನ್ನು ಸುರಿಸುತ್ತಿದ್ದಳು. ಖುಷ್ ಖುಷಿಯಾಗಿ ಕೇಶವ, ಏನಮ್ಮ ಈ ಮಜ್ನೂ ಮೇಲೆ ಉರಿಕಾರಿದರೆ ಏನಾಗ್ಬೇಕು?... ಹೋಗಲಿ ನಾವಿಬ್ಬರೂ ಡ್ಯೂಯೆಟ್ ಹಾಡೋಣ, ಸ್ವಲ್ಪ ಸಮಾಧಾನವಾಗುತ್ತೆ, ಅಂತ ಲೈಟಾಗಿ ಮಾತನಾಡುವುದನ್ನು ಕೇಳಿದಾಗೆಲ್ಲ ಕೆನ್ನೆ ಊದಿ ಬಿಡುತ್ತಿತ್ತು. ಆದರೂ ಅವನು ಮಾತ್ರ ಕೆನ್ನೆ ಸವರಿಕೊಂಡು, ಚಪ್ಪರಿಸಿಕೊಂಡು ಏನೂ ಆಗದವನ ಹಾಗೆ ಅಲ್ಲಿಂದ ಹೊರಟುಬಿಡುತ್ತಿದ್ದ.

ಮೊದಲನೆ ದಿವಸ ಆಕಸ್ಮಿಕವಾಗಿ ಇಬ್ಬರೂ ಅದೇ ಕಾಲೇಜ್ ಇಂಟರ್‌ವ್ಯೂಗೆ ಬಂದಿದ್ದರು. ಇಷ್ಟು unexpected ಆಗಿ ಇಲ್ಲಿ ಮೀಟಾಗಿದ್ದಕ್ಕೆ ಒಂದು ಕಡೆ ಆಶ್ಚರ್ಯ, ಮತ್ತೊಂದು ಕಡೆ, ವೀಣಾಗೆ ಈ ಲೋಫರ್ ಇಲ್ಲಿಗೂ ಬಂದನೇ ಅಂತ ಸಂಕಟ. ಅವಳಿಗೇನೂ ಅವನು ಕ್ಲಾಸ್‌ಮೇಟಲ್ಲ. ಆದರೆ ಇಬ್ಬರೂ ಕಾಲೇಜ್‌ಮೇಟ್ಸ್, ಕಲ್ಚರಲ್ ಪ್ರೋಗ್ರಾಮ್ಸ್‌ನಲ್ಲಿ ಇಬ್ಬರೂ ಸ್ವಲ್ಪ ಲೀಡಿಂಗ್‌ನಲ್ಲಿದ್ದರು. ಹಾಗೇ ಪರಿಚಯ ಜಾಸ್ತಿಯಾಯ್ತು. ನೋಡೋಕೆ ಕೇಶವ ತುಂಬಾ ಚೆನ್ನಾಗಿದ್ದ. ಆದರೆ ಅವನ ಚೇಷ್ಟೆಗಳು ಕಮಂಗಿ ಚೇಷ್ಟೆಗಳಾದ್ದರಿಂದಲೇ ಅವನಿಗೆ ಕಮಂಗಿ ಕೇಶವ ಇಲ್ಲ ಕೆ. ಕೇಶವ ಅಂತ ಹೆಸರಾಯ್ತು. ಚೇಷ್ಟೆಯಷ್ಟೇ ಅವನ ಬುದ್ಧೀನೂ ಚುರುಕಾಗಿತ್ತು. ಅದಕ್ಕೇ ಅವನಿಗೆ ಬಂಡಿಗಟ್ಟಲೆ ಫ್ರೆಂಡ್ಸ್, ಆದರೆ ಯಾಕೋ, ವೀಣಾ! ಸ್ವಲ್ಪ ಹತ್ತಿರದ ಫ್ರೆಂಡಂತಿದ್ದಳು. ಆದರೆ ಅವನಿಗೆ ಹಾಗೆ ಅನ್ನಿಸಿತ್ತು. ಅವನ ಬಗ್ಗೆ ಅಸಹ್ಯವಿದ್ದರೂ ಅವನ ಸ್ನೇಹ ಮಾತ್ರ ಯಾಕೋ ಸ್ವಲ್ಪ ಹಿತವಾಗೇ ಅನ್ನಿಸುತ್ತಿತ್ತು. ಜಗಳ ಮಾಡೋಕೆ ಅವನ ಜೊತೆ ಬಯಸುವ ಹಾಗೆ ಕಾಣುತ್ತಿತ್ತು.

ಕೇಶವನಿಗೆ ದಿನಕ್ಕೊಬ್ಬಳು ಹೊಸ ಫ್ರೆಂಡ್ ಮ್ಯಾತೆಮಾಟಿಕ್ಸ್ ಬ್ಲಾಕ್ ಹಿಂದುಗಡೆ. ಕ್ಯಾಂಟೀನ್‌ನಲ್ಲಿ ಲೈಬ್ರರಿ, ಬುಕ್ ಷೆಲ್ಫುಗಳ ಮಧ್ಯೆ ಕೇಶವನ ರೋಮಾನ್ಸ್. ಒಂದು ಸಲ ಹಾಗೇ ಕೇಶವ ವೀಣಾಳನ್ನು ಕೆಣಕುವುದಕ್ಕೆ ಪ್ರಯತ್ನಿಸಿದ. ಆದರೆ ವೀಣಾ ಅಷ್ಟು ಸುಲಭವಾಗಿ ಬಗ್ಗುವ ಘಟವಲ್ಲ. ಅವನ ರೋಮಾನ್ಸ್‌ಗಳೆಲ್ಲ ಕೇವಲ ರಿಹರ್ಸಲ್ ಅಂತ ತಿಳಿದಿದ್ದ ವೀಣಾ ಅವನಿಗಿಂತ ಅದ್ಭುತವಾಗಿ ನಾಟಕವಾಡಿ ಬಗ್ಗು ಬಡಿದಿದ್ದಳು. ಅವತ್ತಿನಿಂದ ಕೇಶವ ವೀಣಾ ಜೊತೆಗೆ ಕೇರ್‌ಫುಲ್ ಆಗಿದ್ದ. ಆದರೆ ಇಬ್ಬರೂ ಈ

ಘಟನೇನ ತುಂಬಾ ಸ್ಪೋರ್ಟಿವಾಗೇ ತಗೊಂಡಿದ್ದರು. ಅಲ್ಲದೆ ಇಬ್ಬರೂ ಕಳ್ಳರೇ ಆಗಿದ್ದರಿಂದ ನಕ್ಕುಬಿಟ್ಟು ಸುಮ್ಮನಾಗಿದ್ದರು.

ಈಗ ಮತ್ತೆ ಒಂದೇ ಕಾಲೇಜಿನಲ್ಲಿ ಸಹೋದ್ಯೋಗಿಗಳು. ಕೇಶವ ಒಂದಷ್ಟೂ ಚೇಂಜಾಗಿಲ್ಲ ಹಾಗೇ ಇದ್ದಾನೆ. ಅದೇ ಸ್ಟೈಲು, ಅದೇ ಸಿಲ್ಲಿ ಜೋಕ್ಸ್. ಅದೇ ಕೋತಿ ಚೇಷ್ಟೆಗಳು. ಸದ್ಯ ಇಂಟರ್‌ವ್ಯೂನಲ್ಲಿ ಹಾಗೇನೂ ಮಾಡ್ದೆ ಇದ್ದದ್ದು ಪುಣ್ಯ. ಆದರೆ ಸ್ಟೂಡೆಂಟ್ಸ್ ಪಾಡು? ಎಂದು ಯೋಚಿಸುತ್ತಿದ್ದ ವೀಣಾಳಿಗೆ ಸ್ಟೂಡೆಂಟ್ಸ್ ದೊಡ್ಡ ಸಮಸ್ಯೆಯೇನಲ್ಲ, ಅನ್ನುವ ಸತ್ಯ ಸುಳಿಯಿತು. ಅವರಿಗೇನು ಜಾಲಿಯಾಗಿ ಒಂದು ಗಂಟೆ ಅದೂ ಇದೂ ಹೇಳ್ತಾ ಇದ್ದರೆ ಸಾಕು. ಈಗಿನ ಸ್ಟೂಡೆಂಟ್ಸೇ ಹಾಗೆ. ಅವರಿಗೇನು ಬೇಕಿಲ್ಲ. ಮಾರ್ಕೆಟ್ ಗೈಡ್ಸಿವೆ. ಪರೀಕ್ಷೆ ಟೈಮಲ್ಲಿ ಕೊಂಡು ಕೊಂಡು ಗಬಗಬ ಪುಟ ತಿರುವಿ ಹಾಕಿದರೆ ಜೀವನಾಂಶಕ್ಕೇನೂ ಮೋಸ-ಇಲ್ಲ. ಅಂಥಾದ್ದರಲ್ಲಿ ಅವನು ಪಾಠ ಮಾಡಿದರೇನು, ಬಿಟ್ಟರೇನು? ಕಪಿ ಕೇಶವನಿಗೆ ಸ್ಟೂಡೆಂಟ್ಸ್ ಜೊತೆ ತೀರ ಸಲುಗೆ. ಅವನಂತೂ ಸ್ಟೂಡೆಂಟ್ಸ್ ಪೆಟ್, ಅವನದೆಲ್ಲ ವೆಸ್ಟರ್ನ್ ಸ್ಟೈಲು. ಭಾರತೀಯ ಡ್ರಿಂಕುಗಳು ಬೇಕಿಲ್ಲ. ಸ್ಟೂಡೆಂಟ್ಸ್ ಜೊತೆ ವಾರಕ್ಕೇನಿಲ್ಲವೆಂದರೆ ನಾಲ್ಕೈದು ಸಲ ಕಾಕ್‌ಟೈಲ್ ಪಾರ್ಟಿ, ಕ್ಯಾಬರೆ. ಎಂದಾದರೂ ಎದುರು ಬಿದ್ದು ಕೇಳಿದರೆ ಅಷ್ಟೊಂದು ರೆಸವೇಷನ್ ಬೇಡಮ್ಮ... ಅಂತ ತೂರಾಡುತ್ತಾ ತೀರಾ ನಾಟಕೀಯವಾಗಿ ಮಾತಾಡ್ತಿದ್ದ. ಇನ್ನು ಇವನ್ಜೊತೆಗೇನು ಚರ್ಚೆ ಅಂತ ಸುಮ್ಮನೆ ಇದ್ದು ಬಿಡ್ತಿದ್ದೆ.

ನಮ್ಮಿಬ್ಬರ ಸಲುಗೆ, ವಾಗ್ವಾದ, ಒರಟುತನ ನೋಡ್ತಿದ್ದ ನಮ್ಮ ಕೊಲಿಗ್ಸ್ ನಮ್ಮನ್ನು ಅದೊಂಥರಾ ವಿಚಿತ್ರವಾಗಿ ನೋಡೋವ್ರು. ನಾವಿಲ್ಲದೆ ಇದ್ರೆ ಗುಸ ಗುಸ ಪಿಸ. ಆದರೆ ನೇರಾಗಿ ಕೇಳೋ ಧೈರ್ಯ ಇರಲಿಲ್ಲ. ಅದ್ಯಾಕೋ ನಮ್ಮ ವಿಷಯವಾಗಿ ಅವರೆಲ್ಲಾ ತಲೆ ಕೆಡಿಸ್ಕೊಳ್ತಿದ್ರು. ಅದನ್ನ ನೆನೆಸಿಕೊಂಡರೇನೇ ನಮ್ಮಿಬ್ಬರಿಗೂ ನಗು ತಡೆಯುವುದಕ್ಕೇ ಆಗ್ತಿರ್ಲಿಲ್ಲ. ನನ್ನ ಫ್ರೆಂಡ್ (ಗರ್ಲ್ ಫ್ರೆಂಡ್) ಒಂದು ದಿವಸ ನನ್ನನ್ನು ಕೇಳಿಯೇ ಬಿಟ್ಟಳು. 'ಅದೇನೇ ಅವ್ನು, ಕೇಶವ, ನೀನಷ್ಟು ಉಗೀತಿದ್ರೂ, ಬೈತಿದ್ರೂ ಮೇಲೆ ಮೇಲೆ ಬಿದ್ದು ಮಾತಾಡಿಸ್ತಾನೆ'- ಅಂತ, ನನಗೆ ತಕ್ಷಣ ಏನು ಹೇಳ್ಬೇಕು ತಿಳೀಲಿಲ್ಲ. ಆದರೆ ಅರ್ಧ ಕ್ಷಣದಲ್ಲಿ ಏನೋ ಹೊಳೆದು ಅವ್ನು ನನ್ನ ಭಾವಿಗಂಡ ಕಣೆ. ಅವ್ನ ನಾನು ಮದುವೆಯಾಗ್ತೀನಿ, ಅಂತ ರೈಲು ಬಿಟ್ಟೆ. ಅವಳಿಗೆ ಯಾಕೋ ಆಶ್ಚರ್ಯ ತಡೆಯೋಕಾಗಲಿಲ್ಲ. ಗೋಲಿ ಗಾತ್ರದ ಕಣ್ಣನ್ನ ನಿಂಬೇಕಾಯಿ ಗಾತ್ರ ಅಗಲಿಸಿ ಕೇಳಿದಳು. "ಹೌದೇನೇ? ಇದೇನೆ ನಮಗ್ಯಾರಿಗೂ ಗೊತ್ತಿಲ್ದೆ ಹೀಗೆ ದಿಢೀರಂತ ಅವನ್ಜೊತೆ ಮದುವೆ ಖಾಯಂ ಮಾಡ್ಕೊಂಡ್ಬಿಟ್ಟೆ?"- ಸಂತೋಷ ತಂದುಕೊಳ್ಳಲು ಪ್ರಯತ್ನಿಸಿದರೂ ಅಸೂಯೆಯ ಧ್ವನಿ ಅಡಗಿತ್ತು ಅವಳ ಮಾತಿನಲ್ಲಿ. ಅದನ್ನು ನೋಡ್ತಿದ್ರೆ ನನಗೆ ಒಳಗೊಳಗೇ ನಗು ತಡೆಯಲಾಗಲಿಲ್ಲ. ಆದರೂ ಒತ್ತರಿಸಿ ಬರುತ್ತಿದ್ದ ನಗುವನ್ನು

ತಡೆಯೋಕೆ ಪ್ರಯತ್ನ ಪಡ್ತಿದ್ದೆ. ಒಂದು ಸಲ 'ಪಾಪ' ಅನ್ನಿಸ್ತು. ಕೇಶವನ್ನ ಒಮ್ಮೆ ತನ್ನನ್ನು ಮದುವೆಯಾಗುವಂತೆ ಕೇಳಿದ್ದಳಂತೆ. ಆದರೆ ಕೇಶವ ಫ್ಲಾಟಾಗಿ ಆ ಬೇಡಿಕೆಯನ್ನು ತಿರಸ್ಕರಿಸಿದ್ದನಂತೆ. ಅದಕ್ಕೇ ಅವರಿಬ್ಬರೂ ಮಾತಾಡ್ತಿರಲಿಲ್ಲ. ನನಗಂತೂ ನನ್ನ ಆಕ್ಟಿಂಗ್ ತುಂಬಾ ಪರಿಣಾಮಕಾರಿಯಾಗಿದೆ ಅನ್ನಿಸಿತು. ಇದು ಇಷ್ಟಕ್ಕೇ ನಿಲ್ಲಲಿಲ್ಲ. ಅವಳಿಂದ ಇಡೀ ಕಾಲೇಜಿಗೇ ಈ ಸುಳ್ಳು ವದಂತಿ ಹಬ್ಬಿತು. ಮೊದಲೇ ಪ್ರಿನ್ಸಿಪಾಲರಿಗೆ ನಾನಂದ್ರೆ ಅಷ್ಟಕ್ಕಷ್ಟೇ. ಅಂಥಾದ್ದರಲ್ಲಿ ಇದು ಅವರಿಗೆ ಒಳ್ಳೇ ಆಹಾರವಾಯ್ತು. ನನ್ನನ್ನು ಕರೆದು ವಾರ್ನಿಂಗ್ ಕೊಟ್ಟರು. ಆದರೆ ನಾನೇನೂ ಸುಮ್ಮನಿರಲಿಲ್ಲ. "ನಾನು ಮದುವೆಯಾದ್ರೆ ನಿಮ್ಮ ಗಂಟೇನು ಹೋಗುತ್ತೆಂತ" ತಿರುಗಿ ಜವಾಬು ಕೊಟ್ಟು ಸರಸರ ಒಂದು ಲೀವ್ ಲೆಟರ್ ಗೀಚಿ ಬಂದ್ಬಿಟ್ಟಿದ್ದೆ.

ಈಗ ನೋಡಿದರೆ ಏನೋ ಒಂದು ಥರಾ ಭಯವಾಗ್ತಾ ಇದೆ. ಆ 'idiot' ಕೇಶವ ಕಾಣಿಸಿದರೆ ಚೆನ್ನಾಗಿ ಥಳಿಸಿ ಬಿಡಬೇಕು ಅಂದ್ಕೊಂಡೆ. ಅವನೂ ಅದೇ ಕಾಲೇಜಿಗೆ ಬರದಿದ್ದರೆ ಇಷ್ಟೆಲ್ಲಾ ರಾದ್ಧಾಂತ ಆಗ್ತಿರ್ಲಿಲ್ಲ. ಅಂತ ಮನಸ್ಸಿಗೆ ಅನ್ನಿಸಿದರೂ, ಅವನನ್ನು ತಡೆಯೋಕೆ ತನಗೇನು ಹಕ್ಕಿದೆ. ನಮ್ಮಪ್ಪ ಕಟ್ಟಿಸಿದ ಕಾಲೇಜೇನೂ ಅಲ್ವಲ್ಲ– ಎಂದುಕೊಂಡು ಪಕ್ಕ ತಿರುಗಿದಳು. ಮಂಚ ಕಿರುಗುಟ್ಟಿತು.

* * *

ಅದೇ ಮುಖ

ಹರಿದ ರೆಕ್ಕೆಯ ಹಕ್ಕಿ

ವಿಪರೀತ ಬಿಸಿಲು. ಜೂನ್ ತಿಂಗಳಿನ ಈ ಬಿಸಿಲು ಹೊರಗಿನದನ್ನು ಬತ್ತಿಸುವ ಹಾಗೆ ಒಳಗನ್ನೂ ಬತ್ತಿಸುವಂತೆ ಕಾಣುತ್ತಿತ್ತು. ಒಂದೆರಡು ಹೆಜ್ಜೆ ಹೊರಗೆ ಹೋಗುವುದಕ್ಕೂ ಭಯವಾಗುತ್ತಿತ್ತು. ಕೆಂಡಬಿಸಿಲಿಗೆ ಜಗತ್ತೇ ಸ್ತಬ್ಧಗೊಂಡಿತ್ತು. ಹಕ್ಕಿ ಪಕ್ಷಿ ಜೀವಜಂತುಗಳೂ ಕೂಡ ಬಿಸಿಲಿನ ಭೀಷಣತೆಗೆ ಹೆದರಿ. ನೆರಳನ್ನು ಆಶ್ರಯಿಸಿ ಎಲ್ಲೆಲ್ಲೋ ಮೂಲೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದಿರಬೇಕೆನಿಸಿತು. ಒಂದು ಬಗೆಯ ಗಂಭೀರ ಮೌನದ ಸಾಮ್ರಾಜ್ಯವೇ ವ್ಯಾಪಿಸಿತ್ತು. ಕ್ರೂರ ಬಿಸಿಲಿನ ಉರಿಗೆ ಹೆದರಿ ಲೋಕವ್ಯಾಪಾರವೇ ಸ್ಥಗಿತಗೊಂಡಂತಿತ್ತು.

ಸುಧಾಳ ಮನಸ್ಸೂ ಒಳ ಧಗೆ ಹೊರ ಧಗೆಗೆ ಅಸ್ತವ್ಯಸ್ತಗೊಂಡಿತ್ತು. ಆಲಸ್ಯದ ಆಕಳಿಕೆಗಳು ಒಂದರ ಹಿಂದೊಂದರಂತೆ ಸಾಲು ಸಿಪಾಯಿಗಳಂತೆ ತಡೆರಹಿತವಾಗಿ ಹೊರಟವು, ಬಾಯಿಂದ. ಮೈಚಾಚಿ ಮಲಗಿದ್ದ ಮಂಚವೂ ಚುಚುಕು ಮುಳ್ಳುಗಳಂತೆ ತಿವಿದ ಅನುಭವಕ್ಕೆ ಎದ್ದು ಕುಳಿತು, ಇದ್ದ ಒಂದೇ ಒಂದು ಕಿಟಕಿಗೆ ಮುಖಕೊಟ್ಟು ನಿಂತಳು. ಅಬ್ಬಾ! ಎಂತಹ ಪ್ರಶಾಂತತೆ! ಎಂದುಕೊಂಡಳು. ದೂರ ದೂರಕ್ಕೆ ಹರಿಯಿತು ಅವಳ ದೃಷ್ಟಿ. ಮನೆಯ ಮುಂದಿನ, ತನ್ನಂತೆ ಬಡಕಲಾದ, ಬೆತ್ತಲು ಮರಗಳನ್ನು ನೋಡಿದಳು; ಸತ್ತು ಬಿದ್ದಂತೆ ಕಾಣುತ್ತಿದ್ದ ರಸ್ತೆಗಳನ್ನೂ ನೋಡಿದಳು, ನಿಟ್ಟುಸಿರ ನಡುವಿಂದ ವ್ಯಂಗ್ಯದ ಮಂದಹಾಸವೊಂದು ಹಾದು ಸುಳಿಯಿತು. ಇದ್ದಕ್ಕಿದ್ದಂತೆ ವಿಚಾರಗಳ ಮೂಟೆ ಬಿಚ್ಚಿಕೊಂಡಿತು. ತನ್ನ ಒಂಟಿ ಬದುಕೂ ಕೂಡಾ ಈ ಪರಿಸರದಷ್ಟೇ ಭಯಂಕರವೆನಿಸಿತು. ಬೀದಿಗಳು ಭಿಕ್ಷೆಯ ಬದುಕಿನ ವಶಕ್ಕೆ ಒಪ್ಪಿಸಿ ಅಜ್ಞಾತರಾಗಿರುವ ತಂದೆ ತಾಯಿಗಳ ಬಗ್ಗೆ ಕ್ರೋಧ ಸ್ಫೋಟಿಸಿತು ಆದರೇನು? ಅವರೆದುರಿದ್ದರೆ ತನ್ನ ಆಕ್ರೋಶಕ್ಕೆ ಅರ್ಥವಾದರೂ ಇರುತ್ತಿತ್ತು. ಅವರಿಲ್ಲದೆ ಈ ಆಕ್ರೋಶ. ದ್ವೇಷ ಕೇವಲ ಮನೋದೌರ್ಬಲ್ಯವೆನಿಸಿತು. ತಡೆದುಕೊಂಡಳು. ಒಂದು ಕ್ಷಣದಲ್ಲಿ ಕುದಿವ ಮನಸ್ಸು ತಣ್ಣಗಾಗಿ ಮೆಲ್ಲಗೆ ವಾತ್ಸಲ್ಯ ಪ್ರೀತಿಗಳ ನೆರೆ ತುಂಬಿ ಬಂತು. ರಸ್ತೆಗೆ ಬಿದ್ದಿದ್ದ ತನ್ನನ್ನು ಎತ್ತಿಕೊಂಡು ಹೋಗಿ ಮಮತೆಯ ಸುಧೆಯನ್ನುಣಿಸಿದ ಮುದುಕಿಯ ನೆನಪಾಯಿತು. ಪಾಪ! ಮುದುಕಿ, ತಪ್ಪಿಹೋಗಿದ್ದ ತನ್ನನ್ನು, ತನ್ನ ಅಪ್ಪ ಅಮ್ಮನಿಗೆ ತಲುಪಿಸಲು ಎಷ್ಟು ಪರದಾಡಿದಳು! ಅವರಿವರಿಗೆಲ್ಲಾ ಸುಳುಹು ಕೊಟ್ಟಳು. ಪೋಲೀಸ್ ಠಾಣೆಗೆ ದೂರಿತ್ತಳು.

ಪ್ರಯೋಜನವಾಗಲಿಲ್ಲ. ಹಾಗಾಗಿ ಅವಳಲ್ಲಿಯೇ ಉಳಿಯಬೇಕಾಯಿತು. ಅವಳ ನೆರಳಿನಂಗಳದಲ್ಲಿಯೇ ಅರಳಬೇಕಾಯಿತು.

ಮುದುಕಿಗೆ ತನ್ನ ಮೇಲೆ ವಿಪರೀತ ಅಕ್ಕರೆ. ಆದರೆ ತಾನೇಕೆ ಅವಳೊಂದಿಗೆ ಆತ್ಮೀಯವಾಗಿ ಬೆಸೆದುಕೊಳ್ಳಲಿಲ್ಲ? ಅವಳನ್ನು ಕಂಡಾಗ ಉಪಕಾರ ಸ್ಮರಣೆಯಾಗುತ್ತಿತ್ತೇ ಹೊರತು ತಾಯಿಯೆಂದು ಭಾವಿಸಲು ತನ್ನಿಂದಾಗುತ್ತಿರಲಿಲ್ಲ.

ಬುದ್ಧಿ ಬರುತ್ತಿದ್ದಂತೆ ಅವಳ ಕೊಳಕು ಗುಡಿಸಲು, ಮಾಸಲು ಬಟ್ಟೆ, ಮಡಕೆ ಪಾತ್ರೆಗಳು, ಉಸಿರು ಕಟ್ಟಿಸುವ ಕತ್ತಲಗೂಡು– ಎಲ್ಲವೂ ಅಸಹ್ಯವೆನಿಸುತ್ತಿತ್ತು. ಹತ್ತಿರದ ಸರ್ಕಾರಿ ಶಾಲೆಯಲ್ಲಿ ಎಂಟನೇ ತರಗತಿಗೆ ಮಂಗಳ ಹಾಡಿದ್ದಳು. ತೀರಾ ಬುದ್ಧಿವಂತೆ ತಾನಲ್ಲವಾದ್ದರಿಂದ, ತನಗೆ ಇನ್ನು ಓದಿನ ಕಾಟ ಬೇಡವೆಂದುಕೊಂಡಳು. ಆದರೆ ಹೊತ್ತು ಹೋಗುವುದು ಹೇಗೆ? ಗೆಳೆಯರಿಲ್ಲ, ಬಂಧುಗಳಿಲ್ಲ, ಪರಿಚಿತರಿಲ್ಲ, ಇದ್ದುದೆಂದರೆ ಆ ಮುದುಕಿಯ ಅಣ್ಣನ ಮಗ. ಅವನೂ ಅದೇನೋ ರೈಲ್ವೆಯಲ್ಲಿ ಪೋರ್ಟರನಾಗಿ ಕೆಲಸ ಮಾಡುತ್ತಿದ್ದನಂತೆ. ಯಾವಾಗಲಾದರೊಮ್ಮೆ ಬಂದಾಗ, ನೋಡಿದ್ದ ನೆನಪು. ಆತ ನೋಡಲು ಕೆಂಪಗೆ ಚೆನ್ನಾಗಿಯೇ ಇದ್ದ. ವಯಸ್ಸು ಮೂವತ್ತೈದು ಇದ್ದಿರಬಹುದು. ತಾನಿನ್ನೂ ಚಿಕ್ಕವಳಾಗಿದ್ದರಿಂದ ಅವನಿಂದ ಯಾವ ತೊಂದರೆಯೂ ಇರಲಿಲ್ಲ. ಆದರೆ ಒಮ್ಮೆ ನೆನಪಾದಂತೆ ಎದೆ ನಡುಗಿತು.... ಹದಿನೈದರ ಹರಯ. ಮೊದಲ ಬಾರಿಗೆ ಋತುಮತಿಯಾಗಿದ್ದಳು. ಮುದುಕಿ ಹೇಳುವವರೆಗೆ ಅದೇನೆಂದು ತಿಳಿದಿರಲಿಲ್ಲ. ಮುದುಕಿಯ ಬಾಡಿದ ಮುಖದಲ್ಲಿ ಸಣ್ಣಗೆ ಗೆಲುವಿನ ಮಿಂಚೊಂದು ಮೂಡಿತು. "ಅಮ್ಮಿ, ನನ್ನ ಕಣ್ಮುಂದೆ ನಿನ್ನ ಮದುವೇನ ನೋಡ್ತೀನೋ ಇಲ್ಲ ಅಂತಿದ್ದೆ. ಆದರೆ ಆ ಅದೃಷ್ಟ ನನಗೆ ಇದೇಂತ ಅನ್ಸಿದೆ."

ದಿನದಿನದ ಊಟಕ್ಕೇ ಮುಗ್ಗಟ್ಟಿನಲ್ಲಿ ನರಳುತ್ತಿದ್ದ ಮುದುಕಿ ತನ್ನ ಮದುವೆ ವಿಚಾರ ಮಾತಾಡಿದ್ದು ನೆನಪಾಗಿ ವ್ಯಂಗ್ಯವಾಗಿ ನಕ್ಕಳು. ಆಗ ಆ ಮಾತಿಗೆ ಸುಧಾ ಹೆಚ್ಚಿನ ಬೆಲೆ ಕೊಟ್ಟಿರಲಿಲ್ಲ. ಯಾವ ಪ್ರತಿಕ್ರಿಯೆಯೂ ತನ್ನಿಂದ ಬರದಿದ್ದುದು ನೋಡಿ ಮುದುಕಿ ಉತ್ತೇಜನ ಪಡೆದಳು. ಆ ಕ್ಷಣವೇ ಮನಸ್ಸಿನಲ್ಲಿ ಏನನ್ನೋ ನಿರ್ಧರಿಸಿದಂತೆ ಕಂಡಳು.

ಸುಧಾ ದೊಡ್ಡವಳಾದ ಒಂದು ವರ್ಷಕ್ಕೆ ಮತ್ತೆ ಆ ಪೋರ್ಟರ್ ಗಂಗುಲು ಪ್ರತ್ಯಕ್ಷನಾದ. ಮುದುಕಿಗೆ ಇತ್ತೀಚೆಗೆ ಯಾವುದೋ ಬೇನೆ ಇದ್ದದ್ದಕ್ಕೆ ಸುಸ್ತಾಗಿ ಮಲಗಿದ್ದಳು. ಗಂಗುಲುವಿಗೆ ಪಾಪ ಅನಿಸಿರಬೇಕು. ಎಷ್ಟು ಬೇಡವೆಂದರೂ ರೈಲ್ವೆ ಆಸ್ಪತ್ರೆಗೆ ಕರ್ಕೊಂಡು ಹೋದ. ಅದೇನೋ ಕ್ಷಯ ಅಂತ ಡಾಕ್ಟ್ರು ಹೇಳಿದ್ದರಂತೆ. ಅದು ಯಾವುದೂ ತನಗೆ ತಿಳೀತಿರಲಿಲ್ಲ. ಕೆಟ್ಟದಾಗಿ ಕೆಮ್ಮುತ್ತಾ ಸಂಕಟಪಡುತ್ತಿದ್ದುದಷ್ಟೇ ಅವಳಿಗೆ ಗೊತ್ತಿತ್ತು. ಒಳ್ಳೆ ನಿದ್ದೆ ವೇಳೆಯುಲ್ಲಿ, ಆ ಗುಡಿಸಲಲ್ಲಿ ಖೊಖ್ ಖೊಖ್ – ಎಂದು ಕೆಮ್ಮಿ ಸಂಕಟಪಡುತ್ತಿದ್ದರೆ ನಿದ್ದೆ ಹಾಳಾದ್ದಕ್ಕೆ ವಿಪರೀತ ಸಿಟ್ಟಿನಿಂದ ಶಪಿಸಿದ್ದಳು.

ಆ ಮನೆ, ಆ ಮುದುಕಿ, ಗಂಗುಲು, ಅಕ್ಕಪಕ್ಕದವರೂ ಎಲ್ಲವೂ ಅಸಹ್ಯವೆನಿಸಿ ಓಡಿಹೋಗಬೇಕೆನಿಸಿತು. ತನ್ನ ಗೆಳತಿ 'ಚಂದ್ರಿ'ಯ ಹಾಗೇ ತಾನೂ ಇದ್ದಿದ್ದರೆ, ತನಗೂ ಅಂತಹ ಮನೆ, ಜನ ಇದ್ದಿದ್ದರೆ?... ಎಷ್ಟೋ ಸಲ ಯೋಚಿಸಿದ್ದಳು. ಆದರೆ ಅದೆಲ್ಲವೂ ಕನಸೆಂದು ಕೊಂಡಾಗ ದುಃಖ ಉಕ್ಕಿ ಬರುತ್ತಿತ್ತು... ಮರುಗಳಿಗೆಯೇ ಮುದುಕಿ ತನಗಾಗಿ ಪಡುತ್ತಿದ್ದ ಪಾಡು ನೆನಪಿಗೆ ಬಂದು, ಹೃದಯ ಕೃತಜ್ಞತೆಯತ್ತ ತಿರುಗುತ್ತಿತ್ತು. ಬಂದದ್ದನ್ನೇ ಅನುಭವಿಸಬೇಕೆಂದು ಸುಮ್ಮನೆ ಅವಕಾಶಕ್ಕಾಗಿ ಕಾಯುತ್ತಿದ್ದಳು. 'ತನಗೂ ಒಂದು ಕೆಲಸ ಸಿಕ್ಕರೆ ಹೊರಗೆ ಓಡಾಡಬಹುದು, ಬಯಸಿದ್ದನ್ನೆಲ್ಲಾ ಕೊಳ್ಳಬಹುದು, ಸ್ನೇಹಿತರು ಸಿಗುತ್ತಾರೆ. ಅವರ ಜೊತೆಯಲ್ಲಿ ಓಡಾಡಿ ಅವರಂತೇ ತನಗೂ ಗೌರವ ಸಿಗುತ್ತದೆ'– ಎಂದೆಲ್ಲಾ ಕನಸು ಕಂಡಳು.

ಗಂಗುಲು ಆಸ್ಪತ್ರೆಗೆ ಕರೆದೊಯ್ದಿದ್ದ, ಆದರೆ ಬರುವಾಗ ಒಬ್ಬನೇ ಬಂದ. 'ಧಡ್ ಧಡ್' ಬಾಗಿಲು ಬಡಿದ ಶಬ್ದಕ್ಕೆ ಬೆಚ್ಚಿ ಬಾಗಿಲು ತೆಗೆದರೆ, ಗಂಗುಲು ತೂರಾಡುತ್ತಿದ್ದ. ಸೀಮೆ ಎಣ್ಣೆ ದೀಪದ ಮಂದ ಬೆಳಕಿನಲ್ಲಿ ಅವನ ಮುಖ ಸ್ಪಷ್ಟವಾಗಿ ಕಾಣಲಿಲ್ಲ. ಆದರೂ ಏಕೋ ಭಯವಾಯಿತು. ಆದರೂ ಧೈರ್ಯ ತಂದುಕೊಂಡು 'ಗಂಗಣ್ಣ – ಅಜ್ಜಿ ಹೇಗಿದ್ದಾಳೆ? ಎಲ್ಲಿ ಬಿಟ್ಟು ಬಂದೆ?' ಎಂದು ಕೇಳಿದಳು. ಅದಕ್ಕೆ ಗಂಗುಲು ಅಮಲಿನಲ್ಲಿಯೇ ತೊದಲುತ್ತಾ ಉತ್ತರಿಸಿದ– 'ಲೇ ಹುಡುಗಿ ಒಂದು ಚೂರು ನೀರು ತತ್ತಾರೆ – ಮುದುಕಿ ವಿಚಾರ ಆಮೇಲೆ ಏಳ್ತೀನಿ'– ಎಂದ. ಮತ್ತೊಂದು ಮಾತಿಲ್ಲದೆ ಎದ್ದು ನಡೆದಳು. ನೀರನ್ನು ಕೈಗೆ ತೆಗೆದುಕೊಳ್ಳುವ ನೆವದಲ್ಲಿ ಅವಳ ಕೈಯನ್ನು ಬಿಗಿಯಾಗಿ ಹಿಡಿದೆಳೆದ. ಚಿಟ್ಟನೆ ಚೀರಿದಳು. ಅವನಿಂದ ಬಿಡಿಸಿಕೊಳ್ಳಲು ಕೊಸರಾಡಿದಳು. ಆದರೆ ಗಂಗುಲು ಬಿಟ್ಟರೆ ತಾನೇ. ಅವನ ಆಕ್ರಮಣವನ್ನು ಎದುರಿಸಲಾರದೆ ಪ್ರಜ್ಞೆ ತಪ್ಪಿದಳು.

ಬೆಳಿಗ್ಗೆಯವರೆಗೆ ಎಚ್ಚರಾಗಲಿಲ್ಲ. ಗಂಗುಲೂಗೆ ಅಮಲು ಇಳಿದಿತ್ತು. ಯಾಕಿನ್ನೂ ಬಿದ್ದುಕೊಂಡಿದ್ದಾಳೆಂದು ಎಚ್ಚರಿಸಲು ಹೋದ. ಸುಧಾ ಬಿಕ್ಕಿ ಬಿಕ್ಕಿ ಅಳುತ್ತಿದ್ದಳು. ಗಂಗುಲುಗೆ ನಾಚಿಕೆಯಾಯಿತು. ಅಪರಾಧಿಯಂತೆ ನಿಂತು– 'ಹುಡುಗಿ ನನ್ನನ್ನು ಕ್ಷಮಿಸಿಬಿಡು. ಚೆನ್ನಾಗಿ ರಾತ್ರಿ ಕುಡಿದಿದ್ದು – ತಪ್ಪಾಯ್ತು' ಎಂದ. ಸುಧಾ ಉತ್ತರಿಸಲಿಲ್ಲ. ಗಂಗುಲು ಪ್ರಯೋಜನವಿಲ್ಲವೆಂದು ಭಾವಿಸಿ ಗುಡಿಸಲಿಂದ ಹೊರಗೆ ಹೊರಟ.

ಸುಧಾ ಅತ್ತು ಅತ್ತು ಸುಸ್ತಾಗಿದ್ದಳು. ಮುದುಕಿ ತನಗೆ ತನ್ನಂತಹವಳಿಗೆ ಒಂದು ರಕ್ಷಾ ಕವಚವಾಗಿದ್ದಳು. ಒಂದು ದಿನ ಮುದುಕಿಯಿಲ್ಲದೆ ತನಗಾದ ಪಾಡು!– ನೆನಪಿಸಿಕೊಂಡರೆ ನೂರು ಭೂಕಂಪಗಳಾದ ಅನುಭವ. ಆ ಕ್ಷಣವೇ ಈ ಅನಾಥ ಪರಿಸರದಿಂದ, ಅಪಾಯಗಳ ಹುತ್ತದಿಂದ ಹೊರಗೋಡಬೇಕೆಂದು ಅವಳ ಮನಸ್ಸು ಚಡಪಡಿಸಿತು. ಕೂಡಲೇ ಎದ್ದು, ತನ್ನ ಒಂದೆರಡು ಮಾಸಲು ಸೀರೆಗಳನ್ನು ಮುದುರಿ ಗಂಟುಕಟ್ಟಿದಳು. ಗುಡಿಸಲು ಮನೆಯಲ್ಲಿ ಯಾರೂ ಇಲ್ಲದ್ದರಿಂದ ಕಳ್ಳತನದಿಂದ ಹೊರಡಬೇಕಾದ ಅವಶ್ಯಕತೆಯಿರಲಿಲ್ಲ.

ನಡೆದು ನಡೆದು ಹಾದಿಗಳು ಸವೆದವು, ಕಾಲುಗಳು ಸೋತವು ಅಷ್ಟೇ. ಎಲ್ಲಿಗೆಂದು ಯಾರ ಬಳಿಗೆಂದು ಹೋಗುವುದು? ಬೆಳಗಿನಿಂದ ಅನ್ನ ನೀರಿಲ್ಲದೆ ಅಲೆದಲೆದು ದಣಿದಿದ್ದಳು. ತ್ರಾಣವಿಲ್ಲದಿದ್ದರೂ ಕಾಲೆಳೆದುಕೊಂಡು ಒಂದೆರಡು ಹೆಜ್ಜೆಹಾಕುವಲ್ಲಿ ಕಣ್ಣು ಕತ್ತಲು ಬಂದು ದೊಪ್ಪನೆ ಬೀಳುವುದಕ್ಕೂ, ವಿನೋದ್ ತನ್ನ ಮನೆಯಿಂದ ಹೊರಟಿದ್ದಕ್ಕೂ ಸರಿಹೋಯಿತು. ರಸ್ತೆ ದಾಟುವುದರಲ್ಲಿದ್ದ ವಿನೋದನಿಗೆ ತನ್ನ ಮನೆಯ ಹತ್ತಿರದಲ್ಲೇ ಬಿದ್ದಿದ್ದ, ವಯಸ್ಸಿಗೆ ಬಂದ ಹುಡುಗಿಯನ್ನು ಕಂಡು ಅಚ್ಚರಿಯಾದರೂ, ಅದರಲ್ಲಿಯೇ ಕಾಲ ವಿಳಂಬ ಮಾಡದೆ ಹತ್ತಿರ ಬಂದು ಕೈ ಹಿಡಿದು ನೋಡಿದ. ಮೂಗಿನ ಬಳಿ ಕೈಯಿಟ್ಟು ಉಸಿರಾಟಕ್ಕೆ ಪರೀಕ್ಷಿಸಿದ. ನಿರಾಳವಾಗಿ ಉಸಿರಾಡಿದ. ಕೇವಲ ಪ್ರಜ್ಞೆ ತಪ್ಪಿತ್ತು.

ಕೂಡಲೇ ಅವಳನ್ನು ಬೆನ್ನಿಗೆ ಹಾಕಿಕೊಂಡು ಮನೆಯತ್ತ ಮರಳಿದ.

ವಿನೋದನ ಆರೈಕೆಯಿಂದ ಎಚ್ಚೆತ್ತುಕೊಂಡ ಸುಧಾಗೆ ತಾನೆಲ್ಲಿದ್ದೇನೆಂದು ತಿಳಿಯಲು ಹತ್ತು ನಿಮಿಷಗಳು ಬೇಕಾದವು. ವಿನೋದನ ಮುಖದಲ್ಲಿ ಸಮಾಧಾನ ಕಾಣಿಸಿಕೊಂಡಿತು. ಅವನಿಗೆ, ಮನಸ್ಸಿನಲ್ಲಿ ಅವಳ ಬಗ್ಗೆ ವಿವರಗಳನ್ನು ಕೇಳಬೇಕೆನಿಸಿತು. ಆದರೂ ಈಗ ತಾನೇ ಚೇತರಿಸಿಕೊಂಡ ಅವಳ ಮೇಲೆ ಪ್ರಶ್ನೆಗಳ ದಾಳಿಯಾದರೆ, ಹೇಗೆ ತಡೆದುಕೊಂಡಾಳೋ ಎಂಬ ಅಳುಕಿನಿಂದ ಸುಮ್ಮನಾದ. ಅಷ್ಟರಲ್ಲಿ ಹದಿನೈದು ಹದಿನಾರು ವರುಷದ ಹುಡುಗ ಒಳಗಿನಿಂದ ಬಿಸಿ ಕಾಫಿ ಹಿಡಿದು ಬಂದ. ವಿನೋದ್ ಅದನ್ನು ಸುಧಾಗೆ ಕೊಟ್ಟು ಕುಡಿಯಹೇಳಿದ.

ಸುಧಾಗೆ ಎಲ್ಲ ವಿಚಿತ್ರವೆನಿಸಿತು. ಅವಳ ಎಚ್ಚರದೊಂದಿಗೆ ಹಸಿವೂ ಎಚ್ಚರಗೊಂಡಿತ್ತು. ಅದಕ್ಕೇ ಹೆಚ್ಚು ಹೇಳಿಸಿಕೊಳ್ಳದೆ, ಗಟಗಟನೆ ಕಾಫಿ ಹೀರಿದಳು. ಬಟ್ಟಲನ್ನು ಹುಡುಗನ ಕೈಗೆ ಕೊಡುತ್ತಾ ಡಾ॥ ವಿನೋದನತ್ತ ಕೃತಜ್ಞತೆಯಿಂದ ನೋಡಿದಳು. ಎದ್ದು ನಿಂತು, "ಬರ್ತೀನಿ ಸಾರ್, ತುಂಬಾ ಉಪಕಾರವಾಯಿತು"– ಎಂದು ಹೇಳಿ ಹೊರಡಲು ಅನುವಾದಳು. ವಿನೋದ್ ನಗುತ್ತಾ, "ಎಲ್ಲಿಗೇಂತ ಕೇಳಬಹುದಾ?" ಎಂದ ಸೌಜನ್ಯದಿಂದ.

"ನಾನು ಹೋಗುವ ನೆಲೆ ನನಗೇ ತಿಳಿಯದ ಮೇಲೆ ನಿಮಗೇನೂಂತ ಹೇಳಲಿ?" – ಎಂದಳು ನೋವಿನಿಂದ.

"ಅಂದರೆ?"... ತಡೆದು, ಮತ್ತೆ ಕೇಳಿದ.

"ಮನೆ–ಗಿನೆ, ಅಪ್ಪ–ಅಮ್ಮ ಯಾರೂ ಇಲ್ವೆ?" ಅನುಮಾನಿಸುತ್ತಲೇ ಕೇಳಿದ.

"ಇದ್ದಾರೋ ಇಲ್ಲವೋ ಗೊತ್ತಿಲ್ಲ. ಆದರೆ ನಾನು ತಪ್ಪಿ ಹೋಗಿ ಯಾರೋ ಪುಣ್ಯಾತ್ಮರ ಕೈಗೆ ಸಿಕ್ಕಿ ಇಲ್ಲಿವರೆಗೆ ಬದುಕಿದ್ದೇನೆ. ಮುಂದೆ ಹೇಗಾಗುವುದೋ ನೋಡಬೇಕು"– ಎಂದಳು ನಿಟ್ಟುಸಿರಿಟ್ಟು.

"ಈಗ ಅವರಿಲ್ಲವೇನ್ರಿ?"- ಎಂದ ವಿನೋದನ ಪ್ರಶ್ನೆಗೆ ಉತ್ತರ ಹೇಳುವುದಕ್ಕೆ ಕಸಿವಿಸಿಕೊಂಡಳು. ಜೊತೆಗೆ ಎಷ್ಟು ತಡೆದುಕೊಂಡರೂ ಅವಳ ಕಣ್ಣಂಚಿನಲ್ಲಿ ಎರಡು ಹನಿಗಳು ಜಿನುಗಿ ಉದುರಿದವು. ವಿನೋದನಿಗೆ, ಕನಿಕರವೆನಿಸಿತು ಮತ್ತು ತನ್ನ ಪ್ರಶ್ನೆಯಿಂದ ನೋಯಿಸಿದೆನೇನೋ ಎನಿಸಿತು. ಆದ್ದರಿಂದಲೇ, 'ಹೋಗಲಿ ಬಿಡಿ, ನಿಮ್ಮ ಮನಸ್ಸಿಗೆ ಬೇಜಾರಾಗುವ ಹಾಗಿದ್ದರೆ ಬೇಡ. ಆದರೆ ನೀವು ಸ್ವಲ್ಪ ಸುಧಾರಿಸಿಕೊಂಡು ಸಂಜೆಯ ವೇಳೆಗೆ ಬೇಕಾದರೆ ನಿಮ್ಮಿಷ್ಟದಂತೆ ನೀವು ಹೋಗಬಹುದು. ಅದಕ್ಕೆ ಮುಂಚೆ ನನ್ನಿಂದ ಏನಾದರೂ ಸಹಾಯ ಆಗುವಂತಿದ್ದರೆ ಹೇಳಿ, ನಾ ಮಾಡಿಕೊಡುತ್ತೇನೆ' - ಎಂದ.

ಅಷ್ಟರಲ್ಲಿ ಫೋನಿನ ಗಂಟೆ ಕೇಳಿಸಿತು. ಮಾಧು ಹೋಗಿ ರಿಸೀವರನ್ನು ಕಿವಿಗೆ ಹಿಡಿದು ಕೇಳಿದ. ಏನನ್ನೋ ಕೇಳಿಸಿಕೊಂಡವನಂತೆ ತಲೆದೂಗಿ, ಕೂಡಲೆ ಬಂದು,

"ಸಾರ್ ನಿಮಗೆ ಫೋನ್, ಆಸ್ಪತ್ರೆಯಿಂದ ಬಂದಿದೆ" ಎಂದ. ವಿನೋದ್ ಫೋನಿನಲ್ಲಿ ಮಾತಾಡಿ ಆತುರಾತುರವಾಗಿ ಸುಧಾ ಇದ್ದಲ್ಲಿಗೆ ಬಂದು, "ಕ್ಷಮಿಸಿ. ಯಾವುದೋ ಅರ್ಜೆಂಟ್ ಕೇಸೊಂದು ಬಂದಿದೆಯಂತೆ. ಬೇಗ ಹೋಗಬೇಕು. ಮಾಧು ಇರ್‍ತಾನೆ. ನಿಮ್ಮ ಜೊತೆ. ಸಂಜೆ ಬಂದಮೇಲೆ ಮಾತಾಡ್ತೀನಿ"- ಎಂದು ನುಡಿಯುತ್ತಲೇ ಹೊರಗೆ ಹೊರಟ.

ವಿನೋದನ ಅನುಪಸ್ಥಿತಿಯಲ್ಲಿ, ಮಾಧುವಿನಿಂದ ವಿವರಗಳನ್ನು ಸಂಗ್ರಹಿಸಿದಳು. ಮಾಧುವಿನ ಜೊತೆಗೆ ಸ್ವಲ್ಪ ಸಲುಗೆಯೂ ಬೆಳೆದಿತ್ತು. ಮಾಧುವಿನಿಂದ ವಿನೋದನ ಖಾಸಗೀ ವಿವರಗಳು ದೊರೆಯದಿದ್ದರೂ, ಐದು ವರ್ಷಗಳಿಂದ ವಿನೋದನ ಜೊತೆಗಿದ್ದ ಮಾಧುವಿನಿಂದ, ಅವನ ಗುಣ, ನಡತೆಗಳಷ್ಟೇ ತಿಳಿದು ಬಂದವು. ಆದರೆ ಆ ವಿವರಗಳಿಂದ ತನಗೇನಾಗಬೇಕೆಂಬ ವಿರಕ್ತಿ ಮೂಡಿದರೂ ಕುತೂಹಲವನ್ನು ಕ್ಷಣಕ್ಷಣಕ್ಕೂ ಬೆಳೆಸಿಕೊಂಡಳು. ಜೊತೆ ಜೊತೆಗೆ ತನ್ನ ಮುಂದಿನ ಬಾಳಿನ ಭಯಾನಕತೆಯನ್ನೂ ಊಹಿಸಿಕೊಂಡು ನಡುಗಿದಳು. ಈ ಕ್ಷಣದವರೆಗೆ ಹೇಗೋ ಆಯಿತಾದರೂ ಸಂಜೆಯಾದ ಮೇಲೆ ವಿನೋದನು ತನ್ನನ್ನು ಕಳಿಸಿಲು ಒಪ್ಪಿದರೆ, ರಾತ್ರಿಯಲ್ಲಿ ಒಂಟಿಯಾಗಿ ಯಾವ ಸೂರನ್ನಾಶ್ರಯಿಸಲು ಸಾಧ್ಯ?- ಯಾರು ತನ್ನನ್ನು ಕರೆದು ನೆರಳು ಕೊಟ್ಟಾರು? - ಊಹಿಸಿಕೊಂಡಷ್ಟೂ ದಿಕ್ಕೇ ತೋಚದಂತಾಯಿತು.

ವಿನೋದನ ವ್ಯಕ್ತಿತ್ವ, ಸ್ವಭಾವವನ್ನು ಕೇಳಿ ತಿಳಿದುಕೊಂಡಿದ್ದ ಸುಧಾಗೆ ಈ ಸ್ಥಿತಿಯಲ್ಲಿ ಸಂಪೂರ್ಣವಾಗಿ ಅವನನ್ನಾಶ್ರಯಿಸುವುದೇ ಕ್ಷೇಮವೆನಿಸಿತು. ಇಂತಹ ಪರಿಸ್ಥಿತಿಯಲ್ಲಿ ಸ್ವಾಭಿಮಾನ ಪ್ರಯೋಜನವಿಲ್ಲವೆಂದುಕೊಂಡಳು. ವಿನೋದ್ ಬಂದ ಕೂಡಲೇ ಯಾವುದಾದರೂ ಕೆಲಸವನ್ನು ಯಾಚಿಸಬೇಕು. ಹೇಗಾದರೂ ತನ್ನ ಕೈಲಾದಷ್ಟು ದುಡಿಯಬಲ್ಲೆನೆಂಬ ವಿಶ್ವಾಸ ಅವಳಿಗುಂಟಾಗಿತ್ತು. ಅವನ ಒಳ್ಳೆಯತನದ ಪ್ರಯೋಜನ ಪಡೆಯಲೇ ಬೇಕೆಂಬ ಸ್ವಾರ್ಥ ಮನೆ ಮಾಡಿತು. ಮರುಗಳಿಗೆಯೇ ತನ್ನ ಪೂರ್ವೋತ್ತರಗಳನ್ನು

ವಿಚಾರಿಸಿ ತಿಳಿದುಕೊಂಡು ಅಸಹ್ಯಪಟ್ಟುಕೊಂಡರೆ?– ಎಂಬ ಅಳುಕೂ ಮೂಡಿತು. ಅದಕ್ಕೇ ಒಂದೇ ದಾರಿ ಏನಾದರೂ ಅದ್ಭುತವಾದ ಸುಳ್ಳನ್ನು ಸೃಷ್ಟಿಸುವುದು. ಅದರಲ್ಲಿಯೂ ಗಂಗುಲು ನನ್ನ ಮೇಲೆ ಮಾಡಿದ ಕೆಲಸ ಅವನಿಗೆ ತಿಳಿಯಲೇಬಾರದು. ವಿನೋದನ ದಯೆ, ಪ್ರೀತಿಗಳನ್ನು ಗಿಟ್ಟಿಸಿಕೊಂಡು ಈಗ ಬಂದಿರೋ ಆಪತ್ತಿನಿಂದ ಪಾರಾಗುವುದು – ಎಂಬ ಇವೇ ಆಲೋಚನೆಗಳಲ್ಲಿ ಉಳಿದಳು.

ಮಾಧು ಅವಳನ್ನು ಗೌರವದಿಂದಲೇ ಕಂಡ. ಶ್ರದ್ಧೆಯಿಂದ ಸೌಜನ್ಯದಿಂದ ಉಪಚರಿಸಿದ. ಮಾಧು, ಸುಧಾ ಒಟ್ಟಿಗೆ ಕುಳಿತು ಊಟ ಮಾಡಿದರು. ಸುಧಾ ಮಾಧುವಿನ ಕೆಲಸಗಳಲ್ಲಿ ಸಹಕರಿಸಿದಳು. ಮುಸುರೆ ತೆಗೆದು ತೊಳೆದು ಎಲ್ಲವನ್ನೂ ಮಾಧುವೇ ಓರಣವಾಗಿ ಜೋಡಿಸಿದ. ವಿನೋದನ ಕೊಠಡಿಯನ್ನು ಶುಚಿಗೊಳಿಸಿ ಅವನ ಮೇಜಿನ ಮೇಲಿನ ಹೂದಾನಿಯಲ್ಲಿ ಬಾಡಿದ ಹೂಗಳನ್ನು ತೆಗೆದು ಬಿಸುಟು, ಹಿತ್ತಲಿಗೆ ಓಡಿ ಹಳದಿ ಗುಲಾಬಿಗಳೆರಡನ್ನು ತಂದು ಜೋಡಿಸಿದ. ವೈದ್ಯಕೀಯ ಉಪಕರಣಗಳ ಟ್ರೇಯನ್ನು ಹಾಗೆಯೇ ಪಕ್ಕದ ಸಣ್ಣ ಸ್ಟೂಲಿನ ಮೇಲೆ ಇಟ್ಟ.

ಸುಧಾಗೆ ಹೊತ್ತು ಹೋಗುವುದು ಕಷ್ಟವಾಯಿತು. ಒಳಗೆ ಯಾವುದೋ ಕೆಲಸದಲ್ಲಿದ್ದ ಮಾಧುವನ್ನು ಕರೆದು,

'ಮಾಧು, ಡಾಕ್ಟರು ಯಾವಾಗ ಬರುತ್ತಾರೆ?' ಎಂದಳು.

ಮಾಧು ಗಡಿಯಾರದೆಡೆಗೆ ನೋಡಿದ, 'ಇನ್ನೇನು ಬರುವ ಹೊತ್ತಾಯಿತು' ಎಂದ. ಆಗಲೇ ನಾಲ್ಕು ಗಂಟೆಯಾಗಿತ್ತು.

ಮಾಧು ಹೇಳುವುದಕ್ಕೂ, ಹೊರಗೆ ಆಟೋ ಶಬ್ದ ಕೇಳುವುದಕ್ಕೂ ಸರಿಹೋಯಿತು.

ಸುಧಾಳ ಕಿವಿ ಚುರುಕಾಯಿತು. ಹೊರಗೆ ದೃಷ್ಟಿಸಿ ನೋಡಿದಳು. ವಿನೋದ್ ನಗುತ್ತಾ ಒಳಗೆ ಬಂದ. ಸರಕ್ಕನೆ ಎರಡು ಹೆಜ್ಜೆ ಹಿಂದೆ ಸರಿದು ನಿಂತಳು.

'ಪರವಾಯಿಲ್ಲ, ಇಲ್ಲೇ ನಿಂತುಕೋಮ್ಮ' ಎಂದ ವಿನೋದ್. ಸುಧಾ ವಿನೋದನೆಡೆಗೆ ಕಾತುರ ಕಣ್ಣುಗಳಿಂದ ನೋಡಿದಳು. ವಿನೋದ್ ತನ್ನ ವಿಚಾರವಾಗಿ ಏನಾದರೂ ಹೇಳಿಯಾನೆಂಬ ಕುತೂಹಲದಿಂದ, ಶ್ರದ್ಧೆಯಿಂದ ಅವನನ್ನೇ ಗಮನಿಸಿದಳು. ವಿನೋದ್ ಟೈ ಬಿಚ್ಚುತ್ತಾ, ತನ್ನ ಕೆದರಿದ ಕೂದಲನ್ನು ಹಾಗೆಯೇ ಸರಿಪಡಿಸಿಕೊಂಡ. ಅಷ್ಟರಲ್ಲಿ ಮಾಧು ಬಿಸಿಬಿಸಿಯಾದ ಕಾಫಿ ಮಾಡಿ ತಂದಿಟ್ಟ. ಲೋಟವನ್ನು ಕೈಗೆತ್ತಿಕೊಳ್ಳುತ್ತಾ, ಸುಧಾಳೆಡೆಗೆ ನೋಡಿ, 'ಮಾಧು ಇವರಿಗೂ ಕಾಫಿಕೊಟ್ಟು, ನೀನೂ ಹಾಗೆ ಕುಡಿ' ಎಂದ.

ಮಾಧು ವಿಧೇಯತೆಯಿಂದ ಹೇಳಿದಂತೆ ಮಾಡಿದ. ಸುಧಾಗೆ ಸಂಕೋಚವಾಯಿತು. ಆದರೆ ವಿನೋದನ ಮುಖದಲ್ಲಿ ನಿರ್ಭಾವದ ಸ್ಥಿತಿಯಿದ್ದುದರಿಂದ. ತಾನೇ ಧೈರ್ಯ ತಂದುಕೊಂಡು ಮೆಲ್ಲನೆ ಉಸುರಿದಳು.

"ಡಾಕ್ಟರ್... ಇನ್ನಾದರೂ ನನಗೆ ಅಪ್ಪಣೆ ಕೊಡಿ. ನಾನು ಹೋಗಬೇಕು"– ಎಂದಳು.

ವಿನೋದ್ ಅವಳತ್ತ ನೋಡಿಯೂ ನೋಡದೆ, ಎಲ್ಲಿಗೆಂದು ಹಿಂದಿನಂತೆಯೇ ಕೇಳಿದ.

ಸುಧಾಳ ಬಳಿ ಅದಕ್ಕೆ ಉತ್ತರವಿರಲಿಲ್ಲ. ಎಲ್ಲಿಗೆಂದು ತಾನು ಹೇಳುವುದು? ಒಂದು ವೇಳೆ ಆತ ಹೋಗಲು ಅನುಮತಿ ಕೊಟ್ಟರೆ, ನಿಜವಾಗಿ ನಾನು ಹೋಗುವುದೆಲ್ಲಿಗೆ? ನೆನಸಿಕೊಂಡಾಗ ಮೈ ಕಂಪಿಸಿತು. ಮತ್ತೆ ಹೋದರೆ ಆ ತೋಳನ ಸೆರೆಗೇ ಹೋಗಬೇಕು? ನೆನಸಿಕೊಂಡಾಗ ಅಸಹ್ಯವೆನಿಸಿತು. ಆದರೆ ಇಲ್ಲಿಯೂ ಅಂತಹುದೇ ತೋಳವಿದ್ದರೆ! ಮನಸ್ಸು ಅಳುಕಿತು. ವಿನೋದನಿಗಾದರೂ ತನ್ನ ಬಗ್ಗೆ ಏಕೆ ಇಷ್ಟೊಂದು ಆಸಕ್ತಿ ಬರಬೇಕೆಂದು ಆಲೋಚಿಸಿದಳು. ಆದರೂ ಸದ್ಯಕ್ಕಾದರೂ ಅವನನ್ನು ನಂಬದೆ ವಿಧಿ ಇರಲಿಲ್ಲ. ಆದ್ದರಿಂದಲೇ ಅವನ ಪ್ರಶ್ನೆಗೆ ಮೌನವೇ ಉತ್ತರವಾಯಿತು.

ವಿನೋದನಿಗೆ ಅವಳ ವಿಚಾರ ಇನ್ನಷ್ಟು ಕೇಳುವ ಕುತೂಹಲವಾಯಿತು. 'ಸುಧಾ, ನಿನಗೆ ಹೇಳಬಹುದೆನಿಸಿದರೆ ನಿನ್ನ ವಿಚಾರ ಹೇಳು. ನನಗೆ ಸಾಧ್ಯವಾದಷ್ಟು ಸಹಾಯ ಮಾಡುತ್ತೇನೆ' ಎಂದ.

ಇನ್ನೂ ಹಿಂದು ಮುಂದಾಲೋಚಿಸುವುದರಲ್ಲಿ ಅರ್ಥವಿಲ್ಲವೆಂದು ಬಗೆದು, ನಿಧಾನವಾಗಿ ತನ್ನ ಬದುಕಿನ ಚರಿತ್ರೆಯ ಪ್ರಮುಖ ಘಟನೆಗಳನ್ನು ವಿವರಿಸಿದಳು! ತಾನು ತಪ್ಪಿ ಹೋದದ್ದು, ಮುದುಕಿಯೊಬ್ಬಳ ಕೊಳಕು ಗುಡಿಸಲಿನಲ್ಲಿ ಬೆಳೆದದ್ದು, ಅವಳಗೆ ಖಾಯಿಲೆಯಾದದ್ದು, ಅವಳ ತಮ್ಮನ ಮಗನಿಂದ ತಾನು ನೊಂದು, ಗಂಡಾಂತರದಿಂದ ಪಾರಾಗಿ ಇಲ್ಲಿಗೆ ಬಂದದ್ದು... ಇತ್ಯಾದಿ ಸಂಗತಿಗಳನ್ನು ಸ್ವಲ್ಪ ತೊದಲುತ್ತಾ, ಸ್ವಲ್ಪ ದುಃಖಿಸುತ್ತಾ, ಸ್ವಲ್ಪ ಜಿಗುಪ್ಸೆ ಪಟ್ಟುಕೊಳ್ಳುತ್ತಾ ಇನ್ನಷ್ಟು ದೀರ್ಘವಾಗಿ ವಿವರಿಸಿದಳು. ಹಾಗೆಯೇ ತನಗೆ ಯಾವುದಾದರೂ ಕೆಲಸವಿದ್ದರೆ ಕೊಡಿಸುವ ಉಪಕಾರ ಮಾಡಬೇಕೆಂದು ಪ್ರಾರ್ಥಿಸಿದಳು. ವಿನೋದ್ ನಿಟ್ಟುಸಿರಿನ ಮೂಲಕ ತನ್ನ ಸಹಾನುಭೂತಿಯನ್ನು ತೋರಿದ. ಹಾಗೆಯೇ ಗೆಳೆಯನ ಔಷಧಿಗಳ ತಯಾರಿಕಾ ಸಂಸ್ಥೆಯೊಂದರಲ್ಲಿ ಕೆಲಸ ಕೊಡಿಸುವುದಾಗಿ ಭರವಸೆಯಿತ್ತು.

* * *

ಸುಧಾ ಒಂಟಿಯಾಗಿಯೇ ಉಳಿದಳು. ವಿನೋದನ ಮಾತಿನಂತೆ ಕೆಲಸವೇನೊ ಸಿಕ್ಕಿತು. ಆದರೆ ಆ ಕೆಲಸವಷ್ಟೇ ತನ್ನ ಬದುಕನ್ನು ತುಂಬುವುದೇ? ಆತ್ಮೀಯರೂ ಬಂಧುಗಳೂ ತಂದೆತಾಯಿಗಳೂ ಇಲ್ಲದ ಈ ಜಗತ್ತಿನಲ್ಲಿ ಈ ಬದುಕಿನಲ್ಲಿ ಚಿಟ್ಟೆನಿಸುವ ಜೀವನ. ಡಾ. ವಿನೋದನ ಸೌಹಾರ್ದವೂ ಈಗ ದೊರೆಯಲು ಸಾಧ್ಯವಿಲ್ಲ. ದೂರದ ಪಟ್ಟಣವೊಂದಕ್ಕೆ ಸ್ಥಳಾಂತರಗೊಂಡು ಹೊರಟುಹೋಗಿದ್ದ. ಇಬ್ಬರು ಸ್ನೇಹಿತರೆಂದರೆ

ಕಮಲಿ ಮತ್ತು ಸೆಲ್ವಿ. ಇಷ್ಟರಲ್ಲಿಯೇ ಸೆಲ್ವಿಗೆ ಮದುವೆಯಾಗಿ ಹೊರಟು ಹೋಗುವುದರಲ್ಲಿದ್ದಾಳೆ. ಆಮೇಲೆ ಒಂದು ದಿನ ಕಮಲಿಯೂ ಅವಳನ್ನು ಅನುಸರಿಸಬಹುದು. ಆಗ ತಾನು...? ಒಂಟಿತನದ ನೆನಪಾಗುತ್ತಿದ್ದಂತೆ ಕಣ್ಣು ಕತ್ತಲಿಡುವುದು. ಅದೇ ಅದೇ ಯಾಂತ್ರಿಕ ಬದುಕು. ಜಿಗಿಯುವ ಬಯಕೆಗಳನ್ನು ಹದ್ದುಬಸ್ತಿನಲ್ಲಿಡಲು ನಡೆಸಿದ ಹೋರಾಟ ಕೊನೆಗೂ ಸೋತು ಹೋಯಿತು. 'ಒಂದೇ ಒಂದು ಕ್ಷಣದ ದೌರ್ಬಲ್ಯ! ಛಿ! ಛಿ! ನೆನಸಿಕೊಂಡರೆ ಹೇಸಿಗೆಯೆನಿಸುತ್ತದೆ!' – ಎಂದು ತನ್ನಲ್ಲೇ ಗುಣುಗುಣಿಸಿದಳು. ಬೇಡವೆಂದರೂ 'ಗಂಗುಲು' ನೆನಪಾಯಿತು. ಎಷ್ಟೊಂದು ಅಂತರ? ಗಂಗುಲೂನ ಬಲವಂತದಿಂದ ಬಿಡಿಸಿಕೊಂಡು ಓಡುವ ಪ್ರಯತ್ನ – ಈಗ ತಾನೇ ಒಲಿದು ಒಪ್ಪಿಸಿಕೊಂಡ ಸಂಗತಿ!! ಮುಳ್ಳಾಗಿ ನೂರೆಂಟು ನೋವುಗಳನ್ನು ಅರಳಿಸಿದವು. ಆ ಲೋಫರ್ ಪೀರ್ ಮಹಮದ್! – 'ನಯದ ಸೋಗಿನಲ್ಲಿ ನನ್ನಲ್ಲಿದ್ದುದನ್ನೆಲ್ಲಾ ದೋಚಿಕೊಂಡ. ಆದರೆ ಮರು ದಿನವೇ ಮಂಗಮಾಯವಾದ.' ಹಲ್ಲು ಕಟಕಟನೆ ಕಡಿದಳು. ಸೇಡಿನ ಜ್ವಾಲೆ ಹೆಡೆ ಬಿಚ್ಚಿತು. ಆದರೆ ಮರುಕ್ಷಣದಲ್ಲಿಯೇ ತನ್ನ ಅಸಹಾಯಕತೆ, ಅಸಮರ್ಥತೆಗಳು ಬಡಿದೆದ್ದು ಬಿಡಿಸಿದ ರೆಕ್ಕೆಗಳನ್ನೇ ಕತ್ತರಿಸಿದವು.

* * *

ಕಾಗೆಗಳು ಬರಲಿಲ್ಲ

ಗೋವಿಂದಯ್ಯ ಕಿತ್ತು ಬರುತ್ತಿದ್ದ ಬೆವರನ್ನು ಒರೆಸಿಕೊಂಡ. ತೀಕ್ಷ್ಣವಾದ ಬಿಸಿಲಿನ ಝಳಕ್ಕೆ ಮೈ ಚುರುಗುಟ್ಟುತ್ತಿದೆ. ನೆತ್ತಿ ಕಾದ ಹೆಂಚಿನಂತಾಗಿದೆ. ಸಾಲದ್ದಕ್ಕೆ ಬೆಳಗಿನಿಂದಲೂ ಉಪವಾಸ ಮಾಡಿದ್ದಕ್ಕಾಗಿ ಹೊಟ್ಟೆ ಒಳಗೂ ಉರಿವ ಬೆಂಕಿ. "ಥೂತ್ ಇದರ!! ಬೆಳಗಿನಿಂದ ಸಾಯ್ತಿದ್ದರು ದರಿದ್ರ ಮುಂಡೇವು... ಒಂದಾದರೂ ಬಂದು ಸಾಯಬಾರದೇ?" ಎಂದು ಒಳಗೊಳಗೇ ಕುದಿಯುತ್ತ ಬೈದು ತನ್ನ ರೋಷ ತೀರಿಸಿಕೊಳ್ಳುವ ಪ್ರಯತ್ನದಲ್ಲಿದ್ದ. ಏನು ಮಾಡಿದರೂ ಒಂದು ಕಾಗೆಯಾದರೂ ಬಂದು ಗೋವಿಂದಯ್ಯ ಇಟ್ಟಿದ್ದ ಎಡೆಯನ್ನು ಮುಟ್ಟಲಿಲ್ಲ. ಅಲ್ಲಲ್ಲೇ ಮರಗಳ ಮೇಲೆ ಹಿಂಡು ಹಿಂಡು ಕಾಗೆಗಳು ಕಾ! ಕಾ! ಕಾ! ಎಂದು ಅರಚಿಕೊಳ್ಳುತ್ತಿದ್ದರೂ ಎಡೆ ಇದ್ದ ಕಡೆಗೆ ಮಾತ್ರ ಬರಲಿಲ್ಲ. ಗೋವಿಂದಯ್ಯನ ಸಹನೆ ಮೀರುತ್ತಿತ್ತು. ಆದರೂ ವಿಧಿಯಿಲ್ಲದೆ ಕಾಗೆಗಳು ಬರುವುದನ್ನೇ ಎದುರು ಕಾಯುತ್ತಿದ್ದ. ಕಾಗೆ ಎಡೆ ತಾಕದ ಹೊರತು ಉಳಿದವರಿಗೆ ಊಟವಿಲ್ಲ. ಸತ್ತು, ಮಾವ ಕಾಡುತ್ತಿದ್ದಾನೆಂದೇ ಗೋವಿಂದಯ್ಯನ ಭಾವನೆ.

ಮನುಷ್ಯತ್ವ ಉಳಿಸಿಕೊಂಡಿರುವುದರಿಂದಲೇ, ಮಾವನ ಗಂಟು ತನಗೇನೂ ಬರದಿದ್ದರೂ, ಒಂದಿಷ್ಟು ಅವರಿಗೆ ಗತಿ ಕಾಣಿಸುವ ಜವಾಬ್ದಾರಿ ಹೊತ್ತಿದ್ದ. ಗಂಡು ಮಕ್ಕಳಿಲ್ಲದೆ ಸತ್ತ ಮಾವನಿಗೆ ಸದ್ಗತಿ ಕಾಣಿಸಲು ಇಬ್ಬರು ಅಳಿಯಂದಿರಿದ್ದರೂ, ಚಿಕ್ಕಳಿಯ ರಾಜಪ್ಪ ಮುದಿ ಅತ್ತೆ ಮಾವರಿಗೆ ಟೋಪಿ ಹಾಕಿ ಇದ್ದ ಬದ್ದದ್ದನ್ನು ಲಪಟಾಯಿಸಿಕೊಂಡು ಪರಾರಿಯಾಗಿಬಿಟ್ಟಿದ್ದ. ಉಳಿದದ್ದು ಗೋವಿಂದಯ್ಯ ಮಾತ್ರ. ಒಂದೇ ಸಮನೆ ಕಣ್ಣೀರ ಕೋಡಿ ಹರಿಸುತ್ತಿದ್ದ ಮುದಿ ಅತ್ತೆಯ ಮೇಲಿನ ಕನಿಕರದಿಂದ ಮತ್ತು ಹಿರಿಯಳಿಯ ಮಗನ ಸ್ಥಾನವನ್ನು ತೆಗೆದುಕೊಂಡಿದ್ದರಿಂದ ಮಾವನ ಕ್ರಿಯಾ ಕರ್ಮಗಳ ಜವಾಬ್ದಾರಿ ಹೊತ್ತಿದ್ದ.

ಹಲವು ಗಂಟೆಗಳಿಂದಲೂ ಕಾಗೆ ಬರುವುದನ್ನೇ ಕಾದು ಕಾದು ಬೇಸತ್ತಿದ್ದ. ಎಷ್ಟು ಹೊತ್ತಾದರೂ ಗೋವಿಂದಯ್ಯ ಕೆಳಗೆ ಇಳಿದು ಬರದಿದ್ದುದಕ್ಕಾಗಿ ಗೋವಿಂದಯ್ಯನ ಮಕ್ಕಳಿಬ್ಬರೂ ಏನಾಯ್ತು ಏನಂತ ತಿಳಿಯಲು ಮೇಲೇರಿ ಹೋದರು.

ನೆತ್ತಿಯ ಮೇಲೆ ಟವೆಲನ್ನು ಹಾಕಿಕೊಂಡು ನಿಟ್ಟುಸಿರು ಬಿಡುತ್ತಾ ಕೂತಿದ್ದ ತಂದೆಯನ್ನು ನೋಡಿದ ಮಕ್ಕಳು ಒಟ್ಟಿಗೆ ಕೇಳಿದರು.

"ಯಾಕಪ್ಪಯ್ಯ ಇನ್ನೂ ಕಾಗೆಗಳು ಬಂದು ಮುಟ್ಟಲಿಲ್ಲವೆ?"

"ಏನು ಕಾಗೆಗಳೊ... ಏನು ಗೂಬೆಗಳೊ!! ನನ್ನ ಪ್ರಾಣ ಹೋಗ್ತಾ ಇದೆ. ಎಷ್ಟು ಹೊತ್ತೂಂತ ಬಿದ್ದಿರೋದು, ದೊಡ್ಡವರು ಹೀಗೆಲ್ಲಾ ಸತ್ತ ಮೇಲೂ ಸಣ್ಣವರ ಮೇಲೆ ಹಗೆ ಸಾಧಿಸಬಾರದು..." ದುಃಖ, ಉದ್ವಿಗ್ನತೆ ನಿರಾಶೆಗಳಿಂದ ನುಡಿದರು.

"ಹೋಗಲಿ ಬಿಡಪ್ಪಯ್ಯ, ನಾವು ಕಾಯೋಷ್ಟೂ ಕಾದಿದ್ದಾಯ್ತು. ಇನ್ನೂ ಎಷ್ಟು ಹೊತ್ತೂಂತ ಕಾದಿರೋದು? ಬೇಕಾದರೆ ಬಂದು ಮುಟ್ಟಿ ತಿನ್ನುತ್ತವೆ. ನಾವು ಎದ್ದು ಹೋಗೋಣ ನಡೆ" ಎಂದ ನಾಲ್ಕನೆಯವ ಲಕ್ಷ್ಮಣ.

"ಲೋ – ಮಾಡಿದ ಎಡೆಗೆ ಎಲ್ಲ ಬಡಿಸಿದ್ದಾರೋ ಅಥವಾ ಏನಾದರೂ ಮರೆತಿದ್ದಾರೋ ತಿಳ್ಕೊಂಡು ಬಾರೋ. ಒಂದು ವೇಳೆ ಯಾವುದಾದರೂ ಮರೆತು ಅಪಚಾರವಾಗಿದ್ದರೆ ಅವು ಬರೊಲ್ವೊ.. ಹೋಗಿ ಕೇಳ್ಕೊಂಡು ಬಾ" ಎಂದದ್ದಕ್ಕೆ ಎರಡನೆಯವ ಪ್ರಕಾಶ ಓಡಿದ.

ಅಷ್ಟರಲ್ಲೇ ಕೆಳಗಡೆ ಊಟಕ್ಕಾಗಿ ಸೇರಿದ್ದ ಬಂಧುಗಳು ದಾಯಾದಿಗಳೆಲ್ಲರೂ ಗುಜು ಗುಜು ನಡೆಸಿದ್ದರು. 'ಇಷ್ಟು ಹೊತ್ತಾದರೂ ಕಾಗೆಗಳು ಬಂದು ಮುಟ್ಟಲಿಲ್ವಂತೆ ಎಡೆಯನ್ನು!'

"ಏನಾದರೂ ತಪ್ಪಾಗಿದೆಯೋ ಏನೋ" – ಒಬ್ಬರೆಂದರು.

"ಏನು ತಪ್ಪಾಗಿರಲಿಕ್ಕೆ ಸಾಧ್ಯ, ಅಯ್ಯೋ ಪಾಪ ಅಂತ ಅಳಿಯ ಇಷ್ಟೊಂದು ಶ್ರದ್ಧೆಯಿಂದ ಮುದುಕನಿಗೆ ಶ್ರಾದ್ಧ ಕರ್ಮಗಳನ್ನೆಲ್ಲ ನಡೆಸಿರಬೇಕಾದರೆ ಆತನಿಗೆ ಸ್ವಲ್ಪವಾದರೂ ಕರುಣೆ ಬೇಡವೇ? ಚೆನ್ನಾಗಿ ಗಟ್ಟಿ ಮುಟ್ಟಾಗಿ ಇರುವಾಗ ಇದ್ದ ಗಂಟನ್ನೆಲ್ಲ ಕಿರಿಯ ಅಳಿಯನಿಗೆ ಕದ್ದು ಕದ್ದು ಕೊಟ್ಟ. ಈಗ ಈ ಅಪ್ಪ ಬೇಕಾಯಿತು!" ಸಿಡಿಮಿಡಿಗೊಂಡ ಗೋಪಿ.

"ಈ ಮುದುಕರೇ ಅಷ್ಟು ತಾವೂ ಸತ್ತು ಬದುಕಿದ್ದವರನ್ನೂ ಹೀಗೆ ಗೋಳಾಡಿಸಿ ಸಾಯಿಸ್ತಾರೆ!" ಇನ್ನೂ ಒಬ್ಬರೆಂದರು.

"ಛೆ! ಛೆ! ಸತ್ತವರ ವಿಚಾರದಲ್ಲಿ ಹಾಗೆಲ್ಲ ಕೆಟ್ಟದ್ದನ್ನು ಮಾತಾಡಬಾರದು. ಆ ಮುದಿ ಜೀವಕ್ಕೆ ಏನೇನು ಆಸೆಗಳಿದ್ದವೋ ಸಾಯುವಾಗ. ಅದನ್ನು ಬಾಯಿ ಬಿಟ್ಟು ಹೇಳಿಕೊಳ್ಳುವುದಕ್ಕೆ ಆಗದೆ ಹೀಗೆ ಮುಷ್ಕರ ಹೂಡಿರಬೇಕು. ಯಾರದಾದರೂ ಕನಸಿನಲ್ಲಿ ಬಂದು ಬೇಕಾದ್ದನ್ನು ಕೇಳಿ ಮಾಡಿಸಿಕೊಳ್ಳಬೇಕು, ಇಲ್ಲದಿದ್ದರೆ ತಿಳಿಯುವುದಾದರೂ

ಹೇಗೆ?... ಹೋಗಲಿ ಒಳಗೆ ಅಜ್ಜಿ ಇರಬೇಕು. ಹೋಗಿ ಆಕೆಯನ್ನೇ ಕೇಳಿ ಗಂಡನಿಗೆ ಏನಿಷ್ಟವಾಗಿತ್ತೂ ತಿಳಿದುಕೊಂಡು ಮಾಡಿ ಇಡಿ" – ಎಂದು ಸಲಹೆ ಸೂಚಿಸಿದರು.

ಒಳಗೆ ಕುಳಿತಿದ್ದ ಗೋವಿಂದಯ್ಯನ ಅತ್ತೆ ಬಡಬಡಿಸಿದಳು... "ಹೌದು ಹೇಗೆ ಬರ್‍ತಾರೆ? ಅವರಿಗೆ ನನ್ನದೇ ಚಿಂತೆ. ಹೆತ್ತ ಮಕ್ಕಳೇ ತಾಯಿಗೆ ಹೀಗೆ ಮೋಸ ಮಾಡಿ ಹಿಂಸಿಸುತ್ತಿದ್ದರೆ ಅದೆಲ್ಲ ಅವರಿಗೆ ಗೊತ್ತಾಗೊಲ್ವೆ?! ಅವರ ಮನಸ್ಸಿಗೆ ತುಂಬಾ ನೋವಾಗಿದೆ. ಹೆಂಡತಿಗೆ ಆಗಿರುವ ಅನ್ಯಾಯಾನ ನೋಡಿ ಸಹಿಸುವುದಾದರೂ ಹೇಗೆ ಸಾಧ್ಯ? ಮಾಡುವುದನ್ನು ಮನಸ್ಸಿಟ್ಟು ಮಾಡಿದರೆ ತಾನೆ? ಕಾಟಾಚಾರಕ್ಕೆ ಕರ್ಮಕಾಂಡಗಳನ್ನು ಆಚರಿಸಿದರೆ ಅದರಿಂದ ಬರೋ ಪುಣ್ಯವಾದರೂ ಏನು?... ಇರೋವರೆಗೂ ಕಾಗೆಗಳ ಹಾಗೆ ಮುತ್ತಿ ಕಿತ್ತು ತಿಂದದ್ದಾಯಿತು. ಇನ್ನೇನಿದೆ... ಈಗ? ನಮ್ಮ ಜೀವ ಮಾತ್ರವೇ!! ಆದರೆ ಅದು ಯಾರಿಗೆ ಬೇಕು?... ಇಲ್ಲ ಇಲ್ಲ ಬೇಕು ಬೇಕು... ಇದೆಯಲ್ಲಾ ಮೈಮೇಲೆ ಒಂದಷ್ಟು ಒಡವೆ. ನಾನು ಗೊಟಕ್ ಅನ್ನೋದೇ ಸಾಕು, ಈಗ ಬರದೇ ಇರೋ ಕಾಗೆಗಳೆಲ್ಲ ಬರುತ್ತವೆ..." ಹೀಗೇ ಮುದುಕಿಯ ಬಡಬಡಿಕೆ ಸಾಗಿಯೇ ಇತ್ತು.

ಎಲ್ಲರೂ ಕೇಳಿಸಿಕೊಂಡು ಒಬ್ಬರ ಮುಖ ಒಬ್ಬರು ನೋಡಿಕೊಂಡರು. ಬಂದ ಜನಕ್ಕೂ ಮಸಾಲೆಯಂತಹ ಮಾತು ಬೇಕಾಗಿತ್ತು. ಅವರಿಗೆಲ್ಲ ಮುದುಕಿ ಹೇಳೋದ್ರಲ್ಲಿ ನಿಜ ಇರಲೇಬೇಕು ಅನಿಸಿತು. ಅದರೆ ಸಾವಿತ್ರಕ್ಕನ ಕಿವಿಗೆ ಇದು ಕಾದ ಕಬ್ಬಿಣ ಎರೆದಂತಾಗಿತ್ತು.

"ಇದೇನ್ಮಾತು ಅಮ್ಮ ಆಡ್ತಿರೋದು? ಅಮ್ಮನಿಗೆ ಮೋಸ ಮಾಡ್ಬೇಕೂಂತ ಎಂದೂ ಭಾವಿಸಿರಲಿಲ್ಲ. ಅಮ್ಮ ರೋಷಾನ ಅವರಿವರೂಂತ ಅಲೋಚನೆ ಮಾಡದೆ ಎಲ್ಲರ ಮೇಲೂ ಸಮಾನವಾಗಿ ಕಕ್ಕುತ್ತಿದ್ದಾಳೆ. ಛೆ! ಛೆ! ನಾನಷ್ಟು ಕ್ರೂರಿಯೇ? ಬೇಡ ಬೇಡಾಂತ ಹಠ ಹಿಡಿದರೂ ಅಮ್ಮನ ಸ್ಥಿತಿ ನೋಡಲಾರದೆ ಬಲವಂತದಿಂದ ಮನೆಗೆ ಕರೆದು ತಂದು ಚಿಕಿತ್ಸೆ ಕೊಡಿಸುತ್ತಿಲ್ಲವೆ? ತಂಗಿ ಗಾಯತ್ರಿ ಮತ್ತು ಅವಳ ಗಂಡ ಮಾಡಿದ ಕೆಲಸಕ್ಕೆ, ಅವರ ಆಸೆಬುರುಕತನಕ್ಕೆ, ಅವರ ಖದೀಮತನಕ್ಕೆ ಸಿಡಿದು ಹೋದ ಮನಸ್ಸಿಗೆ ಬೇರೆಯವರ ಸ್ನೇಹ ಸೌಹಾರ್ದಗಳು ಅರ್ಥವಾಗುವುದಿಲ್ಲವೇ?" – ಯೋಚಿಸಿದಷ್ಟೂ ಸಾವಿತ್ರಿಯ ಕೊರಳು ಒಚುಕಿದಂತಾಯಿತು. ಇನ್ನು ಸುಮ್ಮನಿದ್ದರೆ ಅಮ್ಮನ ಬಡಬಡಿಕೆ ಅತಿಯಾಗುವುದೆಂದು ಭಾವಿಸಿ,

"ಯಾಕಮ್ಮ ಹೀಗೆ ಮನಸ್ಸು ಕೆಡಿಸಿಕೊಂಡು ಸಮಯ ಸಂದರ್ಭ ತಿಳಿಯದೆ ಮಾತಾಡ್ತಿ? ನಾವೇನು ನಿನಗೆ ಅನ್ಯಾಯ ಮಾಡಿದ್ದು? ಯಾರೋ ಮಾಡಿದ ಪಾಪವನ್ನು ನಮ್ಮ ಮೇಲೆ ಹೊರಿಸಿ ನಿನಗೆ ಇಷ್ಟ ಬಂದಂತೆ ಮಾತಾಡ್ತಿದ್ದಿ. ಗಾಯತ್ರಿ ರಾಜಪ್ಪ ಮಾಡಿದ ಮೋಸಕ್ಕೆ, ಅವರು ನಡೆದುಕೊಂಡ ರೀತಿಗೆ ನಮ್ಮನ್ನು ದೂರುವುದು ಯಾವ ನ್ಯಾಯ? ನೀನು ಶಾಂತವಾಗಿರಬೇಕು. ನಿನಗೆ ಈ ವಯಸ್ಸಿನಲ್ಲಿ ತಾಪ ಆಗಬಾರದೆಂತ ನಾವೆಲ್ಲ ಕಾಳಜಿಯಿಂದ ನಿನ್ನನ್ನು ನೋಡ್ಕೊಳ್ಬೇಕು ಅಂತ

ಪ್ರಯತ್ನಿಸ್ತಿದ್ದೀವಿ. ಹೀಗಿದ್ದರೂ ನೀನು ಮಾತಾಡೋದು ನೋಡಿದರೆ ನಮಗೆಲ್ಲ ತುಂಬಾ ಬೇಸರವಾಗುತ್ತೆ. ಈಗಲೂ ಏನಾಯ್ತು, ನಮಗೆ ನೀನು ಕೊಟ್ಟಿರುವುದರಲ್ಲಿ ಕಿಲುಬು ಕಾಸೂ ಬೇಡ. ನೀನೇ ವಾಪಸ್ ತಗೋ ನೆಮ್ಮದಿಯಾಗಿರು. ನಮಗೆ ಐದು ಜನ ಗಂಡು ಮಕ್ಕಳಿದ್ದಾರೆ, ನನ್ನ ಪಾಡು ಚೆನ್ನಾಗೇ ಇರುತ್ತೆ. ಯಾವುದಕ್ಕೂ ಚಿಂತೆಯಿಲ್ಲ... ಈಗ ಸುಮ್ಮನೆ ತಲೆ ಕೆಡಿಸಿಕೊಂಡು ಆರೋಗ್ಯನಾ ಹಾಳು ಮಾಡಿಕೊಳ್ಳಬೇಡ" ಎಂದು ಸಮಾಧಾನವಾಗಿ ನುಡಿದಳು.

ಮುದುಕಿಯ ಬಡಬಡಿಕೆಗೆ ಅರ್ಥವಿಲ್ಲದಿರಲಿಲ್ಲ. ಗಂಡನ ಸಾವು, ಮಕ್ಕಳ ಜಗಳ, ಅಳಿಯನ ಮೋಸ... ಒಂದೊಂದೇ ಪೆಟ್ಟುಗಳ ಮೇಲೆ ಪೆಟ್ಟುಗಳು ಬಿದ್ದು ಜರ್ಝರಿತಳಾಗಿದ್ದಳು. ಎದೆಯಾಳದ ಕಳವಳ, ಅಸ್ತವ್ಯಸ್ತತೆ, ಉದ್ವಿಗ್ನತೆ, ವಿಕ್ಷುಬ್ಧತೆಗಳು, ಎಲ್ಲಕ್ಕಿಂತ ಹೆಚ್ಚಾಗಿ ಗಂಡನ ಸಾವಿನಿಂದ ಉಂಟಾಗಿದ್ದ ಕ್ರೂರ, ಭಯಂಕರ ಏಕಾಂಗಿತನ ಅವಳ ಬುದ್ಧಿಯನ್ನು ಕಂಗೆಡಿಸಿತ್ತು.

ಇದ್ದ ನಾಲ್ಕು ಮಕ್ಕಳಲ್ಲಿ ಇಬ್ಬರು ಗಂಡು ಮಕ್ಕಳು ಸಣ್ಣವರಲ್ಲೇ ತೀರಿಕೊಂಡು, ಹೆಣ್ಣು ಮಕ್ಕಳು ಮಾತ್ರ ಉಳಿದಿದ್ದರು. ಗತಿ ಕಾಣಿಸಲು ಗಂಡುಮಗನಿಲ್ಲವೆಂಬ ಕೊರಗು ಮೊದಲಿನಿಂದಲೂ ಇದ್ದೇ ಇತ್ತಾದರೂ ಕೊಟ್ಟಿದ್ದನ್ನೂ ದೈವ ಕಿತ್ತುಕೊಂಡ ಕಾರಣ ತಮ್ಮ ಪಾಲಿಗಿಷ್ಟೇ ಪ್ರಾಪ್ತವೆಂದು ಸಮಾಧಾನ ತಂದುಕೊಂಡಿದ್ದರು. ಅಳಿಯಂದಿರೇ ತಮ್ಮ ಪಾಲಿನ ಗಂಡು ಸಂತಾನವೆಂದು ಭಾವಿಸಿ ನಿರ್ವಂಚನೆಯಿಂದ ಇದ್ದುದೆಲ್ಲವನ್ನೂ ಅವರಿಗೆ ಹಂಚಿಕೊಡುತ್ತಿದ್ದರು. ಹೆಣ್ಣು ಮಕ್ಕಳ ಮದುವೆಯನ್ನು ರಾಜ ಮಹಾರಾಜರ ಮದುವೆಯಷ್ಟೇ ಅದ್ದೂರಿಯಾಗಿ, ಸುತ್ತಮುತ್ತಲ ಊರಿನವರೆಲ್ಲಾ ದಿಗ್ಭ್ರಮಿಸುವ ಹಾಗೆ ಮಾಡಿದರು. ಹಬ್ಬಹರಿದಿನವೆಂದರೆ ಸಾಕು, ಅಳಿಯ ಮಕ್ಕಳನ್ನು ಕರೆಸಿ ಭರ್ಜರಿ ಔತಣ, ಜೊತೆಗೆ ಬೆಲೆ ಬಾಳುವ ಮುಯ್ಯಿ ಕೊಟ್ಟು ಕಳಿಸಿ ಕೊಡುತ್ತಿದ್ದರು. ಗಾಯತ್ರಿ ಸಾವಿತ್ರಿಯರಲ್ಲಿ ಹಿರಿಯವಳಾದ ಸಾವಿತ್ರಿ ಇದ್ದುದರಲ್ಲೇ ಸ್ವಲ್ಪ ಮೇಲು. ಅಪ್ಪ ಅಮ್ಮ ಕೊಟ್ಟದ್ದನ್ನು ತೃಪ್ತಿಯಿಂದ ತೆಗೆದುಕೊಂಡು ಹೋಗುತ್ತಿದ್ದಳು. ಆದರೆ ಚಿಕ್ಕವಳಾದ ಗಾಯತ್ರಿ ಗಂಡನ ಕುಮ್ಮಕ್ಕಿನಿಂದ ಮತ್ತಷ್ಟು ದುರಾಸೆಯಿಂದ ಅಮ್ಮನನ್ನು ಪೀಡಿಸಿ ಪೀಡಿಸಿ ಅಕ್ಕನಿಗೆ ತಿಳಿಯದೆ ವಸೂಲಿ ಮಾಡಿಕೊಂಡು ಹೋಗುತ್ತಿದ್ದಳು. ಎಂದೂ ಅವಳಿಗೆ ತೃಪ್ತಿ ಇಲ್ಲ. ಕೊಟ್ಟಷ್ಟೂ ಮೇಲೆ ಮೇಲೆ ಬಂದು ಅದೂ ಇದೂಂತ ಬೇಡಿಕೆಗಳ ಸರಮಾಲೆಯನ್ನೇ ಇಡುತ್ತಿದ್ದಳು.

ಆದರೂ ಮುದುಕಿ ಮಗಳ ಮೇಲಿನ ಮಮಕಾರದಿಂದ ತುಟಿಪಿಟಕ್ಕೆನ್ನದೆ, ಗಂಡನಿಗೆ ತಿಳಿಯದಂತೆ ಗುಟ್ಟಾಗಿ ಕೊಟ್ಟು ಕಳಿಸುತ್ತಿದ್ದಳು.

ಮಗಳು ತಾಯಿಯ ಸುಲಿಗೆ ಮಾಡಿದರೆ ಅಳಿಯ ರಾಜಪ್ಪ ಮಾವನ ಸುಲಿಗೆಗೆ ತೊಡಗಿದ್ದ. ಅವನದು ಜೇನು ನಾಲಿಗೆ. ಯಾರಾದರೂ ಸುಲಭವಾಗಿ ಬೇಸ್ತು ಬೀಳುತ್ತಿದ್ದರು. ನರಸಯ್ಯ ಒಬ್ಬರನ್ನು ನಂಜಿ ಒಂದು ಕಾಸನ್ನು ಕೊಟ್ಟವನಲ್ಲ. ಕೈಯಿಂದ ಕಾಸು

ಬಿಚ್ಚುವುದೇ ಪ್ರಯಾಸದ ಕೆಲಸವಾಗಿತ್ತು. ಆದರೆ ಈ ಅಳಿಯನ ಮಾತಿನ ಮೋಡಿಗೆ ಬಿದ್ದು ಸಾವಿರಾರು ರೂಪಾಯಿಗಳನ್ನು ವ್ಯಾಪಾರದಲ್ಲಿ ತೊಡಗಿಸಲು ನೀಡಿದ್ದ. ಬಾಯಿ ತುಂಬ ಮಾತು. ಬುಟ್ಟಿ ತುಂಬ ಹಣ್ಣು ಹಂಪಲು ಯಾವಾಗಲಾದರೂ ಒಂದು ಜೋಡಿ ಪಂಚೆ. ಜೊತೆಗೆ ಒಳ್ಳೆ ನಶ್ಯದ ಡಬ್ಬಿ... ಇಷ್ಟಾದರೆ ಸಾಕು. ಸುಲಭವಾಗಿ ಬೇಸ್ತು ಬೀಳುತ್ತಿದ್ದ. ಸಾವಿರಾರು ರೂಪಾಯಿ ಮುಳುಗಿ ಹೋದದ್ದೇ ಪರಿವೆಗೆ ಬರದೆ ಯಃಕಶ್ಚಿತ್ ಈ ವಸ್ತುಗಳಿಗಾಗಿ ಓಗ್ಗಿ ಹೀರೇಕಾಯಾಗುತ್ತಿದ್ದ.

ಗೋವಿಂದಯ್ಯ, ಸಾವಿತ್ರಿಯವರಿಗೆ ಈ ಚಾಲಾಕಿತನವಿರಲಿಲ್ಲ. ಸಾವಿತ್ರಿಯ ಮಕ್ಕಳನ್ನು ಮುದುಕಿ ಎತ್ತಿ ಸಾಕಿ ಬೆಳೆಸಿದ್ದಳು. ಸಾವಿತ್ರಿಯ ಊರಲ್ಲಿ ಓದಿಗೆ ಅನುಕೂಲವಿರಲಿಲ್ಲ. ಅದಕ್ಕೇ ಮಕ್ಕಳನ್ನು ಅಲ್ಲಿಟ್ಟು ಓದಿಸಿದಳು. ಆ ಕೃತಜ್ಞತೆಯಿದೆ. ಅಲ್ಲದೆ ಇರುವ ಇಬ್ಬರು ಅಕ್ಕತಂಗಿಯರಿಗಲ್ಲದೆ ಆಸ್ತಿ ಇನ್ನು ಬೇರೆ ಯಾರಿಗೂ ಹೋಗುವುದಿಲ್ಲವೆನ್ನುವುದು ಖಾತ್ರಿ, ಹಾಗಿದ್ದ ಮೇಲೆ ಆ ಮುದಿ ಜೀವಿಗಳ ಮನಸ್ಸನ್ನು ನೋಯಿಸುವುದು ಯಾಕೆ ಅನ್ನುವ ಧೋರಣೆ. ಗಾಯತ್ರಿಗೆ ಅಕ್ಕನ ಮೇಲೆ ಸಂಶಯವೋ ಸಂಶಯ. ತನ್ನ ಗಂಡು ಮಕ್ಕಳನ್ನು ಅಲ್ಲಿರಿಸಿ ಅಪ್ಪ ಅಮ್ಮನಿಗೆ ಮೆಲ್ಲಗೆ ಟೋಪಿ ಹಾಕಿ ಎಲ್ಲಿ ಆಸ್ತಿ ಕಸಿದುಬಿಡುತ್ತಾಳೋ ಎನ್ನುವ ಭಯ ಒಳಗೊಳಗೇ. ಜೊತೆಗೆ ಕೊನೆಯವನಾದ ಗೋಪೀನ ದತ್ತು ತೆಗೆದುಕೊಳ್ತಾರಂತೆ ಅನ್ನೋ ವದಂತಿ ಕಿವಿಗೆ ಬಿದ್ದದ್ದೇ ಹೊಟ್ಟೆಯಲ್ಲಿ ಮೆಣಸಿನ ಉರಿ. ವದಂತಿ ನಿಜವಾದರೆ ತನ್ನ ಪಾಲಿಗೆ ಬರುವ ಆಸ್ತಿಗೆ ಸೊನ್ನೆ ಬೀಳುತ್ತೆ. ಅಕ್ಕನಿಗೇ ಎಲ್ಲಾ ದಕ್ಕಿ ಬಿಡುತ್ತೆ. ಖಂಡಿತಾ ಇದು ಸಾಧ್ಯವಿಲ್ಲ, ಸಾಧ್ಯವಾಗಬಾರದು. ಖುದ್ದಾಗಿ ನಾನೇ ಹೋಗಿ ವಿಷಯ ತಿಳಿದು ಬರ್ತೀನೀಂತ, ಒಂದು ದಿನ ದಿಢೀರ್ ಅಂತ ಮುದುಕಿಯ ಮುಂದೆ ಇಳಿದೇ ಬಿಟ್ಟಳು.

ಇಷ್ಟೊಂದು ಆಕಸ್ಮಿಕವಾಗಿ ಬಂದಿಳಿದ ಮಗಳನ್ನು ನೋಡಿ ಗಂಡ ಹೆಂಡರಿಗೆ ಆಶ್ಚರ್ಯವಾಯಿತು.

"ಏನೇ ಗಾಯಿ ಮುಗಿಲು ಹರಿದು ಬಿದ್ದಂಗೆ ದಿಢೀರ್ ಪ್ರತ್ಯಕ್ಷ ಆಗ್ಬಿಟ್ಟೆ. ಏನ್ಸಮಾಚಾರ? ರಾಜಪ್ಪ ಎಲ್ಲಿ? ನೀನೊಬ್ಬಳೇ ಬಂದೀಯೇನು?" ಎಂದು ಮಗಳನ್ನು ತಾಯಿ ವಿಚಾರಿಸಿದಳು.

ಮುಖ ಊದಿಸಿಕೊಂಡೇ ಇದ್ದ ಗಾಯತ್ರಿ ರಪ್ಪನೆ ಉತ್ತರ ಕೊಟ್ಟಳು–

"ನಾವಿನ್ನೂ ಸಾಯಲಿಲ್ಲ ಅನ್ನೋದೇ ಸಮಾಚಾರ. ನಿನಗೇನು? ನಿಮ್ಮ ಹಿರಿಯ ಮಗಳು. ಅವಳ ಮಕ್ಳು ಚೆನ್ನಾಗಿದ್ದರೆ ಸಾಕು. ಇನ್ನೊಬ್ಬ ಮಗಳು ಇದ್ದಾಳೇ ಅನ್ನೋದೆ ನಿಮ್ಮ ಗಮನಕ್ಕೆ ಬರುವಂತಿಲ್ಲ. ಹಾಗಾಗಿ ನಾವಿದ್ದರೂ ಒಂದೇ ಸತ್ತರೂ ಒಂದೇ"– ಹೇಳುತ್ತಲೇ ದುಮುದುಮುಗುಟ್ಟಿದಳು.

ಗಂಡ ಹೆಂಡಿರು ಒಬ್ಬರ ಮುಖವನ್ನೊಬ್ಬರು ನೋಡಿಕೊಂಡು ಏನಿದೆಲ್ಲ ಎಂಬಂತೆ ಪರಸ್ಪರ ಪ್ರಶ್ನಿಸಿಕೊಂಡರು. ತಾಯಿಯೇ ಮತ್ತೆ ಮಗಳಿಗೆ ಸಮಾಧಾನದ ಮಾತನಾಡಬೇಕಾಯಿತು.

"ಛೆ, ಬಿಡ್ತು ಅನ್ನು. ಬೆಳಿಗ್ಗೆ ಬೆಳಿಗ್ಗೆ ಬಂದು ಈ ಅಪಶಕುನದ ಮಾತನಾಡ್ತೀಯ? ನಿನಗೇನು ಅಂಥಾದ್ದು ನಾವು ಅನ್ಯಾಯ ಮಾಡಿರೋದು? ಸುಮ್ಮನೆ ಉರಿ ಮುಖ ಮಾಡಿಕೊಂಡು ಹುಚ್ಚುಚ್ಚಾಗಿ ಮಾತನಾಡಬೇಡ. ನಿನ್ನ ಮನಸ್ಸಿನಲ್ಲಿ ಏನಿದೆಯೋ ಸ್ಪಷ್ಟವಾಗಿ ಹೇಳು".

"ಹೇಳೋದೇನಿದೆ. ನಿನ್ನ ಮನಸ್ಸಿನಲ್ಲಿ ಇರೋ ಆಸ್ತಿನೆಲ್ಲಾ ನಿನ್ನ ಹಿರೇ ಮಗಳು ಅವಳ ಮಕ್ಕಳಿಗೆ ಹಂಚಿಕೊಟ್ಟು ನಮ್ಮ ತಲೇ ಮೇಲೆ ಚಪ್ಪಡಿ ಕಲ್ಲು ಎಳೀಬೇಕು ಅನ್ನೋ ಉದ್ದೇಶ. ಆದರೆ ಹಾಗೆ ಆಗೋಕೆ ನಾನೆಲ್ಲಿ ಬಿಡ್ತೀನಿ. ಕೋರ್ಟು ಕಛೇರಿ ವಿಷಯ ನಮಗೂ ಗೊತ್ತು. ನಮಗೆ ಗೊತ್ತಿಲ್ಲದೆ ಒಂದು ಪೈಸೆ ಅವರಿಗೆ ಕೊಟ್ಟರೂ ನಾವು ಸುಮ್ಮನೆ ಇರೋಲ್ಲ"– ಎಂದು ಹೂಂಕರಿಸಿದಳು.

ಒಂದು ಕ್ಷಣ ಗಂಡ ಹೆಂಡಿರಿಬ್ಬರೂ ಸ್ತಂಭಿಸಿದರು. ತಮ್ಮ ಮಗಳು ತಮ್ಮ ವಿಚಾರವಾಗಿಯೇ ಹೀಗೆ ಮಾತಾಡುವುದೇ? ಅವಳ ಹೃದಯ ಎಷ್ಟು ವಿಷಪೂರಿತವಾಗಿದೆ. ಅಕ್ಕ, ಅಮ್ಮ, ಅಪ್ಪ – ಅನ್ನೋ ಸಂಬಂಧಗಳ ಸೆಳವೇ ಇಲ್ಲದಂತೆ ವರ್ತಿಸುತ್ತಿದ್ದಾಳೆ. ಗಂಡು ಮಕ್ಕಳು ಪಾಲಿಗಾಗಿ ಪರಸ್ಪರ ಕಚ್ಚಾಡಿಕೊಳ್ಳುವುದು ಸಾಮಾನ್ಯ ಸಂಗತಿ. ಆದರೆ ಇವಳು ಹೆಣ್ಣು. ಈಕೆ ಹೀಗೆಲ್ಲ ನಿಷ್ಠೂರವಾಗಿ ಮಾತಾಡಬಹುದೇ? – ಎನಿಸಿತು.

"ಸಾವಿತ್ರಿಯ ಮೇಲೇಕೆ ನಿನ್ನ ಹಗೆ ಗಾಯತ್ರಿ? ಅವಳಿಗಿಂತ ಹೆಚ್ಚಾಗಿ ನೀನೇ ವಸೂಲು ಮಾಡುತ್ತಿ. ನಿನ್ನ ಗಂಡನಿಗೆ ವ್ಯಾಪಾರಕ್ಕೆಂದು ಸಾವಿರಾರು ರೂಪಾಯಿ ಸುರಿದಿದ್ದೀನಿ. ಬಡ್ಡಿ ಕೊಡ್ತೀನಿ; ಲಾಭ ಕೊಡ್ತೀನಿ ಅಂತ ಕುರುಡು ಕವಡೆಯನ್ನೂ ಇಲ್ಲೀವರೆಗೆ ಕೊಟ್ಟಿಲ್ಲ. ಅಮ್ಮನ ಬಳಿಯೂ ನನಗೆ ತಿಳೀದಂತೆ ಕದ್ದು ಕೇಳ್ತಿರ್ತಿ. ಹೀಗಿದ್ದೂ ಸಾವಿತ್ರಿಯ ಮಕ್ಕಳ ಮೇಲೆ ನಿನ್ನ ಹಗೆ ಯಾಕೆ? ಕಷ್ಟ ಸುಖ ಅಂದ್ರೆ ಬಂದು ನಮ್ಮ ನೆರವಿಗೆ ನಿಲ್ಲುವವಳು ಅವಳು. ಹಾಸಿಗೆ ಹಿಡಿದರೆ, ಮನೆ, ಗಂಡ ಮಕ್ಕಳು ಎಲ್ಲರನ್ನೂ ತೊರೆದು, ನಮ್ಮ ಶುಶ್ರೂಷೆಯಲ್ಲಿ ನಿದ್ದೆಗೆಟ್ಟು ತೊಡಗುವವಳು ಅವಳು. ನಮ್ಮೆಲ್ಲರ ನೋವಿನಲ್ಲಿ ನೋಯುವವಳು ಅವಳು. ಹಾಗಿದ್ದೂ ಅವಳ ಮೇಲೆ ಕೆಂಡ ಕಾರ್ತೀಯಲ್ಲ. ಅವಳ ಮಕ್ಕಳಿಗೆ ಒಂದೆರಡು ತುತ್ತು ಅನ್ನ ಹಾಕುವುದು ನಿನಗೆ ಸಹಿಸಲು ಆಗ್ತಿಲ್ಲ ಅಲ್ವಾ?" ಮುದುಕ ತೀರಾ ಭಾವೋದ್ವಿಗ್ನತೆಯಿಂದ ನುಡಿದಿದ್ದ.

"ಮಕ್ಕಳಿಗೆ ಅನ್ನ ಹಾಕೋದನ್ನ ಬೇಡ ಅನ್ನಲಿಲ್ಲ. ಆದರೆ ಗೋಪೀನ ದತ್ತು ತೆಗೆದುಕೊಂಡು ಆಸ್ತೀನ ಅವನ ಹೆಸರಿಗೆ ಬರೀತೀರಂತೆ?"

"ಓ ಅದಾ ಸಮಾಚಾರ!"... ಅಬ್ಬ! ಆಸ್ತಿ, ಆಸ್ತಿ, ಆಸ್ತಿ, ಆಸ್ತಿ! ಬಿಟ್ಟು ಬೇರೇನೂ ನಿನ್ನ ತಲೆಗೆ ಹೊಳೆಯುವುದೇ ಇಲ್ವೆ. ನಿನಗ್ಯಾಕೆ ದೇವರು ಈ ಕೇಡು ಬುದ್ಧಿ ಕೊಟ್ಟಿದ್ದಾನೆ. ಒಂದು ವೇಳೆ ನಾನು ದತ್ತು ತೆಗೆದುಕೊಂಡೇ ಅಂದ್ಕೊ... ನಿನಗೆ ಕೊಡಬೇಕಾದಷ್ಟನ್ನೂ ಕೊಟ್ಟಿದ್ದೀನಲ್ಲ. ಇನ್ನೂ ನಿನ್ನಾಸೆಗೆ ಮಿತಿಯಿಲ್ಲವೆ? ಆಯ್ತು ಇಲ್ಲೀವರೆಗೆ ಆ ಆಲೋಚನೆ ಇರಲಿಲ್ಲ. ಈಗ ನೀನಾಗಿ ನೆನಪು ಮಾಡಿದ್ದೀ. ಒಳ್ಳೆಯದು. ದತ್ತು ತೆಗೆದುಕೊಳ್ಳುವ ವಿಷಯದಲ್ಲಿ ಗಂಭೀರವಾಗಿ ಆಲೋಚನೆ ಮಾಡ್ತೀನಿ. ಆದರೂ ಒಂದ್ಮಾತು. ಇಷ್ಟು ದುರಾಸೆ, ಅಸೂಯೆ ಇರುವವಳನ್ನು ನನ್ನ ಮಗಳೂಂತ ಹೇಳಿಕೊಳ್ಳೋಕೆ ನನಗೆ ನಾಚಿಕೆಯಾಗುತ್ತೆ ಅನ್ನೋ ವಿಷಯ ನಿನಗೆ ನೆನಪಿರಲಿ.

ಅಪ್ಪನ ಮಾತು ಗಾಯತ್ರಿಯನ್ನು ಕೆರಳಿಸಿತು. ಅಪ್ಪ ಅಂದಂತೆ ಆಸ್ತೀನ ಗೋಪಿಗೇ ಕೊಟ್ಟು ಬಿಟರೆ?... ಇಲ್ಲ ಇಲ್ಲ ಹಾಗಾಗಬಾರದು, ಇದನ್ನು ಅವರಿಗೆ ಹೇಳಿ ಏನಾದರೂ ಮಾಡಬೇಕು. ಅಪ್ಪನಿಗೆ ಸರಿಯಾದ ಪಾಠ ಕಲಿಸಬೇಕು ಎಂದು ನಿರ್ಧರಿಸಿ ಹೊರಟವಳು ಮತ್ತೆ ಬರಲೇ ಇಲ್ಲ.

ಇದ್ದಕ್ಕಿದ್ದಂತೆ ಮುದುಕ ಹಾಸಿಗೆ ಹಿಡಿದ. ಮೈಯೆಲ್ಲ ಉರಿ ಮನಸ್ಸಿಗೆ ವಿಚಿತ್ರವಾದ ಹಿಂಸೆ. ವಿಪರೀತ ಜ್ವರ. ರಾತ್ರಿಯೆಲ್ಲ ದುಃಸ್ವಪ್ನಗಳು. ನಿದ್ದೆಯಲ್ಲೆಲ್ಲ ಬಿಕ್ಕಿ ಬಿಕ್ಕಿ ಅಳುತ್ತಿದ್ದ. ಗುಟುಕು ಆಹಾರ ಸೇವಿಸುತ್ತಿದ್ದವನು, ಈಗ ಅನ್ನ ಹಾಲು- ಹೆಸರೆತ್ತಿದರೆ ವಾಕರಿಸಿಕೊಳ್ಳುತ್ತಿದ್ದ. ಬರಬರುತ್ತಾ ಕಡ್ಡಿಯಂತಾದ.

ಮುದುಕಿಗೆ ದಿಕ್ಕೇ ತೋಚಲಿಲ್ಲ. ಪಂಡಿತರು ವೈದ್ಯರು ಅಲ್ಲದೆ ಯಂತ್ರ ತಂತ್ರ ಮಾಡಿಸಿದ್ದಾಯಿತು. ಮಂತ್ರಗಾರ ಕೊಂಡಪ್ಪನನ್ನು ಕರೆಸಿ ಕೇಳಿದ್ದಾಯಿತು. ಶೀರಾ ಬೇಕಾದವರು, ಹತ್ತಿರದವರು ಯಾರೋ ಮಾಟ ಮಾಡಿಸಿದ್ದಾರೆಂದು ಹೇಳಿದ. ತಾತ್ಕಾಲಿಕ ಪರಿಹಾರವಾಗಿ ಯಂತ್ರ ಬಿಗಿದ. ಇನ್ನೂ ಪೂಜೆ ಪುನಸ್ಕಾರ ಅದೂ ಇದೂ ಅಂತ ಮಾಡೋಕೆ ಕಾಲ ವಿಳಂಬವಾಗುತ್ತೆ ಎಂದ. ಆದರೂ ಮುದುಕಿ ಒಪ್ಪಿ 'ಪೂಜೆ'ಗೆ ಪ್ರಾರಂಭಿಸಿ ಮಾಡಿದ ಕೇಡನ್ನು ತೆಗೆಸಬೇಕೆಂದು ಹೇಳಿದಳು.

ಹದಿನೈದು ಇಪ್ಪತ್ತು ದಿನ ಅಸಹನೀಯ ವೇದನೆಯಿಂದ ನರಳಿ, ನರಳಿ. ಒಣಗಿದ ಕಡ್ಡಿಯಂತಾದ. ಅಮಾವಾಸ್ಯೆಯ ರಾತ್ರಿ 10 ಗಂಟೆಗೆ ಕೊನೆಯುಸಿರೆಳೆದ. ಮುದುಕಿಗೆ ಆಕಾಶವೇ ಕಳಚಿ ಬಿದ್ದಂತಾಯಿತು. ಮುದುಕಿಯ ಮನಸ್ಸಿಗೆ ತಟ್ಟನೆ ನೆನಪಾದದ್ದು ಗಾಯತ್ರಿ, ಅವಳೇ ಯಾವುದಕ್ಕೂ ಹೇಸದವಳು. ಅವಳು ಕೊಲೆಗಾತಿಯಾಗಿ ಕಾಣಿಸಿದಳು.

ತಕ್ಷಣವೇ ಎಲ್ಲರಿಗೂ ಹೇಳಿ ಕಳಿಸಿದರು. ಸಾವಿತ್ರಿ ಅಮ್ಮನ ಜೊತೆಗೇ ಇದ್ದಳು. ಮುದುಕಿ ಯಾರಿಗೂ ಹೇಳಿ ಕಳಿಸುವುದು ಬೇಡವೆಂದು ಹಟ ಹಿಡಿದಳು. ಆದರೆ ಲೋಕಕ್ಕೆ ಹೆದರಿ. ಜನ ಆಡಿಕೊಂಡಾರೆಂದು ಸಮಾಧಾನ ಹೇಳಿ ಒಪ್ಪಿಸಿದ್ದಾಯಿತು.

ಬೆಳಿಗ್ಗೆ ಎಂಟು ಗಂಟೆಯ ಹೊತ್ತಿಗೆ ಎಲ್ಲರೂ ಬಂದಿಳಿದರೂ ಗಾಯತ್ರಿಯ ಸುಳಿವಿಲ್ಲ. ಹೆಣವನ್ನು ಎಷ್ಟು ಹೊತ್ತೆಂದು ಹಾಗೆ ಇಡುವುದು. ಬೀದಿಯವರಿಗೆಲ್ಲ ತೊಂದರೆ. ಹೆಣ ಅಲ್ಲಿಂದ ತೆಗೆಯುವವರೆಗೆ ಯಾರ ಮನೆಯಲ್ಲೂ ಒಲೆ ಹಚ್ಚುವ ಹಾಗಿಲ್ಲ. ಬಂದವರು ಆತುರಪಡಿಸಿದರು. ಗಂಡನ ಹೆಣದ ಬಳಿ ಮೂಕಿಯಾಗಿ ಕುಳಿತಿದ್ದ ಮುದುಕಿಗೆ ಬವಳಿ ಬಂದಂತಾಯಿತು. ಅಕಸ್ಮಾತ್ತಾಗಿ, ಅಷ್ಟಾಗಿ ತಿಳುವಳಿಕೆಯಿಲ್ಲದೆ ಮುದುಕಿಯ ಮನಸ್ಸಿಗೆ ತಟ್ಟನೆ ಗಂಡ, ಮಕ್ಕಳು, ಬಂಧು ಬಳಗ–ಎಲ್ಲಾ ಎಷ್ಟು ಸುಳ್ಳು!! – ಬದುಕಬಾರದು ಎನಿಸಿತು.

ಹೆಣ ಎತ್ತುವ ವೇಳೆಗೆ ಗಾಯತ್ರಿ ರಾಜಪ್ಪ ಬಂದರು. ರಾಜಪ್ಪ ಹೊಟ್ಟೆ ನೋವಿನ ಸುಳ್ಳು ನೆಪ ಹೇಳಿ ಹಿಂದೆಯೇ ಉಳಿದ. ಗಾಯತ್ರಿ ಮೊಸಳೆ ಕಣ್ಣೀರು ಹಾಕಿ ಅಮ್ಮನ ಕಣ್ಣೀರನ್ನು ಒರೆಸುವ ಪ್ರಯತ್ನ ಮಾಡಿದಳು. ಅನ್ಯಮನಸ್ಕಳಾಗಿ ಶೂನ್ಯದತ್ತ ನೋಡುತ್ತಿದ್ದ ಮುದುಕಿಗೆ ಗಾಯತ್ರಿ ಬಂದದ್ದು ವಿದ್ಯುತ್ ಸಂಚಾರವಾದಂತಾಯಿತು. ಆ ದುಃಖ ತಳಮಳಗಳ ನಡುವೆಯೂ ಮಗಳನ್ನು,

"ಹೊಟ್ಟೆ ತಣ್ಣಗಾಯಿತಾ ಮಗಳೇ? ನಿಮ್ಮಪ್ಪನನ್ನು ನುಂಗಿ ನೀರು ಕುಡಿದೆ. ನನ್ನ ದಾರಿ ಕಾಯಿ ಎಂದಷ್ಟೆ ಹೇಳಿ ಕೆಳಗೆ ಬಿದ್ದರು." ಎಲ್ಲರ ಮುಂದೆ ಈ ಮಾತು ಕೇಳಿದ್ದಕ್ಕೆ ಅವಮಾನಿತಳಾದ ಗಾಯತ್ರಿ ಒಳಗೆ ನಡೆದಳು. ನೋಡುತ್ತಾಳೆ – ಒಳಗೆ ರಾಜಪ್ಪ ತಿಜೋರಿ ಒಡೆಯುವುದರಲ್ಲಿ ಮಗ್ನನಾಗಿದ್ದ. ಯಾವುದಕ್ಕೂ ಕರಗದಿದ್ದ ಗಾಯತ್ರಿಯ ಕಣ್ಣಂಚಿನಲ್ಲೂ ಗಂಡನ ಈ ದುರ್ವ್ಯವಹಾರಕ್ಕೆ ಹನಿಗೂಡಿತು.

ಗಂಡನ ಅಂತ್ಯಕ್ರಿಯೆಗಳಿಗೆಂದು ತೆಗೆದಿಟ್ಟಿದ್ದ ಹಣವನ್ನು ಕಬಳಿಸಿದ್ದೇ ಅಲ್ಲದೆ ಪುಚ್ಚಾಪಟ್ಟೆ ಹಣ ಪೋಲು ಮಾಡುತ್ತಿದ್ದಾನೆಂದು ಗೋವಿಂದಯ್ಯನ ಜೊತೆ ಜಗಳವಾಡಿದ.

ಮುದುಕಿ ತಾನೊಬ್ಬಳೇ ಆ ಮನೆಯಲ್ಲಿ ಗಂಡನ ನೆನಪುಗಳ ಜೊತೆ ಬಾಳಿದಳು. ಎಷ್ಟು ಹೇಳಿದರೂ ಆ ಮನೆಬಿಟ್ಟು ಬರಲು ಒಪ್ಪಲಿಲ್ಲ. ಮಾತಿಲ್ಲ, ಕತೆಯಿಲ್ಲ. ಯಾಂತ್ರಿಕವಾಗಿ ಚಲಿಸುತ್ತಿದ್ದಳು. ಸಾವಿತ್ರಿ ತಾನೆ ಸಂಸಾರ ಬಿಟ್ಟು ಎಷ್ಟು ದಿನ ಅಂತ ಇಲ್ಲಿರಲು ಸಾಧ್ಯ. ಒಲ್ಲದ ಮನಸ್ಸಿನಿಂದ ಹೊರಟಳು. ವಾರಕ್ಕೊಮ್ಮೆಯಾದರೂ ಯೋಗಕ್ಷೇಮ ವಿಚಾರಿಸಿಕೊಂಡು ಹೋಗುತ್ತಿದ್ದಳು.

ಮೊನ್ನೆ ಕಾಲು ಜಾರಿ ಬಿದ್ದು ಊದಿಕೊಂಡು ನಡೆಯುವುದಕ್ಕೇ ಆಗದ ಸ್ಥಿತಿಯಲ್ಲಿದ್ದಾಗ ಬಲವಂತ ಮಾಡಿ ಕರೆತಂದು ಇಟ್ಟುಕೊಂಡಿದ್ದಳು.

ನಾಲ್ಕೈದು ತಿಂಗಳಾದರೂ ವಾಸಿಯಾಗಲಿಲ್ಲ. ಇನ್ನೂ ಹಾಸಿಗೆ ಬಿಟ್ಟು ಏಳುವ ಸ್ಥಿತಿಯಲ್ಲಿರಲಿಲ್ಲ. ಯಾವ ಡಾಕ್ಟರಿಗೆ ತೋರಿಸಿದರೂ, ಮುದುಕಿಯು ಮಾನಸಿಕವಾಗಿ

ಸಹಕರಿಸುತ್ತಿಲ್ಲ. ಆಕೆ ತನಗೆ ವಾಸಿಯಾಗಬೇಕೆಂದು ನಿರ್ಧಾರ ತಳೆಯುವವರೆಗೂ ಏನೂ ಮಾಡಲು ಸಾಧ್ಯವಿಲ್ಲವೆಂದು ಎದ್ದರು. ಸಾಯಬೇಕೆನ್ನುವ ಹಟವೇ ಅವಳಲ್ಲಿ ಬಲಗೊಳ್ಳುತ್ತಿದ್ದಂತಿತ್ತು.

ಮುದುಕಿಯ ಕಣ್ಮುಂದೆ ಹಿಂದಿನ ನೆನಪುಗಳೆಲ್ಲ ಮರುಕಳಿಸಿದವು. "ಹೌದು ಅವರು ಬರುವುದಿಲ್ಲ. ನಾನೇ ಹೋಗಬೇಕು. ಕಾಗೆಯ ರೂಪದಲ್ಲಿ ನನಗೆ ಎದುರು ಕಾಯುತ್ತಿದ್ದಾರೆ. ಅವರಿಗೆ ಬೇಕಾಗಿರುವುದು ಎಡೆಯಲ್ಲ. ನಾನು"- ಎಂದುಕೊಂಡಳು.

ಗೋಪಿಂದಯ್ಯ, ಗೋವಿಂದಯ್ಯ ಬಂದು ಬಿಡಿ. ಹಟವಾರಿ ಆತ್ಮಗಳು! ಬರುವುದಿಲ್ಲವೆಂದ ಮೇಲೆ ಅವುಗಳ ಹಣೆಬರಹ. ನಾವು ಎದುರಿಗಿದ್ದಷ್ಟೂ ಅವು ಗೋಳಾಡಿಸುತ್ತವೆ. ನೀವೆಲ್ಲ ಇಳಿದು ಬನ್ನಿ, ತಾವಾಗೆ ಬಂದು ತಿಂದು ಹೋಗುತ್ತವೆ- ಎಂದು ಒಂದಿಬ್ಬರು ಹಿರಿಯರು ಹೇಳಿದರು.

ಗೋಪಿಂದಯ್ಯನಿಗೂ ಕಾದು ಕಾದು ಸಾಕಾಗಿತ್ತು. ಹೇಳಿದ್ದೇ ತಡ, ಎಡೆಯನ್ನು ಮತ್ತೊಂದೆಡೆ ಸರಿಸಿಟ್ಟು ಇಳಿಯುತ್ತಲೇ ಮರದ ಮೇಲಿದ್ದ ಕಾಗೆಗಳಿಗೆ ಹೇಳಿದರು – ನೋಡಿ ನಿಮ್ಮಲ್ಲಿ ನಮ್ಮ ಮಾವ ಯಾರೋ ನನಗೆ ಗೊತ್ತಿಲ್ಲ. ಆದರೆ ನೀವು ಯಾವುದಾದರೂ ಸರಿ ಬಂದು ಇದನ್ನು ಸ್ಪರ್ಶಿಸಿ ನಮ್ಮ ಮನಸ್ಸಿನ ಭಾರವನ್ನು ಇಳಿಸಿ ನಮ್ಮನ್ನು ಉಪವಾಸ ಮುಕ್ತರನ್ನಾಗಿ ಮಾಡಿ ನಿಮಗೆ ಕೈ ಮುಗಿಯುತ್ತೇನೆ" ಎಂದ.

ಕುಳಿತಿದ್ದವರೆಲ್ಲ ಒಂದು ದೀರ್ಘ ಉಸಿರನ್ನೆಳೆದರು. ಬಡಿಸಬೇಕಾದ್ದನ್ನೆಲ್ಲಾ ಎಲೆಗಳಿಗೆ ಬಡಿಸಿದ್ದಾಯಿತು. ಇನ್ನೇನು ತುತ್ತನ್ನು ಕೈಗೆ ತೆಗೆದುಕೊಂಡರೋ ಇಲ್ಲವೋ. "ಕಾಗೆಗಳು ಬಂದವೇನ್ರೆ?"... ಅಗೋ ಅಲ್ನೋಡಿ ಹೇಗೆ ಹಸಿದು ಕಂಗಾಲಾದವುಗಳಂತೆ ಕಾ! ಕಾ! ಕಾ! ಕಾ! ಅಂತ ಒಂದೇ ಸಮನೆ ಕೂಗ್ತಾ ಇವೆ. ಪಾಪ! ಎಷ್ಟು ಹೊತ್ತಿಂದ ಹಸಿದಿದ್ದವೋ ಏನೋ!! ಅವರವರಿಗೆ ಬೇಕಾದ ಬಳಗವನ್ನೆಲ್ಲಾ ಕರೆದು ಹಂಚಿಕೊಂಡು ತಿಂತಿರಬೇಕಲ್ಲ! ಅಂದಳು. ಮುದುಕಿಗೆ ಒಬ್ಬಳಿಗೆ ಹೊರತಾಗಿ ಇನ್ನಾರಿಗೂ ಕಾಗೆಗಳು ಕರೆದದ್ದು ಕೇಳಿಸಿರಲಿಲ್ಲ. ಅವರಿಗೆಲ್ಲ ಅದು ಅವಳ ಭ್ರಮೆ ಎನಿಸಿತು. ಅಷ್ಟರಲ್ಲಿ ಹಿತ್ತಲಲ್ಲಿ ಒಂದು ಕಾಗೆ ರಪ ರಪ ರೆಕ್ಕೆ ಬಡಿಯುತ್ತಾ ಅಲ್ಲಲ್ಲೇ ಸುತ್ತಾಡತೊಡಗಿತು. ಥೂ ಅನಿಷ್ಟ! ಎಲ್ಲಾದರೂ ಒಳಗೆ ನುಗ್ಗಿದರೆ!- ಎಂದು ಭಯವಾಗಿ ಉಶ್ ಉಶ್ ಎಂದು ಓಡಿಸಲು [illegible] ಹಿಡಿದ.

ಮುದುಕಿ ಮಲಗಿದ್ದ ಕೋಣೆಯೊಳಗಿಂದ ಸಾವಿತ್ರಿಯ ಗಾಬರಿಯ ಕೂಗು ಕೇಳಿಸಿತು-

"ಅಯ್ಯೋ ಅಯ್ಯೋ ಬನ್ನೀಂದ್ರೆ, ಅಮ್ಮ - ಅಮ್ಮ ನೋಡಿ ಮಾತಾಡ್ತಲೇ ಇಲ್ಲ."

ಅದೇ ಹೊತ್ತಿಗೆ ಹಿಂಡು ಕಾಗೆಗಳ ಕೂಗು ಮಾರ್ದನಿಸಿತು. ಚಡಪಡಿಸುತ್ತ ರೆಕ್ಕೆ ಬಡಿಯುತ್ತಲಿದ್ದ ಕಾಗೆ ಶಾಂತವಾಗಿ ಹಾರಿಹೋಯಿತು.

* * *

ಗಡಿ ದಾಟದ ದೇವರು

ಇವತ್ತಿಗೆ ಸರಿಯಾಗಿ ವಾರವಾಯಿತು. ರಾಮಾಲಯದಲ್ಲಿನ ವಿಗ್ರಹಗಳು ಇದ್ದಕ್ಕಿದ್ದಂತೆ ನಾಪತ್ತೆಯಾಗಿ ಏನೋ ಒಂದು ಬಗೆಯ ಭೀತಿ, ಆತಂಕ, ಆ ಹಳ್ಳಿಯನ್ನು ಆವರಿಸಿಬಿಟ್ಟಿದೆ. ಸುಮಾರು ೨೦೦ ವರುಷಗಳ ಹಿಂದಿನದಾದ ಆ ವಿಗ್ರಹಗಳಿಗೆ ತುಂಬ ಪ್ರಾಮುಖ್ಯತೆಯಿದೆ. ಅವುಗಳ ಬಗ್ಗೆ ಜನರಿಗೆ ಭಕ್ತಿ, ಶ್ರದ್ಧೆಗಳಿವೆ. ಇವು ಉತ್ಸವ ಮೂರ್ತಿಗಳಾದ್ದರಿಂದ ಕಳ್ಳರಿಗೆ ಸುಲಭವಾಗಿ ಕದ್ದೊಯ್ಯಲು ಸಾಧ್ಯವಾಯಿತು. ಜೊತೆಗೆ ಅಳತೆ ಪ್ರಮಾಣದಲ್ಲಿ ಹೊತ್ತೊಯ್ಯಲು ಅನುಕೂಲವಾಗಿದ್ದರಿಂದಲೇ ಇವುಗಳ ಮೇಲೆ ಕಳ್ಳರ ಕಣ್ಣು ಬಿದ್ದಿರಬೇಕು.

ಸಾಮಾನ್ಯವಾಗಿ ಇಷ್ಟು ವರುಷಗಳಾದರೂ ಹೇಳಿಕೊಂಡು ಗಾಬರಿಪಡುವಂತಹ ಕಳ್ಳತನಗಳೇನೂ ಆ ಊರಿನಲ್ಲಿ ನಡೆದೇ ಇಲ್ಲ. ಜೊತೆಗೆ ಹೊರಗಿನಿಂದ ಯಾವ ಕಳ್ಳನೂ ಬಂದು ಕಳ್ಳತನ ಮಾಡುವ ಸಾಹಸಕ್ಕೆ ಹೋಗಿರಲಿಲ್ಲ. ಅಂತಹುದರಲ್ಲಿ ಮೊನ್ನೆ ವಿಗ್ರಹಗಳು ಕಳುವಾಯಿತೆಂದರೆ ಊರಿನ ಜನಕ್ಕೆ ಒಂದೆಡೆ ಆಶ್ಚರ್ಯವಾದರೆ ಮತ್ತೊಂದೆಡೆ ಆತಂಕ. ವಿಗ್ರಹಗಳು, ಅದೂ ಪೂಜಾ ವಿಗ್ರಹಗಳು ಹೋದದ್ದರಿಂದ ಊರಿಗೆ ಕೇಡು ಸಂಭವಿಸಬಹುದೆಂದು ಜನ ಹೆದರಿದರು. ಆಗಬಾರದ್ದೇನೋ ಆಗಬಹುದೆಂದು ಹೌಹಾರಿದರು. ಕಳ್ಳರು ಯಾರಿರಬಹುದೆಂದು ತಮ ತಮಗೆ ತಿಳಿದಂತೆ ಗುಸು ಗುಸು ಮಾತಾಡಿಕೊಂಡರು. ವೆಂಕಟ, ಕೃಷ್ಣ, ಸಂಗ, ತಿಮ್ಮ, ರೆಡ್ಡಿ, ಸರಸ, ಕಿಟ್ಟ – ಹೀಗೆ ಒಬ್ಬರಿಂದ ಒಬ್ಬರ ಮೇಲೆ ಅನುಮಾನ ಹಬ್ಬಿತು. ಆದರೆ ಯಾರನ್ನೂ ಪ್ರತ್ಯಕ್ಷವಾಗಿ ನಿಲ್ಲಿಸಿ ಪ್ರಮಾಣವಿಲ್ಲದೆ ಕೇಳುವ ಹಾಗಿರಲಿಲ್ಲ. ಆಕಸ್ಮಾತ್ತಾಗಿ ಅವರೇ ಅಪರಾಧಿಗಳಲ್ಲದಿದ್ದರೆ ವಿನಾ ಕಾರಣ ಮಾಡಿದ ಪಾಪಕ್ಕೆ ಒಳಗಾಗುತ್ತೇವೆಂದು ಹೆದರಿ ಸುಮ್ಮನಾದರು.

ಕೊನೆಗೆ ಅರ್ಚಕ ರಾಮಣ್ಣನ ಮೇಲೂ ಸಂಶಯ ಮೂಡದೆ ಇರಲಿಲ್ಲ. ಒಂದು ವೇಳೆ ಅವನೂ ಕೂಡಾ [illegible] ವಿಗ್ರಹ ಮಾರಾಟದಿಂದ ದೊರೆಯುವ

ಹಣದಿಂದ ಲಾಭ ಪಡೆಯಲು ಯೋಚಿಸಿರಬಹುದೇ? ಎಂದೂ ಆಲೋಚಿಸಿದರು. ಆದರೂ ಕಳ್ಳತನ ಪತ್ತೆಯಾಗುವವರೆಗೆ ಸುಮ್ಮನಿರಬೇಕೆಂದುಕೊಂಡರು.

ಶನಿವಾರ ರಾತ್ರಿ ಪೂಜೆ ಮುಗಿಸಿದ ರಾಮಪ್ಪ ಗುಡಿಯ ಬಾಗಿಲಿಗೆ ಭಾರಿಯಾದ ಬೀಗ ಜಡಿದು, ಎಳೆದು ಬೀಗ ಬಿದ್ದಿದೆಯೇ ಎಂದು ಖಚಿತಪಡಿಸಿಕೊಂಡು ಮನೆಯತ್ತ ಹೊರಟ. ಮನಸ್ಸಿನಲ್ಲಿ ಏನೋ ಒಂದು ಬಗೆ ಸಂಕಟವಾಗುತ್ತಿದೆಯೆಂದು ಹೆಂಡತಿ ಸಾವಿತ್ರಿಗೆ ಹೇಳಿ ಊಟವನ್ನೂ ಮಾಡದೆ ಹಾಗೆಯೇ ಮಲಗಿದ. ಏನೇನೋ ಕನಸುಗಳು. ಸರಸರ ನಡೆವ ಹೆಜ್ಜೆಗಳ ಸಪ್ಪಳ, ಒಂದೇ ಸಮನೆ ನಾಯಿಗಳು ಬೊಗಳುವ ಸದ್ದು. ಒಮ್ಮೊಮ್ಮೆ ಕೆಟ್ಟದಾಗಿ ಕಿರಲುವ ದನಿಗಳು. ವಿಪರೀತ ಕತ್ತಲು. ಆ ಕತ್ತಲಲ್ಲಿ ಯಾವುದೋ ಒಂದು ಹೆಣ್ಣಿನ ಆಕಾರ, ಗಿಲಕ್ ಗಿಲಕ್ ಸದ್ದು. ಇಷ್ಟು ಅಪರಾತ್ರಿಯಲ್ಲಿ ಯಾರಿರಬಹುದು ಈಕೆ? ಯಾಕೆ ಹೀಗೆ ಕೆರೆಯ ಏರಿಯ ಮೇಲೆ ಕುಲುಕುತ್ತ ನಡೆಯುತ್ತಿದ್ದಾಳೆ?... ಕೂಗೋಣವೇ ಎಂದುಕೊಂಡು ಯಾರಲ್ಲಿ? ಎಂದ. ಹವ್ವನೆ ತಿರುಗಿ ನೋಡಿತು ಆ ಹೆಣ್ಣು ಆಕಾರ. ಬೆಚ್ಚಿದ. ಕಾಲಿನ ನಡಿಗೆಯಲ್ಲಿದ್ದ ಒನಪು ಒಯ್ಯಾರಗಳು ಮುಖದಲ್ಲಿರಲಿಲ್ಲ. ಕೆಂಗಣ್ಣುಗಳಿಂದ ವಿಕಟವಾಗಿ ನಕ್ಕಿತು ಆ ರೂಪ. ಕೋರೆದಾಡೆಗಳು ಬೇರೆ, ವಿಕಾರವಾದ ರೂಪಕ್ಕೆ ಹೆದರಿ ಅಯ್ಯೋ ಸಾವಿತ್ರಿ ಎಂದು ಅರಚಿದ. ಅರಚುತ್ತಿದ್ದಂತೆ ತನ್ನೆದೆ ಮೇಲೆ ಯಾರೋ ಹೆಜ್ಜೆಗಳಿಟ್ಟು ಒತ್ತಿ ದಡ ದಡ ಓಡಿದಂತೆನಿಸಿ ಉಸಿರು ಕಟ್ಟಿದಂತಾಗಿ ಒದ್ದಾಡಿದ ಇವನ ಕೂಗಿಗೆ ಬೆಚ್ಚುತ್ತಲೇ ಎದ್ದ ಸಾವಿತ್ರಿ, ಗಂಡನ ಬದಿಗೆ ಸರಿದು, ಏನಾಯಿತೆಂದು ವಿಚಾರಿಸಿದಳು.

ಇನ್ನೂ ರಾಮಪ್ಪ ಆವೇಶದಿಂದ ಏದುಸಿರಿಡುತ್ತಲೇ "ಅವರು" ಎಂದ ಭೀತಿಯಿಂದ.

"ಯಾರು" ಎಂದು ಕೇಳಿದಳು.

"ಅದೇ ಅವರು. ಈಗ ನನ್ನೆದೆ ಮೇಲೆ ಒತ್ತಿ ನಡೆದರಲ್ಲ ಅವರು" ಎಂದ ಭೀತಿಯಿಂದ.

ಸಾವಿತ್ರಿ ನಕ್ಕಳು. "ನಿಮಗೆಲ್ಲೋ ಕನಸು ಮಲಗಿಕೊಳ್ಳಿ. ಇಲ್ಲಿ ಯಾರೂ ಇಲ್ಲ. ಹುಚ್ಚುಚ್ಚಾಗಿ ಏನೇನೋ ಕನಸು ಕಾಣದೆ ಸ್ವಸ್ಥವಾಗಿ ಮಲಗಿ. ನಾನಿದ್ದೇನೆ ಇಲ್ಲಿ. ನಿಮಗೇನೂ ಭಯ ಬೇಡ. ಇನ್ನೂ ಬೆಳಕು ಹರಿದಿಲ್ಲ. ಇಷ್ಟು ಬೇಗ ಎದ್ದು ಏನು ಮಾಡ್ತೀರಿ" ಎಂದಳು.

ರಾಮಪ್ಪನಿಗೆ ಸಮಾಧಾನ ಆಗಲಿಲ್ಲ. ಖಂಡಿತವಾಗಿಯೂ ಇನ್ನು ನಿದ್ದೆ ಹತ್ತದು. ಅಕಸ್ಮಾತ್ ಮಲಗಿ ಕಣ್ಣು ಹಚ್ಚಿದರೆ ಅದೇ ಕನಸುಗಳು ಬಂದಾವೇನೋ. ಅದಕ್ಕಿಂತ ಎದ್ದು ಹೋಗಿ ಮುಖ ತೊಳೆದುಕೊಂಡು ಗಾಯತ್ರಿ ಮಂತ್ರ ಜಪಿಸುವುದು ಒಳ್ಳೆಯದೆಂದು ಕೊಂಡು ಹಾಸಿಗೆ ಬಿಟ್ಟು ಎದ್ದ. ಸಾವಿತ್ರಿಗೆ ಇನ್ನೂ ಪೂರ್ತಿಯಾಗಿ ನಿದ್ದೆ ಹರಿದಿರಲಿಲ್ಲ.

ಮಲಗುವ ಯೋಚನೆಯಾಯಿತು. ಕನಸಿನ ಪೀಡೆಯಿಂದ ಗಾಬರಿಗೊಂಡ ಗಂಡನ ಜೊತೆ ಎದ್ದು ಕೂತಿರಬೇಕೆ? ಅಥವಾ ಅವನ ಪಾಡಿಗೆ ಅವನನ್ನು ಬಿಟ್ಟು ಮಲಗಬೇಕೇ? ಏನನ್ನೂ ನಿರ್ಧರಿಸಲಾರದೆ ಒಂದೆರಡು ನಿಮಿಷ ಒದ್ದಾಡಿದಳು. ಆದರೆ ಯಾವುದನ್ನೂ ನಿರ್ಧರಿಸುವ ಮೊದಲೇ ಕಣ್ಣುಗಳು ಭಾರವಾಗಿ ಅನಾಯಾಸವಾಗಿ ನಿದ್ದೆಯ ಜೊಂಪಿಗೆ ಒಳಗಾಗಿ ಕುಳಿತಲ್ಲೇ ಕಣ್ಣು ಮುಚ್ಚಿದಳು.

ರಾಮಪ್ಪ ಗಾಯತ್ರಿ ಜಪಕ್ಕೆ ತೊಡಗಿದ. ಲೆಕ್ಕ ಇಡಲಿಲ್ಲವಾದರೂ ಸುಮಾರು ಸಾವಿರ ಸಲ ಜಪಿಸಿರಬಹುದು. ಗಾಯತ್ರಿ ಜಪದಲ್ಲಿ ತೊಡಗಿರುವಂತೆಯೇ ಮಸುಕು ಬೆಳಕು ಹರಿಯಿತು. ಯಾರೋ ತನ್ನ ಹೆಸರು ಹಿಡಿದು ಬಾಗಿಲು ತಟ್ಟಿದಂತಾಯಿತು. ಹೆದರಿಕೆಯಾದರೂ, ಬೆಳಗಾಗುತ್ತಿರುವ ಸೂಚನೆಗಳಿದ್ದುದರಿಂದ, ಜನಿವಾರವನ್ನು ಗಟ್ಟಿಯಾಗಿ ಹಿಡಿದುಕೊಂಡು ಬಾಗಿಲಿನತ್ತ ನಡೆದ. "ಯಾರದು?" ಎಂದುದಕ್ಕೆ ಹೊರಗಿನಿಂದ, "ನಾನು ಚಿನ್ನ ಸ್ವಾಮಿ" ಎಂದು ಉತ್ತರ ಬಂತು. ಬೆಳಗಾಗುತ್ತಲೇ "ಈ ಶೂದ್ರ ಮುಂಡೇದು ಯಾಕೆ ಬಂತೋ" ಎಂದು ಕಸಿವಿಸಿಗೊಂಡ. ಆದರೆ ಬಾಗಿಲು ತೆರೆದ. ಚಿನ್ನಸ್ವಾಮಿ ಗಾಬರಿಯಿಂದಿದ್ದ. "ಸ್ವಾಮೇರ ಗುಡೀ ಬಾಗಿಲ ಹಾಕೋದ ಮರೆತುಬಿಟ್ಟರೇನ" ಎಂದು ಪ್ರಶ್ನಿಸಿದ. "ಯಾಕೆ? ಯಾಕೆ? ಏನಾಯ್ತು?" ಅವಸರದಿಂದ ಪ್ರಶ್ನಿಸಿದ ರಾಮಪ್ಪ.

"ಗುಡೀ ಬಾಗಿಲು ಬಟಾ ಬಯಲಾ ತೆರೆಕೊಂಡಿತ್ತು. ನೀವೇನಾರ ಮರೆತಿದ್ದಿರಾ? ಹ್ಯಾಂಗ್ಯಾಂತ ಕೇಳೋಣು ಬಂದೆ."

"ಇಲ್ಲಪ್ಪಾ? ರಾತ್ರಿ ಬರುವಾಗ ಭದ್ರವಾಗಿ ಬೀಗ ಜಡಿದು ಬಂದಿದ್ದೆ. ನಾನು ಬೀಗ ಹಾಕದೆ ಮರೆತಿರೋಕೆ ಸಾಧ್ಯವೇ ಇಲ್ಲ" ಯೋಚಿಸುತ್ತಲೇ ನುಡಿದ. "ನಡಿ, ನಡಿ ಏನು ಸಮಾಚಾರ ನೋಡೋಣ" ಎಂದು ಆತುರದಿಂದ ಚಿನ್ನಸ್ವಾಮಿ ಜೊತೆಗೆ ಗುಡಿಯತ್ತ ನಡೆದ.

ರಾಮಪ್ಪ, ಚಿನ್ನಸ್ವಾಮಿ ಅಲ್ಲಿ ತಲುಪುವಷ್ಟರಲ್ಲಿಯೇ ಜನ ಗುಂಪು ಗುಂಪಾಗಿ ಸೇರಿದ್ದರು. ಎದ್ದವರು ಎದ್ದಂತೆಯೇ ಬಂದಿದ್ದರಿಂದ ಅವರ ಮಂಪರು ಇನ್ನೂ ಕಳೆದಿರಲಿಲ್ಲ. ಒಂದು ಗುಂಪು, ಹೊಟ್ಟೆ ಮೇಲಿದ್ದ ಹರಕಲು ಅಂಗಿಯ ತೇಪೆ ತೂತುಗಳಿದ್ದ ಚಡ್ಡಿಗಳನ್ನು ತೊಟ್ಟು ಜೊಲ್ಲಿನ ಕರೆಗಳನ್ನು ಹಾಗೇ ಉಳಿಸಿಕೊಂಡು ಕಿಸರುಗಣ್ಣಿನ ಹುಡುಗರ ಹಿಂಡನ್ನು, ದೊಡ್ಡವರನ್ನು ದೂಡಿಕೊಂಡು ಮುಂದಕ್ಕೆ ನುಗ್ಗಿ ಗುಡಿಯ ಜಗುಲಿಯ ಮೇಲೆ ಹತ್ತಿ ನಿಂತಿತು.

ರಾಮಪ್ಪ ಬಂದವನೇ ಹೌಹಾರಿದ. ದಿನವೂ ತಾನೂ ಭಕ್ತಿ, ಶ್ರದ್ಧೆಗಳಿಂದ ಓಲೈಸಿ, ಗಂಟೆಗಟ್ಟಲೆ ಸ್ತೋತ್ರಗಳಿಂದ ಪೂಜಿಸಿ, ಆರಾಧಿಸಿ ಅರ್ಚನೆ ಮಾಡುತ್ತಿದ್ದ ದೇವರ ವಿಗ್ರಹ ರಾತ್ರಿಗೇ ಮಂಗಮಾಯ! ಒಂದು ಕ್ಷಣ ಅಚ್ಚರಿಯೆಂದರೆ ಮರುಕ್ಷಣವೇ

ಅನಿಷ್ಟದ ಭೀತಿಯಿಂದ ಕಂಪಿಸಿದ. ನೂರು ವರುಷಗಳಿಂದಲೂ ಒಂದು ಹುಲ್ಲು ಕಡ್ಡಿಯೂ ಗುಡಿಯ ಹೊಸಿಲು ದಾಟಿ ಹೋದದ್ದಿಲ್ಲ. ಗುಡಿಯ ಬಾಗಿಲಿಗೆ ಬೀಗದ ಅವಶ್ಯಕತೆಯೂ ಇರುತ್ತಿರಲಿಲ್ಲ. ಜನರಿಗೆಲ್ಲ ದೇವರ ಬಗ್ಗೆ ಭಯ, ಶ್ರದ್ಧೆ, ಗೌರವ, ಭಕ್ತಿಗಳಿದ್ದವು. ದೇವರ ಸೊತ್ತು ಮುಟ್ಟಿದವನ ಮನೆ ಮುರಿದು ಬೀಳುತ್ತದೆಂಬ ನಂಬುಗೆ ಬಲವಾಗಿತ್ತು ಈ ಹಳ್ಳಿಯಲ್ಲಿ. ಆದರೆ! ಇಂದೇನಾಗಿದೆ? ದೇವರ ಮೇಲಿನ ಒಡವೆ ಕದಿಯುವುದಿರಲಿ, ದೇವರನ್ನೇ ಕದ್ದ ಕಳ್ಳ ಖದೀಮ ಯಾರು ಹುಟ್ಟಿರಲು ಸಾಧ್ಯ ಈ ಹಳ್ಳಿಯಲ್ಲಿ? ಎಂದು ಯೋಚಿಸಿದ. ರಾಮಪ್ಪನ ಮನಃಸ್ಥಿತಿ ಯಾರಿಗೂ ಅರ್ಥವಾಗಲಿಲ್ಲ. ರಾಮಪ್ಪನ ಚಿಕ್ಕ ಹುಡುಗರಿಬ್ಬರು ಒಂದೆರಡು ಬಾರಿ ಹುಂಡಿಯ ಕಾಸನ್ನು, ದೇವರ ಬೆಳ್ಳಿಯ ಕಣ್ಣನ್ನು ಕದ್ದಿದ್ದರು ನಿಜ. ಅದಕ್ಕೆ ಚರ್ಮ ಸುಲಿದು ಹೋಗುವ ಹಾಗೆ ಬಡಿದಿದ್ದ. ಆದರೆ ದೇವರನ್ನೇ ಕದಿಯುವ ಸಾಹಸಕ್ಕೆ ತನ್ನ ಹಸು ಮಕ್ಕಳು ಹೋಗಿರಲು ಸಾಧ್ಯವಿಲ್ಲ. ಅದು ತನಗೆ ಗೊತ್ತು. ಆದರೆ ಜನರೂ ಹಾಗೆ ಭಾವಿಸಬೇಕಲ್ಲ? ಒಂದು ವೇಳೆ ತನ್ನ ಮಕ್ಕಳ ಮೇಲೇ ಸಂಶಯ ತೋರಿದರೆ?! ದೇವರೇ! ಎಂದು ಕುಸಿದ. ಗುಂಪಿನಲ್ಲಿದ್ದ ಇಬ್ಬರು ಪೂಜಾರಿಯನ್ನು ಸಾಂತ್ವನಗೊಳಿಸಿ ಎಬ್ಬಿಸಿದರು.

ಜನರಲ್ಲಿ ಏನೋ ಒಂದು ಬಗೆಯ ಕೋಲಾಹಲ. ಗುಸು ಗುಸು, ಪಿಸಪಿಸ ಆರಂಭವಾಯಿತು. ಪ್ರತಿಯೊಬ್ಬರೂ ಕಳ್ಳರು ಯಾರಿರಬಹುದೆಂದು ತರ್ಕಿಸಲು ಆರಂಭಿಸಿದರು. ಹಳ್ಳಿಯಲ್ಲಿನ ಒಂದಿಪ್ಪತ್ತು ಮಂದಿ ಘಟಿಂಗರ ನೆನಪೂ ಬಂತು. ಒಬ್ಬೊಬ್ಬರ ಪೂರ್ವೇತಿಹಾಸವನ್ನು ಪುನರ್ ಪರಿಶೀಲಿಸಲು ತೊಡಗಿದರು.

ಯಾರಿರಬಹುದು? ಯಾರಿರಬಹುದು? ಎಂಬ ಚರ್ಚೆಯೇ ಆ ಸನ್ನಿವೇಶದ ಸ್ಥಾಯಿ ಪಲ್ಲವಿಯಾಯಿತು. ಗ್ರಾಮಾಧಿಕಾರಿ ಕೋನಪ್ಪ ರೆಡ್ಡಿ ಮುಂದೆ ಬಂದ. ಜನ ಅವನು ಮುಂದಕ್ಕೆ ಬರುತ್ತಿದ್ದಂತೆ, ಭಯ, ಗೌರವದಿಂದ ದಾರಿ ಮಾಡಿಕೊಡಲು ಇಕ್ಕೆಲಗಳಿಗೆ ಸರಿದರು.

ನೆರೆದ ಜನರನ್ನು ಉದ್ದೇಶಿಸಿ ಗ್ರಾಮಾಧಿಕಾರಿ ಗುಡಿಯ ಜಗುಲಿಯ ಮೇಲಿಂದ ಮಾತನಾಡಿದ. "ಪ್ರಜೆಗಳೇ, ಬಂಧುಗಳೇ, ಇವತ್ತಿನ ಘಟನೆ ನಮ್ಮೂರಿನ ಘನತೆ ಗೌರವಗಳಿಗೇ ಮಾರಕವಾದ ಸಂಗತಿಯಾಗಿದೆ. ನೂರಾರು ವರ್ಷಗಳಿಂದ ಕಾಯ್ದಿಟ್ಟುಕೊಂಡು ಬಂದ ಊರಿನ ಒಗ್ಗಟ್ಟು ಒಮ್ಮತ ಹಿರಿಮೆ ಗರಿಮೆಗಳ ಕಾಲ ಇತ್ತೀಚೆಗೆ ನಡೆಯುತ್ತಿರುವ ಕೆಲವು ಘಟನೆಗಳಿಂದ ಮುಗಿಯುತ್ತಾ ಬಂದಿದೆಯೆಂಬುದು ವೇದ್ಯವಾಗಿದೆ. ನಮ್ಮಧಿಕಾರಾವಧಿಯಲ್ಲಿ ಹೀಗಾಗುತ್ತಿರುವುದು ಮತ್ತೂ ವಿಷಾದದ ಸಂಗತಿಯಾಗಿದೆ. ಹಾಗೆಂದು ಪರಿಸ್ಥಿತಿಯೊಂದಿಗೆ ಒಪ್ಪಂದ ಮಾಡಿಕೊಂಡು ಈ ಸಂದರ್ಭದಲ್ಲಿ ಸುಮ್ಮನೆ ಕೂಡುತ್ತೇವೆಂದು ವಿಗ್ರಹಗಳನ್ನು ಕದ್ದವರು ತಿಳಿಯಬೇಕಿಲ್ಲ. ಪೋಲೀಸರ ಪ್ರವೇಶವಿಲ್ಲದೆಯೇ ಕಳುವಾದ ವಿಗ್ರಹಗಳು ಇನ್ನು ಮೂರು ದಿನಗಳೊಳಗಾಗಿ

ಯಥಾಸ್ಥಾನಕ್ಕೆ ಹಿಂತಿರುಗಬೇಕು. ಇಲ್ಲವಾದರೆ ಕಳ್ಳರನ್ನು ಕಂಡುಹಿಡಿಯುವ ಕೆಲಸ ನಮಗೇನೂ ಅಸಾಧ್ಯವಲ್ಲ. ಕಳ್ಳರು ಯಾರೆಂದು ನುಡಿಸುತ್ತೇವೆ. ನಿಮಗೆ ತಿಳಿದಂತೆ ದೈವದ ಮಾತಿಗೆ ಪ್ರತಿಯಿಲ್ಲ. ಈ ಊರಿನಲ್ಲಿ ದೈವ ನುಡಿದು ಹೆಸರಿಸುವ ಅಪರಾಧಿಗೆ, ವಿಧಿಸುವ ದಂಡನೆ ತೀವ್ರತರವಾಗುವುದು. ಆದ್ದರಿಂದ ಮೂರು ದಿನಗಳ ಗಡುವನ್ನು ನಿಶ್ಚಯಿಸಿ ಅಪರಾಧದ ಪರಿಶೋಧನಕ್ಕೆ ಎಲ್ಲರೂ ಪ್ರಯತ್ನಿಸೋಣ" ಎಂದು ನುಡಿಯುತ್ತಿದ್ದಂತೆ ಎಲ್ಲರ ಸಮ್ಮತಿಯೂ ದೊರೆಯಿತು.

ರೆಡ್ಡಿಯು ಮತ್ತು ಉಳಿದ ಊರಿನ ಮುಖ್ಯಸ್ಥರ ಸಮಕ್ಷಮದಲ್ಲಿ ಗುಡಿಗೆ ಬೀಗ ಹಾಕಿ ಸೀಲು ಮಾಡಿದರು.

ರಾಮಪ್ಪನ ಅಸ್ವಸ್ಥತೆ ಬರಬರುತ್ತಾ ಹೆಚ್ಚಾಯಿತು. ದೇವರೇ ಈ ಅಪರಾಧದ ಅಪಕೀರ್ತಿ ನಮ್ಮ ಮೇಲೆ ಬಾರದಿರುವಂತೆ ಮಾಡೆಂದು ಹಂಬಲಿಸಿ ಬೇಡಿದ. ತಮ್ಮ ಮಗ ಇತ್ತೀಚೆಗೆ ಪುಡಿಗಾಸಿನ ಆಸೆಗಾಗಿ ಸಣ್ಣ ಪುಟ್ಟ ಕತ್ತರಿ ಕೆಲಸಗಳಿಗೆ ತೊಡಗಿ ಸದ್ಯಕ್ಕೆ ಅವನೂ ಈ ಅಪರಾಧದಲ್ಲಿ ಶಾಮೀಲಾಗದಿದ್ದರೆ ಸಾಕೆಂದು ಮತ್ತೆ ಮತ್ತೆ ದೇವರನ್ನು ಕಾಡಿದ ಬೇಡಿದ.

ಮಡಿವಾಳ ಚೆನ್ನಪ್ಪನಿಗೆ ಅಮ್ಮ ಆವಾಹನೆಯಾಗಿತ್ತು. ಊರಿನ ಮಂದಿ ಮೈಯೆಲ್ಲಾ ಕಿವಿಯಾಗಿ ಅಪರಾಧಿಯ ಹೆಸರು ಕೇಳಲು ಕಾತರದಿಂದ ಕಾದಿದ್ದರು. ಹಣೆಗೊಂದಿಷ್ಟು ಭಂಡಾರ ಬಳಿದುಕೊಂಡ. ಇದ್ದಕ್ಕಿದ್ದಂತೆ ಬೆವರತೊಡಗಿದ. ಕಣ್ಣು ಕೆಂಪಗಾಯಿತು, ಕೆರಳಿತು. ಮೆಲ್ಲ ಮೆಲ್ಲನೆ ಆವೇಶಕ್ಕೆ ಒಳಗಾಗುತ್ತಿದ್ದ. ತಲೆ ತಿರುಗಲು ಆರಂಭಿಸಿತು. ಹಾಂ ಹೂಂ! ಎಂದು ಹೂಂಕರಿಸುತ್ತಾ ಗಿರಗಿರನೆ ತಲೆತೂಗತೊಡಗಿದ. ಅಮ್ಮ! ಒಂದಿಷ್ಟು ಅಮ್ಮ ಬಂದು ಬಿಟ್ಟು ಹೋಗು! ಎಂದು ಜನ ಸ್ತೋಮ ಕೂಗಿತು. ರಾಮಪ್ಪ ನಡುಗುತ್ತಲೇ ವಿಗ್ರಹ ಕಳುವಿನ ಬಗ್ಗೆ ಶಕುನ ಕೇಳಿದ. ಅಮ್ಮನವರು ತನಗೂ ಅದಕ್ಕೂ ಸಂಬಂಧವಿಲ್ಲವೆಂದರು. ರಾಮದೇವರು ತನ್ನ ಬಳಗವಲ್ಲ. ತಾನೇಕೆ ಅವರ ಬಗ್ಗೆ ತಲೆ ಕೆಡಿಸಿಕೊಳ್ಳಬೇಕು? ಅಮ್ಮನ ತರ್ಕ. ಆದರೆ ಜನ ಸುಮ್ಮನೆ ಬಿಟ್ಟಾರೆಯೇ? ಆಕೆ ಹೇಗೋ ರಾಮದೇವರೂ ಹಾಗೆಯೇ ತಮಗೆ. ಅವರನ್ನು ಬೇಡವೆಂದು ತಿರಸ್ಕರಿಸುವುದಾದರೆ ತಾವೂ ಕೂಡ ಅಮ್ಮನವರನ್ನು, ಅಂದರೆ ಗ್ರಾಮದೇವತೆಯಾದ ರೇಣುಕಮ್ಮನನ್ನು ತ್ಯಜಿಸುವುದಾಗಿಯೂ, ಆಕೆಯ ಗುಡಿಗೆ ಬೀಗ ಜಡಿದು, ಸೀಲು ಮಾಡಿ ಪೂಜೆ ಪುರಸ್ಕಾರಗಳಿಲ್ಲದೆ ಹಾಳು ಬೀಳಿಸುವುದಾಗಿ ಬೆದರಿಕೆ ಹಾಕಿದರು!!... ದೇವತೆ ಹೆದರಿದಳೋ ಏನೋ! ದೈವದ ವಾಣಿ ಪ್ರಾರಂಭವಾಯಿತು. ದೇವತೆ ಏಳು ದಿನಗಳ ಗಡುವು ಕೇಳಿದಳು. ಜನ ಗಡುವನ್ನು ಮಂಜೂರು ಮಾಡಿದರು!! ಅಂತೂ ಅಮ್ಮನೂ ಕೂಡ ಆಕೆಯ ಭಕ್ತರ ಅನುಮತಿಗೆ ಯಾಚಿಸುವ ಸ್ಥಿತಿ ಬಂದಿತು.

ಅದೇ ಹೊತ್ತಿಗೆ ಮೋಕಾಳ್ಳ ಚರುಪಿನಿಂದ ಶಕುನದ ಉತ್ತರವೂ ಬಂತು. ಎರಡೂ ಸರಿಹೋದುದರಿಂದ ಊರಿನ ಮಂದಿ ಗಡುಪಿನವರೆಗೆ ತಾಳ್ಮೆಯಿಂದಿರುವ ನಿರ್ಣಯಕ್ಕೆ ಬಂದರು.

ಅಷ್ಟರಲ್ಲಿ ಸಂದೇಹಾಸ್ಪದ ಘಟಿಂಗರ ಹೆಸರುಗಳು ಅಪರಾಧದ ಪಟ್ಟಿಯಲ್ಲಿ ದಾಖಲಾಗಿ, ಬಾಯಿಂದ ಬಾಯಿಗೆ ಸಂಚಾರವಾಗಿ ಅಪರಾಧಿಗಳ ಕಿವಿಗಳ ತಮಟೆಗಳನ್ನೂ ತಟ್ಟಿದವು. ಒಳಗೊಳಗೇ ಭೀತಿ ಹೆಡೆಯಾಡಿತು. ಕದ್ದವರ ಕಾಲುಗಳು ಕಂಪಿಸಿದವು. ತೊಡೆ ಸಂದುಗಳು ಬೆವರಿದವು. ಮನೆ ಒಳಗೆ ಇರಲಾಗದೆ ಹೊರಗೆ ಬರಲಾಗದೆ ಹೊಯ್ದಾಡಿದರು. ಕದ್ದವರಿಗೆ ಕದಿಯಲು ಹೊಳೆಯಿತೇ ಹೊರತು ಕದ್ದ ಪ್ರತಿಮೆಗಳನ್ನು ಹೇಗೆ ಎಲ್ಲಿಗೆ ಸಾಗಿಸಿ ಯಾರಲ್ಲಿ ಗಿರಾಕಿ ಕುದುರಿಸಬೇಕೆಂದು ತಿಳಿದಿರಲಿಲ್ಲ. ಒಂದು ಹತ್ತು ಮಂದಿ ಘಟಿಂಗರಲ್ಲಿ ಇತ್ತೀಚೆಗೆ ನಕ್ಸಲೈಟ್‌ರ ಜೊತೆ ಶಾಮೀಲಾಗಿ ಘಟಿಂಗತನವನ್ನು ಇನ್ನಷ್ಟು ಹೆಚ್ಚಿಸಿಕೊಂಡಿದ್ದರು. ಆರು ಮಂದಿ ಊರೊಳಗಿನ ಕಳವಿನ ಯೋಜನೆಗೆ ನಿಂತರೆ ಮಿಕ್ಕವರು ಸುತ್ತಮುತ್ತಲ ಊರುಗಳಲ್ಲಿ ಗಿರಾಕಿಗಳಿಗಾಗಿ ಅಲೆದಾಡಲು ಹೋದರು. ಅವರಿನ್ನೂ ಮರಳಿ ಬಂದಿರಲಿಲ್ಲ. ಆದರೆ ಅಷ್ಟರಲ್ಲಿಯೇ ಈ ಅವಾಂತರದ ಸುದ್ದಿಗಳು! ಕದ್ದ ಪ್ರತಿಮೆಗಳನ್ನು ಕಾಪಾಡುವುದೂ ಪ್ರಯಾಸದ ಕೆಲಸವಾಗಿತ್ತು. ಬೆಂಕಿಯನ್ನೇ ಬಂಧಿಸಿದಂತಿತ್ತು. ಬಂಧಿಸಿದ ಕೈಗಳನ್ನೇ ಅದು ಸುಡುವಂತೆ ಆ ಕಳವಿನ ಪ್ರತಿಮೆಗಳು ಕ್ರೂರವಾಗಿ ಅವರನ್ನು ನೋಡುತ್ತಾ ಆ ನೋಟವೇ, ನೋಟದಿಂದಾದ ಭೀತಿಯೇ ಅವರನ್ನು ಸುಡತೊಡಗಿತ್ತು.

ಬೆಳಗಿನಿಂದ ಸಂಜೆಯವರೆಗೆ ಊರ ತುಂಬಾ ಓಡಾಡಿಕೊಂಡು ಅವರಿವರ ಮನೆಗಳಲ್ಲಿ ಕೆಲಸ ಮಾಡಿಕೊಂಡು ಇಲ್ಲವೆ ಹೊಲಗದ್ದೆಗಳಲ್ಲಿ ಕೂಲಿ ಮಾಡಿಕೊಂಡು, ಇಲ್ಲವೆ ಸಾಚಾ ಆಗಿ ಕಾಣುತ್ತಾ ಇದ್ದ ಇವರಲ್ಲಿ ಒಂದಿಬ್ಬರು ಸಂಗ್ಯಾ ಪಾಪಾರೆಡ್ಡಿಗಳು ಬಿಟ್ಟರೆ ಬೇರೆ ಎಲ್ಲರೂ ಒಂದು ವಾರದಿಂದ ಕಾಣೆಯಾಗಿದ್ದರು. ಇವರಿಬ್ಬರಿಗೆ ತಮ್ಮುಳಿದ ಸ್ನೇಹಿತರು ಎಲ್ಲಿದ್ದಾರೆ, ಹ್ಯಾಗಿದ್ದಾರೆ ಎನ್ನುವುದು ಪೂರ್ತಿಯಾಗಿ ತಿಳಿದಿದ್ದರೂ ಕಿಮಕ್ ಎನ್ನಲಿಲ್ಲ. ಮಾಮೂಲಿನಂತೆ ತಮಾಷೆಯಾಗಿ ಓಡಾಡಿಕೊಂಡು ಊರಿನ ಸುದ್ದಿಯನ್ನು, ದಿನ ದಿನಕ್ಕೆ ಕಳವಿನ ವಿಷಯದಲ್ಲಿ ಜನರು ಆಡಿಕೊಳ್ಳುತ್ತಿದ್ದ ಮಾತುಗಳನ್ನು ಕೇಳಿಕೊಂಡು ಸ್ನೇಹಿತರಿಗೆ ತಲುಪಿಸುತ್ತಿದ್ದರು. ಹಾಗಾಗಿ ಊರಿನವರ ಕೊನೆಯ ನಿರ್ಣಯದ ವಿಷಯ ಶಕುನದ ಸುದ್ದಿ, ಕಳ್ಳರ ಹೆಸರುಗಳ ಗಾಳಿ ವದಂತಿ ಎಲ್ಲವೂ ಅವರ ಕಿವಿ ಮುಟ್ಟಿದವು.

ಗ್ರಾಮ ದೇವತೆಯ ಮಾತು ಶಕುನದ ನುಡಿ ಸಾಬೀತಾಗುವುದಕ್ಕೆ ಇನ್ನು ಕೇವಲ ಒಂದು ರಾತ್ರಿ ಮಾತ್ರ ಉಳಿದಿದೆ. ಅಷ್ಟರಲ್ಲಿ ವಿಗ್ರಹಗಳು ಅಥವಾ ಪ್ರತಿಮೆಗಳು ಯಥಾ ಸ್ಥಾನದಲ್ಲಿರಬೇಕು. ಇಲ್ಲವಾದಲ್ಲಿ ಸಂದೇಹಕ್ಕೊಳಗಾದವರನ್ನು ನಿರ್ದಾಕ್ಷಿಣ್ಯವಾಗಿ ಎಳೆದು ತಂದು ಊರ ನಡುವೆ, ಗುಡಿಯ ಮುಂದೆ ಇರುವ ಗರುಡ ಗಂಬಕ್ಕೆ ಕಟ್ಟಿ

ತಲೆಗೊಂದರಂತೆ ಊರ ಮಂದಿಯೆಲ್ಲರೂ ಒಬ್ಬೊಬ್ಬರಿಗೂ ಚರ್ಮ ಸುಲಿದು ಹೋಗುವಂತೆ ಚಡಿಯೇಟು ಕೊಡುವುದೆಂದು ತೀರ್ಮಾನವಾಯಿತು.

ಈಗಿನ ಈ ಒಂದು ರಾತ್ರಿ ಮಾತ್ರ ಅವರ ಪಾಲಿಗೆ ಉಳಿದಿತ್ತು. ಆದ್ದರಿಂದ ಏನೇ ಆಗಬೇಕಾದರೂ ಬೆಳಕು ಹರಿಯುವುದರೊಳಗಾಗಿ ಆಗಬೇಕು. ಆ ಸಣ್ಣ ಊರಿನಲ್ಲಿ ಇದು ದೊಡ್ಡ ಸಂಗತಿಯಾಗಿತ್ತು. ನಗರಗಳಲ್ಲಿ ಇದಕ್ಕಿಂತಲೂ ಅದ್ಭುತವಾದ ದರೋಡೆ, ಕೊಲೆಗಳು ನಡೆದರೂ ಮಾಮೂಲಿ ಸಂಗತಿಯಂತೆ. ದಿನಪತ್ರಿಕೆಗಳಲ್ಲಿ ಎಲ್ಲಿಯೋ ಒಂದು ಮೂಲೆಯ ಸುದ್ದಿಯಾಗಿ ಉಳಿಯುವುದಷ್ಟೇ. ಈ ಹಳ್ಳಿಯೂರಿನಲ್ಲಿ ಸಸಾಮೂಹಿಕವಾಗಿ ಉದ್ರಿಕ್ತ ಸಂಗತಿಯಂತೆ! ಉಳಿಯುವುದಿಲ್ಲ. ಆದರೆ ಇಲ್ಲಿನ ಪ್ರತಿಯೊಬ್ಬರಿಗೂ ಇವರ ಬಗ್ಗೆ ಏನೋ ಒಂದು ಬಗೆಯ ಕಾಳಜಿ, ಕಳವಳ, ಆಸಕ್ತಿ ಆಲೋಚನೆ. ಒಂದು ಘಟ್ಟ ತಲುಪುವವರೆಗೂ ಅನುಕ್ಷಣವೂ ಅದರದೇ ಮಾತು. ಅದರದೇ ಧ್ಯಾನ. ಹೇಳಿ ಹೇಳಿದಷ್ಟೂ ಹೇಳಬೇಕೆನ್ನುವ ಮತ್ತು ಕೇಳಬೇಕೆನ್ನುವ ಕುತೂಹಲ! ಮಕ್ಕಳಿಂದ ಮುದುಕರವರೆಗೂ ಅದೇ ಧ್ಯಾನ. ಬೆಳಗಾದರೆ, ಸಂಜೆಯಾದರೆ ಜೋಳು ಗುಡಿಯ ಮುಂದೆ ಕುತೂಹಲದಿಂದ ಕ್ಷಣವಾದರೂ ನಿಂತು ಕದಲದಿದ್ದರೆ ಮನಸ್ಸಿಗೆ ಸಮಾಧಾನವೇ ಇರುವುದಿಲ್ಲ ಮಂದಿಗೆ!!!

* * *

ಭಾನುವಾರ. ಅಜ್ಜಯ್ಯನ ಶ್ರಾದ್ಧ. ಬೆಳಗಿಂದ ದುಡಿದ ದೇಹಕ್ಕೆ ಹಾಸಿಗೆ ಸೋಂಕಿದ ಕ್ಷಣವೇ ಮಂಪರು ಕವಿದು ದೀರ್ಘ ನಿದ್ದೆಗೆ ಇಳಿದಿದ್ದೆ. ಸಾಲದ್ದಕ್ಕೆ ವಿಪರೀತ ತಲೆಸಿಡಿತದ ಕಾರಣದಿಂದ ಕಣ್ಣು ಹಚ್ಚಿದರೆ ಸಾಕೆಂದು ಕಾದಿದ್ದ ನನಗೆ, ಇನ್ನೂ 9 ಗಂಟೆ ಆಗಿರದಿದ್ದರೂ ಆಗಲೇ ಕನಸಿನ ಲೋಕಕ್ಕೆ ಇಳಿದಿದ್ದೆ. ಆಯಾಸ, ನಿದ್ದೆಯ ಕಾರಣದಿಂದ ಹೊರಜಗತ್ತಿನ ಪರಿವೆಯಿಲ್ಲದಂತೆ ಮೈಮರೆತು ಮಲಗಿದ್ದೆ. ಆದ್ದರಿಂದ ಊರಿನಲ್ಲಿ ಆ ರಾತ್ರಿ ಏನಾಯಿತೆಂದೂ ನನಗೆ ತಿಳಿಯಲಿಲ್ಲ.

ಬೆಳಕು ಹರಿದಿದ್ದರೂ ಏಳುವ ಮನಸ್ಸಾಗಲಿಲ್ಲ. ಮೈಯೆಲ್ಲಾ ಮುಳ್ಳು ನೋವು, ತಲೆ ಜೀರಿ ಧಿಮ್ಮೆನ್ನುತ್ತಿತ್ತು. ದರಿದ್ದು ಇಷ್ಟು ಬೇಗ ಬೆಳಗಾಯಿತೇ? ಎಂದು ಒಳಗೆ ಶಪಿಸುತ್ತಲೇ ಏಳಬೇಕೆಂದು ಕೊಳ್ಳುತ್ತಿರುವಾಗಲೇ ಹೊರಗಿನಿಂದ ಗುಜು ಗುಜು ಶಬ್ದ: ಎಷ್ಟೋ ಜನಗಳು ಓಡಾಡಿದ ಶಬ್ದ. ಏನಿರಬಹುದು ಎಂದು ಕೊಳ್ಳುತ್ತಿರುವಷ್ಟರಲ್ಲಿ ಹಾಲಿನವಳು ಬಂದಳು. ಗೀತಾ ಬಿತ್ತಿಲಲ್ಲಿ ಇದ್ದ ಕಾರಣ ನಾನೇ ಎದ್ದು ಹಾಲು ತೆಗೆದುಕೊಳ್ಳಬೇಕಾಯಿತು. ಎಲ್ಲಿಗೆ ಹೋಗಿರಬೇಕೆಂದು ಯೋಚಿಸುತ್ತಿರುವಷ್ಟರಲ್ಲಿ ಗೋವಿಂದು ಒಳಗೆ ಬಂದ. ಅಷ್ಟರಲ್ಲಿ ಕಿಟಕಿಯಿಂದ ಮನೆಯ ಮುಂದ ಒಂದು ದೊಡ್ಡ ಗುಂಪು ನಿಂತಿದ್ದುದು ಕಾಣಿಸಿತು. ಆಶ್ಚರ್ಯವಾಯಿತು. ಗೋವಿಂದು ಹೊರಗಿನಿಂದ ಬಂದದ್ದರಿಂದ ಅವನಿಗೆ ಕೇಳಿದೆ. ಏನೋ ಅದು ಗಲಾಟೆ? ಎಂದೆ. ಗೋವಿಂದ ದಮ್ಮುವರಳಿ, ಬಿಗಡುಗಳು ಒಕ್ಕ ಸಂಗತಿ ಹೇಳಿದ.

ನನ್ನ ಕಿವಿಯನ್ನು ನಾನೇ ನಂಬದಾದೆ. ಇದೆಲ್ಲಾ ಏನು ಕಟ್ಟು ಕತೇನಾ? ನಿಜವಾ? ಪೋಲೀಸಿಲ್ಲ, ಪತ್ತೆದಾರಿಕೆ ಇಲ್ಲ. ಅಂಥಾದ್ದರಲ್ಲಿ ವಿಗ್ರಹಗಳು! ಅದೂ ವಿಗ್ರಹಗಳಿಗೆ ಅಪಾರ ಬೇಡಿಕೆ, ಬೆಲೆ ಇರುವಾಗ ಇಷ್ಟು ಸುಲಭವಾಗಿ ಸಿಗುವುದೆಂದರೆ! ಯೋಚಿಸಿದಷ್ಟೂ ಸಮಾಧಾನ ದೊರೆಯಲಿಲ್ಲ. ಗೋವಿಂದುವನ್ನೇ ಕೇಳಿದೆ. "ಅದು ಹೇಗೋ ಸಿಗುತ್ತೇ ಇದ್ದಕ್ಕಿದ್ದ ಹಾಗೆ ಗುಡಿಯ ಬಾಯಿ ಕಕ್ಕಿ ಬಿಡ್ತೇನೋ?" ಎಂದೆ.

ಗೋವಿಂದು ಅದಕ್ಕೆ ಸಿಟ್ಟು ಮಾಡಿಕೊಳ್ಳದೆ ನಗುತ್ತಲೇ, ಬಹಳ ರಂಜಕವಾಗಿ ಮತ್ತು ಉತ್ಸಾಹದಿಂದ ರಾತ್ರಿಯೇ ವಿಗ್ರಹಗಳು ದೊರೆತ ಕತೆಯನ್ನು ಹೇಳಿದ.

ಭಾನುವಾರ ರಾತ್ರಿ ೧೧ ಗಂಟೆಯಿರಬಹುದು. ರಮಣ ಕೆರೆಯ ಏರಿಗೆ ಹೊಂದಿಕೊಂಡಂತೆ ಇರುವ ಗದ್ದೆಯ ನಡುವೆ ಕಟ್ಟಿರುವ ಪಂಪ್ ಹೌಸಿನಲ್ಲೇ ಆ ದಿನವೂ ಮಲಗುವುದಾಗಿ ಹೇಳಿಹೋಗಿದ್ದ. ನೀರಿನ ಬರ ಇದ್ದುದರಿಂದ ಯಾರಾದರೂ ಬೀಗ ಒಡೆದು ಪಂಪ್‌ಹೌಸ್ ಒಳನುಗ್ಗಿ ಮೋಟಾರ್ ಹಾಕಿ ನೀರನ್ನು ತಮ್ಮ ಗದ್ದೆಗಳಿಗೆ ಹಾಯಿಸಿಕೊಂಡಾರೆಂಬ ಭೀತಿಯಿಂದ ಈಗೊಂದೆರಡು ಮೂರು ದಿನಗಳಿಂದ ಮಲಗಲು ಹೋಗುತ್ತಿದ್ದ. ಅಂತೆಯೇ ಆ ದಿನವೂ ಹೋಗಿದ್ದ. ಇನ್ನೇನು ಮಲಗಬೇಕೆಂದು ಕೊಳ್ಳುತ್ತಿರುವಷ್ಟರಲ್ಲಿ ಗದ್ದೆಯ ಬದುವಿನ ಮೇಲೆ ಯಾರೋ ಓಡಾಡಿದ ಹಾಗೆ ಕಂಡದ್ದರಿಂದ ಟಾರ್ಚ್ ಬೆಳಕನ್ನು ಬಿಡುತ್ತಾ, "ಯಾರದು?" ಎಂದು ಜೋರಾಗಿ ಕೂಗಿದ್ದಕ್ಕೆ ಉತ್ತರ ಕೊಡುವುದಕ್ಕೆ ಬದಲಾಗಿ ಆಕೃತಿಗಳು ಓಡತೊಡಗಿದವು. ತಾನೊಬ್ಬನೇ ಇದ್ದುದರಿಂದ ಹಿಂಬಾಲಿಸಿ ಹೋಗಲು ಹೆದರಿ ಸುಮ್ಮನಿದ್ದು ಅವು ಮರೆಯಾದ ಹತ್ತು ನಿಮಿಷಕ್ಕೆ ಟಾರ್ಚ್ ಬೆಳಕಿನಲ್ಲಿ ಅವು ಕಂಡ ದಿಕ್ಕಿನಲ್ಲೇ ರಮಣ ನಡೆದ. ಇಪ್ಪತ್ತು ಅಡಿ ನಡೆಯುವಷ್ಟರಲ್ಲಿ ಕಾಲಿಗೆ ಏನೋ ಗಟ್ಟಿಯಾಗಿ ತಗುಲಿದಂತಾಗಿ ಹೌಹಾರಿದ. ಆದರೂ ಏನಿರಬಹುದೆಂಬ ಕುತೂಹಲಕ್ಕಾಗಿ ನೆಲದ ಮೇಲೆ ಟಾರ್ಚ್ ಬೆಳಕು ಚೆಲ್ಲಿ ಕಣ್ಣಾಡಿಸಿದ. ನೋಡುತ್ತಾನೆ, ಫಳಫಳನೆ ಮಿನುಗುತ್ತಿರುವ ವಿಗ್ರಹಗಳು ರಾಮರ ಗುಡಿಯಿಂದ ಕಳುವಾಗಿದ್ದ ದೇವರ ಪ್ರತಿಮೆಗಳು!! ವೈಭವದಿಂದ ಪೂಜೆಗೊಳ್ಳುತ್ತಿದ್ದ ಇವು ಕೆಸರಿನಲ್ಲಿ ಅನಾಥ ಶವಗಳಂತೆ ಬಿದ್ದಿವೆ. ಒಂದು ಕ್ಷಣ ಸ್ತಬ್ಧನಾಗಿದ್ದವನು, ಮರುಕ್ಷಣದಲ್ಲಿಯೇ ಓಡತೊಡಗಿದ.

ಸಾರಾಯಿ ಅಂಗಡಿ ಸಣ್ಣು ಆಗ ತಾನೇ ಅಂಗಡಿ ಬಾಗಿಲು ಮುಚ್ಚಿಕೊಂಡು ಬಂದವನು ಓತ್ತಿಲಿಗೆ ಹೋಗಿ ಕಾಲು ತೊಳೆದುಕೊಳ್ಳುತ್ತಿದ್ದವನು ಮಂಜು ಬೆಳಕಿನಲ್ಲಿ ಯಾರೋ ಓಡಿ ಬರುತ್ತಿದ್ದುದನ್ನೂ ಅವನ ಹಿಂದೆ ಹಿಂಡು ನಾಯಿಗಳು, ಬೊಗಳುತ್ತಾ ಬರುತ್ತಿದ್ದುದನ್ನೂ ನೋಡಿ, "ಯಾರಲ್ಲಿ?" ಎಂದು ಅರಚಿದ. ಓಡುತ್ತಿದ್ದವನು, "ನಾನು ನಾನು ರಮಣ" ಎಂದು ಏದುಸಿರಿನಲ್ಲೇ ನುಡಿದ. ಹೆಸರು ಕೇಳಿದ ಕೂಡಲೇ ಸಣ್ಣು ಹೊರಗೆ ಬಂದ. ಅವನ ಹಿಂದೆ ಅವನ ಮನೆಯವರು ಒಬ್ಬೊಬ್ಬರಾಗಿ ಬಂದರು. ಈ ಗದ್ದಲದ ಸುಳಿವು ಮನೆಯಿಂದ ಮನೆಗೆ ಹಬ್ಬಿ ಎಲ್ಲರೂ ಆ ಚಳಿಯಲ್ಲಿಯೂ ಹಾಸಿಗೆಗಳನ್ನು ಬಿಟ್ಟು, ಕುತೂಹಲದ ಕಾವಿಗೆ ಬಯಸಿ ಹೊರಬಂದರು.

ವಿಷಯ ರಮಣನಿಂದ ಎಷ್ಟು ಸಲ ಕೇಳಿದರೂ ತೃಪ್ತಿ ಇಲ್ಲ. ಆ ಜನರ ಹಿಂಡು ರಮಣನನ್ನು ಮುಂದಿಟ್ಟುಕೊಂಡು ಪಾಪ! ದೇವರುಗಳು ಅನಾಥವಾಗಿ ಬಿದ್ದುಕೊಂಡಿದ್ದ ಸ್ಥಳದತ್ತ ಓಡಿದರು. ನಿಬ್ಬೆರಗಾಗಿ ನಿಂತರು.

ಅಷ್ಟರಲ್ಲಿ ರಾಮಪ್ಪ ಅಲ್ಲಿಗೆ ಧಾವಿಸಿದ. ತನ್ನ ಕಣ್ಣನ್ನು ನಂಬದಾದ. ಓ ನನ್ನ ದೇವರೇ ಮರಳಿ ಬಂದೆಯಾ ಎಂದು ಸಂಭ್ರಮಿಸಿದ. ಓಡಿದ. ಬಗ್ಗಿ ಅವುಗಳನ್ನು ತೆಗೆದು ಎದೆಗವಚಿಕೊಂಡ. ಕೂಡಲೇ ಚಿಂತೆ ಅವನನ್ನು ಆವರಿಸಿತು. ಹೊಲೆಯಾದ ಇವುಗಳನ್ನು ಇನ್ನು ಸಂಸ್ಕರಿಸಿದ ಹೊರತು ಪೂಜೆ ಮಾಡುವುದು ಹೇಗೆ? ಶುದ್ಧೀಕರಣ ಆಗಲೇ ಬೇಕು. ಹೊಲೆಗೆ ಹೊರಗಾದ ದೇವರೂ ಹೊಲೆಯನಾಗಿದ್ದ!

ಇಡೀ ರಾತ್ರಿ ಊರಿನ ಜನ ಜಾಗರಣೆಯಲ್ಲೇ ಕಳೆದರು. ಬೆಳಗಾಗುತ್ತಿದ್ದ ಹಾಗೆ ಗುಡಿಯ ಮುದೆ ಜನಜಂಗುಳಿ ಸೇರಿತ್ತು. ನನಗೆ ಕೇಳಿಸಿದ್ದು ಅದೇ! ಗೋವಿಂದು ಕಾಫಿಗೂ ಕಾಯಲಿಲ್ಲ. ಊರಿನ ರಾಜಕೀಯದ ಉಸಾಬರಿಯನ್ನೇ ಹೊತ್ತಿದ್ದ ಅವನಿಗೆ ಈ ಸ್ವಾರಸ್ಯಕರವಾದ ಸಂಗತಿಗಳು ನಡೆಯುತ್ತಿರುವಾಗ ಹೋಗದೆ ಇರಲು ಆಗುತ್ತದೆಯೇ? ನನಗೆ ಇನ್ನೂ ಏನೇನೋ ಪ್ರಶ್ನೆ ಕೇಳಬೇಕೆನಿಸಿದರೂ ಗೋವಿಂದು ನಿಲ್ಲಲಿಲ್ಲ.

ನಾನು ಆ ದಿನ ಸಂಜೆಯೇ ಬೆಂಗಳೂರಿಗೆ ಮರಳಿದ್ದರಿಂದ ಮುಂದಿನ ಕತೆ ತಿಳಿಯಲಿಲ್ಲ. ಆದರೆ ಕೆಲವು ದಿನವಾದ ಮೇಲೆ ತಿಳಿಯಿತು – ಅನುಮಾನಾಸ್ಪದ ಅಪರಾಧಿಗಳೇ ನಿಜವಾದ ಅಪರಾಧಿಗಳೆಂದು. ವಿಷಯ ಪೋಲೀಸರವರೆಗೆ ಹೋಗಿದ್ದುದರಿಂದ, ಅವರೇ ಅದನ್ನು ಖಲಾಸ್ ಮಾಡಬೇಕಾಗಿತ್ತಂತೆ. ಅವರೆಲ್ಲರನ್ನೂ ಬಂಧಿಸಿ ಪೋಲೀಸ್ ಠಾಣೆಯಲ್ಲಿ ಕೂಡಿ ಹಾಕಿದ್ದು, ಜಾಮೀನಿನ ಮೇಲೆ ಬಿಡುಗಡೆಯಾಗಿ ಊರಿನಲ್ಲಿಯೇ ಓಡಾಡಿಕೊಂಡಿದ್ದಾರಂತೆ ವಿಗ್ರಹಚೋರರು!!

* * *

ವಂಚಿತಾ

"ಚಂಚಲಾ – ಚಂಚಲಾ"– ಉಲ್ಲಾಸ ತುಂಬಿದ ಧ್ವನಿಯಲ್ಲಿ ಕೂಗುತ್ತಾ ಮೋಹನ ಓಡಿ ಬಂದ. ಬೆಳಿಗ್ಗೆ ಕಣ್ಣು ಬಿಡುತ್ತಿದ್ದ ಹಾಗೆ ತನ್ನ ಹೆಸರಿಡಿದು ಕೂಗುತ್ತಾ ಬಂದವರು ಯಾರೆಂದು, ಚಂಚಲಾ ಮೊದಲು ಯೋಚಿಸಿದರೂ, ಮರುಗಳಿಗೆಯೇ ನಿನ್ನೆ ಮೋಹನ, ತಾನು ಬೆಳಿಗ್ಗೆ ಬರುವುದಾಗಿ ಹೇಳಿದುದರ ನೆನಪಾಯಿತು. ಕಾಫಿ ಕಲೆಸುತ್ತಿದ್ದವಳು, ಸೆರಗಿಗೆ ಕೈಯೊರಸಿಕೊಂಡು ಬಾಗಿಲ ಬಳಿಗೆ ಬರುವುದಕ್ಕೂ ಮೋಹನ ಪ್ರವೇಶಿಸುವುದಕ್ಕೂ ಸರಿಹೋಯಿತು.

ಚಂಚಲಾ ಗಮನಿಸಿದಳು. ಮೋಹನನ ಮುಖದಲ್ಲಿ ಹತ್ತಿಕ್ಕಲಾರದ ಗೆಲುವು ತುಂಬಿ ತುಳುಕುತ್ತಿತ್ತು. ಅವನ ರೀತಿಯಿಂದಲೇ ಚಂಚಲಾಗೆ, ಮೋಹನನಿಗೆ ನಿರೀಕ್ಷಿಸಿದ ಕೆಲಸ ಯಾವುದೋ ಆಗಿರಬೇಕೆನಿಸಿತು. ಮೋಹನ ಸುತ್ತಲೂ ನೋಡಿದ. ಯಾರೂ ಇಲ್ಲದ್ದನ್ನು ಗಮನಿಸಿ ಅವಳನ್ನು ಕೈಯಿಂದ ಬಳಸಿ ಮಿಂಚಿನಷ್ಟು ವೇಗದಲ್ಲಿ 'ಲೊಚ್' ಎಂದು ಮುದ್ದಿಸಿದ. "ಛಿ! ಛಿ! ಬೆಳಿಗ್ಗೆ ಏಳುತ್ತಲೇ ಇದೇನು ಮೋಹನ, ಈ ಹೊಲಸು ಕೆಲಸ? ಅಪ್ಪ ಸ್ನಾನ ಮಾಡುತ್ತಿದ್ದಾರೆ, ಅಮ್ಮ ಅಲ್ನೋಡು ತುಳಸೀ ಪೂಜೆ ಮಾಡುತ್ತಿದ್ದಾರೆ" ಎಂದು ಕಿಟಕಿಯತ್ತ ಬೆರಳು ಮಾಡಿದಳು. "ಇವರ್‍ಯಾರಾದರೂ ತಕ್ಷಣ ಬಂದರೆ ಎಷ್ಟು ಅಸಹ್ಯವೆನಿಸುತ್ತೆ? ಸ್ವಲ್ಪವೂ ಗೊತ್ತಾಗೊಲ್ಲ"– ಮುನಿದು ಹೇಳಿದಳು. ಮೋಹನನಿಗೆ ಅದೆಲ್ಲಾ ಮಾಮೂಲೇ. ಅದಕ್ಕೇ ಅವನು ಕರವಸ್ತ್ರ ತೆಗೆದು ಅವಳ ತುಟಿ ಒರೆಸಿ, "ಈಗ ಕ್ಲೀನಾಯ್ತಲ್ಲ" ಎಂದ ನಗುತ್ತ.

ಚಂಚಲಾಗೆ ಏನು ಹೇಳಲೂ ಆಗಲಿಲ್ಲ. "ಕೂತ್ಕೋ ಮೋಹನ ಕಾಫಿ ತರ್‍ತೀನಿ" ಎಂದವಳೇ ಅಡಿಗೆ ಮನೆ ಕಡೆ ಹೋದಳು. ಮೋಹನ ಕುಳಿತುಕೊಂಡು ಮುಂದಿದ್ದ ಟೇಬಲ್ಲಿನ ಮೇಲಿನ ಪತ್ರಿಕೆಗಳ ಪುಟಗಳನ್ನು ತಿರುವಿ ಹಾಕುತ್ತಿದ್ದ. ಅದರೊಳಗಿನಿಂದ ಭಾವಚಿತ್ರವೊಂದು ಕೆಳಗೆ ಬಿತ್ತು. ಬಗ್ಗಿ ಎತ್ತಿಕೊಂಡ ಮೋಹನ. ಆಕರ್ಷಕವಾದ ಮುಖ. ಕಂಗಳಲ್ಲಿ ಹೊಳಪು ತುಂಬಿದೆ. ತೀಕ್ಷ್ಣವಾದ ಮೂಗು. ಸ್ವಲ್ಪ ಯೋಚಿಸಿದ. ಅರ್ಥ ಕೂಡಲೇ ಹೊಳೆಯಲಿಲ್ಲ. ಅಷ್ಟರಲ್ಲಿ ಚಂಚಲಾ ಕಾಫಿ ತಂದಿಟ್ಟಳು. ಮೋಹನ

ತಲೆ ಎತ್ತಿ ಅವಳತ್ತ ಅರ್ಥಗರ್ಭಿತವಾಗಿ ನೋಡಿದ. ಚಂಚಲಾ ಮುಖ ಕೊಡದೆ ಒಳಗೆ ಸರಿದಳು. ಕಾಫಿ ಟೇಬಲ್ಲಿನ ಮೇಲೇ ಇತ್ತು. ಮೋಹನ ಎದ್ದ "ಚಂಚಲಾ ಬರುತ್ತೇನೆ"– ಎಂದ.

ಯಾಕೆ ಮೋಹನ. ಕಾಫಿ ಕುಡಿಯುವುದಕ್ಕೂ ಮನಸ್ಸಿಲ್ಲವಾ? ಬರುವಾಗ ಏನೋ ಹೇಳಬೇಕೂಂತ ಬಂದೆ. ಆದರೆ ಹೇಳದೇನೇ ಹೊರಟು ಹೋಗ್ತಿದ್ದಿ?"

"ಹುಂ ಹೇಳ್ಬೇಕೂಂತ್ಲೆ ಇಷ್ಟು ಬೆಳಿಗ್ಗೇನೆ ಬಂದ್ಬಿಟ್ಟೆ. ನನಗಿರುವ ಆತ್ಮೀಯರ ಸಾಲಿನಲ್ಲಿ ಮೊದಲಿನವಳಾದ ನಿನಗೆ ಆ ಸುದ್ದಿ ಮೊದಲೇ ತಿಳಿಸಬೇಕೂಂತ ಬಂದೆ. ಆದರೆ ಯಾಕೋ ಮನಸ್ಸಾಗಲಿಲ್ಲ. ಅದಕ್ಕೇ ಹೋಗ್ತಿದ್ದೀನಿ."

"ಇದ್ದಕ್ಕಿದ್ದಂತೆ ಹೀಗೆಲ್ಲಾ ಮಾತಾಡೋಕೆ ನಿನಗೆ ಈಗ ಏನಾಯ್ತೂಂತ?"

"ಆಗ ಬೇಕಾದ್ದೇನೂ ಉಳಿದಿಲ್ಲ. ಇನ್ನು ಬರ್ತೀನಿ" ಎಂದವನೇ ಎದ್ದ.

ರಾಮಸ್ವಾಮಿಗಳು ಸ್ನಾನ ಮುಗಿಸಿಕೊಂಡು ಮೈಯೊರೆಸಿಕೊಳ್ಳುತ್ತಾ ಬಂದರು. ಬಿಸಿ ಬಿಸಿ ನೀರಲ್ಲಿ ಮಿಂದು ಬಂದದ್ದರಿಂದ ಅವರ ಬಿಳಿಯ ಮೈ ಕೆಂಪಗೆ ಕಾದಂತಿತ್ತು. ಬಂದವರೇ ಹಾಲಿನಲ್ಲಿ ಕುಳಿತಿದ್ದ ಮೋಹನನ್ನು ಮಾತಾಡಿಸಿದರು. ಅಷ್ಟು ಬೇಗ ಬಂದದ್ದು ಅವರಿಗೂ ಆಶ್ಚರ್ಯವೇ ಆಗಿತ್ತು. ಆಲೋಚನೆಯಲ್ಲಿ ಮುಳುಗಿದ್ದ ಮೋಹನ, ಅವರು ಮಾತಾಡಿಸಿದ್ದಕ್ಕೆ ಎಚ್ಚೆತ್ತು, 'ನಮಸ್ಕಾರ' ಮಾಡಿದ. ಅವನ ಮುಖ ಬಾಡಿದ ಹಾಗಿತ್ತು.

ಹತ್ತಿರವೇ ಚಂಚಲಾ ನಿಂತಿದ್ದಳು. ಇನ್ನೂ ಕಾಫಿ ಹಾಗೇ ಇತ್ತು. ರಾಮಸ್ವಾಮಿಗಳು ಹೇಳಿದರು– "ಕಾಫಿ ತಗೊಳ್ಳೋಕೆ ಹೇಳಬಾರದೇನಮ್ಮ, ಹಾಗೇ ಸುಮ್ಮನೆ ಇಟ್ಟುಬಿಟ್ಟರೆ ಹೇಗೆ? ತಗೊಳ್ಳಿ ಮೋಹನ್"

ಚಂಚಲಾ ಮಧ್ಯೆ ಪ್ರವೇಶಿಸಿದಳು. "ತುಂಬಾ ತಣ್ಣಗಾಗಿ ಹೋಗಿದೆ. ಬಿಸಿ ಮಾಡಿ ತರ್ತೀನಪ್ಪ" ಎಂದು ಕಾಫಿ ಬಟ್ಟಲನ್ನು ತೆಗೆದುಕೊಂಡು ಒಳಗೆ ಹೋದಳು.

"ಏನಾಯ್ತು ಮೋಹನ್ ನಿಮ್ಮ ಕೆಲಸದ ವಿಚಾರ? ಯಾವುದಾದ್ರೂ ಸಿಕ್ತಾ?"

"ಹುಂ! ನಿನ್ನೆ ತಾನೆ. 'ಜಾನ್ಸನ್ ಇಂಡಸ್ಟ್ರೀಸ್ ಕಂಪನಿ ಲಿಮಿಟೆಡ್'ನಿಂದ ಕೆಲಸದ ಆರ್ಡರ್ ಬಂತು. ಅದನ್ನು ಹೇಳಬೇಕೆಂದೇ ಬಂದೆ"

"ತುಂಬಾ ಸಂತೋಷಾಪ್ಪ. ಏನೋ ನಿಮ್ಮ ತಾಯಿ ಮನಸ್ಸಿಗೆ ಇದರಿಂದ ಸ್ವಲ್ಪನಾದ್ರೂ ಸಂತೋಷವಾಗುತ್ತೆ. ಮಗ ದುಡಿಯೋ ಹಾಗಾದ್ರೆ ಸಾಕೂಂತ ಪೇಚಾಡ್ತಿದ್ರು."

"ಹೌದು ಸಾರ್, ತುಂಬಾನೇ ಸಂತೋಷ ಆಯಿತು. ಈಗ ನಮಗೇನೂ ಕೊರತೆ ಇರೋಲ್ಲ."

"ಚೆನ್ನಾಗಿ ನೋಡ್ಕೋ ನಿಮ್ಮ ತಾಯೀನ. ಯಾವುದಾದ್ರೂ ಒಳ್ಳೇ ಸಂಬಂಧ ನೋಡಿ ಮದುವೆ ಮಾಡ್ಕೊಂಡ್ಬಿಡು. ಮನೆಗೆ ಸೊಸೆ ಬಂದು, ಮೊಮ್ಮಕ್ಕಳಾದರೆ. ಆ ಮುದಿ ಹೃದಯಕ್ಕೆ ನೆಮ್ಮದಿಯಾಗುತ್ತೆ"- ಎಂದರು ಬುದ್ಧಿವಾದದ ಧ್ವನಿಯಲ್ಲಿ.

ಮೋಹನನಿಗೆ ಸಂತೋಷವಾಗುವುದಕ್ಕಿಂತ ಸಿಟ್ಟು ಬಂತು. ಇವರ ಮಾತಿನಲ್ಲಿ ನನ್ನ ಬೆಲೆಯ ನಿರ್ಧಾರವಿದೆ. ನೇರವಾಗಿ ಹೇಳಲಾಗದ್ದನ್ನು ಹೀಗೆ ಬಳಸು ಮಾತುಗಳಿಂದ ಹೇಳುತ್ತಿದ್ದಾರೆ. ಬೆಳಿಗ್ಗೆ ಎದ್ದು ಇವರ ಉಪದೇಶ ಕೇಳುವ ಕರ್ಮ ಬಂತೆ ಎಂದುಕೊಂಡ. ಮನುಷ್ಯನನ್ನು ಮನುಷ್ಯ ಕೇವಲ ಹಣ, ಪದವಿ, ಇವುಗಳ ಸ್ಕೇಲಿನಿಂದಲೇ ಅಳೆಯುತ್ತಾನೆ. ಮನುಷ್ಯನ ಗುಣ, ಸ್ವಭಾವಕ್ಕೆ ಯಾವ ಬೆಲೆಯೂ ಇರಲಾರದೆ ಹಾಗಾದರೆ? ಎಂದು ಯೋಚಿಸಿದ. ಒಳಗೆ ಸಿಟ್ಟು ಕುದಿಯುತ್ತಿದ್ದರೂ ಹಿರಿಯರಾದ ಅವರ ಮುಂದೆ ಅದನ್ನು ವ್ಯಕ್ತಪಡಿಸಲಾರದೆ, ಹಲ್ಲು ಕಚ್ಚಿ ತಡೆದುಕೊಂಡ.

ಚಂಚಲಾ ಮತ್ತೆ ಕಾಫಿ ತಂದಳು. ರಾಮಸ್ವಾಮಿಗಳು ಬಲವಂತಪಡಿಸಿದರು. ವಿಧಿಯಿಲ್ಲದೆ ವಿಷ ಕುಡಿದಂತೆ ಅದನ್ನು ಅಸಹ್ಯಪಟ್ಟುಕೊಂಡೇ ಕುಡಿದು ಮುಗಿಸಿದ. ಯಾವ ಕಾಫಿಗಾಗಿ ಹಾತೊರೆಯುತ್ತಿದ್ದನೋ, ಚಂಚಲಾಳನ್ನು ಪೀಡಿಸಿ, ಅವಳ ಕೈಯಿಂದಲೇ ಕಾಫಿ ಮಾಡಿಸಿ, ಲೊಚಗುಟ್ಟುತ್ತಾ, ಅಮೃತದಂತಿದೆಯೆಂದು ಹೇಳಿ ಹೇಳಿ ಹೀರುತ್ತಿದ್ದನೋ, ಅದೇ ಇಂದು ವಿಷವಾಗಿತ್ತು. ರಾಮಸ್ವಾಮಿಗಳು ಮಾತು ಮುಂದುವರಿಸಿದರು- "ಅಂದ ಹಾಗೆ ಮೋಹನ, ನಿನಗೆ ಹೇಳೋದು ಮರೆತಿದ್ದೆ. ನಮ್ಮ ಚಂಚಲಾಗೆ ಒಂದು ವರ ಗೊತ್ತಾಗಿದೆ. 'ಫಾರಿನ್ ರಿಟರ್ನ್', ದೊಡ್ಡ ಇಂಜಿನಿಯರ್. ತಿಂಗಳಿಗೆ ೨೦,೦೦೦ ರೂಪಾಯಿ ಸಂಬಳ. ಕಾರು, ಬಂಗಲೆ ಎಲ್ಲಾ ಕೊಟ್ಟಿದ್ದಾರೆ. ಮುಂದಿನ ವಾರ ನಿಶ್ಚಯ ತಾಂಬೂಲದ ಕಾರ್ಯಕ್ರಮವಿದೆ. ನೀನೂ ಬಂದ್ಬಿಡು."

ಮೋಹನನ ಕೆನ್ನೆಗೆ ಥಳಿಸಿದಂತೆನಿಸಿತು. ರಾಮಸ್ವಾಮಿಗಳ ಒಂದೊಂದು ಮಾತೂ ವಿಶೇಷವಾದ ಅರ್ಥದಿಂದ ಕೂಡಿತ್ತು. ದೊಡ್ಡ ಇಂಜಿನಿಯರ್. ೨೦.೦೦೦ ರೂಪಾಯಿ ಸಂಬಳ- ಮೊದಲಾದ ಮಾತುಗಳಿಗೆ ಹೆಚ್ಚು ಒತ್ತು ಇರುವಂತೆನಿಸಿತು. ಇಷ್ಟೆಲ್ಲಾ ನಿರೀಕ್ಷೆಯಲ್ಲಿದ್ದ ಇವರಿಗೆ ತಾನು ವರನಾಗಬೇಕೆಂದಿದ್ದೇನೆಂದು ಹೇಳಿದ್ದರೆ ತಾನೆಂಥ ಮೂರ್ಖನಾಗುತ್ತಿದ್ದೆನೋ- ಎಂದು ಹೆದರಿದ. 'ನಿಜ, ತನ್ನಲ್ಲಿ ಏನಿದೆಯೆಂದು ತಾನೆ ಹೆಣ್ಣನ್ನು ಕೊಡುತ್ತಾರೆ. ಒಂದು ಆಸ್ತಿಯೇ, ಪದವಿಯೇ- ಏನಿದೆ? ಚಂಚಲಳಂತಹ ಹುಡುಗಿಗೆ ಖಂಡಿತ ಈಗ ಗೊತ್ತಾಗಿರುವಂತಹ ಹುಡುಗನಾದರೆಯೇ ಸರಿ. ಎಟುಕದ್ದಕ್ಕಾಗಿ ಪ್ರಯತ್ನಿಸಿ ಸೋತು ಕುಸಿಯುವುದಕ್ಕಿಂತ ಇರುವಷ್ಟನ್ನು ಇಟ್ಟುಕೊಂಡು ನೆಮ್ಮದಿಯಿಂದಿದ್ದರೇನೇ ವಾಸಿ'- ಎಂದು ತನಗೆ ತಾನೇ ಸಮಾಧಾನ ಹೇಳಿಕೊಂಡ.

ತಂದೆ ತನ್ನ ಮದುವೆಯ ಪ್ರಸ್ತಾಪ ತೆಗೆದದ್ದೇ ಚಂಚಲಾ ಅಲ್ಲಿ ನಿಲ್ಲದೆ ಹೊರಟು ಹೋದಳು. ಮೋಹನನೂ ಇನ್ನು ಅಲ್ಲಿ ಇರುವುದು ಮನಸ್ಸಿನ ಕ್ಷೋಭೆಗೆ ಮತ್ತಷ್ಟು

ವಾಗಿ ಮಾಡುತ್ತದೆಂದು, ಔಪಚಾರಿಕವಾಗಿ, "ಹಾಗಾದರೆ ಚಂಚಲಾಳದು ತುಂಬಾ ಅದೃಷ್ಟ. ಅವಳಂಥವಳಿಗೆ ಅಂಥ ವರನೇ ದೊರೆಯಬೇಕಾದ್ದು ಧರ್ಮ. ತುಂಬಾ ಸಂತೋಷವಾಯಿತು. ನನ್ನ ಶುಭಾಶಯಗಳನ್ನು ತಿಳಿಸಿಬಿಡಿ"– ಎಂದು ಹೇಳಿ ಎದ್ದ.

ರಾಮಸ್ವಾಮಿಗಳು– "ನೀವೇ ಹೇಳಬಹುದಲ್ಲ? ಚಂಚಲಾ ನಿಮಗೇನು ಹೊಸಬಳಲ್ಲವಲ್ಲ. ನಿಮ್ಮ ಪ್ರತಿಭೆ, ವಿಚಾರ ದೃಷ್ಟಿಗಳನ್ನು ತುಂಬಾ ಮೆಚ್ಚಿಕೊಂಡಿದ್ದಾಳೆ. ನೀವೂಂದ್ರೆ ಅವಳಿಗೆ ತುಂಬಾ ಗೌರವ, ಪ್ರೀತಿ. ಕರೀತೀನಿ, ಹೇಳಿ ಹೋಗಿ" ಎಂದರು.

ಮೋಹನ– "ಇಲ್ಲ ಇಲ್ಲ, ಸುಮ್ಮನೆ ತೊಂದರೆ ಕೊಡಬೇಡಿ ಅವರಿಗೆ. ನನಗೂ ತುಂಬಾ ಅರ್ಜೆಂಟ್ ಕೆಲಸವಿದೆ. ಬೇಗ ಹೋಗಲೇ ಬೇಕು. ಕ್ಷಮಿಸಿ"– ಎಂದವನೇ ಆತುರಾತುರವಾಗಿ ನಡೆದೇ ಬಿಟ್ಟ.

ತುಳಸೀ ಕಟ್ಟೆಯ ಪೂಜೆ ಮುಗಿಸಿಕೊಂಡು ಬರುತ್ತಿದ್ದ ಸಾವಿತ್ರಮ್ಮ ಮೋಹನನಿಗೆ ಎದುರಾದರೂ, ಮೋಹನನ ಆತುರದ ನಡಿಗೆಯನ್ನು ಗಮನಿಸಿ, ಮಾತನಾಡ ಬಯಸಿದರೂ, ಸುಮ್ಮನಿದ್ದರು. ಒಳಗೆ ಬರುತ್ತಾ, "ಮೋಹನ ಅಷ್ಟ್ಯಾಕೆ ಆತುರವಾಗಿ ಹೋದ" ನೆಂದು ಕೇಳಿದ್ದಕ್ಕೆ ರಾಮಸ್ವಾಮಿಗಳು. "ನನಗೇನು ಗೊತ್ತು? ಏನೋ ಅರ್ಜೆಂಟ್ ಕೆಲಸವಂತೆ. ಹೋಗಬೇಕೆಂದರೆ ತಡೆಯುವುದಕ್ಕೆ ಆಗುತ್ತದೆಯೇ?"– ಎಂದರು ಸಿಟ್ಟು ಮಾಡಿಕೊಳ್ಳುತ್ತಾ. ಇನ್ನು ಹೆಚ್ಚು ಮಾತಾಡಿದರೆ ಸುಮ್ಮನೆ ಹಾರಾಡಿ ರಾದ್ಧಾಂತ ಮಾಡುತ್ತಾರೆಂದು ಹೆದರಿ ಹೊರಟು ಹೋದರು.

* * *

ರಾಮಸ್ವಾಮಿಗಳು, ಶಂಕರನಾರಾಯಣರು ಒಂದೇ ಊರಿನಲ್ಲಿದ್ದು ಒಂದೇ ಶಾಲೆಯಲ್ಲಿ ಓದಿದವರು. ತುಂಬಾ ಸ್ನೇಹ ಅವರಿಬ್ಬರಲ್ಲಿ. ಶಾಲೆಯ ಓದು ಮುಗಿದ ಮೇಲೆ ರಾಮಸ್ವಾಮಿಗಳು ಬೆಂಗಳೂರಿಗೆ ಬಂದು ಅವರ ದೊಡ್ಡಪ್ಪನ ಮನೆಯಲ್ಲಿದ್ದುಕೊಂಡು ಕಾಲೇಜು ಓದಿ ಮುಗಿಸಿದರು. ಮೊದಲೇ ಚುರುಕಾಗಿದ್ದ ಬುದ್ಧಿ, ಬೇಗ ಬೇಗನೆ ಮುಂದೆ ಬಂದರು. ದೊಡ್ಡಪ್ಪನ ಒತ್ತಾಸೆ ಜೊತೆಗೆ ತಮಗಿದ್ದ ಬುದ್ಧಿವಂತಿಕೆಯೂ ಸೇರಿ ಪೋಲೀಸ್ ಡಿಪಾರ್ಟ್‌ಮೆಂಟಿನಲ್ಲಿ ಕೆಲಸ ಸಿಕ್ಕಿತು. ಹತ್ತು ಹದಿನೈದು ವರ್ಷಗಳಲ್ಲಿ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಆದರು. ಇನ್ನು ಹೇಳಲೇಬೇಕಾಗಿರಲಿಲ್ಲ. ಮೆಟ್ಟಿಲು ಮೆಟ್ಟಿಲಾಗಿ ಮೇಲೇರಿ ಸಾಕಷ್ಟು ಶ್ರೀಮಂತಿಕೆಯನ್ನು ಅಳವಡಿಸಿಕೊಂಡರು. ಅವರಿಗಿದ್ದ ಒಬ್ಬಳೇ ಮಗಳಿಗೆ ಒಳ್ಳೆಯ ಓದಿನ ಅವಕಾಶ ಕಲ್ಪಿಸಿದರು. ಹೊಸ ವಿಚಾರಧಾರೆಯ ಮನುಷ್ಯರಾದ ಅವರು. ಮಗಳ ಸ್ವಚ್ಛಂದತೆಗೆ ಅಡ್ಡ ಬರಲಿಲ್ಲ. ಆದರೆ ಚಂಚಲಾಳೇ ಅಷ್ಟೊಂದು ಸ್ವಚ್ಛಂದತೆಯನ್ನು ಬಯಸಲಿಲ್ಲ. ಸಂಪ್ರದಾಯದ ಮುದ್ದೆಯಾದ ಅಜ್ಜಮ್ಮನವರ ಮೇಲ್ವಿಚಾರಣೆಯಲ್ಲಿ ಬೆಳೆದಿದ್ದ ಚಂಚಲಾ ಸ್ವಭಾವತಃ ಸಂಕೋಚ ಪ್ರವೃತ್ತಿಯವಳಾಗಿದ್ದಳು. ಆದರೆ ಸ್ಕೂಲು, ಕಾಲೇಜು ಗೆಳತಿಯರ ಸಂಪರ್ಕಗಳಿಂದ ಸ್ವಲ್ಪ ಮಟ್ಟಿಗೆ ಚಳಿ ಬಿಟ್ಟು ಬೆರೆಯುತ್ತಿದ್ದಳು. ಮಾತನಾಡುತ್ತಿದ್ದಳು.

ಮೋಹನನ ತಂದೆಗೆ, ರಾಮಸ್ವಾಮಿಗಳಷ್ಟು ಮುಂದೆ ಬರಲು ಸಾಧ್ಯವಿರಲಿಲ್ಲ. ಮನೆಯ ಜವಾಬ್ದಾರಿ ಹೊರಬೇಕಾಗಿದ್ದುದರಿಂದ, ಓದನ್ನು 10ನೇ ತರಗತಿಗೇ ಮುಗಿಸಬೇಕಾಯಿತು. ತಂದೆ ಚಿಕ್ಕ ವಯಸ್ಸಿನಲ್ಲಿಯೇ ತೀರಿಹೋಗಿದ್ದರು. ಚಿಕ್ಕಪ್ಪನ ಆಸರೆಯಲ್ಲಿ ಬೆಳೆದಿದ್ದ. ಈಗ ಚಿಕ್ಕಪ್ಪನಿಗೂ ವಯಸ್ಸಾಗುತ್ತಾ ಬಂದುದರಿಂದ ಅನಿವಾರ್ಯವಾಗಿ ಓದು ನಿಲ್ಲಿಸಿ ಕೆಲಸಕ್ಕೆ ಸೇರಿಕೊಳ್ಳಬೇಕಾಯಿತು. ಇಬ್ಬರು ತಂಗಿಯರು, ತಾಯಿ, ಚಿಕ್ಕಮ್ಮ– ಇಷ್ಟೂ ಜನರ ಪೋಷಣೆಯ ಹೊರೆ ಹೊರಲೇಬೇಕಾಯಿತು. ಶಂಕರನಾರಾಯಣರಿಗೆ.

ಬಡವರಾದ ಇವರಿಗೆ ಹೆಣ್ಣು ಕೊಡಲು ಹಿಂಜರಿದರು. ಆದರೆ ಪೋಸ್ಟ್ ಮಾಸ್ಟರ್ ಕೃಷ್ಣಪ್ಪನವರು ತಮ್ಮ ಮಗಳನ್ನು ಶಂಕರನಾರಾಯಣರಿಗೆ ಕೊಡಲು ಒಪ್ಪಿದರು. ತಾವೇನೂ ಅಷ್ಟು ಶ್ರೀಮಂತರಲ್ಲ. ಒಂದು ವೇಳೆ ಶ್ರೀಮಂತ ಹುಡುಗನನ್ನು ಹುಡುಕಿದರೆ ಅವರ ಅಂತಸ್ತಿಗೆ ತೂಗುವುದು ತಮಗೆ ಕಷ್ಟವಾದೀತೆಂದು ಹೆದರಿ, ಬಡವರಾದರೂ ಹುಡುಗ ಒಳ್ಳೆಯವನೆನಿಸಿದ್ದರಿಂದ ಕೊಡಲು ಒಪ್ಪಿದರು. ಮದುವೆಯ ಖರ್ಚೆಲ್ಲವನ್ನೂ ಅವರೇ ವಹಿಸಿಕೊಂಡರು. ಶಂಕರನಾರಾಯಣರ ಚಿಕ್ಕಪ್ಪನಿಗೆ ಅಭ್ಯಂತರ ಹೇಳಲು ಯಾವ ಕಾರಣವೂ ಉಳಿಯಲಿಲ್ಲ.

ರಾಮಸ್ವಾಮಿ, ಶಂಕರನಾರಾಯಣರ ನಡುವೆ ಪತ್ರ ವ್ಯವಹಾರ ಇದ್ದೇ ಇತ್ತು. ರಾಮಸ್ವಾಮಿಗಳಿಗೆ ಟ್ರಾನ್ಸ್‌ಫರ್ ಆಗಿ ಬೆಂಗಳೂರಿನಲ್ಲಿ ಉಳಿದರು. ಇದ್ದ ಒಬ್ಬಳೇ ಒಬ್ಬ ಮಗಳನ್ನು ಚೆನ್ನಾಗಿ ಓದಿಸಬೇಕೆಂದು ರಾಮಸ್ವಾಮಿಗಳು ನಿರ್ಧರಿಸಿದರು. ಚಂಚಲಾಗಿಂತ ಮೊದಲು ರಾಮಸ್ವಾಮಿಗಳಿಗೆ ಇಬ್ಬರು ಮಕ್ಕಳು ಆಗಿಹೋದರು. ಮೊದಲನೆಯದು ಹೆಣ್ಣು. ಎರಡನೆಯದು ಗಂಡು. ಎರಡು ಮಕ್ಕಳೂ ಹುಟ್ಟುವಾಗಲೇ ಸತ್ತು ಹುಟ್ಟಿದವು. ರಾಮಸ್ವಾಮಿಗಳ ಮನಸ್ಸಿಗೆ ತುಂಬಾ ಬೇಸರವಾಯಿತು. ಒಂದಷ್ಟು ದಿನ ಕೊರಗಿದರು. ಆದರೆ ಸ್ವಲ್ಪ ಕಾಲದ ನಂತರ ತಾವೇ ಚೇತರಿಸಿಕೊಂಡರು. ಚಂಚಲಾ ಹುಟ್ಟುವವರೆಗೂ ಈ ವ್ಯಥೆ ಕಡಿಮೆಯಾಗಿರಲಿಲ್ಲ.

ಶಂಕರನಾರಾಯಣ ತನ್ನ ಮಗ ಮೋಹನನ ವಿದ್ಯಾಭ್ಯಾಸದ ಬಗ್ಗೆ ಚಿಂತೆ ವ್ಯಕ್ತಪಡಿಸಿದಾಗ, ರಾಮಸ್ವಾಮಿ ಬೆಂಗಳೂರಿನಲ್ಲಿ ಅವನ ಓದಿಗೆ ವ್ಯವಸ್ಥೆ ಮಾಡುತ್ತೇನೆಂದರು. ಆದರೆ ಶಂಕರನಾರಾಯಣರಿಗೆ ಮಗನನ್ನು ಇನ್ನೊಬ್ಬರಲ್ಲಿಟ್ಟು ಓದಿಸುವುದು ಸರಿಯೆನಿಸಲಿಲ್ಲ. ಶಂಕರನಾರಾಯಣ ತಂಗಿಯರಿಬ್ಬರಿಗೂ ಮದುವೆ ಮಾಡಿಸಿದರು. ತಾಯಿ ತಂಗಿಯ ಮನೆಯಲ್ಲಿರತೊಡಗಿದಳು. ಚಿಕ್ಕಮ್ಮ ಕಾಲರಾ ಆಗಿ ಸತ್ತುಹೋಗಿದ್ದಳು. ರಾಮಸ್ವಾಮಿಗಳು, ಶಂಕರನಾರಾಯಣನಿಂದ ಬಂದ ಪತ್ರದಿಂದ ಮೋಹನನನ್ನು ತಮ್ಮಲ್ಲಿಟ್ಟುಕೊಂಡು ಓದಿಸುವ ಅಭಿಪ್ರಾಯ ಇಷ್ಟವಿಲ್ಲವೆಂದರಿತು. ಪಂಗಿನ ಬದುಕಿಗೆ ಕಟ್ಟು ಬೀಳುವವನಲ್ಲವೆಂದೆನಿಸಿ ಕೊನೆಗೆ ಒಂದು ಕೆಲಸ ಕೊಡಿಸಿದರು

ಬೆಂಗಳೂರಿನಲ್ಲಿ. ತುಂಬಾ ಬಲವಂತ ಮಾಡಿದ ಮೇಲೆ ಹೆಂಡತಿ ಮಕ್ಕಳೊಂದಿಗೆ ಬಂದು ಬಿಟ್ಟ. ಚಿಕ್ಕಪ್ಪ ತಾನು ಬರುವುದೇ ಇಲ್ಲವೆಂದು ಹಟ ಹಿಡಿದು ಹಳ್ಳಿ ಮನೆಯಲ್ಲೇ ಉಳಿದ.

* * *

ಈ ಸ್ನೇಹದಿಂದಾಗಿ ಮೋಹನ ಮತ್ತು ಚಂಚಲಾರ ನಡುವೆಯೂ ಸಲಿಗೆ ಬೆಳೆದಿತ್ತು. ತಮ್ಮನೆಂದೇ ಭಾವಿಸಿದ್ದ ರಾಮಸ್ವಾಮಿಗಳು, ಮೋಹನನೊಂದಿಗೆ ಚಂಚಲಾಳ ಸ್ವಾತಂತ್ರ್ಯಕ್ಕೆ ಅಡ್ಡಿ ಹೇಳಲಿಲ್ಲ. ಆದ್ದರಿಂದಲೇ ಅವರ ನಡುವಿನ ಪ್ರೀತಿ, ಪ್ರೇಮಗಳು, ಕೇವಲ ಸ್ನೇಹವೆಂದೇ ಭಾವಿಸಿದ್ದರು. ಅವರ ಸ್ನೇಹವನ್ನು ಸ್ವಾಗತಿಸಬಹುದಾಗಿತ್ತೇ ಹೊರತು ಪ್ರೇಮವನ್ನು ಬಹುಶಃ ಸ್ವಾಗತಿಸುತ್ತಿರಲಿಲ್ಲ. ಮೊದಮೊದಲು ಇವರಿಬ್ಬರ ಸಲುಗೆಗೆ ಅಡ್ಡಿ ಹೇಳುತ್ತಿರಲಿಲ್ಲ. ಆದರೆ ವಯಸ್ಸಿಗೆ ಬರುತ್ತಿದ್ದಂತೆ ಅವರಿಬ್ಬರ ನಡುವಿನ ಸ್ನೇಹದ ರೀತಿ ಬೇರೊಂದು ತರನಾಗಿತ್ತು. ರಾಮಸ್ವಾಮಿಗಳು ಸೂಕ್ಷ್ಮವಾಗಿ ಇದನ್ನು ಗಮನಿಸಿದರು. ಮೋಹನನಿಗೆ ಏನೂ ಹೇಳಲಿಲ್ಲ. ಚಂಚಲಾಳನ್ನು ಸ್ವಲ್ಪ ಬಂದೋಬಸ್ತು ಮಾಡಿದರು.

ಚಂಚಲಾಳಿಗೆ ಮೋಹನನೆಂದರೆ ಪ್ರಾಣ. ಒಂದೇ ಕಾಲೇಜಿನಲ್ಲಿ ಓದಿದವರು. ಅಲ್ಲದೆ ಇಬ್ಬರೂ ಸ್ನೇಹಿತರ ಮಕ್ಕಳು. ಮೋಹನನ ವರ್ಚಸ್ಸು, ಅವನ ಪ್ರತಿಭೆ ಕಾಲೇಜಿನಲ್ಲಿ ಹರಡಲು ಹೆಚ್ಚು ಕಾಲ ಬೇಕಿರಲಿಲ್ಲ. ಮೋಹನ ಹೆಚ್ಚಾಗಿ ಗೆಳೆಯರ ಜೊತೆಯಲ್ಲಿ ಅಲೆಯುವ ಅಭ್ಯಾಸವಿಟ್ಟುಕೊಂಡಿರಲಿಲ್ಲ. ಆದರೆ ಅವನ ಸ್ನೇಹಕ್ಕಾಗಿ ಒಳಗೇ ಹಂಬಲಿಸುತ್ತಿದ್ದ ಹುಡುಗಿಯರು ಸಾಕಷ್ಟು ಇದ್ದರು. ಚಂಚಲಾಳೊಂದಿಗೆ ಅವನ ಸ್ನೇಹ, ಉಳಿದವರಿಗೆ ಹೊಟ್ಟೆಯುರಿಯಾಗಿತ್ತು.

* * *

ಓದು ಮುಗಿಯಿತು. ಫೈನಲ್‌ನಲ್ಲಿರಬೇಕಾದರೆ ಮೋಹನನ ತಂದೆ ಅಪಘಾತದಲ್ಲಿ ಸಾವನ್ನಪ್ಪಿದರು. ರಾಮಸ್ವಾಮಿಗಳ ಹೊಣೆ ಸ್ವಲ್ಪ ಹೆಚ್ಚಾಯಿತು. ಕೇವಲ ಸ್ನೇಹಿತರೆನ್ನುವುದು ಬಿಟ್ಟರೆ. ಹೊಣೆ ಹೊರಲೇಬೇಕಾದ ಬಂಧುತ್ವವೇನೂ ಇರಲಿಲ್ಲವಾದರೂ ನೈತಿಕವಾಗಿ ಅವರಿಗೆ ಹಾಗೆನಿಸಿತು. ಅದಕ್ಕೇ ಅವರು ಮೋಹನನ ಕೆಲಸದ ವಿಚಾರವಾಗಿ ಅಷ್ಟೊಂದು ಕಾಳಜಿ ವಹಿಸಿಕೊಂಡಿದ್ದುದು.

ಚಂಚಲಾಳನ್ನು ಮೋಹನ ಹಚ್ಚಿಕೊಂಡಿದ್ದ ರೀತಿ. ಮೋಹನನ ತಾಯಿಗೆ ಹಿಡಿಸಲಿಲ್ಲ. ಅವಳಿಗೆ. ಮೋಹನ ಚಂಚಲಾಳನ್ನು ಮದುವೆಯಾಗುವುದು ಸಾಧ್ಯವಿಲ್ಲವೆನಿಸಿತು. ಸಾಲದ್ದಕ್ಕೆ ಮೋಹನ ಅವಳ ವಿಚಾರವಾಗಿ ಕನಸುಗಳನ್ನು ಹೆಣೆಯುತ್ತಿದ್ದನೆ.

ಚಂಚಲಾಳನ್ನು ತಮ್ಮ ಮನೆಗೆ ಸೊಸೆಯಾಗಿ ತಂದುಕೊಳ್ಳುವ ಯೋಗ್ಯತೆ ಇಲ್ಲವೆಂದುಕೊಂಡೇ ಇದ್ದುದರಿಂದ ಸ್ವಲ್ಪ ನೆಮ್ಮದಿಯಿತ್ತು. ಮೋಹನ ವಯಸ್ಸಿಗೆ ಬಂದ ಹುಡುಗ. ಬಿಸಿ ರಕ್ತ. ಆವೇಶ ಹೆಚ್ಚು. ಎಷ್ಟು ಬುದ್ಧಿವಂತನಾದರೂ ಈ ಒಂದು ವಿಷಯದಲ್ಲಿ ಅವನು ಲೆಕ್ಕ ತಪ್ಪಿದ್ದ. ತಾಯಿಯನ್ನು, ತನಗೊಂದು ಕೆಲಸ ದೊರೆತ ಕೂಡಲೇ, ರಾಮಸ್ವಾಮಿಗಳಲ್ಲಿ ಮದುವೆ ಪ್ರಸ್ತಾಪ ಮಾಡಬೇಕೆಂದು ಮೋಹನ ಹೇಳಿದಾಗ– ತಾಯಿ ಅವನಿಗೆ ಚೆನ್ನಾಗಿ ಬುದ್ಧಿವಾದ ಹೇಳಿದಳು. ಮೋಹನನಿಗೆ ಚಂಚಲಾಳಲ್ಲಿ ನಂಬಿಕೆ. ಖಂಡಿತ ತನ್ನ ಪ್ರೀತಿಯನ್ನು ತಿರಸ್ಕರಿಸಲಾರಳೆಂದು ಭಾವಿಸಿದ್ದ.

ಪರೀಕ್ಷೆಗಳೆಲ್ಲ ಮುಗಿದು ಮನಸ್ಸು ಹಗುರವೆನಿಸಿದಾಗ, ಇಬ್ಬರೂ 'ಲೇಕ್ ವ್ಯೂ'ಗೆ ಹೋಗಿ, ಉರಿಬಿಸಿಲಿನ ಝಳದಲ್ಲಿ ತಂಪಾಗಿ ಐಸ್‌ಕ್ರೀಂ ತಿನ್ನುತ್ತಾ ಕುಳಿತರು. ಮೆಲ್ಲನೆ ವಿಷಯ ತೆಗೆದ.

"ಚಂಚಲಾ ನನ್ನ ವಿಚಾರವಾಗಿ ನಿನಗೆ ಏನನ್ನುತ್ತೆ?" ಗಂಭೀರವಾಗಿ ಕೇಳಿದ ಪ್ರಶ್ನೆ ವಿಚಿತ್ರವಾಗಿತ್ತು!–

"ಒಳ್ಳೇ ಹುಡುಗ, ಬುದ್ಧಿವಂತ, ಬೆಳ್ಳಗೆ ತೆಳ್ಳಗೆ ಚೆನ್ನಾಗಿದ್ದಾನೇಂತ ಅನ್ಸತ್ತೆ."

"ನಾನು ಅದನ್ನಲ್ಲ ಕೇಳಿದ್ದು. ನನ್ನ ಮೇಲೆ ನಿನಗೆ ಪ್ರೀತಿ ಇದೆಯಾ?"

"ಹುಂ! ಇದೆ. ಅದನ್ಯಾಕೆ ಈಗ ಕೇಳ್ತಾ ಇದ್ದೀ? ನನ್ಮೇಲೇನಾದ್ರೂ ಸಂಶಯ ಬಂತಾ?" ದೈನ್ಯವಾಗಿತ್ತು ಧ್ವನಿ.

"ಚಂಚಲಾ, ಅದಲ್ಲ ವಿಷಯ. ನೋಡು ನೀನು ಇನ್ನೂ ಚಿಕ್ಕವಳಲ್ಲ. ಹೇಳೋದನ್ನ ಗಂಭೀರವಾಗಿ ಕೇಳಿಕೋ. ಈಗ ನಮ್ಮಿಬ್ಬರ ಓದೂ ಮುಗಿದಿದೆ. ನಾನು ಖಂಡಿತ ಪಾಸಾಗ್ತೇನೆ. ಯಾವುದಾದರೂ ಉದ್ಯೋಗ ಸಿಕ್ಕೇ ಸಿಗುತ್ತೆ. ಕೆಲಸ ಸಿಕ್ಕಿದ ಕೂಡಲೇ ನಿನ್ನ ಮದುವೆಯಾಗ್ತೀನಿ–"

ಈ ಮಾತು ಕೇಳಿ ಬೆಚ್ಚಿಬಿದ್ದು, "ಹಾಂ!" ಎಂದಳು.

"ಹೆದರಬೇಡ, ನಿಮ್ಮಪ್ಪನ ಅನುಮತಿ ತೊಗೊಂಡೇ ವಾರಾಯ್ತು ಮದುವೆಯಾಗೋದು. ಆದರೆ ಅದಕ್ಕೂ ಮುಂದೆ ನಿನ್ನೊಪ್ಪಿಗೆ ಬೇಕು. ಚಂಚಲಾ, ಪ್ಲೀಸ್ ಹೇಳು, ನನ್ನ ಹೃದಯದ ಮೇಲೆ ಆಣೆಯಿಟ್ಟು ಹೇಳು, ನನ್ನನ್ನು ಮದುವೆಯಾಗುವುದು ನಿನಗೆ ಇಷ್ಟ ತಾನೇ?"– ಅಳುವ ಧ್ವನಿಯಲ್ಲಿ ಕೇಳಿದ.

ಮದುವೆಯ ಮಾತು ಕಿವಿಗೇನೋ ಹಿತವಾಗಿತ್ತು. ಆದರೆ 'ತಂದೆಯ ಮನಸ್ಸು ಹೇಗಿದೆಯೋ' ಎನ್ನುವ ಸಂಶಯ ಭೀತಿ ಅವಳನ್ನು ಕಾಡಿತು. ಮೋಹನನ ಯಾಚನೆಯ ಧ್ವನಿಯನ್ನು ಕೇಳಿಯಂತೂ ಅವಳಿಗೆ ದುಃಖ ತಡೆಯಲಾಗಲಿಲ್ಲ. ಮೋಹನನೆಂದರೆ ಚಂಚಲಾಳ ಉಸಿರು. ಅವನನ್ನು ಗೌರವಿಸುತ್ತಿದ್ದಳು, ಪ್ರೀತಿಸುತ್ತಿದ್ದಳು. ಕಾಲೇಜಿನಲ್ಲಿ.

ಸ್ಪರ್ಧೆಗಳಲ್ಲಿ ಗೆದ್ದು, ಬಹುಮಾನ ಸ್ವೀಕರಿಸಲು ವೇದಿಕೆಯನ್ನು ಹತ್ತಿದಾಗ ಹಿಡಿಸಲಾರದಷ್ಟು ಹೆಮ್ಮೆಯೆನಿಸುತ್ತಿತ್ತು.

ತಂದೆ ತಾಯಿಯರನ್ನು ಬಲವಂತವಾಗಿ ತಾನೇ ಮೋಹನನು ಬಹುಮಾನ ತೆಗೆದುಕೊಳ್ಳುವುದನ್ನು ನೋಡಲು ಕರೆದೊಯ್ದಿದ್ದಳು. ಅವನ ಮಾತುಗಳೂ ಅಷ್ಟೇ ಮೋಹಕವಾಗಿದ್ದವು. ಅವನ ಮಾತನ್ನು ಕೇಳುತ್ತಿದ್ದರೇನೇ ಕನಸಿನ ಲೋಕದಲ್ಲಿ ಪರಿಭ್ರಮಿಸುವಂತೆನಿಸುತ್ತಿತ್ತು. ಮೋಹನನಿಗಾಗಿ ಕ್ಷಣ ಕ್ಷಣವೂ ಸಾಯುತ್ತಿದ್ದ ಅವಳಿಗೆ, 'ತನ್ನನ್ನು ಮದುವೆಯಾಗಲು ಇಷ್ಟವೇ' ಎಂದು ಕೇಳಿದ ಮೋಹನನ ಪ್ರಶ್ನೆ ಅವಳಿಗೆ ನೋವನ್ನುಂಟು ಮಾಡಿತು.

ಅವಳ ಮುಖದಲ್ಲಿ ನೋವಿನ ಛಾಯೆ ಕಾಣಿಸಲು ಮೋಹನನಿಗೆ ಕೆಡುಕೆನಿಸಿತು. 'ಛೀ! ಒಳ್ಳೇ ಮೂಡನ್ನು ಹಾಳು ಮಾಡಿದೆನಲ್ಲ'– ಎಂದುಕೊಂಡ. "ಸಾರಿ ಚಂಚಲಾ. ನಾನು ಈ ಮಾತನ್ನು ಕೇಳಬಾರದಾಗಿತ್ತು. ಕೆಟ್ಟ ಗಳಿಗೆ. ಕೇಳಿಬಿಟ್ಟೆ. ನೀನೇನೂ ಯೋಚನೆ ಮಾಡಬೇಡ. ನನಗೆ ಕೆಲಸ ಸಿಕ್ಕಿದ ಕೂಡಲೇ ನಿಮ್ಮ ತಂದೆಯವರಲ್ಲಿ ಕೇಳ್ತೀನಿ. ಖಂಡಿತ ನಮ್ಮಿಬ್ಬರ ಮದುವೆ ಆಗಿಯೇ ಆಗುತ್ತೆ"– ಎಂದ ಭರವಸೆಯ ಧ್ವನಿಯಲ್ಲಿ.

ಚಂಚಲಾ ಮುಖವರಳಿಸಿದಳು. ಮನೆಗೆ ಹೋಗೋಣವೆಂದು ಹೇಳಲು, ಮೋಹನ ಕೂಡಲೇ ಸರ್ವರ್‌ಗೆ ಬಿಲ್ ತರಲು ಹೇಳಿದ. ಬಿಲ್ಲಿನ ಹಣವನ್ನು ಸಲ್ಲಿಸಿ ನಡೆದರು.

* * *

ರಾಮಸ್ವಾಮಿಗಳು ಚಂಚಲಾಳ ಮದುವೆಗೆ ಪ್ರಯತ್ನಗಳನ್ನು ಮಾಡತೊಡಗಿದರು. ಮೋಹನನಿಗೂ ತಿಳಿಯಿತು. ಆದರೆ ಸಂಪಾದನೆಯಿಲ್ಲದ ಗಂಡಸು ಯಾವ ಮುಖಹೊತ್ತುಕೊಂಡು ಹೆಣ್ಣನ್ನು ಯಾಚಿಸಿಯಾನು? ಮದುವೆಯ ಒತ್ತಡ ಹೆಚ್ಚಾದಾಗ, ಚಂಚಲಾ ಮೆಲ್ಲನೆ ತಾಯಿಯಲ್ಲಿ ಮೋಹನ ಮತ್ತು ತಮ್ಮಿಬ್ಬರ ಉದ್ದೇಶವನ್ನು ತಿಳಿಸಿದಳು. ರಾಮಸ್ವಾಮಿಗಳಿಗೆ ವಿಷಯ ತಿಳಿದು ಗುಡುಗಿದರು. ಮೋಹನನನ್ನು 'ಹಾಲೆರೆದ ಹಾವು' ಎಂದರು. ಚಂಚಲಾ ತಾವು ಒಪ್ಪಿದ ಹುಡುಗನನ್ನು ಮದುವೆಯಾಗಲಿಲ್ಲವಾದರೆ ಕೈಕಾಲು ಮುರಿದು ಮೂಲೆಯಲ್ಲಿ ಕೂರಿಸುತ್ತೇನೆಂದರು.

ಚಂಚಲಾಳ ಧೈರ್ಯ ಕುಸಿಯಿತು. ಇನ್ನೊಂದು ಚಕಾರವೆತ್ತುವಂತೆಯೂ ಇಲ್ಲ. ರಾಮಸ್ವಾಮಿಗಳು ಇಷ್ಟಪಟ್ಟರೆ ಮೃದುವಾಗುವಷ್ಟೇ, ಭಯಂಕರ ನಿಷ್ಠುರರೂ ಆಗಿಬಿಡುತ್ತಿದ್ದರು. ಮನೆಯಲ್ಲಿ ಚಂಚಲಾಳಿಗೆ ಅಳುವುದಕ್ಕೂ ಅವಕಾಶವಿರಲಿಲ್ಲ. ಮೋಹನನ್ನು ಕಂಡು ವಿಷಯ ತಿಳಿಸುವುದಕ್ಕೂ ಆಗಲಿಲ್ಲ. ಒಳಗೇ ಕೊರಗಿದಳಾಗಲೀ, [illegible] ಕಾಣಿಸಲಿಲ್ಲ. ಅಳುವುದಕ್ಕೂ ಭಯಪಡುತ್ತಿದ್ದಳು.

ಚಂಚಲಾಗೆ ಅನ್ನಿಸಿತು. ಮೋಹನ ತನ್ನನ್ನು ವಂಚಕಿ, ದ್ರೋಹಿ, ಎಂದುಕೊಳ್ಳುತ್ತಾನೆ. ತನ್ನನ್ನೆಷ್ಟು ಪ್ರೀತಿಸುತ್ತಿದ್ದನೋ, ಅದಕ್ಕಿಂತ ಹೆಚ್ಚಾಗಿ ದ್ವೇಷಿಸುತ್ತಾನೆ. ತಂದೆಯ ತಪ್ಪೆಂದು ಹೇಳಿದರೂ ಅವನಿಗೆ ನಂಬಿಕೆಯಾಗುವುದಿಲ್ಲ. ನಾನೇ ಮೋಸ ಮಾಡಿದೆ– ಎಂದುಕೊಳ್ಳುತ್ತಾನೆ– ಎಂದು ದಿನ ದಿನವೂ ಕೊರಗಿದಳು. ಆದರೆ ವಿಧಿಯಿಲ್ಲ. ತಂದೆ ತಾಯಿಯನ್ನು ಮೋಸಗೊಳಿಸಿ ಅವನೊಡನೆ ಓಡಿ ಹೋಗಿ ಎಲ್ಲಿಯಾದರೂ ಬದುಕೋಣವೆನ್ನುವ ಸಾಹಸ ಅವಳಲ್ಲಿರಲಿಲ್ಲ. ಮೋಹನನಿಗೆ ತಾಯಿಯ ಜವಾಬ್ದಾರಿಯಿದೆ. ಒಂದು ವೇಳೆ ತಾವು ಹಿರಿಯರ ಮಾತನ್ನು ಮೀರಿ ಮದುವೆಯಾದರೂ ಮೋಹನನ ತಾಯಿ ಕ್ಷಮಿಸಲಾರಳು. ಹಿತಚಿಂತಕರಾದ, ಮಿತ್ರರಾದ ರಾಮಸ್ವಾಮಿಗಳ ಕುಟುಂಬದ ಹೆಸರು ಕೆಡುವುದಕ್ಕೆ ಮಗನು ಹೊಣೆಯೆನ್ನುವ ಆರೋಪವನ್ನು ಕೇಳಿ ಖಂಡಿತ ಬದುಕಿರಲಾರಳು. ಅವರ ಸ್ವಾಭಿಮಾನದ ಅನುಭವ ಚಂಚಲಾಳಿಗಿತ್ತು. ಅದಕ್ಕೇ ಮೋಹನ ಧೈರ್ಯ ಮಾಡಿದರೂ ತನ್ನಿಂದ ಅದು ಸಾಧ್ಯವೇ ಇಲ್ಲವೆಂದು ತೀರ್ಮಾನಿಸಿದಳು ಚಂಚಲಾ.

* * *

ಮೋಹನ ಒಂದು ತಿಂಗಳಾದರೂ ಆ ಕಡೆ ಸುಳಿಯಲಿಲ್ಲ. ಚಂಚಲಾ ಅವನನ್ನು ಒಮ್ಮೆ ನೋಡುವಂತಾದರೆ ಸಾಕೆಂದು ಹಾರೈಸುತ್ತಿದ್ದಳು. ರಾಮಸ್ವಾಮಿಗಳು ಒಂದೆರಡು ಬಾರಿ ಹೇಳಿ ಕಳುಹಿಸಿದಾಗ ಮೋಹನನ ಮನೆ ಬಾಗಿಲಿಗೆ ಬೀಗ ಜಡಿದಿತ್ತು. ಅಕ್ಕ ಪಕ್ಕದವರನ್ನು ಕೇಳಿದರೆ ಯಾರಿಗೂ ಏನೂ ತಿಳಿಯದೆಂದರು. ಎಷ್ಟು ಪ್ರಯತ್ನಿಸಿದರೂ ಮೋಹನನ ಮನೆಯವರ ಸುಳಿವೇ ಹತ್ತಲಿಲ್ಲ. ಕೊನೇ ಪಕ್ಷ ಮೋಹನನ ತಾಯಿಯಾದರೂ ತಮ್ಮಲ್ಲಿಗೆ ಬಂದು ಎಲ್ಲಿ ಹೋಗುತ್ತಿದ್ದೇವೆಂದಾದರೂ ಹೇಳುತ್ತಿದ್ದರು. ಆದರೆ ಈಗ ಏನೂ ಸುಳಿವಿಲ್ಲ.

ಚಂಚಲಾ ಮಾತ್ರ ಮೋಹನನ ವಿಚಾರವಾಗಿ ಹೆದರಿದಳು. ಏನಾದರೂ ಮಾಡಿಕೊಂಡರೆ? ದೇವರೇ ಹಾಗೇನೂ ಆಗದಿರಲೆಂದು ಹಾರೈಸಿದಳು.

* * *

ಮುಹೂರ್ತದ ದಿನಗಳು ಹತ್ತಿರ ಬಂದವು. ಇನ್ನೊಂದೆರಡು ದಿನವಿದೆ ಎನ್ನುವಾಗ ಒಂದು ಪತ್ರ ಮತ್ತು ಪಾರ್ಸೆಲ್ ಬಂತು ಚಂಚಲಾಳ ಹೆಸರಿಗೆ. ಚಂಚಲಾಗೆ ಆಶ್ಚರ್ಯವಾಯಿತು! ತನ್ನ ಹೆಸರಿಗೆ ಕಾಗದ ಬರೆದವರು ಇಲ್ಲಿಯವರೆಗೆ ಯಾರೂ ಇರಲಿಲ್ಲ. ಅವಳೇ ಹೋಗಿ ಪಾರ್ಸೆಲ್ ಮತ್ತು ಪತ್ರ ತೆಗೆದುಕೊಂಡಳು. ಚಂಚಲಾ ಕೋಣೆಗೋಡಿದಳು. ಅದು ಮೋಹನನದು. ಸಂತೋಷ, ಸಂಭ್ರಮಗಳಿಂದ ಕಣ್ಣು ಹನಿಸಿತು. ಕಣ್ಣು ಮಂಜಾಯಿತು. ಕಣ್ಣು ಒರೆಸಿಕೊಂಡು ಬೇಗ ಬೇಗ ಓದಿದಳು.

ಪ್ರಿಯ ಗೆಳತಿ ಚಂಚಲಾ,

ನಿನಗೆ ಆಶ್ಚರ್ಯವಾಗಬಹುದು ನನ್ನ ಈ ಪತ್ರ ನೋಡಿ. ಅದು ಸಹಜ. ಊರು ಬಿಡುವಾಗ ನಿಮಗೆ ಹೇಳಲಿಲ್ಲ. ಅದಕ್ಕೆ ಕಾರಣ ನಿಮ್ಮ ಮೇಲಿನ ಕೋಪ. ಪ್ರತಿಯಾಗಿ. ನನ್ನ ತಾತನ ಅನಾರೋಗ್ಯದ ಸುದ್ದಿ. ಆರೋಗ್ಯ ತೀರಾ ಗಂಭೀರವಾಗಿದೆಯೆಂದು ತಂತಿ ಬಂದ ಕೂಡಲೇ ರಾತ್ರೋರಾತ್ರಿ ಅಮ್ಮನನ್ನು ಕರೆದುಕೊಂಡು ಹೋದೆ. ಇಲ್ಲಿನ ಪರಿಸ್ಥಿತಿ ನಮ್ಮನ್ನು ಇಲ್ಲಿಯೇ ಉಳಿಯುವಂತೆ ಮಾಡಿದೆ. ತಾತನ ಆರೋಗ್ಯ ಸರಿಹೋಗುವಂತೆ ಕಾಣುವುದಿಲ್ಲ. ಯಾವ ಕ್ಷಣದಲ್ಲಿಯಾದರೂ ಪರಿಸ್ಥಿತಿ ಹದಗೆಟ್ಟೀತು. ಅದಕ್ಕಾಗಿ ನಿಮ್ಮ ಮದುವೆಗೆ ಬರಲಾಗುವುದೋ ಇಲ್ಲವೋ, ಹೇಳಲಾರೆವು. ಈ ಪತ್ರದೊಂದಿಗೆ ಕಳುಹಿಸಿರುವ ಪಾರ್ಸೆಲ್‌ನ್ನು ಬಿಡಿಸಿ ಅದರಲ್ಲಿನ ಸಣ್ಣ ಕಾಣಿಕೆಯನ್ನು ಮದುವೆಯ ಉಡುಗೊರೆಯೆಂದು ಸ್ವೀಕರಿಸಬೇಕೆಂದು ಅಮ್ಮ ಹೇಳಿದ್ದಾರೆ. ಜೊತೆಗೆ ಅವರ ಹಾರೈಕೆಯೂ ನಿನಗೆ. ಇನ್ನೊಂದು ೧೫-೨೦ ದಿನಗಳಲ್ಲಿ ನಾನು ಮುಂಬಯಿಗೆ ಹೋಗಬೇಕಾಗಿದೆ. ಅಲ್ಲಿ ನನಗೊಂದು ಒಳ್ಳೆಯ ಕೆಲಸ ದೊರೆತಿದೆ. ಅದಕ್ಕಾಗಿಯೇ ಬೆಂಗಳೂರಿನ ಕೆಲಸಕ್ಕೆ ರಾಜೀನಾಮೆ ಕೊಟ್ಟಿದ್ದೇನೆ. ನಿಮ್ಮ ತಂದೆ ತಾಯಿಯವರಿಗೆ ನನ್ನ ನಮಸ್ಕಾರಗಳು. ನಿಮಗೆ, ನಿಮ್ಮ ಮಧುರ ದಾಂಪತ್ಯಕ್ಕೆ ನನ್ನ ಶುಭಾಶಯಗಳು.

ನಿಮ್ಮ ಪ್ರೀತಿಯ

ಮೋಹನ

ಓದುತ್ತಿದ್ದಂತೆ ಪಟಪಟನೆ ಕಂಬನಿಗಳುದುರಿದವು. ಎಷ್ಟು ತಡೆದರೂ ಸಾಧ್ಯವಾಗಲಿಲ್ಲ. ಬಿಕ್ಕಿ ಬಿಕ್ಕಿ ಅಳಲು ಪ್ರಾರಂಭಿಸಿದಳು. ರಾಮಸ್ವಾಮಿಗಳು ಮಗಳನ್ನು ಹುಡುಕುತ್ತಾ ಬಂದಾಗ, ಅವಳು ಇನ್ನೂ ಅಳುತ್ತಲೇ ಇದ್ದಳು. ತಂದೆ ಬಂದದ್ದು ತಿಳಿಯಲಿಲ್ಲ. ಬಂದವರು ಹತ್ತಿರ ನಿಂತು, ಮೃದುವಾಗಿ "ಚಂಚಲಾ" ಎಂದರು. ಸ್ಪರ್ಶಕ್ಕೆ ಬೆಚ್ಚಿ ಎಚ್ಚೆತ್ತಳು. ಎದುರಿಗೆ ತಂದೆ ತೊದಲಿದಳು... "ಏನಪ್ಪ? ಕೂಗಿದಿರಾ?"- ಎಂದಳು. ರಾಮಸ್ವಾಮಿಗಳು ಅವಳ ಕೈಲಿದ್ದ ಪತ್ರ ಮುಂದೆ ಬಿದ್ದಿದ್ದ ಪಾರ್ಸೆಲ್ ನೋಡಿದರು. ಅದರ ಮೇಲೆ 'ಮೋಹನನಿಂದ'- ಎಂದಿತ್ತು. ಒಂದು ಸಲ ಅವಳತ್ತ ಮತ್ತೊಂದು ಸಲ ಅವಳೆದುರಿದ್ದ ಪಾರ್ಸೆಲನ್ನು ನೋಡಿದರು. ಚಂಚಲಾ ಹೆದರಿಕೆಯಿಂದ ಮಳ್ಳಿಯಂತಾದಳು. 'ಇದು... ಇದು ಮೋಹನ...' ಎಂದು ಹೇಳಲು ಹೊರಟಳು. ರಾಮಸ್ವಾಮಿಗಳು ಸುಮ್ಮನಿರುವಂತೆ ಸನ್ನೆ ಮಾಡಿದರು. ಮಾತು ಅಲ್ಲಿಗೇ ನಿಂತಿತು. ಕ್ಷಣಬಿಟ್ಟು 'ತೆಗೆದಿರಿಸಿಕೊ'- ಎಂದು ಹೇಳುತ್ತಾ ಅಲ್ಲಿಂದ ಹೊರಟು ಹೋದರು.

* * *

ಲಲಮನಿಯಾಂ

ಪುಟಾಣಿ ಪಿಡಕಲ್ ಓಡುತ್ತಲೇ ಬಂದು, ಸಾರಿಸುತ್ತಿದ್ದ ಅಮ್ಮನಿಗೆ ಡಿಕ್ಕಿ ಹೊಡೆಯುತ್ತಲೇ ಹೇಳಿದಳು. ಅಮ್ಮಾ ಸಾಬೋ ಚಿಕ್ಕಮ್ಮ ಅತ್ತೆ ಮನೆಯಿಂದ ಬಂದು ಬಿಟ್ಟಿದ್ದಾಳೆ.

ನೆಲ ಸಾರಿಸುತ್ತಿದ್ದ ಮೌಹರೋ ಅವಳ ಮಾತಿಗೆ ಕಿವಿಗೊಡದೆ ತನ್ನ ಕೆಲಸದಲ್ಲಿಯೇ ಮಗ್ನಳಾದಳು. ಆದರೆ ಪಿಡಕಲ್ ಬಿಡಲಿಲ್ಲ. ಹಾಗಾಗಿ ನಿರುತ್ಸಾಹದಿಂದಲೇ ಉತ್ತರಿಸಿದಳು. "ಬಂದರೆ ಬರಲಿ. ಅದರಿಂದ ನಿನಗೇನು? ನೀನ್ಯಾಕೆ ಇಷ್ಟೊಂದು ಕುಣೀತಿದ್ದಿ?"

ಪಿಡಕಲ್ ಅಮ್ಮನ ಗಲ್ಲ ಹಿಡಿದು, ಅವಳ ಮುಖವನ್ನು ತನ್ನೆಡೆಗೆ ತಿರುಗಿಸಿಕೊಂಡು ಹೇಳಿದಳು– ದೊಡ್ಡಮ್ಮ ನನ್ನನ್ನು ನೋಡ್ತಿದ್ದ ಹಾಗೇ ಮಾತಾಡಿಸಿ ಕೇಳಿದಳು– 'ಪಿಡಕಲ್ ಹೇಗಿದ್ದೀಯಾ? ಆರಾಮವಾಗಿದ್ದಿ ತಾನೆ? ನಿನ್ನ ಅಮ್ಮ ಎಲ್ಲಿದ್ದಾಳೆ. ನಾನು ಅವಳಿಗೋಸ್ಕರವೇ ಅಷ್ಟು ದೂರದಿಂದ ಬಂದಿದ್ದೀನಿ... ನಡೀಮ್ಮ ಕೈತೊಳ್ಕೊಂಡು ಬಾ ಹೋಗೋಣ. ಚಿಕ್ಕಮ್ಮ ನನಗೆ ಪೇಡೆ ತಂದಿದ್ದಾಳೆ'

ಮೌಹರೊ ಶಾಂತವಾಗಿ ಉತ್ತರಿಸಿದಳು, 'ಮೊದಲು ಈ ಕೆಲಸ ಮುಗೀಲಿ. ನಿನ್ನ ಪೇಡೆ ಎಲ್ಲೂ ಹೋಗೊಲ್ಲ.'

ಮಗಳಿಗೆ ನಿರಾಸೆಯಾಯಿತು.

ಆರು ವರ್ಷದ ಪಿಡಕಲ್ ಬಹಳ ಚಂಚಲ ಸ್ವಭಾವದವಳು. ಜಾಣೆ. ಹೇಳಿದ್ದನ್ನು ಅರ್ಥ ಮಾಡಿಕೊಳ್ಳಬಲ್ಲಳು. ಚಿಲಿಪಿಸುವ ಹಕ್ಕಿ ತರಹ ಯಾವಾಗಲೂ ಗಾಳಿಗೆ ತೂರಾಡುತ್ತಿದ್ದ ಕಪ್ಪು ಕೂದಲು, ಗಂಭೀರವಾದ ಕಣ್ಣುಗಳನ್ನು ಗಮನಿಸಿಯೇ ಮೌಹರೊ ಮಗಳಿಗೆ ಪಿಡಕಲ್ ಅಂತ ಹೆಸರಿಟ್ಟಿದ್ದಳು.

ಕೈತೊಳೆದುಕೊಂಡು ಬರುತ್ತಿದ್ದ ಮೌಹರೊಗೆ ತಕ್ಷಣ ಒಂದೆರಡು ಮನೆಗೆಲಸಗಳು ನೆನಪಾದವು. ಜೋಳ ಬೀಸಬೇಕು. ಮಜ್ಜಿಗೇದು ಏನಾದರೂ ವ್ಯವಸ್ಥೆ ಮಾಡಬೇಕು.

ಇಲ್ಲವಾದರೆ ತೀರಾ ಹುಳಿಗಟ್ಟುತ್ತೆ. ಬೀಸುವ ಕಲ್ಲಿನಲ್ಲಿ ಜೋಳದ ಕಾಳನ್ನು ಹಾಕಿ ಬೀಸತೊಡಗಿದಳು. ಪಿಡಕಲ್‌ಗೆ ನಿರಾಶೆಯಾಗಿ ಹೊರಗೆ ಹೋದಳು. ಬೀಸಿದ ಜೋಳದ ಹಿಟ್ಟನ್ನು ಸವರಿ ತೆಗೆದು ಎದ್ದು ನಿಲ್ಲುವಷ್ಟರಲ್ಲಿ ಪಿಡಕಲ್ ಮತ್ತೆ ಪ್ರತ್ಯಕ್ಷವಾದಳು.

ಸಾಬೋ ಕಣ್ಣಿಗೆ ಬಿದ್ದ ಕೂಡಲೇ ಮನಸ್ಸು ತುಂಬಿ ಬಂದು, ಬಿಳಿಚಿಕೊಂಡು ಬತ್ತಿದ್ದ ತುಟಿಗಳ ಮೇಲೆ ಮಂದಹಾಸ ತುಂಬಿ ತರಲು ಪ್ರಯತ್ನಿಸಿದಳು. ಸಾಬೋಳ ಹೆಗಲಿಗೆ ತಲೆ ಆನಿಸಿ ಬಿಕ್ಕಿ ಬಿಕ್ಕಿ ಅಳತೊಡಗಿದಳು. ಅಲ್ಲೇ ಇದ್ದ ಮಂಚದ ಮೇಲೆ ಕಾಲನ್ನು ಇಳಿಬಿಟ್ಟು ಸಾಬೋ ಹೋಗಿ ಕುಳಿತಳು. ಮೌಹರೊಗೆ ಮಾತಾಡಲು ಸಾಧ್ಯವೇ ಆಗಲಿಲ್ಲ. ಕಂಬನಿಯ ಕಟ್ಟೆಯೊಡೆದು ಧಾರಾಳವಾಗಿ ಸುರಿಯುತ್ತಿತ್ತು. ಮೂಗೇರಿಸುತ್ತ ಕಂಬನಿ ಒರೆಸಿಕೊಳ್ಳುತ್ತಲೇ, ಸಾಬೋ ಅಕ್ಕನ ಕೈಕಾಲುಗಳನ್ನು ಗಮನಿಸಿದಳು. ಪಾದದ ಸುತ್ತ ಹಚ್ಚಿದ ಅಲ್ತಾ, ಕೈಗಳಲ್ಲಿ ಬಿಡಿಸಿದ ಗೋರಂಟಿಯ ಚಿತ್ತಾರ- ಇವೆಲ್ಲವೂ ಅವಳು(ಸಾಬೋ) ಯಾವುದೋ ಮಂಗಳ ಕಾರ್ಯದಲ್ಲಿ ಭಾಗವಹಿಸಿ ಬಂದಿರಬೇಕೆಂಬುದನ್ನು ಹೇಳುತ್ತಿದ್ದವು.

ಪಿಡಕಲ್ ಕಣ್ಣುಗಳಲ್ಲಿ ಸಂತೋಷ ತೊಟ್ಟಿಡುತ್ತಿತ್ತು. ಸಾಬೋಗೆ ಅಂಟಿಕೊಂಡು ನಿಂತಿದ್ದಳು. ಪದೇ ಪದೇ ಅವಳುಟ್ಟ ಬಟ್ಟೆಯನ್ನು ಮೂಸಿ ನೋಡುತ್ತ ಅದರಿಂದ ಬರುತ್ತಿದ್ದ ಗಂಧವನ್ನು ಅನುಭವಿಸುತ್ತಿದ್ದಳು. ಬೆರಳುಗಳಿಂದ ಅವಳ ಸೀರೆಯ ಅಂಚನ್ನು ಎತ್ತಿ ಹಿಡಿದು, ಅದು ರೇಶ್ಮೆಯೋ ಅಲ್ಲವೋ ಎಂಬುದನ್ನು ಪರೀಕ್ಷಿಸುತ್ತಿದ್ದಳು.

ಸ್ವಲ್ಪ ಹೊತ್ತಿನ ನಂತರ ಸಾಬೋ ಅಕ್ಕ ಮೌಹರಿಯ ಯೋಗಕ್ಷೇಮವನ್ನು ವಿಚಾರಿಸಿದ ಮೇಲೆ ಹೇಳಿದಳು– 'ಮೌಹರೊ ನಮ್ಮೂರಿನಲ್ಲಿ ಒಂದು ಮದುವೆಯಿದೆ. ಲಲಮನಿಯಾಂ ಕುಣಿತವೂ ಇದೆ. ನಿನಗೆ ಅದನ್ನು ತೋರಿಸಬೇಕಾಗಿದೇಂತಲೇ ನಾನಿಲ್ಲಿಗೆ ಬಂದೆ. ಏಳು ತಯಾರಾಗು. ಬೇಗ ಹೋಗೋಣ. ನಿನಗಾಗಿ ಕೆಲಸ ಕಾರ್ಯನೆಲ್ಲ ಬಿಟ್ಟು ಬಂದಿದ್ದೇನೆ.'

ಅಕ್ಕನ ಕಡೆ ಏನೂ ಅರ್ಥವಾಗದವಳಂತೆ ನೋಡಿದಳು.

'ಬರ್ತೀಯಲ್ಲಾ!'

'ಎಲ್ಲಿಗೆ?'

'ಅರೆ ನಾನು ಹೇಳಿದ್ದೇನು? ಲಲಮನಿಯಾಂ ನೃತ್ಯ ತೋರಿಸೋಕೆ!' ಮೌಹರೊ ಉದಾಸೀನಳಾಗಿ ನುಡಿದಳು – ಏನಕ್ಕಾ, ಲಲಮನಿಯಾಂ ನೃತ್ಯಕ್ಕೆ, ಕುಣಿತಕ್ಕೆ (ವ್ರಜ) ಜನರ ಹಳ್ಳಿಗಳಲ್ಲಿ ಇನ್ನೂ ಬೆಲೆ ಇದೆಯಾ? ನಮ್ಮ ಕಾಲಕ್ಕೇ ಮುಗೀತು. ಇದನ್ನು ಈಗ ಯಾರು ಕೇಳ್ತಾರೆ? ಎಂದು ಹೇಳುತ್ತಲೇ ಹತಾಶೆಯ ಭಾವದಿಂದ ತಲೆ ಮೇಲೆ ಕೈ ಹೊತ್ತು ಕುಳಿತಳು.

ಅಕ್ಕ ಉತ್ಸಾಹದಿಂದಲೇ ಹೇಳಿದಳು: ಹೌದೌದು ನನಗೂ ಗೊತ್ತು. ಲಲಮನಿಯಾಂ ನೃತ್ಯಾನ ಈಗ ಯಾರೂ ನೋಡೋಲ್ಲ ಅನ್ನೋದು ನಿಜವೇ ಆದರೂ ಮಾಡುವವರು ಸರಿಯಾಗಿ ಮಾಡಿದರೆ, ಸಿನೇಮಾ ಥಿಯೇಟರುಗಳಿಗೆ ಮುಗಿ ಬೀಳೋ ಜನ, ಅದನ್ನು ಬಿಟ್ಟು ಇದನ್ನು ನೋಡೋಕೆ ಸಾಯ್ತಾರೆ. ಅಷ್ಟಂತೂ ಸತ್ಯ. ನೀನೇನು, ಎಷ್ಟೊಂದು ಧೈರ್ಯದಿಂದ ಇದ್ದವಳು ಈಗ ಈ ರೀತಿ ಏನೋ ಕಳೆದುಕೊಂಡವಳಂತೆ ಮಾತಾಡ್ತಿದ್ದಿ.

'ಏನು ಧೈರ್ಯಾನೋ ಏನೋ! ನನಗಂತೂ ಸಾಕಾಗಿ ಹೋಗಿದೆ' ಬೇಸರದಿಂದಲೇ ಉತ್ತರಿಸಿದಳು.

'ಮೌಹರೋ, ನೀನು ಏನು ಮಾತಾಡ್ತಿದ್ದೀ ಅನ್ನೋದು ಬಹುಶಃ ನಿನ್ನ ಗಮನಕ್ಕೆ ಬಂದಿರಲಾರದು. ಲಲಮನಿಯಾಂ ನೃತ್ಯ ಮಾಡೋದೂಂದ್ರೆ ಸಾಮಾನ್ಯವೇ, ಕೈಯಲ್ಲಿ ಕನ್ನಡಿ ಹಿಡಿದು ಬಂದ ಬೀಗರ ಮುಂದೆ ಅದನ್ನು ಚಾಚಿ ಹಾಡು ಹಾಡುತ್ತಾ ಅವರ ಅಸಲಿ ಬಣ್ಣಗಳನ್ನು ಹಾಡು ಮತ್ತು ಭಂಗಿಗಳಲ್ಲಿ ತೋರಿಸುತ್ತಾ ನರ್ತಿಸುವುದಕ್ಕೆ ಎದೆಗಾರಿಕೆ ಬೇಕು. 'ನೋಡು ನೋಡು ಪ್ರಿಯತಮ... ಬಲಿತ ಮೈ ಮೋಹಕ ರೂಪವ ಕಾಣು ಕನ್ನಡಿಯೊಳಗೆ!... ಬರಿದು ಹೃದಯ ಬಿಂಬ ನೋಡು... ಒಳಗದೆಷ್ಟು ಮಾನವ... ಒಳಗದೆಷ್ಟು ರಾಕ್ಷಸ... ಹುಡುಗಿ ತಂದೆ... ಎಂದು ಸಾಲುಗಳನ್ನು ಹೇಳು ಹೇಳುತ್ತಾ ಸಾಬೋಳ ಗಂಟಲು ತುಂಬಿತು... ಮಾತು ಮುಂದೆ ಬಾರದಾಯಿತು.

ನಮ್ಮೂರಿನ ಗೌಡಿತಿ... ಈಗ ಗೌಡಿಗಾರಿಕೆಯಾಗಲಿ, ಹಣ ಐಶ್ವರ್ಯ ಆಗಲಿ ಉಳಿದಿಲ್ಲ ಅನ್ನು... ಆದರೆ ಲಲಮನಿಯಾಂ ನೃತ್ಯಕ್ಕೆ ಅವರು ಎಷ್ಟು ಪ್ರೋತ್ಸಾಹ ಕೊಡ್ತಾರೆ ಗೊತ್ತಾ! ಅದರ ಬಗ್ಗೆ ಅವರಿಗೆ ಉದಾರ ಭಾವನೆಯಿದೆ. ಒಂದು ಹಬ್ಬ ಹರಿದಿನ ಮದುವೆ ಮುಂಜಿ ಏನೇ ಆಗಲಿ ತಪ್ಪದೆ ಈ ಲಲಮನಿಯಾಂ ನೃತ್ಯ ಕಾರ್ಯಕ್ರಮಾನ ಇರಿಸದೆ ಬಿಡೋದಿಲ್ಲ.'

'ಅಯ್ಯೋ ನಿನಗೆ ಗೊತ್ತಿಲ್ಲ ಅಕ್ಕ. ದಿನಗಳು ಮೊದಲಿನ ಹಾಗಲ್ಲ. ಕಾಲ ಬದಲಾಗಿದೆ. ಷಹರದ ಮೋಜು ಇಲ್ಲಿನ ಜನಕ್ಕೆ ಅಂಟಿಕೊಂಡಿದೆ. ಷಹರದಿಂದಲೇ ಕುಣಿಯುವವರನ್ನೂ ಕರೆಸ್ತಾರೆ.'

'ಹೋಗೇ, ಷಹರದ ಕಲಾವಿದರಿಗೆ ಹೆದರಿಕೊಳ್ಳೋದೆ? ಗೌಡಿತಿ ಮಗ, ತನ್ನ ತಂಗಿಯರ ಮದುವೆಗೆ ಬೀಡುವಾ ಮತ್ತು ಷಹರದಿಂದ ನರ್ತಕಿಯರನ್ನು ಕರೆಸೋಣಾಂತ ಹೇಳಿದ್ದಕ್ಕೆ ಗೌಡಿತಿ ಒಪ್ಪಿದರೆ!... ಆಕೆ ಸಾಮಾನ್ಯಳಲ್ಲ!'

ಮೌಹರೋಗೆ ಈ ಮಾತು ಹಾಲು ಕುಡಿದಂತಿತ್ತು. ನಿರಾಶೆಯ ಕಾರ್ಮೋಡ ಕವಿದ ಕಣ್ಣುಗಳಲ್ಲಿ ಆಶೆಯ ಹಣತೆಯುರಿಯಿತು. ಬಾಡಿದ ಮುಖ ಅರಳಿತು.

'ಅಕ್ಕಾ ಹಾಗಾದರೆ ಮದುವೆ ಯಾವಾಗ?'

'ನಾಳೇನೇ! ನಾಳೇನೇ ಬೀಗರು ಬರ್ತಾರೆ'

ಮೌಹರೊ ಕ್ಷಣಾರ್ಧದಲ್ಲಿ ಬಂದವಳಿಗೆ ಚಹಾ ತಯಾರಿಸಿ ನೀಡಿದಳು. ಸಾಬೋ ಚಹದ ಬಟ್ಟಲನ್ನು ಸೀರೆಯ ಸೆರಗಿನಿಂದ ಹಿಡಿದು ನಿಧಾನವಾಗಿ ಕುಡಿಯತೊಡಗಿದಳು. ಕೊನೆಯ ಗುಟುಕು ಕುಡಿಯುತ್ತಿದ್ದಂತೆ ಹೇಳಿದಳು–

ನೀನೇನೂ ಚಿಂತಿಸಬೇಡ. ನಮ್ಮ ಗೌಡಿತಿ ಧಾರಾಳವಾಗಿ ಕೊಡ್ತಾಳೆ. ಬಿಚ್ಚು ಕೈಯಿ; ಬಿಚ್ಚು ಮನಸ್ಸು ಆಕೆಯದು.'

ಮೌಹರಿ ಕ್ಷೀಣವಾಗಿ ನಕ್ಕಳು. ನಂತರ ಅಕ್ಕನೊಂದಿಗೆ ನುಡಿದಳು– 'ಏನಕ್ಕಾ ಲಲಮನಿಯಾಂ ನರ್ತಿಸುವುದು ದುಡ್ಡಿಗಾಗಿ ಅಂದುಕೊಂಡೆಯಾ? ಅದು ವ್ರಜಭೂಮಿಯ ಕಲೆ. ಅದು ಸಾಯುವುದನ್ನು ನನ್ನಿಂದ ನೋಡಲಾಗುವುದಿಲ್ಲ. ನಿನಗೇ ಗೊತ್ತಿರಬಹುದು... ನನ್ನಮ್ಮ ಎಂದಾದರೂ ಹಣಕ್ಕಾಗಿ ಲಲಮನಿಯಾಂ ನರ್ತಿಸುತ್ತಿದ್ದರೇನು? ಲಲಮನಿಯಾಂ ನನ್ನಮ್ಮನ ಪ್ರಾಣವಾಗಿತ್ತು.'

'ಅಯ್ಯೋ ಅದು ನನಗೆ ಗೊತ್ತಿಲ್ವಾ?'

ಸಾಬೋ ಹೊರಟು ನಿಂತಿದ್ದನ್ನು ನೋಡಿ ಪಿಡಕಲ್‌ಗೆ ನಿರಾಶೆಯಾಯಿತು. ಮೆಲ್ಲ ಮೆಲ್ಲನೆ ಅವಳ ಹಿಂದೆ ಹೆಜ್ಜೆ ಹಾಕಿದಳು. ಆದರೂ ಅವಳಿಂದ ದೂರವೇ ಉಳಿದಳು... ಒಂದೆರಡು ಕ್ಷಣಗಳ ನಂತರ ಸಾಬೋ ಏನನ್ನೋ ಜ್ಞಾಪಿಸಿಕೊಂಡವಳಂತೆ ಹಿಂದಕ್ಕೆ ಬಂದಳು.

'ಛೆ! ನನ್ನ ಬುದ್ಧೀಗೆ!'... ಎಂದು ತನ್ನ ಹತ್ತಿರವಿದ್ದ ಪೇಡೆಗಳನ್ನು ತೆಗೆದು ಪಿಡಕಲ್‌ಗೆ ಕೊಡುತ್ತಾ ಹೇಳಿದಳು... 'ತಗೋ ಮರಿ... ಹುಷಾರಾಗಿ ಹಿಡ್ಕೋ' ಎಂದು ಹೇಳಿ. ಮತ್ತೊಮ್ಮೆ ಮೌಹರೋಗೆ 'ಹೋಗಿ ಬರುತ್ತೇನೆಂದು' ಹೇಳಿ ಅಲ್ಲಿಂದ ಹೊರಟಳು. ಪಿಡಕಲ್‌ಳ ಉತ್ಸಾಹಕ್ಕೆ ಎಣೆಯೇ ಇಲ್ಲದಾಯಿತು. ಪೇಡೆಯ ಪೊಟ್ಟಣ ಹಿಡಿದು ಕುಣಿದು ಕುಪ್ಪಳಿಸಿದಳು.

ಸಾಬೋ ಹೋದ ಮೇಲೆ ಎಷ್ಟೋ ಹೊತ್ತು ಮೌಹರೋ ಯೋಚಿಸುತ್ತಲೇ ಇದ್ದಳು. ಬೆಳಗಿನಿಂದ ಅಷ್ಟೆಲ್ಲಾ ಮಾತುಕತೆಯಾಗಿದ್ದರೂ, ಇನ್ನೂ ಅವಳಿಗೆ ಸಾಬೋಳ ಮಾತಿನಲ್ಲಿ ನಂಬಿಕೆ ಬರಲಿಲ್ಲ. ತಾನು ಕೇಳಿದ್ದು ಕನಸೋ! ವಾಸ್ತವವೋ! ಎನಿಸಿತು. ಹೀಗೇ ಇನ್ನೂ ಒಂದು ಹತ್ತೆರಡು ಹಳ್ಳಿಗಳು ಮುಂದೆ ಬಂದರೆ ಲಲಮನಿಯಾಂ ನೃತ್ಯಕ್ಕೆ ಮಾನ್ಯತೆ ಬಂದಂತೆ! ಆದರೆ!... ಆದರೆ!... ಆಸೆಯ ನಡುವೆಯೂ ನಿರಾಸೆಯೇ ಆವರಿಸಿತು... ತಾಯಿಯನ್ನು ನೆನೆನೆನೆದು ಧೈರ್ಯ ತಂದುಕೊಳ್ಳುತ್ತಿದ್ದಳು.

ಕುಂದನ್ ಸಾಹಾನ ಮಗಳ ಮದುವೆಯಲ್ಲಿ ಒಮ್ಮೆ ಏನೋ ಸಂಭವಿಸಿತ್ತು!... ಆಗ ಅಮ್ಮನ ಕಾಲವಲ್ಲ... ಆಗಿನ ಮಾತೇ ಬೇರೆ!... ಆದರೆ ಈಗ... ಹಳ್ಳಿಗಳಿಂದ

ದೂರ ಓಡಿ ಷಹರಗಳನ್ನು ಸೇರ್ತಿದ್ದಾರೆ... ಜನ!! ಅಲ್ಲಿನ ರೀತೀಲೇ ಮದುವೆ, ಮುಂಜಿಗಳನ್ನು ಮಾಡ್ತಾರೆ.

ಕುಂದನ್ ಕಾಕಾ ಹಾಗೆ ಮಾಡಲಿಲ್ಲ. ಊರಿನ ತುಂಬಾ ಬಣ್ಣ ಬಣ್ಣದ ದೀಪಗಳು! ವಿಶೇಷವಾದ ಅಂಶಗಳನ್ನು ಕುಣಿತದಲ್ಲಿ ತೋರಿಸಬೇಕು ಅನ್ನುವ ಉತ್ಸಾಹ ಎಲ್ಲ ಹುಡುಗಿಯರ ಎದೆಯುಲ್ಲಿ ಪುಟಿಯುತ್ತಿತ್ತು. ಹುಡುಗೀರು, ಮುದುಕೀರು, ಮದುವೆಯಲ್ಲಿ ಉರುಟಣೆ ಹಾಡುಗಳನ್ನು ಲಯಬದ್ಧವಾಗಿ ಹಾಡಿದರು...

ಮೌಹರೋ ತನ್ನ ಹಳೆಯ ಘಾಘರಾ ತೆಗೆದಳು. ಚೆನ್ನಾಗಿ ಒಗೆದು ಒಂದು ಚೆಂಬಿನಲ್ಲಿ ಬಿಸಿ ಬೂದಿ ತುಂಬಿ ಇಸ್ತ್ರಿ ಮಾಡಿದಳು. ಮೇಲಿನ ಹೊದಿಕೆಯನ್ನು ಇಸ್ತ್ರಿ ಮಾಡಿದ್ದೇ ನೋಡಿದಳು! ಅದರ ತುಂಬೆಲ್ಲಾ ತೂತುಗಳು!! ಜಾಗರೂಕತೆಯಿಂದ ತೆಗೆದು ಸೂಜಿಯಿಂದ ಹರಿದ ಎಳೆಗಳನ್ನೆಲ್ಲಾ ಕುಶಲತಾ ಪೂರ್ವಕವಾಗಿ ಹೊಲಿದಳು. ಹರಿದು ಚಿಂದಿಯಾಗಿದ್ದಂತಹ ತನ್ನ ಬಟ್ಟೆಯನ್ನು ನೋಡಿದಾಗ, ಮದುವೆಗೆ ಬಂದಿರುವ ನೆಂಟರಿಷ್ಟರಿಂದ ಬಟ್ಟೆಯನ್ನು ಎರವಲು ಪಡೆಯುವ ಯೋಜನೆ ಮಾಡಿದಳು. ಆದರೆ ಅವಳಿಗೆ ಏನನ್ನಿಸಿತೋ ಸುಮ್ಮನಾದಳು. ಸುರಮಾ, ಬಿಂದಿಗಳಿಂದ ತನ್ನನ್ನು ಅಲಂಕರಿಸಿಕೊಂಡಳು. ಕೈಯಲ್ಲಿ ಕನ್ನಡಿ ಹಿಡಿದು ಮಾಳಿಗೆ ಮೇಲೆ ಹೋಗಿ ಎಲ್ಲರಿಗೂ ತಾನು ಚೆನ್ನಾಗಿ, ಸರಿಯಾಗಿ ಕಾಣುವಂತಹ ಜಾಗದಲ್ಲಿ ನಿಂತಳು. ನಾಪಿತನ ಹೆಂಡತಿ ಗಂಗಾ ಢೋಲಕದ ಮೇಲೆರೆಡು ತಟ್ಟಿದಳು. ಹಾಡನ್ನು ಆರಂಭಿಸಿದಳು... 'ನೋಡು ಪ್ರಿಯತಮಾ ಲಲಮನಿಯಾಂ... ಎಂದು ಹಾಡಿಗೆ ಸರಿಯಾಗಿ ನರ್ತಿಸತೊಡಗಿದಳು. ಒಂದೆರಡು ನುಡಿ ಹಾಡಿರಬಹುದು... ಕುಂದನ್ ಕಾಕಾನ ಮಗ(ಇನ್ಸ್‌ಪೆಕ್ಟರ್) ತಕ್ಷಣ ಅಲ್ಲಿಗೆ ಬಂದವನೇ ಅಬ್ಬರಿಸಿದ– 'ಏಯ್ ಮೌಹರೋ! ಯಾರು ನಿನಗೆ ಕುಣಿಯೋಕೆ ಹೇಳಿದ್ದು? ನೋಡ್ತಿಲ್ವಾ? ಬಂದಿರುವ ನೆಂಟರಿಷ್ಟರ ಮುಂದೆ ಈ ದರಿದ್ರ ಕುಣಿತ!!... ನಮ್ಮ ಮರ್ಯಾದೆ, ಗೌರವ ಹಾಳು ಮಾಡೋಕೆ ಬಂದೆಯೇನೆ... ಯಾವಳೇ ಅವಳು? ಏ ಗಂಗಾ... ಸಾಕು ಮಾಡು ನಿನ್ನ ಢೋಲಕ್.'

ನೋಡಿದಳು! ಗಂಗಾಳ ಕೈ ನಡುಗುತ್ತಿದೆ! ಕೆಳಗೆ ತನ್ನ ಕಾಲುಗಳು ಥರಥರ ಕಂಪಿಸುತ್ತಿವೆ. ನಿಟ್ಟುಸಿರೆಳೆದು ಹೋಗಿ ಅಲ್ಲಿಯೇ ಇದ್ದ ಕಂಬಿ ಮೇಲೆ ಹೋಗಿ ಕುಳಿತುಕೊಂಡಳು.

ಕೆಳಗೆ ಬಾಜಾ ಬಜಂತ್ರಿಗಳ ನಡುವೆ ಗಂಡಿನ ಕಡೆಯ ನೆಂಟರಲ್ಲಿನ ಹುಡುಗ ಹುಡುಗಿಯರು ಸೆರಗು, ಘೂಂಘಟ್‌ಗಳಿಲ್ಲದೆ ನಿರ್ಲಜ್ಜರಾಗಿ ಮೈ ಮರೆತು ಕುಣಿಯುತ್ತಿದದರು. ಧ್ವನಿವರ್ಧಕದ ಮೂಲಕ ಚುಮ್ಮಾ... ಚುಮ್ಮಾ... ಹಾಡು ಕೇಳಿಸುತ್ತಿತ್ತು.

ಆ ರಾತ್ರಿ ಉಪವಾಸ ಮಲಗಿದಳು. ಮದುವೆ ಮನೆಯಿಂದ ತಿಂಡಿಗಳು ಬಂದಿದ್ದವು. ಆದರೆ ಅವಳಿಗೆ ತಿನ್ನಲು ಮನಸ್ಸು ಬರಲಿಲ್ಲ. ಪಿಡಕಲ್‌ಳನ್ನೂ ಎಬ್ಬಿಸಲಿಲ್ಲ...

ಅಮ್ಮನ ನೆನಪಾಯಿತು... ನಾಲ್ಕೈದು ವರ್ಷಗಳಲ್ಲಿ ಎಷ್ಟೊಂದು ಬದಲಾವಣೆ!!!... ಒಳ್ಳೆಯದಾಯಿತು ಅಮ್ಮ ಸತ್ತು ಹೋದದ್ದು!

ಇಂತಹ ಅನುಭವ ಅದೇ ಮೊದಲ ಸಲವಲ್ಲ. ಅನೇಕ ಸಲ ಆಗಿದೆ.

ಆದರೆ ಈಗ... ಲಲಮನಿಯಾಂ ನರ್ತಿಸಲು ತನಗೆ ಆಹ್ವಾನ!!... ಖಂಡಿತಾ ಈ ಸಲ ಹೇಗೆ ಕುಣೀಬೇಕೆಂದರೆ ಎಲ್ಲರೂ ದಂಗು ಬಡಿದಂತಾಗಬೇಕು. ಎಷ್ಟು ಅದ್ಭುತವಾಗಿರಬೇಕಂದ್ರೆ– ಸಲೀಮಾಳ ಹಾಡನ್ನು, ಬೀಡುವಾದ ಕುಣಿತವನ್ನೆಲ್ಲಾ ಮರೆಯುವ ಹಾಗೆ ಮಾಡಬೇಕು... ತನ್ನ ತನು ಮನಗಳನ್ನೆಲ್ಲ ದುಡಿಸಿ ನರ್ತಿಸಬೇಕು... ನಿಜ! ಆದರೆ ತನಗೆ ಉಡಲು ಲಂಗ? ಇರುವ ಲಂಗದ ಮೈ ತುಂಬಾ ರಂಧ್ರಗಳು! ಜರಡಿಯ ಹಾಗಿದೆ!! ಕೈಯಲ್ಲಿ ಬಳೆ ಇಲ್ಲ. ಕರೀದಾರವನ್ನೇ ಸುತ್ತಿಕೊಳ್ಳಬೇಕು... ಸಾಜೊಗೆ ಇದೆಲ್ಲ ಗೊತ್ತಿಲ್ಲವೇನು? ನನ್ನಂತಹವರ ಕೈಯಲ್ಲಿ ಲಲಮನಿಯಾಂ ನರ್ತಿಸಲು ನೋಡುತ್ತಿರುವಳಲ್ಲ!! 'ಜಾಟ' ಜಾತಿಯ ಕರ್ಮವೇ ಇದು? ಇಲ್ಲ ಅಮ್ಮನಿಗಿದ್ದ ಸಾಮರ್ಥ್ಯ ನನಗಿಲ್ಲವಾಯಿತೇ?!... ಯೋಚಿಸಿದಳು.

ಅದೇ ಸಮಯದಲ್ಲಿ ಪಿಡಕಲ್, ನಿದ್ದೆಯಿಂದ ಎದ್ದವಳೇ ಕೇಳಿದಳು... 'ಅಮ್ಮ... ಅಮ್ಮ... ನಮ್ಮಪ್ಪ... ನಮ್ಮಪ್ಪ ಸತ್ತು ಹೋಗಿದ್ದಾರಂತೆ..... ಹೌದೇನಮ್ಮಾ? ರಧಿಯಾ ಈ ದಿವಸ ಹೇಳಿದಳು'

'ಥತ್... ಇವಳೇ! ಸುಮ್ಮನೆ ತೆಪ್ಪಗೆ ಮಲಕ್ಕೊ'

'ದಿನೇಸಾ ಹೇಳ್ತಿದ್ದ.... ನಿನ್ನಪ್ಪ, ನಿನ್ನ ಅಮ್ಮನ ಮೇಲೆ ಸಿಟ್ಟು ಮಾಡ್ಕೊಂಡು ಹೊರಟು ಹೋದ!... ನಿಜವೇನಮ್ಮ?'

'ಹೌದು' ಮುಗಿದು ಹೋದ ಕತೆ ಎನಿಸಿ ಹೂಂಗುಟ್ಟಿದಳು.

'ಯಾಕಮ್ಮ ಕೋಪ ಮಾಡ್ಕೊಂಡಿದ್ದು? ನೀನೇನಾದರೂ ಬೈದೆಯಾ?'

'ಬಾಯಿ ಮುಚ್ಚಿ ಮಲಗು. ಇವತ್ತು ಇದೆಲ್ಲ ನಿನ್ನ ತಲೆಗೆ ಹೇಗೆ ಬಂತು? ಚೋಟುದ್ದದ ಹುಡುಗಿ! ಅತಿಯಾಯಿತು ನಿಂದು!' ಪಿಡಕಲ್ ಮತ್ತೆ ತೆಪ್ಪನೆ ಮಲಗಿದಳು.

ಕತ್ತಲಿನ ನಡುವೆ ಹಳದಿ ಬೆಳಕಿನ ಕಿರಣಗಳು ಹರಡಿದ್ದವು. ಗೋಡೆಯ ಮೇಲೆ ಬಿದ್ದಿದ್ದ ತನ್ನ ನೆರಳನ್ನು ಪಿಡಕಲ್ ಒಂದೇ ಸಮನೆ ದಿಟ್ಟಿಸುತ್ತಿದ್ದಳು. ಮೆಲ್ಲನೆ ಹೇಳಿದಳು... 'ಅಮ್ಮ ನೋಡಿದೆಯಾ...'

ಅಮೂಲ್ಯವಾದ ಆಸ್ತಿಯನ್ನು ಹುಡುಕುತ್ತಿರುವಂತೆ ಮೌಹರೋ ಯಾವುದೋ ಒಂದು ಗಂಟನ್ನು ಹುಡುಕುವುದರಲ್ಲಿ ಮಗ್ನಳಾಗಿದ್ದಳು. ಪಿಡಕಲ್ ಮಾತಿನ ಕಡೆ ಲಕ್ಷ್ಯ ಕೊಡಲಿಲ್ಲ.

ಪಿಡಕಲ್ ಹಾಡೊಂದನ್ನು ಗುನುಗುನಿಸಿದಳು...

'ಎಲ್ಲರಿಗಿರುವನು ಅಪ್ಪ... ನನಗೆ ಇಲ್ಲ ಅಪ್ಪ... ರಥಿಯಾನಪ್ಪ, ದಿನೇಸನಪ್ಪ... ಅಪ್ಪನೇ ಇಲ್ಲ ಪಿಡಕಲ್‌ಗೆ... ಪಿಡಕಲ್‌ಗಿಲ್ಲ ಅಪ್ಪ... ಅಪ್ಪ.'

ಅವಳ ಕಡೆ ಮುಖ ಮಾಡಿ ನೋಡಿದಳು. ಇವತ್ತು ಇವಳಿಗೆ ಅಪ್ಪನ ದೆವ್ವ ಹಿಡಿದ ಹಾಗಿದೆ. ಆದರೆ ಅಪ್ಪನ ವಿಚಾರ ಇವಳ ತಲೆಗೆ ಬಂದದ್ದಾದರೂ ಹೇಗೆ? ಇವತ್ತು ಯಾರಿಂದಲೋ ವಿಷಯ ತಿಳಿದು ಬಂದಿರಬೇಕು. ಜನ ಇದ್ದಾರಲ್ಲ!! ಇವಳ ಮುಖ ನೋಡಿ ಅಂದಿರಬೇಕು... 'ಅಯ್ಯೋ ಪಾಪ! ಇವಳಂತೂ ಅಪ್ಪನ ಮುಖಾನೇ ನೋಡಿಲ್ಲ' ಅಂತ ನಿಟ್ಟುಸಿರು ಬಿಟ್ಟಿರಬೇಕು.

ಒಲೆ ಮೇಲೆ ಜೋಳದ ಕಾಳು ಬೇಯುತ್ತಿತ್ತು. ಮರದ ಸೌಟನಿಂದ ಕಲಿಸಿ ಅಗುಳನ್ನು (ಕಾಳನ್ನು) ಬೆಂದಿದೆಯೋ ಎಂದು ಹಿಸುಕಿ ನೋಡಿದಳು. ಒಂದು ಸಣ್ಣ ಬಟ್ಟಲಲ್ಲಿ ಒಂದು ಸೌಟು ಬೆಂದ ಜೋಳದ ಅನ್ನವನ್ನು ಹಾಕಿಕೊಂಡು ಪಿಡಕಲ್ ಬಳಿಗೆ ಒಯ್ದಳು... ಮುದ್ದಿನಿಂದ ಹೇಳಿದಳು– ಏಳು ಮರಿ... ಎದ್ದು ಸ್ವಲ್ಪ ಊಟ ಮಾಡು, ಈಗಲೇ ನೋಡು ಮೂಳೆಯೆಲ್ಲಾ ಬಿಟ್ಕೊಂಡಿದ್ದೀಯಾ!

ಪಿಡಕಲ್‌ಗೆ ನಿದ್ದೆ ತಡೆಯಲಾಗುತ್ತಿರಲಿಲ್ಲ. ಆದರೂ ವಿಧೇಯಳಂತೆ ತಟ್ಟೆ ಮುಂದೆ ಕೂತು ತೂಕಡಿಸುತ್ತಲೇ ಪ್ರಯತ್ನಪೂರ್ವಕವಾಗಿ ಒಂದೊಂದು ಮುದ್ದೆಯನ್ನೂ ಉಫ್ ಉಫ್ ಎಂದು ಊದಿ ಕಣ್ಣುರಿಸುತ್ತಾ ತಿನ್ನುತ್ತಿದ್ದಳು. ಹಾಗೂ ಹೀಗೂ ಊಟ ಮುಗಿಸಿ, ನೀರು ಕುಡಿದು ತಟ್ಟೆ ತೆಗೆದುಕೊಂಡು ಹೋಗಿ ಬಚ್ಚಲಲ್ಲಿ ಇರಿಸಿ ಬಂದಳು.

ಮೌಹರೊ ಮಗಳ ಜತೆಗೇ ಹೋಗಿ ಮಂಚದ ಮೇಲೆ ಕುಳಿತಳು. ಪಿಡಕಲ್ ತಲೆಯ ಮೇಲೆ ಕೈಯಿಟ್ಟು ಮೆಲ್ಲಗೆ ಅವಳ ಮೃದುವಾದ ಕೂದಲನ್ನು ನೇವರಿಸುತ್ತಾ ಹೇಳಿದಳು– ನಿದ್ದೆ ಮಾಡು ಮಗು. ಬೆಳಿಗ್ಗೆ ಬೇಗ ಏಳಬೇಕು. ಸಾಬೋ ದೊಡ್ಡಮ್ಮನ ಜೊತೆ ತಾಹರಪುರಕ್ಕೆ ಹೋಗಬೇಕಾಗಿದೆ. ಮಗಳು ತಾಯಿಯ ಎದೆಗೆ ತಲೆ ಆನಿಸಿ ಕ್ಷೀಣವಾದ ಧ್ವನಿಯಲ್ಲಿ ಹೇಳಿದಳು– 'ಅಮ್ಮ ನನಗೆ ನಡಿಯೋಕೆ ಆಗೊಲ್ಲ. ದಾರೀಲೆಲ್ಲ ಮುಳ್ಳು. ಈ ಸಲ ರಥಿಯಾ ತನ್ನ ಚಪ್ಪಲಿ ನನಗೆ ಕೊಡೋದಿಲ್ಲಾಂತ ಹೇಳ್ತಾಳು ಅವಳು ನನ್ನ ಜೊತೆ 'ಟೂ' ಬಿಟ್ಟಿದ್ದಾಳೆ.'

'ಹಾಗೇನಿಲ್ಲ ಮಗು. ನಿನಗೆ ನಡೀಲಿಕ್ಕೆ ಆಗಿದಿದ್ದರೆ ನಾನು ನಿನ್ನನ್ನ ಎತ್ತಿಕೊಳ್ಳುತ್ತೇನೆ.'

'ಅಮ್ಮಾ ಸಾಬೋ ದೊಡ್ಡಮ್ಮ ಹೇಳ್ತಿದ್ದರು... ಮದುವೇಲಿ ಒಳ್ಳೊಳ್ಳೆ ತಿಂಡಿ ಸಿಗುತ್ತೇಂತ... ಹೌದೇನಮ್ಮ? ದಿನೇಸಾ ನನಗೆ ತೋರಿಸಿ ತೋರಿಸಿ ತಿಂತಾನೆ.'

ಮೌಹರೋಗೆ ಮಗಳ ಮಾತುಗಳನ್ನು ಕೇಳುತ್ತಿದ್ದಂತೆ ಪ್ರೀತಿ ಉಕ್ಕಿ ಬಂತು. ಹರಿದ ತುಂಡು ಬಟ್ಟೆಯೊಂದನ್ನು ಮಂಚದ ಮೇಲೆ ಹಾಸಿ, ಮಲಗಿಸಿದಳು. ಮಗಳನ್ನು ಸುಮಾರು ಹೊತ್ತು ಅವಳಿಗೆ ನಿದ್ದೆ ಬರುವವರೆಗೂ ಜೋ ತಟ್ಟುತ್ತಲೇ ಇದ್ದಳು.

ಒಂದೆರಡು ತುತ್ತನ್ನು ತಾನೂ ತಿಂದು ಹಾಗೇ ಮೈಚಾಚಿ ಕನಸುಗಳಿಗೆ... ನೆನಪುಗಳಿಗೆ ಇಳಿದಳು...

ತಾಯಿಯ ಧೈರ್ಯ ತನ್ನಲ್ಲಿ ಅಡಿಯಿಂದ ಮುಡಿವರೆಗೆ ಹರಿಯಬೇಕೆಂದು ಆಶಿಸಿದಳು.

ಅಮ್ಮನ ಒಡಹುಟ್ಟಿದ ಅಕ್ಕತಂಗಿಯರು ನಾಲ್ಕು ಮಂದಿ. ಒಬ್ಬರಿಗಿಂತ ಒಬ್ಬರು ಚೆಲುವೆಯರು!... ಕಲಾವಿದರು! ಆದರೆ ಅಮ್ಮನ ಹಣೆ ಬರಹ. ದರಿದ್ರ ಗಂಡನಿಗೆ ಗಂಟುಬಿದ್ದಳು. ದರಿದ್ರನಾಗಿರುವುದರ ಜೊತೆಗೆ ರೋಗಿ ಕೂಡಾ! ಯಾವಾಗಲೂ ಹೊಟ್ಟೆ ಉಬ್ಬುತ್ತಿತ್ತು. ಜನ ಅದಕ್ಕೇ ಅವನಿಗೆ ಹೊಟ್ಟೆ ಡುಬ್ಬ ಅಂತ ಅಡ್ಡ ಹೆಸರು ಬೇರೆ ಇಟ್ಟಿದ್ದರು. ಜಾಟನಾಗಿ ಹಣ ಇಲ್ಲದ್ದಕ್ಕಾಗಿ ಹೀಗೆಲ್ಲಾ ಲೇವಡಿಗೆ ಒಳಗಾಗಬೇಕಿತ್ತು. ಹಣ ಇದ್ದಿದ್ದ ಪಕ್ಷದಲ್ಲಿ ಠಾಕುರ್ ಅಂತ ಕರೆಸಿಕೊಳ್ಳಬಹುದಾಗಿತ್ತು. ಠಾಕೂರ್ ರಾಮುಸಿಂಹನಾಗಿ ಚಲಾವಣೆಯಾಗದೆ ಹೊಟ್ಟೆ ಡುಬ್ಬ ರಾಮುಸಿಂಹ ಅಂತ ಕರೆಸಿಕೊಂಡಿದ್ದ.

ಗಂಡನ ಚಿಕಿತ್ಸೆಗೆ ಅಮ್ಮನ ಹತ್ತಿರ ಇದ್ದ ಹಣ, ಬೆಳ್ಳಿ ಎಲ್ಲ ಖರ್ಚಾಯಿತು. ಗಿಲೀಟಿನ ಕಾಸಿನ ಹಾರ ಹಾಕಿಕೊಂಡೇ ಲಲಮನಿಯಾಂ ನರ್ತಿಸಬೇಕಾಯಿತು. ಅಮ್ಮನಿಗೆ ಲಲಮನಿಯಾಂ ಕೇವಲ ಕುಣಿತವಾಗಿರಲಿಲ್ಲ. ಅವಳಿಗೆ ಅದೊಂದು ಯೋಗ! ತಪಸ್ಸು!- ಎಂಬ ಭಾವನೆ. ಲಲಮನಿಯಾಂ ನರ್ತನಕ್ಕೆ ಬರುತ್ತಿದ್ದ ಸಂಭಾವನೆ ಅವಳಿಗೆ ದೇವರ ಪ್ರಸಾದವಾಗಿತ್ತು.

ಆ ದಿನ... ಇನ್ನೂ ನೆನಪಿದೆ. ತಂದೆ ಸತ್ತು ಬಿದ್ದಿದದ್ದರು. ಅಮ್ಮನ ಮುಂದೆ ಹೆಣ! ಆದರೆ ಅದೇ ದಿನ ಒಂದು ಹಳ್ಳೀಲಿ ಅಮ್ಮನಿಗೆ ಲಲಮನಿಯಾಂ ನರ್ತಿಸಲು ಹೋಗಬೇಕಿತ್ತು. ಮನೇಲಿ ಹೆಣ ಇಟ್ಟುಕೊಂಡು ಹೇಗೆ ಹೋಗೋದು? ಹೊಟ್ಟೆ ಹಿಸುಕಿಕೊಂಡು ಎದೆ ಬಡಿದುಕೊಂಡು ಎಲ್ಲರ ಮುಂದೆ ಅಳುವುದು ಅನಿವಾರ್ಯವಾಗಿತ್ತು!... ಪಕ್ಕಕ್ಕೆ ಕರೆದು ಮಗಳನ್ನು, ಕಿವೀಲಿ ಹೇಳಿದಳು- 'ಮಗಳೇ ಇವತ್ತು ನೀನೇ ಹೋಗಿ ನನ್ನ ಬದಲಿಗೆ ಲಲಮನಿಯಾಂ ತೋರಿಸಿ ಬರುತ್ತೀಯ?... ಅಲ್ಲದೆ ಅಲ್ಲಿ ಕೊಡೋ ತಿಂಡಿ ಭಕ್ಷ್ಯಗಳು ಒಂದೆರಡು ದಿವಸಕ್ಕಾದರೂ ನಮ್ಮ ಹಸಿವನ್ನು ದೂರ ಇಡುತ್ತೆ' ಅಂದಿದ್ದಳು.

'ದಿನ ದಿನಾ ಊಟ ಸಿಗುವ ಅದೃಷ್ಟ ತಮಗೆಲ್ಲಿಯದು!'... ಅಮ್ಮನ ಮಾತಿನಂತೆ ಹೊರಟವಳು. ಸ್ವಲ್ಪ ಹೊತ್ತಿನಲ್ಲಿ ಬರಿಗೈಲಿ ಬಂದಳು. ಅಷ್ಟು ಹೊತ್ತಿಗೆ ದಹನ ಸಂಸ್ಕಾರ ಮುಗಿದಿತ್ತು. ಅಮ್ಮ ಹೆಂಗಸರ ನಡುವೆ ಕುಳಿತಿದ್ದಳು. ಅತ್ತು ಅತ್ತು ಮುಖ ಕೆಂಪಾಗಿತ್ತು. ಬಂದ ಮಗಳ ಕಡೆ ತಲೆ ಎತ್ತಿ ಹೇಳಿದಳು. 'ತಂದಿರೋದನ್ನ ಒಳಗಿಡು.' ಮಗಳಿಗೆ ಏನು ಹೇಳಬೇಕೊ ತಿಳಿಯಲಿಲ್ಲ. ಆದರೂ ಹೇಳಿದಳು. "ಏನೂ ಕೊಡಲಿಲ್ಲ

ಅಮ್ಮ. ಮನೆಯ ಯಜಮಾನಿ ಮದುವೆಯಂತಹ ಶುಭ ಕಾರ್ಯಕ್ಕೆ ಮಾಡಿದ ತಿಂಡಿಗಳನ್ನು ಸಾವಿನ ಸೂತಕದ ಮನೆಗೆ ಕಳಿಸೊಲ್ಲ' ಅಂದಳು. ಅಮ್ಮ ಅಳತೊಡಗಿದಳು. ನನಗೆ ಅಂದು ಅವಳು ಅತ್ತದ್ದು ಯಾಕೆಂದು ಇನ್ನೂ ಅರ್ಥವಾಗಿಲ್ಲ. ಮಕ್ಕಳು ಹಸಿವಿನಿಂದ ಸಾಯುತ್ತಾರೆಂತಲೇ? ಇಲ್ಲ ಅಪ್ಪ ಸತ್ತು ಹೋದರೆಂದೇ? ಅಥವಾ ಪಟ್ಟ ಕಷ್ಟಕ್ಕೆ ಕೂಳೂ ಸಿಗಲಿಲ್ಲವೆಂದೇ? ಅವಳ ಅರ್ಥದ ಪ್ರಸಾದ ಇಲ್ಲವಾಯಿತೆಂದೇ?

ಅಮ್ಮನ ಮನಸ್ಸು ಅರ್ಥವಾಗಲಿಲ್ಲ. ದಿನೇ ದಿನೇ ಕ್ಷೀಣಿಸುತ್ತಿದ್ದಳು. ಶೋಕವೇ? ರೋಷವೇ?

ಒಂಬತ್ತನೇ ವಯಸ್ಸಿನಷ್ಟು ಹೊತ್ತಿಗೆ ಅಮ್ಮ ಅದ್ಭುತವಾಗಿ ಲಲಮನಿಯಾಂ ನರ್ತಿಸಲು ಕಲಿತಿದ್ದಳು. ಅಮ್ಮನ ಲಲಮನಿಯಾಂ ನರ್ತನ ಪಕ್ಕದ ಊರುಗಳಲ್ಲೆಲ್ಲಾ ಹೆಸರಾಗಿತ್ತು. ಲಲಮನಿಯಾಂ ವಿಚಾರವಾಗಿ ಅಮ್ಮನ ಮಾತು ಕಡೇ ಮಾತಾಗಿತ್ತು. ತನ್ನ ಕಲೆಯ ಜೊತೆಗಿನ ಆತ್ಮೀಯತೆ ಬಡತನವನ್ನು ಮರೆಸಿತ್ತು. ಕೆಂಪು ಲಂಗ, ಹಳದಿ ಮೇಲ್ಮುಸುಕು. ಬೆಳ್ಳಿಯ ಒಡವೆ ಮೈತುಂಬಾ ಧರಿಸಿ ನರ್ತಿಸಲು ತೊಡಗಿದರೇ ಊರಿಗೆ ಊರೇ ಮೈಮರೆತು ನಿಲ್ಲುತ್ತಿತ್ತು. ತುಂಬಾ ಗೌರವದಿಂದ ಕಾಣುತ್ತಿದ್ದರು ಜನ ಅಮ್ಮನನ್ನು. ಬೀಗರಿಗೆ ಬಂಧುಗಳಿಗೆ ಮುಯ್ಯಿ ಮಾಡುವಂತೆಯೇ ಅಮ್ಮನಿಗೂ ಮುಯ್ಯಿ ಸಲ್ಲುತ್ತಿತ್ತು. ಉರಿನ ಹೆಣ್ಣು ಮಕ್ಕಳೆಲ್ಲ ಈ ಲಲಮನಿಯಾಂ ನೃತ್ಯವನ್ನು ಕಲಿತರೆ ಎಷ್ಟು ಚೆನ್ನ ಎಂದು ಆಶಿಸುತ್ತಿದ್ದಳು. ಲಲಮನಿಯಾಂ ನೃತ್ಯಕ್ಕೆ ಒದಗಿದ ದುಸ್ಥಿತಿಗೆ ಮರುಗುತ್ತಿದ್ದಳು. ಇದಕ್ಕೆ ಕಾರಣವಾದ ಸಿನೇಮಾವನ್ನು ಶಪಿಸುತ್ತಿದ್ದಳು. ಮಂಗಳ ಕಾರ್ಯಗಳಲ್ಲಿ, ಶುಭ ಸಂದರ್ಭಗಳಲ್ಲಿ ಮಂಗಳ ಗೀತೆಗಳಿಗೆ ಬದಲಾಗಿ ಸಿನೇಮಾ ಹಾಡುಗಳನ್ನು... ಜಾದೂಗಾರ ಸೈಯಾಂ ಛೋಡ ಮೋರಿ ಬಹಿಯಾಂ... ಇತ್ಯಾದಿಗಳನ್ನು ಹಾಡುವ ಹೆಣ್ಣುಮಕ್ಕಳನ್ನು ಬಾಯ್ತುಂಬ ಬಯ್ಯುತ್ತಿದ್ದಳು. ಮದುವೆ ಮನೆಯಲ್ಲಿ ಬಂದ ಬೀಗರ ಸ್ವಭಾವವನ್ನು ತಿಳಿದುಕೊಂಡು ಅದನ್ನೇ ಹಾಡು ಕಟ್ಟಿ ಹಾಡುವುದು, ಹಾಡಿ ನರ್ತಿಸುವುದರಲ್ಲಿ ಅವರಿವರೆಂದು ಭೇದ ಮಾಡದೆ ಯಾರು ಕರೆದರಲ್ಲಿಗೆ ಹೋಗಿ ನರ್ತಿಸಿ ಬರುತ್ತಿದ್ದಳು!

ಅಣ್ಣನಿಗೆ ಮದುವೆಯಾಗಿರಲಿಲ್ಲ. ಮದುವೆಯಾಗದ್ದಕ್ಕಾಗಿ ಅವನೋ ಯಾವಾಗಲೂ ಸಿಡಸಿಡ ಎನ್ನುತ್ತಿದ್ದ. ಮಾತು ಮಾತಿಗೆ ರೇಗುತ್ತಿದ್ದ. ಅದೇ ದಿನಗಳಲ್ಲಿ ಅಮ್ಮನ ಲಲಮನಿಯಾಂಗೆ ಬಹಳ ಬೇಡಿಕೆಯಿತ್ತು. ಆದರೆ ಅಣ್ಣನಿಗೆ ಅಮ್ಮ ಹೋಗಿ ಲಲಮನಿಯಾಂ ಪ್ರದರ್ಶಿಸುವುದು ಹಿಡಿಸುತ್ತಿರಲಿಲ್ಲ. ಅವಳನ್ನು ಚೆನ್ನಾಗಿ ಥಳಿಸುತ್ತಿದ್ದ.

'ಬೇವಾರ್ಸಿ... ಸ್ವಲ್ಪಾನೂ ಭಯ ಬೇಡ... ಕಂಡ ಕಂಡವರ ಮುಂದೆ ದರಿದ್ರ ಜಾತಿಯವರ ಮುಂದೆಲ್ಲ ಹೋಗಿ ಕುಣಿಯೋಕೆ ನಿನಗೆ ನಾಚಿಕೆ ಇಲ್ಲ? ನೆಂಟರಿಷ್ಟರು ಏನೆಂದುಕೊಂಡಾರು? 'ಜಾಟ' ಜಾತಿಯಲ್ಲಿ ಹುಟ್ಟಿ ಕುಣಿಯೋವಳಾಗಿದ್ದೀಯಾ? ಯಾವ ತಾಯಿಯಾದರೂ ಮಗನ ಮದುವೆ ಯೋಚನೆ ಬಿಟ್ಟು...'

ಅಮ್ಮನ ಕೋಪ ತಡೆಯಲಾಗಲಿಲ್ಲ.

"ಪಾಪ ಬಡಪಾಯಿಗಳ ಮದುವೇಲಿ ಲಲಮನಿಯಾಂ ನರ್ತಿಸಿದರೆ ನಿನಗಾದ ನಷ್ಟವೇನೋ? ಇದು ಬಿಟ್ಟರೆ ಕೊಡೋಕೆ ನಮ್ಮಲ್ಲಿ ಏನಿದೆ? ನಾನೇನು ಯಾವುದಾದರೂ ಸಾವಿನ ಶೋಕದಲ್ಲಿ ಕುಣೀತಿದೀನಾ? ಪಾಪ ಅವನ, ಆ ಕುರುಬನ ಮಗಳ ಮದುವೇಲಿ ಯಾವುದೇ ಸಂಭ್ರಮ ಇರಲಿಲ್ಲ. ಬರೀ ಮೌನ. ನನಗೆ ತಡೆಯಲು ಆಗಲಿಲ್ಲ. ಆ ಕ್ಷಣ ನನಗೆ ಜಾತಿ, ಕುಲ, ಪ್ರತಿಷ್ಠೆ ಒಂದೂ ನೆನಪಿಗೆ ಬರಲಿಲ್ಲ. ಅಷ್ಟು ಹೊತ್ತಿಗೆ ಜಫರಾ ವಾದ್ಯ ತಗೊಂಡು ಬಂದು ನುಡಿಸತೊಡಗಿದ. ಅವನು ನುಡಿಸುವ ಲಯಕ್ಕೆ ನಾನು ನರ್ತಿಸತೊಡಗಿದೆ. ನನಗೆ ಗೊತ್ತಿರಲಿಲ್ಲ. ನನ್ನ ಸುಪುತ್ರ 'ಜಾಟ' ಜನಾಂಗದಲ್ಲಿ ಹುಟ್ಟಿದ ತನ್ನನ್ನು ಇಂದ್ರ ಚಂದ್ರ ಅಂತ ಭಾವಿಸಿ ಕುಳಿತಿದ್ದಾನೆ ಅನ್ನೋದು ಇಲ್ಲೀವರೆಗೆ ತಿಳಿದಿರಲಿಲ್ಲ. ನನಗೆ ಇನ್ನೂ ನೆನಪಿರೋದೊಂದೆ, ಬಂದಿದ್ದ ಬೀಗರು ದೇವರಂತಹ ಮನುಷ್ಯರು ಅನ್ನೋದು. ಅಪ್ಪಾ! ದೊಡ್ಡ ಮನುಷ್ಯ, ನೀನು ನನ್ನನ್ನು ಏನು ಬೇಕಾದರೂ ತಿಳಿದುಕೋ, ನಿನಗೆ ಬೇಕಾದ ತ್ರಿಲೋಕ ಸುಂದರಿಯನ್ನು ಆರಿಸಿಕೊಂಡು ಬಂದು ಮದುವೆಯಾಗು' ಎಂದು ಕೂಗಾಡಿದಳು.

ತಾಯಿಗೆ ವಯಸ್ಸಾದಂತೆ ಮೌಹರೋ ಲಲಮನಿಯಾಂ ಜವಾಬ್ದಾರಿಯನ್ನು ವಹಿಸಿಕೊಂಡಳು. ದಿನದಿನಕ್ಕೆ ಹೆಚ್ಚುತ್ತಿದ್ದ ಅವಳ ಸೌಂದರ್ಯ, ಅವಳ ಕಲೆ ಜನರನ್ನು ದಂಗುಬಡಿಸುತ್ತಿತ್ತು. ಅವಳಲ್ಲಿ ಅವಳ ತಾಯಿಯ ಪ್ರತಿರೂಪವನ್ನೇ ಕಾಣುತ್ತಿದ್ದರು.

ಮದುವೆ ಮಂದಿಯಂತೂ ಮೌಹರೋ ಬಗ್ಗೆಯೇ ವಿಚಾರಿಸುತ್ತಿದ್ದರು. ಎಷ್ಟೋ ಸಲ ನಕ್ಕು ಹೇಳುತ್ತಿದ್ದರು. 'ಬೀಗರಿಗೆ ವರದಕ್ಷಿಣೆ ಹಣ ಎಣಿಸಿಕೊಡುವಾಗ ಮೌಹರೋ ಬರಬೇಕು. ನಮಗೆ ಯಾವ ತೊಂದರೆಯೂ ಇರೋದಿಲ್ಲ' ಎಂದು.

ಮೌಹರೋಳನ್ನು ನೋಡುವುದರಲ್ಲಿ ತಾವೇನು ಮಾಡುತ್ತಿದ್ದರೂ ಮರೆತು ಕೂರುತ್ತಿದ್ದರು. ಬೀಗರನ್ನು ಮೂರ್ಖರನ್ನಾಗಿ ಮಾಡಿ, ತನ್ನ ಸೀರೆ ಸೆರಗಿನಲ್ಲಿ ಬಂಧಿಸಬಲ್ಲ ಸಾಮರ್ಥ್ಯ ಅವಳಿಗಿತ್ತು. ಎಷ್ಟು ಜನ ಅವಳಿಗೆ ಬೇಸ್ತು ಬಿದ್ದರೋ ದೇವರೇ ಬಲ್ಲ.

ಜೋಗೇಸನನ್ನಂತೂ ಪೂರ್ತಿ ಮರುಳು ಮಾಡಿದಳು! ಒಂದು ಸಲ ಮಾನಸಿಂಹನ ಮಗಳು ವಿಮಲಾಳ ಮದುವೆ ಇತ್ತು. ಬಂದ ನೆಂಟರಿಷ್ಟರಿಗೆ 'ಲಸ್ಸಿ'(ಮಜ್ಜಿಗೆ)ಯನ್ನು ಕುಡಿಯಲು ಹಂಚುತ್ತಿದ್ದರು. ಘಾಘರಾ, ಬಣ್ಣ ಬಣ್ಣದ ಬಳೆ, ಬೆಳ್ಳಿ ಆಭರಣಗಳಿಂದ ಸುಸಜ್ಜಿತಳಾಗಿ ಕೈಯಲ್ಲಿ ಕನ್ನಡಿ ಹಿಡಿದು ಬಂದು ನಿಂತವಳು, ಗಂಗಾ. ಢೋಲಕ್ ಮೇಲೆ ಕೈಯಾಡಿಸಿದ್ದೇ ಜೊತೆಗಾತಿಯರೆಲ್ಲ ಹಾಡಿನ ಪಲ್ಲವಿಯೊಂದನ್ನು ಎತ್ತಿಕೊಂಡು ಹಾಡಲು ಆರಂಭಿಸಿದರು. ಕುಣಿಯುತ್ತಾ ಮೌಹರೋ ಹಾಡಿದಳು...

'ನೋಡು ನೋಡು ನನ್ನ ರಾಜ... ಜಾಟಣಿಯ ವಯ್ಯಾರ ರಾಜಾ...

ಮುಖದ ಮೇಲೆ ಎಳೆದುಕೊಂಡಿದ್ದ ಮುಸುಕಿನೊಳಗಿಂದಲೇ ನೋಡಿದಳು...!

ನಿಂತಿದ್ದಾನೆ!... ಒಬ್ಬ ರಸಿಕ ಯುವಕ!!

ಕೈಯಲ್ಲಿ ಲಸ್ಸಿಯ ಲೋಟ ಹಿಡಿದು ಬೆರಗುಗಣ್ಣುಗಳಿಂದ ಒಂದೇ ಸಮನೆ ದಿಟ್ಟಿಸುತ್ತಿದ್ದಾನೆ! ನಿಸ್ಪಂದನಾಗಿ ನಿಂತಿರುವ ಅವನ ಮೇಲೆ ಯಾರದೋ ಮೋಡಿ!

ಹುಕಿ ಬಂದು ಕುಣಿಯತೊಡಗಿದಳು. 'ಕಪ್ಪು ಮುಂಗುರುಳ ಮಾರ ರೂಪನೇ, ನೋಡು ನೋಡು ಈ ನಾಟ್ಯವಾ...'

ಕೈಯಲ್ಲಿ ಹಿಡಿದಿದ್ದ ಕನ್ನಡಿ ಪಳ ಫಳನೆ ಹೊಳೆಯಿತು- ಮಿಂಚು ಮಿಂಚಿನ ಅನುಭವ!... ದಂಗು ಬಡಿದವನಂತೆ ನಿಂತುಬಿಟ್ಟ.

ಅವಳ ಮೂಗುತಿಯ ಹೊಳಪು!

ಕನ್ನಡಿಯ ಹೊಳಪು!

ಬಂದವರೆಲ್ಲಾ ತಬ್ಬಿಬ್ಬಾದರು.

ಗಾಡಿಯವನೂ ಹಾಗೇ ನಿಂತುಬಿಟ್ಟ!

ಗಾಡಿಯಲ್ಲಿ ಕುಳಿತಿದ್ದ ಹಿರಿಯರ ಮನಸುಗಳಲ್ಲೆಲ್ಲ ಏನೋ ಒಂದು ಬಗೆಯ ರೋಮಾಂಚನ!! ಇಡೀ ಪರಿಸರವೆ ಮಂತ್ರ ಸ್ತಂಭನಕ್ಕೆ ಒಳಗಾದಂತಿತ್ತು.

ಅವಳೂ ಅವನ ಗುಂಗಿನಲ್ಲಿ ಹಾಡಿದಳು-

'ಬಿಳಿಯ ಷರಟಿನ ಹುಡುಗ...
ಕೆಂಪು ಪ್ಯಾಂಟಿನ ಹುಡುಗ...
ನೋಡು ನೋಡು ಬಾ ನನ್ನ
ಹೆಜ್ಜೆ ಗತಿಯಾ
ನನ್ನ ಕುಣಿತ ಭಣಿತದ
ಲಲಮನಿಯಾಂ!'

ಅವಳು ಕುಣಿಯುತ್ತಲೇ ಇದ್ದಳು. ಅವರು ಧರಿಸಿದ್ದ ಚೆಂಡು ಮಲ್ಲಿಗೆಯ ಹಾರದೊಳಗಿನ ಹೂಗಳನ್ನು ಕಿತ್ತು ಕಿತ್ತು ಅವಳ ಮೇಲೆ ಎಸೆಯುತ್ತಿದ್ದರು.

ವರಪೂಜೆ ಸಮಯದಲ್ಲಿ ಅವಳು ಕೆಳಗೆ ಇಳಿದು ಬರುತ್ತಿದ್ದಾಗ ಹಿಂದಿನಿಂದ 'ಅಪರೂಪ... ಅಪರೂಪ ಸುಂದರಿ!!' ಎಂದು ಯಾರೋ ಹೇಳುತ್ತಿದ್ದುದು ಕೇಳಿಸಿತು.

ಬೆಳಿಗ್ಗೆ ನೀರಿನ ಕೊಡ ಹಿಡಿದು ಒಳಗೆ ಬರುತ್ತಿದ್ದಂತೆ ನೋಡಿ ಅವಾಕ್ಕಾಗಿ ನಿಂತುಬಿಟ್ಟಳು! ಅಮ್ಮಯ್ಯ! ನೆನ್ನೆ ನೋಡಿದ ಹುಡುಗ! ಕಿರುಚಿದಳು. ಆದರೆ ಒಳಗೆ ನೆನಪುಗಳು ಕಚಗುಳಿಯಿಡುತ್ತಿದ್ದವು!!

ಅಮ್ಮನ ಜೊತೆ ಮಾತುಕತೆ ನಡೆಯುತ್ತಿತ್ತು. ನಿನ್ನ ಮಗಳು ನಮಗೆ ಬಹಳ ಹಿಡಿಸಿದೆ. ಮಾತು ಕಿವಿಯ ಮೇಲೆ ಬಿತ್ತು. ಒಳಗೊಳಗೇ ಖುಷಿ ಎನಿಸಿತ್ತು.

ಅವರ ಮಾತುಗಳಿಂದ ತಿಳಿಯಿತು. ಆತನ ಜೊತೆಗೆ ಬಂದಿದ್ದವರು ಆತನ ಭಾವ. ಅವರು ಹೇಳುತ್ತಿದ್ದರು. 'ನೀವೇನೂ ಯೋಚನೆ ಮಾಡಬೇಡಿ. ನಿಮ್ಮ ಮಗಳಿಗೆ ಯಾವ ತೊಂದರೇನೂ ಇಲ್ಲದೆ ತುಂಬಾ ಸುಖವಾಗಿ ಇರ್ತಾಳೆ. ಇರುವವನು ಒಬ್ಬನೇ ಮಗ. ಆಸ್ತಿಯೆಲ್ಲ ಅವನ ಪಾಲಿಗೇ.'

ಸೀರೆಯ ಸೆರಗನ್ನು ಅಗಿಯುತ್ತ ನಿಂತಿದ್ದಳು. ತಾನು ಕುಣಿಯುವ ಪ್ರೇಮಗೀತೆಗಳ ಸಾಲುಗಳು ಎದೆಯಲ್ಲಿ ಅನುರಣಿಸುತ್ತಿದ್ದವು!

'ಒಬ್ಬನೇ ಮಗ... ಅದೆಲ್ಲಾ ಸರಿ. ಆದರೆ ಅವರ ತಂದೇನೂ ಬಂದಿದ್ದರೆ ಚೆನ್ನಾಗಿತ್ತು. ಒಬ್ಬನೇ ಮಗನಾದ್ದರಿಂದ' ಅಮ್ಮ ತರ್ಕಿಸಿದಳು.

ಹುಡುಗನ ಭಾವನೇ ಹೇಳಿದ, 'ನಾವು ಅವರನ್ನು ಕರ್ಕೊಂಡೇ ಬರ್ತಿದ್ವಿ. ಆದರೆ ಅವರು ಈ ಸಮಯದಲ್ಲಿ ಊರಲ್ಲಿಲ್ಲ. ಕಲಕತ್ತಾಗೆ ಹೋಗಿದ್ದಾರೆ. ಜಾತಿ ಸಮಸ್ಯೆಯೇ ಇಲ್ಲ. ಇಬ್ಬರದೂ ಒಂದೇ ಆಯ್ತು. ಇನ್ನು ವರದಕ್ಷಿಣೆ ಅಂತೀರಾ? ಅದೆಲ್ಲ ಬೇಕಾಗೊಲ್ಲ. ಇರೋ ಸಮಸ್ಯೇಂದ್ರೆ, ನಿಂತಕಾಲ ಮೇಲೆ ಮದುವೆಯಾಗಬೇಕು. ಅದು ನಮ್ಮ ಸಮಸ್ಯೆ.'

ಊರಿನ ಹಿರಿಯರೆಲ್ಲ ಅಮ್ಮನನ್ನು ಒಪ್ಪಿಸಿದರು. ಇಂತಹ ಒಳ್ಳೆಯ ಸಂಬಂಧ ಬಂದಿರುವಾಗ ಕೈ ಬಿಡೋದು ಮೂರ್ಖತನ. ಖಂಡಿತ ಬಂದ ಅದೃಷ್ಟವನ್ನು ಕಾಲಿಂದ ಒದೀಬೇಡ' ಅಂತ ತಿಳಿಸಿ ಹೇಳಿದರು.

ಅಂಗಾಂಗಗಳಲ್ಲೆಲ್ಲ ಕಚಗುಳಿ ಇಟ್ಟಂತಹ ಅನುಭವ! ಕಣ್ಣಲ್ಲಿ ಕಾಂತಿಯೊಡೆಯಿತು. ನಾಚಿಕೆ ಸಂಭ್ರಮಗಳಿಂದ ಊರಿನ ಜನರ ಕಣ್ಣು ತಪ್ಪಿಸಿ ಓಡಾಡಿದಳು. ಊರಿನವರೆಲ್ಲ ಅವಳ ಅದೃಷ್ಟವನ್ನು ಕೊಂಡಾಡಿದರು. ಗೆಳತಿಯರೆಲ್ಲ ಅವಳನ್ನು ಚುಡಾಯಿಸಿದರು. 'ಅವಳಿಗೇನು ನಮ್ಮ ಮಹಾರಾಣಿ, ಮನೇಲೂ ಚಪ್ಪಲಿ ಹಾಕಿಕೊಂಡೇ ಓಡಾಡ್ತಾಳೆ ಕಾಲಿಗೆಲ್ಲಿ ಏನಾದರೂ ಚುಚ್ಚಿಕೊಳ್ಳುತ್ತೋ ಅಂತ! ಸಲ್ವಾರ್ ಕಮೀಜು, ನೈಲಾನ್ ಸೀರೆ! ಓಹ್ ಇನ್ನೂ ಏನೇನೋ!'

ಮನೇಲಿ ಮದುವೆಯ ಸಂಭ್ರಮ! ಮದುವೆ ಮಂಟಪ ಸಿದ್ಧವಾಯಿತು. ಸಾಜೋ ಹಸಿರು ಬಳೆ ತಂದಳು.

ಮಗಳನ್ನು ಬೀಳ್ಕೊಡುವಾಗ ಅಮ್ಮ ಜೋಗೇಶನೊಂದಿಗೆ ಹೇಳಿದಳು. 'ಮಗಾ ಎಷ್ಟೋ ಜನ್ಮದ ಪುಣ್ಯಕ್ಕೆ ಪಡೆದರೋ ಅಂತಹ ಮಗಳು ನನಗೆ ಹುಟ್ಟಿದ್ದಾಳೆ. ಅವಳು ಅಮೂಲ್ಯವಾದ ರತ್ನ.'

ಮೌಹರೋ ಜೀವನದಲ್ಲಿ ನಡೆದ ಪಟನೆ ಅಪರೂಪದ ಘಟನೆ! ಯಾರೂ ಇಲ್ಲೀವರೆಗೆ ನೊಡಿಲ್ಲ. ಯಾವುದೋ ಮದುವೆಗೇಂತ ಹೋಗಿ ಮನಸ್ಸಿಗೆ ಬಂದ ಹುಡುಗೀನ ಇಷ್ಟಪಟ್ಟು ಮನೆಗೆ ಸೊಸೆಯಾಗಿ ಕರ್ಕೊಂಡು ಬಂದ್ರೆ, ಬಂದ ಆ ಸೊಸೆಯನ್ನು ದೇವರನ್ನು ಪೂಜಿಸಿ ಹೊಸ್ತಿಲಲ್ಲಿ ಇರಿಸಿದ್ದ ಅಕ್ಕಿ ಹಿಟ್ಟಿನ ಕುದುರೆ ಬೊಂಬೆ ಪೂಜಿಸುವಂತೆ ಮಾಡಿ ಸ್ವಾಗತಿಸಲಾಗುತ್ತೆ. ಮನೆಗೆ ಬಂದ ಸೊಸೆಯ ಗೌರವಾರ್ಥ ನೆರೆಹೊರೆಯವರನ್ನೂ ನೆಂಟರನ್ನು ಆಹ್ವಾನಿಸಲಾಗುತ್ತೆ.

ಆದರೆ ಮೌಹರೋಗೆ ಅತ್ತೆಯ ಮನೆಯಲ್ಲಿ ಇಂತಹ ಸ್ವಾಗತ ಸಿಗಲಿಲ್ಲ. ಹೊಸ್ತಿಲು ತುಳಿಯಲೂ ಅವಕಾಶ ಕೊಡಲಿಲ್ಲ. ಮುಖದ ಮೇಲಿನ ಮುಸುಕಿನೊಳಗಿಂದ ಅತ್ತೆಯ ಮನೆ ಬಾಗಿಲನ್ನು ಸಹ ನೋಡಲಾಗಲಿಲ್ಲ.

ಮಾತುಗಳು ಸಿಡಿದು ಬಂದವು.

'ಎಲ್ಲಿಂದ ಎತ್ಕೊಂಡು ಬಂದೆ ಈ ಕುಣಿತದವಳನ್ನ? ಇವಳ ಕುಣಿತದ ಮೋಡಿಗೆ ಬಿದ್ದೆಯೇನೋ?... ನಮಗೆಲ್ಲ ಗೊತ್ತಾಯ್ತು. ಕುಣಿತ ತೋರಿಸಿ ಭಿಕ್ಷೆ ಬೇಡಿ ಹೊಟ್ಟೆ ಹೊರೆದುಕೊಳ್ಳೋ ಜಾತಿಯವಳನ್ನ! ಥೂ ನಿನ್ನ... ಮೋಸ ಹೋಗ್ಬಿಟ್ಟೆಯಲ್ಲೋ... ಏನೂ ನಿನಗೆ ಕಾಣಿಸಲಿಲ್ಲ?'

ಜೋಗೇಸನ ಅಪ್ಪ, ಅಮ್ಮ ತಾಳ್ಮೆಗೆಟ್ಟು ಮಾತಾಡಿದರು. ಮೌಹರೋ ಮುಸುಕಿನೊಳಗೇ ಥರಥರ ನಡುಗಿದಳು.

ಜೋಗೇಸನ ನಾಲಿಗೆ ಒಣಗಿತು. ಮಾತೇ ಹೊರಡದಾಯಿತು. ಜೋಗೇಸನ ಭಾವನೇ ಮಾತಾಡಿದ. 'ಹುಡುಗೀನ ಓಡಿಸಿಕೊಂಡಾಗಲೀ, ಹಾರಿಸಿಕೊಂಡಾಗಲಿ ತರಲಿಲ್ಲ. ಇಡೀ ಊರಿನ ಜನರ ಮುಂದೆ ವಿಧಿವತ್ತಾಗೆ ಮದುವೆಯಾಗಿ ಬಂದಿದ್ದಾನೆ. ಇದರಲ್ಲಿ ಕಳ್ಳತನವೇನೂ ಇಲ್ಲ. ಸೊಸೆಯಾಗಿ ಬಂದವಳನ್ನು ಹೀಗೆ ಅವಮಾನಿಸುವುದು ನಿಮಗೆ ನ್ಯಾಯವಲ್ಲ.'

ಜೋಗೇಸನ ತಂದೆಗೆ ಕೋಪ ತಡೆಯಲಾಗಲಿಲ್ಲ. ಹೇಳಿದರು, 'ಅಳಿಯಂದಿರೇ, ನೆಂಟರು ನೆಂಟರಂತೆ ಇದ್ದರೆ ಒಳ್ಳೇದು. ನಮ್ಮ ಮನೆ ವಿಷಯದಲ್ಲಿ ನೀವು ತಲೆ ಹಾಕೋ ಅಗತ್ಯ ಇಲ್ಲ. ನಮ್ಮ ಮನೆ, ಮನೆತನದ ಮರ್ಯಾದೆಯ ಬಗ್ಗೆ ವಿಚಾರ ಮಾಡದೆ ಇರೋ ನಿಮ್ಮಂತಹವರ ಸಂಬಂಧವೂ ನಮಗೆ ಬೇಕಿಲ್ಲ. ದಯಪಿಟ್ಟು ಇಲ್ಲಿಂದ ಹೊರಟು ಹೋಗಿ.'

ಆ ರಾತ್ರಿ ಯಾವುದೋ ಒಂದು ಧರ್ಮಶಾಲೆಯಲ್ಲಿ ಉಳಿದುಕೊಂಡರು. ಮೌಹರೋಗೆ ರಾತ್ರಿ ಇಡೀ ನಿದ್ದೆಯಿಲ್ಲ. ಜೋಗೇಸ ಜೊತೆಗೆ ಇರಲಿಲ್ಲ. ಜೋಗೇಸನ ಭಾವ, ಮಾತ್ರವೇ! ಇದ್ದದ್ದು ಒಳಗೆ ನಡುಗುತ್ತಿದ್ದಳು. ನನ್ನನ್ನು ಸುರಕ್ಷಿತವಾಗಿ ಬಚ್ಚಿಡುವ ಹೆಸರಿನಲ್ಲಿ ಏನಾದರೂ ಅನಾಹುತ ಆದರೆ ಅನಿಸಿತ್ತು.

ಆದರೆ ಈಗ ಅನಿಸುತ್ತೆ 'ಭಾವ ನಿಜವಾಗಿಯೂ ದೇವರಂತಹ ಮನುಷ್ಯ'. ಆತನಲ್ಲಿ ಬೇಟೆಗಾರನನ್ನು ಕಾಣುವುದಕ್ಕೆ ಬದಲಾಗಿ ಮನುಷ್ಯನನ್ನೇ ಕಂಡಳು.

ಬಾಡಿಗೆಗೆ ಒಂದು ಕೋಣೆ ಹಿಡಿದದ್ದಾಯಿತು. ಜೋಗೇಸನ ಭಾವನೇ ಸಾಧ್ಯವಿದ್ದಷ್ಟು ಕಾಲ ಮನೇನ ನಿಭಾಯಿಸಿದ. ಕೈಲಿದ್ದ ಕಾಸು ಮುಗಿದ ಮೇಲೆ ಊರೇ ಬಿಟ್ಟು ಹೊರಟು ಹೋದರು. ಕದ್ದು ಕದ್ದು ತನ್ನನ್ನು ಸಂಧಿಸಲು ಜೋಗೇಸ ಆಗಾಗ ಬರುತ್ತಿದ್ದ. ಕೆಲಸ ಸಿಕ್ಕಿದ ಮೇಲೆ ಕರ್ಕೊಂಡು ಹೋಗ್ತೀನೀಂತ ಭರವಸೆ ಕೊಡುತ್ತಲೇ ಇದ್ದ.

ಸರಿಯಾಗಿ ಒಂಬತ್ತು ತಿಂಗಳಿಗೆ ಫಿಡಕಲ್ ಹುಟ್ಟಿದಳು. ಎರಡು ವರ್ಷಗಳಲ್ಲೇ ಅಮ್ಮ ತೀರಿಕೊಂಡಳು. ಜೋಗೇಸನ ಸುಳಿವೇ ಇಲ್ಲದಾಯಿತು. ಆಸೆಯ ಕೊರಳನ್ನು ಹಿಚುಕುವ ಹಲವು ಸಂಗತಿಗಳು ನೆನಪಾದವು. 'ಚಂಪಾವನದ ಆ ನವಿಲಿನ' ಹಾಡು ನೆನಪಾಗಿ ಮನಸ್ಸನ್ನು ಹಿಂಸಿಸುತ್ತಿತ್ತು. ಆದರೂ ಒಂದಲ್ಲ ಒಂದು ದಿನ ಬರಬಹುದೆಂಬ ದೂರದ ಆಸೆ.

ನಿಟ್ಟುಸಿರೆಳೆದು ಬಲಕ್ಕೆ ಹೊರಳಿದಳು. ಯೋಚನೆಗಳಲ್ಲೇ ರಾತ್ರಿಯೆಲ್ಲಾ ಕಳೆದದ್ದಾಯಿತು. ಫಿಡಕಲ್‌ಳ ಮುಗ್ಧ ಮುಖದ ಕಡೆ ನೋಡಿದಳು. ಮುತ್ತಿಟ್ಟಳು.

ಎಷ್ಟೋ ದಿನಗಳ ಮೇಲೆ ಲಲಮನಿಯಾಂ ನರ್ತಿಸುವ ಅವಕಾಶ! ನಿಸ್ಪಂದ ದೇಹದಲ್ಲಿ ಒಮ್ಮೆಲೇ ಚೈತನ್ಯ ಸಂಚಾರವಾಯಿತು. ಕೈಗಳಲ್ಲಿ ಕಟ್ಟಿದ ಕಪ್ಪುದಾರ. ಅಂದವಾದ ಬಳೆಗಳು. ಕಾಲಿನ ಅಲ್ತಾ- ಅವರವತ್ತು ಮೊಳದ ಹರಿದ ಲಂಗಾ.

ಬೆಳಗಿನಿಂದ, ಉರಿಬಿಸಿಲಲ್ಲಿ ನಡೆದು ನಡೆದು ತಾಹರಪುರ ತಲುಪಿದಳು. ಸಾಜೋ ಅವಳನ್ನು ತನ್ನ ಮನೆಗೆ ಕರೆದೊಯ್ದಳು.

'ನಿನಗೆ ಸ್ವಲ್ಪ ಸಂಕೋಚ ಜಾಸ್ತಿ! ಬೀಗರು ಬರುವ ಹೊತ್ತಿಗೆ ಅಲ್ಲಿಗೆ ಹೋದರಾಯ್ತು. ಸ್ವಲ್ಪ ಸುಧಾರಿಸ್ಕೊ' ಎಂದಳು.

ಸಂಜೆ ಆಯಿತು. ಸೂರ್ಯ ಮರೆಯಾದ. ಬಾಜಾ ಬಜಂತ್ರಿ! ಬೀಗರ ಆಗಮನ! ಮದುವೆ ಮನೆಯಲ್ಲಿ ಸಂದಣಿ! ಸಂಭ್ರಮ! ಒಬ್ಬೊಬ್ಬರೂ ಒಳ್ಳೊಳ್ಳೆ ಬಟ್ಟೆ ಬರೆ ಆಭರಣ, ಸಿಂಗಾರಗಳಿಂದ ಮೆರೆಯುತ್ತಿದ್ದರು. ಸಾಜೋ ಲಂಗಾ, ಕಡಗ, ಕಂಕಣ. ಗೆಜ್ಜೆ, ಕೊರಳ ಸರಗಳನ್ನು ಅಣಿ ಮಾಡುತ್ತಿದದಳು. ಮೌಹರೋಗೆ ಅದನ್ನೆಲ್ಲಾ ನೋಡುತ್ತಿದ್ದಂತೆ ರೋಮಾಂಚನವಾಯಿತು.

ಬೀಗರು ಊರನ್ನು ಪ್ರವೇಶಿಸುತ್ತಿದ್ದ ಸದ್ದು. ದಡಬಡಿಸಿ ಎದ್ದು ಮುಖ ತೊಳೆದುಕೊಂಡು ಬಂದು ಸಿದ್ಧಳಾಗತೊಡಗಿದಳು. ಬೀಗರ ಸ್ವಾಗತದ ಸಂಭ್ರಮ! ಅಲ್ಲಿಂದಲ್ಲಿ ಬಂಧುಗಳ ಓಡಾಟ! ಗಲಿಬಿಲಿ! ಎದ್ದ ಧೂಳು! ಹತ್ತಿರವೇ ಕೇಳಿ ಬಂದ

ಓಲಗದ ಸದ್ದು, ಬೀಗರು ತೀರಾ ಮನೆಯ ಹತ್ತಿರ ಬಂದಿರಬೇಕೆಂಬುದನ್ನು ಸೂಚಿಸಿದವು. ಬಾಡಿದ ಮುಖವನ್ನು ತಿಲಕವಿಟ್ಟು ಸಿಂಗರಿಸಿದಳು. ಕಣ್ಣಿಗೆ ಕಾಡಿಗೆ ಹಚ್ಚಿದಳು. ಮಿಂಚಿನಂತೆ ಹೊಳೆವ, ಫಳಫಳಿಸುವ ಮೂಗುತಿಯನ್ನು ಧರಿಸಿದಳು. ತುಟಿಗಳ ಕೆಂಪಿಗಾಗಿ ತಾಂಬೂಲವನ್ನು ಮೆಲ್ಲತೊಡಗಿದಳು. ಬಡಕಲು ಮೈಯನ್ನು ದಾವಣಿ, ಲಂಗಾ, ಬೆಳ್ಳಿಯ ಒಡವೆ, ಕಾಲಗೆಜ್ಜೆಗಳಿಂದ, ಖನಖನಿಸುವ ಬಳೆಗಳಿಂದ ಅಲಂಕರಿಸಿದಳು. ಕೈಯಲ್ಲಿ ಕನ್ನಡಿ ಹಿಡಿದು ತಿರುಗಿಸುತ್ತಾ ಮಾಳಿಗೆ ಮೇಲೆ ಹೋಗಿ ನಿಂತಳು. ಅಲ್ಲಿದ್ದ ಹೆಂಗಸರು ಅವಳನ್ನು ಪ್ರಶಂಸಾತ್ಮಕವಾಗಿ ನೋಡಿದರು.

ಢೋಲಕದ ಮೇಲೆ ಛಾಪ ತಾಳ ಬಿದ್ದಿತು.

ನಿಮಿಷ ಮಾತ್ರದಲ್ಲಿ ಬೀಗರ ಸ್ವಾಗತಕ್ಕಾಗಿ ಅವರ ಮುಂದೆ ಹಾದು ಹೋದಳು. ಕನ್ನಡಿ ಹಿಡಿದ ಕೈಯನ್ನು ಅಭಿನಯಿಸುತ್ತಾ, ಕುಣಿಯತೊಡಗಿದಳು. 'ಮುಂಗುರುಳ ಕೂದಲಿನ ಚೆಲುವನೇ... ಕೆಂಪು ಟೈಯವನೇ... ಕಪ್ಪು ಕನ್ನಡಕದವನೆ... ನೋಡು ಬಾರೋ ನಾಟ್ಯ... ನೋಡು ಬಾರೋ ಈ ಲಲಮನಿಯಾಂ ನಾಟ್ಯವಾ?!... ಹಾಡುತ್ತಾ ಹಾಡುತ್ತಾ ಗಿರ್ರನೆ ತಿರುಗಿದಳು. ಅವಳ ಅಂಗಾಂಗವೆಲ್ಲವೂ ತಿರುಚಿತು. ಮೈಮರೆತು ನರ್ತಿಸಿದಳು... ನರ್ತಿಸಿದಳು... ನರ್ತಿಸಿದಳು... ಎಷ್ಟು ಅದ್ಭುತವಾಗಿ ನರ್ತಿಸಿದಳೆಂದರೆ... ವ್ರಜಭೂಮಿಯಲ್ಲಿ ಮತ್ತೊಮ್ಮೆ ಲಲಮನಿಯಾಂ ಜೀವಪಡೆಯಿತೋ ಎಂಬಂತೆ ಭಾಸವಾಗತೊಡಗಿತು. ನೋಡುತ್ತಿದ್ದವರೆಲ್ಲ ನಿಶ್ಚಲ ಪ್ರತಿಮೆಗಳಂತೆ ನಿಂತರು. ಕನ್ನಡಿಯಾಡಿಸುತ್ತಾ ತಿರುಗುವಾಗ ಕನ್ನಡಿಯ ಮಿಂಚು ಯಾರ ಮೇಲೆ ಬಿದ್ದರೆ ಅವರು ಆ ಕ್ಷಣವೇ ಭಾವಪರವಶತೆಗೆ ಒಳಗಾಗಿ ಬಿಡುತ್ತಿದ್ದರು.

ಅದೇ ಸಮಯಕ್ಕೆ!... ನರ್ತನದ ಮಧ್ಯೆ!... ಪಿಡಕಲ್ ಓಡಿಬಂದು ಏದುಸಿರು ಬಿಡುತ್ತಾ ಹೇಳಿದಳು, 'ಸಾಕು ಮಾಡು ಅಮ್ಮ... ಸಾಕು ಮಾಡು! ಕೆಳಗೆ ಬಾ' ಅಂತ ಹೇಳುತ್ತಾ, ಗಟ್ಟಿಯಾಗಿ ಅವಳ ಕಾಲಿಗೆ ಅಂಟಿಕೊಂಡಳು. ಮೈಮರೆತು ನರ್ತಿಸುವಾಗ, ಮಧ್ಯೆ ಈ ರಸಭಂಗ! ಅವಳಿಗೆ ಕೋಪಬಂದು ಮಗಳು ಹಿಡಿದ ಪಟ್ಟಿನಿಂದ ಬಿಡಿಸಿಕೊಂಡು ಅವಳನ್ನು ದೂರ ತಳ್ಳಿದಳು. ಆದರೂ ಪಿಡಕಲ್ ಬಿಡಲಿಲ್ಲ.

'ಸಾಬೋ ದೊಡ್ಡಮ್ಮ ಹೇಳ್ತಿದ್ದಾರೆ... ನಮ್ಮಪ್ಪ ಬಂದಿದ್ದಾರೇಂತ!! ನಮ್ಮಪ್ಪ!! 'ಅಪ್ಪ!' ಶಬ್ದ ಕಿವಿಗೆ ಬಿದ್ದದ್ದೇ ನರ್ತಿಸುವ ಕಾಲುಗಳು ನಿಶ್ಚಲಗೊಂಡವು. ಕೈಯಲ್ಲಿ ಕನ್ನಡಿ ಹಾಗೇ ನಿಂತಿತು.

'ನಮ್ಮ ಅಪ್ಪಾನೇ ಮದುಮಗ ಆಗಿದ್ದಾನೆ ಅಮ್ಮಾ!!'

'ಹಂಸವಾಹನದಲ್ಲಿ ಕುಳಿತಿದ್ದಾರೆ' ಎಂದು ಬೆರಗು ಸಂಭ್ರಮಗಳಿಂದ ಚಪ್ಪಾಳೆ ತಟ್ಟಿ ಹೇಳಿದಳು.

ಬರಬರುತ್ತಾ ಹಂಸವಾಹನ ಅವಳ ಹತ್ತಿರದಿಂದಲೇ ಹಾದುಹೋಯಿತು. ಕೈಕಾಲುಗಳು ಸೆಡೆದುಕೊಂಡವು. ಕನ್ನಡಿ ಹಿಡಿದ ಕೈಗಳಿಗೆ ಸುಂದು ಹಿಡಿಯಿತು.

ಅಮ್ಮನ ಪ್ರತಿಕ್ರಿಯೆಯೇ ಇಲ್ಲದ್ದನ್ನು ನೋಡಿದ ಪಿಡಕಲ್‌ಗೆ ವಿಪರೀತ ಸಿಟ್ಟು ಬಂತು. ಜೋರಾಗಿ ಕಿರುಚಿದಳು 'ನಡಿ...• ಅಮ್ಮ...' ಅವಳ ಚೀತ್ಕಾರ ವಾದ್ಯದ ಮೊಳಗನ್ನೇ ಮುಳುಗಿಸಿತು.

ಸದ್ದು ಗದ್ದಲಗಳ ಪರಿವೆಯಿಲ್ಲದೆ ಪರವಶತೆಯಿಂದ ಮತ್ತೆ ಮತ್ತೆ ಕನ್ನಡಿ ತಿರುಗಿಸುತ್ತಾ ನರ್ತಿಸಿದಳು... ನರ್ತಿಸುತ್ತಲೇ ಇದ್ದಳು... ನರ್ತಿಸುತ್ತಲೇ.....

(ಮೂಲ: ಹಿಂದಿ– ಮೈತ್ರೇಯಿ ಪುಷ್ಪಾ)

ಪಾತಾಳ ಪ್ರಜ್ಞೆ

"ಶಶೀ... ಶಶೀ..." ಎಂದು ಕೂಗುತ್ತ ಉತ್ಸಾಹದಿಂದ ಒಳಗೆ ಬಂದ ನಾಗೇಶನನ್ನು ಕಂಡಾಗ, ಶಶಿಗೆ ಸ್ವಲ್ಪ ಆಶ್ಚರ್ಯವೆನಿಸಿತ್ತು. ಇತ್ತೀಚೆಗೆ ಐದಾರು ತಿಂಗಳಿಂದ ಮೌನದ ಮುಸುಕಿನ ಮರೆಯಲ್ಲಿ ಅವ್ಯಕ್ತ ಅಸಮಾಧಾನವನ್ನು ಹತ್ತಿಕ್ಕಲು ಪ್ರಯತ್ನಿಸುತ್ತಿದ್ದ. ಮೋಡದ ಮಂಕು ಬಿಟ್ಟು ಸ್ವಲ್ಪ ಉತ್ಸಾಹ, ನಗುವಿನ ಮಿಂಚು ಮುಖದಲ್ಲಿ ಮೂಡಿದ್ದನ್ನು ನೋಡಿದ ಶಶಿಗೆ ಹೇಗೆ ಹೇಗೋ ಆಯಿತು. ಅವನ ಈ ಉತ್ಸಾಹದ ಹಿನ್ನೆಲೆಯನ್ನು ಗ್ರಹಿಸಲು ಅಸಮರ್ಥಳಾದ ಶಶಿ, ತಾನಾಗೇ ಏನನ್ನೂ ವಿಚಾರಿಸದೆ ತನ್ನ ಪಾಡಿಗೆ ತಾನು ಕೆಟಲಿಂದ ಬಟ್ಟಲಿಗೆ ಟೀ ಸುರುವಿಟ್ಟು, ಚಮಚದಿಂದ ಸಕ್ಕರೆ ಹಾಕಿ ಕಲಸಹತ್ತಿದಳು.

ತನ್ನ ಕೂಗಿಗೆ ಉತ್ತರ ಕೊಡದೆ ಯಾವೊಂದು ಪ್ರತಿಕ್ರಿಯೆಯೂ ಇಲ್ಲದೆ ನಿಶ್ಚಲಳಾಗಿ ನಿಂತಿದ್ದ ಶಶಿಯನ್ನು ಕಂಡು ಕೋಪ ಬಂದರೂ ಬಲವಂತದಿಂದ ಅದನ್ನು ಅದುಮಿಟ್ಟುಕೊಂಡು ಹೇಳಿದ.

"ನಿನ್ನ ಅಭ್ಯಂತರವಿಲ್ಲದಿದ್ದರೆ, ನಾಳೆ ನನ್ನ ವಿದೇಶಿ ಮಿತ್ರರಿಬ್ಬರು ನಮ್ಮ ಅತಿಥಿಗಳಾಗಿ ಬರುತ್ತಾರೆ. ಸುಮಾರು ಹದಿನೈದು ಇಪ್ಪತ್ತು ದಿವಸಗಳಾದರೂ ಇರಬಹುದೆನಿಸುತ್ತೆ. ಇದೋ ಈಗಲೇ ಆಫೀಸ್‌ಗೆ ಕೇಬಲ್ ಬಂತು. ನಿನಗೆ ತೊಂದರೆಯಾಗುವುದಾದರೆ ಬೇರೆ ಯಾವುದಾದರೂ ಲಾಡ್ಜ್‌ನಲ್ಲಿ ವ್ಯವಸ್ಥೆ ಮಾಡುತ್ತೇನೆ. ಇವರಿಬ್ಬರೂ ನನಗೆ ತುಂಬಾ ಬೇಕಾದವರು. ನಾನು ಲಂಡನ್‌ನಲ್ಲಿದ್ದಾಗ ಎಡ್ವರ್ಡ್ ನನ್ನ ಕ್ಲಾಸ್‌ಮೇಟ್ ಆಗಿದ್ದ. ಅವನ ತಂಗಿ ಎಲಿಸಾ. ಒಂದು ವರ್ಷ ಅವರ ಮನೆಯಲ್ಲಿಯೇ ಇದ್ದೆ. ಎಲಿಯಟ್ ದಂಪತಿಗಳಿಗೆ ಅವರಿಬ್ಬರೇ ಮಕ್ಕಳು. ಅವರೊಂದಿಗೆ ನನಗೆ ತುಂಬಾ ಸಲುಗೆ. ಅವರೂ ನನ್ನನ್ನು ತಮ್ಮ ಮನೆಯವನಂತೆಯೇ ನೋಡಿಕೊಳ್ಳುತ್ತಿದ್ದರು. ಅಂಥಾದ್ದರಲ್ಲಿ ಯಾಕೋ... ಅವರನ್ನು ಈಗ ಸರಿಯಾಗಿ ಸತ್ಕರಿಸದೆ ಇದ್ದರೆ ಗಿಲ್ಟಿ ಅನ್ನಿಸುತ್ತೆ... ಅದಕ್ಕೇ, ಹೇಳು ಶಶಿ... ಪ್ಲೀಸ್... ಹೇಳು..." ಎಂದು ಅಂಗಲಾಚುವಂತೆ ಬೇಡಿದ.

ಎಂದೂ ಇಲ್ಲದ ಈ ದೈನ್ಯ, ಈ ಪೋಸುಗಳು ಇವತ್ತು ಅವಳಿಗೆ ವಿಚಿತ್ರವೆನಿಸಿತು. "ಈ ಮನೆಯೇನೂ ನಮ್ಮಪ್ಪ ಕೊಟ್ಟಿದ್ದಲ್ಲ. ನನಗೆ ಇದರಲ್ಲಿ ಪೂರ್ತಿ ಅಧಿಕಾರವೂ ಇಲ್ಲ. ಹಾಗೂ ಕರೆದು ತಂದಿದ್ದರೂ ನನ್ನ ಆಕ್ಷೇಪಣೆಯೇನೂ ಇರುತ್ತಿರಲಿಲ್ಲ"– ಎಂದು ಆಲೋಚಿಸುತ್ತಿದ್ದ ಅವಳಿಗೆ, ಇಷ್ಟೊಂದು ತನ್ನನ್ನು ಅಂಗಲಾಚಿ ಬೇಡಿಕೊಳ್ಳುತ್ತಿರುವ ನಾಗೇಶನ ಬಗ್ಗೆ ಒಂದು ಸಲ ಅಸಹ್ಯವೆನಿಸಿದರೂ ಮರುಗಳಿಗೆಯೇ ಕನಿಕರ ಉಂಟಾಗುತ್ತಿತ್ತು. ಯಾವುದಕ್ಕೂ ಕಮಿಟ್ ಮಾಡಿಕೊಳ್ಳುವುದು ಸರಿಯಲ್ಲವೆನಿಸಿತು. ಟೀ ಕಪ್ಪನ್ನು ನಾಗೇಶನಿಗೆ ಕೊಡುತ್ತಾ ಹೇಳಿದಳು.

"ನನ್ನನ್ನು ಇಷ್ಟೊಂದು ಕೇಳುವ ಅವಶ್ಯಕತೆಯಿರಲಿಲ್ಲವೆನಿಸುತ್ತೆ!"

"ಅದಕ್ಕಲ್ಲ, ಮೊದಲೇ ನನ್ನ ವಿಷಯವಾಗಿ ನಿನ್ನ ಮನಸ್ಸಿನಲ್ಲಿ ಒಳ್ಳೆಯ ಅಭಿಪ್ರಾಯವಿಲ್ಲದಾಗ ಅವರೊಂದಿಗೆ ಸಲುಗೆಯಿಂದ ನಡೆದುಕೊಂಡರೆ ನಿನ್ನ ಮನಸ್ಸಿಗೆ ಕಹಿಯಾಗಬಹುದು" ಹಿಂಜರಿಯುತ್ತಲೇ ಹೇಳಿದ.

"ಈ ಗಿಲ್ಟಿ ಫೀಲಿಂಗ್ ಯಾಕೇಂತ ಅರ್ಥವಾಗುತ್ತಿಲ್ಲ"– ಪ್ರಶ್ನಾರ್ಥಕವಾಗಿಯೇ ಕೇಳಿದಳು.

"ಸ್ಪಷ್ಟವಾಗಿ ಹೇಳಬೇಕೆಂದರೆ ಎಲಿಸಾಗೆ ನನ್ನೊಂದಿಗೆ ಸಲಿಗೆ ಹೆಚ್ಚು. ನಿನ್ನ ಹೆಣ್ಣು ಮನಸ್ಸಿಗೆ ಅದು ವಿರೋಧವಾಗಿ ಕಾಣಿಸಬಹುದು. ಎಷ್ಟು ಎಜ್ಯುಕೇಟೆಡ್ ಆದರೂ ಇಂಥ ವಿಷಯಗಳಲ್ಲಿ ಹೆಣ್ಣು ಹೆಣ್ಣೇ!"

"ನನ್ನ ಮನಸ್ಸನ್ನು ನನ್ನ ವ್ಯಕ್ತಿತ್ವವನ್ನು ಅಳೆದು ಬೆಲೆಕಟ್ಟುವ ಅವಕಾಶಗಳು ಇನ್ನೂ ಬಂದಿಲ್ಲವೆಂದೇ ನನ್ನ ಭಾವನೆ."

'ಅವಕಾಶಗಳು ಬರದೇನೇ ಅರ್ಥ ಮಾಡಿಕೊಳ್ಳೋ ಕೆಪ್ಯಾಸಿಟಿ ನನಗಿದೇಂತಲೇ– ನನಗೆ ಅನಿಸುತ್ತದೆ"– ಸ್ಪಷ್ಟವಾಗಿ ನುಡಿದ.

"ಮೀನಿಂಗ್‌ಲೆಸ್– ಸ್ವಲ್ಪ ಒರಟಾಗಿಯೇ ಉತ್ತರ ಕೊಟ್ಟಳು.

"ಹೆಂಗಸರ ಸೈಕಾಲಜಿನೇ ಅಷ್ಟು"– ನಿರ್ಧಾರದ ದನಿಯಲ್ಲಿ ನುಡಿದ.

"ಒನ್ ಸೈಡೆಡ್ ಆಗಿ ಮಾತಾಡ್ತಿದ್ದೀರಿ... ಗಂಡಸರೂ ಅಷ್ಟೇ. ಮದುವೆ ಆಗೋದೇ ಸಾಕು. ತಾಳಿ ಬಿಗಿದ ಕೂಡಲೇ ಹೆಂಡತಿ ಮೇಲೆ ಸಂಪೂರ್ಣ ಹಕ್ಕು ಸಾಧಿಸುವುದಕ್ಕೇ ನೋಡ್ತಾರೆ. ವೈಯಕ್ತಿಕ ಸ್ವಾತಂತ್ರ್ಯದ ಸಮಾಧಿ ಮಾಡೋದರಲ್ಲೇ ಸಂತೋಷ ಅಂದುಕೊಳ್ಳುತ್ತಾರೆ. ತನ್ನ ದಬ್ಬಾಳಿಕೆಯನ್ನು ವಿರೋಧಿಸುವ, ವಿದ್ರೋಹಿಸುವ ಹಕ್ಕಿಲ್ಲದೆ, ಬಿದ್ದುಕೊಂಡಿದ್ದು, ಉಸಿರಾಡುವ ಹುಳು ಮಾತ್ರವೆಂದು ಭಾವಿಸುತ್ತಾನೆ" ಆಕ್ರೋಶವನ್ನೆಲ್ಲಾ ಸುರಿಯುತ್ತಿರುವಂತೆ ಮಾತಾಡಿದಳು.

"ಶಶೀ ಹುಚ್ಚು ಹುಚ್ಚಾಗಿ ಬಾಯಿಗೆ ಬಂದ ಹಾಗೆ ಮಾತಾಡಬೇಡ. ಸ್ತ್ರೀ ಸ್ವಾತಂತ್ರ್ಯದ ವಿಚಾರವಾಗಿ ಭಾಷಣ ಕೊಡಬೇಕಾದ ವೇದಿಕೆಯಲ್ಲ ಇದು. ನೀನು ಇಷ್ಟು ಓದಿದ್ದೂ ನಿನ್ನ ಸಂಕುಚಿತ ದೃಷ್ಟಿಕೋನ ವಿಶಾಲವಾಗಿಲ್ಲ. ಈಗ ಯಾರೂ ಯಾರ ಹಂಗಿನಲ್ಲೂ ಇರಬೇಕಾದ್ದಿಲ್ಲ. ನಿಮ್ಮ ಸ್ವಾತಂತ್ರ್ಯವನ್ನು ಉಳಿಸಿಕೊಂಡು ಭದ್ರಪಡಿಸಿಕೊಳ್ಳುವ ಹಕ್ಕು ನಿಮಗಿದೆ. ಇದಕ್ಕೇ ಸರಕಾರ, ಕಾನೂನು ನಿಮ್ಮ ಕಡೆಗಿದೆ. ಇವೆಲ್ಲ ಇರೋ ಈ ಸೆಂಚ್ಯುರಿನಲ್ಲಿ ತಿಳುವಳಿಕೆಯಿಲ್ಲದ ಹೆಂಗಸಿನ ಹಾಗೆ ಮತಾಡಬೇಡ. ವೈಯಕ್ತಿಕವಾಗಿ ನಿನ್ನ ಈ ಧೋರಣೆ ನನ್ನ ಕುರಿತಿದ್ದಾದರೆ ನೀನು ಬಹಳ ತಪ್ಪು ಮಾಡುತ್ತಿದ್ದೀ. ನಿನ್ನ ಯಾವ ಸ್ವಾತಂತ್ರ್ಯಕ್ಕೂ ನನ್ನ ಅಡ್ಡಿಯಿಲ್ಲ. ನೀನುಂಟು, ನಿನ್ನ ಸ್ವೇಚ್ಛೆಯುಂಟು."

"ನಿಮ್ಮಿಂದಲೇ ಕೇಳಿ ತಿಳಿದುಕೊಳ್ಳಬೇಕಿಲ್ಲ"– ಕತ್ತರಿಸಿ ನುಡಿದಳು.

"ಅನವಶ್ಯಕವಾಗಿ ನಮ್ಮಿಬ್ಬರ ಮಧ್ಯದ ಬಿರುಕನ್ನು ಹೆಚ್ಚಿಸಬೇಡ"– ಮುಗಿಸುವವನಂತೆ ಹೇಳಿದ.

"ಹಾಗಾದರೆ ಬಿರುಕು ಇದೆಯೆನ್ನುವುದನ್ನು ಒಪ್ಪಿಕೊಂಡ ಹಾಗಾಯ್ತು"– ಉತ್ತರ ದಿಢೀರೆಂದು ಬಂದರೂ, ಒತ್ತರಿಸಿಕೊಂಡು ಬರುತ್ತಿರುವ ಉಮ್ಮಳವನ್ನು ಅದುಮಿಟ್ಟುಕೊಂಡಳು. ಮನಸ್ಸು ಉದ್ವೇಗದ ಕೊಡವಾಯ್ತು. ಹಾಗೆ ನೋಡಿದರೆ ಶಶಿ ಮತ್ತು ನಾಗೇಶರ ನಡುವೆ ಈ ರೀತಿಯ ವಿರೋಧಕ್ಕೆ ಗಂಭೀರವಾದ ಯಾವ ಕಾರಣವೂ ಇರಲಿಲ್ಲ. ಇಬ್ಬರಿಗೂ ತಮ್ಮ ನಿಲುವು ಅರ್ಥವಿಲ್ಲದ್ದು ಎನಿಸಿತ್ತು. ಆದರೆ ಶಶಿಯದು ಒಂದು ವಿಚಿತ್ರ ರೀತಿಯ ಮನಸ್ತತ್ವ. ಸೋಲೊಪ್ಪಿಕೊಳ್ಳುವುದು, ಇನ್ನೊಬ್ಬರಿಗೆ ಬಗ್ಗಿ ನಡೆಯುವುದು, ಹೇಳಲಾಗದ ಹಿಂಸೆಯೆನಿಸುತ್ತಿತ್ತು. ಅವಳೆದುರು ಇನ್ನೊಬ್ಬರು ಅಸಹಾಯಕರಂತಿದ್ದರೇನೇ ತೃಪ್ತಿ.

ಶಶಿಯ ಮೌನ ನಾಗೇಶನ ಮನಸ್ಸಿನಲ್ಲಿ ಹಲವಾರು ಆಲೋಚನೆಗಳನ್ನು ಕೆರಳಿಸಿತು. ಅವಳ ಮೊಂಡಾಟದ ರೀತಿ ಯಾಕೋ ಮನಸ್ಸನ್ನು ಮತ್ತಷ್ಟು ನಿಷ್ಠುರಗೊಳಿಸಿತ್ತು. ಎಲಿಸಾಳ ನೆನಪು ಬಂದಾಗಲೆಲ್ಲ ಜೊತೆಗೆ ಶಶಿಯ ಮೇಲೆ ವಿನಾಕಾರಣ ಸಿಟ್ಟು ಬರುತ್ತಿತ್ತು. ಸಹವಾಸವೇ ಬೇಡವೆನಿಸುತ್ತಿತ್ತು. ಆದರೆ ಕ್ಷಣ ಮಾತ್ರ! ಮರುಗಳಿಗೆಯೇ ಶಶಿಯ ಸಾಮೀಪ್ಯ ಇಲ್ಲದಾಗ ತೀರ ಅಸಹಾಯಕತೆಯ ಅನುಭವವಾಗುತ್ತಿತ್ತು... ಇಬ್ಬರದೂ ಒಂದೊಂದು ರೀತಿ ಭಿನ್ನ ಪ್ರಕೃತಿಗಳು. ವಿರುದ್ಧ ದಿಕ್ಕಿಗೇ ಸರಿಯುತ್ತಿದ್ದವು.

* * *

ಎಲಿಸಾ ನಾಗೇಶರ ನಡುವೆ ಪತ್ರ ವ್ಯವಹಾರವಿದ್ದಿತಾದರೂ ಅಪರೂಪ. ನಾಗೇಶನಿಗೆ ಮದುವೆಯೆಂದು ತಿಳಿದಾಗ ಎಲಿಸಾಳ ಮನಸ್ಸು ಅಸ್ತವ್ಯಸ್ತವಾಯಿತು. ಆದರೆ ಇದರಲ್ಲಿ

ನಾಗೇಶನ ತಪ್ಪಿಲ್ಲ. ಅವಳ ಮೂಕ ಪ್ರೇಮ, ಅವನಿಗೆ ಅಪರಿಚಿತ. ಅಪ್ಪಿತಪ್ಪಿಯೂ ಎಲಿಸಾ ತನ್ನ ಮನಸ್ಸನ್ನು ಹೊರಗೆಡಹಿರಲಿಲ್ಲ. ಬಹುಶಃ ನಾಗೇಶನ ಮದುವೆ ಇಷ್ಟು ಆಕಸ್ಮಿಕವಾಗಿ ಆಗುವುದೆಂದು ಭಾವಿಸಿರಲಿಲ್ಲವೇನೋ... ಎಡ್ವರ್ಡ್‌ಗೆ ಎಲಿಸಾಳ ಆಂತರ್ಯ ಅರ್ಥವಾಗಿತ್ತು. ಕ್ಯಾಸುಅಲ್ ಆಗಿ ನಾಗೇಶನಿಗೂ ಈ ವಿಷಯವಾಗಿ ಪತ್ರದಲ್ಲಿ ತಿಳಿಸಿದ್ದ.

ಒಂದು ಕ್ಷಣ ಮನಸ್ಸಿನಲ್ಲಿಯೇ ತನ್ನನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿದ... ಆದರೆ ಮರುಗಳಿಗೆಯಲ್ಲೇ ಕನಸಂತೆ ಕೊಡವಿ ಪರಿಸ್ಥಿತಿಯೊಂದಿಗೆ ಒಪ್ಪಂದ ಮಾಡಿಕೊಂಡ. ಶಶಿ ಯಾವುದರಲ್ಲಿಯೂ ತೆಗೆದುಹಾಕುವ ಹಾಗೆ ಇರಲಿಲ್ಲ. ಆದರೂ ನಾಗೇಶನಿಗೆ ಶಶಿಯೊಂದಿಗೆ ಇಂಟಿಮಸಿ ಒಮ್ಮೊಮ್ಮೆ ಅಸಹ್ಯವೆನಿಸುತ್ತಿತ್ತು... ತನ್ನ ಈ ದ್ವಂದ್ವ ಮನಸ್ಸಿಗೆ ಕಾರಣ ಹುಡುಕುವುದಕ್ಕೆ ಕೋಲಂಬಸ್ ಆದರೂ ಸೋತು ಹಿಂತಿರುಗುತ್ತಿದ್ದ. ತನಗೆ ಹೆಂಡತಿಯಾದದ್ದು ಶಶಿಯ ತಪ್ಪೇ?... ಇಲ್ಲ ಎಲಿಸಾಳ ಮನಸ್ಸನ್ನು ಅರ್ಥ ಮಾಡಿಕೊಳ್ಳದೆ, ತನ್ನ ಸುಪ್ತವಾದ ಬಯಕೆಯನ್ನು ಕಂಡುಕೊಳ್ಳದೆ ವಿಚಾರಶೂನ್ಯತೆಯಿಂದ ಶಶಿಯನ್ನು ಮದುವೆಯಾದದ್ದು ತನ್ನ ತಪ್ಪೇ?!– ಸಮಾಧಾನಕ್ಕಾಗಿ ಚಡಪಡಿಸಿದ.

ಕೊನೆಗೆ ಒಂದು ನಿರ್ಧಾರಕ್ಕೆ ಬಂದು ಹೇಳಿದ–

"ನೋಡು ಶಶಿ, ಒಬ್ಬರನ್ನು ಒಬ್ಬರು ಸರಿಯಾಗಿ ಅರ್ಥ ಮಾಡಿಕೊಳ್ಳದೆ, ನಮ್ಮೊಳಗೇ ಕಾವು ಕೊಡುತ್ತಿರುವ ಸಂಶಯಗಳನ್ನು ನಿವಾರಿಸಿಕೊಳ್ಳದೇ ಇದ್ದರೆ ಇಬ್ಬರ ಬದುಕೂ ನರಕವಾಗುವುದು ಖಂಡಿತ."

"ಇವನ್ನು ಮೊದಲೇ ಯೋಚಿಸಬಹುದಾಗಿತ್ತು."

"ಆದದ್ದು ಬೇಡ. ಆಗಬೇಕಾದ್ದನ್ನು ಆಲೋಚಿಸುವುದು ಮುಖ್ಯ... ಅದಕ್ಕೂ ಮುಂಚೆ, ನನ್ನ ಫ್ರೆಂಡ್ಸ್ ವಿಷಯವಾಗಿ ನಿನ್ನ ಅಭಿಪ್ರಾಯ"

"ಮೊದಲೂ ಸ್ಪಷ್ಟಪಡಿಸಿದ್ದೇನೆ. ಈ ಮನೆಯಲ್ಲಿ ನನಗೂ ನಿಮಗೂ ಸಮಾನ ಹಕ್ಕು ಇದೆ."

"ಒಪ್ಪಿಕೊಂಡೆ. ಆದರೆ ಅವರೆದುರು ನಮ್ಮ ಹುಚ್ಚಾಟ ಸಿಲ್ಲಿ ಅನಿಸಬಹುದು. ಆದ್ದರಿಂದ ನಾವಿಬ್ಬರೂ ಅವರೆದುರು ಭಿನ್ನಾಭಿಪ್ರಾಯವಿಲ್ಲದೆ ಅನ್ಯೋನ್ಯವಾಗಿ ಇರೋ ಹಾಗೇ ತೋರಿಸಿಕೊಳ್ಳಬೇಕು... ಇನ್ನೂ ಒಂದು... ನೀನು ಬಯಸುವ ಸ್ವೇಚ್ಛೆ, ಸ್ವಾತಂತ್ರ್ಯ ನಿನಗಿದೆ. ಬಂದವನ ಜೊತೆ ನಿನ್ನ ಇಚ್ಛೆಯಂತೆ ಸ್ವಚ್ಛಂದವಾಗಿ ಇರಬಹುದು... ಒಪ್ಪಿಗೆ ತಾನೇ?"

ಕೂಡಲೇ ಒಪ್ಪಿಗೆ ಕೊಡುವ ಮನಸ್ಸಿಲ್ಲದಿದ್ದರೂ, ನಾಟಕದ ಈ ಒಂದು ದೃಶ್ಯದಲ್ಲಿ ತಾನೂ ಬಿರುಸಾಗಿಯೇ ಪಾತ್ರ ವಹಿಸಬೇಕೆಂದುಕೊಂಡು,

"ಹೂಂ" ಎಂದಳು.

* * *

"ಹಲೋ ಡಾರ್ಲಿಂಗ್ ನಾಗೇಶ್" ಎನ್ನುತ್ತಾ ಹಿಡಿಸಲಾರದಷ್ಟು ಸಂಭ್ರಮದಿಂದ ಎಲಿಸಾ ನಾಗೇಶನ ಕೊರಳು ಬಳಸಿ, 'ಲೊಚ್' ಎಂದು ಅವನ ತುಟಿಯ ಮೇಲೊಂದು 'ತುಟಿ ಮುದ್ರೆ' ಯೊತ್ತಿದಳು. ಆದರೆ ಪಕ್ಕದಲ್ಲಿಯೇ, ಎಡ್ವರ್ಡನಿಗೆ ಕೈಮುಗಿಯುತ್ತಾ ನಿಂತಿದ್ದ ಶಶಿಯನ್ನು ಕಂಡಕೂಡಲೇ ಹಾವು ಮೆಟ್ಟಿದವಳಂತೆ ಬೆಚ್ಚಿ ಸರಕ್ಕನೆ ಕೊರಳು ಬಿಗಿದ ಕೈ ಬಳ್ಳಿಯನ್ನು ಕಿತ್ತು, ನೊಂದ ದನಿಯಲ್ಲಿ,

"ಸಾರಿ ಮೇಡಮ್"- ಎಂದಳು.

ನಾಗೇಶ್ ಬೆಪ್ಪಾಗಿ ನಿಂತುಬಿಟ್ಟ! ಎಡ್ವರ್ಡ್ ಮುಂದೆ ಬಂದು ಗೆಳೆಯನ ಕೈ ಕುಲುಕುತ್ತಾ,

"ಸಾರಿ ನಾಗೇಶ್, ಪ್ಲೇನ್ ಷೆಡ್ಯೂಲ್ ಟೈಂಗಿಂತ ಲೇಟಾಗಿ ಬಂದದ್ದಕ್ಕೆ ನಿಮ್ಮನ್ನು ಕಾಯಿಸಬೇಕಾಯಿತು ಎಂದು ಹೇಳುತ್ತಿದ್ದರೂ ಅವನ ಕಣ್ಣೆಲ್ಲಾ ನಿರಂಕುಶವಾಗಿ ಶಶಿಯ ದೇಹ ಪ್ರದೇಶದಲ್ಲೆಲ್ಲಾ ಓಡಾಡುತ್ತಿತ್ತು. ಎಡ್ವರ್ಡ್‌ನ ರೀತಿಯನ್ನು ಕಂಡು 'ತಥ್' ಎನಿಸಿದರೂ ಏನೋ ಹೊಳೆದು ಸೆರಗೆಳೆದು ಬಿಗಿಯಾಗಿ ಸಿಕ್ಕಿಸುತ್ತಾ ಸ್ವಲ್ಪ ವಯ್ಯಾರವನ್ನು ತೋರಿದಳು. ಒಳಗೆ ಏನೋ ಖುಷಿ!...

ನಾಗೇಶನ ಮನಸ್ಸಿಗೆ ಕಸಿವಿಸಿಯಾಗಲೆಂಬುದೇ ಅವಳ ಉದ್ದೇಶ. ಆದರೆ ನಾಗೇಶನಿಗೆ ಈ ಕಡೆ ಲಕ್ಷ್ಯವಿಲ್ಲವೆಂದೆ ತಿಳಿದಾಗ ಮನಸ್ಸು ಘೂತ್ಕರಿಸಿತು. ನಾಗೇಶನ ಮನಸ್ಸನ್ನು ಇನ್ನಷ್ಟು... ಮತ್ತಷ್ಟು ರೊಚ್ಚಿಗೆಬ್ಬಿಸಿ, "ನಾನಿಲ್ಲದೆ ಅವನು ಬದುಕಲಾರ" ಎನ್ನುವಂತೆ ಅನಿಸಿ ಅಸಹಾಯಕ ಸ್ಥಿತಿಯಲ್ಲಿದ್ದಾಗ ತನ್ನ ದೊಡ್ಡಸ್ತಿಕೆಯನ್ನು ಸ್ಥಾಪಿಸಬೇಕೆಂಬುದು ಅವಳ ಎಣಿಕೆ. ದೀಪದ ಸುತ್ತೂ ಸುತ್ತುವ ಪತಂಗದಂತಾಗಬೇಕು ಅವನ ಸ್ಥಿತಿ... ಇದು ಅವಳ ಮನಸ್ಸಿನ ಹುಚ್ಚು ಬಯಕೆ!

ನಾಗೇಶನಿಗೆ ಶಶಿಯ ಮನಸ್ಸಿನ ಜಾಡು ಹತ್ತಲಿಲ್ಲ. ಹತ್ತಿಸಿಕೊಳ್ಳುವ ಮನಸ್ಸೂ ಇರಲಿಲ್ಲ. ಶಶಿಯನ್ನು ಬಂಧಿಸಿ ತನಗಾಗೇ ಮೀಸಲಾಗಿ ಇರಿಸಿಕೊಳ್ಳಬೇಕೆಂದು ಬಯಸುವ ಪ್ರವೃತ್ತಿಯೂ ಅವನದಲ್ಲ. ತನ್ನ ಮತ್ತು ಎಲಿಸಾಳ ನಡುವಿನ ಆತ್ಮೀಯತೆಗೆ ಅಡ್ಡಿ ಬಾರದಿದ್ದರೆ ಅಷ್ಟೇ ಸಾಕು... ಎಡ್ವರ್ಡ್‌ನೊಂದಿಗೂ ವಿರೋಧವಿಲ್ಲದೆ ತನ್ನ ನಿರೀಕ್ಷೆಗಿಂತ ಹೆಚ್ಚು ಫ್ರೀಯಾಗಿರುವುದನ್ನು ಕಂಡು ನಾಗೇಶನಿಗೆ ಎಷ್ಟೋ ಸಮಾಧಾನ.

ನಾಟಕವಾಡಬೇಕೆಂಬ ಉದ್ದೇಶದಿಂದಲೇ ರಂಗಕ್ಕಿಳಿದಿದ್ದ ಶಶಿ ಕ್ರಮೇಣ ಉದ್ದೇಶದ ಅರಿವು ಮರೆತು, ಎಡ್ವರ್ಡ್‌ನ ಮಾದಕ ಸಾಹಚರ್ಯದಲ್ಲಿ ನಾಗೇಶನಿಂದ ಒಂದೊಂದೇ ಹೆಜ್ಜೆ ದೂರ ಸರಿಯುತೊಡಗಿದಳು. ಎಡ್ವರ್ಡ್ ಎಲ್ಲಿಗೆ ಕರೆದರೂ ಶಶಿಯು ಅಭ್ಯಂತರವಿರಲಿಲ್ಲ. ನಾಗೇಶ್–ಎಲಿಸಾ, ಶಶಿ–ಎಡ್ವರ್ಡ್ ಬೇರೆ ಬೇರೆಯಾಗಿಯೇ ಪ್ರೋಗ್ರಾಮ್ಸ್ ಹಾಕಿಕೊಂಡು ಹೊರಡುತ್ತಿದ್ದರು.

ಮೊದಮೊದಲು, ಶಶಿ–ಎಡ್ವರ್ಡ್‌ರ ವಿಚಾರವಾಗಿ ನಾಗೇಶ್ ತಲೆಕೆಡಿಸಿ ಕೊಳ್ಳುತ್ತಿರಲಿಲ್ಲವಾದರೂ... ಯಾಕೋ ಇತ್ತೀಚೆಗೆ ಅವನ ಮನಸ್ಸು ಅವ್ಯಕ್ತ ಭೀತಿ, ಕಳವಳದಿಂದ ತುಂಬಿ ಹೋಗುತ್ತಿತ್ತು. ಶಶಿ ಛಲವಾದಿ ನಿಜ. ಆದರೆ ವಿವೇಕ ಕಡಿಮೆ. ಅವಳ ನಡವಳಿಕೆಯ ಪರಿಣಾಮವನ್ನು ಕುರಿತು ನಾಗೇಶನ ಪಾತಾಳ ಮನಸ್ಸು ಭಯಂಕರವಾಗಿ ಕಂಪಿಸುತ್ತಿತ್ತು. ಶಶಿ... ಯಾಕೋ ತನ್ನ ಮೇರೆ ಮೀರಿ ಹೋಗುತ್ತಿದ್ದಾಳೆ ಎನಿಸುತ್ತಿತ್ತು. ಆದರೂ ಹೇಳುವ ಹಾಗಿರಲಿಲ್ಲ. ಹೇಳಿದರೆ ಕೇಳುವ, ಅರ್ಥ ಮಾಡಿಕೊಳ್ಳುವ ಮನಃಸ್ಥಿತಿಯಲ್ಲಿಲ್ಲ... ಅವಳು. ಎಡ್ವರ್ಡ್‌ನಿಗೆ ಹೇಳಿದರೆ ಅಪಾರ್ಥ ಮಾಡಿಕೊಂಡಾನೆಂಬ ಭೀತಿ... "ಗಾಳಿಗೊಡ್ಡಿದ ದೀಪ"... ಇರಲಿ– ಏನಾಗುವುದೋ ನೋಡೋಣವೆಂದು ಪರಿಣಾಮಕ್ಕಾಗಿ ಕಾದು ಕುಳಿತ.

ನಾಗೇಶನಿಗೂ ತನ್ನದು ವಿಚಿತ್ರ ಮನಸ್ಸು ಎನಿಸುತ್ತಿದೆ. ಎಲಿಸಾಳು ಇಲ್ಲದಾಗ, ಅವಳ ದೂರದ ನೆನಪಿನಿಂದ ಸಾಹಚರ್ಯವನ್ನು ಬಯಸುತ್ತಿತ್ತು. ಆದರೆ ಈಗ ನಿರಂತರ ಸಾಹಚರ್ಯದಿಂದ, ಭಿನ್ನ ಸಂಸ್ಕೃತಿಗಳ ಪ್ರಭಾವದಿಂದ ಇಬ್ಬರ ಮನಸ್ತತ್ವಗಳಲ್ಲಿ ಇದ್ದ ಅಂತರವನ್ನು ಈಗೀಗ ಕಂಡುಕೊಳ್ಳುತ್ತಿರುವಂತೆ ಅನಿಸುತ್ತಿತ್ತು. 'ತಾನು ಗಂಡು ಏನಾದರೂ ಬಚಾಯಿಸಿಕೊಳ್ಳಬಹುದು; ಸಮರ್ಥಿಸಿಕೊಳ್ಳಬಹುದು. ಆದರೆ ಶಶಿ...? ಎಂದು ಯೋಚಿಸುತ್ತಿದ್ದ ನಾಗೇಶನಿಗೆ 'ಶಶಿ' ಒಂದು ದೊಡ್ಡ ಸಮಸ್ಯೆಯಾಗಿ ಕಂಡಳು.

ಒಂದು ವೇಳೆ 'ಶಶಿ' ಅವಿವೇಕದಿಂದ ಎಡವಿದರೂ, ತಾನು ಕ್ಷಮಿಸಬಹುದು, ಆದರೆ ಸಮಾಜಕ್ಕೆ ಅಂತಹ ಔದಾರ್ಯವಿಲ್ಲ. ಹಾಗೂ ಹೀಗೂ ಅದನ್ನು ನಿರೀಕ್ಷಿಸುವ ಸಾಧ್ಯತೆಯಿದ್ದರೂ, 'ಶಶಿ' ಮಾನಸಿಕ ದುರಂತಕ್ಕೆ ಈಡಾಗುವುದ್ನು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲವೆಂದೇ ಅವನ ಬಲವಾದ ನಂಬಿಕೆ. ಅವಳನ್ನು ಯಾವ ರೀತಿ ಈ ಚಕ್ರಬಂಧದಿಂದ ಬಿಡಿಸಬೇಕೆಂಬ ಆಲೋಚನೆಯು ಬೆನ್ನು ಹತ್ತಿರುವಷ್ಟರಲ್ಲಿಯೇ– ಕಿಲಕಿಲನೆ ನಗುತ್ತಾ ಒಳಗೆ ಬಂದ ಶಶಿ– ಎಡ್ವರ್ಡ್‌ರನ್ನು ನೋಡಿ ಉದ್ವೇಗದಿಂದ ಸಭ್ಯತೆಯನ್ನೂ ಮೀರಿ–

'ಶಶಿ'– ಎಂದು ಗುಡುಗಿದ.

ಅವನ ಅಬ್ಬರದ ಧ್ವನಿಗೆ ಕ್ಷಣಕಾಲ ಎದೆ ನಡುಗಿದಂತಾದರೂ ಮರುಕ್ಷಣದಲ್ಲಿಯೇ ಚೇತರಿಸಿಕೊಂಡು, ಏನೂ ಆಗದವಳಂತೆ, ನಾಗೇಶನ ಉಪಸ್ಥಿತಿಯನ್ನೂ ಲೆಕ್ಕಿಸದೆ

ದಡದಡನೆ ಒಳಗೆ ನಡೆದು ತನ್ನ ಕೋಣೆಯ ಬಾಗಿಲನ್ನು ಭದ್ರಪಡಿಸಿಕೊಂಡು ಬಿಕ್ಕಿ ಬಿಕ್ಕಿ ಅಳತೊಡಗಿದಳು. ಎಷ್ಟು ಉದ್ಧಟಳಾಗಿ ನಡೆದುಕೊಳ್ಳಬೇಕೆಂದರೂ ಅವಳ ಹೆಣ್ಣು ಹೃದಯ ಸೋಲುತ್ತಿರುವಂತೆ ಅನಿಸಿತು. ಹೃದಯದ ಬಡಿತ ಎಣಿಕೆಗೆ ಸಿಗದಷ್ಟು ವೇಗವಾಯಿತು. ತನ್ನ ಹುಚ್ಚಾಟದ ಪರಿಣಾಮದ ಸೀರಿಯಸ್‌ನೆಸ್ ಈಗ ಅವಳಿಗೆ ಸ್ವಲ್ಪ ಸ್ವಲ್ಪವಾಗಿ ಅರಿವಾಗುತ್ತಿದೆ. ಎಡ್ವರ್ಡ್‌ನ ಪ್ರತಿಯೊಂದು ಕೃತಿಯಲ್ಲಿಯೂ ಇದ್ದಿರಬಹುದಾದ ದುರುದ್ದೇಶದ ಸ್ವರೂಪವನ್ನು ಈಗ ವಿಮರ್ಶಿಸತೊಡಗಿದ್ದಾಳೆ. ಒಂದೇ ಒಂದು ಘಟನೆ... ಅವಳಿಗೆ ಮಸುಕು ಮಸುಕಾಗಿ ನೆನಪಿಗೆ ಬರುತ್ತಿದೆ... ಹೌದು ಹೌದು... ತಾನೆಷ್ಟು ಬೇಡವೆಂದರೂ ಎಡ್ವರ್ಡ್‌ನ ಬಲವಂತದಿಂದಾಗಿ, ಸಭ್ಯತೆಯನ್ನು ಉಳಿಸಿಕೊಳ್ಳುವುದಕ್ಕಾಗಿ ಒಂದೇ ಒಂದು ಪೆಗ್...

ಇಲ್ಲ... ಇಲ್ಲ... ಅದೆಷ್ಟೋ ನೆನಪಿಲ್ಲ...

'ಸಾರಿ ಮಿಸೆಸ್ ನಾಗೇಶ್'-ಎಂದು ಅಪರಾಧಿ ದನಿಯಲ್ಲಿ ಹೇಳಿದ ಎಡ್ವರ್ಡ್‌ನನ್ನು ಕಂಡು ಮಾತಾಡಲು ಅಸಹ್ಯಪಟ್ಟುಕೊಂಡು,

"ಟೇಕ್ ಮಿ ಹೋಂ ಮಿ. ಎಡ್ವರ್ಡ್' ಎಂದು ಮೊಡಕಾಗಿ ಆಜ್ಞಾಪಿಸಿದಳು.

ಆಟೋ ಹತ್ತಿ ಕುಳಿತ ಎಡ್ವರ್ಡ್,

"ಕರ್ಜನ್ ರೋಡ್" ಎಂದ.

* * *

ಅದೃಷ್ಟಕ್ಕೆ ನಾಗೇಶ್ ಅಷ್ಟು ಹೊತ್ತಾದರೂ ಮನೆಗೆ ಬಂದಿರಲಿಲ್ಲ. ಎಲಿಸಾ, ಇಷ್ಟು ಹೊತ್ತಾದರೂ ಬಾರದ ಶಶಿ-ಎಡ್ವರ್ಡ್‌ರ ಹಾದಿ ಕಾಯುತ್ತಾ ಮ್ಯಾಗಜೈನ್ ಒಂದರ ಪುಟಗಳನ್ನು ತಿರುವಿ ಹಾಕುತ್ತಿದ್ದಳು.

ಬಂದವಳೇ ತನ್ನ ಕೋಣೆಯತ್ತ ಓಡುವ ಆತುರದಲ್ಲಿದ್ದ ಶಶಿಯ ಕೈಗೆ ಒಂದು ತುಂಡು ಕಾಗದವನ್ನು ನೀಡುತ್ತಾ,

"ಮಿ॥ ನಾಗೇಶ್, ಅರ್ಜೆಂಟ್ ಕೆಲಸದ ಮೇಲೆ ಹೋಗಿದ್ದಾರಂತೆ, ನಿಮಗೆ ತಿಳಿಸಲು ಹೇಳಿದರು" ಎಂದು ಕರ್ತವ್ಯ ಮುಗಿದವಳಂತೆ ಹೇಳಿದಳು.

ಶಶಿ ಯಾವುದನ್ನೂ ಕೇಳಿಸಿಕೊಳ್ಳುವ ಮನಃಸ್ಥಿತಿಯಲ್ಲಿರಲಿಲ್ಲ. ಒಳಗೋಡಿ ಬಾಗಿಲು ಹಾಕಿಕೊಂಡು ನಾಗೇಶನ ತುಂಡು ಕಾಗದವನ್ನು ಬಿಚ್ಚಿ ನೋಡಿದರೆ, "ಬೀ ಆನ್ ಯುವರ್ ಗಾರ್ಡ್" ಅನ್ನುವುದನ್ನು ಬಿಟ್ಟರೆ ಮತ್ತೇನೂ ಇರಲಿಲ್ಲ...

ನಿಜ ನಾಗೇಶ್ ಈ ವಿಷಯವಾಗಿ ಅಜ್ಞ, ಆದರೆ ಇವಳಿಗೆ ಮನಸ್ಸು, ಪ್ರಜ್ಞೆ, ಕೆಸರಿಗಿಳಿದಾದ ಮೇಲೆ ಅಪಾಯದ ಸೂಚನೆ ನೀಡುತ್ತಿದೆ. ಅವಳಿಗೇ ಅವಳ ನಡತೆ

ಅಸಹ್ಯವೆನಿಸುತ್ತಿದೆ... ನಾಗೇಶನ ಕಾಲು ಹಿಡಿದು ಅವನ ಕ್ಷಮೆ ಕೇಳೋಣವೆನಿಸಿದರೆ... ಎಲ್ಲೋ ಇರುವ ಅವಳ ಸ್ವಾಭಿಮಾನ ಅವಳನ್ನು ಅಡ್ಡಗಟ್ಟುತ್ತದೆ. ಅವಳ ಅಪರಾಧ ಅವಳ ಮನಸ್ಸಿನಲ್ಲಿಯೇ ಗೋರಿಯಾಗಬೇಕೆಂದು ಬಯಸುತ್ತದೆ... ಶಶಿಯ ಮನಸ್ಸು ತೂಗುಯ್ಯಾಲೆಯಾಯಿತು!... ತೂಗಿನ ವೇಗ ಜಾಸ್ತಿಯಾಗುತ್ತಿದೆ... ತಲೆಸುತ್ತಿ ಬಂದಂತಾಗಿ ಚಿಟ್ಟನೆ ಚೀರಿದಳು.

ಹೊರಗಿನಿಂದ ಬಾಗಿಲು ಬಡಿದ ಸದ್ದು... ಶಶೀ... ಶಶೀ... ಎನ್ನುವ ಕೂಗು.

ಈ ಧ್ವನಿ ನಾಗೇಶನದೇ... ಮುಖ ತೋರುವ ಸಾಹಸವಿಲ್ಲ. ಆದರೂ ಯಾವುದೋ ಆವೇಶ ಅವಳನ್ನು ಬಾಗಿಲೆಡೆಗೆ ತಳ್ಳಿತು. ಸೆರಗು ಸರಿಪಡಿಸಿಕೊಂಡು ಯಾಂತ್ರಿಕವಾಗಿ ಬಾಗಿಲು ತೆಗೆದಳು.

ನಾಗೇಶ್‌ನೊಂದಿಗೆ, ಎಡ್ವರ್ಡ್ ಎಲಿಸಾ ಇಬ್ಬರೂ ಕೈ ಜೋಡಿಸಿ, "ಗುಡ್ ಬೈ ಮಿ॥ ನಾಗೇಶ್" ಎನ್ನುತ್ತಿರುವುದು ಕೇಳಿಸುತ್ತಿದೆ!... ಆದರೆ ಅವಳ ದೃಷ್ಟಿ ನಾಗೇಶನ ಶೂನ್ಯ ತುಂಬಿದ ಕಣ್ಣುಗಳನ್ನೇ ಬೆನ್ನಟ್ಟಿದೆ.

* * *

ನಾಗರ ಕಲ್ಲು

ರಾಯರು ಭರ್ಜರಿ ಊಟ ಮಡಿ, ಮುದ್ದಿನ ಮಡದಿ ಮಡಿಚಿಕೊಟ್ಟ ಎಲೆ ಅಡಿಕೆ ಮೆಲ್ಲುತ್ತಾ ಹೊರಗಿನ ಜಗುಲಿಯ ಮೇಲೆ ಕುಳಿತುಕೊಂಡು ದಿನಪತ್ರಿಕೆಯ ಪುಟಗಳನ್ನು ತಿರುವಿ ಹಾಕುತ್ತಿದ್ದರು. ಮಧ್ಯಾಹ್ನದ ಬಿಸಿಲ ಝಳ ಬಹಳ ಜೋರಾಗಿ ಇದ್ದದ್ದರಿಂದ ಒಂದು ಪಿಳ್ಳೆಯೂ ಕಾಣಿಸುತ್ತಿರಲಿಲ್ಲ. ದೂರದಲ್ಲಿ ಎಲ್ಲಿಂದಲೋ ನಾಯಿಯೊಂದರ ಕುಂಯ್ ಕುಂಯ್ ಶಬ್ದ ಕೇಳಿಬರುತ್ತಿತ್ತು. ಅಷ್ಟಲ್ಲದೆ ವಾತಾವರಣದಲ್ಲಿ ಚೈತನ್ಯವೇ ಇದ್ದಂತೆ ಕಾಣಲಿಲ್ಲ. ಇಂಥ ರಣಬಿಸಿಲಲ್ಲಿ ರಾಯರು ಓದುವುದಕ್ಕೆ ಪ್ರಯತ್ನಪಟ್ಟರೂ ಭುಕ್ತಾಯಾಸ ಬೇರೆ ಜೊತೆಗೆ ಸೇರಿದ್ದರಿಂದ ಹಾಗೇ ಜೊಂಪು ಹತ್ತಿತು. ಮೆಲ್ಲನೆ ಸರಿದು ಕಂಬಕ್ಕೊರಗಿಕೊಂಡರು.

"ರಾಯರೇ, ರಾಯರೇ, ಏನು ಇಷ್ಟು ಬೇಗ ನಿದ್ದೆ ಹತ್ತಿಬಿಟ್ಟಿತೇ?"

–ಎಂದು ಜೋಯಿಸರು ಕೂಗಿ ಕರೆದದ್ದರಿಂದ, ರಾಯರು ಬೆಚ್ಚಿದಂತೆ ಕಣ್ಬಿಟ್ಟರು. ನಿದ್ದೆಯ ಮಂಪರಿನಿಂದ ಸಾವರಿಸಿಕೊಂಡು ಮೀಸೆ ಕೆಳಗಿನ ತುಟಿಯ ಮೇಲೆ ನಗು ತಂದುಕೊಳ್ಳುತ್ತಾ,

"ಓಹೋಹೋ.. ಜೋಯಿಸರು, ಬನ್ನಿ, ಬನ್ನಿ ಇದೇನು ಜೋಯಿಸರೇ ಇಷ್ಟು ಹೊತ್ತಿನಲ್ಲಿ ಈ ಉರಿಬಿಸಿಲಲ್ಲಿ ಎಲ್ಲಿಗೋ ಹೊರಟು ಬಂದ ಹಾಗೆ ಇದೆ" ಎಂದರು.

"ಏನಿಲ್ಲ, ಹೀಗೇ ಆ ಮೂಲೆ ಮನೆ ಶಂಕರಪ್ಪನವರ ತಂದೆಯ ವರ್ಷಾಬ್ದೀಕವಿತ್ತು. ಮುಗಿಸಿಕೊಂಡು ಬರ್ತಿದ್ದೆ. ನೋಡಿದೆ, ನೀವು ಹೊರಗೇ ಕುಳಿತಿದ್ದುದು ಕಾಣಿಸಿತು. ಮಾತಾಡಿಸಿಕೊಂಡು ಹಾಗೇ ನಿಮ್ಮಾಕೆ ಏನೋ ವ್ರತಗಿತ ಅಂತಾ ಹೇಳ್ತಿದ್ರು. ವಿಚಾರಿಸಿಕೊಂಡು ಹೋಗೋಣವೆಂದು ಬಂದೆ."

"ಓ! ಹಾಗೇನು ಸಮಾಚಾರ. ನನಗೇನೂ ನನ್ನಾಕೆ ಹೇಳಿರಲಿಲ್ಲ. ಬನ್ನಿ ಕೂತ್ಕೊಳ್ಳಿ ಜೋಯಿಸರೇ. ನಿಂತೇ ಮಾತನಾಡ್ತಿದೀರಲ್ಲ."

"ಇಲ್ಲ, ರಾಯರೇ, ಕೂತ್ಕೊಳ್ಳೋಕೆ ಈಗ ವ್ಯವಧಾನವಿಲ್ಲ. ಈಗಲೇ ತುಂಬಾ ಹೊತ್ತಾಗಿದೆ. ನಿಮ್ಮ ಮನೆಯವರಿಗೆ ಹೇಳಿ. ಇವತ್ತು ಸಂಜೆಗೋ ಇಲ್ಲ ನಾಳೆ ಬೆಳಿಗ್ಗೆಗೋ ಬಂದು ವಿವರವಾಗಿ ಎಲ್ಲ ಮಾತಾಡ್ತೀನಿ" ಎಂದು ಹೇಳುತ್ತಾ ಹೊರಡಲು ಅನುವಾದರು.

"ನಿಲ್ಲಿ ಜೋಯಿಸರೇ, ಒಂದು ಲೋಟ ಪಾನಕವನ್ನಾದರು ಕುಡಿದು ಹೋಗಬಹುದಲ್ಲಾ" ಎನ್ನುತ್ತಾ, ಮಡದಿಯ ಹೆಸರ್ಹಿಡಿದು ಕೂಗಿದರು. ಒಳಗಡೆ 'ವಿಷ್ಣು ಸಹಸ್ರ ನಾಮಾವಳಿ' ಪುಸ್ತಕ ಓದುತ್ತಿದ್ದ ಸೀತಮ್ಮ ಎಚ್ಚೆತ್ತು, ಪುಸ್ತಕದ ಹಾಳೆ ಮಧ್ಯೆ ಗುರುತಿಗಾಗಿ ಒಂದು ತುಂಡು ಪೇಪರನ್ನು ಇಟ್ಟು ಎದ್ದು ಬಂದರು.

"ನಮಸ್ಕಾರ ಜೋಯಿಸರೇ. ಯಾವಾಗ ಬಂದಿರಿ ಇಲ್ಲಿಗೆ? ನೀವು ಬಂದದ್ದು ತಿಳಿಯಲೇ ಇಲ್ಲ. ಇವರು ಮಾತಾಡ್ತಿದ್ದದ್ದು ಕೇಏಳಿಸಿತಾದರೂ, ಯಾರ ಜೊತೆಗೋ ಏನೋ ಅಂತ ಸುಮ್ಮನಾದೆ."

"ಶಂಕರಪ್ಪನವರ ಮನೆಗೆ ಹೋಗಿದ್ದೆ. ಬರುವಾಗ ರಾಯರು ಹೊರಗೇ ಕುಳಿತಿದ್ದುದು ನೋಡಿ ಹಾಗೇ ಮಾತಾಡಿಸಿಕೊಂಡು ಹೋಗೋಣಾಂತ ಬಂದೆ" ಸಂಕ್ಷಿಪ್ತವಾಗಿ ಉತ್ತರಿಸಿದರು ಜೋಯಿಸರು.

"ನಿನ್ನೆ ನಾನು ಸೀನು ಕೈಯಲ್ಲಿ ನಿಮಗೋಸ್ಕರ ಹೇಳಿಕಳಿಸಿದ್ದೆ. ನೀವು ಇರಲಿಲ್ಲವಂತೆ. ನಿಮ್ಮ ಮನೆಯವರು ಹೇಳಿರಬಹುದು."

"ಹೂಂ, ಹೇಳಿದರು. ಅದಕ್ಕೇ ಅದನ್ನೂ ವಿಚಾರಿಸಿಕೊಂಡು ಹೋಗೋಣಾಂತ ಅಂದುಕೊಂಡೆ. ನೀವು ಕೇಳಿದ ವ್ರತದ ವಿಚಾರ ಇವತ್ತು ಸಂಜೆಗೆ, ಇಲ್ಲ ಬೆಳಿಗ್ಗೆ ಬಂದು ವಿವರವಾಗಿ ಹೇಳ್ತೀನಿ. ಈಗ ಹೊತ್ತಾಗುತ್ತೆ ಬರ್ತೀನಿ" ಎಂದು ಹೇಳುತ್ತ ಬಿರಬಿರನೆ ಹೆಜ್ಜೆ ಹಾಕಿದರು.

ಇಷ್ಟು ಹೊತ್ತು ಇವರ ಸಂಭಾಷಣೆ ಕೇಳುತ್ತಿದ್ದ ರಾಯರು, ಮೆಲ್ಲನೆ ನಗುತ್ತಾ ಮಡದಿಯನ್ನು ತುಂಟದೃಷ್ಟಿಯಿಂದ ನೋಡಿದರು. ರಾಯರ ಚೇಷ್ಟೆ, ಸ್ವಭಾವದ ಅನುಭವಪಿದ್ದ 'ಸೀತೆ' ಯ ಮುಖದ ನಾಚಿಕೆಯಿಂದ ಬಲೂನಾಯಿತು. ಇದೆಲ್ಲ ಏಕೆಂದು ಎಲ್ಲಿ ಕೇಳಿಬಿಡುತ್ತಾರೋ ಅನ್ನುವ ಭಯ. ಆದರೆ ರಾಯರಿಗೆ ಇವುಗಳ ಸೂಕ್ಷ್ಮ ತಿಳಿಯದಿರುವುದು ಸಾಧ್ಯವೇ ಇಲ್ಲ. ಈ ಹದಿನೈದು ವರ್ಷಗಳ ಸಹಬಾಳ್ವೆಯಿಂದ ಸೀತೆಯ ಮನಸ್ಸು ಮುಳ್ಳು ಮೊನೆಯಷ್ಟೂ ಬಿಡದೆ ಪೂರ್ತಿ ಅರ್ಥವಾಗಿ ಹೋಗಿದೆ. ಆದ್ದರಿಂದಲೇ ರಾಯರು ಆಕೆಯ ಮನಸ್ಸನ್ನು ಯಾವ ವಿಧದಲ್ಲೂ ನೋಯಿಸಲು ಇಷ್ಟಪಡುವುದಿಲ್ಲ. ಅವಳ ಮನಸ್ಸಿನಂತೆ ಅವಳಿಗೆ ಇರಲು ಸಂಪೂರ್ಣ ಸ್ವಾತಂತ್ರ್ಯವಿದೆ. ಆದರೂ ರಾಯರು ಮಡದಿಯನ್ನು ಚುಡಾಯಿಸದಿದ್ದರೆ ಚೇಷ್ಟೆ ಮಾಡಿ ಕೋಪ ಬರಿಸದಿದ್ದರೆ ಉಂಡದ್ದು ಜೀರ್ಣವಾಗುವ ಹಾಗೆ ಕಾಣುತ್ತಿರಲಿಲ್ಲ. ಅಂತಲೇ ಅವರು ಈಗಲೂ ಹೇಳಿಯೇ ಬಿಟ್ಟರು.

"ನನಗೆ ಗೊತ್ತು ಸೀತು. ಇದೆಲ್ಲಾ ಯಾಕೆ ಮಾಡೋದಕ್ಕೆ ಹೊರಟಿದ್ದೀ ಅಂತ. ನೀನು ಹೇಳದಿದ್ದರೂ ನನಗೆಲ್ಲಾ ಗೊತ್ತಾಗುತ್ತೆ."

"ಹೂಂ ನಿಮಗೆಲ್ಲಾ ಗೊತ್ತಾಗುತ್ತೆ ನೀವು ಸರ್ವಜ್ಞರು ನೋಡಿ. ಪ್ರಪಂಚದ ವಿಷಯವೆಲ್ಲ ನಿಮಗಲ್ಲದೆ ಇನ್ಯಾರಿಗೆ ತಾನೇ ಗೊತ್ತಾಗುತ್ತೆ!"

"ಅಲ್ವೆ ನನ್ನನ್ನು ಸರ್ವಜ್ಞ ಅಂತೇನೋ ಹೇಳ್ಬಿಟ್ಟೆ. ಆದರೆ ಸರ್ವಜ್ಞನಿಗೆ ಹೆಂಡತೀನೇ ಇರಲಿಲ್ವಲ್ಲೇ! ಪಾಪ ಬದುಕಿಕೊಂಡ. ನಿನ್ನಂಥ ಹೆಂಡತಿ ಇದ್ದುಬಿಟ್ಟಿದ್ದರೆ ಅವನ ಪಾಡು ಪರಮಾತ್ಮನಿಗೇ ಪ್ರೀತಿ" ನಗುವಿನ ಲಹರಿಯಲ್ಲೇ ನುಡಿದರು.

"ಹೌದೂಂದ್ರೆ ನಾನು ಬಜಾರಿ. ಗಂಡನ ಬಗ್ಗೆ ಪ್ರೀತಿಯಿಲ್ಲ. ಗೌರವವಿಲ್ಲ; ಹೌದಲ್ಲ! ಅದಕ್ಕೇ ನಿಮಗೆ ಹೇಳೋದು ಇನ್ನೊಂದು ಮದುವೆ ಮಾಡ್ಕೊಳ್ಳಿ ಅಂತ" ಬಿಸಿ ಬಿಸಿಯಾಗಿಯೇ ನುಡಿದಳು ಸೀತಮ್ಮ.

"ಅಬ್ಬ ನನ್ ಕತೆ ಮುಗಿದ ಹಾಗೆ. ಒಬ್ಬಳು ಹೆಂಡತಿ ಇದ್ದೇ ಕಣ್ಣಿಗೆ ನಿದ್ದೆ ಸರಿಯಾಗಿ ಹತ್ತೊಲ್ಲ. ಇನ್ನೊಬ್ಬಳು ಬಂದರೆ ಇದೆಯಲ್ಲ ವರ್ಷಪೂರ್ತಿ ಜಾಗರಣೆ–ಜೊತೆಗೆ ನೀವಿಬ್ಬರೂ ಜ್ಯೂಡೊ ಫೈಟಿಂಗ್ ಮಾಡೋಕೆ ಮೊದಲಿಟ್ಟರೆ ನನ್ನ ಸ್ಥಿತಿ ದೇವರಿಗೇ ಪ್ರೀತಿ."

–ಎಂದು ಹೇಳುತ್ತ ಒಳಗೊಳಗೇ ಮುಸಿ ಮುಸಿ ನಕ್ಕರು. ರಾಯರು ನಗುತ್ತಿದ್ದುದನ್ನು ಗಮನಿಸಿದ ಸೀತಳಿಗೆ ರೋಷವುಕ್ಕಿ ಬಂತು. ಆದರೆ ಮರುಕ್ಷಣದಲ್ಲಿ ಅದು ದುಃಖಕ್ಕೆ ತಿರುಗಿತು. ಕಣ್ಣೊರೆಸಿಕೊಳ್ಳುತ್ತಲೇ ಹೇಳಿದಳು.

"ನಿಮಗೇನೋ ಎಲ್ಲ ತಮಾಷೆ. ಇಷ್ಟು ವರ್ಷಗಳಾದರೂ, ನನ್ನ ಮನಸ್ಸಿನ ನೋವು ಏನೂನ್ನೋದು ತಿಳಿದಿಲ್ಲ."

ರಾಯರು ಮೇಲುನೋಟಕ್ಕೆ ಸುಖಪುರುಷರ ಹಾಗೆ, ವಿನೋದ ಸ್ವಭಾವದವರ ಹಾಗೆ ಕಂಡರೂ ಒಳಗೊಳಗೇ ನೋವಿನ ನೂಲು ಹೊಸೆಯುತ್ತಿತ್ತು. ಸೀತೆಯ ಮಾತು ಈಗ ಅವರ ಚಿಂತೆಯ ತಂತಿಯನ್ನು ಮೀಟಿ ಎಳೆದಂತಾಯಿತು. ವ್ಯಂಗ್ಯವಾಗಿ ನಕ್ಕು ಹೇಳಿದರು.

"ಸೀತೆ ಇಷ್ಟು ವರ್ಷವಾದರೂ ಅರ್ಥ ಮಾಡಿಕೊಳ್ಳದೆ ಇರೋದು ನಾನಲ್ಲ, ನೀನು. ನಿನ್ನ ನೋವು ನನಗೆ ಅರ್ಥವಾಗುತ್ತಿಲ್ಲ ಅನ್ನೋದು ಬರೀ ಸುಳ್ಳು. ನಿನಗಿಂತ ನೂರು ಪಾಲು ನಾನೇ ಹೆಚ್ಚು ನೊಂದುಕೊಳ್ಳುತ್ತಿದ್ದೇನೆ. ಆದರೆ ನೊಂದರೆ ಏನು ಪ್ರಯೋಜನ? ಆಗದೆ ಇರುವುದಕ್ಕೆ ಪ್ರಯತ್ನಪಡುವುದರಲ್ಲಿ ಅರ್ಥವಿಲ್ಲ. ನಿನಗೆ ಸಾವಿರ ಸಲ ಹೇಳಿದ್ದೀನಿ. ಈ ಪೂಜೆ ಪುನಸ್ಕಾರ, ವ್ರತ, ನೇಮ ಇವು ಯಾವುದರಿಂದಲೂ ಸಾಧ್ಯವಿಲ್ಲ. ಇವೆಲ್ಲ ಬರಿಯ ಭ್ರಾಂತು. ಕೇವಲ ಇವುಗಳಿಂದಲೇ ಮನುಷ್ಯ ಬಯಸಿದ್ದೆಲ್ಲಾ

ಆಗುವುದಕ್ಕೆ ಸಾಧ್ಯವಿದ್ದಿದ್ದರೆ ಪ್ರಪಂಚದಲ್ಲಿ ಇರೋ ಕಲ್ಲು ಬಂಡೆಗಳೆಲ್ಲಾ ದೇವಮೂರ್ತಿಗಳಾಗುತ್ತಿದ್ದವು. ವಾಸ ಮಾಡುವುದಕ್ಕೆ ಮನೆಯಿಲ್ಲದ ಹಾಗೆ ಮಂದಿರಗಳಾಗುತ್ತಿದ್ದವು. ನಮ್ಮ ನಮ್ಮಲ್ಲಿನ ದೇಹ ಪ್ರಕೃತಿಯಲ್ಲಿ ಏನಾದರೂ ಹೆಚ್ಚು ಕಡಿಮೆಯಾಗಿರುವುದರಿಂದಲೇ ನಮಗೆ ಮಕ್ಕಳ ಲಭ್ಯವಿಲ್ಲ. ನನ್ನ ಮಾತು ನಂಬು."

ಆದರೆ ಸೀತೆಗೆ ರಾಯರ ವಾದ ಒಪ್ಪಿಗೆಯಾಗಲಿಲ್ಲ.

"ನಿಮಗೆ ಬಿಡಿ. ಯಾವುದರಲ್ಲಿಯೂ ನಂಬಿಕೆಯಿಲ್ಲ. ದೇವರು ದಿಂಡ್ರು ಅಂದ್ರೆ ಭಯಭಕ್ತಿ ಇಲ್ಲ. ನನಗೇನೋ ಮಕ್ಕಳ ಗೌರಿ ವ್ರತ ಮಾಡಿದ್ರೆ ಮಕ್ಕಳಾಗಬಹುದು ಎನಿಸುತ್ತೆ. ನೀವು ಮಾತ್ರ ಇದಕ್ಕೆ ದಯವಿಟ್ಟು ಅಡ್ಡ ಬರಬೇಡಿ, ಅಡ್ಡ ಮಾತೂ ಹಾಕ್ಬೇಡಿ" ಎಂದು ಪ್ರಾರ್ಥಿಸುವಂತೆ ಕೇಳಿದಳು.

"ನಿನ್ನಿಷ್ಟ ಸೀತಾ. ನಿನ್ನ ಯಾವ ನಂಬಿಕೆಗೂ ಅಡ್ಡಿ ಬರೊಲ್ಲ. ಎಂದೂ ಬಂದೂ ಇಲ್ಲ. ಅವರವರ ವಿಚಾರ, ನಂಬಿಕೆ ಅವರವರಿಗೆ. ವೈಯಕ್ತಿಕವಾದ ವಿಷಯಗಳಲ್ಲಿ ಬೇರೆಯವರು ಅಡ್ಡ ಬರೋದು ನನಗಿಷ್ಟವಿಲ್ಲ. ಆದರೆ ನನಗೆ ಮಾತ್ರ ನೀನು ಹೇಳಿದ ಹಾಗೆ ದೇವರು, ಧರ್ಮ ಅನ್ನೋ ವಿಚಾರದಲ್ಲಿ ಎಳ್ಳಷ್ಟೂ ನಂಬಿಕೆ ಇಲ್ಲ."

ಸೀತಮ್ಮನಿಗೆ ಒಂದೊಂದು ಸಲ ರಾಯರ ವಿಚಾರವೇ ಸರಿಯೇನೋ ಅನಿಸುತ್ತಿತ್ತು. ಆದರೆ ಸಂಪ್ರದಾಯ ವಾತಾವರಣದಲ್ಲಿ ಬೆಳೆದ ಅವಳಿಗೆ ರಾಯರ ವಿಚಾರಗಳನ್ನು ಅನುಮೋದಿಸುವುದಕ್ಕೆ ಹೆದರಿಕೆ.

ರಾಯರು ಮೆಟ್ರಿಕ್ಯುಲೇಷನ್‌ವರೆಗೆ ಓದಿದ್ದರೂ ವಿಚಾರಜ್ಞಾನ ಅದ್ಭುತವಾಗಿತ್ತು. ರಾಜಕೀಯ, ಅರ್ಥಶಾಸ್ತ್ರ, ವಿಜ್ಞಾನ, ಸಾಹಿತ್ಯ ಮೊದಲಾದವುಗಳಲ್ಲಿ ಸಾಕಷ್ಟು ಪರಿಜ್ಞಾನ ಇತ್ತು. ಪುಸ್ತಕಗಳನ್ನು ಓದುವುದರಲ್ಲಿ, ವಿಚಾರಗಳ ಚರ್ಚೆಯಲ್ಲಿ ಎಲ್ಲಿಲ್ಲದ ಉತ್ಸಾಹ ತೋರಿಸುತ್ತಿದ್ದರು. ಊರಿನಲ್ಲಿ ಯಾರಿಗಾದರೂ ಏನಾದರೂ ವಿಷಯ ತಿಳಿದುಕೊಳ್ಳ ಬೇಕಾದರೆ ರಾಯರೇ 'ಎನ್‌ಸೈಕ್ಲೋಪೀಡಿಯಾ'. ಪಟ್ಟಣದ ಹಲವಾರು ಸಂಘಗಳ ಅಧ್ಯಕ್ಷ ಪಟ್ಟ ಇವರಿಗೇ ಇತ್ತು. ಅದಕ್ಕೇ ಸಾಧಾರಣವಾಗಿ ರಾಯರು ಪ್ರತಿವಾರವು ಪಟ್ಟಣಕ್ಕೆ ರೆಗ್ಯುಲರ್ ವಿಸಿಟ್ ಕೊಡುತ್ತಿದ್ದರು.

ಎಳೆವಯಸ್ಸಿನಲ್ಲಿಯೇ ರಾಯರ ತಂದೆ ತಾಯಿ ಒಂದೆರಡು ವರ್ಷಗಳ ಅಂತರದಲ್ಲಿ ತೀರಿಕೊಂಡಿದ್ದರು. ಆಸ್ತಿಗೇನೂ ಕೊರತೆಯಿರಲಿಲ್ಲ. ಇನ್ನು ಎರಡು ಮೂರು ತಲೆಮಾರಾದರೂ ಕುಳಿತು ತಿನ್ನಬಹುದಾದಷ್ಟಿತ್ತು. ಆದರೆ ತೀರ ಚಿಕ್ಕ ವಯಸಿನ ರಾಯರು ಅನಾಥರಂತಾದರು. ದಾಯಾದಿಗಳು ಅವರ ತಂದೆಯವರೊಂದಿಗೆ ಜಗಳವಾಡಿದ್ದರಿಂದ ಯಾರೂ ಇವರನ್ನು 'ಕ್ಯಾರೇ' ಎಂದು ಮಾತಾಡಿಸಲಿಲ್ಲ. ಮನೆ ಸೇವಕ ಚೆನ್ನಣ್ಣ ದಿಕ್ಕು ತೋಚದೆ ಅಳುತ್ತಿದ್ದ ರಾಯರನ್ನು ಹೇಗೋ ಸಮಾಧಾನಪಡಿಸಿದ್ದ. ರಾಯರ ಹೊಣೆ ಹೊರುವವರು ಯಾರು ಎಂಬುದೇ ಯೋಚನೆ ಚೆನ್ನಣ್ಣನಿಗೆ.

ರಾಯರ ತಂದೆಯ ಗೆಳೆಯರಾದ ಮಮಜುನಾಥ ಶಾಸ್ತ್ರಿಗಳ ನೆನಪಾಯಿತು. ರಾಯರ ತಂದೆಗೂ ಇವರಿಗೂ ಗಳಸ್ಯ ಕಂಠಸ್ಯ. ಆದ್ದರಿಂದ ಅವರನ್ನೇ ಹೋಗಿ ಕೇಳಿ ಯಾವುದಾದರೂ ದಾರಿ ಕಾಣಿಸಬೇಕೆಂದುಕೊಂಡು ಚೆನ್ನಣ್ಣ 40 ಮೈಲು ದೂರದಲ್ಲಿದ್ದ ಮಂಜುನಾಥ ಶಾಸ್ತ್ರಿಗಳ ಮನೆಗೆ ರಾಯರನ್ನು ಕರೆದುಕೊಂಡು ಹೋಗಿದ್ದ.

ಶಾಸ್ತ್ರಿಗಳು ವಿಷಯ ತಿಳಿದು ಬಹಳ ನೊಂದುಕೊಂಡರು. ಗೆಳೆಯನನ್ನು ಕೊನೆಯ ಗಳಿಗೆಯಲ್ಲಿ ನೋಡಲು ಆಗದಿದ್ದುದಕ್ಕೆ ತಮ್ಮನ್ನೇ ಹಳಿದುಕೊಂಡರು. ಹುಡುಗನನ್ನು ನೋಡಿ ಅವರ ಕರುಳು ನೊಂದಿತು. ವಂಶಕ್ಕೆ ಇರುವವನು ಒಬ್ಬನೇ. ಚೆನ್ನಾಗಿ ಯೋಗ್ಯನಾಗಿ ಬೆಳೆಸಬೇಕು. ತಮ್ಮಲ್ಲೇ ಹುಡುಗನನ್ನು ಇರಿಸಿಕೊಳ್ಳುತ್ತೇನೆಂದಾಗ ಶಾಸ್ತ್ರಿಗಳನ್ನು ಗೆಳೆಯನ ಮನೆಗೇ ಬಂದು ಇರಬೇಕೆಂದು ಪ್ರಾರ್ಥಿಸಿಕೊಂಡ ಚೆನ್ನಣ್ಣ. ಹೊಲ ಗದ್ದೆ, ಮನೆ ಮಾರು ವ್ಯವಸ್ಥಿತವಾಗಿ ನೋಡಿಕೊಳ್ಳಬೇಕಾಗುತ್ತೆ. ಹಿರಿಯರ ಆಸ್ತಿಯನ್ನು ಜೋಪಾನವಾಗಿ ಕಾಪಾಡಬೇಕಾಗುತ್ತೆ. ಇಲ್ಲೇ ಇದ್ದರೆ ಅವೆಲ್ಲ ಸಾಧ್ಯವಾಗುವುದಿಲ್ಲವೆಂದು ತಿಳಿಸಿ ಹೇಳಿದ ಮೇಲೆ ಶಾಸ್ತ್ರಿಗಳು ತಮ್ಮ ಮಡದಿ, ಹುಡುಗನನ್ನು ಕರೆದುಕೊಂಡು ರಾಯರ ಊರಿಗೆ ಹೊರಟು ಬಂದಿದ್ದರು. ಶಾಸ್ತ್ರಿಗಳು ತಮಗಿದ್ದ ಒಬ್ಬಳೇ ಮಗಳಾದ ಸೀತೆಯನ್ನು ತಮ್ಮನ ವಶಕ್ಕೊಪ್ಪಿಸಿದ್ದರು.

ಶಾಸ್ತ್ರಿಗಳ ಔದಾರ್ಯದಿಂದ ರಾಯರು ವಿದ್ಯಾವಂತರಾಗಿ ಯೋಗ್ಯರಾಗಿ ಬೆಳೆಯಲು ಸಾಧ್ಯವಾಯಿತು. ರಾಯರಿಗೆ ಸ್ವತಂತ್ರವಾಗಿ ವ್ಯವಹಾರಗಳನ್ನು ನೋಡಿಕೊಳ್ಳುವ ಸೂಕ್ಷ್ಮಗಳನ್ನೆಲ್ಲಾ ತಿಳಿಸಿದ ಮೇಲೆ ಶಾಸ್ತ್ರಿಗಳು ತಮ್ಮ ಊರಿಗೆ ಹೊರಟರು. ಮಕ್ಕಳಿಗೆ ವಿದ್ಯಾಭ್ಯಾಸ ಮುಖ್ಯವೆಂದು ಭಾವಿಸಿದ್ದರಿಂದ ಶಾಸ್ತ್ರಿಗಳು ಮಗಳಿಗೂ ಎಂಟನೇ ತರಗರತಿಯವರೆಗೆ ಓದಿಸಿದ್ದರು. ಸೀತೆಗೆ ಹನ್ನೆರಡು ತುಂಬುವುದರಲ್ಲಿದ್ದಾಗ ವಯಸ್ಸಿಗೆ ಬಂದಿದ್ದಳು. ಅವಳಿಗೆ ಅಲ್ಲಲ್ಲಿ ಸಂಬಂಧಗಳು ಬಂದರೂ ಯಾವುದೂ ಶಾಸ್ತ್ರಿಗಳಿಗೆ ಸರಿಯೆನಿಸಲಿಲ್ಲ.

ರಾಯರನ್ನೇ ಕೇಳಬಹುದಿತ್ತು. ಆದರೆ ಅಂತಸ್ತಿನಲ್ಲಿ ಇರುವ ದೊಡ್ಡ ಅಂತರ ಅವರ ಮನಸ್ಸನ್ನು ಹಿಂದೆಳೆದಿತ್ತು.

ರಾಯರಿಗೆ ಅವರಿಂದ ವಿಷಯ ತಿಳಿಯಿತು. ಶಾಸ್ತ್ರಿಗಳು ತಮಗೆ ತಂದೆಗಿಂತ ಹೆಚ್ಚಿನ ವಾತ್ಸಲ್ಯವನ್ನು ತೋರಿದ್ದರು. ಅದಕ್ಕೆ ಪ್ರತಿಯಾಗಿ ತಾವು ಏನೂ ಮಾಡಲಾಗಿರಲಿಲ್ಲ. ಇದು ಒಳ್ಳೆ ಅವಕಾಶವೆನಿಸಿ ಕೂಡಲೇ ತಾವಾಗಿ ಸೀತೆಯನ್ನು ಬೇಡುತ್ತಿರುವಂತೆಯೂ, ಇನ್ನು ಒಂದೆರಡು ವರ್ಷಗಳ ನಂತರ ಮದುವೆಯಾಗುತ್ತೇನೆಂತಲೂ ಬರೆದಿದ್ದರು.

ಶಾಸ್ತ್ರಿಗಳಿಗೆ ಖುಷಿಯೋ ಖುಷಿ. ಜಾತಕ ಗೀತಕ ಯಾವುದೂ ನೋಡದೇ ದೇವರ ಮೇಲೆ ಭಾರ ಹಾಕಿ ಸೀತೆಯ ಮದುವೆ ನಡೆಸಿದರು. ರಾಯರೇ ಖರ್ಚುಗಳನ್ನು ವಹಿಸಿಕೊಂಡಿದ್ದರು.

ಮದುವೆಯಾದ ಹೊಚ್ಚ ಹೊಸ ದಿನಗಳು. ರಾಯರಿಗೆ ಸೀತೆಯ ಸೌಂದರ್ಯ ಹುಚ್ಚು ಹಿಡಿಸಿತ್ತು. ರಾಯರ ಚೇಷ್ಟೆ ಹುಡುಗಾಟಗಳು ಸೀತೆಗೆ ಸಾಕುಸಾಕೆನಿಸಿತ್ತು.

ಮಹಾರಾಜರ ಮನೆಯಂತಹ ಮನೆ, ಯಾವುದಕ್ಕೂ ಕಮ್ಮಿಯಿಲ್ಲ. ರಾಯರು ಯಾವ ಆಫೀಸಿಗೂ ಹೋಗಬೇಕಾದ್ದಿರಲಿಲ್ಲವಾದ್ದರಿಂದ ಪುಟ್ಟ ಪಡದಿಯನ್ನು ಕೀಟಲೆ ಮಾಡಿಕೊಂಡು ಕಾಲ ಕಳೆಯುತ್ತಿದ್ದರು.

ಎರಡು ಮೂರು ವರ್ಷಗಳು ಕಳೆದು ಹೋದದ್ದೇ ತಿಳಿಯಲಿಲ್ಲ. ಆದರೆ ಸೀತೆಯ ಮನಸ್ಸಿನಲ್ಲಿ ಕಳವಳಕ್ಕೆ ಮೊದಲಾಯಿತು.

ಇವರ ಕೊರತೆಗಳನ್ನೆಲ್ಲ ತಾವೇ ಹಚ್ಚಿಕೊಂಡಂತೆ ಜನರು ವಿಚಿತ್ರ ಪ್ರಶ್ನೆಗಳನ್ನು ಪ್ರಾರಂಭಿಸಿದರು. ಕೆಲವರು ಆಗಲೇ ಸೀತೆಯನ್ನು ಬಂಜರು ಭೂಮಿಯೆಂದೇ ನಿರ್ಧರಿಸಿಬಿಟ್ಟಿದ್ದರು.

"ಏನು ರಾಯರೇ ಕುಲದೀಪಕನನ್ನು ಕಾಣಿಸುವುದು ಯಾವಾಗ?" ಎಂದು ದೇಶಾವರಿ ನಗೆಯೊಂದಿಗೆ ಕೇಳಿಯೇ ಬಿಡುತ್ತಿದ್ದರು. ರಾಯರೂ ಸುಮ್ಮನೆ ಇರುತ್ತಿರಲಿಲ್ಲ.

"ಮುದುಕರಾಗಿ ಕಾಶಿ ಯಾತ್ರೆಗೇನೂ ಹೊರಟಿಲ್ಲವಲ್ಲ?" ಎಂದು ಚಟ್ಟನೆ ಉತ್ತರಿಸಿ ಬಿಡುತ್ತಿದ್ದರು.

ಈ ರೀತಿಯ ಪ್ರಶ್ನೆಗಳಿಂದ ಜನರು ತನ್ನನ್ನು ವಿಚಿತ್ರವಾಗಿ ನೋಡುತ್ತಿದ್ದುದರಿಂದ ಸೀತೆಗೆ ಮಕ್ಕಳಿಲ್ಲದ ಕೊರತೆ ಎಷ್ಟು ಮರೆಯಬೇಕೆಂದರೂ ಸಾಧ್ಯವಾಗುತ್ತಿರಲಿಲ್ಲ. ತನ್ನ ಹೆಣ್ತನಕ್ಕೇ ಇದೊಂದು ಸವಾಲು ಎಂದು ಭಾವಿಸಿದ್ದಳು.

ರಾಯರೇನೂ ಇದನ್ನು ಹೆಚ್ಚಿಗೆ ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲ. ಮಕ್ಕಳು ಆಗಬೇಕೆಂದು ಬಯಸುತ್ತೇವೆ. ಆಗದೆ ಹೋದರೆ ಅದಕ್ಕಾಗಿ ಜೀವನದಲ್ಲಿ ಜಿಗುಪ್ಸೆಗೊಳ್ಳುವುದು ಸರಿಯಲ್ಲವೆಂದು ಅವರ ಭಾವನೆ.

ಶಾಸ್ತ್ರಿಗಳಿಗೂ ಮಗಳ ಸ್ಥಿತಿಯನ್ನು ಕಂಡು ದುಃಖವಾಯಿತು. ಆದರೆ ಯಾರಿಂದ ತಾನೇ ಮಾಡುವುದೇನಿದೆ? ಮಗಳ ಕೈಯಿಂದ ಎಷ್ಟೋ ವ್ರತಗಳನ್ನು ಮಾಡಿಸಿದರು. ದಾನ, ಧರ್ಮಗಳನ್ನು ಮಾಡಿಸಿದರು. ಆದರೂ ಪ್ರಯೋಜನವಿಲ್ಲವಾಯಿತು. ಪ್ರತಿನಿತ್ಯ ಭಗವಂತನನ್ನು ಪ್ರಾರ್ಥಿಸುವುದೊಂದೇ ಅವರಿಗುಳಿದ ದಾರಿಯಾಗಿತ್ತು.

ಈ ಮಧ್ಯೆ ಶಾಸ್ತ್ರಿಗಳು ಮಗಳ ಜಾತಕದ ಬಗ್ಗೆ ವಿಚಾರಿಸಿದಾಗ "ನಾಗರದೋಷ"ವಿದ್ದ ಹಾಗೆ ಇದೆ. ನಾಗರಕಲ್ಲಿನ ಪ್ರತಿಷ್ಠೆ ಮಾಡಿಸಿದರೆ ದೋಷ ನಿವಾರಣೆಯಾಗಿ ಮಕ್ಕಳಾಗುವ ಸಂಭವ ಇದೆಯೆಂದು ತಿಳಿದು ಬಂದಿತು. ಮಗಳಿಗೆ ಗುಟ್ಟಾಗಿ ಈ ವಿಷಯವನ್ನು ಬರೆದರು. ಆದರೆ ಪ್ರಯೋಜನವೇನೂ ಇಲ್ಲ. ರಾಯರು ಇದಕ್ಕೆ ತಲೆಕೆಳಗಾದರೂ ಒಪ್ಪುವುದಿಲ್ಲವೆಂದು ಸುಮ್ಮನಾಗಿದ್ದಳು.

ರಾಯರಿಗೆ ಈ ವಿಷಯದಲ್ಲಿ ಅಷ್ಟೊಂದು ಆಸಕ್ತಿ ಇರಲಿಲ್ಲವಾದರೂ ಸೀತೆಯ ಬಾಧೆಯನ್ನು ಭರಿಸಲಾಗದೆ ಅವಳ ಮನಸ್ಸಂತೋಷಕ್ಕಾಗಿಯಾದರೂ ಡಾಕ್ಟರುಗಳಿಗೆ ತೋರಿಸೋಣವೆಂದಾಗ ಸೀತೆ ಒಪ್ಪಲಿಲ್ಲ. ಗಂಡ ಹೆಂಡಿರ ರಹಸ್ಯವನ್ನು ಮೂರನೆಯವರ ಎದುರು ಹೇಳುವುದು ನಾಚಿಕೆಗೇಡಿತನವೆಂದು ಭಾವಿಸಿದ್ದಷ್ಟೆ ಅಲ್ಲ, ದೇವರುಗಳಿಂದಲೇ ಆಗದಿರುವುದು ಮನುಷ್ಯ ಮಾತ್ರರಾದ ಡಾಕ್ಟರುಗಳಿಂದೇನಾಗುವುದು ಎಂಬುದೇ ಅವಳ ತರ್ಕ. ಸರಿ ರಾಯರೂ ಸುಮ್ಮನಾದರು.

ಒಂದು, ಎರಡು, ಮೂರು... ಹೀಗೆ ಹದಿನೈದು ವರ್ಷಗಳು ಕಳೆದುಹೋದರೂ ಸೀತೆಯ ಬಯಕೆ ಫಲಿಸಲಿಲ್ಲ. ಆದರೆ ಅವಳು ದೇವರ ಮೊರೆ ಹೋಗುವುದು ತಪ್ಪಲಿಲ್ಲ. ರಾಯರು ಈ ಚಿಂತೆಯನ್ನು ಮನಸ್ಸಿನಿಂದ ತೊಡೆದು ಹಾಕಿ ನಿಶ್ಚಿಂತರಾಗಿದ್ದರು. ದೇವರಲ್ಲಿ ನಂಬಿಕೆ ಸಡಿಲಾದರೆ ಸೀತೆಯೇ ಡಾಕ್ಟರ ಬಳಿಗೆ ಬರಲು ಒಪ್ಪುತ್ತಾಳೆಂದು ನಂಬಿ ಸುಮ್ಮನಿದ್ದರು.

ಸೀತೆಯ ಮನಸ್ಸಿನಲ್ಲಿ ಬಿರುಗಾಳಿಯೆದ್ದಿತು. ತವರು ಮನೆ ಕಡೆ ತಾನೊಬ್ಬಳೇ. ಅತ್ತೆ ಮನೆ ಕಡೆ ಅವರೊಬ್ಬರೇ. ಹೀಗಿರುವಲ್ಲಿ ತನ್ನಿಂದ ವಂಶ ಬೆಳೆಯಲಿಲ್ಲವೆಂದರೆ! ಓಹ್... ನೆನೆಸಿಕೊಂಡರೇ ಭಯವಾಗುತ್ತದೆ. ವಂಶದ ಬಳ್ಳಿ ಹೀಗೇ ಬಾಡಿಹೋಗಲು ಬಿಡಬಾರದು. ಆದರೆ ಏನು ಮಾಡುವುದು? ತಾನು ಸತ್ತರೆ ರಾಯರು ಬೇರೆ ಮದುವೆಯಾಗಬಹುದೇನೊ ಎನಿಸಿತು. ಆದರೆ ಸಾಯುವುದು ಹೇಗೆ? ಆತ್ಮಹತ್ಯೆ?! ಧೈರ್ಯ ಸಾಲದಾಯಿತು. ಅವಳು ನಂಬಿದ ದೇವರುಗಳೆಲ್ಲ ಅವಳಿಗೆ ಮೋಸ ಮಾಡಿದರು. ಇನ್ನು ಉಳಿದಿರುವುದೆಂದರೆ ನಾಗರಕಲ್ಲಿನ ಪ್ರತಿಷ್ಠೆ. ಇಬ್ಬರು ಕೂಡಿ ಮಾಡಬೇಕು. ಅವರನ್ನು ಒಪ್ಪಿಸುವುದು ಸಾಹಸಕ್ಕೆ ಮೀರಿದ್ದು. ಒಂದು ವೇಳೆ ಒಪ್ಪಿದರೂ ನಿಷ್ಠೆಯಿಲ್ಲದೆ ಕಾಟಾಚಾರಕ್ಕೆ ಮಾಡಿದರೆ ಬಂದ ಫಲವೇನು?... ಅಯ್ಯೋ ದೇವರೇ ನನ್ನ ಹೆಣ್ಣುತನಕ್ಕೇ ಅವಮಾನ. ಇದನ್ನು ತೊಡೆದು ಹಾಕಲು ಸಾಧ್ಯವೇ ಇಲ್ಲವೇ? ಎಂದು ಮತ್ತೆ ಮತ್ತೆ ಪ್ರಶ್ನಿಸಿಕೊಂಡಳು.

ಯಾವುದೋ ನಿರ್ಧಾರಕ್ಕೆ ಬಂದಂತಾಗಿ ಕೊನೆಗೆ ರಾಯರನ್ನು ಡಾಕ್ಟರ ಬಳಿಗೆ ಹೋಗೋಣವೆಂದು ಕರೆದಳು. ಸೀತೆಯ ನಿರ್ಧಾರ ಅವರಿಗೆ ಸೋಜಿಗವೆನಿಸಿತು. ಇಷ್ಟು ವರ್ಷ ತಾನು ಹೇಳಿದ್ದನ್ನು ಕಿವಿಗೆ ಹಾಕಿಕೊಳ್ಳದಿದ್ದ ಸೀತೆಗೆ ಇದ್ದಕ್ಕಿದ್ದಂತೆ ಏನಾಯಿತು ಎಂದು ಯೋಚಿಸಿದರು. ಅವಳ ನಂಬಿಕೆಯಲ್ಲಿ ದೇವರು ಸೋತನೆ? ಅಲುಗಾಡಿಸಲಾಗದ ಹಿಮಾಲಯದಂತಹ ನಂಬಿಕೆ, ನಿಷ್ಠೆಗಳು, ಯಾವ ಪ್ರಚಂಡ ಪ್ರತಾಡನಕ್ಕೆ ಸಡಿಲಿತು?

ಇನ್ನು ತಡಮಾಡಿದರೆ ಮತ್ತೆ ನಿಶ್ಚಯ ಬದಲಾಯಿಸುವಳೇನೋ ಎಂದು ಹೆದರಿ, ರಾಯರು ಸೀತೆಯ ಇಷ್ಟದಂತೆ ಮುಂಬಯಿಗೆ ಕರೆದೊಯ್ದು ದೊಡ್ಡ ಗೈನೋಕಾಲಜಿಸ್ಟ್‌ಗೆ ತೋರಿಸಿದರು. ಡಾಕ್ಟರ ಉಪದೇಶದಂತೆ ಅವರೂ ಟೆಸ್ಟ್‌ಗೆ ಒಳಗಾದರು.

ರಿಸಲ್ಟ್ 'ನೆಗೆಟಿವ್' ಆಗಿತ್ತು. ಸೀತೆಯ ಚಿಂತೆಗೆ ಸೀತೆಯಲ್ಲ ಕಾರಣ; ರಾಯರೆ ಎಂದು ಈಗ ಗೊತ್ತಾಯಿತು. ಸೀತೆ ಭೋರೆಂದು ಅತ್ತಳು. ತನ್ನನ್ನು ತನ್ನ ಬದುಕನ್ನು ಶಪಿಸಿಕೊಂಡಳು.

ರಾಯರು ಇತ್ತೀಚೆಗೆ ತುಂಬಾ ಖಿನ್ನರಾಗಿದ್ದರು. ಸೀತೆಯ ಜೇನಿನಂತಹ ಬಾಳಿಗೆ ತಾವು ವಿಷವೆಂಬ ಭಾವನೆ ಬಂದಿತ್ತು. ಗಂಡನಿದ್ದುಕೊಂಡೂ ಯಾವ ಹೆಣ್ಣು ತಾನೆ ಬೇರೆ ಮದುವೆಯಾಗುತ್ತಾಳೆ? ಗಂಡ ಸತ್ತರೂ ವೈಧವ್ಯದ ಬೆಂಕಿಯಲ್ಲಿ ಬೆಂದು ಬೂದಿಯಾಗುವುದನ್ನೇ ಒಪ್ಪಿಕೊಳ್ಳುತ್ತಾರೆ. ಅಂಥದ್ದರಲ್ಲಿ ತಾನಿದ್ದೂ ಕೇವಲ ಮಕ್ಕಳನ್ನು ಪಡೆಯುವುದಕ್ಕೆ ಬೇರೆ ಗಂಡಸಿನ ಸ್ನೇಹವನ್ನು ಒಪ್ಪುತ್ತಾರೆಯೇ? ಇದೇಕೆ ಹೀಗಾಯಿತೆಂದು ರಾಯರಿಗೆ ಹೊಳೆಯುತ್ತಿಲ್ಲ.

ಸೀತೆಯೊಂದಿಗೆ ಮಾತಾಡುವುದಕ್ಕೆ, ಅವಳ ಎದುರು ಸುಳಿಯುವುದಕ್ಕೇ ಹೆದರಿಕೆ ರಾಯರಿಗೆ. ಸೀತೆ ತಮ್ಮನ್ನು ಅವಮಾನಿಸುತ್ತಾಳೆಂದಾಗಲೀ ಅಸಹ್ಯವಾಗಿ ಕಾಣುತ್ತಾಳೆಂದಾಗಲಿ ಅಲ್ಲ. ಅವಳೆದುರು ನಿಂತರೆ, ಅವಳ ನೆರಳು ಎದುರು ಬಿದ್ದರೂ "ತಾವು ಅಪರಾಧಿ" ಎನ್ನುವ ಪ್ರಜ್ಞೆ ಅವರನ್ನು ಕಾಡುತ್ತಿತ್ತು. ಇಬ್ಬರೂ ಒಬ್ಬರಿಗೊಬ್ಬರು ದೂರ ಸರಿಯುತ್ತಿದ್ದರು. ರಾಯರ ಹಾಸ್ಯ ಚಟಾಕಿಗಳ ಚಟಪಟವಾಗಲಿ, ನಗುವಿನಬ್ಬರವಾಗಲಿ ಕೇಳಿಸದೆ ಮನೆಯಲ್ಲಿ ಸ್ಮಶಾನ ಮೌನವೇ ಆವರಿಸಿತು.

ಸೀತೆಗೆ ಸ್ವಲ್ಪ ಸಮಯ ಸಿಕ್ಕರು ಬಿಕ್ಕಿ ಬಿಕ್ಕಿ ಅಳುತ್ತಿದ್ದಳು. ಅವಳಿಗೂ ಈಗೀಗ ದೇವರ ಮೇಲೆ ಒಮ್ಮೊಮ್ಮೆ ಸಿಟ್ಟು. ಬಂಗಾರದಂಥ ರಾಯರಿಗೆ ಇಂಥ ಘೋರ ಶಿಕ್ಷೆ ಕೊಟ್ಟದ್ದು ದೇವರ ಅನ್ಯಾಯ. ಈ ಶಿಕ್ಷೆ ಅವರಿಗೆ ದೊರೆತದ್ದು ಉಚಿತವಲ್ಲ. ಇದರಲ್ಲಿ ಎಲ್ಲೋ ಸ್ವಲ್ಪ ಹೆಚ್ಚು ಕಡಿಮೆಯಾಗಿದೆಯೆಂದೇ ಅವಳ ಮನಸ್ಸು ಪಿಸುಗುಟ್ಟುತ್ತಿತ್ತು. ಎಲ್ಲ ಪ್ರಯತ್ನಗಳಾದವು. ಇನ್ನು ಒಂದೇ ಒಂದು ಪ್ರಯತ್ನ. "ನಾಗರ ಪ್ರತಿಷ್ಠೆ." ಇದನ್ನೂ ನೋಡಿಯೇ ಬಿಡೋಣವೆಂದು ಅವಳ ಮನಸ್ಸು ಹೇಳುತ್ತಿತ್ತು.

ಮನಸ್ಸಿಗೆ ಧೈರ್ಯ ತಂದುಕೊಂಡು ರಾಯರಲ್ಲಿ ಪ್ರಸ್ತಾಪಿಸಿದಳು. ಅವಳಿಗೇ ಸಂಬಳಾಗದಂತೆ ರಾಯರು ಸೀತೆಯ ಸೂಚನೆಗೆ ಹೂಂಗುಟ್ಟಿದರು. ಸೀತೆಗೆ ಸ್ವರ್ಗ ಸಿಕ್ಕಷ್ಟೇ ಸಂತೋಷವಾಯಿತು.

ಶಾಸ್ತ್ರಿಗಳೇ ಮುಂದೆ ನಿಂತು ಮಗಳ ಮತ್ತು ಅಳಿಯನ ಕೈಯಿಂದ ಶಾಸ್ತ್ರೋಕ್ತವಾಗಿ ಎಲ್ಲವನ್ನೂ ಮಾಡಿಸಿದರು. ರಾಯರು ಯಾವುದಕ್ಕೂ ವಿರೋಧ ಸೂಚಿಸದೆ ಯಾಂತ್ರಿಕವಾಗಿ ಎಲ್ಲಾ ಧರ್ಮ ಕ್ರಿಯೆಗಳನ್ನು ಮಾಡಿ ಮುಗಿಸಿದರು.

ಪ

ರಾಯರಿಗೆ ಪ್ರತ್ಯಕ್ಷವಾಗಿದ್ದರೂ ಪರಿಣಾಮ ನಂಬುವುದಕ್ಕೇ ಆಗುತ್ತಿಲ್ಲ. ಸೀತೆ ಗರ್ಭಿಣಿ! ಇದೇಕೆ ಹೀಗಾಯಿತು? ಹಾಗಾದರೆ ದೇವರು, ಧರ್ಮ ಅನ್ನುವುದು ನಿಜವೇ? ಡಾಕ್ಟರರ ಮಾತು ಸುಳ್ಳಾದರೆ? ಪ್ರತ್ಯಕ್ಷ ನಿದರ್ಶನದಿಂದ ತೋರಿದ್ದು ಸುಳ್ಳು. ಸುಳ್ಳೆಂದು, ಅರ್ಥಹೀನವೆಂದು ಭಾವಿಸಿದ ದೇವರು ನಿಜ! ಇದರಲ್ಲಿ ಯಾವುದು ಸತ್ಯ? ಯಾವುದು ಸುಳ್ಳು? ಎಂದು ತಮ್ಮನ್ನೇ ತಾವು ಪ್ರಶ್ನಿಸಿಕೊಂಡರು. ಇಲ್ಲ... ಇದೇನಾದರೂ ಕಾಕತಾಳೀಯವೇ? ಮನುಷ್ಯ ಮಾತ್ರರಾದ ಡಾಕ್ಟರುಗಳೇ ತಪ್ಪುವುದಕ್ಕೆ ಸಾಧ್ಯವಿಲ್ಲವೇ? ನಾಗರಕಲ್ಲಿಗೂ, ಮನುಷ್ಯನ ವೈಯಕ್ತಿಕ ದೇಹಪ್ರಕೃತಿಗೂ ಎಲ್ಲಿಯ ಸಂಬಂಧ? ಅವಳ ನಂಬಿಕೆಗೆ ಅಷ್ಟೊಂದು ಅಮಾನುಷ ಶಕ್ತಿ ಇದೆಯೆ? ಇದೆಲ್ಲದರ ರಹಸ್ಯವೇನು?

ಎಂದು ರಾಯರ ಮನಸ್ಸು ಶೋಧಿಸುತ್ತಿತ್ತು.

❖ ❖ ❖

ಅದೇ ಮುಖ

ರಾತ್ರಿ ಗಂಟೆ ಹನ್ನೆರಡಾಗಿತ್ತು. ಎಷ್ಟು ಪ್ರಯತ್ನಪಟ್ಟರು ಹಾಳಾದ್ದು ನಿದ್ದೆಯೇ ಹತ್ತಿರಲಿಲ್ಲ. ಯಾಕೋ ಮೈ ಬೆವರಿದಂತೆನಿಸಿತು. ಎದ್ದು ಹೋಗಿ ಅಡಿಗೆ ಮನೆಯಲ್ಲಿ ನೀರು ಕುಡಿದು ಬಂದಳು. ಪೂರ್ತಿ ಎಚ್ಚರವಾಗಿಬಿಟ್ಟಿದ್ದಳು. ನಿದ್ದೆ ಇನ್ನು ಸಾಧ್ಯವಿಲ್ಲವೆಂದು ತಿಳಿದವಳೇ, ಎದ್ದು ತನ್ನ ಪುಸ್ತಕದ ಷೆಲ್ಫಿನಿಂದ, ಎಲ್ಲಾ ಬಿಟ್ಟು ವಿಲ್‌ಡ್ಯೂರಂಟ್‌ನ ಫಿಲಾಸಫಿ ಪುಸ್ತಕ ಹಿಡಿದು ಕೂತಳು. ತಲೆಗೆ ಅರ್ಥವಾಗದ ಪುಸ್ತಕ ಹಿಡಿದು ಕೂತರೆ ನಿದ್ದೆ ತಾನಾಗಿಯೇ ಬರುತ್ತದೆ, ಎಂದು ತನ್ನ 'ಫಾರ್ಮುಲಾ' ಯೋಚಿಸಿದಳು. ಆದರೆ ನಿದ್ದೆ ಬರುವುದು ಒತ್ತಟ್ಟಿಗಿರಲಿ, ಪುಸ್ತಕದ ಪುಟಗಳ ತುಂಬ ಸಾಲು ಸಾಲಿಗೂ, ಕಣ್ಣು ಹಾಯಿಸಿದಷ್ಟೂ... ಅದೇ ಮುಖ... ದೊಡ್ಡದಾಗುತ್ತಾ, ಚಿಕ್ಕದಾಗುತ್ತ, ಅವಳನ್ನು ಆಟವಾಡಿಸುತ್ತಿತ್ತು. ಇದೇನು ಭೂತ ಪ್ರೇತ, ಪಿಶಾಚಿಗಳ ಕರಾಮತ್ತೋ... ಎಂದು ಯೋಚನೆ ಬರುತ್ತಿದ್ದಂತೆ, ಸಣ್ಣಗೆ ನಡುಗಿದಳು... ಮರುಗಳಿಗೆಯೇ ಧೈರ್ಯ ತಂದುಕೊಳ್ಳಲು ಪ್ರಯತ್ನಿಸಿದಳು. 'ಯಾವುದೀ ಮುಖ?... ಹೀಗೇಕೆ ನನ್ನನ್ನು ಸ್ವಪ್ನ, ಜಾಗೃತಾವಸ್ಥೆಗಳಲ್ಲಿ ಹೀಗೆ ಕಾಡುತ್ತಿದೆ? ನನಗೂ ಈ ಮುಖಕ್ಕೂ ಸಂಬಂಧವೇನು?... ಬಹುಶಃ ಯೂಂಗ್ ಮತ್ತು ಫ್ರಾಯ್ಡರು ಇದಕ್ಕೆ ಸಮಾಧಾನ ಹೇಳಬಹುದೇನೋ?!- ಎಂದುಕೊಂಡಳು.

ಆ ಮುಖ ಹೆದರಿಕೆ ಹುಟ್ಟಿಸುತ್ತಿರಲಿಲ್ಲ. ಆದರೆ ಆ ಮುಖ ಕಾಣಿಸುತ್ತಿರುವುದಕ್ಕೆ ಇರಬಹುದಾದ ಅಸ್ಪಷ್ಟ ಕಾರಣದ ನೆನಪಿನಿಂದ ಭಯವಾಗುತ್ತಿತ್ತು... ಹೊಳೆ ಹೊಳೆವ ಮಿಂಚಿನ ಕಣ್ಣುಗಳು! ದಟ್ಟವಾದ ಕಪ್ಪು ಕೂದಲು ಮುಖದ ಅಂದವನ್ನು ಹೆಚ್ಚಿಸುವುದಕ್ಕೆ ನೀಟಾಗಿ ಕತ್ತರಿಸಿ ಸಜ್ಜಾಗಿದ್ದ ಮೀಸೆಗಳು!? ತುಟಿಯ ಮೇಲಿನ ತುಂಟ ನಗೆ... ಗುಳಿ ಬಿದ್ದ ಕೆನ್ನೆಗಳು... ಅದೇ ಮುಖ ಮೈ ಪಡೆದು ಬಂದು ನಿಂತರೆ, ಖಂಡಿತವಾಗಿ ಎಂತಹ ಹೆಣ್ಣೆದೆಯಾದರೂ ಕರಗಿ ಹೋಗುವುದರಲ್ಲಿ ಸಂಶಯವಿರಲಿಲ್ಲ. ತಾನೂ ಅಂತಹದಕ್ಕೆ ಹೊರತಲ್ಲವೆನಿಸಿತು. ಆ ಮುಖ ಕಾಣಿಸಿದರೆ ಸಾಕು ಒಂದು ಕ್ಷಣ ವಿದ್ಯುತ್ ಹರಿದಂತಾಗುತ್ತಿತ್ತು. ಅವ್ಯಕ್ತ ಭಾವನೆಗಳ ಕಚಗುಳಿಯ ಅನುಭವ... ತನಗೆ

ಸಂಬಂಧವಿಲ್ಲದ ಆ ಮುಖ ತನ್ನನ್ನೇಕೆ ಕಾಡುತ್ತಿದೆ?– ಎನ್ನುವುದು 'ಅವಳಿಗೆ ಅರ್ಥವಾಗಲಿಲ್ಲ. ಭಯ ದಿಗ್ಭ್ರಮೆಗಳು ಅವಳನ್ನು ನಡುಗಿಸಿದವು. ಅಸ್ವಸ್ಥಳಂತೆ ನರಳಿದಳು; ಹಾಸಿಗೆಯಲ್ಲಿ ಹೊರಳಾಡಿದಳು.

ಪಕ್ಕದಲ್ಲಿ ಮುಗ್ಧ ಮಗುವಿನಂತೆ ಪ್ರಶಾಂತವಾಗಿ ಮಲಗಿದ್ದ ಪ್ರಕಾಶನನ್ನು ನೋಡುತ್ತಿದ್ದಂತೆ ಅಸೂಯೆಯೆನಿಸಿತು. 'ಎಬ್ಬಿಸಿ ಮಾತನಾಡಿಸೋಣ... ಈ ಒಂಟಿತನದ ಬೇಸರ ಸ್ವಲ್ಪವಾದರೂ ದೂರವಾದೀತು... ಹಾಗೆಯೇ ನನ್ನನ್ನು ಕಾಡುತ್ತಿರುವ ಆ ಮುಖದ ವಿಚಾರವನ್ನು ಹೇಳಿಕೊಂಡರೆ ಸ್ವಲ್ಪ ಸಮಾಧಾನವಾದೀತು' ಎಂದು ಯೋಚಿಸಿ ಅವನ ಮೇಲೆ ಕೈಯಿಟ್ಟು ಅಲುಗಿಸಿದಳು. ತಕ್ಷಣಕ್ಕೆ ಏಳಲಿಲ್ಲ. ಅವಳು ತನ್ನ ಪಟ್ಟನ್ನು ಬಿಡಲಿಲ್ಲ. ಜೋರಾಗಿ ತಟ್ಟಿ ಎಬ್ಬಿಸಿದಳು.

ಬೆಚ್ಚಿ ಬಿದ್ದವನಂಗೆ ಎದ್ದು ಪ್ರಕಾಶ್ ಕೋಪದಿಂದ ನೋಡಿದ.

ನಿನಗೇನು ಬಂತು ಸುಮಿ ಇಷ್ಟು ರಾತ್ರಿಯಲ್ಲಿ? ನನ್ನ ಒಳ್ಳೆ ನಿದ್ದೇನ ಹಾಳು ಮಾಡಿ ಎಬ್ಬಿಸೋಕೆ, ಯಾರು ನೆಗೆದು ಬಿದ್ರೂಂತ?

ಸಾರಿ ಪ್ರಕಾಶ್. ನಿನ್ನ ನಿದ್ದೆ ಹಾಳು ಮಾಡೋ ಉದ್ದೇಶ ನನಗಿರಲಿಲ್ಲ. ಆದರೆ... ಆದರೆ... ನನಗ್ಯಾಕೊ ಸ್ವಲ್ಪ ಭಯವಾಯ್ತು. ಕಣ್ಣು ಹತ್ತಿದರೆ ಸಾಕು... ಯಾವುದೋ ಒಂದು ಅಪರಿಚಿತ ಮುಖ ನನ್ನನ್ನು ಹೊಂಚುತ್ತಿರುವಂತೆ ಅನ್ನಿಸುತ್ತೆ. ಪುಸ್ತಕ ಹಿಡಿದರೂ, ಅದರ ತುಂಬೆಲ್ಲಾ ಅದೇ ಮುಖ. ಯಾಕೋ? ಏನೋ? ಯಾರದೋ ಒಂದೂ ನೆನಪಾಗುತ್ತಿಲ್ಲ... ಆ 'ಮುಖ'ವನ್ನು ಎದುರಿಸಲಾಗದೆ ನಿನ್ನನ್ನು ಎಬ್ಬಿಸಿದೆ. ಜೊತೆಯಾಗಿ ಮಾತಾಡ್ತಾ ಇದ್ದರೆ, ಭಯ ಇಲ್ಲದೆ ರಾತ್ರಿ ಕಳೆಯಬಹುದೂಂತ ಅನ್ನಿಸಿತು... ಎಂದು ಮೆದುವಾಗಿ ನುಡಿದಳು.

ಸರಿ ಸರಿ ನಿನಗೆ ಈ ಥರಾ ತಲೆ ಕೆಡಿಸಿಕೊಳ್ಳೋದು ಮಾಮೂಲೇ ಅಲ್ವಾ? ಪ್ರಪಂಚದಲ್ಲಿ ಯಾರಿಗೂ ಬೀಳದ ಕನಸುಗಳು ನಿನಗೇ ಬೀಳುತ್ತವೆ. ಸುಮ್ಮನೆ ಹುಚ್ಚು ಹುಚ್ಚಾಗಿ ಏನೇನೋ ಬಡಬಡಿಸಬೇಡ. ನೀನು ಬರೆಯೋ ಕತೆಗೋ ಕಾದಂಬರಿಗೋ ಬೇಕಾದರೆ ನಿನ್ನ ಆ 'ಮುಖ'ದ ಇತಿಹಾಸಾನ ಹುಟ್ಟು ಹಾಕಿ ಬಳಸಿಕೋ. ಹಗಲಿನಲ್ಲೇ ಅದ್ಭುತವಾದ ಕನಸುಗಳನ್ನು ಕಾಣುವ ನೀನು 'ರಾತ್ರೀಲಿ' ಕನಸು ಕಂಡಿದ್ದರೆ ಆಶ್ಚರ್ಯವಿಲ್ಲ. ಸದ್ಯಕ್ಕೆ ನನ್ನ ತಲೆ ತಿನ್ನೋದು ಬಿಟ್ಟು ಗಟ್ಟಿಯಾಗಿ ಕಣ್ಮುಚ್ಚಿ ಮಲಗಿಕೋ. ನಿದ್ದೆ ಬರಲಿಲ್ಲಾಂದ್ರೆ ಕಂಬ ಸುತ್ತು ಇಲ್ಲ ಕತೆ ಬರೀತಾ ಕುಳಿತುಕೋ... ಅದು ಬಿಟ್ಟು ನನ್ನ ನಿದ್ದೇನ ಹಾಳು ಮಾಡಬೇಡ ಮಾರಾಯ್ತಿ. ಇಗೋ ಇನ್ನೊಂದು ಸಲ ನನ್ನನ್ನು ಎಬ್ಬಿಸಬೇಡ. ನೀನುಂಟು... ನಿನ್ನ ಕನಸುಗಳುಂಟು... ಎಂದು ಹೇಳುತ್ತಲೇ ಮುಸುಕೆಳೆದು ಮಲಗಿದ. ಕ್ಷಣಾರ್ಧದಲ್ಲಿ ಶಾಂತವಗಿ ನಿದ್ದೆಗೆ ಇಳಿದ.

ಪದೇ ಪದೇ ಮುಖ ಕಂಡು ಹೆದರಿಕೆಯಾದರೂ, ಆ ಹೆದರಿಕೆಯ ನಡುವಿನಿಂದಲೇ ಆ ಮುಖ ಕಾಣಲು ತನ್ನೊಳಗಿಂದ ಹಾರೈಸಿದಳು. ಕಣ್ತುಂಬ, ತಲೆ ತುಂಬ ಮನಸ್ಸಿನ ತುಂಬ ಆ ಮುಖವನ್ನೇ ತುಂಬಿಕೊಂಡಳು. ಆ ಮುಖ ಯಾರದು? ಎಲ್ಲಿ ನೋಡಿದ್ದೇನೆ... ಹೀಗೇಕೆ ದಿಢೀರನೆ ನನ್ನ ಕಣ್ಣುಗಳಲ್ಲಿ ತುಂಬಿಕೊಂಡಿದೆ. ಬಹುಶಃ ನನಗೆ ಪರಿಚಯುವಿರಬಹುದೇ? ಪರಿಚಯುವಿದ್ದೂ ಮರೆತಿರಬಹುದೇ? ನನ್ನ ಅಂತಃಪ್ರಜ್ಞೆಯ ಕೋಶದಲ್ಲಿ ಹುದುಗಿರಬಹುದಾದ ಯಾವುದಾದರೂ ಪರಿಚಿತ ಮುಖವೇ ಇರಬಾರದೇಕೆ?... ಆದರೆ... ಆದರೆ... ಯಾರದೆಂದು ನೆನಪಾಗುತ್ತಿಲ್ಲವೇಕೆ... ಎಂದು ಆಲೋಚಿಸಿ ತನ್ನ ಎಳೆತನದಿಂದಲೂ ಪರಿಚಿತವಿರುವ ಒಂದೊಂದೇ ಮುಖವನ್ನು ನೆನಪಿಗೆ ತಂದುಕೊಳ್ಳಲು ಪ್ರಯತ್ನಿಸಿದಳು... ಹಾಗೆಯೇ ತನಗೂ ಪ್ರಕಾಶನಿಗೂ ಪರಿಚಿತರ ಮುಖಗಳೂ ಸುಳಿದು ಹೋದವು. ಪ್ರಯೋಜನವಾಗಲಿಲ್ಲ. ತಲೆ ಸಿಡಿಯುವಂತಾಯಿತು. ಗಟ್ಟಿಯಾಗಿ ತಲೆ ಹಿಡಿದುಕೊಂಡು, ಕಣ್ಣು ಮುಚ್ಚಿದಳು. ಹೊರಗಡೆ ಬೀದಿ ನಾಯಿಯೊಂದು ಅಳುವ ಸದ್ದು ತಣ್ಣನೆಯ ಗಾಳಿಯಲ್ಲಿ ತೇಲಿ ಬಂತು. ಮತ್ತೊಮ್ಮೆ ನಡುಗಿದಳು... ಯಾರಾದರೂ ಸತ್ತಿರಬಹುದೇ? ನಾಯಿ ಹೀಗೇಕೆ ಅಳುತ್ತಿದೆ?... ಎಂದು ಅವಳ ಮನಸ್ಸು ಯೋಚಿಸಿತು; 'ದೇವರೇ ಬೇಗ ಬೆಳಗಾಗಲಿ'– ಎಂದು ಪ್ರಾರ್ಥಿಸಿತು.

ರಾತ್ರಿಯೆಲ್ಲ ನಿದ್ದೆಯಿಲ್ಲದ್ದಕ್ಕಾಗಿ ತಲೆ ಸ್ವಲ್ಪ ಭಾರವೆನಿಸಿತು. ಆದರೂ ಬೆಳಗಾಗುವುದನ್ನೇ ಕಾಯುತ್ತಿದ್ದವಳಿಗೆ, ಹಾಸಿಗೆ ಇನ್ನು ಅಸಹ್ಯವೆನಿಸಿತ್ತು. ಮುಖ ತೊಳೆದು ಬಂದು ಕಾಫಿ ಸರಿ ಮಾಡಿ, ಪ್ರಕಾಶನಿಗೆ ಕೊಟ್ಟು ತಾನೂ ಕುಡಿಯುತ್ತಾ ಕುಳಿತಳು. ಕೆಲಸದವಳು ಆಗಲೇ ಬಂದು ಮನೆಗೆಲಸದಲ್ಲಿ ತೊಡಗಿದ್ದಳು. ಸುಮಿ ಕೂಡಾ ಬೆಳಗಿನ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದರಿಂದ ರಾತ್ರಿಯ ಸಂಗತಿಗಳೆಲ್ಲ ಮರೆತಿದ್ದಳು. ಹೊತ್ತು ಹೋಗುತ್ತಿದ್ದುದೇ ಗೊತ್ತಾಗಲಿಲ್ಲ. ಕೈಲಿ ಪೇಪರ್ ಹಿಡಿದಿದ್ದ ಪ್ರಕಾಶ್‌ನನ್ನು ಎಚ್ಚರಿಸಿದಳು ಸುಮಿ.

'ಪ್ರಕಾಶ್, ಗಂಟೆ ಎಂಟಾಯಿತು. ಆಫೀಸಿಗೆ ಹೋಗುವ ಆಲೋಚನೆ ಇಲ್ವೇನು?'– ನಗುತ್ತಾ ನುಡಿದಳು.

'ಅರೆ, ಎಂಟಾಯಿತೇ ಆಗಲೇ?' ಎನ್ನುತ್ತಲೇ ಆತುರವಾಗಿ ಎದ್ದು, ಟವೆಲ್ ಹಿಡಿದು ಸ್ನಾನಕ್ಕೆಂದು ಬಚ್ಚಲಿಗೆ ಹೊರಟವನು ಐದು ನಿಮಿಷದಲ್ಲಿ ಹೊರಗೆ ಬಂದ. ಸುಮಿ ಬೆರಗಾಗಿ ನೋಡಿದಳು.

'ಇದೇನು ಪ್ರಕಾಶ್, ಐದು ನಿಮಿಷದಲ್ಲಿ ಸ್ನಾನ ಮಾಡಿದೆಯಾ ಇಲ್ಲ ಸಂಪ್ರೋಕ್ಷಣೆ ಮಾಡಿದರೋ? ಇಷ್ಟು ಬೇಗ ಬಂದಿರೋದು ನೋಡಿದರೆ ಸ್ನಾನ ಮಾಡಿದ ಹಾಗೆ?' ಎಂದು ಅನುಮಾನ ವ್ಯಕ್ತಪಡಿಸಿದಳು.

'ಇನ್ನೇನು ನಿನ್ನ ಹಾಗೆ ಗಂಟೆಗಟ್ಟಲೆ ಬಚ್ಚಲಲ್ಲೂ ಭಾವಗೀತೆ ಬರೀತಾ ಕೂತ್ಕೊಳ್ಳಲೇನು?... ಅದಿರಲಿ ಸುಮಿ ಈಗ ನಾನು ಅರ್ಜೆಂಟಾಗಿ ಹೋಗಬೇಕಾಗಿದೆ. ನೀನು ತಿಂಡಿ ಪಂಡಿ ಅಂತ ನನಗೆ ಲೇಟ್ ಮಾಡಬೇಡ., ಓ.ಕೆ.– ಎಂದು ಹೇಳುತ್ತಾ ಅವಳ ಬಳಿಗೆ ಬಂದು, 'ಸುಮಿ ಇವತ್ತು ಆದರೆ ಬೇಗ ಬರ್ತೀನಿ. ಸಂಜೆಗೆ ಯಾವುದಾದರೂ ಒಂದು ಪಿಕ್ಚರ್‌ಗೆ ಹೋಗೋಣ ಆಯ್ತಾ' ಎಂದು ಅವಳ ಮುಖ ಎತ್ತಿದ.

ಸ್ವಲ್ಪ ಹೊತ್ತಿಗೆ ಮುಂಚೆ ಮಾಮೂಲಿಯಾಗಿದ್ದವಳ ಮುಖದಲ್ಲಿ ಏನೋ ದುಗುಡವಿದ್ದಂತೆ ಕಾಣಿಸಿತು. ನೇರವಾಗಿ ಅವಳ ಕಣ್ಣೊಳಗೆ ನೋಡಿದ. ಹೆದರಿದ ಹರಿಣಿಯಂತೆ ಕಂಡಳು. ಸುಮ್ಮನಿರಲಾಗಲಿಲ್ಲ.

ಯಾಕೆ ಸುಮಿ ಹೀಗಿದ್ದಿ? ಏನು ಮತ್ತೆ ನಿನ್ನ 'ಆ ಮುಖ'ದ ಬೇಟೆ ಶುರುವಾಯ್ತಾ ನಿನಗೆ ಏನು ಹೇಳಬೇಕೊ ನನಗಂತೂ ಗೊತ್ತಾಗೊಲ್ಲ. ಕಾಲೇಜಿನಲ್ಲಿ ಪಾಠ ಹೇಳೋ ನೀನು ಅಸಂಬದ್ಧ ವಿಚಾರಗಳನ್ನೆಲ್ಲ ತಲೆ ತುಂಬಿಸಿಕೊಂಡರೆ, ಯಾರಿಗಾದರೂ ನಿನ್ನ ಬಗ್ಗೆ ಸಹಾನುಭೂತಿಗಿಂತ ನಗು ಬರತ್ತೆ.

"ಪ್ರಕಾಶ್, ನಿನಗೆ ನನ್ನ ಮನಸ್ಸಿನಲ್ಲಿ ಆಗುತ್ತಿರೋದನ್ನು ಅರ್ಥ ಮಾಡಿಕೊಳ್ಳೋಕೆ ಆಗೊಲ್ಲ. ಆ 'ಮುಖ' ಸಾಧಾರಣವಾಗಿ ಬರುವ ಕನಸುಗಳಂತೆ ಬಂದು ಮರೆಯಾಗಿದ್ದರೆ ನನಗೇನೂ ಅನ್ನಿಸುತ್ತಿರಲಿಲ್ಲ. ಆದರೆ... ಆದರೆ... ಆ ಮುಖ ನನ್ನನ್ನು ಪೂರ್ತಿಯಾಗಿ ಆಕ್ರಮಿಸಿಕೊಳ್ತಿದೆ. ನನ್ನೊಳಗಿಂದಲೆ ಬೇರುಗಳನ್ನು ಹಿಡಿದು ಅಲ್ಲಾಡಿಸುತ್ತಿದೆ. ನನಗೆ ಒಬ್ಬಳೇ ಇರೋದೂಂದ್ರೆ, ತುಂಬ ಭಯವಾಗ್ತಾ ಇದೆ. ನೀವೇಕೆ ಇವತ್ತು ಆಫೀಸಿಗೆ ರಜೆ ಹಾಕಬಾರದು? ಒಂದು ದಿನ ಪ್ಲೀಸ್"– ಎಂದು ಅಂಗಲಾಚಿದಳು.

ಸುಮಿ ಸುಳ್ಳು ಹೇಳ್ತಿಲ್ಲ. ನಿಜವಾಗಿ ತುಂಬ ಹೆದರಿದ್ದಾಳೆ ಅನ್ನಿಸಿತು. ಆದರೆ ತಾನು ಇವತ್ತು ಆಫೀಸಿಗೆ ಹೋಗಲೇ ಬೇಕು. ಅವಳಿಗೆ ಕಾಲೇಜಿದ್ದರೆ ಹೇಗೋ ಕಂಪೆನಿ ಇರ್ತಿತ್ತು. ಹೋಗಲಿ ಕಾವೇರಿಗಾದರೂ ಹೇಳ್ತೀನಿ. ನಾನು ಬರುವವರೆಗೆ ಅವಳ ಜೊತೆಗಿರಲಿ ಎಂದು ಕಾವೇರಿಯನ್ನು ಕರೆದ.

'ಕಾವೇರಿ, ಇವತ್ತು ಅಮ್ಮಾವ್ರ ಜೊತೆಗೆ ಸ್ವಲ್ಪ ಇರ್ತೀಯಾ? ನಾನು ಮೂರು ಗಂಟೆಗೆ ಬಂದ್ಬಿಡ್ತೀನಿ'

'ಬುದ್ದಿ, ಇನ್ನೂ ಒಂದೆರಡು ಮನೆ ಕೆಲಸ ಇದೆ. ಮುಗಿಸಿಕೊಂಡು ಬಂದ್ಬಿಡ್ತೀನಿ'

ಇವರಿಬ್ಬರ ಸಂಭಾಷಣೆ ಕೇಳುತ್ತಿದ್ದ ಸುಮಿಗೆ, ಅದೇನು ಅನ್ನಿಸಿತೋ?... ಭೀತಿಯ ನಡುವೆಯೂ, ಒಬ್ಬಳೇ ಇರಬೇಕೆನ್ನಿಸಿತು.

'ಬಿಡು ಪ್ರಕಾಶ್, ಸದ್ಯಕ್ಕೆ ಯಾರೂ ಬೇಡ. ನಾನು ಸ್ವಲ್ಪ ಷಾಪಿಂಗ್ ಮಾಡೋದಿದೆ. ಮನೆ ಕೆಲಸ ಮುಗಿಸಿಕೊಂಡು ಹಾಗೆ ಸುತ್ತಾಡಿಕೊಂಡು ಬರ್ತೀನಿ. ಅಷ್ಟಲ್ಲಿ ನೀನೂ ಹೇಗಿದ್ದರೂ ಬೇಗ ಬರ್ತೀಯಲ್ಲ?'

ಪ್ರಕಾಶ್ ಆಫೀಸಿಗೆ ಹೋದ. ಕಾವೇರಿಯೂ ಕೆಲಸ ಮುಗಿಸಿ ಸಂಜೆ ಬರುವುದಾಗಿ ಹೇಳಿ ಹೋದಳು. ಬಾಗಿಲು ಜಿಗಿದುಕೊಂಡು ಬಂದು ಕುರ್ಚಿಯಲ್ಲಿ ಕುಕ್ಕರಿಸಿದಳು. ಒಂದು ದೊಡ್ಡ ನಿಟ್ಟುಸಿರು ಬಿಟ್ಟಳು. ಮೈಯೆಲ್ಲಾ ಒಂದು ಥರಾ ಭಾರವೆನ್ನಿಸಿತು. ಕೆಲಸ ಮಾಡುವುದಕ್ಕೂ ಮನಸ್ಸಾಗದ ಆಲಸಿಕೆ. ರಾತ್ರಿ ಹೇಗಿದ್ದರೂ ನಿದ್ದೆಯಿಲ್ಲ. ನಿರಾಳವಾಗಿ ಒಂದೆರಡು ಗಂಟೆ ಮಲಗಿ ಎದ್ದರಾಯಿತು. ಹೇಗಿದ್ದರೂ ಊಟದ ಪ್ರೊಗ್ರಾಂ ಕ್ಯಾನ್ಸಲ್. ನನಗೊಬ್ಬಳಿಗೇನಾದರೂ ಚೂರು ತಿಂದರಾಯಿತು. ಇಲ್ಲ ಷಾಪಿಂಗ್‌ಗೆ ಹೊರಟಾಗ ಹೊರಗಡೆ ಊಟ ಮಾಡಿದರೂ ಆಯಿತು.' ಎಂದು ಆಕಳಿಸಿ ಒಂದು ಸಣ್ಣ ತೂಗು ತೂಗಿದಳು... ಮತ್ತೆ ಅದೇ ಮುಖ... ಮೇಲಿಂದ ಮೇಲೆ.... ಸಣ್ಣದಾಗುತ್ತ ದೊಡ್ಡದಾಗುತ್ತ ಇದೇನು ಭೂತ ಚೇಷ್ಟೆಯೋ ಎನ್ನುವಂತೆ, ಅವಳನ್ನು ತತ್ತರಿಸಿತು. ಚಿಟ್ಟನೆ ಚೀರುವಂತಾಯಿತು. 'ಪ್ರಕಾಶ್, ಪ್ರಕಾಶ್'– ಕೂಗುತ್ತಲೇ ಕಣ್ಣು ಬಿಟ್ಟಳು.

ಎದುರಿಗೆ ಆ ಮುಖ ಕೆಕ್ಕರಿಸುವಂತಿತ್ತು. ಅಪ್ಪಳಿಸಿ ಹೊಡೆಯಬೇಕೆನಿಸಿತು. ಟೀಪಾಯ್ ಮೇಲಿದ್ದ ಆ ದಿನದ ಪತ್ರಿಕೆಯನ್ನು ಕೈಗೆತ್ತಿಕೊಂಡು ಅದನ್ನು ಮಡಚಬೇಕೆಂದುಕೊಳ್ಳುತ್ತಿದ್ದಂತೆ. ನೆನಪಾಯಿತು, ತಾನು ಪೇಪರ್ ನೋಡೇ ಇಲ್ಲ ಅನ್ನೋದು... ಪೇಪರ್‌ನ ಹಾಳೆಗಳನ್ನು ಬಿಡಿಸಿದರೆ, ಮೊದಲು ಅವಳು ನೋಡುತ್ತಿದ್ದುದು, 'ನಿಧನ', ಅಪಘಾತ, ಕೊಲೆ ಕಾಲಂಗಳನ್ನೇ!

'ಅಬ್ಬ! ಇವತ್ತು 'ನಿಧನ' ಕಾಲಂನಲ್ಲಿ ಎಷ್ಟೊಂದು ಜನರ ಭಾವಚಿತ್ರಗಳು! ಅಂದುಕೊಂಡು ಒಂದೊಂದನ್ನೂ ನಿಧಾನವಾಗಿ ಕಣ್ಣಾಡಿಸುತ್ತಾ ಬಂದಾಗ, ಅವಳ ದಿಗ್ಭ್ರಮೆಗೆ, ಕಂಡದ್ದು, ನೆನ್ನೆಯಿಂದ ಕಾಡುತ್ತಿದ್ದ ಅದೇ ಮುಖ??! ಆ ಮುಖವೇ ಬೆಳೆಯುತ್ತಾ ಬೆಳೆಯುತ್ತಾ ಬೃಹತ್ತಾಗಿ ಆ ಪೇಪರಿನ ಹಾಳೆಯನ್ನೆಲ್ಲ ಆಕ್ರಮಿಸಿತ್ತು. ಥರಥರ ನಡುಗಿದಳು. ಗಂಟಲು ಹಿಡಿದಂತಾಯಿತು. ಉಸಿರಾಡಲೂ ಕಷ್ಟವೆನಿಸಿತು. ಕೈಲಿದ್ದ ಪೇಪರನ್ನು ಹರಿದು ರೊಯ್ಯನೆ ಎಸೆದಳು...

"ದೇವರೇ, ದೇವರೇ... ಹೌದು... ಈಗ ನೆನಪಾಗುತ್ತಿದೆ... ಸ್ವಲ್ಪ ಸ್ವಲ್ಪವಾಗಿ... ಸಂಶಯವಿಲ್ಲ. ಅವನದೇ ಮುಖ. ಥೆ! ಥೆ!... ಅವನು ಸಾಯೋದೇ? ಸಾಧ್ಯವಿಲ್ಲ. ಅವನಿಗೆ ಸಾಯುವುದೇನಿತ್ತು?... ಎಂಟು ಹತ್ತು ವರುಷಗಳಾದರೂ ಆಗಿರಬೇಕು... ಎಲ್ಲಿ ಆತನನ್ನು ನೋಡಿದ್ದು?... ನೆನಪಿಸಿಕೊಳ್ಳಲು ಪ್ರಯತ್ನಿಸಿದಳು... ಮರೆಪಿನ ಪೊರೆಗಳನ್ನು ಕಳಚಲು ಯತ್ನಿಸಿದಳು... ಮೊದಲಿಗೆ ಮುಖ... ಕ್ರಮೇಣ ಆ ಮುಖ ಮೈ ಪಡೆಯಿತು... ಮನಸ್ಸಿನ ಸಮಾಧಿಯಲ್ಲಿ ಹೂತುಹೋಗಿದ್ದ ಆ ಮುಖವು ಮೇಲೆದ್ದು ಬಂತು. ರಕ್ತ ಮಾಂಸಗಳಿಂದ ಜೀವ ಪಡೆಯಿತು... ಅದೇ ಮಿಂಚುನಗೆ... ತುಂಟನಗೆ... ಹತ್ತಿರ... ಹತ್ತಿರ ಬಂತು.

"ಮಿಸೆಸ್ ಸುಮಿತ್ರ... ನಿಮಗೆ ಮದುವೆ ಆಗದೆ ಇದ್ದಿದ್ದರೆ, ನನ್ನನ್ನು ಆಫರ್ ಮಾಡುತ್ತಿದ್ದೆ. ನೀವು ಬಹಳ ಚಾರ್ಮಿಂಗ್! ಇಂಟಲಿಜೆಂಟ್..."

ಅವಳಿಗೆ ಗೊತ್ತಿತ್ತು. ಆತ ಹಾಗೆ ಹೇಳಿದ್ದು ತಮಾಶೆಗೆ ಅಂತ.

"ಸಾಕು ಸುಮ್ಮನಿರಿ. ಯಾರಾದರೂ ಕೇಳಿದರೆ, ಏನಂದುಕೊಂಡಾರು? ಅದೂ ನಾನು ನನ್ನ 'ಹಸ್ಬೆಂಡ್'ನನ್ನು ಸೇರುವುದಕ್ಕೆ ಹೋಗ್ತಿರುವಾಗ!!... ಯಾಕೆ ನಿಮ್ಮ ಹೆಂಡ್ತಿ ನಿಮಗೆ ಸರಿಯಾಗಿಲ್ವೇನು? ಇಷ್ಟೊಂದು ಆತುರವಾಗಿದ್ದೀರಿ ಮತ್ತೂ ಒಂದು ಮದುವೆ ಮಾಡಿಕೊಳ್ಳೋಕೆ?– ನಗುತ್ತ ಕೇಳಿದ್ದಳು.

'ಒನ್ ಮಿನಿಟ್. ನಿಮಗೆ ಹೇಳೋದು ಮರ್ತಿದ್ದೆ. ನನ್ನ ಹೆಂಡತಿ ಡಾಕ್ಟರು. ನಾನು ಅವಳ ಪೇಷಂಟ್. ಸಾರಿ ನೆನಪಾಯ್ತು ನೋಡಿ' ಅಂತ ಹೇಳುತ್ತಾ ಸೂಟ್‌ಕೇಸ್ ತೆಗೆದು ಸುಮಾರು ಹತ್ತು ಬಾಟಲಿಗಳನ್ನು, (ಮಾತ್ರೆಗಳಿರುವಂತಹ) ತೆಗೆದು ಒಂದೊಂದರಿಂದಲೂ ಎರಡು ಗುಳಿಗೆಗಳನ್ನು ಒಂದು ಪ್ಲೇಟಲ್ಲಿ ತೆಗೆದು ಅಚ್ಚುಕಟ್ಟಾಗಿ ಜೋಡಿಸಿದ.

ನಿಬ್ಬೆರಗಾಗಿ ನೋಡುತ್ತಿದ್ದ 'ಸುಮಿ' ಸುಮ್ಮನಿರಲಾರದೆ ಕೇಳಿದಳು.

'ಇದೇನು ಮಿಸ್ಟರ್? ಮಾತ್ರೆಗಳ ಜೊತೆ ಆಟವಾಡ್ತಿದ್ದೀರಾ ಹೇಗೆ?'

'ಓಹ್ ನೋ. ನಾ ಹೇಳಿದೆನಲ್ಲ. ನನ್ನ ಹೆಂಡತಿ ಡಾಕ್ಟರ್ ಅಂತ. ಅವಳು ಅಡಿಗೆ ಮಾಡೊಲ್ಲ. ನನಗೆ ಇವೇ ತಿಂಡಿ. ಊಟ. ಇದೋ ಇದು ಬೆಡ್ ಕಾಫಿಗೆ, ಇದು ತಿಂಡಿಗೆ. ಇದು ಊಟಕ್ಕೆ, ಇದು ಸಂಜೆ ಕಾಫಿಗೆ. ಇದು ಶಕ್ತಿ ಬರೋಕೆ. ಇದು ಬಿ.ಪಿ.ಗೆ, ಇದು ಷುಗರ್‌ಗೆ'– ಹೀಗೆ ವಿವರಿಸುತ್ತಾ, ತನ್ನ ಜೋಕಿಗೆ ತಾನೆ ನಗೆಯಾಡಿದ್ದ.

ಒಂಟಿಯಾಗಿ ಪ್ರಯಾಣ ಮಾಡುತ್ತಿದ್ದ ಅವಳಿಗೆ ಈತನ ಜೊತೆ ಸಿಕ್ಕಿದ್ದು ತುಂಬಾ ಹಾಯೆನಿಸಿತ್ತು. ಪ್ರಯಾಣದುದ್ದಕ್ಕೂ ಜೋಕುಗಳು. ಸೀರಿಯಸ್ಸಾಗಿ ಇರಬೇಕೂಂದ್ರೂ ಸಾಧ್ಯವಾಗದ ರೀತಿಯಲ್ಲಿ, ಆತ ಎಲ್ಲರನ್ನೂ ನಗಿಸುತ್ತಿದ್ದ. ಆತನ ರೀತಿ ಅವಳಿಗೆ ತುಂಬಾ ಹಿಡಿಸಿತ್ತು. ಅವರಿಬ್ಬರೂ ಒಳ್ಳೇ ಸ್ನೇಹಿತರಾದರು. ಇಳಿದು ಹೋಗುವಾಗ ಆತನೇ ಸುಮಿಯ ಅಡ್ರೆಸ್ಸನ್ನು ಕೇಳಿ ಪಡೆದಿದ್ದ. ಬೆಂಗಳೂರಿಗೆ ಬಂದರೆ, ಸುಮಿಯ ಗಂಡನನ್ನು ಮಾತನಾಡಿಸಿ, "ಐ ಫೀಲ್ ಜಲಸ್ ಆಫ್ ಯು' ಅಂತ ಸ್ವಲ್ಪ ಚುಡಾಯಿಸಿ, ಹೊಟ್ಟೆ ಉರಿಸುತ್ತೇನೆ– ಎಂದು ಕೂಡಾ ಹೇಳಿದ್ದ.

ಥಟ್ಟನೆ ನೆನಪಾಯಿತು. ಹರಿದು ಬಿಸಾಡಿದ ಪೇಪರಿನ ಹಾಳೆ ತೆಗೆದು ಮತ್ತೊಮ್ಮೆ ಕಣ್ಣಾಡಿಸಿದಳು... ಸಂಶಯವಿಲ್ಲ ಅದೇ... ಅವನದೇ ಮುಖ... ಆದರೆ ಈ ಕಾಲಂನಲ್ಲಿ ಸತ್ತವರ ಭಾವಚಿತ್ರಗಳಲ್ಲವೆ ಬರುವುದು?... ಸಾಧ್ಯವಿಲ್ಲ... ಅವನು... ಸಾವು... ಇಲ್ಲ... ಇಲ್ಲ ಖಂಡಿತ ನನಗೆ ನಂಬಿಕೆಯಾಗುತ್ತಿಲ್ಲ. ಇದೆಲ್ಲ ಏನಿದು ವಿಚಿತ್ರ!!... ಓಹ್... ನನಗೆ ಭರಿಸಲಾಗುತ್ತಿಲ್ಲ. ಐ ಲೈಕ್ ಹಿಮ್... ಐ ಲೈಕ್ ಹಿಮ್... ಐ ಲವ್ ಹಿಮ್... ಒಳಗೆ ಮಳ್ಳಿಯಂತೆ ಕೂತಿದ್ದ ಗುಟ್ಟು ಹೊರಗೆ ಬಂತು... ಅವನನ್ನು ಕಂಡು

ಪರಿಚಯವಾದ ಎಷ್ಟೋ ದಿನಗಳು. ಒಳಗೊಳಗೆ ಅವನನ್ನು ಬಯಸಿದ್ದಳು... ಆದರೆ ಪ್ರಕಾಶ್... ಪ್ರಕಾಶನಿಗೆ ಅನ್ಯಾಯವಾಗಬಾರದೆಂದು ಮಾನಸಿಕ ಬಯಕೆಯನ್ನೂ ಗೋರಿ ಮಾಡಿಟ್ಟಿದ್ದಳು.

ತನಗೊಬ್ಬಳಿಗೆ, ಒಳಗಿದ್ದು ಇದೆಲ್ಲವನ್ನೂ ಆಲೋಚಿಸುವುದು ಸಾಧ್ಯವಿಲ್ಲ. ತನ್ನೆದೆಯೊಡೆದು ಸತ್ತರೂ ಸಾಯಬಹುದೆನಿಸಿತು. ಎದ್ದು ಹೋಗಿ ಎಲ್ಲ ಬಾಗಿಲುಗಳನ್ನು ಬಟಾ ಬಯಲಾಗಿ ತೆರೆದಿರಿಸಿದಳು, ಯೋಚಿಸಿದಳು. ದೊಡ್ಡದಾಗಿ ರೇಡಿಯೋ ಟ್ಯೂನ್ ಮಾಡಿದಳು. ಕಿವಿಗಡಚಿಕ್ಕುವ ಸದ್ದಿಗಾಗಿ ಹಾತೊರೆದಳು.

ಪ್ರಕಾಶನ ದಾರಿ ಕಾದಳು. ಎಲ್ಲವನ್ನೂ ಹೇಳಿ ಬಿಡಬೇಕು. ಮನಸ್ಸು ಹಗುರವಾಗುತ್ತೆ. ಯಾವಾಗಲೂ ತನ್ನನ್ನು ನಗೆಯಾಡುವ ಪ್ರಕಾಶನಿಗೆ, ತನ್ನ ಕನಸುಗಳೂ ಏನನ್ನಾದರೂ ಭವಿಷ್ಯ ನುಡಿಯುತ್ತವೆ; ಅವುಗಳಿಗೂ ಅರ್ಥವಿರುತ್ತೆ- ಅನ್ನೋದನ್ನು ಚೆನ್ನಾಗಿ ತಿಳಿಸಿ ಹೇಳಬೇಕು- ಅಂತ ಮನಸ್ಸಿನಲ್ಲಿ, ತನ್ನಷ್ಟಕ್ಕೇ ತಾನು ನಕ್ಕು ಹೇಳಿಕೊಂಡಳು. ಇವತ್ತು ಬೇಗ ಬರ್ತೀನೀಂತ ಹೇಳಿದವನು ಯಾಕಿಷ್ಟು ತಡ? ಗೋಡೆ ಗಡಿಯಾರ ಗಂಟೆ ಆರನ್ನು ಸೂಚಿಸಿತು. ಪ್ರಕಾಶ್ ಬರುವುದು ತಡವಾದಂತೆ, ಅವಳಿಗೆ ಗಾಬರಿ ಎನಿಸಿತು... ಆಫೀಸಿಗೆ ಫೋನ್ ಮಾಡಿಯಾದರೂ ನೋಡೋಣವೆಂದರೆ, ಗಂಟೆ ಆರಾಗಿದೆ.

ಯಾರೋ ಬಾಗಿಲು ತಟ್ಟಿದ ಸದ್ದಾಯಿತು. ಸ್ವಲ್ಪ ಸಮಾಧಾನವೆನಿಸಿತು. ಹೌದು ಪ್ರಕಾಶನೇ ಬಂದಿರುತ್ತಾನೆ ಎಂದುಕೊಂಡು ಬಾಗಿಲು ತೆಗೆಯಬೇಕೆಂದು ಹೊರಡುವಷ್ಟರಲ್ಲಿ ಫೋನಿನ ಗಂಟೆ ಕೇಳಿಸಿತು. ಎದ್ದವಳು ಹಾಗೇ ನಿಂತಳು. ಫೋನನ್ನು ರಿಸೀವ್ ಮಾಡುವುದೇ? ಇಲ್ಲ ಬಾಗಿಲು ತೆಗೆಯುವುದೇ?... ಬಾಗಿಲ ಸದ್ದಿಗಿಂತ ಫೋನಿನ ಕರೆ ತುರ್ತಾಗನಿಸಿತು. ರಿಸೀವರನ್ನು ಕಿವಿಗೆ ತೆಗೆದುಕೊಂಡು ಕೇಳಿದ ತಕ್ಷಣ, ತತ್ತರಿಸಿ ಕೆಳಗುರುಳಿದಳು... ಬಾಗಿಲು ಬಡಿವ ಸದ್ದೂ ಕೇಳಿಸುತ್ತಲೇ ಇತ್ತು. ಹಾಗಾದರೆ ಈಗ ಬಂದಿರುವವರು ಯಾರು?... ಹಾಗೂ ಹೀಗೂ ಸಾವರಿಸಿಕೊಂಡು ಹೋಗಿ ಬಾಗಿಲ ಚಿಲಕ ತೆಗೆದಳು... ಅವಾಕ್ ಆಗಿ ನಿಂತು ಬಿಟ್ಟಳು... ಅದೇ ಮುಖದ ವ್ಯಕ್ತಿ... ಬೆಳಿಗ್ಗೆ ಪೇಪರಿನಲ್ಲಿ 'ನಿಧನ' ಕಾಲಂನಲ್ಲಿ ಕಂಡ ಭಾವಚಿತ್ರದ ವ್ಯಕ್ತಿ.... ಗಡಗಡ ನಡುಗಿದಳು. ತಲೆ ಸುತ್ತಿ ಬಂದಂತಾಯಿತು. ಅದೇ ಮುಖದ ವ್ಯಕ್ತಿ. ಮುಗುಳುನಗೆಯಲ್ಲಿ ನಗೆ ಚಿಮ್ಮಿಸಿ, 'ಹಲೋ ಮಿಸೆಸ್ ಸುಮ'- ಎಂದ.

* * *

ಹೋಳಿ ಹಬ್ಬದ ಉಡುಗೊರೆ

ಮೈಕೊಲಾಲ ಅಮರಕಾಂತನ ಮನೆಗೆ ಪಗಡೆ ಆಡಲು ಬಂದಾಗ ಅವನು ಹೊರಗೆ ಹೋಗಲು ಅಣಿಯಾಗುತ್ತಿದ್ದ. "ಏನಪ್ಪ, ಎಲ್ಲಾದರು ಹೊರಟಿದ್ದಿಯೇನು? ಬಿಡುವಿದ್ದರೆ ಬಾ ಒಂದೆರಡು ಆಟ ಆಡೋಣ"- ಎಂದ.

ಅಮರಕಾಂತ ಟ್ರಂಕಿನೊಳಗೆ ಬಾಚಣಿಗೆ, ಕನ್ನಡಿಗಳನ್ನು ಇರಿಸುತ್ತ ಹೇಳಿದ– ಇಲ್ಲಪ್ಪ, ಸದ್ಯಕ್ಕೆ ಬಿಡುವಿಲ್ಲ. ನಾನು ನಾಳೆ ನನ್ನ ಅತ್ತೆ ಮನೆಗೆ ಹೋಗುತ್ತಿದ್ದೇನೆ. ಬಟ್ಟೆ ಬರೆ ತೆಗೆದಿರಿಸಿಕೊಳ್ಳಬೇಕಿದೆ.

ಅದಕ್ಕೆ ಈಗಿನಿಂದಲೇ ಸಿದ್ಧಮಾಡಿಕೊಳ್ಳಬೇಕೇನು? ಇಲ್ಲಿಂದ ಎಷ್ಟು ಮಹಾದೂರ ಇದೆ! ನಾಲ್ಕು ಹೆಜ್ಜೆ ಹಾಕಿದರೆ ಸಾಕು... ಮೊದಲನೇ ಸಲವೇನು ಹೋಗ್ತಿರೋದು?

"ಹೌದಪ್ಪ! ಇಲ್ಲೀವರೆಗೆ ಒಂದು ಸಲವೂ ಹೋಗೇ ಇಲ್ಲ. ಈಗಲೂ ನನಗೆ ಹೋಗೋ ಇಷ್ಟ ಇಲ್ಲ. ಆದರೆ ನನ್ನ ಮಾವ ಒಂದೇ ಸಮ ಒತ್ತಾಯ ಮಾಡ್ತಿದ್ದಾರೆ."

"ಹಾಗಾದರೆ ನಾಳೆ ಸಂಜೆಗೇ ಹೊರಟು ಬಿಡು. ಒಂದು ಅರ್ಧ ಗಂಟೇಲಿ ಸೇರಿ ಬಿಡ್ತೀಯ."

"ಈಗಿಂದ್ಲೇ ನನ್ನ ಎದೆ ಹೊಡ್ಕೊಳ್ತಾ ಇದೆ. ಇಲ್ಲೀವರೆಗೆ ಅವಳನ್ನು ನೋಡ್ಬೇಕೂನ್ನೋ ಕಾತರ, ಕಲ್ಪನೆಗಳಲ್ಲಿ ಒಂದು ಥರಾ ಖುಷಿ ಅನುಭವಿಸ್ತಿದ್ದೆ. ಆದರೆ ಕಲ್ಪನೆ ನಿಜವಾಗೋ ಗಳಿಗೆ ಹತ್ತಿರ ಬರ್ತಿದ್ದ ಹಾಗೇ ಏನೋ ಒಂದು ಥರಾ!... ಏನಾಗುತ್ತೋ ಏನೋ ಯಾರಿಗ್ಗೊತ್ತು?"

"ಹೂಂ! ಅವಳಿಗೆ ಕೊಡೋಕೆ ಏನಾದ್ರೂ ತಗೊಂಡಿದ್ದೀಯ ಹೇಗೆ? ಬರಿ ಕೈಲಿ ಹೋಗ್ಬೇಡ. ಚೆನ್ನಾಗಿರೋಲ್ಲ."

ಅಮರಕಾಂತ ಅವಳಿಗಾಗಿ ಯಾವ ಉಡುಗೊರೆನೂ ತಗೊಂಡಿರಲಿಲ್ಲ. ಅವನಿಗೆ ಇದೆಲ್ಲ ಹೊಸದು! ಅನುಭವ ಸಾಲದು, ಇಂಥ ವಿಷಯಗಳಲ್ಲಿ.

"ಈಗ ತಗೊಂಡ್ಹೋಗಿಡು... ಒಳ್ಳೇ ಮನುಷ್ಯ ಕಣಯ್ಯ. ಮೊದಲ ಸಲ ಹೋಗ್ತಿದ್ದೀಯ. ಅವಳಿಗೆ ಏನನ್ಸುತ್ತೆ?... ಯೋಚನೆ ಮಾಡು!" ಮೈಕೂ ಹೇಳಿದ.

"ಹಾಗಾದ್ರೆ ಏನು ತಗೊಂಡು ಹೋಗ್ಲಿ? ನನಗೆ ಇದೆಲ್ಲ ಹೊಳದೇ ಇರಲಿಲ್ಲ. ನೀನೇ ಏನಾದ್ರೂ ಸೂಚನೆ ಕೊಡು. ಖರ್ಚು ಕಮ್ಮಿ ಇರ್ಬೇಕು, ವಸ್ತು ಚೆನ್ನಾಗಿರಬೇಕು. ಯಾಕೇಂದ್ರೆ ಸ್ವಲ್ಪ ಹಣ ಮನೆಗೂ ಕಳಿಸಬೇಕಿದೆ. ಅಪ್ಪ ಬೇಕೆಂದಿದ್ದಾರೆ."– ಅಮರಕಾಂತ ಹೇಳಿದ.

ಮೈಕೊ ಅಪ್ಪ ಅಮ್ಮನಿಂದ ಬೇರೆಯಾಗಿ ವಾಸಿಸುತ್ತಿದ್ದ. ವ್ಯಂಗ್ಯದಿಂದ ಹೇಳಿದ– 'ಅಪ್ಪ ಹಣ ಕೇಳಿದರೆ ಇಲ್ಲಾಂತ ಹೇಳೋಕಾಗುತ್ತಾ? ಅಪ್ಪ ಹಣ ಕೇಳೋದೂಂದ್ರೆ ಸಾಮಾನ್ಯವಾ?"

ಅವನ ವ್ಯಂಗ್ಯ ಅಮರಕಾಂತನಿಗೆ ಅರ್ಥವಾಯಿತು. "ಅದಕ್ಕಾಗಿಯೇ ನಾನು ಹೋಳಿ ಹಬ್ಬಕ್ಕೂ ಹೊಸ ಬಟ್ಟೆ ಕೊಂಡುಕೊಳ್ಳಲಿಲ್ಲ. ಆದರೆ ಒಬ್ಬರ ಮನೇಗೆ ಹೋಗುವಾಗ ಬರಿ ಕೈಲಿ ಹೋಗೋದು ಸರಿ ಅಲ್ಲ ಅಂದ್ಮೇಲೆ ಏನಾದರೂ ವ್ಯವಸ್ಥೆ ಮಾಡಲೇಬೇಕಲ್ಲ!... ಸ್ವಲ್ಪ ಅಗ್ಗವಾಗಿರೋ ವಸ್ತು ಏನಾದ್ರು ಇದ್ರೆ ಹೇಳು."

ಇಬ್ಬರು ಸ್ನೇಹಿತರ ನಡುವೆ ವಿಚಾರ ವಿನಿಮಯ ಆಯ್ತು. ವಿಷಯ ಬಹಳ ಮಹತ್ವದ್ದಾಗಿತ್ತು. ಇದರ ಆಧಾರದ ಮೇಲೆಯೇ ದಾಂಪತ್ಯ ಸುಖಮಯವಾಗಬಹುದು ಇಲ್ಲವೇ ದುಃಖ ಅನುಭವಿಸಲೂ ಬೇಕಾಗಿರಬಹುದು. ಅದಕ್ಕೇ ಮೊದಲ ಭೇಟಿ ಮಹತ್ವದ್ದಾಗಿರಲೇ ಬೇಕಲ್ಲ? ಇಬ್ಬರ ನಡುವೆ ಬಹಳ ಹೊತ್ತು ಚರ್ಚೆ ನಡೀತಿತ್ತು. ಆದರೆ ಯಾವುದೇ ನಿರ್ಧಾರ ಸಾಧ್ಯವಾಗಲಿಲ್ಲ.

ಅದೇ ಹೊತ್ತಿಗೆ ಒಬ್ಬಳು ಪಾರಸೀ ಹೆಂಗಸು ಬಹಳ ಫ್ಯಾಷನ್ನಾಗಿ ಕಾಣುವಂತಿದ್ದ ಸೀರೆ ಉಟ್ಟುಕೊಂಡು ಕಾರಿನಲ್ಲಿ ಕುಳಿತು ಹೊರಟದ್ದು ಕಣ್ಣಿಗೆ ಬಿತ್ತು. "ಲೋ ತಮ್ಮ ಈ ಥರದ ಸೀರೆ ತೊಗೊಂಡು ಹೋದ್ರೆ ನಿನ್ನವಳು ಖುಷಿ ಪಡಬಹುದು ನೋಡು!" ಮೈಕೊಲಾಲನೆಂದ. 'ಅದರ ಬಣ್ಣ, ಡಿಜೈನ್ ಎಲ್ಲ ಎಷ್ಟು ಚೆನ್ನಾಗಿದೇಂದ್ರೆ, ನನಗೇ ಹುಚ್ಚು ಹಿಡಿಸೋ ಹಾಗಿದೆ. ಹಕೀಮ್‌ನ ಅಂಗಡೀಲಿ ತಗೋ. ಇಪ್ಪತ್ತೈದು ರೂಪಾಯಿಗಳಿಗೇ ಸಿಗುತ್ತೆ"– ಮುಂದುವರೆಸಿದ.

ಅಮರಕಾಂತನಿಗೂ ಆ ಸೀರೆ ಬಹಳ ಹಿಡಿಸಿತು. ತನ್ನ ಹೆಂಡತಿ ಮೈಮೇಲೆ ಚೆನ್ನಾಗಿ ಕಾಣುತ್ತೆ ಎಂದುಕೊಂಡ. ಈ ಸೀರೆ ನೋಡಿ ಅವಳಿಗೆ ಎಷ್ಟು ಸಂತೋಷವಾಗಬಹುದು ಎಂಬುದನ್ನು ಊಹಿಸಿಕೊಳ್ಳುವುದರಲ್ಲೇ ಮಗ್ನನಾಗಿದ್ದ. "ನನಗೂ ಅದು ಬಹಳ ಹಿಡಿಸ್ತು ಕಣೋ! ಆದರೆ ಹಕೀಮ್‌ನ ಅಂಗಡೀಲಿ ಪಿಕೆಟಿಂಗ್ ನಡೀತಿರಬೇಕಲ್ಲ?"

"ಇರಲಿ ಬಿಡೋ! ಕೊಂಡುಕೊಳ್ಳೋರು ಕೊಂಡ್ಕೊಳ್ತಲೇ ಇರ್ತಾರೆ. ಕೊಳ್ಳೋವರ ಜತೆ? ಯಾರು ಅಡ್ಡಿ ಮಾಡ್ತಾರೆ?"

ಅಮರಕಾಂತ ಕ್ಷಮಾ ಯಾಚನೆಯ ದನಿಯಲ್ಲಿ ಹೇಳಿದ. "ನೀನು ಹೇಳ್ತೋ ಮಾತು ಸತ್ಯವೇ. ಆದರೆ ಸ್ವಯಂ ಸೇವಕರ ನಡುವೆ ಹೋಗೋಕೆ ನಂಗೊಂದು ಥರಾ ಸಂಕೋಚ ಆಗುತ್ತೆ. ಜೊತೆಗೆ ತಮಾಶೆ ನೋಡೋಕೆ ನಿಂತವರ ಗುಂಪಂತೂ ಯಾವಾಗ್ಲೂ ಇದ್ದೇ ಇರುತ್ತೆ."

"ಹಾಗಿದ್ದರೆ ಹಿಂಬಾಗಿಲಿಂದ ಹೋಗು. ಅಲ್ಲೇನೂ ಪಿಕೆಟಿಂಗ್ ನಡೆಯೋದಿಲ್ಲವಲ್ಲ?"

"ಬೇರೆ ಅಂಗಡೀಲಿ ಸಿಗೋದಿಲ್ವೇನು?"

"ಹಾಕೀಮ್‌ನ ಅಂಗಡಿ ಬಿಟ್ಟರೆ ಬೇರೆಲ್ಲೂ ಈ ಥರದ್ದು ಸಿಗೊಲ್ಲ."

* * *

ಸಂಜೆಯಾಗಿತ್ತು. ಅಮೀನಾಬಾದಿನಲ್ಲಿ ಆಕರ್ಷಕ ವಾತಾವರಣವಿತ್ತು. ಸೂರ್ಯನ ಪ್ರಕಾಶದ ನೆನಪು ಉಳಿದಿತ್ತು.

ಅಮರಕಾಂತ ಸಂಕೋಚದ ಹೆಜ್ಜೆಗಳಿಡುತ್ತಲೇ ಕಾಶಿಮ್‌ನ ಅಂಗಡಿಯ ಬಳಿಗೆ ನಡೆದ. ಸ್ವಯಂ ಸೇವಕರ ಮತ್ತು ತಮಾಶೆ ನೋಡಲು ನಿಂತ ಜನರ ಗುಂಪುಗಳಿದ್ದವು. ಒಂದೆರಡು ಬಾರಿ ಸಾಹಸ ಮಾಡಿ ಒಳಗೆ ಹೋಗಲು ನೋಡಿದ. ಆದರೆ ರಸ್ತೆಯಂಚಿನ ಬಳಿ ಸಾರುತ್ತಿದ್ದಂತೆ ಧೈರ್ಯ ಕುಸಿಯುತ್ತಿತ್ತು.

ಆದರೆ ಸೀರೆಯನ್ನು ಕೊಳ್ಳಲೇ ಬೇಕಿತ್ತು. ಅವನ ಮನಸ್ಸಿಗೆ ತುಂಬಾ ಹಿಡಿಸಿತ್ತು. ಅದನ್ನು ತೆಗೆದುಕೊಳ್ಳಲು ಹಪಹಪಿಸುತ್ತಿದ್ದ.

ಕಡೆಗೆ ಹಿಂಬಾಗಿಲಿನಿಂದ ಹೋಗಲೇಬೇಕೆಂದು ನಿಶ್ಚಯಿಸಿದ. ಯಾವೊಬ್ಬ ಸ್ವಯಂಸೇವಕನೂ ಕಾಣಿಸಲಿಲ್ಲ. ಬೇಗನೇ ಒಳ ನುಗ್ಗಿ ತಾನು ಬಯಸಿದ ಮಾದರಿಯ ಸೀರೆ ಕೊಂಡು ಬಾಗಿಲ ಬಳಿ ಬಂದ. ಆದರೆ ಇಷ್ಟರಲ್ಲಿಯೇ ಪರಿಸ್ಥಿತಿಯು ಬದಲಾಗಿತ್ತು. ಮೂರು ಜನ ಸ್ವಯಾಂಸೇವಕರು ಬಂದು ನಿಂತುಬಿಟ್ಟಿದ್ದರು. ಅಮರಕಾಂತನಿಗೆ ಒಂದೆರಡು ಕ್ಷಣ ಏನೂ ತೋಚಲಿಲ್ಲ. ನಿಂತೇ ಇದ್ದ. ಒಂದು ಕ್ಷಣ!... ಅಷ್ಟೆ! ಅಲ್ಲಿಂದ ಬಿಟ್ಟ ಬಾಣದಂತೆ ಓಡಿದ. ಓಡುತ್ತ... ಓಡುತ್ತ ಕಣ್ಮರೆಯಾದ! ಆದರೆ ದುರಾದೃಷ್ಟ! ಮುದುಕಿಯೊಬ್ಬಳು ಕೋಲೂರಿಕೊಂಡು ನಡೆದು ಬರುತ್ತಿದ್ದಳು. ಅಮರಕಾಂತ ಅವಳಿಗೆ ಡಿಕ್ಕಿ ಹೊಡೆದ. ಮುದುಕಿ ಬಿದ್ದು ಬಿಟ್ಟಳು... ಒಂದೇ ಸಮನೆ ಬೈಗಳ ಮಳೆ!! "ಕಣ್ಣು ನೆತ್ತಿ ಮೇಲಿದೆಯೇನೋ?... ನೋಡ್ಕೊಂಡು ಬರುವುದಕ್ಕೆ ಆಗೊಲ್ವೇನು?... ಏನ್ಮಾಡ್ತಿ. ಪ್ರಾಯದ ಸೊಕ್ಕು... ಪ್ರಾಯ ಹೀಗೇ ಇರುತ್ತೇನೋ?" ಒಂದೇ ಸಮನೆ ಬೈಗಳ ಶಾಪವನ್ನು ಮುಂದುವರೆಸಿದಳು.

ಅಮರಕಾಂತ ಒಂದು ಹೆಜ್ಜೆ ಮುಂದುವರೆದು ಮುದುಕಿಯನ್ನು ಎಬ್ಬಿಸಿ ಅವಳಿಂದ ಕ್ಷಮೆ ಬೇಡುತ್ತಿದ್ದ. ಅಷ್ಟರಲ್ಲಿ ಮೂವರು ಸ್ವಯಂಸೇವಕರು ಧಾವಿಸಿ ಕೈಲಿದ್ದ ಪೊಟ್ಟಣ ನೋಡಿ ಒಬ್ಬ ಹೇಳಿದ– 'ವಿದೇಶಿ ಬಟ್ಟೆಗಳನ್ನು ಒಯ್ಯಲು ಅಪ್ಪಣೆ ಇಲ್ಲ' ಎಂದ.

"ಒಬ್ಬ ಕಳ್ಳನಂತೆ ಓಡಿ ಹೋಗುತ್ತಿದ್ದಿರಿ" ಎರಡನೆಯವನೆಂದ.

"ಸಾವಿರಾರು ಜನ ಜೈಲು ಸೇರುತ್ತಿದ್ದಾರೆ. ದೇಶ ಹತ್ತಿಕೊಂಡು ಉರೀತಿದೆ... ಈ ಮನುಷ್ಯನಿಗೆ ವಿದೇಶಿ ಬಟ್ಟೆ ಬೇಕಾಗಿದೆ!"

ಅಮರಕಾಂತ ಪೊಟ್ಟಣವನ್ನು ಮತ್ತಷ್ಟು ಬಿಗಿಯಾಗಿ ಎದೆಗೊತ್ತಿಕೊಂಡು ಹೇಳಿದ– "ನೀವು ಹೋಗಲು ಬಿಡುತ್ತೀರೋ ಇಲ್ಲೋ?"

ಮೊದಲ ಸ್ವಯಂಸೇವಕ ಅಮರಕಾಂತ ಹಿಡಿದಿದ್ದ ಪ್ಯಾಕೆಟ್ ಮೇಲೆ ಕೈಯಿಟ್ಟು ಹೇಳಿದ– "ಹಾಂ! ಹೋಗೋಕೆ ಬಿಡೋದೇ? ವಿದೇಶಿ ವಸ್ತು ಹಿಡ್ಕೊಂಡು ಹೋಗಲು ಎಂದಿಗೂ ಬಿಡೋದಿಲ್ಲ."

ಅಮರಕಾಂತ ಥಟ್ಟನೆ ಅವನಿಂದ ಪ್ಯಾಕೆಟ್ ಕಸಿದುಕೊಂಡು ಹೇಳಿದ– "ನನ್ನನ್ನು ತಡೆಯೋಕೆ ನಿನಗೆ ಸಾಧ್ಯವೇ ಇಲ್ಲ!"

ಅಮರಕಾಂತ ಒಂದೆರಡು ಹೆಜ್ಜೆ ಮುಂದೆ ನಡೆದನೋ ಇಲ್ಲವೋ, ಇಬ್ಬರು ಸ್ವಯಂಸೇವಕರು ಬಂದು ಅವನ ಮುಂದೆ ಅಡ್ಡಲಾಗಿ ಮಲಗಿದರು. ಬಡಪಾಯಿ ಅಮರಕಾಂತ ಸಿಕ್ಕಿ ಬಿದ್ದ. ತಪ್ಪಿಸಿಕೊಳ್ಳಬೇಕೆಂದಿದ್ದವನು ಸಂಕಟದಲ್ಲಿ ಸಿಕ್ಕಿಕೊಂಡ. ಅರೆ ನಿಮಿಷದಲ್ಲಿ ಒಂದಿಪ್ಪತ್ತು ಮಂದಿ ಅವನ ಸುತ್ತ ನೆರೆದರು. ತಮತಮಗೆ ತೋಚಿದಂತೆ ಟೀಕೆ ಮಾಡಲು ತೊಡಗಿದರು.

"ಯಾರೋ 'ಜಂಟಲ್‌ಮನ್' ಇರಬೇಕು."

"ಇವರೆಲ್ಲ ತಮ್ಮನ್ನು ಬಹಳ ವಿದ್ಯಾವಂತರು, ಎಂದುಕೊಂಡಿದ್ದಾರೆ... ಛಿ...! ಈ ಅಂಗಡೀಲಿ ದಿನಕ್ಕೆ ಒಂದು ಹತ್ತು ಜನವಾದರೂ ಕೈದಿಗಳಾಗ್ತಾರೆ; ಆದರೆ ಈತನಿಗೆ ಅದೆಲ್ಲ ಯಾವ ದೊಡ್ಡದು!?"

"ಬಟ್ಟೆ ಕಿತ್ಕೊಳ್ಳಿ, ಹೋಗಿ ಪೋಲೀಸ್ ಠಾಣೆಯಲ್ಲಿ ದೂರು ಬರೆಸೋಕೆ ಹೇಳಿ."

ಸಂಕೋಲೆಗಳಿಂದ ಜಗಿದು ನಿಂತಂತೆ ಎನಿಸಿತು. ಅವನಿಗೆ ಮೈಕೊಪಿನ ಮೇಲೆ ತಡೀಲಾಗದ ಸಿಟ್ಟು ಬರುತ್ತಿತ್ತು. ಅವನೇ ಇದಕ್ಕೆಲ್ಲ ಕಾರಣ. ಅವನಿಗೇನಂತೆ! ಯಾರಿಗೂ ಏನೂ ಕೊಡಬೇಕಿಲ್ಲ. ಬಂದು ದೊಡ್ಡದಾಗಿ ಹೇಳ್ಬಿಟ್ಟ. ಇಲ್ಲಿಂದ ಏನಾದ್ರೂ ಉಡುಗೊರೆ ತಗೋ. ಅಂತ.

ಸ್ವಲ್ಪ ಹೊತ್ತು ಹೀಗೇ ಟೀಕೆ, ಟಿಪ್ಪಣಿಗಳಾಯ್ತು. ಕಿತ್ತಾಟವೂ ಪ್ರಾರಂಭವಾಯ್ತು. ಯಾರೋ ಬಂದು ತಲೆ ಮೇಲಿನ ಟೋಪಿ ಎಗರಿಸಿದರು. ಅವನ ಕಡೆ ಜಿಗಿದಾಗ, ಇನ್ನೊಬ್ಬ ಕೈಲಿದ್ದ ಪೊಟ್ಟಣವನ್ನು ಕಿತ್ತುಕೊಂಡ. ಕೈಯಿಂದ ಕೈಗೆ ಹಾರುತ್ತ, ಆ ಪೊಟ್ಟಣ ಅದೃಶ್ಯವಾಯಿತು.

"ನಾನು ಹೋಗಿ ಪೋಲೀಸ್‌ಗೆ ರಿಪೋರ್ಟ್ ಮಾಡ್ತೀನಿ"–ಅಮರಕಾಂತ ಹೇಳಿದ.

"ಹೋಗ್ಹೋಗು. ತಪ್ಪದೆ ಹೋಗಿ ಹೇಳಿ ನಮ್ಮನ್ನೆಲ್ಲ ಗಲ್ಲಿಗೇರಿಸುವಂತೆ ಹೇಳು."

ಅಷ್ಟರಲ್ಲಿ ಒಬ್ಬಳು ಯುವತಿ ಕೈಲಿ ಒಂದು ಚೀಲ ಹಿಡ್ಕೊಂಡು ಅಲ್ಲಿಗೆ ಬಂದಳು. ಅಲ್ಲಿನ ಪರಿಸ್ಥಿತಿ ನೋಡಿ ಹೇಳಿದಳು. "ಏನಿದು ಗಲಾಟೆ? ನೀವ್ಯಾಕೆ ಒಬ್ಬ ಸಭ್ಯ ಮನುಷ್ಯನನ್ನು ಹೀಗೆ ತೊಂದರೆ ಪಡಿಸ್ತಿದೀರಿ?"

ಅಮರಕಾಂತನಿಗೆ ಪ್ರಾಣ ಬಂದಂತಾಯಿತು. ಅವಳ ಬಳಿಗೆ ನಡೆದು ದೂರು ಕೊಡಲು ತೊಡಗಿದ– 'ಈ ಜನ ನನ್ನ ಬಟ್ಟೆಗಂಟು ಕಿತ್ತುಕೊಂಡು ಎಲ್ಲೋ ಅದೃಶ್ಯ ಮಾಡ್ಬಿಟ್ಟಿದ್ದಾರೆ. ನನ್ನ ದೃಷ್ಟೀಲಿ ಇವರೆಲ್ಲ ಡಕಾಯಿತರು. ಇದು ಡಕಾಯಿತಿ. ಇದು ಸತ್ಯಾಗ್ರಹವಲ್ಲ; ದೇಶ ಪ್ರೇಮವೂ ಅಲ್ಲ."

ಯುವತಿ ಭರವಸೆಯಿಮದ ಹೇಳಿದಳು– "ಗಾಬರಿಯಾಗಬೇಡಿ. ನಿಮ್ಮ ಬಟ್ಟೆ ಸಿಗುತ್ತೆ. ಇದ್ದರೆ ಇವರ ಹತ್ತಿರವೇ ಇರುತ್ತೆ... ಎಂಥಾ ಬಟ್ಟೇಂದ್ರಿ?"

ಒಬ್ಬ ಸ್ವಯಂ ಸೇವಕ ಹೇಳಿದ. "ಅಕ್ಕ ಇವರು ಹಾಕಿಮ್‌ನ ಅಂಗಡಿಯಿಂದ ಕೊಂಡಿದ್ದಾರೆ."

"ಯಾರ ಅಂಗಡಿಯಿಂದಲೇ ಕೊಂಡಿರಲಿ. ಬಲವಂತವಾಗಿ ಕಿತ್ತುಕೊಳ್ಳುವ ಅಧಿಕಾರ ನಮಗಿಲ್ಲ. ಹೋಗು ಇವರ ಬಟ್ಟೇನ ಇವರಿಗೆ ವಾಪಸ್ ತಂದುಕೊಡು. ಯಾರ ಹತ್ತಿರ ಇದೆ?"

ಒಂದು ಕ್ಷಣದಲ್ಲಿ ಅದೃಷ್ಯವಾದಷ್ಟೇ ವೇಗದಲ್ಲಿ ಮತ್ತೆ ಕೈಯಿಂದ ಕೈ ದಾಟುತ್ತ ಪ್ರತ್ಯಕ್ಷವಾಯಿತು ಬಟ್ಟೆ ಪ್ಯಾಕೆಟ್... ಸ್ವಲ್ಪ ಹೊತ್ತಿನಲ್ಲಿ ಸೇರಿದ್ದ ಗುಂಪು ಚದುರಿತು. ಸ್ವಯಂ ಸೇವಕರೂ ಹೊರಟುಹೋದರು. ಅಮರಕಾಂತ ಆ ಯುವತಿಗೆ ಕೃತಜ್ಞತೆ ಸಲ್ಲಿಸುತ್ತ ಹೇಳಿದ, "ಈ ಹೊತ್ತು ನೀವು ಬರದೇ ಹೋಗಿದ್ದ ಪಕ್ಷದಲ್ಲಿ ಈ ಸೀರೆ ಖಂಡಿತವಾಗಿ ಸಿಗುತ್ತಿರಲಿಲ್ಲ. ನನ್ನನ್ನೂ ಸುಮ್ಮನೆ ಬಿಡುತ್ತಿರಲಿಲ್ಲ."

ಯುವತಿ ತಿಳಿ ವ್ಯಂಗ್ಯದಿಂದ ಹೇಳಿದಳು, "ಜನರ ಅಭಿಪ್ರಾಯವನ್ನು ಪ್ರತಿಯೊಬ್ಬರು ಗೌರವಿಸಲೇಬೇಕು... ಇರಲಿ ನೀವ್ಯಾಕೆ ಆತನ ಅಂಗಡಿಯಿಂದ ಬಟ್ಟೆ ಕೊಂಡಿರಿ? ನೋಡುತ್ತಲೇ ಇದ್ದೀರಿ, ನಮ್ಮ ಮೇಲೆ ಎಷ್ಟೊಂದು ಅತ್ಯಾಚಾರ ನಡೀತಿವೆ. ಅವರೂ

ನಿಮಗೆ ಗಮನ ಇಲ್ಲ. ಗೊತ್ತಿದ್ದೂ ಗೊತ್ತಿಲ್ಲದವರಂತೆ ಇರುವವರಿಗೆ ತಿಳಿಸಿ ಹೋಳೋದು ಬಹಳ ಕಷ್ಟ"

ಅಮರಕಾಂತನಿಗೆ ನಾಚಿಕೆಯೆನಿಸಿತು. ತಮ್ಮ ಸ್ನೇಹಿತರ ಜೊತೆ ಕುಳಿತು ಸ್ವೇಚ್ಛೆಯಿಂದ ಹರಟುತ್ತಿದ್ದುದನ್ನೆಲ್ಲ ಮರೆತುಬಿಟ್ಟ.

"ನಾನು ನನಗಾಗಿ ಕೊಂಡದ್ದಲ್ಲ. ಒಬ್ಬ ಹೆಣ್ಣಿನ ಆಸೆಯಿತ್ತು. ನಾನು ವಿವಶನಾಗಿ ಕೊಂಡೆ."

ಆ ಮಹಿಳೆಗೆ ತಿಳಿಸಿ ಯಾಕೆ ಹೇಳಲಿಲ್ಲ?"

"ನೀವು ತಿಳಿಸಿ ಹೇಳಿದ್ದರೆ ತಿಳಿದುಕೊಳ್ಳುತ್ತಿದ್ದಳು. ನಾನು ಹೇಳಿದರೆ ಅವಳಿಗೆ ಅರ್ಥವಾಗೋದಿಲ್ಲ."

"ಅವಕಾಶ ಸಿಕ್ಕಿದರೆ ಅವಳಿಗೆ ತಿಳಿಸಿ ಹೇಳೋಕೆ ಪ್ರಯತ್ನಿಸ್ತೀನಿ. ಪುರುಷರ ಮೂಗುದಾರ ಸ್ತ್ರೀಯರ ಕೈಲಿರುತ್ತೆ... ನೀವು ಯಾವ ಬೀದಿಲಿದ್ದೀರಿ?"

"ಸವಾದತ್ ಗಂಜ್"

ತಮ್ಮ ಹೆಸರು??"

"ಅಮರಕಾಂತ"

ಯುವತಿ ತತ್‌ಕ್ಷಣ ಮುಸುಕೆಳೆದುಕೊಂಡಳು. ಸಂಕೋಚ ಸ್ನೇಹಭಾವಗಳಿಂದ ಮೃದು ಧ್ವನಿಯಲ್ಲಿ ಕೇಳಿದಳು– "ತಮ್ಮ ಹೆಂಡತಿ ತಮ್ಮ ಮನೇಲಿ ಇಲ್ವೇನು?"

ಅಮರಕಾಂತ ಆಶ್ಚರ್ಯ ಚಕಿತನಾಗಿ ಕೇಳಿದ– "ನೀವು ಯಾವ ಬೀದೀಲಿದ್ದೀರಿ?"

"ಘಸಿಯಾರಿ ಮಂಡಿ"

"ತಮ್ಮ ಹೆಸರು ಸುಖದಾದೇವಿ ಅಲ್ಲಾ ತಾನೇ?"

"ಇರಬಹುದು. ಈ ಹೆಸರಿನವರು ಬೇರೆಯವರೂ ಇರಬಹುದಲ್ಲಾ!"

"ತಮ್ಮ ತಂದೆ ಹೆಸರು ಜ್ವಾಲಾದತ್ತ ಅಲ್ಲವೇ?"

"ಆ ಹೆಸರಿನವರೂ ಬಹಳ ಮಂದಿ ಇದ್ದಾರೆ"

ಅಮರಕಾಂತ ತಕ್ಷಣವೇ ಜೇಬಿನೊಳಗಿಂದ ಬೆಂಕಿಪೊಟ್ಟಣ ಹೊರತೆಗೆದ. ಸುಖದಳ ಮುಂದೆ ತಾನು ತಂದಿದ್ದ ಸೀರೆಗೆ ಕಡ್ಡಿಗೀರಿ ಬೆಂಕಿ ಹಚ್ಚಿದ.

"ತಾವು ನಾಳೆ ಬರ್ತೀರೇನು?" ಸುಖದ ಕೇಳಿದಳು.

ಅಮರಕಾಂತ ಗದ್ಗದಿತನಾಗಿ ಹೇಳಿದ– 'ಇಲ್ಲ ಸುಖದಾ ನನ್ನ ಈ ಕೃತ್ಯಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳದ ಹೊರತು ನಾನು ಬರುವುದಿಲ್ಲ.

ಸುಖದ ಏನನ್ನೋ ಹೇಳಲು ಪ್ರಯತ್ನಿಸುತ್ತಿದ್ದಂತೆ, ಅಮರಕಾಂತ ವೇಗವಾಗಿ ಅಲ್ಲಿಂದ ಹೊರಬಿದ್ದ.

* * *

ಇವತ್ತು ಹೋಳಿ ಹಬ್ಬ. ಆದರೆ ಸ್ವಾತಂತ್ರ್ಯ ಪ್ರೇಮಿಗಳಿಗೆ ಹೋಳಿ ಹಬ್ಬವಾಗಲೀ, ವಸಂತ ಹಬ್ಬವಾಗಲಿ ಯಾವುದೂ ಇಲ್ಲ. ಇವತ್ತು ಹಾಶಿಮ್‌ನ ಅಂಗಡೀಲಿ ಪಿಕೆಟಿಂಗ್ ನಡೀತಿದೆ. ತಮಾಶೆ ನೋಡುವವರ ಗುಂಪೂ ನೆರೆದಿದೆ. ಇವತ್ತಿನ ಸ್ವಯಂಸೇವಕರ ಗುಂಪಿನಲ್ಲಿ ಅಮರಕಾಂತನೂ ಇದ್ದಾನೆ. ಅವನೂ ಪಿಕೆಟಿಂಗ್ ಮಾಡುತ್ತಿದ್ದಾನೆ. ಖಾದಿ ಬಟ್ಟೆ ಮೈಮೇಲಿದೆ. ಕೈಯಲ್ಲಿ ತ್ರಿವರ್ಣ ಧ್ವಜವಿದೆ. ಸಂವೇದನೆಯುಳ್ಳವರಿಗೆ ಮಾತು ಅರ್ಥವಾಗುತ್ತೆ... ನೆನ್ನೆ ತನಕ ನೀನು ಏನಾಗಿದ್ದೆ. ಈಗ ಏನಾಗಿದ್ದೀ!... ಸುಖದಾ ದೇವಿ ಬರದೇ ಇದ್ದಿದ್ದರೆ ತುಂಬ ತೊಂದರೆಯಾಗುತ್ತಿತ್ತು.

"ನಿಮ್ಮೆಲ್ಲರಿಗೂ ನಾನು ಕೃತಜ್ಞತೆ ಹೇಳ್ತೀನಿ. ನೀವೆಲ್ಲ ಹಾಗೆ ಮಾಡದಿದ್ದರೆ ನಾನು ಈಗ ಇದ್ದ ಹಾಗೆ ಇರಲು ಎಲ್ಲಿ ಸಾಧ್ಯವಾಗುತ್ತಿತ್ತು?" ಅಮರಕಾಂತ ಹೇಳಿದ.

"ಇವತ್ತು ನೀನು ಬರಬಾರದಾಗಿತ್ತು. ಸುಖದಾ ಬಹೆನ್ ಹೇಳುತ್ತಿದ್ದಳು– ಅವರನ್ನು ಹೋಗಲು ಬಿಡೋದಿಲ್ಲ ಇವತ್ತು, ಅಂತ."

"ನೆನ್ನೆ ಆದ ಅವಮಾನದಿಂದ ಅವಳಿಗೆ ಮುಖ ತೋರಿಸೋಕೆ ನಾಚಿಕೆ ಎನಿಸಿದೆ. ಒಬ್ಬಳು ಹೆಣ್ಣಾಗಿ ಇಷ್ಟೆಲ್ಲ ಮಾಡುತ್ತಿರುವಾಗ, ಜವಾಬ್ದಾರಿಗಳನ್ನು ಹೊರಬೇಕಾದ ಗಂಡಸರಾಗಿರುವ ನಾವು ಮಾಡದೆ ಹೋದಲ್ಲಿ ತಲೆ ತಗ್ಗಿಸಿದಂತಾಗುತ್ತದೆ... ಅದೂ ಮಕ್ಕಳು ಮರಿ ಇಲ್ಲದೆ ಹಾಯಾಗಿ ಒಂಟಿಯಾಗಿ ಇರುವಾಗ!"– ಎಂದು ಅಮರಕಾಂತ ಹೇಳಿದ.

ಅಷ್ಟರಲ್ಲಿ ಪೋಲೀಸ್ ಲಾರಿ ಬಂತು. ಒಬ್ಬ ಸಬ್ ಇನ್ಸ್ ಪೆಕ್ಟರ್ ಲಾರಿಯಿಂದ ಇಳಿದು ಸ್ವಯಂಸೇವಕರ ಬಳಿಗೆ ಬಂದು ಹೇಳಿದ. "ನಿಮ್ಮನ್ನೆಲ್ಲ ನಾನು ಬಂಧಿಸುತ್ತೇನೆ."

ವಂದೇ ಮಾತರಮ್ ಘೋಷಣೆ ಅನುರಣಿಸಿತು. ತಮಾಶೆ ನೋಡಲು ನಿಂತ ಜನರಲ್ಲಿ ಗಲಿಬಿಲಿ ಉಂಟಯಿತು. ಸ್ವಯಂಸೇವಕರು ನಿಂತು ನೋಡುತ್ತಿದ್ದ ಜನರಿಗೆ ಕೈ ಮುಗಿದು ಲಾರಿಯೊಳಗೆ ಹೋಗಿ ಕುಳಿತು. ಅಮರಕಾಂತ ಎಲ್ಲರಿಗೂ ಮುಂದಿದ್ದ ಲಾರಿ ಹೊರಡಬೇಕಿತ್ತು. ಸುಖದಾ ಎಲ್ಲಿಂದಲೋ ಓಡಿ ಬಂದಳು. ಅವಳ ಕೈಯಲ್ಲಿ ಹೂಮಾಲೆ ಇತ್ತು. ಲಾರಿಯ ಬಾಗಿಲು ತೆರೆದಿತ್ತು. ಹತ್ತಿ, ಮೇಲೆ ಹೋದಳು. ಅಮರಕಾಂತನ ಕೊರಳಿಗೆ ಹೂಮಾಲೆ ಹಾಕಿದಳು. ಕಂಗಳಿಂದ ಪ್ರೀತಿ ಸ್ನೇಹದ

ಕಂಬನಿ ಮುತ್ತುಗಳು ಉದುರಿದವು. ಲಾರಿ ಹೊರಟುಹೋಯಿತು. ಇದೇ ಹೋಳಿಹಬ್ಬ. ಹೋಳಿಹಬ್ಬದ ಆನಂದ, ಸುಖ. ಅವರಿಬ್ಬರ 'ಮಿಲನ'ವಾಗಿತ್ತು.

ಸುಖದಾ ಅಂಗಡಿ ಹತ್ತಿರ ನಿಂತು ಎತ್ತರದ ದನಿಯಲ್ಲಿ ಘೋಷಿಸುತ್ತಿದ್ದಳು– "ವಿದೇಶಿ ಬಟ್ಟೆಗಳನ್ನು ಕೊಳ್ಳುವುದೂ ಉಡುವುದೂ ದೇಶದ್ರೋಹವಾಗುತ್ತದೆ" ಎಂದು.

(ಮೂಲ: ಹಿಂದಿ– ಪ್ರೇಮ್ ಚಂದ್)

ಬದಲಾಗುವುದಿಲ್ಲ

ಸೂಜಿ ಮೊನೆಯಷ್ಟು ಜಾಗವಿರಲಿಲ್ಲ. ಮಲ್ಲೇಶ್ವರದ ಮಾರ್ಕೆಟ್ ಗಿಜಗುಟ್ಟಿತ್ತು. ಫುಟ್‌ಪಾತಿನ ಮೇಲೆಲ್ಲ ರಾಶಿರಾಶಿಯಾಗಿ ಹೂವು, ಹಣ್ಣು, ಮಾವಿನ ಎಲೆ, ಬಣ್ಣಬಣ್ಣದ ಕಾಗದದ ಹೂಗಳು... ಕ್ರೇಪ್ ಪೇಪರಿನ ಸುರುಳಿಗಳು, ಹೆಜ್ಜೆ ಇಡುವುದಕ್ಕೂ ಆಗದ ಇಕ್ಕಟ್ಟು. ರಸ್ತೆಯಂಚಿನ ಅಂಗಡಿಗಳಲ್ಲದೆ ಮಾಮೂಲಿ ಅಂಗಡಿಗಳೂ ಜನರಿಂದ ಕಿಕ್ಕಿರಿದಿತ್ತು. ಅಂತಹ ಸಮಯದಲ್ಲಿ ಅಲ್ಲಿ ಓಡಾಡುವುದಾಗಲೀ, ವ್ಯಾಪಾರ ಮಾಡುವುದಾಗಲೀ ತಲೆನೋವಿನ ಕೆಲಸ. ಆದರೂ ಹೋಗದೆ ವಿಧಿಯಿರಲಿಲ್ಲ. ನಾಳೆ ಹಬ್ಬ. ಮಕ್ಕಳ ಸಲುವಾಗಿಯಾದರೂ ಮನೇಲಿ ಹಬ್ಬ ಮಾಡಲೇಬೇಕು. ಏನಾದರೂ ಒಂದೆರಡು ಹಣ್ಣು ಹೂವು, ಒಂದಿಷ್ಟು ಸಿಹಿ ತಂದು ಬಿಡಬೇಕೆಂದು ಅವರನ್ನು ಕರೆದುಕೊಂಡು ಮಾರ್ಕೆಟ್ಟಿಗೆ ಹೋಗಿದ್ದೆ. ಒಬ್ಬರನ್ನೊಬ್ಬರು ತಳ್ಳಿಕೊಂಡೇ ವ್ಯಾಪಾರ ಮಾಡಬೇಕಿತ್ತು. ಜನಜಂಗುಳಿಯನ್ನು ತಡೆಯುವುದಕ್ಕೆ ಪೋಲೀಸ ವ್ಯವಸ್ಥೆಯೂ ಇತ್ತು. ಎಷ್ಟೇ ಎಚ್ಚರಿಕೆಯಿಂದ ನೂಕು ನುಗ್ಗುಲಲ್ಲಿ ತಪ್ಪಿ ಹೋಗಬಾರದೆಂದು ನಾನು ಅವರ ಕೈ ಹಿಡಿದೇ ನಡೆಯುತ್ತಿದ್ದೆ. ಆದರೆ ಅದು ಹೇಗೋ ಒಂದು ಕಡೆ ನಾವಿಬ್ಬರು ತಪ್ಪಿ ಹೋದೆವು. ಸಾಧ್ಯವಾಗುವಷ್ಟೂ ಅವರಿಗಾಗಿ ಹುಡುಕಿದೆ, ಸಿಗಲಿಲ್ಲ. ಮನೆಗೆ ಹೊರಟು ಹೋಗೋಣವೆನ್ನಿಸಿತು. ಆದರೆ ನನಗಾಗಿ ಅವರು ಹುಡುಕುತ್ತಲೇ ಇದ್ದರೆ?... ಎನಿಸಿ, ಗುಂಪಿನಿಂದ ಬಿಡಿಸಿಕೊಂಡು, ಜಗುಲಿ ಹತ್ತಿ ಒಂದು ಸೀರೆ ಅಂಗಡಿಗೆ ನುಗ್ಗಿದೆ. ಅಂಗಡಿ ಮುಂದಿನ ಷೋಕೇಸುಗಳಲ್ಲಿ ಅಂದವಾದ ಸಿರೆಗಳನ್ನು ನೀಟಾಗಿ ಉಡಿಸಿ ನಿಲ್ಲಿಸಿದ ಪ್ರತಿಮಾ ಸುಂದರಿಯರನ್ನು ನೋಡುತ್ತಾ ನಿಂತೆ. ಅದ್ಯಾಕೋ ನನಗೆ ಆ ಬೊಂಬೆಗಳ ಅಂದ ಚೆಂದವನ್ನು ನೋಡುತ್ತಾ ನಿಲ್ಲುವುದು ಅಂದರೆ ಬಹಳ ಇಷ್ಟ. ಇವತ್ತೂ ಹಾಗೆಯೇ. ಹೊತ್ತು ಕಳೆಯಲು ಅವುಗಳ ಮೈಮಾಟ ಮೆಚ್ಚುತ್ತಾ ನಿಂತೆ.

'ಅಬ್ಬಾ! ಅವುಗಳುಟ್ಟಿರುವ ಸೀರೆಗಳು ಎಷ್ಟು ಚೆನ್ನಾಗಿವೆ ಅಲ್ವೇನ್ರಿ?'– ಎಂಬ ಹೆಣ್ಣಿನ ದನಿಯೊಂದು ಕೇಳಿಸಿ ಮುಖ ತಿರುಗಿಸಿದೆ. ಒಂದು ಕ್ಷಣ ನನ್ನ ಕಣ್ಣನ್ನು

ನಿಂಬದಾದೆ. ಸೊಂಟ ಬಳಸಿ, ಕೆನ್ನೆಗೆ ಕೆನ್ನೆ ತಾಕುವಂತೆ ಮುಖವಿಟ್ಟು ತಾನೂ ನೋಡುತ್ತಿರುವಂತೆ ನಟಿಸುತ್ತಿದ್ದ ಗಂಡಸಿನ ಜೊತೆಗೆ, ಮುಗಿಲಗಲ ಮುಖ ಅರಳಿಸಿ, ಸೀರೆಯ ಕಡೆಗೆ ಬೊಟ್ಟು ಮಾಡಿ ತೋರಿಸುತ್ತಿದ್ದವಳು ರತ್ನ. ನನ್ನ ವಿದ್ಯಾರ್ಥಿನಿ. ಐದು ವರುಷಗಳ ಹಿಂದೆಯೇ ಮದುವೆಯಾಗಿ, ಗಂಡನನ್ನೂ ಬಿಟ್ಟು ತವರಿಗೆ ಬಂದು ಉಳಿದಿದ್ದಳು. ಈಗ ನೋಡಿದರೆ ಯಾರ ಜೊತೆಗೋ ಇದ್ದಾಳೆ. ನನಗೆ ಕುತೂಹಲ ಶುರುವಾಯಿತು. ಈ ಒಂದೆರಡು ವರುಷದಿಂದ ಅವಳನ್ನು ನೋಡಿರಲಿಲ್ಲ. ಅದಕ್ಕೆ ಮೊದಲು ತಿಂಗಳಿಗೊಂದೆರಡು ಬಾರಿಯಾದರೂ ಬಂದು ತನ್ನ ಕತೇನೆಲ್ಲ ಹೇಳಿಕೊಳ್ಳುತ್ತಿದ್ದಳು. ಅವಳೇ ನೋಡಿ ಮಾತಾಡಿಸಬಹುದೇನೋ ಎಂದು ಕಾಯೋಣವೆನಿಸಿದರೂ, 'ಸಪ್ತಮಸ್ವರ್ಗ'ದಲ್ಲಿ ವಿಹರಿಸುತ್ತಾ, ತೀರಾ ರೊಮ್ಯಾಂಟಿಕ್ ಆಗಿದ್ದ ಈ 'ಜೋಡಿ'ಗೆ ಸುಲಭವಾಗಿ, ಸುತ್ತಲಿನದೇನೂ ಕಣ್ಣಿಗೆ ಬೀಳಲಾರದೆನಿಸಿ ನಾನೆ,

'ಹೇ ರತ್ನ... ರತ್ನ...' ಎಂದು ಸ್ವಲ್ಪ ಜೋರಾಗಿಯೇ ಕೂಗಿದೆ. ನನ್ನ ಕೂಗಿನಿಂದ ಅವಳ ಖುಷಿಗೆ, ಕನಸಿಗೆ ಭಂಗವಾಯಿತೇನೋ ಅಂತ ಸ್ವಲ್ಪ ಅಳುಕಿದೆ. ರತ್ನ ನನ್ನನ್ನು ನೋಡಿದಳು. ಸೀರೆ ನೋಡಿ ಅರಳಿದಷ್ಟೇ ಅಗಲವಾಗಿ ಈಗಲೂ ಅವಳ ಮುಖ ಅರಳಿತು. ಹತ್ತಿರ ಬಂದಳು.

'ನಮಸ್ಕಾರ ಮೇಡಂ. ಸಾರಿ ನಿಮ್ಮನ್ನು ನೋಡಲಿಲ್ಲ.'

'ಪರವಾಗಿಲ್ಲ. ನಾನೇ ನಿನ್ನನ್ನು ಕರೆದು ನಿಮ್ಮಿಬ್ಬರ ರಸಭಂಗ ಮಾಡಿದೆ. ತುಂಬ ತುಂಬಾ ಸಾರಿ ರತ್ನ.'

'ಛೆ! ಛೆ; ಇದೇನು ಮೇಡಂ. ನೀವು ಹೀಗೆಲ್ಲ ಮಾಡ್ತೀರಿ. ಸಾರಿ, ಗೀರಿ ಅಂತ ನೀವು ಕೇಳಬಾರದು. ಎಷ್ಟಾದರೂ ನಾನು ನಿಮ್ಮ ಸ್ಟೂಡೆಂಟ್.'

'ಅದು ಸರಿ ರತ್ನ. ಇಷ್ಟು ವರ್ಷ ಏನ್ಮಾಡ್ತಿದ್ದೆ? ಎಲ್ಲಿದ್ದೆ? ಹೇಗಿದ್ದೆ? ಒಂದೂ ಗೊತ್ತಾಗಲಿಲ್ಲ. ಈಗ ನೋಡಿದರೆ, ದಿಢೀರ್ ಅಂತ, ಒಂದು ಸರ್ಪ್ರೈಸ್ ಜೊತೆಗಿದ್ದಿ'- ಅಂತ ನಗುತ್ತ, ಸ್ವಲ್ಪ ಸರಿದು ನಿಂತಿದ್ದ ಆ ವ್ಯಕ್ತಿಯ ಕಡೆ ನೋಡಿದೆ. ಅದನ್ನು ಗಮನಿಸಿದ ಅವಳೂ ನಕ್ಕು ನನಗೆ ಇನ್ನೂ ಹತ್ತಿರ ಬಂದು ಒಂದು ಗುಟ್ಟು ಹೇಳುವವಳ ಹಾಗೆ,

'ಮೇಡಂ ನಿಮ್ಮ ಹತ್ತಿರ ತುಂಬಾ ಮಾತಾಡೋದಿದೆ. ನನ್ನ ಜೀವನದಲ್ಲಿ ಏನೇನೋ ನಡೆದು ಹೋಯ್ತು. ನಾನೆಲ್ಲ ಒಂದು ದಿವಸ ನಿಮ್ಮ ಮನೆಗೆ ಬಂದು ಹೇಳ್ತೀನಿ. ಅದರೆ ಈ ಭಾನುವಾರನೇ ಬರ್ತೀನಿ. ನಿಮ್ಮನ್ನು ಕಂಡೂ ಬಹಳ ದಿವಸ ಆಗ್ಹೋಯ್ತು. ಈ ಗಲಾಟೇಲಿ. ಏನೂ ಮಾತಾಡೋಕೆ ಆಗೊಲ್ಲ' ಎಂದು ಮೆಲ್ಲನೆ ಮಾತಾಡುತ್ತಿದ್ದವಳು, ಆ ವ್ಯಕ್ತಿಯನ್ನು ಕೈ ಹಿಡಿದು ಎಳೆದು,

"ಏನೂಂದ್ರೆ, ಇವರು ನಮ್ಮ ಸೋಷಿಯಾಲಜಿ ಮೇಡಂ. ಇಲ್ಲೇ ಮಹಾರಾಣಿ ಕಾಲೇಜಿನಲ್ಲಿ ಕೆಲಸ ಮಾಡ್ತಿದ್ದಾರೆ'... ಅಂದ ಹಾಗೆ ಮೇಡಂ, ಇವರು ನನ್ನ 'ಶ್ರೀಪತಿ'ಯವರು ಅಂತ, ಕಿರ್ಲೋಸ್ಕರ್‌ನಲ್ಲಿ ಅಕೌಂಟ್ಸ್ ಸೆಕ್ಷನ್‌ನಲ್ಲಿದ್ದಾರೆ'- ಎಂದು ನಮ್ಮಿಬ್ಬರ ಪರಿಚಯ ಮಾಡಿಸಿದಳು.

ಅಷ್ಟರಲ್ಲಿ, ಅದು ಹೇಗೋ ಪತ್ತೆ ಮಾಡಿ, ನಾನಿರೋ ಕಡೆಗೆ 'ನನ್ನ ಯಜಮಾನರು' ಬಂದರು. ಸರಿ ಮತ್ತೊಮ್ಮೆ ನಮ್ಮೆಲ್ಲರ ಪರಸ್ಪರ ಪರಿಚಯವಾಯ್ತು. ನಾನೇ ರತ್ನಳಿಗೆ ಹೇಳಿದೆ-

'ಬರ್ತೀನಿ ರತ್ನ. ಮನೆಯಲ್ಲಿ ಮಕ್ಕಳನ್ನು ಬಿಟ್ಟು ಬಂದಿದ್ದೀನಿ. ನೀವಿಬ್ಬರೂ ಬನ್ನಿ ಆರಾಮವಾಗಿ, ಒಂದು ದಿವಸ.'

ಅಷ್ಟು ಹೇಳಿ ಹೊರಡಲು ಅನುವಾದಾಗ, ರತ್ನ ಬಂದು ಕಿವೀಲಿ ಹೇಳಿದಳು- 'ಮೇಡಂ ಮುಂದಿನ ಭಾನುವಾರ ಹನ್ನೊಂದು ಗಂಟೆಗೆ ಬರ್ತೀನಿ. ನಾನೊಬ್ಬಳೇ ಬರ್ತೀನಿ. ಮನೇಲಿ ಇರ್ತೀರಿ ತಾನೇ?' ಎಂದು ನೆನಪಿಸಿ ಹಿಂತಿರುಗಿದಳು.

ರಸ್ತೆಯುದ್ದಕ್ಕೂ ಅವಳನ್ನೇ ಯೋಚಿಸುತ್ತಿದ್ದೆ. ಬೇರೆ ಯಾವುದರ ಕಡೆಗೂ ಗಮನ ಇರಲಿಲ್ಲ. ಅವರು ಅದೂ ಇದೂ ಮಾತಾಡ್ತಿದ್ದಾಗ, ಅನ್ಯಮನಸ್ಕತೆಯಲ್ಲಿಯೇ ಸೌಜನ್ಯಕ್ಕೆ 'ಊಂ!' 'ಉಹೂಂ' ಅಷ್ಟೇ ಉತ್ತರ ಕೊಡುತ್ತಿದ್ದೆ. ಬೇರೆಲ್ಲೋ ಯೋಚಿಸುತ್ತಾ ನಡೆಯುತ್ತಿದ್ದ ನಾನು ಎರಡು ಮೂರು ಸಲ ಎಡವಿ ಮುಗ್ಗರಿಸಿ ಬೀಳುತ್ತಿದ್ದೆ. ಸದ್ಯಕ್ಕೆ ಅವರು ಸಮಯಕ್ಕೆ ಸರಿಯಾಗಿ ಕೈ ಹಿಡಿದು ಎಳೆಯದಿದ್ದರೆ, ಹಲ್ಲು ಮುರಿಯುತ್ತಿದ್ದುದು ಖಾತ್ರಿಯಾಗಿತ್ತು.

'ಏನಿದು, ಬಿಜಿ ರಸ್ತೆಯಲ್ಲಿ ನಡೆಯಬೇಕಾದರೂ ನಿನ್ನ ಹಗಲುಗನಸುಗಳು ನಿಲ್ಲುವುದಿಲ್ಲ ಅಲ್ಲ?'- ದನಿಯಲ್ಲಿ ಬೇಸರವಿತ್ತು. ನಾನೇನೂ ಮಾತಾಡಲಿಲ್ಲ. ಎಚ್ಚರಿಕೆಯಿಂದಲೇ ನಡೆಯತೊಡಗಿದೆ.

* * *

ರತ್ನ ಒಂದು ದಿನ ಕ್ಲಾಸಿಗೆ ಬಂದಾಗ, ಮುಖ ಎಲ್ಲ ಊದಿತ್ತು. ಕಣ್ಣು ಕೆಂಪಗಾಗಿದ್ದವು. ಅವಳ ಮನಸ್ಸಿನ ಉಮ್ಮಳ ಮುಖದ ಮೇಲೆ ಸ್ಪಷ್ಟವಾಗಿ ಬಿಂಬಿತವಾಗಿತ್ತು. ಹಾಜರಿ ಕೂಗುವಾಗ, ಉತ್ತರ ಹೇಳಲಿಲ್ಲ. ಅವಳು ಬಂದದ್ದನ್ನು ನಾನು ನೋಡಿದ್ದೆ. ಮತ್ತೊಮ್ಮೆ ಕೂಗಿದೆ. ಬೆಚ್ಚಿ, ಉತ್ತರಿಸಿದಳು.

'ರತ್ನ, ಯಾಕೆ? ಎಲ್ಲಿದೆ ನಿನ್ನ ಮನಸು? ಅಲ್ವೆ ಸಂತೋಷವಾಗಿ ನಗನಗ್ತಾ ಬರ್ತಿದ್ದವಳು...?'- ಎಂದದ್ದಕ್ಕೆ, ಬೇರೆ ಹುಡುಗಿಯರೆಲ್ಲ, ಕೆಲವರು ಸಹಾನುಭೂತಿಯನ್ನು ತೋರಿದರೆ ಮತ್ತೆ ಕೆಲವರು, 'ಮೇಡಂ, ರತ್ನ ಆಗಲೇ ಮಹಾ ಸಮರ ಶುರು ಮಾಡಿರಬೇಕು... ಹೌದಲ್ಲವೇನೆ'- ಎಂದು ಅವಳತ್ತ ತಿರುಗಿದರು.

ರತ್ನ ಸಾಧಾರಣವಾದುದಕ್ಕೆಲ್ಲ, ಯೋಚನೆ ಮಾಡೋದು, ಅಳೋದು ಮಾಡ್ತಿರಲಿಲ್ಲ. ಸದಾ ನಗು ಮುಖ. ಜೀವನವನ್ನು ತುಂಬಾ ಲೈಟಾಗಿ ತೊಗೊಂಡಿದ್ದಳು. ದುಂಡು ಮುಖ; ದುಂಡು ಮೈ, ನೀಟಾದ ಮೂಗು. ಆದರೆ ಕವಿಗಳು ವಿವರಿಸುವ ಬೇವಿನ ಎಸಳಿನ ಹುಬ್ಬು ಅವಳದಾಗಿರಲಿಲ್ಲ. ಪೊದೆ ಪೊದೆಯಾದ ಹುಬ್ಬು, ಫಳಫಳ ಹೊಳೆಯುವ ಹಲ್ಲು, ಕಾಲೇಜಿನ ಫ್ಯಾನ್ಸಿ ಡ್ರೆಸ್ ಸ್ಪರ್ಧೆಯಲ್ಲಿ 'ಅಮೂಲ್ ಬೇಬಿ'ಯಾಗಿ, ಮಕ್ಕಳ ನೂಕು ಗಾಡಿಯಲ್ಲಿ ಕುಳಿತು ಬಂದಾಗ, ಇಡೀ ಕಾಲೇಜೆ ಬೆಕ್ಕಸಬೆರಗಾಗಿ, ಸಂತೋಷದಿಂದ ಚಪ್ಪಾಳೆ ಹೊಡೆದಿದ್ದರು. 'ಹಾಯ್ ಬೇಬಿ ಹಾಯ್' ಎಂದು ರೇಗಿಸಿ ಕೀಟಲೆ ಮಾಡಿದ್ದರು. ಅವಳಿಗೆ ನಿಜಕ್ಕೂ ಆ ವೇಷ ತುಂಬಾ ಒಪ್ಪಿತ್ತು. ಅದೂ ಅವಳು ಹಾಲಿನ ಬಾಟಲಿಯನ್ನು ಬಾಯಿಗಿಟ್ಟು ಚೀಪುವುದನ್ನು ನೋಡಿದಾಗ, ಯಾರಿಗೂ ನಗು ತಡೆಯಲಾಗಲಿಲ್ಲ. ಹೊಟ್ಟೆ ಹುಣ್ಣಾಗುವಂತೆ ಬಿದ್ದು ಬಿದ್ದು ನಕ್ಕಿದ್ದರು.

ಸದಾ ಅವಳ ಹಿಂದೆ ಒಂದು ಹಿಂಡು ಗೆಳತಿಯರು. ಮಾತು ಮಾತಿಗೆ ಗೆಳತಿಯರನ್ನೆಲ್ಲ ತನ್ನ ಕೆಲವು ಪೋಲಿ ಜೋಕುಗಳಿಂದ ನಕ್ಕು ನಗಿಸುತ್ತಿದ್ದಳು. ಅದೇನೋ, ಅವಳನ್ನು ಬೈಯ್ಯಬೇಕೆಂದರೂ, ಅವಳ ಮುಖ ನೋಡಿದ ತಕ್ಷಣ, ಬೈಯುವುದಕ್ಕೆ ಬದಲಾಗಿ ನಗು ಬಂದು ಬಿಡುತ್ತಿತ್ತು.

ಇಂಥವಳು ಇವತ್ತು ಹೀಗೆ ಬಂದದ್ದನ್ನು ನೋಡಿ ನನಗೆ ಕರುಳು ಚುರುಗುಟ್ಟಿತು. ಪಾಪದ ಹುಡುಗಿಗೆ ಏನಾಯಿತೋ ಎನಿಸಿತು. ಇನ್ನೂ ಫೈನಲ್ ಮುಗಿದಿರಲಿಲ್ಲ. ಆಗಲೇ ಅಪ್ಪನ ಬಲವಂತಕ್ಕೆ, ಮದುವೆಯಾಗಿತ್ತು. ಮದುವೆ, ತಿಳಿದಾಗಿಂದ ನಾವೆಲ್ಲ ಅವಳನ್ನದು ಗೋಳಾಡಿಸಿ ಬಿಟ್ಟಿದ್ದೆವು... ಆದರೂ ಹುಡುಗಿ ಒಂದು ಚೂರೂ ಕೋಪಮಾಡಿಕೊಳ್ಳದೆ, ತುಂಬಾ ಸ್ಪೋರ್ಟಿವ್ ಆಗೇ ನಾವು ಅಂದಿದ್ದನ್ನೆಲ್ಲಾ ತೆಗೆದುಕೊಂಡಿದ್ದಳು...

ಅವಳನ್ನು ಆ ಸ್ಥಿತಿಯಲ್ಲಿ ನೋಡಿ, ಕನಿಕರವೆನಿಸಿ, ಕಾರಣ ವಿಚಾರಿಸೋಣವೆನಿಸಿತ್ತು. ಕ್ಲಾಸ್ ಮುಗಿದ ಮೇಲೆ ಅವಳನ್ನು ಬಂದು ಮಾತನಾಡಲು ಹೇಳಿದೆ. ನನಗೆ ಗೊತ್ತು, ಈ ಹುಡುಗಿ ತನ್ನ ಮನಸ್ಸನ್ನು ನನ್ನೆದುರು ಬಿಚ್ಚಿಕೊಳ್ಳುತ್ತಾಳೆ ಅನ್ನೋದು ನನಗೊಂದೆರಡು ಸಂದರ್ಭಗಳಲ್ಲಿ ಗೊತ್ತಾಗಿತ್ತು.

ಕೊನೆಯ ಎರಡು ಪೀರಿಯಡ್ ಇರಲಿಲ್ಲ. ರತ್ನ ನಾ ಆದೇಶಿಸಿದಂತೆ. ವಿಧೇಯತೆಯೊಂದಿಗೆ ಬಂದಿದ್ದಳು.

'ಬಾ ರತ್ನ... ಬಾ ಕುಳಿತುಕೋ' ಎಂದೆ. ಆದರೆ ನನ್ನೆದುರು ಕೂರಲು ಸಂಕೋಚಗೊಂಡಳು.

'ಪರವಾಗಿಲ್ಲ. ಕ್ಲಾಸಲ್ಲಿ ಮಾತ್ರವೇ ವ್ಯತ್ಯಾಸ ಈಗ ನಾವಿಬ್ಬರೂ ಫ್ರೆಂಡ್ಸ್... ಹಾಗೂ ನಿನಗೆ ಸಂಕೋಚ ಆದರೆ ಬಾ ಕ್ಯಾಂಟೀನ್‌ನಲ್ಲಿ ಕೂರೋಣ' ಎಂದು ಎದ್ದು ಕ್ಯಾಂಟೀನ್‌ನತ್ತ ನಡೆದೆ. ಅವಳೂ ಹಿಂಬಾಲಿಸಿದಳು.

'ಅಲ್ಲ ರತ್ನ, ಯಾವಾಗಲೂ ನಗು ನಗುತ್ತಾ ಇರುವವಳು ಇವತ್ತು ಇಷ್ಟೊಂದು ಸಪ್ಪೆಯಾಗಿ, ಅತ್ತೂ ಅತ್ತೂ ಕಣ್ಣೂದಿಸಿ ಕೊಂಡಂತೆ ಇದ್ದೀಯ. ಏನ್ಸಮಾಚಾರ? ಮನೆಯಲ್ಲಿ ಎಲ್ಲರೂ ಕ್ಷೇಮ ತಾನೆ?"

ಪ್ರಶ್ನೆ ಕೇಳುತ್ತಿದ್ದಂತೆ ಸೊರ ಸೊರ ಶಬ್ದ ಮಾಡುತ್ತ, ಬಳಬಳನೆ ಉದುರುತ್ತಿದ್ದ ಕಂಬನಿಗಳನ್ನು ಒರೆಸಿಕೊಂಡಳು. ಬಿಕ್ಕಿ ಬಿಕ್ಕಿ ಅಳಲು ತೊಡಗಿದಳು.

'ರತ್ನ ಪ್ಲೀಸ್ ಅಳಬೇಡ ನೋಡು ಎಲ್ಲರೂ ಈ ಕಡೇನೆ ನೋಡ್ತಿದ್ದಾರೆ. ಕಣ್ಣು ಒರೆಸಿಕೋ. ನೀನು ಬಾಯಿ ಬಿಟ್ಟು ಹೇಳಿದರೆ ನಿನ್ನ ವೇದನೆ ಏನೂಂತ ಅರ್ಥ ಆಗುತ್ತೆ'– ಸಮಾಧಾನ ಪಡಿಸಲು ಪ್ರಯತ್ನಿಸಿದೆ.

ಒಂದೆರಡು ನಿಮಿಷಗಳ ತರುವಾಯ, ಸ್ವಲ್ಪ ಸುಧಾರಿಸಿಕೊಂಡು ಹೇಳಿದಳು–

'ಮೇಡಂ, ನನ್ನ ಸುಖ, ನನ್ನ ಮದುವೆ ಎಲ್ಲ ನೆಗೆದು ಬಿತ್ತು. ನಾನು ಯಾಕೆ ಬದುಕಿರಬೇಕು ಹೇಳಿ ಮೇಡಂ?... ಮೊದಲಿನಿಂದಲೂ ನಮ್ಮಪ್ಪನಿಗೆ ಹೇಳ್ತಲೇ ಇದ್ದೆ. ನನಗೆ ಮದುವೆ ಬೇಡ. ನನ್ನಿಬ್ಬರು ತಂಗಿಯರಿಗೆ ಮದುವೆ ಮಾಡಿಸಿದರೆ ಸಾಕು. ನಾನು ಅಪ್ಪನನ್ನು ನೋಡಿಕೊಂಡು ಸುಖವಾಗಿರ್ತೇನೆಂತ, ಹೇಳಿದರೂ ಕೇಳಲಿಲ್ಲ... ಈಗ... ನೋಡಿ ನನ್ನ ಪಾಡು ಏನಾಗಿದೇಂತ?...

ಬಡಬಡ ಹೇಳಲು ತೊಡಗಿದ್ದಲು. ಅವಳು ಯಾಕೆ ಹಾಗೆ ಹೇಳಿದ್ದಾಳೇಂತ ನನಗೆ ಇನ್ನೂ ಸ್ಪಷ್ಟವಾಗಿರಲಿಲ್ಲ. ಇತ್ತೀಚೆಗೆ ಮದುವೆಯಾಗಿ, ನೆಟ್ಟಗೆ ಒಂದೆರಡು ವರ್ಷಾನೂ ಸಂಸಾರ ಮಡಲಿಲ್ಲ. ಅಂಥಾದ್ದರಲ್ಲಿ, ಏನು ಆಘಾತ ಆಗಿರಬಹುದು?

'ನೀನು ಹಾಗೆ ಅಂದ್ಕೊಳ್ಳೋಕೆ ಕಾರಣ ಏನೂಂತ ಹೇಳಿದರೆ ತಾನೇ ನನಗೆ ಸ್ಪಷ್ಟವಾಗೋದು?... ಯಾಕೆ ಗಂಡನ ಮನೇಲಿ ಗೋಳೇನು? ವರದಕ್ಷಿಣೆ ಸಾಲದೂಂತ ಹಿಂಸೆ, ಗಿಂಸೆ?... ಅನುಮಾನಿಸುತ್ತಲೇ ಕೇಳಿದೆ.

'ವರದಕ್ಷಿಣೆಗೂ ಅಲ್ಲ, ವರೋಪಚಾರಕ್ಕೂ ಅಲ್ಲ. ಅವನ ಮನೇಗೆ ಹೋದ ಒಂದೆರಡು ದಿವಸಕ್ಕೇ ಗೊತ್ತಾಯ್ತು. ಅವನೆಂಥವನೂಂತ? ಕುಡುಕ, ಷಂಡ ಭಂಡ ಏನಾಗಿದ್ರೂ ಸಹಿಸಿಕೋತಿದ್ದೆ... ಆದರೆ... ಆದರೆ, ಅವನು... ಅವನು ನನ್ನ ಸೋದರತ್ತೆ ಜೊತೆಗೆ ಸರಸ ಆಡೋದನ್ನ, ಹಾದರ ಮಾಡೋದನ್ನ ನನ್ನ ಕಣ್ಣಿಂದಲೇ ನಾನು ನೋಡಿದೆ. ಯಾಕ್ರೀ ಹೀಗೆ ಮಾಡ್ತೀರೀಂತ ಕೇಳಿದರೆ, 'ಬೋಳಿ ಮುಂಡೆ ನೀನ್ಯಾವಳೆ ನನ್ನ ಕೇಳೋದಕ್ಕೆ? ಇವಳು ಮೊದಲಿನಿಂದಲೂ ನನ್ನ ಹೆಂಡ್ತಿ... ಹೌದು ನಿನಗೆ ಇವರು, ನಿನ್ನ ಸೋದರತ್ತೇಂತ ತಿಳಿದು ಆಶ್ಚರ್ಯ ಆಗಿರಬೇಕು ಅಲ್ವಾ?... ನಿನಗೆ ಗೊತ್ತಾಗಲೀಂತಲೆ ನಿನ್ನೆದುರು ನಾವಿಬ್ಬರೂ ಹೀಗಿರುವುದು... ಅಂತ ಸ್ವಲ್ಪವೂ ನಾಚಿಕೆ ಹೇಸಿಕೆ ಇಲ್ಲದೆ ಹೇಳಿದ.

'ಅಲ್ರಿ, ಹೀಗೊಂದು ಸಂಬಂಧ ಇದ್ದೂ ನನ್ನನ್ನೇಕೆ ಮದುವೆ ಆಗಿ ನನ್ನ ಬಾಳನ್ನು ಹಾಳು ಮಾಡ್ತಾ ಇದ್ದೀರಿ? ನಿಮಗೆ ನಾನೇನು ಅನ್ಯಾಯ ಮಾಡಿದೆ?– ದೈನ್ಯವಾಗಿ ಕೇಳಿದೆ.

'ನಿನ್ನನ್ನ ಮದುವೆ ಆಗಿರೋದ್ರಿಂದಲೇ ನನಗೆ ನ್ಯಾಯ ಆಗಿದೆ. ಅಷ್ಟೇ ಸಾಕು. ನಿನಗೆ ನ್ಯಾಯ. ಅನ್ಯಾಯ... ಏನಾಗಿದೆಯೋ ಅದೆಲ್ಲ ಬೇಡ. ನಿಮ್ಮಪ್ಪನ ಆಸ್ತಿಯಲ್ಲಿ ನಿನ್ನ ಪಾಲಿಗೆ ಬರುವುದೇ ಸಾಕು. ಸಾಯೋತಂಕ ಹಾಯಂತ, ನಾವಿಬ್ಬರೂ ಮಜವಾಗಿ ಇರಬಹುದು... ಎಂದು ವ್ಯಂಗ್ಯ ನಗೆ ನಕ್ಕು ಅತ್ತೆ ಕಡೆ ಮುಖ ಮಾಡಿ 'ಏನಂತಿ' ಎಂದು ಕಣ್ಣು ಮಿಟುಕಿಸಿದ. ಅವಳು ಅದನ್ನು ಕೇಳಿ 'ಕ್ಕೆ...ಕ್ಕೆ' ಅಂತ ನಕ್ಕು, ಗರ್ವದಿಂದ ನನ್ನ ಕಡೆ ನೋಡಿದ್ದನ್ನು, ನೆನಸಿಕೊಂಡರೆ ಈಗಲೂ ಮೈ ಉರಿಯುತ್ತೆ. ಅಲ್ಲಿಯೇ ಏನಾದರೂ, ಕೈಗೆ ಸಿಕ್ಕಿದರೆ, ಎತ್ತಿ ಹೊಡೆದು ಸಾಯಿಸಿ ಬಿಡೋಣ ಅನ್ನುವಷ್ಟು ಕೋಪ ಬಂತು. ಒಂದು ಕಡೆ ಅವಮಾನ, ಮತ್ತೊಂದು ಕಡೆ ಆಗಿರೋ ಅನ್ಯಾಯ... ನನಗೆ ಮಾತ್ರ ಅಲ್ಲ, ನನ್ನಪ್ಪನಿಗೂ ಕೂಡಾ! ಅಣ್ಣ ಅನ್ನೋ ವಾತ್ಸಲ್ಯ ಇಲ್ಲದೆ, ಅಣ್ಣನ ಮಗಳಿಗೆ, ತನ್ನ ಪ್ರಿಯಕರನನ್ನೇ, 'ವರನಾಗಿ ಸೂಚಿಸಿ' ಆಸ್ತಿ ಹೊಡೆಯಲು ಹೂಡಿದ ನಾಟಕದ ರೀತಿ, ಹೇಸಿಗೆ ಬರಿಸುವಂತಿತ್ತು. ಛಿ! ಛಿ! ಎಂಥ ದರಿದ್ರ ಮಟ್ಟಕ್ಕೆ ಇಳಿದಿದ್ದಾಳೆ?!– ಎನಿಸಿತು.

'ಇದೆಲ್ಲ ನಿಮ್ಮಪ್ಪನಿಗೆ ಗೊತ್ತಾಯ್ತ ಹೇಗೆ?'– ಪ್ರಶ್ನಿಸಿದೆ. 'ಇಂಥಾ ಹೊಲಸನ್ನು ಯಾವ ಬಾಯಿಂದ ಹೇಳಲಿ? ಅಮ್ಮ ಹೋದ ದುಃಖದಲ್ಲಿ ಸೊರಗಿದ್ದ ಅಪ್ಪನಿಗೆ ಈ ವಿಚಾರ ತಿಳಿಸಿದರೆ ಎಲ್ಲಿ ಆಘಾತವಾಗುತ್ತೋ' ಅಂತ ಹೆದರಿ, ಹಲ್ಲು ಕಚ್ಚಿ ಸಹಿಸಿಕೊಂಡು, ಎಲ್ಲ ಭಾರತೀಯ ಸಾಧ್ವಿ ಹೆಣ್ಣುಮಕ್ಕಳಂತೆ ಅಲ್ಲೇ ಅವನ ನೆರಳಲ್ಲಿ ಅವನ ಸೂರಿನಡಿಯಲ್ಲಿ ಬಿದ್ದು ಸಾಯೋಣವೆಂದು ನಿರ್ಧರಿಸಿದೆ.

'ಹೂಂ, ಅಂತೂ ಸಾಧ್ವಿಮಣಿ ಆಗೋ ನಿರ್ಧಾರ ಮಾಡಿ ಬಿಟ್ಟೆ'– ಎಂದು ನಗುತ್ತಲೇ ಹೇಳಿದೆ.

'ಸಾಧ್ವಿ ಗೀಧ್ವಿ ಆಗೋ ಉದ್ದೇಶ ಏನೂ ನನಗಿರಲಿಲ್ಲ. ನನ್ನ ಹೊರೆ ಕಳೀತೂಂತ ಅಪ್ಪ ಸಂತೋಷವಾಗಿದ್ದಾರೆ. ಅಂಥಾದ್ದರಲ್ಲಿ ದಿಢೀರನೆ ನಾನು ನನ್ನ ಈ ರಾದ್ಧಾಂತವನ್ನೆಲ್ಲ ಹೊತ್ತುಕೊಂಡು ಹೋಗಿ, ದುಃಖ ಕೊಡೋಕೆ ಇಷ್ಟವಾಗಲಿಲ್ಲ. ಅಲ್ದೆ, ಅಪ್ಪನಿಗೆ ಸಿಟ್ಟು ಬಂದರೆ ಮುಖ ಕೂಡಾ ನೋಡದೆ, ತರಾಟೆಗೆ ತಗೊಳ್ತಾರೆ. ಮಗಳ ಕಷ್ಟಕ್ಕೆ ಕಾರಣರಾಗಿರುವವರನ್ನು ಜೀವ ಸಹಿತ ಬಿಡೋದಿಲ್ಲ... ಅದಕ್ಕೇ ನಾನು ಆ ಮನೇಲೇ ಬಿದ್ಕೊಂಡಿರಬೇಕೂಂತ ಯೋಚನೆ ಮಾಡಿದೆ. ನನ್ನ ಸೋದರತ್ತೇನ ಮೆಲ್ಲಗೆ ಮಾತಾಡಿಸಲು ಯೋಚಿಸಿದೆ.

'ಅತ್ತೇ, ನೀವ್ಯಾಕೆ ಹೀಗೆ ಮಾಡಿದಿರಿ? ಇಷ್ಟು ವಯಸ್ಸಾಗಿರೋ ನೀವು, ನಿಮ್ಮ ಮಗನ ಹಾಗಿರುವ ನನ್ನ ಗಂಡನನ್ನೇ... ಛಿ! ಛಿ!... ಹೇಳೋಕೆ ನಾಚಿಕೆ ಆಗುತ್ತೆ... ಮದುವೆ ಬೇಡ ಬೇಡಾಂತ... ಒಳಗೊಳಗೇ ಇಂತಹ ಹಲ್ಕಾ ಕೆಲಸ ಮಾಡೋದಕ್ಕಿಂತ, ರಾಜಾರೋಷಾಗಿ ಮದುವೆ ಆಗಿ, ನನ್ನ ಪ್ರಾಣವಾದರೂ ಉಳಿಸಬಹುದಾಗಿತ್ತಲ್ಲ... ಇದೆಲ್ಲ ಮಾಡಿದ್ದರಿಂದ ನಿಮಗೇನು ಸುಖ ಸಿಗುತ್ತೆ ಹೇಳಿ?... ಅಪ್ಪನಿಗೆ ನಿಮ್ಮ ವಿಚಾರ ತಿಳಿದರೆ... ಒಟ್ಟಿಗೆ ನಿಮ್ಮಿಬ್ಬರ ತಿಥಿ ಮಾಡಿ ಬಿಡ್ತಾರೆ' ಹೆದರಿಸುವಂತೆ ಹೇಳಿದೆ.

'ಈ ನಿನ್ನ ಬಡಪೆಟ್ಟಿಗೆ ನಾನು ಬೀಳುವವಳಲ್ಲ. ನಾನೇನೂ ನಿನ್ನ ಗಂಡನನ್ನ ಕಟ್ಟಿಹಾಕಲಿಲ್ಲ. ಬೇಕಾದರೆ ಕರೆದುಕೊಂಡು ಹೋಗು ನನ್ನದೇನೂ ಅಭ್ಯಂತರ ಇಲ್ಲ.' ಧಾರಾಳತನ ತೋರಿಸುತ್ತ ಹೇಳಿದಳು. ಆದರೆ ಅವಳಿಗೆ ಗೊತ್ತು. ಅವನು ಏನು ಮಾಡಿದರೂ ಅವಳಿಂದ ಬಿಡಿಸಿಕೊಳ್ಳಲಾರ ಅಂತ. ಅವನಿಗೆ ಸಲೀಸಾಗಿ ಬರೋ ಸಂಪಾದನೆ ಬೇಕಿತ್ತು. ಅತ್ತೆಗೆ ತೆವಲು ತೀರಿಸಿಕೊಳ್ಳಲು ಒಂದು ಗಂಡು ಬೇಕಿತ್ತು. ಆಕೆಗೆ ಒಳ್ಳೇ ಕೆಲಸ ಇತ್ತು. ಕೈ ತುಂಬ ಸಂಬಳ. ತನಗೆ ಬರುವ ಸಂಬಳದ ಜೊತೆ ಅವಳನ್ನು ಪುಸಲಾಯಿಸಿ, ಅವಳ ಹಣದಿಂದ ಮಜ ಮಾಡ್ತಿದ್ದ–ಅನ್ನೋದು ಆಮೇಲೆ ಎಷ್ಟೋ ದಿವಸ ಆದ ಮೇಲೆ... ಆದರೆ ಪ್ರಯೋಜನವೇನು ಬಂತು? ಸಂಪೂರ್ಣವಾಗಿ ನನ್ನ ಅವನ ನಡುವಿನ ಸಂಬಂಧ ಕಡಿದು ಬಿದ್ದಿತ್ತು. ಆವತ್ತು ಅಷ್ಟೊಂದು ರಾದ್ಧಾಂತ ಆದ ಮೇಲೂ, ನಾನು ಅಲ್ಲೇ ಇರೋ ಛಲ ಹಿಡಿದೆ'.

'ಪರವಾಗಿಲ್ಲ. ನಿನ್ನ ಧೈರ್ಯ ಮೆಚ್ಚಬೇಕಾದ್ದೆ... ಸರಿ ಆಮೇಲೆ ಸರಿಹೋಗಿರಬೇಕು ಎಲ್ಲ ಅಲ್ವಾ?' ಕೇಳುತ್ತಲೇ ಇಬ್ಬರೂ ಎದ್ದು ಸ್ಟಾಫ್ ರೂಂಗೆ ಬಂದೆವು. ಅಷ್ಟರಲ್ಲಿ ಎಲ್ಲರೂ ಮನೆಗೆ ಹೊರಟಿದ್ದರು. ನಾವಿಬ್ಬರೇ ಉಳಿದಿದ್ದೆವು. ಅವಳಿಂದ ಇನ್ನೂ ಕೇಳುವುದಿತ್ತು. ರತ್ನ ಮುಂದುವರೆಸಿದಳು.

'ಸರಿ ಎಲ್ಲಿಗೆ ಬಂತು ಮೇಡಂ? ನನ್ನ ಮೂಕ ನೋವಿಗೆ ಸಾಕ್ಷೀನ ತೋರಿಸಲೇ' ಎಂದು ಬೆನ್ನು, ಕಾಲು ತೊಡೆಗಳನ್ನು ತೋರಿಸಿದಳು. ಕಾದ ಸಲಾಕೆಗಳಿಂದ ಎಳೆದ ಬರೆಗಳು! ಲಂಬವಾಗಿ, ಅಡ್ಡಡ್ಡಲಾಗಿ, ಕ್ರಾಸಾಗಿ, ಚಿತ್ರಗಳಂತೆ ಕಾಣಿಸಿದವು. ತೀರಾ ಹತ್ತಿರದಿಂದ ಗಮನಿಸಿದರೆ ತುಟಿಗಳೊಡೆದು ಸೀಳಿರಿವುದೂ ಗೊತ್ತಾಯ್ತು. ಪಾಪದ ಹುಡುಗಿ! ಶ್ರೀಮಂತಿಕೆಯಲ್ಲಿ ಸುಖ ಕಂಡವಳು. ಯಾರಿಗೂ ನೋವುಂಟು ಮಾಡಿದವಳಲ್ಲ. ಇಂಥವಳಿಗೆ ಎಂತಹ ಶಿಕ್ಷೆ?– ಎಂದು ಯೋಚಿಸಿದೆ.

'ಅಲ್ಲ ರತ್ನ, ಇಷ್ಟು ಹಿಂಸೆ, ದೌರ್ಜನ್ಯಗಳು ನಿನ್ನ ಮೇಲೆ ಆಗಿರುವಾಗ ನೀನು ಅಲ್ಲಿದ್ದದ್ದು, ನಿನಗೆ ಅವಮಾನ ಅಂತ ಅನ್ನಿಸಲಿಲ್ಲವಾ?– ಹೋಗಲಿ ನಿಮ್ಮಪ್ಪನಿಗೆ ಕಾಗದ ಬರೆದು ತಿಳಿಸಬಾರದಾಗಿತ್ತಾ?' ನನಗೆ ಅವಳು ಅಸಹಾಯಕಳಂತೆ ವರ್ತಿಸಿದ್ದು ನೆನೆದು ಕೋಪ ಬಂತು.

'ಹೌದು ಮೇಡಂ., ನನಗೆ ನನ್ನ ಮೇಲೇ ಭಯಂಕರ ಸಿಟ್ಟು ಬಂತು. ಇದನ್ನೆಲ್ಲ ಸಹಿಸಿಕೊಂಡು ಇರುವುದಕ್ಕಿಂತ ಸಾಯೋದು ಮೇಲು ಅಂತ ಕೂಡಾ ಅನ್ನಿಸಿತು. ಆದರೆ ಮರುಕ್ಷಣವೇ, ನನಗೆ ನಾನೇ ಧೈರ್ಯ ತಂದುಕೊಂಡೆ. ಅವರಿಗಾಗಿ ನಾನೇಕೆ ಸಾಯಬೇಕು– ಅಂತ ಅನ್ನಿಸಿತು. ಅಪ್ಪನಿಗೆ ಗುಟ್ಟಾಗಿ ಕಾಗದ ಬರಿಬೇಕೂಂತ ಪ್ರಯತ್ನಪಟ್ಟರು, ಅವರಿಬ್ಬರ ಹದ್ದು ಕಣ್ಣುಗಳಿಂದ ಸಾಧ್ಯವಾಗಲಿಲ್ಲ. ಕೆಲಸಕ್ಕೆ ಹೋಗುವಾಗ ಹೊರಗಿನಿಂದ ಬೀಗ ಹಾಕಿಕೊಂಡು ಹೋಗ್ತಿದ್ದರು.

ಮೂಕವಾಗಿ, ದೇವರಿಗೆ ಮೊರೆ ಇಟ್ಟುಕೊಂಡೆ. ನನ್ನ ಮೊರೆ ಕೇಳಿಸಿತೇನೋ! ಅನಿರೀಕ್ಷಿತವಾಗಿ ಅಪ್ಪ ಬಂದರು. ಬಂದವರಿಗೆ ಆಶ್ಚರ್ಯವಾಯಿತು. ತಂಗಿ, ಅಲ್ಲಿ ಯಾಕೆ ಇದ್ದಾಳೇಂತ ಅವರಿಗೆ ಹೊಳೀಲಿಲ್ಲ.

ಅಲ್ವೇ ಶಾರಿ. ನೀನ್ಯಾಕೆ ಇಲ್ಲಿದ್ದೀಯ?... ಯಾವಾಗ ಬಂದೆ ಇವರ ಮನೆಗೆ?– ಅನುಮಾನಿಸುತ್ತಲೇ ಕೇಳಿದರು.

ಅಬ್ಬ! ಅವರಾಡಿದ ಮಾತೋ, ಅವರ ನಾಟಕವೋ!! ನನಗೆ ನಂಬುವುದಕ್ಕೇ ಆಗದಷ್ಟು ಅದ್ಭುತವಾಗಿ ಅಭಿನಯಿಸಿದರು.

'ರತ್ನ ಹೊಸದಾಗಿ ಮದುವೆ ಆಗಿ ಬಂದಿದ್ದಾಳೆ. ಪಾಪ ಕಷ್ಟ ಆಗಬಹುದು. ಹೇಗೂ ನನಗೆ ಇದೇ ಊರಿಗೆ ಟ್ರಾನ್ಸ್‌ಫರ್ ಆಗಿದೆ. ಯಾವುದಾದರೂ ಒಂದು ಮನೆ ಸಿಗೋತನಕ ಜೊತೆಗಿದ್ದು ಅವಳಿಗೆ ಸಹಾಯ ಮಾಡೋಣಾಂತ ಅಂದುಕೊಂಡೆ. ಅಲ್ಲದೆ ಇವನೂ ಕೂಡಾ (ಅಂದರೆ ನನ್ನ ಗಂಡ) ಒಂದೆರಡು ದಿವಸ ಇಲ್ಲೇ ಇದ್ದು, ಇವಳಿಗೆ ಅಡಿಗೆ ಗಿಡಿಗೆ ಕಲಿಸಿ, ಸ್ವಲ್ಪ ಸಹಾಯವಾಗಿರೂಂತ ತುಂಬ ಬಲವಂತ ಮಾಡಿದ' ಅಂತ ಸತ್ಯದ ತಲೆ ಮೇಲೆ ಹೊಡೆಯುವಷ್ಟು ಸಮರ್ಥವಾಗಿ ಸುಳ್ಳು ಹೇಳಿದಳು.

ಅಪ್ಪ ಅವರ ಮಾತನ್ನೆಲ್ಲ ನಂಬಿ, ಸಂತೋಷಪಟ್ಟದ್ದೇ ಅಲ್ಲ. ತಂಗಿ ಅಲ್ಲೇ ಇರುವಂತೆ ಬಲವಂತ ಕೂಡಾ ಮಾಡಿದರು. ಅವರೆದುರಿಗೆ ನನಗೇನು ಹೇಳಬೇಕೋ ತಿಳೀಲಿಲ್ಲ. ಸಮಯಕ್ಕಾಗಿ ಕಾದಿದ್ದು ವಿಷಯ ಎಲ್ಲ ತಿಳಿಸಿದೆ. ಒಂದು ಕ್ಷಣ, ಸುಮ್ಮನಿದ್ದು ದೀರ್ಘವಾಗಿ ಉಸಿರುಬಿಟ್ಟರು. ಮುಖದಲ್ಲಿ ನಾನು ನಿರೀಕ್ಷಿಸಿದ ಕೋಪ, ಉದ್ವಿಗ್ನತೆಗಳಾವುವೂ ಕಾಣಿಸಲಿಲ್ಲ. ನನಗೆ ಆಶ್ಚರ್ಯವಾಯಿತು. ಜೊತೆಗೆ ಭಯವೂ ಆಯಿತು. ಅವರ ಕ್ರೋಧ ಎಷ್ಟು ಭಯಂಕರವೋ ಅವರ ತಾಳ್ಮೆ, ಮೌನಗಳೂ ಅಷ್ಟೇ ಭಯಂಕರ ಅನ್ನೋದು ನನಗೆ ಗೊತ್ತಿತ್ತು. ಏನಾದರೂ ಮಾತನಾಡಿಸಬೇಕೆಂದು ನೋಡಿದೆ. ನನ್ನ ಪ್ರಯತ್ನ ಸೋತಿತು. ದೀರ್ಘವಾದ ಆಲೋಚನೆಯಲ್ಲಿ ಮುಳುಗಿದ್ದ ತಂದೆಯನ್ನು ಕೆಣಕುವುದಕ್ಕೆ ಹೆದರಿಕೆಯಾಗಿ, ನನ್ನ ಕೆಲಸಕ್ಕೆಂದು ನಾನು ಒಳಗೆ ಹೋದೆ.

ರಾತ್ರಿ ಊಟಕ್ಕೆಂದು, ಸೋದರತ್ತೆ ಬಂದು ಅಪ್ಪನನ್ನು ಕರೆದಳು. ಅಪ್ಪ ಒಂದು ಸಲ ಮುಖ ಎತ್ತಿ ಅವಳ ಕಡೆ ನೋಡಿದ. ಕೆಂಡಗಳಂತಾಗಿದ್ದ ಆ ಕಣ್ಣುಗಳನ್ನು ಕಂಡು ಅತ್ತೆ ಬೆಚ್ಚಿದಳು. ಅವಳಿಗೆ, ನಾನೆಲ್ಲ ವಿಷಯ ಅಪ್ಪನಿಗೆ ಹೇಳಿರಬಹುದೆಂಬ ಅನುಮಾನ ಬಂದಿರಬೇಕು. ಕೆಲಸದ ನೆಪದಲ್ಲಿ ಅಲ್ಲಿಂದ ಸರಿಯುವುದಕ್ಕೆ ಪ್ರಯತ್ನಿಸಿದಳು.

'ಶಾರಿ, ನಿಲ್ಲು'- ಅಪ್ಪ ಹೂಂಕರಿಸಿದರು.

ಶಾರದತ್ತೆ ಥರ ಥರ ನಡುಗಲು ಪ್ರಾರಂಭಿಸಿದಳು. ಅಣ್ಣನ ಕೋಪದ ಚುರುಕು ಅತ್ತೆಗೂ ಗೊತ್ತು. ಅಪ್ಪನ ಹೂಂಕಾರಕ್ಕೆ ಇಡೀ ಮನೇನೆ ನಡುಗುವಂತೆನಿಸಿತು. ನಸುಗುನ್ನಿಯಂತೆ ಒಳಗೆ ತಲೆಮರೆಸಿ ಕೂತಿದ್ದ ನನ್ನ ಗಂಡನಿಗೆ, ಕೇಳಿಸಿರಬೇಕು. ಸಿಂಹಗರ್ಜನೆಗೆ ಬಿಳುಚಿಕೊಂಡ ಪ್ರಾಣಿಯಂತೆ ಎದ್ದು ಬಂದು ಬಾಗಿಲಲ್ಲಿ ಇಣುಕಿದ. ಅಪ್ಪನ ಕ್ರೂರದೃಷ್ಟಿ ಹೊರಳಿ ಇವನ ಮೇಲೆ ಬಿತ್ತು.

'ಶ್ರೀಧರ್ ನನ್ನ ಮಗಳನ್ನು ನಾನು ಕರೆದುಕೊಂಡು ಹೋಗ್ತಿದ್ದೀನಿ. ಮಾನ, ಮರ್ಯಾದೆ, ವಂಶ ಗೌರವ ಯಾವುದೂ ಲೆಕ್ಕಕ್ಕಿಲ್ಲದೆ, ಅಕ್ಕ-ತಮ್ಮನಂತೆ ಇರಬೇಕಾದ ನೀವು ಹಾದರಕ್ಕಿಳಿದಿರುವುದು ನಾಚಿಕೆಗೇಡಿನ ಕೆಲಸ. ನನ್ನ ಚಿಕ್ಕ ತಂಗಿ, ಅನ್ನೋ ಪ್ರೀತಿಯಿಂದ, ಅವಳಿಗೆ ನಾನು ಏನೆಲ್ಲ ಮಾಡಿದೆ? 'ಹಾಳು ಮುಂಡೆ, ಇದಕ್ಕೇ ಮದುವೆ ಬೇಡಾಂತ' ಇದ್ಲೋ ಏನೋ? ನಿಮ್ಮಂಥವರ ಜೊತೆ ನಿಂತು ಮಾತಾಡಿ ನಾವು ಅಪವಿತ್ರರಾಗುವುದಕ್ಕಿಂತ, ನಿಡಿದಾಗಿ ಇಬ್ಬರನ್ನೂ ಸೀಳೀ ಜೈಲಿಗೆ ಹೋಗೋದು ವಾಸಿ...'

'ಏನೇ ಶಾರಿ, ನಿನಗೇನು ಕೇಡು ಬಂದಿತ್ತೇ? ನಿನ್ನ ಅಣ್ಣನ ಸ್ವಂತ ಮಗಳ ಸಂಸಾರಾನ ಹಾಳುಗೆಡುವುದಕ್ಕೆ ಎಷ್ಟು ದಿವಸದಿಂದ ಹೊಂಚಿದ್ದೆ?... ನೀವಿಬ್ಬರೂ ಎಲ್ಲಾದರೂ ದೂರ ಹೋಗಿ ನೇಣು ಬಿಗಿದುಕೊಂಡು ಸಾಯಿರಿ' ಎಂದು ಹೇಳಿ ನನ್ನನ್ನು ಬಳಿಗೆ ಕರೆದು, ನನ್ನ ಕುತ್ತಿಗೆಗೆ ಕೈ ಹಾಕಿ ತಾಳಿ ಸರವನ್ನು ಹಿಡಿದೆಳೆದರು. ನನಗೆ ದುಃಖ ಉಕ್ಕಿ ಬಂತು. ಇಂದಲ್ಲ ನಾಳೆ ಸರಿಹೋಗಬಹುದೇನೋ- ಅಂತ ಅನಿಸಿತ್ತು.

'ಅಪ್ಪ? ಅಪ್ಪ! ಬೇಡಪ್ಪ. ಇವರು ಬದುಕಿರುವಾಗ ಹೀಗೆ ತಾಳಿ ಕಿತ್ತು ಹಾಕೋದು ಸರಿ ಅಲ್ಲ ಅಪ್ಪ... ಬಿಟ್ಟು ಬಿಡಿ ಅಪ್ಪ...' ಅಂತ ಅಂಗಲಾಚಿದೆ.

ಮೊದಲೇ ಕೋಪದಿಂದ ಕಿಡಿಕಿಡಿಯಾಗಿದ್ದ ಅಪ್ಪ, ಇನ್ನಷ್ಟು ಕೆಂಡವಾದರು.

'ಯೋಚನೆ ಮಾಡು. ನಿನಗೆ ತಾಳಿ ಮುಖ್ಯವೋ ಅಪ್ಪ ಮುಖ್ಯವೋ? ನನ್ನ ಜೊತೆಗೆ ಬರಬೇಕಾದರೆ ನೀನು ಶ್ರೀಧರನ ಹೆಂಡತಿಯಾಗಿ ಇರಬಾರದು. ಕೇವಲ ನನ್ನ ಮಗಳಾಗಿ ಬರಬೇಕು... ಇಗೋ ನಾ ಹೊರಟೆ. ಬರುವ ಹಾಗಿದ್ದರೆ ಬಾ.

ಇಲ್ಲವಾದರೆ ಈ ನರಕದಲ್ಲಿ, ಮಾನಗೇಡಿಗಳ ಜೊತೆ ಬಿದ್ದುಕೊಂಡಿರು'– ಎಂದು ಹೇಳುತ್ತಾ ಹೊರಟೇ ಬಿಟ್ಟರು.

ನನಗೆ ತಲೆ ಧಿಮ್ಮೆಂದಿತು. ಹೆಚ್ಚು ಕಾಲ ಇರಲಿಲ್ಲ. ಯೋಚನೆ ಮಾಡಿ ನಿರ್ಧಾರಕ್ಕೆ ಬರುವವರೆಗೆ ಕಾಯೋ ಹಾಗಿಲ್ಲ. ಒಮ್ಮೆ ಇವರ ಕಡೆ, ಮತ್ತೊಮ್ಮೆ ಅಪ್ಪನ ಕಡೆ ನೋಡಿದೆ. ಅಪ್ಪ ದುರುಗುಟ್ಟಿ ನೋಡಿದರು. ಮೆಲ್ಲಗೆ ಅಪ್ಪನ ಹತ್ತಿರ ಹೋಗಿ– ನಿಮ್ಮ ಜೊತೆಗೇ ಬರ್ತೀನೀಂತ ಹೇಳಿ, ನನ್ನ ಕೊರಳಲ್ಲಿದ್ದ ತಾಳೀ ಸರ ತೆಗೆದು, ಪರ್ಸಿನಲ್ಲಿ ಇಟ್ಟುಕೊಂಡೆ, ಅಪ್ಪನ ಹಿಂದೆ ಮೌನವಾಗಿ ಹೆಜ್ಜೆ ಹಾಕಿದೆ.'

ರತ್ನ, ಕಥೆ ಹೇಳಿದ್ದು ಇಷ್ಟು. ಅದಾದ ಮೇಲೆ ಏನಾಯ್ತೋ ನನಗೆ ತಿಳಿದಿರಲಿಲ್ಲ. ಈಗ ಎಷ್ಟೋ ದಿವಸದ ಮೇಲೆ ಸಿಕ್ಕಿದ್ದಾಳೆ. ಆಮೇಲಿನ ಕಥೆ ಕೇಳೋ ಕುತೂಹಲ ನನ್ನಲ್ಲಿತ್ತು. ಭಾನುವಾರಕ್ಕಾಗಿ ಕಾದೆ.

ರತ್ನ, ಹೇಳಿದ ಮಾತಿನಂತೆ, ಭಾನುವಾರ ಬಂದೇ ಬಂದಳು. ಅವರು ಟಿ.ವಿ. ನೋಡುವುದರಲ್ಲಿ ಮಗ್ನರಾಗಿದ್ದರು. ಮಕ್ಕಳು ಹೊರಗೆ ಆಡುತ್ತಿದ್ದರು. ನಮ್ಮಿಬ್ಬರಿಗೆ ಮಾತಾಡಲು ಸ್ವಲ್ಪ ಏಕಾಂತ ಬೇಕಾಗಿತ್ತು. ನಾವಿಬ್ಬರೂ ಮಹಡಿ ಮೇಲಿನ ಕೋಣೆಗೆ ಹೋದೆವು. ರತ್ನಳಿಗೆ ಕಾಫಿ ಕೊಟ್ಟೆ. ಹಾಗೇ ಸ್ವಲ್ಪ ಹೊತ್ತು ಅದೂ ಇದೂಂತ ಲೋಕಾಭಿರಾಮವಾಗಿ ಮಾತನಾಡಿದೆವು. ಆಮೇಲೆ ಅವಳೇ ಮಾತಿಗೆ ಶುರು ಮಾಡಿದಳು...

'ಮೇಡಂ, ನನ್ನನ್ನೀಗ ಈ ಸ್ಥಿತಿಯಲ್ಲಿ ನೋಡಿ ಆಶ್ಚರ್ಯ ಆಗಿರಬೇಕಲ್ಲ. ನನ್ನ ಮೊದಲಿನ ಕತೆ ನಿಮಗೆ ಗೊತ್ತೇ ಇದೆ. ಈಗ ಇವನು ಯಾರು, ಏನೂಂತ ನಿಮಗೆ ಒಂದು ಥರಾ ಕುತೂಹಲ ಆಗಿರಬೇಕಲ್ಲ?... ಆ ಹಳೇ ಶ್ರೀಧರೇ. ಅದೇ ನನ್ನ ಮೊದಲಿನ ಗಂಡನೇ ಇವನು... ಈಗ ನನ್ನನ್ನು ತುಂಬಾ ಚೆನ್ನಾಗಿ ನೋಡಿಕೊಳ್ತಾನೆ. ನನಗೆ ಒಬ್ಬ ಮಗನೂ ಇದ್ದಾನೆ... ನನ್ನ ಅಪ್ಪ ಕರೆದುಕೊಂಡು ಬಂದು ಮೂರು ವರ್ಷದ ಮೇಲೆ ಒಂದು ಸಲ ಇವರು ನನ್ನ ಮನೆಗೇ ಹುಡುಕಿಕೊಂಡು ಬಂದಿದ್ದರು. ಅದೃಷ್ಟಕ್ಕೆ ಅಪ್ಪ ಇರಲಿಲ್ಲ. ತುಂಬಾ ಬದಲಾಗಿದ್ದಾನೆ ಅಂತ ಅನ್ನಿಸಿತು. ತಾನು ಮಾಡಿದ್ದು ತಪ್ಪಾಯಿತು. ಆ ಡಾಕಿನಿ ತನ್ನ ಮೇಲೆ ಏನೋ ಮೋಡಿ ಹಾಕಿ ಬಿಟ್ಟಿರಬೇಕು. ಅದಕ್ಕೇ ಹಾಗೆಲ್ಲ ಆಡಿದೆ. ಒಂದೇ ಒಂದು ಸಲ ತನಗೆ ನನ್ನ ಜೊತೆ ಬಾಳೋಕೆ ಅವಕಾಶ ಕೊಟ್ಟು ನೋಡು– ಅಂತ ಅಂಗಲಾಚಿದ; ಕಣ್ಣೀರಿಟ್ಟ... ಅವನ ಮಾತುಗಳಲ್ಲಿ ಪ್ರಾಮಾಣಿಕತೆ ಇದ್ದಂತೆನಿಸಿತು... ಆದರೂ ಯಾವುದಕ್ಕೂ ನಾನು ತಕ್ಷಣ ನನ್ನ ನಿರ್ಧಾರ ಹೇಳೋ ಹಾಗೆ ಇರಲಿಲ್ಲ. ಅಪ್ಪ ಏನು ಮಾಡಿದರೂ ಇದಕ್ಕೆ ಒಪ್ಪೋಲ್ಲ– ಅನ್ನೋದು ನನಗೆ ಖಚಿತವಾಗಿತ್ತು... ಅದಕ್ಕೇ ಮನೆಗೆ ಬರಬೇಡಾಂತ ಹೇಳಿ ಗುಟ್ಟಾಗಿ ನಾನು ಅವನು ಭೇಟಿಯಾಗುತ್ತಲೇ ಇದ್ದೆವು. ಅಪ್ಪನಿಗೆ ತಿಳೀದ ಹಾಗೆ ಎಷ್ಟು ದಿನಾಂತ ಇರಲಿಕ್ಕೆ ಸಾಧ್ಯ? ನನ್ನ ಅಜಾಗರೂಕತೆಯಿಂದ. ನನ್ನ ಹೊಟ್ಟೆ ಮುಂದೆ ಬರೋದನ್ನು

ತಡೀಲಿಕ್ಕೆ ಆಗಲಿಲ್ಲ. ಒಂದು ದಿವಸ ಅಪ್ಪ ತಮ್ಮ ಮಾಮೂಲಿ ಜಬರ್ ದಸ್ತಿನಿಂದ, ನನ್ನನ್ನ ನಿಲ್ಲಿಸಿ ಕೇಳಿದ. ನಾನೂ ಕೂಡಾ, ತಮ್ಮ ತಂಗಿ ಥರ ಹಾದರಕ್ಕೆ ಇಳಿದಿದ್ದೀಯ ಹೇಗೆ? ಅಂತ ಹೂಂಕರಿಸಿ ಕೇಳಿದ. ಗಡಗಡ ನಡುಗುತ್ತ, ಅವನ ವಿಷಯ ಹೇಳಿದೆ. ಅಪ್ಪನಿಗೆ ಇನ್ನಷ್ಟು ಆವೇಶ ಬಂತು. ನನ್ನ ಮಾನಗೇಡಿತನಕ್ಕೆ, ಸ್ವಾಭಿಮಾನ ಶೂನ್ಯತೆಗೆ ಕಂಡಾ ಬಟ್ಟೆ ಬೈದ. ತಮ್ಮ ಗೌರವ, ಮರ್ಯಾದೆಗಳನ್ನು ಬೀದಿ ಪಾಲು ಮಾಡಿ, ಮತ್ತೆ 'ಲೋಫರ್' (ಅಪ್ಪ ಸಂಬೋಧಿಸಿದ್ದು) ಜೊತೆ ಸಹವಾಸ ಮಾಡಿದವಳಿಗೆ ಜಾಗವಿಲ್ಲ ಅಂತ ಹೇಳಿ ನನ್ನೊಂದೆರಡು ಸೀರೆ ಆಚೆ ಒಗೆದು, ತಕ್ಷಣ ಮನೆ ಬಿಟ್ಟು ಹೋಗೋಕೆ ಹೇಳಿದ.

ನನಗೂ ಅದೇ ಬೇಕಾಗಿತ್ತು. 'ನನ್ನ ಗಂಡ' ಅನ್ನುವ ಅಭಿಮಾನ ಎಲ್ಲಿತ್ತೋ, ಹೊಡೆದು ಚಿಗುರಿತು ನನ್ನ ಮನಸ್ಸಿನಲ್ಲಿ. ಈಗ ನನಗೆ ನನ್ನ ಗಂಡ ದೇವರಾಗಿದ್ದ. ಒಂದೊಂದು, ಅವನಾಡುವ ಮಾತೂ, ನನಗೆ ಪ್ರಾಮಾಣಿಕವೆನಿಸಿತು. ಹಿಂದಿನ ಕ್ರೌರ್ಯ, ದೌರ್ಜನ್ಯ ಅಸಹ್ಯ ನಡವಳಿಕೆ– ಎಲ್ಲಾ ಕ್ಷಮಾರ್ಹ ಎನ್ನಿಸಿತ್ತು. ಆ ಕ್ಷಣವೇ ನಾನೂ ಹೊರಟು ಬಂದೆ.

ಈಗ ನಾವಿಬ್ಬರೂ ತುಂಬಾ ಸಂತೋಷವಾಗಿದ್ದೀವಿ. ನನಗೊಬ್ಬ ಮಗನು ಇದ್ದಾನೆ... ಈಗೊಂದ್ಯೆದಾರು ತಿಂಗಳಿಂದ ಅಪ್ಪನೂ ಯಾವಾಗಲಾದರೂ ಬರ್ತಾರೆ. ನಿಜವಾಗಿಯೂ ನಾನು ಲಕ್ಕಿ, ಮೇಡಂ. ನನ್ನ ದುರ್ದಿನಗಳು ಮುಗಿದಿವೆ ಎಂದು ನಿರಾಳವಾಗಿ ಉಸಿರಾಡಿದಳು.

'ಎಲೆ ಹೆಣ್ಣೇ ನಿನ್ನ ಮನಸ್ಸೇ ಮನಸ್ಸು! ಎಷ್ಟು ಸುಲಭವಾಗಿ, ಉದಾರವಾಗಿ ಎಲ್ಲವನ್ನೂ ಮರೆಯುತ್ತೀಯ? ಗಂಡಿನ ಒಂದೆರಡು ಬೆಣ್ಣೆ ಮಾತುಗಳಲ್ಲಿ, ಅವನ ಅಕ್ಷಮ್ಯ ಅಪರಾಧಗಳೆಲ್ಲ ಹೇಗೆ ಕರಗಿ ಹೋಗುತ್ತವೆ?... ಶತ ಶತಮಾನ ಕಳೆದರೂ ನೀನು ಬದಲಾಗುವುದೇ ಇಲ್ಲ... ಬದಲಾಗುವುದೇ ಇಲ್ಲ!!' – ಎಂದು ನನ್ನಲ್ಲಿ ನಾನೇ ಹೇಳಿಕೊಂಡೆ.

* * *

ಮೆಲುಕುಗಳು

ಗ್ರೀಷ್ಮ ತನ್ನ ಪ್ರಚಂಡ ಪ್ರತಾಪವನ್ನು ತೋರಿದ್ದ. ಧಗೆ ತಡೆಯಲಾಗದೆ ಮೈಮುಖವೆಲ್ಲ ಬೆವರುತ್ತಿತ್ತು. ಜೊತೆಗೆ ಗಾಳಿಯಾಡಲು ಒಂದಿಷ್ಟೂ ಎಡೆಯಿಲ್ಲದಂತೆ ಮೈಗೆ ಅಂಟಿಕೊಂಡಿದ್ದ ಖಾಕಿ ಸಮವಸ್ತ್ರ. ಭವಾನಿಗೆ ಒಂದೆರಡು ಗಂಟೆ ಕಾಲವಾದರೂ ಫ್ಯಾನಿನಡಿಯಲ್ಲಿ ಕುಳಿತು ತಂಗಾಳಿಯ ಸುಖವನ್ನು ಅನುಭವಿಸಬೇಕೆನಿಸಿ, ತಾನು ಕುಳಿತಲ್ಲಿಂದ ಎದ್ದು ಕುರ್ಚಿಯನ್ನು ನೇರ ಫ್ಯಾನಿನಡಿಗೆ ಬರುವಂತೆ ಇರಿಸಿ ಅದರಲ್ಲಿ ಕುಳಿತಳು. ಅವಳಿಗೆ ಹಾಯೆನಿಸಿತು. ತಂಗಾಳಿಯ ಸುಖದೊಂದಿಗೆ ನೆನಪುಗಳೂ ಒಂದೊಂದಾಗಿ ಅವಳ ಕಣ್ಮುಂದೆ ಹಾಯತೊಡಗಿದವು. ಭವಾನಿ ಇನ್ನೊಂದು ವರ್ಷದಲ್ಲಿ ನಿವೃತ್ತಿಯಾಗಲಿದ್ದಾಳೆ. ಒಂದೊಂದಾಗಿ ತನ್ನ ಇಷ್ಟೂ ವರ್ಷಗಳ ಬದುಕಿನಲ್ಲಿ ಅಂದಿನಿಂದ ಇಂದಿನವರೆಗೆ ಘಟಿಸಿದ ಸಂಗತಿಗಳನ್ನು ಮೆಲುಕು ಹಾಕತೊಡಗಿದಳು.

"ನನಗೇ ಅರ್ಥವಾಗುತ್ತಿಲ್ಲ. ನಾನೇಕೆ ಈ ವೃತ್ತಿಗೆ ಬಂದೆ?- ಎಂದು. ನನಗೂ ಪೋಲೀಸಿಗೂ ಯಾವ ಸಂಬಂಧವೂ ಇರಲಿಲ್ಲ. ಆದರೂ ನಾನೇ ಇಷ್ಟ ಪಟ್ಟು ಬಂದದ್ದೇಕೆಂದು ಯೋಚಿಸುತ್ತಲೇ ಬಂದೆ. ಸಮಾಜಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಮುಗಿಸಿದ ಬಳಿಕ 'ಸೋಷಿಯಲ್ ವರ್ಕ್' ಎಂಬ ವಿಷಯದಲ್ಲಿ ಡಿಪ್ಲೊಮಾ ಮುಗಿಸಿದೆ. ಮುಂದೆ ಏನಾದರೂ ಮಾಡಬೇಕು. ಏನೆಂದು ಯೋಚಿಸಿದಷ್ಟೂ ನನಗೇನೂ ಹೊಳೆಯಲಿಲ್ಲ. ಪಿ.ಎಚ್.ಡಿ ಮಾಡಲೇಬೇಕೆಂಬುದು ನನ್ನ ತೀರ್ಮಾನವಾಗಿದ್ದರೂ ವಿಷಯ ಸ್ಪಷ್ಟವಾಗಿರಲಿಲ್ಲ.

ಪ್ರೊಫೆಸರರಿಗೆ ಫೋನ್ ಮಾಡಿ ಅವರೊಂದಿಗೆ ಪರಾಮರ್ಶಿಸಿದೆ. "ಭವಾನಿ You are a dashing person. ಯಾರೂ ಯೋಚಿಸಲೂ ಆಗದ ಒಂದು ವಿಷಯವನ್ನು ಸೂಚಿಸುತ್ತೇನೆ. ಅದು ಮನುಷ್ಯ ಸಂಬಂಧಗಳಿಗೆ ಸಂಬಂಧಿಸಿದ್ದು. ನಾನು ಹೇಳಿದಾಗ ನಿನಗೆ shock ಆಗಬಹುದು. ಆದರೂ ನಿನ್ನ ಮನೋಧರ್ಮಕ್ಕೆ, ನಿನ್ನ ಸ್ವಭಾವಕ್ಕೆ ಹೊಂದುತ್ತೆ ಹಾಗೂ ಅದು ನಿನಗೆ ಸವಾಲಿನ ವಿಷಯವಾಗುತ್ತೆ."

"ಹೇಳಿ ಸಾರ್ ಅದು ಎಂಥದೇ ಆದರೂ ನಿಮ್ಮ ಮಾರ್ಗದರ್ಶನವಿದ್ದರೆ ನನಗೇನೂ ಕಷ್ಟವಾಗಲಾರದು."

"ನಿನಗೆ ಹೇಗಿದ್ದರೂ ಮನುಷ್ಯ ಸಂಬಂಧಗಳನ್ನು ಮನೋವಿಶ್ಲೇಷಣೆಯ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವುದು ಪ್ರಿಯವಾದ ವಿಷಯವೇ ಆಗಿರುವುದರಿಂದ, ಪ್ರಾಕ್ಟಿಕಲ್ ನೆಲೆಯಿಂದಲೇ ಫೀಲ್ಡ್ ವರ್ಕ್ ಮಾಡುತ್ತಲೇ ಅಧ್ಯಯನ ಮಾಡಬಹುದು."

"ಅಂಥಾದ್ದು ಯಾವ ವಿಷಯ ಸಾರ್?"

"ಸಾರ್ವಜನಿಕರು ಮತ್ತು ಪೊಲೀಸರು... ಇದರ ಬಗ್ಗೆ ಸಂಶೋಧನೆ ಮಾಡಬಹುದಲ್ಲ?"

ಒಂದು ಕ್ಷಣ ದಿಗ್ಭ್ರಾಂತಳಾದೆ. ಈ ಪ್ರೊಫೆಸರರಿಗೆ ತಲೆ ಕೆಟ್ಟಿರಬೇಕು– ಎನಿಸಿತು.

"ಏನ್ ಸಾರ್ ನೀವು ಹೇಳ್ತಿರೋದು? ಪೊಲೀಸ್ ಠಾಣೆಗಳಿಗೆ ಹೋಗುತ್ತಾ, ಪೊಲೀಸರ ಒಡನಾಟ ಬೆಳೆಸುತ್ತಾ ನಾನು ಸ್ಟಡಿ ಮಾಡುವುದೇ? ನನ್ನ ಮರ್ಯಾದೆ ಏನಾಗಬೇಕು? ಅಲ್ಲದೆ ಹೆಂಗಸಾದ ನಾನು ಹೀಗೆಲ್ಲ ಪೊಲೀಸ್ ಇಲಾಖೆ ಜೊತೆ ಸುತ್ತಾಡ್ತಾ ಇದ್ದರೆ ಆಯ್ತು. ಅಲ್ಲದೆ ಪೊಲೀಸರು ಮನುಷ್ಯರೇ ಅಲ್ಲಾಂತ ಬೇರೆ ಹೇಳ್ತಾರೆ. ಅವರಲ್ಲಿ ನ್ಯಾಯ, ನೀತಿ, ದಯೆ, ಕರುಣೆಗಳನ್ನು ನಿರೀಕ್ಷಿಸುವುದಾದರೂ ಹೇಗೆ?" ಅನುಮಾನಿಸಿ ಹೇಳಿದೆ.

ಪ್ರೊಫೆಸರ್ ನಕ್ಕು ಹೇಳಿದರು... ನಿನ್ನ ತಲೆಯಲ್ಲಿ ಇರುವ ಈ ವಿಚಾರದ ಸತ್ಯಾಸತ್ಯತೆಯನ್ನು ಪರೀಕ್ಷಿಸಲೆಂದೇ ನಿನಗೆ ಇದನ್ನು ಅಧ್ಯಯನ ಮಾಡಲು ಹೇಳಿದೆ.

"ಯಾಕೆ ಸಾರ್, ನಿಮಗೆ ಪೊಲೀಸರ ಬಗ್ಗೆ ಬಹಳ ಸಹಾನುಭೂತಿ ಇರುವ ಹಾಗೆ ಕಾಣುತ್ತೆ!"

"ಹೌದು ಭವಾನಿ. ನನ್ನ ಕುಟುಂಬದವರಲ್ಲಿ ಬಹಳಷ್ಟು ಮಂದಿ ಈ ಇಲಾಖೆಯಲ್ಲಿ ಕೆಲಸ ಮಾಡಿದವರೇ. ಅವರಿಂದಲೇ ನನಗೆ ಈ ವೃತ್ತಿಯ ಒಳ ಮರ್ಮಗಳು, ಅಧಿಕಾರಶಾಹಿ ಪರಂಪರೆ, ಪೊಲೀಸರ ಅಂತರಾಳ, ಕ್ರೌರ್ಯದ ಆಳದಲ್ಲಿ ಒಸರುವ ಕಣ್ಣೀರು, ಒಳ್ಳೆಯವರಂತೆ, ಮನುಷ್ಯರಂತೆ ಇರಬೇಕೆಂದುಕೊಂಡರೂ ಇರಲಾಗದ ಅಸಹಾಯಕತೆ, ಇರಲಾಗದಂತೆ ಇರಿಸುವ ಒತ್ತಡಗಳು... ಇವೆಲ್ಲವೂ ಒಳಹೊಕ್ಕು ನೋಡಿದಾಗ ಮಾತ್ರವೇ ಅರ್ಥವಾಗುತ್ತದೆ. ಸಾರ್ವಜನಿಕರು ನಂಬಿದಂತೆ ಅವರು ರಾಕ್ಷಸರಲ್ಲ; ಭ್ರಷ್ಟರಲ್ಲ! ಅವರಲ್ಲೂ ಮಾನವೀಯತೆಯ ಸೆಲೆಯಿದೆ. ಅವರಿಗೂ ಮನಸ್ಸೆಂಬುದಿದೆ. ಕಾಣಿಸುವ ಕ್ರೌರ್ಯ, ಹಿಂಸೆಗಳು ವಾಸ್ತವವಲ್ಲ"... ಎಂದು ಇನ್ನೂ ಮುಂದುವರೆಸುತ್ತಿದ್ದರು. ಯಾಕೋ ಬರಬರುತ್ತಾ ಭಾವುಕರಾಗುತ್ತಿದ್ದರು.

ಅವರ ಮಾತಿನ ಧಾಟಿ, ಭಾವುಕತೆಯ ಹಿಂದಿನ ಪ್ರಾಮಾಣಿಕತೆಗಳು ನನಗೆ ಸ್ಪಷ್ಟವಾಗಿ ಗಂಭೀರ ಸಮಸ್ಯೆಗಳತ್ತ ನನ್ನನ್ನು ಸೆಳೆದೊಯ್ಯುತ್ತಿರುವಂತೆನಿಸಿತು. ನನಗೂ ಈ ವಿಷಯದ ಬಗ್ಗೆ ಇನ್ನಷ್ಟು ಯೋಚನೆ ಮಾಡಬೇಕೆನಿಸಿತು. ರಿಸೀವರ್ ಕೈಯಲ್ಲಿ ಹಾಗೇ ಉಳಿದಿತ್ತು. ಎಷ್ಟು ಹೊತ್ತು ಮಾತನಾಡಿದೆವೋ ನನಗೇ ತಿಳಿಯಲಿಲ್ಲ. ದಿಢೀರನೆ ನಿರ್ಧಾರ ಸಾಧ್ಯವಾಗದೆ ಹೇಳಿದೆ– "ಸಾರ್, ನೀವು ಸೂಚಿಸುತ್ತಿರುವ ವಿಷಯ ಸಮರ್ಥನೀಯವೇ ಎನಿಸಿದರೂ, ನಾನೂ ಸ್ವಲ್ಪ ಯೋಚನೆ ಮಾಡಿ ನಿರ್ಧಾರಕ್ಕೆ ಬರುತ್ತೇನೆ. ನಾನೇ ಖುದ್ದಾಗಿ ನಿಮ್ಮನ್ನು ಭೇಟಿಯಾಗುತ್ತೇನೆ."

"ಭವಾನಿ, ನಿನಗೆ ನಾನು ಹೇಳಿದ್ದೆಲ್ಲವೂ ನನ್ನ ಕಲ್ಪನೆಯದಲ್ಲ. ನೀನು ನನ್ನ ಮನೆಗೆ ಬಂದಾಗ, ಪೊಲೀಸರ ಮಾನವೀಯತೆಯ ನಿದರ್ಶನಗಳನ್ನು ನಿನಗೇ ಕಾಣಿಸುತ್ತೇನೆ. ಅಪರಾಧಗಳು, ಅಪರಾಧಿಗಳು– ಇವೆಲ್ಲವುಗಳ ಹಿಂದಿನ ಸಾಮಾಜಿಕ ಹಿಂಸೆ, ಕ್ರೌರ್ಯ, ಅನ್ಯಾಯದ ವಿಕಟ ಸ್ವರೂಪ ನಿನಗೇ ಅರ್ಥವಾಗುತ್ತದೆ. ನೀನು ಸಮಾಜಶಾಸ್ತ್ರದ ವಿದ್ಯಾರ್ಥಿ. ಸಾರ್ವಜನಿಕ ಮತ್ತು ಪೊಲೀಸ್ ಸಂಬಂಧಗಳ ಬೆನ್ನು ಹತ್ತಿ ಹೋದಾಗ ಸಮಾಜ ಸ್ವರೂಪದರ್ಶನವೂ ನಿನಗೆ ದಕ್ಕುತ್ತದೆ. ಅದೂ ಒಂದು ಸಾಮಾಜಿಕ ಅಧ್ಯಯನವೂ ಆಗುತ್ತದೆ... So you think and decide. Choice is yours. All the best" ಎಂದು ಹೇಳುತ್ತ ಫೋನನ್ನು ಕೆಳಗೆ ಇಟ್ಟುಬಿಟ್ಟರು.

ಈ ಸಂಭಾಷಣೆಯ ಗುಂಗಿನಲ್ಲೇ ಬಹಳ ಹೊತ್ತಿದ್ದೆ. ನಾನು ಪೊಲೀಸರ ಬಗ್ಗೆ ಕೇಳಿದ್ದಕ್ಕೂ ಪ್ರೊಫೆಸರ್ ಹೇಳಿದ್ದಕ್ಕೂ ಪರಸ್ಪರ ವಿರೋಧವಿದೆ. ನಡೆದ ಅಪರಾಧ, ಆದ ಅನ್ಯಾಯ, ಅತ್ಯಾಚಾರಗಳ ಬಗ್ಗೆ ಠಾಣೆಗೆ ದೂರುಗಳನ್ನು ಒಯ್ದರೆ, ಅದನ್ನು ಕೇಳಿಯೂ ಕೇಳದಂತೆ ವರ್ತಿಸುತ್ತಾರೆ, ಅದರಲ್ಲೂ ಹೆಂಗಸರು, ಪುರುಷರ, ವಿಶೇಷವಾಗಿ ತಮ್ಮ ತಮ್ಮ ಗಂಡಂದಿರ ಮೇಲೆ ದೂರು ಕೊಡಲು ಠಾಣೆ ಮೆಟ್ಟಿಲು ಹತ್ತಿದಾಗ ಅವರೇ ಅಪರಾಧಿಗಳೆಂಬಂತೆ ನೋಡುತ್ತಾರೆ ಇಲ್ಲವೆ ತೀರಾ ಅವಾಚ್ಯ, ಅಶ್ಲೀಲ ರೀತಿಯಲ್ಲಿ ಮಾತನಾಡಿ ಗೇಲಿ ಮಾಡಿ ಕಳಿಸುತ್ತಾರೆ; ಪೊಲೀಸ್ ಸ್ಟೇಷನ್‌ನಲ್ಲಿಯೇ ವಿಚಾರಣೆಗೆಂದು, ಕಾನೂನಿನ ಪರವಾನಗಿ ಇಲ್ಲದಿದ್ದರೂ ರಾತ್ರಿಯೆಲ್ಲಾ ಠಾಣೆಯಲ್ಲಿ ಉಳಿಸಿಕೊಂಡು ಕೆಲವೊಮ್ಮೆ ಅವರ ಮೇಲೆ ಅತ್ಯಾಚಾರ ಮಾಡುತ್ತಾರೆ; ಅಷ್ಟೇಕೆ ಮಹಿಳಾ ಪೋಲೀಸರ ಮೇಲೂ ಅವರ ಕೆಂಗಣ್ಣು, ಕೆಟ್ಟಕಣ್ಣು ಬೀಳುತ್ತದೆ– ಎಂದೆಲ್ಲಾ ನಾನೇ ಸ್ವತಃ ಕೇಳಿದ್ದೆ, ಕೆಲವು ಪ್ರಕರಣಗಳು ನಿಜವಾದದ್ದೂ ಕಂಡಿದ್ದೆ.– ಹೀಗಿರುವಾಗ ಪ್ರೊಫೆಸರ್ ಮಾತನ್ನು ನಂಬುವುದು ಹೇಗೆ? ಬಹಳ ಹೊತ್ತು ತಲೆ ಕೆಡಿಸಿಕೊಂಡೆ. ನನ್ನಲ್ಲೇ ನಾನು ತರ್ಕಿಸಿದೆ. ಬಹುಶಃ ಈ ಅಭಿಪ್ರಾಯಗಳು ಸಾರಾಸಗಟು ಸತ್ಯವಿರಬಾರದು. ಪೊಲೀಸ್ ವ್ಯವಸ್ಥೆ, ಪೊಲೀಸ್ ಸಮುದಾಯವೇ ಹೀಗಿರಲಾರದು. ಅವರೂ ಮನುಷ್ಯರೇ ಅಲ್ಲವೇ. ಅವರಿಗೂ ಕುಟುಂಬವಿರುತ್ತದೆ. ಅಣ್ಣ ತಂಗಿ, ಅಕ್ಕ ತಮ್ಮ, ಮಕ್ಕಳು, ಬಂಧು ಬಳಗ ಎಲ್ಲವೂ ಇದ್ದು ಅವರೂ ನಮ್ಮಂತೆಯೇ ಅಲ್ಲವೇ?

ವ್ಯವಸ್ಥೆಯ ಕೋಟೆ ಪ್ರವೇಶಿಸಿದ ಮಾತ್ರಕ್ಕೆ ಎಲ್ಲರಿಗೂ ಒಂದೇ ಹಣೆಪಟ್ಟಿ ಹಚ್ಚುವುದು ಎಷ್ಟು ಸಾಧುವಾದುದು. ಅವರಲ್ಲಿಯೂ ಮಾನವೀಯ ಸಂವೇದನೆಗಳಿರುತ್ತವೆ. ಭಾವನೆಗಳಿರುತ್ತವೆ. ನನಗೆ ತಿಳಿದಂತೆ ಈ ಇಲಾಖೆಯಲ್ಲಿ ಎಂಥೆಂಥ ಅಧಿಕಾರಿಗಳು, ಸಾಮಾನ್ಯ ಪಿ.ಸಿ.ಗಳು ಕಲಾವಿದರಿದ್ದಾರೆ; ನಟರು; ಸಂಗೀತಗಾರರು; ಸಾಕಷ್ಟು ಹೆಸರಾದ ಸಾಹಿತಿ, ಕಲಾವಿದರಿದ್ದಾರೆ; ಅಭಿಮಾನಿಗಳಿದ್ದಾರೆ. ನಿಷ್ಠುರತೆ, ಕ್ರೌರ್ಯ, ಹಿಂಸಕ ಪ್ರವೃತ್ತಿಗಳೇ ಅವರಲ್ಲಿ ತುಂಬಿಕೊಂಡಿದ್ದರೆ, ಸ್ಪಂದನಶೀಲತೆ, ಸಂವೇದನಾತ್ಮಕ ಮನಸ್ಸು, ಸಾಮಾಜಿಕ ಕಳಕಳಿ, ಮಕ್ಕಳು, ಮಹಿಳೆಯರ ವಿಚಾರದಲ್ಲಿ ಸಹಾನುಭೂತಿ, ನಿರಪರಾದಿಗಳ ಬಗ್ಗೆ ಮಾನವೀಯತೆ ಇಲ್ಲದಿದ್ದರೆ, ಹೃದಯ ಮೂಲದಿಂದ ಅಂದರೆ ಭಾವಮೂಲದಿಂದ ಹೊರಡುವ ಸೃಜನಶೀಲತೆ ಸಾಧ್ಯವಾಗುತಿತ್ತೇ?... ಎಲ್ಲಿಯೋ ನಮ್ಮ ಮತ್ತು ಅವರ ನಡುವೆ ತಪ್ಪು ಕಲ್ಪನೆಯ ಅಂತರವಿದೆ. ನಮ್ಮ ಗ್ರಹಿಕೆ ತಪ್ಪುದಾರಿ ಹಿಡಿದದಿದೆ ಅನಿಸಿ, ಈ ಸಂಬಂಧ ಸಮಸ್ಯೆಯ ಗಾಢತೆ, ಗಂಭೀರತೆಯನ್ನು ಅರ್ಥಮಾಡಿಕೊಳ್ಳಲು ಈ ವ್ಯವಸ್ಥೆಯ ಕೋಟೆಯನ್ನು ಪ್ರವೇಶಿಸಲೇ ಬೇಕೆನಿಸಿ, ಇಲಾಖೆ ಸೇರಲು ನಿರ್ಧರಿಸಿದೆ.

ಪ್ರೊಫೆಸರರ ಚಿಕ್ಕಪ್ಪನ ಮಗ ಅವಿನಾಶ್‌ರನ್ನು ಪರಿಚಯ ಮಾಡಿಕೊಂಡು ಅವರಿಂದ ಎಲ್ಲ ವಿವರಗಳನ್ನು ತಿಳಿದುಕೊಂಡು ಸಬ್ ಇನ್ಸ್‌ಪೆಕ್ಟರ್ ಹುದ್ದೆಗೆ ಪರೀಕ್ಷೆ ಬರೆದೆ. ಪಾಸೂ ಆಗಿ ಇಲಾಖೆಗೆ ಆಯ್ಕೆ ಆದೆ.

ಪರೀಕ್ಷೆ ಬರೆದ ವಿಷಯ ಅಪ್ಪ-ಅಮ್ಮನಿಂದ ರಹಸ್ಯವಾಗಿ ಇರಿಸಿದೆನಾದರೂ ನಾನು ಇನ್ಸ್‌ಪೆಕ್ಟರ್ ಹುದ್ದೆಗೆ ಆಯ್ಕೆ ಆದದ್ದನ್ನು ತಿಳಿಸಲೇಬೇಕಾಯಿತು. ಅಮ್ಮ ರಂಪು ಹಿಡಿದು ಬೇಡವೆಂದರು. ಅಪ್ಪನಿಗೂ ಸುತರಾಂ ಇಷ್ಟವಿಲ್ಲ. ಪೊಲೀಸ್ ಹುದ್ದೆ ಅಪಾಯಕಾರಿ. ಅದೂ ಹೆಣ್ಣುಮಕ್ಕಳಿಗೆ ಹೆಚ್ಚಿನ ಅಪಾಯ ಎನ್ನುವ ತರ್ಕ ಅಪ್ಪನದಾದರೆ, ಹೆಣ್ಣು ಹುಡುಗಿ ಸಂಪ್ರದಾಯಕ್ಕೆ ವಿರುದ್ಧವಾಗಿ ಹೊರಗೆ ಕೆಲಸ ಮಾಡುವುದೇ ತಪ್ಪೆಂದು ವಾದಿಸುತ್ತಿದ್ದ ಅಮ್ಮ, ನನ್ನನ್ನು ಪೋಲೀಸರ ಜೊತೆಯಲ್ಲಿ ಖಾಕಿ ಸಮವಸ್ತ್ರದಲ್ಲಿ, ಹೊತ್ತಲ್ಲದ ಹೊತ್ತಲ್ಲಿ ಅಪರಾಧಿಗಳ ಬೆನ್ನು ಹತ್ತಿ ಓಡಾಡುವುದನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಿರಲಿಲ್ಲ. ಒಂದೇ ಹಟ- ನಾನು ಇಲಾಖೆಗೆ ಸೇರಬಾರದೆಂದು. ಅಮ್ಮನ ಈ ಹಟ ನನ್ನ ಉತ್ಸಾಹದ ಬಲೂನನ್ನು ಒಡೆಯಿತು. ನನಗೆ ದಿಕ್ಕೇ ತೋಚದಾಯಿತು. ಮತ್ತೆ ಅಪ್ಪನೇ ನನಗೆ ಒಂದು ಭರವಸೆಯ ಆಶೆಯ ಕಿರಣವೆನಿಸಿ. ಅವರಲ್ಲಿಗೆ ಹೋಗಿ ನನ್ನ ಯೋಜನೆಗಳನ್ನು, ನನ್ನ ಕನಸುಗಳನ್ನು ಹೇಳಿಕೊಂಡು ಅತ್ತೆ. ಮಾತು ಮಾಡದ ಪರಿಣಾಮ ಎರಡು ಕಣ್ಣ ಹನಿಗಳು ಮಾಡಿದವು. ಅವನು ಕರಗಿದ. ನನ್ನ ಪರವಾಗಿ ಅಮ್ಮನೊಡನೆ ವಾದಿಸಿ, ಕಡೆಗೆ ಅಮ್ಮನ ಒಪ್ಪಿಗೆ ಸಿಗುವಂತೆ ಮಾಡಿದ.

* * *

ಮೊದಲೆರಡು ದಿವಸ ಮುಜುಗರ; ಇರಿಸು ಮುರಿಸು. ಏನೋ ಒಂದು ಬಗೆಯ ಸಂಕೋಚ. ಎಲ್ಲರ ಬಗ್ಗೆಯೂ ಏನೋ ಗುಮಾನಿ! ಯಾವ ಪೊಲೀಸ್ ಹೇಗೊ! ಯಾವ ಅಧಿಕಾರಿ ಹೇಗೋ ಎನ್ನುವ ಅಳುಕು. ಆದರೆ ಬರಬರುತ್ತ ನನಗೆ ಈ ವೃತ್ತಿ ಒಗ್ಗಿ ಹೋಯಿತು. ದಿನನಿತ್ಯ ಹತ್ತಾರು ಅಪರಾಧ ಪ್ರಕರಣಗಳು. ಚಿತ್ರವಿಚಿತ್ರವಾದ್ದು! ಊಹಿಸಲೂ ಆಗದ ಸಮಸ್ಯೆಗಳ ಮೂಲದಿಂದ ಉದ್ಭವಿಸಿದ ಪ್ರಕರಣಗಳು. ಕಳ್ಳತನ, ಕೊಲೆ, ದರೋಡೆ, ಅತ್ಯಾಚಾರ ಒಂದೇ ಎರಡೇ!! ಬಿಡುವಿಲ್ಲದೆ ದುಡಿಯಬೇಕಾದ ಒತ್ತಡ. ಯಾವ ಕ್ಷಣದಲ್ಲಿ ಯಾವ ರಾಜಕಾರಣಿಯಿಂದ, ಉದ್ಯಮಿಗಳಿಂದ ಏನು ಆಜ್ಞೆ ಹೊರಡುತ್ತದೋ, ಯಾವ ಅಪರಾಧಿಯನ್ನು, ಅಪರಾಧ ಗಂಭೀರವಾದದ್ದಾದರೂ, ಬಿಡಬೇಕೆಂದು ಆದೇಶ ಬರುತ್ತದೆಯೋ ಎಂಬ ಆತಂಕ. ಜೊತೆಗೆ ದೂರು ಕೊಟ್ಟವರ ಪ್ರಾಣ ರಕ್ಷಣೆಯ ಜವಾಬ್ದಾರಿಯೂ ಸೇರಿಕೊಳ್ಳುತ್ತದೆ.

ಈ ವೃತ್ತಿಯಲ್ಲಿ ನನಗೆ ಕಣ್ಣು ತೆರೆಸಿದ್ದು ಮಹಿಳೆಯರ ಸಮಸ್ಯೆ, ಮಕ್ಕಳ ಸಮಸ್ಯೆ. ಎಷ್ಟು ಬಗೆಯಲ್ಲಿ ಮಹಿಳೆಯರು ಮಕ್ಕಳು ಶೋಷಿತರಾಗುತ್ತಿದ್ದಾರೆ; ದೌರ್ಜನ್ಯ ಅತ್ಯಾಚಾರಗಳಿಗೆ ಒಳಗಾಗುತ್ತಿದ್ದಾರೆ. ಪತ್ರಿಕೆಗಳಲ್ಲಿ ದಿನಂಪ್ರತಿ ಸುದ್ದಿಯಾಗುತ್ತಿದ್ದರೂ, ಆತ್ಮಹತ್ಯೆ ಎಂಬ 'ಶೀರ್ಷಿಕೆ'ಯಾಗಿ ಹೆಣ್ಣು ಮಕ್ಕಳ ಕೊಲೆಯಾಗುತ್ತಿದ್ದರೂ, ಠಾಣೆಗಳಲ್ಲಿ ದಾಖಲಾಗುತ್ತಿರುವ ಪ್ರಕರಣಗಳು ತೀರಾ ತೀರಾ ಕನಿಷ್ಠ ಸಂಖ್ಯೆಯಲ್ಲಿ!! ನನಗೆ ಆಶ್ಚರ್ಯವಾಯಿತು. ಹೀಗೇಕೆಂದು ಒಂದು ಸಮೀಕ್ಷೆ ನಡೆಸಬೇಕೆನಿಸಿ, ಸಮಾಜಸೇವಾ, ಅದರಲ್ಲೂ ಮಹಿಳಾ ಸಂಘಟನೆಗಳಲ್ಲಿ ಕೆಲಸ ಮಾಡುತ್ತಿರುವ ನನ್ನ ಗೆಳತಿಯರೊಂದಿಗೆ ಚರ್ಚೆ ಮಾಡಿ ಠಾಣೆಗಳಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ, ಅತ್ಯಾಚಾರ ಪ್ರಕರಣಗಳಿಗೆ ಸಂಬಂಧಿಸಿದಂತೆ ದೂರುಗಳು ದಾಖಲಾಗದಿರಲು ಕಾರಣವೇನೆಂದು ಸಮೀಕ್ಷೆಯೊಂದನ್ನು, ಖಾಸಗಿ ಆಸಕ್ತಿಯ ಮೇಲೆ ನಡೆಸಿಕೊಡುವಂತೆ ಕೇಳಿಕೊಂಡೆ. ತಮ್ಮ ಪೋಲೀಸ್ ಗೆಳತಿಯೊಬ್ಬಳ ಇಂತಹ ಆಸಕ್ತಿ ಅವರಿಗೆ ದಿಗ್ಭ್ರಮೆಯೆನಿಸಿದರೂ, ಖುಷಿಯಿಂದ ಒಪ್ಪಿಕೊಂಡರು. ಅಲ್ಲದೆ ಅವರ ಕಾರ್ಯಕ್ಷೇತ್ರದ ಭಾಗವೂ ಇದಾಗಿತ್ತು. ಹಾಗಾಗಿ ಅವರು ಅದನ್ನೆಲ್ಲ ಬಹಳ ಆಸ್ಥೆ ವಹಿಸಿ ಅಂಕಿಗಳೊಡನೆ ಪ್ರಕರಣಗಳ ವಿವರ ಹಾಗೂ ದೂರು ನೀಡದೆ ಉಳಿಯಲು ಕಾರಣಗಳನ್ನು, ಕೆಲವು ಮಾಹಿತಿಗಳೊಂದಿಗೆ ನೀಡಿದರು. ಇದರ ಬಗ್ಗೆ ಇನ್ನಷ್ಟು ಹೆಚ್ಚು ಹೆಚ್ಚು ತಿಳಿಯಬೇಕೆನಿಸಿತು. ಸಮಾಜದಲ್ಲಿ ಪುರುಷರೂ ಸ್ತ್ರೀಯರೂ ಮಕ್ಕಳೂ, ಅನೇಕ ರೀತಿಯಲ್ಲಿ ಅಧಿಕಾರಬಲ, ಜಾತಿಬಲ, ಹಣಬಲದಿಂದಾಗಿ ಒಂದೆ ದೌರ್ಜನ್ಯಗಳಿಗೆ ಗುರಿಯಾಗುತ್ತಿದ್ದಾರೆನ್ನುವುದು ವಾಸ್ತವ ಸಂಗತಿಯೇ ಆದರೂ, ಹೆಚ್ಚಿನ ಪ್ರಮಾಣದಲ್ಲಿ ಮಹಿಳೆಯರು ಬಲಿಪಶುಗಳಾಗುತ್ತಿರುವುದು ಭಯಂಕರ ದುರಂತವೆನಿಸಿದೆ. ಮೊದಲೇ ಹೆಣ್ಣು ಅಸಹಾಯಕಳು. ಎಷ್ಟು ತಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿ ಕಿರುಚಿದರೂ ಅವಳಿಗೆ ನಿಜವಾಗಿಯೂ ದೊರೆತ ಸ್ವಾತಂತ್ರ್ಯ ಎಷ್ಟೆಂಬುದು ಅವಳ ಮೇಲೆ ಆಗುತ್ತಿರುವ ದೌರ್ಜನ್ಯಗಳ ಪ್ರಕರಣಗಳ ಸಂಖ್ಯೆ

ಗಮನಿಸಿದರೆ ದಿಗ್ಭ್ರಮೆಯಾಗುತ್ತದೆ. ಧರ್ಮ ಸಂಪ್ರದಾಯ, ಸಮಾಜ, ಪುರುಷ ಅವಳನ್ನು ಯಾವ ರೀತಿಯಿಂದಲೂ ನಿರ್ಭಯವಾಗಿ, ನಿರಾತಂಕವಾಗಿ, ಸ್ವತಂತ್ರವಾಗಿ, ಸ್ವಾವಲಂಬಿಯಾಗಿ ಬದುಕಲು ಬಿಡುತ್ತಿಲ್ಲ. ಹೆಣ್ಣಿನ ಬಗ್ಗೆ ಇರುವ ತಾತ್ಸಾರ, ಕೀಳೆಂಬ ಭಾವನೆಯೇ ಅವಳು ಶೋಷಣೆಗೆ, ಸಾವಿಗೆ ಒಳಗಾಗಲು ಕಾರಣವಾಗಿದೆ.

ಒಬ್ಬ ಸಮಾಜಶಾಸ್ತ್ರಜ್ಞಳೂ ಆಗಿರುವ ನನಗೆ ಮಹಿಳಾ ಸಂಬಂಧವಾಗಿ ನಡೆಯುತ್ತಿರುವ ಅಪರಾಧಗಳ ಸ್ವರೂಪ, ಪ್ರಮಾಣವನ್ನು ನಿಖರವಾಗಿ ತಿಳಿಯುವುದು ಅಗತ್ಯವೆನಿಸಿ, National Crimes Report Bureau ಒದಗಿಸಿದ ವರದಿಯನ್ನು ತರಿಸಿಕೊಂಡು ಓದಿದೆ. ಗಾಭರಿಯಿಂದ ಮೂರ್ಛೆ ಹೋಗುವಂತಾಯಿತು. ಇದರ ಪ್ರಕಾರ, ಮಹಿಳೆಯರ ಮೇಲೆ ನಡೆದ, ನಡೆಯುತ್ತಿರುವ ವಾರ್ಷಿಕ ಅಪರಾಧಗಳ ಸಂಖ್ಯೆ ೧.೫ ಲಕ್ಷ. ಅದರಲ್ಲಿ ಕುಟುಂಬ ದೌರ್ಜನ್ಯಕ್ಕೆ ಒಳಗಾದ ಮಹಿಳೆಯ ಸಂಬಂಧ ಪ್ರಕರಣಗಳೇ ೫೦,೦೦೦ ವಿದೆ. ಎಷ್ಟು ಬಗೆಯಲ್ಲಿ ದೌರ್ಜನ್ಯಗಳು ನಡೆಯುತ್ತಿವೆ. ಹುಟ್ಟುವುದಕ್ಕೆ ಮೊದಲೇ ಹೆಣ್ಣು ಮಕ್ಕಳ ಕೊಲೆ (ಗರ್ಭಪಾತದ ಮೂಲಕ) ಹೆಣ್ಣು ಮಕ್ಕಳನ್ನು ಹುಟ್ಟುತ್ತಲೇ ನಿರ್ದಾಕ್ಷಿಣ್ಯವಾಗಿ ಸಾಯಿಸುವುದು; ಕಾಮ ಪಿಪಾಸೆಯ ಅತಿರೇಕದಿಂದ ಲೈಂಗಿಕ ಅತ್ಯಾಚಾರಕ್ಕೆ ಒಳಗಾಗಿಸುವುದು; ವರದಕ್ಷಿಣೆಗಾಗಿ ಸುಡುವುದು; ವ್ಯಭಿಚಾರಕ್ಕಾಗಿ ಹೆಣ್ಣುಮಕ್ಕಳನ್ನು ಮಾರಾಟ ಮಾಡುವುದು; ವಿದ್ಯಾವಂತ ಸಮುದಾಯದ ಹೆಣ್ಣು ಮಕ್ಕಳಿಗೆ ತಾವು ಕೆಲಸ ಮಾಡುವ ಸಂಸ್ಥೆಗಳಲ್ಲಿ ಲೈಂಗಿಕ ಕಿರುಕುಳ ನೀಡುವುದು. ಮಕ್ಕಳಾಗಿರುವಾಗಲೇ ಹೆಣ್ಣು ಮಕ್ಕಳನ್ನು ಇದೇ ರೀತಿಯಲ್ಲಿ ಹಲವು ಬಗೆಯಲ್ಲಿ ದೌರ್ಜನ್ಯಕ್ಕೆ, ಸಾವಿಗೆ ನೂಕುತ್ತಿರುವ ಸಮಾಜ ವ್ಯವಸ್ಥೆಯ ಬಗ್ಗೆ ಏನೆನ್ನಬೇಕು!...

ಹೃದಯ ಹಿಂಡಿದಂತಾಯಿತು. ಇವೆಲ್ಲ ಸಮಸ್ಯೆಗಳಿಗೆ ಪರಿಹಾರವೇ ಇಲ್ಲವೇ ಎಂದೆಲ್ಲಾ ಯೋಚಿಸುತ್ತಲೇ ಇದ್ದೆ. ವರ್ಷಗಳು ಕಳೆದಂತೆ ನನಗೆ ಇಲಾಖೆಯಲ್ಲಿ ಎಲ್ಲ ಹಿರಿಯ ಅಧಿಕಾರಿಗಳ ಜೊತೆಗೆ ಒಂದು ಬಗೆಯ ಸ್ನೇಹ ಸಲಿಗೆಯಿಂದ ನಡೆದುಕೊಳ್ಳಲು ಸಾಧ್ಯವಾಯಿತು. ಮುಕ್ತವಾಗಿ ನಾನು ನನ್ನ ವಿಚಾರಗಳನ್ನು ಅವರೊಂದಿಗೆ ಹಂಚಿಕೊಳ್ಳುತ್ತಿದ್ದೆ. ನಾನು ಬರುವುದಕ್ಕೆ ಮೊದಲು ಅವರ ಬಗ್ಗೆ ತಳೆದಿದ್ದ ಭಾವನೆಗಳು ಅಭಿಪ್ರಾಯಗಳು, ಅವರೊಂದಿಗೆ ಕಾಲ ಕಳೆದಂತೆ, ಆಧಾರರಹಿತ, ತಪ್ಪು ಕಲ್ಪನೆಗಳು ಎನಿಸಿತು. ನನ್ನೆಲ್ಲ ತರ್ಕ, ವಾದ, ವಿಚಾರಗಳಿಗೆ ಸ್ಪಂದಿಸಿದರು. ಅವರಿಗೂ ನನ್ನ ಹಾಗೆ ವ್ಯವಸ್ಥೆಯಲ್ಲಿ ಸುಧಾರಣೆ ಆಗಬೇಕು, ತಮ್ಮ ಮತ್ತು ಸಾರ್ವಜನಿಕರ ನಡುವೆ ಸ್ನೇಹ ಬಾಂಧವ್ಯದ ಸಂಪರ್ಕವನ್ನು ಸಾಧ್ಯವಾಗಿಸಬೇಕೆನಿಸಿತು.

ಬಹುಶಃ ನನ್ನ ಚಿಂತನೆಗಳು, ನನ್ನ ಕಾರ್ಯವೈಖರಿ ಪ್ರಕರಣಗಳನ್ನು ಕೈಗೆತ್ತಿಕೊಂಡು ನಿರ್ವಹಿಸಿದ ರೀತಿ, ಸಂತ್ರಸ್ತರು, ನೊಂದವರು ಯವುದೇ ಸಂಕೋಚ, ಹಿಂಜರಿಕೆಗಳಿಲ್ಲದೆ ನನ್ನಲ್ಲಿಗೆ ಬಂದು ತಮ್ಮ ಅಳಲನ್ನು ಹೇಳಿಕೊಂಡು, ದೂರು ಕೊಡಲು ಮುಂದಾಗುತ್ತಿದ್ದುದು. ನಾನು ಆದಷ್ಟು ಪ್ರಯತ್ನಿಸಿ ಆರೋಪಿ ಮತ್ತು ದೂರು ಕೊಟ್ಟವರ ನಡುವೆ

ಅವರವರಲ್ಲಿಯೇ ಸಮಸ್ಯೆ ಪರಿಹರಿಸಿಕೊಂಡು 'ರಾಜಿ'ಯಾಗುವಂತೆ ಮಾಡುತ್ತಿದ್ದ ಪ್ರಯತ್ನಗಳು ನನ್ನ ಹಿರಿಯ ಅಧಿಕಾರಿಗಳ ಮೆಚ್ಚುಗೆಗೆ ಪಾತ್ರವಾಗಿ, ನಾನು ಟ್ರಾನ್ಸ್‌ಫರ್ ಹೆಸರಿನಲ್ಲಿ ಊರೂರು ಸುತ್ತುವ ಅವಕಾಶ ತಪ್ಪಿತಾದರೂ, ಅನಕ್ಷರಸ್ಥರೂ, ಸಂಪ್ರದಾಯ ಸಮಾಜ ಎಂದು ಇನ್ನೂ ಅನಿಷ್ಟ ಪದ್ಧತಿಗಳ ಆಚರಣೆಯಲ್ಲಿ ತೊಡಗಿರುವ ಮಂದಿ ಇರುವ ಹಿಂದುಳಿದ ಪ್ರದೇಶಗಳಾದ ರಾಯಚೂರು, ಗುಲ್ಬರ್ಗಾ ಮೊದಲಾದ ಪ್ರದೇಶಗಳಲ್ಲಿನ ಒಳಗ್ರಾಮಗಳಲ್ಲಿ ಪೊಲೀಸರ ಬಗೆಗೆ ಮಹಿಳೆಯರಲ್ಲಿರುವ ಭಯ, ಆತಂಕಗಳನ್ನು ಹೋಗಲಾಡಿಸಿ, ಅವರ ಬಗ್ಗೆ ಸ್ನೇಹ, ವಿಶ್ವಾಸಗಳನ್ನು ಮೂಡಿಸುವ ಕೆಲಸವನ್ನು ಒಪ್ಪಿಸಿ– ಕಳಿಸುತ್ತಲೇ ಇದ್ದರು. ಇದೊಂದು ನನಗೆ ಸವಾಲಿನ, ಪ್ರತಿಷ್ಠೆಯ ಪ್ರಶ್ನೆಯಾಗಿತ್ತು. ತಿಂಗಳುಗಟ್ಟಲೆ ಅವರೊಂದಿಗೆ ಬೆರೆತು, ಅವರನ್ನು ಸೇರಿಸಿ ಅವರ ಸಮಸ್ಯೆಗಳ ಬಗ್ಗೆ ಅವರಿಗೇ ಅರ್ಥವಾಗುವಂತೆ ಹೇಳಿ, ಅವರ ಮೇಲೆ ಯಾವುದೇ ಬಗೆಯ ದೌರ್ಜನ್ಯ ನಡೆದರೂ ಪೊಲೀಸ್ ವ್ಯವಸ್ಥೆ ಅವರಿಗೆ ಬೆಂಬಲವಾಗಿ ನಿಲ್ಲುವುದೆಂದೂ, ವೈಯಕ್ತಿಕ ಹಾಗೂ ಖಾಸಗಿ ಸಮಸ್ಯೆಗಳನ್ನೂ ಮಹಿಳಾ ಪೊಲೀಸರ ಮುಂದೆ ನಿಸ್ಸಂಕೋಚವಾಗಿ ಹೇಳಿಕೊಳ್ಳಬಹುದೆಂದು ಮನವರಿಕೆ ಮಾಡಿ, ಆ ಪ್ರದೇಶದಲ್ಲಿನ ಕೆಲವು ಮಹಿಳಾ ಪೋಲೀಸರಿಗೆ, ಇಂತಹ ಜಾಗೃತಿ ಮೂಡಿಸುವ ಕೆಲಸಕ್ಕೆ ತರಬೇತಿ ಕೊಟ್ಟು, ಮುಂದುವರೆಸಿಕೊಂಡು ಹೋಗುವ ವ್ಯವಸ್ಥೆ ಮಾಡಿದೆ.

ಈ ವೃತ್ತಿಯಲ್ಲಿದ್ದು ನನಗೆ ಮನುಷ್ಯ ಸಂಬಂಧಗಳ ವೈವಿಧ್ಯಮಯ ಸ್ವರೂಪ, ಸೂಕ್ಷ್ಮತೆಗಳು, ಸಮಸ್ಯೆಗಳು, ಸ್ವಭಾವ, ಮನೋಧರ್ಮ, ಮಾನಸಿಕ ಸ್ಥಿತಿಗಳು, ಎಲ್ಲವೂ ಅಪರಾಧ ಪ್ರಕರಣಗಳ ವಿಶ್ಲೇಷಣೆಯ ಮೂಲಕ ಗ್ರಹಿಸುವುದು ಸಾಧ್ಯವಾಯಿತು. ಪ್ರಕರಣಗಳು ಮೇಲು ನೋಟಕ್ಕೆ ಒಂದೇ ತೆರನಾಗಿದ್ದರೂ ಅವುಗಳ ಹಿಂದಿನ ಪ್ರಚೋದನೆಗಳು ಬೇರೆಯೇ ಆಗಿರುತ್ತಿದ್ದುದು ನನಗೆ ಒಂದು ಬಗೆಯ revelution ಅಂತ ಅನಿಸಿತ್ತು. ಬಹಳ ಆಸಕ್ತಿ, ಕುತೂಹಲ, ಜಿಜ್ಞಾಸೆಗೆ ಒತ್ತಾಯಿಸುತ್ತಿದ್ದ ಕಾರಣ, ನನ್ನ ಅನುಭವದಲ್ಲಿ ಬಂದ ಎಲ್ಲ ಪ್ರಕರಣಗಳನ್ನೂ ನನ್ನ ದಿನಚರಿಯಲ್ಲಿ ತಕ್ಷಣವೇ ದಾಖಲಿಸಿ ಕೊಂಡು ಕತೆಗಳನ್ನಾಗಿಸಿ ಸಂಗ್ರಹಿಸಿದ್ದೇನೆ. ಈ ಪ್ರಕರಣಗಳ ಹಿಂದೆ ಸುಖವಿರಲಾರದು; ಸಂತೋಷವಿರಲಾರದು; ಆದರೂ ನಮ್ಮಲ್ಲಿ ಸಾಮಾಜಿಕ ಪ್ರಜ್ಞೆಯ ಜಾಗೃತಿಗೆ, ಮನುಷ್ಯನ ಮನಃಸ್ಥಿತಿಗಳ, ಮನಃಪ್ರವೃತ್ತಿಗಳ ಅಧ್ಯಯನಕ್ಕೆ, ಅನುಸಂಧಾನಕ್ಕೆ, ವಿಶ್ಲೇಷಣೆಗೆ, ಮನುಷ್ಯನ ನಿಜವಾದ ಅರ್ಥಗ್ರಹಿಕೆಗೆ ಸಹಾಯಕವಾಗಬಲ್ಲುದೆಂಬ ಬಲವಾದ ನಂಬಿಕೆಯೇ ಈ 'ಕಥಾ ಸಂಕಲನ'ದ ಸೃಷ್ಟಿಗೆ ನಾಂದಿಯಾಯಿತು. ನೋವು, ವ್ಯಥೆ, ಕಂಬನಿಗಳೇ ಇವುಗಳ ಹಿಂದಿನ ಭಿತ್ತಿಗಳಾದ್ದರಿಂದ ಇದನ್ನು ನಾನು "ಕಂಬನಿಯ ಕಥನಗಳು" ಎಂದು ಕರೆದಿದ್ದೇನೆ. ನನ್ನೀ ಕಥಾಲೋಕದಲ್ಲಿ, "ಲಕ್ಷ್ಮಿ, ಬೇಬಿ, ಗೀತಾ, ಆಶಾ, ಕಂಠಮ್ಮ, ರೋಹಿಣಿ, ತನುಜ, ಗೌರಕ್ಕ, ಜೊತೆಗೆ ಹನ್ನೆರಡು [illegible] ಸುಧಾರಂಭವರು... ಜಾಲದಂತೆ ಸಾಗುವ ಈ ಪ್ರಕರಣಗಳಿಗೆ ಕೊನೆಯೇ ಇಲ್ಲ. ಇಂಥವರು ನನ್ನ ಕಥಾಲೋಕದ ಆಚೆಗೂ

ಸಾವಿರಾರು ಸಂಖ್ಯೆಯಲ್ಲಿದ್ದಾರೆ. ನೊಂದಿದ್ದಾರೆ; ನೋಯುತ್ತಿದ್ದಾರೆ. ಈ ಕತೆಗಳನ್ನು ಓದಿದವರಿಗೆ ಅಲ್ಲಿನ ಕಥಾನಾಯಕಿಯರ ಬಿಕ್ಕುಗಳು, ನಿಟ್ಟುಸಿರುಗಳು ಕೇಳಿಸುತ್ತವೆ. ಕಂಬನಿಗಳ ಆರ್ದ್ರತೆ ಅನುಭವಿಸುತ್ತಾರೆ. ಅವರೆದೆಯ ಗಾಯಗಳ ಭೀಕರತೆ ಅರ್ಥವಾಗುತ್ತದೆ" ಎನಿಸಿತು.

ಈ ಪ್ರಕರಣಗಳನ್ನು ನೆನೆಸಿಕೊಂಡು ತೀರಾ ತೀರಾ ಭಾವುಕಳಾಗುತ್ತಿದ್ದೆ. ಇಂಥ ಭಾವುಕತೆಯಲ್ಲಿ ಕೆಲಸ ಮಾಡುವುದು ಸಾಧ್ಯವಾಗದೆ ಸೋಲುತ್ತೇನೆ ಎಂಬ ಭಯ ಕಾಡುತ್ತಿತ್ತು. ರಾಜಿನಾಮೆ ಕೊಟ್ಟು ಓಡಿಬಿಡಲೇ ಎಂದು ಯೋಚಿಸಿದೆ... ಆದರೆ ದಿಢೀರನೆ ನಿರ್ಧಾರ ಬೇಡವೆನಿಸಿತು. ಇಂತಹ ಸಂದಿಗ್ಧ ಮನಃಸ್ಥಿತಿಯಲ್ಲಿ ನನಗೆ ಬಲವಾಗಿ ನಿಂತವರು IGP ರಾಕೇಶ್ ಅವರು! ಅವರೂ ಕವಿಯಾಗಿ, ವಿಮರ್ಶಕರಾಗಿ, ಪೋಲೀಸ್ ಇಲಾಖೆಯಲ್ಲಿದ್ದರೂ, ಇಲಾಖೆಯಲ್ಲಿ ಮತ್ತು ಸಾಹಿತ್ಯ ವಲಯದಲ್ಲಿ ಸಾಕಷ್ಟು ಹೆಸರಾಗಿದ್ದರು. ಸೃಜನಶೀಲ ಲೇಖಕರಾಗಿರುವುದರ ಜೊತೆಗೆ ಸಂಸ್ಕೃತ ಕನ್ನಡ ಸಾಹಿತ್ಯವನ್ನು ಬಲ್ಲವರಾಗಿದ್ದರು. ಸಾಹಿತ್ಯ ಸಭೆಗಳಲ್ಲಿ ಅದ್ಭುತವಾಗಿ ಮಾತನಾಡುತ್ತಿದ್ದರು.

ನನ್ನ ಸಂಕಲನವನ್ನು ಹಿಂಜರಿಕೆಯಿಂದಲೇ ಅವರಿಗೆ ತೋರಿಸಿದೆ. ಸಂತೋಷದಿಂದಲೇ ಅದನ್ನು ಮನೆಗೆ ತೆಗೆದುಕೊಂಡು ಹೋಗಿ ನಿಧಾನವಾಗಿ ಓದಿ ವಾರದ ನಂತರ, ತಮ್ಮ ಛೇಂಬರಿಗೆ ನನ್ನನ್ನು ಕರೆಸಿಕೊಂಡು, ಎಷ್ಟೋ ವರ್ಷಗಳ ಆತ್ಮೀಯ ಗೆಳೆಯನಂತೆ, ಸ್ವಾಗತಿಸಿ, ಕೂರಿಸಿ ಮಾತನಾಡಿದರು. ನಮ್ಮ ಅಂತರ ಮರೆತು – "Wonderful! excellent! ಭವಾನಿ, ನಿಮ್ಮಲ್ಲಿ ಇಂತಹ ಸೃಜನಶೀಲತೆಯಿರ ಬಹುದೆಂದು ಊಹಿಸುವುದಕ್ಕೂ ಸಾಧ್ಯವಿರಲಿಲ್ಲ. ಈ ಕೃತಿ ಸಮಾಜದ, ಇಲಾಖೆಯ ಕಣ್ಣು ತೆರೆಸುತ್ತೆ. ಪ್ರಕರಣಗಳನ್ನು ನಿರ್ವಹಿಸಬಹುದಾದ ಹೊಸ ಕಾರ್ಯಶೈಲಿಯ ಪರಿಚಯವಾಗುತ್ತದೆ" ಎಂದು ಹೊಗಳಿದಾಗ ನಾನು ಭೂಮಿಗೆ ಇಳಿದು ಹೋದೆ. ತುಂಬಾ ಸಂಕೋಚವೆನಿಸಿತು. ನನಗೆ ಥಟ್ಟನೆ ಏನು ಹೇಳಬೇಕೋ ತಿಳಿಯಲಿಲ್ಲ. ಮೌನವಾಗಿದ್ದೆ. ಅವರೇ ಮುಂದುವರೆಸಿದರು. "ಭವಾನಿ ಈ ಕೃತಿಯ ಬಗ್ಗೆ ಏನು ಯೋಚಿಸಿದ್ದೀರಿ? ಪ್ರಕಟಿಸುವ ವಿಚಾರವೇನಾದರೂ ಇದೆಯೇ?" ಎಂದರು.

ತಡವರಿಸುತ್ತಲೇ ಹೇಳಿದೆ– "ಸಾರ್, ನಾನು ಲೇಖಕಿಯಲ್ಲ ಪ್ರಾಮಾಣಿಕವಾಗಿ ನನಗೆ ಹೊಳೆದದ್ದನ್ನು ವಾಸ್ತವಗಳ ಸುತ್ತ ಹೆಣೆದಿದ್ದೇನೆ ಅಷ್ಟೆ! ನನಗೆ ಯಾವ ಪ್ರಕಾಶಕರ ಪರಿಚಯವೂ ಇಲ್ಲ. ಸುಮ್ಮನೆ ನನ್ನ ಆತ್ಮ ಸಂತೋಷಕ್ಕೆ ನಾನು ಬರೆದಿದ್ದೇನೆ"– ಎಂದೆ.

"ಇಲ್ಲ ಭವಾನಿ. ಇದು ಹೀಗೇ ಉಳಿಯಬಾರದು. ನಮಗಷ್ಟೇ ಅಲ್ಲ, ಹೊರಗಿನ ಜನಕ್ಕೂ ತಿಳಿಯಬೇಕು. ಪೋಲೀಸರಲ್ಲೂ ಲೇಖಕರಿದ್ದಾರೆ; ಸೃಜನಶೀಲ, ಸಂವೇದನಾಶೀಲ ಮನಸ್ಸುಗಳು ಇವೆಯೆಂಬುದು ಲೋಕಕ್ಕೆ ತಿಳಿಯಬೇಕು. ಅವಕ್ಕಾಗಿ

ನಾನು 'ತರಂಗ' ಪತ್ರಿಕೆಯ ಸಂಪಾದಕರೊಂದಿಗೆ ಮತನಾಡಿ ಧಾರಾವಾಹಿಯಾಗಿ ಒಂದೊಂದೇ ಕತೆ ಬರುವಂತೆ ಮಾಡುತ್ತೇನೆ. ನಂತರ ಅದನ್ನು ಪುಸ್ತಕವಾಗಿ ತರೋಣ. ಆ ಜವಾಬ್ದಾರಿ ನಂದು"– ಎಂದಾಗ ನನ್ನ ಕಿವಿಗಳನ್ನೇ ನಾನು ನಂಬದೆ ಹೋದೆ. ನನ್ನೊಳಗೇ ನಾನು ಖುಷಿ ಪಟ್ಟೆ. ಬೇಡದ ವೃತ್ತಿಗೆ ಬಂದು ಸೇರಿಕೊಂಡು, ಬಿಡಲೇ ಬಾರದೆಂಬ ಬಯಕೆಗೆ ಅಂಟಿಕೊಳ್ಳುವಂತಾದದ್ದು ನನಗೇ ಸೋಜಿಗವೆನಿಸಿತು. ಧನ್ಯತೆಯ ಭಾವದೊಂದಿಗೆ ಎದ್ದು ನಿಲ್ಲುತ್ತ, "ಸಾರ್ ನಿಮಗೆ ನಾನು ಹೇಗೆ ಕೃತಜ್ಞತೆ ಸಲ್ಲಿಸಬೇಕೋ ತಿಳಿಯುತ್ತಿಲ್ಲ. ಸಾರ್ ಇನ್ನು ಮುಂದೆ ಇದು ನನ್ನದಲ್ಲ. ನಿಮಗೇ ಇದು 'ಅರ್ಪಣೆ' ಏನಾದರೂ ಮಾಡಿ." ಎಂದು ಕೃತಜ್ಞತೆ ಹೇಳಿ ಹೊರ ಬಂದೆ.

ಎಷ್ಟೋ ದಿನ ಹುಚ್ಚು ಸಂಭ್ರಮದಲ್ಲಿದ್ದೆ. ನನ್ನೊಳಗಿನ ಕತೆಗಾರ್ತಿಯನ್ನು ಬಡಿದೆಬ್ಬಿಸಿದ ಈ ವೃತ್ತಿಗೆ ಮತ್ತೆ ಮತ್ತೆ ಕೃತಜ್ಞತೆ ಸಲ್ಲಿಸಿದೆ.

ರಾಕೇಶ್ ಅವರು ಮಾತು ಕೊಟ್ಟಂತೆ ನೂರು ಕಂತುಗಳಲ್ಲಿ ಕತೆಗಳು ಪ್ರಕಟವಾದವು. ನೂರನೇ ಕಂತಿನ ಸಂಭ್ರಮವನ್ನು ನನ್ನ ಸಹೋದ್ಯೋಗಿಗಳೊಂದಿಗೆ ಹಂಚಿಕೊಂಡೆ. ಆರು ತಿಂಗಳ ನಂತರ ಪ್ರಕಾಶಕರೊಬ್ಬರು ನನ್ನ ಠಾಣೆಗೆ ಬಂದು ಅದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲು ಅನುಮತಿ ಕೋರಿದರು. ಅವರಿಗೆ ನಾನು ರಾಕೇಶ್‌ರನ್ನು ಕಾಣಲು ಹೇಳಿದೆ. ಅಂತೆಯೇ ಅವರನ್ನು ಕಂಡು ಅವರ ಒಪ್ಪಿಗೆ ಪಡೆದರು.

ಪುಸ್ತಕ ಪ್ರಕಟವಾಗಿ ಬಂದದ್ದೇ, ರಾಕೇಶ್‌ರವರೇ ಅದ್ದೂರಿ, ಬಿಡುಗಡೆ ಸಮಾರಂಭವನ್ನು ಯೋಜಿಸಿದರು. ನನಗೆ ಸಲ್ಲಬೇಕಾದ್ದಕ್ಕಿಂತ ನೂರುಪಟ್ಟು ಗೌರವವನ್ನು ದೊರಕಿಸಿಕೊಟ್ಟರು. ರಾಕೇಶರೇ ಪುಸ್ತಕ ಕುರಿತು ಮತ್ತು ನನ್ನ ಪ್ರತಿಭೆ, ಸಾಮರ್ಥ್ಯ ಕುರಿತು ಮೆಚ್ಚುಗೆಯ ಮಾತಾಡಿದರು. ಸಮಾರಂಭ ಮಾಧ್ಯಮಗಳಲ್ಲಿ ಪ್ರಸಾರವಾಯಿತು. ಪತ್ರಿಕೆಗಳೂ ಈ ಕೃತಿಯನ್ನು ಅದ್ಭುತವಾದ ಅಮೋಘವಾದ ದಾಖಲಾರ್ಹ ಕೃತಿಯೆಂದು ಬಣ್ಣಿಸಿ ಬರೆದವು.

ಇದು ನನ್ನ ವೈಯಕ್ತಿಕ ಸಾಧನೆಯಾಯಿತು. ಆದರೆ 'ಸಾರ್ವಜನಿಕರು ಮತ್ತು ಪೋಲೀಸರ' ಮಧ್ಯೆ ಒಂದು ಸ್ನೇಹ. ಸೌಹಾರ್ದಯುತ ಸಂಬಂಧದ ಕಲ್ಪನೆ ಸಾಕ್ಷಾತ್ಕಾರಗೊಳ್ಳುವುದು ಹೇಗೆ? ಯಾವಾಗ?– ಈ ಪ್ರಶ್ನೆಗಳು ನನ್ನನ್ನು ಕಾಡುತ್ತಲೇ ಇದ್ದವು. ಮಕ್ಕಳ ಮತ್ತು ಮಹಿಳೆಯರ ಸಮಸ್ಯೆಗಳ ಪರಿಹಾರಕ್ಕೆ ಏನಾದರೂ ಒಂದು ವ್ಯವಸ್ಥೆಯಾಗಬೇಕು. ಪೋಲೀಸರಲ್ಲಿ ಈ ಸಂಬಂಧ ಒಂದು ಜಾಗೃತಿ ಪ್ರಜ್ಞೆ ಮೂಡಿಸುವ ಕೆಲಸವಾಗಬೇಕು. ಆದರೆ ನನಗೆ ನನ್ನ ಈ ಆಲೋಚನೆಗಳನ್ನು ಕಾರ್ಯರೂಪಕ್ಕೆ ತರುವಷ್ಟು ಅಧಿಕಾರವಿಲ್ಲ. ಹಾಗೆಂದು ಸುಮ್ಮನೆ ಕುಳಿತುಕೊಳ್ಳಲೂ ಸಾಧ್ಯವಿಲ್ಲ. ನನ್ನ ಮೇಲಧಿಕಾರಿಗಳನ್ನು ಹೇಗಾದರೂ ಭೇಟಿ ಮಾಡಿ ಈ ನಿಟ್ಟಿನಲ್ಲಿ ಏನಾದರೂ ಬದಲಾಯಿಸುವಂತೆ ಮಾಡಬೇಕೆಂದು ತೀರ್ಮಾನಿಸಿದೆ.

ಪೋಲೀಸ್ ವೃತ್ತಿ, ಪೊಲೀಸ್ ಚಿಂತನೆ, ಅಪರಾಧಗಳು, ಅಪರಾಧಿಗಳು, ಪೋಲೀಸ್ ಠಾಣೆಗಳು, ಜೈಲುಗಳು– ಇವೇ ನನ್ನ ಅಸ್ತಿತ್ವದ ಭಾಗವೆನ್ನುವಂತೆ ಆಗಿ ಬಿಟ್ಟಿದ್ದವು. ಕುಳಿತರಷ್ಟೇ ಸಾಕು, ಅವೇ ನನ್ನ ಕಣ್ಮುಂದೆ ಪರಿಭ್ರಮಿಸುತ್ತಿದ್ದವು. ಹಗಲೂ ರಾತ್ರಿ ನನ್ನ ಪ್ರಬಂಧಕ್ಕೆ ಬೇಕಾದ ಮಾಹಿತಿಗಳನ್ನು, ಸಂದರ್ಶನಗಳನ್ನು ವಿಶೇಷ ಪರವಾನಗಿ ಪಡದು ಪೂರೈಸಿಕೊಳ್ಳುತ್ತಿದ್ದೆ. ಹತ್ತಾರು ವರ್ಷಗಳ ದುಡಿಮೆ ಎಲ್ಲ ಮುಗಿದಿತ್ತು. ನಿವೃತ್ತಿಗೆ ಮೊದಲು ಅದನ್ನು ಪೂರೈಸಿ ವಿಶ್ವವಿದ್ಯಾಲಯಕ್ಕೆ ಒಪ್ಪಿಸಬೇಕೆಂದಿದ್ದೆ. ಇದನ್ನು ನಾನು ಡಿಗ್ರಿಯ ಆಸೆಗಾಗಿ ಮಾಡಿದ್ದಲ್ಲ. ನನ್ನ ಸ್ವಂತ ಅಧ್ಯಯನಕ್ಕೆಂದು ಈ ವಿಷಯವನ್ನಾರಿಸಿಕೊಂಡು ನನ್ನ ಅನುಭವಗಳ ಬುನಾದಿಯನ್ನು ಇದಕ್ಕೆ ನೀಡಿದ್ದೇನೆ. ನನಗೆ ಸಂಪೂರ್ಣ ತೃಪ್ತಿಯಿದೆ." ಹೀಗೆಂದು ಏನೆಲ್ಲಾ ಯೋಚಿಸುತ್ತಾ ಇದ್ದ ಭವಾನಿ ಹಾಗೇ ನಿದ್ದೆಗೆ ಇಳಿದಿದ್ದಳು.

ಎಷ್ಟು ಹೊತ್ತು ನಿದ್ದೆ ಮಾಡಿದಳೋ ಅವಳಿಗೇ ತಿಳಿಯಲಿಲ್ಲ. ಬಾಗಿಲು ಬಡಿದ ಸದ್ದಿಗೆ ಬೆಚ್ಚಿ ಬಿದ್ದು ಕಣ್ತೆರೆದಳು. ಸಂಜೆಯಾಗುವುದರಲ್ಲಿತ್ತು. ಅಬ್ಬಾ ಎಷ್ಟು ಹೊತ್ತು ನಿದ್ದೆ ಮಾಡಿಬಿಟ್ಟೆ!– ಎಂದು ಒಂದು ನಿಟ್ಟುಸಿರೆಳೆದಳು. ಮತ್ತೆ ಬಾಗಿಲು ತಟ್ಟಿದ ಸದ್ದು ಕೇಳಿಸಿ, ಎದ್ದು ಹೋಗಿ ಬಾಗಿಲು ತೆರೆದಳು. ರಮಾಕಾಂತ ನಿಂತಿದ್ದ. ಒಂದು ಸಲ್ಯೂಟ್ ಹೊಡೆದು, 'ಮೇಡಂ, ರಾಕೇಶ್ ಸಾಹೇಬರು ತಮ್ಮನ್ನು ನಾಳೆ ಬೆಳಿಗ್ಗೆ ೧೦.೩೦ ಕ್ಕೆ ತಮ್ಮ ಛೇಂಬರ್‌ಗೆ ಬರಲು ಹೇಳಿದ್ದಾರೆ. ತಾವು ರಜೆ ಹಾಕಿರುವುದು ಗೊತ್ತಿದೆಯಂತೆ. ಆದರೂ ಸ್ವಲ್ಪ ಹೊತ್ತು ಬಂದು ಹೋಗಬೇಕೆಂದು ಹೇಳಿದ್ದಾರೆ"– ಎಂದ.

ಪ್ರಬಂಧ ಬರೆದು ಮುಗಿಸಬೇಕೆಂದು ರಜೆ ಹಾಕಿದ್ದೆ. ಆದರೂ ರಾಕೇಶ್ ಅವರು ಅಷ್ಟು ಅರ್ಜೆಂಟಾಗಿ ಯಾಕೆ ಬರಹೇಳಿದ್ದಾರೆ ಎನ್ನುವುದನ್ನು ಅವಳಿಗೆ ಊಹಿಸಲಾಗಲಿಲ್ಲ. ಆದರೂ ಮಾರನೇ ದಿನ ತನ್ನ ಗರಿಗರಿಯಾದ ಯೂನಿಫಾರಂ ತೊಟ್ಟು ಅವರನ್ನು ಕಾಣಲು ಹೋದಳು.

ರಾಕೇಶ್ ಇವಳ ಹಾದಿಯನ್ನೇ ಕಾಯುತ್ತಿದ್ದರು. ಒಳಗೆ ಹೋಗಿ ಸಲ್ಯೂಟ್ ಮಾಡಿ ನಿಂತಳು. ರಾಕೇಶ್ ನಕ್ಕು, "ಭವಾನಿ ನಿನ್ನ ಕ್ಯಾಪ್ ತೆಗೆದು ಕುರ್ಚಿಯಲ್ಲಿ ಕುಳಿತುಕೋ. ನಿನಗೊಂದು good news ಹೇಳಬೇಕಾಗಿದೆ" ಎಂದರು.

"ಏನಿದೆ ಅಂಥಾ good news Sir? ಹೇಗಿದ್ದರೂ ಮುಂದಿನ ವರ್ಷ ಈ ಲೋಕಕ್ಕೆ ಅಪರಿಚಿತಳಾಗುತ್ತೇನೆ"– ಸ್ವಲ್ಪ ವ್ಯಥೆಯಿಂದ ಹೇಳಿದಳು.

"ಎರಡು ವಿಷಯ ನಿನಗೆ ಹೇಳೋದಿದೆ. ಎರಡೂ ನಿನಗೆ ಪ್ರಿಯವಾಗುತ್ತವೆ. ಮೊದಲನೆಯದು, ನಿನಗೆ ಕಂಗ್ರಾಟ್ಸ್! ಪೋಲೀಸ್ ಪದಕವನ್ನು ಗೆದ್ದಿರುವೆ. ನಿನ್ನ ಕಾರ್ಯನಿಷ್ಠೆ, ಕಾರ್ಯವೈಖರಿಯನ್ನು ಗುರುತಿಸಿ ಮುಂದಿನ ಜನವರಿ 26 ರಂದು ನಿನಗೆ ಆ ಪದಕ ಗೌರವ ಘೋಷಣೆಯಾಗಿದೆ. ಎರಡನೆಯದಾಗಿ ಮಹಿಳೆಯರು

ಮತ್ತು ಮಕ್ಕಳ ಸಮಸ್ಯೆಗಳ ಪರಿಹಾರ ಹೇಗೆಂದು ನೀನು ಯೋಚಿಸುತ್ತಿದ್ದೆಯಲ್ಲ, ಈಗ 'ಜನಸ್ನೇಹಿ ಪೋಲೀಸ್' ಎಂಬ ಯೋಜನೆಯೊಂದು ಮುಂಚೂಣಿಗೆ ಬಂದಿದೆ. ನಿನ್ನದೇ ರೀತಿಯಲ್ಲಿ ಯೋಚಿಸುವ ಪೋಲೀಸ್ ಅಧಿಕಾರಿ ವರ್ಗ ಯುನಿಸೆಫ್‌ನೊಂದಿಗೆ ಒಂದು ಯೋಜನೆಯನ್ನು ರೂಪಿಸಿದ್ದಾರೆ. ಕರ್ನಾಟಕ ರಾಜ್ಯ ಪೋಲೀಸ್ ಮತ್ತು ಯುನಿಸೆಫ್ ಸಂಯುಕ್ತವಾಗಿ "GSPP Project" (The Gender Sensitisation and People friendly Police project) ಅನ್ನೋ ಹೆಸರಿನಲ್ಲಿ ಪೋಲೀಸ್ ಮತ್ತು ಸಾರ್ವಜನಿಕರ ನಡುವೆ ಒಂದು ಸೌಹಾರ್ದಯುತ ಸಂಬಂಧವನ್ನು ಹುಟ್ಟು ಹಾಕುವ ಆಶಯವನ್ನು ಹೊಂದಿದೆ. ಸಮಾಜದ ಸೃಜನಶೀಲ ಮನಸ್ಸಿನ ಒಂದಷ್ಟು ಮಂದಿ ಬರಹಗಾರರು ಪೊಲೀಸ್ ಪ್ರತಿನಿಧಿಗಳ ಜೊತೆ ಸಂವಾದದ ಮೂಲಕ ಈ ಪೊಲೀಸ್ ವ್ಯವಸ್ಥೆಯ ಮಾನವೀಯ ಮುಖ ದರ್ಶನ, ಪೋಲೀಸರ ಸಮಸ್ಯೆಗಳು, ಅವರ ಮೇಲೆ ಬೀಳುವ ಮಾನಸಿಕ ಒತ್ತಡಗಳು, ವೃತ್ತಿಧರ್ಮದಲ್ಲಿನ ಕೆಲವು ನಿರ್ಬಂಧಗಳು ಅರ್ಥವಾಗಿ, ಅವು ಸಾರ್ವಜನಿಕರನ್ನು ತಲುಪಬಹುದು ಎನ್ನುವ ನಂಬಿಕೆಯ ಪ್ರಯತ್ನ, ಪ್ರಯೋಗ. ಅವರು ಭ್ರಷ್ಟರಲ್ಲ; ಕ್ರೂರಿಗಳಲ್ಲ; ಅಮಾನುಷರಲ್ಲ, ಅವರಲ್ಲಿಯೂ ಕರ್ತವ್ಯ ನಿಷ್ಠೆ, ಪ್ರಮಾಣಿಕತೆ, ಔದಾರ್ಯ, ಸಹಾನುಭೂತಿ, ಪ್ರೀತಿ ಸ್ನೇಹ ಇತ್ಯಾದಿ ಭಾವನಾತ್ಮಕ, ಮಾನವೀಯ ಗುಣಗಳು ಇವೆ ಎನ್ನುವುದನ್ನು ಪ್ರತ್ಯಕ್ಷವಾಗಿ ಕಂಡು ಲೋಕಕ್ಕೆ ತಲುಪಿಸುತ್ತಾರೆ ಎನ್ನುವ ಉದ್ದೇಶದಿಂದ ಒಂದು ಕಮ್ಮಟವನ್ನು ಏರ್ಪಡಿಸಲಿದ್ದಾರೆ. ನೀನು ಅದರಲ್ಲಿ ಭಾಗವಹಿಸಿ, ನಿನ್ನ ಇಷ್ಟು ದೀರ್ಘಕಾಲದ ಅನುಭವಗಳನ್ನು, ನೀನು ಮಾನವೀಯ ನೆಲೆಯಿಂದ ಪ್ರಕರಣಗಳನ್ನು ನಿರ್ವಹಿಸಿದ್ದು, ಮತ್ತು ನಿನ್ನ ಕೃತಿಯ ಹಿಂದಿನ ಸ್ಫೂರ್ತಿಯನ್ನು ವಿವರಿಸಿ ಹೇಳು. ಭವಾನಿ 'ಜನಸ್ನೇಹಿ ಪೊಲೀಸ್' ಪರಿಕಲ್ಪನೆಯೇ ಅದ್ಭುತವಾಗಿದೆಯಲ್ಲವೇ? ನೋಡು ನೀನೆಷ್ಟು ಅದೃಷ್ಟವಂತೆ! ಬಹುಮಾನವನ್ನೂ ಗಿಟ್ಟಿಸಿದೆ! ಕನಸನ್ನೂ ಸಾಕ್ಷಾತ್ಕಾರ ಮಾಡಿಕೊಂಡೆ.

ಮಹಿಳೆ ಮತ್ತು ಮಕ್ಕಳ ಸಮಸ್ಯೆಗಳ ಬಗ್ಗೆ ಪೊಲೀಸ್ ಸಮುದಾಯದಲ್ಲಿ ಜಾಗೃತಿ, ಅರಿವು ಮೂಡಿಸುವ ಒಂದು ಪ್ರಮುಖ ಉದ್ದೇಶವನ್ನು ಹಿನ್ನೆಲೆಯಲ್ಲಿರಿಸಿಕೊಂಡ ಯೋಜನೆ ಇದಾಗಿರುವುದರಿಂದ, ಈ ಯೋಜನೆಯಡಿಯಲ್ಲಿ ಅನೇಕ ಮಂದಿ ಪೊಲೀಸರಿಗೆ ತರಬೇತಿ ನೀಡಿ ನಮ್ಮ ರಾಜ್ಯದ ಹಿಂದುಳಿದ ಪ್ರದೇಶಗಳಿಗೆ ಕಳಿಸಿ ಅಲ್ಲಿರುವವರಲ್ಲಿಯೂ ಜನಸ್ನೇಹಿ ಮನೋಭಾವದೊಂದಿಗೆ ಸಾರ್ವಜನಿಕರೊಂದಿಗೆ ಅದರಲ್ಲೂ ವಿಶೇಷವಾಗಿ ಮಹಿಳೆ ಮತ್ತು ಮಕ್ಕಳೊಂದಿಗೆ ನಡೆದುಕೊಳ್ಳುವಂತೆ ಮಾಡುವುದಾಗಿದೆ. ಅಲ್ಲಿರುವ ಪೊಲೀಸ್ ಠಾಣೆಗಳು ಸ್ನೇಹ ಕೇಂದ್ರಗಳಾಗಬೇಕು. ನಿರ್ಭಯವಾಗಿ ಜನತೆ ಪ್ರವೇಶಿಸಿ ದೂರುಗಳನ್ನು ನೀಡುವಂತಾಗಬೇಕು. ಪೊಲೀಸರು, ಪೊಲೀಸರಾಗದೆ, ಪ್ರೀತಿ, ಸ್ನೇಹ, ಸಹಾನುಭೂತಿ, ಸಮಾಧಾನ ಪ್ರವೃತ್ತಿಗಳಿಂದ ಜನಸ್ನೇಹಿಗಳಾಗಿ ರೂಪಾಂತರಗೊಳ್ಳಬೇಕೆಂಬುದೇ ಈ ಯೋಜನೆಯ ಮಹತ್ವಾಕಾಂಕ್ಷೆ" [illegible]

ಅಬ್ಬಾ! ಎಂಥ ಅದ್ಭುತವಾದ ಯೋಜನೆ. ಈ ಯೋಜನೆಯ ಆಶಯ ಸತ್ಯವಾದರೆ, ಹೆಣ್ಣುಮಕ್ಕಳ, ಮಕ್ಕಳ ಮೇಲಿನ ದೌರ್ಜನ್ಯವೇ ಇಲ್ಲದಾಗುತ್ತದೆ. ಕಣ್ಣೀರಿನ ಕತೆಗಳು ನಿಲ್ಲುತ್ತವೆ. ಮಹಿಳೆಯ ಸುಖ, ಶಾಂತಿಯಿಂದ ಸ್ವತಂತ್ರರಾಗಿ, ಸ್ವಾವಲಂಬಿಗಳಾಗಿ ಬದುಕುತ್ತಾರೆ. ಹಾಗಾದಾಗ ನಮ್ಮ ದೇಶ ರಾವಣ ಮುಕ್ತ ರಾಮರಾಜ್ಯವಾಗುವುದಿಲ್ಲವೆ!! ಕನಸಿನಿಂದ ಆಚೆ ಬಂದು ಹೇಳಿದಳು. "ಸಾರ್ ಖಂಡಿತವಾಗಿ ನಾನೂ ಈ ಯೋಜನೆಯಲ್ಲಿ ಭಾಗವಹಿಸುತ್ತೇನೆ. ಇನ್ನೆರಡು ದಿನಗಳಲ್ಲಿ ಡ್ಯೂಟಿಗೆ ಬರುತ್ತೇನೆ. ಸಾರ್ ನೀವು ನನ್ನನ್ನು ಅಭಿಮಾನಿಸಿ ಪ್ರೋತ್ಸಾಹಿಸುತ್ತಿರುವ ರೀತಿಯೇ 'ಜನಸ್ನೇಹಿ ಪೊಲೀಸ್' ಕಲ್ಪನೆಯ ಸಾಕ್ಷಾತ್ಕಾರವೆನಿಸಿದೆ. ಬರುತ್ತೇನೆ ಸಾರ್"– ಎಂದು ಹೇಳಿ ಕುರ್ಚಿಯಿಂದೆದ್ದು ಮನೆ ಕಡೆ ನಡೆದಳು.

* * *

ಭವಾನಿ, ದಿ ಗ್ರೇಟ್ ಭವಾನಿ ಎನಿಸಿಕೊಂಡಳು. ಈ ದಿನ ಅವಳು ನಿವೃತ್ತಿಯಾಗುತ್ತಿದ್ದಾಳೆ. ಅದ್ದೂರಿಯ ಬೀಳ್ಕೊಡುಗೆ ಸಮಾರಂಭ. ಪೊಲೀಸ್ ವರಿಷ್ಠರು, ಅಧಿಕಾರಿಗಳು ಇಲಾಖೆಯ ಎಲ್ಲ ಪೋಲೀಸ್ ಸಮುದಾಯ, ಮುಖ್ಯಮಂತ್ರಿಗಳಿಂದ ಹಿಡಿದು ಅನೇಕ ರಾಜಕಾರಣಿಗಳು, ಭವಾನಿಯಿಂದ ಉಪಕೃತರಾದ, ಜನಸಾಮಾನ್ಯರು ಕಿಕ್ಕಿರಿದು ತುಂಬಿದ್ದಾರೆ. ಟೌನ್‌ಹಾಲ್‌ನಲ್ಲಿ ಹೆಜ್ಜೆಯೂರಲು ಜಾಗವಿಲ್ಲ.

ಅತಿಥಿಗಳು ಭವಾನಿಯ ಬದುಕು, ಕಾರ್ಯದಕ್ಷತೆ, ಪ್ರತಿಭೆ, ಸೃಜನಶೀಲತೆ ಎಲ್ಲಕ್ಕಿಂತ ಸಾರ್ವಜನಿಕರ ಮತ್ತು ಪೋಲೀಸರ ಸಂಬಂಧಗಳ ಬಗ್ಗೆ ಅವಳು ನಡೆಸುತ್ತಿದ್ದ ಚಿಂತನೆಗಳನ್ನು ಕುರಿತು ಮೆಚ್ಚುಗೆಯ ಮಾತನಾಡಿದಾಗ ಜನಸಂದೋಹ ಕಿವಿಗಡಚಿಕ್ಕುವಂತೆ ಚಪ್ಪಾಳೆ ತಟ್ಟಿದರು. ಸಮಾರಂಭ ದೂರದರ್ಶನದಲ್ಲಿ ಪ್ರಸಾರವಾಯಿತು.

ಅಪ್ಪನ ಅನಾರೋಗ್ಯದಿಂದ ಭವಾನಿಯ ತಾಯಿಯೂ ಕಾರ್ಯಕ್ರಮಕ್ಕೆ ಬರಲಿಲ್ಲ. ಆದರೆ ದೂರದರ್ಶನದಲ್ಲಿ ಮಗಳ ಸಮಾರಂಭ ವೀಕ್ಷಿಸಿದ ಅಪ್ಪ, ಹೆಂಡತಿಯ ಕಡೆ ಹೆಮ್ಮೆಯ ನೋಟ ಬೀರಿದ. ಅವಳು ಗಂಡನ ಇಂಗಿತ ಅರ್ಥ ಮಾಡಿಕೊಂಡು ಮೆದುವಾಗಿ ನಕ್ಕಳು.

* * *

ಉಷಾ ಅನಿರುದ್ಧರ ಸ್ವಪ್ನ ಸಮಾಗಮ

ಬಾಣಾಸುರನ ಪುತ್ರಿ ಇಂದು ಎಂದಿಲ್ಲದ ಉತ್ಸಾಹ ಸಂಭ್ರಮಗಳಿಂದ ಸಜ್ಜುಗೊಳ್ಳುತ್ತಿದ್ದಾಳೆ. ಅಪ್ಪನ ಆಣತಿಯನ್ನು ಪಡೆದು ಶಿವ–ಪಾರ್ವತಿಯರ ದರುಶನಕ್ಕೆ ಹೊರಟು ನಿಂತಿದ್ದಾಳೆ. ಸಖಿಯರೋ ಅವಳನ್ನು ಅಗರು, ಕುಂಕುಮ, ಪಚ್ಚೆ, ಕಪ್ಪುರ, ಪನ್ನೀರು, ಮೃಗನಾಭಿ ಸಾದು, ಕುಂಕುಮಗಳಿಂದ, ಕಣ್ಣು ಕುಕ್ಕುವ ವಸ್ತ್ರಾಭರಣಗಳಿಂದ ಅಲಂಕರಿಸಿ, ಸಹಜವಾದ ಅವಳ ಅದ್ಭುತ ಸೌಂದರ್ಯಕ್ಕೆ ಮತ್ತಷ್ಟು ಮೆರುಗನ್ನಿತ್ತಿದ್ದಾರೆ. ಕಾಮನನ್ನೇ ಕಂಗೆಡಿಸುವ ರತಿರೂಪಕ್ಕಿಂತ ಮಿಗಿಲಾದ ಸೌಂದರ್ಯಕ್ಕೆ ಅಧಿಕಾರಿಣಿಯಾದ ಉಷೆ, ತನ್ನೆಲ್ಲ ಪರಿವಾರದೊಂದಿಗೆ ಶಿವಾಲಯಕ್ಕೆ ಹೊರಟಾಗ, ಹಾದಿ ಬೀದಿಯ ಜನವೆಲ್ಲ ನಿಬ್ಬೆರಗಾಗಿ ನಿಂತು ಈ ಮಾನಿನಿ ಸಂದೋಹದ ಸೌಂದರ್ಯವನ್ನು ಆಸ್ವಾದಿಸುತ್ತಿದ್ದಾರೆ. ಕೆಲವರಂತು ಉಪ್ಪರಿಗೆ ಮಾಡಗಳಲ್ಲಿ ನಿಂತು, ಮತ್ತೆ ಕೆಲವರು ಕಿಟಕಿಗಳೊಳಗಿಂದ ಇಣುಕಿ ಇಣುಕಿ ನೋಡುತ್ತಿದ್ದಾರೆ. ರಾಜಲಾಂಛನಗಳಿಂದ ಆವೃತಳಾಗಿ, ಚೆಲ್ಲೆಗಣ್ಣ, ನಿಡಿಗಣ್ಣ, ಹುಲ್ಲೆಗಣ್ಣ, ಎಸಳ್ಗಣ್ಣ ಲಲ್ಲೆನೋಟದ, ನಗೆಗಣ್ಣಿನ ರೂಪಲಾವಣ್ಯಾತಿಶಯಗಳಿಂದ ನೋಡುವವರ ಕಣ್ಮನಗಳನ್ನು ಸೆಳೆವ ಸಖೀ ವೃಂದದವರೊಡಗೂಡಿ ಬರುತ್ತಿರುವ ಉಷೆಯ ಅನುಪಮ, ಅಲೌಕಿಕ ಸೌಂದರ್ಯ ದರ್ಶನ ಮಾತ್ರದಿಂದ ಪಿಟ ಪುರುಷರು ಮೂರ್ಛೆಗೆ ಸಲ್ಲುತ್ತಿದ್ದಾರೆ.

ಎಲ್ಲರ ಕಣ್ಮನಗಳನ್ನು ತಣಿಸುತ್ತ, ರಾಜಬೀದಿಯಲ್ಲಿ ಹಂಸನಡಿಗೆಯಲ್ಲಿ ನಡೆಯುತ್ತ ಶಿವಾಲಯವನ್ನು ತಲುಪಿ ಪೂಜೆ, ಅಭಿಷೇಕ, ಪ್ರಾರ್ಥನೆಗಳನ್ನು ಸಲ್ಲಿಸಿರಲು, ಉಷೆಯ ಭಕ್ತಿ ಶ್ರದ್ಧೆಗೆ ಒಲಿದ ಶಿವ ಪಾರ್ವತಿಯರು ಆಕೆಗೆ ಏನಾದರೂ ವರವ ನೀಡಬೇಕೆಂದು ಮನದಲ್ಲಿ ಯೋಚಿಸುತ್ತಾರೆ. ಪ್ರೀತಿ, ವಾತ್ಸಲ್ಯಗಳಿಂದ ಮಾತನಾಡಿಸಿ, ಅವಳ ಅಂತರ್ಯದ ಬಯಕೆಯಂತೆಯೇ ವರವ ನೀಡಬೇಕೆಂದುಕೊಂಡು, ದಿವ್ಯದೃಷ್ಟಿಯ ಮೂಲಕ ಅವಳಿಗೆ ಪುರುಷಾಪೇಕ್ಷೆ ಇದೆಯೆಂದರಿತು, "ಮಗಳೆ ನಿನ್ನ ಮನದಾಸೆ ನಮಗೆ ಅರ್ಥವಾಗಿದೆ. ನಾಳಿನ ವೈಶಾಖ ಶುದ್ಧ ದ್ವಾದಶಿಯ ರಾತ್ರಿ, ಕನಸಿನಲ್ಲಿ ನಿನಗೊಪ್ಪುವ ಮನ್ಮಥಸಮರೂಪದ [illegible] ಅದೃಷ್ಟ ಲಭಿಸಲಿದೆ. ಕನಸಿನಲ್ಲಿ ಕಂಡು ನಿನ್ನೊಡನೆ

ಸರಸ ಸಲ್ಲಾಪವಾಡಿದವನು ರತಿಕ್ರೀಡೆಗೆ ಸೆಳೆದವನೇ ನಿನ್ನ ಬಾಳಗೆಳೆಯನಾಗುವನು" ಎಂದಳು.

ಪಾರ್ವತಿಯ ಮಾತಿನಿಂದ ಹೃದಯ ತುಂಬಿ ಬಂತು. ಆಕೆಯ ಮಾತು ಎಂದಿಗೂ ಸುಳ್ಳಾಗದು ಎಂಬ ನಂಬಿಕೆ ತನಗಿದೆಯೆಂದು ಮುಕ್ತಕಂಠದಿಂದ ಕೊಂಡಾಡಿದ ಉಷೆಗೆ, ಪಾರ್ವತಿ ವಸ್ತ್ರಾಭರಣಗಳನ್ನು ಉಡುಗೊರೆಯಾಗಿ ಇತ್ತು ಕಳಿಸುತ್ತಾಳೆ.

ಪಾರ್ವತಿ ನುಡಿದ ಭವಿಷ್ಯ, ಕೊಟ್ಟ ಉಡುಗೊರೆಗಳನ್ನು ನೆಪಮಾಡಿಕೊಂಡು, ಉಷೆಯ ಆಪ್ತಸಖಿ ಚಿತ್ರಲೇಖೆ ಉಷೆಯನ್ನು ಕೀಟಲೆಯ ಮಾತುಗಳಿಂದ ಗೋಳಾಡಿಸುತ್ತಾಳೆ.

"ಒಡತಿ! ಗೆಳತಿ! ಅಬ್ಬಬ್ಬ ಎಷ್ಟು ಚೆಲುವೆಯೇ ನೀನು! ಕೈಲಾಸದಲ್ಲಿರುವ ದೇವತಾ ಸ್ತ್ರೀಯರು ಕೂಡ ನಿನ್ನ ಚೆಲುವಿಗೆ ಸಾಟಿಯಾಗರು!"

"ಸಖಿ, ಚಿತ್ರಲೇಖೆ, ಸುಮ್ಮನಿರು. ನನ್ನನ್ನೇಕೆ ಹೀಗೆ ಹೊಗಳುತ್ತಿರುವಿ? ಅವರಿಗೂ ನನಗೂ ಎಲ್ಲಿಗೆಲ್ಲಿಗೆ?"– ಎಂದಳು ನಸುಮುನಿಸಿನಿಂದ.

"ಸರಿಯಮ್ಮ ನನ್ನ ಮಾತಿನ ಮೇಲೆ ನಿನಗೆ ನಂಬಿಕೆ ಇಲ್ಲದಿದ್ದಲ್ಲಿ, ತಗೋ ಈ ರತ್ನಕನ್ನಡಿಯಲ್ಲಿ ನಿನ್ನ ಮುಖವನ್ನು ನೋಡಿಕೋ. ಆಗ ನಿನಗೇ ತಿಳಿಯುತ್ತದೆ" ಎಂದು ಕನ್ನಡಿಯನ್ನು ಅವಳ ಮುಖಕ್ಕೆ ಹಿಡಿದಳು.

ಕನ್ನಡಿಯಲ್ಲಿ ತನ್ನ ಮುಖದ ಬಿಂಬವನ್ನು ಕಂಡು ಕನ್ನಡಿಯೆಂಬ ಆಕಾಶದಲ್ಲಿನ ಚಂದ್ರನಂತಿರುವ ತನ್ನ ಮುಖ ಸೌಂದರ್ಯಕ್ಕೆ ತಾನೇ ಮುಗ್ಧಳಾಗಿ, ತನ್ನ ಬಗ್ಗೆ ತನಗೇ ಹೆಮ್ಮೆ ಎನಿಸಿದರೂ ಅದನ್ನು ತೋರಗೊಡದೆ, "ನಿರ್ಜರವಧೂಜನವೆಲ್ಲಿ, ನಾನೆಲ್ಲಿ?"– ಎಂದು ಒಂದು ನಿಟ್ಟುಸಿರಿಟ್ಟಳು. ಆದರೆ ಸಖಿ ಬಿಡಬೇಕಲ್ಲ!

"ಸಾಮಾನ್ಯ ಹೆಣ್ಣುಗಳು, ಸ್ವಲ್ಪ ಹೊಗಳಿದರೆ ಸಾಕು, ಹಿರಿ ಹಿರಿ ಹಿಗ್ಗಿ ಹೋಗುತ್ತಾರೆ. ಆದರೆ ನೀನು ಹಾಗಲ್ಲಮ್ಮ! ಮಗಳ ಸೌಂದರ್ಯಕ್ಕೆ ಮಾರುಹೋಗಿ ಮದುವೆಯಾದ ಬ್ರಹ್ಮ, ದೋಷಕ್ಕೆ ಗುರಿಯಾದುದನ್ನು ನೋಡಿ, ಚಂದ್ರ ನಿನ್ನ ಯವ್ವನದಲ್ಲಿ ದೃಷ್ಟಿ ನೆಟ್ಟು, ತೆಗೆಯಲಾಗದೆ, ಬಲವಂತದಿಂದ ದೃಷ್ಟಿ ಕಿತ್ತ. ನಿನ್ನನ್ನು ನೋಡಿದ್ದೇ ದೇವಪುರುಷರೆಲ್ಲರೂ ಕಾಮಬಾಣಕ್ಕೆ ಘಾಸಿಗೊಂಡರು. ಪುರುಷರು ಸ್ತ್ರೀಯರಿಗೆ ಮೋಹಿತರಾಗುವುದು ಸಹಜ, ಸ್ವಾಭಾವಿಕ. ಆದರೆ ಹೆಣ್ಣಿಗೆ ಹೆಂಗಳೆಯರೇ ಮಾರುಹೋಗುವಂತಾಗಿದೆ ನಿನ್ನ ವಿಷಯದಲ್ಲಿ!... ಅಂತಹ ನಿನ್ನನ್ನು ಒಲಿಯಲು ಒಲಿಸಲು ಬರುವ ಪುಣ್ಯಪುರುಷನ ಹಾದಿ ಕಾಯುತ್ತಿರು. ಆತುರ ಪಡಬೇಡ ವೈಶಾಖ ಶುದ್ಧ ದ್ವಾದಶಿಯ ರಾತ್ರಿಯವರೆಗೂ ನಿನ್ನ ಹೃದಯವ ತಡೆಹಿಡಿದು ಸಾಂತ್ವನಗೊಳಿಸು"– ಎಂದಳು ಚಿತ್ರಲೇಖೆ.

ಪಾರ್ವತಿ ಹೇಳಿದ ಮನ್ಮಥ ಸಮರೂಪ ಸುಂದರ ಪುರುಷನ ನಿರೀಕ್ಷೆಯಲ್ಲಿ ಉಷೆ ಚಡಪಡಿಸುತ್ತಲೇ ಕಾದಳು. ಕ್ಷಣಗಳು ಯುಗಗಳಾಗಿ ಭಾಸವಾಯಿತು. ರಾಜಭೋಗಗಳು, ಸಂಗೀತ, ನೃತ್ಯ ಸವಿನೋಟಗಳು, ತಂತ್ರಿಯ ಮೀಟಗಳು, ಪುರಾಣ, ಪುಣ್ಯಕಥಾ ಶ್ರವಣ– ಹೀಗೆಷ್ಟೊ ಲಭ್ಯ ಸುಖಗಳ ನಡುವೆ, ವೈಶಾಖ ಶುದ್ಧ ದ್ವಾದಶಿಯ ರಾತ್ರಿಗಾಗಿ ಮನದ ಚಾತಕ ಹಲುಬುತ್ತಿತ್ತು. ಅಂತೂ ಇಂತೂ ಬಿಸಿಲ ಬೇಗೆಗೆ ಬೆಂದ ಮನದ ಆಸರು ತೀರಿಸಲು, ಎದುರು ಬಂದ ನೀರಿನ ತೊರೆಯಂತೆ, ತಣ್ಣೆಳಲಂತೆ, ಗಳಿಗೆಯೊಂದೊಂದನ್ನೂ ಕಲ್ಪಕೋಟಿಯಂತೆ ಭಾವಿಸಿ, ಕಳೆದವಳಿಗೆ, ವೈಶಾಖ ಶುದ್ಧ ದ್ವಾದಶಿ ಬಂದೇ ಬಂತು! ದಿನ ಕಳೆದು ಬೇಗ ರಾತ್ರಿಯಾಗಲೆಂದು ಹಾತೊರೆದ ಉಷೆಗೆ, 'ಸೂರ್ಯನು' ಪಶ್ಚಿಮದೆಡೆಗೆ ಹೊರಡಲಿಲ್ಲವೇಕೆಂದು ಸಿಟ್ಟು. ಅವಳ ಮನದಾತುರದ ವಾಸನೆ ಹತ್ತಿದ್ದೇ, ಸೂರ್ಯ, ಅವಳ ಬಯಕೆಯ ಪ್ರಿಯತಮ ಬೇಗನೆ ಅವನ ಬಳಿ ಸಾರಲೆಂದು ಹಾರೈಸಿ, ಪಶ್ಚಿಮದತ್ತ ಹೆಜ್ಜೆ ಹಾಕಿದ.

ಒಂದು ಕ್ಷಣ ಆಕಾಶದಲ್ಲೆಲ್ಲ ಸಂಜೆಗೆಂಪು. ಸ್ವಲ್ಪಹೊತ್ತಿನ ನಂತರ, ಇರುಳಗಪ್ಪು. ನಡುವೆ ಸ್ವರ್ಣರೇಖೆಗಳಂತೆ ಚಂದ್ರಕಿರಣಗಳು.

ರಾತ್ರಿಯ ಸುಖ ಭೋಜನವಾಯಿತಾದರೂ, ಸಂಗೀತ, ನೃತ್ಯಗಳು ನಿದ್ರಾಭಂಗ ಮಾಡಿಯಾವೆಂದು ಚಿತ್ರಲೇಖೆ ಹಾಡುಗಾರರನ್ನು, ವಾದ್ಯಗಾರರನ್ನು ನಿವಾರಿಸಿದಳು.

"ಸಖಿ, ಉಷೆ, ಇಂದು ರಾತ್ರಿ ಗಿರಿಜೆಯ ವರ ಫಲಿಸಲಿದೆ. ನಿನ್ನ ಬಯಕೆ ಈಡೇರಲಿದೆ. ಸ್ವಸ್ಥವಾಗಿ ಮಲಗು. ಅಪರ ಮನ್ಮಥ ಬಂದು ನಿನ್ನನ್ನು ಕನಸಿನಲ್ಲಿ ರಮಿಸಲಿದ್ದಾನೆ. ಪರಮ ಸಂಭೋಗ ಭಾಗ್ಯಕ್ಕೆ ನೀನು ಒಡತಿ ಆಗಲಿರುವೆ"– ಎಂದು ಚಿತ್ರಲೇಖೆ ಛೇಡಿಸಿ ನುಡಿದಳು.

ಚಿತ್ರಲೇಖೆಯ ಮಾತಿನಿಂದ ಉಷೆ ಅಂತರಂಗದಲ್ಲಿಯೇ ಪುಲಕಿತಳಾದರೂ ಹೊರಗೆ ತೋರಿಸಿಕೊಳ್ಳಲಿಲ್ಲ. ಕಲ್ಪನೆಯಲ್ಲಿಯೇ ಸ್ಪರ್ಶಾನುಭವದ ಸುಖ ಅನುಭವಿಸ ತೊಡಗಿದಳು. ನಿರೀಕ್ಷೆ, ಕನಸುಗಳ ಕಣ್ಣಾಮುಚ್ಚಾಲೆಯಲ್ಲಿರುವಾಗಲೇ ಕಣ್ಣು ಭಾರವಾಯಿತು. ಬಲಗೈಯನ್ನು ತಲೆಯಡಿಗೆ ದಿಂಬಾಗಿಸಿ ಕೊಂಡು, ಮೆಲ್ಲನೆ ಉರುಳಿ ನಿದ್ದೆಗಿಳಿದಳು.

ಸ್ವಲ್ಪ ಹೊತ್ತಿನಲ್ಲಿಯೇ ನಿರೀಕ್ಷಿಸಿದ ಕನಸು ಬಿತ್ತು. ಸುಂದರ ಪುರುಷ. ಮನ್ಮಥನ ಅಪರಾವತಾರ ಅನಿರುದ್ಧನ ಸಂಗಸುಖ ಅವಳಿಗೆ ಲಭ್ಯವಾಗತೊಡಗಿತು. ಎಷ್ಟು ಬಿಟ್ಟಿದ್ದರೂ, ತಣಿಯದ ಅವಳ ಮನಸ್ಸು ಸುಮ್ಮನಿರಲಾರದೆ ಅವನನ್ನು ಬರಸೆಳೆದು ಅಪ್ಪಿ ಮುದ್ದಾಡಿ ಚುಂಬಿಸಿದಳು. ರತಿಶಾಸ್ತ್ರ ಪಂಡಿತೆಯಂತೆ, ಅವನ ಅಂಗಾಂಗಗಳ ಸ್ಪರ್ಶ ಸುಖವನ್ನು ಪಡೆದಳು. ಕನಕಲತೆಯಂತಿರುವ ತನ್ನ ಬಾಹುಗಳಿಂದ ಅವನನ್ನು ಬಿಗಿದುಕೊಂಡು ತಾನೂ ಸುಖಿಸಿದಳು; ಅವನನ್ನೂ ರಮಿಸಿದಳು. ಅನಿರುದ್ಧನೂ

ಕಾಮಶಾಸ್ತ್ರ, ರತಿಶಾಸ್ತ್ರ ಪಾಂಡಿತ್ಯದಲ್ಲಿ ಕಡಿಮೆಯೇನಿರಲಿಲ್ಲ. ಅವಳಿಗೆ ಪ್ರತಿಯಾಗಿ, ಸರಿಸಾಟಿಯಾಗಿ, ರತಿಕ್ರೀಡೆಯಲ್ಲಿ ಸಂತವಿಸುತ್ತಾ, ಸ್ವರ್ಗವೂ ನಾಚುವಂತಹ ರೀತಿಯಲ್ಲಿ, ಕಾಮೋಪಭೋಗದಲ್ಲಿ ಮೈಮರೆತು ಒರಗಿದರು. ತನ್ನ ಬಾಹುಬಂಧನದಲ್ಲಿ ಸಿಲುಕಿದ ತನ್ನೋಪನು, ಕೈಜಾರಿ ಹೋಗಬಾರದೆಂದೆನಿಸಿ, ಮತ್ತಷ್ಟು ಬಿಗಿಗೊಳಿಸಿದಳು. ಯವುದೋ ಕ್ಷಣದಲ್ಲಿ ಬಾಹು ಸಡಿಲಾದಂತೆ ಭಾಸವಾಗಿ, ಪಕ್ಕದಲ್ಲಿ ಮಲಗಿರಬೇಕೆಂದು ಭಾವಿಸಿ ಅವನಿಗಾಗಿ ತಡವಿದಳು. ತಡವುತ್ತಿರುವಷ್ಟರಲ್ಲಿ, ಸ್ಪರ್ಷಕ್ಕೆ ಬಾರದ ಅನುಭವದಿಂದ ಕಂಗೆಟ್ಟು ತಲ್ಲಣಿಸಿದಳು. ಅವನಿಲ್ಲದ ಭಾವ ಅವಳನ್ನು ತೀವ್ರ ವೇದನೆಗೆ ಒಳಗು ಮಾಡಿತು. ಕಾಮಶರನ ತೀಕ್ಷ್ಣವೇಧಿಗೆ ಒಳಗಾದ ಅವಳು ತತ್ತರಿಸಿದಳು.

ಕಾಮೋತ್ಕಟ ಸ್ಥಿತಿಯಲ್ಲಿದ್ದ ಅವಳಿಗೆ ಕನಸು ವಾಸ್ತವಗಳ ಪರಿವೆಯೇ ಇರಲಿಲ್ಲ. ವಿರಹಾಕುಲತೆಯಿಂದ ಒಂದೇ ಸಮನೆ ಆರ್ತವಾಗಿ ಮೊರೆಯಿಡಲು ಆರಂಭಿಸಿದಳು. ಆತಂಕ, ಭಯ, ತಲ್ಲಣಗಳಿಂದ, "ಪ್ರಾಣನಾಥ, ಮೊದಲೇ ಸೋತಿದ್ದೇನೆ. ಸೋತವಳನ್ನು ಮತ್ತಷ್ಟು ವಂಚಿಸಬೇಡ. ನನ್ನಿಂದ ತಲೆ ಮರೆಸಿಕೊಂಡು, ನೋಡುವ ಭಾಗ್ಯವನ್ನು ಕಿತ್ತುಕೊಂಡು, ನೊಂದವಳನ್ನು ಮತ್ತಷ್ಟು ನೋಯಿಸಬೇಡ. ನನ್ನಿಂದ ಅಪರಾಧವಾಗಿದ್ದಲ್ಲಿ, ನೀನು ನನ್ನಿಂದ ಮುನಿದಿದ್ದಲ್ಲಿ, ಮುದ್ದಿಸಿ ಮುನಿಸನ್ನು ಹೋಗಲಾಡಿಸುವೆ. ನಿನ್ನ ಕಾಲಿಗೆರಗುವೆ. ಇವಳು ಬರೀ ಮಾತುಗಾತಿ ಅಷ್ಟೇ ಎನಿಸಿ, ನನ್ನ ಬಗ್ಗೆ ನಿರ್ದಯನಾಗಿ ಬಾರದಿರುವೆಯಾ ಹೇಗೆ?" ಎಂದು ಒಂದೇ ಸಮನೆ ಒರಲುತ್ತಿರುವಷ್ಟರಲ್ಲಿ ಕನಸೊಡೆದೆದ್ದಳು.

ಬೆಳಗಾಯಿತೆಂದು ತಿಳಿಸಲು ಬಂದ ಸಖಿ, ಉಷೆಯ ಸ್ಥಿತಿಯನ್ನು ನೋಡಿ ಗಾಭರಿಗೊಂಡಳು. ಅವಳನ್ನು ಸ್ಪರ್ಷಿಸಿ ಹೌಹಾರಿದಳು. ಕಾಮಜ್ವರ ಪೀಡಿತಳಾಗಿದ್ದ ಉಷೆ ಈಗ ಬೆಂಕಿಯುಂಡೆಯಂತೆ ಇದ್ದಳು. ಅವಳ ಈ ಸ್ಥಿತಿಗೆ ಕಾರಣವೇನೆಂದು ಚಿತ್ರಲೇಖೆ ಬೆಸಸಿ ಕೇಳಿದಾಗ, ತನ್ನ ಕನಸಿನ ವೃತ್ತಾಂತವನ್ನು ವಿವರಿಸಿ, ಕನಸಿನಲ್ಲಿ ಕಂಡ ಆ ಮನ್ಮಥನನ್ನು ಹೇಗಾದರೂ ತಂದೊಪ್ಪಿಸುವಂತೆ ಅಂಗಲಾಚುತ್ತಾಳೆ. 'ನೋಡು ನಾನು ಸುಳ್ಳು ಹೇಳುತ್ತಿಲ್ಲ. ಸಂಭೋಗವ ಮಾಡಿದ ಕಲೆಗಳೇ ನಿನ್ನ ಮುಂದೆ ಸಾಕ್ಷಿಯಾಗಿದೆ. ಇನ್ನು ಅವನಿಲ್ಲದೆ ನಾನು ಬದುಕಲಾರೆ. ಎಲ್ಲೇ ಇದ್ದರೂ ಅವನನ್ನು ನನಗೆ ತಂದೊಪ್ಪಿಸು ಸಖೀ"- ಎಂದು ಆರ್ತವಾಗಿ ಮೊರೆಯಿಟ್ಟಳು.

ಉಷೆಯ ವಿರಹಾಕುಲ ಸ್ಥಿತಿ, ದೈನ್ಯ ಅಳಲು ಚಿತ್ರಲೇಖೆಯ ಮನಸ್ಸನ್ನು ಕರಗಿಸಿತು. ಕಾಮಾಗ್ನಿಯಿಂದ ಬೆಂದ ಹೃದಯದಲ್ಲಿ ಅಡಗಿದ್ದ ಜ್ವಾಲೆಗಳು ರೋಮಕೂಪಗಳಿಂದ ಹೊಗೆಯಾಗಿ ಹೊಮ್ಮಿದವು. ಬೀಸಿದ ತಂಗಾಳಿಯೂ ಮತ್ತಷ್ಟು ಸುಡು ಬಿಸಿಲಿನಂತೆನಿಸಿತು. ಮದನನುಪಾತವನ್ನು ದೂರ ಮಾಡಲು ಸಖಿಯರು ಸಾಹಸ ಮಾಡಬೇಕಾಯಿತು. ಎಡಬಿಡದೆ ಒಸರುವ ಕಂಬನಿ, ಕ್ಷಣಕ್ಷಣಕ್ಕೆ ಏರುತ್ತಿರುವ ಜ್ವರದಿಂದ ಕಂಠಗತ ಪ್ರಾಣೆಯಾಗುತ್ತಿರುವ ಉಷೆಯ ವಿರಹತಾಪವನ್ನು ತಣಿಸಲು ಕೂಡಲೇ ಅವಳನ್ನು

ಚಿಗುರೆಲೆ ಮಂಟಪದ ಕಡೆಗೆ ಕರೆದೊಯ್ದರು. ಆದರೇನು ಅವಳನ್ನು ಸುಡುತ್ತಿರುವ ತನುತಾಪದಿಂದ, ಅವಳನ್ನು ಮಲಗಿಸಿದ್ದ ತಳಿರೆಲೆಯ ಹಾಸು, ತರಗೆಲೆಯ ಹಾಸಾಯಿತು. ಮೂಗಿನಿಂದ ಹೊರಹೊಮ್ಮುತ್ತಿದ್ದ ಉಸಿರಿಗೆ ಬದಲಾಗಿ ದಳ್ಳುರಿ ಹೊಮ್ಮಿತು. ಮೈಗೆ ಪೂಸಿದ ಶೀತಲ ಚಂದನ ಗಂಧ ಕರಿಕಾಗಿ ಹೋಯಿತು. ಬೊಬ್ಬೆಗಳೆದ್ದ ಕೈಕಾಲುಗಳಿಗೆ ಶೈತ್ಯೋಪಚಾರಕ್ಕಾಗಿ ಬೋಗುಣಿಯಲ್ಲಿ ನೀರು ತರಲು, ನೀರೆಲ್ಲವೂ, ತಾಪದಿಂದಾಗಿ ಹಿಂಗಿ ಹೋಯಿತು. ಅವಳ ನಿಟ್ಟುಸಿರ ಬಿಸಿ ಹಬೆ ದೂರಕ್ಕೆ ಪಸರಿಸಿ, ಅದರ ಸ್ಪರ್ಷಕ್ಕೆ ಬಂದ ಮರಗಿಡ, ಲತೆ, ತಳಿರು, ಬೇರು ಎಲ್ಲವೂ ಬೆಂಕಿಯಿಂದ ಸುರುಟಿ ಹೋದಂತಾಯಿತು.

ಉಷೆಯ ಸ್ಥಿತಿಗೆ ಚಿತ್ರಲೇಖೆ ಭಯಭೀತಳಾದಳು. ಇವಳ ಮದನತಾಪವನ್ನು ಹೇಗೆ ಪರಿಹರಿಸಬೇಕೆಂಬುದೇ ತಿಳಿಯದಾಯಿತು. ಹೇಗಾದರೂ ಅವಳನ್ನು ಸಮಾಧಾನ ಪಡಿಸಬೇಕು. ಕನಸಲ್ಲಿ ಕಂಡ ಅವಳ ನಲ್ಲನನ್ನು, ಭೂಮಂಡಲವನ್ನೆಲ್ಲ ಶೋಧಿಸಿಯಾದರೂ ತರಬೇಕೆನಿಸಿ, ಉಷೆಗೆ ತನ್ನ ವಿಚಾರವನ್ನು ಹೇಳುತ್ತಾಳೆ. ಚಿತ್ರಲೇಖೆಯ ಭರವಸೆಯ ಮಾತುಗಳಿಂದ ಸ್ವಲ್ಪ ಪ್ರಾಣ ಬಂದಂತಾಗಿ, ಇಲ್ಲಿಯವರೆಗೆ ಬಿಗಿದು ಕೊಂಡಿದ್ದ ಕಣ್ಣುಗಳನ್ನು ಮೆಲ್ಲನೆ ತೆರೆದಳು. ಚಿತ್ರಲೇಖೆಗೂ ಪ್ರಾಣ ಬಂದಂತಾಯಿತು. ಆದರೆ ಅವಳ ಪ್ರಿಯನನ್ನು ಹುಡುಕುವುದಾದರೂ ಹೇಗೆ? ಗುರುತುಗಳೇನು? ತಿಳಿಯಬೇಕಲ್ಲವೇ?– "ಗೆಳತಿ, ಕನಸಿನಲ್ಲಿ ಬಂದು ನಿನ್ನನ್ನು ಮೆಚ್ಚಿ, ಮೆಚ್ಚಿಸಿ ಹೋದವನು ಯಾರು? ಹೇಗಿದ್ದಾನೆ? ಎಂಬುದನ್ನಾದರೂ ವಿವರಿಸು. ಎಲ್ಲೇ ಇದ್ದರೂ ನಿನಗೆ ತಂದೊಪ್ಪಿಸುವೆ" ಎಂದು ವಿಚಾರಿಸಿದಳು.

ಚಿತ್ರಲೇಖೆಯ ಪ್ರಶ್ನೆಗೆ ಉಷೆಯ ಬಳಿ ಉತ್ತರವಿಲ್ಲ. "ಅವನು ಮನ್ಮಥ ಸಮರೂಪ. ಯಾವ ಹೆಣ್ಣಾದರೂ ಒಮ್ಮೆ ನೋಡಿದರೆ ಸಾಕು ಹುಚ್ಚಳಾಗಿ ಬಿಡುತ್ತಾಳೆ. ಮನ್ಮಥ ಬಾಣಾಘಾತಕ್ಕೆ ಎದೆಯೊಡ್ಡಿ ನಿಲ್ಲುತ್ತಾರೆ– ಎಂದಷ್ಟೇ ಗೊತ್ತು. ಹೇಗಾದರೂ ಅವನನ್ನು ತಂದೊಪ್ಪಿಸು. ಎಂದೆಂದಿಗೂ ನಾನು ಋಣಿಯಾಗಿರುತ್ತೇನೆ"– ಎಂದು ದೈನ್ಯವಾಗಿ ಬೇಡಿದಳು ಉಷೆ.

ಚಿತ್ರಲೇಖೆ. ಅನಿರುದ್ಧನನ್ನು, ಕನಸಿನಲ್ಲಿ ಕಂಡ ಮನ್ಮಥನನ್ನು ಹೇಗಾದರೂ ಪತ್ತೆ ಹಚ್ಚಲೇ ಬೇಕೆಂದು ದೃಢ ನಿರ್ಧಾರದೊಂದಿಗೆ, ಅವಳಿಗೆ ಸಾಂತ್ವನ ಭರವಸೆಗಳನ್ನು ನೀಡಿದಳು. ಆದರೆ ಅವನನ್ನು ಗುರುತಿಸುವುದು ಹೇಗೆಂಬ ಸಮಸ್ಯೆಗೆ ಅವಳೇ ಒಂದು ಉಪಾಯ ಯೋಚಿಸಿದಳು. ಮೂರು ಲೋಕಗಳಲ್ಲಿನ ಅನುಪಮ ಸುಂದರ ಪುರುಷರನ್ನು ಅದೃಶ್ಯ ರೂಪದಲ್ಲಿ ಕಂಡು ಅವರ ಭಾವಚಿತ್ರಗಳನ್ನು ಬಿಡಿಸಿಕೊಂಡು ಬಂದು ಉಷೆಯ ಮುಂದಿಟ್ಟಾಗ ಸುಲಭವಾಗಿ ಗುರುತಿಸುತ್ತಾಳೆ ಎನಿಸಿ ತನ್ನ ಪ್ರಯತ್ನಕ್ಕೆ ಮುಂದಾದಳು.

ಅಧ್ಯಾಪಕ ಶುಕ್ರದೇವರು ಕಲಿಸಿದ ದಿವ್ಯ ವಿದ್ಯೆಯೊಂದರಿಂದ ವಿಶ್ವಪರ್ಯಟನ ಮಾಡಿ, ದೇವ, ದಾನವ, ಮಾನವ ಕೋಟಿಯಲ್ಲಿನ ಸುಂದರ ಪುರುಷರ ಚಿತ್ರಗಳನ್ನು ಬರೆದುಕೊಂಡಳು. ಕಡೆಗೆ ದ್ವಾರಾವತಿಗೆ ಬಂದವಳಿಗೆ ಕೃಷ್ಣನರಮನೆ ಪ್ರವೇಶ ದುಸ್ತರವೆನಿಸಿತು. ಒಳಹೋಗಲು ಯಾವುದೇ ಮಾರ್ಗವಿಲ್ಲದೆ ಇದ್ದಾಗ, ಗೆಳತಿಗೆ ಕೊಟ್ಟ ಮಾತು ವ್ಯರ್ಥವಾಗುವುದೇನೋ ಎಂದು ಹೆದರಿದಳು. ಕೂಡಲೇ ವೈಷ್ಣವ ಮಂತ್ರದ ನೆನಪಾಗಿ, ಕೃಷ್ಣನನ್ನು ಮನದಲ್ಲಿಯೇ ಪ್ರಾರ್ಥಿಸಿದಳು. ಕೂಡಲೇ ಅವಳಿಗೆ ಪ್ರವೇಶಕ್ಕೆ ಅನುವಾಯಿತು. ಕೃಷ್ಣನರಮನೆಯಲ್ಲಿನ ಒಂದೊಂದೇ ಕೋಣೆಯನ್ನು ಪರೀಕ್ಷಿಸುತ್ತಾ ಪ್ರವೇಶಿಸಿದಳು. ಕಡೆಗೆ ಅನಿರುದ್ಧನಿರುವೆಡೆಗೆ ಬಂದ ಚಿತ್ರಲೇಖೆ ಅವನ ರೂಪು ಲಾವಣ್ಯ ನೋಡಿ ದಿಗ್ಭ್ರಮೆಗೊಂಡಳು. ಉಷೆಗೆ ಇವನೇ ತಕ್ಕ ಸಂಗಾತಿಯಾಗಬೇಕು ಎಂದು ಹಾರೈಸಿದಳು. ಅವಳ ಅಂತಃಪ್ರಜ್ಞೆಯ ಹಾರೈಕೆ ಅದಾಯಿತೇ ಹೊರತು, ಉಷೆ ಕನಸಿನಲ್ಲಿ ಕಂಡದ್ದು ಅವನೆಂಬುದು ಅವಳಿಗೆ ತಿಳಿದಿರಲಿಲ್ಲ. ಆತುರಾತುರದಿಂದ ಅವನ ರೂಪಲಾವಣ್ಯಗಳನ್ನು ಚಿತ್ರವಾಗಿ ಇಳಿಸಿದಳು. ಇವನನ್ನು ಕಂಡಮೇಲೆ ಮತ್ತೆ ಬೇರೆಡೆಗೆ ಮನಸ್ಸು ಹಾಯಲಿಲ್ಲ. ತನ್ನ ಪ್ರಾಣಸಖಿ ಉಷೆಯ ಬಳಿಗೆ ಆದಷ್ಟು ಬೇಗ ಸೇರಬೇಕೆಂಬ ತವಕದೊಂದಿಗೆ ಮರಳಿ ಬಂದಳು.

ಸಖಿಯ ಬರವಿನಿಂದಲೇ ಉಷೆಯ ಮೊಗದಲ್ಲಿ ಗೆಲುವು ಕಾಣಿಸಿತು. ಆದರೆ ಚಿತ್ರಲೇಖೆ ತನ್ನ ಸಖಿಯನ್ನು ಸ್ವಲ್ಪ ಹೊತ್ತಾದರೂ ಛೇಡಿಸಿ, ಕಾಡಿಸದೆ ಸುಲಭದಲಿ, ಆ ಮನ್ಮಥ ದರುಶನವನ್ನು ಮಾಡಿಸಬಾರದೆಂದೆನಿಸಿ, ತಾನು ತಂದಿದ್ದ ರಾಶಿ ಚಿತ್ರಪಟಗಳನ್ನು ಅವಳ ಮುಂದಿರಿಸಿದಳು. ದುಷ್ಟರು, ದಾನವರು, ಕ್ರೂರಿಗಳು, ಸಾಹಸಿಗಳು ಅದೂ ಇದೂ ಎಂದು ಏನೇನೋ ವಿವರಿಸುತ್ತಾ ಒಂದೊಂದನ್ನೂ ನೋಡೆಂದು ಬಲವಂತ ಪಡಿಸಿದಳು. ಉಷೆಯ ಸಹನೆ ಮೇರೆ ಮೀರಿತು. ಗೆಲುವು ಮರೆಯಾಯಿತು. ಮತ್ತೆ ನಿಟ್ಟುಸಿರು. ಚಿತ್ರಲೇಖೆಯೂ ಸುಮ್ಮನಿರಲಿಲ್ಲ.

"ತಂಗಿ ನೋಡು ನಾನು ತಂದ ಚಿತ್ರಪಟಗಳೆಲ್ಲವನ್ನೂ ತೋರಿದ್ದೇನೆ. ನಿನ್ನ ಮನಕ್ಕೆ ಬಂದ ಪ್ರಾಣಕಾಂತ ಯಾರೆಂದು ತಿಳಿಸಿದರೆ, ಮುಂದಿನ ಕೆಲಸಕ್ಕೆ ಹೊರಡುತ್ತೇನೆ" ಎಂದಳು ನಸುನಕ್ಕು. ಚಿತ್ರಲೇಖೆಯ ಮನದ ಇಂಗಿತ ಗ್ರಹಿಸುವ ಸೂಕ್ಷ್ಮತೆ ಆ ಕ್ಷಣಕ್ಕೆ ಅವಳಲ್ಲಿ ಇಲ್ಲದಾಯಿತು.

"ಎಂತಹ ನಿಷ್ಠುರೆಯೆ ನೀನು. ಅಮೃತ ಕುಡಿವ ಹಂಸೆಯ ಮರಿಗೆ ನೀರಿಟ್ಟರೆ ಕುಡಿಯುವುದೇನು? ಎದೆಗಿಚ್ಚಿಟ್ಟು ಹೋದವನನ್ನು ಮರೆತು ಬೇರೆಯವರಿಗೆ ಒಲಿಯಲೇನು? ತರಳ ಭಾಸ್ಕರನಂತೆ ಮೆರೆವ ಮಾಣಿಕ್ಯವು ನನ್ನ ಕೊರಳೊಳಗೆ ಇದ್ದು ಹೋಗಿರುವಾಗ ಯಾವುದೋ ಕೆಲಸಕ್ಕೆ ಬಾರದ ಹರಳನ್ನು ತಂದು ತೋರಿಸುತ್ತಿರುವೆಯಾ?" ಎಂದು ನೊಂದು ನುಡಿದಳು, ಉಷೆ.

ಚಿತ್ರಲೇಖೆಗೆ ಉಷೆಯನ್ನು ಕಾಡಿದ್ದು, ಇನ್ನು ಸಾಕೆನಿಸಿ, ಮರೆಯೊಳಗಿರಿಸಿಕೊಂಡಿದ್ದ ಕೃಷ್ಣನನ್ನು ಯಥಾವತ್ತಾಗಿ ಹೋಲುತ್ತಿದ್ದ ಅನಿರುದ್ಧನ ಚಿತ್ರಪಟವನ್ನು, ಅವಳ ಮುಂದಿಟ್ಟಳು.

ಚಿತ್ರಪಟದಲ್ಲಿನ ಆ ರೂಪು ಕಣ್ಣಿಗೆ ಬೀಳುತ್ತಿದ್ದಂತೆ ಒಮ್ಮೆಲೇ ರೋಮಾಂಚಿತಳಾದಳು. ಅವನ ಆ ರೂಪಕ್ಕೆ ಮೋಹಿತಳಾದಳು. ಮತ್ತೆ ಮತ್ತೆ ಆ ಚಿತ್ರಪಟವನ್ನು ನೋಡ ನೋಡುತ್ತ, ಅದನ್ನು ರಕ್ತ ಮಾಂಸಗಳಿಂದ ಕೂಡಿದ ನಿಜಪುರುಷನೆಂಬ ಭಾವದೊಂದಿಗೆ, ಎದೆಗೊತ್ತಿ ಹಿಡಿದಳು. ಪಾದಕ್ಕೆ ನೊಸಲು ಮುಟ್ಟಿಸಿದಳು.

ತನ್ನ ಮನದ ಬಯಕೆಯ ಪುರುಷನ ಚಿತ್ರಪಟವನ್ನು ತಂದಿತ್ತುದೇ ಅಲ್ಲದೆ, ಅವನ ಪೂರ್ವೋತ್ತರಗಳೆಲ್ಲವನ್ನೂ ತಿಳಿದು ಬಂದ ಚಿತ್ರಲೇಖೆಯ ಬಗ್ಗೆ ಕೃತಜ್ಞತಾ ಭಾವ ಮೂಡಿತು. ಜನ್ಮಜನ್ಮಾಂತರದಲ್ಲಿಯೂ ಈ ಋಣ ತೀರಿಸಲು ತನ್ನಿಂದಾಗದೆಂದು ಹೇಳಿ, ಅವಳನ್ನು ಕೊಂಡಾಡಿದಳು. ಪ್ರೀತಿ, ನಿಸ್ವಾರ್ಥಗಳಿಂದ ತಾನು ಮಾಡಿದ ಕೆಲಸ ತನ್ನ ಗೆಳತಿಗೆ ಮುದ ನೀಡಿದೆಯೆಂಬ ವಿಚಾರವೆ ಚಿತ್ರಲೇಖೆಗೆ ಸಮಾಧಾನವಾಗಿದೆ. ಇದಿಷ್ಟೇ ಅಲ್ಲ, ಚಿತ್ರಪಟದಲ್ಲಿ ಸೆರೆಗೊಂಡ ಅನಿರುದ್ಧನನ್ನು ಜೀವಂತವಾಗಿ ತಂದು ಗೆಳತಿಗೆ ಕಾಣಿಕೆಯಾಗಿ ಕೊಡಬೇಕು. ಅವಳ ಸಂತೋಷದಲ್ಲಿ ತಾನೂ ಪಾಲುದಾರಳಾಗಬೇಕು ಎನಿಸಿ, ಆ ಕ್ಷಣದಲ್ಲಿಯೇ ಹೊರಟು ನಿಲ್ಲುತ್ತಾಳೆ. ಆಕಾಶ ಗಾಮಿಯಾಗಿ ಪಯಣಿಸಿ, ನೇರವಾಗಿ ಅನಿರುದ್ಧನ ಶಯನಾಗಾರವನ್ನು ಹೊಕ್ಕು, ಅಲ್ಲಿ ಸುತ್ತುವರೆದಿದ್ದ ಎಲ್ಲರೂ ಮೂರ್ಛೆಗೊಳ್ಳುವಂತೆ ಮಾಡಿ, ಅನಿರುದ್ಧನ್ನು ಎಚ್ಚರಗೊಳಿಸಿದಾಗ, ಅವನ ಮೊಗದಲ್ಲಿನ ದುಗುಡವನ್ನು ಗಮನಿಸಿ, ಕಾರಣವೇನೆಂದು ವಿಚಾರಿಸಿದಳು.

ಉಷೆಯಂತೆಯೇ ಅನಿರುದ್ಧನೂ ಸ್ವಪ್ನದಲ್ಲಿ ಸಂಧಿಸಿ ರತಿಸುಖ ಪಡೆದ ಹೆಣ್ಣಿಗಾಗಿ ಆಶಿಸಿ, ಅವಳು ಕಾಣಿಸದೆ ವಿರಹ ದಗ್ಧನಾಗಿರುವ ಸಂಗತಿಯನ್ನು ಅರಿತ ಚಿತ್ರಲೇಖೆ, 'ತನ್ನ ಪರಿಚಯ, ತನ್ನ ಸಖಿ ಉಷೆಯ ಸ್ವಪ್ನ ವೃತ್ತಾಂತ ಎಲ್ಲವನ್ನೂ ವಿವರಿಸಿ, ಉಷೆಯ ಚಿತ್ರಪಟವನ್ನು ತೋರಿದಳು. ಚಿತ್ರಪಟದಲ್ಲಿರುವವಳೇ ತನ್ನ ಪ್ರಾಣಕಾಂತೆಯಾದ್ದರಿಂದ, ಅವಳ ಸಾಂಗತ್ಯಕ್ಕಾಗಿ, ತನ್ನ ಪ್ರಾಣ ಹೋದರೂ ಚಿಂತೆಯಿಲ್ಲ, ಅವಳಿರುವೆಡೆಗೆ ಬರುವುದಾಗಿ ಹೇಳಿ, ಚಿತ್ರಲೇಖೆಯ ಬೆನ್ನಲ್ಲೇ ಹೊರಡುತ್ತಾನೆ. ಚಿತ್ರಲೇಖೆ ತನ್ನ ಗಗನಗಾಮಿ ವಿದ್ಯೆಯಿಂದ ಅವನನ್ನು ಅತಿಶೀಘ್ರವಾಗಿ, ಶೋಣಿತಪುರಕ್ಕೆ ಕರೆತರುತ್ತಾಳೆ. ಯಾರ ಕಣ್ಣಿಗೂ ಬೀಳದಂತೆ, ಜೋಪಾನವಾಗಿ ಅವನನ್ನು ಕರೆತಂದು ಉಷೆಯ ಅಂತಃಪುರದಲ್ಲಿ ಇಳಿಸಿದಳು.

ಸ್ವಪ್ನಪುರುಷ ಕಣ್ಣೆದುರು ಸಾಕ್ಷಾತ್ಕರಿಸಿದ್ದಾನೆ! ನಾಚಿಕೆ, ಸಂತೋಷ, ಭಯ ಮಿಶ್ರ ಭಾವದೊಂದಿಗೆ ಅವನನ್ನು ಎದುರುಗೊಂಡು, ಅವನಿಗೆ ಸಖಿಯರಿಂದ

ಸಕಲ ಮರ್ಯಾದೆ ಸತ್ಕಾರಗಳು ಸಲ್ಲುವಂತೆ ಮಾಡಿದಳು. ಚಿತ್ರಲೇಖೆ, ಜಾಣ್ಮೆಯಿಂದ ಅಲ್ಲಿದ್ದವರನ್ನೆಲ್ಲ, ಬೇರೆ ಬೇರೆ ಕೆಲಸದ ಮೇಲೆ ಕಳಿಸಿ, ಉಷಾ ಅನಿರುದ್ಧರ ಏಕಾಂತಕ್ಕೆ ಭಂಗ ಬಾರದಂತೆ ಅಣಿಗೊಳಿಸುತ್ತಾಳೆ.

ಉಷಾ ಅನಿರುದ್ಧರು ಒಬ್ಬರನ್ನೊಬ್ಬರು ದಿಟ್ಟಿಸಿದರು. ಅನಿರುದ್ಧ ಉಷೆ ಮುಂಗುರುಳನ್ನು ಸರಿಸಿ ಅವಳ ಮೊಗವನ್ನು ತನ್ನೆಡೆಗೆ ತಂದುಕೊಂಡು ಚುಂಬಿಸಿದ. ಅವಳ ತುಟಿಯ ಸವಿಯೀಂಟುವ ಸುಖದಲ್ಲಿ ಮೈ ಮರೆತಿದ್ದ ಅನಿರುದ್ಧನ ಬಾಯೊಳಗೆ ಹಣ್ಣಿನ ಹೋಳುಗಳನ್ನು ತುಂಬಿದಳು; ತುಂಟನಗೆ ನಕ್ಕಳು. ಅವಳ ಆ ಬೆಳ್ದಿಂಗಳ ನಗೆಯಿಂದ ಉನ್ಮತ್ತನಾದ ಅನಿರುದ್ಧ ಅವಳನ್ನು ಬರಸೆಳೆದು ಬಿಗಿದಪ್ಪಿ, ರತಿಕ್ರೀಡೆಗಿಳಿದ. ನೊಸಲು, ಗಲ್ಲ, ತುಟಿ, ವಕ್ಷಸ್ಥಲಗಳಲ್ಲಿ ವಿಹರಿಸುತ್ತ, ಲಲ್ಲೆಮಾತುಗಳಿಂದ ಸಂತಸಪಡಿಸುತ್ತ, ಪರಸ್ಪರ ತಮ್ಮ ಪರಿಚಯ ಮಾಡಿಕೊಳ್ಳುತ್ತಾರೆ.

ರತಿಸುಖದ ಕ್ಷಣಗಳಲ್ಲಿಯೂ, ತಮಗೆ ಇಂತಹ ಸಮಾಗಮ, ಸಂಭೋಗ ಸುಖಕ್ಕೆ ಅನುವು ಕಲ್ಪಿಸಿದ ಚಿತ್ರಲೇಖೆಯನ್ನು ಮನದಣಿಯೆ ಕೊಂಡಾಡುತ್ತಾರೆ. ಪರಸ್ಪರ ಸೌಂದರ್ಯಾಭಿಭೂತ ಸ್ಥಿತಿಗೆ ತಲುಪುತ್ತಾರೆ; ಮತ್ತೆ ಮತ್ತೆ ಸ್ಪರ್ಷಾಲಿಂಗನ ಸುಖ, ಸಂಭೋಗ ಸುಖ ಮೂರ್ಛೆಗೆ ಸಂದು, ಪರಿವೆಯಿಲ್ಲದೆ ಇರುಳು ಕಳೆದು ಬಿಡುತ್ತಾರೆ. ರತಿಕ್ರೀಡಾಪೇಕ್ಷೆಗೆ ಕೊನೆಯಿಲ್ಲವಾದರೂ, ‘ಇನ್ನು ಸಾಕೆಂದು ಎಚ್ಚರಿಸುವಂತೆ’ ಕೋಳಿಗಳು ಕೂಗಿಡಲು, ಮೈಮರೆತು ಮೂರ್ಛಾಸ್ಥಿತಿಯಲ್ಲಿದ್ದ ಆ ಯುಗಳ ಪ್ರೇಮಿಗಳು, ಬೆಳಿಗಿಗೆ ಕಣ್ತೆರೆದು ಏಳುತ್ತಾರೆ.

ನಾನೊಂದು ಬೆಕ್ಕು

ನಾನೊಂದು ಬೆಕ್ಕು

ಆದರೆ ನನಗೆ ಹೆಸರೇ ಇಲ್ಲ.

ನಾನೆಲ್ಲಿ ಹುಟ್ಟಿದೇನೆಂಬುದೂ ಗೊತ್ತಿಲ್ಲ. ಯಾವುದೋ ಕತ್ತಲ ಮೂಲೆಯೊಂದರಲ್ಲಿ 'ಮಿಯಾವ್', 'ಮಿಯಾವ್'–ಎಂದು ಕೂಗುತ್ತಿದ್ದುದೊಂದೇ ನನ್ನ ನೆನಪಿನಲ್ಲಿ ಉಳಿದಿದೆ. ಇಲ್ಲಿಯೇ ನನಗೊಬ್ಬ ಮನುಷ್ಯನ ಮೊಟ್ಟಮೊದಲ ಪರಿಚಯವಾದದ್ದು ಎಂಬ ವಿಷಯ ಸ್ವಲ್ಪ ಸಮಯದ ನಂತರ ತಿಳಿದುಬಂತು. ಈ ಮನುಷ್ಯ ಒಬ್ಬ ವಿದ್ಯಾರ್ಥಿಯಾಗಿದ್ದ ಯಾವ ರಾಕ್ಷಸನಿಗೂ ಕಡಿಮೆಯಿರಲಿಲ್ಲ. ಮನುಷ್ಯ ಜಾತಿಯಲ್ಲಿಯೇ, ನನಗೆ ತಿಳಿದ ಮಟ್ಟಿಗೆ ಅತಿ ಭಯಂಕರನಾಗಿದ್ದ. ಇಂಥ ವಿದ್ಯಾರ್ಥಿಗಳು ಅನೇಕ ಸಲ ನಮ್ಮಂಥ ಪ್ರಾಣಿಗಳನ್ನು ಹಿಡಿಯುತ್ತಾರಂತೆ. ಬೇಯಿಸಿ ತಿಂದು ಬಿಡುತ್ತಾರಂತೆ. ಆದರೆ ಅದು ನನಗೆ ಮೊದ ಮೊದಲು ತಿಳಿದಿರಲಿಲ್ಲವಾಗಿ, ಆ ಹುಡುಗನಿಂದ ಹೆದರಿರಲಿಲ್ಲ. ಇವನು ನನ್ನನ್ನು ತನ್ನ ಅಂಗೈಯಲ್ಲಿ ಇರಿಸಿಕೊಂಡು ಮೇಲಕ್ಕೆ ಎತ್ತಿದಾಗ ಮಾತ್ರ ನನಗೆ ಎಲ್ಲೋ ಗಾಳಿಯಲ್ಲಿ ತೇಲುತ್ತಿದ್ದಂತಹ ಅನುಭವ ಮಾತ್ರ ಆಗುತ್ತಿತ್ತು. ಕ್ರಮೇಣ ಇದೆಲ್ಲಾ ನನಗೆ ಅಭ್ಯಾಸ ಆಗಿ ಹೋಯ್ತು. ಈ ರೀತಿಯಲ್ಲಿ ಅಂಗೈಯ ಮೇಲಿದ್ದಾಗ ನನಗೆ ಮನುಷ್ಯನ ಮುಖ ಹೇಗಿರುತ್ತೆ, ಅನ್ನೋದರ ಪರಿಚಯ ಆಯಿತು. ನನಗೆ ಆಶ್ಚರ್ಯ ಆಯಿತು. ಮುಖದ ಮೇಲೆಲ್ಲ ಕೂದಲು ಇರುತ್ತೆ ಅಂತ ನಿರೀಕ್ಷಿಸಿದ್ದೆ. ಆದರೆ ಅದು ಟೀಕೆಟಲ್ ಹಾಗೆ ನುಣುಪಾಗಿ ಇತ್ತು. ಅವನ ಮುಖದ ಮೇಲಿಂದ ಏನೋ ಮಧ್ಯಭಾಗದಲ್ಲಿ ಉಬ್ಬಿ ಹೊರಚಾಚಿತ್ತು. ಇದಕ್ಕೆ ಎರಡು ರಂಧ್ರಗಳಿದ್ದವು. ಈ ಎರಡು ರಂಧ್ರಗಳಿಂದ ಹೊಗೆ ಹೊಮ್ಮುತ್ತಿತ್ತು. ನನಗಂತೂ ಇದರಿಂದ ಉಸಿರುಗಟ್ಟಿ ಸಾಯುವಂತೆನಿಸುತ್ತಿತ್ತು. ಆಮೇಲೆ ಇತ್ತೀಚೆಗಷ್ಟೇ ನನಗೆ, ಅದು ಟೊಬ್ಯಾಕೋ ಅಂತ ತಿಳಿದು ಬಂತು!

ಅಂಗೈ ಮೇಲೆ ಆ ವಿದ್ಯಾರ್ಥಿ ನನ್ನನ್ನು ಇರಿಸಿಕೊಂಡ. ಸ್ವಲ್ಪ ಹೊತ್ತಿನ ನಂತರ ನಾನು ವೇಗವಾಗಿ ಓಡಲು ಪ್ರಾರಂಭಿಸಿದೆ. ನನಗೆ, ನಾನೇ ತಿರುಗುತ್ತಿದ್ದೇನೆಯೋ,

ಇಲ್ಲ ಅವನೇ ತಿರುಗಿಸುತ್ತಿದ್ದಾನೆಯೋ, ಒಂದೂ ತಿಳಿಯಲಾಗಲಿಲ್ಲ. ತಲೆಸುತ್ತಿ ಬಿದ್ದು ಬಿಡುವ ಹಾಗಾಗುತ್ತಿತ್ತು. ಇದೇ ಥರ ಇದ್ದರೆ ಹೆಚ್ಚು ಹೊತ್ತು ತಡೆದುಕೊಳ್ಳಲು ಸಾಧ್ಯವಾಗುವುದಿಲ್ಲ ಎಂದು ಯೋಚಿಸುತ್ತಿದ್ದೆ. ಅಷ್ಟರಲ್ಲಿ ಬೆಂಕಿ ಕಿಡಿಗಳು ಸಿಡಿಯುವ ಸದ್ದಿನೊಂದಿಗೆ ಕಾಣಿಸಿಕೊಂಡವು ಅಷ್ಟೇ! ಅಲ್ಲಿಂದ ಮುಂದೆ ಏನಾಯಿತೋ, ನನಗೊಂದೂ ನೆನಪಿನಲ್ಲಿ ಉಳಿಯಲಿಲ್ಲ. ಎಷ್ಟೇ ಪ್ರಯತ್ನಿಸಿದರೂ ನೆನಪಿಗೆ ಬರಲೇ ಇಲ್ಲ.

ನಾನು ಬಂದಾಗ, ಆ ವಿದ್ಯಾರ್ಥಿ ಎಲ್ಲಿಯೂ ಕಾಣಲಿಲ್ಲ ನನ್ನ ಜೊತೆಗಿನ ಬೇರೆ ಬೆಕ್ಕುಗಳಾಗಲೀ, ನನ್ನಮ್ಮನಾಗಲೀ ಕಾಣಲೇ ಇಲ್ಲ. ಆದರೆ ಒಂದು ವಿಶೇಷತೆಯೆಂದರೆ, ಈಗಿನ ಈ ಜಾಗ ಮೊದಲಿದ್ದ ಜಾಗಕ್ಕಿಂತ ಚೆನ್ನಾಗಿತ್ತು. ಗಾಳಿ ಬೆಳಕು ಧಾರಾಳವಾಗಿತ್ತು. ಮೊದಲು ಒಣಹುಲ್ಲಿನ ಹಾಸಿಗೆಯಲ್ಲಿ ಹುದುಗಿದ್ದೆ. ಆದರೆ ಈಗ ಬಿದಿರಿನ ಪೊದೆಯ ಮೇಲಿದ್ದೆ. ಎಷ್ಟು ಪ್ರಖರವಾದ ಬೆಳಕಿತ್ತೆಂದರೆ, ಕಣ್ಣು ಬಿಡುವುದು ನನ್ನಿಂದ ಸಾಧ್ಯವಾಗುತ್ತಿರಲಿಲ್ಲ.

ಕಡೆಗೆ, ಅಂತೂ ಇಂತೂ ಸಾಹಸಮಾಡಿ ಅಲ್ಲಿಂದ ತೆವಳುತ್ತಾ, ತೆವಳುತ್ತಾ ಒಂದು ಕೊಳದ ಬಳಿಗೆ ಬಂದಿದ್ದೆ. ಕುಂಡಿ ಮೇಲೆ ಕೂತು, ಸುತ್ತಲೂ ಕಣ್ಣು ಹಾಯಿಸಿದೆ. ಏನು ಮಾಡಬೇಕೆಂದೇ ಹೊಳೆಯುತ್ತಿರಲಿಲ್ಲ. ಆದರೆ ಒಮ್ಮೆಲೇ ನನಗೆ ಒಂದು ಉಪಾಯ ಹೊಳೆಯಿತು. 'ಮಿಯಾವ್' 'ಮಿಯಾವ್'- ಎಂದು ಕೂಗಿದರೆ ಯಾರ ಗಮನಕ್ಕಾದರೂ ಬರಬಹುದೆಂದುಕೊಂಡೆ. ಆ ವಿದ್ಯಾರ್ಥಿಯೇ ಬಂದರೂ ಬರಬಹುದೆಂದು ಯೋಚಿಸಿದೆ. ನನ್ನ ಯೋಚನೆ, ಉಪಾಯಗಳೊಂದೂ ಫಲಿಸಲಿಲ್ಲ.

ಅಷ್ಟು ಹೊತ್ತಿಗೆ ಗಾಳಿ ಜೋರಾಗಿ ಬೀಸಿ ಬಂತು. ಕತ್ತಲಾಗುತ್ತಿತ್ತು ಬೇರೆ. ವಿಪರೀತ ಹಸಿವಾಗುತ್ತಿತ್ತು. ನನ್ನಿಂದ ಎಷ್ಟು ಜೋರಾಗಿ ಸದ್ದು ಮಾಡಲು ಸಾಧ್ಯವೋ, ಮಾಡಿದೆ; ಪ್ರಯೋಜನವಾಗಲಿಲ್ಲ. ನನ್ನಾಸೆ, ಭರವಸೆಗಳೆಲ್ಲ ಕಮರಿ ಹೋದವು. ಯಾವುದಾದರೂ ಒಂದು ಜಾಗ ಹಿಡೀಬೇಕು. ಅಲ್ಲಿ ತಿನ್ನೋಕೆ ಏನಾದರೂ ಸಿಗುವಂತಿರಬೇಕು ಎಂದು ಯೋಚಿಸುತ್ತಾ, ನೀರಿನಲ್ಲಿ ಎಡಗಡೆಯಿಂದ ಸುತ್ತು ಹಾಕ ತೊಡಗಿದೆ.

ಕಷ್ಟವೇನೋ ಆಗಿತ್ತು. ಆದರೂ ಏನಾದರೂ ಮಾಡಿ ಜಾಗ ಹುಡುಕಲೇಬೇಕೆಂದುಕೊಂಡೆ. ಅದೃಷ್ಟಕ್ಕೆ ಒಂದು ಜಾಗಕ್ಕೆ ಬಂದೆ. ಅಲ್ಲಿ ಮನುಷ್ಯನೊಬ್ಬ ಇರುವಂತೆ ಕಾಣಿಸಿತು. ಮುರಿದ ಬಿದಿರಿನ ಪೊದೆಯ ಸಂದಿಯೊಂದರೊಳಕ್ಕೆ ನುಸುಳಿದೆ. ಅಲ್ಲಿಂದ ಹಾಗೆಯೇ ತೆವಳುತ್ತಾ ತೆವಳುತ್ತಾ ಕಡೆಗೆ ನುಸುಳಿದೆ. ಅಲ್ಲಿಂದ ಹಾಗೆಯೇ ತೆವಳುತ್ತಾ ತೆವಳುತ್ತಾ ಕಡೆಗೆ ಯಾರದೋ ಒಬ್ಬರ ಎಸ್ಟೇಟಿನಲ್ಲಿದ್ದೆ. ವಿಧಿಯ ವಿಚಿತ್ರ ಪೊದೆಯ ಸಂದು ಸಿಗದಿದ್ದರೆ, ನಾನು ಅಲ್ಲಿಯೇ ಉಳಿದು, ಹಸಿವಿನಿಂದ ಸಾಯಬೇಕಾಗುತ್ತಿತ್ತು. ಈ ಸಂದು ನನಗೆ ವರದಾನವಾಯಿತು. ದಿನಾ ಅದರ ಮೂಲಕ ಹೊರಬರುತ್ತಿದ್ದೆ. ನನ್ನ ನೆರೆಯ ಮೈಕ್‌ನನ್ನು ಮಾತಾಡಿಸಿ ಬರಲು ಇದರಿಂದ ಸಾಧ್ಯವಾಯಿತು.

ಎಸ್ಟೇಟಿನೊಳಕ್ಕೆ ಪ್ರವೇಶವನ್ನೇನೋ ಪಡೆದದ್ದಾಯಿತು. ಆದರೆ ಮುಂದೇನು? ಮುಂದೇನು ಮಾಡಬೇಕು? ಕತ್ತಲಾಗುತ್ತಿತ್ತು. ಹೊಟ್ಟೆ ಚುರುಗುಡುತ್ತಿತ್ತು. ವಿಪರೀತ ಚಳಿ ಬೇರೆ. ಸಾಲದ್ದಕ್ಕೆ ಮಳೆ ಬೇರೆ ಶುರುವಾಯಿತು. ಇಂಥ ಚಳಿ, ಮಳೆಯಲ್ಲಿ ಸಾಹಸ ಮಾಡೋದು ಮೂರ್ಖತನ ಎನಿಸಿ, ಅಲ್ಲಿದ್ದ ಮನೆಯ ಕೋಣೆಯೊಂದರೊಳಕ್ಕೆ ನುಸುಳಿದೆ. ಅದು ಸಾಕಷ್ಟು ಬೆಳಕಿನಿಂದ ಕೂಡಿತ್ತು. ಮತ್ತು ಬೆಚ್ಚಗೆ ಹಿತವಾಗಿತ್ತು. ಯೋಚನೆ ಮಾಡಿದರೆ, ಯಾರದಾದರೂ ಮನೆಯೊಳಕ್ಕೆ ಪ್ರವೇಶ ಮಾಡಿದ್ದು ಇದೇ ಮೊದಲಬಾರಿ. ಅಲ್ಲದೆ ಇಲ್ಲಿಂಯೇ, ಒಬ್ಬರಲ್ಲ ಹಲವು ಮನುಷ್ಯರನ್ನು ಮುಖಾಮುಖಿಯಾಗಿ ಎದುರಿಸುವ ಅವಕಾಶ ಸಿಕ್ಕಿದ್ದು.

ಮೊದಲಿಗೆ, ನನಗೆ ಎದುರಾದ ವ್ಯಕ್ತಿ, ಓಸಾನ್ ಎಂಬ ಕೆಲಸದವಳು. ಆ ವಿದ್ಯಾರ್ಥಿಗಿಂತ ಭಯಂಕರ ಮನುಷ್ಯಳಾಗಿ ಕಾಣಿಸಿದಳು. ನನ್ನನ್ನು ನೋಡಿದ್ದೇ ನನ್ನ ಕುತ್ತಿಗೆ ಹಿಡಿದು, ಎತ್ತಿ ಆಚೆಗೆ ಒಗೆದಳು. ಅವಳಿಗೆ ತಿರುಗಿ ಬೀಳುವುದು ಸಾಧ್ಯವಿಲ್ಲವೆನಿಸಿ, ಸುಮ್ಮನೆ ಕಣ್ಣುಮುಚ್ಚಿಕೊಂಡು, ಆದದ್ದಾಗಲೆಂದುಕೊಂಡೆ. ಆದರೆ ನನಗೆ ಹಸಿವು ಚಳಿಯನ್ನು ತಡೆದುಕೊಳ್ಳುವುದು ಅಸಾಧ್ಯವೆನಿಸಿತು. ಎಷ್ಟು ಸಲ ನನ್ನನ್ನು ಎತ್ತಿ ಎತ್ತಿ ಆಚೆಗೆ ಎಸೆದಳೋ, ನನಗೆ ಲೆಕ್ಕವಿಲ್ಲ! ಅದಕ್ಕೇ ಅವಳನ್ನು ಕಂಡರೆ ನನಗೆ ಅಸಹ್ಯವೆನಿಸತೊಡಗಿತು. ಬೇಕೆಂದೇ ನಾನು ಒಂದು ದಿನ ಮೀನನ್ನು ಕದ್ದೆ; ಇದರಿಂದ ನನಗೆ ಗರ್ವವೆನಿಸಿತು.

ಕಡೆಯ ಸಲ, ಆ ಕೆಲಸದವಳು ಇನ್ನೇನು ನನ್ನನ್ನು ಆಚೆಗೆ ಎಸೆಯುವುದರಲ್ಲಿ ಇದ್ದಳು. ಅಷ್ಟರಲ್ಲಿ ಆ ಮನೆಯ ಯಜಮಾನ ಕಾಣಿಸಿಕೊಂಡ. ಏನು ಗಲಾಟೆ ನಡೀತಿದೆ ಅಂತ ವಿಚಾರಿಸಿದ. ಅವಳು ನನ್ನನ್ನು ಎಸೆಯಲು ಕೈಯಲ್ಲಿ ಜೋತಾಡುವಂತೆ, ಹಿಡಿದಿದ್ದಂತೆಯೇ, ಹೇಳಿದಳು– "ಯಾವುದೋ ಒಂದು ಬೀದಿ ಬೆಕ್ಕು ಮನೆ ಒಳಗೆ ಬಂದು ಸೇರಿಕೊಂಡಿದೆ. ಎಷ್ಟು ಸಲ ಆಚೆಗೆ ಎಸೆದರೂ ಮತ್ತೆ ಮತ್ತೆ ಒಳಗೆ ನುಸುಳಿ ಬಂದು ಬಿಡ್ತಿದೆ. ಅದೂ, ಅಡಿಗೆ ಮನೆಗೇ ಬಂದು ಸೇರಿಕೊಳ್ಳುತ್ತೆ. ನನಗೆ ಇಷ್ಟ ಆಗೊಲ್ಲ. ಮನೆ ಯಜಮಾನ ಮೀಸೆ ತಿರುವುತ್ತ ನನ್ನ ಕಡೆ ನೋಡಿ, ನನ್ನನ್ನು ಒಳಗೆ ಬಿಡುವಂತೆ ಆ ಸೇವಕಿಗೆ ಆದೇಶಿಸಿದ. ನಂತರ ಅಲ್ಲಿಂದ ಹೊರಗೆ ಹೋದ. ಆತ ಹೆಚ್ಚು ಮಾತಾಡುವವನಲ್ಲ ಎನಿಸಿತು. ಆ ಸೇವಕಿಗೆ ಇನ್ನೂ ನನ್ನ ಮೇಲೆ ಸಿಟ್ಟು ಇದ್ದೇ ಇತ್ತು. ಪಟಕ್ಕನೆ ನನ್ನನ್ನು ನೆಲದ ಮೇಲೆ ಕುಕ್ಕಿದಳು. ಏನೇ ಆದರೂ ನಾನಂತು ಆ ಮನೆಯನ್ನು ನನ್ನ ವಾಸದ ಮನೆಯನ್ನಾಗಿ ಮಾಡಿಕೊಂಡೆ.

ಮೊದಲಿಗೆ ನಾನು ಯಜಮಾನನನ್ನು ನೋಡುವುದು ಅಪರೂಪವಾಗಿತ್ತು. ಅವನು ಶಾಲೆಯ ಮಾಸ್ತರು ಆಗಿರುವಂತೆ ತೋರಿತು. ಸ್ಕೂಲಿಂದ ಮನೆಗೆ ಬರುತ್ತಿದ್ದ ಹಾಗೆ ತನ್ನ ಸ್ಟಡಿರೂಮು ಸೇರಿಕೊಂಡು ಬಿಟ್ಟರೆ, ಆಚೆಗೆ ಬರುತ್ತಲೇ ಇರಲಿಲ್ಲ. ಮನೆಯವರಿಗೆಲ್ಲ ಅವನು ಬಹಳವಾಗಿ ಓದುತ್ತಿರುತ್ತಾನೆ; ಅದರಲ್ಲಿ ಮುಳುಗಿಬಿಟ್ಟಿರುತ್ತಾನೆ

ಎನ್ನುವ ನಂಬಿಕೆ. ಆತ ಹಾಗೆ ನಂಬುವಂತೆಯೇ ತೋರಿಸಿಕೊಳ್ಳುತ್ತಿದ್ದ. ವಾಸ್ತವವಾಗಿ ಅವರೆಲ್ಲ ನಂಬಿದ ಹಾಗೆ ಅವನು ಓದುತ್ತ ಇರಲಿಲ್ಲ. ಚೆನ್ನಾಗಿ ನಿದ್ದೆ ಮಾಡುತ್ತಿದ್ದ. ನಾನು ಹೇಗೋ ಕದ್ದು ಒಳಸೇರಿ ಇದನ್ನೆಲ್ಲ ಗಮನಿಸುತ್ತಿದ್ದೆ. ಸುಮ್ಮನೆ ಕೈಯಲ್ಲಿ ಪುಸ್ತಕ ಹಿಡಿದು ನಿದ್ದೆ ಹತ್ತುವ ತನಕ ಕಣ್ಣಾಡಿಸುತ್ತಿದ್ದುದನ್ನೂ ನೋಡಿದೆ.

ಯಾಕೋ ಆ ಮನುಷ್ಯನ ಹೊಟ್ಟೆ ಆರೋಗ್ಯವಾಗಿರಲಿಲ್ಲಾಂತ ಅನ್ನಿಸುತ್ತೆ. ಅವನ ಚರ್ಮ ಎಲ್ಲ ಹಳದಿ ಬಣ್ಣಕಿತ್ತು. ಒಣಗಿದ ಹಾಗಿದ್ದ. ಚುರುಕಾಗಿ ಇರಲಿಲ್ಲ. ಆದರೂ ಹೊಟ್ಟೆಬಾಕತನಕ್ಕೇನೂ ಕಡಿಮೆಯಿರಲಿಲ್ಲ. ಚೆನ್ನಾಗಿ ಭರ್ಜರಿಯಾಗಿ ಊಟ, ತಿಂಡಿ ಜಡೀತಿದ್ದ. ತಿನ್ನೋದು ಮುಗೀತಿದ್ದ ಹಾಗೆ ಒಂದೆರಡು ಗುಳಿಗೆಗಳನ್ನು ಜೀರ್ಣವಾಗಲೆಂದು ತೆಗೆದುಕೊಳ್ಳುತ್ತಿದ್ದು ಮತ್ತು ಕೂಡಲೇ ಪುಸ್ತಕವೊಂದನ್ನು ಬಿಡಿಸಿ ಹಿಡಿದುಕೊಳ್ಳುತ್ತಿದ್ದ. ಒಂದೆರಡು ಪುಟ ಕಣ್ಣಾಡಿಸುತ್ತಿದ್ದ ಹಾಗೇ ನಿದ್ದೆಗೆ ಇಳಿತಿದ್ದ. ಮತ್ತೊಮ್ಮೆ ಎಚ್ಚರವಾದಾಗ, ಮತ್ತೆ ಪುಸ್ತಕದ ಮೇಲೆ ಕಣ್ಣಾಡಿಸುತ್ತಾ ತೂಕಡಿಸುತ್ತಿದ್ದ. ಇದು ಅವನ ನಿತ್ಯದ ದಿನಚರಿಯಾಗಿತ್ತು. ನಾನು 'ಬೆಕ್ಕೇ ಆಗಿದ್ದರೂ ಕೂಡಾ, ಎಷ್ಟೋ ಸಲ ಸ್ಕೂಲ್ ಟೀಚರ್ಸ್ ಅದೃಷ್ಟವಂತರು 'ಎಂದುಕೊಳ್ಳುತ್ತಿದ್ದೆ. ಒಂದು ಕಡೆ ಕೆಲಸಾನೂ ಮಾಡ್ತಾ, ಮತ್ತೊಂದು ಕಡೆ ಹೀಗೇ ಆರಾಮಾಗಿ ನಿದ್ದೆ ಮಾಡೋಕೂ ಸಾಧ್ಯವಾದರೆ, ಈ ಮೇಷ್ಟ್ರ ಥರ, ಇದಕ್ಕಿಂತ ಏನು ಬೇಕಾಗುತ್ತೆ ಅಂದ್ಕೊಳ್ತಿದ್ದೆ. ಆದರೆ ನನ್ನ ಈ ಯಜಮಾನ ಭಾವಿಸಿದಂತೆ, ಹೇಳುತ್ತಿದ್ದಂತೆ, ಟೀಚರ್ ಕೆಲಸಕ್ಕಿಂತ ಕಷ್ಟವಾದ್ದು ಮತ್ತೊಂದಿಲ್ಲ, ಅನ್ನುವ ನಂಬಿಕೆ ಉಂಟಾಗುತ್ತಿತ್ತು. ಅದರಲ್ಲೂ ಅವನ ಸ್ನೇಹಿತರು ಯಾರಾದರೂ ಮನೆಗೆ ಬಂದರಂತೂ ಈ ವಿಷಯವನ್ನು ಹೇಳಿದ್ದೇ ಹೇಳಿದ್ದು'.

ಈ ಮನೆಗೆ ಮೊದಲ ಸಲ ಬಂದಾಗ, ಮನೆಯ ಯಜಮಾನನ ಹೊರತು ಯಾರಿಗೂ ನಾನು ಬೇಡವಾಗಿದ್ದೆ. ಎಲ್ಲಿಗೆ ಹೋದರೂ ನನ್ನನ್ನು ಒದ್ದು ಒದ್ದು ಓಡಿಸುತ್ತಿದ್ದರು. ಒಂದು ಚೂರೂ ಕನಿಕರ ತೋರಿಸುತ್ತಿರಲಿಲ್ಲ. ಇವತ್ತಿನವರೆಗೆ ನನಗೊಂದು ಹೆಸರೂ ಕೊಡದಿರುವುದೇ ನನ್ನ ಬಗ್ಗೆ ಅವರಿಗಿರುವ ತಾತ್ಸಾರವನ್ನು ತೋರಿಸುತ್ತೆ. ಅದಕ್ಕೆಂದೇ ನಾನು ಯಾವಾಗಲೂ ಯಜಮಾನನಿಗೇ ಹತ್ತಿರವಾಗಿರಲು ಪ್ರಯತ್ನಿಸುತ್ತೇನೆ.

ಬೆಳಿಗ್ಗೆ ಎದ್ದು ಯಜಮಾನ ಪೇಪರ್ ಓದಲು ಕುಳಿತರೆ, ನಾನು ಹೋಗಿ ಅವನ ಮಡಿಲೇರಿ ಕುಳಿತುಕೊಳ್ಳುತ್ತೇನೆ.; ಸಣ್ಣ ನಿದ್ದೆ ತೆಗೆಯುವಾಗ ಆತನ ಕತ್ತಿನ ಮೇಲೆ ಕೂರುತ್ತೇನೆ. ಇದೆಲ್ಲ ಅವನಿಗೆ ಇಷ್ಟಾಂತಲ್ಲೂ ಅಲ್ಲ; ಇಷ್ಟ ಇಲ್ಲಾಂತಲೂ ಅಲ್ಲ, ಕೇವಲ ಅಭ್ಯಾಸಬಲದಿಂದ ಹಾಗೆ ಮಾಡುತ್ತೇನೆ.

ಅನುಭವದಿಂದ, ಬೆಚ್ಚಗಿರಲು, ಬೆಳಗಿನ ಹೊತ್ತು ಅನ್ನದ ಪಾತ್ರೆ ಮೇಲೆ ಮಲಗುವುದನ್ನೂ, ಸಂಜೆಗಳಲ್ಲಿ ಇದ್ದಿಲ ಒಲೆ ಮೇಲೆ ಮಲಗುವುದನ್ನೂ ಕಲಿತಿದ್ದೇನೆ. ಮಾಮೂಲಿ ದಿನಗಳಲ್ಲಿ, ಅಂದರೆ, ಚಳಿಗಾಲವಲ್ಲದ ದಿನಗಳಲ್ಲಿ ಸಾಮಾನ್ಯವಾಗಿ

ವರಾಂಡಾದಲ್ಲಿ ಮಲಗುತ್ತೇನೆ. ಆದರೆ ಎಲ್ಲಕಿಂತ ನನಗೆ ಹೆಚ್ಚು ಇಷ್ಟವಾಗುವುದೆಂದರೆ ರಾತ್ರಿ ಹೊತ್ತು ಮಕ್ಕಳ ಜೊತೆ, ಒಂದೇ ಹಾಸಿಗೇಲಿ ಬೆಚ್ಚಗೆ ಮಲಗುವುದು. ಮಕ್ಕಳು ಅಂದ್ರೆ, ನಾನು ಹೇಳೋದು, ಏದು ವರ್ಷ, ಮೂರು ವರ್ಷದ ಹೆಣ್ಣು ಮಕ್ಕಳು ಆ ಇಬ್ಬರೂ ಮಕ್ಕಳು, ಒಂದೇ ಹಾಸಿಗೇಲಿ, ತಮ್ಮದೇ ಕೋಣೇಲಿ, ಜೊತೆಯಾಗಿಯೇ ಮಲಗುತ್ತಾರೆ. ಹೇಗೋ ಮಾಡಿ ಮೆಲ್ಲಗೆ ನುಸುಳಿ, ಅವರಿಬ್ಬರ ಮಧ್ಯೆ ಸೇರಿ ಹಾಸಿಗೇಲಿ ಮಲಗಿ ಬಿಡುತ್ತೇನೆ. ಆದರೆ ಇಬ್ಬರಲ್ಲಿ ಯಾರೊಬ್ಬರಿಗೆ ಎಚ್ಚರವಾದರೂ ನನ್ನ ಕತೆ ಮುಗಿದ ಹಾಗೇ. ಅದರಲ್ಲೂ ಆ ಸಣ್ಣವಳು ಇದ್ದಾಳಲ್ಲ, ಮಧ್ಯರಾತ್ರಿ ಎದ್ದು ಕಿರುಚೋಕೆ ಶುರುಮಾಡಿ ಬಿಡ್ತಾಳೆ. ಅಯ್ಯೋ! ಅಯ್ಯೋ ಬೆಕ್ಕು! ಬೆಕ್ಕು! ಮತ್ತೆ ಇಲ್ಲಿಗೆ ಬಂದುಬಿಟ್ಟಿದೆ–ಎಂದು ಛಾವಣಿ ಹಾರಿ ಹೋಗೋ ಹಾಗೆ ಕಿರುಚಿ ಗದ್ದಲ ಶುರುಮಾಡಿದರೆ ಸಾಕು, ಯಜಮಾನ, ಅದೇ ವೀಕ್ ಹೊಟ್ಟೆ ಯಜಮಾನ ಓಡಿ ಬಂದು ಅವರಿಗೆ ಧೈರ್ಯ ಹೇಳಿ ಸಮಾಧಾನ ಮಾಡುತ್ತಾನೆ. ಆದರೆ ಒಂದೇ ಒಂದು ದಿನ ಮಾತ್ರ, ಇಂಥ ಕೆಲಸಕ್ಕಾಗಿ ನನಗೆ ಚೆನ್ನಾಗಿ ಛಡಿಯೇಟು ಕೊಟ್ಟುಬಿಟ್ಟ, ಇದರಿಂದ ಮನುಷ್ಯ ಪ್ರಾಣಿಗಳ ಜೊತೆ ಇರ್ತಾ ಇರ್ತಾ ನನಗೆ ಮನುಷ್ಯರ ಬಗ್ಗೆ ಚೆನ್ನಾಗಿ ತಿಳ್ಕೊಳ್ಳೋಕೆ ಸಾಧ್ಯ ಆಯಿತು. ನನಗಂತೂ ಮನುಷ್ಯರು ತೀರಾ ಕೆಟ್ಟು ಹೋಗಿದ್ದಾರೆ ಅನಿಸಿತು. ಅದರಲ್ಲೂ ಮಕ್ಕಳು ಮತ್ತೂ ಕೆಟ್ಟು ಹೋಗಿದ್ದಾರೆಂದೇ ಮನವರಿಕೆಯಾಯಿತು. ಅವರು ನನ್ನನ್ನು ಹೇಗೆ ಬೇಕೋ ಹಾಗೆ ಆಡಿಸ್ತಾರೆ, ತಲೆ ಕೆಳಗೆ ಮಾಡಿ ಕಾಲಿಂದ ಹಿಡ್ಕೊಳ್ತಾರೆ; ಇಲ್ಲಾಂದ್ರೆ ತಲೆಯನ್ನು ಚೀಲದಲ್ಲಿ ತುರುಕಿಸಿ ಬಿಡ್ತಾರೆ. ಒಂದೊಂದು ಸಲ ಎಲ್ಲೋ ಎಸೀತಾರೆ, ಇಲ್ಲ ಕುಕಿಂಗ್ ರೇಂಜ್ ಒಳಗೆ ತೂರಿಸಿಬಿಡ್ತಾರೆ. ಸಾಲದ್ದಕ್ಕೆ ಇಂಥಾದ್ದನ್ನೆಲ್ಲ ತಡೆಯೋಕೆ ಪ್ರಯತ್ನ ಪಟ್ಟು ಏನಾದರೂ ಮಾಡಿದರೆ ಮನೆಮಂದಿಯೆಲ್ಲ ಆಕ್ರಮಣ ಮಾಡೋಕೆ ತುದಿಗಾಲ ಮೇಲೆ ಬಂದು ನಿಂತು ಬಿಡ್ತಾರೆ. ಒಂದು ಸಲ ಏನಾಯ್ತಂದ್ರೆ ನನ್ನ ಪಂಜನ್ನು ಚೂಪು ಮಾಡಿಕೊಳ್ಳಲು ಹುಲ್ಲಿನ ಚಾಪೆಯನ್ನು ಕೆರೆಯುತ್ತಿದ್ದೆ. ಅದೇ ಸಮಯಕ್ಕೆ ಮನೆ ಯಜಮಾನಿ ಒಳಕ್ಕೆ ಬಂದು, ನಾನು ಮಾಡ್ತಿದ್ದ ಕೆಲಸ ನೋಡಿ ಭಯಂಕರ ಸಿಟ್ಟಿಗೆದ್ದಳು. ಆ ದಿನದಿಂದ ಸಿಟ್ಟಿಂಗ್ ರೂಂಗೆ ಪ್ರವೇಶವನ್ನು ನಿಷೇಧಿಸಿ ಬಿಟ್ಟಳು. ಅಡಿಗೆ ಮನೇಲಿ ನಾನೆಷ್ಟೇ ಚಳಿಯಿಂದ ನಡುಗುತ್ತಾ ಬಿದ್ದಿರಲಿ, ಒಳಕ್ಕೆ ಮಾತ್ರ ಕರೆದುಕೊಳ್ಳುತ್ತಿರಲಿಲ್ಲ. ಒಂದು ಸಲ ರಸ್ತೇಲಿ ಹೋಗುವಾಗ, ನಾನು ಬಹಳವಾಗಿ ಗೌರವಿಸುತ್ತಿದ್ದ ಷಿರೋ ಎದುರಾದಳು. ಅವಳಿಗೆ ನನ್ನ ಕಷ್ಟ ಹೇಳಿಕೊಂಡ. ಮನುಷ್ಯರಷ್ಟು ನಿರ್ದಯಿಗಳು ಬೇರೆ ಯಾರೂ ಇರೊಲ್ಲ ಅನ್ನುವ ಮಾತನ್ನು ಮತ್ತೆ ಮತ್ತೆ ಹೇಳಿ ಸಮಾಧಾನ ಮಾಡಲು ಪ್ರಯತ್ನಿಸುತ್ತಿದ್ದಳು.

ಮೊನ್ನೆ ತಾನೇ ಷಿರೋ ನಾಲ್ಕು ಮರಿಗಳಿಗೆ ಜನ್ಮ ಕೊಟ್ಟಳು. ಆದರೆ; ಒಂದು ಕುಟುಂಬದ ಜೊತೆಗೆ ವಾಸ ಮಾಡುತ್ತಿದ್ದ. ಸ್ಟೂಡೆಂಟ್. ಆ ನಾಲ್ಕು ಮರಿಗಳನ್ನು, ಹುಟ್ಟಿದ ಮೂರನೇ ದಿನವೇ ಮನೆಯ ಹಿಂದೆ ಇದ್ದ ಕೊಳದಲ್ಲಿ ಎತ್ತಿ ಎಸೆದುಬಿಟ್ಟ.

ಇದನ್ನು ಹೇಳುವಾಗ ಷಿರೋ ಕಣ್ಣಲ್ಲಿ ಕಂಬನಿ ತುಂಬಿತ್ತು. ಬೆಕ್ಕುಗಳೇನಾದರೂ ತಂದೆ ತಾಯಿ ಸುಖವನ್ನು ಅನುಭವಿಸಬೇಕಾದರೆ, ಮನುಷ್ಯ ಜಾತಿಯನ್ನೇ ಇಲ್ಲವಾಗಿಸಬೇಕು ಎಂದು ಸಂಕಟದಿಂದ ಹೇಳಿದಳು. ಹೌದು ಅವಳು ಹೇಳಿದ್ದು ತರ್ಕಬದ್ಧವಾಗಿತ್ತು. ಇವಳ ವಿಚಾರವನ್ನು ಪಕ್ಕದ ಮನೆಯ ಮೈಕ್‌ಗೆ ಹೇಳಿದಾಗ, ಅವನಿಗೆ ಬಂದ ಕೋಪ ಅಷ್ಟಿಷ್ಟಲ್ಲ. ಮನುಷ್ಯರಿಗೆ ಬೇರೆಯವರಿಗಿರುವ ಹಕ್ಕನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗಿಲ್ಲ. ನಾವು ಬೆಕ್ಕುಗಳು, ನಮಗೇನಾದರೂ ಒಣಗಿದ ಮೀನುಗಳ ತಲೆಯಾಗಲೀ, ಮತ್ತ್ಯಾವುದೇ ಭಾಗವಾಗಲಿ, ಕಣ್ಣಿಗೆ ಬಿದ್ದರೆ ತಿನ್ನುವ ಅಧಿಕಾರವನ್ನು ಪಡೆದಿದ್ದೇವೆ. ಈ ಅಧಿಕಾರ, ಹಕ್ಕನ್ನು ನಮ್ಮಿಂದ ಕಿತ್ತುಕೊಳ್ಳುವುದು ಯಾವ ನ್ಯಾಯ. ಆದರೆ ಏನು ಮಾಡೋದು, ಮನುಷ್ಯ ತಮ್ಮ ಬಲದಿಂದಾಗಿ, ನಮಗೆ ಮೀಸಲಾದುದನ್ನು ತಾವೇ ಅನುಭವಿಸುವುದಲ್ಲದೆ, ತಾವು ಮಾಡುವುದೇ ಸರಿಯಾದ್ದು ಅಂತ ವಾದ ಬೇರೆ ಮಾಡ್ತಾರೆ.

ಷಿರೋ ಒಬ್ಬ ಸೈನಿಕನ ಮನೆಯಲ್ಲಿ ವಾಸವಾಗಿದ್ದಾಳೆ. ಮೈಕ್ ಒಬ್ಬ ಲಾಯರ್ ಮನೆಯಲ್ಲಿ ವಾಸವಾಗಿದ್ದಾನೆ. ನಾನೋ ಒಬ್ಬ ಟೀಚರ್ ಮನೇಲಿದ್ದೀನಿ. ಹಾಗೆ ನೋಡಿದರೆ ಇಂಥ ವಿಷಯಗಳಲ್ಲಿ ಅವರಿಗಿಂತ ನಾನು ಅದೃಷ್ಟವಂತ. ನೆಮ್ಮದಿಯಿಂದ ದಿನ ಕಳೆಯಲು ಪ್ರಯತ್ನಿಸುವುದರಲ್ಲಿಯೇ ನನಗೆ ತೃಪ್ತಿಯಿದೆ. ಮನುಷ್ಯ ಜಾತಿ ಎಂದೆಂದಿಗೂ ಹೀಗೆ ಸುಖವಾಗಿ ಇರೊಲ್ಲ ಅನ್ನೋದು ನನ್ನ ನಂಬಿಕೆ. ಆದ್ದರಿಂದ ತಾಳ್ಮೆಯಿಂದ, ನೆಮ್ಮದಿಯಿಂದ ಇರ್ತಾ ಬೆಕ್ಕುಗಳಿಗೆ ಆಳುವ ಅಧಿಕಾರ ಬರುವ ಸಮಯಕ್ಕಾಗಿ ಎದುರುನೋಡ್ತಾ ಇರಬೇಕಾಗುತ್ತದೆ.

ಸ್ವಾರ್ಥ ಅಂತ ಏನೋ ಹೇಳ್ತಾರಲ್ಲ. ಅದರಿಂದಾಗಿ ಅವರು ಹೇಗೆ ನಡ್ಕೋಳ್ತಾರೆ ಅನ್ನೋದಕ್ಕೆ ನನ್ನ ಯಜಮಾನನ ವಿಚಾರಕ್ಕೆ ಬರ್ತೀನಿ. ನಿಜ ಹೇಳಬೇಕೆಂದರೆ, ನನ್ನ ಯಜಮಾನನಿಗೆ ಏನೂ ಗೊತ್ತಾಗೋದಿಲ್ಲ. ಆದರೂ ಪ್ರತಿಯೊಂದು ವಿಚಾರದಲ್ಲೀ ಮೂಗು ತೂರಿಸಲು ಮುಂದಾಗುತ್ತಾನೆ. ಹೈಕುಗಳನ್ನು ಬರೆದು 'ಹೊಟೋಟೋಗಿಸು' ಪತ್ರಿಕೆಗೆ ಕಳಿಸಿಕೊಡ್ತಾನೆ. ಇಲ್ಲಿ ನವ್ಯ ಕವಿತೆಯನ್ನು ಬರೆದಾಗ 'ಮ್ಯೋಜೋ' ಪತ್ರಿಕೆಗೆ ಕಳಿಸುತ್ತಾನೆ. ಆಗಾಗ ಇಂಗ್ಲೀಷ್‌ನಲ್ಲಿಯೂ ಪದ್ಯ ಹೊಸೀತಾನಾದರೂ ಅದರ ತುಂಬಾ ಸ್ಪೆಲಿಂಗ್ ದೋಷಗಳಿರುತ್ತವೆ. ಇವುಗಳ ಜೊತೆಗೆ ಆರ್ಚರಿ ಕಲಿಯುವುದರಲ್ಲಿಯೋ, ಗೀತ ನಾಟಕಗಳನ್ನು ಹಾಡುವ ಪ್ರಯತ್ನದಲ್ಲಿಯೋ, ವಯಲಿನ್‌ನಲ್ಲಿ ತಪ್ಪು ತಪ್ಪಾಗಿ ಸ್ವರಗಳನ್ನು ನುಡಿಸುವುದರಲ್ಲಿಯೋ ತುಂಬಾ ಮಗ್ನನಾಗಿರುತ್ತಾನೆ. ಆದರೆ ದೊಡ್ಡ ದುರಂತವೆಂದರೆ, ಇಷ್ಟೆಲ್ಲ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರೂ ಯಾವುದನ್ನೂ ನೆಟ್ಟಗೆ ಮಾಡಲು ಅವನಿಂದ ಸಾಧ್ಯವಾಗಿಲ್ಲ. ವೀಕ್ ಕೊಟ್ಟೆ ಇಟ್ಕೊಂಡೂ ಸಾಧ್ಯವಾದದ್ದನ್ನೆಲ್ಲಾ ಮಾಡ್ತಾನೇ ಇರ್ತಾನೆ.

ಅವನು ಟಾಯಲೆಟ್ ಹೊಕ್ಕರೆ ಗುಣುಗುಣಿಸುವುದಕ್ಕೆ ಶುರುಮಾಡ್ತಾನೆ. ಅದಕ್ಕೆ ಅವನಿಗೊಂದು ಅಡ್ಡ ಹೆಸರಿದೆ. 'ಮೆನ್ಸ್‌ರೂಮ್' ಅಂತ. ಅವನ ಅಕ್ಕಪಕ್ಕದವರೆಲ್ಲ ಸೇರಿ ಅವನಿಗೆ ಆ ಹೆಸರಿಟ್ಟಿದ್ದಾರೆ. ಆದರೆ ಅವನು ಇದಕ್ಕೆಲ್ಲ ತಲೆ ಕೆಡಿಸಿಕೊಳ್ಳುವುದಿಲ್ಲ. ತನ್ನ ಅಭ್ಯಾಸ ಮುಂದುವರೆಸಿಕೊಂಡೇ ಹೋಗ್ತಾನೆ. ಇದನ್ನೇ ಅವರಲ್ಲಿ ತೈರಾ-ನೋ ಮ್ಯುನೆಮೊರಿ-ಅಂತ ಕರೀತಾರೆ. ಅವನು ಆ ಕಡೆ ಈ ಕಡೆ ಹೋದಾಗಲೆಲ್ಲ-ಅಲ್ನೋಡು 'ಮ್ಯುನೆಮೊರಿ' ಆ ಕಡೆ ಹೋಗ್ತಿದ್ದಾನೆ ಅಂತ ಹೇಳಿ ಗಟ್ಟಿಯಾಗಿ ನಕ್ಕು ಗೇಲಿ ಮಾಡ್ತಾರೆ. ನಾನು ಅಲ್ಲಿ, ಆ ಮನೇಲಿ ನೆಲೆಸಿದ ಒಂದು ತಿಂಗಳ ಮೇಲೆ, ಒಂದು ದಿನ, ಅದೂ ಸಂಬಳದ ದಿನ, ಕಂಕುಳಲ್ಲಿ ಒಂದು ದೊಡ್ಡ ಮೂಟೆ ಹಿಡ್ಕೊಂಡು ತುಂಬಾ ಖುಷಿಯಾಗಿ ಮನೆಗೆ ಬಂದ. ನನಗಂತೂ ಅವನು ತಂದಿದ್ದ ಮೂಟೇಲಿ ಏನಿದೆಯೋ ನೋಡುವ ಕುತೂಹಲ!

ಅವನು ತಂದಿದ್ದ ಆ ಪ್ಯಾಕೇಜಿನಲ್ಲಿ ವಾಟರ್‌ಕಲರ್ಸ್ ಬ್ರಷ್ಷುಗಳು, ಡ್ರಾಯಿಂಗ್ ಪೇಪರ್ ಇತ್ಯಾದಿ ವಸ್ತುಗಳು ಇದ್ದವು. ನೋಡಿದರೆ, ಅವನು ಗೀತನಾಟಕಗಳನ್ನು ಹಾಡುವುದು, ಪದ್ಯ ಬರೆಯೋದು ಎಲ್ಲಾ ನಿಲ್ಲಿಸಿ ಬಿಟ್ಟು ಪೈಂಟಿಂಗ್ ಹುಕಿಗೆ ಬಿದ್ದ ಹಾಗೆ ಕಾಣಿಸುತ್ತಿತ್ತು. ಮರುದಿನ ಅವನು ಕೋಣೆಯೊಳಗೆ ಸೇರಿಕೊಂಡು ಬಿಟ್ಟ. ನಿದ್ದೇನೂ ಮಾಡದೆ ಬಹಳ ಗಂಭೀರವಾಗಿ ಚಿತ್ರಗಳನ್ನು ಬರೆದು ಬರೆದು ಇರಿಸಿದ. ಇದು ನಿತ್ಯ ಮುಂದುವರೆಯಿತು. ಆದರೆ ಅವನು ಎಂಥೆಂಥ ಚಿತ್ರ ಬರೆದಿದ್ದಾನೆ ಅನ್ನೋದು ಮಾತ್ರ ನಿಗೂಢವಾಗಿಯೇ ಇತ್ತು. ಯಾರಿಗೂ ಊಹಿಸಲೂ ಆಗಿರಲಿಲ್ಲ. ನನ್ನ ಯಜಮಾನನಿಗೆ ಒಂದು ದಿನ ಜ್ಞಾನೋದಯವಾಯಿತು. ತನ್ನನ್ನು ತಾನು ತಿಳಿದುಕೊಂಡಷ್ಟು ಒಳ್ಳೆ ಪೈಂಟರ್ ಅಲ್ಲ ಅನ್ನೋದು ಗೊತ್ತಾಯಿತು. ಒಂದು ದಿನ ಅವನು ತನ್ನ ಜೊತೆಗೆ ಒಬ್ಬ ವ್ಯಕ್ತಿಯನ್ನು ಆತ ಸೌಂದರ್ಯ ಶಾಸ್ತ್ರಜ್ಞನಂತೆ. ಇಬ್ಬರೂ ಏನೇನೋ ಮಾತಾಡಿಕೊಂಡರು. ನನ್ನ ಯಜಮಾನ ಹೇಳಿದ-ಎಂಥ ವಿಚಿತ್ರ, ನಾವು ತುಂಬಾ ಚೆನ್ನಾಗಿ ಬರೀಬೇಕು ಅಂದ್ಕೊಳ್ಳೋದನ್ನು ಬರೆಯೋಕೆ ಎಷ್ಟು ಕಷ್ಟವಾಗುತ್ತೆ! ನೋಡಿದರೆ ಬಹಳ ಸುಲಭ ಅಂತ ಅನ್ಸತ್ತೆ. ಆದರೆ ನಿಜವಾಗಿಯೂ ಅದನ್ನು ಬರೆಯಲು ಹೋದರೆ, ಎಷ್ಟು ಕಷ್ಟ ಅನ್ನೋದು ಅರಿವಿಗೆ ಬರುತ್ತೆ. ಅಂದ್ಕೊಳ್ಳೋದು, ಬರೆಯೋದು, ಎರಡೂ ಬೇರೆ ಬೇರೆ." ಅವನು ಹೇಳಿದ ಮಾತಿಗೆ ಅವನೇ ಸಾಕ್ಷಿಯಾಗಿದ್ದ.

ಅವನ ಗೆಳೆಯ ಚಿನ್ನದ ಕಟ್ಟಿನ ಕನ್ನಡಕದ ಮೂಲಕ ನೋಡುತ್ತಾ ಹೇಳಿದ- "ಪ್ರಾರಂಭದಲ್ಲಿಯೇ ಎಲ್ಲಾ ಚೆನ್ನಾಗಿ ಬರಬೇಕೂಂತ ನಿರೀಕ್ಷಿಸುವುದು ಸರಿ ಅಲ್ಲ. ಮೊದಲಿಗೆ, ಪ್ರಾರಂಭದಲ್ಲಿಯೇ ಬರೀ ಕಲ್ಪನೆಯಿಂದ ಚಿತ್ರ ಬರೆಯೋದು, ಅದೂ ರೂಮಲ್ಲಿ ಒಬ್ಬರೇ ತಮಗೆ ತಾವೇ ಬಾಗಿಲು ಹಾಕ್ಕೊಂಡು ಬರೆಯೋದು ಮತ್ತೂ ಅಸಾಧ್ಯ. ಒಂದು ಸಲ ಇಟಾಲಿಯನ್ ಪೈಂಟರ್ ಒಬ್ಬ ಏನು ಹೇಳಿದ ಗೊತ್ತಾ? ಏನಾದರೂ ಚಿತ್ರ ಬರೀಬೇಕಾದ್ರೆ. ನಿಸರ್ಗವನ್ನು ಅದರ ವಸ್ತುಸ್ಥಿತಿ ಅಥವಾ

ವಾಸ್ತವತೆಯೊಂದಿಗೆ ವಿಶ್ಲೇಷಿಸಬೇಕು ಅಂತ ಹೇಳಿದ್ದಾನೆ. ಆಕಾಶ, ಅಲ್ಲಿನ ನಕ್ಷತ್ರಗಳು, ಭೂಮಿ, ಅರಳುವ ಹೂಗಳು; ಹಾಡುವ ಹಕ್ಕಿಗಳು; ಓಡುವ ಪ್ರಾಣಿಗಳು; ಕಪ್ಪು ಕಾಗೆಗಳು-ಎಲ್ಲ, ಎಲ್ಲವೂ ಸಜೀವ ಜಗತ್ತಿನ ಸುಂದರ, ಅದ್ಭುತ ದೃಶ್ಯಗಳು-ಇವುಗಳ ಬಗ್ಗೆ ಏನಂತೀ? ನಿಜವಾಗಿಯೂ ಚಿತ್ರ ಬರೆಯಲೇ ಬೇಕು ಎನಿಸಿದರೆ ಕೆಲವು ಸ್ಕೆಚ್‌ಗಳನ್ನೇಕೆ ಮಾಡಬಾರದು.

"ದೆಲ್ ಸಾರ್ತೋ ನಿಜವಾಗಿಯೂ ಇದನ್ನೆಲ್ಲಾ ಹೇಳಿದ್ದಾನೇನು?....ನನಗೆ ಅವೆಲ್ಲಾ ಗೊತ್ತೇ ಇರಲಿಲ್ಲ. ಇರಲಿ. ನೀನು ಹೇಳಿದ ಹಾಗೇ ಮಾಡೋಣ" ಅಂತ ನನ್ನ ಯಜಮಾನ ಹೋದ, ಅದೂ ಮೆಚ್ಚುಗೆಯ ಭಾವದೊಂದಿಗೆ! ಕನ್ನಡಕದ ಹಿಂದಿನ ಕಣ್ಣುಗಳು ಮಾತ್ರ ಸ್ವಲ್ಪ ಸಿಟ್ಟಿನಿಂದ ನೋಡಿದವು.

ಮಾರನೇ ದಿನ ನಾನು ವರಾಂಡದಲ್ಲಿ ಹಾಯಾಗಿ ನಿದ್ದೆಯ ಸುಖದಲ್ಲಿ ಮುಳುಗಿದ್ದಾಗ, ಯಜಮಾನ ಸ್ಟಡಿ ರೂಮಿನಿಂದ ಹೊರಗೆ ಬಂದ ಮತ್ತು ಎಂದೂ ಇಲ್ಲದ ವಿಚಿತ್ರವೆಂಬಂತೆ, ಬಂದವನು ನನ್ನ ಪಕ್ಕದಲ್ಲಿ ಕುಳಿತುಕೊಂಡ. ಅವನು ಏನು ಮಾಡಲು ಹೊರಟಿದ್ದಾನೆ ಅನ್ನುವುದನ್ನು ತಿಳಿಯುವುದಕ್ಕೋಸ್ಕರ ಕಣ್ಣನ್ನು ಅರ್ಧ ತೆರೆದು ನೋಡಿದೆ. ಇಟಾಲಿಯನ್ ಪೈಂಟರ್ ಆ್ಯಂಡ್ರಿಯಾ ದೆಲ್ ಸಾರ್ತೋನ ಸಿದ್ಧಾಂತವನ್ನು ನನ್ನ ಮೇಲೆ ಪ್ರಯೋಗ ಮಾಡಲು ಹೊರಟಂತೆ ಕಾಣಿಸಿತು. ನನಗೆ ನಗು ತಡೆಯಲು ಆಗಲಿಲ್ಲ. ಯಜಮಾನ ತನ್ನ ಗೆಳೆಯನ ಮಾರ್ಗದರ್ಶನದಂತೆ, ನನ್ನನ್ನು ಮಾಡೆಲ್ ಆಗಿ ಇರಿಸಿಕೊಂಡು, ಸ್ಕೆಚ್ ಮಾಡಲು ಪ್ರಯತ್ನಿಸುತ್ತಿದ್ದ.

ನಾನು ನಿದ್ದೆ ಮಾಡುತ್ತಿರುವಂತೆ ನಟಿಸುವುದನ್ನು ಮುಂದುವರೆಸಿದ್ದೆ. ಆಕಳಿಸಲು ಬಾಯಿ ತೆರೆಯಲು ಕಾಯುತ್ತಿದ್ದೆ. ಆದರೆ ನನ್ನ ಯಜಮಾನ ಎಷ್ಟೊಂದು ಕಷ್ಟಪಟ್ಟು ಸ್ಕೆಚ್ ಮಾಡಲು ಪ್ರಯತ್ನಿಸುತ್ತಿರುವುದನ್ನು ನೋಡಿ, ಅಯ್ಯೋ ಪಾಪವೆನಿಸಿ, ಆಕಳಿಕೆಯನ್ನು ಬಲವಂತವಾಗಿ ಒತ್ತಿ ಹಿಡಿದೆ. ಮೊದಲು ನನ್ನ ಆಕಾರವನ್ನು ಬಿಡಿಸಿದ. ನಂತರ ಬಣ್ಣಗಳನ್ನು ತುಂಬಿಸಲು ಮುಂದಾದ. ಇಲ್ಲಿ ನಾನೊಂದು ಸತ್ಯವನ್ನು ಒಪ್ಪಿಕೊಳ್ಳಲೇಬೇಕು. ಬೆಕ್ಕುಗಳ ವಿಚಾರವಾಗಿ ಹೇಳಬೇಕೆಂದರೆ, ಅದರಲ್ಲೂ ನನ್ನ ವಿಚಾರವಾಗಿ ಹೇಳಬೇಕೆಂದರೆ, ನಾನು ಅಂತಹ ಸುಂದರ ಪ್ರಾಣಿ ಅಲ್ಲವೇ ಅಲ್ಲ. ಬೇರೆ ಬೆಕ್ಕುಗಳಿಗೆ ಹೋಲಿಸಿದರೆ ನನ್ನ ಬೆನ್ನು, ನನ್ನ ದೇಹದ ಮೇಲಿನ ತುಪ್ಪಳ, ಚರ್ಮ, ನನ್ನ ಮುಖ-ಹೀಗೆ ಯಾವುದೂ ಅವುಗಳಿಗಿಂತ ಚೆನ್ನಾಗಿದೆ ಅಂತ ಹೇಳೋಕೆ ಆಗೊಲ್ಲ. ಆದರೂ ಒಂದಂತೂ ನಿಜ. ನನ್ನ ಯಜಮಾನ ಚಿತ್ರಿಸಿದ ನನ್ನ ಚಿತ್ರದಲ್ಲಿ ಇರುವುದಕ್ಕಿಂತ, ಸುಂದರವಾಗಿದ್ದೇನೆ. ಅನ್ನೋದರಲ್ಲಿ ಯಾವ ಅನುಮಾನವೂ ಇಲ್ಲ. ನನ್ನ ಚಿತ್ರಕ್ಕೆ ಹಚ್ಚಿದ ಬಣ್ಣಗಳೆಲ್ಲ ತಪ್ಪು. ಯಾರೇ ನೋಡಿದರೂ, ನಾನು ಪರ್ಷಿಯನ್ ಬೆಕ್ಕಿನಂತೆಯೇ ಹೆಚ್ಚು ಕಡಿಮೆ ಅದೇ ಹಳದಿ ಛಾಯೆಯೊಂದಿಗೆ, ಬೂದು ಬಣ್ಣ,

ಅರಿಗಿನ ಬಣ್ಣದ ಚುಕ್ಕಿಗಳೊಂದಿಗೆ ಕಾಣಿಸುತ್ತೇನೆ. ಆದರೆ ನನ್ನ ಯಜಮಾನ ಬಿಡಿಸಿದ ಚಿತ್ರದಲ್ಲಿ ಬೂದು ಬಣ್ಣವಾಗಲೀ, ಹಳದಿಯಾಗಲೀ, ಕಪ್ಪು ಬಣ್ಣವಾಗಲೀ, ಕಂದುಬಣ್ಣವಾಗಲೀ ಇರಲಿಲ್ಲ. ಎಲ್ಲ ಬಣ್ಣಗಳ ಬೆರಕೆಯ ಬಣ್ಣವಾಗಲೀ ಇರಲಿಲ್ಲ. ಅದೇನೋ ಹಲವು ಬಣ್ಣಗಳ ಛಾಯೆಯನ್ನು ಬೆರಸಿ ಲೇಪಿಸಿದಂತೆ ಇತ್ತು. ಚಿತ್ರದ ಇನ್ನೊಂದು ವಿಶೇಷವೆಂದರೆ ಅದಕ್ಕೆ ಕಣ್ಣುಗಳೇ ಇರಲಿಲ್ಲ. ಇರಲಿ ಅದು ಅಷ್ಟು ದೊಡ್ಡ ತಪ್ಪೇನಲ್ಲ. ಯಾಕಂದ್ರೆ ನಾನು ಕಣ್ಣು ಮುಚ್ಚಿದ್ದರಿಂದ, ಕಣ್ಣುಗಳನ್ನು ತೋರಿಸಲಿಲ್ಲವೆಂದು ಒಪ್ಪಿಕೊಳ್ಳುತ್ತೇನೆ. ಆದರೆ ಕಣ್ಣುಗಳು ಎಲ್ಲಿವೆಯೆಂಬುದೇ ತಿಳಿಯುತ್ತಿರಲಿಲ್ಲ. ಹಾಗಾಗಿ ನಾನು ಮಲಗಿರುವೆನೋ, ಎದ್ದಿರುವೆನೋ–ಯಾವುದೂ ತಿಳಿಯುತ್ತಿರಲಿಲ್ಲ. ನಾನು ಯೋಚಿಸಿದೆ. ದೆಲ್ ಸಾರ್ತೋರ್ ಹೇಳುವ ರೀತಿಯಲ್ಲಿನ ಚಿತ್ರಗಳು ಹೀಗೇ ಇರುವುದಾದರೆ, ಅವುಗಳಿಗೆ ಕಾಸಿನ ಬೆಲೆಯೂ ಇರಲಾರದು.

ಆದರೆ ನನ್ನ ಯಜಮಾನನ ಉತ್ಸಾಹವನ್ನು ನೋಡಿದರೆ ನಿಜವಾಗಿಯೂ ಮೆಚ್ಚಬೇಕಾಗುತ್ತೆ. ಅದಕ್ಕೆಂದೇ ಚಿತ್ರ ಬಿಡಿಸುವವರೆಗೂ ಕದಲದೆ ಸುಮ್ಮನೆ ಕುಳಿತಿದ್ದೆ. ತುಂಬಾ ಹೊತ್ತಿಂದ ಹೊರಗೆ ಹೋಗಿ ಉಚ್ಚೆ ಮಾಡಿ ಬರಬೇಕೆಂದುಕೊಳ್ಳುತ್ತಿದ್ದರೂ ಯಜಮಾನನ ಮಗ್ನತೆಗೆ ಭಂಗ ಬರುತ್ತದೆಂದು ತಡೆ ಹಿಡಿದುಕೊಂಡು ಕುಳಿತಿದ್ದೆ. ಆದರೆ ನನ್ನ ಸ್ನಾಯುಗಳು ಬಿಗಿದುಕೊಂಡಿರಲು ಸಾಧ್ಯವಾಗದೆ, ಬಹಳ ಹೊತ್ತು ತಡೆ ಹಿಡಿದುಕೊಳ್ಳುವುದನ್ನು ಮುಂದುವರೆಸಲು ಆಗುವುದಿಲ್ಲವೆನಿಸುತ್ತಿತ್ತು. ಏನೋ ನೆಪದೊಂದಿಗೆ ಮೈಯನ್ನು ಉದ್ದಕ್ಕೆ ಚಾಚಿದೆ. ಮುಂಗಾಲುಗಳನ್ನು ಮುಂದಕ್ಕೆ ನೂಕಿದೆ. ತಲೆಕೊಡವಿ, ಕತ್ತು ಹಿಡಿದುಕೊಂಡದ್ದನ್ನು ನಿವಾರಿಸಿದೆ. ಇಷ್ಟೆಲ್ಲ ಮಾಡಿದ ಮೇಲೆ ಇನ್ನೂ ಪೋಸ್ ಕೊಟ್ಟು ಕುಳಿತುಕೊಳ್ಳಬೇಕಿರಲಿಲ್ಲ. ಯಾಕೆಂದರೆ ಈಗ ನನ್ನ ಪೊಸಿಷನ್ ಬದಲಾಗಿತ್ತು. ನಂತರ ಹೊರಗೋಡಿ ಮಾಡಬೇಕೆಂದುಕೊಂಡದ್ದನ್ನು ಮಾಡಿ ಮುಗಿಸಿ ನಿರಾಳವಾದೆ.

ಆದರೆ ಯಜಮಾನನಿಗೆ ಕೋಪ, ನಿರಾಶೆಗಳುಂಟಾದವು. ಈ ಮನಃ ಸ್ಥಿತಿಯಲ್ಲಿ ಸಾಧಾರಣವಾಗಿ ಅವನು ಬಳಸುತ್ತಿದ್ದ, 'ಯೂ ಫೂಲ್' ಎನ್ನುವ ಬೈಗಳಿಂದ ನನಗೆ ಸಂಪ್ರೋಕ್ಷಣೆ ಮಾಡಿದ. ಇದಕ್ಕಿಂತ ಬೇರೆ ಬೈಗುಳು ಅವನಿಗೆ ಗೊತ್ತೇ ಇರಲಿಲ್ಲ. ನಾನು ಎಷ್ಟು ಹೊತ್ತಿನಿಂದಲೋ ಉಚ್ಚೆ ಹೊಯ್ಯುವುದಕ್ಕಾಗಿ ಚಡಪಡಿಸುತ್ತಿರುವುದು ಅವನಿಗೆ ಗೊತ್ತಿರಲಿಲ್ಲವೆಂಬ ಸತ್ಯದ ಅರಿವಿದ್ದರೂ ಕೂಡಾ, ಈ ರೀತಿಯ ಬೈಗುಳಿಗಾಗಿ ಅವನನ್ನು ಅನಾಗರಿಕ ಎನ್ನದೆ ಸುಮ್ಮನೆ ಇರಲಾರೆ. ಯಾಕೇಂದ್ರೆ ಅವನು ಎಂದೂ ಒಂದು ಮುಗುಳ್ನಗೆಯನ್ನು ಸೂಚಿಸಿರಲಿಲ್ಲ; ಪ್ರೀತಿಯಿಂದ ಓಡಿ ಹೋಗಿ ಬೆನ್ನು ತಟ್ಟಿದ್ದನ್ನು ಸಹಿಸಲಿಲ್ಲ. ಹೀಗೆಲ್ಲ ಮಾಡಿದ್ದರೆ ಬಹುಶಃ ಅವನನ್ನು ಕ್ಷಮಿಸಬಹುದಾಗಿತ್ತು. ಆದರೆ ಉಚ್ಚೆ ಮಾಡಿ ಬರಲೂ ಅವಕಾಶವಿಲ್ಲದಂತೆ ಮಾಡಿದ್ದ; ಅಲ್ಲದೆ 'ಯೂಫೂಲ್!'

ಅಂದದ್ದು ಮಾತ್ರ ಯಾಕೋ ನನಗೆ ಹಿಡಿಸಲಿಲ್ಲ. ಈ ಮನುಷ್ಯರು ತಮ್ಮನ್ನು ಬಹಳ ಬಹಳ ದೊಡ್ಡವರೂಂತ ತಿಳಿದುಕೊಂಡಿದ್ದಾರೆ. ನಮ್ಮ ಕೈಗೆ ಎಂದಾದರೂ ಅಧಿಕಾರ ದಕ್ಕಿಸಿಕೊಳ್ಳಲು ಸಾಧ್ಯವಾಗದಿದ್ದರೆ, ಇವರು ನಮ್ಮನ್ನು ಇನ್ನೂ ಏನೇನೋ ಮಾಡಿಬಿಡ್ತಾರೆ.

ಅವರ ಉದ್ಧಟತನ ಮಾತ್ರವಲ್ಲದೆ, ಇನ್ನೂ ಎಷ್ಟೋ ಅವಗುಣಗಳನ್ನು ಕೇಳಿದ್ದೇನೆ. ಅವರಿಗೆ ಮೌಲ್ಯಗಳಾಗಲೀ, ನೀಯತ್ತಾಗಲೀ ಏನೂ ಇಲ್ಲ. ಅವರು ಎಷ್ಟು ದುಷ್ಟರೆಂದರೆ ಹೇಳಲೂ ಕೂಡಾ ಸಾಧ್ಯವಿಲ್ಲ.

ಮೂಲ : ಜಪಾನಿ ಕಥೆಗಾರ
ನಾಟ್ಸುಮೆಸೋಸ್ಕಿಯ
ಐ ಯಾಮ್ ಎ ಕ್ಯಾಟ್

❖ ❖ ❖

ಮೂಡಿ ಮಿಡಿಸಿದ ಚಹರೆ

ಮನಸ್ಸು ಅಸ್ವಸ್ಥವಾಗಿತ್ತು. ಒಂದಷ್ಟು ಹೊರಗಡೆ ಅಡ್ಡಾಡಿ ಬಂದರೆ ಉಮ್ಮಳ, ಬೇಸರ ಕಡಿಮೆಯಾದೀತೆಂದು ಹೊರಗೆ ಹೆಜ್ಜೆ ಹಾಕಿದೆ. ನೋಡುತ್ತೇನೆ... ಪ್ರಶಾಂತತೆ ಬಯಸಿ ಬಂದ ನನಗೆ ಸುತ್ತಲಿನ ಸ್ಥಿತಿ ನೋಡಿ ಗಾಬರಿಯಾಯಿತು. ಆಕಾಶದ ತುಂಬ ದಟ್ಟ ಮೋಡಗಳು ಕವಿದಿವೆ. ಕತ್ತಲಿನ ಕಾರಣದಿಂದ ಏನೊಂದೂ ತಮ್ಮ ಆಕಾರಗಳಲ್ಲಿ ಕಾಣಿಸುತ್ತಿಲ್ಲ. ಕತ್ತಲು... ಕತ್ತಲು... ಎಲ್ಲೆಲ್ಲೂ ಕತ್ತಲು ಚೆಲ್ಲಿದೆ. ನನಗೆ ಆಶ್ಚರ್ಯವಾಯಿತು. ಎಲ್ಲಿ ಹೋದವು ಈ ನಕ್ಷತ್ರಗಳು... ಎಲ್ಲಿ ಹೋದ ಬೆಳ್ಳಿ ಚಂದ್ರ?...

ಇದೇನು ಇಷ್ಟು ಬೇಗ ರಾತ್ರಿಯಾಯಿತೇ? ಕತ್ತಲು ಕವಿಯಿತೇ? ಇಲ್ಲ. ಇಲ್ಲ. ನಾನು ಎದ್ದಾಗ ಗಂಟೆ ನೋಡಿದ್ದೆ. ಸಂಜೆ ನಾಲ್ಕು ಗಂಟೆ? ನಾಲ್ಕು ಗಂಟೆಗೇ ಇಷ್ಟೊಂದು ಕತ್ತಲೆಯೇ? ಅಥವಾ ನಾನೇ ಸಂಜೆ, ರಾತ್ರಿಗಳನ್ನು ಗುರುತಿಸುವಲ್ಲಿ ತಪ್ಪು ಮಾಡಿದ್ದೇನೆಯೇ? ಯಾವುದೂ ಅರ್ಥವಾಗದೆ ವಿಚಿತ್ರ ಮನಃಸ್ಥಿತಿಯಲ್ಲಿ, ಗೊಂದಲಗಳ ನಡುವಿನಲ್ಲಿ ಇದ್ದಂತೆನಿಸಿತು. ನನ್ನ ಕಣ್ಣು ಗ್ರಹಿಕೆಯ ಸತ್ಯಾಸತ್ಯತೆಯನ್ನು ಮತ್ತೊಮ್ಮೆ ಖಾತರಿ ಪಡಿಸಿಕೊಳ್ಳಲು ಸುತ್ತಲೂ ಕಣ್ಣು ಹಾಯಿಸಿದೆ. ಹೌದು ನಾನೇ ಗಡಿಯಾರವನ್ನು ಸರಿಯಾಗಿ ನೋಡಿಕೊಂಡಿಲ್ಲ ಕತ್ತಲಿನ ಮಹಾಸಾಗರ!! ನೋಡುತ್ತಿದ್ದೆ... ನೋಡುತ್ತಿದ್ದೆ. ನೋಡ ನೋಡುತ್ತಲೇ ಇದ್ದೆ. ನಿಃಶ್ಯಬ್ದ. ನೀರವ. ಆದರೆ ಭೈರವರೂಪಿ ಕತ್ತಲು.

ಒಂದು. ಎರಡು ಕ್ಷಣ. ಕತ್ತಲಿನ ಕಡಲಲ್ಲಿ ಸಣ್ಣನೆ ಏನೋ ಒಂದು ಸಂಚಲನ. ಸಣ್ಣಗೆ ಅಲೆಗಳು ಏಳುತ್ತಿದ್ದಂತೆ ಎನಿಸಿತು. ಅಲ್ಲಲ್ಲಿ ಒಂದೊಂದಾಗಿ ಸೂಜಿ ಮೊನೆ ಬೆಳಕು. ಬೆಳಕು ಬೆಳೆಯಿತು. ಬೆಳೆಯುತ್ತ ಹೋಯಿತು. ಬೆಳೆದ ಬೆಳಕು ನೋಡಿದಾಗ ಅವು ನಕ್ಷತ್ರಗಳಾಗಿರಲಿಲ್ಲ. ಹಣತೆಗಳಾಗಿರಲಿಲ್ಲ. ಪಂಜುಗಳಾಗಿದ್ದವು. ಕೊಳ್ಳಿಗಳಾಗಿದ್ದವು. ಅವುಗಳು ಮೇಲೆ ಬಂದಂತೆ ಕೈಗಳು ಕಾಣಿಸಿದವು. ಕೈಗಳೊಂದಿಗೆ ದೇಹಗಳು ಹೊರಗೆ ಬಂದವು. ದೇಹಗಳು ಪೂರ್ತಿಯಾಗಿ ಹೊರಗೆ ಬಂದವು. ಆದರೆ ಆ

ದೇಹಗಳಿಗೆ ಮುಖಗಳೇ ಇರಲಿಲ್ಲ!! ಮುಖಗಳೇ ಇರಲಿಲ್ಲವೆಂದರೆ, ಬರೀ ಕತ್ತಲಿನ ಮುಖವಾಡಗಳಿದ್ದವು. ಆದರೆ ಕಂಠಗಳಿದ್ದವು. ಧ್ವನಿಗಳು ಹೊರಡುತ್ತಿದ್ದವು. ಪೂರ್ತಿ ಮೇಲೆದ್ದ ದೇಹಗಳು!! ಒಂದೊಂದಾಗಿ ಒಂದೊಂದಾಗಿ ನನ್ನ ಕಡೆಗೇ ಬರುತ್ತಿದ್ದವು. ಬೇರೆ ಬೇರೆ ಎತ್ತರ ಗಾತ್ರದ ದೇಹಗಳು!! ನನಗೆ ಭಯವಾಯಿತು. ಯಾಕೆ ಈ ದೇಹಗಳು ನನ್ನೆಡೆಗೆ ನಡೆದು ಬರುತ್ತಿವೆ. ಒಂದಲ್ಲ ಎರಡಲ್ಲ ದಂಡು ದಂಡು ದೇಹಗಳು. ನನ್ನೆಡೆಗೆ ಆಕ್ರಮಣ ಮಾಡಲು. ಹಲ್ಲೆ ಮಾಡಲು ಬರುತ್ತಿರುವಂತೆನಿಸಿ ಸಣ್ಣಗೆ ನಡುಕ ಉಂಟಾಯಿತು. ಮೈ ಬೆವರಿತು. ಮನೆ ಒಳಗೆ ಓಡಿ ಅವಿತುಕೊಂಡರೆ ಹೇಗಾದರೂ ಪತ್ತೆಹಚ್ಚಿ ಸೆರೆಹಿಡಿಯುತ್ತಾರೆ.

ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲ. ಇಷ್ಟಕ್ಕೂ ಇವರೆಲ್ಲ ಯಾರು? ಯಾಕೆ ನನ್ನತ್ತ ಬರುತ್ತಿದ್ದಾರೆ. ನನ್ನ ಶತ್ರುಗಳೇ? ಆದರೆ ನನಗೆ ಶತ್ರುಗಳೇ ಇಲ್ಲವಲ್ಲ. ಕೂಗಿ, ನಿಲ್ಲಿಸಿ ಸಮಾಧಾನದಿಂದ ಮಾತನಾಡಿಸಿ ಯಾರು? ಯಾಕೆ ಎಂದು ಪ್ರಶ್ನಿಸಿ ಮಾತನಾಡಿಸಬೇಕೆಂಬ ಮನಸ್ಸಿದ್ದರೂ, ಅವರ ಹೆಜ್ಜೆಯ ವೇಗ. ಪಂಜು ಕೈಗಳ ಬೀಸು. ಕತ್ತಲ ಮುಖವಾಡದ ಹಿಂದೆ ಅಡಗಿರಬಹುದಾದ ಆಕ್ರೋಶದ ಬೆಂಕಿಯ ಕಾವನ್ನು ಊಹಿಸಿದೆ. ಸಾಂತ್ವನ ಸಮಾಧಾನಗಳಿಗೆ ಕಿವಿಗೊಡುವರೆಂಬ ಭರವಸೆ ನನಗಿರಲಿಲ್ಲ. ಆದ್ದರಿಂದಲೇ ವೇಗವಾಗಿ ಹೆಜ್ಜೆ ಹಾಕಿ ಅವರು ಬರುತ್ತಿದ್ದ ದಿಕ್ಕಿಗೆ ವಿರುದ್ಧವಾಗಿ ಓಡತೊಡಗಿದ. ಭಯದ ಭಯಂಕರತೆಯಲ್ಲಿ ಬೇಸರ ಕಸಿವಿಸಿಗಳು ಮರೆಯಾಗಿ ಹೋದವು. ಅವರವರಲ್ಲೇ ಗುಜುಗುಜು ನಡೆಯುತ್ತಿದ್ದುದು ನಿಂತು. 'ನಿಲ್ಲು' ನಿಲ್ಲು ಎಂದು ಒಕ್ಕೊರಲಿನಿಂದ ಗದ್ದರಿಸಿ ಆದೇಶಿಸುತ್ತಿರುವುದು ಕೇಳಿಸಿತು. ಆದರೂ ಮುಂದಕ್ಕೆ ಓಡಿದೆ. ನನಗಿಂತಲೂ ವೇಗವಾಗಿ ನನ್ನ ಬೆನ್ನಟ್ಟಿಬರುತ್ತಿದ್ದ ಹೆಜ್ಜೆಗಳ ಸಪ್ಪಳ ಕೇಳಿಸಿತು. ಪಂಜುಗಳ ಬೆಳಕು ಅವರ ಬೆನ್ನೋಟ ಸಾಗಿತು. ಇನ್ನು ಅವರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎನಿಸಿ ನಿಂತೆ. ನನ್ನ ಕಾಲೂ ಸೋತಿತ್ತು. ನಿಂತಮೇಲೆ ತೀರಾ ಸನಿಹಕ್ಕೆ ಬಂದ ಆ ಸಮೂಹದ ಮುಂಚೂಣಿಯಲ್ಲಿದ್ದವನು ಹೇಳಿದ. 'ನಿಲ್ಲು' ನಾವು ನಿನಗೇನೂ ಮಾಡುವುದಿಲ್ಲ? ಎಂದು ಸಾವಧಾನದಿಂದ ಹೇಳಿದ ಮೇಲೆ ಧೈರ್ಯ ತಂದುಕೊಂಡು ನಿಂತು ಕೇಳಿದೆ. "ಹೇಳಿ ನೀವು ಯಾರು? ಈ ಕಪ್ಪು ಮುಖವಾಡಗಳೇಕೆ ಕೈಯಲ್ಲಿ ಈ ಪಂಜುಗಳೇಕೆ? ಎಂದು ಕೇಳಿದೆ. ನಿಮ್ಮ ಮುಖವಾಡಗಳನ್ನು ಸರಿಸಿ ಮಾತಾಡಬಾರದೇ ಎಂದೆ. ಆ ಮುಂಚೂಣಿಯ ನಾಯಕ ಹೇಳಿದ. "ಮುಖವಾಡಗಳೊಂದಿಗೆ ಬದುಕುವುದೇ ನಮಗೆ ಅಭ್ಯಾಸವಾಗಿ ಹೋಗಿದೆ. ಈ ಜಗತ್ತಿನಲ್ಲಿ ನಮಗೆ ಜಾಗವಿಲ್ಲ. ನಮ್ಮ ಭಾವನೆಗಳ ಜೊತೆಗೆ ಹೃದಯಗಳನ್ನು ಕಿತ್ತುಕೊಂಡಿದ್ದಾರೆ. ಕಣ್ಣುಗಳ ಜೊತೆಗೆ ಬೆಳಕನ್ನು ಕಸಿದುಕೊಂಡಿದ್ದಾರೆ. ನಮ್ಮ ಕೊರಳಿನ ಜೊತೆಗೆ ಧ್ವನಿಯನ್ನು ಹಿಸುಕಿಬಿಟ್ಟಿದ್ದಾರೆ. ನಮ್ಮ ಕನಸುಗಳನ್ನು, ಆಸೆಗಳನ್ನು ಕೊಂದುಬಿಟ್ಟಿದ್ದಾರೆ. ಬದುಕು, ಭವಿಷ್ಯವನ್ನು ಬೂದಿ ಮಾಡಿದ್ದಾರೆ. ನಿಲ್ಲಲು ನೆಲೆಯಿಲ್ಲ. ತಲೆಮರೆಸಿಕೊಳ್ಳಲು ಸೂರಿಲ್ಲ. ಉಸಿರಾಡಲು ಗಾಳಿ ಇಲ್ಲ. ಬಾಯಿಗೆ ತುತ್ತಿಲ್ಲ. ಒಡಲಿಗೆ

ಬಟ್ಟೆಯಿಲ್ಲ. ಅದಕ್ಕೆ ಕತ್ತಲನ್ನು ಉಟ್ಟಿದ್ದೇವೆ; ಕತ್ತಲನ್ನು ತೊಟ್ಟಿದ್ದೇವೆ. ಕಪ್ಪು ಮುಖವಾಡಗಳನ್ನು ಧರಿಸಿದ್ದೇವೆ. ನಾವು ಬಹಿಷ್ಕೃತರು; ನಾವು ತಿರಸ್ಕೃತರು– ನಾವು ಅಸ್ಪೃಶ್ಯರು ಎಂದು ಎತ್ತರದ ದನಿಯಲ್ಲಿ, ಮುಂಚೂಣಿಯ ವ್ಯಕ್ತಿ, ದುಃಖ, ನೋವುಗಳಿಂದ ಹೇಳುತ್ತಿದ್ದಾಗ ಅವನ ಹಿಂದಿದ್ದ ಸಮೂಹ ಹೌದು. ಹೌದು ಎನ್ನುತ್ತ ಸಮರ್ಥಿಸುತ್ತ, ಅವನ ಮಾತುಗಳನ್ನೇ ಮತ್ತೆ ಮತ್ತೆ ಉಚ್ಚರಿಸುತ್ತಿದ್ದರು.

ನನಗೆ ಅವರ ಮಾತುಗಳ ತಲೆಬುಡ ಅರ್ಥವಾಗಲಿಲ್ಲ. ಇವರೇಕೆ ನನ್ನ ಮುಂದೆ ನಿಂತು ನನಗೆ ಇದನ್ನೆಲ್ಲ ಒಪ್ಪಿಸುತ್ತಿದ್ದಾರೆ? ಎನಿಸಿತು. ಅದಕ್ಕೇ ಕೇಳಿದೆ– 'ನೀವು ಹೇಳುವುದೆಲ್ಲ ಸರಿ. ನಿಮಗೆ ಯಾರಿಂದಲೋ ಅನ್ಯಾಯವಾಗಿದೆ ಎನ್ನುವುದೂ ಅರ್ಥವಾಗಿದೆ. ಆದರೆ ನನ್ನ ಬಳಿ ನೀವ್ಯಾಕೆ ಬರುತ್ತಿದ್ದೀರಿ?' ಎಂದೆ.

"ನಮಗೆ ನ್ಯಾಯ ಬೇಕು. ಕಳೆದುಕೊಂಡ ದೇಹ, ಮನಸ್ಸು, ದನಿ, ಹೃದಯ, ಬೆಳಕು ನಮಗೆ ಬೇಕು. ಕತ್ತಲ ಕವಚಗಳಿಂದ ಹೊರಗೆ ಬರಬೇಕು. ಉಸಿರು ಕಟ್ಟುವ ಗೂಡುಗಳಾಚೆ ಜಿಗಿದು ರೆಕ್ಕೆ ಬಿಡಿಸಿಕೊಂಡು ಜೊತೆ ಹಕ್ಕಿಗಳ ಜೊತೆಗೆ ಬಿಚ್ಚು ಬಾನಿನಲ್ಲಿ ಹಾರಾಡಬೇಕು" ಎಂದು ದನಿಗಳು ಬೇಡಿಕೆಗಳನ್ನು ಮುಂದಿಟ್ಟವು.

"ನಿಮಗೆ ಬೇಕಾದ್ದನ್ನು ಕೊಡಿಸಲು ನಾನು ಯಾರು? ನಿಮಗೂ ನನಗೂ ಸಂಬಂಧವಾದರೂ ಏನಿದೆ?" ನಾನು ನಿಮಗೆ ಮಾಡಿದ ಅನ್ಯಾಯವಾದರೂ ಏನು? ಎಂದು ಸಮಾಧಾನದಿಂದ ಕೇಳಿದೆ.

ನನ್ನ ಪ್ರಶ್ನೆಗೆ ದನಿಗಳು ವಿಕಟವಾಗಿ ನಕ್ಕವು. "ನೀನು ಏನೂ ಅಲ್ಲವೆ? ನೀನೂ ಜಗತ್ತಿನ ಒಂದು ಭಾಗ. ಸಮಾಜದ ಒಂದು ಅಂಗ."

"ನೀವು ಹೇಳುವುದೇನೋ ಸರಿ. ಆದರೆ ನೀವು ಹೇಳಿದ ಹಾಗೆ ನಾನೂ ಒಂದು ಅಂಗವಾಗಿರಬಹುದು. ಬೇರೆ ಅಂಗಗಳ ಬಳಿಗೆ ಹೋಗದೆ ನನ್ನ ಬಳಿ ಯಾಕೆ ಬಂದಿರಿ? ಇಷ್ಟಕ್ಕೂ ನೀವೆಲ್ಲ ಯಾರೂ ನಿಮಗೇನಾಗಿದೆ?" ಕಳಕಳಿಯ ದನಿಯಿಂದ ಕೇಳಿದೆ.

ಬಹುಶಃ ನನ್ನ ದನಿಯಲ್ಲಿನ ಕಳಕಳಿಯ, ಆರ್ದ್ರತೆಯ ಚಾಚು ಅರ್ಥವಾಗಿರಬೇಕು.

ಮುಂಚೂಣಿಯ ವ್ಯಕ್ತಿ ಹೇಳಿದ–

"ಮಾನವ ಕೇಳಿಸಿಕೋ. ನಾವೆಲ್ಲ ಯಾರೆಂದು ಹೇಳಿದರೆ, ದೂರ ಸರಿಯುವುದಿಲ್ಲ ತಾನೇ? ನಮ್ಮ ನಗ್ನ ರೂಪಗಳನ್ನು ನೋಡಬಯಸುವೆಯೇನು? ನಾವೆಲ್ಲರೂ ಎಚ್.ಐ.ವಿ. ಪಾಸಿಟಿವ್ ಮತ್ತು ಏಡ್ಸ್ ಎಂಬ ಹೆಮ್ಮಾರಿಯ ಆಕ್ರಮಣ, ದೌರ್ಜನ್ಯಗಳಿಗೆ ಒಳಗಾದವರು. ಗುಮ್ಮನಂತೆ ಒಳಸೇರಿ ಮೇಯುತ್ತಾ ಬಂದ ಮಹಾರಾಕ್ಷಸ. ಇವನ ಸೆರೆಗೆ ಸಿಕ್ಕರೆಂದರೆ ನಾವು ಕಳಂಕಿತರು. ಅಪಾಯಕಾರಿಗಳು ಎನ್ನುವ ಭಯ. ಲೋಕಕ್ಕೆ! ಅದಕ್ಕೇ ನಮ್ಮನ್ನು

ಅಟ್ಟಿಬಿಟ್ಟಿದ್ದಾರೆ. ಕರುಣೆ, ದಯೆ, ಪ್ರೀತಿಗಳು ನಮ್ಮ ಸಂಬಂಧಗಳ ವಿಚಾರದಲ್ಲಿ ಬತ್ತಿಹೋಗಿವೆ. ನಮ್ಮ ಅಳಲು, ಅಸಹಾಯಕತೆ, ದೈನ್ಯತೆ, ಶೂನ್ಯತೆಗಳು ಅವರ ಕಣ್ಣುಗಳನ್ನು ಹನಿಸುವುದಿಲ್ಲ. ಹೃದಯಗಳನ್ನು ದ್ರವಿಸುವುದಿಲ್ಲ ನಾಯಿಗಳಂತೆ ಅಟ್ಟಿಬಿಟ್ಟಿದ್ದಾರೆ. ಅಪ್ಪ, ಅಮ್ಮರ ಮಕ್ಕಳು, ಗಂಡಂದಿರ, ಹೆಂಡರು. ಅಕ್ಕಂದಿರ ತಂಗಿಯರು. ಅಣ್ಣಂದಿರ ತಮ್ಮಂದಿರು, ಎಳೆಯ ಕಂದಮ್ಮಗಳು, ಕನಸು ವಯಸ್ಸಿನ ಕನ್ನೆಯರು, ಮುಪ್ಪಿನ ಬಳಲಿಕೆಯಲ್ಲಿ ಬೇಯುವ ಮುದಿಯರು, ಬೇಡದ ದನಗಳನ್ನು ಕಸಾಯಿಖಾನೆಗೆ ಅಟ್ಟುವಂತೆ, ಹೆಮ್ಮಾರಿಯ ಅಪ್ಪುಗೆಗೆ ಸಿಕ್ಕ ನಮ್ಮೆಲ್ಲರನ್ನೂ ಸಮಾಧಿಯೆಡೆಗೆ ಅಟ್ಟಿದ್ದಾರೆ. ಕನಸು, ಕಾಂತಿಗಳನ್ನು ಕಸಿದುಕೊಂಡು ಕತ್ತಲ ಕೆಸರನ್ನು ಚೆಲ್ಲಿ, ಮುಖಗಳನ್ನು ಸುಲಿದುಕೊಂಡು ಮುಖವಾಡಗಳನ್ನು ಕೊಟ್ಟಿದ್ದಾರೆ. ನಮಗೆ ನಮ್ಮ ಬದುಕು ಬೇಕು. ನಮ್ಮ ಭವಿಷ್ಯ ಬೇಕು. ಹಕ್ಕು ಬೇಕು. ಅನ್ನ ಬೇಕು. ಉರಿಯುವ ಬೆಂಕಿಗೆ ತಂಪು ಬೇಕು. ಸುಡುವ ಬಿಸಿಲಿಗೆ ನರಳು ಬೇಕು. ಕೊಡಿಸುವೆಯಾ ಮಾನವ? ನೀನು ಕೊಡಿಸದಿದ್ದಲ್ಲಿ. ನಮ್ಮ ಕೈಯ್ಯ ಪಂಜುಗಳಿಂದ ಈ ಸಮಾಜವನ್ನು ಸುಡುತ್ತೇವೆ. ಜಗತ್ತನ್ನೇ ಸುಡುತ್ತೇವೆ. ಸುಡುವ ಬೆಂಕಿಯಲ್ಲಿ ನಾವೂ ದಹನವಾಗುತ್ತೇವೆ. ನಮಗಿಲ್ಲದ ಬಾಳು ನಿಮಗೆ ಬೇಡ. ನಮಗಿಲ್ಲದ ಕನಸು ನಿಮಗೆ ಬೇಡ. ನಮಗಿಲ್ಲದ ಮುಖಗಳು ನಿಮಗೆ ಬೇಡ" ಎಂದು ಹೇಳ ಹೇಳುತ್ತಿದ್ದಂತೆ ಬೆಂಕಿಯ ಕಿಡಿಗಳು ಎಲ್ಲೆಡೆಗೂ ಎರಚುತ್ತಿರುವಂತೆನಿಸಿತು. ಇವರು ಯೋಚಿಸಿದಂತೆ ಅಸಹಾಯಕತೆಯ ಆಕ್ರೋಶದಲ್ಲಿ ಏನಾದರೂ ಅನಾಹುತ ಮಾಡಿಯಾರು ಎನಿಸಿ. ನಾನು ಸಮಾಧಾನದಿಂದಲೇ ಹೇಳಿದೆ.

"ನಾಯಕ, ನಿಮ್ಮ ಅಳಲು, ಆಕ್ರೋಶಗಳು ನನಗೆ ಅರ್ಥವಾಗುತ್ತೆ. ಆದರೆ ಜಗತ್ತಿಗೆ, ಕೊಳ್ಳಿ ಇಟ್ಟು, ನೀವು ಸಾಧಿಸುವುದೇನು? ಸೇಡು ಆತ್ಮಾಹುತಿಗಳು ಸಮಸ್ಯೆಗಳಿಗೆ ಪರಿಹಾರವಾಗುವುದಿಲ್ಲ. ನೀವು ಕಳೆದುಕೊಂಡದ್ದನ್ನೆಲ್ಲ ಮರಳಿ ಪಡೆದು ಸುಖೀ ಜಗತ್ತನ್ನು ನಿರ್ಮಿಸಿಕೊಳ್ಳಿ, ಮನಸ್ಸಿದ್ದಲ್ಲಿ ಮಾರ್ಗಗಳು ತೆರೆದುಕೊಳ್ಳುತ್ತವೆ. ನಿಮ್ಮ ಈ ಕತ್ತಲು ಮುಖವಾಡಗಳನ್ನು ಕಳಚಿ ಬಿಸುಟು ಕಣ್ಣು ತೆರೆಯಿರಿ. ಕತ್ತಲು ಕವಚಗಳನ್ನು ಕಿತ್ತೆಸೆದು ಬಿಡಿ. ಪಂಜುಗಳನ್ನು ಎಸೆದುಬಿಡಿ. ಸೂರ್ಯರು ಕಾಣಿಸಿಕೊಳ್ಳುತ್ತಾರೆ" ಎಂದೆ.

ನನ್ನ ಮಾತು ನಾಯಕನಿಗೆ ಸರಿ ಎನಿಸಿರಬೇಕು. ಹಿಂದಕ್ಕೆ ತಿರುಗಿದೆ. ಸನ್ನೆಯ ಮೂಲಕ ಪಂಜುಗಳನ್ನು ಬಿಸಾಡುವಂತೆ ಮಾಡಿದ. ಮುಖವಾಡ ಕಳಚಿದ. ಎಲ್ಲರೂ ಅವನನ್ನೇ ಅನುಸರಿಸಿ ಕಳಚಿದರು. ಸುತ್ತಿಕೊಂಡ ಕತ್ತಲ ಕವಚಗಳನ್ನು ತೆಗೆದರು. ಎಸೆದ ಪಂಜುಗಳ ಬೆಂಕಿ ಒಂದೆಡೆಯಲ್ಲಿ ಉರಿಯುತ್ತಿತ್ತು. ಎಲ್ಲರೂ ಕವಚ, ಮುಖವಾಡಗಳನ್ನು ಕಳಚಿ ಬೆಂಕಿಗೆ ಎಸೆದರು. ಬೆಂಕಿ ಒಂದೊಂದೇ ಕವಚ, ಮುಖವಾಡವನ್ನು ನುಂಗುತ್ತಾ ನುಂಗುತ್ತಾ ತಣಿದು ತಣ್ಣಗಾಯಿತು. ಕಣ್ಣ ಮುಂದಿನ

ಮಂದಿಯ ದೇಹ, ಮುಖಗಳು ಸ್ಪಷ್ಟವಾಗಿ ಗೋಚರವಾಗ ತೊಡಗಿದವು. ಒಂದೊಂದಾಗಿ ಮುಖವನ್ನೂ ಗಮನಿಸಿದೆ. ದುರ್ಬಲ ದೇಹಗಳು. ರಕ್ತಮಾಂಸಗಳಿಲ್ಲದ ಅಸ್ಥಿಪಂಜರಗಳಂತೆ ಕಾಣುತ್ತಿದ್ದವು. ಕಣ್ಣುಗಳು ನಿಸ್ತೇಜವಾಗಿದ್ದವು. ಆದರೆ ಪಂಜುಗಳ ಬೆಂಕಿ ತಣ್ಣಗಾದರೂ ನೋವಿನ ಬೆಂಕಿ, ಕೋಪದ ಬೆಂಕಿ ಇನ್ನೂ ಪ್ರಜ್ವಲಿಸುತ್ತಿದೆ ಎಂಬ ಭಾವನೆ ನನ್ನ ಮನಸ್ಸಿಗೆ ತೀವ್ರವಾಗಿ ತಟ್ಟಿತು. ಒಂದೊಂದು ಮುಖವೂ ಒಂದೊಂದು ಕತೆ ಹೇಳುವ ಆತುರದಲ್ಲಿದ್ದಂತೆನಿಸಿತು. ಆದರೂ ಆ ಮುಖಗಳ ನಡುವೆ ಒಂದು ಮುಖ ಎದ್ದು ಕಾಣುತ್ತಿತ್ತು. ತುಂಬು ಪ್ರಾಯದಲ್ಲಿರಬೇಕಾದ ಸೊಗಸು ಸೌಂದರ್ಯಗಳು, ಅನ್ನಾಹಾರಗಳಿಲ್ಲದೆ ದುರ್ಬಲವಾಗಿದ್ದ ದೇಹದಲ್ಲಿ ಕಾಣಿಸಿಕೊಳ್ಳದಿದ್ದರೂ, ಮೈತುಂಬಿಕೊಂಡಾಗ ಹೇಗಿರಬಹುದೆಂದು ಊಹಿಸಿಕೊಂಡೆ. ಉಳಿದವರಿಗಿಂತಲೂ ಹೆಚ್ಚಿನ ಆತುರ ಅವಳಲ್ಲಿ ಕಾಣಿಸಿತು. ನಾನು ಸನ್ನೆಮಾಡಿ ಕರೆದೆ–

ನನ್ನ ಕರೆ ಕೇಳಿದ್ದೆ. ಅವಳ ಮುಖದಲ್ಲಿ ಬದಲಾವಣೆಗಳು ಕಾಣಿಸಿದವು. ಯಾವುದೋ ಆಸೆ. ಭರವಸೆ ಅವಳಲ್ಲಿ ಮೊಳೆಯುತ್ತಿದೆ ಎನಿಸಿತು. ಗೆಲುವಿನಿಂದ ಬಾಯಿಬಿಟ್ಟಳು–

"ಅಣ್ಣಾ, ನಾನೊಬ್ಬ ಅನಾಥೆ. ಬಂಧು ಬಳಗ ಮಕ್ಕಳಿದ್ದೂ ಅನಾಥೆಯಾಗಿದ್ದೇನೆ. ನಾನು ಮಾಡದ ಪಾಪಕ್ಕಾಗಿ ನನಗೀ ಶಿಕ್ಷೆಯೇ? ಗಂಡನಿಗೆ ಈ ದೇಹ ಧಾರೆಯೆರೆದು, ಅವನು ಗಳಿಸಿಕೊಂಡು ಬಂದ ಈ ರೋಗದ ಹೆಮ್ಮಾರಿಯನ್ನು ಬಳುವಳಿಯಾಗಿ ಕೊಟ್ಟ. ನಾನೂ ನನ್ನ ಮಕ್ಕಳಿಗೆ ಅದನ್ನು ಧಾರೆಯೆರೆದೆ. ಆದರೆ ಕುಟುಂಬದ ಕೋರ್ಟಿನಲ್ಲಿ 'ಅಪರಾಧಿ' ಎಂಬ ತೀರ್ಪು ನನ್ನ ಬದುಕನ್ನು ಭಗ್ನಗೊಳಿಸಿತು. ಬೇಡದ ವಸ್ತುವಾದೆ. ಕಾಲ ಕಸವಾದೆ, ನನ್ನ ಪಾಲಿಗೆ ಮನೆಯ ಕದಗಳು ಮುಚ್ಚಿದವು. ಮನದ ಕದಗಳೂ ಮುಚ್ಚಿದವು. ಅಳುವ ಕಂದಮ್ಮಗಳ ಎದೆಗಪ್ಪಿಕೊಂಡು ದೂರದಲ್ಲೊಂದು ಗೂಡು ಮಾಡಿದೆ. ಅಲ್ಲಲ್ಲಿ ಅಲೆದಾಡಿ ಕೈಗಳನ್ನು ದುಡಿಯ ಹಚ್ಚಿದೆ. ಆದರೆ... ಆದರೆ ಗಂಡುಗಳ ಕಣ್ಣುಗಳು ಕ್ಷಣ ಕ್ಷಣವೂ ನನ್ನನ್ನು ಬೇಟೆಯಾಡಿದವು. ನನ್ನ ಒಂಟಿತನ, ಅಸಹಾಯಕತೆ, ಅಭದ್ರತೆಗಳು ನನ್ನ ಆತ್ಮವಿಶ್ವಾಸದ ಕೋಟೆಯ ಭದ್ರತೆಯನ್ನು ಉಳಿಸಲಿಲ್ಲ. ನನ್ನ ಬಗ್ಗೆ ಕರುಣೆ ಉಕ್ಕಿಸಲಿಲ್ಲ; ಕಾಮವನ್ನು ಉಕ್ಕಿಸಿತು... ಮೇಲಿಂದ ಮೇಲೆ ನಡೆದ ದಾಳಿಗಳಿಂದ ಸೋತ ನಾನು ಕುಸಿದು ಹೋದೆ. ದಿನ ದಿನಕ್ಕೆ ನನ್ನ ಅಸಹಾಯಕತೆ ಕಳೆದು ದ್ವೇಷ, ಸೇಡು ಚಿಗಿಯ ತೊಡಗಿತು. ನನ್ನನ್ನು ಕಪಿಮುಷ್ಠಿಯಲ್ಲಿ ಜಗಿದಿದ್ದ ಹೆಮ್ಮಾರಿಯನ್ನು ನನ್ನನ್ನು ಸುಲಿಗೆ ಮಾಡುವ ಪ್ರತಿ ಪುರುಷನಿಗೂ ಒಪ್ಪಿಸಬೇಕು ಎಂದುಕೊಂಡೆ. ಎಂದೋ ಕಳೆದುಕೊಂಡಿದ್ದ ಮುಗ್ಧತೆಯ ನೆನಪಾಗಿ ನನ್ನಲ್ಲೇ ನಾನು ನಕ್ಕೆ. ದಿನ ಕಳೆದಂತೆ ಭಾವನೆಗಳು ಸೋರಿ ಹೋದವು. ಹೃದಯದ ಮೃದುಲತೆ ಮಾಯವಾಯಿತು. ಮಮತೆ ವಾತ್ಸಲ್ಯಗಳು ಮಾಯವಾದವು. ಸಂಬಂಧಗಳ ಅರ್ಥ ಮರೆತುಹೋಯಿತು. ನಾನೊಂದು ದ್ವೀಪ ಎನಿಸತೊಡಗಿತು. ಬೆಳಗುಗಳು ರಾತ್ರಿಗಳಾಗಿ, ರಾತ್ರಿಗಳು ಬೆಳಗುಗಳಾಗಿ ನನ್ನ ಬದುಕಿನಲ್ಲಿ ಕಾಲ ವ್ಯತ್ಯಯ

ಅನಿವಾರ್ಯವಾಯಿತು. ಪುರುಷರ ಒಡನಾಟ ನನಗೊಂದು ಯಾಂತ್ರಿಕ ಕ್ರಿಯೆ. ನನಗೆ ನನ್ನ ಅಸ್ತಿತ್ವದ ಅರಿವೇ ಇಲ್ಲದಂತಾಗುತ್ತಿತ್ತು. ನನ್ನ ರಾತ್ರಿಯ ಕ್ಷಣಗಳ ಬೇಡಿಕೆಯಿಂದಾಗಿ. ಮಕ್ಕಳೂ ಅನಿಷ್ಟಗಳಾಗಿ, ಪೀಡೆಗಳಾಗಿ ಭಾಸವಾಗತೊಡಗಿದವು. ಅಂಗುಲಂಗುಲವಾಗಿ ಶಿಲೆಯಾಗುತ್ತ ಹೋದೆ. ನನ್ನೊಳಗಿನ ಹೆಮ್ಮಾರಿಗೂ ಮೀರಿದ ಹೆಮ್ಮಾರಿಯಾದೆ.

ನನಗೆ ನಾನಷ್ಟೇ ಮುಖ್ಯವಾದೆ. ಬಂಧನಗಳೇ ಬೇಡವಾಗಿಸಿಕೊಳ್ಳುವ ಆತುರದಲ್ಲಿದ್ದಾಗ, ಈ ನನ್ನ ಪಿಳ್ಳೆಗಳು ನನ್ನನ್ನು ನೋಡಿ ಅಣಕಿಸುವಂತೆನಿಸಿತು. ನನಗೆ ಅವಮಾನವಾದಂತಾಯಿತು. ಏನಾಯಿತೋ ಏನೋ ದೆವ್ವ ಹೊಕ್ಕವಳಂತೆ ಗುಡಿಸಲ ಒಳಗೆ ನುಗ್ಗಿ ಮರಿ ಪಿಶಾಚಿಗಳಂತೆ ಕಾಣುತ್ತಿದ್ದ ಅವೆರಡನ್ನು ಎತ್ತಿಕೊಂಡು ಕೆರೆಯ ದಂಡೆಗೆ ಓಡಿದೆ. ವಿಕಟವಾಗಿ ನಕ್ಕೆ. ಒಂದನ್ನು ಇಳಿಸಿ ಮತ್ತೊಂದನ್ನು, ಕಂಕುಳಲ್ಲಿ ಇದ್ದುದನ್ನು ಎರಡೂ ಕೈಗಳಿಂದ ಮೇಲಕ್ಕೆತ್ತಿ, ವ್ಯಂಗ್ಯವಾಗಿ ನಕ್ಕು ಆ ಪಿಶಾಚಿ ಪಿಳ್ಳೆಯ ಮುಖದಲ್ಲಿ ಗಂಡನ ನೆರಳು ಕಂಡದ್ದೇ ರೊಯ್ಯೆಂದು ಬಿಸಾಡಿದೆ. ಸದ್ದಿಲ್ಲದೆ ಸಾವನ್ನು ಒಪ್ಪಿಕೊಂಡಿತು. ಗುಳುಂ ಎಂಬ ಶಬ್ದವೊಂದು ನನ್ನ ಕಿವಿಗೆ ಮಧುರ ವೆನಿಸಿತು. ಇನ್ನೊಂದು ಪಿಳ್ಳೆ ಕೆಕ್ಕರಿಸುತ್ತಾ ನೆಲದ ಮೇಲೆ ಕಷ್ಟದಿಂದ ಕೈಕಾಲು ಆಡಿಸುತ್ತಿತ್ತು. ದಢಾರನೆ ಕೈಗಳನ್ನು ಕೆಳಗಿಳಿಸಿ ಅದನ್ನೂ ಬಾಚಿಕೊಂಡು ಮೊದಲಿನಂತೆ ಮಾಡಿದೆ. ನಿರಾಳವೆನಿಸಿತು. ನನಗೇ ಗೊತ್ತಿಲ್ಲದಂತೆ ನಾನು ಕುಣಿಯತೊಡಗಿದೆ. ಅದು ರಾಕ್ಷಸ ನರ್ತನವಾಗಿತ್ತು. ಎಷ್ಟು ಹೊತ್ತು ಕುಣಿದೆನೋ ನನಗೆ ಗೊತ್ತಿಲ್ಲ. ಕುಣಿದೂ ಕುಣಿದೂ ಕಾಲು ಸೋತು ಮುಗ್ಗರಿಸಿಬಿದ್ದೆ. ಅಷ್ಟೇ. ನನಗೆ ಎಚ್ಚರವೇ ಇಲ್ಲ. ಎಷ್ಟು ಹೊತ್ತೋ ನನಗೇ ಅರಿವಿಲ್ಲ. ಸುಮಾರು ಸಮಯ ಕಳೆದಿರಬೇಕು. ಎದ್ದು ನೋಡುತ್ತೇನೆ. ಕೆರೆಯ ದಂಡೆಯ ಮೇಲೆ ಇದ್ದೇನೆ. ನಾನಿಲ್ಲಿಗೆ ಹೇಗೆ ಬಂದೆ? ಯಾಕೆ ಬಂದೆ?– ಒಂದೂ ತಿಳಿಯಲಿಲ್ಲ. ಮಕ್ಕಳ ನೆನಪಾಯಿತು. ಗುಡಿಸಲಿನ ಕಡೆಗೆ ಓಡಿದೆ. ಅಲ್ಲಿ ಮಕ್ಕಳು ಕಾಣಲಿಲ್ಲ. ಗಾಭರಿಗೊಂಡು ಹುಡುಕಾಡಿದೆ. ಎಲ್ಲೂ ಇಲ್ಲ. ನಡೆಯಲು ಬಾರದ ಮಕ್ಕಳು ಎಲ್ಲಿ ಹೋದಾರು? ಯಾರಾದರೂ ಕದ್ದಿರಬಹುದೇ ಎನಿಸಿತು. ನಿಟ್ಟುಸಿರಿನೊಂದಿಗೆ ಆಲೋಚಿಸಿದೆ– ಈ ರೋಗಗ್ರಸ್ತ, ಎಲುಬಿನ ಗೂಡುಗಳಾಗಿರುವ ಈ ಮಕ್ಕಳು ಯಾರಿಗೆ ಬೇಕಾದೀತು?

ಇದ್ದಕ್ಕಿದ್ದಂತೆ ಹೆಪ್ಪುಗಟ್ಟಿದ್ದ ವಾತ್ಸಲ್ಯದ ಚಿಲುಮೆ ಚಿಗಿಯಿತು. ಕಲ್ಲೆದೆ ಕರಗಿ ಸೋಲುವಂತೆ ನನ್ನ ಮೊಲೆಗಳಲ್ಲಿ ಹಾಲು ಜಿನುಗಿತು. ಜೋರಾಗಿ ಅತ್ತೆ. ಬಿಕ್ಕಿ ಬಿಕ್ಕಿ ಅತ್ತೆ. ನನಗೆ ನನ್ನ ಮಕ್ಕಳು ಬೇಕು. ನನ್ನ ಕಣ್ಣುಗಳು ಬೇಕು... ನನ್ನ ಭವಿಷ್ಯ ಬೇಕು. ಚೀರಿದೆ. ಚೀರಿದೆ. ಬಹುಶಃ ನನ್ನ ಚೀರಾಟ ಹೊರಗೆ ಕೇಳಿಸಿ ಯಾರೋ ಬಂದಿರಬೇಕು ಎನಿಸಿತು. ಇಲ್ಲ. ಜನ ಗುಂಪು ಗುಂಪಾಗಿ ಗುಜು ಗುಜುಸಿ ಕೆರೆಯತ್ತ ಧಾವಿಸುತ್ತಿದ್ದುದನ್ನು ನೋಡಿ, ನಾನು ಅವರ ಹಿಂದೆ ನಡೆದೆ. ಕೆರೆ ದಂಡೆಯಲ್ಲಿ ಜನ ಗುಂಪುಗೂಡಿತ್ತು. ಒಬ್ಬೊಬ್ಬರದೂ ಒಂದೊಂದು ಮಾತು. ಯಾವ ಹಾಳು ಮುಂಡೆಯೋ ಹಾದರಗಿತ್ತಿಯೋ

ಹೆತ್ತು ಹೀಗೆ ಸಾಯಿಸಿ ಎಸೆದಿದ್ದಾಳೆ. ಅವಳು ನೆಗೆದುಬೀಳಲಿ. ಮಾರಿ ಬಡ್ಕೊಳ್ಳಲಿ. ಅವಳಿಗೇನು ಬಂತು ಹೀಗೆ ಕೊಲ್ಲೋದಕ್ಕೆ? ಎಂದೆಲ್ಲ ಬೈಯುತ್ತಿದ್ದರು. ನೋಡುತ್ತೇನೆ. ಅವು ನನ್ನ ಮಕ್ಕಳೇ? ಅವು ಸತ್ತದ್ದು ಹೇಗೆ? ನಾನೇ ಕೊಂದೆನೇ? ಹೌದು ನಾನೇ ನಾನೇ ಇರಬೇಕು. ತಿಳಿದರೆ ಈ ಮಂದಿ ನನ್ನನ್ನು ಸಾಯಿಸದೆ ಬಿಡರು ಎನಿಸಿದ್ದೇ ಓಡಿದೆ. ಓಡಿದೆ. ಓಡೋಡಿ ಬಂದು ಈ ಗುಂಪು ಸೇರಿದೆ. ಅಣ್ಣಾ... ನಾನು ಕೊಲೆಗಾತಿಯೇ ನಾನು ಕೊಲೆಗಾತಿಯೇ? ಕೊಲೆಗಾತಿಯಾಗಿ ಮಾಡಿದ್ದು ಯಾರು? ನನಗೆ ಉತ್ತರ ಬೇಕಿದೆ. ನನಗೆ ನನ್ನ ಮಕ್ಕಳು ಬೇಕಿದೆ ಎಂದು ಹೇಳುತ್ತ ಹೇಳುತ್ತಾ ಕುಸಿದುಬಿದ್ದಳು.

ಅವಳ ಕತೆ... ಅವಳ ಕತೆ... ಅವಳ ಕತೆಯೇ? ಅವಳು ಕೇಳಿದ್ದನ್ನು ನಾನು ಕೊಡಬಲ್ಲೇನೇ? ಯೋಚಿಸುತ್ತಿರುವಷ್ಟರಲ್ಲಿ ಎಲ್ಲ ದನಿಗಳೂ ಒಮ್ಮೆಲೇ ಕಿರುಚಿದವು. ಅಣ್ಣಾ ನನ್ನ ಕತೆ ಕೇಳು. ಅಣ್ಣಾ ನನ್ನ ಕತೆ ಕೇಳು. ಕಿವಿಗಡಚಿಕ್ಕುವಷ್ಟು ಗದ್ದಲವಾಗಿ ಕೇಳಿಸಿತು. ಎಲ್ಲರ ಕತೆಯಲ್ಲೂ ಇಂತಹದೇ ನೋವಿನ ಬೆಂಕಿ, ಅಳಲಿನ ಮುಳ್ಳುಗಳಿವೆ ಎನಿಸಿತು. ಇವರು ಕೇಳುವ ನ್ಯಾಯ, ಕೇಳುವ ಬದುಕು ಎಲ್ಲಿ ಕೊಡಲಿ? ಹೇಗೆ? ನಿಸ್ತಬ್ಧ ಮೌನ. ಇದ್ದಕ್ಕಿದಂತೆ ಕಾರ್ಮೋಡಗಳು ಸರಿದವು. ನಿಶ್ಚಲವಾಗಿದ್ದ ಪ್ರಕೃತಿಯಲ್ಲಿ ಸ್ವಲ್ಪ ಸಂಚಲನವುಂಟಾಯಿತು. ಗಾಳಿ ಬೀಸಿತು. ಮರಗಿಡಗಳು ಪುಂಗಿನಾದಕ್ಕೆ ಮೈ ಮರೆತು ತಲೆ ತೂಗುವಂತೆ ತೂಗಿದವು. ದೂರದಲ್ಲಿ ಫಳಕ್ಕನೊಂದು ಬೆಳಕು ಕಂಡಿತು. ಆ ಬೆಳಕಿನ ಬೆನ್ನಲ್ಲೇ ದೇವತೆಯೊಬ್ಬಳು ಇಳಿದಳು. ಚಿನ್ನದ ದೇಹ. ಕೈಯಲ್ಲೊಂದು ಮಂತ್ರದಂಡ. ತುಟಿಯಲ್ಲಿ ನಗೆ ಮಿಂಚಿನ ಹೊಳೆ. ಕಣ್ಣಲ್ಲಿ ಉಕ್ಕಿ ಹೊಳೆಯಾಗಿ ಹೊರಗೆ ಇಳಿಯುತ್ತಿದ್ದ ಕರುಣೆ. ನನಗೆ ಆಶ್ಚರ್ಯವಾಯಿತು.

"ತಾಯಿ. ನೀನಾರು? ಎಂದೆ.

"ನಾನು ಭರವಸೆಯ ದೇವತೆ. ಈ ನನ್ನ ನೊಂದ ಮಕ್ಕಳ ಭರವಸೆ, ಭವಿಷ್ಯ."

"ಇವರ ಕನಸುಗಳನ್ನು ಇವರಿಗೆ ಕೊಡುವೆಯಾ? ಇವರ ಭವಿಷ್ಯವನ್ನು ಇವರಿಗೆ ಮರಳಿಸುವೆಯಾ? ಕಣ್ಣಿನ ಬೆಳಕು, ಕೊರಳಿನ ದನಿ. ರೆಟ್ಟೆಯ ಬಲ ಕಳೆದುಕೊಂಡ ಗೌರವ. ಕೊಡಬಲ್ಲೆಯಾ?" ಎಂದು ಕೇಳಿದೆ.

"ಮಾನವಾ ಕಣ್ಣು ಬಿಟ್ಟು ನೋಡು. ಅವರಿಗೆಂದೇ ಒಂದು ಸ್ವರ್ಣ ಸಾಮ್ರಾಜ್ಯವಿದೆ. ಅವರೆಲ್ಲ ಅಲ್ಲಿಗೆ ಬರಲಿ" ಎಂದಳು. ನೋಡುತ್ತೇನೆ. ಅವರೆಲ್ಲರ ದೇಹಗಳೂ ಕಾಂತಿಯುಕ್ತವಾಗಿ ಹೊಳೆಯುತ್ತಿವೆ. ಮುಖಗಳು ಮ್ಲಾನತೆಯನ್ನು ಕಳಚಿ ಸಂತಸವನ್ನು ಉಕ್ಕಿಸುತ್ತಿವೆ.

ನೆಮ್ಮದಿಯಿಂದ ಉಸಿರಾಡಿದೆ. ಅವರೆಲ್ಲರನ್ನೂ ಕಂಡು ಮಾತಾಡಿಸಿ ಅಭಿನಂದಿಸಲು ತಲೆ ಎತ್ತಿದೆ. ಯಾರೂ ಇಲ್ಲ. ಅರೆ ಅವರೆಲ್ಲ ಎಲ್ಲಿ ಹೋದರು?

ಇಷ್ಟು ಹೊತ್ತೂ ನನ್ನೊಡನಿದ್ದು ಕ್ಷಣಾರ್ಧದಲ್ಲಿ ಎಲ್ಲಿ ಮಾಯವಾದರು? ನನಗೆ ಆಶ್ಚರ್ಯ ದಿಗ್ಭ್ರಮೆಯಾಯಿತು. ಇದು ಕನಸೋ ಕಲ್ಪನೆಯೋ ಗೊತ್ತಿಲ್ಲ. ಆದರೆ ದೂರದಲ್ಲಿ ಕೆಂಪು ಸೂರ್ಯ ಪ್ರಜ್ವಲಿಸಿ ಬೆಳಗುತ್ತಿದ್ದ. ಅದರಾಚೆ ಸ್ವರ್ಣ ಶಿಖರವೊಂದು ಕಾಣಿಸುತ್ತಿತ್ತು.

ನಿರೂಪಕನ ಕನಸುಗಳು ನಿಜವಾದಾವೇ?

* * *

ಅಪಸ್ವರ

ನನ್ನ ಬಗ್ಗೆ ಒಂದೆರಡು ಮಾತು ಹೇಳಿಯೇ ಬಿಡ್ತೀನಿ. ತಮ್ಮ ತಮ್ಮ ಗಂಡಂದಿರನ್ನು ಪ್ರೀತಿಸುವ ಮೂರ್ಖ ಹೆಂಗಸರಲ್ಲಿ ನಾನೂ ಒಬ್ಬಳು; ಅಥವಾ ಹೀಗೂ ಹೇಳಬಹುದಾದರೆ ಮೂರ್ಖ ಹೆಂಗಸರಲ್ಲಿ ಒಬ್ಬಳಾಗಿ ಗಂಡನನ್ನು ಪ್ರೀತಿಸುತ್ತೇನೆ. ನನ್ನ ಮದುವೆಯಾಗಿ ಆರು ತಿಂಗಳಾಗಿದೆ. ಅಷ್ಟರಲ್ಲಿಯೇ ಮದುವೆಯಾದ ಸುಮಾರು ಹೆಂಗಸರನ್ನು ಭೇಟಿಯಾಗಿದ್ದೇನೆ. ನನ್ನನ್ನು ಬಿಟ್ಟರೆ, ಮನಸ್ಸಿನಾಳದಿಂದ ಗಂಡನನ್ನು ಪ್ರೀತಿಸುವ ಯಾವ ಹೆಂಗಸೂ ನನ್ನ ಕಣ್ಣಿಗೆ ಬೀಳಲಿಲ್ಲ. 'ಮನಸ್ಸಿನಿಂದ ಪ್ರೀತಿಸುವುದು' ಅನ್ನೋ ಮಾತಿದೆಯಲ್ಲ, ಕೇಳಿ ಕೇಳಿ ಒಂದು ಥರ ತಲೆ ಚಿಟ್ಟು ಹಿಡಿದಂತಾಗಿದೆ. ಹರಟೆಗಳಲ್ಲಿ, ಸಿನಿಮಾಗಳಲ್ಲಿ ಕೂಡಾ ಈ ಮಾತುಗಳು ಮತ್ತೆ ಮತ್ತೆ ಬಳಕೆಯಾಗಿದೆ. ಈ ಮಾತು ಎಷ್ಟೇ ಸುಳ್ಳಾಗಿದ್ದರೂ ಇದನ್ನು ಬಳಸೋದು ಮಾತ್ರ ನಿಲ್ಲೋದಿಲ್ಲ. ನನಗೆ ಪರಿಚಯ ಇರುವ ಪ್ರತಿಯೊಬ್ಬ ವಿವಾಹಿತ ಮಹಿಳೆ, ಈ ಮಾತನ್ನು ಪ್ರತಿಯೊಬ್ಬರ ಹತ್ತಿರ ಹೇಳ್ತಾ ಹೇಳ್ತಾ ಸ್ವತಃ ನಂಬಲು ಶುರು ಮಾಡಿರಬಹುದಾದರೂ ವಾಸ್ತವದಲ್ಲಿ, ಈ ಮಾತು ಸತ್ಯವಲ್ಲ.

ಗಂಡನನ್ನು ಪಡೆದಿರುವುದು ಒಂದು ಅವಸ್ಥೆ. ಅಥವಾ ಒಂದು ನೆಲೆ. ಇದರೊಳಗೆ ಅನೇಕ ಬಗೆಯ ಪರಿಸ್ಥಿತಿಗಳು - ಸುಖದ, ದುಃಖದ - ಬಂದು ಹೋಗುತ್ತವೆ. ಮಕ್ಕಳು ಮನೆ, ಕೆಲಸ ಕಾರ್ಯಗಳು - ಸಾಮಾಜಿಕ ಸಂಬಂಧಗಳು - ಹೀಗೆ ಏನೇನೋ ಇರುತ್ತವೆ. ಹೇಳುವುದಾದರೆ, ಇದೊಂದು ಥರದ ಉದ್ಯೋಗ. ಇದರಿಂದ ಸ್ವಲ್ಪ ದುಡ್ಡೂ ಸಿಗುತ್ತೆ, ಸಮಯಾನೂ ಕಳೆಯುತ್ತೆ. ಸಾಮಾನ್ಯವಾಗಿ ಉದ್ಯೋಗದಲ್ಲಿ ಎದುರಾಗುವಂಥ ರೀತಿಯಲ್ಲಿಯೇ ಸಣ್ಣಪುಟ್ಟ ತೊಂದರೆಗಳು ಬರುತ್ತಲೇ ಇರುತ್ತವೆ. ಮಕ್ಕಳ ಆರೋಗ್ಯ ಕೆಡಬಹುದು, ಅನ್ನಕ್ಕೆ ನೀರು ಕಡಿಮೆಯಾಗಿ ಬಿಡಬಹುದು. ಅಡಿಗೇಲಿ ಉಪ್ಪು ಸ್ವಲ್ಪ ಹೆಚ್ಚು ಕಡಿಮೆಯಾಗಬಹುದು; ಒಮ್ಮೊಮ್ಮೆ ತನ್ನದೇ ಆರೋಗ್ಯ ಕೆಡಬಹುದು. ಇವುಗಳ ಜೊತೆಗೆ, ಉದ್ಯೋಗದಲ್ಲಿ ಇನ್ನೂ ಒಂದು ರೀತಿಯ ತೊಂದರೆಗಳು ತಲೆಹಾಕುತ್ತವೆ. ಈ ತೊಂದರೆಗಳು ಒಳಗಿನಿಂದಲ್ಲದೆ ಹೊರಗಿನಿಂದ

ಬರುವಂಥಾದ್ದು ಇದ್ದಕ್ಕಿದ್ದಂತೆ, ಮಾರುಕಟ್ಟೆಯಲ್ಲಿ ಪದಾರ್ಥಗಳ ಬೆಲೆ ಹೆಚ್ಚಾಗಬಹುದು. ಇಲ್ಲವೆ ಅನಿವಾರ್ಯವಾದ ವಸ್ತುಗಳು ಪೇಟೇಲಿ ಸಿಗದೇನೇ ಹೋಗಬಹುದು. ಮತ್ತು ಯಜಮಾನನಿಂದ ಕಿರಿಕಿರಿ ಉಂಟಾಗೋದಂತೂ ಮಾಮೂಲಿ ವಿಷಯವೇ. ಒಂದೊಂದು ಸಲ ಗಂಡ ಇದ್ದಕ್ಕಿದ್ದಂತೆ, ಬಿಡುವಿಲ್ಲದಂತೆ ಪ್ರೀತಿಯ ನೆರೆಯಲ್ಲಿ ಕೊಚ್ಚಿ ಹೋಗುವ ಹಾಗೆ ಮಾಡಿದರೆ, ಮತ್ತೆ ಕೆಲವೊಮ್ಮೆ ಎಷ್ಟೋ ದಿನ ಪ್ರೀತಿ ಎಳ್ಳಿನಷ್ಟೂ ಸಿಗದೆ ದಿನರಾತ್ರಿ ಕಳೆದು ಹೋಗುವ ಹಾಗೆ ಮಾಡುತ್ತಾನೆ.

ಈ ಬಗೆಯ ಏರಿಳಿತಗಳಿಂದ, ಪರಿಸ್ಥಿತಿಯಲ್ಲಾಗಲೀ ಸ್ವಭಾವಗಳಲ್ಲಾಗಲೀ, ಅಥವಾ ಉದ್ಯೋಗಕ್ಕೆ ಮುಳುವಾಗುವಂತಹ ರೀತಿಯಲ್ಲಾಗಲಿ ವ್ಯತ್ಯಾಸಗಳೇನೂ ಉಂಟಾಗುವುದಿಲ್ಲ. ಈ ಉದ್ಯೋಗದ ವಿಚಾರವಾಗಿ ಈಗೀಗ ಸ್ವಲ್ಪ ಅರ್ಥವಾಗ್ತಾ ಇದೆ. ಇದರೊಂದಿಗೆ ನಾನು ಏನು ಮಾಡಬೇಕೂನ್ನೋದೂ ಗೊತ್ತಾಗಿದೆ. ಗಂಡನ ಸಂತೋಷ-ಬೇಸರ, ಬೇಕು-ಬೇಡಗಳು, ಆಸಕ್ತಿ-ನಿರಾಸಕ್ತಿ ಅನ್ನೋದು ನನಗೆ ಬದುಕು ಸಾವಿನ ಸಮಸ್ಯೆಯಾಗುತ್ತೆ. ಆದರೆ ಅವರಿಗಲ್ಲ. ನಾನೊಬ್ಬಳು ಮಾತ್ರವೇ, ಗಂಡ ಆಫೀಸಿಂದ ಮನೆಗೆ ಬರುತ್ತಿದ್ದಂತೆ, ಅವನ ಕಡೆ ನೆಟ್ಟ ದೃಷ್ಟಿಯನ್ನು ಕದಲಿಸುತ್ತಿರಲಿಲ್ಲ. ನಾನು ಮಾತ್ರವೇ ಕೆಟಲಿನಿಂದ ಚಹವನ್ನು ಬಗ್ಗಿಸುತ್ತಲೋ ಪ್ಲೇಟಿನಲ್ಲಿ ತಿಂಡಿ ನೀಡುತ್ತಲೋ ಅವನ ಮುಖಭಾವಗಳನ್ನು ಗಮನಿಸಲು ಪ್ರಯತ್ನಿಸುತ್ತಿದ್ದೆ. ಹೀಗೇ ಅವರ ಕಡೆ ಗಮನವಿರಿಸುತ್ತಿದ್ದುದರಿಂದ ಆಗಾಗ ಚಹಾ ಚೆಲ್ಲಿ ಬಿಡುತ್ತಿದ್ದೆ; ತಿಂಡಿ ಪ್ಲೇಟು ಬೀಳಿಸಿ ಬಿಡುತ್ತಿದ್ದೆ. ಇದರಿಂದ ಅವನು ಮುಖ ಗಂಟಿಕ್ಕಿದರೆ, ಒಳಗೊಳಗೇ ಭಯದಿಂದ ಸತ್ತು ಹೋಗುತ್ತಿದ್ದೆ. ಬಹುಶಃ ಬೇರೆ ಯಾವ ಹೆಂಗಸೂ ಈ ಥರ ಮೂರ್ಖ ಕೆಲಸ ಮಾಡುತ್ತಿರಲಿಲ್ಲ.

ಇನ್ನೊಂದು ವಿಷಯಾಂದ್ರೆ, ನನಗೆ ಇಸ್ಪೀಟು ಆಡೋಕೆ ಬರೋದಿಲ್ಲ; ನಾನು ಆಡೋದೇ ಇಲ್ಲ. ಇಸ್ಪೀಟು ಎಲೆಗಳನ್ನು ಮೇಜಿನ ಮೇಲೆ ಕ್ರಮವಾಗಿ ಹಾಕುವುದಿರಲಿ. ಕೈಯಲ್ಲಿ ಒಟ್ಟಿಗೆ ಜೋಡಿಸಿ ಇಟ್ಟುಕೊಳ್ಳುವುದಕ್ಕೂ ಬರುತ್ತಿರಲಿಲ್ಲ. ಇಸ್ಪೀಟು ಆಡೋದು ನನಗೆ ಇಷ್ಟವೇ ಇಲ್ಲವೋ ಅಥವಾ ಅದರ ಬಗ್ಗೇನೇ ನನಗೊಂದು ರೀತಿ ತಿರಸ್ಕಾರಾನೇ ಇದೆಯೋ - ಸರಿಯಾಗಿ ಹೇಳೋಕೆ ಬರೋದಿಲ್ಲ. ಹೇಳುವ ಸ್ಥಿತಿಯಲ್ಲೂ ಇಲ್ಲ, ಹೇಳುವಷ್ಟು ಮಟ್ಟಿಗೆ ತಯಾರಿ ನಡೆಸೋಕೆ ಸಮಯವೂ ಇಲ್ಲ. ಇಸ್ಪೀಟು ಎಲೆ ಕೈ ಹಿಡಿಯುತ್ತಿದ್ದಂತೆ ನಿಶ್ಚಲವಾಗಿ ಬಿಡುತ್ತೇನೆ. ಬಹುಶಃ ಪಾರ್ಕಿನ್‌ಸನ್ ರೋಗದ ಬಗ್ಗೆ ತಮಗೆ ತಿಳೀದಿರಬಹುದು. ದೇಹದ ಕ್ರಿಯೆಗಳನ್ನು ನಿಯಂತ್ರಿಸಲು ಆಗುವುದೇ ಇಲ್ಲ. ದೇಹದಲ್ಲಿನ ಚಟುವಟಿಕೆಗಳು ತಮಗೆ ತಾವೇ ನಡೆಯುತ್ತಿರುತ್ತವೆ. ಒಮ್ಮೊಮ್ಮೆ ಎಂಥ ಸ್ಥಿತಿ ಉಂಟಾಗುತ್ತೆ ಅಂದರೆ ಆ ಮನುಷ್ಯನಿಗೆ ತನಗೆ ತಾನೇ ಏನನ್ನೂ ಮಾಡಲು ಆಗುವುದಿಲ್ಲ. ಎಲೆ ಹಿಡಿದ ನನ್ನ ಕೈಗಳ ಸ್ಥಿತಿಯೂ ಹಾಗೇ ಆಗಿತ್ತು. ಏನೂ ಯೋಚನೆ ಮಾಡಲಾಗಲೀ ಕೆಲಸ ಮಾಡುವುದಕ್ಕಾಗಲೀ- ಆಗುತ್ತಿರಲಿಲ್ಲ.

ನನ್ನ ಗಂಡ ಸ್ಟೇಟ್ ಬ್ಯಾಂಕ್ ಚೀಫ್ ಆಫೀಸರ್ ಆಗಿದ್ದಾನೆ. ಹೆಸರು ನರೇಶ್ ಅಂತ. ನನ್ನ ಹೆಸರು ಮೀರಾ. ಆದರೆ ನನ್ನ ಹೆಸರಿನಿಂದ ಆಗಬೇಕಾದ್ದೇನೂ ಇಲ್ಲ ಎನ್ನಿ. ನನ್ನ ಗಂಡ ನೋಡಲು ಚೆನ್ನಾಗಿದ್ದಾನೆ. ಎತ್ತರಕ್ಕೆ ಮೈ ತುಂಬಿಕೊಂಡ ದೇಹ. ಸುಂದರವಾದ ಮುಖ. ಕಂದುಬಣ್ಣ. ತೀಕ್ಷ್ಣವಾದ ಹೊಳೆಹೊಳೆವ ಕಪ್ಪು ಕಣ್ಣುಗಳು, ಕೆಂಪಾದ ರಸವತ್ತಾದ ತುಟಿಗಳು, ಚೂಪಾದ ಮೂಗು. ನಾನು ನನ್ನ ಗಂಡ ಇಷ್ಟು ಸುಂದರವಾಗಿದ್ದಾನೇಂತ ಹೇಳೋದಕ್ಕೆ ನನ್ನ ಪ್ರೀತಿಯೇ ಕಾರಣ ಅಂತ ಅನಿಸಬಹುದು. ಆದರೆ ನಿಜವಾಗಿಯೂ ಸುಂದರವಾಗಿದ್ದಾನೆ.

ನನಗೆ ಅವನ ಚೂಪಾದ ಮೂಗು ಅಷ್ಟೊಂದು ಹಿಡಿಸೋದಿಲ್ಲ. ಒಂದು ವೇಳೆ ಅವನ ಮೂಗು ಇಷ್ಟು ಚೂಪಾಗಿ ಇಲ್ಲದೆ ಸ್ವಲ್ಪ ಚಪ್ಪಟೆ ಇದ್ದಿದ್ದರೆ, ಬ್ಯಾಂಕಿನ ಅಕೌಂಟಿಂಗ್ ಕೆಲಸ ಇಷ್ಟೊಂದು ಕೌಶಲ್ಯದಿಂದ, ಮಗ್ನತೆಯಿಂದ ಮಾಡುತ್ತಿರಲಿಲ್ಲವೇನೋ. ಆಗ ಅವರು ನನ್ನನ್ನು, ನಾನೆಷ್ಟು ಅವರನ್ನು ಪ್ರೀತಿಸುತ್ತಿದ್ದೇನೆಯೋ, ಅಷ್ಟೇ ಪ್ರೀತಿಸುತ್ತಿದ್ದರು ಎನಿಸುತ್ತದೆ.

ನಿಮಗನಿಸಬಹುದು, ನಾನು ಹೇಳ್ತಿರೋದು ಅರ್ಥವಿಲ್ಲದ್ದು ಅಂತ. ಅದು ಸರೀನೂ ಇರಬಹುದು. ಚೂಪಾದ ಮೂಗು ಸೌಂದರ್ಯಕ್ಕೊಂದು ಮಾನದಂಡ. ಯಾರನ್ನು ಕೇಳಿದರೂ ಇದನ್ನೆ ಹೇಳ್ತಾರೆ. ನನಗೆ ಗೊತ್ತಿದೆ. ಅವನ ಮೂಗು ಚೂಪಾಗಿರುವ ಬದಲು ಚಪ್ಪಟೆಯಾಗಿದ್ದಿದ್ದರೆ ಅಷ್ಟಾಗಿ ಅವನನ್ನು ಸುಂದರ ಅಂತ ಪರಿಗಣಿಸುತ್ತಿರಲಿಲ್ಲ. ಕಡೆಗೆ ಅವನಿಗೂ ಹಾಗೇ ಅನಿಸುತ್ತಿದ್ದಿರಬಹುದು. ಆದರೆ ನನಗೆ ಮಾತ್ರ ಈಗಿರೋದಕ್ಕಿಂತ ಸುಂದರವಾಗಿ ಕಾಣ್ತಿದ್ದ. ಮತ್ತು ನಾನು ಪ್ರೀತಿಸುತ್ತಿರುವಷ್ಟೇ ನನ್ನನ್ನು ಪ್ರೀತಿಸುವುದಕ್ಕೆ ಸಾಧ್ಯವಾಗುತ್ತಿತ್ತು. ನಿಮಗನಿಸಬಹುದು ನಾನು ಸುಮ್ಮನೆ ಇದನ್ನೇ ಪದೇ ಪದೇ ಹೇಳ್ತಿದ್ದೀನಿ ಅಂತ.

ನನಗೆ ಗೊತ್ತು ನಾನು ಹೇಳುವುದರಲ್ಲಿ ಅಷ್ಟೊಂದು ಸತ್ಯ ಇರೋದಿಲ್ಲ ಅಂತ. ನರೇಶನ ಮಾತಿಗಿಂತ ನನ್ನ ಮಾತಿನಲ್ಲಿ ಸತ್ಯ ಕಡಿಮೆ ಅನ್ನೋದು ಗೊತ್ತು. ಆದರೂ ನನ್ನ ಮಾತು ಸುಳ್ಳಾಗುವುದಿಲ್ಲ. ನನಗೆ ಗೊತ್ತಿಲ್ಲದೆಯೇ ನಾನು ಹೇಳುವುದೆಲ್ಲ ಸರಿಯಾಗಿರುತ್ತೆ.

ನಾನು ಹೇಳಿದ್ದೆ, ನರೇಶ್ ಬ್ಯಾಂಕ್‌ನಲ್ಲಿ ಅಕೌಂಟೆಂಟ್ ಆಗಿದ್ದಾನೆ; ಬಹಳ ಸಮರ್ಥ ಅಂತಲೂ ಹೇಳಿದ್ದೆ. ಒಂದು ವಿಚಾರ ಏನೆಂದರೆ ಸಾಮಾನ್ಯವಾಗಿ, ಯಾವ ಮನುಷ್ಯ ದಿನಪೂರ್ತಿ ಸಂಖ್ಯೆಗಳ ಜೊತೆ ತಲೆ ಕೆಡಿಸಿಕೊಂಡು ಕೂತಿರುತ್ತಾನೆ, ಆತ ಮನೆಗೆ ಬಂದ ಕೂಡಲೇ, ಅದು ಬಿಟ್ಟು ಏನಾದರೂ ಬೇರೆಯದನ್ನು ಇಷ್ಟ ಪಡುತ್ತಾನೆ ಅನ್ನೋದು ಎಲ್ಲರ ಭಾವನೆ. ಮದುವೆಗೆ ಮೊದಲು ನಾನೂ ಹಾಗೇ ಯೋಚಿಸಿದ್ದೆ. ಹಾಗೇ ಸುತ್ತಾಡಿ ಬರೋದು, ಪಾರ್ಕು, ಅದೂ ಇದೂ ಸುತ್ತಾಡಿ ತಾಜಾ ಗಾಳಿ, ಕಣ್ಣಿಗೆ ತಂಪಾಗುವ ಅರಳಿದ ಹೂಗಳ ಸೌಂದರ್ಯವನ್ನು ಅನುಭವಿಸುವುದು.

ಹರಟೆ ಹೊಡೆಯೋದು, ಪೇಟೆ–ಗೀಟೆ ಸುತ್ತಾಡಿ ತರಾವರಿ ಅಂಗಡಿಗಳನ್ನು ನೋಡೋದು, ಹೋಟೆಲು–ಸಿನಿಮಾ ಅಂತ ಮೋಜು ಮಾಡೋದು... ಹೀಗೆ ಎಲ್ಲಾ ಇರುತ್ತೆ, ಲೆಕ್ಕ ಗಿಕ್ಕ ಒಂದರ ಹೊರತು– ಅಂದುಕೊಂಡಿದ್ದೆ. ಆದರೆ ನರೇಶನ ವಿಚಾರದಲ್ಲಿ ಹಾಗಾಗಲಿಲ್ಲ. ಲೆಕ್ಕ ಪಕ್ಕ – ಸಂಖ್ಯೆ–ಗಿಂಖ್ಯೆಗಳ ಆಕರ್ಷಣೆಯಿಂದ ಅವನು ದೂರವಾಗುತ್ತಿರಲಿಲ್ಲ. ನಾನೂ ನರೇಶನ ಆಕರ್ಷಣೆಯಿಂದ ಬಿಡುಗಡೆಗೊಳ್ಳಲಿಲ್ಲ.

ಸಂಜೆಗೆ ಬ್ಯಾಂಕಿನಿಂದ ಮನೆಗೆ ಬರುತ್ತಿದ್ದಂತೆ ಕೈಕಾಲು ಮುಖ ತೊಳೆದುಕೊಂಡ ಮೇಲೆ, ಅವನು ಬಯಸುತ್ತಿದ್ದುದು ಬೇರೆನನ್ನೂ ಅಲ್ಲ– ಬರೀ ಇಸ್ಪೀಟಾಟವನ್ನು. ಅಂಥಿಂಥ ಆಟವಲ್ಲ ಅದೆಲ್ಲ ಬಹಳ ವಿಚಾರವಂತರ – ಬುದ್ಧಿ ಜೀವಿಗಳ ಆಟ. ಅಂದರೆ ಬ್ರಿಜ್. ಈ ಆಟದಲ್ಲಿ ನರೇಶ್ ಘಟಾನುಘಟಿ ಎನಿಸಿಕೊಂಡಿದ್ದ. ಊರಿನಲ್ಲಿ ಅವನನ್ನು ಈ ಆಟದಲ್ಲಿ ಚಾಂಪಿಯನ್ ಅಂತಲೇ ಭಾವಿಸಿದ್ದರು. ಈಗ ಬರೀ ಊರಿನ ಚಾಂಪಿಯನ್ ಅಲ್ಲ. ಇಡೀ ಡಿಸ್ಟ್ರಿಕ್ಟಿಗೇ ಚಾಂಪಿಯನ್ ಆಗಲು ಕನಸು ಕಾಣುತ್ತಿದ್ದ. ಅದಕ್ಕಾಗಿ ಪ್ರತಿದಿನ ತಪ್ಪದೆ ಆಟಾನ ಅಭ್ಯಾಸ ಮಾಡಲೇಬೇಕು ಎಂದು ಹೇಳುತ್ತಿದ್ದ.

ಕ್ಲಬ್ಬು ಮನೆಯಿಂದ ಸ್ವಲ್ಪ ದೂರದಲ್ಲಿತ್ತು. ಆದ್ದರಿಂದ ಪ್ರತಿದಿನ ಸಂಜೆ ಇಬ್ಬರೂ ಕಾರಿನಲ್ಲಿ ಹೋಗುತ್ತಿದ್ದೆವು. ಈ ಹದಿನೈದು ನಿಮಿಷಗಳ ಜೊತೆ, ಹೇಗೋ ಇನ್ನೊಂದು ಹದಿನೈದು ನಿಮಿಷ ಬಿಡುವು ಮಾಡಿಕೊಂಡು ನನಗೆ ಕಾರು ಕಲಿಸುತ್ತಿದ್ದ. ಕೆಲವು ದಿನಗಳಲ್ಲೇ ಕಾರು ನಡೆಸಲು ಕಲಿತು ಬಿಟ್ಟೆ. ನರೇಶನಿಗೆ ಆಶ್ಚರ್ಯವಾಯಿತು. ಬ್ರಿಜ್ ಕಲಿಯೋಕೆ ಮೂರು ನಾಲ್ಕು ತಿಂಗಳು ತೆಗೆದುಕೊಂಡರೂ ಕಲಿಯಲು ಆಗಿರಲಿಲ್ಲ. ನನಗೆ ಬ್ರಿಜ್ ಕಲಿಸಬೇಕೂಂತ ತುಂಬ ಆಸೆ ಇಟ್ಟುಕೊಂಡಿದ್ದ ನರೇಶ್. ಅವನ ಲೆಕ್ಕಾಚಾರ ಏನೂಂದ್ರೆ, ಅವನು ಆಟ ಆಡಿದ ಮೇಲೆ ಅದರ ವಿಶ್ಲೇಷಣೆ ಮಾಡುವಾಗ ನಾನು ಬೆಪ್ಪಳಂತೆ ಇರೋದಿಲ್ಲ ಅಂತ ಭಾವಿಸಿದ್ದ. ಆಟದ ಸೂಕ್ಷ್ಮಗಳನ್ನೆಲ್ಲ ಅರ್ಥಮಾಡಿಕೊಳ್ಳುತ್ತಾಳೆ ಎಂದೆಲ್ಲಾ ಆಸೆ ಇರಿಸಿಕೊಂಡಿದ್ದ.

ಆದರೆ ಇವತ್ತಿನ ವರೆಗೆ ಅವನ ಆಸೆ ಪೂರೈಸಲಿಲ್ಲ. ಅವನಿಗೆ ನನ್ನ ಸಮಸ್ಯೆ ತಿಳಿಸಿ ಹೇಳಲು ಪ್ರಯತ್ನಿಸಿದೆ. ಕೈಲಿ ಎಲೆ ಹಿಡೀತಿದ್ದಂತೆ ನಾನು ಜಡವಾಗಿ ಬಿಡುತ್ತೇನೆ. ಎಷ್ಟೇ ಪ್ರಯತ್ನಿಸಿದರೂ ಒಂದೆಳ್ಳಷ್ಟೂ ಕೈಕಾಲು ಆಡೋದಿಲ್ಲಾಂತ ವಿವರಿಸಿ ಹೇಳಿದೆ. ಆದರೆ ಅವನಿಗೆ ನಾನು ಕಲೀಬಾರದೂ ಅನ್ನೋ ಹಠ ಇದ್ದಂಗೆ ಅನಿಸಿದೆ. ನಾನು ಬೇಕಂತಲೇ ಕಲಿಯುವ ಪ್ರಯತ್ನ ಮಾಡ್ತಿಲ್ಲ ಅಂತಾನೆ.

ಇದು ಹೇಗೆ? ಒಂದು ತಿಂಗಳುದ್ದಕ್ಕೂ ವಾದ ಮಾಡಿದ ಮೇಲೆ ಅವನು ಹೇಳಿದ– "ಯಾವ ಹೆಂಗಸು ಹತ್ತು ದಿನದಲ್ಲಿ ಕಾರು ಕಲಿತು ಬಿಟ್ಟಳೋ, ಅವಳಿಗೆ ತಿಂಗಳು ಪೂರ್ತಿ ಪಾಠ ಹೇಳಿದರೂ ಆಟದ ರೂಲ್ಸ್ ಅರ್ಥ ಆಗಲಿಲ್ಲ ಅಂದ್ರೆ?"

"ಎಲೆ ಕೈಗೆ ತೆಗೆದುಕೊಳ್ತಿದ್ದ ಹಾಗೇ ನನಗೆ ಏನೋ ಒಂಥರಾ ಆಗಿ ಬಿಡುತ್ತೆ" ನಾನು ಹೇಳಿದೆ.

"ಏನೋ ಆಗಿಬಿಡುತ್ತೆ? ಪರವಾಗಿಲ್ಲ ಒಳ್ಳೆ ಕಾರಣ ಕೊಡ್ತಿದ್ದೀಯ. ಸ್ವಲ್ಪ ಹೇಳಾದರೂ ಹೇಳು, ಅದೇನಾಗುತ್ತೇಂತ." ಬಿಟ್ಟು ಬಿಟ್ಟು ಹೇಳಿದ. ಅವನ ಮಾತೂ ಅವನ ಮೂಗಿನ ಹಾಗೇ ಚೂಪಾಗಿತ್ತು.

"ಒಂದು ಥರಾ ಸುಂದು ಹಿಡಿದ ಹಾಗೆ ಆಗುತ್ತೆ" –ತಡವರಿಸುತ್ತಾ ಹೇಳಿದೆ.

"ಹೇಗೆ?" ವಿಚಾರಣೆ ಸಮಯದಲ್ಲಿ ವಕೀಲ ಪ್ರಶ್ನಿಸುವ ಹಾಗೆ ಪ್ರಶ್ನಿಸಿದ. ಅವನ ತೀಕ್ಷ್ಣವಾದ ನೋಟದಲ್ಲಿ ವಿಚಿತ್ರವಾದ ಹೊಳಪಿತ್ತು.

"ಅದು ಹೇಗೇಂದ್ರೆ.... ಅದೇ ಪಾರ್ಕಿನ್‌ಸನ್‌ಗೆ ಒಳಗಾದ ವ್ಯಕ್ತಿ ಹೇಗೆ ನಿಸ್ಪಂದನಾಗಿ ಬಿಡುತ್ತಾನೋ ಹಾಗೆ" ಅವನಿಗೆ ಅರ್ಥ ಆಗುವ ಹಾಗೆ ವಿವರಿಸಿ ಹೇಳಿದೆ.

"ಇಂತಹ ಮೂರ್ಖ ಮಾತುಗಳನ್ನು ನಾನೆಂದೂ ಕೇಳಿರಲಿಲ್ಲ" ತೀಕ್ಷ್ಣವಾದ ದನಿಯಲ್ಲಿ ಹೇಳಿದ. "ನಿನಗೇನೂ ಪಾರ್ಕಿನ್‌ಸನ್ ರೋಗ ಇಲ್ಲವಲ್ಲ?"

"ಇಲ್ಲ" ರೋಗ ಅಂತು ಇಲ್ಲ.... ಆದರೆ... ಆದರೆ... ಅವನಿಗೆ ತಿಳಿಸಿ ಹೇಳಲು ಅಸಮರ್ಥಳಾಗಿದ್ದಕ್ಕೆ ತಡವರಿಸಲಿಲ್ಲ... ಅವನ ಕೋಪ ನೋಡಿ ನನ್ನ ಗಂಟಲು ಬಿಗಿಯಿತು. ಮಾತೇ ಹೊರಡಲಿಲ್ಲ.

"ಆದರೆ... ಆದರೆ.. ಏನು?... ಕೇಳೋದನ್ನು ನಿಲ್ಲಿಸಲಿಲ್ಲ... ಹೇಳು... ಆದರೆ... ಮುಂದೆ ಹೇಳು."

ನನಗೆ ಒಂದು ಶಬ್ದವನ್ನೂ ಬಾಯಿಂದ ಹೇಳೋಕೆ ಆಗಲಿಲ್ಲ. ಕಣ್ಣು ತುಂಬಿ ಬಂತು. ಅಳು ತಡೆಯಲು ಸಾಧ್ಯವಾಗಲಿಲ್ಲ. ಕೆನ್ನೆ ಮೇಲಿಂದ ಟಪಟಪನೆ ಕಂಬನಿಗಳು ಉದುರಿದವು.

"ಈಗ ಅಳುತ್ತಿರೋದು ಯಾಕೆ?" ಸಾಕಷ್ಟು ಸಿಟ್ಟಿನಿಂದಲೇ ಹೇಳಿದ.

"ಏನಾದರೂ ಕೇಳಲಿ, ಉತ್ತರ ಕೊಡೋಕೆ ಆಗಲಿಲ್ಲ ಅಂದ್ರೆ ಅಳೋಕೆ ಶುರುಮಾಡಿ ಬಿಡ್ತೀಯ" ಅಂದ.

ಆಗ ನಾನು ಇನ್ನೊಂದು ಥರ, ಅಸಂಬದ್ಧವಾಗಿ ಉತ್ತರ ಹೇಳಿ ಬಿಡ್ತೀನಿ.

"ನನ್ನನ್ನು ನಾನು ತುಂಬಾ ಪ್ರೀತಿಸ್ತೀನಿ." – ಒತ್ತೊತ್ತಿ ಬಂದ ಗಂಟಲಿಂದ ಹೇಳಿದೆ

ಇದನ್ನು ಕೇಳಿದ ಮೇಲೆ, ಪ್ರಶ್ನೆಗಳನ್ನು ಮುಂದುವರೆಸುವ ಆಲೋಚನೆಯಲ್ಲಿದ್ದ ನರೇಶನ ಚೂಪಾದ ಮೂಗು ಸ್ವಲ್ಪ ಕೆಳಗೆ ಬಂತು. ಕಠಿಣವಾಗಿ ಮಾತಾಡುತ್ತಿದ್ದವನು ಈಗ ಸ್ವಲ್ಪ ಮೆದುವಾದ.

"ಸರಿ, ಒಳ್ಳೇದೇ ಆಯ್ತಲ್ಲ" – ಎಂದ.

ಅಷ್ಟೇ ಇಲ್ಲ. ಪ್ರೀತಿಯಿಂದ ನನ್ನ ಭುಜ ತಟ್ಟಿದ. ಅದಾದ ಮೇಲೂ ನರೇಶ್ ನನಗೆ ಬ್ರಿಜ್ ಆಟ ಕಲಿಸಲು ಹವಣಿಸುತ್ತಲೇ ಇದ್ದ. ನಾನೂ ಕೂಡಾ ಇಸ್ಪೀಟ್ ಎಲೆಗಳನ್ನು ಕೈಗೆ ತೆಗೆದುಕೊಂಡು ನಿಸ್ಪಂದವಾಗಿದ್ದ ಕೈಗಳಿಗೆ ಪ್ರಯತ್ನಪಟ್ಟು ಚಲನೆ ನೀಡಲು ನೋಡುತ್ತಿದ್ದೆ. ಆದರೆ ನಮ್ಮಿಬ್ಬರ ಪ್ರಯತ್ನಗಳೂ ಫಲಕಾರಿಯಾಗಲಿಲ್ಲ. ಆಮೇಲೆ ಕ್ರಮೇಣ ನರೇಶನೇ ಕಲಿಸುವ ಪ್ರಯತ್ನ ಕೈಬಿಟ್ಟ. ಬ್ರಿಜ್ ಆಡೋದನ್ನೂ ಬಿಡಲಿಲ್ಲ; ಆಟ ನೋಡಲು ನನ್ನನ್ನು ಕರೆದುಕೊಂಡು ಹೋಗುವುದನ್ನೂ ಬಿಡಲಿಲ್ಲ. ನಾನೂ ಅವನನ್ನು ಪ್ರೀತಿಸುವುದನ್ನು ನಿಲ್ಲಿಸಲಿಲ್ಲ. ಆಟ ಆಡೋದನ್ನು ಕಲಿಸುವ–ಕಲಿಯುವ ಪ್ರಯತ್ನ ನಿಲ್ಲುತ್ತಿದ್ದಂತೆ, ತಕ್ಷಣ ನನ್ನಲ್ಲಿನ ಧೈರ್ಯ ಸ್ವಲ್ಪ ಹೆಚ್ಚಾಯಿತು. ಪ್ರೀತಿಯನ್ನು ಪಣವಾಗಿಟ್ಟು, ನಾನು ಇನ್ನೊಂದು ರೀತಿಯ ಆಟ ಶುರು ಮಾಡಿದೆ.

ನರೇಶ್ ಆಫೀಸಿನಿಂದ ಬರುತ್ತಿದ್ದಂತೆ, ಪ್ರೀತಿಯ ಹೊಸ ಹೊಸ ಪಟ್ಟುಗಳನ್ನು ಪ್ರಯೋಗಿಸಿ, ಅವನನ್ನು ಮೆಚ್ಚಿಸಲು ಪ್ರಯತ್ನಿಸುತ್ತಿದ್ದೆ. ಹಾಗೂ ಹೀಗೂ ಮಾಡಿ ಮರುಳುಗೊಳಿಸಿ, ಅಲ್ಲಿ ಇಲ್ಲಿ ಸುತ್ತಾಡಿಸಲು, ಹಾಸಿಗೆಗೆ ಸೆಳೆದುಕೊಳ್ಳಲು ತೊಡಗಿದೆ.

ನಾನು ವಿವರಿಸಬೇಕಾದ ಅಗತ್ಯ ಇಲ್ಲಾಂತ ಕಾಣುತ್ತೆ. ಆದಷ್ಟೂ ಇಸ್ಪೀಟು ಆಟದ ಮೇಜಿನಿಂದ ದೂರವಿರಿಸಲು ದಿನಾ ದಿನಾ ಹೊಸ ಹೊಸ ಉಪಾಯಗಳನ್ನು ಯೋಚಿಸುತ್ತಿದ್ದೆ. ತೆಳುವಾದ ನೈಟಿ ಧರಿಸಿ ಅವನ ಮುಂದೆ ಹೋಗಿ ನಿಲ್ಲೋದು. ಮೊಣಕಾಲಿನ ಮೇಲೆ ಕುಳಿತು ಅವನ ಬೂಟು ಬಿಚ್ಚೋದು, ಕಾಲಿಂದ ಹಿಡಿದು ಹಣೆವರೆಗೂ ಮುತ್ತುಗಳನ್ನು ಒತ್ತುವುದು, ಅವನ ತೊಡೆ ಮೇಲೆ ಕುಳಿತು ಬಗೆ ಬಗೆಯಾದ ತಿಂಡಿ ತಿನಿಸುಗಳನ್ನು ತಿನ್ನಿಸೋದು, ಕಣ್ಣಲ್ಲಿ ನೀರು ತಂದುಕೊಂಡು ಹೊರಗೆ ಸುತ್ತಾಡಿ ಬರಲು ಕರೆದೊಯ್ಯಲು ವಿನಮ್ರತೆಯಿಂದ ಕೇಳಿಕೊಳ್ಳೋದು, ಅವನ ಮುಂದೆ ದೇಹದ ಸುಂದರ ಭಾಗಗಳನ್ನು ಪ್ರದರ್ಶಿಸಿ ಪ್ರಚೋದಿಸುವುದು – ಹೀಗೆ ಏನೆಲ್ಲವನ್ನೂ ಮಾಡುತ್ತಿದ್ದೆ. ಹಾಂ! ಇನ್ನೊಂದು ಹೇಳೋದು ಮರೆತು ಬಿಟ್ಟಿದ್ದೆ, ನಾನೂ ಕೂಡಾ ಸುಂದರವಾಗಿದ್ದೀನೀಂತಲೇ ಜನ ಭಾವಿಸಿದ್ದರು. ಸರಿ, ಇಷ್ಟೆಲ್ಲ ಮಾಡಿ, ಕಡೆಗೆ ವಾರದಲ್ಲಿ ಒಂದೆರಡು ಮೂರು ದಿನವಾದರೂ ಕ್ಲಬ್ಬಿಗೆ ಹೋಗುವುದನ್ನು ತಪ್ಪಿಸುತ್ತಿದ್ದೆ.

ಆದರೆ ಎರಡು ಮೂರು ವಾರಗಳಾಗುವಷ್ಟರಲ್ಲಿ ನನ್ನ ಉತ್ಸಾಹದ ಕಾವು ಆರಿ ತಣ್ಣಗಾಯಿತು. ನನ್ನ ಪ್ರೀತಿ ತುಂಬಿದ ಆತ್ಮ ತಿರಸ್ಕಾರ ಅವನನ್ನು ಎಷ್ಟರ ಮಟ್ಟಿಗೆ

ಉತ್ತೇಜಿಸುತ್ತಿತ್ತೆಂದರೆ. ವಿಧಿಯಿಲ್ಲದೆ ಏನೋ ಕಾಟಾಚಾರಕ್ಕೆಂಬಂತೆ ತಣ್ಣಗೆ ಪ್ರೀತಿಯನ್ನು ಹಿಂತಿರುಗಿಸಿಬಿಡುತ್ತಿದ್ದ. ಮೇಲೆ ಬಿದ್ದು ಪ್ರೀತಿ ಮಾಡೋದು ಮುಗಿಸಿ, ಸರಕ್ಕೆಂದು ಬೇರೆಯಾಗಿ ಬಿಡುತ್ತಿದ್ದ. ಅಸಂತೃಪ್ತ ನನ್ನ ದೇಹ ಆಘಾತಗೊಂಡು, ಅವಮಾನಿತವಾಗಿ ಬಿದ್ದಿರುತ್ತಿತ್ತು. ಈ ಅವಮಾನಕ್ಕೆ, ಮರುದಿನ ಹೇಗೆ ಸೇಡು ತೀರಿಸಿಕೊಳ್ಳಬೇಕೆಂದು ಯೋಚಿಸುತ್ತಿದ್ದೆ.

ಒಂದು ವಾರ ಕಳೆದ ಮೇಲೆ ಗೊತ್ತಾಯಿತು, ಅವನು ನನ್ನ ಜೊತೆ ಪ್ರೀತಿ ಆಟ ಮುಗಿಸಿದ ಕೂಡಲೇ, ತನ್ನ ಗೈರು ಹಾಜರಿಯಲ್ಲಿ ನಡೆದ ಆಟದ ಲೆಕ್ಕಾಚಾರ ಹಾಕುತ್ತಿದ್ದಾನೆ ಎಂದು. ಮತ್ತೆ ಮರುದಿನ, ನನ್ನ ಜೊತೆ ಪ್ರೀತಿ ಮುಗಿಸುತ್ತಿದ್ದಂತೆಯೇ ಎದ್ದು ಬಟ್ಟೆ ಧರಿಸಿ ಕ್ಲಬ್ಬಿನ ಕಡೆ ಹೆಜ್ಜೆ ಹಾಕಿದ.

ನೆನ್ನೆ ಕ್ಲಬ್ಬಿಗೆ ಹೋದಾಗ, ಮೊಟ್ಟಮೊದಲ ಬಾರಿಗೆ ನನ್ನನ್ನು ಕರೆದೊಯ್ಯಲಿಲ್ಲ. ನೆನ್ನೆ ಬರುತ್ತಿದ್ದಂತೆಯೇ ಈ ಬಾರಿ ಆಟದಲ್ಲಿ ಸೋತು ಬಂದಿದ್ದೇನೆಂದು ಹೇಳಿ, ಹಸಿದ ತೋಳದಂತೆ ನನ್ನ ದೇಹದ ಮೇಲೆ ಆಕ್ರಮಣ ಮಾಡಿದ. ನೆನ್ನೆ ನಾನು ನಗ್ನವಾಗಿ ಯಾವ ಸ್ಥಿತೀಲಿ ಇದ್ದಾಗ ಬಿಟ್ಟು ಹೋಗಿದ್ದನೋ, ಇವತ್ತೂ ಅದೇ ಸ್ಥಿತಿಯಲ್ಲಿದ್ದೆ. ಸೋಲಿನ ಸಿಟ್ಟನ್ನೆಲ್ಲ ನನ್ನ ಮೇಲೆ ಕಾರಿದ. ಅವನ ಹಲ್ಲು, ಉಗುರುಗಳ ಗುರುತು ತುಟಿ. ಎದೆ ಮತ್ತು ಇನ್ನೂ ದೇಹದ ಹಲವು ಕಡೆ ಕಾಣಿಸಿದವು. ಇಲ್ಲೀವರೆಗೆ ಅವನ ಪ್ರೀತಿಯ ಆಕ್ರಮಣಕ್ಕಾಗಿ ನಾನೇ ಅವನನ್ನು ಪ್ರಚೋದಿಸುತ್ತಿದ್ದೆ. ಆದರೂ ಇಂತಹ ಭಯಂಕರ ರೀತಿಯಲ್ಲಿ ಉತ್ತೇಜಿತನಾಗುವಂತೆ ಮಾಡಲು ಸಾಧ್ಯವಾಗಿರಲಿಲ್ಲ. ನನ್ನ ದೇಹವನ್ನೆಲ್ಲ ಚುಂಬನಗಳ ಚಬುಕುಗಳಿಂದ ಪ್ರತಾಡಿಸಿದ. ಅವನ ಈ ಉತ್ತೇಜನಕ್ಕೆ ನಾನು ಕಾರಣಗಳಾಗಿರಲಿಲ್ಲ' ಆಟದಲ್ಲಿನ ಸೋಲು ಇಂತಹ ಭಯಂಕರ ರೀತಿಯಲ್ಲಿ ಉತ್ತೇಜಿಸಿತ್ತು. ಬ್ರಿಜ್ ಆಟದಲ್ಲಿಯೇ ಅವನು ಜನಿಸಿದ್ದ.

ಬ್ರಿಜ್ ಆಟದ ಗೆಲುವಿನಲ್ಲಿ ನನ್ನನ್ನು ಪ್ರೀತಿಸುತ್ತಿದ್ದ, ನನ್ನ ಪ್ರಚೋದನೆಯಿಲ್ಲದೆಯೇ ನೆನ್ನೆಯೂ ಕೂಡಾ ಅವನದೇ ಪ್ರಚೋದನೆಯಿತ್ತು. ಆಗ ನನ್ನ ದೇಹ ಅವನಿಗೆ. ಗೆಲುವಿಗೆ ಸಿಕ್ಕ ಪುರಸ್ಕಾರದಂತಿರುತ್ತಿತ್ತು.

ತನ್ನಾಟದ ಗತ್ತು ಗಮ್ಮತ್ತುಗಳನ್ನು ವಿವರಿಸುತ್ತಾ ವಿವರಿಸುತ್ತಾ, ಆವೇಶಕ್ಕೆ ಒಳಗಾಗಿ ನನ್ನ ಮೈಮೇಲಿನ ಬಟ್ಟೆಗಳನ್ನೆಲ್ಲ ಕಿತ್ತೆಸೆದು ಮೇಲೆ ಬೀಳುತ್ತಿದ್ದ. ಆಗ ಅವನ ಆ ಕ್ರಿಯೆಯಲ್ಲಿ ಗೆದ್ದವನ ದರ್ಪ, ಸಂಭ್ರಮಗಳಿರುತ್ತಿದ್ದವು. ಸೋಲಿನ ಕ್ರೌರ್ಯವಿರುತ್ತಿರಲಿಲ್ಲ. ಬ್ರಿಜ್ ಆಡುವಾಗಿನ ಕುಶಲತೆ ಆ ಕೈಗಳಲ್ಲಿ ಇರುತ್ತಿತ್ತು. ನನ್ನ ದೇಹವನ್ನು ಮೃದುವಾಗಿ ಸವರಿ ಸವರಿ, ಎಷ್ಟು ಬೇಕೋ ಅಷ್ಟು ಮಾತ್ರವೇ ಬಳಸಿಕೊಳ್ಳುತ್ತಿದ್ದ. ಆಗ ಅದರಲ್ಲಿ, [illegible] [illegible] ಪ್ರೀತಿ [illegible]ಗಳಿರುತ್ತಿದ್ದವೇ ಹೊರತು ಭಿಕ್ಷುಕನಿಗೆ ಭಿಕ್ಷೆ ನೀಡುವವನ ತಣ್ಣನೆಯ ಕನಿಕರವಲ್ಲ.

ಆ ಅಸಹ್ಯ ಮರುಕ ನಾನು ಬ್ರಿಜ್ ಆಡುವುದನ್ನು ಕಲಿಯಲು ಸಾಧ್ಯವಾಗದೆ ಹೋದಾಗ, ಅವನನ್ನು ಪ್ರೀತಿ ಮಾಡುವಾಗ, ತೋರುತ್ತಿದ್ದ ಮರುಕ ಇದಾಗಿರಲಿಲ್ಲ.

ನೆನ್ನೆಯ ಮಾತು ಬೇರೆಯೇ ಆಗಿದೆ. ನೆನ್ನೆ ಬ್ರಿಜ್ ಆಟವೇನೋ ಆಡಿದ್ದ. ಆದರೆ ಗೆಲ್ಲಲು ಆಗಿರಲಿಲ್ಲ. ಅವನ ದರ್ಪ, ಅಹಂಕಾರ, ಅಭಿಮಾನಗಳು ನುಚ್ಚುನೂರಾಗಿದ್ದವು. ಅವನ ಹಿರಿಮೆಗೆ ಧಕ್ಕೆಯುಂಟಾಗಿತ್ತು. ಕೋಪ, ದಯೆಗಳನ್ನು ತೊರೆದು ಹಿಂಸೆಯ ಕಡೆಗೆ ಮುಖ ಮಾಡಿದ್ದ. ತನ್ನ ಸೋಲಿನ ಸೇಡನ್ನು ನನ್ನ ದೇಹದ ಮೇಲೆ ತೀರಿಸುತ್ತಿದ್ದ. ಇದಕ್ಕೆ ಹೊರತಾಗಿ ಅವನ ಬಳಿ ಬೇರೆ ದಾರಿಯಿರಲಿಲ್ಲ. ಆಗಲೇ ನನಗೆ ಅರ್ಥವಾದದ್ದು – ಬ್ಯಾಂಕಿನಲ್ಲಿನ ಉದ್ಯೋಗದಂತೆ, ಇಸ್ಪೀಟು ಆಟವೂ ಅವನಿಗೆ ಒಂದು ಉದ್ಯೋಗವೇ ಆಗಿತ್ತು ಎಂದು.

ನಾನು, ಸಂಬಳಕ್ಕಿಂತ ಬೇರೆಯಾಗಿ, ಉಳಿತಾಯದ ಹಣವಾಗಿದ್ದೆ. ಉದ್ಯೋಗದಲ್ಲಾದ ನಷ್ಟ ತುಂಬುವುದಕ್ಕೋ ಅಥವಾ ಲಾಭ ಬಂದ ಸಂತೋಷವನ್ನು ಆಚರಿಸಲು ಉಪಯೋಗಿಸುವುದಕ್ಕೋ ಬಳಕೆಯಾಗುವ ಹಣವಾಗಿದ್ದೆ.

ಇವತ್ತು ಆಫೀಸಿನಿಂದ ಬಂದಾಗ, ನಾನು ಯಾವುದೇ ರೀತಿಯ ಪ್ರೀತಿಯ ಪ್ರದರ್ಶನ ಮಾಡಲಿಲ್ಲ. ಬೊಂಬಾಯಿಯ ಫಿಲಂ ಹೀರೋಯಿನ್‌ಗಳ ರೀತಿಯಲ್ಲಿ ಜರಿ ಸೀರೆ ಉಟ್ಟು ಮೈತುಂಬಾ ಒಡವೆಯೇರಿಸಿಕೊಂಡಿದ್ದೆ. ಹಣೆಯಲ್ಲಿ ದೊಡ್ಡದಾಗಿ ಕೆಂಪು ಬೊಟ್ಟು, ಬೈತಲೆ ತುಂಬ ಕುಂಕುಮದ ಪುಡಿ ತುಂಬಿಕೊಂಡಿದ್ದೆ. ಚೌರಿ ಹಾಕಿಕೊಂಡು, ಗಿಡ್ಡದಾಗಿ ಕತ್ತರಿಸಿದ ಕೂದಲನ್ನು ಸೇರಿಸಿ ಜಡೆ ಹೆಣೆದುಕೊಂಡಿದ್ದೆ. ನನ್ನ ಗಂಡ ನರೇಶನಿಗೆ ಈ ಅವತಾರ ತುಂಬಾ ಇಷ್ಟ. ಅವನಿಗೆ ನನ್ನ ಈ ವೇಷದಲ್ಲಿ ಗೃಹಿಣಿತನ ಕಾಣಿಸುತ್ತೆ. ಇದರ ಮೇಲೆ ಅವನಿಗೆ ತನ್ನ ಯಜಮಾನಿಕೆ, ಪೋಷಕತನದ ಮುದ್ರೆ ಕಾಣುತ್ತದೆ. ಉದ್ಯೋಗಗಳಲ್ಲಿ, ಟ್ರೇಡ್‌ಮಾರ್ಕ್ ಮೂಲಕ, ಅವುಗಳಿಗೊಂದು ಬೆಲೆ ಇರುವ ಹಾಗೇ ಈ ನನ್ನ ಉದ್ಯೋಗಕ್ಕೆ ಇದು ಟ್ರೇಡ್‌ಮಾರ್ಕ್ ಆಗಿತ್ತು. ಚಹದ ಜೊತೆಗೆ ಸ್ವತಃ ನಾನೇ ತಯಾರಿಸಿದ್ದ ಬಗೆಬಗೆಯ ತಿಂಡಿಗಳನ್ನು ತಟ್ಟೆಯಲ್ಲಿ ಜೋಡಿಸಿಕೊಂಡು ಹೋಗಿ ಅವನ ಮುಂದಿಟ್ಟೆ. ಅವನ ಬಳಿಗೂ ಹೋಗದೆ, ತಟ್ಟೆಯಲ್ಲಿನ ತಿಂಡಿಗಳನ್ನೂ ಮುಟ್ಟದೆ ದೂರದಿಂದಲೇ ಚೆನ್ನಾಗಿ ತಿನ್ನಲು ಒತ್ತಾಯ ಮಾಡತೊಡಗಿದೆ. ತಿಂಡಿ ತಿಂದು ಚಹಾ ಕುಡಿದಾದ ಮೇಲೆ ಕ್ಲಬ್‌ಗೆ ಹೊರಟು ನಿಂತಾಗ, ನಾನೂ ಕೂಡಾ ಮೆಲ್ಲಗೆ ಅವನನ್ನು ಹಿಂಬಾಲಿಸಿ, ಹೋಗಿ ಕಾರಿನಲ್ಲಿ ಕುಳಿತೆ. ಕಾರು ಕಲಿತಂದಿನಿಂದ ಸಾಮಾನ್ಯವಾಗಿ ನನ್ನನ್ನೇ ಡ್ರೈವ್ ಮಾಡಲು ಹೇಳುತ್ತಿದ್ದ. ಇವತ್ತೂ ಹಾಗೇನೇ ಕ್ಲಬ್ಬಿನ ತನಕ ಕರೆದುಕೊಂಡು ಬಂದೆ. ಈ ದಿನ ಮೊಟ್ಟ ಮೊದಲ ಬಾರಿಗೆ, ನನ್ನ ಭಾವನೆಗಳನ್ನೆಲ್ಲ ಬದಿಗಿಕ್ಕಿ ನಿಷ್ಠಾವಂತ ಸೇವಕನಂತೆ, ತನ್ನ ಬಾಸ್‌ಗೆ ತಟಸ್ಥಳಾಗಿದ್ದುಕೊಂಡು ವಿನಯದಿಂದ ಸ್ವಾಗತ ಸತ್ಕಾರವನ್ನು ಮಾಡುವಂತೆ ಮಾಡಿದೆ. ಅವನ ಮೊಗದ ಮೇಲಿನ ಭಾವನೆಗಳಿಂದ ನನಗೆ ಎಷ್ಟೇ ಆಘಾತವೆನಿಸಿದರೂ. ಏನೊಂದೂ ಮಾತನಾಡದೆ ಸುಮ್ಮನೆ ಇರುತ್ತಿದ್ದೆ.

ಬ್ರಿಜ್ ಆಟ ಶುರುವಾದ ಮೇಲೂ ನನ್ನ ಈ ತಟಸ್ಥತೆ, ನಿಷ್ಪತೆ, ದಕ್ಷತೆ ಮುಂದುವರೆಯುತ್ತದೆ. ಆಟದಲ್ಲಿ ಗೆದ್ದು ಬಂದ ಮೇಲೆ, ಆಟದ ವಿವರಣೆಯೊಂದಿಗೆ ಅಭಿನಂದನೆಗಳನ್ನು ಸಲ್ಲಿಸಲು ಸಮರ್ಥಳಾಗುತ್ತೇನೆ ಎನ್ನುವ ಭರವಸೆಯುಂಟಾಗ ತೊಡಗಿತು.

ಆದರೆ ಆದದ್ದೇ ಬೇರೆ. ಆಟ ಶುರುವಾಗುತ್ತಿದ್ದಂತೆ ನನ್ನ ತಲೆ ಶೂನ್ಯವಾಯಿತು. ಈ ನನ್ನ ಜಡವಾದ ಶರೀರದಿಂದ ಪ್ರತ್ಯೇಕವಾಗಿಯೇ ಜೀವಿಸಲು ತೊಡಗಿದೆ. ಸರಿ, ಮಧ್ಯೆ ಮಧ್ಯೆ ಆಟಗಾರರ ಅದೂ ಇದೂ ಅಸಂಬದ್ಧ ಮಾತುಗಳು ಆಗಾಗ ಸ್ವಲ್ಪ ಸ್ವಲ್ಪ ಕಿವಿ ಮೇಲೆ ಬಿದ್ದು, ಮನಸ್ಸಿಗೆ ನೋವುಂಟಾಗುತ್ತಿತ್ತು.

"ಒನ್ ಹಾರ್ಟ್" ಆಟ ಶುರುವಾಯಿತು.

"ನೋ ಬಿಡ್" ಎರಡನೇ ಧ್ವನಿ ಕೇಳಿಸಿತು.

"ಟು ಹಾರ್ಟ್ಸ್" ಮೂರನೆ ಧ್ವನಿ ಕೇಳಿಸಿತು.

ನಾನು ನನ್ನಲ್ಲೇ ಮುಳುಗಿದೆ.

ಟೂ ಹಾರ್ಟ್ಸ್ – ಎರಡು ಹೃದಯಗಳು... ಸೇರುತ್ತವೆ; ಅಗಲುತ್ತವೆ. ಯುವ ಹೃದಯಗಳು ಸೇರುತ್ತವೆ – ಮುರಿಯುತ್ತವೆ. ಹೃದಯ ಒಡೆಯುವುದು – ಎಷ್ಟೊಂದು ಭಯಂಕರ ಯಾತನೆ. ನನ್ನ ಮನಸ್ಸಿನಲ್ಲಿ ಮೂಡುತ್ತಿರುವ ಮಾತುಗಳನ್ನು ಕೇಳಿ ತಮಗೆ ನಗು ಬರುತ್ತಿದೆ ಎಂದು ಹೇಳುತ್ತೀರಿ. ಈ ಶಬ್ದಗಳು, ಅಸಂಬದ್ಧ ಮಾತುಗಳು ಸವಕಲಾಗಿವೆ.

ನನಗೆ ಗೊತ್ತು. ಚೆನ್ನಾಗಿ ಗೊತ್ತು. ಆದರೆ ಏನೂ ಮಾಡಲಿ? ಇದೇ ನನ್ನ ಹಣೆಬರಹ. ಗೋಳು. ಎಲ್ಲವೂ ಫಿಲ್ಮಿ ರೀತಿಯಲ್ಲಿ. ಈ ಮಾತುಗಳಲ್ಲಿ ನಂಬಿಕೆ ಇಲ್ಲದವರೂ ಕೂಡಾ ಪದೇ ಪದೇ ಇವನ್ನು ಮಾತಾಡುತ್ತಾರೆ. ಅದಕ್ಕೇ ನನ್ನ ಮಾತುಗಳಲ್ಲಿ ಯಾರಿಗೂ ನಂಬಿಕೆ ಬರೊಲ್ಲ. ಆದರೆ ನನಗೆ ಇಂತಹ ಮಾತುಗಳಲ್ಲಿ ನಂಬಿಕೆಯಿದೆ. ನನ್ನ ಜೀವನದಲ್ಲಿ ಇದೆಲ್ಲ ನಡಿಯುತ್ತಲೇ ಇವೆ.

"ಕಮ್ ಆನ್. ಥ್ರೋ ದ ಹಾರ್ಟ್" ಒಂದು ಧ್ವನಿ ನನ್ನನ್ನು ಬೆಚ್ಚಿ ಬೀಳಿಸಿತು.

"ಈಗ ನಿನ್ನಾಟ"

"ಹಾರ್ಟ್ ಯಾಕೆ ಹಾಕಲಿಲ್ಲ?" ಯಾರೋ ಸಿಟ್ಟಿನಿಂದ ಹೇಳಿದ್ದು ಕೇಳಿಸಿತು. ಬಹುಶಃ ಅದು ನರೇಶನದಾಗಿರಬೇಕು.

ಸರಿಯಾಗಿಯೇ ಇದೆ. ಮುರಿದ ಹೃದಯಗಳನ್ನು ಬಿಸಾಡಲೇಬೇಕು. ಆದರೆ ಅದು ಎಷ್ಟೊಂದು ಸುಲಭದ ಕೆಲಸವೇ? ಮನಸ್ಸಿನ ಯಾವುದೋ ಒಂದು ಮೂಲೆಯಲ್ಲಿ ಅವು ಮಿಡಿಯುತ್ತಿರುತ್ತವೆ. ಬಿಸಾಡಿದರೂ ಮಿಡಿಯುತ್ತಲೇ ಬದುಕುತ್ತವೆ.

"ವನ್ ಕ್ಲಬ್"

"ವನ್ ನೋ ಟ್ರಂಪ್"

"ಕ್ಲಬ್"

"ಥ್ರೀ ಸ್ಪೇಡ್ಸ್"

ನಿನ್ನ ತೋಟಕ್ಕೂ ಒಂದು ಸ್ಪೇಡನ್ನು ಕೊಳ್ಳಬೇಕಿದೆ. ಹಿಂದೆ ತಗೊಂಡಿದ್ದು ಪೂರ್ತಿ ಸವೆದು ಹೋಗಿದೆ. ಹೂ ತೋಟದಲ್ಲೆಲ್ಲ ಹುಲ್ಲು ಬೆಳೆದುಬಿಟ್ಟಿದೆ. ಕಿತ್ತು ಬಿಸಾಡದಿದ್ದರೆ ಹೂವಿನ ಕ್ಯಾರಿಗಳವರೆಗೂ ಚಾಚಿ ಬಿಡುತ್ತೆ. ಎಲ್ಲಾ ಹಾಳಾಗಿ ಬಿಡುತ್ತೆ.

"ಮೇಕ್ ಗುಡ್ ವಿತ್ ಎ ಸ್ಪೇಡ್"

"ಅಯ್ ಹ್ಯಾಡ್ ಥ್ರೀ ಟ್ರಿಕ್ಸ್"

..... ಗೊತ್ತಿದೆಯೇನು, ಪಕ್ಕದ ಊರಲ್ಲಿ ಹಸಿವಿನಿಂದ ಹತ್ತು ಜನ ಸತ್ತಿದ್ದಾರೆ?

"ಇರಬಹುದು. ನೀನು ಎಲೆ ಹಾಕು."

"ಆಯ್ತಾಯ್ತು, ಗೇಮ್ ಮುಂದುವರೆಸು".

"ಹೌದು ಆಟ ಆಡುತ್ತಿರು. ಕೊನೆವರೆಗು ಏನಾಗುತ್ತೋ ಆಗಲಿ. ನೀನು ಆಟ ಆಡು. ಪ್ಲೇ ದಗೇಮ್... ಕಡೆ ತನಕ. ಇದನ್ನು ನಾನು ಎಲ್ಲೋ ಓದಿದ್ದೆ."

"ಟು ಡೈಮಂಡ್ಸ್"

"ನೋ ಬಿಡ್"

"ಥ್ರೀ ಡೈಮಂಡ್ಸ್"

"ನೋ ಬಿಡ್"

ನೋ ಬಿಡ್. ಆಟ ನಡೆಸೋಕೆ ನನ್ನ ಹತ್ತಿರ ಏನೂ ಇಲ್ಲ. ಪಣಕಟ್ಟಬೇಕಾಗಿರೋದು ನಾನಲ್ಲ. ನಾನು ಆಟಗಾರಳೂ ಅಲ್ಲ. ನಾನು ಹೇಗೆ ನಡೆಸಲಿ. ಆಟ ಅಂತೂ ಆಡಲೇ ಬೇಕು ಕೊನೇವರೆಗೂ. ಆಟದ ಎಲೆಗಳು ಬೇರೆಯವರ ಕೈಲಿದೆ.

"ಟು ಕ್ಲಬ್ಸ್"

"ಎಂಥಾ ಹಳೇ ಇಸ್ಪೀಟು ಎಲೆಗಳು."

"ನಿನಗೆ ಆಡೋಕೆ ಬರೋದಿಲ್ಲ."

"ಎಲೆಗಳ ಮೇಲೆ ಯಾಕೆ ದೋಷ ಹಾಕ್ತೀಯ."

"ನೀನು ತಪ್ಪಾಗಿ ಬಿಡ್ ಕೊಟ್ಟೆ."

"ಇದೇ ಮಾನ್ಯತೆ"

"ಮಾನ್ಯತೇನ ಆಚೆ ಬಿಸಾಕು."

"..ಟು ಹಾರ್ಟ್ಸ್"

"ಥ್ರೀ ಕ್ಲಬ್ಸ್ ಆನ್ ಇಟ್. ಈಗ ಹೇಳು."

"ಕ್ಲಬ್ ದ ಹಾರ್ಟ್, ಕ್ಲಬ್ ಇಟ್. ಚಚ್ಚಿ ಹಾಕು, ಒರೆಸಿ ಹಾಕು. ಮತ್ತೆಂದೂ ಮಿಡಿಯಬಾರದು. ಮತ್ತೆಂದೂ ನಗಬಾರದು. ಹಿಸುಕಿ ಹಾಕು; ಹೊಸಕಿ ಹಾಕು.

ಯಾವುದೋ ಭಾರದ ಒತ್ತಡಕ್ಕೆ ಸಿಲುಕಿ ಚಡಪಡಿಸಿ, ಒಂದು ರೀತಿಯ ಹುಚ್ಚಿ ತರಹ ಆ ಕಡೆ ಈ ಕಡೆ ಕಣ್ಣು ಹಾಯಿಸಿದೆ. ಮೇಜಿನ ಮೇಲೆ ಇದ್ದ ಇಸ್ಪೀಟು ಎಲೆಗಳು ಗುಂಜಾರವ ಮಾಡುತ್ತಾ ವೇಗವಾಗಿ ಬಿರುಗಾಳಿಯಂತೆ ಬಂದು ನನ್ನ ಮೇಲೆ ಎರಗಿದವು. ಧೂಳು ತುಂಬಿದ ಕತ್ತಲು ನನ್ನ ಕಣ್ಣುಮುಂದೆ ಕವಿಯಿತು. ಕಣ್ಣಲ್ಲಿ ಕಿರಕಿರಿ ಉಂಟಾಯಿತು. ಎಲೆಗಳು ಸದ್ದು ಮಾಡುತ್ತಾ ಮುಖಕ್ಕೆ ಅಪ್ಪಳಿಸತೊಡಗಿದವು. ಕಣ್ಣು ಕತ್ತಲು ಹೆಚ್ಚಾಗುತ್ತಾ ಹೋಯಿತು. ಕಣ್ಣಿನ ಉರಿ ಅಸಹನೀಯವಾಯಿತು. ಕೈಗಳನ್ನು ಮುಖದ ಮುಂದಕ್ಕೆ ತಂದು ಕುರ್ಚಿಯನ್ನು ತಳ್ಳಿ ಎದ್ದು ನಿಂತೆ. ಚೀರುತ್ತಾ ಹೇಳಿದೆ–

"ನನ್ನನ್ನು ಹೋಗಲು ಬಿಡು".

ನನ್ನ ಗಂಡ ನನ್ನ ಕೈ ಹಿಡಿದು ಮತ್ತೆ ಕುರ್ಚಿಯತ್ತ ತಳ್ಳುತ್ತಾ ಗುರ್ರೆನ್ನುತ್ತಾ ಹೇಳಿದ – "ಸುಮ್ಮನಿರು ಡಿಸ್ಟರ್ಬ್ ಮಾಡಬೇಡ."

"ನನಗೆ ಹೋಗಬೇಕಿದೆ" ಅಂಗಲಾಚಿ ಕೇಳಿದೆ.

"ಸುಮ್ಮನಿರು" ಥಟ್ ಅಂತ ಹೇಳಿದ.

ನಾನು ಸುಮ್ಮನೆ ಕಣ್ಣೀರು ಹಾಕುತ್ತಾ ಕುರ್ಚಿಯಲ್ಲಿ ಕುಕ್ಕರಿಸಿ ಕೂತೆ. ಎಲೆಯಾಟ ಆಡುತ್ತಿದ್ದವರ ಮಾತುಗಳು ಆಗಾಗ ನನ್ನ ಮನಸ್ಸಿನ ಮೇಲೆ ಎರಗುವುದು ನಿಂತಿತ್ತು.

ನನ್ನ ದುಃಖದಲ್ಲಿಯೇ ಮಗ್ನಳಾಗಿ, ನನ್ನ ಮರಣಾಂತಿಕ ಸ್ಥಿತಿಯಿಂದ ಮೇಲೆದ್ದು ಇನ್ನುವರಲ್ಲಿಯೇ ಸಂತೋಷ ಅನುಭವಿಸಬೇಕೆಂಬ ಲೆಕ್ಕಾಚಾರದಲ್ಲಿದ್ದಾಗಲೇ ನರೇನ್ ಕ್ಲಬ್ ಸದಸ್ಯರಿಂದ ಬಿಡಿಸುವ ಹಾಗೆ ನನ್ನ ಕೈ ಹಿಡಿದು, ಸುತ್ತಿಯೇಟಿನಂತೆ, "ನಡಿ" ಎಂದು ಹೇಳುತ್ತಾ ಎಳೆದುಕೊಂಡು ಹೊರಟ. ಬಾಗಿಲು ತೆರೆದು ಒಳಗೆ ತಳ್ಳಿ ಡ್ರೈವರ್ ಸೀಟಿನಲ್ಲಿ ಕುಳಿತು ಕಾರು ಚಾಲನೆ ಮಾಡಿದ.

ಇಷ್ಟೊಂದು ವೇಗವಾಗಿ ಓಡುವ ಗಾಡಿಯಲ್ಲಿ, ಇದಕ್ಕೆ ಮೊದಲೆಂದೂ ಕುಳಿತಿರಲಿಲ್ಲ. ಸಮವೇಗದಲ್ಲಿ ಕಾರು ನಡೆಸುವುದನ್ನೇ ಕಲಿಸಿದ್ದ. "ಗಾಡಿಯನ್ನು ಒಂದು ನಿರ್ದಿಷ್ಟ ವೇಗದಲ್ಲಿ ಡ್ರೈವ್ ಮಾಡಬೇಕು. ಆಗ ಮಾತ್ರವೇ ಗಾಡಿ ಬಾಳಿಕೆಗೆ ಬರುತ್ತೆ. ಅದಕ್ಕೇ ತುಂಬಾ ಸ್ಪೀಡೂ ಇರಬಾರದು; ತೀರಾ ನಿಧಾನವಾಗಿಯೂ ಇರಬಾರದು. ಆದರೆ ಇವತ್ತು ಗಾಡಿ ಮೂರನೇ ಗೇರಿನಲ್ಲಿ ಓಡುತ್ತಿದೆ. ಗಾಡಿ ಒಮ್ಮೆಲೇ ಜಿಗಿದದ್ದಕ್ಕೆ ನನ್ನ ತಲೆ ಸರಿಯಾಗಿ ಡ್ಯಾಶ್‌ಬೋರ್ಡ್‌ಗೆ ಹೋಗಿ ಡಿಕ್ಕಿ ಹೊಡೆಯಿತು. ಆ ಜಾಗದಲ್ಲಿ ಊತ ಬರುತ್ತಿದ್ದಂತೆ ಮತ್ತೆ ಎರಡನೇ ಬಾರಿಗೂ ಡಿಕ್ಕಿ ಹೊಡೆಯಿತು. ಹಾಗೂ ಹೀಗೂ ಆಗಿ ದಢಕ್ಕೆಂದು ಹೋಗಿ ಮನೆ ಬಾಗಿಲ ಮುಂದೆ ನಿಂತಿತು ಗಾಡಿ.

ಮನೆ ಬಾಗಿಲು ತೆರೆದು ನನ್ನನ್ನು ಒಳಕ್ಕೆ ಎಳೆದುಕೊಂಡು ಹೋಗಿ ಬೆಡ್‌ರೂಮಿನ ಮಂಚದ ಮೇಲೆ ತಳ್ಳಿದ. ನನ್ನಲ್ಲಿ ನಡುಕ ಉಂಟಾಯಿತು. ಭಯ ತಲ್ಲಣಗಳಿಂದ ಕಣ್ಣು ಬಿಟ್ಟುಕೊಂಡು ನೋಡುತ್ತಾ, ನೆನ್ನೆಯಂತೆಯೇ ಈಗಲೂ ನನ್ನ ಮೇಲೆ ಹಸಿದ ತೋಳದ ಹಾಗೆ ಎಲ್ಲಿ ಮೇಲೆ ಬೀಳುತ್ತಾನೋ ಎಂದು ಯೋಚಿಸುತ್ತಿದ್ದೆ. ಗೊತ್ತಾಯಿತು, ಇವತ್ತೂ ಅವನು ಬ್ರಿಜ್ ಆಟದಲ್ಲಿ ಸೋತಿದ್ದಾನೆ ಎಂದು.

ಆದರೆ ಅವನು ನನ್ನ ಕಡೆ ಬರಲಿಲ್ಲ. ಸ್ವಲ್ಪ ದೂರದಲ್ಲಿಯೇ ನಿಂತು ತಿರಸ್ಕಾರದಿಂದ ಕಠೋರವಾಗಿ ಹೇಳಿದ:

"ನಿನ್ನ ತಲೆಹರಟೆ ಮಾತನ್ನು ಆಡೋಕೆ ಬೇರೆ ಸಮಯ ಸಿಗಲಿಲ್ಲವೇನು? ತುಂಬಾ ಗಂಭೀರವಾದ ಆಟದ ಸಮಯದಲ್ಲಿ ನನ್ನನ್ನು ಡಿಸ್ಟರ್ಬ್ ಮಾಡೋ ಅಗತ್ಯ ಏನಿತ್ತು? ಆಟ ಎಲ್ಲಾ ಹಾಳು ಮಾಡಿದೆ." ಎಂದು ಹೇಳಿ ಕೋಣೆಯಿಂದ ಹೊರಗೆ ಹೋದ.

ಇವತ್ತಿನ ಸೋಲು, ಎರಡನೆಯ ಸೋಲಾಗಿತ್ತು. ಎರಡು ದಿವಸದಲ್ಲಿ ಎರಡು ಬಾರಿ ಸೋಲು! ಇದು ಮೊದಲಿನದಕ್ಕಿಂತ ದೊಡ್ಡ ಸೋಲಾಗಿತ್ತು. ನನಗೆ ಅರ್ಥ ಆಯ್ತು. ಈ ನಷ್ಟವನ್ನು ನನ್ನ ದೇಹ ತುಂಬಲಾರದು ಎಂದು.

ಅದಾದ ಮೇಲೆ ಸ್ವಲ್ಪ ಹೊತ್ತಿನ ವರೆಗೆ ಅವನು ಹಾಸಿಗೆಗೆ ಬರಲೇ ಇಲ್ಲ. ಅಲ್ಲಿ ನಾನು ಒಬ್ಬಳೇ ಇದ್ದೆ. ಇನ್ನು ನನ್ನಿಂದ ಇರಲು ಆಗಲಿಲ್ಲ. ಅವನನ್ನು ಹುಡುಕಿಕೊಂಡು ಹೊರಟೆ. ಬಾಗಿಲೊಳಗೆ ಇಣುಕಿ ನೋಡಿದೆ. ನೋಡಿದರೆ, ಅವನು ದೀಪದ ಮಂದ ಬೆಳಕಿನಲ್ಲಿ 'ಅಡ್ವಾನ್ಸ್‌ಡ್ ಬ್ರಿಜ್' ಹೆಸರಿನ ಪುಸ್ತಕ ಓದುತ್ತಿದ್ದಾನೆ. ಪುಸ್ತಕದಲ್ಲಿ ಮುಳುಗಿ ಹೋಗಿದ್ದ ಅವನ ಮುಖದ ಮೇಲೆ ಬಳಲಿಕೆ ಕಾಣುತ್ತಿತ್ತು; ಮುಖ ಬಿಳಿಚಿಕೊಂಡಿತ್ತು. ತೀಕ್ಷ್ಣವಾದ ಅವನ ಕಣ್ಣು ಒದ್ದೆಯಾಗಿದ್ದಂತೆ ಕಾಣಿಸಿತು. ಮಾಂಸಲವಾಗಿದ್ದ ತುಟಿಗಳು ಬಾಡಿದಂತಿದ್ದವು. ಪುಸ್ತಕ ಓದುತ್ತಾ ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿರುವ ಭಾವ ಕಾಣಿಸಿತು. ಅವನ ತೀಕ್ಷ್ಣವಾದ ಮೂಗು ಮತ್ತೂ ತೀಕ್ಷ್ಣವಾಗಿರುವಂತೆ ಭಾಸವಾಯಿತು.

ನನ್ನ ಕಡೆ ಗಮನವಿಲ್ಲದೆಯೇ ಪುಸ್ತಕ ಓದುವುದರಲ್ಲಿಯೇ ಮುಳುಗಿದ್ದ. ಸುಮಾರು ಹೊತ್ತು ನಾನು ಬಾಗಿಲಿನ ಹೊಸ್ತಿಲಲ್ಲಿ ನಿಂತೇ ಗಮನಿಸುತ್ತಿದ್ದೆ. ದುಃಖಪೂರಿತವಾದ ಅವನ ಮುಖ ನೋಡಿ ಬಹಳ ಸಂಕಟವಾಯಿತು. ಅವನಿಗೆ ಸಂತೋಷ ಕೊಡಲು ನಾನು ಏನನ್ನಾದರೂ ಮಾಡಲೇಬೇಕಾಗುತ್ತದೆ ಎಂದುಕೊಳ್ಳುತ್ತಿದ್ದೆ. ಏನಾದರೂ ಸರಿ ಮಾಡಲೇ ಬೇಕು. ಇಸ್ಪೀಟು ಆಡೂದನ್ನೂ ಕಲಿಯುತ್ತೇನೆ.

ಇಷ್ಟೆಲ್ಲ ಯೋಚನೆ ಮಾಡುತ್ತಿದ್ದರೂ ಒಳಗೆ ಹೋಗಲಿಲ್ಲ. ಅಲ್ಲಿಯೇ ನಿಂತು ನೋಡುತ್ತಿದ್ದೆ. ಪ್ರೀತಿಯ ಒತ್ತಡದಿಂದ ಹೃದಯ ಒಡೆದು ಹೋಗಬಹುದೇನೋ ಎನಿಸಿತು. ಆದರೆ ನನ್ನಿಂದ ಏನೂ ಆಗುವುದಲ್ಲ ಅಂದುಕೊಂಡೆ. ವಿಚಾರ ಮಾಡಿದ ಮೇಲೂ ಅರ್ಥಮಾಡಿಕೊಂಡ ಮೇಲೂ, ನನಗೆ ಏನೇನು ಅನಿಸುತ್ತಿತ್ತೋ ಅದರಲ್ಲಿ ಯಾವುದೇ ಉತ್ಪ್ರೇಕ್ಷೆ ಇರಲಿಲ್ಲ. ನಾನು ಇಂದಿನ ಕಾಲಕ್ಕೆ 'ಮಿಸ್‌ಫಿಟ್' ಅಂತಲೇ ಅನಿಸುತ್ತೆ. ನನಗೆ ಗೊತ್ತು, ಅವನನ್ನು ಹೀಗೆ ಪ್ರೀತಿಸುತ್ತಲೇ ಇರುತ್ತೇನೆ. ಅವನನ್ನು ಮದುವೆಯಾಗಿರುವುದನ್ನು ಒಂದು ಉದ್ಯೋಗವೆಂದು ಭಾವಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಅವನನ್ನೆಂದೂ ಸಂತೋಷಗೊಳಿಸಲಾರೆ. ಹೀಗೇ ನಾನು ದಿನದಿನವೂ ನೂರಾರು ಸಲ ಸಾಯುತ್ತಲೇ ಇರುತ್ತೇನೆ. ಆದರೆ ಅವನೊಂದಿಗೆ ತಟಸ್ಥವಾಗಿದ್ದು ಬದುಕಲಾರೆ. ಎಷ್ಟು ಯೋಚಿಸಿದರೂ ಇಸ್ಪೀಟು ಕಲಿತು ಆಡಲಾಗುವುದಿಲ್ಲ.

ತನ್ನ ಪತಿಯನ್ನು ಪ್ರೀತಿಸುವ ಮೂರ್ಖ ಹೆಂಗಸರಲ್ಲಿ ನಾನೂ ಒಬ್ಬಳು; ಇಲ್ಲವೆ ನಾನೆಂಥ ಮೂರ್ಖ ಹೆಂಗಸೆಂದರೆ.......

ಮೂಲ : ಮೃದುಲಾ ಗರ್ಗ್ (ಹಿಂದಿ)ರ "ತುಕ್"

ತೀರ್ಪು

ಗೌರವನೀಯರಾದ ಮಾಸ್ತರರೇ

ಆದರ ಪೂರ್ವಕ ನಮಸ್ಕಾರಗಳು!

ಬಹುಶಃ ತಮಗೆ ಗೊತ್ತಿರಬಹುದು. ಇಲ್ಲವಾದಲ್ಲಿ ಈಗ ತಿಳಿಯಪಡಿಸುತ್ತೇನೆ. ಇವತ್ತಿನಿಂದ ಮೂರು ದಿನದ ಮೇಲೆ ತಮಗೆ ನನ್ನ ಪತ್ರ ತಲುಪಬಹುದು.

ಚುನಾವಣೆಯ ಫಲಿತಾಂಶ ಹೊರ ಬಿದ್ದಿದೆ.

ಇದೆಲ್ಲ ಹೇಗಾಯಿತೋ?

ನಾನು ಗೆದ್ದ ದಿನ ನನಗೆ ಆಶ್ಚರ್ಯವಾದ ಹಾಗೆಯೇ ಈ ದಿನವೂ ಆಶ್ಚರ್ಯ ಚಕಿತಳಾದೆ. ಇಷ್ಟೊಂದು ಮತಗಳನ್ನು ಗಳಿಸಲು ನನಗೆ ಹೇಗೆ ಸಾಧ್ಯವಾಯಿತೆಂದೇ ತಿಳಿಯುತ್ತಿಲ್ಲ.

ಹಳ್ಳೀಲಿ ಸಾಕಷ್ಟು ಪಕ್ಷ ವಿರೋಧವಿತ್ತು... ಹಾಗಿದ್ದರೂ?

ಆಮೇಲೆ ಕಾರಣ ತಿಳಿದುಬಂತು. ಹೆಂಗಸರೆಲ್ಲ ಒಟ್ಟಾಗಿ ಗುಂಪು ಗೂಡಿದ್ದರು. ಅವರ ಮುಖಗಳಲ್ಲಿ ಸಂತೋಷ ಸಂಭ್ರಮಗಳು ಹೊರಚೆಲ್ಲುತ್ತಿದ್ದವು.

ಬ್ಲಾಕ್ ಪ್ರಧಾನನ ಪತ್ನಿಯಾಗಿದ್ದರಿಂದ ಮನೆ ಮನೆಗೆ ಹೋಗಿ ಧನ್ಯವಾದಗಳನ್ನು ತಿಳಿಸಲು ಸಾಧ್ಯವಾಗಲಿಲ್ಲ. ಆದ್ದರಿಂದ ನೇರವಾಗಿ ಬಾವಿಕಟ್ಟೆ ಬಳಿ ಹೋದೆ.

ತಮಗೇ ಗೊತ್ತಿದೆ. ಹೆಂಗಸರಿಗೆ, ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳಲು, ತಮ್ಮ ತಮ್ಮ ಕಷ್ಟ ಸುಖ ಹೇಳಿಕೊಳ್ಳಲು ಅದೊಂದೇ ಸರಿಯಾದ ಜಾಗ. ಮಣ್ಣು ಸಗಣಿ ಕೈಗಳಿಂದ ಬೆರಣಿ ಥಟ್ಟುತ್ತ, ತಮ್ಮ ತಮ್ಮ ಕತೆಗಳನ್ನು ಪರಸ್ಪರ ಹೇಳಿಕೊಳ್ಳುತ್ತಾರೆ.

ನಮ್ಮ ಕಷ್ಟಸುಖಗಳಿಗೆಲ್ಲ ಇದೊಂದು ಸಾಕ್ಷಿ ಕಟ್ಟೆ. ಆದರೂ ನನ್ನಂಥವಳಿಗೆ ಅಂಥ ಕಡೆ ಹೋಗೋದು ನಿಷಿದ್ಧ. ಅವರು ಪ್ರಮುಖ ಅಥವಾ ಪ್ರಧಾನ ಆಗುತ್ತಿದ್ದಂತೆ

ನನ್ನ ಮೇಲಿನ ನಿರ್ಬಂಧಗಳು ಮತ್ತಷ್ಟು ಬಿಗಿಯಾದವು. ಮೊದಲೇ ಹೇಳಿಬಿಟ್ಟಿದ್ದರು. ಸಾಮಾನ್ಯರಂತೆ ತಲೆ ಮೇಲೆ ಪಾತ್ರೆ ಪರಡಿ ಹೊತ್ತು ಓಡಾಡುವುದು. ಇನ್ನು ಮುಂದೆ ಶೋಭಿಸುವುದಿಲ್ಲ ಎಂದಿದ್ದರು.

ಆದರೆ ಈಗ ನಾನೇ ಪ್ರಧಾನಳಾಗಿ ಬಿಟ್ಟಿರುವುದು ಅವರ ಗೌರವಕ್ಕೆ ಮತ್ತಷ್ಟು ಕೋಡು ಮೂಡಿತು.

ಅವರನ್ನು ಬಹಳ ಉದಾರಿ. ಆಧುನಿಕ ವಿಚಾರಗಳನ್ನು ಉಳ್ಳವರು. ಅಂತ ಜನ ಭಾಷಿಸತೊಡಗಿದರು. ಬೇರೆ ಹಳ್ಳಿಗಳ ಎದುರಿನಲ್ಲಿ ನಮ್ಮ ಹಳ್ಳಿಯ ಪ್ರತಿಷ್ಠೆ ಮತ್ತಷ್ಟು ಎತ್ತರಕ್ಕೇರಿತು. ನಾನಂತೂ ಹಳ್ಳಿಯ ಹೆಂಗಸರಿಂದ ದೂರ ಇರಬೇಕೆಂಬ ಆದೇಶದ ಅಡಿಯಲ್ಲಿ ಉಸಿರುಗಟ್ಟಿ ಸಾಯುವಂತಾದೆ.

ಆದೇಶಕ್ಕೆ ಬದ್ಧವಾಗಿ ಇರಲು ನನ್ನಿಂದ ಸಾಧ್ಯವಾಗದೆ ಹೋಯಿತು. ಹೇಗೋ ಮಾಡಿ ಅವರ ಮಧ್ಯೆ ಹೋಗಿ ಸೇರಿ ಬಿಡುತ್ತಿದ್ದೆ.

'ರಾಜನೀತಿಯ ವಿಷಯದಲ್ಲಿ ನಿನಗೆ ಇನ್ನೂ ಅನುಭವ ಸಾಲದು ವಸುಮತಿ. ನಿನ್ನ ಗೌರವ ಪ್ರತಿಷ್ಠೆಗಳು ಹೆಚ್ಚಾಗುತ್ತ ಹೋದಂತೆ, ನೀನೇ ಅವರಿಂದ ದೂರ ಇರುವುದಕ್ಕೆ ಪ್ರಯತ್ನಿಸುತ್ತೀಯ' ಎಂದಿದ್ದ.

ಈಸುರಿಯಾ ತನ್ನ ಆಡುಗಳ ಹಿಂಡನ್ನು ಹೊಡೆದುಕೊಂಡು ಅಲ್ಲಿಗೆ ಬಂದೇ ಬಿಟ್ಟಳು. ಅವಳ ವಿಚಾರ ನಿಮಗೆ ಮೊದಲೇ ಹೇಳಿದ್ದೆ, ಬಹಳ ಮುಗ್ಧೆ ಮತ್ತು ಹರಟೆಮಲ್ಲಿ ಅಂತ.

ನಾವಿಬ್ಬರೂ ಈ ಹಳ್ಳಿಗೆ, ಮದುವೆಯಾಗಿ ಒಂದೇ ದಿನ ಬಂದಿದ್ದೆವು ಎಂದೂ ತಿಳಿಸಿದ್ದೆ. ನೀವು ತಮಾಷೆ ಕೂಡಾ ಮಾಡಿದ್ದಿರಿ. ವಾಹ್ ವಸುಮತಿ ಸ್ನೇಹ ಮಾಡಿದ್ದೂ ಇಂಥ ಆಡು ಕಾಯುವವಳ ಜೊತೆ? ಚೆನ್ನಾಗಿದೆ!- ಎಂದಿದ್ದಿರಿ.

ಅವಳದು ಬಹಳ ತೀಕ್ಷ್ಣ ದೃಷ್ಟಿ. ನಾನು ಮರಗಿಡ, ಮನೆ-ಮಠಗಳನ್ನು ದೃಷ್ಟಿಸಿ ನೋಡುತ್ತಿದ್ದರೆ, ಅವಳು ಮನೆಮನೆಗಳ ಕಿಟಕಿ ಬಾಗಿಲುಗಳನ್ನೆಲ್ಲ ಪರಿಚಯ ಮಾಡಿಕೊಂಡು ಬಿಟ್ಟಳು. ಪ್ರತಿ ವ್ಯಕ್ತಿಯ ಜಾತಕವನ್ನು ಮನದಟ್ಟು ಮಾಡಿಕೊಂಡು ಬಿಟ್ಟಳು. ನಾಚಿಕೆ-ಸಂಕೋಚಗಳನ್ನೊಂದು ಅವಳಿಗೆ ಗೊತ್ತೇ ಇಲ್ಲ.

ಹಳ್ಳಿಯಲ್ಲಿನ ದೊಡ್ಡ ದೊಡ್ಡ ವ್ಯಕ್ತಿಗಳನ್ನೆಲ್ಲ, ತಾನೇನೋ ಅವರ ಪೂರ್ವಜಳು ಎಂಬಂತೆ, ಹೆಸರು ಹಿಡಿದೇ ಸಂಬೋಧಿಸುತ್ತಾಳೆ. ಅವಳಿಗೆ ಜಾತಿ, ಕುಲ, ದೊಡ್ಡವರು - ಚಿಕ್ಕವರು ಅನ್ನೋ ಭೇದವೇ ಇಲ್ಲ.

[illegible] "ಓ ವಸುಮತೀ... [illegible]... [illegible]!"

ಇದ್ದವರೆಲ್ಲ ಒಮ್ಮೆಲೇ ನಕ್ಕು ಬಿಟ್ಟರು.

'ಬಸುಮತಿ... ನೋಡು ಎಲ್ಲರ ಅಮ್ಮಮ್ಮ ಬಂದು ಬಿಟ್ಟಿದ್ದಾಳೆ.... ಕೂಗ್ತಿದ್ದಾಳೆ... ಹೂಂಗೊಡು.' ಎಂದರು.

ಕೈಯಲ್ಲಿ ಹಿಡಿದಿದ್ದ ಬೆತ್ತವನ್ನು ಝಾಡಿಸುತ್ತಾ. ಆಡುಗಳನ್ನು ಅಟ್ಟುತ್ತ ಅವುಗಳ ಬೆನ್ನ ಹಿಂದೆ ನಡೆಯುತ್ತಾ ಅಲ್ಲಿಗೆ ಬಂದಳು.

ಮುಖ ಅರಳಿಸಿ ಹೇಳಿದಳು- 'ಈಗ ನೀನು ಪ್ರಧಾನಳಾಗಿ ಬಿಟ್ಟಿದ್ದೀಯ! ಬಿಡು, ಒಳ್ಳೇದಾಯ್ತು!'

ಯಾರೂ ಅಷ್ಟಾಗಿ ಗಮನ ಕೊಡಲಿಲ್ಲ.

ಬೆತ್ತ ಎತ್ತರಿಸಿ ಮಾತಾಡೋಕೆ ಶುರು ಮಾಡಿದಳು: ....ಏ ...ಏ ಎಲ್ಲರೂ ಕೇಳಿಸಿಕೊಳ್ಳಿ.... ಗಮನವಿಟ್ಟು ಕೇಳಿ... ಈಗ ಸಮಾನತೆಯ ಕಾಲ ಬಂದು ಬಿಟ್ಟಿದೆ... ಈಗ ಗಂಡಸಿನದು ಏನೂ ನಡೆಯೊಲ್ಲ... ಹೊಡೆಯೋದು ಬಡಿಯೋದು- ತೌರಿಗೆ ಕಳಿಸದೆ ಇರೋದು... ಅಲ್ಲಿಂದ ಹಣ ತರೋಕೆ ಪೀಡಿಸೋದು... ವರದಕ್ಷಿಣೆ ಹೆಸರಲ್ಲಿ ಹಿಂಸೆ ಮಾಡೋದು, ಮಾಡಿದರೆ, ಸುಮ್ಮನೆ ಮಾತಾಡದೆ ಹೊರಟು ಹೋಗಿ.'

"ಕಾಗದ ಬರೆಸಿ ಬಿಡು."

"ದುಷ್ಟರನ್ನು ಜೈಲಿಗೆ ಹಾಕಿಸಿ ಬಿಡಿ."

"ಏ ಬಸುಮತಿ, ರನವೀರನ ಥರ ನೀನೂ ಅನ್ಯಾಯ ಮಾಡೋದಿಲ್ಲ ತಾನೇ? ಕಾಗದ ಪತ್ರ ಅಂತ ಹೆದರಿಸಿ ಅಧಿಕಾರ ಚಲಾಯಿಸೋದಿಲ್ಲ ತಾನೇ?"

"ನಮ್ಮ ಮೇಲೆ ದೌರ್ಜನ್ಯ ನಡೆದಾಗ, ಲೀಲೋನ ಮಗನ ಕೈಲಿ ಕಾಗದ ಬರೆಸಿ, ಸರಕಾರ ನಮಗೆ ನ್ಯಾಯ ದೊರಕಿಸಿ ಕೊಡಬೇಕು. ನಮ್ಮ ಸಮಸ್ಯೆ ಕೇಳಬೇಕೂಂತ ಕೇಳಿದಿವಿ."

ರನವೀರನನ್ನು ಬಂಧಿಸಲು ಸ್ವತಃ ನಾವೇ ಹೋಗಿದ್ದಿವಿ ಸಲಿಗಾ ಅಂತೂ ಅಡಿಯಿಂದ ಮುಡಿವರೆಗೆ ಕಂಪಿಸಿದ ಕೈಮಾಡೋದಿರಲಿ, ಬಾಯಿಂದ ಮಾತೇ ಹೊರಡಲಿಲ್ಲ. ಎಷ್ಟೋ ದಿನದವರೆಗೆ! ರನ್ನಾ ನಮ್ಮ ಕಾಗದವನ್ನು ಕಿತ್ತಿಟ್ಟುಕೊಂಡ. ಸಲಿಗ ಹುಲಿ ಹಾಗೆ ನಮ್ಮ ಮೇಲೆ ಬಿದ್ದು ಆಕ್ರಮಣ ಮಾಡಿದ.

ಹೇಳಿದ – "ಏನೇ ರಂಡೆ! ನಮ್ಮನ್ನು ಜೈಲಿಗೆ ಕಳಿಸ್ತೀಯಾ?.. ನೋಡ್ತಿರು ನಿನ್ನ ಕಾಗದದ ಗತಿ ಏನಾಗುತ್ತೇಂತ!"

ಕೈಲಿದ್ದ ಬೆತ್ತ ಕೆಳಕ್ಕೆ ಹಾಕಿ. ಎರಡೂ ಕೈ ಚಾಚಿ ಮುಂದೆ ಹಿಡಿದಳು. ಚರ್ಮ ಕಿತ್ತು ಬಂದಿತ್ತು. ಅಲ್ಲಲ್ಲಿ ತರಚುಗಾಯಗಳಾಗಿದ್ದವು. ಅವುಗಳನ್ನು ನೋಡಿ ಅಲ್ಲಿದ್ದವರೆಲ್ಲ

ಸಪ್ಪಗಾದರು. ನಗುವಿನಿಂದ ಅರಳಿದ್ದ ಮುಖಗಳು ಮುದುಡಿ ಹೋದವು ಮಾಸ್ತರರೇ? ನಗು – ಕೇಕೆಗಳೆಲ್ಲ ತಣ್ಣಗಾದವು.

ಗೋಪಿ ಮಾತನಾಡಲು ಪ್ರಯತ್ನಿಸಿದಳು.

ಮುಗುಳು ನಗೆಯನ್ನು ತಂದುಕೊಳ್ಳುತ್ತ ಹೇಳಿದಳು–

"ಏನದು ಹೇಳ್ತಿರೋದು? ಯಾರಾದರೂ ಕೇಳಿಸಿಕೊಂಡರೆ ಹೋಗಿ ಪ್ರಧಾನರಿಗೆ ಹೇಳೋದಿಲ್ವೇನು?

ತಕ್ಷಣವೇ ನೋವು ಕಾಣಿಸಿಕೊಂಡಿತು.

"ಕೇಳಿಸಿಕೊಳ್ಳಲಿ ಬಿಡು! ಕೇಳಿಸಿಕೊಳ್ಳಬೇಕೆಂದೇ ನಾನು ಹೇಳ್ತಿರೋದು. ರನವೀರ ಒಂದಲ್ಲ ಒಂದು ದಿನ ಜೈಲಿನಲ್ಲಿ ರಾಗಿ ಬೀಸಿಯೇ ಬೀಸುತ್ತಾನೆ; ರೊಟ್ಟಿ ತಟ್ಟುತ್ತಾನೆ... ನಮ್ಮ ಬಸುಮತಿ, ಅಧಿಕಾರ ಮಾಡ್ತಾಳೆ; ಪತ್ರ ವ್ಯವಹಾರ ನಡಸ್ತಾಳೆ."

"ಹೌದಲ್ಲ. ಬಸುಮತಿ?"

"ನಿಜ ಹೇಳು. ನೀನು ಹನ್ನೊಂದನೇ ತರಗತಿ ತನಕ ಓದಿದ್ದೀಯಲ್ಲ? ರನವೀರ ಒಂಬತ್ತನೇ ಕ್ಲಾಸಲ್ಲಿ ಫೇಲು?.... ಈಗ ಹೇಳು ಯಾರು ಬುದ್ಧಿವಂತರು!"

"ಆಡು ಕುರಿ ಮೇಯಿಸಿಕೊಂಡು ಇರೋ ಕಾಲ ಹೋಯ್ತು! ಸರಿಸಮಾನರ ಕಾಲ ಇದಾಗಿದೆ. ಬಸುಮತಿ ಪ್ರಧಾನಳಾಗಿ ಬಿಟ್ಟಿದ್ದಾಳೆ. ಇಂದಿರಾಗಾಂಧಿ ರಾಜ್ಯ. ಬೋಲೋ ಇಂದಿರಾಗಾಂಧೀ ಜೀ ಕೀ ಜೈ."

ಗೋಪಿ ಥಟ್ಟಂತ ಹೇಳಿದಳು– 'ಅರೆ! ಇಂದಿರಾಗಾಂಧಿ ಯಾವಾಗಲೋ ಸತ್ತು ಹೋಗಿದ್ದಾಳೆ. ರಾಜೀವ ಗಾಂಧಿರಾಜ್ಯ."

"ಸತ್ತು ಹೋದಳಾ?"

"ಇರಲಿ ಬಿಡು. ತಾಯಿ–ಮಗ–ಇಬ್ಬರ ಮಧ್ಯೆ ವ್ಯತ್ಯಾಸವೇನಾದರೂ ಇರುತ್ತಾ? ಎಲ್ಲಾ ಒಂದೇ!"

"ಸರಿ. ಹಾಗಾದರೆ ಮೆರವಣಿಗೆ ಯಾವಾಗ?" –ಏನೋ ಥಟ್ಟನೆ ನೆನಪಾಗಿ ಹೇಳಿದಳು.

ರನ್ನಾ ಪ್ರಧಾನ್ ಆದಾಗ ಏನು ಸಂಭ್ರಮ ಇತ್ತು. ಹೂವಿನ ಹಾರಗಳ ಮೇಲೆ ಹಾರಗಳು! ನಾವೆಲ್ಲಾ ಓದಿದ ಜನ ಹೆಜ್ಜೆ ಹಾಕಿದರು. ರನ್ನಾ ಒಬ್ಬೊಬ್ಬರ ಹೆಗಲೇರಿಕೊಂಡು ಊರಿನ ಪ್ರದಕ್ಷಿಣೆ ಹಾಕಿ ಬಂದರಲ್ಲ?

ಸರೂಪಿ ಹೇಳಿದಳು: ಅವಳೊಬ್ಬಳು ಹುಚ್ಚಿ. ರನ್ನಾ–ರನ್ನಾ ಅಂತ ಬಡಕೋತಿದ್ದಾಳೆ. 'ಪ್ರಮುಖ'ರು ಮೊದಲಿಗೆ ನಿನ್ನನ್ನೇ ಜೈಲಿಗೆ ಕಳಿಸ್ತಾರೆ."

ಮಾತಿನ ಕಡೆ ಲಕ್ಷ್ಯವೇ ಇಲ್ಲದಂತೆ, ತಲೆ ಕೊಡವಿ ಹೇಳಿದಳು – ಕೇಳ್ರಪ್ಪ. ಸರೂಪಿ ಹೇಳೋದನ್ನ! ರನ್ನಾ ಏನ್ಬಂತು, ನಿನ್ನ ಮಾವ ಗಜರಾಜನಿಗೂ. ನನ್ನನ್ನು ಜೈಲಿಗೆ ಕಳಿಸೋದಕ್ಕೆ ಸಾಧ್ಯವಿಲ್ಲ. ನಿನ್ನ ಭಾವನಿಗೂ ಅದು ಸಾಧ್ಯವಿಲ್ಲ.... ಹೌದಲ್ವ ಬಸುಮತಿ?"

ಗುಂಪಿನಲ್ಲಿದ್ದವಳೊಬ್ಬಳು ಹೇಳಿದಳು. "ಸುಮ್ಮನೆ ಅವಳನ್ನೇಕೆ ಎದುರು ಹಾಕ್ಕೊಳ್ತಿ? ಓ ಈಸುರಿಯಾ, ನೋಡು... ಆಡುಗಳೆಲ್ಲ ನಿನ್ನ ಹೊಲಗಳಿಗೆ ನುಗ್ಗಿವೆ!"

"ಅಯ್ಯಯ್ಯೋ" – ಬೆತ್ತ ಬೀಸುತ್ತಾ ಓಡತೊಡಗಿದಳು.

ಬೆಳಗಿನ ಉಷ್ಣತೆ ಅಡಿಗೆ ಮನೆಯನ್ನೂ ಪ್ರವೇಶಿಸಿತ್ತು. ಒಲೆಹಚ್ಚಿ ಅದರ ಮೇಲೆ ತವೆ (ಹೆಂಚು) ಇರಿಸಿತ್ತು. ಕೈಗಳು ಹಿಟ್ಟಿನಿಂದ ಮೆತ್ತಿಕೊಂಡಿತ್ತು.

ಬಾಗಿಲಿನ ಮೇಲೆ ಯಾರದೋ ನೆರಳು ಕಾಣಿಸಿತು. ಯಾರಿರಬಹುದೆಂದು ಯೋಚಿಸುವಷ್ಟರಲ್ಲಿ... ಬಸುಮತೀಯೇ ಓ ಬಸುಮತೀಯೇ – ಎಂಬ ಕೂಗು ಕೇಳಿಸಿತು.

ಅವಳು ಈಸುರಿಯಾ ಆಗಿದ್ದಳು.

ಪಂಚಾಯತಿ ಕಟ್ಟೇಲಿ ದುರಗಾ ಕೂತಿದ್ದಾನೆ. ಪನ್ನಾ ನೋಡ್ತಿದ್ದಾನೆ. ಎಲ್ಲರೂ ನಿನ್ನ ನಿರೀಕ್ಷೆಯಲ್ಲಿದ್ದಾರೆ" – ಖುಷಿಯಿಂದ ಗೆಲುವಾಗಿದ್ದಳು.

ನಾನು ಕೂಡಲೇ ಕುಸುಮಾಳನ್ನು ಕರೆದೆ. ಅವಳು ಬಂದದ್ದೇ "ನೀವು ಹೋಗಿ ಬನ್ನಿ ಅತ್ತಿಗೆ. ನಾವು ರೊಟ್ಟಿಗಳನ್ನು ಮಾಡಿಬಿಡ್ತೇವೆ."

ಪಂಚಾಯಿತಿ ಸಭೆಗೆ ಹೊರಡುತ್ತಿದ್ದಂತೆ, ಹೆಂಗಸರೆಲ್ಲ ಕಿಟಕಿ, ಬಾಗಿಲುಗಳ ಸಂದಿನಿಂದ ನೋಡ ತೊಡಗಿದರು. ಅವರು ನೋಡೋದಕ್ಕೆ ಕಾರಣ, ನಾನು ಮುಸುಕು ಹಾಕಿಕೊಂಡಿದ್ದೇನೋ, ಇಲ್ವೋಂತ ತಿಳ್ಕೊಳ್ಳೋಕೆ.

ಮುಂದಲೆವರೆಗೆ ಸೆರಗು ಎಳೆದುಕೊಂಡಿದ್ದನೇ ಹೊರತು ಮುಖ ಮುಚ್ಚಿಕೊಳ್ಳೋ ಹಾಗೆ ಇರಲಿಲ್ಲ.

ದಾರೀಲಿ ಗೋಪಿ ಎದುರಾದಳು. ಅತ್ತಿಗೆಯಂತೂ ಪಂಚಾಯಿತಿ ಸಭೆಗೆ ಹೊರಟಿದ್ದಾಳೆ. ಆದರೆ ನೀನೆಲ್ಲಿಗೆ ಸವಾರಿ, ಈಸುರಿಯಾ?

ಹುಸಿ ಮುನಿಸು – ಹೋಗೆ ಗೋಪಿ. ನಾನು ಬಸುಮತಿಯ ಸೆಕೆಟರಿ ಅಲ್ವೆ' ಇಬ್ಬರೂ ಅಲ್ಲಿಗೇ ಹೋಗ್ತಿರೋದು. ಪಂಚರನ್ನು ಈ ರೀತಿ ಅಡ್ಡಹಾಕಿ ನಿಲ್ಲಿಸಬಾರದು.

"ಆಡು ಮೇಯಿಸೋಕೆ ಹೋಗಲಿಲ್ಲವೇನು ಇವತ್ತು?"

"ಇವತ್ತು ಸಲಿಗಾನೇ ಹೋಗಿದ್ದಾನೆ. ಈಗ ಗೊತ್ತಾಯಿತಾ, ಇನ್ನು ಮೇಲೆ ಗಂಡು-ಹೆಣ್ಣು ಸಮಾನರು. ಮಗ ಈಗ ಮೇಯಿಸೋ ಕೆಲಸಕ್ಕೆ ಹೋಗಿದ್ದಾನೆ!

ನಾವು ಪಂಚಾಯಿತಿ ಕಟ್ಟೆ ತಲುಪುವುದರಲ್ಲಿದ್ದೆವು, ಅಷ್ಟರಲ್ಲಿ ರನವೀರ ಬರೋದು ಕಾಣಿಸಿತು.

ದಾಪುಗಾಲು ಹಾಕುತ್ತಾ ನಮ್ಮ ಮುಂದೆ ಬಂದು ನಿಂತ. ಮುಖದಲ್ಲಿ ಆಶ್ಚರ್ಯ! ಮೂಗು, ತುಟಿಗಳು ಸೆಡೆತು ಕೊಂಡಂತಿದ್ದವು.

'ಎಲ್ಲಿಗೆ?' – ಕೇಳಿದ.

"ಪ್ರಮುಖರೇ, ನಾವು ಪಂಚಾಯಿತಿಗೆ ಹೊರಟಿದ್ದೀವಿ ದಾರಿಬಿಟ್ಟು, ಹೋಗೋಕೆ ಬಿಡಿ."

ಅವಳ ಮಾತು ಕೇಳಿದ್ದೇ ನನ್ನ ಕಡೆ ಮುಖಮಾಡಿ "ಮನೆಗೆ ನಡಿ" – ಎಂದ.

ಈಸುರಿಯಾ ಬಾಯಿ ಬಿಟ್ಟುಕೊಂಡು ನೋಡಿದಳು. ಕೆಲ ಕ್ಷಣಗಳ ನಂತರ ಸಾವರಿಸಿಕೊಂಡು "ತಡೀಬೇಡಿ ಹೋಗೋಕೆ ಬಿಡಿ"– ಎಂದಳು.

ರನವೀರ ಹುಬ್ಬು ಗಂಟಿಕ್ಕಿದ.

"ಕೇಳಿಸ್ತಿಲ್ವ ವಸುಮತಿ?"

ಅವನ ಕೆಂಗಣ್ಣಿನ ಕಾವು ನನ್ನ ಕಾಲುಗಳನ್ನು ಸುಡತೊಡಗಿತು.

ನನ್ನ ಉತ್ಸಾಹವೇ ಉಡುಗಿ ಹೋಯಿತು.

ಈಸುರಿಯಾ ಹಾಗೇ ನಿಂತಿದ್ದಳು. ನಾನು ಅವಳ ಕಡೆ ನೋಡುತ್ತಾ, ಹಿಂತಿರುಗಿ ಹೋಗೋದರಲ್ಲೇ ಕ್ಷೇಮವಿದೆ ಎಂಬ ಅರ್ಥ ಬರುವಂತೆ ಸಂಕೇತ ಮಾಡಿದೆ.

ನನ್ನ ಕಡೆ ವಿಚಿತ್ರವಾಗಿ ನೋಡಿದಳು. ಮನಸ್ಸಿಲ್ಲದ ಮನಸ್ಸಿನಿಂದ ನನ್ನ ಹಿಂದೆ ಮೆಲ್ಲಮೆಲ್ಲಗೆ ಹೆಜ್ಜೆಹಾಕಿದಳು.

ಹಿಂತಿರುಗಿ ಬಂದ ಮೇಲೆ ಪಾತ್ರೆಗಳನ್ನೆಲ್ಲ ತೊಳೆಯಲು ತೊಡಗಿದೆ. ಕುಸುಮ ಕೇಳುತ್ತಿದ್ದ ಪ್ರಶ್ನೆಗಳಿಗೆ ನನ್ನಲ್ಲಿ ಉತ್ತರವಿರಲಿಲ್ಲ. ಎದೆಯಲ್ಲಿ ನೋವು ಹೆಪ್ಪುಗಟ್ಟಿ ಕುಳಿತಿತ್ತು.

ಈಸುರಿಯಾ ಅಂಗಳದಲ್ಲಿ ಕುಳಿತು ಏನೇನೋ ಬಡಬಡಿಸುತ್ತಿದ್ದಳು... [illegible] ಬಂದು [illegible] ಅಧಿಕಾರ [illegible] [illegible] ತನವನ್ನು [illegible] [illegible] ಬೇಕು!

ಕುಸುಮಾಗೆ ಇರೋಕೆ ಆಗಲಿಲ್ಲ. 'ಯಾಕೆ ತಲೆಹಾಕಬಾರದು? ಕುಂಬಾರ ರಾಮು ಕಿಸನ್‌ನಿಂದ ದುಡ್ಡು ವಸೂಲು ಮಾಡಬೇಕಿದೆ. ಬನೀಸಿಂಹನಿಗೆ ಮಾತು ಕೊಟ್ಟಿರಬೇಕು. ಅತ್ತಿಗೆ ಏನಾದರೂ ಅಲ್ಲಿಗೆ ಹೋಗಿದ್ದರೆ, ತೀರ್ಮಾನ ಉಲ್ಟಾ ಆಗುತ್ತಿತ್ತೋ ಏನೋ!

ಬಡಪಾಯಿ ರಾಮಕಿಸುನ್ ತಲೆ ಮೇಲಿನ ಸೂರಿಗೋಸ್ಕರ ತನ್ನ ಎತ್ತುಗಳನ್ನೇ ಮಾರಿಬಿಟ್ಟ. ಹೊರಗೆ ಅಂಗಳದಲ್ಲಿ ಹೇಗೆ ವಾಸ ಮಾಡೋಕೆ ಆಗುತ್ತೆ, ತಲೆ ಮೇಲೊಂದು ಛಾವಣಿ ಇಲ್ಲದೆ? ಬನೀಸಿಂಹ ಒಬ್ಬ ರಾಕ್ಷಸ. ಮೊದಲಿಗೆ ಎತ್ತುಗಳನ್ನು ಕೊಂಡುಕೊಂಡ್ಬಿಟ್ಟ, ಆಮೇಲೆ ಫಸಲಿನ ಕೆಲಸ ಮುಗಿದ ಮೇಲೆ, ವಾಪಸ್ ಕೊಡೋಕೆ ಬಂದ. ಸಾಯೋಹಾಗಿರೋ ಈ ಎತ್ತುಗಳು ನನಗೆ ಬೇಡಾಂತ ಈಗ ಹೇಳ್ತಿದ್ದಾನೆ. ದುಡ್ಡು ವಾಪಸ್ ಕೊಡೂಂತ ಪೀಡಿಸ್ತಿದ್ದಾನೆ.

'ಪಾಪ ದುಡ್ಡು ಎಲ್ಲಿಂದ ತಂದುಕೊಡ್ತಾನೆ? ಹುಲ್ಲಿನ ಛಾವಣೀನ ಮಾರೋಕಾಗುತ್ತಾ? ಕೊಳ್ಳೋದ್ರಾದರೂ ಯಾರು?

ರನವೀರ ಯಾವಾಗಲೂ ಬಡವರನ್ನು ದಂಡಿಸುವುದರಲ್ಲೇ ಇರ್ತಾನೆ. ನೀನು ಹೋಗಿದ್ದರೆ ಹೇಗಾದರೂ ಆ ರಾಮಕಿಸುನ್ ಬಚಾವಾಗ್ತಿದ್ದ.

ಭಾರವಾದ ಹೆಜ್ಜೆ ಹಾಕುತ್ತಾ ಈಸುರಿಯಾ ಮನೆ ಕಡೆ ಹೊರಟಳು.

ಮಾಸ್ತರರೇ, ನನ್ನೆದೆಯಲ್ಲಿ ಮುಳ್ಳಾಡುತ್ತಿದೆ. ಹಿಂದಿರುಗಿ ಬಂದ ಮೇಲೆ ರನವೀರ ಹೇಳತೊಡಗಿದ. "ಪಂಚಾಯಿತಿ ಕಟ್ಟೇಲಿ ಕೂತ್ಕೊಳ್ಳೋದು ನಿನಗೆ ಶೋಭೆ ತರುವಂಥಾದ್ದಲ್ಲ. ಮಾನ-ಮರ್ಯಾದೆ ಕಳೀಬೇಡ. ಕುಟುಂಬ ಗೌರವ, ವಂಶ ಗೌರವದ ಪ್ರಜ್ಞೆ ಇರಬೇಡ? ಹೆಂಗಸು ಎಲ್ಲೀವರೆಗೆ ಮನೆ ಒಳಗೆ ಇರ್ತಾಳೋ ಅಲ್ಲೀವರೆಗೇ ಅವಳ ಮರ್ಯಾದೆ. ಅಲ್ಲದೆ ಈ ಊರಲ್ಲಿ ಎಂಥೆಂಥ ಧೂರ್ತರಿರ್ತಾರೆ, ನಿನಗೆ ಗೊತ್ತಿದೆಯೇನು?"

ಆ ನಂತರ ಪಂಚಾಯಿತಿ ಸಭೇಲಿ ಪ್ರಧಾನರು ಇರಬೇಕು ಅನ್ನೋ ಕೂಗು ಕೇಳಿಸುತ್ತಲೇ ಕೇಳಿಸುತ್ತಲೇ ಇತ್ತು. ರನವೀರನಿಗೆ ಇದು ಇಷ್ಟ ಆಗೋದಿಲ್ಲ ಅಂತ ಗೊತ್ತಿದ್ದರೂ ಕರೀಲಿಕ್ಕೆ ಬರುತ್ತಿದ್ದರು.

ನನ್ನಲ್ಲೇ ಹಿಂಜರಿಕೆ ಇತ್ತೋ ಅಥವಾ ರನವೀರನ ನೆರಳು ನನ್ನೊಳಗೇ ವಾಸವಾಗಿತ್ತೋ, ಹೊಸ್ತಿಲಾಚೆ ಹೆಜ್ಜೆ ಇಡುತ್ತಿದ್ದಂತೆ ಗದರಿಸುವ ದನಿಯೊಂದು ಕೇಳಿ ಬರುತ್ತಿತ್ತು. "ನಾವಿದ್ದೀವಲ್ಲ. ಇಲ್ಲೀವರೆಗೆ ನಿಭಾಯಿಸಿ ಕೊಂಡು ಬಂದಿದ್ದೀವಿ. ನೀನು ಅಲ್ಲಿಗೆ ಹೋಗುವ ಅಗತ್ಯವೇನಿದೆ?"

ರೋಷ ಉಕ್ಕೇರುತ್ತಿತ್ತು. ಸ್ಫೋಟಗೊಳ್ಳುವಂತೆ ಆಗುತ್ತಿತ್ತು. ಆದರೆ ಹೆಂಡತಿಯಾದ ಕಾರಣ, ಎಲ್ಲವೂ ತಣ್ಣಗಾಗಿ ಬಿಡುತ್ತಿತ್ತು.

ಮಾಸ್ತರರೇ, ಇನ್ನು ಮುಂದೆ ಸಹಿ ಹಾಕಬಾರದು ಎಂದು ಯೋಚಿಸುತ್ತಿದ್ದೆ. ಏನು ಬೇಕಾದರೂ ಮಾಡಿಕೊಳ್ಳಲಿ ಎಂದಿದ್ದೆ.

ರನಪೀರ ರಿಜಿಸ್ಟರ್ ಇಟ್ಟುಕೊಂಡು ಚಾಪೆ ಮೇಲೆ ಕುಳಿತಿದ್ದ ಊಟ ತಿಂಡಿ ಅದೂ ಇದೂ ಮಾಡುವುದರಲ್ಲಿಯೇ ಬೆಳಗ್ಗೆ ಕಳೆದು ಹೋಗುತ್ತಿತ್ತು. ಮನೆ ಕೆಲಸದ ಜೊತೆಗೆ ಬಂದು ಹೋಗುವವರ ತಿಂಡಿ ತೀರ್ಥದ ವ್ಯವಸ್ಥೆ ಬೇರೆ!

ಸುಮಾರು ಸಲ ಕರೆದಿರಬೇಕು.

ನಾನು ಬಿಡುವಂತೂ ಮಾಡಿಕೊಳ್ಳಲಿಲ್ಲ.

"ಕೇಳಿಸ್ಕೊಂಡೆಯಾ?... ಓದೋದು ಬರೆಯೋದು ಎಲ್ಲಾ ನನ್ನ ಕೆಲಸ ಮುಗಿದಿದೆ. ನಿನಗೆ ಸಹಿ ಹಾಕೋಕೆ ಮಾತ್ರ ಪುರಸೊತ್ತಿಲ್ಲ. ಅಲ್ಲ?"

ನಾನು ಹೋಗಲಿಲ್ಲ.

ರನಪೀರನಿಗೆ ಸಿಟ್ಟು ಬಂತು. "ಎಷ್ಟು ಹೊತ್ತು ಕೂತಿರಲಿ? ಬ್ಲಾಕ್ ಕಡೆ ಹೋಗಬೇಕಿದೆ ನನಗೆ. ಒಂದು ವಾರದಿಂದ ಓಡಾಡಿಸ್ತಾ ಇದ್ದೀಯ.

ಸೆರಗಿನಿಂದ ಕೈಯೊರಸಿಕೊಂಡು ಅವನ ಬಳಿ ಹೋಗಿ ನಿಂತುಕೊಂಡೆ.

"ಮಾಡು ಸಹಿ" – ಎನ್ನುತ್ತಾ ಪೆನ್ನು ಅವಳ ಮುಂದೆ ಹಿಡಿದ.

"ಇನ್ನೂ ಏನು ಯೋಚಿಸ್ತಾ ಇದ್ದೀಯ? ಇಷ್ಟು ಹೊತ್ತಿಗೆ ಇಪ್ಪತ್ತು ಸಲ ಸಹಿ ಮಾಡಬಹುದಿತ್ತು."

ನಾನು ಪೆನ್ನಿನ ಕ್ಯಾಪ್ ಮುಚ್ಚಿದೆ.

ನನ್ನ ಕಣ್ಣಲ್ಲಿ ಅನೇಕ ಪ್ರಶ್ನೆಗಳು ಮೂಡಿದವು. ರನಪೀರನಿಂದ ನನ್ನ ಉದ್ಧಾರ ಸಾಧ್ಯವಿಲ್ಲವೆ? ಯೋಚನೆಗಳಲ್ಲಿ ಅಲೆದಾಡಿದೆ. ಹೀಗೆಯೇ ನನ್ನನ್ನು ದಾಸಿಯ ಪಾಶ್ಯಗಳಿಂದ ಬಿಗಿಯುತ್ತಲೇ ಇರುತ್ತಾನೆಯೇ?"

ರನಪೀರ ಪ್ರಧಾನನಾಗಿದ್ದಾಗ ಹೀಗೆಯೇ ನಡೆದುಕೊಳ್ಳುತ್ತಿದ್ದನೇ ಅಥವಾ ಬೇರೆ ರೀತಿಯಲ್ಲೋ? ಕೇಳಲೇ ಬೇಕು. ಒಮ್ಮೆ....

ರನಪೀರ?

ಬಾಯಿ ಬಿಟ್ಟುಕೊಂಡು ನೋಡಿದ.

ಕೂಲಿಯವರು ನನ್ನ ಹತ್ತಿರ ಬಂದಿದ್ದರು. ಇಲ್ಲೀವರೆಗೆ ಅವರಿಗೆ ಗಾರೆ, ಕಲ್ಲು ಹೊತ್ತು ಹಾಕಿದ್ದಕ್ಕೆ ಕೂಲೀನೇ ಕೊಟ್ಟಿಲ್ಲವಂತೆ?

ಊರಿನ ಹೆಂಗಸರೆಲ್ಲ ಉಗೀತಿದ್ದಾರೆ. ಚೆನ್ನಾಗಿದೆ ತಾಯಿ! ನನ್ನ ಮನೆ ಮುಂದೆ, ರಸ್ತೇನೆಲ್ಲ ನೀಟಾಗಿ ಮಾಡಿಸ್ಕೊಂಡು ಬಿಟ್ಟೆ, ನಮ್ಮ ಮೇಲೆ ಯಾಕೆ ನಿನಗೆ ಈ ದ್ವೇಷ? ಕೆಸರಿನ ರಸ್ತೆಗಳನ್ನು ಹಾಗೇ ಉಳಿಸಿದ್ದೀಯ ಅಂತ ಕೇಳ್ತಿದ್ದಾರೆ.

ಮಕ್ಕಳು ಶಾಲೆಗೆ ಹೋಗೋಕೇ ಹೆದರ್ತಿದ್ದಾರೆ. ಛಾವಣಿ ಯಾವಾಗ ಕುಸಿದು ತಲೆ ಮೇಲೆ ಬೀಳುತ್ತೋ ಅಂತ ಹೆದರಿದ್ದಾರೆ. ನೀವಲ್ಲದೆ ಬೇರೆ ಯಾರಿಗೆ ತಾನೇ ಇದನ್ನೆಲ್ಲ ಸರಿಮಾಡ್ಲಿಕ್ಕಾಗುತ್ತೆ?'

ಇದು ಪ್ರಮುಖರಿರೋ ಊರೂಂತ ಯಾರು ಹೇಳ್ತಾರೆ? ಎಲ್ಲಿ ನೋಡಿದರೂ ಹಳ್ಳಗಳು. ನಿಂತ ನೀರು, ಸೊಳ್ಳೆ ಕಾಟ, ಕಸದ ರಾಶಿ, ಯಾರ ಮನೇಲಿ ನೋಡಿದರೂ ಚಳಿಜ್ವರ.

ಔಷಧೋಪಚಾರ ಏನಾದರೂ ಇದ್ದಿದ್ದರೆ! ಹಳ್ಳಕೊಳ್ಳಗಳನ್ನು, ಲಾಲ್‌ಪುರದಲ್ಲಿನ ಹಾಗೆ ಮುಚ್ಚಿ ಸಮಮಾಡಿದ್ದಾರೆ.

"ಜವಾಹರ್ ಯೋಜನೆಗೇಂತ ಕೊಟ್ಟ ಹಣದಿಂದ ಏನೂ ಆಗಿಲ್ಲ."

ರನವೀರನ ನೋಟ ಆ ಕಡೆ ಈ ಕಡೆ ಚಲಿಸಿತು. ಕಣ್ಣು ಕೆಂಪಾಗತೊಡಗಿತು.

ಕಣ್ಣಿಂದ ಹೊಮ್ಮಿದ ಕಿಡಿಗಳಿಂದ ನಾನು ನಿಂತವಳು ನಿಂತ ಹಾಗೇ ಸುಟ್ಟು ಭಸ್ಮವಾಗಲು ತೊಡಗಿದೆ.

ಮಾಸ್ತರರೇ, ನನ್ನ ಮಾತುಗಳು ಕಾದ ಹೆಂಚಿನ ಮೇಲೆ ಬಿದ್ದ ನೀರಿನ ಹನಿಗಳಂತಾದವು.

"ಊರಿನ ಹೆಂಗಸರು ಹೇಳುತಿದ್ದರೇ ಅಥವಾ ನೀನೇಯೋ?"

"ಈ ಊರಿನ ಹೆಂಗಸರಿಗೆ ಮಾತಾಡೋ ಧೈರ್ಯ ಯಾವಾಗಿನಿಂದ ಬಂತು?"

"ಪ್ರಧಾನನ ಕರ್ತವ್ಯಗಳು ಮತ್ತು ಅಧಿಕಾರದ ಬಗ್ಗೆ ಪುಸ್ತಕ ಓದಿ ಬಾಯಿಪಾಠ ಮಾಡಿದ್ದೀಯ ಹೇಗೆ?"

"ನೀನು ಪ್ರಧಾನಳೋ ಅಥವಾ ಎಂ.ಎಲ್.ಎ. ನೋ?"

ವಿಕಟನಗೆಯೊಂದು ಅವನ ಮುಖದ ಮೇಲೆ ಕಾಣಿಸಿತು.

ಚ... ಚ... ಚ... ಇಲ್ಲೀ ವರೆಗೆ ಯಾರೂ ಏನನ್ನೂ ಪ್ರಶ್ನಿಸಿರಲಿಲ್ಲ. ನೀನು ಇವತ್ತು ರಾಶಿ ರಾಶಿ ಪ್ರಶ್ನೆಗಳನ್ನು ಕೇಳ್ತಿದ್ದೀಯ." ರನವೀರನ ಮಾತು ತೀಕ್ಷ್ಣವಾಗಿತ್ತು.

ನಡುಗುವ ಕೈಗಳಿಂದ ಮಾತಿಲ್ಲದೆ, ಸಹಿ ಹಾಕಿದಳು. 'ಬಸುಮತಿ ದೇವಿ'!

ಈ ದುಡ್ಡನ್ನು ಸಹಿ ಮಾಡಿ ತೆಗೆದುಕೊಂಡು ಬಂದ ದಿನ, ಸ್ವರ್ಗದ ಕನಸನ್ನು ಕಾಣುತ್ತಿದ್ದಳು. ಒಳ್ಳೆ ಶಾಲೆ, ಅಚ್ಚುಕಟ್ಟಾದ, ಅಂದವಾದ ರಸ್ತೆಗಳು; ಮಳೆಯಿಂದ ಕುಸಿದು ಬಿದ್ದ ಗುಡಿಸಲುಗಳ ದುರಸ್ತಿ. ಕೆಲಸಕಾರ್ಯ ಇಲ್ಲಿಗೆ ಕೈ ಕಟ್ಟಿಕೊಂಡು ಕುಳಿತ ಮನೆಗಳಲ್ಲಿ ಒಲೆ ಉರಿಯುವ ಕನಸು ಖಾಯಿಲೆ-ಕಸಾಲೆಗಳಿಂದ ನರಳುವವರಿಗೆ ಔಷಧಿ ಚಿಕಿತ್ಸೆ!

ವಸುಮತಿ ದೇವಿ!..... ಈ ಆರು ಅಕ್ಷರಗಳು ಕನಸುಗಳನ್ನು ಹೊಸಕಿ ಹಾಕಿದ್ದವು.

ಒಬ್ಬ ವಯಸ್ಸಾದ ಮಹಿಳೆ ಬಂದು ಬಾಗಿಲು ತಟ್ಟಿದಳು.

"ಮಗು... ಬಸುಮತಿ!"

ನೀರಿನ ಮಡಕೆಯನ್ನು ಮಣೆ ಮೇಲೆ ಇರಿಸುವಷ್ಟರಲ್ಲಿ ರನವೀರನ ತಮ್ಮ ದೇವವೀರ ಬಾಗಿಲ ಬಳಿ ಬಂದ.

"ಏನಜ್ಜಿ?"

"ಮಗು ಒಂದು ಸ್ವಲ್ಪ ನಿನ್ನ ಅತ್ತಿಗೇನ ಕರೀತೀಯ?"

"ಪಂಚಾಯಿತಿಗೆ ಕರೆಯೋಕೆ ಬಂದಿದ್ದೀಯೇನು?"

"ಇನ್ಯಾತಕ್ಕೇಂತ ಬರಲಪ್ಪ!"

"ಅಜ್ಜಿ, ಇಲ್ಲಿಂದ ಹೊರಟು ಹೋಗು. ಅಣ್ಣ ಮನೇಲಿಲ್ಲ. ಅತ್ತಿಗೆಗೆ ಬರೋದು ಸಾಧ್ಯ ಇಲ್ಲ."

"ಯಾಕೆ ಸಾಧ್ಯ ಇಲ್ಲ? ಅವಳು ಪ್ರಧಾನಳಾಗಿಲ್ಲವೆ? ಪಂಚಾಯಿತಿಗೆ ಬರಲೇ ಬೇಕಾಗುತ್ತಪ್ಪ."

"ನೀನು ನಮ್ಮ ಮನೇಲಿ ಜಗಳ ತಂದು ಹಾಕಬೇಕಂತ ಇದ್ದೀಯ?"

ನಾನು ಅಂಗಳಕ್ಕೆ ಬಂದು ಬಿಟ್ಟಿದ್ದೆ. ಆ ವಯಸ್ಸಾದ ಮುದುಕಿ ನನ್ನನ್ನು ನೋಡಿ ಬಿಟ್ಟಿದ್ದಳು. ನನ್ನ ಕಾಲಿಗೆ ಬಿದ್ದು, 'ಮಗು ವಸುಮತಿ, ನನ್ನ ಕಷ್ಟ ಏನೂಂತ ಅರ್ಥ ಮಾಡಿಕೋ. ನನ್ನ ಅಕ್ಕನಿಗೆ ಆ ಮೇಲೆ ರಜ ಸಿಗೊಲ್ಲ. ಮಿಲ್ಲಿನಲ್ಲಿ ಕೆಲಸ. ನನ್ನ ಮಗನಿಗಾಗಿರುವ ಅನ್ಯಾಯವನ್ನ ಸರಿ ಮಾಡು ಮಗಳೆ?"

ನಿಂತುಕೊಂಡೇ ಅವಳ ಮಾತನ್ನು ಕೇಳಿಸಿಕೊಂಡೆ.

"ಅಜ್ಜಿ, ನನ್ನ ಮಗಳ ಕಷ್ಟ ನೋಡೋಕೆ ಆಗೋದಿಲ್ಲ. ಅಷ್ಟು ರಾತ್ರಿ, ಪಟ್ಟಣದಿಂದ ಬಂದುಬಿಡ್ತಾನೆ. ನನ್ನ ಮನೇಲೇ ಬರೋದಿಲ್ಲ" ಹೇಳುತ್ತಲೇ ಅವಳ

ಕಣ್ಣು ಒದ್ದೆಯಾಯಿತು. ಧಾರಾಕಾರವಾಗಿ ಕಂಬನಿ ಇಳಿಯಿತು. ಆ ಸುಕ್ಕುಗಟ್ಟಿದ ಮುಖದ ಮೇಲೆ!

ಏನು ಮಾಡಲಿ? ಸಮಾಧಾನದ ಮಾತು ಬಿಟ್ಟರೆ ಬೇರೇನೂ ಮಾಡುವ ಸ್ಥಿತಿಯಲ್ಲಿ ಇರಲಿಲ್ಲ.

"ನ್ಯಾಯ ಸಿಗುತ್ತೆ ತಾಯಿ. ವಿಶ್ವಾಸ ಇಡು. ಪಂಚರು ಯಾವತ್ತೂ ಅನ್ಯಾಯ ಮಾಡೊಲ್ಲ."

ಆ ಕ್ಷಣದಲ್ಲಿ ಅದೇನಾಯಿತೋ, ತಡೆದು ನಿಲ್ಲಿಸಿದ್ದ ಕಾಲುಗಳು ಚಲಿಸಿದವು. ಆ ಮುದುಕಿಯನ್ನು ಹೆಜ್ಜೆಗಳು ಹಿಂಬಾಲಿಸಿದವು. ದೇವವೀರ ತಡೆಯಲು ಪ್ರಯತ್ನಿಸುತ್ತಿದ್ದ.

ತೀರ್ಪನ್ನು ನೀಡಿದ ಸಂತೋಷದಲ್ಲಿ ಆರ್ದ್ರಳಾಗಿದ್ದ. ಪ್ರೀತಿ ನಿಷ್ಠೆಗಳಿಂದ ಕರ್ತವ್ಯ ನಿರ್ವಹಿಸಿದ್ದೆ. ಪಂಚಾಯಿತಿ ಕಟ್ಟೆ ಪವಿತ್ರವಾದ ಮಂದಿರದಂತೆ ಭಾಸವಾಗಿತ್ತು. ಕೊಳೆತು ನಿಂತ ನೀರನ್ನು ಕೊಚ್ಚಿ ಹರಿಯಬಿಟ್ಟಂತೆನಿಸಿತು. ನನ್ನೀ ಕೈಗಳಿಂದ ಕೊಳಕನ್ನೆಲ್ಲಾ ತೊಳೆದು ಹಾಕಿದ್ದೇನೆಂದುಕೊಂಡೆ. ಹೊಸದೊಂದು ದಾರಿಯ ನಿರ್ಮಾಣ ಮಾಡಿದ್ದೇನೆಂದು ಭಾವಿಸಿದೆ.

ಆ ರಾತ್ರಿ ರನವೀರ ಮನೆ ಒಳಗೆ ಪ್ರವೇಶಿಸಿದ. ಅವನ ಮುಖ ನೋಡಿದರೆ, ಸುಟ್ಟು ಭಸ್ಮ ಮಾಡಿಬಿಡುವುದರಲ್ಲಿ ಅನುಮಾನವಿಲ್ಲ ಎನಿಸಿತು.

ನನ್ನೆದೆ ಡವಗುಟ್ಟತೊಡಗಿತು.

ಆ ನೀರವ ರಾತ್ರಿಯಲ್ಲಿ ಮೆಲ್ಲಗೆ ಅವನ ಧ್ವನಿ ಹೊರಟಿತು, ಒಳಗಿನ ವಿಷದಿಂದ ನನ್ನನ್ನು ಸಂಪೂರ್ಣವಾಗಿ ಮೀಯಿಸುತ್ತಿದ್ದಾನೆನಿಸಿತು.

ಆಫೀಸ್ ಕೆಲಸ ಮಾಡೋಕೆ ಅಧಿಕಾರ ಮಾಡೋಕೆ ಅಷ್ಟೊಂದು ಇಷ್ಟ ಇದ್ದಿದ್ದರೆ, ನಿನ್ನ ಅಪ್ಪನಿಗೆ ಹೇಳಿ ಲಾಯರಿ ಓದಬೇಕಿತ್ತು. ಪದೇ ಪದೇ ಹೇಳಿದ್ದರೂ ಮತ್ತೆ....!"

ಅವನು ಹೇಳಿದ್ದಕ್ಕೆ ನನ್ನಿಂದ ಉತ್ತರ ಹೊರಡಲಿಲ್ಲ. ದಿನಾ... ದಿನಾ.. ಈ ನಾಟಕ! ಹಗಲೂ ರಾತ್ರಿ ನಟನೆ!... ಹೇಳು ಇದೆಲ್ಲ ಯಾವಾಗ ನಿಲ್ಲುತ್ತೆ?"

ಮಾತುಗಳನ್ನು ಸಿಡಿಸುತ್ತಲೇ ಹೋದ ರನವೀರ, ದುಃಖದಿಂದ ಬಿಕ್ಕುವಂತಾಯಿತು. ಆಪಾದ ಮಸ್ತಕ ಕಂಪನದ ಅನುಭವ.

ಅಪ್ರಯತ್ನ ಪೂರ್ವಕವಾಗಿ ಮಾತು ಹೊಮ್ಮಿತು– ನಾನಾಗಿ ಹೋಗಲಿಲ್ಲ. ಆ ತಾಯಿ ಮಗಳು ಕರೆಯಲು ಬಂದಿದ್ದರು. ಹರದಈಳ ದುಃಖ ಯಾರಿಗೆ ತಾನೇ ಗೊತ್ತಿಲ್ಲ?"

"ಹೌದು ಎಲ್ಲರಿಗಿಂತ ನಿನಗೇ ಜಾಸ್ತಿ ಗೊತ್ತಿದೆ."

ಪಾಪ ಹರದಈ. ಅಂಗಲಾಚುತ್ತಾ ಹೇಳುತ್ತಿದ್ದಳು. ರನವೀರಣ್ಣನಿಗೆ ನನ್ನ ನೋವು ಅರ್ಥವಾಗೊಲ್ಲ. ನೀನು ಹೆಂಗಸು. ನನ್ನ ಕಷ್ಟ ನಿನಗೆ ಅರ್ಥವಾಗುತ್ತೆ. ನನಗೆ ನ್ಯಾಯ ಕೊಡಿಸು. ಗಂಡನಿಗೆ ಸೈನ್ಯದಲ್ಲಿ ಕೆಲಸ. ಇನ್ನು ಅವನಿಗೆ ರಜೆ ಸಿಗೋದು ಎರಡು ವರ್ಷದ ನಂತರವೇ. ಇದೇ ರೀತಿ ಏಳು ವರ್ಷ ಕಳೆದಾಗಿದೆ.

"ನನ್ನ ಅಪ್ಪನಿಗೇನೂಂದ್ರೆ, ನಾನು ಹೊರಟು ಹೋದರೆ ಅಳಿಯ ಒಂದು ಚಿಕ್ಕಾಸೂ ಕಳಿಸೊಲ್ಲ ಅನ್ನೋದು."

ಕೋಣೆ ಒಳಗೆ ಬೀಗ ಹಾಕಿ ಇಡ್ತಾನೆ. ನನ್ನ ಗಂಡನನ್ನು ನೋಡೋಕೂ ಬಿಡೋದಿಲ್ಲ. ಅಮ್ಮ ಏನಾದರೂ ಉಪಾಯ ಮಾಡಿ ಬೀಗ ತೆಗೆದು ಹೊರಗೆ ಕಳಿಸಿದರೆ, ಭೂಮಿ ಆಕಾಶ ಒಂದು ಮಾಡಿ ಬಿಡ್ತಾನೆ. ಕೆಟ್ಟ ಕೆಟ್ಟ ಮಾತುಗಳಿಂದ ಬೈತಾನೆ."

'ಮೂರು ಸಲ ಪಟ್ಟಣಕ್ಕೆ ಕರ್ಕೊಂಡು ಹೋಗಿ ಹೊಟ್ಟೆ ಇಳಿಸಿದ್ದಾನೆ."

"ಇಂಥಾ ತಂದೇನ ಎಲ್ಲಿಯಾದರೂ ನೋಡಿದ್ದೀರಾ ಅಕ್ಕ."

"ಈ ಒಂದು ಸಲ ಹೇಗಾದರೂ ನನ್ನನ್ನು ಉಳಿಸಿಕೊಡಿ. ಇವರ ಜೊತೆ ಹೋಗೊ ಹಾಗೆ ಮಾಡಿ. ನಿಮ್ಮ ಉಪಕಾರಾನ ಯಾವತ್ತೂ ಮರೆಯೊಲ್ಲ. ಜನ್ಮ ಜನ್ಮಕ್ಕೂ ನಿಮಗೆ ಋಣಿಯಾಗಿರ್ತೀನಿ." ಹರದಈ ಒಂದೇ ಸಮನೆ ಅಳತೊಡಗಿದಳು.

ಇಷ್ಟೆಲ್ಲಾ ಆದರೂ ಅವಳ ದುಃಖಾನ ಕೇಳಿಸಿಕೊಳ್ಳಲಿಲ್ಲ.

"ನೀನೇ ಸರಿಯಾದ ತೀರ್ಪು ಕೊಟ್ಟಿದ್ದರೆ ಎಂದು ಯೋಚಿಸುತ್ತಿದ್ದೆ.

ತೀಕ್ಷ್ಣವಾಗಿ ನೋಡುತ್ತಾ "ಎಂಥ ತೀರ್ಪು?.... ನೀನು ಕೊಟ್ಟು ಬಂದೆಯಲ್ಲ ಆ ಘನಷ್ಟೇನು? ಹರದಈ ಏನು ಕಾಡಲ್ಲಿ ವಾಸವಾಗಿದ್ದಾಳೇ? ಅಪ್ಪನ ಮನೆ ಅವಳದಲ್ಲವೇನು?"

"ಆ ಮಿಲ್ಟ್ರಿಯವನು ಅವಳನ್ನು ಎಲ್ಲಿ ಇರಿಸ್ತಾನೆ?"

"ಎಲ್ಲಾವನೂ ಸರಿ. ಇಬ್ಬರಲ್ಲಿ ಪ್ರೀತಿ ಅನ್ನೋದು ಇದ್ದರೆ. ಮನೆಯೋ ಮಠವೋ ಎಲ್ಲಾದರೂ ನಡೆಯುತ್ತೆ."

ಥಟ್ಟಂತ ಎದ್ದು ನಿಂತು ಹೇಳಿದ – ಅಂದ್ರೆ?

ನೀವು ಅವನನ್ನು ತಡೀತಿದ್ದೀನೀಂತಲೇ?

ಹೆದರಿಕೆಯಿಂದ ಕಂಪಿಸುತ್ತಿದ್ದರೂ ಅದು ಹೇಗೋ ನನ್ನ ಬಾಯಿಂದ ಮಾತು ಹೊರಟಿತು... ಅಧಿಕಾರಿಗಳಿಗೆ ಲಂಚ ತಿನ್ನಿಸಬೇಕಾಗಿದೇಂತ ಕೇಳಿದೆ."

"ಹಾಗೋ?" ನಾಲಿಗೆ ಹೊರಳಿತು.

"ನೀನು ಇದನ್ನು ಕೇಳಿಲ್ವ, ಅವನ ಅಯೋಗ್ಯ ಸೋದರನಿಗೆ ಕೆಲಸ ಹೇಗೆ ಸಿಕ್ತು? ಅವನ ಅಪ್ಪನಿಗೆ ಸಿಮೆಂಟ್ ದಳ್ಳಾಳಿ ಕೆಲಸ ಯಾರಿಂದ ಸಾಧ್ಯ ಆಯಿತು? ಅಷ್ಟು ಚೆನ್ನಾಗಿರೋ ಮನೆ ಹೇಗೆ ಸಾಧ್ಯ ಆಯಿತು? ..... ಇಷ್ಟೆಲ್ಲಾ ಕೆಲಸಗಳು ಯಾರ ಕೃಪೆಯಿಂದ ನಡೀತಿದೆ ಅಂತ ಗೊತ್ತಾಗಲಿಲ್ಲವೇ?"

"ಅದರಿಂದ ನನಗೇನು ಲಾಭ ಇದೆ?"

"ನಿನಗೆ ವಿಷಯ ಎಲ್ಲ ಗೊತ್ತಿದೆ. ಹೀಗಿದ್ದೂ ಅವಳನ್ನು ಅವಳಪ್ಪನ ಕಪಿಮುಷ್ಟಿಯಿಂದ ಬಿಡಿಸಬಾರದೇಕೆ?"

"ನೀನು ಬಿಡಿಸಿಬಿಟ್ಟೆಯಲ್ಲ. ನನ್ನ ವಿರುದ್ಧ ತೀರ್ಪು ನೀಡಿ ಈ ಸ್ಥಿತಿಗೆ ತಂದು ಬಿಟ್ಟೆಯಲ್ಲ."

"ನನ್ನ ಉದ್ದೇಶ ಅದಾಗಿರಲಿಲ್ಲ."

"ಹಾಗಾದರೆ ಆವತ್ತು ನಿನ್ನ ಉದ್ದೇಶ ಏನಿತ್ತು, ರಾಮಸಿಂಹನನ್ನು ಪೋಲೀಸು ಹಿಡ್ಕೊಂಡು ಹೋಗ್ತಿದ್ದಾಗ? ಹುಚ್ಚಿ ಥರ ಪೋಲೀಸ್ ವ್ಯಾನ್ ಹಿಂದೆ, ಪ್ರಜ್ಞೆಯಿಲ್ಲದೆ ಓಡಿದ್ದು ಯಾಕೆ?"

"ಪೋಲೀಸಿನವರು ಏನಂದುಕೊಂಡಿರಬಹುದು? ಜನ ಏನಂತ ಯೋಚಿಸಬಹುದು? ಇದೇನಿದು ಪ್ರಮುಖನ ಹೆಂಡತಿ ಈ ರೀತಿ ಹುಚ್ಚಿ ಥರ! ಅಂತ ಅನ್ಕೊಳ್ಳಲ್ವೆ?"

"ನಾಚಿಕೆಯಿಂದ ಭೂಮಿಗಿಳಿದು ಹೋದೆ."

"ಮುಂದೇನಾದರೂ ಈ ಥರ ನಾಟಕ ಗೀಟಕ ಮಾಡಿದರೆ..."

"ನೋಡಿ. ರಾಮಸಿಂಹ ತಪ್ಪಿತಸ್ಥನಾಗಿರಲಿಲ್ಲ. ನಿರಪರಾಧಿಯಾದವನಿಗೆ ಶಿಕ್ಷೆ ಕೊಡ್ತೋದು?"

ಕೋಪ ನೆತ್ತಿಗೇರಿತ್ತು.

"ಕೇಳಿಸಿಕೋ! ನಿನ್ನ ಜಾಗ ಏನೂಂತ ತಿಳ್ಕೋ. ವಿಧಿ ಇಲ್ಲದೆ ನಿನ್ನನ್ನು ನಿಲ್ಲಿಸಿದೆ. ಯಾಕೇಂದ್ರೆ ಒಬ್ಬರೇ ಎರಡು ಸ್ಥಾನಗಳಿಗೆ ಸ್ಪರ್ಧಿಸೋದು ಸಾಧ್ಯವಿರಲಿಲ್ಲ. ಯೋಚನೆ ಮಾಡಿದೆ. ಹೆಂಡತಿಗಿಂತ ವಿಶ್ವಾಸ ಪಾತ್ರರು ಯಾರು ಇರೋಕೆ ಸಾಧ್ಯ ಅಂತ. ನಿನ್ನನ್ನು ನಿಲ್ಲಿಸಿದೆ...."

'ವಿಶ್ವಾಸಪಾತ್ರಳು' ಅನ್ನೋ ಮಾತು ಅವನ ಬಾಯಿಂದ ಕೇಳಿ, ಎದೇಲಿ ಚೂರಿ ಇರಿದಂತಾಯಿತು.

ಪುಷ್ಯಮಾಸದ ಶೀತಲ ರಾತ್ರಿ. ಹೆಪ್ಪುಗಟ್ಟಿಸುವ ಚಳಿ. ನಾನು ಹೊರಗಡೆಯೇ ಕುಳಿತಿದ್ದೆ. ಚಳಿಯಿಂದ ನಡುಗುತ್ತಿದ್ದೆ. ಕೈಕಾಲುಗಳು ಸುಂದು ಹಿಡಿದಿದ್ದವು.

ಮನಸ್ಸಿನಲ್ಲಿ ಏನೇನೋ ಯೋಚನೆಗಳು. ಈ ಮನೆ, ಈ ಊರು, ಈ ಭೂಮಿ, ಆಕಾಶ ಎಲ್ಲವನ್ನೂ ಒದ್ದು ಈ ಕ್ಷಣವೇ ಎಲ್ಲಿಗಾದರೂ ಹೋಗಿ ಬಿಡೋಣವೆನಿಸುತ್ತಿತ್ತು.

ಮಧ್ಯರಾತ್ರಿ ಸರಿದಿರಬಹುದು.

ಮಸುಕು ಮಸುಕಾದ ಕತ್ತಲಲ್ಲಿ, ನೆರಳೊಂದು ಹತ್ತಿರ ಹತ್ತಿರ ಸರಿದು ಬರುತ್ತಿರುವಂತೆನಿಸಿತು. ಮುಖ ಎತ್ತಿ ನೋಡಿದೆ. ಅದು ರಣವೀರನಾಗಿದ್ದ.

ಹತ್ತಿರ ಬಂದು ಕುಳಿತುಕೊಂಡು ತಲೆ ನೇವರಿಸುತ್ತಾ ಪ್ರೀತಿಯಿಂದ ಹೇಳಿದರು – ನಡಿ ಒಳಗೆ ಹೋಗೋಣ. ಒಳಗೆ ನಡೆದು ಮಲಗಿಕೋ. ಬಹಳ ಚಳಿ ಇದೆ. ಹೇಳೋದನ್ನು ಕೇಳು."

ಸೀರೆ ಕೊಡವಿಕೊಂಡು. ಒಳ್ಳೆ ಬೊಂಬೆ ಥರ ನಿಂತುಕೊಂಡೆ. ಮಾತಾಡಲು ಇಷ್ಟವಿಲ್ಲದೆ ಸೆಟೆದುಕೊಂಡೇ ಇದ್ದೆ.

ವಿರೋಧಿಸಲೂ ಇಲ್ಲ. ಸಂತೋಷ ವ್ಯಕ್ತ ಪಡಿಸಲೂ ಇಲ್ಲ. ನಿರ್ಭಾವುಕತೆಯೊಂದಿಗೆ, ಹೆಜ್ಜೆಗಳನ್ನೆಳೆದುಕೊಳ್ಳುತ್ತಾ ಕೋಣೆಯ ಒಳಗೆ ಪ್ರವೇಶಿಸಿದೆ.

ಅವನು ಸಮಾಧಾನದಿಂದ ತಿಳಿಸಿ ಹೇಳೋಕೆ ಪ್ರಯತ್ನಿಸುತ್ತಿದ್ದ. "ಗಂಡ-ಹೆಂಡಿರ ನಡುವೆ ವ್ಯತ್ಯಾಸ ಎಂಥದ್ದು? ಹುಚ್ಚಿ! ಪರಸ್ಪರ ಒಬ್ಬರಿಗೋಸ್ಕರ ಒಬ್ಬರು ಬದುಕೋದು. ಈ ಊರಿನವರಿಂದಾಗಿ ನಾವು ಯಾಕೆ ವೃಥಾ ಮನಸ್ಸು ಕೆಡಿಸಿಕೊಳ್ಳಬೇಕು?"

"ನಮ್ಮನ್ನು ಕಂಡರೆ ಎಲ್ಲರಿಗೂ ಹೊಟ್ಟೆ ಕಿಚ್ಚು. ನಾವಿಬ್ಬರೂ ಪ್ರಧಾನ, ಪ್ರಮುಖರಾಗಿ ಒಟ್ಟಿಗೆ ಅಧಿಕಾರದಲ್ಲಿರೋದನ್ನು ಅವರಿಗೆ ನೋಡೋಕೆ ಆಗುವುದಿಲ್ಲ. ನೀನು ಹೀಗೆ [illegible] ಅವರಿವರ ಜೊತೆ ಹರಟೆ-ತಮಾಷೆ ಮಾಡ್ತಿರಬೇಕು. ಆಗ ಅದನ್ನು ನೋಡಿ ಇವರೆಲ್ಲ ಮಾತಾಡೋಕೆ, ನಗೋಕೆ ಅವಕಾಶ ಕಲ್ಪಿಸಿಕೊಳ್ಳಬೇಕು [illegible] ಅವನ [illegible] ರಣವೀರನ ಹೆಂಡತಿ ಬೇರೆ ಬೇರೆ ಗಂಡಸರ (ಜೊತೆ) [illegible]!"

[illegible]

ಹೆಂಡತಿಯಾಗಿರಲಿ ಅಂತ ಕೋರಿದ್ದಿರಿ. ಜೊತೆಯಲ್ಲಿಯೇ ಹೊಸ ಬೆಳಕಿನ ಹಾದಿ ಹುಡುಕುವ ಆಸೆಯನ್ನು ಮೂಡಿಸಿದ್ದಿರಿ. ಸಂಬಂಧಗಳನ್ನು ಮೀರುವ ಪ್ರಯತ್ನಕ್ಕೆ ಮುಂದಾಗಬೇಕೆಂದಿದ್ದಿರಿ. ಮತ್ತೂ ಒಂದು ಬರೆದಿದ್ದಿರಿ, 'ವಸುಮತಿ, ನಿನ್ನ ಅಂಗಳದಲ್ಲಿ ಸತ್ಯದ ಕಂಬಗಳನ್ನು ನೆಟ್ಟು ಪ್ರಾಮಾಣಿಕತೆಯ ಛಾವಣಿ ಹೋದಿಸಿ, ದೀನದಲಿತರಿಗೆ, ದುಃಖಿತರಿಗೆ ನೆರಳು ನೀಡುವಂತಾಗಲೆಂದೂ ಆಶಿಸಿದ್ದಿರಿ.

ಆದರೆ ಇದೆಲ್ಲ ಎಲ್ಲೀವರೆಗೆ ಸಾಧ್ಯವಾಗಬಹುದೋ ನಿಮಗೇ ಗೊತ್ತಿದೆ.

ನೀವು ಬರೆದಿದ್ದನ್ನು ಕಂಡು ಸ್ವಲ್ಪ ವಿಚಲಿತಳಾಗಿದ್ದುಂಟು. ಆದರೆ ಮಾಸ್ತರರೇ, ಹೇಳಬೇಕೆಂದರೆ, ಅಧಿಕಾರಕ್ಕೆ ಬಂದವರು ಅನ್ಯಾಯ, ಮೋಸ ದಬ್ಬಾಳಿಕೆಗಳಿಂದ ಪ್ರಜೆಗಳನ್ನು ಆಳುವವರಿಗಿಂತ ನಾನೇನೂ ಬೇರೆಯಲ್ಲ ಅನ್ನುವುದನ್ನು ಮರೆತು ಬಿಟ್ಟಿದ್ದೆ.

ನಾನೂ ಈಸೂರಿಯಾ ಆಗಿದ್ದರೆ! ಯಾವುದೇ ಮುಚ್ಚುಮರೆ, ಕಪಟಗಳಿಲ್ಲದೆ, ಮುಕ್ತ ಆಕಾಶದಡಿಯಲ್ಲಿ, ಕುಲೀನ ವಂಶದ ಹೆಣ್ಣಿಗೆ ಅನಿವಾರ್ಯವಾಗಿರುವ ಪೊಳ್ಳು ಸಂಪ್ರದಾಯ. ಪರಂಪರೆಗಳಿಂದ ದೂರವಾಗಿರಲು ಸಾಧ್ಯವಾಗುತ್ತಿತ್ತು.

ರನವೀರನಿಗೆ ಹುಟ್ಟಿನಿಂದ ಬಂದ ದಮನ ಸ್ವಭಾವ ಇರದಿದ್ದ ಪಕ್ಷದಲ್ಲಿ (ಈ ಪಂಜರವನ್ನೇ) ರೆಕ್ಕೆಗಳನ್ನೇ ಕತ್ತರಿಸಿ ಇರಿಸಿರುವ ಈ ಪಂಜರವನ್ನೇ ಹಾರಿಸಿಕೊಂಡು ಹೋಗಿ ಬಿಡುತ್ತಿದ್ದೆ. ಬೆಳಕು ಹರಿಯುತ್ತಿದ್ದಿರಬೇಕು. ಹಕ್ಕಿಗಳ ಕಲರವ ಕೇಳಿ ಎದ್ದೆ. ನಿದ್ದೆ, ಆಯಾಸಗಳಿಲ್ಲದಿದ್ದರೂ, ಮನಸ್ಸು ಅಸ್ವಸ್ಥಗೊಂಡಿತ್ತು.

ಅಡಿಗೆ ಮನೆ ಗುಡಿಸಿ, ಸಾರಿಸಿ, ಒಲೆ ಹಚ್ಚಿದೆ. ರನವೀರನಿಗೆ ಹಲ್ಲುಜ್ಜಿ ಮುಖ ತೊಳೆಯುವುದಕ್ಕೆ ಮೊದಲೇ ಚಹಾ ಕುಡಿಯುವ ಅಭ್ಯಾಸವಿತ್ತು.

ಚಹದ ಕಪ್ಪು ಹಿಡಿದು ಒಳಗೆ ಪ್ರವೇಶಿಸುವುದರಲ್ಲಿದ್ದೆ. ಅಷ್ಟರಲ್ಲಿ ಹೊರಗಿನಿಂದ ಚೀರಾಟ ಕೇಳಿ ಬಂತು.

"ಓ ರನ್ನಾನ ಹೆಂಡತಿಯೇ, ಬಸುಮತಿಯೇ"

"ಹೊರಗಡೆ ಬರ್ತೀಯಾ ಸ್ವಲ್ಪ."

"ನಿನ್ನ ವಿದ್ಯೆಗಷ್ಟು ಮಣ್ಣು ಹಾಕು. ನೀನು ಕಲಿತದ್ದು, ನಿನ್ನ ಪ್ರಧಾನಗಿರಿ ಎಲ್ಲಾ ತಗೊಂಡು ಹೋಗಿ ಒಲೆ ಒಳಗೆ ಹಾಕು!"

ಆ ಚೀರಾಟದಲ್ಲಿ ಆರ್ತತೆ ಇತ್ತು.

ಈಸೂರಿಯಾ ಅಳುವಿನ ಅಲೆಗಳಲ್ಲಿ ಹೊಯ್ದಾಡುತ್ತಿದ್ದಳು. ಆ ಸಂಕಟ, ಅಳಲಿನ ತೀವ್ರತೆಯಿಂದ, ಕೈಲಿ ಹಿಡಿದಿದ್ದ ಚಹದ ಬಟ್ಟಲು ಅಲ್ಲಾಡಿತು.... ಏನಾಗಿದೆಯೋ ಏನೋ?

"ಬೇಗ ಬಾ. ಹರದಈ ಆ ಅಶ್ವತ್ಥ ವೃಕ್ಷದಡೀಲಿರೋ ಬಾವಿಯೊಳಗೆ ಬಿದ್ದು ಪ್ರಾಣ ಕಳ್ಕೊಂಡಿದ್ದಾಳೆ."

ಆ ಮಾತು ಕೇಳಿ ನಿಶ್ಚೇಷ್ಟಿತಳಾದೆ.

ರನಪೀರನ ಕೋಣೆಯ ಕಡೆ ಓಡತೊಡಗಿದೆ. ಏದುಸಿರು ಬಿಡುತ್ತಿದ್ದೆ.

ನನಗೆ ನಂಬಿಕೆ ಬರಲಿಲ್ಲ. ಆದರೂ ಎದೆಯೊಳಗೆ ಯಾರೋ ಚೂರಿ ಇರಿಯುತ್ತಿದ್ದಂತೆನಿಸಿತು.

ರನಪೀರ ಹಾಸಿಗೆ ಮೇಲಿರಲಿಲ್ಲ. ದೇಹ ಬಂಡೆಗಿಂತ ಭಾರವೆನಿಸಿತು. ಹೆಜ್ಜೆಗಳು ಚಲಿಸಲಿಲ್ಲ... ಉತ್ಸಾಹ ಶೂನ್ಯಳಾಗಿ ಕುಳಿತುಬಿಟ್ಟೆ.

ತೀರ್ಪನ್ನು ತಿದ್ದಿದವರು ಯಾರು? ರಾತ್ರೋರಾತ್ರಿ ವಿರುದ್ಧವಾದ ತೀರ್ಪು ಹೇಗೆ ಸಾಧ್ಯವಾಯಿತು? ಪಂಚರಲ್ಲಿ ಯಾರು ಮಾಡಿರಬಹುದು ಈ ಕೆಲಸ? ಗಂಡನ ಜೊತೆ ಅವಳು ಹೋಗದಂತೆ ಮಾಡಿದವರು ಯಾರು?

ಈಸುರಿಯಾ ನನ್ನ ಭುಜಗಳನ್ನು ಹಿಡಿದು ಗಟ್ಟಿಯಾಗಿ ಅಲುಗಾಡಿಸಿ... "ಹೀಗೆ ಕೂತೇ ಇರ್ತೀಯೋ ಅಥವಾ ಕೊನೆಯ ಸಲವಾದರೂ ಅವಳ ಮುಖ ನೋಡ್ತೀಯೋ? ಹರದಈ ನಿನಗೆ ಓಟು ಕೇಳೋಕೇಂತ ಓಡಾಡಿದ್ದಳು. ಮೆರವಣಿಗೇಲಿ ಮುಂದೆ ನಿಂತು ನಿನ್ನ ಹೆಸರಿಗೆ ಓಟು ಕೊಡೀಂತ ಘೋಷಣೆ ಕೂಗಿದಳು.

"ಹೌದು! ಅವಳ ಅವರ್ಣನೀಯವಾದ ವರ್ಚಸ್ಸು ಕಣ್ಣಮುಂದೆ ಬಂದು ನಿಂತಿತು. ಬಸುಮತಿದೇವಿ ಜಿಂದಾಬಾದ್! ಬಸುಮತಿ ಅಕ್ಕನಿಗೆ ಓಟು ಕೊಡಿ."

ಈಸುರಿಯಾಳ ಅಳಲಧಾರೆ ನಿಂತಿರಲಿಲ್ಲ. "ಬಸುಮತಿ, ನಿನಗೆ ಓಟು ಕೊಡುವ ಬದಲು ಒಂದು ಮರದ ಕಟ್ಟಿಗೆಗೆ ಕೊಟ್ಟಿದ್ದರಾದರೂ ಚೆನ್ನಾಗಿತ್ತು! ಎಬ್ಬಿಸಬಹುದೂಂದ್ರೆ, ನಾವೇ ಎಬ್ಬಿಸಬಹುದಾಗಿತ್ತು. ಶತ್ರುವಿಗೆ ಏಟಿನ ರುಚಿ ತೋರಿಸಬಹುದಾಗಿತ್ತು! ಮೋಸದ ವಿರುದ್ಧ ನಿಲ್ಲಬಹುದಾಗಿತ್ತು. ಕಡೇಗೂ ನೀನು ದೊಡ್ಡವರ ಮನೆ ಸೊಸೆ ಅಂತಲೇ ಅನ್ನಿಸಿಕೊಂಡು ಬಿಟ್ಟೆ. ಪ್ರಮುಖನ ಹೆಂಡತಿ. ಸೆರಗು ಹೊದ್ದು ಮುಖ ಮುಚ್ಚಿಕೊಂಡು ಓಡಾಡುವ ಪ್ರತಿಮೆಯೇ ಆದೆ. ಅಶ್ವತ್ಥ ಮರದ ಬಳಿಗೆ ಬಂದರು.

ಅಲ್ಲಿಯೂ ಕೂಡಾ ಏನಾಯಿತು? ಏನಾಗಬೇಕಿತ್ತು? ಪೋಲೀಸು. ಸಿಪಾಯಿ. ಜನಜಂಗುಳಿ. ಊರಿನ ಪರಿಚಿತ ಮಂದಿ – ಎಲ್ಲರೂ ಅಲ್ಲಿದ್ದರು.

[illegible] ಸಂದೆ [illegible] ನೀಡುತ್ತಿದ್ದ ಹೇಳಿಕೆಗಳನ್ನು ಪೋಲೀಸರು ಬರೆದುಕೊಳ್ಳುತ್ತಿದ್ದರು. [illegible] ಬಗಳ ಹೊಡೆತ [illegible] ಇತ್ತು, ರಾತ್ರಿಯೆಲ್ಲ. [illegible] ಜೊತೆ [illegible]

ಮಗಳನ್ನು ಕಳಿಸುತ್ತಿರಲಿಲ್ಲ. ಆದರೆ ಆಗಬೇಕಾದ್ದನ್ನು ತಡೆಯುಲು ನಮ್ಮಿಂದ ಸಾಧ್ಯವಾಗಲಿಲ್ಲ ಪೋಲೀಸಪ್ಪ. ನಮ್ಮ ಹುಡುಗಿ ಪ್ರಾಣ ಕಳ್ಕೊಂಡಾಯ್ತು. ತಾಯಿ ಮನೇಲಿ ಪ್ರಜ್ಞೆಯಿಲ್ಲದೆ ಬಿದ್ದುಕೊಂಡಿದ್ದಾಳೆ."

ಈಸುರಿಯಾ ಉದ್ವಿಗ್ನತೆಯಿಂದ ಮುಂದಕ್ಕೆ ಓಡಿ ಬಂದು ಒಂದೇ ಸಮನೆ ಹೇಳೋಕೆ ಶುರು ಮಾಡಿದಳು.... "ಪೋಲೀಸಪ್ಪ, ನಿಜವಾಗಿ ನಡೆದದ್ದು ಏನೂಂದ್ರೆ?...."

ರನವೀರ ಮಾತನ್ನು ಮಧ್ಯದಲ್ಲಿಯೇ ತುಂಡರಿಸಿದ "ಅರೆ ಎಲ್ಲಿಗೆ ಓಡ್ತಾ ಇದ್ದೀಯ? ನಿನಗೆ ನ್ಯಾಯ ಸಿಕ್ಕೇ ಸಿಗುತ್ತೆ. ಆ ಕೊಲೆಗಡುಕನಿಗೆ ನೇಣು ಬಿಗಿಸದಿದ್ದರೆ, ನನ್ನ ಹೆಸರು ರನವೀರನೇ ಅಲ್ಲ. ಹೋಗು ಮನೆಗೆ. ಬಸುಮತಿಯನ್ನೂ ಹಾಗೇ ಕರ್ಕೊಂಡು ಹೋಗು ಜೊತೆಗೆ."

ಪಂಚನಾಮ ಮಾಡಿಸಿಯಾದ ಮೇಲೆ ರನವೀರ ಪೋಲೀಸು ಜೀಪನ್ನು ಹತ್ತಿ ಕುಳಿತ.

ಏನಾಗುತ್ತಿದೆ ಎಂದು ತಿಳಿಯದೆ ಅಸ್ಪಷ್ಟ ಆಲೋಚನೆಗಳಲ್ಲಿ ಜನ ತಮ್ಮ ತಮ್ಮ ಮನೆಗಳತ್ತ ಹೆಜ್ಜೆ ಹಾಕಿದರು.

ಹಿಂತಿರುಗಿ ಬಂದವಳೇ ಅಂಗಳದಲ್ಲಿ ನೊಂದ ಹೆಂಗಸರ ಮಧ್ಯೆ ಕುಳಿತೆ. ನನಗಂತೂ ನನ್ನ ಮನೆಯಿಂದಲೇ ಶವಯಾತ್ರೆ ಹೊರಟಂತೆನಿಸಿತು.

ಹಲವಾರು ಸಂಕೀರ್ಣ ಪ್ರಶ್ನೆಗಳು ಅಕ್ಕಪಕ್ಕದವರ ಕಣ್ಣುಗಳಲ್ಲಿ ಕಾಣಿಸಿದವು. 'ಪತಿ-ಪತ್ನಿ' ಎಂಬ ಪವಿತ್ರ ಸಂಬಂಧದ ಆಳದಲ್ಲಿ ಭಯತ್ರಸ್ತ ಹಕ್ಕಿ ಮತ್ತು ಬಲಿಷ್ಠ ಬೇಟೆಗಾರ ಸಂಬಂಧವೇ ಇರುವಂತೆ ಗೋಚರಿಸಿತು.

ಅಹಂಕಾರಮೂಲವಾದ ಆತ್ಮೀಯತೆಯನ್ನು ಹೆಂಗಸರು ಗುರುತಿಸಬಲ್ಲರೇ? ಹಾಗಿಲ್ಲದಿದ್ದಲ್ಲಿ ಅವರೇಕೆ ಮೂಕರಂತೆ ಕಿವುಡರಂತೆ ಏನನ್ನೂ ಕೇಳಿಸಿಕೊಳ್ಳದೆ ಎದ್ದು ಹೋಗುತ್ತಿದ್ದರು?

ಬರೀ ಪ್ರಶ್ನೆ. ಪ್ರಶ್ನೆಗೆ ಪ್ರತಿ ಪ್ರಶ್ನೆ ಇಲ್ಲ.

ಕಾಲ ಸರಿಯುತ್ತಾ ಹೋಯಿತು. 'ಪ್ರಮುಖ' ಚುನಾವಣೆ ಬಂತು.

ರನವೀರನೂ ಸ್ಪರ್ಧಾಳು ಆಗಿದ್ದ.

ಇತ್ತೀಚೆಗೆ ಉಸಿರಾಡಲೂ ಪುರಸೊತ್ತು ಇರಲಿಲ್ಲ. ನನಗೂ ಮನೇಲಿ ಕೈತುಂಬ ಕೆಲಸವಿತ್ತು. ಬೆಳಿಗ್ಗೆ ಒಲೆಮುಂದೆ ಕೂತರೆ, ರಾತ್ರಿಗೇ ಮುಗೀತಿದ್ದದ್ದು. ಊಟಗಳೆಲ್ಲ ಮುಗಿದ ಮೇಲೆ. ಹಾಸೋದು ಹೊದೆಯೋದು ವ್ಯವಸ್ಥೆ! ಹೋಗಿ ಬರುವವರಿಂದಾಗಿ ಮನೆ ಮದುವೆ ಗದ್ದಲದಿಂದ ತುಂಬಿದ ಹಾಗಿತ್ತು.

ರನವೀರ ಹೇಳೋದೇನೂಂದ್ರೆ ಹಳ್ಳಿ ಮಂದಿ ನಾವು ತಿಳಿದುಕೊಂಡಷ್ಟು ಮುಗ್ಧರಲ್ಲ. ರಾಜಕೀಯದ ಚಕ್ರವ್ಯೂಹದಲ್ಲಿ ಪ್ರವೇಶಿಸಿ ನುರಿತವನಾದರೆ, ಪಟ್ಟಣದ ಎಂಥೆಂಥ ರಾಜಕಾರಣಿಗಳಿಗೂ ನೀರು ನೀರು ಕುಡಿಸಿ ಬಿಡ್ತಾರೆ.

ರನವೀರನಿಗೆ ಒಬ್ಬೊಬ್ಬ ಪ್ರಧಾನನ ಪಟ್ಟುಗಳನ್ನೂ ಸಾಧಿಸಿಕೊಳ್ಳಬೇಕಿತ್ತು.

ನನಗೆ ನೆನಪಿದ್ದ ಹಾಗೆ. ತಹಸೀಲ್ದಾರ ಕಛೇರಿಯಲ್ಲಿನ ಅಧಿಕಾರಿಗಳೆಲ್ಲ ಬಂದು ಬಂದು ರನವೀರನಿಗೆ ಸಲಾಮು ಹೊಡೆದರು. ರಾಜಕೀಯ ಚರ್ಚೆ ಎಲ್ಲೀವರೆಗೆ ಬಂತೂಂದ್ರೆ, 'ಪ್ರಮುಖ' ಸ್ಥಾನದ ನಂತರ ರನವೀರ ಎಂ.ಎಲ್.ಎ. ಗೆ ಸ್ಪರ್ಧಿಸಬೇಕೂಂತ ತೀರ್ಮಾನ ಮಾಡೋವರೆಗೆ!

ಸರಿಯಾದ ತೀರ್ಮಾನವೇ! ರನವೀರ ಬಹಳ ಚತುರ. ಬರೀ ಬೀಡಿ–ಹೆಂಡಗಳ ಮೇಲೆ ಗೆಲವು ಸಾಧ್ಯವಿಲ್ಲ. ಗೌರವ–ವಿನಯಗಳಲ್ಲಂತೂ ಮೊದಲಿಗೇ ನಂಬಿಕೆಯಿಲ್ಲ. ದರಿಯಾಪುರದವರು ಅದಕ್ಕೇ ಅವರಿಂದ ಬೇರೆಯಾಗಲು ಸಾಧ್ಯವಾಗಲಿಲ್ಲ. ಆದಾಗ್ಯೂ ವಿರೋಧ ಪಕ್ಷದಲ್ಲಿ ನಿಂತವನು ಅವರ ಸಂಬಂಧಿಯೇ ಆಗಿದ್ದ. ವರದಕ್ಷಿಣೆ ಸಂಬಂಧದ ಒಂದು ಕೇಸಿನಿಂದ ದೇವರ ಹಾಗೆ ಬಿಡಿಸಿಕೊಂಡು ಬಂದಿದ್ದ ರನವೀರ. ಇಲ್ದೆ ಇದ್ದಿದ್ದರೆ, ಇಪ್ಪತ್ತು ಸಾವಿರ ವರದಕ್ಷಿಣೆಗಾಗಿ ನನ್ನನ್ನು ಸುಟ್ಟರು ಅಂತ ಸೊಸೆ ಹೇಳಿಕೆಯಿಂದ ಮರಣ ದಂಡನೆ ಆಗುತ್ತಿತ್ತು.

ಅಪ್ಪ–ಮಗ ಇಬ್ಬರೂ ನೇಣಿಗೆ ಗುರಿಯಾಗುತ್ತಿದ್ದರು. ಇಲ್ಲವೆ ಅಜೀವ ಕಾರಾವಾಸ ಆಗುತ್ತಿತ್ತು. ರನವೀರನ ದಯೆಯಿಂದ ಇವತ್ತಿಗೂ ಮರ್ಯಾದೆ ಉಳ್ಕೊಂಡು ಬಂದಿದೆ.

ಚುನಾವಣೆಯ ಬೀಸು ಹೇಗಿತ್ತೂಂದ್ರೆ. ಯಾರಿಗೂ ಎದುರಿಸಿ ನಿಲ್ಲೋಕೆ ಸಾಧ್ಯವಾಗಲಿಲ್ಲ. ಕಡೆಗೆ ಉಳಿದುಕೊಂಡದ್ದು ಒಬ್ಬನೇ ಒಬ್ಬ ಸ್ಪರ್ಧಿ. ಅವನೇ ಕಮ್ಮಾರನ ಮಗ.

ಬಹುಶಃ ಅವನು ಬಹಳ ಮುಗ್ಧನಾಗಿದ್ದ.

ರನವೀರ ಬೆಳಗ್ಗೆಯೇ ಎದ್ದು ಹೋದ. ಸಂಜೆಗೆ ನನಗಾಗಿ ಜೀಪ್ ಕಳಿಸಿದರು.

ಮನೆ ಕೆಲಸ ಮುಗಿಯುತ್ತಲೇ ಇರಲಿಲ್ಲ. ಆದರೂ ಹೇಗೋ ತಲುಪಿದೆ. ಹೋಗದಿದ್ದರೂ ಅಂತಹ ವ್ಯತ್ಯಾಸವೇನೂ ಆಗ್ತಿರಲಿಲ್ಲ. ರನವೀರನಿಗೂ ಇದನ್ನೇ ಹೇಳಿದೆ. ಅವನೂ ಕೇಳಲಿಲ್ಲ. ಪ್ರಮುಖನ ಹೆಂಡತಿಯೇ ಓಟು ಹಾಕಲು ಬರಲಿಲ್ಲ ಅಂತ ಜನ ಆಡಿಕೊಳ್ಳುತ್ತಾರೆ ಅಂತ ಹೇಳಲು ಶುರು ಮಾಡಿದ.

ಓಟು ಹಾಕಿ ಹಿಂತಿರುಗಿದೆ.

ರನವೀರ [illegible]

ಜೀಪಿನ ಲೈಟು ನೋಡುತ್ತಿದ್ದಂತೆಯೇ ಜನ ಎಲ್ಲಿ ಕಡೆಯಿಂದ ಮನೆ ಹತ್ತಿರ ಬಂದು ಗುಂಪು ಗೂಡಿದರು.

ರನವೀರ ದಿವಾನ್‌ಖಾನೆಗೆ ಬಂದ. ಬಹಳ ದಣಿದ ಹಾಗಿದ್ದ. ಹಣೆ ಮೇಲೆ ಬೆವರಿನ ಹನಿಗಳು ಕಾಣಿಸಿದವು.

ನೀರಿನ ಲೋಟ ಹಿಡಿದು ಬಳಿಗೆ ಹೋದೆ.

ಅವನು ಸುಮ್ಮನಿದ್ದ.

ಅವನಿದ್ದ ಸ್ಥಿತಿ ನೋಡಿ, ಜನ ಮೆಲ್ಲಗೆ ಅಲ್ಲಿಂದ ಚದುರಿದರು. ನಾವಿಬ್ಬರೇ ಇದ್ದಾಗ ಮೆಲ್ಲನೆ ಹಣೆ ನೇವರಿಸಿದಾಗ ಇನ್ನಷ್ಟು ಗಂಭೀರನಾದ. ಮೊಗದಲ್ಲಿ ಒಂದು ಬಗೆಯ ದೈನ್ಯತೆ ಕಾಣಿಸಿಕೊಂಡಿತು.

ಸ್ವಲ್ಪ ಹೊತ್ತಿನ ನಂತರ ಮರಳಿದ ಮೇಲೆ ಬಿದ್ದ ಮೀನಿನ ಹಾಗೆ ಚಡಪಡಿಸಿದ. ಅರ್ಥ ಮಾಡಿಕೊಳ್ಳೋಕೆ ಕಷ್ಟವಾಗಲಿಲ್ಲ. ಸೋತಿದ್ದಕ್ಕಾಗಿ ಸಮಾಧಾನ ಹೇಳಲು ತೊಡಗಿದೆ. "ಧೈರ್ಯ ತಗೋ. ಪ್ರಯತ್ನ ಪಡೋದು ನಿನ್ನ ಕರ್ತವ್ಯ. ಸೋಲು-ಗೆಲುವು ಅನ್ನೋದು ಇದ್ದೇ ಇರುತ್ತೆ."

ಧೈರ್ಯ ತುಂಬುತ್ತಿದ್ದೆನಾದರೂ ಒಳಗೆ ನೋವಾಗುತ್ತಿತ್ತು. ಕೈಕಾಲು ಒತ್ತುತ್ತಿದ್ದೆ. ಒಳಗಿನಿಂದ ಚಿಲಕ ಹಾಕಿದೆ.

ಮಾಸ್ತರರೇ, ನಾನು ಬರೆಯ ಬೇಕೂಂತೇನಿಲ್ಲ. ಗಂಡನಿಗೆ ಎಷ್ಟು ರೀತಿಯಿಂದ ಸಾಧ್ಯವೋ ಅಷ್ಟೂ ರೀತಿಯಿಂದ ಸಮಾಧಾನ ಹೇಳುತ್ತಿದ್ದೆ. ಕಾಯಾ ವಾಚಾ ಮನಸಾ ಅವರ ನೋವಿನ ಬೇಗೆಯನ್ನು ದೂರ ಮಾಡಬೇಕೆಂದು ಬಯಸುತ್ತಿದ್ದೆ.

ಒಂದೇ ಸಮನೆ ಮಾತಾಡುವುದರಲ್ಲೇ ಮುಳುಗಿದ್ದ... "ಆ ಪ್ರಮಾಣಗಳು, ಭರಸೆಗಳು..... ಎಲ್ಲ ಭ್ರಮೆ ಬಸುಮತಿ!"

"ಮೋಸವೇನಾದರೂ?"

ತೀರಾ ಖಾಸಗಿಯಾದ ಏಕಾಂತದ ಆ ಕ್ಷಣಗಳಲ್ಲಿ ಹೊರಗೆ, ದೇವವೀರ ಯಾರಿಗೋ ಹೇಳುತ್ತಿದ್ದ. "ಒಂದೇ ಒಂದು ಓಟು ಹೆಚ್ಚಿಗೆ ಬಿದ್ದಿದ್ದರೆ ಅಣ್ಣ ಸೋಲುತ್ತಿರಲಿಲ್ಲ" ಎಂದದ್ದು ಕೇಳಿಸಿತು.

"ಒಂದೇ ಓಟು!"

ನನಗೆ ನಂಬಿಕೆಯಾಗಲಿಲ್ಲ.

ನನ್ನೊಳಗೆ ಹೊಯ್ದಾಟ ಶುರುವಾಯಿತು.

ಓ ಅಗ್ನಿದೇವರೆ! ಸಪ್ತಪದಿ ತುಳಿಸಿದ ಮಹಾಪಂಡಿತರೇ! ಓ ನನ್ನ ತಂದೆ ತಾಯಿಯರೇ! ಮಾಸ್ತರರೇ, ತಾವು! ನನ್ನ ಗುರುವರ್ಯರು!... ನನ್ನನ್ನು ಸುಖ ದುಃಖಗಳಲ್ಲಿ ಸಹಭಾಗಿನಿಯಾಗಿ, ಅರ್ಧಾಂಗಿಯಾಗಿ, ಸಖಿಯಾಗಿ, ರನವೀರನ ಮಡದಿ ಹೆಸರಿನಲ್ಲಿ ಇರುವಂತೆ ಉಪದೇಶಿಸಿದ್ದಿರಿ.

ಆದರೆ ನಾನೇನು ಮಾಡಲಿ?

ನನ್ನೊಳಗಿನ ಈಸುರಿಯಾಳನ್ನು ಕೊಲ್ಲಲು ನನ್ನಿಂದ ಆಗಲಿಲ್ಲ.

ಕ್ಷಮೆಯಿರಲಿ.

ತಮ್ಮ ಬಸುಮತಿ.

ಮೂಲ : ಮೈತ್ರೇಯಿ ಪುಷ್ಪಾ (ಹಿಂದಿ)

\+ + +

ಚೀನೀ ಕಥೆಗಳು

(ಲುಷನ್‌ರ ಎರಡು ನೀಳ್ಗತೆಗಳು)

ಕಥೆಗಾರ ಲುಷನ್‌ರ ಬಗ್ಗೆ ಒಂದೆರಡು ಮಾತು

೧೮೮೧-೧೯೩೬ರ ನಡುವಿನಲ್ಲಿ ಬದುಕಿದ್ದ ಲುಷನ್ ಚೀನಾದ ಅತ್ಯಂತ ಪ್ರಭಾವಿ ವ್ಯಕ್ತಿ. ಚಿಂತಕ, ಕ್ರಾಂತಿಕಾರಿ ಮನೋಭಾವದ ಲುಷನ್ ಸಮಾಜದ ಕೆಳವರ್ಗದವರ ಬಗ್ಗೆ ಅತ್ಯಂತ ಕಾಳಜಿಯುಳ್ಳವನಾಗಿದ್ದ. ಇದೇ ಕಾರಣದಿಂದಾಗಿ ೧೯೧೧ರಲ್ಲಿ ನಡೆದ ಪ್ರಜಾಪ್ರಭುತ್ವ ಕ್ರಾಂತಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ, ತನ್ನ ಸೃಜನಶೀಲ ಬರವಣಿಗೆಯನ್ನು ಈ ಕ್ರಾಂತಿ, ಹೋರಾಟದಲ್ಲಿ ಪ್ರಬಲ ಅಸ್ತ್ರವಾಗಿ ಬಳಸಿಕೊಂಡ. ೨೦೦೦ ವರ್ಷಗಳಿಗೂ ಹೆಚ್ಚಾಗಿ ದೇಶವನ್ನಾಳಿದ 'ಕಿಂಗ್' ವಂಶವನ್ನು ಗದ್ದುಗೆಯಿಂದ ಇಳಿಸಿದರೂ ಊಳಿಗಮಾನ್ಯ ವ್ಯವಸ್ಥೆಯಿಂದ ವಸಾಹತುಶಾಹಿ ವ್ಯವಸ್ಥೆಯಿಂದ ಪೂರ್ತಿಯಾಗಿ ಬಿಡುಗಡೆ ಹೊಂದಲು ಸಾಧ್ಯವಾಗಲಿಲ್ಲ. ಇದರ ಬಗ್ಗೆ ಲುಷನ್ ಗಂಭೀರವಾಗಿ ಚಿಂತನೆ ನಡೆಸಿ ಕ್ರಾಂತಿ ಚಳುವಳಿಯ ಸೋಲಿಗೆ ಕಾರಣಗಳನ್ನು ಕಂಡುಕೊಳ್ಳಲು ಪ್ರಯತ್ನಿಸಿದ. ಈತ ಎಡ ಪಂಥೀಯ ಸಾಂಸ್ಕೃತಿಕ ಚಳುವಳಿಯ ಮುಂಚೂಣಿಯಲ್ಲಿ ನಿಂತ. ಅಧ್ಯಕ್ಷರಾಗಿದ್ದ ಮಾವೋರವರು ಲುಷನ್ ಬಗ್ಗೆ ಮಾತನಾಡುತ್ತ, "ಆತ ಹಿಡಿದ ದಾರಿ ಚೀನಾದ ನವ ರಾಷ್ಟ್ರೀಯ ಸಂಸ್ಕೃತಿಯ ದಾರಿಯೇ ಆಗಿತ್ತು" ಎಂದು ಮುಕ್ತವಾಗಿ ಹೊಗಳಿದ್ದರು.

ಲುಷನ್ ಚೀನ ಸಂಸ್ಕೃತಿಗೆ ತನ್ನ ಅಪಾರವಾದ ಸಾಹಿತ್ಯ ರಾಶಿಯನ್ನು ಬಳುವಳಿಯಾಗಿ ಬಿಟ್ಟಿದ್ದಾನೆ. ತನ್ನ ಪ್ರಬಂಧಗಳನ್ನು, ಸಣ್ಣ ಕತೆಗಳನ್ನು ಹೋರಾಟದ ಸಂದರ್ಭಕ್ಕೆ ಬಳಸಿಕೊಂಡ. ಬರೆದದ್ದು ಕೇವಲ ಎಪ್ಪತ್ತು ಕವಿತೆಗಳು ಮಾತ್ರವಾದರೂ, ಚಿಕ್ಕ ಚಿಕ್ಕದಾದ ಆ ಕವಿತೆಗಳು ಕಲಾತ್ಮಕವಾಗಿ, ವೈಶಿಷ್ಟ್ಯ ಪೂರ್ಣವಾಗಿದ್ದು ಜನರ ಮನಸ್ಸನ್ನು ಸೆಳೆದುಕೊಂಡಿವೆ. ಬರೆಯುವುದಕ್ಕೆ ತೊಡಗಿಕೊಂಡಾಗ, ತನ್ನ ಕ್ರಾಂತಿ, ಹೋರಾಟಗಳನ್ನು ಮುಂದುವರೆಸಲು, ಹುಟ್ಟಿಗೊಳಿಸಲು ಕವಿತೆಗಳಲ್ಲಿರುವ ಪ್ರಚಂಡ ಶಕ್ತಿಯನ್ನು ಕಂಡುಕೊಂಡ. "ಆನ್ ಎ ಫೋಟೋಗ್ರಾಫ್ ಆಫ್ ಹಿಮ್‌ಸೆಲ್ಫ್" [illegible]

೧೯೧೯ರಲ್ಲಿ, ಅಕ್ಟೋಬರ್ ಕ್ರಾಂತಿಯಿಂದ ಪ್ರಭಾವಿತವಾಗಿ ಚೀನ ದೇಶ ಕ್ರಾಂತಿಕಾರಿ ಸಾಹಿತ್ಯ ಚಳುವಳಿಯೊಂದನ್ನು ಹುಟ್ಟು ಹಾಕಿತು. 'ಊಳಿಗಮಾನ್ಯ' ವ್ಯವಸ್ಥೆಯನ್ನು ವಿರೋಧಿಸುವ ಹಿನ್ನೆಲೆಯೊಂದಿಗಿದ್ದ ಈ ಚಳುವಳಿ ಜನಸಾಮಾನ್ಯರ ಭಾಷೆಯಲ್ಲಿ ಸಾಹಿತ್ಯ ರಚನೆಯಾಗಬೇಕೆಂದು ಒತ್ತು ನೀಡಿತು. ಲುಷನ್ ಇದರಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಕತೆಗಳನ್ನು, ಪ್ರಬಂಧಗಳನ್ನು ಮತ್ತು ಕವಿತೆಗಳನ್ನೂ ಬರೆದ. ಅದೆಲ್ಲವೂ ಜನಸಾಮಾನ್ಯರ ಭಾಷೆಯಲ್ಲಿಯೇ ಇತ್ತು.

ಒಂದಷ್ಟು ಕವಿತೆಗಳನ್ನು ಬರೆದರೂ, ಕವಿತೆ ಅವನ ಪ್ರೀತಿಯ ಮಾಧ್ಯಮವಾಗಿರಲಿಲ್ಲ. ತನ್ನ ದುಗುಡ, ಹತಾಶೆ, ಇತ್ಯಾದಿ ಸಂದರ್ಭಗಳಲ್ಲಿ ತನ್ನ ಬದುಕಿನ ಅನುಭವದ ಕಣಗಳನ್ನು ತಾನು ಭೇಟಿಯಾಗುತ್ತಿದ್ದ ವ್ಯಕ್ತಿಗಳನ್ನು ಕತೆಯಾಗಿಸುವ ಪ್ರಯತ್ನದಲ್ಲಿ ತೊಡಗಿಸಿಕೊಂಡ. ಲುಷನ್‌ನ ಕತೆಗಳಲ್ಲಿ ಕಾಣುವ ಸರಳತೆ, ವಾಸ್ತವತೆ, ಆಪ್ತತೆ, ಪ್ರಾಮಾಣಿಕತೆಗಳು – ಅವನ ಕತೆಗಳ ವೈಶಿಷ್ಟ್ಯಗಳಾಗಿವೆ. ತನ್ನ ಕತೆಗಳ ಬಗ್ಗೆ ಒಂದು ಕಡೆ ಆತ, "ನನ್ನ ಕತೆಗಳಲ್ಲಿ ಕಲಾತ್ಮಕತೆಯ ಕೊರತೆಯಿದೆ. ಆದರೂ ಅವುಗಳನ್ನು ಕತೆಗಳೆಂದು ಗುರುತಿಸಿ ಒಂದು ಸಂಕಲನವಾಗಿ ಹೊರತರುತ್ತಿರುವುದು ನನ್ನ ಅದೃಷ್ಟ. ಈ ಅದೃಷ್ಟವನ್ನು ನೆನಸಿಕೊಂಡಾಗಲೂ ನನಗೆ ಸಂಕೋಚವಾಗುತ್ತದೆ. ಆದರೆ ಇಷ್ಟೊಂದು ಸಂಖ್ಯೆಯ ಓದುಗರು ನನ್ನ ಕತೆಗಳಿಗಿದ್ದಾರೆಂಬುದೇ ನನಗೆ ಹೆಚ್ಚಿನ ಸಂತೋಷವನ್ನುಂಟು ಮಾಡಿದೆ." ಎಂದು ಹೇಳುವಲ್ಲಿ ಲುಷನ್‌ರ ವಿನಯ ಎದ್ದು ಕಾಣುತ್ತದೆ.

ಆಹ್ ಕ್ಯೂನ ನೈಜಕತೆ

ಬಹಳ ವರ್ಷಗಳಿಂದ ಆಹ್ ಕ್ಯೂನ್ ನೈಜಕತೆಯನ್ನು ಬರೆಯಬೇಕೆಂದುಕೊಳ್ಳುತ್ತಿದ್ದೇನೆ. ಬರೆಯುವ ಆಸೆಯೇನೋ ಇದೆಯಾದರೂ. ನಾನು ಅಂತಹ ಒಳ್ಳೆಯ ಬರಹಗಾರನಲ್ಲವಾದ್ದರಿಂದ ಬರೆಯಲು ಒಂದು ಥರಾ ಹೆದರಿಕೆ. ಅಮರನಾಗಿ ಉಳಿಯಬಲ್ಲ ವ್ಯಕ್ತಿಯನ್ನು ಅಮರವಾಗಿಸಲು, ಅಮರವಾದ ಲೇಖನಿಯೊಂದರ ಅಗತ್ಯವಿದೆ. ಅಮರನಾಗುವ ವ್ಯಕ್ತಿಯ ಕಾರ್ಯಗಳನ್ನು ದಾಖಲಿಸಿ, ಮುಂದಿನ ತಲೆಮಾರುಗಳಿಗೆ ಆತನನ್ನು ಪರಿಚಯಿಸಲು, ಆತನ ಮೂಲಕ ಬರವಣಿಗೆಯನ್ನು ಮುಂದಿನ ಪೀಳಿಗೆಗಳಿಗೆ ಉಳಿಸಲು ಅದ್ಭುತವಾದ ಲೇಖನಿಯು ಬೇಕಾಗುತ್ತದೆ. ಯಾವುದು ಯಾವುದರಿಂದ ಪರಿಚಯವಾಗಬಲ್ಲುದೆಂದು ಹೇಳುವುದು ಸ್ಪಷ್ಟವಾಗಿಲ್ಲ. ಆದರೂ ನನ್ನಲ್ಲಿ ಏನೋ ಆವೇಶ ಬಂದಂತಾಗಿ ಆಹ್ ಕ್ಯೂನ ಕತೆಯನ್ನು ಬರೆಯಲೇಬೇಕೆಂಬ ನಿಲುವಿಗೆ ಬಂದಿದ್ದೇನೆ.

ನಾನು ಬರೆಯಲು ಆರಂಭಿಸಿದ್ದೇ ತಡ. ಇಂತಹ ಅಮರವಾದ್ದನ್ನು ಬರೆಯಲು ಎಷ್ಟು ಕಷ್ಟ ಎಂಬ ಅರಿವುಂಟಾಯಿತು. ಅದನ್ನು ಏನೆಂದು ಕರೆಯಬೇಕೆಂಬುದು ಮೊದಲ ಪ್ರಶ್ನೆಯಾಯಿತು. ಕನ್‌ಫ್ಯೂಶಿಯಸ್ ಹೇಳಿದ "ಹೆಸರು ಸರಿಯಿಲ್ಲದಿದ್ದರೆ, ಶಬ್ದಗಳಲ್ಲಿ ಸತ್ಯ ಕೇಳಿಸುವುದಿಲ್ಲ." ಈ ನಾಣ್ಣುಡಿಯನ್ನು ಬಹಳ ಜಾಗರೂಕತೆಯಿಂದ ಗಮನಿಸಬೇಕಾಗುತ್ತದೆ. ಎಷ್ಟೊಂದು ಬಗೆಯ ಜೀವನ ಚರಿತ್ರೆಗಳಿವೆ. ಅಧಿಕೃತ, ಅನಧಿಕೃತ, ಪುರಾಣಗಳು, ಪೂರಕ ಚರಿತ್ರೆಗಳು ವಂಶ ಚರಿತ್ರೆಗಳು. ಚಿತ್ರಗಳು – ಇತ್ಯಾದಿ ಇತ್ಯಾದಿ. ಆದರೆ ಇವುಗಳಲ್ಲಿ ಯಾವೊಂದೂ ನನ್ನ ದೃಷ್ಟಿಗೆ ಸಮುಚಿತವೆನಿಸಲಿಲ್ಲ. ಅಧಿಕೃತ ಜೀವನ ಚರಿತ್ರೆ? ಇದು ಪ್ರಮುಖ ವ್ಯಕ್ತಿಗಳ ಚರಿತ್ರೆಯ ಜೊತೆಗೆ ಸೇರಿಸಲಾಗುವುದಿಲ್ಲ. ಆತ್ಮ ಚರಿತ್ರೆ?... ನಾನಂತೂ ಆಹ್ ಕ್ಯೂ ಅಲ್ಲ. ಹೋಗಲಿ ಇದನ್ನು ಅನಧಿಕೃತ ಜೀವನ ಚರಿತ್ರೆ ಎನ್ನೋಣವೆಂದರೆ ಅಧಿಕೃತ ಜೀವನ ಚರಿತ್ರೆ ಎಲ್ಲಿದೆ? ಪುರಾಣ ಎನ್ನುವುದೇ? ಆಹ್ ಕ್ಯೂ ಪುರಾಣ ವ್ಯಕ್ತಿ ಅಲ್ಲವೇ ಅಲ್ಲ. ಪೂರಕ ಚರಿತ್ರೆ ಎನ್ನಲು ನಾನು ಅಧ್ಯಕ್ಷರೂ ರಾಷ್ಟ್ರೀಯ ಇತಿಹಾಸ ಸಂಸ್ಥೆಗೆ ಆಹ್ ಕ್ಯೂನ

ಪ್ರಮಾಣ ಬದ್ಧ ಚರಿತ್ರೆಯನ್ನು ಬರೆಯಲು ಆದೇಶಿಸಿಲ್ಲ. ಅಧಿಕೃತ ಇಂಗ್ಲಿಷ್ ಇತಿಹಾಸದಲ್ಲಿ ಜೂಜುಗಾರರ ಜೀವನ ಚರಿತ್ರೆಗಳು ಇಲ್ಲವೆನ್ನುವುದು ಸತ್ಯ. ಆದರೆ ಕೊನಾನ್ ಡೈಲ್ ರೋಡ್ನಿ ಸ್ಟೋನ್ ಎಂಬುದನ್ನು ಬರೆದಿದ್ದಾನೆ. ಅವನಂತಹ ವ್ಯಕ್ತಿಗೆ ಅದನ್ನು ಬರೆಯಲು ಅಧಿಕಾರ ಇದೆ. ಆದರೆ ನನ್ನಂತಹ ಸಾಮಾನ್ಯನಿಗೆ?... ಸಾಧ್ಯವೇ ಇಲ್ಲ. ವಂಶ ಚರಿತ್ರೆ ಎಂದುಕೊಂಡರೆ. ನಾನು ಆಹ್ ಕ್ಯೂ ವಂಶಕ್ಕೆ ಸೇರಿದವನೇ? ಅಲ್ಲವೇ? ಗೊತ್ತಿಲ್ಲ. ಅವನ ಮಕ್ಕಳಾಗಲೀ ಮೊಮ್ಮಕ್ಕಳಾಗಲೀ, ಅವನ ಇತಿಹಾಸವನ್ನು ಬರೆಯಲು ನನ್ನನ್ನು ಕೇಳಿಕೊಳ್ಳಲೂ ಇಲ್ಲ. ನನಗೆ ಒಪ್ಪಿಸಿಯೂ ಇಲ್ಲ. ಚಿತ್ರವೆಂದರೆ ಅದೂ ಸರಿಯಾಗುವುದಿಲ್ಲ. ಯಾಕೆಂದರೆ ಆಹ್ ಕ್ಯೂನ ಪೂರ್ಣ ವಿವರಗಳಿಲ್ಲ. ಸಂಕ್ಷೇಪವಾಗಿ ಹೇಳುವುದಾದರೆ ಇದು 'ಜೀವನ.' ನಾನು ತೀರಾ ಸಾಮಾನ್ಯವಾದ ಜನರ ಆಡು ಭಾಷೆಯಲ್ಲಿ ಬರೆಯಲು ಹೊರಟಿರುವುದರಿಂದ ಅದ್ದೂರಿ ಶೀರ್ಷಿಕೆಯನ್ನೂ ಕೊಡಲಾಗುವುದಿಲ್ಲ. ಆದ್ದರಿಂದ, ಮೂರು ಸಂಪ್ರದಾಯಗಳ, ಒಂಬತ್ತು ಶೈಲಿಗಳ ಗುಂಪಿಗೆ ಸೇರದ ಕಾದಂಬರಿಕಾರರು ಸಾಮಾನ್ಯವಾಗಿ ಬಳಸುವ ವಾಕ್ಯ ಖಂಡಗಳಿಂದಲೇ ತೆಗೆದುಕೊಳ್ಳುತ್ತೇವೆ. ಇನ್ನು ಈ ವಿಷಯಾಂತರ ಸಾಕು: ಸತ್ಯಕತೆಯತ್ತ ತಿರುಗೋಣ! ಇದರಲ್ಲಿ ಕಡೆಯಲ್ಲಿನ ಎರಡು ಪದಗುಚ್ಛಗಳನ್ನು ತೆಗೆದುಕೊಳ್ಳುತ್ತೇನೆ. ನೋಡು ಎರಡು ಪದಗುಚ್ಛಗಳನ್ನು ತೆಗೆದುಕೊಳ್ಳುತ್ತೇನೆ. ನೋಡುತ್ತೇನೆ ಎಷ್ಟರಮಟ್ಟಿಗೆ ಹಿಂದಿನ ಕಾಲದ ಟ್ರೂ ಸ್ಟೋರಿ ಆಫ್ ಕ್ವಾಲಿಗ್ರಫಿಯನ್ನು ನೆನಪಿಸುತ್ತದೆ!

ನನಗೆ ಎದುರಾಗಿರುವ ಮತ್ತೊಂದು ತೊಂದರೆ ಅಂದ್ರೆ, ಈ ಬಗೆಯ ಜೀವನ ಚರಿತ್ರೆ, ಅಂದರೆ ಸಾಮಾನ್ಯವಾಗಿ ಪ್ರಾರಂಭವಾಗುವ ಇಂತಿಂಥಾದ್ದು, ಇಂಥವನ ಹೆಸರು, ಇಂಥಾದ್ದು, ಇಂಥವನದು, ಇಂಥಾ ಊರು, ಇತ್ಯಾದಿ. ಆದರೆ ಆಹ್ ಕ್ಯೂನ ಉಪನಾಮ ಏನೆಂದು ನನಗೆ ಗೊತ್ತಿಲ್ಲ. ಒಂದು ಸಲ ಅವನನ್ನು ಚಾನ್ ಎಂದು ಹೆಸರಿಸಿದ್ದರು. ಆದರೆ ಮಾರನೇ ದಿನ ಇದೇ ವಿಷಯದ ಮೇಲೆ ಸ್ವಲ್ಪ ಗೊಂದಲ ಇತ್ತು. ಮಿಸ್ಟರ್ ಚಾವೋನ ಮಗ ಊರಿನ ಪರೀಕ್ಷೆ ಪಾಸಾಗಿ, ಪಾಸಾದದ್ದನ್ನು ಊರಿಗೆಲ್ಲ ಘೋಷಿಸಿದ ಮೇಲೆ ಇಂತಹ ಗೊಂದಲ ಶುರುವಾಯಿತು. ಆಹ್ ಕ್ಯೂ ಹಳದಿ ದ್ರವದ ಎರಡು ಬಟ್ಟಲನ್ನು ಕುಡಿದ ಮೇಲೆ, ಈ ಪಾಸಾಗಿರುವ ವಿಷಯ ತನಗೂ ಹೆಸರು ತರುವಂಥಾದ್ದು ಎಂದು ಹೇಳಿಕೊಂಡು ಅಡ್ಡಾಡಿದ. ಯಾಕೆಂದರೆ, ಅವನೂ ಅದೇ ವಂಶಕ್ಕೆ ಸೇರಿದವನಾಗಿದ್ದ. ಸರಿಯಾಗಿ ಹೇಳಬೇಕೆಂದರೆ ಪಾಸಾದ ವಿದ್ಯಾರ್ಥಿಯ ಮೂರು ತಲೆಮಾರು ಹಿರಿಯನಾಗಿದ್ದ –ಎಂದೆಲ್ಲ ಹೇಳಿಕೊಂಡ. ಅಕ್ಕಪಕ್ಕದಲ್ಲಿ ನಿಂತಿದ್ದವರಿಗೂ ಸ್ವಲ್ಪ ಮುಜುಗರ ಎನಿಸಿತು. ಮಾರನೆ ದಿನ ಬೈಲಿಫ್ ಅಥವಾ ದಂಡಾಧಿಕಾರಿ ಆಹ್ ಕ್ಯೂನನ್ನು ಚಾನ್ ಮನೆಗೆ ಬರುವಂತೆ ಮಾಡಿದ. ಮುದಿ ಸಜ್ಜನ ಆತನ ಕಡೆ ನೋಡಿದ್ದೆ ಸಿಟ್ಟಿನಿಂದ ಕೆಂಪಾದ, ಗುಡುಗಿದ.

"ಆಹ್‌ಕ್ಯೂ, ಬಡ್ಡಿಮಗನೆ, ನಾನು ನಿನ್ನ ವಂಶಕ್ಕೆ ಸೇರಿದವನೆಂದು ಹೇಳಿದೆಯಾ?"

ಆಹ್ ಕ್ಯೂ ಮಾತಾಡಲಿಲ್ಲ.

ಅವನತ್ತ ನೋಡಿದ್ದಷ್ಟೂ ಚಾವ್ರೋ ಮತ್ತಷ್ಟು ಸಿಟ್ಟಾಗುತ್ತಿದ್ದ. ಒಂದೆರಡು ಹೆಜ್ಜೆ ಮುಂದೆ ಬಂದು ಹೇಳಿದ- "ಇಂಥ ತಲೆ ಹರಟೆ ಮಾತಾಡೋಕೆ ನಿನಗೆಷ್ಟೋ ಧೈರ್ಯ! ನಿನ್ನಂಥವನು ನನಗೆ ಬಂಧುವೆ? ನಿನ್ನ ಉಪನಾಮ ಚಾವ್ರೋ ನಾ?"

ಆಹ್ ಕ್ಯೂ ಉತ್ತರಿಸಲಿಲ್ಲ. ಅಲ್ಲಿಂದ ಕಾಲ್ತೆಗೆಯಲು ಯತ್ನಿಸುತ್ತಿದ್ದಂತೆ ಚಾವ್ರೋ ಅವನಿಗೆ ಹತ್ತಿರ ಬಂದು ಕೆನ್ನೆಗೆ ಬಂದು ಅಪ್ಪಳಿಸಿದ. "ಚಾವ್ರೋಂತ ಹೆಸರಿಡಲು ನೀನು ಯೋಗ್ಯನೇ? ಆ ಹೆಸರಿನ ಯೋಗ್ಯತೆ ನಿನ್ನಲ್ಲಿದೆಯೇನೋ?"

ಆಹ್ ಕ್ಯೂ ಆ ಹೆಸರನ್ನು ಸಮರ್ಥಿಸಿಕೊಳ್ಳುವ ಪ್ರಯತ್ನವನ್ನೇನೂ ಮಾಡಲಿಲ್ಲ. ಎಡಗೆನ್ನೆಯನ್ನು ಮೆಲ್ಲಗೆ ಸವರಿಕೊಳ್ಳುತ್ತ ಬೈಲಿಫ್‌ನ ಜೊತೆ ಹೊರಗೆ ಹೋದ. ಹೊರಗಡೆ ಬಂದ ಮೇಲೆ ಬೈಲಿಫ್‌ನಿಂದ ಇನ್ನಷ್ಟು ಬೈಸಿಕೊಳ್ಳಬೇಕಾಯಿತು. ಜೊತೆಗೆ ಇನ್ನೂರು ರೂಪಾಯಿ ಕಾಣಿಕೆ ನೀಡಬೇಕಾಯಿತು. ಇದನ್ನೆಲ್ಲ ಕೇಳಿದವರು, ಇಷ್ಟೊಂದೆಲ್ಲ ಹೊಡೆಸಿಕೊಳ್ಳೋ ಮುಠ್ಠಾಳತನಕ್ಕೆ ಯಾಕೆ ಹೋಗಬೇಕಿತ್ತು ಎಂದರು. ಅವನ ಉಪನಾಮ ಚಾವ್ರೋ ನೇ ಆಗಿದ್ದರೂ. (ನಿಜವಾಗಿ ಅದಾಗಿರಲಿಲ್ಲ) ಹೀಗೆಲ್ಲ ಪೂರ್ವಜರ ಬಗ್ಗೆ ಮಾತೇ ಇರಲಿಲ್ಲ. ಈಗಲೂ ನನಗೆ ಅವನ ನಿಜವಾದ ಉಪನಾಮ ಏನೆಂದು ಗೊತ್ತೇ ಇಲ್ಲ.

ಮೂರನೆ ತೊಂದರೆ ನನಗೆ ಎದುರಾದದ್ದು, ಇದನ್ನು ಬರೆಯುವಾಗ ಎಂದರೆ. ಆಹ್ ಕ್ಯೂನ ಖಾಸಗಿಯಾಗಿ ಅಥವಾ ವೈಯಕ್ತಿಕವಾಗಿ ಹೇಗೆ ಬರೆಯಬೇಕು ಅನ್ನೋದು! ಅವನು ಬದುಕಿದ್ದಾಗ ಪ್ರತಿಯೊಬ್ಬರೂ ಅವನನ್ನು ಆಹ್ ಕೀ ಎಂದು ಕರೆಯುತ್ತಿದ್ದರು. ಆದರೆ ಅವನು ಸತ್ತ ಮೇಲೆ ಯಾರೊಬ್ಬರೂ ಆ ಹೆಸರನ್ನು ಮತ್ತೆ ಪ್ರಸ್ತಾಪ ಮಾಡಲಿಲ್ಲ. ಯಾಕೆಂದ್ರೆ ಮರದ ಹಲಗೆ ಮೇಲೋ ಸಿಲ್ಕ್ ಪರದೆಗಳ ಮೇಲೋ ಬರೆದು ಉಳಿಸಿಕೊಳ್ಳಬೇಕಾದಂತಹ ಹೆಸರಾಗಿರಲಿಲ್ಲ ಅವನದು. ಅವನ ಹೆಸರನ್ನು ಉಳಿಸಿಕೊಳ್ಳುವ ಪ್ರಮೇಯವೇನಾದರೂ ಬಂದಲ್ಲಿ ಈ ಲೇಖನವೇ ಮೊಟ್ಟ ಮೊದಲನೆಯದಾಗುತ್ತೆ. ಅಷ್ಟರಿಂದಲೇ ನನಗೆ ಪ್ರಾರಂಭದಲ್ಲಿಯೇ ಇಂತಹ ಸಮಸ್ಯೆಗಳು ಎದುರಾದದ್ದು. ನಾನು ಕೀ ಶಬ್ದದ ಬಗ್ಗೆ ಯೋಚಿಸುತ್ತಿದ್ದೇನೆ. ಯಾವ ಅರ್ಥದಲ್ಲಿ ಆ ಹೆಸರನ್ನು ಬಳಸಬೇಕೂಂತ! ಈ ಶಬ್ದಕ್ಕೆ ಕ್ಯಾಸಿಯಾ (ಒಂದು ಜಾತಿಯ ಗಿಡ) ಅಥವಾ ಸೊಬಗು (ಯೋಗ್ಯತೆ) ಅನ್ನುವ ಅರ್ಥಗಳಿವೆ. ಅವನಿಗೆ ಮೂನ್ ಪೆವಿಲಿಯನ್ ಅಂತ ಹೆಸರು ಇದ್ದಿದ್ರೆ. ಅಥವಾ ಮೂನ್ ಫೆಸ್ಟಿವಲ್ (ಚಂದ್ರಪರ್ವ ಅಥವಾ ಚಂದ್ರನಲ್ಲಿ ಕ್ಯಾಸಿಯಾ ಮರ ಬೆಳೆಯುತ್ತದೆಯೆಂದು ಚೀನೀಯರ ಜಾನಪದ ಕತೆಗಳಲ್ಲಿ ಒಂದು ಉಲ್ಲೇಖವಾಗಿ ಕಾಣಿಸುತ್ತದೆ) ಇದ್ದಿದ್ದರೆ ಅವನಿಗೆ ಬೇರೆ ಹೆಸರು ಇರಲಿಲ್ಲ. [illegible] ಯಾಕೆಂದರೆ [illegible] [illegible] ಒಂದು ಬೇರೆ [illegible]

ಹಿರಿಯಣ್ಣನೋ, ತಮ್ಮನೋ ಇದ್ದಿದ್ದರೆ ಆಹ್ ಕ್ಯೂ ಅನ್ನೋ ಹೆಸರು ಅವರದಾಗಿದ್ದರೆ, ಇವನನ್ನು ಖಂಡಿತ ಕೀ ಅಂತ ಕರೆಯಬಹುದಾಗಿತ್ತು. ಅವನೊಬ್ಬನೇ ಇದ್ದದ್ದು. ಆದ್ದರಿಂದ ಖಂಡಿತವಾಗಿಯೂ ಯೋಗ್ಯತೆ ಅರ್ಥದಲ್ಲಿನ ಕೀ ಹೆಸರನ್ನು ಇಟ್ಟು ಸಮರ್ಥಿಸಿಕೊಳ್ಳುವುದು ಸಾಧ್ಯವಾಗುವುದಿಲ್ಲ. ಕೀ ಧ್ವನಿಯ ಇನ್ನುಳಿದ ಅಪರೂಪದ ಹೆಸರುಗಳು ಮತ್ತೂ ಹೊಂದುವುದಿಲ್ಲ. ನಾನೇ ಒಮ್ಮೆ ಊರಿಗೇ ಬಹಳ ವಿದ್ಯಾವಂತನೆನಿಸಿಕೊಂಡಿದ್ದ ಚಾವೋನ ಮಗನನ್ನು ಈ ಸಮಸ್ಯೆಯ ಬಗ್ಗೆ ವಿಚಾರಿಸಿದೆ. ಆದರೆ ಅವನೂ ದಿಕ್ಕು ತೋಚದಂತೆ ಇದ್ದ. ಅವನ ಪ್ರಕಾರ ಈ ಹೆಸರಿನ ಮೂಲವನ್ನು ಗುರುತಿಸಲು ಸಾಧ್ಯವಾಗದೆ ಹೋಗಿರುವುದಕ್ಕೆ ಚೆನ್ ತು ಸಿಯು 'ನ್ಯೂ ಯೂಥ್' ಅನ್ನುವ ಪತ್ರಿಕೆಯೊಂದನ್ನು ಹೊರತಂದು ಪಾಶ್ಚಾತ್ಯ ಅಕ್ಷರಗಳನ್ನು ಬಳಸುವುದನ್ನು ಒತ್ತಿ ಹೇಳಿದ. ನಮ್ಮ ರಾಷ್ಟ್ರೀಯ ಸಂಸ್ಕೃತಿ ಹಾಳಾಗುವುದಕ್ಕೆ ಅದೇ ಕಾರಣವೆಂದು ವಿವರಿಸಿದ. ಕಡೆಯ ಪ್ರಯತ್ನವಾಗಿ ನನ್ನ ಜಿಲ್ಲೆಯ ಒಬ್ಬ ವ್ಯಕ್ತಿಯನ್ನು ಆಹ್ ಕ್ಯೂ ಗೆ ಸಂಬಂಧಿಸಿದ ಕೇಸಿನ ದಾಖಲೆ ಪತ್ರಗಳನ್ನು ನೋಡಲು ಹೇಳಿದೆ. ಆಮೇಲೆ ಎಂಟು ತಿಂಗಳ ನಂತರ ನನಗೆ ಉತ್ತರ ಬಂತು. ಆಹ್‌ಕೀ (Ah Quei) ಅನ್ನುವ ಯಾವ ಹೆಸರೂ ಅವುಗಳಲ್ಲಿ ಕಾಣಿಸಲಿಲ್ಲವೆಂದು ಬರೆದಿದ್ದ. ಆದರೆ ಅವನು ತನ್ನ ಉತ್ತರದಲ್ಲಿ ನಿಜವಾದ್ದನ್ನೆ ಬರೆದಿದ್ದನೋ ಅಥವಾ ಅವನಿಗೆ ದಾಖಲೆ ಪತ್ರಗಳನ್ನು ಹುಡುಕುವುದಕ್ಕೆ ಆಗಲಿಲ್ಲವೋ ಎನ್ನುವುದನ್ನು ಸ್ಪಷ್ಟವಾಗಿ ಹೇಳಲು ಸಾಧ್ಯವಿರಲಿಲ್ಲ. ಆಗಿನ್ನೂ ಧ್ವನಿ ನಿಯಮಗಳ ಬಗ್ಗೆ ಅಷ್ಟಾಗಿ ಪರಿಚಯವಿದ್ದಂತಿರಲಿಲ್ಲ. ಬಳಕೆಯೂ ಆಗುತ್ತಿರಲಿಲ್ಲ. ಆದ್ದರಿಂದ ನನಗೆ ಉಳಿದದ್ದು ಒಂದೇ ದಾರಿ. ಇಂಗ್ಲಿಷ್ ಸ್ಪೆಲಿಂಗ್ ಪ್ರಕಾರ 'Ah Quei' ಅಂತ ಬರೆದು ಮತ್ತೆ ಅದನ್ನು ಮೊಟಕುಗೊಳಿಸಿ 'Q' ಎಂದು ಬರೆಯುವುದು 'The New Youth' ಪತ್ರಿಕೆಯ ನಿರೀಕ್ಷೆಗೆ ಇದು ಸಮನಾಗಿತ್ತು. ಇದರಿಂದ ನನಗೆ ನಾಚಿಕೆ ಅಂತ ಅನಿಸಿದರೂ, ಬಹಳ ಓದಿದ ಚಾವೋನ ಮಗನಿಗೆ ನನ್ನ ಸಮಸ್ಯೆ ಬಿಡಿಸಲು ಸಾಧ್ಯವಾಗದ ಮೇಲೆ ನನ್ನಂತಹವರು ಮಾಡುವುದಾದರೂ ಏನು?

ನಾಲ್ಕನೆ ಸಮಸ್ಯೆ ಆಹ್ ಕ್ಯೂನ ಹುಟ್ಟೂರು. ಅವನಿಗೆ ಚಾವೋ ಅನ್ನೋ ಹೆಸರೇ ಇದ್ದಿದ್ದರೆ, ಹಿಂದಿನ ಸಂಪ್ರದಾಯದಂತೆ ಹುಟ್ಟೂರುಗಳನ್ನು ಉಪನಾಮವಾಗಿ ಇರಿಸಿಕೊಳ್ಳುತ್ತಿದ್ದರಿಂದ, ಅವನು ಹುಟ್ಟಿದ್ದು ಎಲ್ಲೆಂದು ಗುರುತಿಸಬಹುದಾಗಿತ್ತು. 'The hundred surnames' ಅನ್ನುವ ಗ್ರಂಥವನ್ನು ನೋಡಿ ಯಾವ ಪ್ರದೇಶಕ್ಕೆ ಸೇರಿದವನೆಂದು ಪತ್ತೆ ಹಚ್ಚುವುದು ಸಾಧ್ಯವಿತ್ತು. ಒಂದು ಉಪನಾಮ ಕಣ್ಣಿಗೆ ಬಿತ್ತಾದರೂ ಅದರ ಬಗ್ಗೆ ಸಾಕಷ್ಟು ಭಿನ್ನಾಭಿಪ್ರಾಯಗಳಿದ್ದವು. ಆದ್ದರಿಂದ ಅವನ ಹೆಸರಿನಷ್ಟೇ ಅವನ ಜನ್ಮ ಸ್ಥಾನವೂ ಅನಿಶ್ಚಿತವಾಗಿತ್ತು. ಸುಮಾರು ವರ್ಷಗಳು ವೀಷು ವಾಂಗ್ ಎಂಬ ಊರಿನಲ್ಲಿ ಇದ್ದರೂ ನಂತರ ಹಲವಾರು ಕಡೆ ಓಡಾಡಿದ್ದರಿಂದ, ವೀಷುವಾಂಗ್‌ನ್ನು ಅವನ ಹುಟ್ಟೂರು ಬಂದು ಹೇಳುವುದು ಸರಿಯಿರುವುದಿಲ್ಲ. ಹಾಗೇನಾದರೂ ಆದರೆ ಇತಿಹಾಸವನ್ನು ತಿರುಚಿದಂತಾಗುತ್ತದೆ.

ಕಡೆಗೆ ನನಗೆ ಸಮಾಧಾನ ಎನಿಸಿದ್ದು Ah Q. ಇದೇ ಸರಿಯಾದ್ದು ನನ್ನ ತಪ್ಪು ತರ್ಕವನ್ನು ಸಮರ್ಥಿಸುವುದಲ್ಲ. ಮುಂದೆ ಬರುವ ವಿದ್ವಾಂಸರ ಎದುರಿನಲ್ಲಿಯೂ ನಿಲ್ಲಬಲ್ಲದು ಎನಿಸಿದ್ದರಿಂದ ಇದೇ ಹೆಸರಿಗೆ ಅಂಟಿಕೊಂಡೆ. ಇನ್ನು ಮಿಕ್ಕ ವಿಷಯಗಳು ನನ್ನಂತಹ ಸಾಮಾನ್ಯ ಅವಿದ್ಯಾವಂತರಿಗೆ ಸಂಬಂಧಪಟ್ಟಿದ್ದಲ್ಲ. ಒಂದೇ ಒಂದು ಭರವಸೆ ಎಂದರೆ ಡಾಕ್ಟರ್ ಹುಷೀಹ್‌ನ ಶಿಷ್ಯರು ಯಾರಾದರೂ ಪ್ರಾಚೀನ ಇತಿಹಾಸದ ಬಗ್ಗೆ ತುಂಬ ಅಭಿಮಾನ ಇರಿಸಿಕೊಂಡಿರುವವರು ಮುಂದೆ ಇದರ ಬಗ್ಗೆ ಏನಾದರೂ ಬೆಳಕು ಚೆಲ್ಲಿಯಾರು. ಆದರೆ, ಅಷ್ಟು ಹೊತ್ತಿಗೆ ಆಹ್ ಕ್ಯೂನ ನೈಜ ಚರಿತ್ರೆ ಎಲ್ಲಿಯೋ ಅಜ್ಞಾತದಲ್ಲಿ ಮರೆಯಾಗಿ ಹೋಗಿರಬಹುದೇನೋ ಎಂಬ ಭಯ ಮಾತ್ರ ಇದೆ. ಮುಂದಿನದನ್ನು ಪ್ರವೇಶವೆಂದು ಭಾವಿಸಬಹುದು.

ಲೇಖಕರ ಮಾತು

* * *

ಅಧ್ಯಾಯ – ೧

ಆಹ್ ಕ್ಯೂನ ದಿಗ್ವಿಜಯಗಳ ಸಂಕ್ಷಿಪ್ತ ವಿವರ

ಆಹ್ ಕ್ಯೂನ ಉಪನಾಮ ವೈಯಕ್ತಿಕ ನಾಮ, ಹುಟ್ಟೂರು – ಮುಂತಾದವುಗಳಿಗೆ ಸಂಬಂಧಿಸಿದಂತೆ ಹೇಗೆ ಅನಿರ್ದಿಷ್ಟತೆ ಇದೆಯೋ, ಹಾಗೆಯೇ ಅವನ ಹಿನ್ನಲೆಯೂ ಅನಿರ್ದಿಷ್ಟವಾಗಿದೆ. ವೀಷುವಾಂಗ್‌ನ ಜನ ಆಹ್ ಕ್ಯೂ ನಿಂದ ಬೇಕಾದಷ್ಟು ಬಿಟ್ಟಿ ಕೆಲಸಗಳನ್ನು ಮಾಡಿಸಿಕೊಂಡರು. ಅವನನ್ನು ನಗೆಪಾಟಲಿಗೆ ಗುರಿಯಾಗಿಸಿದರು. ಆದರೆ ಯಾರೊಬ್ಬರೂ ಅವನ ಹಿನ್ನಲೆಯ ಬಗ್ಗೆ ಗಮನ ಕೊಡಲೇ ಇಲ್ಲ. ಆಹ್ ಕ್ಯೂ ಕೂಡಾ ಇದರ ಬಗ್ಗೆ ಅಷ್ಟಾಗಿ ಯೋಚನೆ ಮಾಡೋಕೆ ಹೋಗಲಿಲ್ಲವಾದರೂ ಯಾವಾಗಲಾದರೂ ಯಾರ ಜೊತೆಗಾದರೂ ಜಗಳ ಮಾಡುವಾಗ ಸಿಟ್ಟು ಬಂದರೆ .... "ನಾವೂ ಕೂಡ ನಿಮಗಿಂತ ಚೆನ್ನಾಗಿ ಬಾಳಿದವರೇ! ನಿನ್ನನ್ನು ನೀನು ಏನೂಂತ ತಿಳಿದುಕೊಂಡಿದ್ದೀಯ" ಎಂದು ಗದರಿಕೆಯ ದನಿಯಲ್ಲಿ ಸವಾಲೆಸೆಯುತ್ತಿದ್ದ.

ಆಹ್ ಕ್ಯೂಗೆ ಮನೆಯಾಗಲೀ, ಮನೆಯವರಾಗಲೀ ಇರಲಿಲ್ಲ. ವೀಷುವಾಂಗ್‌ನ ಗುಡಿಯೊಂದರಲ್ಲಿ ವಾಸಿಸುತ್ತಿದ್ದ. ಅವನಿಗೆ ನಿಯಮಿತವಾದ ಒಂದು ಕೆಲಸ ಇರಲಿಲ್ಲ. ಆದರೆ ಅವರಿವರಿಗೆ ಸಣ್ಣಪುಟ್ಟ ಕೆಲಸಗಳನ್ನು ಮಾಡಿ ಕೊಡುತ್ತಿದ್ದ. ಗೋಧಿ ಬೀಸಿಕೊಂಡು ಬರೋದು, ಅಕ್ಕಿಯಾಡಿಸಿಕೊಂಡು ಬರೋದು, ದೋಣಿ ರಿಪೇರಿ ಮಾಡೋದು, ಮುಂತಾದ ಎಲ್ಲವನ್ನೂ ಮಾಡುತ್ತಿದ್ದ. ದಿನಕ್ಕಿಂತ ಜಾಸ್ತಿ ವೇಳೆ ಆಗುವುದಾದರೆ ಆಯಾ ಮನೆಯಲ್ಲಿಯೇ ಇದ್ದು ಬಿಡುತ್ತಿದ್ದ. ಕೆಲಸ ಮುಗಿದ ಮೇಲೆ ಹೊರಟು ಹೋಗುತ್ತಿದ್ದ. ಏನಾದರೂ ಕೆಲಸ ಆಗಬೇಕಿದ್ದರೆ, ಜನ ತಕ್ಷಣ ಆಹ್ ಕ್ಯೂನನ್ನು ನೆನಪಿಸಿಕೊಳ್ತಿದ್ದರೆ ಹೊರತಾಗಿ ಅವನ ಬಗ್ಗೆ ಅವನ ಪರಿಸ್ಥಿತಿ ಬಗ್ಗೆ ಯಾರಿಗೂ ಯೋಚನೇನೆ ಬರುತ್ತಿರಲಿಲ್ಲ. ಕೆಲಸ ಮುಗೀತಿದ್ದಂಗೆ ಜನಕ್ಕೆ ಆಹ್ ಕ್ಯೂನ ನೆನಪೂ ಕೂಡಾ ಉಳಿಯುತ್ತಿರಲಿಲ್ಲ. ಹೀಗಿರುವಾಗ ಅವನ ಹಿನ್ನೆಲೆ ಯಾರಿಗೆ ಬೇಕಿತ್ತು! ಒಂದು ಸಲ ಒಬ್ಬ ವಯಸ್ಸಾದ ವ್ಯಕ್ತಿ "ಆಹಾ! ಆಹ್ ಕ್ಯೂ ಎಂಥ ಒಳ್ಳೆ ಕೆಲಸಗಾರ!" ಎಂದ. ಆಗ ಅಲ್ಲಿಯೇ ನಿಂತಿದ್ದ ಆಹ್ ಕ್ಯೂ ಸೊಂಟ ಕುಲುಕುತ್ತ ಅವನ ಮುಂದೆ ನಿಂತ. ಅಲ್ಲಿದ್ದ ಜನಕ್ಕೆ ಮುದುಕ ಆಹ್ ಕ್ಯೂನ ಬಗ್ಗೆ ನಿಜವಾಗಿಯೂ ಮೆಚ್ಚುಗೆಯಿಂದ

ಹೇಳಿದನೋ ಅಥವಾ ವ್ಯಂಗ್ಯವೋ ತಿಳಿಯುವುದಕ್ಕೆ ಆಗದೆ ಹೋದರೂ ಆಹ್ ಕ್ಯೂಗಂತೂ ಎಲ್ಲಿಲ್ಲದ ಖುಷಿ ಅನ್ನಿಸಿತು.

ಆಹ್ ಕ್ಯೂಗೆ ತನ್ನ ಬಗ್ಗೆ ಬಹಳ ಹೆಮ್ಮೆ ಎನಿಸುತ್ತಿತ್ತು. ಎಲ್ಲರನ್ನೂ ಅವನು ತನಗಿಂತ ಕಡಿಮೆ ಎನ್ನುವ ಹಾಗೆ ನೋಡುತ್ತಿದ್ದ. ವೀಷುವಾಂಗ್‌ನ ಇಬ್ಬರು ಯುವ ವಿದ್ವಾಂಸರನ್ನೂ ಅವನ ಲೆಕ್ಕಕ್ಕೆ ತೆಗೆದುಕೊಳ್ಳುತ್ತಿರಲಿಲ್ಲ. ಅಫಿಷಿಯಲ್ ಪರೀಕ್ಷೆಗಳಲ್ಲಿ ಸಾಮಾನ್ಯವಾಗಿ ಯಾರೂ ಪಾಸಾಗುವುದೇ ಕಷ್ಟವಾಗಿದ್ದಾಗ, ಪಾಸಾಗಿದ್ದ ಆ ಇಬ್ಬರು ಯುವಕರೂ ಇವನ ದೃಷ್ಟಿಯಲ್ಲಿ ದೊಡ್ಡವರೆನಿಸಲಿಲ್ಲ. ಮಿಸ್ಟರ್ ಚಾವ್ರೋ ಮತ್ತು ಚಿಯನ್‌ರನ್ನು ಕಂಡರೆ ಊರಿನ ಜನರೆಲ್ಲ ಅವರ ಶ್ರೀಮಂತಿಕೆಗಾಗಿ ಮತ್ತು ವಿದ್ಯಾವಂತ ಮಕ್ಕಳ ತಂದೆಯರಾಗಿದ್ದುದಕ್ಕಾಗಿ ತುಂಬ ಗೌರವದಿಂದ ನಡೆದುಕೊಳ್ಳುತ್ತಿದ್ದರು. ಆದರೆ ಆಹ್‌ಕ್ಯೂಗೆ ಇದೆಲ್ಲ ಏನೂ ದೊಡ್ಡದೆನಿಸಲಿಲ್ಲ. ನನ್ನ ಮಕ್ಕಳು ಇವರ ಮಕ್ಕಳಿಗಿಂತ ದೊಡ್ಡವರಾಗಬಹುದು!– ಎಂದು ಯೋಚಿಸುತ್ತಿದ್ದ.

ಪಟ್ಟಣಕ್ಕೆ ಹೋಗಿ ಬಂದ ಮೇಲಂತೂ ಅವನ ದರ್ಪ ಇನ್ನೂ ಹೆಚ್ಚಾಗಿ ಹೋಗಿತ್ತು. ಹಾಗಂತ ಪಟ್ಟಣದ ಜನರ ಬಗ್ಗೆ ಅಷ್ಟು ಒಳ್ಳೆ ಅಭಿಪ್ರಾಯ ಏನೂ ಇಟ್ಟುಕೊಂಡಿರಲಿಲ್ಲ. ಉದಾಹರಣೆಗೆ ಹೇಳೋದಾದ್ರೆ ೩ x ೩ ಅಂಗುಲದ ಮರದ ಹಲಗೆಯನ್ನು ವೀಷುವಾಂಗ್ ಜನ ಉದ್ದನೆಯ ಬೆಂಚ್ ಅಂತ ಕರೆಯುತ್ತಿದ್ದರು. ಆಹ್ ಕ್ಯೂ ನೂ ಸಹ ಅದನ್ನು ಹಾಗೇ ಕರೀತಿದ್ದ. ಆದರೆ ಪಟ್ಟಣದವರು ಅದನ್ನು ನೇರ ಬೆಂಚ್ ಎಂದು ಕರೆಯುವುದನ್ನು ಒಪ್ಪುತ್ತಿರಲಿಲ್ಲ. ಎಷ್ಟು ದರಿದ್ರವಾಗಿದೆ ಆ ಹೆಸರು! – ಎಂದುಕೊಳ್ಳುತ್ತಿದ್ದ. ಅಲ್ಲದೆ ದೊಡ್ಡ ತಲೆಯ ಮೀನನ್ನು ಚೆನ್ನಾಗಿ ಹುರಿದು ಅದಕ್ಕೆ ಅರ್ಧ ಅಂಗುಲದಳತೆಗೆ ಕತ್ತರಿಸಿದ ಈರುಳ್ಳಿ ಜಾತಿಯ ಗಿಡದ ಎಲೆಗಳನ್ನು ಹಾಕುತ್ತಿದ್ದರೆ, ಪಟ್ಟಣದವರು ಎಳೆಎಳೆಯಾಗಿ ಕತ್ತರಿಸಿದ ಎಲೆಗಳನ್ನು ಹಾಕುತ್ತಿದ್ದುದನ್ನು ಸರಿಯಲ್ಲವೆಂದು, ಕೆಟ್ಟದಾಗಿದೆಯೆಂದೂ ಬೈಯ್ಯುತ್ತಿದ್ದ. ವೀಷುವಾಂಗ್ ಜನಕ್ಕೆ ಪಟ್ಟಣದಲ್ಲಿ ಮೀನನ್ನು ಹೇಗೆ ಹುರಿದಿರುತ್ತಾರೆ ಅನ್ನೋದೂ ಗೊತ್ತಿರಲಿಲ್ಲ!

ಆಹ್‌ಕ್ಯೂ ಒಂದು ರೀತಿಯಿಂದ ಎಲ್ಲರಿಗಿಂತ ಮೇಲಾಗಿದ್ದ. ಪ್ರಪಂಚಾನ ನೋಡಿದವ ಒಳ್ಳೆಯ ಕೆಲಸಗಾರ. ಜೊತೆಗೆ ಒಂದೆರಡು ದೈಹಿಕ ದೌರ್ಬಲ್ಯಗಳನ್ನು ಬಿಟ್ಟರೆ, ಪರಿಪೂರ್ಣ ಮನುಷ್ಯನಾಗಿದ್ದ. ಅವನಲ್ಲಿ ಜಿಗುಪ್ಸೆ ಹುಟ್ಟಿಸುವಂತಹ ಭಾಗಗಳೆಂದರೆ ತಲೆ ಮೇಲೆ, ಒಂದೆ ಯಾವಾಗಲೂ ಆಗಿದ್ದ ಹುಳುಕಡ್ಡಿ ಗುರುತುಗಳು! ಅಥವಾ ಕಲೆಗಳು!! ಕಲೆಗಳು ಇದ್ದದ್ದು ತನ್ನ ತಲೆ ಮೇಲೇ ಆದರೂ ಅದನ್ನು ನೆನಪಿಸುವಂತಹ ಯಾವುದನ್ನಾಗಲೀ ಯಾವ ಶಬ್ದವನ್ನಾಗಲೀ ಕೇಳಲು ಇಷ್ಟ ಪಡುತ್ತಿರಲಿಲ್ಲ. ಆಮೇಲೆ bright, light ಶಬ್ದಗಳೂ ನಿಷಿದ್ಧವಾದವು. ಮುಂದೆ ಇವಗಳ ಜೊತೆ Lamp candle ಗಳೂ ಕೂಡಾ ಸೇರಿದವು! ಯಾವಾಗಲಾದರೂ ಈ ನಿಷಿದ್ಧ ಪದಗಳು ಉದ್ದೇಶ ಪೂರ್ವಕವಾಗಿಯೋ, ಅನುದ್ದೇಶ ಪೂರ್ವಕವಾಗಿಯೋ

ನಿಷೇಧವನ್ನು ಮರೆತು ಕಾಣಿಸಿಕೊಂಡರೆ, ಆಹ್ ಕ್ಯೂ ಸಿಡಿಮಿಡಿಗೊಂಡು ಎಗರಾಡುತ್ತಿದ್ದ. ಇದರಿಂದ ಅವನ ಹುಳಕಡ್ಡಿ ಕಲೆಗಳು ಇನ್ನಷ್ಟು ಬಣ್ಣ ಪಡೆಯುತ್ತಿದ್ದವು. ತಪ್ಪು ಮಾಡಿದವನೇನಾದರೂ ತನಗಿಂತ ದುರ್ಬಲನಾಗಿದ್ದರೆ ಬೈದು ಶಾಪ ಹಾಕುತ್ತಿದ್ದ. ತಿರುಗಿ ಜಗಳ ಆಡಲು ಅಸಮರ್ಥನಾದವನೇನಾದರೂ ಇದ್ದರೆ ಅವನನ್ನು ಹೊಡೆದೇ ಬಿಡುತ್ತಿದ್ದ. ಆದರೆ ತಮಾಷೆ ಏನೂಂದರೆ, ಪ್ರತಿ ಸಂದರ್ಭದಲ್ಲೂ ಸೋಲುತ್ತಿದ್ದವನು ಆಹ್‌ಕ್ಯೂನೇ ಆಗಿರುತ್ತಿದ್ದ! ಹಾಗಾಗಿ ಅವನ ಕಡೆಗೆ ತನ್ನ ವಿರೋಧಿಗಳನ್ನು ದುರುಗುಟ್ಟಿ ನೋಡುವುದರೊಂದಿಗೆ ಸಮಾಧಾನ ತಂದುಕೊಳ್ಳುತ್ತಿದ್ದ.

ಇದರಿಂದ, ವೀಷುವಾಂಗ್‌ನ ಸೋಮಾರಿಗಳು, ಅವನು ಹೊಡೆಯುವುದಿಲ್ಲಾಂತ ಗೊತ್ತಾದಂದಿನಿಂದ ಇನ್ನಷ್ಟು ಅವನನ್ನು ಕೀಟಲೆಮಾಡಲು ತೊಡಗಿದರು. ಅವನನ್ನು ನೋಡುತ್ತಿದ್ದ ಹಾಗೆ, "ನೋಡು ನೋಡು ಹತ್ತಿಕೊಳ್ಳುತ್ತಿದೆ" (lighting up) ಅಂತ ಹೇಳಿ ಓಡಿ ಹೋಗುತ್ತಿದ್ದರು.

ಆಹ್ ಕ್ಯೂ ಮಾಮೂಲಿನಂತೆ ಅವರತ್ತ ಕೋಪದಿಂದ ನೋಡುತ್ತಿದ್ದ.

ಓಹೋ ಪ್ಯಾರಾಫಿನ್ ಲ್ಯಾಂಪ್ ಇಲ್ಲಿದೆ! ಎಂದು ಕೀಟಲೆ ಮುಂದುವರೆಸುತ್ತಿದ್ದರು.

ತಲೆ ಕೆರೆದುಕೊಂಡು ಇನ್ನೇನಾದರೂ ಬೇರೆ ವಿಧಾನವಿದೆಯೇ ಎಂದು ಯೋಚಿಸುವುದನ್ನು ಬಿಟ್ಟರೆ ಆಹ್ ಕ್ಯೂಗೆ ಏನೂ ಮಾಡಲಾಗುತ್ತಿರಲಿಲ್ಲ. "ನಿಮಗೆ... ನಿಮಗೆ ಏನು ಮಾಡಿದರೂ..." ಎಂದು ಏನೋ ಹೇಳಲು ಯತ್ನಿಸುತ್ತಿದ್ದಂತೆ, ಅವನು ತನ್ನ ತಲೆಮೇಲಿನ ಕಲೆಗಳ ಬಗ್ಗೆ, "ಇವು ಸಾಮಾನ್ಯ ಕಲೆಗಳಲ್ಲ. ಈ ಕಲೆಗಳಿಗೆ ದೊಡ್ಡತನವಿದೆ; ಶ್ರೇಷ್ಠತೆಯಿದೆ." ಎಂದು ಹೆಮ್ಮೆಯಿಂದ ಬೀಗಿಕೊಳ್ಳಲು ಆರಂಭಿಸಿದ. ಆಹ್ ಕ್ಯೂ ವ್ಯವಹಾರ ಜ್ಞಾನವಿದ್ದವನು. ಅವನಿಗೂ ಗೊತ್ತು, ತಾನೇ ಎಲ್ಲ ನಿಯಮಗಳನ್ನೂ ಮುರಿದಿದ್ದೇನೆ ಎಂದು. ಅದಕ್ಕೆ ಏನೂ ಹೇಳೋದನ್ನೇ ನಿಲ್ಲಿಸಿಬಿಟ್ಟ.

ಸೋಮಾರಿಗಳಿಗೆ ಇದರಿಂದ ಇನ್ನೂ ಸಮಾಧಾನ ಆಗದೆ, ಅವನನ್ನು ರೇಗಿಸುವುದನ್ನು ಮುಂದುವರೆಸಿದರು. ಗುದ್ದಾಟಕ್ಕೆ ನಿಲ್ಲುತ್ತಿದ್ದರು. ಆಹ್‌ಕ್ಯೂನನ್ನು ಸೋಲಿಸಿ, ಅವನ ಪಿಗ್ ಟೈಲ್ ಹಿಡಿದು ನಾಲ್ಕೈದು ಬಾರಿ ಗೋಡೆಗೆ ದಟ್ಟಿಸಿ ತಾವು ಗೆದ್ದೆವೆಂಬ ಭಾವದೊಂದಿಗೆ ಹೊರಡುತ್ತಿದ್ದ.

ಆಹ್‌ಕ್ಯೂ ಏನೇ ಮಾಡಲಿ, ನಂತರ ಜನರಿಗೆ ಅದನ್ನು ಹೇಳುತ್ತಿದ್ದ. ಇದರಿಂದಾಗಿ ಅವನನ್ನು ಗೇಲಿ ಮಾಡಿದವರೆಲ್ಲರಿಗೂ, ಆಹ್ ಕ್ಯೂನ ಈ ರೀತಿ ಮಾನಸಿಕ ಗೆಲುವು ಪಡೆದದ್ದನ್ನು ಸೂಚಿಸುವುದಕ್ಕಾಗಿ, ಎಂಬ ಸತ್ಯ ತಿಳಿದಿತ್ತು. ಇದಾದ ಮೇಲೆ ಯಾರಾದರೂ ಅವನ ಪಿಗ್‌ಟೈಲ್ ಮಾದರಿಯ ಜುಟ್ಟನ್ನು ಎಳೆದರೆ, ತಿರುಚಿದರೆ ಅವನನ್ನು ಅಡ್ಡಗಟ್ಟಿ ಹೇಳುತ್ತಿದ್ದರು– "ಆಹ್‌ಕ್ಯೂ, ಇದು ಮಗ ತಂದೇನ ಹೊಡೆಯೋ ರೀತಿಯಲ್ಲ;

ಅದು ಪಶುಗಳ ಹೊಡೆಯೋ ರೀತಿ" ಎಂದು. "ಎಲ್ಲಿ ಹೇಳು, ನೋಡೋಣ. ಮನುಷ್ಯ ಪಶುವನ್ನು ಹೊಡೆಯೋದು!"

ಆಗ ಆಹ್‌ಕ್ಯೂ ತನ್ನ ಜುಟ್ಟಿನ ಬುಡವನ್ನು ಗಟ್ಟಿಯಾಗಿ ಹಿಡಿದು, ತಲೆ ಒಂದು ಕಡೆ ತಿರುಗಿಸಿ, ಒಂದು ಕೀಟವನ್ನು ಹೊಡೆಯೋದು!- ಅಂದ್ರೆ ಹೇಗಿರುತ್ತೆ?! ನಾನು ಈಗ ಒಂದು ಕೀಟ. ಈಗ ನನ್ನನ್ನು ಹೋಗೋಕೆ ಬಿಡ್ತೀರಾ?

ಅವನು ಕೀಟವೇ ಆಗಿದ್ದರೂ ಸೋಮಾರಿಗಳು ಒಂದು ಐದಾರು ಬಾರಿಯಾದರೂ ಆಹ್‌ಕ್ಯೂನ ತಲೆಯನ್ನು ಹತ್ತಿರವಿರುವ ಯಾವುದಾದರೂ ವಸ್ತುವಿಗೆ ಘಟ್ಟಿಸದ ಹೊರತು ಬಿಡುತ್ತಿರಲಿಲ್ಲ. ಹಾಗೆ ಮಾಡಿದ ಮೇಲೆ ಮಾಮೂಲಿನಂತೆ, ತಾವು ಗೆದ್ದೆವೆಂಬ ಭಾವದೊಂದಿಗೆ ಹಿಂದಿರುಗಿ ಹೋಗುತ್ತಿದ್ದರು, ಆಹ್ ಕ್ಯೂನನ್ನು ಮುಗಿಸಿ ಬಿಟ್ಟೆವೆಂಬ ತೃಪ್ತಿಯೊಂದಿಗೆ! ನಂತರ ಅವರು ಹೋದ ಹತ್ತು ನಿಮಿಷಕ್ಕೂ ಮೊದಲೇ ಆಹ್‌ಕ್ಯೂ ಕೂಡಾ ಗೆದ್ದ ತೃಪ್ತಿಯೊಂದಿಗೆ ಹೊರಟು ಬಿಡುತ್ತಿದ್ದ. ಆದರೆ ಜೊತೆಗೆ 'ಎಲ್ಲರಿಗಿಂತ ಕೀಳರಿಮೆ ಮನುಷ್ಯರಲ್ಲಿ ತಾನೇ ಮುಂದು' ಎಂದು ಯೋಚಿಸುತ್ತಿದ್ದ. ಇದರಲ್ಲಿ ಅಂದರೆ ಈ ವಾಕ್ಯದಲ್ಲಿ ಎಲ್ಲರಿಗಿಂತ ಮುಂದು ಅನ್ನುವುದನ್ನು ಉಳಿಸಿಕೊಂಡು ಕೀಳರಿಮೆ ಅನ್ನುವುದನ್ನು ತೆಗೆದು ಬಿಟ್ಟರೆ, 'ಎಲ್ಲರಿಗಿಂತ ಮನುಷ್ಯರಲ್ಲಿ ಮುಂದು' - ಮಾತ್ರ ಉಳಿಯುತ್ತದೆ. ಅಫಿಷಿಯಲ್ ಪರೀಕ್ಷೆಯಲ್ಲಿ ಪಾಸಾದವನೂ ಕೂಡಾ ಎಲ್ಲರಿಗಿಂತ ಮನುಷ್ಯರಲ್ಲಿ ಮುಂದು-ಹೌದು ತಾನೆ? "ಅಂದಮೇಲೆ ನೀನು ನಿನ್ನನ್ನು ಏನೆಂದುಕೊಂಡಿದ್ದಿ?

ಇಂತಹ ಜಾಣ ಉಪಾಯಗಳನ್ನು ಬಳಸಿ ತನ್ನ ವಿರೋಧಿಗಳೊಂದಿಗೆ ಹೇಗೋ ನಿಭಾಯಿಸುತ್ತಿದ್ದ. ಆಹ್‌ಕ್ಯೂ ಹೆಂಡದಂಗಡಿಗೆ ಹೋಗಿ, ಒಂದೆರಡು ಬಟ್ಟಲು ಹೆಂಡ ಕುಡಿದು ತನ್ನ ಜೋಕುಗಳಿಂದ ಎಲ್ಲರನ್ನು ನಗಿಸುತ್ತ, ಕೆಲವರೊಂದಿಗೆ ಜಗಳ ಮಾಡುತ್ತ, ಗೆದ್ದೆನೆಂಬ ಭಾವದೊಂದಿಗೆ ಹೊರಟು ಅವನ ರಕ್ಷಕ ದೇವರ ಗುಡಿಗೆ ಮರಳಿ, ದಿಂಬಿಗೆ ತಲೆ ಕೊಟ್ಟದ್ದೇ, ನಿದ್ದೆಗೆ ಇಳಿದು ಬಿಡುತ್ತಿದ್ದ. ಅವನ ಹತ್ತಿರ ದುಡ್ಡು ಗಿಡ್ಡು ಇದ್ದರೆ ಜೂಜಾಡುತ್ತಿದ್ದ. ಒಂದಷ್ಟು ಜನ ಗುಂಪಾಗಿ ಕುಳಿತರೆ ಆಹ್‌ಕ್ಯೂ ಅವರ ಮಧ್ಯೆ ಹೇಗೋ ಸೇರಿಕೊಂಡು ಬಿಡುತ್ತಿದ್ದ. ಅವನ ಮುಖ ಬೆವರಿನ ಮುದ್ದೆಯಾಗಿರುತ್ತಿತ್ತು. ಎಲ್ಲರಿಗಿಂತ ಗಟ್ಟಿ ದನಿಯಲ್ಲಿ "ಹಸಿರು ಡ್ರ್ಯಾಗನ್ ಮೇಲೆ ನಾಲ್ಕುನೂರು!" ಎಂದು ಕಿರುಚುತ್ತಿದ್ದ. ಹೇ! ಅಲ್ಲಿ ಓಪನ್! ಪಣಧಾರಿ. ಬೆವರು ಸುರಿಸುತ್ತಾ ಕಿರುಚುತ್ತಿದ್ದ. ಪೆಟ್ಟಿಗೆ ತೆಗೆದು ದೇವರೇ ಎಂದು ಗುಣಗುಣಿಸುತ್ತಿದ್ದ. ಕಾರ್ನರ್‌ಗೆ ಏನೂ ಇಲ್ಲ. ಇವಕ್ಕೆ ಬಾಜಿ ಕೂಡದು! ಆಹ್‌ಕ್ಯೂನ ಆ ನಾಣ್ಯಗಳನ್ನು ಇತ್ತ ತಳ್ಳು, [illegible] ಒಂದುನೂರು... ಒಂದು ನೂರೈವತ್ತು"... ಬಾಜಿ ಲೆಕ್ಕ ಹೀಗೆ ಸಾಗುತ್ತಿದ್ದಂತೆ ಆಹ್‌ಕ್ಯೂನ ಹಣ [illegible] [illegible]

ಕುತೂಹಲದಿಂದ ಆಟ ನೋಡುತ್ತಿದ್ದ. ತನ್ನ ರಕ್ಷಕ ದೇವರ ಗುಡಿಗೆ ಒಲ್ಲದ ಮನಸ್ಸಿನಿಂದ ಹಿಂತಿರುಗುತ್ತಿದ್ದ. ಮಾರನೆ ದಿನ ಊದಿದ ಕಣ್ಣುಗಳಿಂದ ಕೆಲಸಕ್ಕೆ ಹೋಗುತ್ತಿದ್ದ.

ಒಂದು ಗಾದೆಯಿದೆ. ದುರಾದೃಷ್ಟ ಒಂದು ರೀತಿಯಲ್ಲಿ ವರವಾಗಿದೆ, ಅಂತ. ಆಹ್‌ಕ್ಯೂನ ಬದುಕಿನಲ್ಲಿ ಇದು ಅಕ್ಷರಶಃ ಸತ್ಯವಾಗಿತ್ತು. ಆಹ್‌ಕ್ಯೂನ ದುರಾದೃಷ್ಟ ಅವನನ್ನು ಎಂದೂ ಗೆಲ್ಲಲು ಬಿಡಲಿಲ್ಲ; ಯಾವಾಗಲೂ ಕಷ್ಟ ಅನುಭವಿಸಿದ.

ಈ ದಿನ ಸಂಜೆ ವೀಷುವಾಂಗ್‌ನಲ್ಲಿ ದೇವತೆಗಳ ಉತ್ಸವ ಇತ್ತು. ಸಂಪ್ರದಾಯದ ಪ್ರಕಾರ ಆ ದಿನ ನಾಟಕವೂ ಇತ್ತು. ಜೊತೆಗೆ ಸ್ಟೇಜ್‌ಗೆ ಆನಿಕೊಂಡಂತೆ ಜೂಜಿನ ಮೇಜುಗಳೂ ಇದ್ದವು. ಅಲ್ಲಿಂದ ಮೂರು ಮೈಲಿ ದೂರದಲ್ಲಿದ್ದ ಆಹ್‌ಕ್ಯೂನ ಕಿವಿಗೆ ಜಾತ್ರೆಯ ಗಂಟೆ, ಜಾಗಟೆಗಳ ಸದ್ದು ತಾಕಿತು. ಸಾಮಾನ್ಯವಾಗಿ ಜೂಜುಗಾರರ ಪಣದ ಘೋಷಣೆ ದನಿ ಹೊರತು ಆಹ್‌ಕ್ಯೂನ ಕಿವಿಗೆ ಏನೂ ತಲುಪುತ್ತಿರಲಿಲ್ಲ. ಮೇಲಿಂದ ಮೇಲೆ ಪಣ ಒಡ್ಡುತ್ತ ಬಂದ. ತಾಮ್ರವೆಲ್ಲ ಬೆಳ್ಳಿಯಾಗ ತೊಡಗಿತ್ತು. ಬೆಳ್ಳಿ ಮತ್ತೆ ಡಾಲರುಗಳಾಗಿ ಪರಿವರ್ತಿತವಾಗಿ, ಈ ಡಾಲರುಗಳ ಸಂಖ್ಯೆ ಸಾಕಷ್ಟು ಬೆಳೆದು ಬಿಡ್ತು. ಎಷ್ಟೊಂದು ಭಾವಾವಿಷ್ಟನಾದನೆಂದರೆ, ದೇವರ ನೆಲೆಗೆ ಎರಡು ಡಾಲರ್! ಎಂದು ಕಿರುಚಿದ.

ಯಾರು ಜಗಳ ಶುರುಮಾಡಿದ್ದರೋ, ಅವನಿಗೆ ಅದು ಗೊತ್ತಿರಲಿಲ್ಲ, ಯಾವ ಕಾರಣಕ್ಕೆ ಅನ್ನೋದೂ ಗೊತ್ತಿರಲಿಲ್ಲ. ಶಾಪದ ಬೈಗಳು, ಗುದ್ದುಗಳು, ಹೆಜ್ಜೆ ಸಪ್ಪಳ, ಅವನ ತಲೆ ಚಿಟ್ಟು ಹಿಡಿದಂತೆ ಎನಿಸಿತು. ಸಾವರಿಸಿಕೊಂಡು ಜೂಜಿನ ಮೇಜುಗಳ ಹತ್ತಿರ ಬರುವಷ್ಟರಲ್ಲಿ ಮೇಜುಗಳು ಮಾಯವಾಗಿದ್ದವು. ಜೂಜಾಡುವವರೂ ಅದೃಶ್ಯರಾಗಿದ್ದರು. ಅವನ ಮೈಕೈಯೆಲ್ಲಾ ನೋಯುತ್ತಿತ್ತು. ಯಾರ್‍ಯಾರಿಂದಲೋ ಒದೆ ತಿನ್ನುತ್ತಾ ಇದ್ದರೆ, ಜನ ನಿಂತು ತಮಾಶೆ ನೋಡುತ್ತಿದ್ದಂತೆನಿಸಿತು. ಎಲ್ಲೋ ಏನೋ ತಪ್ಪಾಗಿದೆ ಅಂತ ಅನಿಸಿ ತನ್ನ ರಕ್ಷಕ ದೇವರ ಗುಡಿಗೆ ಮರಳಿ ಬಂದ, ಸ್ವಲ್ಪ ಸಮಾಧಾನಕ್ಕೆ ಬಂದಂತಾಗಿ ನೋಡಿದರೆ ಅವನು ಅವಿತಿಟ್ಟಿದ್ದ ಡಾಲರ್ ರಾಶೀನೇ ಮಂಗಮಾಯ! ಆ ಜಾತ್ರೆ ಸಮಯದಲ್ಲಿ ಜೂಜಿನ ಮೇಜುಗಳಲ್ಲಿದ್ದವರು ವೀಷುವಾಂಗ್ ಜನರಲ್ಲ. ಇನ್ನು ಹೇಗೆ ತಾನೇ ಅಪರಾಧಿಗಳನ್ನು ಪತ್ತೆ ಹಚ್ಚುವುದು?

ಎಷ್ಟು ಬೆಳ್ಳಗೆ ಫಳಫಳ ಹೊಳೆಯುವ ಬೆಳ್ಳಿರಾಶಿ!..... ಎಲ್ಲ ಅವನದೇ ಆಗಿತ್ತು.... ಆದರೆ ಈಗ ಎಲ್ಲ ಅದೃಶ್ಯವಾಗಿದೆ. ತನ್ನ ಮಗನೇ ಕದ್ದಿರಬಹುದೆಂದು ಅಂದುಕೊಂಡರೂ ಅವನಿಗೆ ಸಮಾಧಾನ ಸಾಧ್ಯವಿರಲಿಲ್ಲ. ತಾನೊಂದು ಬರೀ ಕೀಟವೆಂದು ಭಾವಿಸಿಕೊಂಡರೂ ಸಮಾಧಾನವಾಗಲಿಲ್ಲ. ಈ ಸಲ ಮಾತ್ರ ಅವನು ತನ್ನ ಸೋಲಿನ ಕಹಿಯನ್ನು ಅನುಭವಿಸಿದ. ಆದರೆ ಸದ್ಯಕ್ಕೆ ಸೋಲನ್ನು ಗೆಲುವಾಗಿ ಪರಿವರ್ತಿಸಿದ. ಬಲಗೈಯನ್ನು ಎತ್ತಿ ತಾನೇ ತನ್ನ ಮುಖದ ಮೇಲೆ, ತೀಕ್ಷ್ಣ ನೋವಿನ ಅನುಭವ ಆಗುವ ಹಾಗೆ ಎರಡು ಬಾರಿ ಹೊಡೆದುಕೊಂಡ. ಹೀಗೆ ಹೊಡೆದುಕೊಂಡ ಮೇಲೇ

ಅವನಿಗೆ ಎದೆಭಾರ ಕಡಿಮೆಯಾದಂತೆನಿಸಿತು. ಯಾಕೇಂದ್ರೆ ಹೊಡೆದವನು ತಾನೇ ಆಗಿದ್ದ!.... ಅವನ ಮುಖ ಇನ್ನೂ ನೋಯುತ್ತಿದ್ದರೂ, ತಾನು ಬೇರೆ ಯಾರಿಗೋ ಹೊಡೆದಂತೆ ಭಾವಿಸಿ ಸಮಾಧಾನ ಪಟ್ಟ. ತೃಪ್ತಿಯಿಂದ ತಾನು ಗೆದ್ದಂತೆ ಅನುಭವಿಸುತ್ತ ನೆಲದ ಮೇಲೆ ಮೈ ಚಾಚಿದ. ಸ್ವಲ್ಪ ಹೊತ್ತಿನಲ್ಲಿ ನಿದ್ದೆಗೆ ಜಾರಿದ.

❖ ❖ ❖

ಅಧ್ಯಾಯ - ೨

ಇನ್ನಷ್ಟು, ಆಹ್‌ಕ್ಯೂನ ದಿಗ್ವಿಜಯಗಳ ವಿವರ

ಆಹ್‌ಕ್ಯೂ ದಿಗ್ವಿಜಯಗಳನ್ನು ಸಾಧಿಸುತ್ತ ಹೋದರೂ, ಚಾವೋ ಅವನ ಮುಖದ ಮೇಲೆ ಒಂದು ಹೊಡೆಯುವ ತನಕ ಆಹ್‌ಕ್ಯೂಗೆ ಖ್ಯಾತಿ ಸಿಕ್ಕಿರಲಿಲ್ಲ.

ದಂಡಾಧಿಕಾರಿಗೆ ಇನ್ನೂರನ್ನು ನಗದು ರೂಪದಲ್ಲಿ ಸಲ್ಲಿಸಿದ ಮೇಲೆ ಸಿಟ್ಟಿನಿಂದ ಬಿದ್ದುಕೊಂಡ. ನಂತರ ತನ್ನೊಳಗೇ ಗುನುಗುನಿಸಿದ– "ಏನಾಗಿದೆ ಈ ಪ್ರಪಂಚಕ್ಕೆ! ಮಕ್ಕಳು ತಂದೇನ ಹೊಡೆಯುವ ಸ್ಥಿತಿಗೆ ಬಂದುಬಿಟ್ಟಿದೆ ಕಾಲ!! ನಂತರ ಚಾವೋನ ಪ್ರತಿಷ್ಠೆಯ ವಿಚಾರ, ಅದೂ ಈಗ ಅವನು ತನ್ನ ಮಗನಾಗಿರುವಾಗ, ಅವನಲ್ಲಿ ಉತ್ಸಾಹವನ್ನು ತುಂಬಿತು. ಹಾಡುತ್ತ ಹೆಂಡದಂಗಡಿಯ ಕಡೆ ನಡೆದ. "ಯಾವ ವಿಧವೆ ತನ್ನ ಗಂಡನ ಗೋರಿಯ ಬಳಿಯಲ್ಲಿ" ಎಂದು ಹಾಡತೊಡಗಿದ. ಆ ಕ್ಷಣಕ್ಕೆ, ಅವನ ಮನಸ್ಸಿನಲ್ಲಿ, ಚಾವೋ ಎಲ್ಲರಿಗಿಂತ ಪ್ರತಿಷ್ಠೆಯುಳ್ಳವ ಎನ್ನುವ ಭಾವನೆ ಮೂಡಿತು.

ಬಹಳ ವಿಚಿತ್ರ ಎನಿಸಬಹುದು. ಆದರೆ ಈ ಘಟನೆ ಆದ ಮೇಲೆ ಅದೇನೋ ಜನ ಇವನಿಗೆ ಊಹಿಸಲಾಗದ ರೀತಿಯಲ್ಲಿ ಗೌರವ ಕೊಡತೊಡಗಿದರು. ಬಹುಶಃ ತಾನು ಚಾವೋನ ತಂದೆ ಅಂತ ಹೇಳಿಕೊಂಡಿದ್ದರಿಂದ ಈ ಗೌರವ ಇರಬಹುದು ಎಂದು ಭಾವಿಸಿದ. ಆದರೆ ವಾಸ್ತವವಾಗಿ ಕಾರಣ ಅದಾಗಿರಲಿಲ್ಲ. ವೀಚುವಾಂಗ್‌ನಲ್ಲಿ ನಿಯಮದಂತೆ, ಏಳನೆಯ ಮಗು ಎಂಟನೆಯ ಮಗುವನ್ನು ಹೊಡೆದರೆ ಅಥವಾ ಲೀಸೋ ಗೀಸೋ, ಚಾಂಗ್ ಅಥವಾ ಇನ್ನಾರನ್ನೋ ಹೊಡೆದರೆ ಅಷ್ಟೊಂದು ಗಂಭೀರವಾಗಿ ತೆಗೆದುಕೊಳ್ಳುತ್ತಿರಲಿಲ್ಲ. ಹೊಡೆಯುವವರು, ಚಾವೋ ನಂತಹ ದೊಡ್ಡ ವ್ಯಕ್ತಿಗಳೊಳಗೆ ಯಾರಾದರೂ ಆಗಿದ್ದರೆ, ಅದರ ಬಗ್ಗೆ ಮಾತಾಡುವುದರಲ್ಲಿ ಅರ್ಥ ಇದೆ ಅಂತ ಭಾವಿಸಿದ್ದರು. ಅದಕ್ಕೇ ಹೊಡೆದವನು ಪ್ರಸಿದ್ಧನಾಗಿದ್ದ ಚಾವೋನೇ ಆಗಿದ್ದುದರಿಂದ ಮತ್ತು ಹೊಡೆಸಿಕೊಂಡವನಲ್ಲಿಯೂ ಹೊಡೆದವನ ದೊಡ್ಡಸ್ತಿಕೆ ಇಣುಕಿದ್ದರಿಂದ, ಚರ್ಚೆಗೆ ಯೋಗ್ಯವೆನಿಸಿತ್ತು. ಚಾವೋ ಹೊಡೀಬೇಕಾದರೆ ಆಹ್‌ಕ್ಯೂ ಅದಕ್ಕೆ ಸರಿಯಾದ ತಪ್ಪೇ ಮಾಡಿರಬೇಕು. ಯಾ[illegible]ವರೆ ಚಾವೋ ತಪ್ಪು ಮಾಡಲು

ಸಾಧ್ಯವೇ ಇಲ್ಲ. ಆಹ್‌ಕ್ಯೂನೇ ಒಂದು ವೇಳೆ ತಪ್ಪು ಮಾಡಿದ್ದರೆ ಜನರು ಯಾಕೆ ಅಪರೂಪದ ಗೌರವ ತೋರಿಸುತ್ತಿದ್ದಾರೆ? ಈ ಪ್ರಶ್ನೆಗೆ ಸರಿಯಾದ ಉತ್ತರ ಕೊಡೋದು ಸಾಧ್ಯವಾಗುವುದಿಲ್ಲ. ಆದರೂ ಊಹೆಯಿಂದ ಹೇಳಬಹುದಾದರೆ, ಆಹ್‌ಕ್ಯೂ ತನ್ನನ್ನು ಚಾವ್‌ರ ವಂಶದ ಜೊತೆಗೆ ಸೇರಿಸಿಕೊಂಡದ್ದರಿಂದ ಜನರು ಈ ಗೌರವ ತೋರಿಸುತ್ತಿರಬಹುದು. ಆಹ್‌ಕ್ಯೂ ಹೊಡೆತ ತಿಂದಿದ್ದರೂ, ಇದೇ ಕಾರಣಕ್ಕಾಗಿ, ಮತ್ತು ಆಹ್‌ಕ್ಯೂ ಹೇಳಿದ್ದರಲ್ಲಿ ಸ್ವಲ್ಪವಾದರೂ ಸತ್ಯಾಂಶ ಇದ್ದಿರಲೇಬೇಕು ಎಂಬ ಸಂಶಿಕೆಗಾಗಿ. ಸ್ವಲ್ಪ ಹೆದರಿ, ಆಹ್‌ಕ್ಯೂಗೆ ಗೌರವ ಕೊಡುವುದರಲ್ಲಿಯೇ ತಮ್ಮ ಕ್ಷೇಮವಿದೆ ಎಂದು ಭಾವಿಸಿದ್ದರು. ಇದು ಹೇಗಿತ್ತು ಎಂದರೆ, ಕನ್‌ಫ್ಯೂಸಿಯಸ್ ಗುಡಿಯಲ್ಲಿದ್ದ ಬಲಿಯಾದ ದನದ ಮಾಂಸ, ಹಂದಿ ಮಾಂಸ, ಕೋಳಿ ಮಾಂಸದ ಹಾಗೆ ಪ್ರಾಣಿ ಮೂಲದ್ದೇ ಆಗಿದ್ದರೂ, ಸಂತನು ಈ ದನದ ಮಾಂಸವನ್ನು ತಿಂದಿದ್ದರ ಕಾರಣ ಇನ್ನುಮುಂದೆ ಮುಟ್ಟುವುದೇ ಇಲ್ಲವೆಂದು ಕನ್‌ಫ್ಯೂಸಿಯಸ್ ಪ್ರತಿಜ್ಞೆ ಮಾಡಿದ.

ಇದಾದ ಮೇಲೆ ಆಹ್‌ಕ್ಯೂ ಚೆನ್ನಾಗಿ ಅಭಿವೃದ್ಧಿ ಹೊಂದಿದ.

ವಸಂತದ ಒಂದು ದಿನ ಸಂತೋಷಾತಿರೇಕದಲ್ಲಿ ಉನ್ಮತ್ತನಾಗಿ ನಡೆಯುತ್ತಿದ್ದಾಗ, ಸೊಂಟದ ತನಕ ಬೆತ್ತಲಾಗಿ, ಗೋಡೆಗೆ ಒರಗಿ ಹೇನುಗಳನ್ನು ಹಿಡಿಯುತ್ತಾ ವಿಸ್ಕರ್ಸ್‌ವ್ಯಾಂಗ್ ಕುಳಿತಿದ್ದುದನ್ನು ಆಹ್‌ಕ್ಯೂ ನೋಡಿದ. ಈ ನೋಟ ಕಣ್ಣಿಗೆ ಬೀಳುತ್ತಿದ್ದಂತೆ ಅವನ ದೇಹದಲ್ಲಿ ಕೆರೆತ ಶುರುವಾಯಿತು. ವಿಸ್ಕರ್ಸ್‌ವ್ಯಾಂಗ್ ಕಜ್ಜಿ ಮನುಷ್ಯನಾಗಿದ್ದುದರಿಂದ ಜನ ಎಲ್ಲಾ ಅವನನ್ನು ಹುಳುಕಡ್ಡಿ ಹುರುಕ ವಿಸ್ಕರ್ಸ್‌ವ್ಯಾಂಗ್ ಎಂತಲೇ ಕರೆಯುತ್ತಿದ್ದರು. ಆಹ್‌ಕ್ಯೂ ಹುಳುಕಡ್ಡಿ ಅನ್ನೋ ಪದಾನೇನೋ ಬಿಟ್ಟ. ಆದರೆ ಅವನನ್ನು ಕಂಡರೆ ತೀರಾ ಅಸಹ್ಯ ಪಟ್ಟುಕೊಳ್ಳುತ್ತಿದ್ದ. ಹುಳುಕಡ್ಡಿನ ಅಪವಾದ ಅಂತ ಮರೀಬಹುದಾದರೂ ಕೆನ್ನೆ ಮೇಲಿಂದ ಬೆಳೆದ ಪೊದೆ ಕೂದಲು ಮಾತ್ರ ಹೇಸಿಗೆ ಬರುವಂತೆ ಮಾಡುತ್ತೆ, ಎಂದುಕೊಳ್ಳುತ್ತಿದ್ದ. ಆಹ್‌ಕ್ಯೂ ಅವನ ಪಕ್ಕದಲ್ಲಿ ಕುಳಿತ. ಬೇರೆ ಇನ್ಯಾರಾದರೂ ಸೋಮಾರಿ ಆಗಿದ್ದರೆ, ಇಷ್ಟು ನಿರಾಳವಾಗಿ ಕೂರುತ್ತಿರಲಿಲ್ಲ. ವಿಸ್ಕರ್ಸ್‌ವ್ಯಾಂಗ್ ಪಕ್ಕದಲ್ಲಿ ಕೂರಲು ಯಾತಕ್ಕಾಗಿ ಹೆದರಬೇಕು? ಹಾಗೆ ನೋಡಿದರೆ ತಾನು ವ್ಯಾಂಗ್‌ನ ಪಕ್ಕದಲ್ಲಿ ಕುಳಿತುಕೊಳ್ಳುವುದು ಅವನಿಗೇ ಗೌರವದ ಸಂಗತಿ.

ಆಹ್‌ಕ್ಯೂ ಬಿಡಿಯಾಗಿದ್ದ ಜಾಕೆಟ್ ತೆಗೆದು ಒಳಗನ್ನು ಹೊರಗೆ ಮಾಡಿದ. ಬಹುಶ್ಯ ಇತ್ತೀಚೆಗೆ ಒಗೆದಿದ್ದನೋ, ಅಥವಾ ಕೊಳಕಾಗಿಯೇ ಇತ್ತೋ. ಅಂತೂ ಚೆನ್ನಾಗಿ ಹುಡುಕಾಡಿದ ಮೇಲೆ ಒಂದು ನಾಲ್ಕೈದು ಹೇನುಗಳು ಸಿಕ್ಕವು. ವಿಸ್ಕರ್ಸ್‌ವ್ಯಾಂಗ್ ಈ ಕಡೆ [illegible] ಹೇನುಗಳನ್ನು ಒಂದಾದ ಮೇಲೊಂದು ತೆಗೆತೆಗೆದು ತನ್ನ ಹಲ್ಲುಗಳಿಂದ ಪಟ ಪಟ ಸದ್ದಿನೊಂದಿಗೆ ಕುಕ್ಕುತ್ತಿದ್ದ.

ಆಹ್‌ಕ್ಯೂಗೆ ನಿರಾಶೆ ಆಯಿತು. ಕೋಪವೂ ಬಂತು. ನೋಡಿದರೆ [illegible] [illegible] ವ್ಯಾಂಗ್ ಎಷ್ಟೊಂದು ಹೇನುಗಳನ್ನು [illegible]. [illegible]

ಕೆಲವನ್ನೇ ಹಿಡಿಯಲು ಸಾಧ್ಯವಾಯಿತು. ಅವನ ಮುಂದೆ ಎಂಥ ಅವಮಾನ! ಒಂದೋ ಎರಡೋ ದೊಡ್ಡದಾದ ಹೇನುಗಳನ್ನು ಹಿಡಿಯಬೇಕೆಂದುಕೊಂಡರೂ ಸಾಧ್ಯವಾಗಲಿಲ್ಲ. ಕಷ್ಟಪಟ್ಟು ಕಡೆಗೆ ಸುಮಾರು ದಪ್ಪವೂ ಅಲ್ಲದ, ಸಣಕಲೂ ಅಲ್ಲದ ಒಂದನ್ನು ಹಿಡಿದ ಮತ್ತು ಅದನ್ನು ಬಾಯಲ್ಲಿ ತುರುಕಿಕೊಂಡು ಬಕಾಸುರನಂತೆ ಅಗಿದ. ಆದರೆ ಅದರಿಂದಾದ ಸದ್ದು ಸುಮಾರಾಗಿತ್ತು, ವಿಸ್ಕರ್ಸ್‌ವ್ಯಾಂಗ್‌ನ ಬಾಯಿಂದ ಹೊರಡುತ್ತಿದ್ದ ಸದ್ದಿಗಿಂತ ಕಡೆಯದಾಗಿತ್ತು.

ಆಹ್‌ಕ್ಯೂನ ಕಲೆಗಳೆಲ್ಲ ಕೆಂಪು ಬಣ್ಣಕ್ಕೆ ತಿರುಗಿದ್ದವು. ತನ್ನ ಜ್ಯಾಕೆಟ್ಟನ್ನು ನೆಲದ ಮೇಲೆ ಒಗೆದ, ಉಗಿದು ಹೇಳಿದ– "ರೋಮದ ಹುಳುವೇ!"

"ಕೊಳಕು ನಾಯಿ!" ಯಾರನ್ನೋ ಬೈತಿರೋದು? ವಿಸ್ಕರ್ಸ್‌ವ್ಯಾಂಗ್ ತಿರಸ್ಕಾರದಿಂದ ನೋಡಿದ.

ಆಹ್‌ಕ್ಯೂನ ಬಗ್ಗೆ ಇತ್ತೀಚೆಗೆ ಹೆಚ್ಚಿದ ಗೌರವ ಅವನಲ್ಲಿ ಹೆಮ್ಮೆ ಮೂಡಿಸಿದ್ದರೂ, ಜಗಳ ಮಾಡೋದನ್ನೇ ಅಭ್ಯಾಸಮಾಡಿಕೊಂಡಿದ್ದ ಅಲೆಮಾರಿಗಳನ್ನು ಕಂಡರೆ ಮಾತ್ರ ಇನ್ನೂ ಸ್ವಲ್ಪ ಹೆದರಿಕೆ ಇತ್ತು. ಆದರೆ ಈ ಸಂದರ್ಭದಲ್ಲಿ ಮಾತ್ರ ಆಹ್‌ಕ್ಯೂ ಜಗಳಕ್ಕೆ ಸಿದ್ಧನಾಗಿದ್ದಂತೆ ಕಾಣಿಸಿದ.

"ರೋಮ ಕೀಟವೆ, ನನ್ನನ್ನು ಬೈಯೋಕೆ ನಿನಗೆಷ್ಟೋ ಧೈರ್ಯ?"

"ಯಾವನೋ ಅವನು?" ಅಂತ ಹೇಳುತ್ತಾ ತನ್ನ ಸೊಂಟದ ಮೇಲೆ ಕೈಯಿರಿಸಿ ನಿಂತುಕೊಂಡ.

"ಯಾಕೋ ಜಗಳ ಮಾಡ್ಬೇಕೂಂತ ಇದ್ದೀಯ?" – ಎಂದು ಹೇಳುತ್ತ ತಾನೂ ನಿಂತು, ಕೋಟನ್ನು ಏರಿಸಿಕೊಂಡ.

ವ್ಯಾಂಗ್ ಓಡಿ ಹೋಗಬಹುದೆಂದು ಎಣಿಸಿ, ಒಂದೆರಡು ಹೆಜ್ಜೆ ಮುಂದೆ ಬಂದು ಮುಷ್ಠಿ ಎತ್ತಿ ಅವನನ್ನು ಗುದ್ದಲು ಮುಂದಾದ. ಆದರೆ ಅವನು ಹೊಡೆಯುವುದಕ್ಕೆ ಮೊದಲೇ ವ್ಯಾಂಗ್, ಆಹ್‌ಕ್ಯೂನನ್ನು ಹಿಡಿದು ಒಂದು ತದುಕಿದ. ಇದರಿಂದ ಆಹ್‌ಕ್ಯೂ ತತ್ತರಿಸಿ ಹೋದ. ವ್ಯಾಂಗ್ ಆಹ್‌ಕ್ಯೂನ ಪಿಗ್‌ಟೇಲ್ ಹಿಡಿದು ದರದರ ಗೋಡೆ ಬಳಿಗೆ ಎಳೆದು ತಂದು, ರೂಢಿಯಂತೆ ಅವನ ತಲೆಯನ್ನು ಗೋಡೆಗೆ ಘಟ್ಟಿಸಲು ಅಣಿಯಾದ.

"ಸಜ್ಜನನಾದವನು ಮಾತಾಡ್ತಾನೇ ಹೊರತಾಗಿ ಕೈ ಹೀಗೆ ಮುಂದು ಮಾಡೋದಿಲ್ಲ" ತಲೆ ಒಂದು ದಿಕ್ಕಿಗೆ ಹೊರಳಿಸಿ, ವಿರೋಧಿಸುತ್ತ ಹೇಳಿದ.

ವ್ಯಾಂಗ್, ಹಾಗೆ ನೋಡಿದರೆ ಸಜ್ಜನನೇನೂ ಆಗಿರಲಿಲ್ಲ. ಆಹ್‌ಕ್ಯೂನ ಮಾತೊಂದೂ ಅವನ ತಲೆಗೆ ಹೋಗಲಿಲ್ಲ. ಆಹ್‌ಕ್ಯೂನನ್ನು ಎಳೆದೆಳೆದು ಐದಾರು

ಬಾರಿ ಗೋಡೆಗೆ ಢೀ ಹೊಡೆಸಿದ. ಒಂದು ಸಲ ಜೋರಾಗಿ ಹೊಡೆಸಿ, ಒದ್ದು ಎಸೆದಷ್ಟಕ್ಕೆ ಆಹ್‌ಕ್ಯೂ, ಎರಡು ಗಜದಷ್ಟು ದೂರ ಹೋಗಿ ಬಿದ್ದ. ಆಮೇಲೇನೆ ವ್ಯಾಂಗ್ ತೃಪ್ತಿಯಿಂದ ಅಲ್ಲಿಂದ ಕಾಲ್ತೆಗೆದ.

ಆಹ್‌ಕ್ಯೂ ನೆನಪಿನಲ್ಲಿ ಉಳಿದದ್ದೆಂದರೆ, ಇಂತಹ ಅವಮಾನ ಆದದ್ದು ಇದೇ ಮೊದಲ ಸಲ. ವ್ಯಾಂಗ್‌ನ ಅಸಹ್ಯವಾದ ಗಡ್ಡ ಮೀಸೆಗಳಿಗಾಗಿ ಆಹ್‌ಕ್ಯೂ ಯಾವಾಗಲೂ ಅವನನ್ನು ಗೇಲಿ ಮಾಡುತ್ತಿದ್ದ. ಆದರೆ ತಾನೆಂದೂ ಗೇಲಿಗೆ ಒಳಗಾಗುತ್ತಿರಲಿಲ್ಲ. ಒದೇನೂ ತಿಂದಿರಲಿಲ್ಲ. ಆದರೆ ಇವತ್ತು ಅವನ ನಿರೀಕ್ಷೆಗೆ ವಿರುದ್ಧವಾಗಿ ವಿಸ್ಕರ್ಸ್‌ವ್ಯಾಂಗ್ ಅವನನ್ನು ಚೆನ್ನಾಗಿ ಥಳಿಸಿಯೂ ಇದ್ದ. ಪೇಟೆ ಜಾಗದಲ್ಲಿ ಅವರು ಹೇಳಿದ್ದರಲ್ಲಿ ನಿಜ ಇತ್ತು. "ಚಕ್ರವರ್ತಿಗಳು ಅಧಿಕೃತ ಪರೀಕ್ಷೆಗಳನ್ನು ರದ್ದು ಪಡಿಸಿದ್ದ ಕಾರಣ ವಿದ್ವಾಂಸರಿಗೆ ಈಗ ಬೇಡಿಕೆಯೇ ಇರಲಿಲ್ಲ." ಪರಿಣಾಮವಾಗಿ ಚಾವೋ ಕುಟುಂಬ ಪ್ರತಿಷ್ಠೆಯನ್ನು ಕಳೆದುಕೊಂಡಿತ್ತು. ಬಹುಶಃ ಇದೇ ಕಾರಣಕ್ಕೆ ಅವನನ್ನು ಹೀಗೆ ತಿರಸ್ಕಾರದಿಂದ ಕಾಣುತ್ತಿದ್ದರೋ ಏನೋ?

ಆಹ್‌ಕ್ಯೂ ಮೀನ ಮೇಷ ನೋಡುತ್ತಾ ನಿಂತ. ದೂರದಿಂದ ಆಹ್‌ಕ್ಯೂನ ಇನ್ನೊಬ್ಬ ವಿರೋಧಿ ಬಂದ. ಮಿಸ್ಟರ್ ಚಿಯನ್‌ನ ಹಿರಿಯ ಮಗ. ಇವನನ್ನು ಕಂಡರೂ ಆಹ್‌ಕ್ಯೂ ಅಸಹ್ಯ ಪಡುತ್ತಿದ್ದ. ಸಿಟಿನಲ್ಲಿದ್ದ ಯಾವುದೋ ವಿದೇಶಿ ಶಾಲೆಯಲ್ಲಿ ಓದಿ, ಜಪಾನಿಗೆ ಹೋಗಿದ್ದನಂತೆ. ಆರು ತಿಂಗಳಾದ ಮೇಲೆ ಅವನು ಬಂದಾಗ ಅವನ ಕಾಲುಗಳು ನೇರವಾಗಿದ್ದವು. ಪಿಗ್ ಟೇಲ್ ಅದೃಶ್ಯವಾಗಿತ್ತು. ಅವನಮ್ಮ ಜೋರಾಗಿ ಅತ್ತಿದ್ದಳು. ಅವನ ಹೆಂಡತಿ ಮೂರು ಬಾರಿ ಬಾವಿಯಲ್ಲಿ ಬೀಳಲು ಪ್ರಯತ್ನಿಸಿದ್ದಳು. ಆಮೇಲೆ ಅವರ ಅಮ್ಮ ಹೇಳಿದರು – ನನ್ನ ಮಗ ಕುಡಿದು ಮಲಗಿದ್ದಾಗ ಯಾರೋ ದುಷ್ಟ ಅವನ ಜುಟ್ಟನ್ನು ಕತ್ತರಿಸಿಬಿಟ್ಟಿದ್ದಾನೆ. ಅವನು ಅಧಿಕಾರಿಯಾಗಬಹುದಿತ್ತು. ಆದರೆ ಈಗ ಜುಟ್ಟು ಬೆಳೆಯುವ ತನಕ ಕಾಯಬೇಕಾಗುತ್ತೆ. ಆಹ್‌ಕ್ಯೂ ಮಾತ್ರ ಇದ್ಯಾವುದನ್ನೂ ನಂಬಲಿಲ್ಲ. ಅದಕ್ಕೆ ಅವನನ್ನು ಅನುಕರಣೆಯ ವಿದೇಶಿ ದೆವ್ವ! ವಿದೇಶಿ ಕೂಳಿನ ದೇಶದ್ರೋಹಿ ಅಂತ ಕರೆಯುವುದನ್ನೇ ರೂಢಿ ಮಾಡಿಕೊಂಡಿದ್ದ. ಉಸಿರು ಕಟ್ಟುವ ಹಾಗೆ ಅವನಿಗೆ ಶಾಪ ಹಾಕುತ್ತಿದ್ದ.

ಅವನಲ್ಲಿದ್ದ ಕೃತಕವಾದ ಜುಟ್ಟನ್ನು ಎಲ್ಲಕ್ಕಿಂತ ಹೆಚ್ಚಾಗಿ ಅಸಹ್ಯಪಡುತ್ತಿದ್ದ. ಕೃತಕ ಜುಟ್ಟನ್ನು ಧರಿಸಿದವನನ್ನು ಮನುಷ್ಯ ಅಂತಲೇ ಭಾವಿಸುತ್ತಿರಲಿಲ್ಲ. ಇನ್ನು ಅವನ ಹೆಂಡತಿ ನಾಲ್ಕನೇ ಸಲಕ್ಕೆ ಬಾವಿಗೆ ಬೀಳಲು ಪ್ರಯತ್ನಿಸಲಿಲ್ಲವಾದ ಕಾರಣ, ಅವಳೂ ಒಳ್ಳೆಯ ಹೆಂಗಸು ಎನಿಸಿಕೊಳ್ಳಲಿಲ್ಲ.

ಈಗ ಅನುಕರಣೆಯ ವಿದೇಶಿ ಪಿಶಾಚಿ ಹತ್ತಿರ ಬರುತ್ತಿದ್ದ.

"ಬೋಳುದಲೆಯ ಕತ್ತೆ"— ತನಗೆ ಮಾತ್ರ ಕೇಳಿಸುವಂತೆ, ಮೊದಮೊದಲು ಗೊಣಗುತ್ತಿದ್ದ. ಆದರೆ ಇವತ್ತು ಅವನೂ ಕೋಪದಲ್ಲಿದ್ದ. [illegible]

ಚೆಲ್ಲಿಕೊಳ್ಳಬೇಕೆಂದು ಕಾಯುತ್ತಿದ್ದುದರಿಂದ, ಅವನಿಗರಿಪಿಲ್ಲದೆ, ಅಪ್ರಯತ್ನ ಪೂರ್ವಕವಾಗಿ ಬೈಗುಳು ಹೊರಗೆ ಬಂದವು.

ದುರಾದೃಷ್ಟಕ್ಕೆ ಈ ಬೋಳುತಲೆ ಕಂದು ಬಣ್ಣದ ಹೊಳಪಿನ ಕೋಲೊಂದನ್ನು ಹಿಡಿದಿತ್ತು. ಆಹ್‌ಕ್ಯೂ ಇದನ್ನು ಶೋಕಧಾರಿ ದಂಡವೆಂದು ಕರೆಯುತ್ತಿದ್ದ. ವೇಗದ ಹೆಜ್ಜೆಯೊಂದಿಗೆ ಬಂದು ಆಹ್‌ಕ್ಯೂನ ಬೆನ್ನ ಮೇಲೆ ಬಿಗಿದ. ಇದನ್ನು ಈ ಮೊದಲೇ ನಿರೀಕ್ಷಿಸಿದ್ದ ಆಹ್‌ಕ್ಯೂ ತನ್ನ ಬೆನ್ನನ್ನು ಸೆಟೆಸಿ ಅಣಿಯಾಗಿದ್ದ. ಪ್ರತಿಧ್ವನಿಸುತ್ತ ಬಿದ್ದ ಧಪ್ ಧಪ್ ಹೊಡೆತ ಬೆನ್ನಿಂದ ತಲೆ ತಲುಪಿತು.

"ನನಗೆ ಗೊತ್ತಿತ್ತು" ಹತ್ತಿರ ನಿಂತಿದ್ದ ಮಗುವಿಗೆ, ಆಹ್‌ಕ್ಯೂ ಹೇಳಿದ.

ಧಪ್! ಧಪ್! ಧಪ್!

ಆಹ್‌ಕ್ಯೂಗೆ ನೆನಪಿದ್ದಂತೆ ಇದು ಎರಡನೇ ಸೋಲು, ಹೊಡೆತಗಳು ನಿಂತ ಮೇಲೆ, ಎಲ್ಲ ಮುಗೀತು ಅಂದುಕೊಂಡ. ಅವನಿಗೂ ಒಂದು ರೀತಿಯಲ್ಲಿ ಬಿಡುಗಡೆ ಎನಿಸಿತು. ಜೊತೆಗೆ ಹಿಂದಿನವರಿಂದ ಕಲಿತು ಬಂದಿದ್ದ ಮರೆತು ಬಿಡುವ ಗುಣ, ಅವನ ನೆರವಿಗೆ ಬಂತು. ನಿಧಾನವಾಗಿ ಹೆಜ್ಜೆಹಾಕುತ್ತ ಹೆಂಡದಂಗಡಿ ಸಮೀಪಿಸಿದಾಗ, ಅವನು ಮತ್ತೆ ಸಂತೋಷವಾಗಿದ್ದ.

ಅಷ್ಟು ಹೊತ್ತಿಗೆ ಸರಿಯಾಗಿ "ಕ್ವಯಟ್ ಸೆಲ್ಫ್ ಇಂಪ್ರೂವ್‌ಮೆಂಟ್" ಕಾನ್ವೆಂಟಿನ ಕ್ರೈಸ್ತ ಕಿರಿವಯಸ್ಸಿನ ಸನ್ಯಾಸಿನಿಯೊಬ್ಬಳು ಅವನೆಡೆಗೆ ಬಂದಳು. ಸನ್ಯಾಸಿನಿ ದೃಷ್ಟಿಗೆ ಬೀಳುತ್ತಿದ್ದಂತೆ ಆಹ್‌ಕ್ಯೂಗೆ ತಪ್ಪೊಪ್ಪಿಕೊಳ್ಳುವಂತೆ ಅನಿಸುತ್ತಿತ್ತು. ಅವನಿಗಾದ ಅಷ್ಟೆಲ್ಲ ಅವಮಾನದ ನಂತರವೂ ನಡೆದದ್ದನ್ನೆಲ್ಲ ನೆನಪಿಸಿಕೊಂಡಾಗ ಅವನ ಕೋಪ ಮರುಕಳಿಸಿತು.

"ಇವತ್ತಿನ ನನ್ನ ದುರಾದೃಷ್ಟವೆಲ್ಲ ನಿನ್ನನ್ನು ನೋಡಬೇಕಾಗಿ ಬಂದದ್ದಕ್ಕೆ!" ತನ್ನಲ್ಲಿಯೇ ಹೇಳಿಕೊಂಡ.

ಆಕೆಯ ಬಳಿಗೆ ಹೋಗಿ ಜೋರಾಗಿ ಸದ್ದು ಮಾಡುತ್ತ ಉಗಿದ... ಊಹ್... ಪೂಹ್...

ಆ ಚಿಕ್ಕ ಸನ್ಯಾಸಿನಿ ಅವನ ಕಡೆ ಲಕ್ಷ್ಯವನ್ನೇ ಕೊಡದೆ, ತಲೆ ಬಗ್ಗಿಸಿಕೊಂಡು ನಡೆದಳು. ಆಹ್‌ಕ್ಯೂ ಅವಳ ಹತ್ತಿರಹೋಗಿ ಕೈಚಾಚಿ ಅವಳ ನುಣ್ಣನೆಯ ತಲೆ ಮೇಲೆ ಕೈಯಾಡಿಸಿದ. "ಬೋಳು ತಲೆ!.... ಬೇಗ ಹೋಗು. ನಿನ್ನ ಸನ್ಯಾಸಿ ನಿನಗಾಗಿ ಕಾಯುತ್ತಿರಬಹುದು...."

"ಯಾರನ್ನೋ ತಮಾಷೆ ಮಾಡ್ತಿರೋದು?... ನಾಚಿಕೆಯಿಂದ ಕೆಂಪಾಗುತ್ತ ಕೇಳಿದಳು. ಹಾಗೆಯೇ ಬೇಗ ಬೇಗ ಹೆಜ್ಜೆ ಹಾಕಿದಳು.

ಹೆಂಡದಂಗಡಿಯಲ್ಲಿ ಇದ್ದ ಜನ ನಗತೊಡಗಿದರು. ತನ್ನ ಸಾಹಸವನ್ನು ಮೆಚ್ಚಿದ್ದನ್ನು ಗಮನಿಸಿ, ಆಹ್‌ಕ್ಯೂ ಇನ್ನಷ್ಟು ಖುಷಿ ಪಟ್ಟ.

"ಸನ್ಯಾಸಿ ತಮಾಷೆ ಮಾಡಬಹುದಾದರೆ, ನಾನ್ಯಾಕೆ ಮಾಡಬಾರದು?" ಅಂತ ಹೇಳುತ್ತ ಅವಳ ಕೆನ್ನೆ ಚಿವುಟಿದ.

ಮತ್ತೆ ಹೆಂಡದಂಗಡಿಯಲ್ಲಿದ್ದವರು ಜೋರಾಗಿ ನಗಲು ತೊಡಗಿದರು. ಆಹ್‌ಕ್ಯೂ ಇನ್ನಷ್ಟು ಇದರಿಂದ ಖುಷಿಪಟ್ಟ. ನೋಡುತ್ತಿದ್ದವರನ್ನು ಮತ್ತೂ ತೃಪ್ತಿ ಪಡಿಸಲು, ಅವಳನ್ನು ಹೋಗಲು ಬಿಡುವ ಮುಂಚೆ ಮತ್ತೊಮ್ಮೆ ಕೆನ್ನೆ ಚಿವುಟಿದ.

ಇದೆಲ್ಲ ನಡೆಯುವಷ್ಟು ಹೊತ್ತಿಗೆ, ವಿಸ್ಕರ್ಸ್ ವ್ಯಾಂಗ್, ವಿದೇಶೀ ಪಿಶಾಚಿ, ಇವರುಗಳನ್ನೆಲ್ಲ ಮರೆತು ಬಿಟ್ಟಿದ್ದ. ಇಡೀ ದಿನದ ದುರದೃಷ್ಟಕ್ಕೆ ಪರಿಹಾರ ಸಿಕ್ಕಂತಾಗಿತ್ತು. ಆ ಹೊಡೆತಗಳು ತಿಂದಮೇಲೆ ಈಗ ನಿರಾಳ ಎನಿಸಿತ್ತು. ಗಾಳಿಯಲ್ಲಿ ತೇಲುತ್ತಿರುವಂತಹ ಅನುಭವ ಅವನದಾಗಿತ್ತು.

ದೂರದಲ್ಲಿ ಚಿಕ್ಕ ಸನ್ಯಾಸಿನಿ ಕಣ್ಣು ತುಂಬಿಕೊಂಡು "ನೀನು ಗಂಡು ಮಕ್ಕಳಿಲ್ಲದೆ ಸಾಯುವಂತಾಗು" ಎಂದು ಶಪಿಸಿದಳು.

ಆಹ್‌ಕ್ಯೂ ಅಟ್ಟಹಾಸದಿಂದ ನಕ್ಕ.

ಹೆಂಡದಂಗಡಿಯಲ್ಲಿದ್ದವರೂ ಇದೇ ರೀತಿಯಲ್ಲಿ ನಕ್ಕರಾದರೂ ನಗುವಿನ ತೀವ್ರತೆ ಸ್ವಲ್ಪ ಕಡಿಮೆ ಇತ್ತು.

* * *

ಅಧ್ಯಾಯ – ೩

ಪ್ರೀತಿಯ ದುರಂತ

ಜಯಶಾಲಿಗಳಾದ ಕೆಲವು ಮಂದಿ ಇರುತ್ತಾರೆ. ತಮ್ಮ ಎದುರಾಳಿಗಳು ಬಹಳ ಪರಾಕ್ರಮಿಗಳಾಗಿದ್ದಾಗ ಸಿಂಹಗಳಂತೆ ಇದ್ದರೆ, ಅವರಿಂದಾದ ಗೆಲುವನ್ನು ಹೆಮ್ಮೆಯಿಂದ ಒಪ್ಪಿಕೊಳ್ಳುತ್ತಾರೆ; ಆದರೆ ಎದುರಾಳಿಗಳು ಹೇಡಿಗಳಾಗಿ, ಕುರಿಗಳಂತೆ ಇದ್ದರೆ, ಅವರ ಮೇಲೆ ಗೆಲುವನ್ನು ಪಡೆದರೂ ಆ ಗೆಲುವಿನಿಂದ ಸಂತೃಪ್ತರಾಗುವುದೇ ಇಲ್ಲ. ಇನ್ನೂ ಕೆಲವರು ಇರುತ್ತಾರೆ, ಶತ್ರುಗಳನ್ನು ಕೊಂದು, ಅವರು ಶರಣಾಗತರಾಗುವಂತೆ ಮಾಡಿ, ಸೋಲಿನಿಂದ ಪೂರ್ತಿಯಾಗಿ ಬಾಗುವಂತೆ ಮಾಡಿ... ಇನ್ನೂ ಏನೇನೋ ರೀತಿಯಲ್ಲಿ ಗೆದ್ದಿದ್ದರೂ, ಅವರು ಒಂಟಿತನ, ಅನಾಥತೆ ಯಾರಿಗೂ ಬೇಡವಾದವರಂತೆ ತಮ್ಮನ್ನು ಭಾವಿಸಿಕೊಳ್ಳುತ್ತಾರೆ. ಆಗ ಅವರಿಗೆ, ಅವರ ಗೆಲುವು ಕೇವಲ ಒಂದು ದುರಂತವಾಗಿ ಕಾಣಿಸುತ್ತದೆ. ಆದರೆ ನಮ್ಮ ಕಥಾನಾಯಕ ಇಷ್ಟೊಂದು ನರಸತ್ತವನಲ್ಲ. ಯಾವಾಗಲೂ ಉತ್ಸಾಹಿಯಾಗಿ ಇರುತ್ತಿದ್ದ. ಪ್ರಪಂಚದ ಇತರ ರಾಷ್ಟ್ರಗಳ ಮೇಲೆ ಚೀನಾದ ನೈತಿಕ ದಿಗ್ವಿಜಯಕ್ಕೆ ಇದು ಸಾಕ್ಷಿಯಾಗಿದೆ.

ಆಹ್‌ಕ್ಯೂನನ್ನು ನೋಡಿದಾಗ, ಗೆಲುವು, ಸಂಭ್ರಮಗಳೊಂದಿಗೆ ಈ ಕ್ಷಣ ಹಾರಲು ಸಿದ್ಧನಾಗಿರುವಂತಿದ್ದಾನೆ.

ಈ ದಿಗ್ವಿಜಯಕ್ಕೆ ವಿಚಿತ್ರ ಪರಿಣಾಮಗಳು ಇಲ್ಲದೆ ಇಲ್ಲ. ಸಾಕಷ್ಟು ಹೊತ್ತು ಹಾರುತ್ತಲೇ ಇದ್ದ. ಹಾರುತ್ತ ಹಾರುತ್ತ ತನ್ನ ರಕ್ಷಕ ದೇವರ ಗುಡಿಗೆ ಹಾರಿದ. ಮಾಮೂಲಾಗಿದ್ದರೆ, ಅವನು ಅಲ್ಲಿ ತಲೆಯೂರಿದ ಕ್ಷಣದಲ್ಲೇ ನಿದ್ದೆ ಮಾಡುತ್ತಿದ್ದ. ಆದರೆ ಈ ದಿನ ಸಂಜೆ ಅವನಿಗೆ ನಿದ್ದೆ ಮಾಡಲು ಆಗಲೇ ಇಲ್ಲ. ತನ್ನ ಕೈಹೆಬ್ಬೆರಳು, ಕಿರುಬೆರಳಿಗೆ ಏನೋ ಆದ ಹಾಗೆ ಇದೆ. ಮಾಮೂಲಿಗಿಂತ, ಮುಟ್ಟಿದರೆ ನುಣುಪಾಗಿದೆ. ಚಿಕ್ಕ ಸನ್ಯಾಸಿನಿಯ ಕೆನ್ನೆಯ ನುಣುಪೇನಾದರೂ ಬೆರಳುಗಳಿಗೆ ಮೆತ್ತಿಕೊಂಡಿದೆಯೋ ಇಲ್ಲ ತನ್ನ ಬೆರಳುಗಳು ಅವಳ ಕೆನ್ನೆಯ ಮೇಲೆ ಮೃದುವಾದುದನ್ನೇನಾದರೂ ಸವರಿದೆಯೋ! – ಹೇಳುವುದು ಕಷ್ಟ!

"ಆಹ್‌ಕ್ಯೂ, ಗಂಡು ಮಕ್ಕಳಿಲ್ಲದೆ ನೀನು ಸಾಯುವಂತಾಗು"

ಈ ಮಾತುಗಳು ಆಹ್‌ಕ್ಯೂನ ಕಿವಿಗಳಲ್ಲಿ ಅನುರಣಿಸಿದವು. ಹೇಳಿದ್ದು ಸರಿ! ನಾನು ಮದುವೆಯಾಗಿ ಹೆಂಡತಿಯನ್ನು ಪಡೆಯಬೇಕು. ಇಲ್ಲವಾದಲ್ಲಿ ನನ್ನ ಪ್ರೇತಾತ್ಮಕ್ಕೆ ಪಿಂಡದಾನ ಮಾಡಲು ಯಾರೊಬ್ಬರೂ ಇರುವುದಿಲ್ಲ. ಖಂಡಿತ ನನಗೊಬ್ಬಳು ಹೆಂಡತಿ ಬೇಕೇ ಬೇಕು". ಮೂರು ರೀತಿಯಲ್ಲಿ ರಕ್ತ ಸಂಬಂಧಗಳಿವೆ. ಆದರೆ ಅತ್ಯಂತ ಭಯಂಕರವಾದ ವಿಚಾರವೆಂದರೆ ಸಂತಾನವಿಲ್ಲದೆ ವಂಶ ಮುಂದುವರಿಸದೆ ಉಳಿಯುವುದು. ಎಲ್ಲಕ್ಕಿಂತ ಇನ್ನೊಂದು ದುರಂತವೆಂದರೆ, ಪ್ರೇತಾತ್ಮಗಳು, ತಮ್ಮ ವಂಶದವರಿಲ್ಲದೆ ಹೋದರೆ ಉಪವಾಸ ಸಾಯುತ್ತವೆ. ಈ ನಂಬಿಕೆಗಳು ಸಾಧು ಸಂತರು ಹೇಳಿರುವುದಕ್ಕೆ ಸರಿಯಾಗಿ ಹೊಂದಿಕೊಳ್ಳುತ್ತವೆ. ನಂತರ ಅವನು ಹುಚ್ಚುಚ್ಚಾಗಿ ಓಡಿ ಹೋದದ್ದು ಅಯ್ಯೋ ಪಾಪ ಅನಿಸುತ್ತೆ.

"ಹೆಂಗಸು! ಹೆಂಗಸು!" ಅವನು ಯೋಚಿಸಿದ. ಸನ್ಯಾಸಿ ಗೇಲಿ ಮಾಡ್ತಾನೆ... ಹೆಂಗಸು... ಹೆಂಗಸು... ಮತ್ತೆ ಅವನು ಯೋಚಿಸಿದ.

ಆಮೇಲೆ ಆಹ್‌ಕ್ಯೂ ಯಾವಾಗ ನಿದ್ದೆಗೆ ಜಿದ್ದನೆಂದು ಗೊತ್ತಾಗಲಿಲ್ಲ. ಇದಾದ ಮೇಲೆ ಅವನಿಗೆ ಅವನ ಬೆರಳುಗಳು ಬಹಳ ಮೃದು ಅನಿಸತೊಡಗಿತು. ಮನಸ್ಸು ಹಗುರವಾಯಿತು. "ಹೆಂಗಸು!"... ಅವನು ಯೋಚಿಸುತ್ತಲೇ ಇದ್ದ.

ಇದಾದ ನಂತರ, ನಮಗೆ ಅನಿಸುತ್ತೆ ಹೆಂಗಸು ಮನುಷ್ಯ ಕುಲಕ್ಕೆ ಒಂದು ತಲೆನೋವು! ಎಂದುಕೊಂಡ. ಹೆಂಗಸರಿಂದಾಗಿ ಹಾಳಾಗದಿದ್ದರೆ ಎಷ್ಟೊಂದು ಚೀನೀ ಪುರುಷರು ಸಾಧು ಸಂತರಾಗಿ ಇರುತ್ತಿದ್ದರು. ಆದರೆ ದುರಾದೃಷ್ಟ ಹಾಗಾಗಲಿಲ್ಲ. ಷ್ಯಾಂಗ್ ವಂಶ ತಾಚೀ ಎಂಬ ಹೆಣ್ಣಿಂದ ನಾಶವಾಯಿತು. ಚಾ ವಂಶ ಪಾನ್‌ಷ್ಸುವಿನಿಂದ ನಿರ್ನಾಮವಾಯಿತು. ಚಿನ್‌ವಂಶ ಹೇಗೆ ನಾಶವಾಯಿತು ಅನ್ನೋದಕ್ಕೆ ಐತಿಹಾಸಿಕ ಪ್ರಮಾಣವಿಲ್ಲದಿದ್ದರೂ, ಹೆಣ್ಣೊಬ್ಬಳು ಕಾರಣವಾಗಿರಬೇಕು ಎಂದರೆ, ಸತ್ಯಕ್ಕೆ ದೂರವೇನಲ್ಲ. "ತೂಂಗ್ ಷೋ" ನ ಸಾವು ತಿಯಾವೋ ಚಾನ್‌ಳಿಂದ ಸಂಭವಿಸಿದ್ದು ಸತ್ಯ ಸಂಗತಿಯಾಗಿದೆ.

ಆಹ್‌ಕ್ಯೂ ಕೂಡಾ ಪ್ರಾರಂಭಕ್ಕೆ ನೈತಿಕ ಶಿಸ್ತಿನ ಮನುಷ್ಯನೇ ಆಗಿದ್ದ. ಯಾರಾದರೂ ಗುರುಗಳು ಮಾರ್ಗದರ್ಶನ ನೀಡಿದರೋ ಏನೋ ಗೊತ್ತಿಲ್ಲ. ಅಂತೂ ಅವನು ಮಾತ್ರ ಸ್ತ್ರೀ ಪುರುಷ ಸಂಬಂಧಗಳನ್ನು ಪ್ರತ್ಯೇಕವಾಗಿ ಬೇರೆ ಬೇರೆಯಾಗಿ ಪರಿಗಣಿಸುತ್ತಿದ್ದ. ಸನ್ಯಾಸಿಯಂತೆ. ಅನುಕರಣೆಯ ವಿದೇಶಿ ಪಿಶಾಚಿಯಂತೆ ಅಸಂಪ್ರದಾಯಿಕವಾದ ಕೆಲಸಗಳನ್ನು ಮಾಡದೆ ಇದ್ದುದು ಸರಿಯಾಗಿತ್ತು. ಅವನದೇ ಆದ ಕೆಲವು ಅಭಿಪ್ರಾಯಗಳಿದ್ದವು - ಸನ್ಯಾಸಿನಿಯರು ಸನ್ಯಾಸಿಯ ಜೊತೆಯಲ್ಲಿ ಗುಪ್ತವಾಗಿ ವ್ಯವಹರಿಸಬೇಕು. ಹೆಣ್ಣೊಬ್ಬಳು ಬೀದಿಯಲ್ಲಿ ಒಂಟಿಯಾಗಿ ಹೋಗುವುದು ಪುರುಷರನ್ನು ಮೋಹಿಸುವುದಕ್ಕಾಗಿ. ಗಂಡು-ಹೆಣ್ಣು ಒಟ್ಟಿಗೆ ಮಾತಾಡುತ್ತಿದ್ದರೆ, ತಾವು ತಮ್ಮ [illegible] ನಿರ್ಧರಿಸಲು [illegible]! [illegible] [illegible]ಕ್ಕಾಗಿ

ಜೋರಾಗಿ ಏನಾದರೂ ಟೀಕೆ ಮಾಡುತ್ತಿದ್ದ; ದುರುಗುಟ್ಟಿ ಕೋಪದಿಂದ ನೋಡುತ್ತಿದ್ದ; ಸ್ಥಳದಲ್ಲಿ ಯಾರೂ ಇಲ್ಲದಿದ್ದರೆ ಹಿಂದಿನಿಂದ ಕಲ್ಲೊಂದನ್ನು ಎಸೆಯುತ್ತಿದ್ದ. ದೃಢವಾಗಿ ನಿಲ್ಲಬೇಕಾದ ಮೂವತ್ತನೇ ವಯಸ್ಸಿನಲ್ಲಿ ಇರುವವನು, ಸನ್ಯಾಸಿನಿಯ ವಿಷಯದಲ್ಲಿ ತಲೆಕೆಡಿಸಿಕೊಳ್ಳುತ್ತಾನೆಂದು ಯಾರು ತಾನೇ ಹೇಳಬಲ್ಲರು? ನಮ್ಮ ಪುರಾತನ ವಿಧಿನಿಯಮಗಳ ಪ್ರಕಾರ ಈ ಬಗೆಯ ನಿರಾತಂಕ ಮನಸ್ಸು ಆಕ್ಷೇಪಾರ್ಹವಾದುದು. ಹಾಗಾಗಿ ಹೆಂಗಸರು ಧಿಕ್ಕಾರ ಯೋಗ್ಯರು. ಆ ಎಳೆಯ ಸನ್ಯಾಸಿನಿಯ ಮುಖ ಮೃದುವಾಗಿ, ನುಣುಪಾಗಿ ಇದ್ದಿರದಿದ್ದರೆ ಆಹ್‌ಕ್ಯೂ ಅವಳಿಂದ ಹೀಗೆ ಮರುಳಾಗುತ್ತಿರಲಿಲ್ಲ. ಇಲ್ಲ ಅವಳು ತನ್ನ ಮುಖವನ್ನು ಬಟ್ಟೆಯಿಂದ ಮುಚ್ಚಿಕೊಂಡಿದ್ದರೂ ಇಂತಹ ಅಪಾಯವಿರುತ್ತಿರಲಿಲ್ಲ. ಐದಾರು ವರ್ಷಗಳ ಹಿಂದೆ ಒಂದು ಸಲ ಯಾವುದೋ ಒಂದು ಒಪೆರಾ ನೋಡುತ್ತಿದ್ದಾಗ, ಪ್ರೇಕ್ಷಕ ಹೆಂಗಸೊಬ್ಬಳ ಕಾಲುಗಳನ್ನು ಚಿವುಟಿದ್ದ. ಆದರೆ ಅವಳು ಹಾಕಿದ್ದ ಟ್ರಾಜರ್‌ನಿಂದ ಅವನಿಗೆ ಅವಳ ಚರ್ಮದ ಸ್ಪರ್ಷ ಆಗಲಿಲ್ಲವಾದ ಕಾರಣ ಈ ರೀತಿ ಮರುಳಾಗಲಿಲ್ಲ. ಎಳೆ ಸನ್ಯಾಸಿನಿ ಬಟ್ಟೆಯಿಂದ ಮುಖ ಮರೆ ಮಾಡಿರದೆ ಸಂಪ್ರದಾಯ ಬಾಹಿರರಾಗಿ ಉಳಿಯುವುದರಿಂದ ಉಂಟಾಗುವ ಜಿಗುಪ್ಸೆಗೆ ಇದೊಂದು ನಿದರ್ಶನವಾಗಿತ್ತು.

"ಹೆಂಗಸು..." ಆಹ್‌ಕ್ಯೂ ಆಲೋಚಿಸಿದ. ಪುರುಷರನ್ನು ಮರುಳುಗೊಳಿಸುವ ಹೆಂಗಸರ ಮೇಲೆ ಕಣ್ಣಿಟ್ಟಿದ್ದ. ತನ್ನೊಂದಿಗೆ ಮಾತನಾಡುವ ಹೆಂಗಸರನ್ನು ಜಾಗರೂಕತೆಯಿಂದ ಗಮನಿಸುತ್ತಿದ್ದ. ಆದರೆ ಯಾರೊಬ್ಬರೂ ಗುಪ್ತ ಪ್ರಣಯಕ್ಕೆ ಸಂಬಂಧ ಪಟ್ಟ ಏನನ್ನೂ ಮಾತಾಡಲಿಲ್ಲ. ಆಹಾ! ಸಂಪ್ರದಾಯ ಬಾಹಿರ ಹೆಂಗಸರಿಗೊಂದು ನಿದರ್ಶನ! ಎಲ್ಲರೂ ಸೋಗಿನ ಮರ್ಯಾದೆಯನ್ನು ಧರಿಸಿದ್ದರು.

ಒಂದು ದಿನ ಆಹ್‌ಕ್ಯೂ, ಚಾವೋನ ಮನೆಯಲ್ಲಿ ಅಕ್ಕಿ ಬೀಸುತ್ತಿದ್ದ. ರಾತ್ರಿ ಊಟ ಆದ ಮೇಲೆ ಪೈಪ್ ಸೇದಲೆಂದು ಅಡಿಗೆ ಮನೆಯಲ್ಲಿ ಕುಳಿತಿದ್ದ. ಬೇರೆಯವರ ಮನೆ ಆಗಿದ್ದರೆ, ರಾತ್ರಿ ಊಟದ ನಂತರ ಮನೆಗೆ ಹೊರಟು ಬಿಡುತ್ತಿದ್ದ. ಚಾವೋನ ಮನೆಯಲ್ಲಿ ರಾತ್ರಿಯೂಟ ಬೇಗನೇ ಮುಗಿದಿತ್ತು. ಸಾಮಾನ್ಯವಾಗಿ ಊಟ ಮುಗಿದ ತಕ್ಷಣ, ದೀಪ ಹಚ್ಚಬಾರದು. ಎಲ್ಲ ಹೋಗಿ ಮಲಗಬೇಕು ಅನ್ನೋ ನಿಯಮ ಇತ್ತು. ಆದರೂ ಒಮ್ಮೊಮ್ಮೆ ಈ ನಿಯಮವನ್ನು ಮೀರುವ ಸಂದರ್ಭಗಳು ಇರುತ್ತಿದ್ದವು. ಚಾವೋನ ಮಗ ಪಬ್ಲಿಕ್ ಪರೀಕ್ಷೆಗೆ ಓದಬೇಕಾಗಿದ್ದುದರಿಂದ ಅವನು ದೀಪ ಹಚ್ಚಲು ಪರವಾನಗಿ ಇತ್ತು. ಒಮ್ಮೊಮ್ಮೆ ಆಹ್‌ಕ್ಯೂಗೂ ಏನಾದರೂ ಸಣ್ಣ ಪುಟ್ಟ ಕೆಲಸಗಳನ್ನು ಮಾಡಬೇಕಾಗಿ ಬಂದಾಗ, ದೀಪ ಹಚ್ಚಬಹುದಾಗಿತ್ತು. ಇಂತಹ ಅಪವಾದಗಳಿಂದಾಗಿ ಆಹ್‌ಕ್ಯೂ ಅಡಿಗೆ ಮನೆಯಲ್ಲಿ, ತನ್ನ ಕೆಲಸ ಮುಂದುವರೆಸುವುದಕ್ಕೆ ಮೊದಲು ಪೈಪ್ ಸೇದಲು ಕುಳಿತ.

ಆಗ ಚಾವ್ರೋ ಮನೆಯ ಕೆಲಸದವಳು ಅಮಾಹ್‌ವ್ರೂ ಪಾತ್ರೆ ತೊಳೆದು ಇಟ್ಟ ಮೇಲೆ, ಅಲ್ಲಿಯೇ ಇದ್ದ ಬೆಂಚಿನ ಮೇಲೆ ಕುಳಿತು ಆಹ್‌ಕ್ಯೂ ಜೊತೆಗೆ ಹರಟೆಗೆ ತೊಡಗಿದಳು.

"ನಮ್ಮೊಡತಿ ಎರಡು ದಿನದಿಂದ ಏನನ್ನೂ ತಿಂದೇ ಇಲ್ಲ. ಯಾಕೇಂದ್ರೆ ಯಜಮಾನ್ರು ಸೂಳೇನ ತಂದು ಇರಿಸ್ಕೋತಾರಂತೆ!...."

"ಹೆಂಗಸು! ಅಮಾಹ್‌ವ್ರೂ.... ಈ ಎಳೆ ವಿಧವೆ..." ಆಹ್‌ಕ್ಯೂ ಯೋಚಿಸಿದ.

"ನಮ್ಮ ಚಿಕ್ಕೊಡತಿ ಏನೇ ತಿಂಗಳಲ್ಲಿ ಒಂದು ಮಗು ಹಡೀತಾರೆ..."

"ಹೆಂಗಸು..." ಆಹ್‌ಕ್ಯೂ ಯೋಚಿಸಿದ.

ಪೈಪನ್ನು ಕೆಳಗಿರಿಸಿ ಎದ್ದುನಿಂತ.

"ನಮ್ಮ ಚಿಕ್ಕೊಡತಿ... ಅಮಾಹ್‌ವ್ರೂ ವಟಗುಟ್ಟಿದಳು. "ನಂಜೊತೆ ಮಲಗು!" ಇದ್ದಕ್ಕಿದ್ದಂತೆ ಆಹ್‌ಕ್ಯೂ ಮುನ್ನುಗ್ಗಿ ಹೋಗಿ ಅವಳ ಪಾದಗಳ ಬಳಿ ಬಿದ್ದ.

ಒಂದು ಕ್ಷಣ ನಿಸ್ತಬ್ಧ.

'ಅಯ್ಯೋ!" ದಿಗ್ಭ್ರಮೆಯಿಂದ ಒಂದು ಕ್ಷಣ ಮೂಕಳಾದಳು. ನಡುಗಲು ಪ್ರಾರಂಭಿಸಿದಳು. ನಂತರ ಅವನಿಂದ ತಪ್ಪಿಸಿಕೊಳ್ಳುತ್ತಾ, ಕಿರುಚುತ್ತಾ ಓಡಿದಳು. ಸ್ವಲ್ಪ ಹೊತ್ತಿನ ನಂತರ ಬಿಕ್ಕಿ ಬಿಕ್ಕಿ ಅಳುವುದು ಕೇಳಿಸಿತು.

ಆಹ್‌ಕ್ಯೂ ಕೂಡ ಗೋಡೆಗೆ ಒರಗಿ ಮೂಕ ವಿಸ್ಮಿತನಾಗಿ ಮೊಣಕಾಲೂರಿ ಕುಳಿತಿದ್ದ. ಖಾಲಿಯಾಗಿದ್ದ ಬೆಂಚನ್ನು ಎರಡೂ ಕೈಗಳಿಂದ ಗಟ್ಟಿಯಾಗಿ ಹಿಡಿದುಕೊಂಡು ಮೆಲ್ಲನೆ ಎದ್ದು ನಿಂತ. ಏನೋ ಅಚಾತುರ್ಯ ಆಗಿರುವುದು ಅಸ್ಪಷ್ಟವಾಗಿ ಗೋಚರಿಸಿತು. ಹಾಗೆ ನೋಡಿದರೆ ಅವನೇ ಬಹಳ ಹೆದರಿದ್ದ. ಆತುರಾತುರವಾಗಿ ಪೈಪನ್ನು ಸೊಂಟಕ್ಕೆ ಸಿಕ್ಕಿಸಿ, ಮತ್ತೆ ಅಕ್ಕಿ ಬಳಿಗೆ ಹೋಗಲು ನಿರ್ಧರಿಸಿದ. ಆದರೆ.... ತಕ್ಷಣ ಅವನ ತಲೆಮೇಲೆ ಬಲವಾಗಿ ಒಂದು ಗುದ್ದು ಬಿತ್ತು. ಸರ್ರನೆ. ತನ್ನನ್ನು ಹೊಡೆದ ವ್ಯಕ್ತಿಯಾರೆಂದು ತಿರುಗಿ ನೋಡಿದ. ಕೈಯಲ್ಲಿ ಬೆತ್ತದ ಕೋಲು ಹಿಡಿದು ಯಶಸ್ವಿ ರಾಜಕೀಯ ಅಭ್ಯರ್ಥಿ ನಿಂತಿದ್ದ.

"ಹಾಂ... ಹಾಂ... ನಿನಗೆಷ್ಟೋ ಧೈರ್ಯ? ದಪ್ಪನೆಯ ಬೆತ್ತ ಆಹ್‌ಕ್ಯೂನ ಮೂಗಿನ ಮೇಲೆ ಬಿತ್ತು. ತಲೆ ಮೇಲಿನ ಹೊಡೆತ ತಪ್ಪಿಸಿಕೊಳ್ಳಲು ಕೈಗಳನ್ನು ಮೇಲೆತ್ತಿ ಇದ್ದಾಗ ಅವನ ಗೆಣ್ಣುಗಳ ಮೇಲೆ ಏಟು ಬಿತ್ತು. ಅದರಿಂದಾಗಿ ವಿಪರೀತ ನೋವುಂಟಾದಾಗ ಇಡೀ ಮನೆಯಿಂದ ತಪ್ಪಿಸಿಕೊಂಡು ಓಡುವ ಭರದಲ್ಲಿ ಅವನ ಬೆನ್ನಿಗೂ ಏಟು ಬಿದ್ದ ಹಾಗಿತ್ತು.

"ಆಮೆ ಮೊಟ್ಟೆ"– ಹೊಡೆದವನು ಆಹ್‌ಕ್ಯೂನನ್ನು ಶಪಿಸುತ್ತಾ ನಜ್ಜುಗುಜ್ಜಾಗುವಂತೆ ಬಾರಿಸಿದ. ಓಡಿ ಹೋಗಿ ಒಂದುಕಡೆ ಒಂಟಿಯಾಗಿ ನಿಂತ. ಅವನ ಗೆಣ್ಣುಗಳು ನೋಯುತ್ತಿದ್ದವು. ಅದಕ್ಕಿಂತ ಆಮೆಮೊಟ್ಟೆ ಅನ್ನುವ ಪದ ಅವನನ್ನು ಹೆಚ್ಚು ನೋಯಿಸಿತ್ತು. ವೀಷುವಾಂಗ್‌ನಲ್ಲಿ ಯಾರೂ ಆ ಪದವನ್ನು ಬಳಸುತ್ತಿರಲಿಲ್ಲ. ಕೇವಲ ಶ್ರೀಮಂತರು ಅಧಿಕಾರದಲ್ಲಿ ಇರುವವರು ಮಾತ್ರ ಇದನ್ನು ಬಳಸುತ್ತಿದ್ದರು. ಅವನಿಗೆ ಇದರಿಂದ ತುಂಬ ಹೆದರಿಕೆಯಾಗಿತ್ತು. ಅವನ ಮನಸ್ಸಿನ ಮೇಲೆ ತುಂಬಾ ಪರಿಣಾಮ ಬೀರಿತ್ತು. ಇಷ್ಟು ಹೊತ್ತಿಗೆ ಅವನ ತಲೆಯಿಂದ ಹೆಂಗಸು ವಿಚಾರ ಹಾರಿ ಹೋಗಿತ್ತು. ಈ ಬೈಗಳು, ಹೊಡೆತ ಎಲ್ಲ ಮುಗಿದ ಮೇಲೆ, ಏನೋ ಮುಗೀತು ಅಂತ ಅನ್ನಿಸಿ ನಿರಾಳವಾಗಿ ಅಕ್ಕಿಯನ್ನು ಬೀಸತೊಡಗಿದ. ಸ್ವಲ್ಪ ಹೊತ್ತು ಮಾಡಿದ ಮೇಲೆ ಸೆಕೆ ಅಂತ ಅನಿಸಿ, ಅಂಗಿಯನ್ನು ಬಿಚ್ಚಿದ.

ಅಂಗಿ ಬಿಚ್ಚುತ್ತಿರುವಾಗ ಹೊರಗಡೆಯಿಂದ ದೊಡ್ಡ ಗದ್ದಲ ಕೇಳಿಸಿತು. ಆಹ್‌ಕ್ಯೂಗೆ ಯಾವಾಗಲೂ ಇಂತಹ ಜಗಳ, ಕೂಗು ನೋಡುವುದೆಂದರೆ ಒಂದು ಥರಾ ಉತ್ಸಾಹ ಇರುತ್ತಿದ್ದುದರಿಂದ ಈಗಲೂ ಆ ಸದ್ದು ಕೇಳಿದ ದಿಕ್ಕನ್ನು ಹುಡುಕಿ ಹೊರಟ. ಕಡೆಗೆ ಚಾವೋನ ಒಳಾಂಗಣದಿಂದ ಎಂಬುದನ್ನು ಪತ್ತೆ ಹಚ್ಚಿದ. ಮುಸ್ಸಂಜೆ ಆಗಿದ್ದರೂ ಸಾಕಷ್ಟು ಜನ ಸೇರಿದ್ದನ್ನು ನೋಡಿದ. ಚಾವೋ ಕುಟುಂಬದವರೆಲ್ಲರೂ ಜೊತೆಗೆ ಎರಡು ದಿನದಿಂದ ಊಟ ಮಾಡದಿದ್ದ ಚಾವೋನ ಹೆಂಡತಿ ಕೂಡ ಇದ್ದರು. ಜೊತೆಗೆ ನೆರೆ ಹೊರೆಯವರಾದ ಶ್ರೀಮತಿ ತ್ಸುವೋ ಮತ್ತು ನೆಂಟರಾದ ಚಾವೋ ಪೇ ಎನ್ ಮತ್ತು ಚಾವೋ ಷು ಚೆನ್ ರೂ ಇದ್ದರು. ಚಿಕ್ಕೊಡತಿ ಅಮಾಹ್ ವೂ ಳನ್ನು ಕೆಲಸದವರ ಕ್ವಾರ್ಟರ್ಸ್‌ನಿಂದ ಎಳೆದು ತಂದು ಹೇಳ ತೊಡಗಿದಳು.

"ಆಚೆ ಬಾ.... ನಿನ್ನ ರೂಮಲ್ಲಿ ಕೂತ್ಕೊಂಡು ಯೋಚನೆ ಮಾಡ್ತಿರಬೇಡ".

"ಎಲ್ಲರಿಗೂ ಗೊತ್ತು. ನೀನು ಒಳ್ಳೆ ಹೆಂಗಸೂಂತ."

ಶ್ರೀಮತಿ ತ್ಸುವೋ ಪಕ್ಕದಿಂದ ಹೇಳಿದಳು. ಆತ್ಮಹತ್ಯೆ ಮಾಡಿಕೊಳ್ಳೋ ಯೋಚನೆ ಮಾಡಬಾರದು.

ಅಮಾಹ್ ನರಳಿದಳು. ಯಾರಿಗೂ ಕೇಳಿಸದಂತೆ ಅಸ್ಪಷ್ಟವಾಗಿ ಏನನ್ನೋ ಗೊಣಗಿದಳು.

"ಬಹಳ ಕುತೂಹಲಕರವಾಗಿದೆ" ಆಹ್‌ಕ್ಯೂ ಹೇಳಿಕೊಂಡ. ಏನು ತಲೆಹರಟೆ ಮಾಡೋಕೆ ಹೊರಟಿದ್ದಾಳೆ, ಈ ಚಿಕ್ಕ ವಿಧವೆ. ಅವನಿಗೆ ಏನೂಂತ ತಿಳಿಯುವ ಕುತೂಹಲ. ಚಾವೋ ಷೂ ಚೆನ್ ಬಳಿಗೆ ಸಾರುತ್ತಿದ್ದಂತೆ, ಚಾವೋನ ಹಿರಿಯ ಮಗ ಬಿದಿರಿನ ಕೋಲು ಹಿಡಿದುಕೊಂಡು ಬರುತ್ತಿದ್ದುದು ಕಾಣಿಸಿತು. ಅದನ್ನು ನೋಡುತ್ತಿದ್ದಂತೆ ಅದರಿಂದ ಏಟು ತಿಂದದ್ದು ನೆನಪೂ ಆಯಿತು. ಈಗ ಇಲ್ಲಿ ನಡೀತಿರೊ ಘಟನೆ

ಜೊತೆ ತನ್ನಮೂ ಏನೋ ಸಂಬಂಧ ಇರಬೇಕು ಅನಿಸಿ, ಅಲ್ಲಿಂದ ತಪ್ಪಿಸಿಕೊಂಡು, ಕೋಲು ತನ್ನನ್ನು ಹಿಂಬಾಲಿಸಿ ತಡೆಯುತ್ತೆ ಅನ್ನುವ ಅರಿವಿಲ್ಲದೆ ಓಡಿದ. ಕೋಲು ಹಿಂಬಾಲಿಸಲು ವಿರುದ್ಧ ದಿಕ್ಕಿಗೆ ಹೊರಳಿದ ಸ್ವಲ್ಪ ಹೊತ್ತಿನಲ್ಲಿಯೇ ತನ್ನ ರಕ್ಷಕ ದೇವರ ಗುಡಿಯಲ್ಲಿದ್ದ.

ಸ್ವಲ್ಪ ಹೊತ್ತು ಕುಳಿತಾದ ಮೇಲೆ, ಅವನ ಚರ್ಮದಲ್ಲಿ ಚಳಿಗುಳ್ಳೆ ಕಾಣಿಸಿದವು. ವಸಂತ ಮಾಸವೇ ಆಗಿದ್ದರೂ ರಾತ್ರಿಗಳು ಮಂಜಿನಿಂದ ಕೂಡಿರುತ್ತಿದ್ದುದರಿಂದ ಬರಿ ಮೈಯಲ್ಲಿ ಮಲಗುವುದು ಸಾಧ್ಯವಿರಲಿಲ್ಲ. ಅಂಗಿಯನ್ನು ಚಾವೋನ ಮನೆಯಲ್ಲಿ ಬಿಟ್ಟದ್ದು ನೆನಪಾಯಿತು. ಆದರೆ ಹೋಗುವುದಕ್ಕೆ ಹೆದರಿಕೆ. ಹೋದರೆ ಮತ್ತೊಮ್ಮೆ ಕೋಲಿನೇಟಿನ ರುಚಿ ನೋಡಬೇಕಾಗುತ್ತದೆ ಎನಿಸಿತು.

ಆಗ ದಂಡಾಧಿಕಾರಿ ಒಳಗೆ ಬಂದ. "ಹಾಳಾಗಿ ಹೋಗು ಆಹ್‌ಕ್ಯೂ. ಚಾವೋ ಮನೆಯ ಕೆಲಸದವರನ್ನೂ ಬಿಡೋದಿಲ್ಲ ಅಲ್ವ? ದುಷ್ಟ! ನನಗೆ ನಿದ್ದೆ ಇಲ್ದೆ ಇರೋ ಹಾಗೆ ಮಾಡಿದೆ.... ನೀನು..."

ಒಂದೇ ಸಮನೆ ಬೀಳುತ್ತಿದ್ದ ಬೈಗುಳ ಎದುರು ಆಹ್‌ಕ್ಯೂಗೆ ಏನೂ ಹೇಳಲಾಗಲಿಲ್ಲ. ಕೊನೆಗೆ, ರಾತ್ರಿ ಹೊತ್ತಾದ್ದರಿಂದ ಒಂದಕ್ಕೆ ಎರಡರಂತೆ ನಾಲ್ಕುನೂರು ನಾಣ್ಯಗಳನ್ನು ದಂಡವಾಗಿ ತೆರಬೇಕಾಯಿತು. ಆದರೆ ಅವನ ಬಳಿ ನಗದು ಹಣ ಇರಲಿಲ್ಲವಾದ ಕಾರಣ ತನ್ನ ಹ್ಯಾಟನ್ನು ಭದ್ರತೆಯಾಗಿರಿಸಿದ. ಜೊತೆಗೆ ಕೆಳಗೆ ಸೂಚಿಸಿರುವ ಷರತ್ತುಗಳಿಗೆ ಒಪ್ಪಿಕೊಳ್ಳಬೇಕಾಯಿತು:–

೧. ತಾನು ಮಾಡಿದ ಅಪರಾಧಕ್ಕಾಗಿ, ಆಹ್‌ಕ್ಯೂ ಮರುದಿನ ಬೆಳಗ್ಗೆ ಒಂದು ಪೌಂಡ್ ತೂಕದ ಒಂದು ಜೊತೆ ಕ್ಯಾಂಡೆಲ್‌ಗಳನ್ನು, ಒಂದು ಕಟ್ಟು ಧೂಪದಕಡ್ಡಿಯನ್ನು ಚಾವೋ ಕುಟುಂಬಕ್ಕೆ ತೆಗೆದುಕೊಂಡು ಹೋಗಿ, ಪರಿಹಾರ ರೂಪವಾಗಿ ನೀಡಬೇಕು.

೨. ಆಹ್‌ಕ್ಯೂ ಚಾವ್ರೋ ಪುರೋಹಿತರಿಗೆ ಚಾವ್ರೋನ ಮನೆಯ ದುಷ್ಟಶಕ್ತಿಗಳನ್ನು ನಿವಾರಿಸಲು ಕರೆಸಿದ್ದರಿಂದ, ಸಂಭಾವನೆಯನ್ನು ಕೊಡಬೇಕು.

೩. ಇನ್ನು ಮುಂದೆ ಆಹ್‌ಕ್ಯೂ ಚಾವ್ರೋನ ಮನೆಗೆ ಕಾಲಿಡಕೂಡದು.

೪. ಅಮಾಹ್‌ವುಗೆ ಏನಾದರೂ ಹೆಚ್ಚು ಕಡಿಮೆಯಾದರೆ, ಅದಕ್ಕೆ ಆಹ್‌ಕ್ಯೂನನ್ನೇ ಹೊಣೆ ಎಂದು ಪರಿಗಣಿಸಲಾಗುವುದು.

೫. ಆಹ್‌ಕ್ಯೂ ತನ್ನ ಸಂಬಳಕ್ಕಾಗಲೀ, ಅಂಗಿಗಾಗಲೀ ಆ ಮನೆಗೆ ಹೋಗಬಾರದು.

ಆಹ್‌ಕ್ಯೂ ಎಲ್ಲ ಷರತ್ತುಗಳಿಗೆ ಒಪ್ಪಿಕೊಂಡ. ಆದರೆ ಪಾಪ! ಅವನಲ್ಲಿ ಆ ಕ್ಷಣಕ್ಕೆ ಹಣ ಇರಲಿಲ್ಲ. ಅದೃಷ್ಟಕ್ಕೆ ವಸಂತ ಋತು ಆಗಿತ್ತು. ತನ್ನ ಹೊದಿಕೆಯ

ತುಪ್ಪಳದ ಹೊದಿಕೆಯನ್ನು ಎರಡು ಸಾವಿರಕ್ಕೆ, ಮೇಲಿನ ಷರತ್ತುಗಳನ್ನು ಪೂರೈಸಲು ಅಡ ಇಟ್ಟ. ಹಾಕಿಕೊಳ್ಳಲು ಏನೂ ಇಲ್ಲದಿರುವುದನ್ನು ತಿಳಿದೂ ತನ್ನಲ್ಲಿ ಇನ್ನೂ ಉಳಿದಿದ್ದ ಹಣದಿಂದ ತನ್ನ ಹ್ಯಾಟನ್ನು ದಂಡಾಧಿಕಾರಿಯಿಂದ ಬಿಡಿಸಿಕೊಳ್ಳುವುದು ಬಿಟ್ಟು ಹೆಂಡಕ್ಕಾಗಿ ಖರ್ಚು ಮಾಡಿದ.

ಚಾವೋ ಮನೆಯಲ್ಲಿ ಧೂಪದ ಕಡ್ಡಿಯನ್ನಾಗಲೀ, ಕ್ಯಾಂಡಲ್‌ಗಳನ್ನಾಗಲೀ ಹಚ್ಚುತ್ತಿರಲಿಲ್ಲ. ಏನಿದ್ದರೂ ಮನೆಯೊಡತಿಯೊಬ್ಬರು ಯಾವಾಗಲಾದರೂ ಬುದ್ಧನ ಮುಂದೆ ಇವುಗಳನ್ನು ಉರಿಸುತ್ತಿದ್ದಳು. ಅದಕ್ಕೆಂದೇ ಇವುಗಳನ್ನು ತೆಗೆದು ಪಕ್ಕದಲ್ಲಿ ಇರಿಸಲಾಗಿತ್ತು. ಹರಿದ ಅಂಗಿಯನ್ನು ಹುಟ್ಟಿದ ಮಗುವಿನ ಕೆಳಗೆ ಹಾಕಲು ಉಪಯೋಗಿಸಲಾಗಿತ್ತು. ಇನ್ನು ಉಳಿದ ಹರಕು ಚಿಂದಿಗಳನ್ನು ಬೂಟಿನ ತಳಭಾಗಕ್ಕೆಂದು ಅಮಾಹ್‌ವೂ ಉಪಯೋಗಿಸಿದಳು.

* * *

ಅಧ್ಯಾಯ - ೪

ಬದುಕಿನ ಸಮಸ್ಯೆ

ಚಾವೋ ಕುಟುಂಬದ ಷರತ್ತುಗಳನ್ನು ಒಪ್ಪಿ ನಡೆದುಕೊಂಡ ಮೇಲೆ ತನ್ನ ರಕ್ಷಕ ದೇವರ ಗುಡಿಗೆ ಹೋದ. ಸೂರ್ಯ ಮುಳುಗಿದ್ದ. ಅವನಿಗೆ ಏನೋ ಕೆಟ್ಟದ್ದಾಗಬಹುದೆಂಬ ವಿಚಾರ ಮೂಡುತ್ತಿತ್ತು. ಬೆನ್ನು ಬೆತ್ತಲೆಯಾಗಿರುವುದರಿಂದ ಈ ರೀತಿಯ ಆಲೋಚನೆ ಬಂದಿರಬಹುದು ಎಂದುಕೊಂಡ. ಹರಕಲು ಜಾಕೆಟ್ಟು ಇದ್ದುದು ನೆನಪಾಗಿ, ತೆಗೆದು ಹಾಸಿಕೊಂಡು ಮೈಚಾಚಿದ. ಕಣ್ಣು ಬಿಟ್ಟಾಗ ಸೂರ್ಯ ಪಶ್ಚಿಮ ಗೋಡೆಯ ಮೇಲೆ ಹೊಳೆಯುತ್ತಿದ್ದ. ಎದ್ದು ಕುಳಿತ. ಹಾಳಾಗಲಿ ಎಂದ.

ಎದ್ದು ಮಾಮೂಲಿನಂತೆ ಬೀದಿಗಳಲ್ಲಿ ಅಲೆದಾಡಿದ. ಏನೋ ಹಿಂಸೆ ಎನಿಸುತ್ತಿತ್ತು. ಆದರೆ ಈಗ ಈ ಹಿಂಸೆ ದೇಹಕ್ಕೆ ಸಂಬಂಧಿಸಿದ್ದಲ್ಲ. ಬೆನ್ನಿಗೆ ಏನೂ ಇಲ್ಲವಾಗಿ ಚಳಿಯಾಗಿತ್ತು. ಅವತ್ತಿನಿಂದ ಹೆಂಗಸರು ಆಹ್‌ಕ್ಯೂ ಕಣ್ಣಿಗೆ ಬಿದ್ದೊಡನೆ ನಾಚುತ್ತಿದ್ದರು. ಮೆಲ್ಲಗೆ ಸರಿದು ಮರೆಯಾಗುತ್ತಿದ್ದರು. ಕಡೆಗೆ ಐವತ್ತು ವರ್ಷದ ಶ್ರೀಮತಿ ತ್ಸುವೋ ಕೂಡ ಏನು ಮಾಡಬೇಕೆಂದು ತೋಚದೆ, ತನ್ನ ಹನ್ನೊಂದು ವರ್ಷದ ಮಗಳನ್ನು ಒಳಗೆ ಹೋಗುವಂತೆ ಹೇಳಿ ತಾನೂ ಒಳಗೆ ಮರೆಯಾದಳು. ಆಹ್‌ಕ್ಯೂಗೆ ಇದು ವಿಚಿತ್ರವಾಗಿ ಕಾಣಿಸಿತು. ಹಾಳು ಮುಂಡೇವು! ಎಂದುಕೊಂಡ. "ಇದ್ದಕ್ಕಿದ್ದ ಹಾಗೆ ಇವರೆಲ್ಲ ಯುವತಿಯರ ಹಾಗೆ ನಾಚಿಕೊಳ್ಳೋಕೆ ಹೊರಟದ್ದಾರೆ!..."

ಇನ್ನೂ ಕೆಲವು ದಿವಸಗಳಾದ ಮೇಲೆ ಅವನಿಗೆ ಯಾಕೋ, ಏನೋ ಆಗಿದೆ ಅಂತ ಅನಿಸತೊಡಗಿತು. ಹೆಂಡದಂಗಡಿಯವನು ಸಾಲ ಕೊಡೋದು ನಿಲ್ಲಿಸಿಬಿಟ್ಟ. ಗುಡಿಯ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಮುದುಕ ಏನೇನೋ ಕೆಟ್ಟದ್ದನ್ನು ಮಾತಾಡಿದ. ಆಹ್‌ಕ್ಯೂನನ್ನು ಅಲ್ಲಿಂದ ಕಳಿಸುವ ಉದ್ದೇಶವಿತ್ತು. ಮೂರನೆಯದಾಗಿ ಇತ್ತೀಚೆಗೆ ಕೆಲವು ದಿನಗಳಿಂದ ಯಾರೂ ತನ್ನನ್ನು ಕೆಲಸಕ್ಕೆ ಕರೆಯಲಿಲ್ಲ. ಹೆಂಡದವನು ಸಾಲ ಕೊಡದಿದ್ದರೂ ನಡೆಯುತ್ತೆ. ಮುದುಕ ಏನೆ ಬೈದರೂ ತಾನೇನೂ ಲಕ್ಷ್ಯ ಕೊಡಬೇಕಾಗಿಲ್ಲ. ಆದರೆ ಯಾರೂ ಕೆಲಸ ಕೊಡದಿದ್ದರೆ ಹೊಟ್ಟೆ ತುಂಬೋದು ಹೇಗೆ? ಉಪವಾಸ ಬೀಳಬೇಕಾಗುತ್ತೆ. ನಿಜವಾಗಿಯೂ ಇದು ಕಷ್ಟದ ಸ್ಥಿತಿಯಾಗಿತ್ತು.

ಇನ್ನು ಅವನಿಂದ ಇರೋಕೆ ಆಗಲಿಲ್ಲ. ತಾನು ಮಾಮೂಲಾಗಿ ಹೋಗುತ್ತಿದ್ದ ಮನೆಗಳಿಗೆ ಹೋಗಿ, ತನ್ನನ್ನು ಕರೆಯದಿರಲು ಕಾರಣ ಏನೂಂತ ತಿಳ್ಕೋಬೇಕೂಂತ ಪ್ರಯತ್ನಿಸಿದ. ಚಾವೋ ಒಬ್ಬರ ಮನೆಯಲ್ಲಿ ಅವನಿಗೆ ಪ್ರವೇಶ ಸಿಗಲಿಲ್ಲ. ತನಗೆ ಎದುರಾದ ಒಬ್ಬ ವ್ಯಕ್ತಿ ಬಾಗಿಲಿಂದಲೇ ಸಿಟ್ಟಿನಿಂದ ಆಹ್‌ಕ್ಯೂನನ್ನು "ಹೋಗು ಹೋಗು! ಇಲ್ಲಿ ಏನೂ ಇಲ್ಲ" ಅಂತ ಹೇಳಿ ಭಿಕ್ಷುಕರನ್ನು ಓಡಿಸುವ ಹಾಗೆ ಓಡಿಸಿದ.

ಆಹ್‌ಕ್ಯೂಗೆ ಇದು ತೀರ ವಿಶೇಷ ಎನಿಸಿತು. ಇವರಿಗೆ ಸಹಾಯ ಬೇಕಾದಾಗಲೆಲ್ಲ ನಾನು ಬೇಕಿದ್ದೆ. ಇದ್ದಕ್ಕಿದ್ದಂತೆ ಹೀಗೆಲ್ಲ ಮಾಡೋದೂಂದ್ರೆ! ಏನೋ ಇರಬೇಕು! ಎಂದುಕೊಂಡ. ಆಮೇಲೆ ಅವನಿಗೆ ಗೊತ್ತಾಯಿತು. ಸಣ್ಣಪುಟ್ಟ ಕೆಲಸಗಳಿಗೆ ಯಂಗ್‌ಡಿಯನ್ನು ಕರೆಯುತ್ತಿದ್ದರು. ಆಹ್‌ಕ್ಯೂ ದೃಷ್ಟಿಯಲ್ಲಿ ಈ ಯಂಗ್‌ಡಿ ಬಹಳ ಕೃಶನಾದವನು, ಯಾತಕ್ಕೂ ಪ್ರಯೋಜನವಿಲ್ಲದವನು, ವಿಸ್ಕರ್ಸ್‌ವ್ಯಾಂಗ್‌ಗಿಂತಲೂ ಕಡೆ. ಆದರೂ ಯಾರು ತಾನೇ ಊಹಿಸಿದ್ದರು, ಇಂಥವನು ತನ್ನ ಹೊಟ್ಟೆ ಮೇಲೆ ಹೊಡೀತಾನೆ ಅಂತ? ಈ ಸಲ ಆಹ್‌ಕ್ಯೂನ ತಿರಸ್ಕಾರ ಧೋರಣೆ ಮಾಮೂಲಿಗಿಂತ ಹೆಚ್ಚಾಗಿತ್ತು. ತನ್ನ ರೀತಿಯಲ್ಲಿ ಹೆಜ್ಜೆ ಹಾಕುತ್ತಾ, ಸಿಟ್ಟಿನಿಂದ ಬುಸುಗುಡುತ್ತಾ, ಇದ್ದಕ್ಕಿದ್ದಂತೆ "ಉಕ್ಕಿನ ಕೋಲಿನಿಂದ ನಿನ್ನನ್ನು ಚುಚ್ಚುವೆನು" ಎಂದು ಗುಣುಗುಣಿಸುತ್ತಾ ಸಾಗಿದ.

ಕೆಲವು ದಿನಗಳ ತರುವಾಯ ಮಿಸ್ಟರ್ ಚಿಯೆನ್‌ನ ಮನೆಯ ಮುಂದೆ ಆಹ್‌ಕ್ಯೂ ಯಂಗ್‌ಡಿಯನ್ನು ಭೇಟಿಯಾದ. ಇಬ್ಬರು ಶತ್ರುಗಳು ಮುಖಾಮುಖಿಯಾದಾಗ ಕಣ್ಣುಗಳು ಕೆಂಡ ಸುರಿದವು. ಯಂಗ್‌ಡಿ ಸುಮ್ಮನೆ ನಿಂತಿದ್ದ.

"ಮೂರ್ಖಕತ್ತೆ!" ದುರು ದುರುನೆ ನೋಡುತ್ತಾ, ಬಾಯಿಯ ಬಳಿ ನೊರೆ ಕಾರುತ್ತ ಕೂಗಿದ.

"ನಾನೊಂದು ಕೀಟ... ಆಯ್ತ?" -ಯಂಗ್‌ಡಿ ಕೇಳಿದ. ಅವನ ವಿನಯ ಆಹ್‌ಕ್ಯೂನನ್ನು ಮತ್ತಷ್ಟು ರೇಗಿಸಿತು. ಹೊಡೆಯಲು ಅವನ ಕೈಯ್ಯಲ್ಲಿ ಉಕ್ಕಿನ ಕೋಲು ಇರಲಿಲ್ಲ. ತನ್ನೆರಡು ಕೈಗಳನ್ನು ಚಾಚಿ ಮುಂದಕ್ಕೆ ಹೋಗಿ ಅವನ ಜುಟ್ಟನ್ನು ಹಿಡಿದ. ಯಂಗ್‌ಡಿ ಒಂದು ಕೈಯಿಂದ ತನ್ನ ಜುಟ್ಟನ್ನು ಬಿಡಿಸಿಕೊಳ್ಳು ಪ್ರಯತ್ನಿಸುತ್ತಲೇ ಇನ್ನೊಂದು ಕೈಯನ್ನು ಆಹ್‌ಕ್ಯೂನ ಜುಟ್ಟಿಗೆ ಇರಿಸಿದ. ಆಹ್‌ಕ್ಯೂ ಕೂಡಾ ತನ್ನ ಜುಟ್ಟು ಬಿಡಿಸಿಕೊಳ್ಳಲು ಕೈಯನ್ನು ಹಾಕಿದ. ಹಿಂದೆ ಆಗಿದ್ದರೆ, ಯಂಗ್‌ಡಿಯನ್ನು ಆಹ್‌ಕ್ಯೂ ಗಂಭೀರವಾಗಿ ಪರಿಗಣಿಸುತ್ತಿರಲಿಲ್ಲ. ಈಗ ಒಂದೆರಡು ದಿನಗಳಿಂದ ಉಪವಾಸ ಇದ್ದುದರಿಂದ ತನ್ನ ವಿರೋಧಿ ಇರುವಷ್ಟೇ ಸಣಕಲಾಗಿ, ದುರ್ಬಲನಾಗಿ ಇದ್ದ. ಆದ್ದರಿಂದಲೇ ಇಬ್ಬರೂ ಸಮಾಸಮ ಹೋರಾಡುವಂತೆ ಕಾಣಿಸಿತು. ನಾಲ್ಕು ಕೈಗಳು ಎರಡು ತಲೆಗಳನ್ನು ಹಿಡಿದಿದ್ದವು. ಸೊಂಟದ ಬಳಿ ಬಾಗಿದ್ದರು. ಇದು ಚಿಯೆನ್ ಮನೆಯ ಬಿಳಿ ಗೋಡೆಮೇಲೆ ಇಂದ್ರಧನುಸ್ಸಿನ ರೀತಿಯಲ್ಲಿ ಬಾಗಿದ ನೆರಳನ್ನು ಮೂಡಿಸಿತು.

"ಸರಿ! ಸರಿ!" ನೋಡುತ್ತಿದ್ದ ಕೆಲವರು ಉದ್ಗರಿಸಿದರು. ಬಹುಶಃ ಅವರಿಬ್ಬರ ನಡುವೆ ರಾಜಿ ಮಾಡಿಸುವ ಪ್ರಯತ್ನದಲ್ಲಿದ್ದಿರಬೇಕು.

"ಚೆನ್ನಾಗಿದೆ! ಚೆನ್ನಾಗಿದೆ!" ಎಂದು ಮತ್ತಷ್ಟು ಮಂದಿ ಭಾವಾವೇಶದಿಂದ ಉದ್ಗರಿಸಿದರು. ಅವರ ಉದ್ಗಾರಗಳು, ಇಬ್ಬರ ನಡುವೆ ರಾಜಿ ಮಾಡಿಸಲೆಂದೋ, ಇಲ್ಲವೇ ಇಬ್ಬರನ್ನೂ ಪ್ರೋತ್ಸಾಹಿಸಲೆಂದೋ ಎನ್ನುವುದು ಮಾತ್ರ ಸ್ಪಷ್ಟವಾಗಿರಲಿಲ್ಲ.

ಇಬ್ಬರು ಸ್ಪರ್ಧಿಗಳು ಮಾತ್ರ ಇವರ ಯಾವ ಮಾತಿಗೂ ಕಿವಿಗೊಡಲಿಲ್ಲ. ಆಹ್‌ಕ್ಯೂ ಮೂರು ಹೆಜ್ಜೆ ಮುಂದೆ ಹೋದರೆ, ಯಂಗ್‌ಡಿ ಮೂರು ಹೆಜ್ಜೆ ಹಿಂದೆ ಸರಿಯುತ್ತಿದ್ದ. ಹಾಗಾಗಿ ಇಬ್ಬರೂ ನಿಲ್ಲುವುದು ಸಾಧ್ಯವಿತ್ತು. ಅದೇ ರೀತಿ ಯಂಗ್‌ಡಿ ಮೂರು ಹೆಜ್ಜೆ ಮುಂದೆ ಬಂದರೆ ಆಹ್‌ಕ್ಯೂ ಹಿಂದೆ ಸರಿಯುತ್ತಿದ್ದ. ಇದರಿಂದ ಮತ್ತೆ ಎದ್ದು ನಿಲ್ಲುವುದಕ್ಕೆ ಸಾಧ್ಯವಾಗುತ್ತಿತ್ತು. ಒಂದು ಅರ್ಧಗಂಟೆಯೋ, ಒಂದು ಗಂಟೆಯೋ, (ವೀಝುವಾಂಗ್‌ನಲ್ಲಿ ಗಂಟೆ ಹೊಡೆಯುವ ಗಡಿಯಾರಗಳು ಕೆಲವೇ ಇದ್ದವು) ಆದ ಮೇಲೆ ಇಬ್ಬರ ತಲೆ ಒಳಗಿಂದ ಹಬೆ ಹೊರಗೆ ಬರಲು ಶುರುವಾಯಿತು. ಕೆನ್ನೆಗಳ ಮೇಲಿಂದ ಬೆವರು ಸುರಿಯುತ್ತಿತ್ತು. ಆಹ್‌ಕ್ಯೂ ತನ್ನ ಕೈಗಳು ಜಾರಲು ಬಿಟ್ಟ, ಅದೇ ಹೊತ್ತಿನಲ್ಲಿ ಯಂಗ್‌ಡಿನ ಕೈಗಳೂ ಕೆಳಗೆ ಜಾರಿದವು. ಇಬ್ಬರೂ ನೆಟ್ಟಗೆ ನಿಂತರು. ಒಂದೊಂದು ಹೆಜ್ಜೆ ಹಿಂದು ಹಿಂದಕ್ಕೆ ಹಾಕಿ ನಿಂತಿದ್ದ ಗುಂಪಿನ ಮಧ್ಯದಿಂದ ಹಾದು ಹೊರಗೆ ಹೊರಟರು.

"ಇನ್ನೊಮ್ಮೆ ನೋಡಿಕೊಳ್ತೇನೆ ಲೋ!" ಯಂಗ್‌ಡಿ ಹೇಳಿದ.

ಈ ಮಹಾಸಮರ ವಿಜಯದಲ್ಲಾಗಲೀ ಸೋಲಿನಲ್ಲಿಯಾಗಲೀ ಪರಿಸಮಾಪ್ತಿಯಾಗಲಿಲ್ಲ. ಪ್ರೇಕ್ಷಕರಿಗೆ ಇದರಿಂದ ತೃಪ್ತಿ ಆಯಿತೋ ಇಲ್ಲವೋ ಗೊತ್ತಿಲ್ಲ. ಯಾರೂ ಇದರ ಬಗ್ಗೆ ಏನನ್ನೂ ಅಭಿವ್ಯಕ್ತಿಸಲಿಲ್ಲ. ಆದರೂ ಯಾರೊಬ್ಬರೂ ಆಹ್‌ಕ್ಯೂನನ್ನು ಕೆಲಸಕ್ಕೆ ತೆಗೆದುಕೊಳ್ಳಲು ಮುಂದಾಗಲಿಲ್ಲ.

ಒಂದು ಬೇಸಿಗೆಯ ದಿನ ಹಿತವಾದ ಗಾಳಿ ಬೀಸಿ ಬೇಸಿಗೆ ಕಾಲದ ಸಮಯಸೂಚಿಸಿತು. ಆಹ್‌ಕ್ಯೂಗೆ ಚಳಿ ಎನಿಸಿತ್ತಾದರೂ ಹೇಗೋ ಸಾವರಿಸಿಕೊಂಡ. ಆದರೆ ಅವನ ಚಿಂತೆಯಿದ್ದ ಹೊಟ್ಟೆಯದು. ಮೆತ್ತನೆ ಹೊದಿಕೆ ಹಾಗೂ ಹ್ಯಾಟು ಎಲ್ಲವೂ ಈಗಾಗಲೇ ಮಾಯವಾಗಿತ್ತು. ನಂತರ ತನ್ನ ಮೃದುವಾದ ಜಾಕೆಟ್ಟನ್ನೂ ಮಾರಿಬಿಟ್ಟಿದ್ದ. ಅವನು ಹಾಕಿಕೊಂಡಿರುವ ಪ್ಯಾಂಟ್ ಬಿಟ್ಟು ಬೇರೇನೂ ಇರಲಿಲ್ಲ. ಅದನ್ನಂತು ಬಿಚ್ಚುವುದಕ್ಕೇ ಸಾಧ್ಯವಿರಲಿಲ್ಲ. ಚಿಂದಿ ಚಿಂದಿಯಾದ ಜಾಕೆಟ್ ಇತ್ತಾದರೂ ಬೂಟು ಹೊಲಿಯುವ [illegible] ಸಾಧ್ಯವಾಗಿತ್ತೇ ಹೊರತು ಮಾರುವುದಕ್ಕೂ ಪ್ರಯೋಜನವಿರಲಿಲ್ಲ. [illegible] ಬಿದ್ದಿರುವ [illegible] ತಗೊಳ್ಳೋ ಆಸೆ ಬರುವಷ್ಟು ಇತ್ತಾದರೂ [illegible] ಸಾಧ್ಯವಾಗಿರಲಿಲ್ಲ. ಈಗಲೋ ಆಗಲೋ ಬಿದ್ದು ಹೋಗೋ [illegible]

ಸ್ಥಿತೀಲಿ ಇರುವ ತನ್ನ ಕೋಣೆಯಲ್ಲಿ ನಿಧಿಯೇನಾದರೂ ಸಿಗಬಾರದೇ ಎಂದುಕೊಂಡು ಹುಡುಕಾಡಿದ. ಆದರೆ ಬರೀ ಖಾಲಿ ಖಾಲಿ! ಅದಾದ ಮೇಲೆ ತನ್ನ ಆಹಾರವನ್ನು ಹುಡುಕಿ ಹೊರಡಲು ಮನಸ್ಸು ಮಾಡಿದ.

ರಸ್ತೇಲಿ ನಡೆದು ಹೋಗುತ್ತಿರಬೇಕಾದರೆ, ತನ್ನ ಪರಿಚಿತವಾದ ಹೆಂಡದಂಗಡಿ, ರೊಟ್ಟಿ ಅಂಗಡಿ ಕಾಣಿಸಿತಾದರೂ ಅವನು ಅದರ ಕಡೆ ತಲೆ ಎತ್ತಿಯೂ ನೋಡಲಿಲ್ಲ. ಅವನಿಗೆ ಬೇಕಾದ್ದು ಇದಲ್ಲ. ಹಾಗಂತ ಅವನಿಗೆ ಏನು ಬೇಕಾಗಿದೆ ಅನ್ನೋದು ಸ್ಪಷ್ಟವಿರಲಿಲ್ಲ.

ವೀಷುವಾಂಗ್ ಅಂಥ ದೊಡ್ಡ ಊರೇನೂ ಆಗಿರಲಿಲ್ಲ. ಬೇಗ ಆ ಊರನ್ನು ದಾಟಿ ಹೋದ. ಊರಾಚೆ ಹೆಚ್ಚಾಗಿ ಬತ್ತದ ಗದ್ದೆಗಳೇ ಇದ್ದವು. ಅಚ್ಚ ಹಸುರಾದ ಎಳೆತೆನೆಗಳು ಚಲಿಸುತ್ತಿರುವ ವಸ್ತುಗಳ ಜೊತೆಗೆ ಚಲಿಸುತ್ತ ತೊನೆದಾಡುತ್ತ ಇರುವಂತೆ ಕಾಣಿಸಿತು. ಆ ಕಪ್ಪು ವಸ್ತುಗಳು ಕೆಲಸಮಾಡುತ್ತಿದ್ದ ರೈತರ ತಲೆಗಳಾಗಿದ್ದವು. ಆಹ್‌ಕ್ಯೂ ತನ್ನ ಪಾಡಿಗೆ ತಾನು ಅವುಗಳನ್ನು ಹಾದು ಹೋದ. ಯಾಕೆಂದರೆ ಅವನ ಪ್ರಯಾಣದ ಉದ್ದೇಶ ಜೀವನೋಪಾಯಕ್ಕೆ ದಾರಿ ಹುಡುಕುವುದಾಗಿತ್ತು. ಕಡೆಗೆ ಕ್ವಯೆಟ್ ಆಫ್ ಸೆಲ್ಫ್ ಇಂಪ್ರೂವ್‌ಮೆಂಟ್ ಕಾನ್ವೆಂಟ್ ಬಳಿಗೆ ಬಂದ.

ಕಾನ್ವೆಂಟ್‌ನ ಸುತ್ತಲೂ ಭತ್ತದ ಗದ್ದೆಗಳೇ ಇದ್ದವು. ಹಸಿರು ಗದ್ದೆಗಳ ನಡುವೆ ಬಿಳಿ ಗೋಡೆಗಳು ಕಾಣುತ್ತಿದ್ದವು. ಒಳಗೆ ತರಕಾರಿ ತೋಟವನ್ನು ಬೆಳೆಸಿದ್ದರು. ಆಹ್‌ಕ್ಯೂ ಒಂದೆರಡು ನಿಮಿಷ ಹಿಂದು ಮುಂದು ನೋಡಿದ. ನಂತರ ಮೋಟು ಮಣ್ಣಿನ ಗೋಡೆ ಹತ್ತಿದ. ಹಾಗೆಯೇ ಒಂದು ಬಳ್ಳಿಯನ್ನು ಹಿಡಿದುಕೊಂಡ. ಮಣ್ಣಿನ ಗೋಡೆ ಕುಸಿಯತೊಡಗಿತು. ಆಹ್‌ಕ್ಯೂ ಭಯದಿಂದ ನಡುಗಿದ. ಆದರೆ ಒತ್ತೊತ್ತಾಗಿ ಬೆಳೆದಿದ್ದ ಮರದ ಕೊಂಬೆಯೊಂದನ್ನು ಹಿಡಿದು ಕೊಂಡು ಜಿಗಿಯುವುದರಲ್ಲಿ ಯಶಸ್ವಿಯಾದ. ಆದರೂ ಹೆಂಡವಾಗಲೀ, ಹಬೆ ರೊಟ್ಟಿಯಾಗಲೀ ಅಥವಾ ತಿನ್ನಬಹುದಾದ ಏನೊಂದು ಪದಾರ್ಥವಾಗಲೀ ಕಾಣಿಸಲಿಲ್ಲ. ಪಶ್ಚಿಮ ಗೋಡೆಗೆ ಆನಿಕೊಂಡಂತೆ ಎಳೆಯ ಬಿದಿರಿನ ಪೊದರು ಇದ್ದರೂ, ಅದನ್ನು ಬೇಯಿಸಿರಲಿಲ್ಲ. ಹಾಗೆಯೇ ರೇಪ್‌ಗಿಡವೂ ಇತ್ತಾದರೂ ಅದು ಆಗಲೇ ಬೀಜಕ್ಕೆ ಬಂದಿತ್ತು. ಸಾಸಿವೆ ಗಿಡಗಳು ಹೂವಿಗೆ ಬಂದಿದ್ದವು. ಕೋಸು ಬಹಳ ಒರಟಾಗಿತ್ತು.

ಪರೀಕ್ಷೆಯಲ್ಲಿ ಫೇಲಾದ ವಿದ್ವಾಂಸನಿಗೆ ಆಗುವ ಹಾಗೆ ಅವನಿಗೆ ಅಸಮಾಧಾನವೆನಿಸಿತು. ನಿಧಾನವಾಗಿ ಬಾಗಿಲ ಕಡೆ ನಡೆಯುತ್ತಿದ್ದಂತೆ ಒಮ್ಮೆಲೇ ಅವನಿಗೆ ತಡೆಯಲಾರದಷ್ಟು ಸಂತೋಷವಾಯಿತು. ನೋಡ್ತಾನೆ, ಪೊಗದಸ್ತಾಗಿ ಗುಂಪಾಗಿ ಬೆಳೆದ ಟರ್ನಿಪ್‌ಗಳು! ಮೊಣಕಾಲೂರಿ ಅವುಗಳನ್ನು ಕೀಳತೊಡಗಿದ. ಇದ್ದಕ್ಕಿದ್ದಂತೆ ಗೇಟಿನ ಕಡೆಯಿಂದ ಯಾರೋ ಬಂದಂತಾಗಿ ತಿರುಗಿ ನೋಡಿದರೆ, ಬೇರೆ ಯಾರೂ ಅಲ್ಲ, ಮೊದಲು ನೋಡಿದ ಎಳೆ ಸನ್ಯಾಸಿನಿ ಅವಳಾಗಿದ್ದಳು. ಆದರೆ ಹಾಗೆಯೇ ಮರೆಯಾಗಿದ್ದಳು. ಇಂಥವರನ್ನು ಕಂಡರೆ ಆಹ್‌ಕ್ಯೂಗೆ ಆಗುತ್ತಿರಲಿಲ್ಲವಾದರೂ ಕೆಲವು

ಸಲ. ಧೈರ್ಯ, ಸಾಹಸಕ್ಕಿಂತ ವಿವೇಕ ಮುಖ್ಯವಾಗುತ್ತದೆ. ಒಂದು ನಾಲ್ಕು ಟರ್ನಿಪ್‌ಗೆಡ್ಡೆಗಳನ್ನು ಹೊರಕ್ಕೆಳೆದು ಎಲೆ ಕಿತ್ತು ಬಿಸಾಡಿ, ಗೆಡ್ಡೆಗಳನ್ನು ಜೋಬಿಗೆ ಇಳಿಸಿದ. ಇಷ್ಟು ಹೊತ್ತಿಗೆ ಆ ಸನ್ಯಾಸಿನಿ ಹೊರಗೆ ಹೊರಟು ಬಿಟ್ಟಿದ್ದಳು.

ಬುದ್ಧನು ನಿನ್ನನ್ನು ರಕ್ಷಿಸಲಿ ಆಹ್‌ಕ್ಯೂ. ನಮ್ಮ ತೋಟಕ್ಕೆ ಬಂದು ಟರ್ನಿಪ್‌ಗಳನ್ನು ಕೀಳುವಂಥಾದೇನಾಗಿತ್ತು ನಿನಗೆ? ಎಂಥ ಕೆಟ್ಟ ಕೆಲಸ.... ಎಂಥ ಕೆಟ್ಟ ಕೆಲಸ... ಬುದ್ಧನೇ ನಿಮ್ಮನ್ನು ಕಾಪಾಡಲಿ.

ನಾನ್ಯಾವಾಗ ಹತ್ತಿ ಬಂದು ನಿಮ್ಮ ತೋಟದ ಟರ್ನಿಪ್‌ಗಳನ್ನು ಕದ್ದಿದ್ದೇನೆ? ಪ್ರತಿಭಟಿಸುತ್ತಲೇ ಹೆಜ್ಜೆ ಹಾಕಿದ. ಅವಳನ್ನು ಇನ್ನೂ ಗಮನಿಸುತ್ತಿದ್ದ.

"ಈಗ ನೀನು ಕದೀಲಿಲ್ವ?".... ಅವನ ಜಾಕೆಟ್ಟಿನ ಮಡಿಕೆಗಳತ್ತ ಬೊಟ್ಟು ಮಾಡುತ್ತ ಹೇಳಿದಳು.

"ಅವು ನಿನ್ನವೇನು? ನಿನಗೆ ಉತ್ತರ ಕೊಡುವ ಹಾಗೆ ಅವುಗಳನ್ನು ಮಾಡಬಲ್ಲೆಯೇನು?.... ನೀನು..."

ವಾಕ್ಯವನ್ನು ಮುಗಿಸದೆ ಆಹ್‌ಕ್ಯೂ ಎಷ್ಟು ಸಾಧ್ಯವೋ ಅಷ್ಟು ಬೇಗ ಓಡತೊಡಗಿದ. ಅವನ ಹಿಂದಿನಿಂದ ಅವನಷ್ಟೇ ವೇಗವಾಗಿ, ಸಾಕಷ್ಟು ದಪ್ಪವಿದ್ದ ನಾಯಿಯೂ ಅವನನ್ನು ಹಿಂಬಾಲಿಸಿ ಓಡಿತು. ಸಾಮಾನ್ಯವಾಗಿ ಗೇಟಿನ ಮುಂದೆ ಇರುತ್ತಿದ್ದ ಈ ನಾಯಿ ಹಿಂದಿನ ತೋಟಕ್ಕೆ ಹೇಗೆ ಬಂತು ಅನ್ನುವುದೇ ಒಂದು ರಹಸ್ಯವಾಗಿತ್ತು. ಆಹ್ ಕ್ಯೂನನ್ನು ಗುರ್ರೆಂದು ನೋಡುತ್ತಾ ಅವನನ್ನು ಹಿಂಬಾಲಿಸಿ, ಕಚ್ಚುವುದರಲ್ಲಿದ್ದಾಗ, ಬಚ್ಚಿಟ್ಟಿದ್ದ ಟರ್ನಿಪ್‌ಗಳು ಅವನ ಜಾಕೆಟ್ ಒಳಗಿಂದ ಕೆಳಗೆ ಬಿದ್ದವು. ಅಷ್ಟರಲ್ಲಿ ಆಹ್‌ಕ್ಯೂ ಒಂದು ಮರ ಹತ್ತಿ ಬಿಟ್ಟಿದ್ದ. ಮಣ್ಣಿನ ಗೋಡೆ ಏರುವ ಪ್ರಯತ್ನದಲ್ಲಿ ಜಾರಿ ಬಿದ್ದ. ಟರ್ನಿಪ್ಪುಗಳೂ ಅವನೂ ಎಲ್ಲ ಕಾನ್ವೆಂಟ್ ಹೊರಗೆ ಬಿದ್ದವು. ಹಿಪ್ಪುನೇರಳೆ ಮರದ ಬಳಿ ಬೊಗಳುತ್ತಿದ್ದ ಕಪ್ಪು ನಾಯಿಯನ್ನು ಮತ್ತು ವಯಸ್ಸಾದ ಸನ್ಯಾಸಿನಿ ಪ್ರಾರ್ಥಿಸುತ್ತಿದ್ದುದನ್ನು ಬಿಟ್ಟು ಹೊರಟ.

ಆ ಸನ್ಯಾಸಿನಿ, ಮತ್ತೆ ಆ ಕಪ್ಪು ನಾಯಿಯನ್ನು ತನ್ನ ಮೇಲೆ ಬಿಡಬಹುದೆಂದು ಭಾವಿಸಿ, ಆಹ್‌ಕ್ಯೂ ಟರ್ನಿಪ್‌ಗಳನ್ನು ಆಯ್ದುಕೊಂಡು, ಹಾಗೆಯೇ ಚಿಕ್ಕ ಚಿಕ್ಕ ಕಲ್ಲುಗಳನ್ನು ಕೆಲವನ್ನು ಆರಿಸಿಕೊಂಡು ನಡೆದ. ಕಪ್ಪುನಾಯಿ ಮತ್ತೆ ಕಾಣಿಸಲಿಲ್ಲ. ಕಲ್ಲುಗಳನ್ನು ಬಿಸಾಡಿದ. ಸಾಗುತ್ತಿದ್ದಂತೆ ತನ್ನೊಳಗೇ ಮಾತನಾಡಿಕೊಂಡ – ಇಲ್ಲಿ ಏನೂ ಸಿಗೋದು ಸಾಧ್ಯವಿಲ್ಲ. ಪಟ್ಟಣಕ್ಕೆ ಹೋಗೋದೆ ವಾಸಿ...

ಮೂರನೆ ಟರ್ನಿಪ್ ಮುಗಿಸುವ ಹೊತ್ತಿಗೆ ಪಟ್ಟಣಕ್ಕೆ ಹೋಗುವ ನಿರ್ಧಾರ ಮಾಡಿದ್ದ.

• • •

ಅಧ್ಯಾಯ - ೫

ಪುನರುದ್ಧಾರದಿಂದ ಅವನತಿ ವರೆಗೆ

ಆ ವರ್ಷ ಮೂನ್ ಫೆಸ್ಟಿವಲ್ ಆದ ನಂತರದ ವರೆಗೆ ವೀಷುವಾಂಗ್ ಜನರು ಆಹ್‌ಕ್ಯೂನನ್ನು ನೋಡಲೇ ಇಲ್ಲ. ಅವನು ಹಿಂತಿರುಗಿದ ಸುದ್ದಿ ಕೇಳಿ ಎಲ್ಲರಿಗೂ ಆಶ್ಚರ್ಯ ಆಗಿತ್ತು. ಇಷ್ಟು ದಿವಸ ಎಲ್ಲಿದ್ದಿರಬಹುದು ಎಂದು ಆಶ್ಚರ್ಯ ಪಡುತ್ತಿದ್ದರು ಬೇರೆ!

ಹಿಂದೆ ಕೆಲವು ಸಂದರ್ಭಗಳಲ್ಲಿ ತಾನು ಪಟ್ಟಣಕ್ಕೆ ಹೋಗುವಾಗೆಲ್ಲ ಬಹಳ ಉತ್ಸಾಹದಿಂದ ಮೊದಲೇ ಎಲ್ಲರಿಗೂ ತಿಳಿಸಿರುತ್ತಿದ್ದ. ಆದರೆ ಈ ಬಾರಿ ಯಾರಿಗೂ ಹೇಳದೆ ಇದ್ದ ಕಾರಣ, ಒಬ್ಬರಿಗೂ ಅವನು ಪಟ್ಟಣಕ್ಕೆ ಹೋಗುವ ವಿಷಯ ಗೊತ್ತಿರಲಿಲ್ಲ. ಅವನು ತನ್ನ ಗುಡಿಯಲ್ಲಿದ್ದ ಮುದುಕನಿಗೆ ಹೇಳಿದ್ದನೇನೋ. ಆದರೆ ಪದ್ಧತಿ ಪ್ರಕಾರ ವೀಷುವಾಂಗ್ ಜನಕ್ಕೆ ಮಿಸ್ಟರ್ ಚಾವೋ, ಮಿಸ್ಟರ್ ಚಿಯೆನ್ ಅಥವಾ ವಿದ್ಯಾವಂತ ಚಾವೋ ಮಗ ಪಟ್ಟಣಕ್ಕೆ ಹೋಗುವ ಸುದ್ದಿಗೆ ಪ್ರಾಮುಖ್ಯತೆ ಇರುತ್ತಿತ್ತು. ವಿದೇಶಿ ಅನುಕರಣೆ ಪಿಶಾಚಿ ಹೋಗುವ ಸುದ್ದಿ ಕೂಡಾ ಹೆಚ್ಚು ಚರ್ಚಿತವಾಗುತ್ತಿತ್ತು. ಆಹ್‌ಕ್ಯೂದು ಅಲ್ಪ ಸ್ವಲ್ಪ ಮಾತ್ರ ಚರ್ಚೆಯಾಗುತ್ತಿತ್ತು. ಅದಕ್ಕಾಗಿ ಮುದುಕ ಆಹ್‌ಕ್ಯೂ ಪಟ್ಟಣಕ್ಕೆ ಹೋದದ್ದನ್ನು ಯಾರ ಕಿವಿಗೂ ಬೀಳಿಸಲಿಲ್ಲ. ಊರಿನವರಿಗೆ ಇದರಿಂದ ತಿಳಿಯುವ ಅವಕಾಶವೂ ಆಗಲಿಲ್ಲ.

ಆಹ್‌ಕ್ಯೂ ಹಿಂತಿರುಗಿದ್ದು ಈ ಸಲ ಮಾಮೂಲಿಗಿಂತ ಭಿನ್ನವಾಗಿತ್ತು. ಎಲ್ಲರೂ ಆಶ್ಚರ್ಯ ಪಡುವಂಥ ಸಂದರ್ಭವೂ ಆಗಿತ್ತು. ಕತ್ತಲಾಗುತ್ತ ಬಂದಿತ್ತು. ಆ ಸಮಯದಲ್ಲಿ ನಿದ್ದೆ ಕಣ್ಣುಗಳನ್ನು ಪಿಳಿಪಿಳಿ ಬಿಡುತ್ತ ಹೆಂಡದಂಗಡಿ ಮುಂದೆ ನಿಂತಿದ್ದವನು ಕೌಂಟರ್ ಬಳಿಗೆ ನಡೆದ. ಜೇಬಿನಿಂದ ಒಂದು ಹಿಡಿ ಬೆಳ್ಳಿ ಮತ್ತು ತಾಮ್ರದ ನಾಣ್ಯಗಳನ್ನು ತೆಗೆದು ಮೇಲಕ್ಕೆ ಹಾರಿಸುತ್ತ ಕೌಂಟರ್ ಮೇಲೆ ಬೀಳಿಸಿದ. ನಗದು! ಎಂದ. ಹೆಂಡ ತಗೊಂಡು ಬಾ! ಹೊಸದಾದ ಲೈನಿಂಗ್ ಕೊಟ್ಟಿದ್ದ ಜಾಕೆಟ್ ಧರಿಸಿದ್ದ. ಅವನ ಬೆಲ್ಟಿನಿಂದ ಸಾಕಷ್ಟು ಹಣವಿದ್ದ ಥೈಲಿ ನೇತಾಡುತ್ತಿತ್ತು. ಥೈಲಿಯ ಭಾರಕ್ಕೆ ಅವನ ಬೆಲ್ಟ್ ಸ್ವಲ್ಪ ಜೋತಾಡುತ್ತಿತ್ತು. ವೀಷುವಾಂಗ್‌ನಲ್ಲಿ ಒಂದು ಪದ್ಧತಿಯಿತ್ತು. ಯಾರವಾದರೂ

ಪರಿಸ್ಥಿತಿಯಲ್ಲಿ ಏನಾದರೂ ವ್ಯತ್ಯಾಸ ಕಂಡರೆ ಅಂತಹವನನ್ನು ನಿರ್ಲಕ್ಷ್ಯ ಮಾಡದೆ ಗೌರವದಿಂದ ಮಾತಾಡಿಸಬೇಕಿತ್ತು. ಈಗ ಆಹ್‌ಕ್ಯೂ ಯಾರೂಂತ ಚೆನ್ನಾಗಿ ಗೊತ್ತಿದ್ದರೂ ತನ್ನ ಚಿಂದಿ ಉಡುವ ಸ್ಥಿತಿಯಿಂದ ಈಗ ಬೇರೆಯಾಗಿದ್ದ. ಪ್ರಾಚೀನ ಹೇಳಿಕೆಯೊಂದಿದೆ, "ಒಬ್ಬ ವಿದ್ವಾಂಸ ಮೂರು ದಿವಸಕ್ಕಾದರೂ ದೂರ ಹೋಗಿ ಬಂದರೆ ಅವನನ್ನು ಹೊಸ ಕಣ್ಣಿಂದ ನೋಡಬೇಕು! ಅಂತ ಅದಕ್ಕಾಗಿಯೇ ವೈಟರ್, ಹೋಟೆಲಿನ ಗ್ರಾಹಕರು ಹೋಗಿ ಬರುವ ಜನ ಎಲ್ಲರೂ ಗೌರವ ಪೂರ್ವಕ ಅನುಮಾನದ ಕಣ್ಣುಗಳಿಂದ ನೋಡಿದರು. ಹೋಟೆಲಿನವ ತಲೆಯಾಡಿಸುತ್ತ ವಿಚಾರಿಸಿದ.

"ಹಲೋ ಆಹ್‌ಕ್ಯೂ, ವಾಪಸ್ ಬಂದುಬಿಟ್ಟೆಯಾ?"

"ಹೌದು ವಾಪಸ್ ಬಂದೆ."

"ಓಹ್ ಚೆನ್ನಾಗಿ ದುಡ್ಡು ಮಾಡಿದ್ದೀಯ.... ಎಲ್ಲಿ?"

"ಪಟ್ಟಣಕ್ಕೆ ಹೋಗಿದ್ದೆ."

ಮಾರನೆಯ ದಿವಸದಷ್ಟು ಹೊತ್ತಿಗೆ ಈ ವಿಷಯ ಊರಿಗೆಲ್ಲ ಗೊತ್ತಾಗಿ ಹೋಯಿತು. ಪ್ರತಿಯೊಬ್ಬರಿಗೂ ಆಹ್‌ಕ್ಯೂನ ಯಶಸ್ಸಿನ ಕತೆ, ಅವನ ಹೊಸ ಜಾಕೆಟ್‌ನ ಕತೆ ಕೇಳುವುದಕ್ಕೆ ಕುತೂಹಲ ಇದ್ದುದರಿಂದ, ಗುಡಿಯ ಗುಹೆಗಳು ಹೋಟೆಲುಗಳಲ್ಲಿ ಈ ಸುದ್ದಿಯ ಸತ್ಯಾಸತ್ಯತೆಯನ್ನು ಪರೀಕ್ಷಿಸತೊಡಗಿದರು. ಪರಿಣಾಮವಾಗಿ ಆಹ್‌ಕ್ಯೂನನ್ನು ಭಿನ್ನವಾದ ರೀತಿಯಲ್ಲಿ ನೋಡತೊಡಗಿದರು.

ಆಹ್‌ಕ್ಯೂ ಹೇಳುವ ಪ್ರಕಾರ, ಅವನು ಸಫಲನಾದ ಪ್ರಾವಿನ್ಷಿಯಲ್ ಕ್ಯಾಂಡಿಡೇಟ್ ಮನೆಯಲ್ಲಿ ಕೆಲಸಕ್ಕಿದ್ದ ಕಥೆಯ ಈ ಭಾಗ ಕೇಳಿದವರಿಗೆ ಅಷ್ಟೇನೂ ಖುಷಿಯಾಗಲಿಲ್ಲ. ಈ ಕ್ಯಾಂಡಿಡೇಟ್ ಹೆಸರು ಪೆಯ್ ಅಂತ. ಇಡೀ ಪಟ್ಟಣದಲ್ಲಿ ಇವನೊಬ್ಬನೇ ಸಫಲನಾದ ಅಭ್ಯರ್ಥಿಯಾದರೂ ಹೇಳಬೇಕಾದ ಅಗತ್ಯವಿರಲಿಲ್ಲ. ಅದು ಅರ್ಥ ಆಗುತ್ತಿತ್ತು. ವೀಮುವಾಂಗ್‌ನಲ್ಲಿ ಮಾತ್ರವೇ ಅಲ್ಲ, ಎಲ್ಲಿಯೂ ಈ ಬಗೆಯಲ್ಲಿ ವಿಶೇಷಣವೊಂದಿಗೆ ಹೇಳಬೇಕಾಗಿರಲಿಲ್ಲ. ಇಂಥವನ ಮನೆಯಲ್ಲಿ ಕೆಲಸ ಮಾಡಿದವನ ವಿಚಾರದಲ್ಲಿ ಗೌರವ ಅನಿವಾರ್ಯವಾಗಿತ್ತು. ಆದರೆ ಆಹ್‌ಕ್ಯೂ ಹೇಳಿದ ಪ್ರಕಾರ, ಅವನ ಮನೆಯಲ್ಲಿ ಕೆಲಸ ಮಾಡೋದು ಇಷ್ಟವಾಗಿರಲಿಲ್ಲ. ಯಾಕೆಂದ್ರೆ ಆಹ್‌ಕ್ಯೂ ದೃಷ್ಟಿಯಲ್ಲಿ ಅವನು ತುಂಬ ಅತಿ ಮೊಂಡನಾಗಿದ್ದ. ಇದನ್ನು ಕೇಳಿದ ಜನ ನಿಟ್ಟುಸಿರಿಟ್ಟರು. ಆದರೆ [illegible] "ಅವನಿಗೆ ಅನಿಸಿದ್ದು. ಆಹ್‌ಕ್ಯೂ [illegible] ರೊಕ್ಕ [illegible] ಕೆಲಸ ಮಾಡೋಕೆ [illegible] ಕೆಲಸ ಮಾಡದೇ [illegible] ಅಂತ [illegible].

[illegible]

ಹುರಿಯಲು ಎಳೆ ಎಳೆಯಾಗಿ ಶ್ಯಾಲೋಟನ್ನು ಬಳಸುತ್ತಾರೆ, ಹೆಂಗಸರು ನಡೆಯುವಾಗ ಸರಿಯಾಗಿ ಬಳುಕುವುದಿಲ್ಲ – ಇತ್ಯಾದಿ ಕಾರಣಗಳಿದ್ದವು. ಆದರೆ ಪಟ್ಟಣದವರಲ್ಲಿ ಕೆಲವು ಒಳ್ಳೆಯ ಅಂಶಗಳೂ ಇದ್ದವು. ಉದಾಹರಣೆಗೆ ಹೇಳೋದಾದರೆ ವೀಷುವಾಂಗ್ ಜನ, ೩೨ ಬ್ಯಾಂಬು ಕೌಂಟರ್ ಆಟವನ್ನು ಆಡುವರು. ವಿದೇಶಿ ಅನುಕರಣೆ ಪಿಶಾಚಿ ಮಾತ್ರ ಮಾಹ್–ಜೋಂಗ್ ಆಟ ಆಡಬಲ್ಲ. ಆದರೆ ಪಟ್ಟಣದಲ್ಲಿ ಬೀದಿ ಮಕ್ಕಳೂ ಕೂಡಾ ಈ ಆಟದಲ್ಲಿ ಪರಿಣಿತರು. ಏನಿಲ್ಲ, ನಮ್ಮ ಈ ವಿದೇಶಿ ಅನುಕರಣೆ ಪಿಶಾಚೀನ ತಂದು ಈ ರ್‍ಯಾಸ್ಕಲ್ಸ್ ಮಧ್ಯೆ ನಿಲ್ಲಿಸಿ ಬಿಡಬೇಕು. ಆಗ ನೋಡಬೇಕು, ನಮ್ಮ ವಿದೇಶಿ ಪಿಶಾಚಿ ಹೇಗಿರ್ತಾನೇಂದ್ರೆ ನರಕದ ರಾಜನ ಎದುರು ಸಣ್ಣ ಪಿಶಾಚಿ ಥರ ಇರ್ತಾನೆ! ಈ ಕಥೆ ಭಾಗ ಕೇಳಿದವರೆಲ್ಲರಿಗೂ ಒಂದು ಥರ ನಾಚುವಂತಾಯಿತು.

"ಮರಣದಂಡನೆ ವಿಧಿಸುವುದನ್ನು ನೀವೇನಾದರೂ ನೋಡಿದ್ದೀರಾ?" ಆಹ್‌ಕ್ಯೂ ಕೇಳಿದ. ಅದ್ಭುತ! ಅದ್ಭುತವಾದ ದೃಶ್ಯ! ತನ್ನ ತಲೆ ಅಲ್ಲಾಡಿಸುತ್ತ ಮಾತನಾಡುತ್ತಿದ್ದ ಆಹ್‌ಕ್ಯೂನ ಎಂಜಲು ಅವನಿಗೆ ಎದುರಾಗಿ ನಿಂತಿದ್ದ, ಚಾವೋ ಷೂ ಷೆನ್‌ನ ಮುಖದ ಮೇಲೆ ಬಿತ್ತು. ಕಥೆಯ ಈ ಭಾಗ ಅಲ್ಲಿದ್ದವರೆಲ್ಲರೂ ನಡುಗುವಂತೆ ಮಾಡಿತು. ಒಂದು ಕ್ಷಣ ಸುತ್ತಲೂ ಕಣ್ಣಾಡಿಸಿದ. ಇದ್ದಕ್ಕಿದ್ದಂತೆ ತನ್ನ ಬಲಗೈಯನ್ನು ವಿಸ್ಕರ್ಸ್‌ವ್ಯಾಂಗ್ ಕತ್ತಿನ ಮೇಲೆ ಹಾಕಿದ ವ್ಯಾಂಗೋ ತಲೆ ಮುಂದಕ್ಕೆ ಚಾಚಿ ಬಹಳ ಕುತೂಹಲದಿಂದ ಕತೆ ಕೇಳುತ್ತಿದ್ದ.

"ಕೊಲ್ಲು" – ಆಹ್‌ಕ್ಯೂ ಕಿರುಚಿದ.

ವಿಸ್ಕರ್ಸ್‌ವಾಂಗ್ ಬೆಚ್ಚಿ ಬಿದ್ದ. ತನ್ನ ತಲೇನ ಮಿಂಚಿನಷ್ಟೇ ವೇಗವಾಗಿ ಹಿಂದಕ್ಕೆ ಎಳೆದುಕೊಂಡ. ಅಕ್ಕಪಕ್ಕದಲ್ಲಿ ನಿಂತಿದ್ದವರು ಆತಂಕ, ಭಯದಿಂದ ನಡುಗಿದರು. ಇದಾದ ಮೇಲೆ ವ್ಯಾಂಗ್ ಎಷ್ಟೋ ದಿನಗಳು ಇದೇ ಭಯದ ಗುಂಗಿನಲ್ಲಿದ್ದ. ಆಹ್‌ಕ್ಯೂನ ನೆರಳಿಗೆ ಹೋಗಲೂ ಹೆದರಿದ.

ವೀಷುವಾಂಗ್ ಜನರ ದೃಷ್ಟಿಯಲ್ಲಿ ಆಹ್‌ಕ್ಯೂಗೆ ಚಾವೋಗೆ ಇದ್ದುದಕ್ಕಿಂತಲೂ ಗೌರವ ಭಾವನೆ ಇತ್ತು ಎಂದು ಹೇಳುವುದು ಕಷ್ಟವಾದರೂ, ಇಬ್ಬರ ನಡುವೆಯೂ ಸಮಾನ ಗೌರವ ಇದ್ದಿತೆಂಬುದಂತೂ ಸತ್ಯವಾಗಿತ್ತು.

ಮತ್ತೆ ಸ್ವಲ್ಪ ದಿನಕ್ಕೆ ಆಹ್‌ಕ್ಯೂನ ಖ್ಯಾತಿ ಹೆಂಗಸರ ಖೋಲಿಗಳೊಳಕ್ಕೂ ಪ್ರವೇಶವಾಯಿತು. ಚಾವೋ ಚಿಯೆನ್ ಕುಟುಂಬಗಳು ಬಿಟ್ಟರೆ ಮಿಕ್ಕವರೆಲ್ಲರದ್ದು ಬಡ ಸಂಸಾರಗಳು ಆದರೂ ಹೆಂಗಸರ ಖೋಲಿಗಳು ಅಂದರೆ ಹೆಂಗಸರ ಖೋಲಿಗಳೇ! ಆಹ್‌ಕ್ಯೂನ ಕೀರ್ತಿ ಅಲ್ಲೆಲ್ಲಾ ನುಗ್ಗಿದ್ದಂತೂ ಒಂದು ಪವಾಡವಾಗಿತ್ತು. ಹೆಂಗಸರು ಸೇರಿದಾಗ ಪರಸ್ಪರ ಮಾತಾಡಿಕೊಳ್ಳುತ್ತಿದ್ದರು. ಮಿಸೆಸ್ ತ್ಸೂವೋ ಆಹ್‌ಕ್ಯೂನಿಂದ ನೀಲಿ ಸ್ಕರ್ಟ್ ಕೊಂಡುಕೊಂಡಳಂತೆ. ಅದು ಹಳೇದೇ ಆಗಿದ್ದರೂ ಕೇವಲ ೯೦

ಸೆಂಟ್‌ಗಳಷ್ಟು ಬೆಲೆ ಅಂತೆ. ಮತ್ತೆ ಚಾವ್ಹೊ ಪೈ-ಯನ್‌ನ ತಾಯಿ (ಇದನ್ನು ಪರೀಕ್ಷಿಸಬೇಕಿದೆ. ಯಾಕೆಂದರೆ, ಈಕೆಯನ್ನು ಚಾವ್ಹೊ ಶೂ ಷೆನ್‌ನ ತಾಯಿ ಎಂತಲೂ ಹೇಳಿದ್ದಾರೆ) ದಟ್ಟಕೆಂಪಿನ ಮಗುವಿನ ಫಾರೆನ್ ಕ್ಯಾಲಿಕೋ ಉಡುಪನ್ನು ಸಾಕಷ್ಟು ಹೊಸದಾಗಿಯೇ ಇದ್ದುದನ್ನು ಶೇಕಡ ಎಂಟರ ರಿಯಾಯಿತಿಯಲ್ಲಿ ಕೇವಲ ಮುನ್ನೂರಕ್ಕೆ ಕೊಂಡಳಂತೆ!"

ಯಾರು ತಮ್ಮ ಹತ್ತಿರ ಸಿಲ್ಕ್ ಅಥವಾ ಫಾರೆನ್ ಕ್ಯಾಲಿಕೋ ಬಟ್ಟೆಯ ಸ್ಕರ್ಟ್ ಇರಲಿಲ್ಲವೋ, ಅವರೆಲ್ಲ ಆಹ್‌ಕ್ಯೂನನ್ನು ಕಾಣುವ ಉತ್ಸುಕತೆಯಲ್ಲಿದ್ದರು. ಯಾಕೆಂದರೆ ಅವರಿಗೂ ಅವನಿಂದ ಅವುಗಳನ್ನು ಕೊಳ್ಳುವ ಆಸೆಯಾಗಿತ್ತು. ಅವನಿಂದ ತಪ್ಪಿಸಿಕೊಳ್ಳುವುದಕ್ಕೆ ಬದಲಾಗಿ, ಈಗೀಗ ಅವನನ್ನೇ ಹಿಂಬಾಲಿಸಿ, ಅವನನ್ನು ನಿಲ್ಲಲು ಕೂಗಿ ಹೇಳುತ್ತಿದ್ದರು.

"ಆಹ್‌ಕ್ಯೂ ನಿನ್ನ ಬಳಿ ಇನ್ನೂ ಸಿಲ್ಕ್ ಸ್ಕರ್ಟ್‌ಗಳು ಇವೆಯೇನು? ಅವರು ವಿಚಾರಿಸುತ್ತಿದ್ದರು.

"ಇಲ್ಲವೇ? ನಮಗೆ ಫಾರೆನ್ ಕ್ಯಾಲಿಕೋ ಕೂಡ ಬೇಕಿತ್ತು. ನಿನ್ನ ಹತ್ತಿರ ಏನಾದರೂ ಇದೆಯೇನು?

ಈ ಸುದ್ದಿ ಬಡವರ ಮನೆಯಿಂದ ಶ್ರೀಮಂತರ ಮನೆಗಳ ವರೆಗೂ ಹರಡಿತು. ಮಿಸೆಸ್ ತ್ಸುವ್ಹೊ ತಾನುಕೊಂಡ ಸಿಲ್ಕ್ ಸ್ಕರ್ಟ್‌ನಿಂದ ಎಷ್ಟೊಂದು ಖುಷಿ ಪಟ್ಟಿದ್ದಳೆಂದರೆ ಅದನ್ನು ಮಿಸೆಸ್ ಚಾವ್ಹೋಗೆ, ತೋರಿಸಿದಳು. ಮಿಸೆಸ್ ಚಾವ್ಹೋ ಅಂತೂ ಮಿಸ್ಟರ್ ಚಾವ್ಹೋ ಬಳಿ ಅದನ್ನು ಹೊಗಳಿದ್ದೇ ಹೊಗಳಿದ್ದು!

ಮಿಸ್ಟರ್ ಚಾವ್ಹೋ ರಾತ್ರಿ ಊಟದ ಸಮಯದಲ್ಲಿ ಈ ವಿಷಯವಾಗಿ ತನ್ನ ಮಗನೊಂದಿಗೆ ಮಾತನಾಡಿ, ಆಹ್‌ಕ್ಯೂ ವಿಚಾರದಲ್ಲಿ ಏನೋ ಇರಬೇಕು ಎಂಬ ಸಂದೇಹ ವ್ಯಕ್ತಪಡಿಸಿದ. ಅಲ್ಲದೆ ಅವನ ವಿಷಯದಲ್ಲಿ ಮನೆಯಲ್ಲಿ ಎಲ್ಲರೂ ಎಚ್ಚರಿಕೆಯಿಂದ ಇರಬೇಕೆಂದ. ಆಹ್‌ಕ್ಯೂ ಹತ್ತಿರ ಏನಿತ್ತೋ ಇರಲಿಲ್ಲವೋ, ಆದರೆ ಅವನಲ್ಲಿ ಒಂದು ಒಳ್ಳೆಯದಂತೂ ಇರಲೇಬೇಕು ಅನ್ನುವ ಅಭಿಪ್ರಾಯ ವ್ಯಕ್ತಪಡಿಸಿದ. ಮಿಸೆಸ್ ಚಾವ್ಹೊ, ಅಗ್ಗದ, ಉತ್ತಮ, ಅಂದವಾದ ಜಾಕೆಟ್ ಬೇಕೂಂತ ಆಸೆ ಪಟ್ಟಿದ್ದಳು. ಮನೆಯವರೆಲ್ಲರ ಜೊತೆ ಮಾತಾಡಿದ ಮೇಲೆ, ಮಿಸೆಸ್ ತ್ಸುವ್ಹೋಳನ್ನು ಈ ಜಾಕೆಟ್ ಆಹ್‌ಕ್ಯೂ ಬಳಿ ಸಿಗುತ್ತದೆಯೋ ಎಂದು ವಿಚಾರಿಸಲು ಹೇಳಿದರು. ಅದಕ್ಕೆ [illegible] ಆ ಸಂಜೆ ದೀಪ ಹಚ್ಚಲು ಅನುವು ಮಾಡಲಾಯಿತು.

[illegible]

ಅಸಮಾಧಾನಗೊಂಡಿದ್ದರು. ಬೇರೆಯವರೆಲ್ಲರೂ ತ್ಸುವೋಳನ್ನು ಆಹ್‌ಕ್ಯೂನನ್ನು ಹೊತ್ತಿಗೆ ಸರಿಯಾಗಿ ಬರಹೇಳಲಿಲ್ಲವೆಂದು ಬೈದರು. ಮಿಸೆಸ್ ಚಾವೋ, ಹೋದ ವರುಷ ಹಾಕಿದ ಷರತ್ತುಗಳಿಂದಾಗಿ ಆಹ್‌ಕ್ಯೂ ಬರಲಿಲ್ಲವೇನೋ ಎಂದು ಹೆದರಿದಳು. ಆದರೆ ಮಿಸ್ಟರ್ ಚಾವೋಗೆ ಹೀಗೇನೂ ಎನಿಸಲಿಲ್ಲ. ಅವನಿಗೆ ಗೊತ್ತು, ಈ ಸಲ ತಾನೇ ಹೇಳಿ ಕಳಿಸಿರುವುದರಿಂದ ಬರುತ್ತಾನೆ ಎಂದುಕೊಂಡಿದ್ದ. ಚಾವೋನ ವಿಚಾರ ಸರಿಯಾಗಿತ್ತು. ಯಾಕೆಂದರೆ ಆಹ್‌ಕ್ಯೂ ಕಡೆಗೆ, ಮಿಸೆಸ್ ತ್ಸುವೊ ಜೊತೆಗೆ ಬಂದೇ ಬಂದ.

"ಅವನ ಹತ್ತಿರ ಈಗ ಅಂಥಾದೇನೂ ಉಳಿದಿಲ್ಲ ಅಂತ ಹೇಳ್ತಿದ್ದಾನೆ" ಎದುಸಿರು ಬಿಡುತ್ತ ತ್ಸುವೋ ಹೇಳಿದಳು.. "ನೀನೇ ಹೋಗಿ ಇದನ್ನು ಅವರ ಹತ್ತಿರ ಹೇಳೂಂತ ಹೇಳ್ತಾನೆ ಇದ್ದೀನಿ. ಆದರೆ ಅವನೋ ಮಾತಾಡುತ್ತಲೇ ಇದ್ದ. ನಾನು ಅವನಿಗೆ ಹೇಳಿದೆ...."

ಸರ್, ಮುಗುಳು ನಗುವ ಪ್ರಯತ್ನದೊಂದಿಗೆ ಹೇಳಿದ.

"ಏನಪ್ಪ ಅಲ್ಲಿ ಹೋಗಿ ಬಹಳ ಸಾಹುಕಾರನಾಗಿ ಬಿಟ್ಟೆಯಂತೆ!" ಆಹ್‌ಕ್ಯೂ ಬಳಿಗೆ ಹೋಗಿ ಬಹಳ ಎಚ್ಚರಿಕೆಯಿಂದ ಅವನನ್ನೇ ನೋಡುತ್ತ ಚಾವೋ ಹೇಳಿದ.... "ತುಂಬಾ ಸಂತೋಷ, ಈಗ... ಅದೇ ಅವರೆಲ್ಲ ಹೇಳುತ್ತಾ ಇದ್ದಾರೆ... ನಿನ್ನ ಹತ್ತಿರ ಏನೇನೋ ಒಳ್ಳೊಳ್ಳೆ ವಸ್ತುಗಳು ಇವೆಯಂತೆ!.... ನಾವೆಲ್ಲ ನೋಡ್ಬೇಕೂಂತ ಇದ್ದೀವಿ. ಅವನ್ನೆಲ್ಲ ಒಮ್ಮೆ ತಗೊಂಬಾ... ನಮಗೆ ಇವು ಬೇಕಾಗಿರುವುದರಿಂದ ಹೇಳ್ತಾ ಇದೀನಿ..."

"ಮಿಸೆಸ್ ತ್ಸುವೋಗೆ ಹೇಳಿದ್ದೆ, ನನ್ನ ಬಳಿ ಈಗ ಅವೇನೂ ಇಲ್ಲಾಂತ!"

"ಏನೂ ಇಲ್ವೆ?" ಮಿಸ್ಟರ್ ಚಾವೋ ದನಿಯಲ್ಲಿ ನಿರಾಶೆ ವ್ಯಕ್ತವಾಗುತ್ತಿತ್ತು. "ಅಷ್ಟು ಬೇಗ ಅವೆಲ್ಲ ಹೇಗೆ ಖರ್ಚಾಯಿತು?"

"ಅವು ನನ್ನ ಫ್ರೆಂಡ್‌ಗೆ ಸೇರಿದ್ದು. ವಾಸ್ತವವಾಗಿ ನನ್ನ ಹತ್ತಿರ ಅಷ್ಟೊಂದು ಇರಲೂ ಇಲ್ಲ. ಜನ ಕೆಲವನ್ನು ಕೊಂಡುಕೊಂಡರು."

"ಸ್ವಲ್ಪನಾದರೂ ಉಳಿದಿರಬೇಕಲ್ಲ?"

"ಬಾಗಿಲು ಪರದೆ ಮಾತ್ರ ಒಂದು ಉಳಿದಿದೆ."

"ಹಾಗಾದರೆ ಅದನ್ನೇ ನೋಡೋಕೆ ತಗೊಂಡು ಬಾ." – ಮಿಸೆಸ್ ಚಾವೋ ಆತುರದಲ್ಲಿ ಹೇಳಿದಳು.

"ಆಯಿತು. ಅದನ್ನು ನಾಳೆ ತಂದರೂ ಆಗುತ್ತೆ" – ಚಾವೋನ ಮಾತಿನಲ್ಲಿ ಅಷ್ಟೊಂದು ಕಾತುರ ಇರಲಿಲ್ಲ.

"ಇನ್ನು ಮುಂದೆ ನಿನ್ನ ಹತ್ತಿರ ಏನಾದರೂ ಇದ್ದರೆ ಮೊದಲು ನಮಗೆ ತಂದು ತೋರಿಸಬೇಕು ಆಹ್‌ಕ್ಯೂ" ಚಾವ್ರೋ ಹೇಳಿದ.

"ಬೇರೆಯವರು ಕೊಡೋದಕ್ಕಿಂತ ಕಡಿಮೆ ಬೆಲೆಯೇನೂ ನಾವು ಕೊಡೋದಿಲ್ಲ" ಕೌಂಟಿ ಕ್ಯಾಂಡಿಡೇಟ್ ಹೇಳಿದ. ಆತನ ಹೆಂಡತಿ ಒಂದು ಸಲ ಆಹ್‌ಕ್ಯೂನ ಪ್ರತಿಕ್ರಿಯೆ ಏನೂಂತ ಗಮನಿಸಲು ಕಣ್ಣು ಹಾಯಿಸಿದಳು.

"ನನಗೆ ಫರ್ ಜಾಕೆಟ್ ಬೇಕಾಗಿದೆ." ಮಿಸೆಸ್ ಚಾವ್ರೋ ಹೇಳಿದಳು.

ಆಹ್‌ಕ್ಯೂ ಒಪ್ಪಿಕೊಂಡರೂ ಅವನು ಎಷ್ಟು ನಿರ್ಲಕ್ಷ್ಯದಿಂದ ವರ್ತಿಸಿದ ಅಂದರೆ, ಅವರು ಹೇಳಿದ್ದೆಲ್ಲ ಜಾಗರೂಕತೆಯಿಂದ ಮನಸ್ಸಿಗೆ ತೆಗೆದುಕೊಂಡದ್ದೇ ಅನುಮಾನ ಎನಿಸುವಂತಿತ್ತು. ಇದರಿಂದ ಮಿಸ್ಟರ್ ಚಾವ್ರೋಗೆ ಎಷ್ಟು ನಿರಾಶೆಯಾಯಿತು, ಎಷ್ಟು ಕೋಪ ಬಂತು, ಎಷ್ಟೊಂದು ಚಿಂತೆಯಾಯ್ತು ಎಂದರೆ ಆಕಳಿಸುವುದನ್ನೂ ನಿಲ್ಲಿಸಿ ಬಿಟ್ಟ. ಆಹ್‌ಕ್ಯೂ ವರ್ತನೆಯಿಂದ ಕೌಂಟಿ ಕ್ಯಾಂಡಿಡೇಟ್ ಕೂಡ ಎಷ್ಟು ಅಸಂತೃಪ್ತನಾಗಿದ್ದನೆಂದರೆ, "ಜನ ಇಂತಹ ಆಮೆ ಮೊಟ್ಟೆಯವರಿಂದ ದೂರ ಇರಬೇಕು ಇಲ್ಲದೆ ವೀಘುವಾಂಗ್‌ನಲ್ಲಿ ಇಂಥವರು ಇರುವುದಕ್ಕೆ ಅವಕಾಶ ಮಾಡಿಕೊಡದಂತೆ, ಜೈಲಿಫ್‌ಗೆ ಹೇಳಬೇಕು" ಎಂದ.

ಚಾವ್ರೋ ಈ ಮಾತಿಗೆ ಒಪ್ಪಲಿಲ್ಲ. ಇದರಿಂದ ಅವನು ದ್ವೇಷ ಸಾಧಿಸಬಹುದು. ಹಾಗೆ ನಾವೇನೂ ಮಾಡಬಾರದು. ಹದ್ದು ತನ್ನ ಗೂಡಿನ ಮೇಲೆ ತಾನೇ ಎರಗುವುದಿಲ್ಲ. ನಮ್ಮೂರಿನ ಜನ ನಾವು ಹೆಚ್ಚು ಯೋಚನೆ ಮಾಡಬಾರದು. ಆದರೆ ಸ್ವಲ್ಪ ಎಚ್ಚರಿಕೆಯಿಂದ ಇರಬೇಕು. ತಂದೆಯ ಮಾತು ಬಹಳ ಸರಿ ಅಂತ ಅನ್ನಿಸಿ, ಆಹ್‌ಕ್ಯೂನನ್ನು ಊರಿಂದ ಓಡಿಸುವ ಆಲೋಚನೆಯನ್ನು ಆ ಕ್ಷಣಕ್ಕೆ ಕೈ ಬಿಟ್ಟ. ಆದರೆ ತಾನು ಹೇಳಿದ್ದನ್ನು ಯಾವುದೇ ಕಾರಣಕ್ಕೂ ಯಾರಿಗೂ ಹೇಳಬಾರದೆಂದು ಎಚ್ಚರಿಸಿದ.

ಮಾರನೇ ದಿನ ತ್ಸುವ್ರೊ ತನ್ನ ನೀಲಿ ಸ್ಕರ್ಟ್‌ನ್ನು ಕಪ್ಪು ಬಣ್ಣ ಹಾಕಿಸಲು ತೆಗೆದುಕೊಂಡು ಹೋದಾಗ ಚಾವ್ರೋನ ಮಗ ಹೇಳಿದ್ದನ್ನು ಹೇಳಿಯೇ ಹೇಳಿದಳು. ಆಹ್‌ಕ್ಯೂನನ್ನು ಓಡಿಸುವ ವಿಚಾರವನ್ನು ಬಹಿರಂಗ ಪಡಿಸಿದ್ದು ಆಹ್‌ಕ್ಯೂಗೆ ಹೆಚ್ಚು ಮಾರಕವಾಯಿತು. ಜೈಲಿಫ್ ಅವನ ಮನೆ ಬಾಗಿಲಿಗೆ ಬಂದು ಬಾಗಿಲಿನ ಪರದೆಯನ್ನು ತೆಗೆದುಕೊಂಡು ಹೋದ. ಮಿಸೆಸ್ ಚಾವ್ರೋ ಬೇಕೆಂದು ಹೇಳಿದ್ದಾಳೆಂತ ಎಷ್ಟೇ ಕೇಳಿಕೊಂಡರೂ ಅದನ್ನು ವಾಪಸ್ಸು ಕೊಡುವುದಿರಲಿ. ತಿಂಗಳು ತಿಂಗಳಿಗೆ ಅವನ [illegible] ಮಾಡಬೇಕು ಹಾಗೆ ಕೊಡಬೇಕೆಂದೂ ಹೇಳಿದ. ಎರಡನೆಯದಾಗಿ [illegible] ನೋಡುವ [illegible]ದರಲ್ಲಿ ಬದಲಾವಣೆ ಕಾಣಿಸಿತು. ಅವನ ಜೊತೆ [illegible] ಅವನಿಂದ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಾದಷ್ಟು ಪ್ರಯತ್ನಿಸುತ್ತಿದ್ದರು. "[illegible]" [illegible] ಭಯವಿದ್ದ

ಭಿನ್ನವಾಗಿ, ಹಿಂದಿನವರು ದೆವ್ವಗಳ ಜೊತೆ ನಡೆದುಕೊಳ್ಳುತ್ತಿದ್ದ ರೀತಿಯಲ್ಲಿ ಭಯ ಭಕ್ತಿಯಿಂದ ದೂರವಿರುತ್ತಿದ್ದರು.

ಆದರೆ ಕೆಲವರು ಸೋಮಾರಿ ಉಡಾಳರು ವಿಷಯದ ಆಳ ತಿಳಿಯಲು ಆಹ್‌ಕ್ಯೂನನ್ನು ಜಾಣತನದಿಂದ ವಿಚಾರಿಸಿದರು. ಆಹ್‌ಕ್ಯೂ ಗುಟ್ಟಾಗಿ ಇಡಬೇಕು ಅನ್ನೋ ಪ್ರಜ್ಞೇನೂ ಇಲ್ಲದೆ ನಡೆದ ಎಲ್ಲವನ್ನೂ ಹೆಮ್ಮೆಯಿಂದ ಹೇಳಿಕೊಂಡ. ಅವನಿಂದ ಅವರಿಗೆ ತಿಳಿದದ್ದು, ಆಹ್‌ಕ್ಯೂ ಕೇವಲ ಒಬ್ಬ ಚಿಲ್ಲರೆ ಕಳ್ಳನಾಗಿದ್ದ. ಕಳ್ಳತನ ಮಾಡುವ ಸಾಹಸ ಇಲ್ಲದೆ, ಕದ್ದ ವಸ್ತುಗಳನ್ನು ಪಡೆಯುತ್ತಿದ್ದನಷ್ಟೆ.

ಒಂದು ರಾತ್ರಿ ಅವನಿಗೆ ಒಂದು ಗಂಟು ಸಿಕ್ಕಿತು. ಅವನ ಮುಖ್ಯಸ್ಥ ಮತ್ತೊಮ್ಮೆ ಒಳಗೆ ಹೋಗಿದ್ದ. ಸ್ವಲ್ಪ ಹೊತ್ತಿಗೆ ಒಳಗೆ ದೊಡ್ಡ ಗದ್ದಲ ಕೇಳಿಸಿತು. ಇದನ್ನು ಕೇಳಿದ್ದೇ ಆಹ್‌ಕ್ಯೂ ಕಾಲಿಗೆ ಬುದ್ಧಿ ಹೇಳುತ್ತ ಎಷ್ಟು ಸಾಧ್ಯವೋ ಅಷ್ಟು ವೇಗವಾಗಿ ಓಡಿ ಬಂದಿದ್ದ. ಆ ದಿನ ರಾತ್ರಿಯೇ ಪಟ್ಟಣ ಬಿಟ್ಟು ವೀಷುವಾಂಗ್‌ಗೆ ಹಿಂತಿರುಗಿದ್ದ. ಇದಾದ ಮೇಲೆ ಇಂಥ ಕೆಲಸಕ್ಕೆ ಎಂದಿಗೂ ಸಾಹಸ ಮಾಡಲಿಲ್ಲ. ಆದರೆ ಈ ಕಥೆ ಆಹ್‌ಕ್ಯೂನ ವ್ಯಕ್ತಿತ್ವಕ್ಕೇ ಅಪಾಯಕಾರಿಯಾಗಿತ್ತು. ಊರಿನ ಜನ ಈಗ ಆಹ್‌ಕ್ಯೂನ ಮೇಲೆ ಗೌರವವಿಟ್ಟೂ ದೂರವಿರುತ್ತಿದ್ದರು. ಅವನ ಕೋಪವನ್ನು ಎದುರಿಸಲು ಹೆದರುತ್ತಿದ್ದರು. ಅವನು ಕೇವಲ ಕಳ್ಳ ಮಾತ್ರ ಆಗಲು ಸಾಧ್ಯ ಅಂತ ಯಾರು ತಾನೇ ಊಹಿಸಿದ್ದರು? ಮತ್ತೊಂದು ಸಲ ಕಳ್ಳತನ ಮಾಡಲೂ ಹೆದರುವವನಿಗೆ, ತನ್ನ ಬಗ್ಗೆ ಹೆದರಿಕೆ ಉಂಟಾಗುವಂತೆ ಮಾಡುವುದಕ್ಕೆಲ್ಲಿದೆ ಸಾಮರ್ಥ್ಯ?

ಅಧ್ಯಾಯ – ೬

ಕ್ರಾಂತಿ

೧೯೧೧ರ ಕ್ರಾಂತಿಯಲ್ಲಿ ಷಾವ್ರೋಸಿಂಗ್ ಬಿಡುಗಡೆಯಾದ ದಿನ ಆಹ್‌ಕ್ಯೂ ತನ್ನ ಪರ್ಸನ್ನು ಚಾವ್ರೋ ಪೈಯೆನ್‌ನಿಗೆ ಮಧ್ಯರಾತ್ರಿ ಮಾರಿದ. ಮೂರನೆ ಗಡಿಯಾರದಲ್ಲಿ ನಾಲ್ಕನೇ ಗಂಟೆ ಹೊಡೆದಾಗ, ಒಂದು ದೊಡ್ಡ ದೋಣಿ ಕಪ್ಪು ಬಟ್ಟೆಯ ಛಾವಣಿಯಿಂದ ಕೂಡಿದ್ದು ಚಾವ್ರೋನ ಮನೆಯ ಇಳಿದಾಣದ ಬಳಿ ಬಂದು ನಿಂತಿತು. ಈ ದೋಣಿ, ಊರಿನ ಜನ ಗಾಢ ನಿದ್ದೆಯಲ್ಲಿ ಮುಳುಗಿರುವ ಸಮಯದಲ್ಲಿ ಕತ್ತಲಲ್ಲಿ ತೇಲಾಡುತ್ತಿತ್ತು. ಯಾರಿಗೂ ಇದರ ಬಗ್ಗೆ ಸುಳಿವು ಹತ್ತಲಿಲ್ಲ. ಬೆಳಿಗ್ಗೆ ಹೊತ್ತಿಗೆ ಅದು ಅಲ್ಲಿಂದ ಹೊರಟಿತ್ತಾದರೂ, ಹೋಗುವುದನ್ನು ಸುಮಾರು ಜನ ನೋಡಿದರು. ಸ್ವಲ್ಪ ಶೋಧನೆ ನಡೆಸಿದ ಮೇಲೆ ಗೊತ್ತಾಯಿತು, ಅದು ಚಾವ್ರೋನ ಮಗನದಾಗಿತ್ತು.

ಈ ಘಟನೆ ವೀಪುವಾಂಗ್ ಜನಕ್ಕೆ ಯಾಕೋ ಕಷ್ಟಕ್ಕೆ ಬಂತು ಅಂತ ಅನ್ನಿಸಿತು. ಎಲ್ಲರ ಎದೆ ಬಡಿತ ಜೋರಾಯಿತು. ಚಾವ್ರೋ ಕುಟುಂಬ ಮಾತ್ರ ಈ ದೋಣಿ ವಿಚಾರದಲ್ಲಿ ಮೌನ ವಹಿಸಿತ್ತು. ಹೆಂಡದಂಗಡಿ, ಟೀಹೌಸ್‌ಗಳಲ್ಲಿ ನಡೆದ ಹರಟೆಯಿಂದ ತಿಳಿದ ಸಮಾಚಾರವೆಂದರೆ, ಕ್ರಾಂತಿಕಾರರು ಪಟ್ಟಣ ಪ್ರವೇಶ ಮಾಡುವವರಿದ್ದರು. ಪ್ರಾವಿನ್ಷಿಯಲ್ ಕ್ಯಾಂಡಿಡೇಟಾಗಿದ್ದ ಚಾವ್ರೋ ಮಗ ಊರಿಗೆ ಬಂದದ್ದು ರಕ್ಷಣೆ ಪಡೆಯೋಕೇಂತ ಎಂಬುದು ಮಿಸೆಸ್ ತ್ಸುವ್ರೋ ಆಲೋಚನೆ ಬೇರೆ ಆಗಿತ್ತು. ಅವಳ ಪ್ರಕಾರ ವಿಜೇತನಾದ ಪ್ರಾವಿನ್ಷಿಯಲ್ ಕ್ಯಾಂಡಿಡೇಟ್ ಸುಮ್ಮನೆ ಕೆಲವು ಹರಕಲು ಮುರುಕಲು ಪೆಟ್ಟಿಗೆಗಳನ್ನು ವೀಪುವಾಂಗ್‌ನಲ್ಲಿ ಇರಿಸಬೇಕೆಂದಿದ್ದ. ಆದರೆ ಚಾವ್ರೋ ಅವುಗಳನ್ನು ವಾಪಸ್ ಕಳಿಸಿಬಿಟ್ಟ. ನಿಜ ಹೇಳಬೇಕಾದರೆ ಚಾವ್ರೋ ಕುಟುಂಬದ ವಿಜೇತನಾದ ಪ್ರಾವಿನ್ಷಿಯಲ್ ಕ್ಯಾಂಡಿಡೇಟ್ ಮತ್ತು ಕೌಂಟಿ ಕ್ಯಾಂಡಿಡೇಟ್ ಇಬ್ಬರೂ ಒಬ್ಬರಿಗೊಬ್ಬರು ಮಾತಾಡುತ್ತಿರಲಿಲ್ಲ. ಹಾಗಿರುವಾಗ ಕಷ್ಟ ಸಮಯದಲ್ಲಿ ಒಬ್ಬರಿಗೊಬ್ಬರು ಸಹಾಯ ಮಾಡುವುದಂತೂ ದೂರದ ಮಾತು. ಅಲ್ಲದೆ ತ್ಸುವ್ರೋ, ಚಾವ್ರೋನ ನೆರೆಯಾಕೆ ಆಗಿದ್ದುದರಿಂದ ಪಕ್ಕದ ಮನೆಯ ವಿಷಯ ನಡೆದಿದೆ ಅನ್ನೋದು ಚೆನ್ನಾಗಿ ಗೊತ್ತಾಗಿರಲೇಬೇಕು.

ಗಾಳಿ ಸುದ್ದಿ ಪರಿಣಾಮವಾಗಿ ಒಂದು ಮಾತಂತು ಗೊತ್ತಾಯಿತು. ವಿದ್ವಾಂಸ ತಾನೇ ಬರದಿದ್ದರೂ, ಚಾವೋ ಕುಟುಂಬದೊಂದಿಗೆ ತನ್ನ ಸಂಬಂಧ ಎಂಥಾದ್ದು ಅನ್ನೋದನ್ನ ವಿವರಿಸಿ ಒಂದು ಪತ್ರ ಬರೆದಿದ್ದ. ಚಾವೋ ಯೋಚಿಸಿದ ಮೇಲೆ, ಇದರಿಂದ ತಮಗೇನೂ ತೊಂದರೆ ಇಲ್ಲಾಂತ ಭಾವಿಸಿ, ತನ್ನ ಹೆಂಡತಿಯ ಹಾಸಿಗೆ ಕೆಳಗೆ ಅವುಗಳನ್ನು ಮರೆಸಿ ಇಟ್ಟ. ಕ್ರಾಂತಿಕಾರರ ವಿಷಯ ಹೇಳುವುದಾದರೆ, ಜನರ ಮಾತಿನಂತೆ ಅವರು ಬಿಳಿ ಶಿರ ಸ್ತ್ರಾಣಗಳನ್ನು ಕವಚಗಳನ್ನು ಧರಿಸಿ ಆ ರಾತ್ರಿಯೇ, ಸತ್ತ ತಮ್ಮ ಚಕ್ರವರ್ತಿ ಚುಂಗ್‌ಚೆನ್‌ಗಾಗಿ ಶೋಕಾಚರಣೆ ನೆಪದಲ್ಲಿ ಪಟ್ಟಣ ಪ್ರವೇಶ ಮಾಡಿದ್ದರಂತೆ.

ಆಹ್‌ಕ್ಯೂ ಕ್ರಾಂತಿಕಾರರ ಬಗ್ಗೆ ಮೊದಲಿಂದಲೂ ಅರಿತಿದ್ದ. ತಾನೇ ಖುದ್ದಾಗಿ ತನ್ನ ಕಣ್ಣಿಂದ, ಅವನ ಶಿರಚ್ಛೇದ ಆಗುವುದನ್ನು ಕಂಡಿದ್ದ. ಕ್ರಾಂತಿಕಾರರು ಪ್ರತಿಭಟನಾಕಾರರೂ ಆಗಿದ್ದರು. ಅಲ್ಲದೆ ಅವರಿಂದ ತುಂಬ ತೊಂದರೇನೂ ಆಗುತ್ತೆ ಅಂತ ನಂಬಿದ್ದರಿಂದ, ಅವರಿಂದ ಯಾವಾಗಲೂ ದೂರವೇ ಇದ್ದ. ಆದರೆ ಯಾರಿಗೆ ಗೊತ್ತಿತ್ತು. ಸುಮಾರು ಮೂವತ್ತು ಮೈಲು ಆಸುಪಾಸಿನವರೆಗೂ ಸಾಕಷ್ಟು ಹೆಸರಾಗಿದ್ದ, ವಿಜೇತ ಪ್ರಾವೆನ್‌ಷಿಯಲ್ ಕ್ಯಾಂಡಿಡೇಟನ್ನು ಇಷ್ಟೊಂದು ಹೆದರಿಸ್ತಾರೇಂತ! ಆಹ್‌ಕ್ಯೂಗೆ ಇದೆಲ್ಲ ಮೈಮರೆಯುವ ಹಾಗೆ ಮಾಡಿತು. ಇದರ ಜೊತೆಗೆ ಊರಿನವರ ಭಯ ಅವನ ಸಂತೋಷವನ್ನು ಇನ್ನಷ್ಟು ಹೆಚ್ಚಿಸಿತು.

"ಕ್ರಾಂತಿ ಅಂದರೆ ಕೆಟ್ಟದ್ದೇನೂ ಅಲ್ಲ" ಆಹ್‌ಕ್ಯೂಗೆ ಅನಿಸಿತು. ಎಲ್ಲರನ್ನೂ ಮುಗಿಸಿಬಿಡಬೇಕು.... ಹಿಡಿ ಶಾಪ ಹಾಕಬೇಕು. ನನಗಂತೂ ಕ್ರಾಂತಿಕಾರರ ಬಳಿಗೆ ನಾನೇ ಖುದ್ದಾಗಿ ಹೋಗಬೇಕು ಅಂತ ಅನ್ನಿಸುತ್ತೆ!"

ಆಹ್‌ಕ್ಯೂ ಈಗ ಸ್ವಲ್ಪ ದಿನದಿಂದೀಚೆಗೆ ಗಟ್ಟಿಗೊಂಡಿದ್ದ. ಪಾಪ ಅಸಂತೃಪ್ತನೂ ಆಗಿದ್ದ. ಅದರ ಜೊತೆಗೆ ಬರಿ ಹೊಟ್ಟೇಲಿ ಒಂದೆರಡು ಬಟ್ಟಲು ಹೆಂಡಾನೂ ಇಳಿಸಿದ್ದ. ಪರಿಣಾಮವಾಗಿ ಕುಡುಕನಾದ. ಗಾಳೀಲಿ ಎಲ್ಲೋ ತೇಲುತ್ತಿರುವಂತೆ ಭಾವಿಸಿ ನಡೆದ. ಇದ್ದಕ್ಕಿದ್ದಂತೆ ವಿಚಿತ್ರವಾಗಿ ಅವನು ತನ್ನನ್ನೇ ಕ್ರಾಂತಿಕಾರಿ ಅಂತ ಭಾವಿಸಿಕೊಂಡ. ವೀಷುವಾಂಗ್‌ನ ಜನವೆಲ್ಲ ತನ್ನ ಸೆರೆಯಾಳುಗಳು ಅಂದುಕೊಂಡ. ತನ್ನ ಮೇಲೆ ನಿಯಂತ್ರಣ ತಪ್ಪಿ ಜೋರಾಗಿ ಕಿರುಚಿದ.

"ದಂಗೆ! ದಂಗೆ!"

ಅಲ್ಲಿದ್ದ ಊರಿನ ಜನವೆಲ್ಲ ಇದನ್ನು ಕೇಳಿ ಭಯಭ್ರಾಂತರಾಗಿ ನೋಡಿದರು. ಇಲ್ಲಿವರೆಗೆ ಅವರ ಕಣ್ಣುಗಳಲ್ಲಿ ಇಂತಹ ದಯನೀಯ ನೋಟವನ್ನು ನೋಡಿರಲಿಲ್ಲ. ಇದನ್ನು ನೋಡಿದಾಗ ಅವನಿಗೆ ಬೇಸಿಗೆಯಲ್ಲಿ ತಂಪಾದ ಪಾನೀಯವನ್ನು ಕುಡಿದು ಹಾಯೆನಿಸದ ಹಾಗೆ ಆಯಿತು. ಇದರಿಂದ ಇನ್ನಷ್ಟು ಖುಷಿಪಡುತ್ತ, ಕಿರುಚುತ್ತ ಹೆಜ್ಜೆ ಹಾಕಿದ:-

"ಸರಿ, ನನಗೆ ಇಷ್ಟ ಬಂದದ್ದನ್ನು ತೊಗೋತೀನಿ. ನನಗೆ ಬೇಕಾದವರನ್ನು ಪ್ರೀತಿಸ್ತೇನೆ. ಲಾ! ಲ ಲಾ!

ಮರೆತು ಕೊಂದ ನನ್ನ ಸೋದರನ ಕೊಲೆಗಾಗಿ ಪಶ್ಚಾತ್ತಾಪ ಪಡುತ್ತೇನೆ.

ಕೊಂದಿದ್ದಕ್ಕಾಗಿ ಪರಿತಪಿಸುತ್ತೇನೆ.

ತ್ರಾ ಲಾ! ತ್ರಾ ಲಾ! ತುಂ ತಿ ತುಮ್! ತುಮ್!

ಉಕ್ಕಿನ ದಂಡದಿಂದ ತಲೆ ಒಡೆಯುತ್ತೇನೆ."

ಚಾವ್ಹೋ ಮತ್ತು ಅವನ ಇಬ್ಬರು ಮಕ್ಕಳು, ತಮ್ಮ ಒಂದಿಬ್ಬರು ಬಂಧುಗಳೊಂದಿಗೆ, ಕ್ರಾಂತಿ ಬಗ್ಗೆ ಮಾತಾಡುತ್ತಾ ನಿಂತಿದ್ದರು. ಆಹ್‌ಕ್ಯೂ ಅವರು ನಿಂತಿದ್ದನ್ನು ಗಮನಿಸಿದ. ಟ್ರಾ ಲಾ ಲಾ ತುಮ್ ತಿ ತುಮ್! ಎಂದು ಹಾಡುತ್ತ ತಲೆ ಎತ್ತಿಕೊಂಡು ದಾಟಿ ಹೋದ.

"ಕ್ಯೂ! ಓಲ್ಡ್ ಚ್ಯಾಪ್!" ಹೆದರಿದ ಸಣ್ಣ ದನಿಯಲ್ಲಿ ಚಾವ್ಹೋ ಕರೆದ. ಆಹ್‌ಕ್ಯೂ ಟ್ರಾ ಲಾ ಮತ್ತೆ ಹಾಡಿದ. ಓಲ್ಡ್ ಚ್ಯಾಪ್ ಅನ್ನುವುದರ ಜೊತೆ ತನ್ನ ಹೆಸರು ಸೇರಿರುತ್ತೆ ಅನ್ನುವುದನ್ನು ಊಹಿಸಲಾರದವನಾಗಿದ್ದ. ಅದಕ್ಕೆಂದೇ ಓಲ್ಡ್ ಚ್ಯಾಪ್ ಅಂತ ಕರೆದದ್ದು ತನ್ನನ್ನಲ್ಲವೆಂದು ತಿಳಿದು, ತನ್ನ ಪಾಡಿಗೆ ತಾನು ಹಾಡುತ್ತ ನಡೆದ.

ಕ್ಯೂ, ಓಲ್ಡ್ ಚ್ಯಾಪ್

"ಕೊಂದದ್ದಕ್ಕೆ ನಾನು ಪರಿತಪಿಸುತ್ತೇನೆ"

"ಆಹ್‌ಕ್ಯೂ" ಚಾವ್ಹೋನ ಮಗ, ಹೆಸರಿಡಿದು ಕರೆಯಬೇಕಾಯಿತು.

ಆಗ ಮಾತ್ರ ಆಹ್‌ಕ್ಯೂ ನಿಂತ. ಚೆನ್ನಾಗಿದ್ದೀರಾ? ಒಂದು ಕಡೆಗೆ ತಲೆ ತಿರುಗಿಸಿ, ಕೇಳಿದ.

"ಕ್ಯೂ! ಓಲ್ಡ್‌ಚ್ಯಾಪ್..." ಈಗ.... ಚಾವ್ಹೋಗೆ ಮುಂದೆ ಏನು ಮಾತಾಡಬೇಕೋ ತಿಳಿಯಲಿಲ್ಲ. "ಏನಪ್ಪ, ಬಹಳ ಶ್ರೀಮಂತನಾಗ್ಬಿಟ್ಟಿಯ ಇತ್ತೀಚೆಗೆ?"

"ಶ್ರೀಮಂತನೇ? ಹೌದು! ನನಗೇನು ಇಷ್ಟವೋ ಅದನ್ನು ನಾನು ತೆಗೆದುಕೊಳ್ತೇನೆ"

ಆಹ್‌ಕ್ಯೂ, "ಓಲ್ಡ್ ಚ್ಯಾಪ್, ನಮ್ಮಂತಹ ಬಡವರು ಹಾಗೆ ಲೆಕ್ಕಕ್ಕೇ ಇಲ್ಲ..." [illegible] ಕ್ರಾಂತಿಕಾರರ ಮನೋಧರ್ಮವನ್ನು ಧ್ವನಿಸುವಂತೆ.

[illegible]

ಅವರು ನಿರಾಶೆ ಮತ್ತು ನಿರ್ವಾಕ್ಕಾಗಿ ನಿಂತರು. ಚಾವೋ ಮತ್ತು ಮಗ ಮನೆಗೆ ಹಿಂತಿರುಗಿ ಆ ದಿನ ಸಂಜೆಯಿಂದ ಕತ್ತಲಾಗುವವರೆಗೆ ಪ್ರಶ್ನೆ ಕುರಿತು ಚರ್ಚಿಸಿದರು. ಚಾವೋ ಪೈಯೆನ್ ಮನೆಗೆ ಹಿಂತಿರುಗಿದ ಮೇಲೆ ತನ್ನ ಪರ್ಸನ್ನು ಹೆಂಡತಿ ಕೈಗಿತ್ತು, ಒಳಗೆಲ್ಲಾದರೂ ಮುಚ್ಚಿಡಲು ಹೇಳಿದ.

ಸ್ವಲ್ಪ ಹೊತ್ತು ಆಹ್‌ಕ್ಯೂ ಗಾಳೀಲಿ ನಡೀತಿರೋ ಹಾಗೇ ಇದ್ದರೂ ತನ್ನ ರಕ್ಷಕ ದೇವರ ಗುಡಿ ತಲುಪಿದಾಗ ಮಾಮೂಲಿ ಸ್ಥಿತಿಗೆ ಬಂದಿದ್ದ. ಆ ದಿನ ಸಂಜೆ ಗುಡಿಯ ಮುದುಕ ಎಂದೂ ಇಲ್ಲದಂತೆ ತೀರಾ ಸ್ನೇಹಿತನಂತೆ ನಡೆದುಕೊಂಡ; ಅವನಿಗೆ ಚಹಾ ಸಹ ನೀಡಿದ. ನಂತರ ಆಹ್‌ಕ್ಯೂ ಎರಡು ತೆಳ್ಳನೆ ರೊಟ್ಟಿ ಕೇಳಿದ. ಅದನ್ನು ತಿಂದ ಮೇಲೆ ಬಳಸಿದ್ದ ನಾಲ್ಕು ಔನ್ಸಿನ ಕ್ಯಾಂಡಲ್ ಮತ್ತು ಕ್ಯಾಂಡಲ್ ಸ್ಟಿಕ್ಕನ್ನು ಕೇಳಿದ. ಕ್ಯಾಂಡಲ್ ಉರಿಸಿ, ತನ್ನ ಪುಟ್ಟ ಕೋಣೆಯಲ್ಲಿ ತಾನೊಬ್ಬನೇ ಮಲಗಿದ. ಆ ದಿನ ಅವನು ಎಂದೂ ಇಲ್ಲದಷ್ಟು ಸಂತೋಷವಾಗಿದ್ದ. ಗಾಳಿಗೆ ತೂರಾಡುತ್ತಿದ್ದ. ಉರಿದ ಕ್ಯಾಂಡಲ್ ಜ್ವಾಲೆಯು ಲಾಂಟೆರ್ನ್ ಹಬ್ಬದ ದಿನ ಅಲುಗಾಡುವಂತೆ ಕಾಣುತ್ತಿತ್ತು. ಅವನ ಕಲ್ಪನೆ ಎಲ್ಲೋ! ಅದರ ಜೊತೆಗೆ ಅವನೂ ಯಾವುದೋ ಲೋಕದಲ್ಲಿದ್ದ. ದಂಗೆ! ಎಷ್ಟು ತಮಾಶೆಯಾಗಿರುತ್ತೆ! ಕ್ರಾಂತಿಕಾರರು ಬಿಳಿ ಹೆಲ್ಮೆಟ್, ಬಿಳಿ ಕವಚ, ಕೈಯಲ್ಲಿ ಕತ್ತಿಗಳು, ಉಕ್ಕಿನ ದಂಡಗಳು, ಬಾಂಬುಗಳು, ವಿದೇಶಿ ಬಂದೂಕು, ಎರಡು ಕಡೆ ಧಾರೆಯಿರುವ ಚಾಕು, ಭಲ್ಲೆ ಭರ್ಚಿಗಳು... ಇವುಗಳನ್ನೆಲ್ಲಾ ಹಿಡಿದುಕೊಂಡು ಬರ್‍ತಾರೆ... ಅವರೆಲ್ಲ ಈ ರಕ್ಷಕ ದೇವರ ಗುಡಿ ಬಳಿ ಬಂದು ಕರೀತಾರೆ!... ಆಹ್‌ಕ್ಯೂ! ಬಾ ನಂಜೊತೆ!... ಆಹ್‌ಕ್ಯೂ! ಬಾ ನಂಜೊತೆ!... ಆಗ ನಾನು ಅವರು ಜೊತೆ ಹೋಗ್ತೀನಿ...

"ಆಗ ಊರಿನವರೆಲ್ಲ ನಗು ಬರುವ ಹಾಗೆ, ದೈನ್ಯವಾಗಿ ನನ್ನ ಮುಂದೆ ಮೊಣಕಾಲೂರಿ, ಆಹ್‌ಕ್ಯೂ! ನಮ್ಮನ್ನು ಬಿಟ್ಟುಬಿಡು!" ಎಂದು ಯಾಚಿಸುತ್ತಾರೆ. ಆದರೆ ಅವರ ಮಾತನ್ನು ಯಾರು ತಾನೇ ಕೇಳ್ತಾರೆ! ಸಾಯುವವರಲ್ಲಿ ಮೊದಲಿಗರೆಂದರೆ, ಯಂಗ್‌ಡಿ ಮತ್ತು ಚಾವೋ. ಆಮೇಲೆ ವಿಜೇತನಾದ ಕೌಂಟಿ ಕ್ಯಾಂಡಿಡೇಟ್... ವಿದೇಶಿ ಅನುಕರಣೆ ಪಿಶಾಚಿ... ಒಂದಷ್ಟು ಜನಾನ ಸಾಧ್ಯವಾದರೆ ಬಿಡಬಹುದಾಗಿತ್ತೇನೋ, ವಿಸ್ಕರ್‌ಸ್ವ್ಯಾಂಗ್‌ನ ಒಂದು ಸಲ ಬಿಟ್ಟಿದ್ದೆ.... ಆದರೆ ಈಗ ಮಾತ್ರ ಹಾಗಲ್ಲ...

"ಸಾಮಾನುಗಳು... ಮೊದಲು ನೆಟ್ಟಗೆ ಆ ಪೆಟ್ಟಿಗೆಗಳ ಹತ್ತಿರ ಹೋಗ್ತೀನಿ... ಬೆಳ್ಳಿ ನಾಣ್ಯ ವಿದೇಶಿ ನಾಣ್ಯ. ವಿದೇಶಿ ಕ್ಯಾಲಿಕೋ ಜಾಕೆಟ್ಸ್. ಮೊದಲಿಗೆ ಕೌಂಟಿ ಕ್ಯಾಂಡಿಡೇಟ್ ಹೆಂಡತಿ ಹಾಸಿಗೇನ ಗುಡಿಗೆ ಸಾಗಿಸ್ತೀನಿ, ಆಮೇಲೆ ಚಿಯೆನ್ ಮನೆಯ ಮೇಜು ಕುರ್ಚಿಗಳನ್ನು ಇಲ್ಲವೆ ಚಾವೋ ಮನೇದನ್ನ ಉಪಯೋಗಿಸಿಕೊಳ್ತೇನೆ. ನಾನಂತು ಒಂದು ಚೂರು ಕೆಲಸ ಮಾಡೊಲ್ಲ. ಒಂದು ಕಡ್ಡಿ ಕೂಡ ಕದಲಿಸೊಲ್ಲ. ಯಂಗ್‌ಡಿ

ಕೈಯಲ್ಲಿಯೇ ಎಲ್ಲವನ್ನೂ ಮಾಡಿಸ್ತೀನಿ. ನನ್ನ ಕೈಯೇಟಿನ ರುಚಿ ಬೇಡವಾದರೆ ಅಚ್ಚುಕಟ್ಟಾಗಿ ಮಾಡು ಅಂತೀನಿ.

ಚಾವೋ ಘುಚೆನ್‌ನ ತಂಗಿ ನೋಡೋಕೆ ಕೆಟ್ಟದಾಗಿದ್ದಾಳೆ. ಮಿಸೆಸ್ ತ್ಸುವೋ ಮಗಳನ್ನು ಸ್ವಲ್ಪ ದಿನ ಆದಮೇಲೆ ಯೋಚನೆ ಮಾಡಬಹುದು. ವಿದೇಶಿ ಅನುಕರಣೆ ಪಿಶಾಚಿ ಹೆಂಡತಿ ಪಿಗ್‌ಟೈಲ್ ಇಲ್ಲದಿರುವ ಗಂಡಸಿನ ಜೊತೆ ಮಲಗೋಕೆ ರೆಡಿಯಾಗಿದ್ದಾಳೆ! ಛೀ! ಛಿ! ಆಕೆ ಒಳ್ಳೆ ಹೆಂಗಸಾಗಿರಲು ಸಾಧ್ಯವಿಲ್ಲ! ಕೌಂಟಿ ಕ್ಯಾಂಡಿಡೇಟ್ ಹೆಂಡತಿಯ ಕಣ್ಣುರೆಪ್ಪೆಗಳ ಮೇಲೆ ಕಲೆಗಳಿವೆ. ಅಮಾಹ್‌ವೂನ ನೋಡಿ ..ಪಳ ದಿನ ಆಯಿತು. ಅವಳು ಎಲ್ಲಿದ್ದಾಳೋ ಗೊತ್ತಿಲ್ಲ. ಆದರೆ ಅಯ್ಯೋ ಅವಳ ಪಾದಗಳು, ಹಾಳಾದ್ದು ಎಷ್ಟು ದೊಡ್ಡವು!

ಒಂದು ಸರಿಯಾದ ನಿರ್ಧಾರಕ್ಕೆ ಬರುವ ಮೊದಲೇ ಗೊರಕೆಗೆ ಇಳಿದಿದ್ದ. ನಾಲ್ಕು ಔನ್ಸಿನ ಕ್ಯಾಂಡಲ್ ಉರಿದು ಉರಿದು ಅರ್ಧ ಅಂಗುಲದಷ್ಟು ಮಾತ್ರ ಉಳಿದಿತ್ತು. ಹೊಯ್ದಾಡುತ್ತಿದ್ದ ಜ್ವಾಲೆ ಅವನ ತೆರೆದ ಬಾಯನ್ನು ಮಾತ್ರ ಬೆಳಗಿಸಿತ್ತು.

"ಹೋ! ಹೋ!... ಬೊಬ್ಬೆಯಿಡುತ್ತ ಎದ್ದು ಸುತ್ತಲೂ ಗಾಭರಿಯಿಂದ ನೋಡಿದ. ನಾಲ್ಕು ಔನ್ಸಿನ ಕ್ಯಾಂಡಲ್ ಅನ್ನು ನೋಡಿದವನೇ ಮತ್ತೆ ನಿದ್ದೆಗೆ ಉರುಳಿದ.

ಮಾರನೇ ದಿನ ಬೆಳಿಗ್ಗೆ ತಡವಾಗಿ ಎದ್ದ. ಹೊರಗೆ ಹೊರಟಾಗ, ಬೀದಿಯಲ್ಲಿ ಎಲ್ಲವೂ ಮಾಮೂಲಿನಂತೆ ಇತ್ತು. ಅವನಿಗೆ ಹಸಿವಾಗಿತ್ತು. ತಲೆ ಕೆರೆದುಕೊಂಡರೂ ಏನು ಮಾಡಬೇಕೆಂದು ಹೊಳೀಲಿಲ್ಲ. ನಂತರ ಇದ್ದಕ್ಕಿದ್ದಂತೆ ಅವನ ತಲೇಲಿ ಏನೋ ಹೊಳೆದಂತಾಗಿ ನಿಧಾನವಾಗಿ ಹೆಜ್ಜೆ ಹಾಕಿದ. ಉದ್ದೇಶ ಪೂರ್ವಕವೋ, ಆಕಸ್ಮಿಕವೋ, ನಡೆದು ಕಡೆಗೆ ಕ್ವಯಟ್ ಸೆಲ್ಫ್ ಇಂಪ್ರೂವ್‌ಮೆಂಟ್ ಕಾನ್ವೆಂಟನ್ನು ತಲುಪಿದ.

ಒಂದೊಮ್ಮೆ ವಸಂತಮಾಸದಲ್ಲಿ ಹೋಗಿದ್ದಾಗ ಹೇಗೆ ಪ್ರಶಾಂತವಾಗಿ ಇತ್ತೋ, ಹಾಗೇ ಈಗಲೂ ಪ್ರಶಾಂತವಾಗಿತ್ತು. ಬಿಳಿ ಗೋಡೆಗಳು, ಕಪ್ಪು ಹೆಬ್ಬಾಗಿಲು, ಸ್ವಲ್ಪ ಹೊತ್ತು ಯೋಚಿಸಿದ ನಂತರ ಗೇಟಿನ ಮೇಲೆ ಸದ್ದು ಮಾಡಿದ. ಇದರಿಂದ ನಾಯಿ ಒಳಗಿಂದಲೇ ಬೊಗಳಿತು. ಬೇಗ ಬೇಗ ಹೋಗಿ ಒಂದಷ್ಟು ಹೆಂಟೆಗಳನ್ನು ಎತ್ತಿಕೊಂಡು ಮತ್ತೆ ಗೇಟಿನ ಮೇಲೆ ಎಸೆದು, ಅವುಗಳಿಂದ ಗೇಟಿನ ಬಾಗಿಲ ಮೇಲೆ ಗುಳಿಗಳು ಕಾಣಿಸಿಕೊಳ್ಳುವವರೆಗೂ ಬೀಸಿದ. ಕಡೆಗೆ ಯಾರೋ ಬಂದು ಬಾಗಿಲು ತೆಗೆಯುವ ಸದ್ದನ್ನು ಕೇಳಿದ.

ಮುರಿದ ಇಟ್ಟಿಗೆ ಚೂರನ್ನು ಕೈಲಿ ಹಿಡಿದು ಕಾಲುಗಳನ್ನು ಅಗಲಿಸಿ, ನಾಯಿ ಮೇಲೆ ಕಚ್ಚಿ ದಾಳಿ ಮಾಡಲು ಸಿದ್ಧನಾಗಿ ನಿಂತ. ಕಾನ್ವೆಂಟ್ ಬಾಗಿಲು ಸದ್ದು ಮಾಡುತ್ತ ತೆರೆದುಕೊಂಡಿದ್ದರೂ ಕಪ್ಪು ನಾಯಿ ಹೊರಗೆ ಬರಲಿಲ್ಲ. ಒಳಗೆಲ್ಲ ನೋಡಿದಾಗ, ಅವನ ಕಣ್ಣಿಗೆ ಬಿದ್ದದ್ದು ಒಂದೆ ಕಂದಿದ್ದ [illegible].

"ಮತ್ತೆ ಯಾಕೆ ಇಲ್ಲಿ ಬಂದಿದ್ದೀಯ!" ಆಶ್ಚರ್ಯದಿಂದ ಕೇಳಿದಳು.

"ದಂಗೆ, ದಂಗೆ ಎದ್ದಿದೆ. ಗೊತ್ತಿಲ್ಲ ನಿನಗೆ?" ಆಹ್‌ಕ್ಯೂ ಅಸ್ಪಷ್ಟವಾಗಿ ಹೇಳಿದ.

"ದಂಗೆ! ಕ್ರಾಂತಿ! ಈಗಾಗಲೇ ಒಂದು ಮುಗೀತಲ್ಲ?" ಅತ್ತು ಕೆಂಪಾದ ಕಣ್ಣುಗಳಿಂದ ನುಡಿದಳು ಸನ್ಯಾಸಿನಿ. "ನಿನ್ನ ಕ್ರಾಂತಿಯಿಂದ ನಾವೇನಾಗ್ತೀವೀಂತ ಗೊತ್ತೇನು?"

"ಏನು?" ಆಶ್ಚರ್ಯದಿಂದ ಕೇಳಿದ ಆಹ್‌ಕ್ಯೂ.

"ನಿನಗೆ ಗೊತ್ತಾಗಲಿಲ್ಲವೇನು? ದಂಗೆ ಕೋರರು ಈಗಾಗಲೇ ಇಲ್ಲಿದ್ದಾರೆ"

"ಯಾರು?" ಇನ್ನಷ್ಟು ಆಶ್ಚರ್ಯದಿಂದ ಕೇಳಿದ.

"ಕೌಂಟ ಕ್ಯಾಂಡಿಡೇಟ್ ಮತ್ತು ಇಮಿಟೇಷನ್ ಫಾರಿನ್ ಡೆವಿಲ್"

ಆಹ್‌ಕ್ಯೂಗೆ ಇದು ಇನ್ನೂ ಆಶ್ಚರ್ಯದ ಸಂಗತಿಯಾಗಿತ್ತು. ಅಪ್ರತಿಭನಾಗದೆ ಇರುವುದು ಸಾಧ್ಯವೇ ಇರಲಿಲ್ಲ. ಕ್ರೈಸ್ತ ಸನ್ಯಾಸಿನಿ ಆಹ್‌ಕ್ಯೂ ತನ್ನ ಮೊದಲಿನ ಜರ್ಬನ್ನು ಕಳೆದುಕೊಂಡಿರುವುದನ್ನು ಗಮನಿಸಿ ಗೇಟು ಮುಚ್ಚಿಕೊಂಡಳು. ಆಹ್‌ಕ್ಯೂ ಮತ್ತೆ ತಳ್ಳಿದಾಗ ಬಾರದಿರುವಂತೆ ಚಿಲಕ ಹಾಕಿದಳು. ಆಹ್‌ಕ್ಯೂ ಗೇಟನ್ನು ತಳ್ಳಲು ಪ್ರಯತ್ನಿಸಿದಾಗ ಅದು ಒಂದಿಷ್ಟೂ ಕದಲದೆ ಹೋದಾಗ ಮತ್ತೊಮ್ಮೆ ಬಾಗಿಲು ಸದ್ದು ಮಾಡಿದ. ಆದರೆ ಯಾರೂ ಅದಕ್ಕೆ ಉತ್ತರಿಸಲಿಲ್ಲ.

ಇದೆಲ್ಲ ನಡೆದದ್ದು ಆ ದಿನ ಬೆಳಿಗ್ಗೆ. ಚಾವೋ ಮನೆಯ ಕೌಂಟಿ ಕ್ಯಾಂಡಿಡೇಟ್ ನಡೆದದ್ದೆಲ್ಲವನ್ನೂ ಕೇಳಿದ. ಕೇಳಿದ ಕ್ಷಣವೇ ಅವನಿಗೆ ಗೊತ್ತಾಯಿತು. ದಂಗೆಕೋರರು ಆ ರಾತ್ರಿಯೇ ಪಟ್ಟಣದೊಳಕ್ಕೆ ನುಗ್ಗಿದ್ದಾರೆ ಎಂದು. ತಕ್ಷಣವೇ ತನ್ನ ಜುಟ್ಟನ್ನು ಮೇಲಕ್ಕೆ ಎತ್ತಿ ಕಟ್ಟಿದ ಮತ್ತು ಮೊದಲಿಗೆ ಇಮಿಟೇಷನ್ ಫಾರೆನ್ ಡೆವಿಲ್‌ನನ್ನು ನೋಡಲು ಹೋದ. ಈ ಮುಂದೆ ಅವರಿಬ್ಬರ ನಡುವೆ ಮಾತುಕತೆ ಇರಲಿಲ್ಲವಾದರೂ ಈಗ ಎಲ್ಲರೂ ಒಟ್ಟಿಗೆ ಸೇರಿ ಸುಧಾರಣೆಗಳನ್ನು ತರಬೇಕಾದ ಸಮಯ ಬಂದಿದ್ದರಿಂದ, ತಾನೇ ಹೋಗಿ ಅವನೊಂದಿಗೆ ಸಂತೋಷವಾಗಿ ಮಾತನಾಡಿದ. ಮತ್ತು ಒಳ್ಳೆಯ ಗೆಳೆಯನೂ ಆದ. ಇಬ್ಬರೂ ಒಬ್ಬರ ಕಣ್ಣಲ್ಲಿ ಒಬ್ಬರು ಕಣ್ಣಿಟ್ಟು ದಂಗೆಕೋರರೂ, ಕ್ರಾಂತಿಕಾರರೂ ಆಗಲು ಪ್ರತಿಜ್ಞೆ ಮಾಡಿದರು.

ತುಂಬಾ ಹೊತ್ತು ಯೋಚನೆ ಮಾಡಿದ ಮೇಲೆ, ಕ್ವಯೆಟ್ ಸೆಲ್ಫ್ ಇಂಪ್ರೂವ್‌ಮೆಂಟ್ ಕಾನ್ವೆಂಟಿನಲ್ಲಿ ಚಕ್ರವರ್ತಿ ಚಿರಾಯುವಾಗಲಿ ಎಂದು ಬರೆಯಲಾಗಿತ್ತು. ಮೊದಲು ಅದನ್ನು ನಾಶಪಡಿಸಬೇಕು ಎಂದುಕೊಂಡದ್ದೆ ಕೂಡಲೇ ಕಾನ್ವೆಂಟಿನ ಬಳಿಗೆ ನಡೆದು ಕಾರ್ಯ ಪ್ರವೃತ್ತರಾದರು. ಆ ಕ್ರೈಸ್ತ ಸನ್ಯಾಸಿನಿಯೊಬ್ಬಳು ಅವರನ್ನು ತಡೆಯಬೇಕು, ಅವರಿಗೆ ಬುದ್ಧಿವಾದ ಹೇಳಬೇಕು ಎಂದುಕೊಂಡಳು. ಅವರು ಅವಳನ್ನು ಚಿಂಗ್ ಸರಕಾರವೆಂದು ಭಾವಿಸಿ, ತಲೆಗೆ ಬಲವಾದ ಪೆಟ್ಟು ನೀಡಿದರು. ಅಲ್ಲದೆ ಹತ್ತಾರು

ಬಾರಿ ಅವಳನ್ನು ಕೋಲಿನಿಂದ ಮತ್ತು ಗೆಣ್ಣುಗಳಿಂದ ಹೊಡೆದರು. ಆ ಸನ್ಯಾಸಿನಿ ಅವರಿಂದ ಬಿಡಿಸಿಕೊಂಡು, ಅವರು ಹೋದ ಮೇಲೆ ಸುತ್ತಲೂ ಪರೀಕ್ಷಿಸಿದಳು. ರಾಜಫಲಕವನ್ನು ತುಂಡು ತುಂಡು ಮಾಡಿ ಎಸೆಯಲಾಗಿತ್ತು ಮತ್ತು ಅಮೂಲ್ಯವಾದ ಸುವಾನ್ ತೆ ಸೆನ್ಸರ್, ಕರುಣೆಯ ದೇವತೆ ಕುವಾನ್‌ಯಿನ್ ಪ್ರತಿಮೆಯ ಮುಂದೆ ಇದ್ದುದನ್ನು ಅದೃಶ್ಯ ಮಾಡಿದ್ದರು.

ಆಹ್‌ಕ್ಯೂಗೆ ಇದೆಲ್ಲ ಆಮೇಲೆ ಗೊತ್ತಾಯಿತು. ಇದೆಲ್ಲ ನಡೆದಾಗ ತಾನು ದೀರ್ಘ ನಿದ್ದೆಯಲ್ಲಿ ಇದ್ದುದನ್ನು ನೆನೆದು ಶಪಿಸಿಕೊಂಡ. ಅವರು ಬಂದು ತನ್ನನ್ನು ಕರೆಯದಿದ್ದುದಕ್ಕಾಗಿ ಕೋಪ ಮಾಡಿಕೊಂಡ. ಕಡೆಗೆ, "ಬಹುಶಃ ನಾನೂ ದಂಗೆಕೋರನಾಗಿರುವುದು ಅವರಿಗೆ ಗೊತ್ತಿಲ್ಲ ಅಂತ ಕಾಣುತ್ತೆ" ಎಂದು ತನ್ನಲ್ಲಿಯೇ ಹೇಳಿಕೊಂಡು ಸಮಾಧಾನ ಪಟ್ಟ.

* * *

ಅಧ್ಯಾಯ - ೭

ಕ್ರಾಂತಿಯಿಂದ ಹೊರಗೆ

ದಿನದಿನಕ್ಕೆ ವೀಷುವಾಂಗ್ ಜನಕ್ಕೆ ಹೆಚ್ಚಿನ ಭರವಸೆ ಮತ್ತು ಧೈರ್ಯ ಮೂಡಿತು. ಅವರಿಗೆ ಬಂದ ಸುದ್ದಿಯಿಂದ, ಕ್ರಾಂತಿಕಾರರು ಪಟ್ಟಣ ತಲುಪಿದ್ದರೂ, ಅವರ ಬರವಿನಿಂದ ಅಂತಹ ವ್ಯತ್ಯಾಸಗಳೇನೂ ಆಗದಿದ್ದುದು ಅವರಿಗೆ ಗೊತ್ತಾಯಿತು. ಮ್ಯಾಜಿಸ್ಟ್ರೇಟ್ ಸ್ಥಾನದಲ್ಲಿ ಏನೂ ವ್ಯತ್ಯಾಸವಾಗಿರಲಿಲ್ಲ. ಆದರೆ ಹೆಸರು ಮಾತ್ರ ಬದಲಾಗಿತ್ತು. ಪ್ರಾವೆನ್‌ಷಿಯಲ್ ಕ್ಯಾಂಡಿಡೇಟ್‌ಗೂ ಯಾವುದೋ ಒಂದು ಪೋಸ್ಟ್ ಸಿಕ್ಕಿತ್ತು. ವೀಷುವಾಂಗ್ ಜನಕ್ಕೆ ಈ ಹೆಸರುಗಳೆಲ್ಲ ಅಷ್ಟಾಗಿ ನೆನಪಿರೋದಿಲ್ಲ. ಅವರಿಗೆ ಅವೆಲ್ಲ ಏನಿದ್ದರೂ ಒಂದು ಥರಾ ಸರಕಾರಿ ಅಧಿಕಾರ ಅಷ್ಟೇ! ಮಿಲಿಟರಿ ಅಧಿಕಾರಿ ಮೊದಲಿನ ಹಾಗೆ ಕ್ಯಾಪ್ಟನ್ ಎಂದೇ ಇದೆ. ಹೆದರಲು ಒಂದೇ ಒಂದು ಕಾರಣ ಅಂದ್ರೆ ಬಂದ ಕ್ರಾಂತಿಕಾರರು, ಎಲ್ಲರ ಜುಟ್ಟುಗಳನ್ನು ಕತ್ತರಿಸಿದ್ದು. "ಸೆವೆನ್ ಪೌಂಡರ್" ಅಂತ ಕರೀತಿದ್ದ ದೋಣಿ ಚಾಲಕ ಇವರ ಕೈಗೆ ಬಿದ್ದು, ನೋಡೋಕೆ ಆಗದ ಹಾಗೆ, ರೂಪ ಕೆಡಿಸಿದ್ದರು ಅಂತ ಹೇಳುತ್ತಿದ್ದರು. ಆದರೆ ವೀಷುವಾಂಗ್ ಜನಕ್ಕೆ ಇಂಥ ಭಯವೇನೂ ಇರಲಿಲ್ಲ. ಯಾಕೇಂದ್ರೆ ಅವರು ಪಟ್ಟಣಕ್ಕೇ ಹೋಗುತ್ತಿರಲಿಲ್ಲ. ಆಕಸ್ಮಾತ್ ಹೋಗಬೇಕೂಂತ ಯೋಚ್ನೆ ಮಾಡುತ್ತಿದ್ದವರೂ ಕೂಡ ಹೋಗೋದನ್ನ ತಪ್ಪಿಸಿದರು, ಸುಮ್ಮನೆ ಅಪಾಯಕ್ಕೆ ಸಿಗುವುದು ಬೇಡಾಂತ. ಆಹ್‌ಕ್ಯೂ ತನ್ನ ಹಳೆ ಸ್ನೇಹಿತರನ್ನು ನೋಡಿ ಬರಲು ಪಟ್ಟಣಕ್ಕೆ ಹೋಗಲು ಯೋಚಿಸುತ್ತಿದ್ದ. ಅವನಿಗೆ ಇದೆಲ್ಲ ಸುದ್ದಿ ತಿಳಿದ ಮೇಲೆ, ಆಸೆ ಬಿಟ್ಟು, ಹೋಗುವ ಆಲೋಚನೆಯಿಂದ ಕೈ ತೊಳೆದುಕೊಂಡ.

ವೀಷುವಾಂಗ್‌ನಲ್ಲಿ ಏನೂ ಸುಧಾರಣೆ ಆಗಲಿಲ್ಲ ಅಂತ ಹೇಳಿದರೆ ತಪ್ಪಾಗುತ್ತೆ. ಮುಂದಿನ ಕೆಲವು ದಿನಗಳಲ್ಲಿ, ತಮ್ಮ ಜುಟ್ಟನ್ನು (ಪಿಗ್‌ಟೈಲ್) ಸುರುಳಿ ಸುತ್ತಿ ತಲೆ ಮೇಲೆ ಇರಿಸಿಕೊಂಡವರ ಸಂಖ್ಯೆ ಹೆಚ್ಚಿತು. ಇದರಲ್ಲಿ ಕೌಂಟ್ ಕ್ಯಾಂಡಿಡೇಟೇ ಮೊದಲಿಗನಾಗಿದ್ದ. ಆಮೇಲೆ ಮುಂದುವರೆಸಿದವರು ಚಾವೋ ಬೆನ್ ಮತ್ತು ಚಾವೋ ಪೈಯನ್ ಅವರಾದ ಮೇಲೆ ಆಹ್‌ಕ್ಯೂ. ಬೇಸಿಗೆ ಕಾಲವಾಗಿದ್ದರೆ ಹೀಗೆ ಜುಟ್ಟನ್ನು ತಲೆ ಮೇಲೆ ಸುರುಳಿ ಸುತ್ತಿಕೊಳ್ಳುವುದೋ, ಇಲ್ಲವೆ ಗಂಟು ಹಾಕಿಕೊಳ್ಳುವುದೋ

ಮಾಡಿದರೆ. ಯಾರಿಗೂ ವಿಚಿತ್ರವಾಗಿ ಅನ್ನಿಸುತ್ತಿರಲಿಲ್ಲ. ಆದರೆ ಇದು ಶರದೃತು ಮುಗಿಯಲು ಬಂದಿದ್ದ ಸಮಯವಾಗಿತ್ತು. ಬೇಸಿಗೆಯ ಈ ಪದ್ಧತಿಯನ್ನು ಶರದೃತುವಿನಲ್ಲಿ ಅನುಸರಿಸಿದ್ದು ಒಂದು ಸಾಹಸಕ್ಕಿಂತ ಕಡಿಮೆಯೇನೂ ಆಗಿರಲಿಲ್ಲ. ವೀಷುವಾಂಗ್ ವಿಷಯಕ್ಕೆ ಬಂದಾಗ, ಸುಧಾರಣೆಯ ಜೊತೆ ವೀಷುವಾಂಗ್‌ನ ಸಂಬಂಧ ಇಲ್ಲ ಅಂತ ಹೇಳೋಕಾಗೊಲ್ಲ.

ಕತ್ತಿನ ಹಿಂಭಾಗದಲ್ಲಿ ಕೂದಲಿಲ್ಲದೆ ಬಂದ ಚಾವೋ ಷೂ ಚೆನ್‌ನನ್ನು ನೋಡಿ ಜನರು – "ಆಹ! ನೋಡಿ ಕ್ರಾಂತಿಕಾರಿ ಬಂದ!" ಎಂದು ಉದ್ಗರಿಸಿದರು.

ಇದನ್ನು ಕೇಳಿದ ಆಹ್‌ಕ್ಯೂ ತುಂಬಾ ಪ್ರಭಾವಿತನಾದ. ವಿಜೇತ ಕೌಂಟಿ ಅಭ್ಯರ್ಥಿ ಹೀಗೆ ತನ್ನ ಜುಟ್ಟನ್ನು ಸುರುಳಿ ಸುತ್ತಿ ತಲೆ ಮೇಲೆ ಇರಿಸಿಕೊಂಡಿದ್ದಾನೆ ಎಂಬುದನ್ನೇನೋ ಕೇಳಿದ್ದ. ಆದರೆ ಅದರ ಹಾಗೆ ಮಾಡಬೇಕೂಂತ ಅವನಿಗೆ ಎಂದೂ ಅನಿಸಿರಲಿಲ್ಲ. ಯಾವಾಗ ಚಾವೋ ಷೂ ಚೆನ್ ಕೂಡಾ ಕೌಂಟಿ ಅಭ್ಯರ್ಥಿ ತರಹ ಮಾಡಿದ್ದನ್ನು ನೋಡಿ ತಾನೂ ಹಾಗೇಕೆ ಮಾಡಬಾರದು ಎಂದು ಯೋಚಿಸಿದ. ಅವನನ್ನೇ ಅನುಕರಿಸಲು ಮನಸ್ಸು ಮಾಡಿದ. ಬಿದಿರಿನ ಕಡ್ಡಿಗಳನ್ನು ಬಳಸಿ ತನ್ನ ಜುಟ್ಟನ್ನು ಸುರುಳಿ ಮಾಡಿ ತಲೆ ಮೇಲೆ ಇರಿಸಿಕೊಂಡ. ಮೊದಲು ಸಂಕೋಚವಾದರೂ ಆಮೇಲೆ ಹೊರಗೆ ಹೊರಟ.

ರಸ್ತೇಲಿ ನಡೆಯುತ್ತಿರುವಾಗ ಜನ ಅವನನ್ನು ಗಮನಿಸಿದರು. ಆದರೆ ಏನೂ ಹೇಳಲಿಲ್ಲ. ಆಹ್‌ಕ್ಯೂಗೆ ಸಂತೋಷವಾಗಲಿಲ್ಲ. ಆಮೇಲೆ ಅವನಿಗೆ ಕೋಪ ಬಂತು. ಇತ್ತೀಚೆಗೆ ಅವನು ಬಹಳ ಬೇಗ ಉದ್ವಿಗ್ನನಾಗುತ್ತಿದ್ದ. ಹಾಗೆ ನೋಡಿದರೆ ಅವನ ಬದುಕು ಕ್ರಾಂತಿಗೆ ಮೊದಲು ಹೇಗಿತ್ತೋ ಹಾಗೇ ಇತ್ತು. ಅದಕ್ಕಿಂತ ಕಷ್ಟ ಏನೂ ಆಗಿರಲಿಲ್ಲ. ಜನರೂ ಅವನನ್ನು ಮೃದುವಾಗೇ ಮಾತಾಡಿಸಿದರು. ಅಂಗಡಿಯವರು ನಗದು ರೂಪದಲ್ಲಿ ಕೊಡೂಂತ ಕೂಡ ಕೇಳುತ್ತಿರಲಿಲ್ಲ. ಆದರೂ ಆಹ್‌ಕ್ಯೂಗೆ ಏನೋ ಅಸಮಾಧಾನ, ಅಸಂತೃಪ್ತಿ. ಕ್ರಾಂತಿ ಆಗಿದೆ ಅಂದ ಮೇಲೆ ಇನ್ನಷ್ಟು ಬದಲಾವಣೆ ಆಗಬೇಕಿತ್ತು. ಯುಂಗ್ ಡಿ ಯನ್ನು ನೋಡಿದಾಗ ಅವನ ಕೋಪ ಕುದಿಯತೊಡಗಿತು.

ಯುಂಗ್‌ಡಿ ಕೂಡ ಜುಟ್ಟನ್ನ ಸುರುಳಿ ಸುತ್ತೋಕೆ ಬಿದಿರಿನ ಚಾಪ್‌ಸ್ಟಿಕ್‌ಗಳನ್ನೇ ಬಳಸಿದ್ದ. ತಾನು ಮಾಡಿದ ಹಾಗೆ ಮಾಡೋ ಧೈರ್ಯ ಅವನಿಗೆ ಬರುತ್ತೆ ಅಂತ [illegible] ಅನ್ನಿಸಿರಲಿಲ್ಲ. ಯುಂಗ್‌ಡಿ ಎಷ್ಟರವನು? ಈಗ ಅವನು ಸಾಕಷ್ಟು ಮೆದುವಾಗಿ ಬಿಟ್ಟಿದ್ದ. [illegible] ಕೈ ಹಾಕಿ ಚಾಪ್‌ಸ್ಟಿಕ್‌ಗಳನ್ನು ಕಿತ್ತು, ಕೂದಲು ಮತ್ತೆ ಕೆಳಗೆ [illegible] ಮಾಡುತ್ತಿದ್ದ. ಆದರೆ ಈ ಸಲ ಹಾಗೆ ಮಾಡದೆ [illegible] "[illegible]" ಎಂದು [illegible] ಬೀರಿದ.

ಇತ್ತೀಚೆಗೆ ಪಟ್ಟಣಕ್ಕೆ ಹೋದವನೆಂದರೆ ವಿದೇಶಿ ಅನುಕರಣೆ ಪಿಶಾಚಿ (Imitation foreign devil) ವಿಜೇತ ಕೌಂಟಿ ಅಭ್ಯರ್ಥಿ, ತನ್ನ ಮನೇಲಿ ಇರಿಸಿಕೊಂಡಿದ್ದ ಪೆಟ್ಟಿಗೆಗಳ ನೆವದಲ್ಲಿ ವಿಜೇತ ಪ್ರಾವೆನ್‌ಷಿಯಲ್ ಅಭ್ಯರ್ಥಿಯನ್ನು ಹೋಗಿ ಮಾತಾಡಿಸಬೇಕು ಅಂತ ಅಂದುಕೊಂಡ. ಆದರೆ ಅವನು ತನ್ನ ಜುಟ್ಟನ್ನು ಪೂರ್ತಿಯಾಗಿ ಕತ್ತರಿಸಿ ಬಿಟ್ಟಿರುವ ಸಾಧ್ಯತೆಯ ಅಪಾಯ ನೆನೆದು, ಅವನಲ್ಲಿಗೆ ಹೋಗುವುದನ್ನು ಸದ್ಯಕ್ಕೆ ನಿಲ್ಲಿಸಿದ. ಔಪಚಾರಿಕವಾದ ಪತ್ರವೊಂದನ್ನು ಬರೆದು ವಿದೇಶಿ ಅನುಕರಣೆ ಪಿಶಾಚಿ ಕೈಯಲ್ಲಿ ಪಟ್ಟಣಕ್ಕೆ ತೆಗೆದುಕೊಂಡು ಹೋಗಲು ಕೊಟ್ಟ. ಅಲ್ಲಿ ತನ್ನನ್ನು ಲಿಬರ್ಟಿಪಾರ್ಟಿ ಜೊತೆ ಪರಿಚಯಿಸಿಕೊಳ್ಳ ಹೇಳಿದ. ಅವನು ವಾಪಸ್ ಬಂದಾಗ, ಕೌಂಟಿ ಅಭ್ಯರ್ಥಿಯನ್ನು ನಾಲ್ಕು ಡಾಲರ್ ನೀಡಲು ಕೇಳಿದ. ಅದಾದ ನಂತರ ಇವನು ತನ್ನೆದೆ ಮೇಲೆ ಬೆಳ್ಳಿಯ ಬ್ಯಾಡ್ಜೊಂದನ್ನು ತಗುಲಿಸಿಕೊಂಡ. ಜನರಿಗೆ ಒಂದು ಥರಾ ಚಿಂತೆಯಾಯಿತು. ಅವರಿಗೆ "ಪೆರ್ಸಿಮ್ಮೋನ್ ಆಯಿಲ್ ಪಾರ್ಟಿ" ಅನ್ನೋದು ಗೊತ್ತಾಗಿ ಹೋಯಿತು. ಇದರಿಂದಾಗಿ ಚಾವೋನ ಗೌರವ ಇನ್ನಷ್ಟು ಹೆಚ್ಚಾಯಿತು. ಮೊಟ್ಟ ಮೊದಲ ಸಲ ಅವನ ಮಗ ಸರಕಾರಿ ಪರೀಕ್ಷೆ ಪಾಸು ಮಾಡಿ ಬಂದಾಗ ತೋರಿದ ಗೌರವಕ್ಕಿಂತ ಹೆಚ್ಚಿನದಾಗಿತ್ತು. ಪರಿಣಾಮವಾಗಿ ಎಲ್ಲರನ್ನೂ ಕೀಳಾಗಿ ಕಾಣತೊಡಗಿದ. ಆಹ್‌ಕ್ಯೂ ಅಂತೂ ಅವನ ದೃಷ್ಟೀಲಿ ಲೆಕ್ಕಕ್ಕೇ ಇರಲಿಲ್ಲ.

ಒಂದೇ ಸಮನೆ ತನ್ನನ್ನು ಹೀಗೆ ನಿರ್ಲಕ್ಷಿಸುತ್ತ ಇರುವುದನ್ನು ನೋಡಿ ಬೇಸರ ಪಟ್ಟ. ಬೆಳ್ಳಿ ಬ್ಯಾಡ್ಜನ ವಿಷಯ ತಿಳಿದಾಗ, ತನ್ನನ್ನು ಹೀಗೆ ತಾತ್ಸಾರ ಮಾಡುತ್ತಿರುವುದು ಯಾಕೇಂತ ಅರ್ಥವಾಯಿತು. ಸುಮ್ಮನೆ ಹೀಗೆ ಹೋಗಿ ಬರುವುದರಿಂದ ಜುಟ್ಟನ್ನು ಮೇಲಕ್ಕೆತ್ತಿ ಕಟ್ಟುವುದರಿಂದ ಯಾರು ಕ್ರಾಂತಿಕಾರ ಆಗೊಲ್ಲ. ನಿಜವಾಗಿಯೂ ಕ್ರಾಂತಿ ಪಾರ್ಟಿ ಜೊತೆ ಸಂಬಂಧ ಇಟ್ಟುಕೊಂಡರೇನೇ ಕ್ರಾಂತಿಕಾರ ಅಂತ ಕರೆಸಿಕೊಳ್ಳೋದು. ಅವನ ಜೀವಮಾನದಲ್ಲಿ ಅವನಿಗೆ ಗೊತ್ತಿದ್ದದ್ದು ಇಬ್ಬರೇ ಇಬ್ಬರು ಕ್ರಾಂತಿವಾದಿಗಳು. ಅದರಲ್ಲಿ ಒಬ್ಬ ಪಟ್ಟಣದಲ್ಲಿ ಎಲ್ಲೋ ತಲೆ ತಪ್ಪಿಸಿಕೊಂಡಿದ್ದ. ಉಳಿದ ಮತ್ತೊಬ್ಬ ವಿದೇಶಿ ಅನುಕರಣೆ ಪಿಶಾಚಿ. ತಕ್ಷಣ ಹೋಗಿ ಅವನನ್ನು ಮಾತಾಡಿಸಿ ಬರಬೇಕು. ಇಲ್ಲವಾದರೆ ಅವನಿಂದ ಏನೂ ಗೊತ್ತಾಗುವುದೇ ಇಲ್ಲ.

ಚಿಯೆನ್ ಮನೆಯ ಮುಂಬಾಗಿಲು ತೆರೆದೇ ಇತ್ತು. ಆಹ್‌ಕ್ಯೂ ಹೆದರುತ್ತಲೇ ಒಳಗೆ ನುಸುಳಿದ. ಒಳಗೆ ಹೋದದ್ದೇ ಅಪ್ರತಿಭನಾದ. ಅವನಿಗೆ ಎದುರಾಗಿಯೇ ವಿದೇಶಿ ಅನುಕರಣೆ ಪಿಶಾಚಿ ಅಂಗಳದ ಮಧ್ಯದಲ್ಲಿ ನಿಂತಿದ್ದ. ಪೂರ್ತಿ ಕಪ್ಪು ಬಣ್ಣದ ವಿದೇಶಿ ಉಡುಪಿನಲ್ಲಿದ್ದ. ಜೊತೆಗೆ ಬೆಳ್ಳಿಯ ಬಿಲ್ಲೆಯೊಂದನ್ನು (ಪೀಚ್ ಆಕಾರದ) ಧರಿಸಿದ್ದ. ಅವನ ಕೈಯಲ್ಲಿ ಆಹ್‌ಕ್ಯೂ ರುಚಿ ಕಂಡಿದ್ದ. ಪರಿಚಿತವಾದ ಕೋಲು ಒಂದನ್ನು ಹಿಡಿದಿದ್ದ. ಸ್ವಲ್ಪ ಬೆಳೆದಿದ್ದ ಕೂದಲು ಅವನ ಭುಜಗಳನ್ನು ಸ್ಪರ್ಶಿಸುತ್ತಿದ್ದವು. ಸಂತ ಲಿಯುನ ಕೂದಲಿನ ಹಾಗೆ ಅಸ್ತವ್ಯಸ್ತವಾಗಿತ್ತು. ಅವನ ಮುಂದೆ ಚಾವೋ

ಪೈಯೆನ್ ಮತ್ತು ಇನ್ನೂ ಮೂವರು ನೆಟ್ಟಗೆ ನಿಂತಿದ್ದರು. ಅವರೆಲ್ಲರೂ ವಿದೇಶಿ ಅನುಕರಣೆ ಪಿಶಾಚಿ ಹೇಳುತ್ತಿದ್ದುದನ್ನು ತುಂಬ ಗಂಭೀರವಾಗಿ ಕೇಳಿಸಿಕೊಳ್ಳುತ್ತಿದ್ದರು.

ಆಹ್‌ಕ್ಯೂ ಕಳ್ಳ ಹೆಜ್ಜೆಗಳಲ್ಲಿ ಒಳಗೆ ಹೋಗಿ ಚಾವೋ ಪೈಯೆನ್ ಹಿಂದೆ ಹೋಗಿ ನಿಂತುಕೊಂಡು ಅವನಿಗೆ ಅಭಿನಂದಿಸಬೇಕೆಂದುಕೊಂಡ. ಆದರೆ ಏನು ಹೇಳಬೇಕೆಂಬುದೇ ತಿಳಿಯಲಿಲ್ಲ. ವಿದೇಶಿ ಅನುಕರಣೆ ಪಿಶಾಚಿ ಎಂತಲೋ ವಿದೇಶಿ ಎಂತಲೋ ಕ್ರಾಂತಿಕಾರ ಎಂತಲೋ ಕರೆಯಬೇಕೆಂದುಕೊಂಡ. ಆದರೆ ಯಾವುದೂ ಅವನಿಗೆ ಸೂಕ್ತವೆನಿಸಲಿಲ್ಲ. ಇದ್ದುದರಲ್ಲಿ ಮಿಸ್ಟರ್ ವಿದೇಶಿ ಅನ್ನೋದೇ ಸರಿಯಾಗಿರುತ್ತೆ ಎಂದು ಭಾವಿಸಿದ.

ಆದರೆ ಮಿಸ್ಟರ್ ವಿದೇಶಿ ಅವನನ್ನು ಗಮನಿಸಿರಲಿಲ್ಲ. ಅವನು ಬಹಳ ಭಾವುಕನಾಗಿ ಕಣ್ಣಿನ ಮೂಲಕ ಅಭಿನಯಿಸಿ ಏನನ್ನೋ ಹೇಳುತ್ತಿದ್ದ.

"ನಾನು ಅಲ್ಲಿ ಎಷ್ಟು ಮುಖ್ಯನಾಗಿದ್ದೆ ಅಂದರೆ". ನಾನು ಹೇಳುತ್ತಾ ಹೋದ– "ಓಲಿಯು ಹೂಂಗ್, ಅದರ ಜೊತೆ ಹೇಗೋ ಹೊಂದಿಕೊಳ್ಳಲೇ ಬೇಕು. ಆದರೆ ಅವನು ಯಾವಾಗಲೂ ಇಲ್ಲ ಎಂದೇ ಹೇಳುತ್ತಿದ್ದ. ಅದೊಂದು ವಿದೇಶಿ ಶಬ್ದ. ನಿಮಗೆ ಅರ್ಥವಾಗೋದಿಲ್ಲ ಬಿಡಿ. ಹಾಗಿಲ್ಲದಿದ್ದರೆ ನಮಗೆ ಯಾವಾಗಲೋ ಜಯ ಸಿಕ್ಕಿರೋದು. ಅವನು ಎಷ್ಟು ಜಾಗರೂಕನಾಗಿರುತ್ತಾನೆ ಅನ್ನೋದಕ್ಕೆ ಇದೊಂದು ನಿದರ್ಶನ. ಹುಪೆಹ್‌ಗೆ ಹೋಗೋಣಾಂತ ಪದೇ ಪದೇ ನನ್ನನ್ನು ಕೇಳಿದ. ನಾನು ಒಪ್ಪಲಿಲ್ಲ. ಆ ಸಣ್ಣ ಜಾಗದಲ್ಲಿ ಕೆಲಸ ಮಾಡೋದು ಯಾರಿಗೆ ಬೇಕಾಗಿದೆ?"

ಆಹ್‌ಕ್ಯೂ ಅವನು ಸುಮ್ಮನಾಗಲು ಕಾದ. ನಂತರ ಧೈರ್ಯವನ್ನೆಲ್ಲ ತಂದುಕೊಂಡು ಮಾತಾಡಬೇಕೆಂದುಕೊಂಡ. ಅದೇನು ಕಾರಣವೋ ಇಷ್ಟೆಲ್ಲ ಆದರೂ ಮಿಸ್ಟರ್ ವಿದೇಶಿ ಅಂತ ಕರೆಯಲೇ ಇಲ್ಲ.

ಕೇಳುತ್ತಿದ್ದ ನಾಲ್ಕು ಜನ ಬೆಚ್ಚಿಬಿದ್ದು, ಆಹ್‌ಕ್ಯೂನನ್ನು ದಿಟ್ಟಿಸಿದರು. ಮಿಸ್ಟರ್ ವಿದೇಶಿ ಕೂಡಾ ಮೊದಲ ಬಾರಿಗೆ ಅವನನ್ನು ಗಮನಿಸಿದ.

"ಏನು?"

"ನಾನು......."

"ಸ್ಪಷ್ಟವಾಗಿ ಹೇಳು......"

"ನನಗೂ ಸೇರಬೇಕಂತ ಇದೆ......"

"ನಡೆಯೋ ಆಚೆ" ಮಿಸ್ಟರ್ ವಿದೇಶಿ ಬೆತ್ತ ತಗೊಂಡು ಹೊಡೆಯಲು ಪ್ರಯತ್ನಿಸುತ್ತಾ ಹೇಳಿದ.

ನಂತರ ಚಾವೋ ಪೈ ಯೆನ್ ಮತ್ತು ಇತರರು, "ಮಿಸ್ಟರ್ ಚಿಯೆನ್ ನಿನ್ನನ್ನು ಹೋಗೂಂತ ಹೇಳ್ತಿದ್ದಾನೆ. ಕೇಳಿಸುವುದಿಲ್ಲವೇನು ನಿನಗೆ?"

ಕೈಗಳನ್ನು ಮೇಲೆತ್ತಿ ತಲೆಯನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸುತ್ತ, ತಾನು ಏನು ಮಾಡುತ್ತಿದ್ದೀನಿ ಎನ್ನುವ ಪ್ರಜ್ಞೆಯೂ ಇಲ್ಲದೆ, ಗೇಟಿನಿಂದ ಹೊರಗೆ ಹೊರಟ. ಈ ಬಾರಿ ಮಿಸ್ಟರ್ ವಿದೇಶಿ ಅವನನ್ನು ಅಟ್ಟಿಸಿಕೊಂಡು ಹೋಗಲಿಲ್ಲ. ಒಂದು ಅರವತ್ತು ಹೆಜ್ಜೆಯಷ್ಟು ಓಡಿದ ಮೇಲೆ ನಿಧಾನಿಸಿದ. ಅವನಿಗೆ ಬಹಳ ಕೆಡುಕೆನಿಸಿತು. ಮಿಸ್ಟರ್ ವಿದೇಶಿ ತನ್ನನ್ನು ಕ್ರಾಂತಿ ಒಳಗೆ ಸೇರಿಸಿಕೊಳ್ಳಲಿಲ್ಲ ಅಂದರೆ, ಅವನಿಗೆ ಬೇರೆ ದಾರೀನೇ ಇರಲಿಲ್ಲ. ಇನ್ನು ಮುಂದೆ ಎಂದೂ ಬಿಳಿ ಹೆಲ್ಮೆಟ್ ಕವಚಗಳಲ್ಲಿ ಜನರು ತನ್ನೊಡನೆ ಕಾಣಿಸುವುದೇ ಇಲ್ಲ. ಯಾರೂ ಬಂದು ಕರೆಯೋದೂ ಇಲ್ಲ. ಅವನ ಆಸೆ, ಆಕಾಂಕ್ಷೆ, ಭರವಸೆ, ನಿರೀಕ್ಷೆ ಎಲ್ಲವೂ ಒಂದೇ ಸಲಕ್ಕೆ ಮುಗಿದು ಹೋಯಿತು. ಜನ ಈ ಸುದ್ದಿ ಹರಡಿ ಯಂಗ್‌ಡಿ ವಿಸ್ಕರ್ಸ್‌ವ್ಯಾಂಗ್ ಅಂಥವರ ಎದುರು ನಗುವ ಹಾಗೆ ಮಾಡಿದರೆ ಅದೇನೂ ದೊಡ್ಡ ವಿಷಯವಲ್ಲ.

ಇವತ್ತು ಆದಂತೆ ಎಂದೂ ಹಿಂದೆ ಇಂಥ ನಿರಾಶೆ ಆಗಿರಲಿಲ್ಲ. ತನ್ನ ಜುಟ್ಟಿನ ಬಗ್ಗೆ ಜನ ಈಗ ಏನೇ ಅಂದರೂ, ಅವನಿಗೆ ಈಗ ಬೇಸರವಾಗುತ್ತಿರಲಿಲ್ಲ. ಸೇಡು ತೀರಿಸಿಕೊಳ್ಳುವ ಸಂಕೇತವಾಗಿ ಆ ಕೂಡಲೇ ಜುಟ್ಟನ್ನು ಬಿಚ್ಚಿ ಕೆಳಗೆ ಹರಡಲು, ಈಗ ಅವನು ಸಾಧುವಾಗಿ ಬಿಟ್ಟಿದ್ದ. ಸಂಜೆ ತನಕ ಅಡ್ಡಾಡಿದ. ಹೋಗಿ ಒಂದೆರಡು ಬಟ್ಟಲು ಹೆಂಡವನ್ನು ಸಾಲದ ಮೇಲೆ ಕುಡಿದು ಬಂದಾಗ ಸ್ವಲ್ಪ ಹಾಯೆನಿಸಿತು. ಆದರೆ ಅವನ ತಲೆ ತುಂಬ ಬರೀ ಹೆಲ್ಮೆಟ್‌ಗಳು, ಕವಚಗಳು ಮತ್ತೊಮ್ಮೆ ಕಾಣಿಸಿಕೊಂಡವು.

ಒಂದು ದಿನ ರಾತ್ರಿ ತುಂಬಾ ಹೊತ್ತು ಸುತ್ತಾಡಿದ. ಹೆಂಡದಂಗಡಿ ಮುಚ್ಚುವಾಗಷ್ಟೇ ತನ್ನ ಗುಡಿಗೆ ಮರಳಿದ.

"ಧಡ್!....."

ಇದ್ದಕ್ಕಿದ್ದಂತೆ, ಎಂದೂ ಕೇಳಿರದ ದೊಡ್ಡ ಸದ್ದಾಯಿತು. ಅದು ಪಟಾಕಿ ಸದ್ದಾಗಿರಲಿಲ್ಲ. ಆಹ್‌ಕ್ಯೂಗೆ ಮಾಮೂಲಾಗಿ ಈ ಥರದ ಎಕ್ಸೈಟ್‌ಮೆಂಟ್ ಅಂದರೆ ಬಹಳ ಇಷ್ಟ. ಯಾವಾಗಲೂ ಇನ್ನೊಬ್ಬರ ವಿಷಯದಲ್ಲಿ ಮೂಗು ತೂರಿಸುವುದು ಅಂದರೆ ಬಹಳ ಖುಷಿ. ಈಗ ಸದ್ದು ಏನು, ಎಲ್ಲಿಂದ ಅಂತ ತಿಳಿಯಲು ಕತ್ತಲಲ್ಲಿ ಹೊರಟ. ಅವನಿಗೆ ಯಾರದೋ ಹೆಜ್ಜೆ ಸಪ್ಪಳ ಕೇಳಿಸಿತು. ಗಮನವಿಟ್ಟು ಕೇಳತೊಡಗಿದಾಗ ಥಟ್ಟನೆ ಒಬ್ಬ ಮನುಷ್ಯ ಅವನಿಗೆ ಎದುರಾಗಿ ಬಂದು ನಿಂತ. ಅವನನ್ನು ನೋಡಿದ ಕೂಡಲೆ ತಿರುಗಿ ಅವನನ್ನೇ ಆದಷ್ಟು ವೇಗವಾಗಿ ಅನುಸರಿಸಿದ. ಆ ಮನುಷ್ಯ ಹಿಂತಿರುಗಿದಾಗ, ಆಹ್‌ಕ್ಯೂ ಕೂಡಾ ತಿರುಗಿದ. ಆ ಮೂಲೆಯಲ್ಲಿ ತಿರುಗಿ ಆ

ಮನುಷ್ಯ ನಿಂತ. ಆಹ್‌ಕ್ಯೂ ಕೂಡ ನಿಂತ. ನೋಡಿದ. ಹಿಂದೆ ಯಾರೂ ಇರಲಿಲ್ಲ. ಆ ಮನುಷ್ಯ ಬೇರೆ ಯಾರೂ ಅಲ್ಲ. ಯಂಗ್‌ಡಿ ಆಗಿದ್ದ.

"ಏನು ಸಮಾಚಾರ?" – ಆಹ್‌ಕ್ಯೂ ಸಿಡುಕಿನಿಂದ ಪ್ರಶ್ನಿಸಿದ.

"ಚಾವೋ.......ಚಾವೋ ಮನೆಯಲ್ಲಿ ಕಳ್ಳತನವಾಗಿದೆ" ಏದುಸಿರಿನೊಂದಿಗೆ ಯಂಗ್‌ಡಿ ಹೇಳಿದ.

ಆಹ್‌ಕ್ಯೂನ ಎದೆ ಬಡಿದುಕೊಳ್ಳತೊಡಗಿತು. ಇದನ್ನು ಹೇಳಿ ಯಂಗ್‌ಡಿ ಅಲ್ಲಿಂದ ಹೊರಟು ಹೋದ. ಆಹ್‌ಕ್ಯೂ ಓಡತೊಡಗಿದ. ಒಂದೆರಡು ಬಾರಿ ನಿಂತುಕೊಂಡ. ಅವನು ಈಗಾಗಲೇ ಕಳ್ಳತನದಲ್ಲಿ ಇದ್ದವನಾಗಿದ್ದರಿಂದ ಸ್ವಲ್ಪ ಧೈರ್ಯವಾಗಿ ಇದ್ದ. ಬೀದಿ ಕೊನೆಯಿಂದ ಹೊರಟು ಗಮನವಿಟ್ಟು ಕೇಳಿದ. ಯಾರೋ ಕೂಗುತ್ತಿದ್ದರು. ಗಮನವಿಟ್ಟು ನೋಡಿದ. ತುಂಬಾ ಜನ ಬಿಳಿ ಹೆಲ್ಮೆಟ್‌ಗಳಲ್ಲಿ, ಕವಚಗಳಲ್ಲಿ ಇದ್ದು ದೊಡ್ಡ ದೊಡ್ಡ ಪೆಟ್ಟಿಗೆ, ಫರ್ನಿಚರ್, ಕೌಂಟ ಕ್ಯಾಂಡಿಡೇಟ್‌ನ ಹೆಂಡತಿಯ ನಿಗ್ರೋ ಹಾಸಿಗೆ ಎಲ್ಲವನ್ನೂ ಹೊತ್ತುಕೊಂಡು ಹೋಗುವುದನ್ನು ನೋಡುತ್ತೇನೆಂದು ಯೋಚಿಸಿದ. ಆದರೆ ಯಾರೂ ಸ್ಪಷ್ಟವಾಗಿ ಕಾಣಿಸಲಿಲ್ಲ. ಹತ್ತಿರ ಹೋಗಿ ನೋಡಬೇಕೆನಿಸಿತು. ಆದರೆ ಅಲ್ಲಿಂದ ಕದಲುವುದು ಸಾಧ್ಯವಾಗಲಿಲ್ಲ.

ಆ ದಿನ ರಾತ್ರಿ ಚಂದ್ರ ಇರಲಿಲ್ಲ. ದಟ್ಟ ಕತ್ತಲಲ್ಲಿ ವೀಚುವಾಂಗ್ ಮೌನವಾಗಿತ್ತು. ಓಂದಿನ ಚಕ್ರವರ್ತಿ ಪೂಸಿಯ ಕಾಲದಲ್ಲಿ ಶಾಂತವಾಗಿದ್ದಂತೆ ಇತ್ತು. ಆಸಕ್ತಿ ಕಳೆದುಕೊಳ್ಳುವವರೆಗೂ ನಿಂತಿದ್ದ. ಎಲ್ಲವೂ ಎಂದಿನಂತೆ ಸ್ತಬ್ಧವಾಗಿತ್ತು. ದೂರದಲ್ಲಿ ಜನ ಆ ಕಡೆ ಈ ಕಡೆ ಓಡಾಡುತ್ತ ಇದ್ದರು. ಪೆಟ್ಟಿಗೆಗಳನ್ನು ಕುರ್ಚಿ ಮೇಜುಗಳನ್ನು ನಿಗ್ರೋ ಹಾಸಿಗೆಯನ್ನು ಹೊತ್ತು ಹೋಗುತ್ತಿದ್ದರು. ನಂಬುವುದಕ್ಕೇ ಸಾಧ್ಯವಿಲ್ಲದ ಹಾಗೆ ಹೊತ್ತು ಹೋಗುತ್ತಿದ್ದರು. ನಂಬುವುದಕ್ಕೇ ಸಾಧ್ಯವಿಲ್ಲದ ಹಾಗೆ ಹೊತ್ತು ಹೋದರು. ಪಕ್ಕದಕ್ಕೆ ಹೋಗಬಾರದೆಂದು ತೀರ್ಮಾನಿಸಿದ್ದ. ನಂತರ ಗುಡಿಯ ಕಡೆಗೆ ನಡೆದ. ಅವನ ರಕ್ಷಕದೇವರ ಗುಡಿಯಲ್ಲಿ ಇನ್ನೂ ದಟ್ಟವಾದ ಕತ್ತಲಿತ್ತು. ದೊಡ್ಡ ಬಾಗಿಲು ಮುಚ್ಚಿದ ಮೇಲೆ ತನ್ನ ಕೋಣೆಯ ಕಡೆಗೆ ನಡೆದ. ಸ್ವಲ್ಪ ಹೊತ್ತು ಮೈಚಾಚಿ ಮಲಗಿದ ಮೇಲೆ ಮನಸ್ಸಿಗೆ ಹಾಯೆನಿಸಿತು. ಆಗ ಇವೆಲ್ಲ ತನ್ನ ಮೇಲೆ ಹೇಗೆ ಪರಿಣಾಮ ಬೀರಿತು ಎಂದು ಯೋಚಿಸಲು ಸಾಧ್ಯವಾಯಿತು. ಬಿಳಿ ಹೆಲ್ಮೆಟ್. ಬಿಳಿ ಕವಚದ ಮಂದಿ ಬಂದಿದ್ದು [illegible] ಆದರೂ ತನ್ನನ್ನು ಮಾತ್ರ ಕರೆದಿರಲಿಲ್ಲ. [illegible] ಸಾಮಾನೆಲ್ಲ ಹೊತ್ತು ಹೋಗಿದ್ದರು. ಆದರೆ ಅವರಲ್ಲಿ ತನ್ನ ಪಾಲಿಲ್ಲ. [illegible] ತನ್ನನ್ನು [illegible] ಹೊರಗೆ ಹಾಕಿದ್ದ. [illegible] ಇರುತ್ತಿರಲಿಲ್ಲವೇ?

ಯೋಚಿಸಿದಷ್ಟೂ ಆಹ್‌ಕ್ಯೂಗೆ ಸಿಟ್ಟೇರುತ್ತಿತ್ತು. ಭುಗಿಲೇಳುವ ಮಟ್ಟಿಗೆ ಸಿಟ್ಟು ಹೆಚ್ಚಾಯಿತು. "ಹೂಂ! ನನಗೆ ಕ್ರಾಂತಿ ಇಲ್ಲ. ಎಲ್ಲ ನಿನಗೇ! ಹೌದಲ್ಲ" ವಿಕಟನಾಗಿ ಉದ್ಗರಿಸಿ ಹೇಳಿಕೊಂಡ. "ಹಾಳಾಗಿ ಹೋಗು ಪಿಶಾಚಿ!......ಇರಲಿ......ಇರಲಿ......ನೀನೇ ದಂಗೆಕೋರ! ದಂಗೆಕೋರರ ತಲೆ ಕತ್ತರಿಸಿ ಶಿಕ್ಷೆ ಕೊಡುತ್ತಾರೆ. ನಾನೇ ಹೋಗಿ ಸುದ್ದಿ ತಿಳಿಸ್ತೀನಿ. ಬಂದು ನಿನ್ನನ್ನು ಪಟ್ಟಣಕ್ಕೆ ಎಳೆದುಕೊಂಡು ಹೋಗುತ್ತಾರೆ. ನಿನ್ನ ತಲೆ ಕತ್ತರಿಸುತ್ತಾರೆ. ನೀನು ಮತ್ತು ನಿನ್ನ ಕುಟುಂಬವೆಲ್ಲಾ......ಕೊಲ್ಲಿರಿ! ಕೊಲ್ಲಿರಿ!"

❖ ❖ ❖

ಅಧ್ಯಾಯ – ೮

ಮಹಾಮುಕ್ತಾಯ

ಚಾವೋ ಮನೆಯಲ್ಲಿ ಕಳ್ಳತನ ಆದದ್ದು, ಎಲ್ಲರಿಗೂ ಸಂತೋಷವಾಗಿದ್ದರೂ, ಏನೋ ಒಂದು ಥರ ಭಯ ಇತ್ತು. ಆಹ್‌ಕ್ಯೂ ಕೂಡ ಇದಕ್ಕೆ ಹೊರತಾಗಿರಲಿಲ್ಲ. ನಾಲ್ಕು ದಿವಸ ಆದ ಮೇಲೆ ಒಂದು ದಿನ ಮಧ್ಯರಾತ್ರಿ ಆಹ್‌ಕ್ಯೂನನ್ನು ಇದ್ದಕ್ಕಿದ್ದಂತೆ ಪಟ್ಟಣದ ಕಡೆ ಎಳೆದುಕೊಂಡು ಹೋದರು. ಸೈನಿಕರ ಒಂದು ತುಕಡಿ, ಮಿಲಿಟರಿ ತುಕಡಿ, ಒಂದಷ್ಟು ಜನ ಪೋಲೀಸರು, ಗುಪ್ತದಳ ಸೈನಿಕರು ಮೆಲ್ಲಗೆ ಯಾರಿಗೂ ತಿಳಿಯದಂತೆ ವೀಷುವಾಂಗನ ಒಳಗೆ ಪ್ರವೇಶಿಸಿದರು. ನಂತರ ಮೆಶಿನ್‌ಗನ್ ಒಂದನ್ನು ಪ್ರವೇಶ ದ್ವಾರಕ್ಕೆ ಎದುರಾಗಿ ನಿಲ್ಲಿಸಿದ ಮೇಲೆ, ಕತ್ತಲಲ್ಲಿ ಆಹ್‌ಕ್ಯೂ ಇದ್ದ ರಕ್ಷಕ ದೇವರಗುಡಿಯನ್ನು ಮುತ್ತಿದರು. ಆಹ್‌ಕ್ಯೂ ಹೆದರಿ ಹೊರಗಡೆ ಓಡಿ ಹೋಗಲಿಲ್ಲ. ಸುಮಾರು ಹೊತ್ತು ಗುಡಿಯಲ್ಲಿ ಏನೂ ಚಲನವಲನ ಕಾಣಿಸಲಿಲ್ಲ. ಕ್ಯಾಪ್ಟನ್‌ಗೆ ಅಸಮಾಧಾನವಾಗುತ್ತಿತ್ತು. ಇಪ್ಪತ್ತು ಸಾವಿರ ಬಹುಮಾನ ಘೋಷಿಸಿದ. ಆಗ ಮಾತ್ರ ಒಂದಿಬ್ಬರು ಮಿಲಿಟರಿ ವ್ಯಕ್ತಿಗಳು ಧೈರ್ಯ ತಂದುಕೊಂಡು ಗೋಡೆ ಹಾರಿ ಒಳನುಗ್ಗಿದರು. ಅವರೊಂದಿಗೆ ಒಳಗಿದ್ದವರ ನೆರವಿನೊಂದಿಗೆ ಆಹ್‌ಕ್ಯೂನನ್ನು ಹೊರಗೆ ಎಳೆದುಕೊಂಡು ಹೋದರು. ಅವನನ್ನು ಮೆಷಿನ್‌ಗನ್ ಇರುವ ಜಾಗಕ್ಕೆ ಕರೆದೊಯ್ಯುವ ತನಕ ಮೆತ್ತಗಾಗಲಿಲ್ಲ.

ಪಟ್ಟಣ ತಲುಪುವ ಹೊತ್ತಿಗಾಗಲೇ ಮಧ್ಯಾಹ್ನವಾಗಿತ್ತು. ಆಹ್‌ಕ್ಯೂಗೆ ತಾನೊಂದು ಪಾಳುಬಿದ್ದ ಕಟ್ಟಡದಲ್ಲಿ ಇರುವುದು ಗೊತ್ತಾಯಿತು. ಐದಾರು ಸುತ್ತುಗಳಾದ ಮೇಲೆ ಒಂದು ಕತ್ತಲೆಯ ಕೋಣೆಯೊಳಕ್ಕೆ ನೂಕಿದರು. ಅವನನ್ನು ಒಳಗೆ ಎಸೀತಿದ್ದಂತೆ, ಮರದ ಬಾಗಿಲು ಅವನ ಹಿಂದೆಯೇ ಮುಚ್ಚಿಕೊಂಡಿತು. ಕೋಣೆಯಲ್ಲಿ ಮೂರು ನಾಲ್ಕು ಗೋಡೆಗಳಿದ್ದವು. ಜಾಗರೂಕತೆಯಿಂದ ಕೋಣೆಯ ಸುತ್ತ ಕಣ್ಣಾಡಿಸಿದಾಗ ಮೂಲೆಯಲ್ಲಿ ಒಂದಿಷ್ಟು [illegible] ಕಾಣಿಸಿತು.

ಆಹ್‌ಕ್ಯೂಗೆ [illegible] ಎನಿಸಿದರೂ ಅವನೇನೂ [illegible] ಗುಡಿಯ ಕೋಣೆ ಇದಕ್ಕಿಂತ

ಉತ್ತಮವಾಗೇನೂ ಇರಲಿಲ್ಲ. ಆ ಇಬ್ಬರೂ ಕೂಡ ಊರಿನವರಾಗಿದ್ದರು. ಪರಸ್ಪರ ಮಾತಾಡಿಕೊಳ್ಳುತ್ತಿದ್ದರು. ಒಬ್ಬ ಇನ್ನೊಬ್ಬನಿಗೆ ಹೇಳಿದ. ತನ್ನ ತಾತ ಪ್ರಾವೆನ್‌ಷಿಯಲ್ ಅಭ್ಯರ್ಥಿಗೆ ಬಾಕಿ ಇದ್ದ ಬಾಡಿಗೆ ಹಣಕ್ಕಾಗಿ ತನ್ನನ್ನು ಈ ರೀತಿ ಸಿಕ್ಕಿಸಿದ್ದಾನೆ ಎಂದು. ಇನ್ನೊಬ್ಬ ತನ್ನನ್ನು ಯಾವ ಕಾರಣಕ್ಕಾಗಿ ಕರೆ ತಂದಿದ್ದಾರೆ ಎನ್ನುವುದೇ ಗೊತ್ತಿಲ್ಲವೆಂದು ಹೇಳಿದ. "ನೀನು ಯಾವ ಅಪರಾಧಕ್ಕಾಗಿ ಬಂದೆ?" ಎಂದು ಅಹ್‌ಕ್ಯೂನನ್ನು ವಿಚಾರಿಸಿದರೆ, "ನಾನು ದಂಗೆ ಏಳಬೇಕೆಂದುಕೊಂಡೆ. ಅದಕ್ಕಾಗಿ ಬಂದೆ" ಎಂದ.

ಆ ದಿನ ಮಧ್ಯಾಹ್ನ ಅವನನ್ನು ತೆರೆದ ಬಾಗಿಲಿನಿಂದ ಎಳೆದುಕೊಂಡು ದೊಡ್ಡ ಹಜಾರವೊಂದಕ್ಕೆ ತಂದು ನಿಲ್ಲಿಸಿದರು. ದೂರದಲ್ಲಿ ನುಣ್ಣಗೆ ತಲೆ ಬೋಳಿಸಿದ್ದ ಮುದುಕನೊಬ್ಬ ಕುಳಿತಿದ್ದ. ಮೊದಲು ಅವನನ್ನು ಬೌದ್ಧ ಭಿಕ್ಷು ಇರಬೇಕೆಂದುಕೊಂಡ. ನಂತರ ಅವನ ಸುತ್ತಮುತ್ತ ಅವನ ಹಾಗೇ ಬೋಳಿಸಕೊಂಡವರಿದ್ದರೆ ಮತ್ತೆ ಕೆಲವರು ಭುಜಗಳ ತನಕ ವಿದೇಶಿ ಪಿಶಾಚಿ ಥರಾ ಕೂದಲು ಬೆಳೆಸಿದ್ದರು. ಅವರೆಲ್ಲರೂ ಇವನನ್ನು ದುರುಗುಟ್ಟಿ ನೋಡುತ್ತಿದ್ದರು. ಆಹ್‌ಕ್ಯೂ ಇವನ್ಯಾರೋ ಬಹಳ ಪ್ರಮುಖನಾದ ವ್ಯಕ್ತಿ ಇರಬೇಕೆಂದುಕೊಂಡ ತಕ್ಷಣ ಅವನ ಮೊಣಕಾಲುಗಳಲ್ಲಿನ ಜೋಮು ಬಿಟ್ಟಂತಾಗಿ, ಸ್ವಲ್ಪ ಆರಾಮವೆನಿಸಿತು.

"ನಿಂತುಕೊಂಡು ಮಾತಾಡು. ಮಂಡಿಯೂರಬೇಡ." ಉದ್ದನೆಯ ಅಂಗಿಗಳಲ್ಲಿ ಇದ್ದವರೆಲ್ಲ ಒಮ್ಮೆಲೇ ಅಬ್ಬರಿಸಿದರು.

ಆಹ್‌ಕ್ಯೂಗೆ ಅವರು ಹೇಳಿದ್ದು ಅರ್ಥವಾಗಿದ್ದರೂ ನಿಂತುಕೊಳ್ಳಲು ಸಾಧ್ಯವಾಗಲಿಲ್ಲ. ಅವನ ದೇಹ ಅಪ್ರಯತ್ನವಾಗಿ ಕುಳಿತುಕೊಳ್ಳುವ ಸ್ಥಿತಿಗೆ ಬಂತು. ನಂತರ ನಿಧಾನವಾಗಿ ಮಂಡಿ ಮೇಲೆ ನಿಂತ.

"ಗುಲಾಮ" ಉದ್ದನೆಯ ಕೋಟಿನ ಮನುಷ್ಯ ಜಿಗುಪ್ಸೆಯಿಂದ ಅಬ್ಬರಿಸಿದ. ಆದರೆ ನಿಂತುಕೊಳ್ಳಲೇಬೇಕೆಂದು ಒತ್ತಾಯ ಮಾಡಲಿಲ್ಲ.

"ನಿಜ ಹೇಳು. ಕಡಿಮೆ ಶಿಕ್ಷೆಯಾಗುತ್ತೆ"

ತಲೆ ಬೋಳಿಸಿಕೊಂಡಿದ್ದ ಮುದುಕ ಮೆದುವಾದ. ಆದರೆ ಸ್ಪಷ್ಟವಾದ ದನಿಯಲ್ಲಿ ಹೇಳಿದ. ಆಹ್‌ಕ್ಯೂನ ಮೇಲೆ ಕಣ್ಣುಗಳನ್ನು ಕೇಂದ್ರೀಕರಿಸಿದ್ದ. ನನಗೆ ಈಗಾಗಲೇ ಎಲ್ಲಾ ಗೊತ್ತಿದೆ. ಅಪರಾಧ ಒಪ್ಪಿಕೊಂಡರೆ ಹೋಗಲು ಬಿಡುತ್ತೇನೆ."

"ಅಪರಾಧ ಒಪ್ಪಿಕೋ" ಉದ್ದನೆಯ ಕೋಟಿನ ಮನುಷ್ಯ ಜೋರಾಗಿ ಹೇಳಿದ.

"ವಿಷಯ ಏನೂಂದ್ರೆ.....ನನಗೆ....." ಅಸ್ಪಷ್ಟವಾಗಿ ಅಸಂಬದ್ಧವಾಗಿ, ದಿಕ್ಕು ತೋಚದೆ ಹೇಳಿದ. "ಹಾಗಿರುವಾಗ ನೀನು ಯಾಕೆ ಬರಲಿಲ್ಲ?" ಮುದುಕ ಮೆದುವಾಗಿ ಕೇಳಿದ.

"ಅನುಕರಣೆ ವಿದೇಶಿ ಪಿಶಾಚಿ, ಬರೋಕೆ ಬಿಡಲಿಲ್ಲ.

"ನಾನ್‌ಸೆನ್ಸ್. ಈಗ ಮಾತಾಡಿ ಪ್ರಯೋಜನವಿಲ್ಲ. ಎಲ್ಲಿ ನಿನ್ನ ಗೆಳೆಯರು?"

"ಏನು?"

"ಅದೇ ಆ ರಾತ್ರಿ ಚಾವೋ ಮನೆಗೆ ಕನ್ನ ಹಾಕಿದವರು"

"ನನ್ನನ್ನು ಕರೆಯೋಕೇ ಬರಲಿಲ್ಲ. ತಾವೇ ಸಾಮಾನೆಲ್ಲವನ್ನೂ ಸಾಗಿಸಿಬಿಟ್ಟರು. ಈ ಮಾತನ್ನು ಹೇಳಿದಾಗ ಆಹ್‌ಕ್ಯೂ ಸ್ವಲ್ಪ ಸಿಟ್ಟಾಗಿದ್ದ. ಅವರು ಹೋದದ್ದೆಲ್ಲಿಗೆ? ನನಗೆ ತಿಳಿಸಿದರೆ, ನಿನ್ನನ್ನು ಬಿಟ್ಟು ಬಿಡುತ್ತೇನೆ" ಇನ್ನಷ್ಟು ಮೆದುವಾಗಿ ಕೇಳಿದ, ಮುದುಕ.

"ನನಗೆ ಗೊತ್ತಿಲ್ಲ. ನನ್ನನ್ನು ಕರೆಯಲು ಅವರು ಬರಲಿಲ್ಲ......"

ಮುದುಕನ ಸಹಿಯ ನಂತರ ತೆರೆದ ಬಾಗಿಲ ಮೂಲಕ ಅವನನ್ನು ಎಳೆದೊಯ್ದರು. ಮಾರನೆಯ ದಿನ ಮತ್ತೊಮ್ಮೆ ಹೊರಗೆಳೆದು ತಂದರು.

ಆ ದೊಡ್ಡ ಹಜಾರದಲ್ಲಿ ಏನೊಂದೂ ವ್ಯತ್ಯಾಸವಾಗಿರಲಿಲ್ಲ. ನುಣ್ಣಗೆ ತಲೆ ಬೋಳಿಸಿದ್ದ ಮುದುಕ ತನ್ನ ಜಾಗದಲ್ಲಿ ಕುಳಿತಿದ್ದ. ಆಹ್‌ಕ್ಯೂ ಮತ್ತೆ ಮೊದಲಿನಂತೆ ಅವರ ಮುಂದೆ ಮಂಡಿಯೂರಿದ.

"ಇನ್ನೇನಾದರೂ ಹೇಳುವುದಿದೆಯಾ?" ಮುದುಕ ಪ್ರಶ್ನಿಸಿದ.

ಆಹ್‌ಕ್ಯೂ ಯೋಚನೆ ಮಾಡಿದ. ಹೇಳುವುದಕ್ಕೆ ಏನೂ ಇಲ್ಲವೆನಿಸಿತು. ಹೇಳಿದ– "ಏನೂ ಇಲ್ಲ."

ಆಗ ಉದ್ದನೆಯ ಕೋಟಿನ ಮನುಷ್ಯ ಒಂದು ಕಾಗದ ಹಾಳೆ ಮತ್ತು ಬ್ರಷ್ ತಂದು ಆಹ್‌ಕ್ಯೂ ಮುಂದೆ ಹಿಡಿದ. ಅದನ್ನು ಆಹ್‌ಕ್ಯೂ ಕೈಯಲ್ಲಿ ತುರುಕಬೇಕೆಂದುಕೊಂಡ. ಆಹ್‌ಕ್ಯೂಗೆ ಬುದ್ಧಿ ಸಾಯುವಷ್ಟು ಮಟ್ಟಿಗೆ ಹೆದರಿಕೆ ಆಯಿತು. ಅವನ ಜನ್ಮದಲ್ಲಿ ಮೊಟ್ಟ ಮೊದಲ ಸಲ ಬರೆಯುವ ಬ್ರಷ್ ಕೈಗೆ ಬಂದಿತ್ತು. ಅದನ್ನು ಯಾವ ಕಡೆ ಹಿಡಿದುಕೋಬೇಕು ಎನ್ನುವುದೂ ಗೊತ್ತಿರಲಿಲ್ಲ. ಸಹಿ ಮಾಡಬೇಕಾದ ಜಾಗ ತೋರಿಸುತ್ತಿದ್ದಾಗ ಅವನಿಗೆ ದಿಕ್ಕೇ ತೋಚಲಿಲ್ಲ.

"ನಂಗೆ......ನಂಗೆ......ಬರೆಯೋದಕ್ಕೆ ಬರೋದಿಲ್ಲ. ಬ್ರಷ್‌ನ್ನು ಕೈಲಿ ಹಿಡಿದು ನಾಚಿಕೆ, ಭಯ ಸಂಕೋಚದಿಂದ ಹೇಳಿದ.

"ಹಾಗಿದ್ದರೆ ಒಂದು ಸುಲಭದ ದಾರಿ ಇದೆ. ಒಂದು ವೃತ್ತವನ್ನು ಬರೆ"

ಆಹ್‌ಕ್ಯೂ ವೃತ್ತ ಬರೆಯೋಕೆ ಎಷ್ಟೋ ಪ್ರಯತ್ನಿಸಿದನು. ಕೈಲಿದ್ದ ಬ್ರಷ್ ನಡುಗುತ್ತಿದ್ದುದರಿಂದ ಸಾಧ್ಯವೇ ಆಗಲಿಲ್ಲ. ಆ ವ್ಯಕ್ತಿ ಹಾಳೆಯನ್ನು ಆಹ್‌ಕ್ಯೂಗಾಗಿ [illegible] ಆಹ್‌ಕ್ಯೂ [illegible] ತನ್ನ ಬದುಕೇ ಅದರ ಮೇಲಿದೆ ಎನ್ನುವ ಹಾಗೆ

ಕಡೆಗೂ ವೃತ್ತ ಬರೆದ. ಜನ ನಗಬಹುದು ಅಂತ ಹೆದರಿ ವೃತ್ತವನ್ನು ಗುಂಡಗೆ ಮಾಡಲು ನಿರ್ಧರಿಸಿದ್ದ. ಆದರೆ ಆ ದರಿದ್ರ ಬ್ರಷ್ ಎಷ್ಟೋ ಕಾಟ ಕೊಟ್ಟು ಕಡೆಗೂ ಸಾಧಿಸಲು ಸಾಧ್ಯವಾಗದಂತೆ, ಆ ಕಡೆಗೆ ಈ ಕಡೆಗೆ ವಾಲುವಂತೆ ಮಾಡಿತು. ಇನ್ನೇನು ವೃತ್ತ ಪೂರ್ತಿಯಾಗಲಿದೆ ಎನ್ನುವ ಸಮಯಕ್ಕೆ ಕರಬೂಜದ ಬೀಜದಂತೆ ಆಯಿತು.

ತಾನು ಗುಂಡಗೆ ವೃತ್ತ ಮಾಡಲು ಆಗಲಿಲ್ಲವಲ್ಲ ಎಂದು ನಾಚಿಕೆ ಪಡುತ್ತಿರುವಷ್ಟರಲ್ಲಿ ಆ ಮನುಷ್ಯ ಏನನ್ನೂ ಟೀಕೆ ಮಾಡದೆ ಹಾಳೆಯನ್ನು ಅವನಿಂದ ಹಿಂದಕ್ಕೆ ಪಡೆದಿದ್ದ. ಅವನನ್ನು ಮತ್ತೆ ಮೂರನೆ ಸಲ ಒಂದಷ್ಟು ಮಂದಿ ಎಳೆದುಕೊಂಡು ಹೋದರು.

ಈ ಸಲ ಅವನಿಗೆ ಕೋಪ ಬರಲಿಲ್ಲ. ವೇದಾಂತಿ ತರ ಯೋಚನೆ ಮಾಡಿದ. ಬಹುಶಃ ಎಲ್ಲರ ಬದುಕಿನಲ್ಲಿ ಒಂದಲ್ಲ ಒಂದು ಸಲ ಹೀಗೆ ಕಟಕಟೆ ಒಳಗೆ ಹೊರಗೆ ಇರಬೇಕಾಗುತ್ತೆ. ಹಾಳೆ ಮೇಲೆ ವೃತ್ತಗಳನ್ನು ಬರೀಬೇಕಗುತ್ತೆ? ಎಂದುಕೊಂಡ. ಅವನಿಗೆ ನೋವಾದದ್ದು, ವೃತ್ತವನ್ನು ಗೋಲಾಕಾರದಲ್ಲಿ ಬರೆಯಲಾಗಲಿಲ್ಲವಲ್ಲ. ಅದು ತನ್ನ ವ್ಯಕ್ತಿತ್ವಕ್ಕೆ ಒಂದು ಮಚ್ಚೆ ಇದ್ದ ಹಾಗೆ ಎನ್ನುವ ಕಾರಣಕ್ಕೆ, ಕಡೆಗೆ, "ತಲೆ ಇಲ್ಲದವರು ಮಾತ್ರ ವೃತ್ತವನ್ನು ದುಂಡಗೆ ಮಾಡಲಿಕ್ಕೆ ಸಾಧ್ಯ" ಅಂತರ ಯೋಚಿಸಿ ತನಗೆ ತಾನೇ ಸಮಾಧಾನ ತಂದುಕೊಂಡ. ಇದೇ ಯೋಚನೆಯಲ್ಲಿ ನಿದ್ದೆ ಮಾಡಿದ.

ಆದರೆ ಆ ರಾತ್ರಿಯೆಲ್ಲ ವಿಜೇತನಾದ ಪ್ರಾವೆನ್‌ಷಿಯಲ್ ಅಭ್ಯರ್ಥಿಗೆ ಅಷ್ಟಾಗಿ ಮರ್ಯಾದೆ ಕೊಡ್ತಿರಲಿಲ್ಲ. ಅದಕ್ಕಾಗಿ ಮೇಜಿನ ಮೇಲೆ ಮುಷ್ಠಿಯನ್ನು ಬಿಗಿ ಹಿಡಿದು ತೋರಿಸುತ್ತ, "ಒಬ್ಬನಿಗೆ ಶಿಕ್ಷೆ ಕೊಟ್ಟರೆ ನೂರು ಮಂದಿ ಹೆದರುತ್ತಾರೆ". ಈಗ ನೀನೇ ನೋಡು, ನಾನು ರೆವಲ್ಯೂಷನರೀ ಪಾರ್ಟಿಗೆ ಸೇರಿ ಇಪ್ಪತ್ತು ದಿವಸ ಕೂಡ ಆಗಿಲ್ಲ. ಡಜನ್‌ಗಿಂತಲೂ ಹೆಚ್ಚಿನ ಕಳ್ಳತನದ ಪ್ರಕರಣಗಳು. ಆದರೆ ಒಂದೂ ಪರಿಹಾರ ಆಗಿಲ್ಲ. ಅದರ ಪ್ರಭಾವ ನನ್ನ ಮೇಲೆ ಏನಾಗಿರಬಹುದು? ಈಗ ಇದೊಂದು ಮಾತ್ರ ಪತ್ತೆಯಾಗಿದೆ. ನೀನು ಒಳ್ಳೆ ಪಾಂಡಿತ್ಯ ಪ್ರದರ್ಶಕನ ಥರ ಮಾತಾಡ್ತೀಯ. ಇದರಿಂದ ಏನೂ ಪ್ರಯೋಜನವಿಲ್ಲ! ಇದು ನನಗೆ ಬಿಟ್ಟದ್ದು.

ಚಾವೋ ಮಗನಿಗೆ (ಪ್ರಾವೆನ್‌ಷಿಯಲ್ ಕ್ಯಾಂಡಿಡೇಟ್) ಇದರಿಂದ ಸಮಾಧಾನವಾಗಲಿಲ್ಲ. ತುಂಬಾ ಬೇಸರ ಆಯಿತು. ಕಳುವಾದ ಮಾಲನ್ನು ಹುಡುಕಿಸಿ ತೆಗೆಯಲೇ ಬೇಕೆಂದು ಹಟ ಹಿಡಿದ. ಅಸಿಸ್ಟೆಂಟ್ ಸಿವಿಲ್ ಅಡ್ಮನಿಸ್ಟ್ರೇಟರಾಗಿ ತನ್ನ ಕಡೆಯಿಂದಲೇ ಹುಡುಕಾಟ ಪ್ರಾರಂಭಿಸುವುದಾಗಿ ಹೇಳಿದ. "ನಿನಗೆ ಇಷ್ಟ ಬಂದ ಹಾಗೆ ಮಾಡು" ಅಂತ ಕ್ಯಾಪ್ಟನ್ ಹೇಳಿದ.

ಇದರ ಪರಿಣಾಮದಿಂದ ಪ್ರಾವೆನ್‌ಷಿಯಲ್ ಕ್ಯಾಂಡಿಡೇಟ್‌ಗೆ ರಾತ್ರಿ ನಿದ್ದೇನೆ ಸರಿಯಾಗಿ ಬರಲಿಲ್ಲ. ಮಾರನೆ ದಿವಸ ಸಂತೋಷವಾಗಿ ತನ್ನ ರಾಜೀನಾಮೆನಂತೂ ಕೊಡಬೇಕಾಗಲಿಲ್ಲ.

ಮೂರನೆ ಸಲ ಆಹ್‌ಕ್ಯೂನ ಅದೇ ರಾತ್ರಿಯಾದ ಮೇಲೆ ಬೆಳಿಗ್ಗೆ ಎಳೆದುಕೊಂಡು ಕರೆದೊಯ್ದರು. ಸಭಾಂಗಣ ಅಥವಾ ದೊಡ್ಡ ಹಜಾರದಲ್ಲಿ ಮತ್ತೆ ಅದೇ ಮುದುಕ ಆಸೀನನಾಗಿದ್ದ. ಆಹ್‌ಕ್ಯೂ ಮಂಡಿಯೂರಿದ, ಮಾಮೂಲಿನಂತೆ ಕುಳಿತಿದ್ದ.

ಮುದುಕ ಮೃದುವಾಗಿ ಕೇಳಿದ, "ಏನಾದರೂ ನಿನಗೆ ಹೇಳುವುದಿದೆಯೇ?"

"ಏನೂ ಇಲ್ಲ" ಆಹ್‌ಕ್ಯೂ ತನಗೆ ಹೇಳಲು ಏನೂ ಇಲ್ಲವೆಂದು ಯೋಚಿಸಿ ಹೇಳಿದ.

ಉದ್ದನೆಯ ಕೋಟುಗಳಲ್ಲಿ ತುಂಡಾದ ಜಾಕೆಟ್‌ಗಳಲ್ಲಿದ್ದ ಒಂದಷ್ಟು ಗಂಡಸರು ಇವನ ಬಳಿಗೆ ಬಂದು, ಇವನ ಮೇಲೆ ಬಿಳಿ ಬಟ್ಟೆಯನ್ನು ಹೊದಿಸಿದರು. ಅದರಲ್ಲಿ ಏನೇನೋ ಕಪ್ಪು ಚಿತ್ರಗಳಿದ್ದವು. ಇದು ಅಪಶಕುನದ ಸಂಕೇತ. ಇದು ಶೋಕದ ಉಡುಪಾಗಿತ್ತು. ಹಿಂದಿನಿಂದ ಎಳೆದೊಯ್ದರು.

ಆಹ್‌ಕ್ಯೂನನ್ನು ಎತ್ತಿ ತೆರೆದ ಗಾಡಿಯೊಂದರಲ್ಲಿ ಹಾಕಿದರು. ತುಂಡು ಜಾಕೆಟ್‌ಗಳಲ್ಲಿದ್ದ ಒಂದಷ್ಟು ಮಂದಿ ಅವನೊಂದಿಗೆ ಕುಳಿತರು. ತಕ್ಷಣವೇ ಗಾಡಿ ಚಲಿಸಿತು. ಮುಂದುಗಡೆ ಒಂದಷ್ಟು ಜನ ಸೈನಿಕರು, ಮಿಲಿಟರಿ ಸಿಬ್ಬಂದಿ ವಿದೇಶಿ ಬಂದೂಕುಗಳನ್ನು ಹೆಗಲಿಗೇರಿಸಿ ನಡೆಯುತ್ತಿದ್ದರು. ರಸ್ತೆಯ ಎರಡು ಬದಿಗಳಲ್ಲಿ ಕುತೂಹಲದಿಂದ ನೋಡುತ್ತಿರುವ ಮಂದಿ ಇದ್ದರು. ಹಿಂದೆ ಏನಿದೆ ಅನ್ನುವುದು ಮಾತ್ರ ಆಹ್‌ಕ್ಯೂಗೆ ತಿಳಿದಿರಲಿಲ್ಲ. "ನನ್ನನ್ನೇನಾದರೂ ತಲೆ ಕಡಿಯಲು ಕರೆದೊಯ್ಯುತ್ತಿರಬಹುದೇ?" ಎಂಬ ಅನುಮಾನದ ಆಲೋಚನೆ ಬಂದದ್ದೇ ಅವನ ಕಣ್ಣು ಕತ್ತಲಿಟ್ಟಿತು. ಭಯ ಆವರಿಸಿತು. ಅವನ ಕಿವಿಯಲ್ಲಿ ಯಾರೋ ಗುನುಗುನಿಸಿದ ಸದ್ದಾಯಿತು. ಮೂರ್ಛೆ ಬಿದ್ದಿರುವೆನೋ ಎಂಬ ಭಾವನೆ ಬಂತು. ಆದರೆ ವಾಸ್ತವವಾಗಿ ಮೂರ್ಛೆ ಬಿದ್ದಿರಲಿಲ್ಲ. ಸ್ವಲ್ಪ ಹೊತ್ತು ಭಯ ಬಿದ್ದಿರುವಂತೆ ಎನಿಸಿದರೂ ಪ್ರಶಾಂತವಾಗಿದ್ದ. "ಬದುಕಿನಲ್ಲಿ ಪ್ರತಿಯೊಬ್ಬರೂ ಈ ರೀತಿ ಒಂದಲ್ಲ ಒಂದು ಸಲ ತಲೆ ಕೆಡಿಸಿಕೊಳ್ಳಬೇಕಾದ ಪ್ರಸಂಗ ಇದ್ದೇ ಇರುತ್ತೇಂತ ಕಾಣುತ್ತೆ" ಎಂದುಕೊಂಡು ಸಮಾಧಾನ ಪಟ್ಟ.

ಅವನಿಗೆ ದಾರಿ ಅಥವಾ ರಸ್ತೆ ಗುರುತು ಹತ್ತಿತು. ಅವನಿಗೆ ತನ್ನನ್ನು ಮರಣ ದಂಡನೆಯ ಜಾಗಕ್ಕೇಕೆ ಕರೆದೊಯ್ಯುತ್ತಿಲ್ಲ ಎಂದು ಆಶ್ಚರ್ಯವಾಯಿತು. ಸಾರ್ವಜನಿಕರಲ್ಲಿ ಭಯ ಹುಟ್ಟಿಸಲು, ಪ್ರದರ್ಶನವಾಗಿ ತೋರಿಸಲು ತನ್ನನ್ನು ಕರೆದೊಯ್ಯುತ್ತಿದ್ದಾರೆಂಬ ವಿಷಯ ಅವನಿಗೆ ತಿಳಿದಿರಲಿಲ್ಲ. ಆದರೆ ತಿಳಿದಿದ್ದರೂ [illegible] ಇಲ್ಲ. ಮತ್ತೆ ಅದೇ ಆಲೋಚನೆ ಬರುತ್ತಿತ್ತು. "ಪ್ರಪಂಚದಲ್ಲಿ ಬಹುಶಃ ಎಲ್ಲರ [illegible]. ಹೀಗೆ [illegible] ಪ್ರದರ್ಶನವಾಗಿ ನಿಲ್ಲುವುದೇ ಆಗಿರುತ್ತಿತ್ತು!" ಎಂದು ಆಮೇಲೆ ಅವನಿಗೆ ಅರ್ಥ ಆಯಿತು. ಜನರಿಗೆ ತೋರಿಸುವುದಕ್ಕಾಗಿ ಹೀಗೆ ಸುತ್ತಾಡಿಸುತ್ತಿದ್ದಾರೆ ಎಂದು.

ವಧಾ ಸ್ಥಳಕ್ಕಂತೂ ಹೋಗಲೇ ಬೇಕಿತ್ತು. ಅವನ ತಲೆ ಕತ್ತರಿಸಲೇಬೇಕಾಗಿತ್ತು. ಪಶ್ಚಾತ್ತಾಪದಿಂದ ಸುತ್ತಲೂ ಕಣ್ಣು ಹಾಯಿಸಿದ. ಜನ ಇರುವೆಗಳ ಹಾಗೆ ಪಿಲಪಿಲನೆ, ನಿರೀಕ್ಷೆಗೂ ಮೀರಿದ ಪ್ರಮಾಣದಲ್ಲಿ ಸಂತೆಯಂತೆ ಸೇರುತ್ತಿದ್ದರು. ಆ ಗುಂಪಿನೊಳಗಿಂದ ಅಮಾಹ್‌ವು ಕಾಣಿಸಿದಳು. ಅದಕ್ಕೇ ಅವಳು ಅಷ್ಟು ದಿನ ಕಾಣಿಸಿರಲಿಲ್ಲ. ಕೆಲಸ ಮಾಡಲು ಪಟ್ಟಣ ಸೇರಿದ್ದಳು.

ಆಹ್‌ಕ್ಯೂಗೆ ಒಮ್ಮೆಲೇ ನಾಚಿಕೆ ಎನಿಸಿತು. ಅವನಲ್ಲಿ ಉತ್ಸಾಹ ಕುಂದಿತ್ತು. ಯಾವುದೇ ಅಪರಾಧದ ಒಂದು ಸಾಲನ್ನೂ ಹೇಳಿಕೊಂಡಿರಲಿಲ್ಲ. ಅವನ ಆಲೋಚನೆಗಳು ಸುಳಿಗಾಳಿಯಂತೆ ಸುತ್ತಿದವು. "ಯುವ ವಿಧವೆ ಗಂಡನ ಸಮಾಧಿ ಬಳಿ ಬರಲು, ಅದು ಸಾಹಸವೇನಲ್ಲ!" ನಾನು ಕೊಂದಿರಲಳಲುವೆ" ಎನ್ನುವ ಸಾಲು ಡ್ರ್ಯಾಗನ್ ಮತ್ತು ಹುಲಿಯ ಸಮರದುದ್ದ ಯಾಕೋ ಸಪ್ಪೆ ಎನಿಸಿತ್ತು. "ಕಬ್ಬಿಣ ಸರಳನ್ನು ಹಿಡಿಯುತ ಕೊಲ್ಲುವೆ" ಎಂಬುದೇ ವಾಸಿ. ತನ್ನ ಕೈಗಳನ್ನು ಮೇಲೆತ್ತಬೇಕೆಂದುಕೊಂಡ. ಹಿಂದಿನಿಂದ ಅವುಗಳನ್ನು ಕಟ್ಟಿ ಹಾಕಿದ್ದನ್ನು ನೆನಪಿಸಿಕೊಂಡ. ಅದಕ್ಕೆ ಹೇಳಬೇಕೆಂದುಕೊಂಡ, ಕಬ್ಬಿಣದ ಸರಳು......., ಸಾಲನ್ನು ಹೇಳಲೇ ಇಲ್ಲ.

ಇನ್ನು ಇಪ್ಪತ್ತು ವರ್ಷಗಳಲ್ಲಿ ನಾನು ಇನ್ನೊಬ್ಬ ಬಲಿಷ್ಠ ಯುವಕನಾಗುತ್ತೇನೆ. (ಸಾಮಾನ್ಯವಾಗಿ ಎಲ್ಲ ಅಪರಾಧಿಗಳು, ತಮಗೆ ಸಾವಿನ ಬಗ್ಗೆ ಇದ್ದ ಧಿಕ್ಕಾರವನ್ನು ಸೂಚಿಸಲು ಹೀಗೆ ಹೇಳಿಕೊಳ್ಳುತ್ತಿದ್ದರು). ಮೇಲಿನ ಸಾಲನ್ನು ಅರ್ಧ ಮಾತ್ರ ಕಲಿತಿದ್ದ. ಮುಂದಿನದನ್ನು ಅವನು ಅಭ್ಯಾಸ ಮಾಡಿರಲಿಲ್ಲ. ನೆರದಿದ್ದ ಗುಂಪು "ಒಳ್ಳೆಯದು!" ಎಂದು ಕಿರುಚಿತು. ಆದರೆ ಅದು ತೋಳಗಳ ಊಳಿನಂತಗೆ ಕೇಳಿಸಿತು.

ಗಾಡಿ ನೇರವಾಗಿ ಮುಂದೆ ಸಾಗಿತು. ಕೂಗಿನ ಮಧ್ಯೆ ಆಹ್‌ಕ್ಯೂ ಅಮಾಹ್‌ವುಗಳಿಗಾಗಿ ಅರಸುತ್ತಿದ್ದ. ಅವನು ಅವಳನ್ನು ನೋಡಿದರೂ, ಅವಳು ಮಾತ್ರ ಇವನ ಕಡೆ ನೋಡದೆ ಸೈನಿಕರು ಹೊತ್ತ ವಿದೇಶಿ ಬಂದೂಕುಗಳನ್ನು ನೋಡುತ್ತಿದ್ದಳು. ಅದಕೆ ಆಹ್‌ಕ್ಯೂ ಕೂಗುತ್ತಿರುವ ಗುಂಪಿನ ಕಡೆ ನೋಡಿದ.

ಆ ಕ್ಷಣಕ್ಕೆ ಅವನ ತಲೆಯಲ್ಲಿ ಆಲೋಚನೆಗಳ ಸುಳಿಯೆದ್ದಿತು. ನಾಲ್ಕು ವರ್ಷಗಳ ಹಿಂದೆ ಬೆಟ್ಟದ ತಪ್ಪಲಲ್ಲಿ ಒಂದು ಹಸಿದ ತೋಳ ಇವನಿಗೆ ಎದುರಾಗಿತ್ತು. ತಿನ್ನಲು ಇವನನ್ನು ಹಿಂಬಾಲಿಸಿ ನಡೆದಿತ್ತು. ಭಯದಿಂದ ಹೆಚ್ಚು ಕಡಿಮೆ ಸತ್ತೇ ಹೋಗಿದ್ದ. ಅದೃಷ್ಟಕ್ಕೆ ಆಗ ಅವನ ಕೈಯ್ಯಲ್ಲಿ ಕೊಡಲಿ ಇತ್ತು. ಅದೇ ಅವನಿಗೆ ವೀಷುವಾಂಗ್‌ನ್ನು ತಲುಪಲು ಧೈರ್ಯ ನೀಡಿತ್ತು. ತೋಳದ ಕಣ್ಣುಗಳನ್ನು ಮರೆತಿರಲಿಲ್ಲ. ನೋಡಲು ಭಯಂಕರವಾಗಿತ್ತಾದರೂ ಅದರಲ್ಲಿ ಹೇಡಿತನವನ್ನೇ ಗಮನಿಸಿದ್ದ. ಏನಿದ್ದರೂ ದೂರದಿಂದಲೇ ತನ್ನನ್ನು ತಿವಿಯುವಂತೆ ನೋಡುತ್ತಿತ್ತು. ಈಗ ಅವನ ಕಣ್ಣುಗಳನ್ನು ಗಮನಿಸಿದ. ತೋಳದ ಕಣ್ಣುಗಳಿಗಿಂತ ಕ್ರೂರವಾಗಿದ್ದವು. ಕಾಂತಿಹೀನವಾಗಿತ್ತು. ಆದರೆ

ನೋಟ ತಿವಿಯುವಂತೆ ಇತ್ತು. ತನ್ನ ಶಬ್ಧಗಳನ್ನು ಕಿತ್ತು ತಿನ್ನುತ್ತಿದ್ದವು. ಆದರೆ ಈಗ ತನ್ನ ರಕ್ತ ಮಾಂಸದ ಆಚೆಗೂ ಏನನ್ನೋ ತಿನ್ನಲು ಬಯಸುವಂತಿದ್ದವು.

ಎಲ್ಲ ಕಣ್ಣುಗಳೂ ಒಂದಾಗಿ ಕೂಡಿ ತನ್ನ ಆತ್ಮವನ್ನು ಬಗಿಯುತ್ತಿತ್ತು.

"ಸಹಾಯ ಮಾಡಿ! ಸಹಾಯ ಮಾಡಿ!"

ಆಹ್‌ಕ್ಯೂ ಈ ಮಾತುಗಳನ್ನು ಉಚ್ಚರಿಸಲೇ ಇಲ್ಲ. ಎಲ್ಲವೂ ಕತ್ತಲಲ್ಲಿ ಲೀನವಾಗಿತ್ತು. ಕಿವಿಯಲ್ಲಿ ಮಾತ್ರ ಗುಂಯ್ ಗುಡುವ ಶಬ್ಧ. ತನ್ನ ದೇಹ ಹಗುರಾದ ಹುಡಿಯ ಹಾಗೆ ಚೆಲ್ಲಾಪಿಲ್ಲಿಯಾದಂತೆನಿಸಿತು.

ಕಳ್ಳತನದಿಂದ ಹೆಚ್ಚಿನ ನಷ್ಟವನ್ನು ಅನುಭವಿಸಿದವನು, ನಂತರ ಎದುರಾದ ಪರಿಣಾಮಗಳಿಗೆ ಒಳಗಾದವನೆಂದರೆ ಪ್ರಾವೆನ್‌ಷಿಯಲ್ ಅಭ್ಯರ್ಥಿ. ಯಾಕೆಂದರೆ ಕಳುವಾದ ವಸ್ತುಗಳು ಸಿಗಲೇ ಇಲ್ಲ. ಅವನ ಕುಟುಂಬವೆಲ್ಲ ತಲೆಯ ಮೇಲೆ ಕೈ ಹೊತ್ತು ಕುಳಿತಿತ್ತು. ನಂತರದ ಕುಟುಂಬವೆಲ್ಲ ತಲೆಯ ಮೇಲೆ ಕೈ ಹೊತ್ತು ಕುಳಿತಿತ್ತು. ನಂತರದವನೆಂದರೆ ಚಾವ್ಹೋ. ಕಂಟ್ರಿ ಅಭ್ಯರ್ಥಿ ಪಟ್ಟಣಕ್ಕೆ ಹೋಗಿ ರಿಪೋರ್ಟ್ ಬರೆಸಬೇಕೆಂದಾಗ, ಆ ಕೆಟ್ಟ ದಂಗೆ ಕೋರರು ಪಿಗ್‌ಟೈಲ್ ಕತ್ತರಿಸಿದ್ದಷ್ಟೇ ಅಲ್ಲದೆ. ಬಹುಮಾನ ರೂಪದಲ್ಲಿ ೨೦ ಸಾವಿರ ಹಣವನ್ನು ಈ ಚೌಕಾಶಿಯಲ್ಲಿ ಕಳೆದುಕೊಂಡಿದ್ದ. ಅಷ್ಟರಿಂದ ಇಡೀ ಕುಟುಂಬವೇ ಶೋಕಸಾಗರದಲ್ಲಿ ಮುಳುಗಿತ್ತು. ಅದಾದ ನಂತರ, ಆ ದಿನದಿಂದ ಉಳಿದು ಬದುಕಿದ ವಂಶದವರ ಹಾಗೆ ನಡೆದುಕೊಳ್ಳ ತೊಡಗಿದರು.

ಈ ಘಟನೆಗೆ ಸಂಬಂಧಿಸಿದಂತೆ ಚರ್ಚೆಯಾಗಲೀ, ಪ್ರಶ್ನೆಗಳಾಗಲೀ ವೀಚುವಾಂಗ್‌ನಲ್ಲಿ ಕೇಳಿ ಬರಲಿಲ್ಲ. ಒಮ್ಮತದ ಒಂದೇ ಒಂದು ಅಭಿಪ್ರಾಯ ಕೇಳಿಸಿದ್ದು, ಆಹ್‌ಕ್ಯೂ ಕೆಟ್ಟವನು; ಅವನಿಗೆ ಆದ ಮರಣದಂಡನೆಯೇ ಅದಕ್ಕೆ ಸಾಕ್ಷಿ. ಅವನು ಕೆಟ್ಟವನಲ್ಲದೆ ಹೋಗಿದ್ದರೆ, ಅವನನ್ನೇಕೆ ಸಾಯಿಸುತ್ತಿದ್ದರು? ಪಟ್ಟಣದಲ್ಲಿ ಮಾತ್ರ ಅಭಿಪ್ರಾಯ ಅಷ್ಟು ಅನುಕೂಲವಾಗಿರಲಿಲ್ಲ. ಗುಂಡಿಟ್ಟು ಕೊಲ್ಲುವ ನೋಟ ಅಂತಹ ರೋಮಾಂಚಕಾರಿ ಏನಲ್ಲ. ಅವನೆಂತಹ ಭಯಂಕರ ಅಪರಾಧಿಯಾಗಿದ್ದರೂ ಅಪರಾಧದ ಒಂದು ಸಾಲನ್ನೂ, ರಸ್ತೆಯಲ್ಲಿ ಕೊಂಡೊಯ್ಯುತ್ತಿದ್ದಾಗ, ಹಾಡಲೇ ಇಲ್ಲ. ಅವನನ್ನು ಹಿಂಬಾಲಿಸಿದ್ದು ಬರೀ ವ್ಯರ್ಥ!

* * *

ಚಂದ್ರನೆಡೆಗೆ

ಮನುಷ್ಯರ ಆಕಾಂಕ್ಷೆ ಬುದ್ಧಿವಂತ ಪ್ರಾಣಿಗಳಿಂದ ಸಾಕಾರಗೊಳ್ಳುತ್ತದೆ ಎನ್ನುವ ಮಾತು ಸತ್ಯ. ಗೇಟು ಕಣ್ಣಿಗೆ ಬೀಳುತ್ತಿದ್ದಂತೆ ಕುದುರೆ ತನ್ನ ನಡಿಗೆಯನ್ನು ನಿಧಾನವಾಗಿಸಿತು. ತನ್ನ ಸವಾರ ಇಳಿಯುತ್ತಿದ್ದಂತೆ ತಲೇನ ಕೆಳಗೆ ಹಾಕಿ ನಿಧಾನವಾಗಿ, ಅಕ್ಕಿ ಕುಟ್ಟುವ ಒನಕೆಯ ಶಬ್ಧದಂತೆ ಶಬ್ಧ ಮಾಡುತ್ತ ಹೆಜ್ಜೆ ಹಾಕತೊಡಗಿತು.

ಸಂಜೆಯ ಮಂಜು ಮನೆ ಮೇಲೆ ಕವಿದಿತ್ತು. ನೆರೆ ಹೊರೆಯವರ ಮನೆಗಳ ಚಿಮ್ನಿಗಳಿಂದ ಕಪ್ಪು ಹೊಗೆಯೇಳುತ್ತಿತ್ತು. ಅದು ರಾತ್ರಿ ಊಟದ ಸಮಯವಾಗಿತ್ತು. ಕುದುರೆ ಗೊರಸಿನ ಸದ್ದು ಕೇಳಿ ಬರುತ್ತಿದ್ದಂತೆ, ಸೇವಕರು ಹೊರಗೆ ಬಂದು ನೆಟ್ಟಗೆ ಶಿಸ್ತಿನಿಂದ ಕೈಕಟ್ಟಿಕೊಂಡು ಪ್ರವೇಶ ದ್ವಾರದ ಬಳಿ ನಿಂತರು. "ಯೀ" ಬೇಸರದಿಂದಲೇ ದೊಡ್ಡ ಕಸದ ರಾಶಿಯ ಪಕ್ಕದಲ್ಲಿ ಇಳಿದು ನಿಂತ. ಸೇವಕರು ಲಗಾಮು, ಜೇನುಗಳನ್ನು ಅವನಿಂದ ತೆಗೆದುಕೊಳ್ಳಲು ಮುಂದೆ ಬಂದರು. ಹೊಸ್ತಿಲು ದಾಟಿ ಒಳಹೋಗುವ ಸಮಯದಲ್ಲಿ ತನ್ನ ಸೊಂಟದಲ್ಲಿದ್ದ ಬತ್ತಳಿಕೆಯಲ್ಲಿನ ಹೊಸದಾದ ಬಾಣಗಳನ್ನು ಮೂರು ಕಾಗೆ ಮತ್ತು ಚಿಂದಿಯಾಗಿದ್ದ ಗುಬ್ಬಚ್ಚಿಯಿದ್ದ ಚೀಲವನ್ನು ಗಮನಿಸಿದ. ಮನಸ್ಸು ಸ್ವಲ್ಪ ಮುದುಡಿತು. ಆದರೂ ಗೆಲುವಾಗಿ ಕಾಣಿಸಿಕೊಳ್ಳುತ್ತಾ, ತನ್ನ ಬತ್ತಳಿಕೆಯಲ್ಲಿನ ಬಾಣಗಳನ್ನು ಸದ್ದು ಮಾಡುತ್ತಾ ಒಳ ನಡೆದ.

ಒಳ ಅಂಗಳಕ್ಕೆ ಹೋದ ಮೇಲೆ, ಚ್ಯಾಂಗೋ ಕಿಟಕಿಯಿಂದ ನೋಡುತ್ತಿದ್ದದನ್ನು ನೋಡಿದ. ಅವಳ ತೀಕ್ಷ್ಣವಾದ ಕಣ್ಣುಗಳು ಕಾಗೆಗಳನ್ನು ಗಮನಿಸಿರಬೇಕು. ಗಾಬರಿಯಿಂದ ಒಮ್ಮಲೇ ನಿಂತುಬಿಟ್ಟ. ಆದರೆ ಅವನಿಗೆ ಒಳಗೆ ಹೋಗಬೇಕಿತ್ತು. ಸೇವಕಿಯರು ಅವನನ್ನು ಸ್ವಾಗತಿಸಲು ಹೊರಗೆ ಬಂದರು. ಅವನು ನೇತು ಹಾಕಿಕೊಂಡಿದ್ದ ಬಿಲ್ಲು ಬಾಣ ಬತ್ತಳಿಕೆಗಳನ್ನು ಅವನಿಂದ ಕಳಚಿದರು. ಅವನ ಬೇಟೆಯ ಚೀಲವನ್ನು ಕೈಗೆ ತೆಗೆದುಕೊಂಡರು. ಅವರ ಮುಗುಳ್ನಗೆ ಬಲವಂತದ್ದೆಂದು ಗಮನಿಸಿದ.

ಮುಖ ಕೈಗಳನ್ನು ಒರೆಸಿಕೊಂಡ ಮೇಲೆ ಒಳಭಾಗಕ್ಕೆ ನಡೆದು 'ಮೇಡಂ' ಎಂದ.

ಚ್ಯಾಂಗೋ ಗೋಲಾಕಾರವಾಗಿದ್ದ ಕಿಟಕಿಯಿಂದ ಸೂರ್ಯಾಸ್ತವನ್ನು ಗಮನಿಸುತ್ತಿದ್ದಳು. ನಿಧಾನವಾಗಿ ತಿರುಗಿ, ಅವನನ್ನು ಎದುರುಗೊಳ್ಳದೆ, ನಿರ್ಲಕ್ಷ್ಯದಿಂದ ಮುಖ ತಿರುಗಿಸಿದಳು.

ಅವಳ ಈ ರೀತಿಯ ನಡವಳಿಕೆ ಇತ್ತೀಚೆಗೆ ಅದೂ ಒಂದು ವರ್ಷದಿಂದ ಅವನಿಗೆ ಅಭ್ಯಾಸವಾಗಿ ಹೋಗಿತ್ತು. ಆದರೂ ಮಾಮೂಲಿನಂತೆ ಒಳಗೆ ಹೋಗಿ ಮರದ ಸೋಫಾದ ಮೇಲೆ ಹಾಸಿದ್ದ ಹಳೆಯ ಚಿರತೆ ಚರ್ಮದ ಮೇಲೆ ಅವಳಿಗೆ ಎದುರಾಗಿ ಕುಳಿತ. ತಲೆ ಕೆರೆದುಕೊಳ್ಳುತ್ತ ಗೊಣಗುವ ದನಿಯಲ್ಲಿ ಹೇಳಿದ, " ಈ ದಿನ ಕೂಡ ನನ್ನ ಅದೃಷ್ಟ ಚೆನ್ನಾಗಿಲ್ಲ. ಕಾಗೆ ಬಿಟ್ಟು ಮತ್ತೇನೂ ಸಿಗಲಿಲ್ಲ....."

"ಛೂಹ್!"

ತನ್ನ ನೀಟಾದ ಹುಬ್ಬುಗಳನ್ನು ಏರಿಸಿ, ಚ್ಯಾಂಗೋ ಎದ್ದು ನಿಂತು ಕೋಣೆಯಿಂದ ಹೊರಗೆ ನಡೆಯುತ್ತ ಗೊಣಗಿಕೊಂಡಳು.

"ಮತ್ತೆ ಅದೇ ನೂಡಲ್ಸ್ ಮತ್ತು ಕಾಗೆ ಸಾಸ್! ಅದು ಯಾರು ತಾನೇ ವರ್ಷ ಪೂರ್ತಿ, ಮತ್ತೂ ಮುಂದಿನ ವರ್ಷಕ್ಕೆ ನೂಡಲ್ಸ್ ಮತ್ತು ಕಾಗೆ ಸಾಸ್ ತಿಂತಾರೋ ನನಗಂತೂ ಗೊತ್ತಿಲ್ಲ. ವರ್ಷ ಪೂರ್ತಿ ಇದನ್ನೇ ತಿನ್ನೋಕೆ, ನಿನ್ನನ್ನು ಮದುವೆ ಮಾಡಿಕೊಂಡು ಅದೇನು ಪಾಪ ಮಾಡಿದ್ದೆನೋ?"

"ಮೇಡಂ!" ಯೀ ಜಿಗಿದು ಅವಳ ಕಾಲ ಬಳಿ ನಡೆದು ಅವಳನ್ನೆ ಹಿಂಬಾಲಿಸಿದ. ಇವತ್ತು ಅಂಥದ್ದೇನೂ ಕೆಟ್ಟದ್ದಾಗಿಲ್ಲ. ಒಂದು ಗುಬ್ಬಚ್ಚೀನೂ ಸಿಕ್ಕಿದೆ. ಮಾತನ್ನು ಮೆಲ್ಲಗೆ ಮುಂದುವರೆಸಿದ. ಅದನ್ನೇ ಒಳ್ಳೆ ಅಡಿಗೆ ಮಾಡಬಹುದು ನಿಮಗಾಗಿ. "ನೂ ಷಿನ್!" ಸೇವಕಿಯನ್ನು ಕರೆದ.

"ನಿನ್ನ ಯಜಮಾನಿಗೆ ತೋರಿಸಲು ಆ ಗುಬ್ಬಚ್ಚಿಯನ್ನು ತೆಗೆದುಕೊಂಡು ಬಾ. ಸತ್ತ ಹಕ್ಕಿಗಳನ್ನು ಅಡಿಗೆ ಮನೆಗೆ ತೆಗೆದುಕೊಂಡು ಹೋದ. ನೂ-ಷಿನ್ ಗುಬ್ಬಚ್ಚಿಯನ್ನು ತಂದು ಎರಡೂ ಕೈಗಳಲ್ಲಿ ಹಿಡಿದು ಚ್ಯಾಂಗೋ ಮುಂದೆ ಹಿಡಿದಳು. "ಅದಾ!" ತಿರಸ್ಕಾರದ ನೋಟ ಬೀರಿ ಮೆಲ್ಲಗೆ ಕೈ ಚಾಚಿ ಅದನ್ನು ಸ್ಪರ್ಶಿಸಿದಳು. "ಎಷ್ಟು ಸಣ್ಣ!" ಮುಖ ಕಿವುಚಿ ಹೇಳಿದಳು. "ನೀನಂತೂ ಚೂರು ಚೂರು ಮಾಡಿ ಬಿಟ್ಟಿದ್ದೀಯ. ಎಲ್ಲಿದೆ ಮಾಂಸ?"

"ನನಗೆ ಗೊತ್ತು" ಯೀ ಮುಜುಗರದಿಂದಲೇ ಒಪ್ಪಿಕೊಂಡ. "ನನ್ನ ಬಿಲ್ಲು ಬಹಳ ಶಕ್ತಿಯುತವಾದದ್ದು, ನನ್ನ ಬಾಣಗಳು ಬಹಳ ಅಗಲ."

"ಸಣ್ಣ ಬಾಣಗಳನ್ನು ಬಳಸಬಾರದೇ?"

"ನನ್ನ ಹತ್ತಿರ ಒಂದೂ ಇಲ್ಲ. ನಾನು ಒಂದು ದೊಡ್ಡ ಹಂದಿಯನ್ನು, ಹೆಬ್ಬಾವನ್ನು ಹೊಡೆದಾಗ...."

"ಇದೇನು ದೊಡ್ಡ ಹಂದೀನಾ ಇಲ್ಲ ಹೆಬ್ಬಾವಾ?"

ನೂ-ಷಿನ್ ಕಡೆ ತಿರುಗಿ ಹೇಳಿದಳು. "ಇದನ್ನು ಸೂಪ್‌ಗೆ ಉಪಯೋಗಿಸಿ". ನಂತರ ಅವಳು ತನ್ನ ಕೋಣೆಗೆ ಹೋದಳು.

ನಿರಾಸೆಯಿಂದ ಯೀ ಗೋಡೆಗೆ ಒರಗಿ, ಅಡಿಗೆ ಮನೆಯಿಂದ ಉರಿಯುವ ಸೌದೆ ಉಂಟು ಮಾಡುತ್ತಿದ್ದ ಚಿಟ್ಟ ಚಿಟಿಲ್ ಶಬ್ದ ಕೇಳುತ್ತಾ ಕುಳಿತ. ದೈತ್ಯಾಕಾರದ ಹಂದಿ ಅವನ ಕಣ್ಮುಂದೆ ಒಂದು ಸಣ್ಣ ಗುಡ್ಡದ ತೆರದಲ್ಲಿ ದೂರದಲ್ಲಿ ಮೂಡಿದ್ದನ್ನು ನೆನಪಿಸಿಕೊಂಡ. ಅದನ್ನು ಆಗ ಹೊಡೆದು ಸಾಯಿಸದಿದ್ದರೆ, ಇವತ್ತಿನವರೆಗೂ ಹಾಗೇ ಬಿಟ್ಟಿದ್ದರೆ ಕಡೇ ಪಕ್ಷ ಆರು ತಿಂಗಳವರೆಗೆ ಮಾಂಸ ಸಿಗುತ್ತಿತ್ತು. ಅಲ್ಲದೆ ದಿನಾ ಈ ರೀತಿ ಊಟಕ್ಕಾಗಿ ತಲೆ ಕೆಡಿಸಿಕೊಳ್ಳೋದು ತಪ್ಪುತ್ತಿತ್ತು. ಆ ದೊಡ್ಡ ಹೆಬ್ಬಾವು! ಎಂಥೆಂಥ ಸೂಪ್‌ಗಳನ್ನು ಮಾಡಬಹುದಿತ್ತು!

ನೂ-ಯೀ ದೀಪ ಹಚ್ಚಿದಳು. ದೀಪದ ಬೆಳಕಿನಲ್ಲಿ ಕೆಂಪು ಬಣ್ಣದ ಗೋಡೆಗೆ ಹೊಂದಿಕೊಂಡಿದ್ದ ಕಪ್ಪು ಬಣ್ಣದ ಬಿಲ್ಲುಗಳು, ಅಡ್ಡ ಬಿಲ್ಲು, ಕತ್ತಿ, ಬಾಕು ಹೊಳೆದವು. ಯೀ ತಲೆ ಬಗ್ಗಿಸಿ, ಒಂದು ನಿಟ್ಟುಸಿರೆಳೆದ. ನೂಷಿನ್ ಊಟ ತಂದು ಮಧ್ಯದ ಮೇಜಿನ ಮೇಲೆ ಇರಿಸಿದಳು. ಎಡಗಡೆ ದೊಡ್ಡದಾದ ಐದು ಬಟ್ಟಲುಗಳಲ್ಲಿ ನೂಡಲ್ಸ್, ಬಲಗಡೆ ಎರಡು ದೊಡ್ಡ ಬಟ್ಟಲುಗಳಲ್ಲಿ ನೂಡಲ್ಸ್ ಮತ್ತು ಸೂಪ್, ಮಧ್ಯದಲ್ಲಿ ದೊಡ್ಡ ಬಟ್ಟಲೊಂದರಲ್ಲಿ ಕಾಗೆ ಸೂಪ್ ಇರಿಸಿದಳು.

ಊಟ ಮಾಡಲು ಕುಳಿತಾಗ, ಯೀಗೆ ಇದು ನಿಜವಾಗಿ ಸರಿಯಾದ ಊಟವಲ್ಲ ಎನ್ನುವುದನ್ನು ಒಪ್ಪಿಕೊಳ್ಳಬೇಕಾಯಿತು. ಚ್ಯಾಂಗೋಳತ್ತ ಒಮ್ಮೆ ನೋಡಿದ. ಕಾಗೆ ಸೂಪಿನ ಕಡೆ ಸಾಧ್ಯವಾದಷ್ಟು ಕಣ್ಣು ತಪ್ಪಿಸಿ. ನೂಡಲ್ಸ್‌ನ್ನು ಸಾಸಿನಲ್ಲಿ ಮುಳುಗಿಸಿ ಅರ್ಧ ಮಾತ್ರ ತಿಂದು ಕೆಳಗಿರಿಸಿದಳು. ಅವಳ ಮುಖ ಮೊದಲಿಗಿಂತ ಬಿಳುಚಿಕೊಂಡಿದೆ. ಕೃಶವಾಗಿದೆ ಎನ್ನುವುದನ್ನು ಯೀ ಗಮನಿಸಿದ. ಅವಳೇನಾದರೂ ಖಾಯಿಲೆ ಬಿದ್ದರೆ?

ಎರಡನೆ ಸಲ ನೋಡಿದಾಗ, ಅವಳು ಸ್ವಲ್ಪ ಗೆಲುವಿನಿಂದ, ಆದರೆ ಒಂದ ಮಾತೂ ಆಡದೆ, ಮಂಚದ ತುದಿಯಲ್ಲಿ ನೀರು ಕುಡಿಯಲು ಕುಳಿತಳು. ಯೀ ಮರದ ಸೋಫಾ ಮೇಲೆ, ಚಿರತೆ ಚರ್ಮವನ್ನು ತಟ್ಟುತ್ತಾ ಕುಳಿತ.

"ಆಹ್! ನಾವು ಮದುವೆ ಆಗೋಕೆ ಮೊದಲು ಪಶ್ಚಿಮ ಘಟ್ಟಗಳಲ್ಲಿ ಇದನ್ನು ನಾನು ಸಂಪಾದಿಸಿದೆ" ಎಂದು ಸಮಾಧಾನ ಪಡಿಸುವ ದನಿಯಲ್ಲಿ ಹೇಳಿದ. "ಎಷ್ಟು ಚೆನ್ನಾಗಿತ್ತೂ ಅಂತ! ಹೊಳೆವ ಚಿನ್ನದ ರಾಶಿ!"

ಹಿಂದೆ ತಾವು ಹೇಗೆ ಇದ್ದೆವು ಎನ್ನುವುದನ್ನು ಅದು ನೆನಪಿಗೆ ತಂದಿತು. ಕರಡಿಯ ಪಂಜುಗಳು, ಒಂಟೆ ಡುಬ್ಬ ಬಿಟ್ಟು ಬೇರೇನೂ ತಿನ್ನುತ್ತಿರಲಿಲ್ಲ. ಆ ಪ್ರಾಣಿಗಳ ಉಳಿದ ಭಾಗಗಳನ್ನೆಲ್ಲ ಕೆಲಸದವರಿಗೆ ಕೊಟ್ಟು ಬಿಡುತ್ತಿದ್ದರು. ದೊಡ್ಡ ಬೇಟೆ ಮುಗಿಸಿದ ಮೇಲೆ ಮೊಲಗಳು, ಹಂದಿಗಳು ಮತ್ತು ಒಂದು ಜಾತಿಯ ಹಕ್ಕಿಗಳನ್ನು ತಿನ್ನುತ್ತಿದ್ದರು. ಅವನು ಬಹಳ ಒಳ್ಳೆಯ ಬಿಲ್ಲುಗಾರನಾಗಿದ್ದ. ತನಗಿಷ್ಟ ಬಂದಷ್ಟು ಬೇಟೆಯಾಡುತ್ತಿದ್ದ.

ಒಂದು ನಿಟ್ಟುಸಿರು ಹೊರಟಿತು.

"ನಾನು ಒಳ್ಳೆಯ ಗುರಿಕಾರ ಆಗಿರುವುದೇ ಒಂದು ವಿಶೇಷ." ಅವನು ಹೇಳಿದ. "ಬಹುಶಃ ಅದಕ್ಕೇ ಜಾಗಾನೆಲ್ಲ ಶುಚಿ ಮಾಡಿ, ತೆರವು ಮಾಡಿ ಇಟ್ಟಿದ್ದಾರೆ. ಯಾರಿಗೆ ಗೊತ್ತಿತ್ತು ಬರೀ ಕಾಗೆ ಬಿಟ್ಟರೆ ಇವತ್ತು ನಮ್ಮ ಹಣೇಲಿ ಏನೂ ಬರೆದಿಲ್ಲಾಂತ!"

ಚಾಂಗೋ ಮುಗುಳ್ನಗೆ ಬೀರಿದಳು.

"ಹಾಗೆ ನೋಡಿದರೆ ಬೇರೆ ದಿವಸಗಳಿಗಿಂತ ಇವತ್ತು ನನ್ನ ಅದೃಷ್ಟ ಚೆನ್ನಾಗಿತ್ತು. ಕಡೇ ಪಕ್ಷ ಒಂದು ಗುಬ್ಬಚ್ಚಿಯಾದರೂ ಸಿಕ್ಕಿತು. ಇಲ್ಲಾಂದ್ರೆ ಅದಕ್ಕಾಗಿ ಒಂದು ಮೂವತ್ತು ಲೀ ಬೇರೆ ನಡೀಬೇಕಾಗ್ತಿತ್ತು." ಬಹಳ ಉತ್ಸಾಹದಿಂದ ಹೇಳಿದ.

"ಇನ್ನೂ ಸ್ವಲ್ಪ ದೂರ ಹೋಗಬಹುದಾಗಿತ್ತಲ್ಲ?"

"ಹೌದು ಮೇಡಂ ನಾನು ಹಾಗೇ ಮಾಡಬೇಕೆಂದಿದ್ದೆ. ನಾಳೆ ಬೆಳಿಗ್ಗೆ ಬೇಗ ಎದ್ದು ಬಿಡುತ್ತೇನೆ. ನೀವೇನಾದರೂ ಬೇಗ ಎದ್ದರೆ ಒಂದು ಕೂಗು ಹಾಕಿ. ನಾನು ಒಂದೈವತ್ತುಲೀ ಅಷ್ಟು ದೂರಾನಾದರೂ ಹೋಗಿ ಮೊಲಗಳೋ ಅಥವಾ ಗಂಡು ಜಿಂಕೆಗಳೋ ಏನಾದರೂ ಸಿಗಬಹುದಾ ನೋಡ್ತೀನಿ. ಅದು ಅಷ್ಟು ಸುಲಭ ಏನೂ ಅಲ್ಲ. ಆದರೂ........ ನಾನೊಂದು ದೊಡ್ಡ ಹೆಬ್ಬಾವು. ದೊಡ್ಡ ಹಂದಿ ಬೇಟೆಯಾಡಿದ್ದು ನೆನಪು ಇದೆಯೇನು? ಕಪ್ಪು ಕರಡಿಗಳು ನಿಮ್ಮಮ್ಮನ ಮನೆಯ ಮುಂದೆ ಹಾದು ಹೋಗುತ್ತಿದ್ದವು. ಅವುಗಳನ್ನು ಹೊಡಿ ಅಂತ ಎಷ್ಟೋ ಸಲ ನನಗೆ ಹೇಳಿದ್ದುಂಟು."

"ನಿಜವಾಗ್ಲೂ?" ಅವನ್ನೆಲ್ಲ ಚಾಂಗೋ ಮರೆತಿದ್ದ ಹಾಗಿತ್ತು.

"ಯಾರಿಗೆ ಗೊತ್ತಿತ್ತು, ಅವೆಲ್ಲ ಹೀಗೆ ಕಣ್ಮರೆಯಾಗಿ ಬಿಡುತ್ತವೆಂದು? ಯೋಚನೆ ಮಾಡಿದರೆ, ಇನ್ನು ಮುಂದೆ [illegible] ಆಗುತ್ತೆ. ನನಗೇನೂ ಪರವಾಗಿಲ್ಲ. ಪೂಜಾರಿ [illegible] ಆ [illegible] ಕುರಿಯ [illegible] ಹಾಕಿ ಸ್ವರ್ಗಕ್ಕೆ ಹಾರಿ ಬಿಡುತ್ತೇನೆ. ಆದರೆ ಮೊದಲು ನಿನ್ನ ಬಗ್ಗೆ ಏನಾದ್ರೂ ಮಾಡಬೇಕಲ್ಲ...ಅದಕ್ಕೇ ನಾಳೆ ಇನ್ನಷ್ಟು ದೂರ [illegible]."

"ಉಂ!"

ಚಾಂಗೋ ನೀರು ಕುಡಿದಾಗಿತ್ತು. ಮೆಲ್ಲಗೆ ಹಾಗೇ ಒರಗಿ ಕಣ್ಣು ಮುಚ್ಚಿದಳು.

ಸಣ್ಣಗೆ ಉರಿಯುತ್ತಿದ್ದ ದೀಪದ ಬೆಳಕು, ಬಾಡಿದ ಮುಖದ ಮೇಲೆ ಬಿತ್ತು. ಹಚ್ಚಿಕೊಂಡಿದ್ದ ಪೌಡರ್ ಕರಗಿಹೋಗಿತ್ತು. ಅವಳ ಕಣ್ಣುಗಳ ಕೆಳಗೆ ಕಪ್ಪು ಉಂಗುರಗಳಿದ್ದವು. ಅವಳ ಒಂದು ಹುಬ್ಬು ಮತ್ತೊಂದಕ್ಕಿಂತ ದಪ್ಪಗಾಗಿತ್ತು. ಆದರೂ ಅವಳ ತುಟಿ ಬೆಂಕಿಯಷ್ಟು ಕೆಂಪಾಗಿತ್ತು. ಅವಳು ನಗುತ್ತಿರಲಿಲ್ಲವಾದರೂ ಗುಳಿಬಿದ್ದ ಕೆನ್ನೆಗಳನ್ನು ಸೂಕ್ಷ್ಮವಾಗಿ ಕಾಣಬಹುದಾಗಿತ್ತು.

"ಆಹಾ! ಇಲ್ಲ! ಇಂತಹ ಹೆಣ್ಣಿಗೆ ಕೇವಲ ನೂಡಲ್ಸ್ ಮತ್ತು ಕಾಗೆ ಸಾಸ್‌ನಿಂದ ಊಟ ಮಾಡಿಸುವುದು ಸರಿಯೇ!"

ಅವನಿಗೆ ನಾಚಿಕೆ ಎನಿಸಿ ಕೆಂಪಾದ ಯೀ.

೧

ರಾತ್ರಿ ಕಳೆದು ಬೆಳಗಾಯಿತು. ಒಂದು ಕ್ಷಣದಲ್ಲಿಯೇ ಕಣ್ಣು ಬಿಟ್ಟ. ಪಶ್ಚಿಮ ಗೋಡೆ ಮೇಲೆ ವಾಲಿದ ಕಿರಣ ಹೊತ್ತಾಗಿರುವುದನ್ನು ಸೂಚಿಸಿತು. ಚಾಂಗೋಳ ಕಡೆ ನೋಡಿದ. ದೀರ್ಘ ನಿದ್ದೆಯಲ್ಲಿದ್ದಳು. ಸದ್ದಿಲ್ಲದೆ ಚಿರತೆ ಚರ್ಮ ಹೊದಿಸಿದ. ಸೋಫಾದಿಂದ ಇಳಿದು ಬಟ್ಟೆ ಧರಿಸಿದ. ಹೊರಗೆ ಹಜಾರಕ್ಕೆ ಬಂದ. ಮುಖ ತೊಳೆಯುತ್ತಿದ್ದಂತೆ ನೂಕೆಂಗ್‌ಗೆ ಕುದುರೆ ಸಿದ್ಧ ಮಾಡಲು ಹೇಳಿದ.

ಇಷ್ಟೆಲ್ಲ ಮಾಡಬೇಕಾಗಿದ್ದರಿಂದ ಈ ನಡುವೆ ತಿಂಡಿ ತಿನ್ನುವುದನ್ನೇ ಬಿಟ್ಟು ಬಿಟ್ಟಿದ್ದ. ನೂ-ಯಿ ಬೇಯಿಸಿದ ಐದು ರೊಟ್ಟಿ, ಐದು ಈರುಳ್ಳಿ ದಂಟು ಮತ್ತು ಪಾಪ್ರಿಕಾದ ಒಂದು ಪೊಟ್ಟಣವನ್ನು ತನ್ನ ಬೇಟೆ ಚೀಲದಲ್ಲಿ ಇರಿಸಿ ಅದನ್ನು ತನ್ನ ಸೊಂಟಕ್ಕೆ ಗಟ್ಟಿಯಾಗಿ ಸಿಕ್ಕಿಸಿದ. ಜೊತೆಗೆ ಬಿಲ್ಲು ಬಾಣಗಳನ್ನೂ ಸಿಕ್ಕಿಸಿಕೊಂಡ. ತನ್ನ ಬೆಲ್ಟನ್ನು ಬಿಗಿಗೊಳಿಸಿ ಸದ್ದಿಲ್ಲದಂತೆ ಹಜಾರದಿಂದ ಹೊರಗೆ ಹೊರಡುತ್ತ, ಎದುರಾಗಿ ಬಂದ ನೂಕೆಂಗ್‌ಗೆ ಹೇಳಿದ, "ನಾನು ಇವತ್ತು ಬೇಟೆ ಹುಡುಕಿ ಇನ್ನಷ್ಟು ದೂರ ಹೋಗಬೇಕೆಂದಿದ್ದೇನೆ. ಬರುವುದಕ್ಕೆ ಹೊತ್ತಾಗಬಹುದು. ನಿನ್ನ ಯಜಮಾನಿ ಬೆಳಿಗ್ಗೆ ತಿಂಡಿ ಮುಗಿಸಿದ ಮೇಲೆ ಗೆಲುವಾಗಿರುವಾಗ ನೋಡಿಕೊಂಡು ನಾನು ಕ್ಷಮೆ ಕೇಳಿದೆ ಅಂತ ಹೇಳು. ಹಾಗೇನೇ ರಾತ್ರಿ ಊಟಕ್ಕೆ ನನಗಾಗಿ ಕಾಯಲು ಹೇಳು. ನಾನು ಕ್ಷಮೆ ಕೇಳಿದ್ದನ್ನು ಹೇಳೋದು ಮರೆಯಬೇಡ!"

ವೇಗವಾಗಿ ಹೆಜ್ಜೆ ಹಾಕುತ್ತ ನಡೆದು ಕುದುರೆ ಬೆನ್ನಿನ ಮೇಲೆ ಜಿಗಿದು ಕುಳಿತು. ತನ್ನೆರಡೂ ಬದಿಯಲ್ಲಿ ಸಾಲಾಗಿ ನಿಂತಿದ್ದ ಸೇವಕರನ್ನು ಹಾದು ಮಿಂಚಿನ ವೇಗದಲ್ಲಿ ಊರನ್ನು ದಾಟಿದ. ದಿನ ನಿತ್ಯ ಹಾದು ಹೋಗುತ್ತಿದ್ದ ಕಾವೊಲಿಂಗ್ ಗದ್ದೆಗಳು

ಕಾಣಿಸಿದವು. ಅಲ್ಲಿ ಏನೂ ಬೆಳೆಯದೆ ನಿರುಪಯುಕ್ತವಾಗಿದ್ದುದನ್ನು ತಿಳಿದಿದ್ದ ಕಾರಣ ಅವನು ಆ ಕಡೆ ಲಕ್ಷ್ಯ ಕೊಡಲಿಲ್ಲ. ಒಂದೆರಡು ಬಾರಿ ಚಾಟಿ ಚುರುಕು ಮುಟ್ಟಿಸಿ ಒಂದೇ ಸಮನೆ ಸವಾರಿ ಮಾಡುತ್ತ ಅರವತ್ತು 'ಲೀ' ಗಳಷ್ಟು ದೂರ ಬಂದು ಬಿಟ್ಟ. ಮುಂದೆ ದಟ್ಟವಾದ ಕಾಡಿತ್ತು. ಅವನ ಕುದುರೆ ದಣಿದು ಏದುಸಿರು ಬಿಡುತ್ತಿದ್ದುದರಿಂದ ಸ್ವಲ್ಪ ನಿಧಾನಿಸಿದ. ಇನ್ನೊಂದು ಹತ್ತು ಲೀ. ದೂರ ಸಾಗಿ ಕಾಡಿನೊಳಗೆ ಪ್ರವೇಶಿಸಿದ. ಆದರೆ ಅಲ್ಲಿ ಅವನಿಗೆ ಕಂಡದ್ದು ಮಿಡತೆ, ಕಣಜ ಮತ್ತು ಚಿಟ್ಟೆಗಳು ಮಾತ್ರ, ಒಂದು ಹಕ್ಕಿಯ ಸುಳಿವಾಗಲೀ ಪ್ರಾಣಿಯ ಸುಳಿವಾಗಲೀ ಸಿಗಲಿಲ್ಲ. ತಾನೆಂದೂ ಬಾರದಿದ್ದ ಪ್ರದೇಶಕ್ಕೆ ಬಹಳ ಆಸೆಗಳನ್ನಿಟ್ಟುಕೊಂಡು ಬಂದಿದ್ದ. ಒಂದೆರಡು ನರಿಗಳೋ, ಮೊಲಗಳೋ ಸಿಗಬಹುದೆಂದು ಎಣಿಸಿದ್ದ. ಆದರೆ ಈಗ ಅದೆಲ್ಲವೂ ವ್ಯರ್ಥ ಕನಸುಗಳು ಎನಿಸಿದವು. ಇನ್ನೂ ಸ್ವಲ್ಪ ದೂರು ನಡೆದು, ಇನ್ನೊಂದು ಕಡೆ ಕಾವೋಲಿಂಗ್ ಗದ್ದೆಗಳನ್ನು ನೋಡಿದ. ಅದರ ನಡುವೆ ದೂರದಲ್ಲಿ ಒಂದೆರಡು ಮಣ್ಣಿನ ಗುಡಿಸಲು ಕಾಣಿಸಿದವು. ಗಾಳಿ ಆಹ್ಲಾದಕರವಾಗಿತ್ತು. ಸೂರ್ಯ ಸ್ವಲ್ಪ ಬೆಚ್ಚಗಿದ್ದ. ಕಾಗೆಯಾಗಲೀ, ಗುಬ್ಬಚ್ಚಿಯಾಗಲಿ ಕೂಗಿದ ಸದ್ದು ಕೇಳಿಸಲಿಲ್ಲ.

"ಹಾಳಾಗಿ ಹೋಗಲಿ." ಮನಸ್ಸನ್ನು ಹಗುರಗೊಳಿಸಿಕೊಳ್ಳಲು ಗೊಣಗಿಕೊಂಡ.

ಒಂದು ಹತ್ತೆಂಟು ಹೆಜ್ಜೆ ಮುಂದೆ ಹೋದದ್ದೇ, ಸಂತೋಷದಿಂದ ಅವನ ಮನಸ್ಸು ಕೆನೆಯಿತು. ಸಮತಲ ನೆಲದ ಮೇಲೆ ದೂರದಲ್ಲಿದ್ದ ಆ ಮಣ್ಣಿನ ಗುಡಿಸಲು. ಮುಂದೆ ಒಂದು ಕೋಳಿಯನ್ನು ನೋಡಿದ. ಒಂದೊಂದು ಹೆಜ್ಜೆಗೂ ಅದು ನಿಂತು ಕುಕ್ಕಿ ಆಯ್ದುಕೊಳ್ಳುತ್ತಿದ್ದುದನ್ನು ನೋಡಿದರೆ ದೊಡ್ಡ ಪಾರಿವಾಳದಂತೆ ಕಾಣಿಸುತ್ತಿತ್ತು. ಬಿಲ್ಲನ್ನು ತೆಗೆದು ಬಾಣ ಹೂಡಿ ಹಗ್ಗ ಎಳೆದು ಬಿಟ್ಟದ್ದೇ ಬಾಣ ಉಲ್ಕಾಪಾತದಂತೆ ಬಿಲ್ಲಿನಿಂದ ಹೊರಟಿತು. ತನ್ನ ಬಾಣ ಎಂದೂ ಗುರಿ ತಪ್ಪಿದ್ದಿಲ್ಲವೆಂಬ ಖಾತರಿಯಿಂದ ಬಾಣ ಬಿಟ್ಟ ಬೆನ್ನಿಗೆ ವೇಗವಾಗಿ ಹೆಜ್ಜೆ ಹಾಕಿ ತನ್ನ ಬೇಟೆಯನ್ನು ತೆಗೆದುಕೊಂಡು ಬರಬೇಕೆಂದು ಹೊರಟ. ಅವನು ಆ ಜಾಗ ತಲುಪಿದ್ದೇ ವಯಸ್ಸಾದ ಹೆಂಗಸೊಬ್ಬಳು ಕಾಣಿಸ್ತ ಕುಮಾರನ ಕಡೆಗೆ ಬರತೊಡಗಿದಳು. ಅವನು ಹೊಡೆದು ಬೀಳಿಸಿದ್ದ ದೊಡ್ಡ ಪಾರಿವಾಳವನ್ನು ಎತ್ತಿಕೊಂಡು ಗದರಿಸಿ ಕೇಳಿದಳು. "ಯಾರೋ ನೀನು? ಯಾಕೋ ನನ್ನ ಮೊಟ್ಟೆ ಇಡುವ ಕೋಳಿಯನ್ನು ಕೊಂದೆ? ನಿನಗೆ ಮಾಡೋಕೆ ಕೆಲಸ ಇಲ್ವ?"

ಬಾಣ ಎದೆ ಬಡಿದ ರಭಸಕ್ಕೆ ಸ್ವಲ್ಪ ಚೇತರಿಸಿಕೊಂಡನು. "ಏನು ಅದು ಕೋಳಿಯಾ?" ತಡವರಿಸಿದ ಕೇಳಿದ "ನಾನು ಅದನ್ನು ಯಾವುದೋ ಕಾಡು ಪಾರಿವಾಳ ಎಂದುಕೊಂಡಿದ್ದೆ."

"ನಿನಗೆ ಕಣ್ಣು ಕಾಣಿಸೋದಿಲ್ವೇನು? ಕೋಳಿಗೂ ಪಾರಿವಾಳಕ್ಕೂ ವ್ಯತ್ಯಾಸ ಗೊತ್ತಾಗೋದಿಲ್ವೇನು?"

ಹೌದು ಮೇಡಂ. ಹೋದ ವರ್ಷ ನಲವತ್ತೈದಕ್ಕೆ ಬಂತು. "ಮುದಿ ಮೂರ್ಖನಿಗಿಂತ ಬೇರೆ ಮೂರ್ಖ ಇರಲಾರ. ಕೋಳೀನ ಕಾಡು ಪಾರಿವಾಳ ಅಂದ್ಕೊಂಡ್ರೆ, ಏನಂತ ತಿಳ್ಕೋಬೇಕು? ಇಷ್ಟಕ್ಕೂ ನೀನು ಯಾರು?

"ನಾನು ಯೀ" ಇದನ್ನು ಹೇಳುತ್ತಾ ಗಮನಿಸಿದ ತನ್ನ ಬಾಣ ನೇರವಾಗಿ ಕೋಳಿಯ ಎದೆ ಇರಿದು, ಕೂಡಲೇ ಸಾಯಿಸಿದೆ. ಕುದುರೆ ಇಳಿದು ಹೇಳುತ್ತಿದ್ದಂತೆ ಅವನ ಧ್ವನಿ ಕ್ಷೀಣವಾಯಿತು.

"ಯೀ! ಆ ಹೆಸರನ್ನು ಎಂದೂ ಕೇಳಿಯೇ ಇಲ್ಲ!" ಅವನ ಮುಖವನ್ನು ಸೂಕ್ಷ್ಮವಾಗಿ ಗಮನಿಸಿದಳು.

"ನನ್ನ ಹೆಸರು ತಿಳಿದವರಿದ್ದಾರೆ. ಅದರಲ್ಲೂ ಸಜ್ಜನ ದೊರೆ ಯೋ ನ ಕಾಲದಲ್ಲಿ ನಾನು ಕಾಡು ಹಂದಿ, ಹಾವುಗಳನ್ನು ಬೇಟೆಯಾಡುತ್ತಿದ್ದೆ."

"ಲೋ ಸುಳ್ಳುಗಾರ! ಹಂದಿಗಳನ್ನು, ಹಾವುಗಳನ್ನು ಬೇಟೆಯಾಡುತ್ತಿದ್ದವರು ಫೆಂಗ್‌ಮೆಂಗ್ ಮತ್ತು ಇತರರು. ಬಹುಶಃ ಅವರಿಗೆ ನೀನು ಸಹಾಯ ಮಾಡಿರಬಹುದು. ಅದಕ್ಕೇಂತ ಎಲ್ಲಾ ನೀನೇ ಮಾಡಿದ್ದೂಂತ ಹೊಗಳಿಕೊಳ್ಳೋದು ಸರೀನಾ? ನಾಚಿಕೆಗೇಡು....."

"ಯಾಕೆ ಮೇಡಂ, ಆ ಫೆಂಗ್‌ಮೆಂಗ್, ಕಳೆದ ಕೆಲವು ವರ್ಷಗಳಿಂದ ನನ್ನಲ್ಲಿಗೇ ಬಂದು ಕಲಿಯಲು ಶುರುಮಾಡಿದ್ದ. ನಾವಿಬ್ಬರೂ ಒಟ್ಟಿಗೆ ಎಂದೂ ಕೆಲಸ ಮಾಡಲಿಲ್ಲ. ಅವನೆಂದೂ ನನ್ನ ಜೊತೆ ಭಾಗವಹಿಸಲಿಲ್ಲ.

"ಸುಳ್ಳುಗಾರ! ಎಲ್ಲರೂ ಹಾಗೇಂತಲೇ ಹೇಳ್ತಾರೆ. ತಿಂಗಳಿಗೆ ನಾಲ್ಕೈದು ಸಲವಾದರೂ ಹಾಗಂತ ಹೇಳ್ತಾರೆ."

"ಸರಿ ಬಿಡು. ಈಗ ನೇರವಾಗಿ ಮಾತಿಗೆ ಬರೋಣ. ಈಗ ಈ ಕೋಳಿ ವಿಷಯ ಏನು?"

"ಅದಕ್ಕೆ ಪರಿಹಾರ ಕೊಡಬೇಕು. ಅದು ನನಗೆ ತೀರಾ ಬೇಕಾದ್ದು. ಪ್ರತಿದಿನಾ ನನಗೆ ಒಂದೊಂದು ಮೊಟ್ಟೆ ಕೊಡ್ತಿತ್ತು. ಅದಕ್ಕಾಗಿ, ಅದರ ಬದಲಿಗೆ ಎರಡು ಗುದ್ದಲಿ ಮತ್ತು ಮೂರು ಕದಿರಣಿಗೆ (Spindle) ಕೊಡಬೇಕು."

"ನೋಡಿ ಮೇಡಂ. ನಾನು ನೆಲ ಊಳೋದು ಇಲ್ಲ. ನೂಲು ತೆಗೆಯೋದೂ ಇಲ್ಲ. ಆದ್ದರಿಂದ ಗುದ್ದಲಿಗಳನ್ನು ಕದಿರಣಿಗೆಗಳನ್ನು ಎಲ್ಲಿಂದ ತರಲಿ? ಈಗ ನನ್ನ ಹತ್ತಿರ ಹಣವೂ ಇಲ್ಲ. ಬೇಯಿಸಿದ ಐದು, ಬಿಳಿ ಹಿಟ್ಟಿಂದ ಮಾಡಿದ ರೊಟ್ಟಿಗಳಿವೆ. ಕೋಳೀಗೆ ಬದಲಾಗಿ ರೊಟ್ಟಿಗಳನ್ನು ಈರುಳ್ಳಿ ದಂಟುಗಳನ್ನು ಪಾಪ್ರಿಕಾ ಪೊಟ್ಟಣವನ್ನೂ ಕೊಡ್ತೇನೆ. ಏನು ಹೇಳ್ತಿ?"

ಒಂದು ಕೈಯಿಂದ ಚೀಲದೊಳಗಿನ ರೊಟ್ಟಿಗಳನ್ನು ತೆಗೆಯುತ್ತ, ಮತ್ತೊಂದು ಕೈಯಲ್ಲಿ ಕೋಳಿ ಹಿಡಿದ.

ಬಿಳಿ ಹಿಟ್ಟಿನಿಂದ ಮಾಡಿದ ರೊಟ್ಟಿಗಳನ್ನು ತೆಗೆದುಕೊಳ್ಳಲು ಮುದುಕಿಗೆ ಅಭ್ಯಂತರವಿರಲಿಲ್ಲ. ಆದರೆ ಹದಿನೈದು ರೊಟ್ಟಿ ಬೇಕೆಂದು ಹಠ ಹಿಡಿದಳು. ಕಡೆಗೆ ಚೌಕಾಶಿ ಮಾಡಿ ಹತ್ತಕ್ಕೆ ಒಪ್ಪಿಸಲಾಯಿತು. ಯೀ ಹೆಚ್ಚೆಂದರೆ ನಾಳೆ ಮಧ್ಯಾಹ್ನದ ಒಳಗೆ ಉಳಿದವುಗಳನ್ನು ತಂದುಕೊಡುವುದಾಗಿ ಭರವಸೆ ಕೊಟ್ಟ. ತನ್ನ ಬಾಣವನ್ನು ನಂಬಿಕೆಗಾಗಿ ಅವಳಲ್ಲಿಯೇ ಇರಿಸಿದ. ಈಗ ಅವನಿಗೆ ಸಮಾಧಾನವಾಗಿತ್ತು. ಸತ್ತ ಕೋಳಿಯನ್ನು ಚೀಲದೊಳಕ್ಕೆ ತುರುಕಿದ. ಕುದುರೆ ಬೆನ್ನೇರಿ ಕುಳಿತು ಮನೆ ಕಡೆ ದೌಡಾಯಿಸಿದ. ಹಸಿದು ಕಂಗಾಲಾಗಿದ್ದರೂ ಸಂತೋಷವಾಗಿದ್ದ. ಕೋಳಿ ಸಾರು ತಿಂದು ಒಂದು ವರ್ಷಕ್ಕೂ ಹೆಚ್ಚಾಗಿತ್ತು. ಕಾಡಿಂದ ಹೊರಗೆ ಬಂದಾಗ ಮಧ್ಯಾಹ್ನವಾಗಿತ್ತು. ಮನೆಗೆ ಬೇಗ ಸೇರಬೇಕೆಂಬ ತವಕದಲ್ಲಿ ಒಂದೆರಡು ಚಾಟಿ ಏಟು ಬಿಟ್ಟ. ಅವನ ಕುದುರೆ ಸಾಕಷ್ಟು ದಣಿದಿತ್ತು. ಹೀಗಾಗಿ ಮುಸ್ಸಂಜೆಯಾಗುವವರೆಗೂ ಕಾವೋಲಿಂಗ್ ಗದ್ದೆಗಳನ್ನು ತಲುಪಲು ಸಾಧ್ಯವಾಗಲಿಲ್ಲ. ಸ್ವಲ್ಪ ದೂರದಲ್ಲಿ ಮನುಷ್ಯಾಕೃತಿಯ ನೆರಳು ಕಾಣಿಸಿತು. ಒಂದೇ ಸಲಕ್ಕೆ ಬಾಣವೊಂದು ಅವನೆಡೆಗೆ ಗಾಳಿಯಲ್ಲಿ ಹಾದು ಬಂತು.

ಹೆಜ್ಜೆ ಹಾಕುತ್ತಿದ್ದ ಕುದುರೆಗೆ ಕಡಿವಾಣ ಹಾಕದೆ, ಯೀ ತನ್ನ ಬಿಲ್ಲಿಗೆ ಬಾಣವೇರಿಸಿ ಬಿಟ್ಟ. "ಝಂಗ್"- ಸದ್ದಿನೊಡನೆ ಎರಡೂ ಬಾಣಗಳೂ ಡಿಕ್ಕಿ ಹೊಡೆದು ಕಿಡಿಗಳು ಹಾರಿದವು. ಎರಡೂ ಕಡೆಯಿಂದ ಹೂಡಿದ ಬಾಣಗಳು ತಲೆ ಕೆಳಗಾದ V ಅಕ್ಷರದಂತೆ ಪರಸ್ಪರ ಹಿಡಿದು ನೆಲಕ್ಕುರುಳುವ ಮೊದಲು ಕಾಣಿಸಿತು. ಎರಡೂ ಕಡೆಗಳಿಂದ ಬಾಣ ಪ್ರಯೋಗ ನಡೆದು ಬಾಣಗಳು ಡಿಕ್ಕಿ ಹೊಡೆದು ಕೆಳಗುರುಳುತ್ತಿದ್ದವು. ಇದೇ ರೀತಿ ಒಂಬತ್ತು ಸಲ ನಡೆಯಿತು. ಯೀ ನ ಬತ್ತಳಿಕೆ ಖಾಲಿಯಾಗಿತ್ತು. ಈಗ ತನ್ನೆದುರು ಫೆಂಗ್‌ಮೆಂಗ್ ನಿಂತು ತನ್ನ ಕುತ್ತಿಗೆಗೆ ಗುರಿಯಿಟ್ಟು ಹೆಮ್ಮೆಯಿಂದ ಬೀಗುತ್ತಿದ್ದುದನ್ನು ನೋಡಿದ.

"ಓಹೋ, ಓಗೋ" ಯೀ ಯೋಚಿಸಿದ. ಇಲ್ಲೇ ಸಮುದ್ರ ತೀರದಲ್ಲಿ ಅಲೆದಾಡುತ್ತ ಮೀನು ಹಿಡಿಯುತ್ತಿದ್ದು. ಈಗ ಇಂಥ ದರಿದ್ರ ಕೆಲಸ ಮಾಡಲು ಹೊರಟಿರಬೇಕು. ಆ ಮುದುಕಿ ಆಗ ಮಾತಾಡಿದ್ದು ಈಗ ಅರ್ಥ ಆಗ್ತಿದೆ....."

ಮಿಂಚಿನಂತೆ. ಚಂದ್ರನ ಆಕಾರದಲ್ಲಿದ್ದ ಬಿಲ್ಲಿನಿಂದ ಹೊರಟ ಬಾಣ ಯೀನ ಕುತ್ತಿಗೆಯೆಡೆಗೆ ಬರುತ್ತಿತ್ತು. ಗುರಿ ತಪ್ಪಿ, ಬಾಣ ಯೀನ ಬಾಯಿಯೆಡೆಗೆ ಬಂದು ತಗುಲಿತು. ಯೀ ಒಡನೆ ನಿಶ್ಚಲವಾಗಿ ನಿಂತವನು, ನೆಲಕ್ಕುರುಳಿದ. ಅವನ ಕುದುರೆ ಒಬ್ಬಂಟಿಯಾಗಿ ನಿಂತಿತು.

ಯೀ ಸತ್ತನೆಂದು ಭಾವಿಸಿದ ಫೆಂಗ್‌ಮೆಂಗ್ ಮೆಲ್ಲನೆ ಅಲ್ಲಿಂದ ಜಾರಿದ. [illegible] ಗರ್ವ ಪಡುತ್ತ, [illegible] ಹೊರಟ.

ಅವನು ದಿಟ್ಟಿಸುತ್ತ ನಿಂತಿರುವಾಗ ಯೀ ಕಣ್ಣು ಬಿಟ್ಟು ಎದ್ದು ಕುಳಿತ.

"ನೂರು ಸಲ ನನ್ನ ಹತ್ತಿರ ಬಂದಿದ್ದರೂ ನೀನಿನ್ನೂ ಏನನ್ನೂ ಕಲಿತಿಲ್ಲ." ಬಾಣವನ್ನು ಹೊರಕ್ಕೆ ಉಗುಳಿ ನಕ್ಕ. "ಬಾಣವನ್ನು ಅಗಿಯುವ ನನ್ನ ಕಲೆಯ ಪರಿಚಯ ನಿನಗಿಲ್ಲವೇನು? ಛೆ! ಛೆ!........ ಬಹಳ ಕೆಟ್ಟದಾಯ್ತು! ನಿನ್ನ ಈ ತಂತ್ರಗಳಿಂದ ನನಗೇನೂ ಪ್ರಯೋಜನವಿಲ್ಲ. ಕಲಿತ ಬಾಕ್ಸಿಂಗ್‌ನಿಂದ ಬಾಕ್ಸಿಂಗ್ ಕಲಿಸಿದ ಗುರುವನ್ನು ಕೊಲ್ಲುವುದಕ್ಕೆ ಆಗೊಲ್ಲ. ನಿನ್ನದೇ ಸ್ವತಂತ್ರ ರೀತಿಯನ್ನು ಕಲೀಬೇಕು."

"ನಿನ್ನಿಂದ ಕಲಿತ ಪಾಠದಿಂದಲೇ ನಿನಗೆ ಪಾಠ ಕಲಿಸಬೇಕೆಂದಿದ್ದೆ" ಗೊಣಗುಟ್ಟಿದ, ವಿಜಯಿಯಾಗಿದ್ದ ಫೆಂಗ್‌ಮೆಂಗ್!

ತೃಪ್ತಿಯಾಗುವಷ್ಟು ನಗುತ್ತ ಎದ್ದು ನಿಂತ. "ಯಾವಾಗಲೂ ಏನಾದರೂ ಹೇಳಿ, ಕೇಳುವವರನ್ನು ಬೇಸ್ತು ಬೀಳಿಸಬೇಕೆಂದುಕೊಳ್ಳುತ್ತೀಯ. ಆ ಮುದುಕಿ ಅಂತಹವರನ್ನು ಮರುಳು ಮಾಡಬಹುದೇ ಹೊರತು, ನನ್ನಂಥವರನ್ನಲ್ಲ. ಯಾವಾಗಲೂ ಬೇಟೆಯಾಡಿದ್ದೇನೆಯೇ ಹೊರತಾಗಿ, ನಿನ್ನ ಹಾಗೆ ದಾರಿಗಳ್ಳನಾಗಲಿಲ್ಲ.,....."

ಚೀಲದಲ್ಲಿದ್ದ ಕೋಳಿ ನಜ್ಜುಗುಜ್ಜಾಗದೆ ಇದ್ದುದನ್ನು ನೋಡಿ ಸಮಾಧಾನ ಪಟ್ಟುಕೊಂಡ. ಕುದುರೆ ಹತ್ತಿ ದೌಡಾಯಿಸಿದ.

"ಹಾಳಾಗಿ ಹೋಗು".....ಶಾಪವೊಂದು ಹಿಂಬಾಲಿಸಿತು.

"ಅವನು ಇಷ್ಟು ಹಾಳಾಗಿ ಹೋಗಬೇಕಾ? ಇಷ್ಟು ಚಿಕ್ಕವನು. ಹೀಗೆ ಶಾಪ ಗೀಪ ಹಾಕೋದು ನೋಡು. ಆ ಮುದುಕಿ ಅವನನ್ನು ನಂಬಿದ್ದು ಆಶ್ಚರ್ಯವೇನಲ್ಲ." ದುಃಖದಿಂದ ತಲೆಯಾಡಿಸುತ್ತಾ ಮುಂದೆ ಸಾಗಿದ.

೨

ಕಾವೋಲಿಂಗ್ ಗದ್ದೆಗಳ ಕೊನೆಗೆ ಬರುವಷ್ಟು ಹೊತ್ತಿಗೆ ರಾತ್ರಿಯಾಗಿತ್ತು. ದಟ್ಟ ನೀಲಿ ಆಕಾಶದಲ್ಲಿ ಕಾಣಿಸಿಕೊಂಡವು. ಪಶ್ಚಿಮ ದಿಕ್ಕಿನಲ್ಲಿ ಸಂಜೆ ನಕ್ಷತ್ರಗಳು ಕಾಣಿಸಿಕೊಂಡವು. ಪಶ್ಚಿಮ ದಿಕ್ಕಿನಲ್ಲಿ ಸಂಜೆ ನಕ್ಷತ್ರ ಅಪರೂಪ ಕಾಂತಿಯಿಂದ ಹೊಳೆಯುತ್ತಿತ್ತು. ಕುದುರೆ ಕಾವೋಲಿಂಗ್ ಗದ್ದೆಗಳ ನಡುವಿನ ಹಾದಿ ಹಿಡಿದು ಹೆಜ್ಜೆ ಹಾಕುತ್ತಿತ್ತು. ಅದು ಬಹಳ ದಣಿದಿದ್ದರಿಂದ ಎಂದಿಗಿಂತ ನಿಧಾನವಾಗಿ ಮುಂದೆ ಸಾಗುತ್ತಿತ್ತು. ಅದೃಷ್ಟವಶಾತ್ ಆಕಾಶದಲ್ಲಿ ಚಂದ್ರ ಬೆಳ್ಳಿ ಬೆಳಕನ್ನು ಚೆಲ್ಲುತ್ತಿತ್ತು.

"ಹಾಳಾಗಿ ಹೋಗಲಿ!" ಯೀ ನ ಹೊಟ್ಟೆಯಲ್ಲಿ ಗುಳು ಗುಳು ಆರಂಭವಾಯಿತು. ಸಹನೆ ಕಳೆದುಕೊಂಡ. ಎಷ್ಟು ಕಷ್ಟಪಟ್ಟು ಜೀವನ ನಡೆಸುವುದಕ್ಕೆ ಪ್ರಯತ್ನಿಸಿದರೆ, ಅಷ್ಟೂ ಕಷ್ಟವೇ ಹೆಚ್ಚಾಗುತ್ತಿದೆ. ಆಗಬಾರದ್ದಲ್ಲ ಆಗಿ ಸುಮ್ಮನೆ ವ್ಯರ್ಥವಾಗುತ್ತಿದೆ."

ಮತ್ತೊಮ್ಮೆ ಕುದುರೆಗೆ ಚುರುಕು ಮುಟ್ಟಿಸಿದ. ಕುದುರೆ ಸುಮ್ಮನೆ ತಿರುಗಿ ನೋಡಿ. ಮೊದಲಿನಷ್ಟೇ ನಿಧಾನವಾಗಿ ಸಾಗಿತು.

"ತುಂಬಾ ಹೊತ್ತಾಗಿದೆ. ಚಾಂಗೋ ಖಂಡಿತ ಕೋಪ ಮಾಡಿಕೊಂಡು ಇರ್ತಾಳೆ ಎಂದು ಯೋಚಿಸಿದ. ಸಿಟ್ಟಿಂದ ಎಗರಿ ಬೀಳ್ತಾಳೆ. ಅಬ್ಬ ಸದ್ಯ ಈ ಕೋಳೀಯಾದರೂ ಇದೆಯಲ್ಲ ಸಮಾಧಾನ ಪಡಿಸೋಕೆ! ನಾನು ಹೇಳ್ತೀನೆ. "ಮೇಡಂ ನಾನು ನಿನಗಾಗಿ ಇದನ್ನು ತರೋಕೇಂತ ಇನ್ನೂರು ಲೀ ಗಳಷ್ಟು ದೂರ ಕ್ರಮಿಸಿದೆ....." ಬೇಡ ಯಾಕೋ ಚೆನ್ನಾಗಿಲ್ಲ. ತುಂಬ ಹೊಗಳಿಕೊಂಡ ಹಾಗೆ ಅನ್ನಿಸುತ್ತೆ.

ಮುಂದೆ ದೀಪಗಳು ಕಾಣಿಸಿದ್ದೇ ಅವನ ಚಿಂತೆ ದೂರವಾಗಿ ಸಂತೋಷವಾಯಿತು. ಯಾವುದೇ ಪ್ರಚೋದನೆ ಇಲ್ಲದೆ ಕುದುರೆ ನಾಗಾಲೋಟದಿಂದ ಸಾಗಿತು. ದುಂಡನೆಯ ಮಂಜು ಬಿಳುಪಿನ ಚಂದ್ರ ತನ್ನ ಮುಂದಿದ್ದ ದಾರಿಯನ್ನು ಬೆಳಗಿದ. ತಣ್ಣನೆಯ ಗಾಳಿ ಅವನ ಕೆನ್ನೆಗಳಿಗ ತಂಪು ನೀಡಿತು. ದೊಡ್ಡ ಬೇಟೆಯಿಂದ ಮನೆಗೆ ಹಿಂತಿರುಗುವುದಕ್ಕಿಂತ ಇದು ಹಿತವೆನಿಸಿತು."

ಕುದುರೆ ತನಗೆ ತಾನೇ ಕಸದ ರಾಶಿಯ ಪಕ್ಕದಲ್ಲಿ ನಿಂತುಕೊಂಡಿತು. ಯೀ ಒಮ್ಮೆ ಕಣ್ಣು ಹಾಯಿಸಿದ. ಏನೋ ವ್ಯತ್ಯಾಸವಾದಂತೆ ಕಾಣಿಸಿತು. ಇಡೀ ಮನೆ ಅಸ್ತವ್ಯಸ್ತವಾದಂತಿತ್ತು. ಚಾಪೋ ಘೂ ಮಾತ್ರವೇ ಅವನನ್ನು ಸ್ವಾಗತಿಸಲು ಹೊರಗೆ ಬಂದ.

"ಏನಾಯ್ತು? ವ್ಯಾಂಗ್ ಷೆಂಗ್ ಎಲ್ಲಿ?" ಅವನು ಕೇಳಿದ.

"ಯಜಮಾನಿಯನ್ನು ಹುಡುಕಿಕೊಂಡು ಯಾವ್ದೋ ಮನೆಗೆ ಹೋಗಿದ್ದಾನೆ."

"ಏನು? ನಿನ್ನ ಯಜಮಾನಿ ಯಾವ್ದೋ ಮನೆಗೆ ಹೋಗಿದ್ದಾಳೆಯೇ? [illegible] ತಿಳಿಯಬೇಕೆನ್ನುವುದನ್ನೂ ಮರೆತು ದಿಗ್ಭ್ರಾಂತನಾಗಿದ್ದ.

"ಹೌದು ಸ್ವಾಮಿ" ಹೇಳುತ್ತಾ ಅವನಿಂದ ಜೀನು ಮತ್ತು ಚಾಟಿಯನ್ನು ತೆಗೆದುಕೊಂಡ.

[illegible] ಕುದುರೆಯಿಂದ ಇಳಿದು ಮನೆಯ ಹೊಸ್ತಿಲು ದಾಟುವ ಮುನ್ನ ಏನನ್ನೋ ಕೇಳಬೇಕೆಂದುಕೊಂಡು ತಿರುಗಿದ.

"[illegible] ಹೋಗಿಲ್ಲ ಅಂತ [illegible]"

"[illegible]"

[illegible]

ಆಶ್ಚರ್ಯದಿಂದ ಗಟ್ಟಿಯಾಗಿ ಅಬ್ಬರಿಸಿದ. "ಏನು ನೀವೆಲ್ಲ ಇಲ್ಲೇ ಇದ್ದೀರಾ? ನಿಮ್ಮ ಯಜಮಾನಿ ಒಬ್ಬಳೇ ಯಾವೋ ಮನೆಗೆ ಎಂದೂ ಹೋಗೋದಿಲ್ಲ."

ಅವರೆಲ್ಲ ಮೌನವಾಗಿ ಅವನತ್ತ ನೋಡಿದರು. ನಂತರ ಅವನಿಂದ ಬಿಲ್ಲು, ಬಾಣ, ಚೀಲಗಳನ್ನು ಕೋಳಿಯ ಸಹಿತವಾಗಿ ತೆಗೆದುಕೊಂಡರು. ಒಂದು ಕ್ಷಣ ಯೀಗೆ ಭಯವಾಯಿತು. ಒಂದು ವೇಳೆ ಚಾಂಗೋ ಏನಾದರೂ ಕೋಪದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರೆ? ನೂಕೆಂಗ್‌ನನ್ನು ಚಾವೋ ಫೂ ಬಳಿಗೆ ಕಳಿಸಿ ಹಿಂದೆ ಇದ್ದ ಕೊಳ ಮತ್ತು ಮರಗಳ ನಡುವೆ ಹುಡುಕಲು ಹೇಳಿದ. ಕೋಣೆ ಒಳಗೆ ಬಂದಾಗ, ಬಹುಶಃ ತನ್ನ ಊಹೆ ತಪ್ಪಿದ್ದರೂ ಇರಬಹುದೆನಿಸಿತು. ಕೊಠಡಿಯೆಲ್ಲ ಅಸ್ತವ್ಯಸ್ತವಾಗಿತ್ತು. ಡ್ರಾಯರ್‌ಗಳೆಲ್ಲ ತೆರೆದಿದ್ದವು. ಹಾಸಿಗೆ ಹಿಂದೆ ಒಮ್ಮೆ ಕಣ್ಣು ಹಾಯಿಸಿದಾಗ ಆಭರಣದ ಪೆಟ್ಟಿಗೆ ಮಾಯವಾಗಿರುವುದು ಕಾಣಿಸಿತು. ಕೊರೆವ ತಣ್ಣನೆಯ ನೀರಿನಲ್ಲಿ ಮುಳುಗಿದಂತೆನಿಸಿತು. ಚಿನ್ನ, ಮುತ್ತುಗಳು ಅವನಿಗೆ ಅಷ್ಟಾಗಿ ಬೇಕಾಗಿರಲಿಲ್ಲ. ಆದರೆ ಪೂಜಾರಿಯೊಬ್ಬ ಕೊಟ್ಟಿದ್ದ ಸಿದ್ಧರಸ ಅದೇ ಪೆಟ್ಟಿಗೆಯಲ್ಲಿತ್ತು.

ಒಂದೆರಡು ಸಲ ಆ ಕೋಣೆಯಲ್ಲಿ ಅತ್ತಿಂದಿತ್ತ ಓಡಾಡಿದ ಮೇಲೆ ಬಾಗಿಲಲ್ಲಿ ವ್ಯಾಂಗ್‌ಷೆಂಗ್ ನಿಂತಿರುವುದು ಕಾಣಿಸಿತು.

"ಸ್ವಾಮಿ, ಒಡತಿ ಯಾವೋರ ಮನೆಯಲ್ಲಿ ಇಲ್ಲ. ಅವರು ಈ ದಿನ ಮಾಹೆಜೊಂಗ್ ಆಟ ಆಡುತ್ತಿಲ್ಲ."

ಯೀ ಅವನ ಕಡೆ ನೋಡಿ ಸುಮ್ಮನಾದ. ವ್ಯಾಂಗ್‌ಷೆಂಗ್ ಅಲ್ಲಿಂದ ಹೊರಟ.

"ನೀವು ನನ್ನನ್ನು ಕರೆದಿರಾ ಸ್ವಾಮಿ?" ಚಾವೋ ಫೂ ಒಳಗೆ ಬರುತ್ತಾ ಕೇಳಿದ.

ಯೀ, ಇಲ್ಲ ಎಂಬಂತೆ ತಲೆಯಾಡಿಸಿ, ಹೋಗಲು ಕೈಯಿಂದ ಸನ್ನೆ ಮಾಡಿದ.

ಕೋಣೆ ಒಳಗೆ ಓಡಾಡಿ ಓಡಾಡಿ ಕಡೆಗೆ ಹಜಾರಕ್ಕೆ ಬಂದು ಕುಳಿತುಕೊಂಡ. ತಲೆ ಎತ್ತಿ ಎದುರಿಗೆ ಗೋಡೆ ಮೇಲಿದ್ದ ಕುಂಕುಮ ಬಣ್ಣದ ಬಿಲ್ಲು ಬಾಣ, ಕಪ್ಪು ಬಿಲ್ಲು ಬಾಣಗಳನ್ನು, ಡೊಂಕು ಡೊಂಕಾದ ಬಿಲ್ಲು ಬಾಣಗಳನ್ನು, ಕತ್ತಿ, ಬಾಕುಗಳನ್ನು ನೋಡಿದ. ಸ್ವಲ್ಪ ಯೋಚಿಸಿದ ನಂತರ ಸ್ತಬ್ಧರಾಗಿ, ನಿಶ್ಚಲರಾಗಿ ನಿಂತಿದ್ದ ಸೇವಕಿಯರನ್ನು, "ಒಡತಿ ಎಷ್ಟು ಹೊತ್ತಿಂದ ಕಾಣೆಯಾಗಿದ್ದಾಳೆ?" ಎಂದು ವಿಚಾರಿಸಿದ.

"ನಾನು ದೀಪಾನ ಒಳಗೆ ತಂದಾಗ ಆಕೆ ಇರಲಿಲ್ಲ. ಆದರೆ ಆಕೆ ಹೋಗುವುದನ್ನು ಯಾರೂ ನೋಡಲೂ ಇಲ್ಲ." ಎಂದು ನೂ-ಯೀ ತಿಳಿಸಿದಳು.

"ಆಕೆ ಔಷಧಿ ಏನಾದರೂ ತೆಗೆದುಕೊಂಡು ಹೋಗಿದ್ದನ್ನು ಗಮನಿಸಿದಿರಾ?" ಯೀ ಕೇಳಿದ.

"ಇಲ್ಲ ಸ್ವಾಮಿ. ಆದರೆ ಮಧ್ಯಾಹ್ನ ಸ್ವಲ್ಪ ನೀರು ಬೇಕು ಅಂತ ಕೇಳಿದ್ದರು."

ಯೀ ಭಯದಿಂದ ಎದ್ದು ನಿಂತ. ತನ್ನೊಬ್ಬನನ್ನೇ ಭೂಮೀಲಿ ಉಳಿಸಿ ಹೋಗಿದಾಳೆ ಎನಿಸಿತು.

"ಏನಾದರೂ ಮೇಲೆ ಹಾರೋದನ್ನು ನೋಡಿದೆಯೇನು?" ಯೀ ಕೇಳಿದ.

"ಓಹ್"- ಸೂಹ್‌ಸಿನ್‌ಗೆ ಏನೋ ಹೊಳೆದ ಹಾಗಾಯಿತು. "ದೀಪ ಹಚ್ಚಿಟ್ಟು ಹೊರಗೆ ಬರುವಾಗ ಕಪ್ಪು ನೆರಳೊಂದು ಈ ಕಡೆ ಹಾರಿದ್ದನ್ನು ನೋಡಿದೆ. ಅದು ಒಡತೀದು ಇರಬಹುದೆಂದು ನಾನೆಂದೂ ಊಹಿಸಲಿಲ್ಲ." ಅವಳ ಮುಖ ಬಿಳುಚಿಕೊಂಡಿತು.

"ನಾನು ಅಂದುಕೊಂಡ ಹಾಗೇ ಆಗಿರಬೇಕು." ತನ್ನ ತೊಡೆಗಳನ್ನುನ ತಟ್ಟಿಕೊಂಡು ಎದ್ದು ನಿಂತ. ಸೂ-ಸಿನ್‌ನ ಕೇಳಬೇಕೆಂದು ಹೊರನಡೆದ. "ನೆರಳು ಯಾವ ಕಡೆ ಹಾರಿತು?" ಎಂದ.

ಸೂ-ಸಿನ್ ಜೊಟ್ಟು ಮಾಡಿ ದಿಕ್ಕನ್ನು ತೋರಿಸಿದಳು. ಆದರೆ ಅವನಿಗೆ ಕಾಣಿಸಿದ್ದು ಆಕಾಶದಿಂದ ತೂಗು ಹಾಕಿದ್ದ ದುಂಡನೆಯ ಮಂಜು ಬಿಳುಪಿನ ಚಂದ್ರ. ಮತ್ತು ಆ ಬೆಳಕಿನಲ್ಲಿ ಅಸ್ಪಷ್ಟವಾದ ಬಯಲು ಮತ್ತು ಮರಗಳು ಮಾತ್ರ . ಅವನು ಮಗುವಾಗಿದ್ದಾಗ ಅವನ ಅಜ್ಜಿ ಚಂದ್ರನ ಲೋಕದಲ್ಲಿದ್ದ ಸುಂದರ ಪ್ರಕೃತಿಯ ದೃಶ್ಯಗಳನ್ನೆಲ್ಲ ವಿವರಿಸಿ ಹೇಳುತ್ತಿದ್ದಳು. ಇನ್ನೂ ಆ ವಿವರಣೆ ಮಸಕು ಮಸಕಾಗಿ ಅವನ ನೆನಪಿನಲ್ಲಿತ್ತು. ನೀಲಿ ಸಮುದ್ರದಲ್ಲಿ ತೇಲುತ್ತಿದ್ದ ಚಂದ್ರನನ್ನು ನೋಡುತ್ತಿದ್ದಂತೆ ಅವನ ಕಾಲುಗಳು ಭಾರವೆನಿಸಿದವು.

ಅವನಲ್ಲಿ ಆವೇಶ ಬಂದ ಹಾಗಾಯಿತು. ಇದರಿಂದ ಅವನಿಗೆ ಕೊಲ್ಲಬೇಕೆನಿಸಿತು. ಆಳಿಯಿಂದ ಮುಡಿವರೆಗೆ ಹರಿದ ಸಿಟ್ಟಿನಿಂದ ಸೇವಕಿಯರ ಮೇಲೆ ಅಬ್ಬರಿಸಿದ.

"ನನ್ನ ಬಿಲ್ಲು ತೆಗೆದುಕೊಂಡು ಬನ್ನಿ. ಅದೇ. ನಾನು ಸೂರ್ಯರನ್ನು ಹೊಡೆದಿದ್ದೆನಲ್ಲ! ಹಾಗೆಯೇ ಮೂರು ಬಾಣಗಳನ್ನು ತನ್ನಿ!"

ಸೂ-ಯಿ. ಸೂ-ಕೆಂಗ್ ಇಬ್ಬರೂ ಭಾರವಾದ ಆ ಬಿಲ್ಲನ್ನು ಕೆಳಗೆ ಇಳಿಸಿ ಧೂಳು ಕೊಡವಿದರು. ಮೂರು ಬಾಣಗಳ ಜೊತೆಗೆ ಅದನ್ನು ಅವನ ಕೈಗೆ ಕೊಟ್ಟರು.

ಬಿಲ್ಲನ್ನು ಒಂದು ಕೈಲಿ ಹಿಡಿದು. ಅದಕ್ಕೆ ಮೂರು ಬಾಣಗಳನ್ನು ಹೂಡಿ. ನೇರವಾಗಿ ಚಂದ್ರನಿಗೆ ಗುರಿಯಿಟ್ಟು ಎಳೆದ. ಬಂಡೆಯ ಮೇಲೆ ಗಟ್ಟಿಯಾಗಿ ಕಾಲೂರಿ ನಿಂತಿದ್ದ. ಅವನ ಕಣ್ಣು [illegible] ಅವನ ಗಡ್ಡ ಮೀಸೆಗಳು ಬೆಂಕಿಯ ಜ್ವಾಲೆಗಳಂತೆ ಗಾಳಿಯಲ್ಲಿ ಹಾರಾಡುತ್ತಿದ್ದವು. ಹಾಗೆಲ್ಲಾ ಅವನಿಗೆ ಬಹಳ ಬಹಳ ಹಿಂದೆ ಸೂರ್ಯರನ್ನೇ ಹೊಡೆದ [illegible]

[illegible]

ಕೇಳಲಾಗದಷ್ಟು ವೇಗವಾಗಿದ್ದವು ಅವು. ಅವೆಲ್ಲವೂ ಒಂದರ ಹಿಂದೆ ಒಂದು ಇದ್ದದ್ದರಿಂದ ಒಂದೇ ಜಾಗಕ್ಕೆ ತಗುಲಿರಬೇಕು. ಅವು ತಮ್ಮ ಗುರಿಯನ್ನು ತಪ್ಪಬಾರದೆಂಬ ಕಾರಣಕ್ಕೆ ಒಂದೊಂದನ್ನೂ ತೀರಾ ಸ್ವಲ್ಪವಾಗಿ ಬೇರೆ ಬೇರೆ ದಿಕ್ಕಿಗೆ ಜೋಡಿಸಿದ್ದ. ಹಾಗಾಗಿ ಅವು ಮೂರು ಬಾಣಗಳೂ ಮೂರು ದಿಕ್ಕುಗಳಿಂದ ಹೊರಟು ಮೂರು ಕಡೆ ಘಾಸಿ ಮಾಡುವುದು ಖಚಿತವಾಗಿತ್ತು.

ಸೇವಕಿಯರು ಚಿಟ್ಟನೆ ಚೀರಿದರು. ಚಂದ್ರ ನಡುಗುತ್ತಿದ್ದಂತೆ ಮತ್ತು ಇನ್ನೇನು ಬಿದ್ದೇ ಬಿಡುತ್ತಿದ್ದಾನೆಂಬಂತೆ ಕಾಣಿಸಿತು. ಆದರೆ ಹಾಗೇನೂ ಆಗದೆ ಚಂದ್ರ ಪ್ರಶಾಂತವಾಗಿ ತಣ್ಣನೆಯ ಬೆಳಕನ್ನು ಚೆಲ್ಲುತ್ತ, ಕಿಂಚಿತ್ತೂ ಊನಗೊಳ್ಳದೆ ಹೊಳೆಯುತ್ತಿದ್ದ.

ಆಕಾಶದೆಡೆಗೆ ನೋಡಿ ಶಾಪ ಹಾಕುವಂತೆ ತಲೆ ಹೊರಳಿಸಿದ ಅವನು ಚಂದ್ರನನ್ನು ನೋಡುತ್ತ ಕಾದ. ಆದರೆ ಚಂದ್ರ ಅವನ ಕಡೆ ಲಕ್ಷ್ಯ ಕೊಡಲಿಲ್ಲ. ಅವನು ಮೂರು ಹೆಜ್ಜೆ ಹಿಂದೆ ಹೋದರೆ, ಚಂದ್ರ ಮೂರು ಹೆಜ್ಜೆ ಮುಂದೆ ಬಂದ.

ಇಬ್ಬರೂ ಮೌನವಾಗಿ ಒಬ್ಬರನ್ನೊಬ್ಬರು ನೋಡಿದರು. ಅವನು ಕೂತು ನಿಟ್ಟುಸಿರಿಟ್ಟ. "ಸರಿ ಬಿಡಿ. ನಿಮ್ಮ ಒಡತಿ ಇನ್ನು ಮುಂದೆ ಯಾವಾಗಲೂ ಸುಖವಾಗಿ ಇದ್ದಾಳೆ. ನನ್ನೊಬ್ಬನನ್ನು ಇಲ್ಲಿ ಬಿಟ್ಟು ಅಲ್ಲಿಗೆ ತಾನೊಬ್ಬಳೇ ಹಾರಿ ಹೋಗಲು ಮನಸ್ಸಾದರೂ ಹೇಗೆ ಬಂತು? ಯಾಕೆ ನನಗೆ ವಯಸ್ಸಾಗಿ ಹೋಯಿತು. ಅಂತ ಅನ್ನಿಸ್ತಾ? ಹೋದ ತಿಂಗಳೇ ಹೇಳಿದ್ದಳಲ್ಲ! ನೀನೇನೂ ಮುದುಕ ಆಗಿ ಹೋಗಿಲ್ಲ. ಹಾಗೇನಾದರೂ ವಯಸ್ಸಾಗಿದೆ, ಮುದುಕ ಆಗಿದ್ದೇನೆ ಎಂದುಕೊಂಡರೆ·ಅದು ಮನಸ್ಸಿನ ದೌರ್ಬಲ್ಯ ಅಷ್ಟೇ!" ಎಂದಿದ್ದಳು.

"ಹಾಗೇನೂ ಇರಲಾರದು" ನೂ–ಯೀ ಹೇಳಿದಳು.

"ಜನ ಈಗಲೂ ನಿಮ್ಮನ್ನು ಹೀರೋ ಅಂತಲೇ ತಿಳೀತಿದ್ದಾರೆ ಸ್ವಾಮಿ."

"ಹೇ, ಒಂದೊಂದು ಸಲ ನೀನು ಒಳ್ಳೇ ಕವಿ ಥರ ಕಾಣಿಸ್ತೀಯ" ನೂ–ಸಿನ್ ಹೇಳಿದಳು.

"ಏನಿಲ್ಲ ಸುಮ್ನಿರು. ವಿಷಯ ಏನೂಂದ್ರೆ, ನೂಡಲ್ಸ್ ಮತ್ತು ಕಾಗೆ ಸೂಪ್ ತಿನ್ನೋದು ಸಾಧ್ಯ ಆಗ್ತಿರಲಿಲ್ಲ. ಅದು ಅವಳ ತಪ್ಪಲ್ಲ......"

ಆ ಚಿರತೆ ಚರ್ಮ ಒಂದು ಕಡೆ ಹರಿದು ಹೋಗಿದೆ. ಗೋಡೆ ಕಡೆಗಿರೋ ಕಾಲಿನಿಂದ ಒಂದು ಚೂರು ಕತ್ತರಿಸಿ, ಹೊಲಿಗೆ ಹಾಕಿ ಸರಿ ಮಾಡ್ತೀನಿ. ನೋಡೋಕೆ ಆಗ ಚೆನ್ನಾಗಿರುತ್ತೆ." ನೂಸಿನ್ ಒಳಗೆ ನಡೆದಳು.

"ಸ್ವಲ್ಪ ಇರು." ಯೀ ಹೇಳಿ ಯೋಚಿಸಿದ. ಈಗ ಅದಕ್ಕೆ ಅವಸರ ಇಲ್ಲ. ನಾನು ಹಸಿವಿನಿಂದ ಸಾಯ್ತಿದ್ದೀನಿ. ಬೇಗ ಹೋಗಿ ಕೋಳಿ ಮತ್ತು ಪಾಪ್ರಿಕಾ ಹಾಕಿ ಏನಾದರೂ ಪಲ್ಯ ಮಾಡಿ, ದೋಸೆ ಮಾಡು. ತಿಂದಾದ ಮೇಲೆ ಮಲಗಲು ಹೋಗ್ತೀನಿ. ನಾಳೆ

ಹೋಗಿ ಮತ್ತೆ ಆ ಪೂಜಾರೀನ ಸಿದ್ಧರಸ ಕೊಡೋಕೆ ಹೇಳ್ತೀನಿ. ನಾನೂ ಆದರಿಂದ ಅವಳ ಹಿಂದೆ ಹೋಗಬಹುದು. ಬ್ಯಾಂಗ್ ಷೆಂಗ್‌ಗೆ ಹೇಳು, ನನ್ನ ಕುದುರೆಗೆ ನಾಲ್ಕು ಸೇರು ಹುರುಳಿ ತಿನ್ನಿಸಲಿ!"

* * *

ಹುಚ್ಚನ ದಿನಚರಿ ಮತ್ತು ಇತರ ಕಥೆಗಳು

ವಿಚ್ಛೇದನ

"ಓಹ್! ಅಂಕಲ್ ಮು! ಹೊಸ ವರ್ಷದ ಶುಭಾಶಯ. ಅದೃಷ್ಟ ನಿಮ್ಮದಾಗಲಿ!"

"ಹೇಗಿದ್ದೀಯ ಪಾ–ಸಾನ್? ಹೊಸ ವರ್ಷದ ಶುಭಾಶಯ!......."

"ಹೊಸ ವರ್ಷದ ಶುಭಾಶಯ. ಐ–ಕು ಮತ್ತೆ ಇಲ್ಲಿ...."

"ಭೇಟಿಯಾದ್ದು ಒಳ್ಳೇದಾಯ್ತು. ಅಜ್ಜ!....."

ಚುವಾಂಗ್ ಮೂ ಸಾನ್ ಮತ್ತು ಮಗಳು ಐ–ಕು ವ್ಯಾಗನೋಲಿಯಾ ಸೇತುವೆ ಕಟ್ಟೆಯಿಂದ ಬಂದಿದ್ದ ದೋಣಿಯೊಳಗೆ ಕಾಲಿರಿಸುತ್ತಿದ್ದಂತೆ ದೋಣಿಯಲ್ಲಿ ಕುಳಿತಿದ್ದ ಹಲವರ ಮಾತುಗಳು ಕೇಳಿ ಬಂದವು. ಕೆಲವರು ಕೈ ಮುಗಿದು ನಮಸ್ಕರಿಸಿದರು. ಕ್ಯಾಬಿನ್ನಿನ ಬೆಂಚುಗಳಲ್ಲಿ ನಾಲ್ಕು ಸ್ಥಳಗಳನ್ನು ಖಾಲಿ ಮಾಡಿದರು. ಎಲ್ಲರನ್ನೂ ಮಾತನಾಡಿಸುತ್ತ ಚುವಾಂಗ್ ಮೂ–ಸಾನ್ ಕುಳಿತುಕೊಂಡ. ತನ್ನ ಉದ್ದನೆಯ ಪೈಪನ್ನು ದೋಣಿಯ ಗೋಡೆಗೆ(ಪಕ್ಕಕ್ಕೆ) ಆನಿಸಿದ. ಐ–ಕು, ಪಾ–ಸಾನ್‌ಗೆ ಎದುರಾಗುವಂತೆ, ಮೂಸಾನ್‌ನ ಪಕ್ಕದಲ್ಲಿ ಕುಳಿತಳು. ಕಾಲುಗಳನ್ನು 'ಪಿ' ಆಕಾರಕ್ಕೆ ಸೇರಿಸಿದಳು.

"ಮೂ ಅಜ್ಜ, ಪಟ್ಟಣದ ಕಡೆ ಹೊರಟಿದ್ದೀರಾ?" – ಆಮೆಯ ಚಿಪ್ಪಿನಂತೆ, ಕೆಂಚು ಮುಖದ ವ್ಯಕ್ತಿಯೊಬ್ಬ ವಿಚಾರಿಸಿದ.

"ಪಟ್ಟಣದ ಕಡೆ ಅಜ್ಜ" – ಅವನ ಮಾತಿನಲ್ಲಿ ನಿರುತ್ಸಾಹವಿತ್ತು. ದಟ್ಟ ಕೆಂಪಿನ ಅವನ ಮುಖದಲ್ಲಿ ಒಂದೊಂದು ಸುಕ್ಕುಗಳು ಇದ್ದುವೆಂದರೆ, ಅದರಲ್ಲಿ ಯಾವ ಭಾವನೆಯೂ ಕಾಣಿಸಿಕೊಳ್ಳದೆ ಮೊದಲಿನಂತೆಯೇ ಇರುತ್ತಿತ್ತು. "ಪಾಂಗ್ ಹಳ್ಳಿಗೆ ಹೊರಟಿದ್ದೇವೆ."

ದೋಣಿಯಲ್ಲಿದ್ದ ಸ್ತ್ರೀಗಳು ಮಾತನ್ನು ನಿಲ್ಲಿಸಿ ಅವರನ್ನು ಗಮನಿಸುತ್ತಿದ್ದರು

"ಏನು ಮತ್ತೆ ಪಿ-ಕು ಸಮಸ್ಯೆಯೇ?" ಪಾ-ಸಾನ್ ಕೇಳಿದ.

"ಹೌದು..............ಇದಂತೂ ನನ್ನ ಪಾಲಿಗೆ ಸಾವಾಗಿದೆ. ಈಗ ಮೂರು ವರ್ಷದಿಂದ ಎಳಿತಾನೇ ಇದೆ. ನಾವು ಜಗಳ ಆದ ಮೇಲೆ ಸರಿ ಮಾಡ್ಯೋಕೆ ಮತ್ತೆ ಮತ್ತೆ ಪ್ರಯತ್ನಿಸಿದ್ದೇವೆ. ಆದರೂ ಇನ್ನೂ ತೀರ್ಮಾನ ಆಗಿಲ್ಲ...."

"ನೀವು "ವೀ" ಮನೆಗೆ ಮತ್ತೆ ಹೋಗುತ್ತೀರೇನು?"

"ನಿಮ್ಮ ಊಹೆ ಸರಿ ಇದೆ. ಒಪ್ಪಂದಕ್ಕೆ ಪ್ರಯತ್ನಿಸುತ್ತಿರುವುದು ಅವನಿಗೆ ಇದೇ ಮೊದಲ ಸಲವಲ್ಲ. ಅವನ ಷರತ್ತುಗಳಿಗೆ ನಾನೆಂದೂ ಒಪ್ಪಲಿಲ್ಲ. ಆದರೂ ಪರವಾಗಿಲ್ಲ. ಈ ಅವರ ಮನೆಯಲ್ಲಿ ಕುಟುಂಬದವರ ಹೊಸ ವರ್ಷದ ಸಂತೋಷಕೂಟವಿದೆ. ನಗರದಿಂದ ಏಳನೆ ಯಜಮಾನ ಕೂಡಾ ಬರುವವನಿದ್ದಾನೆ......"

"ಏಳನೇ ಯಜಮಾನ" ಪಾ-ಸಾನ್ ಕಣ್ಣರಳಿಸಿ ಕೇಳಿದ. ಹಾಗಾದರೆ ಅವನೂ ಈ ವಿಚಾರದಲ್ಲಿ ತಲೆ ಹಾಕ್ತಾನೆ. ಹೌದಲ್ಲ?...ಆಯ್ತು. ಹೇಳಬೇಕೂಂದ್ರೆ ಹೋದವರ್ಷ ಅವರ ಅಡಿಗೆ ಮನೆಸಾಲನ್ನು ಕೆಡವಿ ಉರುಳಿಸುವುದರೊಂದಿಗೆ, ನಮ್ಮ ಸೇಡು ಪೂರ್ತಿಯಾಯಿತು. ಜೊತೆಗೆ ಏನು ಹೇಳ್ಬೋದೂಂದ್ರೆ, ಐ-ಕು ನ ಮತ್ತೆ ಅಲ್ಲಿಗೆ ಕಳಿಸೋದ್ರಲ್ಲಿ ಅರ್ಥ ಇಲ್ಲ ಅನ್ಸುತ್ತೆ" ಹೇಳುತ್ತಾ ದೃಷ್ಟಿ ಕೆಳಗೆ ಮಾಡಿದ.

"ನಾನು ಅಲ್ಲಿಗೆ ಹೋಗಲೆ ಬೇಕೂಂತ ಹಟ ಹಿಡಿದಿಲ್ಲ ಅಣ್ಣ" ಹಠಮಾರಿಯಂತೆ ಹೇಳಿದಳು, ಐ-ಕು. "ನಾನು ಹೋಗುತ್ತಿರುವುದು ಅವರಿಗೆ ಬುದ್ಧಿ ಕಲಿಸೋಕೆ ಗೊತ್ತಾ! ಆ ಪ್ರಾಣಿ ಆ ವಿಧವೆ ಜೊತೆ ಸಂಬಂಧ ಮುಂದುವರೆಸಿ, ನನ್ನನ್ನ ಬೇಡಾಂತಾನೇ! ಅದು ಅಷ್ಟು ಸುಲಭ ಅಂತ ತಿಳ್ಕೊಂಡಿದ್ದಾನೆ. ಸಾಲದ್ದಕ್ಕೆ ಅವನ ಅಪ್ಪ, ದೊಡ್ಡ ಪ್ರಾಣಿ ಕೂಡಾ. ಅವನ ಜೊತೆ ಸೇರಿ ಹೇಗಾದರೂ ನನ್ನನ್ನು ಅವನಿಂದ ದೂರ ಮಾಡಬೇಕಂತ ಪ್ರಯತ್ನಿಸಿದ್ದಾನೆ....ಅದೆಲ್ಲ ಅವರಿಗಿದು ಬಹಳ ಸುಲಭ ಅಂತ ಅನ್ನಿಸಿರಬೇಕು! ಇನ್ನು ಆ ಏಳನೇ ಯಜಮಾನ? ಮ್ಯಾಜಿಸ್ಟ್ರೇಟ್ ಜೊತೆ ಸೇರಿರೋವರಿಂದ. ನಮ್ಮ ಮನಸ್ಸನ್ನು ಅರ್ಥ ಮಾಡ್ಕೊಳ್ಳೋಕೆ ಆಗೊಲ್ವೆ! ಅವನೂ ಕೂಡ 'ವೀ' ನ ರೀತಿಯಲ್ಲಿ ಬುದ್ಧಿಯಿಲ್ಲದೆ ಬೇರೆ ಆಗೋದೇ ಒಳ್ಳೇದು! ಬೇರೆ ಆಗೋದೆ ಒಳ್ಳೆಯದು" ಅಂತಾನೆ. ಇಷ್ಟು ವರ್ಷಗಳೂ ನಾನು ಹೇಗೆ ಅನುಭವಿಸಿದ್ದೀನಿ ಅನ್ನೋದನ್ನ ಹೇಳ್ತೀನಿ. ಆಗ ನೋಡೋಣ. ಅವನು ಯಾರು ಸರಿ ಅಂತ ಹೇಳ್ತಾನೆ!"

ಪಾ-ಸಾನ್‌ಗೆ ಅರ್ಥ ಆಯ್ತು. ಮುಂದೆ ಸುಮ್ಮನಾದ. ದೋಣಿಯಲ್ಲಿ ಮೌನವಿತ್ತು. ದೋಣಿ ನಡೆಸುವಾಗ ಚಿಮ್ಮುತ್ತಿದ್ದ ನೀರು ದೋಣಿಗೆ ಬಡಿಯುತ್ತಿದ್ದ ಸದ್ದು ಮಾತ್ರವೇ ಕೇಳಿಸುತ್ತಿತ್ತು. ಚುವಾಂಗ್ ಮಾ-ಸಾನ್ ಪೈಪನ್ನು ಎಳೆದುಕೊಂಡು ಅದನ್ನು ತುಂಬಿದ ಪಾಸಾನ್ ಪಕ್ಕದಲ್ಲಿ ಎದುರಿಗೆ ಕುಳಿತಿದ್ದ ದಪ್ಪನೆಯ ಮನುಷ್ಯ ಸೊಂಟದಲ್ಲಿ ಹುಡುಕಾಡಿ ಚಕಮುಕಿ ಕಲ್ಲನ್ನು ತೆಗೆದು ಉಜ್ಜಿ ಹೊತ್ತಿಸಿ ಮೂ-ಸಾನ್‌ನ ಪೈಪಿಗೆ ಹಚ್ಚಿದ.

"ಧನ್ಯವಾದಗಳು! ಧನ್ಯವಾದಗಳು" – ತಲೆ ತೂಗುತ್ತ ಮೂಸಾನ್ ಆತನಿಗೆ ಹೇಳಿದ.

"ನಾನು ನಿಮ್ಮನ್ನು ಭೇಟಿಯಾಗುತ್ತಿರುವುದು ಇದೇ ಮೊದಲ ಸಲವಾದರೂ, ನಿಮ್ಮ ಬಗ್ಗೆ ಕೇಳಿದ್ದೇನೆ. ಬಹಳ ಹಿಂದೆ! ಇದರ ತೀರಕ್ಕೆ ಸೇರಿದ ಹದಿನೆಂಟು ಹಳ್ಳಿಗಳಲ್ಲಿ ಅಂಕಲ್ ಮೂ ಬಗ್ಗೆ ತಿಳಿಯದವರು ಯಾರಿರಲು ಸಾಧ್ಯ? ಕಿರಿ ವಯಸ್ಸಿನ ವಿಧವೆಯ ಜೊತೆ 'ಚಿಪ್' ಸಂಬಂಧವಿರಿಸಿಕೊಂಡಿರುವುದರ ಬಗ್ಗೆ ನಮಗೂ ಗೊತ್ತಿದೆ. ನಿಮ್ಮ ಆರು ಜನ ಮಕ್ಕಳೊಂದಿಗೆ ನೀವು ಅವರ ಅಡಿಗೆ ಮನೆ ಸಾಲನ್ನು ಕೆಡವಿದಾಗ ಯಾರೂ ನಿಮ್ಮದು ತಪ್ಪು ಅಂತ ಹೇಳಲಿಲ್ಲ. ನಿಮಗೆ ಸಾಕಷ್ಟು ಸಹಕಾರ ಇದೆ. ಅವಕಾಶಗಳೂ ಇವೆ. ನೀವು ಅವರಿಗೆ ಯಾಕೆ ಹೆದರಬೇಕು?.....

"ಈ ಅಂಕಲ್ ಎಲ್ಲವನ್ನೂ ಅರ್ಥ ಮಾಡಿಕೊಳ್ಳಬಲ್ಲರು" ಎಂದಳು ಒಪ್ಪಿಗೆ ಸೂಚಿಸುತ್ತ, "ಅವರು ಯಾರೂಂತ ನನಗೆ ಸರಿಯಾಗಿ ಗೊತ್ತಿಲ್ಲ. ಆದರೂ......"

"ನನ್ನ ಹೆಸರು ವಾಂಗ್-ತೇ-ಕು-ಇ" ದಪ್ಪನೆಯ ಮನುಷ್ಯ ಕೂಡಲೇ ಉತ್ತರಿಸಿದ.

"ನನ್ನನ್ನು ಸುಮ್ಮನೆ ಹೊರಗೆ ದಬ್ಬೋಕೆ ಆಗೊಲ್ಲ! ಏಳನೆ ಯಜಮಾನ ಆಗಲಿ, ಎಂಟನೆ ಯಜಮಾನ ಆಗಲಿ. ನಾನು ಅವರೆಲ್ಲ ಸಾಯೋತನಕ, ಹಾಳಾಗೋ ತನಕ ಅವರನ್ನು ಪಿಂಸಿಸುತ್ತಲೇ ಇರುತ್ತೇನೆ. ಬಿಡುವುದಿಲ್ಲ" "ಪ" ನಾಲ್ಕು ಸಲ ಕೈ ಮಾಡಿದ. ಅಲ್ಲ? ಆ ಸೆಟಲ್‌ಮೆಂಟ್ ಹಣ ನೋಡಿದ್ದೇನೆ. ಅಪ್ಪ ಕೂಡ ತನ್ನ ಸಮತೋಲನ ಕಳೆದುಕೊಂಡ....."

ಚುವಾಂಗ್ ಮೂ-ಸಾನ್ ತನ್ನೊಳಗೇ ಮೆಲ್ಲಗೆ ಪ್ರತಿಜ್ಞೆ ಮಾಡಿದ. "ಅವರೆ ಮೂ ಅಷ್ಟು ಚಿಪ್ ಕುಟುಂಬದ "ಪೀ" ಗೆ ಹೋದ ವರುಷದ ಕಡೇಲಿ ಕೂಡ ಹುಚ್ಚು ಮಾಡಿ ಕಳಿಸಬೇಕಲ್ಲ" ಪಡಿ ಮುಖದವ ಕೇಳಿದ. ಅದರಿಂದೇನಾಗುತ್ತೆ? ವಾಂಗ್ ತೇ ಕು ಉತ್ತರಿಸಿದ. "ಕೇವಲ ಹಬ್ಬದಿಂದಲೇ ಒಬ್ಬ ಮನುಷ್ಯ ಹೀಗೆ ಪೂರ್ತಿ ಕಣ್ಮುಚ್ಚಿ ಕೂರಬಹುದೇ? ವಿದೇಶಿ ಮಿತ್ರ ನೀಡಿದ ಮಾತಕ್ಕೆ ಏನಾಗುತ್ತೆ? ಸತ್ಯ ಏನೂಂತ ತಿಳಿದವರು ನ್ಯಾಯದ ಕಡೆಗೇ ಬರ್ತಾರೆ. ಅನಾವಶ್ಯಕವಾಗಿ ಯಾರನ್ನಾದರೂ ಅವಮಾನ ಮಾಡಿದರೆ [illegible]. ನ್ಯಾಯದ ಪರವಾಗಿಯೇ ಮಾತಾಡ್ತಾರೆ. ಹೋದ ವರುಷದ ಕಡೇಲಿ ನಮ್ಮ ಸ್ವಗ್ರಾಮದವನಾದ ಯಾಂಗ್ [illegible]ಕಿಂಗ್‌ನಿಂದ [illegible] [illegible] ಮುಕ್ಕ [illegible]. [illegible] ಬಂದಿದ್ದಾನೆ. [illegible] ಚುವಾಂಗ್ [illegible]. [illegible]......"

"[illegible]...... [illegible] "[illegible] ವಾಂಗ್ ಜೊತೆಗೆ ಹೋಗುವವರಿದ್ದೀರಾ?"

"ನಾನಿದ್ದೇನೆ!" –ಎನ್ನುತ್ತ ದಪ್ಪನೆಯ ಮನುಷ್ಯ ತನ್ನ ಪೈಪ್‌ನ್ನು ತೆಗೆದುಕೊಳ್ಳುತ್ತಾ ಕ್ಯಾಬಿನ್‌ನಿಂದ ಜಿಗಿದು ದಡ ತಲುಪಿದ.

"ಕ್ಷಮಿಸಿ"– ಎನ್ನುತ್ತಾ ಉಳಿದ ಪ್ರಯಾಣಿಕರಿಗೆ ಕೂಗಿ ಹೇಳಿದ. ನೀರು ಅಪ್ಪಳಿಸುತ್ತಿದ್ದ ಸದ್ದು ಬಿಟ್ಟರೆ ದೋಣಿ ಮೌನವಾಗಿ ಸಾಗುತ್ತಿತ್ತು. ಐ–ಕುಳ ಷೂ ಕಡೆಗೆ ಮುಖವಿರಿಸಿ, ನಿದ್ದೆ ತೆಗೆದ. ಕ್ರಮೇಣ ಅವನ ಬಾಯಿ ಬಿಚ್ಚಿಕೊಂಡಿತು. ಮುಂದಿದ್ದ ಕ್ಯಾಬಿನ್‌ನಲ್ಲಿದ್ದ ಇಬ್ಬರು ಹೆಂಗಸರು ಮೆಲುದನಿಯಲ್ಲಿ ಪ್ರಾರ್ಥನೆ ಹೇಳುತ್ತಾ, ಜಪಿಸ ತೊಡಗಿದರು. ಐ–ಕುಳ ಕಡೆ ಒಮ್ಮೆ ನೋಡಿ ಅರ್ಥ ಪೂರ್ಣವಾಗಿ ಒಬ್ಬರ ಮುಖ ಒಬ್ಬರು ನೋಡಿಕೊಂಡರು. ಆದರೆ ತುಟಿ ಬಿಚ್ಚದೆ ತಲೆಯಾಡಿಸಿದರು.

ಐ–ಕು ದೋಣಿಯ ಮೇಲ್ಭಾಗದಲ್ಲಿ ಹಾಸಿದ್ದ ಬಟ್ಟೆ ಛಾವಣಿಯನ್ನೇ ದಿಟ್ಟಿಸುತ್ತ ಕ್ರೂರ ಪ್ರಾಣಿಗಳಂತಿದ್ದ ತಂದೆ ಮಗ ಮತ್ತು ಅವರ ಕುಟುಂಬವನ್ನು ಯಾವ ರೀತಿ ಗೋಳಾಡಿಸಿ, ನಾಶ ಮಾಡಬೇಕೆಂದು ಯೋಚಿಸುತ್ತಿದ್ದಳು. "ವೀ" ನಿಗೆ ಹೆದರುತ್ತಿರಲಿಲ್ಲ ಅವಳು. ಈ ಮೊದಲೂ ಅವನನ್ನು ನೋಡಿದ್ದಳು. ಅವನೇನಿದ್ದರೂ ಗುಂಡಗೆ ದಪ್ಪಕ್ಕೆ ಇದ್ದ ಒಂದು ಮುದ್ದೆ ತರ. ಅವನಂಥವರು, ಆದರೆ ಸ್ವಲ್ಪ ಬಣ್ಣದಲ್ಲಿ ಕಪ್ಪಿದ್ದವರು ಅವಳ ಊರಿನಲ್ಲಿಯೇ ಬೇಕಾದಷ್ಟು ಮಂದಿ ಇದ್ದರು.

ಚುವಾಂಗ್ ಮೂ–ಸಾನ್ ತನ್ನ ಪೈಪನ್ನು ಪೂರ್ತಿಯಾಗಿ ಮುಗಿಸುವಲ್ಲಿಗೆ ಬಂದಿದ್ದ. ಅದರಲ್ಲಿದ್ದ ಎಣ್ಣೆ ಸಿಡಿಯುತ್ತಿದ್ದರೂ ಅವನು ಸೇದುತ್ತಲೇ ಮುಂದುವರಿದ. ವ್ಯಾಂಗ್ ಜೆಟ್ಟಿ ಬಂದ ಮೇಲೇನೇ ವ್ಯಾಂಗ್ ಬರುತ್ತೆ ಅನ್ನೋದು ಅವನಿಗೆ ಗೊತ್ತಿತ್ತು. ಆಗಲೇ ಊರಿಗೆ ಮೊದಲಲ್ಲಿದ್ದ ಸ್ಟಾರ್ ಪೆವಿಲಿಯನ್ ಅನ್ನು ಅಲ್ಲಿಂದಲೇ ನೋಡಬಹುದಾಗಿತ್ತು. ವೀ ಬಗ್ಗೆ ಪದೇ ಪದೇ ಮಾತಾಡಿದ್ದಕ್ಕಿಂತ ಹೆಚ್ಚು ಸಲ ಇಲ್ಲಿಗೆ ಬಂದು ಹೋಗಿದ್ದ. ಆದ್ದರಿಂದ ಅದೇನೂ ದೊಡ್ಡ ವಿಷಯವಾಗಿರಲಿಲ್ಲ. ತನ್ನ ಮಗಳನ್ನು ಅವರ ಮನೆಯವರು ಮಾವ, ಗಂಡ ಮೊದಲಾಗಿ ಎಲ್ಲರೂ ಹೇಗೆ ಹಿಂಸೆ ಮಾಡಿದರು, ಅಳುತ್ತ ಹೇಗೆ ಮನೆಗೆ ಬಂದಿದ್ದಳು, ತಾನು ಹೇಗೆ ಅವರನ್ನೆಲ್ಲ ಮುಖಕ್ಕೆ ಮಂಗಳಾರತಿ ಮಾಡಿ ಕಳಿಸಿದ್ದು–ಎಲ್ಲ ನೆನಪಾಯಿತು. ನಡೆದದ್ದೆಲ್ಲ ಮತ್ತೊಮ್ಮೆ ಕಣ್ಮುಂದೆ ಸುಳಿಯಿತು. ಸಾಮಾನ್ಯವಾಗಿ, ತಾನು, ಕೆಟ್ಟದ್ದು ಮಾಡಿದ ಅವರಿಗೆ ಹೇಗೆ ಬುದ್ಧಿ ಕಲಿಸಿದೆ ಎಂದುಕೊಳ್ಳುವಾಗೆಲ್ಲ ಅವನ ತುಟಿಗಳಲ್ಲಿ ನಗೆ ಮಿಂಚು ಸುಳಿಯುತ್ತಿತ್ತು. ಆದರೆ ಈ ಸಲ ಹಾಗಾಗಲಿಲ್ಲ. ದಪ್ಪನೆಯ ಏಳನೇ ಯಜಮಾನ ತನ್ನ ಆಲೋಚನೆಗಳ ನಡುವೆ ತೂರಿ ಬಂದು ಏನೇನೋ ಅಸ್ತವ್ಯಸ್ತವಾದಂತೆನಿಸುತ್ತಿತ್ತು.

ದೋಣಿ ಮೌನದಿಂದ ಸಾಗಿತು. ಬುದ್ಧನ ಪ್ರಾರ್ಥನೆ ಮಾಡುವವರು ಮಾತ್ರ ಹೆಚ್ಚಿದರು. ಐ–ಕು ಮತ್ತು ಆಕೆಯ ತಂದೆಯ ರೀತಿಯಲ್ಲಿ ಮಿಕ್ಕವರೂ ಗಾಢವಾದ ಯೋಚನೆಗಳಲ್ಲಿ ಮುಳುಗಿದ್ದರು.

"ಅಂಕಲ್ ಮೂ ಇದೋ "ಪಾಂಗ್ ಊರು ಬಂತು"

ದೋಣಿಯುವನ ಕರೆಗೆ ಎಚ್ಚರಗೊಂಡು, ಸ್ಟಾರ್ ಪೆವಿಲಿಯನ್ ಅತ್ತ, ತಲೆ ಎತ್ತಿ ದೃಷ್ಟಿ ಹಾಯಿಸಿದರು.

ಚುವಾಂಗ್ ದಡಕ್ಕೆ ಜಿಗಿದ. ಐ–ಕೂ ಅವನನ್ನೇ ಹಿಂಬಾಲಿಸಿದಳು. ಪೆವಿಲಿಯನ್ ದಾಟಿ "ಪೀ" ಮನೆಯತ್ತ ನಡೆದರು. ದಕ್ಷಿಣದ ಹಾದಿಯಲ್ಲಿದ್ದ ಒಂದು ಮೂವತ್ತು ಮನೆಗಳನ್ನು ದಾಟಿ, ಮೂಲೆ ತಿರುಗಿ ಕಡೆಗೆ ತಮ್ಮ ಗುರಿ ತಲುಪಿದರು. ಕಪ್ಪನೆಯ ಛಾವಣಿಯನ್ನು ಹಾಸಿದ್ದ ನಾಲ್ಕು ದೋಣಿಗಳು ಸಾಲಾಗಿ ಗೇಟಿನ ಬಳಿ ನಿಂತವು. ಕಪ್ಪು ಬಣ್ಣದಿಂದ ಹೊಳೆಯುತ್ತಿದ್ದ ದೊಡ್ಡ ಗೇಟನ್ನು ಸಮೀಪಿಸುತ್ತಿದ್ದಂತೆ, ಗೇಟಿನ ಮನೆಯನ್ನು ತೋರಲಾಯಿತು. ಅದಂತೂ ದೋಣಿ ನಡೆಸುವವರಿಂದ ಮತ್ತು ಹೊಲಗದ್ದೆ ಮಾಡುವವರಿಂದ ತುಂಬಿ ಹೋಗಿತ್ತು. ಅವರೆಲ್ಲ ಎರಡು ಟೇಬಲ್‌ಗಳ ಬಳಿ ಕುಳಿತಿದ್ದರು. ಐ–ಕು ಅವರತ್ತ ನೋಡುವ ಸಾಹಸ ಮಾಡಲಿಲ್ಲವಾದರೂ ಒಂದು ಸಲ ಸುತ್ತ ಕಣ್ಣು ಹಾಯಿಸಿದಳು. ಅವಳ ಗಂಡನಾಗಲೀ, ಮಾವನಾಗಲೀ ಕಾಣಿಸಲಿಲ್ಲ. ಕೆಲಸದವನೊಬ್ಬ ಒಂದು ಟ್ರೇನಲ್ಲಿ ಸೂಪ್ ಮತ್ತು ಹೊಸ ವರುಷದ ಸಿಹಿ ಕೇಕನ್ನು ತಂದುಕೊಟ್ಟಾಗ ಐ–ಕುಗೆ ಕಾರಣ ತಿಳಿಯದೆ ಕಸಿವಿಸಿಯೆನಿಸಿತು. ಮ್ಯಾಜಿಸ್ಟ್ರೇಟ್ ಜೊತೆ ಸ್ನೇಹ, ವ್ಯವಹಾರ ಇಟ್ಟುಕೊಂಡಿದ್ದಾನೆಂದ ಮಾತ್ರಕ್ಕೆ, ನಮ್ಮನ್ನು ಅರ್ಥ ಮಾಡಿಕೊಂಡಿಲ್ಲ ಅಂತ ಆಗೊಲ್ಲ. ತಿಳಿದವರು, ವಿದ್ವಾಂಸರು, ಸತ್ಯ ಏನೂಂತ ತಿಳಿದ ಮೇಲೆ ಸತ್ಯದ ಪರವಾಗಿಯೇ ಇರ್ತಾರೆ. ಆ ಹಳೇ ಯಜಮಾನನಿಗೆ ನನ್ನ ಕತೇನ ಹೇಳಬೇಕು. ಮೊದಲಿಂದ ಕೊನೆತನಕ.........ಹೇಗೆ ನನ್ನ ಹದಿನೈದನೇ ವರ್ಷ ಮದುವೆಯಾಯ್ತು....."

ಸೂಪ್ ಕುಡಿದ ನಂತರ, ಇನ್ನೂ ಸಮಯ ಇದೆ ಅಂತ ಅನ್ನಿಸಿತು. ಅಂದುಕೊಳ್ಳೋಕೆ ಮೊದಲೇ ರೈತನೊಬ್ಬ ಅವಳನ್ನು ಮತ್ತು ಅವಳ ತಂದೆಯನ್ನು ದೊಡ್ಡ ಹಜಾರದೆಡೆ ಕರೆದೊಯ್ದು, ಅಲ್ಲಿಯೇ ಮೂಲೆಯೊಂದಕ್ಕೆ ಅಂಟಿಕೊಂಡಂತಿದ್ದ ಸ್ವಾಗತ ಕೊಠಡಿಗೆ ಕರೆದೊಯ್ದ.

ಆ ಕೋಣೆ ಏನೇನೋ ವಸ್ತುಗಳಿಂದ ಇಡಿಕಿರಿದು ಇಕ್ಕಟ್ಟಾಗಿತ್ತೆಂದರೆ, ಅವರಿಗೆ ಕುಳಿತುಕೊಳ್ಳಲಾಗಲಿಲ್ಲ. ತುಂಬ ಜನ ಅತಿಥಿಗಳಿದ್ದರು ಅವರು ಧರಿಸಿದ್ದ ಕೆಂಪು ಮತ್ತು ನೀಲಿ ಜಾಕೀಟುಗಳು (ಅಂಗಿಗಳು) ಅವಳ ಸುತ್ತ ಹೊಳೆಯುತ್ತಿದ್ದವು. ಅವರೆಲ್ಲರ [illegible]

ಮಾತ್ರ ಕೆಂಪಾಗಿ ಹೊಳೆಯುತ್ತಿತ್ತು. ಒಂದು ಕ್ಷಣ ಐ-ಕುಗೆ ಏನೂ ಹೊಳೆಯಲಿಲ್ಲ. ನಂತರ ಅವನೇನಾದರೂ ತನ್ನ ಚರ್ಮವನ್ನು ಹಂದಿ ಕೊಬ್ಬಿನಿಂದ ಉಜ್ಜಿರಬೇಕು ಅನಿಸಿತು.

ಇದು "ಏನಸ್ ಸ್ಟಾಪ್" (ಹೆಣಗಳು ಕೊಳೆಯದಂತೆ ಉಳಿಸಲು ಉಪಯೋಗಿಸುತ್ತಿದ್ದ ಒಂದು ಮಣಿ) ಹಿಂದಿನವರು ಇದನ್ನು ಹೆಣ ಹೂಳುವಲ್ಲಿ ಇರಿಸುತ್ತಿದ್ದರು ಎನ್ನುತ್ತಾ, ಏಳನೆ ಯಜಮಾನ, ಮುಕ್ಕಾಗಿದ್ದ ಒಂದು ಕಲ್ಲನ್ನು ಮೇಲಕ್ಕೆ ಹಿಡಿದು ಹೇಳಿದ. ಅದರಿಂದ ಒಂದೆರಡು ಬಾರಿ ತನ್ನ ಮೂಗನ್ನು ಕೆರೆದುಕೊಂಡ. ಇತ್ತೀಚೆಗೆ ಅಗೆದಾಗ ಸಿಕ್ಕಿದೆ ಹಾಳಾದ್ದು. ಆದರೂ ಇದು ಹತ್ತಿರ ಇರೋದು ಒಳ್ಳೇದು. ಇದರಲ್ಲಿರೋ ಪಾದರಸ ನೋಡಿ......ಇದು ಹ್ಯಾನ್ ಕಾಲಕ್ಕಿಂತ ನಂತರದ್ದು ಇರಲಾರದು........."

ಪಾದರಸದ ಗುರುತಿನ ಸುತ್ತ ಅನೇಕ ತಲೆಗಳು ಒಟ್ಟುಗೂಡಿದ್ದವು. ಅದರಲ್ಲಿ ಒಂದಂತೂ "ವಿ" ನ ತಲೆಯಾಗಿತ್ತು. ಅವರಲ್ಲಿ ಆ ಮನೆಯ ಗಂಡುಮಕ್ಕಳು ಅನೇಕರು ಇದ್ದರು. ಆದರೆ ಐ-ಕುಗೆ ಅವರ ಪರಿಚಯ ಇರಲಿಲ್ಲ. ಏಳನೆಯ ಯಜಮಾನನಿಂದ ಅವರು ಎಷ್ಟು ಬೇಸರಗೊಂಡಿದ್ದರೆಂದರೆ, ಅವರೆಲ್ಲ ಹೊಸಕಿ ಹಾಕಿದ ತಿಗಣೆಗಳಂತಿದ್ದರು.

ಆತ ಹೇಳಿದ್ದು ಏನೂ ಅವಳಿಗೆ ಅರ್ಥವಾಗಿರಲಿಲ್ಲ. ಆ ಪಾದರಸದ ಬಗ್ಗೆ ಅಂತೂ ಅವಳಿಗೆ ತಿಳಿದುಕೊಳ್ಳೋಕೂ ಆಸಕ್ತಿ ಇರಲಿಲ್ಲ. ಈ ಅವಕಾಶವನ್ನು ಉಪಯೋಗಿಸಿಕೊಂಡು ಸುತ್ತಲೂ ಗಮನಿಸಿದಳು. ತಾನು ನಿಂತಿದ್ದ ಹಿಂಬದಿಗೆ ಸೇರಿದ ಗೋಡೆಗೆ ಒರಗಿ "ದೊಡ್ಡ ಪ್ರಾಣಿ" "ಚಿಕ್ಕ ಪ್ರಾಣಿ" - ಎರಡೂ ಕೂತಿದ್ದವು. ಆರು ತಿಂಗಳ ಹಿಂದೆ ಆಕಸ್ಮಿಕವಾಗಿ ಅವರನ್ನು ನೋಡಿದ್ದಾಗಿಂತ ಈಗ ಸ್ವಲ್ಪ ವಯಸ್ಸಾದವರಂತೆ ಕಾಣಿಸಿದರು.

ಪಾದರಸದ ಕರೆ ಇದ್ದ ಕಲ್ಲಿನಂತೆ ಕಾಣುತ್ತಿದ್ದ ಆ ಮಣಿಯಿಂದ ಜನ ದೂರ ಸರಿದರು. "ವೀ" ಏನಸ್ ಸ್ಟಾಫ್ ಮಣಿಯನ್ನು ತೆಗೆದುಕೊಂಡು, ಅದರ ಮೇಲೆ ತಟ್ಟಲೆಂದು ಕುಳಿತುಕೊಂಡ. ಚುವಾಂಗ್ ಮೂಸಾನ್‌ನನ್ನು ಮಾತಾಡಿಸಲು ತಿರುಗಿದ.

"ನೀವಿಬ್ಬರು ಮಾತ್ರವೇ ಬಂದಿದ್ದೀರಾ?"

"ಹೌದು ನಾವಿಬ್ಬರೇ?"

"ನಿನ್ನ ಮಕ್ಕಳೇಕೆ ಬರಲಿಲ್ಲ?"

"ಅವರಿಗೆ ಬಿಡುವಿರಲಿಲ್ಲ"

"ಈ ಕಾರಣಕ್ಕಾಗಿ ಅಲ್ಲವೆ ಇದ್ದಿದ್ದರೆ ಹೊಸ ವರ್ಷದಲ್ಲಿ ನಿಮ್ಮನ್ನು ಇಲ್ಲಿಗೆ ಬರಮಾಡಿಕೊಳ್ಳುತ್ತಿರಲಿಲ್ಲ. ನನಗನಿಸುತ್ತೆ, ನೀವು ಸಾಕಷ್ಟು ಇದನ್ನು ಅನುಭವಿಸಿರಬೇಕೂಂತ. ಎರಡು ವರ್ಷಕ್ಕಿಂತ ಹೆಚ್ಚಾಗಿಯೇ ಆಗಿರಬೇಕಲ್ಲ? ಸುಮ್ಮನೆ ಎಳೀತಾ ಹೋಗೋಕಿಂತ ಶತ್ರುತ್ವಾನ ದೂರ ಮಾಡ್ಕೊಂಡು ಬಿಡೋದೇ ಒಳ್ಳೇದು. ಐ-ಕು ಜೊತೆ ಅವಳ ಗಂಡ ಇರೋಕೆ ಇಷ್ಟಪಡಲಿಲ್ಲ. ಅಲ್ಲದೆ ಅವಳ ಮಾವನಿಗೂ, ಅತ್ತೆಗೂ ಅವಳನ್ನು ಕಂಡರೆ ಆಗೋದಿಲ್ಲ – ಹೀಗಿರುವಾಗ ನಾನು ಮೊದಲೇ ಹೇಳಿದ ಹಾಗೆ, ಇಬ್ಬರೂ ಬೇರೆ ಆಗೋದೇ ಒಳ್ಳೇದು. ಇನ್ನು ನಿಮಗೆ ಬುದ್ಧಿ ಹೇಳೋಕೆ ನನಗೆ ಮುಖ ಇಲ್ಲ. ನಿಮಗೆ ಗೊತ್ತಿದ್ದ ಹಾಗೆ ಏಳನೇ ಯಜಮಾನ ಯಾವಾಗಲೂ ನ್ಯಾಯದ ಪರವೇ." ಆತನ ಅಭಿಪ್ರಾಯವೂ ನನ್ನದೇ ಆಗಿದೆ. ಆದರೆ ಎರಡೂ ಕಡೆಯವರೂ ಎಲ್ಲೋ ಒಂದೊಂದು ಕಡೆ ರಾಜಿ ಆಗಬೇಕಾಗುತ್ತದೆ. ಆತ ಶೀಹ್ ಕುಟುಂಬದವರಿಗೆ ಪರಿಹಾರ ಹಣಕ್ಕೆ ಇನ್ನೊಂದು ಹತ್ತು ಡಾಲರ್ ಹಾಕಲು ಹೇಳಿದ್ದಾನೆ. ಒಟ್ಟು ತೊಂಬತ್ತು ಡಾಲರ್ ಆಗುತ್ತೆ"

"......................."

"ತೊಂಬತ್ತು ಡಾಲರ್!...........ಈ ಕೇಸನ್ನು ಚಕ್ರವರ್ತಿಗಳ ಬಳಿಗೆ ತೆಗೆದುಕೊಂಡು ಹೋದರೂ ಇಷ್ಟು ದೊಡ್ಡ ಮೊತ್ತದ ಪರಿಹಾರ ಧನ ಸಿಗುತ್ತಿರಲಿಲ್ಲ. ಆ ಏಳನೇ ಯಜಮಾನನೊಬ್ಬನಿಗೆ ಮಾತ್ರವೇ ಇದು ಸಾಧ್ಯವಾಗಿದೆ!"

ಏಳನೇ ಯಜಮಾನ, ಕೇವಲ ರಂಧ್ರಗಳಂತಿದ್ದ ಕಣ್ಣುಗಳನ್ನು ಅಗಲಿಸಿ ಮೂಂ ಸಾಂಗ್ ಕಡೆ ಒಟ್ಟಿಗೆ ಸೂಚಿಸುವಂತೆ ನೋಡಿದ.

ಐ-ಕುಗೆ ಪರಿಸ್ಥಿತಿ ಬಹಳ ಗಂಭೀರ ಅನ್ನಿಸಿತು. ತೀರ ಪ್ರದೇಶದ ಕುಟುಂಬದವರೆಲ್ಲ ತನ್ನ ತಂದೆಯೆದುರು ಭಯ ಭಕ್ತಿಯಿಂದ ನಿಲ್ಲುತ್ತಿದ್ದರು. ಅಂತಹ ತಂದೆಗೆ ಇಲ್ಲಿ ಒಂದು ಮಾತಾಡಲು ಆಗದೆ ಇದ್ದುದಕ್ಕೆ ಅವಳಿಗೆ ದಿಗ್ಭ್ರಮೆಯಾಯಿತು. ಇಂಥಾದ್ದನ್ನು ಅವಳು ನಿರೀಕ್ಷಿಸಿರಲಿಲ್ಲ. ಏಳನೆಯ ಯಜಮಾನ ಹೇಳಿದ್ದೇನೂಂತ ಸರಿಯಾಗಿ ಅರ್ಥವಾಗಲಿಲ್ಲವಾದರೂ ಒಟ್ಟಾರೆಯಾಗಿ ಆತ ದಯಾವಂತ. ತಾನು [illegible] ಹೆದರಿಕೆ ಹುಟ್ಟಿಸುವ ಹಾಗೆ ಇಲ್ಲವೆಂಬುದು ಮಾತ್ರ ಅವಳಿಗೆ ಮನವರಿಕೆಯಾಯಿತು.

"[illegible]"–ಎಂದು ಧೈರ್ಯವಾಗಿ [illegible] [illegible]

ನಿರ್ವಹಿಸಬೇಕಿದ್ದ ಯಾವ ಕರ್ತವ್ಯವನ್ನೂ ಬಿಡಲಿಲ್ಲ. ಆದರೂ ತಪ್ಪುಗಳನ್ನು ಹುಡುಕುವುದೇ ಅವರ ಕೆಲಸವಾಗಿತ್ತು. ಪ್ರತಿಯೊಬ್ಬರೂ ನನ್ನನ್ನು ಹಂಗಿಸಿ ಅವಮಾನ ಮಾಡುತ್ತಿದ್ದರು. ಆ ವರ್ಷ ಮುಂಗುಲಿ (ವೀಸೆಲ್) ಒಂದು ದೊಡ್ಡ ಹುಂಜವನ್ನು ಸಾಯಿಸಿತು. ಅದಕ್ಕೆ ಹುಂಜದ ಮೇಲೆ ಬುಟ್ಟಿ ಯಾಕೆ ಮುಚ್ಚಲಿಲ್ಲ ಅಂತ ನನ್ನನ್ನು ಬಯ್ಯೋದೆ? ಆ ಮುಂಡೇದು ಅಕ್ಕಿ ತಿನ್ನೋಕೇಂತ ಗೂಡಿಂದ ಆಚೆ ಬಂದಿತ್ತು. ಆದರೆ ನನ್ನ ಗಂಡ ಅನ್ನೋ ಪ್ರಾಣಿಗೆ ಸತ್ಯ ಏನೂಂತ ತಿಳಿಯೋಕೆ ಮನಸ್ಸಿದ್ದರೆ ತಾನೇ! ಕೆನ್ನೆ ಮೇಲೆ ಜೋರಾಗಿ ಬಿಗಿದ....."

ಏಳನೆಯ ಯಜಮಾನ ಅವಳತ್ತ ನೋಡಿದ.

"ನಂಗೊತ್ತು, ಏನಾದರೂ ಕಾರಣ ಇರಬೇಕು. ಏಳನೆ ಯಜಮಾನರು ಇದನ್ನು ಗಮನಿಸುತ್ತಾರೇಂತ ನಂಬಿದ್ದೀನಿ. ಸತ್ಯ ಏನೂಂತ ತಿಳಿದವರು ಎಲ್ಲವನ್ನೂ ತಿಳಿದಿರುತ್ತಾರೆ." ಚೆನ್ನಾಗಿ ಅವಳು ಮೋಡಿ ಮಾಡಿರಬೇಕು. ನನ್ನನ್ನು ಓಡಿಸೋಕೇ ನೋಡಿದ! ಶಾಸ್ತ್ರೋಕ್ತವಾಗಿ ನಾನು ಮದುವೆಯಾಗಿದ್ದೀನಿ. ಮೂರು ರಾಶಿ ಟೀ, ಆರು ಉಡುಗೊರೆ – ಎಲ್ಲವನ್ನೂ ವಧುವಿನ ಪಲ್ಲಕ್ಕಿಯಲ್ಲಿ ಹೊತ್ತು ಅವರ ಮನೆಗೆ ತಂದಿದ್ದಾಯಿತು. ನನ್ನನ್ನು ಆಚೆಗೆ ಎಸೆಯೋದು ಅಷ್ಟು ಸುಲಭ ಅಂತ ತಿಳ್ಕೊಂಡಿದ್ದಾನೇನು?.......ನಾನು ಕೋರ್ಟಿಗೆ ಹೋಗೋಕೂ ಹೆದರುವುದಿಲ್ಲ ಅನ್ನೋದನ್ನು ಅವರಿಗೆ ತೋರಿಸಬೇಕಿದೆ. ಜಿಲ್ಲಾ ಕೋರ್ಟಿನಲ್ಲಿ ಇದರ ತೀರ್ಮಾನ ಆಗುತ್ತೆ. ಜಿಲ್ಲಾ ನ್ಯಾಯಾಧೀಶರ ಬಳಿ ಹೋಗ್ತೇವೆ."

"ಏಳನೆಯ ಯಜಮಾನನಿಗೆ ಎಲ್ಲಾ ಗೊತ್ತಿದೆ." – ವೀ ತಲೆ ಎತ್ತಿ ಹೇಳಿದ.

"ನೀನು ಹೀಗೇ ಮಾಡಬೇಕೂಂತ ಹಟ ಹಿಡಿದರೆ, ಇದರಿಂದ ನಿನಗೇನೂ ಲಾಭ ಇಲ್ಲ. ನೀನಂತೂ ಒಂದು ಚೂರು ಬದಲಾಗಿಲ್ಲ. ನಿಮ್ಮ ತಂದೆ ನೋಡು, ಹೇಗಿದ್ದಾನೆ. ನೀನು ನಿನ್ನ ಅಣ್ಣಂದಿರು ಹೀಗಿರೋದು ದುರಾದೃಷ್ಟ. ನೀನು ಹೇಳಿದ ಹಾಗೆ ಜಿಲ್ಲಾ ನ್ಯಾಯಾಧೀಶರ ಬಳಿ ಹೋದರೆ, ಏಳನೆಯ ಯಜಮಾನನ ಜೊತೆ ಚರ್ಚೆ ಮಾಡೋದಿಲ್ಲ ಅಂದ್ಕೊಂಡಿದ್ದೀಯ? ಆಗ ಈ ಕೇಸು ಎಲ್ಲರಿಗೂ ಗೊತ್ತಾಗುತ್ತೆ. ಯಾರ ಭಾವನೆಗಳೂ ಲೆಕ್ಕಕ್ಕೆ ಬರೊಲ್ಲ.....ಇದು ಈ ರೀತಿ ಇರುವಾಗ....."

"ನನ್ನ ಪ್ರಾಣ ಹೋದರೂ ಎರಡು ಕುಟುಂಬಗಳು ನಾಶವಾದರೂ ಚಿಂತೆಯಿಲ್ಲ!"

"ಇಷ್ಟು ಅತಿರೇಕಕ್ಕೆ ಹೋಗಬೇಕಾದ ಅಗತ್ಯ ಇಲ್ಲ." ಏಳನೆಯ ಯಜಮಾನ ನಿಧಾನವಾಗಿ ಹೇಳಿದ. "ನೀನು ಇನ್ನೂ ಚಿಕ್ಕವಳು. ಶಾಂತಿಯಿಂದ ಇರಬೇಕು. ಶಾಂತಿಯಿಂದ ಐಶ್ವರ್ಯ ಸಾಧ್ಯ–ಹೌದೋ ಅಲ್ಲೋ? ನಾನು ನಿನ್ನ ಪರಿಹಾರಧನಕ್ಕೆ ಹತ್ತು ಡಾಲರ್‌ಗಳನ್ನು ಸೇರಿಸಿದ್ದೀನಿ. ನಾನು ಉದಾರವಾಗಿದ್ದೀನಿಂತ ಅನಿಸಲಿಲ್ಲವೇ? ನಿನ್ನ ಅತ್ತೆ ಮಾವ ನಿನ್ನನ್ನು ಹೋಗು ಅಂದರೆ, ಹೋಗಲೇಬೇಕು. ಜಿಲ್ಲಾಧಿಕಾರಿ

ಅಮ್ಮಾ ಇದೂಂತ ಮಾತಾಡಬೇಡ. ಪೀಕಿಂಗ್‌ನ ವಿದೇಶೀ ಶಾಲೆಯಿಂದ ಈಗಷ್ಟೇ ಬಂದಿದ್ದಾನೆ. ಚೂಪಾದಗದ್ದದ ಮನೆ ಹುಡುಗನ ಕಡೆ ನೋಡಿ ಕೇಳಿದ "ಹೌದಲ್ಲೋ?"

ಚೂಪು ಗಲ್ಲದ ಹುಡುಗ ಮೆಲುದನಿಯಲ್ಲಿ ಗೌರವಪೂರ್ಣವಾಗಿ "ಖಂಡಿತಾ"– ಎಂದು ಮರು ನುಡಿದ.

ಐ–ಕುಗೆ ಈಗ ತಾನು ಒಬ್ಬೊಂಟಿ ಎನಿಸಿತು. ಅಪ್ಪ ಮಾತಾಡಲು ಮುಂದಾಗಲಿಲ್ಲ. ಅಣ್ಣಂದಿರು ಬರುವುದಕ್ಕೇ ಹೆದರಿದರು. "ವೀ" ಅಂತೂ ಯಾವಾಗಲೂ ತನ್ನ ವಿರೋಧ ಪಕ್ಷವೇ! ಈಗ ಏಳನೆಯ ಯಜಮಾನನೂ ಜೊತೆಗೆ ನಿಲ್ಲಲಿಲ್ಲ. ಚೂಪು ಗದ್ದದ ಹುಡುಗ ಕೂಡಾ. ಕಡೆಗೆ ಅವನಿಂದ ಏನನ್ನು ನಿರೀಕ್ಷಿಸಲಾಗಿತ್ತೋ ಅದನ್ನೇ ಹೇಳಿದ. ಅವಳಿಗೆ ಧಿಕ್ಕು ತೋಚಲಿಲ್ಲವಾದರೂ, ತನ್ನ ಕಡೆಯ ನಿಲುವನ್ನು ವ್ಯಕ್ತಪಡಿಸಬೇಕೆಂದುಕೊಂಡಳು.

"ಏನು! ಏಳನೆಯ ಯಜಮಾನರೂ......" ಅವಳ ಕಣ್ಣುಗಳಲ್ಲಿ ಆಶ್ಚರ್ಯ ನಿರಾಶೆಗಳು ಕಾಣಿಸಿದವು. "ಹೌದು, ನಾವು ಹಳ್ಳಿ ಜನ ಒರಟರು, ಅಜ್ಞಾನಿಗಳು. ಯಾರ ಜೊತೆಗೆ ಹೇಗೆ ನಡೆದುಕೊಳ್ಳಬೇಕೂಂತ ತಿಳೀದಿರೋ ನನ್ನ ತಂದೆಯನ್ನು ಅನ್ನಬೇಕು. ಅವರಲ್ಲಿದ್ದ ಹಿಂದಿನ ಬುದ್ಧಿಯೆಲ್ಲ ಹಾಳಾಗಿ ಹೋಯ್ತು. ಆ ದೊಡ್ಡ ಪ್ರಾಣಿ, ಚಿಕ್ಕ ಪ್ರಾಣಿ ಹೇಗೆ ಬಯಸಿದ್ದರೋ ಹಾಗೆ ಆಯ್ತು. ತಮಗೆ ಬೇಡವಾದವರು ಎದುರಿದ್ದಾಗ, ಅವರ ಮೇಲೆ ಹಾಯುವುದಕ್ಕೆ ಯಾವ ಮಟ್ಟಕ್ಕೆ ಬೇಕಾದರೂ ಹೋಗ್ತಾರೆ.

"ನೋಡಿದಿರಾ ಏಳನೆಯ ಯಜಮಾನರೇ" – ಅವಳ ಹಿಂದೆ ನಿಂತಿದ್ದ ಅವಳ ಗಂಡ ತಕ್ಷಣ ಹೇಳಿದ. ಈ ಯಜಮಾನರ ಮುಂದೆ ಹೀಗೆ ಮಾತಾಡೋಕೂ ಹೆದರೊಲ್ಲ! ಮನೆಯಲ್ಲಂತೂ ಇವಳು ಯಾರೂ ನೆಮ್ಮದಿಯಾಗಿ ಇರೋಕೇ ಬಿಡಲಿಲ್ಲ. ನಮ್ಮಪ್ಪನನ್ನು ದೊಡ್ಡ ಪ್ರಾಣಿ, ನನ್ನನ್ನು ಚಿಕ್ಕ ಪ್ರಾಣಿ ಅಥವಾ ಸೂಳೆಮಗ ಅಂತ ಕರೀತಾಳೆ."

"ಯಾರೋ ನಿನ್ನನ್ನ ಸೂಳೆಮಗ ಅಂತ ಕರೆದದ್ದು?" ಭಯಂಕರವಾಗಿ ಕಿರುಚುತ್ತಾ ಅವನೆಡೆ ತಿರುಗಿದಳು. ನಂತರ ಏಳನೆಯ ಯಜಮಾನನ ಕಡೆ ತಿರುಗಿ, "ನನಗೆ ನಿಮ್ಮ ಮುಂದೆ ಹೇಳಬೇಕಾದ ಒಂದು ವಿಷಯ ಇದೆ. ಯಾವಾಗಲೂ ನನ್ನನ್ನು ಬಹಳ ಕೀಳಾಗಿ ಕಾಣುತ್ತಿದ್ದ, ರಂಡೆ, ಮುಂಡೆ ಅಂತಲೇ ನನ್ನನ್ನು ಕರೀತಿದ್ದದ್ದು. ಆ ಸೂಳೆ [illegible] ಗಂಡು [illegible] ಮೇಲಂತೂ ನನ್ನ ವಂಶದವರನ್ನೆಲ್ಲಾ ಬಯ್ಯುತ್ತಾ [illegible] [illegible] [illegible] ನೀವೇ ತೀರ್ಮಾನ ಮಾಡಿ. ತೀರ್ಮಾನ ಕೊಡಿ ಯಜಮಾನರೇ!"

[illegible] ಮಿಕ್ಕವರು ಮಾತು ಹೊರಡದೇ [illegible] ನಿಂತಿದ್ದ, ಏಳನೆಯ [illegible] [illegible] [illegible] ಒಮ್ಮೆಲೇ [illegible]ದನಿಯಲ್ಲಿ.

“ಬಾ ಇಲ್ಲಿ!” – ಎಂದು ಕರೆದ.

ನಿಂತು ಹೋದ ಎದೆ ಬಡಿತ ಮತ್ತೆ ಶುರುವಾಗಿ, ಹೊಡೆದುಕೊಳ್ಳಲಾರಂಭಿಸಿತು. ಅವಳು ಸೋತಳು. ಎಲ್ಲ ತಿರುಗು ಮುರುಗಾಯಿತು. ತಪ್ಪು ಹೆಜ್ಜೆ ಹಾಕಿ ಕಡೆ ಕಡೆಗೆ ಜಾರಿ ನೀರಿಗೆ ಬಿದ್ದಳು. ಈಗ ಅವಳಿಗೆ ತಾನು ಮಾಡಿದ ತಪ್ಪಿನ ಅರಿವಾಯಿತು.

ನೀಲಿ ಗೌನು, ಕಪ್ಪು ಜಾಕೆಟ್ ಹಾಕಿದ ವ್ಯಕ್ತಿಯೊಬ್ಬ ನೇರವಾಗಿ ಬಂದು ಒಂದು ಕೋಲಿನಂತೆ ತನ್ನೆರಡೂ ಕೈಗಳನ್ನು ಜೇಬಿನಲ್ಲಿರಿಸಿ ಏಳನೆ ಯಜಮಾನನ ಮುಂದೆ ನಿಂತುಕೊಂಡ.

ಏಳನೇ ಯಜಮಾನ ಮಾತಾಡಲು ತುಟಿ ಅಲುಗಾಡಿಸಿದ. ಆದರೆ ಆತ ಏನು ಹೇಳುತ್ತಿದ್ದಾನೆಂಬುದು ಯಾರಿಗೂ ಕೇಳಿಸಲಿಲ್ಲ. ಆತನ ಕೆಲಸದಾಳಿಗೆ ಮಾತ್ರ ಕೇಳಿಸಿತು. ಆತನ ಮಾತಿನ ಬಿರುಸು ಅವನಲ್ಲಿ ಇಳಿಯುತ್ತಿದ್ದಂತೆನಿಸುತ್ತಿತ್ತು. ಅವನ (ಕೆಲಸದಾಳು) ಉತ್ತರಿಸಿದ.

“ಆಯ್ತು ಯಜಮಾನರೇ” ಎಂದು ಹೇಳಿ, ನಂತರ ಒಂದು ನಾಲ್ಕು ಹೆಜ್ಜೆ ಹಿಂದೆ ಸರಿದು ಹೊರಟೇ ಹೋದ. ಏನೋ ಆಗಬಾರದ್ದು ಆಗಲಿದೇಂತ, ಐ–ಕುಗೆ ಅನಿಸಿತು. ಆಗುವುದನ್ನು ತನ್ನಿಂದ ತಡೆಯುವುದಕ್ಕೆ ಬಹುಶಃ ಆಗಲಾರದೆನಿಸಿತು. ಏಳನೆಯ ಯಜಮಾನನ ಸಾಮರ್ಥ್ಯ ಏನೆನ್ನುವುದು ಈಗ ಅವಳಿಗೆ ತಿಳಿದು ಬಂತು. ತಾನು ಮೊದಲು ತಪ್ಪು ಮಾಡಿದೆ, ಒರಟಾಗಿ, ಕ್ರೂರವಾಗಿ ನಡೆದುಕೊಂಡೆ ಎನಿಸಿತು. ತೀವ್ರವಾಗಿ ಪಶ್ಚಾತ್ತಾಪ ಪಟ್ಟಳು. ತನ್ನೊಳಗೇ, ಹೇಳಿಕೊಳ್ಳುವಂತೆ, “ಏಳನೆಯ ಯಜಮಾನ ಹೇಳಿದ್ದನ್ನು ಒಪ್ಪಿಕೊಳ್ಳಬೇಕೆಂದು ಯಾವಾಗಲೂ ಯೋಚಿಸಿದ್ದೆ”– ಎಂದಳು.

ಅವಳ ಧ್ವನಿ ಕೀಚು ಧ್ವನಿಯಂತೆ, ಕೇಳಿಯೂ ಕೇಳಿಸದಂತೆ ಇದ್ದರೂ ತೆಳು ರೇಶಿಮೆಯಂತೆ ಮೃದುವಾಗಿದ್ದರೂ “ವೀ” ಗೆ ಮಾತ್ರ ಗುಡುಗಿನಂತೆ ಕೇಳಿಸಿದವು.

“ತುಂಬಾ ಒಳ್ಳೇದು” ಎಂದು ಭಾವೋದ್ವೇಗದಿಂದ ಜಿಗಿದು ಒಪ್ಪಿಗ ಸೂಚಿಸುವಂತೆ ನುಡಿದ. “ಏಳನೆಯ ಯಜಮಾನ ನಿಜವಾಗಿಯೂ ನ್ಯಾಯ ಸಲ್ಲಿಸಿದ್ದಾರೆ. ಐ–ಕು ಕೂಡಾ ಸಾಕಷ್ಟು ಉದಾರವಾಗಿದ್ದಾಳೆ. ಆದ್ದರಿಂದ ಮೂ–ಸಾನ್, ನಿನ್ನ ಮಗಳೇ ಒಪ್ಪಿಗೆ ನೀಡಿರುವಾಗ ನಿನ್ನದೇನೂ ಅಭ್ಯಂತರವಿಲ್ಲ ಎಂದುಕೊಳ್ಳುತ್ತೇನೆ. ಮದುವೆಯ ಪ್ರಮಾಣ ಪತ್ರಗಳನ್ನು, ನಾನು ಹೇಳಿದಂತೆ ತಂದಿದ್ದೀಯಾಂತ ಭಾವಿಸುತ್ತೇನೆ. ಈಗ ಎರಡೂ ಕಡೆಯವರು ಅವುಗಳನ್ನು ತಂದು ಮುಂದಿರಿಸಲಿ....”

ಐ–ಕು, ತನ್ನ ತಂದೆ ಸೊಂಟದಲ್ಲಿ ಏನನ್ನೋ ಹುಡುಕುತ್ತಿರುವುದನ್ನು ಗಮನಿಸಿದಳು. ಕಡ್ಡಿಯಂತೆ ಇದ್ದ ಕೆಲಸದಾಳೊಬ್ಬ ಬಂದು, ಚಿಕ್ಕದಾದ, ಚಪ್ಪಟೆಯಾದ

ಆಮೆಯಾಕಾರದ ಕಪ್ಪು ವಸ್ತುವೊಂದನ್ನು ಏಳನೆಯ ಯಜಮಾನನ ಕೈಗೆ ನೀಡಿದ. ಏನೋ ಆಗಬಾರದ್ದು ಆಗುತ್ತೇಂತ, ಐ-ಕು ಹೆದರಿದಳು. ತಂದೆಯ ಕಡೆಗೊಮ್ಮೆ ದೃಷ್ಟಿ ಹಾಯಿಸಿದಳು. ಆದರೆ ಅವನು ಮೇಜಿನ ಮೇಲಿದ್ದ ನೀಲಿ ಪೊಟ್ಟಣದಿಂದ ಬೆಳ್ಳಿ ನಾಣ್ಯಗಳನ್ನು ತೆಗೆಯುತ್ತಿದ್ದ.

ಏಳನೆಯ ಯಜಮಾನ ಆಮೆಯಂತಿದ್ದ ಮುಚ್ಚಳವನ್ನು ತೆಗೆದು ಅದರೊಳಗಿದ್ದ ವಸ್ತುವನ್ನು ಅಂಗೈಯಲ್ಲಿ ಸುರಿದುಕೊಂಡು ಉಜ್ಜಿ, ಮೂಗಿನ ಹೊಳ್ಳೆಗಳೊಳಕ್ಕೆ ಏರಿಸಿದ. ಏರಿಸುವಾಗ ಮೂಗು ಮತ್ತು ಮೇಲ್ತುಟಿಯನ್ನು ಕರೆ ಮಾಡಿಕೊಂಡ. ನಂತರ ಮೂಗನ್ನೇರಿಸುತ್ತಾ, ಸೀನುವುದಕ್ಕೆ ಸಿದ್ಧವಾದ.

ಚುವಾಂಗ್ ಮೂ ಸಾನ್ ನಾಣ್ಯಗಳನ್ನು ಎಣಿಸತೊಡಗಿದ. "ವೀ" ಎಣಿಸದೆ ರಾಶಿಯಲ್ಲಿದ್ದ ಮತ್ತೊಂದಷ್ಟು ನಾಣ್ಯಗಳನ್ನು ಅದರಿಂದ ತೆಗೆದು ಮುದಿ ಪ್ರಾಣಿಗೆ ನೀಡಿದ. ಕೆಂಪು ಮತ್ತು ಹಸಿರು ಪ್ರಮಾಣ ಪತ್ರಗಳನ್ನು ಮೊದಲಿದ್ದವರ ವಶಕ್ಕೆ ಒಪ್ಪಿಸಿದ.

"ಅದನ್ನು ಇಟ್ಟು ಬಿಡು". ಆತನೆಂದ. ಮೂ ಸಾನ್ ಮೊದಲು ಹಣ ಸರಿ ಇದೆಯೇ ಎಂದು ನೋಡಿಕೊ. ಎಲ್ಲ ಬೆಳ್ಳಿ ನಾಣ್ಯಗಳು. ಅಷ್ಟು ಸುಲಭ ಅಲ್ಲ!"

"ಅಕ್ಷಿ......!"

ಏಳನೆಯ ಯಜಮಾನ ಸೀನಿದ್ದೆಂದು ಐ-ಕುಗೆ ತಿಳಿಯಿತು. ಆ ಕಡೆ ನೋಡದೆ ಇರಲು ಸಾಧ್ಯವಾಗಲಿಲ್ಲ. ಬಾಯಿ ಅಗಲವಾಗಿ ತೆರೆದಿತ್ತು. ಮೂಗು ಮುಲುಗುತ್ತಿತ್ತು. ತನ್ನೆರಡು ಬೆರಳುಗಳ ಮಧ್ಯೆ ಹಿಂದಿನವರು ಗೋರಿಗಳಲ್ಲಿ ಇರಿಸುತ್ತಿದ್ದ ಆ ವಸ್ತುವನ್ನು ಹಿಡಿದೇ ಇದ್ದ. ಆ ವಸ್ತುವಿನಿಂದ ಮೂಗನ್ನು ಕೆರೆದುಕೊಳ್ಳುತ್ತಿದ್ದ.

ಕಷ್ಟಪಟ್ಟು ಮೂ ಸಾನ್ ನಾಣ್ಯ ಎಣಿಸುವುದನ್ನು ಮುಗಿಸಿದ್ದ. ಎರಡೂ ಕಡೆ ಕೆಂಪು ಹಸಿರು ಪ್ರಮಾಣ ಪತ್ರಗಳನ್ನು ಪಕ್ಕಕ್ಕೆ ಇಟ್ಟು ಬಿಟ್ಟರು. ಅವರ ನಡುವೆ ಇದ್ದ ಬಿಗಿ ಈಗ ಸಡಿಲವಾಯಿತು. ನೆಮ್ಮದಿಯ ಉಸಿರಾಡಿದರು. ಪೂರ್ತಿಯಾಗಿ ರಾಜಿಯಾಗಿತ್ತು.

"ಒಳ್ಳೆಯದಾಯಿತು..... ಅಂತೂ ಈ ಸಮಸ್ಯೆ ಸಮಾಧಾನವಾಗಿ ಪರಿಹಾರವಾಯಿತು." ವಿ ಹೇಳಿದ. ಅವರು ಅಲ್ಲಿಂದ ಹೋಗುತ್ತಿರುವುದನ್ನು ಗಮನಿಸಿ ನಿರಾಳವಾಗಿ ಉಸಿರಾಡಿದ. "ಈಗ ನಮ್ಮ ಮಾಡೋದೇನೂ ಇಲ್ಲ. ಈ ಸಮಸ್ಯೆ ಸಮಸ್ಯೆಯ ಗಂಟು ಬಿಡಿಸಿದ್ದಕ್ಕೆ ಅಭಿನಂದನೆಗಳು!...ನೀವೂ ಹೊರಟರೇನು? ಹೊಸ ವರ್ಷದ ಹಬ್ಬದ ಸಮಾರಂಭಕ್ಕೆ ನೀವೂ ಬನ್ನಿ ಇರಬಾರದು. ಅಪರೂಪದ ಅವಕಾಶವಲ್ಲವೇ!

"ಇಲ್ಲ ನಾವು ಇರಬಾರದು. ಮುಂದಿನ ವರುಷದ ಸಂತೋಷ ಕೂಟಕ್ಕೆ ಬರುತ್ತೇವೆ" ಐ–ಕು ಹೇಳಿದಳು.

"ಧನ್ಯವಾದಗಳು ಮಿಸ್ಟರ್ ವೀ. ನಮಗೆ ಬೇರೆ ಕೆಲಸವಿದೆ." ಮೂ ಸಾನ್, ಮುದಿ ಪ್ರಾಣಿ, ಯುವ ಪ್ರಾಣಿ ಎಲ್ಲರೂ ಗೌರವಪೂರ್ವಕವಾಗಿ ಅಲ್ಲಿಂದ ಬೀಳ್ಕೊಂಡರು.

"ನೀವು ಹೋಗೋಕೆ ಮುಂಚೆ ಒಂದೇ ಒಂದು ಗುಟುಕು?" ಹಿಂದೆ ನಿಂತಿದ್ದ ಐ–ಕುಳತ್ತ ವೀ ಕಣ್ಣು ಹಾಯಿಸಿದ.

"ನಿಜವಾಗಿಯೂ ನಾವು ತಗೋಬಾರದು. ಧನ್ಯವಾದಗಳು ವೀ ಅವರೇ."

❖ ❖ ❖

ಹುಚ್ಚನ ದಿನಚರಿ

ನನಗೆ ಹೈಸ್ಕೂಲಿನಲ್ಲಿ ಇಬ್ಬರು ತುಂಬ ಒಳ್ಳೆ ಗೆಳೆಯರಿದ್ದರು. ಅವರ ಹೆಸರು ಹೇಳೋ ಅಗತ್ಯ ಇಲ್ಲಾನ್ನಿ; ಆದರೆ ಬಹಳ ದಿವಸಗಳ ಅಂತರವಿದ್ದುದರಿಂದ ಒಬ್ಬರನ್ನೊಬ್ಬರು ಭೇಟಿಯಾಗಲಿಲ್ಲ. ಆಮೇಲೆ ಎಷ್ಟೋ ದಿವಸಗಳ ಮೇಲೆ ಆ ಇಬ್ಬರಲ್ಲಿ ಒಬ್ಬರಿಗೆ ಬಹಳ ಹುಷಾರಿಲ್ಲ ಅನ್ನೋ ಸುದ್ದಿ ಮುಟ್ಟಿತು. ನಾನು ನನ್ನ ತವರಿಗೆ ಹೊರಟಿದ್ದೆ. ಅದ್ದರಿಂದ ಮಧ್ಯದಲ್ಲಿಯೇ ನನ್ನ ಪ್ರಯಾಣವನ್ನು ನಿಲ್ಲಿಸಿ, ನನ್ನ ಅನಾರೋಗ್ಯದ ಗೆಳೆಯನನ್ನು ನೋಡಲು ಹೋದೆ. ಅಲ್ಲಿ ಒಬ್ಬನನ್ನು ಮಾತ್ರ ನೋಡಿದೆ. ಆಮೇಲೆ ಗೊತ್ತಾಯಿತು. ಹುಷಾರಿಲ್ಲದವನು ಅವನ ತಮ್ಮಾಂತ.

"ಅಷ್ಟು ದೂರದಿಂದ ನಮ್ಮನ್ನು ನೋಡೋಕೇಂತ ಬಂದದ್ದು ನನಗೆ ತುಂಬಾ ಸಂತೋಷವಾಗಿದೆ. ಸ್ವಲ್ಪ ದಿನಗಳ ಹಿಂದೆ ಅವನ ಆರೋಗ್ಯ ಸರಿ ಇರಲಿಲ್ಲ. ಈಗ ಸುಧಾರಿಸಿದ್ದಾನೆ. ಬೇರೆ ಕಡೆಗೆ ಪೋಸ್ಟಿಂಗ್ ಆಗಿ ಹೋಗಿದ್ದಾನೆ" ಎಂದು ಹೇಳಿ ನಂತರ ನಗುತ್ತಲೇ ನನ್ನ ಕೈಗೆ ಎರಡು ಪುಸ್ತಕಗಳನ್ನು ಕೊಟ್ಟು ಹೇಳಿದ. ಇದರಿಂದ ಅವನ ಹಿಂದಿನ ಖಾಯಿಲೆಯ ಸ್ವರೂಪ ತಿಳಿಯುತ್ತೆ. ಅಲ್ಲದೆ ಹಳೆ ಸ್ನೇಹಿತನಾದವನಿಗೆ ಇದನ್ನು ತೋರಿಸುವುದರಿಂದ ಅಂತಹ ತೊಂದರೆಯೇನೂ ಆಗುವುದಿಲ್ಲ ಎಂದೂ ತಿಳಿಸಿದ. ನಾನು ಆ ದಿನಚರಿ ಪುಸ್ತಕಗಳ ಪುಟಗಳನ್ನು ತಿರುವಿ ಹಾಕಿದೆ. ಅವನು ಒಂದು ರೀತಿಯಲ್ಲಿ persicution complex ಅನ್ನೋ ಖಾಯಿಲೆಯಿಂದ ನರಳುತ್ತಿದ್ದಂತಹ ಅನುಭವವಾಯಿತು. ಬರವಣಿಗೆ ಅಸಂಬದ್ಧವಾಗಿತ್ತು. ಹುಚ್ಚುಚ್ಚಾದ ಹೇಳಿಕೆಗಳಿದ್ದವು. ಆದರೆ ಅವುಗಳಲ್ಲಿ ದಿನಾಂಕಗಳನ್ನು ನಮೂದಿಸಿರಲಿಲ್ಲ. ಮಸಿಯ ಬಣ್ಣಗಳಿಂದ ಬೇರೆ ಬೇರೆ ದಿನಾಂಕಗಳಲ್ಲಿ ಬರೆದಿರಬೇಕೆಂದು ಊಹಿಸಿಕೊಳ್ಳಬಹುದಾಗಿತ್ತು. ಬರವಣಿಗೆಯ ಕೆಲವು ಭಾಗಗಳ ನಡುವೆ ಸ್ವಲ್ಪ ಸಂಬಂಧವಂತೂ ಇತ್ತು. ಒಂದು ಭಾಗವನ್ನು, [illegible] ಪಾಠಕ್ಕೆ ಒಳಪಡಿಸಬಹುದು ಅನುಕೂಲವಾಗುತ್ತದೆಂದು ನಕಲು ಮಾಡಿಕೊಂಡೆ. ಅದರಲ್ಲಿ ಅಸಂಬದ್ಧವಾದ [illegible] ಅಕ್ಷರವನ್ನೂ [illegible] ಮಾತ್ರವೇ [illegible]

ಸರಿ ಸುಮರು ಹಳ್ಳಿಗಾಡಿನವರದು. ಪ್ರಪಂಚಕ್ಕೆ ಯಾರೂ ತಿಳಿದವರಲ್ಲವಾದ ಕಾರಣ ಅಂತಹ ತೊಂದರೆಯೇನೂ ಇರಲಿಲ್ಲ. ದಿನಚರಿ ಬರೆದವನೇ ತನಗೆ ಖಾಯಿಲೆ ವಾಸಿಯಾದ ನಂತರ ಶೀರ್ಷಿಕೆಯನ್ನು ಕೊಟ್ಟಿದ್ದ. ಆದ್ದರಿಂದ ಅದನ್ನು ನಾನು ಬದಲಾಯಿಸಲು ಹೋಗಲಿಲ್ಲ.

ಮೂವತ್ತು ಮೂರು ವರ್ಷಗಳಿಂದ ಅದನ್ನು ನೋಡಿರಲಿಲ್ಲ. ಇವತ್ತು ಅದನ್ನು ನೋಡಿದಾಗ ನನ್ನಲ್ಲಿ ಏನೋ ಉತ್ಸಾಹ ಬಂದಂತೆನಿಸಿತು. ಈ ಮೂವತ್ತು ವರ್ಷಗಳು ಏನೂ ತಿಳಿಯದೆ ಕತ್ತಲಲ್ಲಿದ್ದೆ. ಆದರೆ ಈಗ ಎಚ್ಚರಿಕೆಯಿಂದ ಇರಬೇಕೆನಿಸಿತು. ಅದಕ್ಕೇ ಬಹುಶಃ ಚಾವೋನ ಮನೆಯ ನಾಯಿ ನನ್ನನ್ನು ಎರಡು ಸಲ ದುರುಗುಟ್ಟಿ ನೋಡಿರಬೇಕು. ನನ್ನ ಭಯಕ್ಕೆ ಕಾರಣವಿದೆ.

II

ಈ ದಿನ ರಾತ್ರಿ ಚಂದ್ರನಿರಲಿಲ್ಲ. ಇದು ಕೆಡುಕೆನಿಸಿತು. ಬೆಳಿಗ್ಗೆ ಎಚ್ಚರಿಕೆಯಿಂದ ಹೊರ ಹೊರಟೆ. ಚಾವೋನ ಕಣ್ಣುಗಳಲ್ಲಿ ವಿಚಿತ್ರ ನೋಟವಿತ್ತು. ನನ್ನಿಂದ ಹೆದರಿದಂತೆ ನನ್ನನ್ನು ಕೊಲೆ ಮಾಡಲು ಬಯಸುತ್ತಿದ್ದಂತೆ ಆ ನೋಟವಿತ್ತು. ಇನ್ನೂ ಏಳೆಂಟು ಜನ ಅಲ್ಲಿದ್ದರು. ನನ್ನ ಬಗ್ಗೆ ಪಿಸುಮಾತಿನಲ್ಲಿ ಚರ್ಚೆ ನಡೆಸುತ್ತಿದ್ದರು. ನನ್ನನ್ನು ನೋಡಲು ಹೆದರಿದಂತೆನಿಸಿತು. ನಾನು ಹಾದು ಹೋದಾಗ ಜನರೆಲ್ಲರೂ ನನ್ನ ಬಗ್ಗೆ ಇದೇ ರೀತಿಯಲ್ಲಿ ವರ್ತಿಸುತ್ತಿದ್ದರು. ಅವರಲ್ಲಿ ಭಯಂಕರವಾಗಿ ಕಾಣಿಸುತ್ತಿದ್ದ ವ್ಯಕ್ತಿಯೊಬ್ಬ ನನ್ನತ್ತ ದುರುಗುಟ್ಟಿ ನೋಡಿದ. ಅವರ ಕೆಲಸಗಳೆಲ್ಲ ಪೂರ್ತಿಯಾಗಿರಬೇಕೆಂದೆನಿಸಿ ನಾನು ಅಡಿಯಿಂದ ಮುಡಿಯವರೆಗೆ ಹೆದರಿದೆ.

ಆದರೂ ನಾನು ಮುಂದೆ ಸಾಗುತ್ತಲೇ ಇದ್ದೆ. ನನ್ನ ಮುಂದೆ ನಿಂತಿದ್ದ ಮಕ್ಕಳ ಗುಂಪೊಂದು ನನ್ನ ಬಗ್ಗೆಯೇ ಮಾತಾಡುತ್ತಿದ್ದರು. ಚಾವೋನ ಕಣ್ಣುಗಳಲ್ಲಿ ಕಂಡಿದ್ದಂತಹ ನೋಟವೇ ಇವರ ಕಣ್ಣುಗಳಲ್ಲೂ ಕಾಣಿಸಿತು. ಇವರೆಲ್ಲ ನನ್ನ ಬಗ್ಗೆ ಹೀಗೆ ವರ್ತಿಸಲು ಕಾರಣ ಏನಿರಬಹುದೆಂದು ಯೋಚಿಸುತ್ತಿದ್ದೆ. "ಹೇಳಿ ನನಗೆ!" ಎಂದು ಕಿರುಚದೆ ಇರಲು ನನಗೆ ಸಾಧ್ಯವಾಗಲಿಲ್ಲ. ಆದರೆ ಅವರೆಲ್ಲ ಓಡಿ ಹೋದರು.

ಚಾವೋ ಆಗಲಿ, ರಸ್ತೆ ಮೇಲಿನ ಜನ ಆಗಲಿ ನನ್ನ ಮೇಲೆ ಈ ರೀತಿ ದ್ವೇಷ ಸಾಧಿಸುವುದಕ್ಕೆ ಕಾರಣ ಏನಿರಬಹುದೂಂತ ಆಶ್ಚರ್ಯಪಟ್ಟೆ. ಒಂದಿಪ್ಪತ್ತು ವರ್ಷಗಳ ಹಿಂದೆ ಮಿಸ್ಟರ್ ಕು ಚಿಯಾ ನ ಲೆಕ್ಕದ ಹಾಳೆಗಳ ಮೇಲೆ ಕಾಲಿರಿಸಿದ್ದನ್ನು ಬಿಟ್ಟರೆ ಮತ್ತೇನೂ ಕಾರಣ ಇದ್ದಂತೆನಿಸಿರಲಿಲ್ಲ. ಕು ಗೆ ಅಸಮಾಧಾನ ಆಗಿತ್ತು. ಆದರೆ ಚಾವೋಗೆ ಅವನು ಗೊತ್ತಿರಲಿಲ್ಲ. ಬಹುಶಃ ಇದರ ಬಗ್ಗೆ ಜನ ಮಾತಾಡುವುದನ್ನು ಕೇಳಿ ಸೇಡು ತೀರಿಸಿಕೊಳ್ಳಲು ಯೋಚಿಸಿರಬೇಕು. ಹಾಗಾಗಿ ಬೀದಿ ಜನರ ಜೊತೆ

ಸೇರಿ ಪಿತೂರಿ ನಡೆಸುತ್ತಿದ್ದಾನೆ. ಆದರೆ ಮಕ್ಕಳು? ಅವರಿನ್ನೂ ಆಗ ಹುಟ್ಟಿಯೇ ಇರಲಿಲ್ಲ. ಅಂಥಾದ್ದರಲ್ಲಿ ಅವರೂ ಕೂಡಾ ನನ್ನತ್ತ ಹಾಗೆ ವಿಚಿತ್ರವಾಗಿ ಯಾಕೆ ನೋಡಬೇಕು. ಏನೋ ನನ್ನಿಂದ ಹೆದರಿದವರ ಹಾಗೆ!? ನನ್ನನ್ನು ಕೊಲೆ ಮಾಡಲು ನೋಡ್ತಿರೋ ಹಾಗೆ!? ನನಗೆ ತುಂಬಾ ಹೆದರಿಕೆಯಾಗಿದೆ. ಜೊತೆಗೆ ಗಾಭರಿ, ತಲೆಚಿಟ್ಟು.

ನನಗೆ ಗೊತ್ತಾಯಿತು. ಅವರ ತಂದೆ ತಾಯಿಗಳಿಂದ ಇದನ್ನೆಲ್ಲ ಕೇಳಿ ತಿಳಿದಿರಬೇಕು.

III

ರಾತ್ರಿ ನಿದ್ದೇನೇ ಬರೊಲ್ಲ. ಎಲ್ಲವನ್ನೂ ಜಾಗರೂಕತೆಯಿಂದ ಗಮನಿಸಿ ಅರ್ಥ ಮಾಡ್ಕೊಳ್ಳಬೇಕಾಗುತ್ತೆ.

ಅವರಲ್ಲಿ ಕೆಲವರನ್ನು ಮ್ಯಾಜಿಸ್ಟ್ರೇಟ್ ಗಲ್ಲಿಗೇರಿಸಿದಾಗ, ಸ್ಥಳೀಯ ಜೆಂಟ್ರಿ ಮುಖದ ಮೇಲೆ ಹೊಡೆದಾಗ, ದಂಡಾಧಿಕಾರಿ ಅವರ ಹೆಂಡಂದಿರನ್ನು ಎಳೆದುಕೊಂಡು ಹೋದಾಗ, ಇಲ್ಲವೆ ಸಾಲಗಾರರು ಅವರ ತಂದೆ ತಾಯಿಗಳನ್ನು ಆತ್ಮಹತ್ಯೆಯತ್ತ ತಳ್ಳಿದಾಗಲೂ ಕಾಣದಿದ್ದ ಕ್ರೌರ್ಯ ನೆನ್ನೆ ಕಾಣಿಸಿತು.

ಎಲ್ಲಕ್ಕಿಂತ ವಿಶೇಷವಾಗಿ ಅನಿಸಿದ್ದು, ಬೀದಿ ಮೇಲಿನ ಆ ಹೆಂಗಸು ತನ್ನ ಮಗನಿಗೆ ಒಂದೆರಡೇಟು ಅಪ್ಪಳಿಸಿ, "ಪಿಶಾಚಿ, ನಿನ್ನ ಹರಿದು ಮುಕ್ಕಿ ತಿನ್ನುವವರೆಗೆ ನನಗೆ ಸಮಾಧಾನಾನೇ ಆಗೊಲ್ಲ' ಅಂತ ಹೇಳ್ತಾ ನನ್ನತ್ತಲೇ ನೋಡುತ್ತಿದ್ದಳು. ನನಗೂ ಇನ್ನೇನು ತಿರುಗಿ ಬೀಳೋಣ ಅನ್ನಿಸಿತು. ಆದರೆ ನಾನೇ ನಿಯಂತ್ರಿಸಿಕೊಂಡೆ. ಆಗ ಹಸಿರು ಮುಖದ, ಉದ್ದನೆಯ ಹಲ್ಲುಗಳ ಆ ಮಂದಿ ಒಂದು ಥರಾ ವ್ಯಂಗ್ಯವಾಗಿ ನಗುವುದಕ್ಕೆ ತೊಡಗಿದರು. ಮುದಿ ಚೆನ್ ಮುಂದೆ ಬಂದು ನನ್ನನ್ನು ಬೇಗ ಎಳೆದುಕೊಂಡ ಹೋದ.

ನನ್ನನ್ನು ಮನೆಗೆ ಎಳೆದು ತಂದ. ಮನೆಯಲ್ಲಿದ್ದವರು ನನ್ನ ಪರಿಚಯವೇ ಇಲ್ಲದವರಂತೆ ನಟಿಸಿಕೊಂಡರು. ಅವರ ಕಣ್ಣುಗಳಲ್ಲೂ ಅದೇ ನೋಟವಿತ್ತು. ನಾನು ನನ್ನ ಕೋಣೆಗೆ ಹೋದೆ. ಕೂಡಲೇ ಅವರು ಕೋಳಿನ್ನೋ ಬಾತನ್ನೋ ಭದ್ರಪಡಿಸುವ ಹಾಗೆ, ಹೊರಗಡೆಯಿಂದ ಬೀಗ ಹಾಕಿದರು. ಇದರಿಂದ ನನಗೆ ಇನ್ನಷ್ಟು ಸಿಟ್ಟು ಬಂತು.

ಕೆಲವು ದಿವಸಗಳ ಹಿಂದೆ "ವುಲ್ಫ್ ಕಬ್" ಹಳ್ಳಿಯಿಂದ ನಮ್ಮ ಬಾಡಿಗೆದಾರನೊಬ್ಬ ಬಂದಿದ್ದ. ಬೆಳೆಹಾನಿಯ ವಿಚಾರವನ್ನು ನನ್ನ ಅಣ್ಣನಿಗೆ ಹೇಳಿದ. ಜೊತೆಗೆ ತನ್ನ ಹಳ್ಳಿಗೆ [illegible] ಕುಖ್ಯಾತ ವ್ಯಕ್ತಿಯೊಬ್ಬನನ್ನು ಸಾಯುವಂತೆ ಹೊಡೆದು ಅವನ [illegible] ಪಿತ್ತಜನಕಾಂಗವನ್ನೂ ತೆಗೆದು ಎಣ್ಣೆಯಲ್ಲಿ ಕರಿದರು. ತಮ್ಮ ಧೈರ್ಯ ಹೆಚ್ಚಿಸಿಕೊಳ್ಳುವ ಸಲುವಾಗಿ ತಿಂದರೆಂದು [illegible]

ಚೆನ್ ಎಲ್ಲರನ್ನೂ ಆಚೆ ಕಳಿಸಿದ. ನನ್ನಣ್ಣ ಕಾಣಿಸಲಿಲ್ಲ. ಚೆನ್ ನನ್ನನ್ನು ರೂಮೊಳಗೆ ಹೋಗಲು ಹೇಳಿದ. ರೂಮಿನಲ್ಲಿ ದಟ್ಟವಾದ ಕತ್ತಲು ತುಂಬಿತ್ತು. ನನ್ನ ತಲೆ ಮೇಲಿದ್ದ ತೊಲೆಗಳು, ದಂಡಗಳು ಅಲುಗಾಡಿದವು. ಅಲುಗಾಡಿದ ಸ್ವಲ್ಪ ಹೊತ್ತಿಗೆ ಅವು ದೊಡ್ಡದಾದವು. ಅವೆಲ್ಲ ನನ್ನ ಮೇಲೆ ರಾಶಿಯಾಗಿ ಬಿದ್ದವು.

ಅವುಗಳ ಭಾರದಿಂದ ನನಗೆ ಚಲಿಸಲು ಆಗಲಿಲ್ಲ. ನಾನು ಸಾಯಬೇಕು ಅನ್ನೋದೇ ಅವರ ಆಸೆಯಾಗಿತ್ತು. ಆ ಭಾರ ನನ್ನ ಕಲ್ಪನೆಯಾಗಿತ್ತು. ಆದ್ದರಿಂದ ಅದರಿಂದ ಹೊರಗೆ ಬಂದೆ. ಮೈಯೆಲ್ಲ ಬೆವರಿನಿಂದ ತೊಯ್ದಿತ್ತು. ಆದರೂ ನನಗೆ ಹೇಳಲೇ ಬೇಕೆನಿಸಿತು–

"ನೀವೆಲ್ಲ ಬದಲಾಗಬೇಕು. ಮನದಾಳದಿಂದ ಬದಲಾಗಬೇಕು. ಇಲ್ಲವಾದರೆ ಈ ಪ್ರಪಂಚದಲ್ಲಿ ಮುಂದೆ ನಿಮಗೆ ಜಾಗ ಇರೋದಿಲ್ಲ."

X

ಸೂರ್ಯ ಮೂಡಲಿಲ್ಲ; ಬಾಗಿಲು ತೆಗೆಯಲಿಲ್ಲ; ಪ್ರತಿದಿನ ಎರಡು ಊಟ.

ನನ್ನ ಬಡಿಗೋಲು ತೆಗೆದುಕೊಂಡೆ. ನನ್ನಣ್ಣನ ನೆನಪಾಯಿತು. ನನ್ನ ತಂಗಿ ಹೇಗೆ ಸತ್ತಳು ಅನ್ನೋದು ಗೊತ್ತಿತ್ತು; ಎಲ್ಲವೂ ಅವನಿಂದಲೇ. ಆಗ ನನ್ನ ತಂಗಿಗೆ ಕೇವಲ ಐದು ವರ್ಷ. ಎಷ್ಟು ಮುದ್ದಾಗಿ ಮತ್ತು ದೈನ್ಯವಾಗಿ ಇದ್ದಳು ಅನ್ನೋದು ಇನ್ನೂ ನೆನಪಿದೆ. ಅಮ್ಮ ಅಂತೂ ಅತ್ತೂ ಅತ್ತೂ ಸುಸ್ತಾದಳು. ಅವನು ಅಮ್ಮನನ್ನು ಅಳಬೇಡ ಎಂದ, ಯಾಕೇಂದ್ರೆ ಅವನೇ ಅವಳನ್ನು ತಿಂದಿದ್ದಿರಬೇಕು. ಅವನಿಗೆ ಅಮ್ಮ ಅಳುವುದರಿಂದ ನಾಚಿಕೇಂತ ಅನಿಸಿರಬೇಕು. ಅದಕ್ಕೇ ಅಳಬೇಡ, ಎಂದದ್ದು. ಅವನಿಗೆ ನಾಚಿಕೆ ಅನ್ನೋದೇನಾದ್ರೂ ಇದ್ರೆ............

ನನ್ನ ತಂಗೀನ ಅವನೇ ತಿಂದದ್ದು. ಆದರೆ ಅಮ್ಮನಿಗೆ ಇದು ಗೊತ್ತಿತ್ತೋ ಇಲ್ವೋ.

ಅಮ್ಮನಿಗೂ ಬಹುಶಃ ಗೊತ್ತಿದ್ದಿರಬಹುದು. ಅವಳು ಅತ್ತಾಗ ಒಂದು ಮಾತನ್ನೂ ನೇರವಾಗಿ ಹೇಳಲಿಲ್ಲ. ಯಾಕೇಂದ್ರೆ ಅವಳಿಗೂ ಅದು ಸರಿ ಎನಿಸಿರಬೇಕು.

ನನಗೆ ಇನ್ನೂ ನೆನಪಿದೆ. ಬಹುಶಃ ನನಗೆ ನಾಲ್ಕೋ, ಐದೋ ವರ್ಷ ಇದ್ದಿರಬೇಕು. ಹಜಾರದಲ್ಲಿ ತಣ್ಣಗೆ ಕೂತಿದ್ದೆ. ನನ್ನಣ್ಣ ನನಗೆ ಹೇಳಿದ– ಯಾವನಾದರೂ ವ್ಯಕ್ತಿಯ ತಂದೆ ತಾಯಿಗಳಿಗೆ ಅನಾರೋಗ್ಯ ಆದರೆ, ಆತ ಒಳ್ಳೆ ಮಗ ಅಂತ ಗುರುತಿಸಿಕೊಳ್ಳಬೇಕಾದರೆ ತನ್ನ ದೇಹದ ಮಾಂಸದ ಚೂರೊಂದನ್ನು ಚೆನ್ನಾಗಿ ಬೇಯಿಸಿ ತಂದೆ ತಾಯಿಗಳಿಗೆ ತಿನ್ನಿಸಬೇಕೆಂದಿದ್ದ. ನನ್ನ ತಾಯಿ ಕೂಡಾ ಅದನ್ನು ವಿರೋಧಿಸಲಿಲ್ಲ. ಒಂದು ತುಂಡು

ತಿನ್ನುವಾಗ, ಇಡೀ ದೇಹಾನೇ ತಿನ್ನಬಹುದು! ಆದರೆ ಅವಳ ಶೋಕವನ್ನು ನೆನಪಿಸಿಕೊಂಡರೆ ನನ್ನೆದೆ ಹಿಂಡಿದಂತಾಗುತ್ತದೆ. ಅದೇ ಅದರ ವಿಶೇಷತೆ!

XI

ಅದನ್ನು ಯೋಚನೆ ಮಾಡೋಕೆ ನನ್ನಿಂದಾಗೊಲ್ಲ. ನನಗೆ ಈಗ ತಾನೇ ಗೊತ್ತಾಯಿತು. ಸುಮಾರು ನಾಲ್ಕು ಸಾವಿರ ವರ್ಷಗಳಿಂದ ಮನುಷ್ಯ ಮಾಂಸವನ್ನು ತಿನ್ನುತ್ತಾ ಬಂದಿರುವ ಜಾಗದಲ್ಲಿ ಇದ್ದೇನೆ. ನನ್ನ ತಂಗಿ ಸತ್ತಾಗ ನನ್ನಣ್ಣ ಮನೆ ಜವಾಬ್ದಾರಿ ತಗೊಂಡಿದ್ದ. ನನ್ನ ತಂಗಿ ಮಾಂಸವನ್ನು ಅನ್ನ, ಸಾರು ಇತ್ಯಾದಿ ಅಡಿಗೆ ಪದಾರ್ಥಗಳಲ್ಲಿ ಬಳಸಿರಬೇಕು. ನಮಗೆ ಯಾರಿಗೂ ತಿಳಿಯದಂತೆ, ನಮ್ಮನ್ನು ತಿನ್ನುವ ಹಾಗೆ ಮಾಡಿರಬೇಕು.

ನನಗೆ ಗೊತ್ತಿಲ್ಲದೆಯೇ ನನ್ನ ತಂಗಿಯ ಮಾಂಸದ ಹಲವಾರು ತುಂಡುಗಳನ್ನು ನಾನು ತಿಂದಿರಬೇಕು......ಈಗ ನನ್ನ ಸರದಿ.....

ಹೀಗೆ ನನ್ನಂತಹ ಮನುಷ್ಯ, ನರಮಾಂಸವನ್ನು ತಿನ್ನುತ್ತಾ ಬಂದಿದ್ದ ನಾಲ್ಕು ಸಾವಿರ ವರುಷಗಳ ಚರಿತ್ರೆಯ ನಂತರ, ನನಗೆ ಅದರ ಬಗ್ಗೆ ಏನೂ ತಿಳಿಯದಿದ್ದರೂ, ನಿಜವಾದ ಮನುಷ್ಯರನ್ನು ಮುಖಾ ಮುಖಿಯಾಗುವುದಾದರೂ ಹೇಗೆ?

XII

ಬಹುಶಃ ನರಮಾಂಸವನ್ನು ತಿನ್ನದಿರುವ ಮಕ್ಕಳು ಇದ್ದರೂ ಇರಬಹುದು!..... ದೇವರೇ ಅವರನ್ನು ಕಾಪಾಡು.

ಮೆಡಿಸನ್

ಶರದೃತುವಿನ ಬೆಳಗಿನ ಸಮಯ. ಚಂದ್ರ ಕಾಣದಾಗಿದ್ದರೂ ಇನ್ನೂ ಸೂರ್ಯ ಉದಯಿಸಿರಲಿಲ್ಲ. ಆಕಾಶ ದಟ್ಟ ನೀಲಿ ಬಣ್ಣದ ಪದರದಂತೆ ಕಾಣುತ್ತಿತ್ತು. ರಾತ್ರಿಯಲ್ಲಿ ಅಲೆದಾಡುವ ಕಳ್ಳಕಾಕರು ಬಿಟ್ಟರೆ ಮಿಕ್ಕೆಲ್ಲರೂ ಇನ್ನೂ ನಿದ್ದೆಯಲ್ಲಿದ್ದರು. ಮುದಿ ಚುವಾನ್ ತನ್ನ ಹಾಸಿಗೆಯಲ್ಲಿ ದಿಢೀರನೆ ಎದ್ದು ಕುಳಿತ. ಕಡ್ಡಿಗೀರಿ ಎಣ್ಣೆ ದೀಪವನ್ನು ಹಚ್ಚಿದ. ಅದು ಎರಡು ಟೀಹೌಸ್‌ನ ಗೋಡೆಗಳ ಮೇಲೆ ಬೆಳಕು ಚೆಲ್ಲಿತ್ತು.

"ಅಪ್ಪ, ಈಗ ಹೊರಟೆಯೇನು?" ಮುದಿ ಹೆಂಗಸೊಬ್ಬಳು ವಿಚಾರಿಸಿದಳು. ಒಳಗಿನ ಒಂದು ಸಣ್ಣ ಕೋಣೆಯೊಳಗಿಂದ ಒಂದೇ ಸಮನೆ ಕೆಮ್ಮುವುದು ಕೇಳಿಸಿತು.

"ಹೂಂ"

ಮುದುಕ ಚುವಾನ್ ಬಟ್ಟೆ ಹಾಕಿಕೊಳ್ಳುತ್ತಲೇ ಕೈ ಮುಂದಕ್ಕೆ ಚಾಚಿ, "ಕೊಡು ಅದನ್ನಿಲ್ಲಿ" ಎಂದ.

ದಿಂಬಿನ ಕೆಳಗೆ ಸ್ವಲ್ಪ ಹೊತ್ತು ಕೈ ಆಡಿಸಿ ಹುಡುಕಿ ತೆಗೆದು ಬೆಳ್ಳಿ ನಾಣ್ಯಗಳ ಪೊಟ್ಟಣವೊಂದನ್ನು ನೀಡಿದಳು. ಚುವಾನ್ ಸ್ವಲ್ಪ ಭಯದಿಂದಲೇ ಆ ಪೊಟ್ಟಣವನ್ನು ಜೇಬಿಗೆ ಇಳಿಸಿ, ಎರಡು ಮೂರು ಬಾರಿ ಅದನ್ನು ಮುಟ್ಟಿ ನೋಡಿಕೊಂಡ. ಪೇಪರ್ ಲಾಟೀನು ಹಚ್ಚಿದ ನಂತರ ದೀಪವನ್ನು ಆರಿಸಿ ಒಳ ಕೋಣೆಗೆ ಹೋದ. ಸರಸರ ಶಬ್ದ ಕೇಳಿಸಿತು. ಜೊತೆಗೆ ಕೆಮ್ಮುವುದೂ ಕೇಳಿ ಬಂತು. ಎಲ್ಲವೂ ಸ್ತಬ್ಧವಾದ ಮೇಲೆ, ಚುವಾನ್ ಮೆಲ್ಲಗೆ, "ಮಗು ಏಳಬೇಡ.....ನಿನ್ನ ಅಮ್ಮ ಅಂಗಡಿ ಕಡೆ ನೋಡ್ಕೋತಾಳೆ...."

ಉತ್ತರ ಬಾರದಿದ್ದುದನ್ನು ಗಮನಿಸಿ, ಮತ್ತೆ ಎಲ್ಲೋ ನಿದ್ದೆ ಹೋಗಿರಬೇಕು ಎಂದುಕೊಂಡ. ಬೀದಿ ಕಡೆ ನಡೆದ. ಬೂದಿ ಬಣ್ಣದ ರಸ್ತೆಯೊಂದು ಬಿಟ್ಟರೆ ಮತ್ತೇನೂ ಕಾಣುತ್ತಿರಲಿಲ್ಲ. ಲಾಟೀನಿನ ಬೆಳಕು ಅವನು ನಡೆಯುತ್ತಿದ್ದ ಹೆಜ್ಜೆಗಳ ಮೇಲೆ ಬೀಳುತ್ತಿತ್ತು. ಅಲ್ಲಲ್ಲಿ ನಾಯಿಗಳು ಕಾಣಿಸಿದವಾದರೂ ಯಾವುದೂ ಬೊಗಳಲಿಲ್ಲ. ಒಳಗಿದ್ದುದಕ್ಕಿಂತ ಹೆಚ್ಚು ಛಳಿ ಎನಿಸುತ್ತಿತ್ತು. ಆದರೂ ಚುವಾನ್‌ನ ಉತ್ಸಾಹ ಕಡಿಮೆಯಾಗಲಿಲ್ಲ.

ಇ-375

ಇದ್ದಕ್ಕಿದ್ದಂತೆ ಮತ್ತೊಮ್ಮೆ ಪ್ರಾಯ ಬಂದು ಜೀವನೋತ್ಸಾಹ ಪುಟಿದೇಳುತ್ತಿರುವಂತೆನಿಸಿತು. ದಾಪುಗಾಲು ಹಾಕುತ್ತ ನಡೆದ. ರಸ್ತೆ ಸ್ಪಷ್ಟವಾಗಿ ಕಾಣುತ್ತಿತ್ತು. ಬೆಳಕೂ ಹೆಚ್ಚಾಗುತ್ತಿತ್ತು.

ನಡಿಗೆಯಲ್ಲಿ ಮೈ ಮರೆತಿದ್ದ ಚುವಾನ್ ತನ್ನೆದುರು ಅಡ್ಡ ರಸ್ತೆಯೊಂದು ಕಾಣಿಸಿದ್ದೇ ಬೆಚ್ಚಿಬಿದ್ದ. ಒಂದೆರಡು ಹೆಜ್ಜೆ ಹಿಂದೆ ನಡೆದು ಅಂಗಡಿಯ ಸೂರಿನ ಕೆಳಗೆ ನಿಂತುಕೊಂಡ. ಅಂಗಡಿ ಬಾಗಿಲು ಮುಚ್ಚಿತ್ತು. ಸ್ವಲ್ಪ ಹೊತ್ತಿನ ನಂತರ ಅವನಿಗೆ ಛಳಿ ಎನಿಸಿತು.

"ಓಹ್ ಯಾರೋ ಮುದುಕ"

"ಆದರೂ ಗೆಲುವಾಗಿಯೇ ಕಾಣ್ತಾನೆ."

ಮತ್ತೆ ನಡೆಯಲು ಆರಂಭಿಸಿದ. ಒಂದಷ್ಟು ಜನ ಓಡಾಡುತ್ತಿದ್ದುದನ್ನು ನೋಡಿದ. ಅವರಲ್ಲಿ ಒಬ್ಬ ಮುದುಕನ ಕಡೆ ತಿರುಗಿ ನೋಡಿದ. ಸ್ಪಷ್ಟವಾಗಿ ಯಾರೂಂತ ಮುಖ ಕಾಣಿಸದಿದ್ದರೂ, ಹಸಿವಿನಿಂದ ಕಂಗಾಲಾಗಿರುವ ವ್ಯಕ್ತಿಯೊಬ್ಬ ಆಹಾರವೇನಾದರೂ ಕಂಡರೆ, ನೋಡುವಂತೆ ನೋಡಿದ. ಲಾಟೀನಿನ ಕಡೆ ನೋಡಿದಾಗ ಅದು ಆರಿ ಹೋಗಿತ್ತು. ತನ್ನ ಜೇಬುಗಳನ್ನು ತಟ್ಟಿ ನೋಡಿದಾಗ ಅದು ಆರಿ ಹೋಗಿತ್ತು. ತನ್ನ ಜೇಬುಗಳನ್ನು ತಟ್ಟಿ ನೋಡಿಕೊಂಡ. ಪೊಟ್ಟಣ ಅಲ್ಲಿಯೇ ಇತ್ತು. ಸುತ್ತಲೂ ಒಮ್ಮೆ ಕಣ್ಣು ಹಾಯಿಸಿದಾಗ ತುಂಬಾ ಅಪರಿಚಿತರು ಇದ್ದರು. ಇಬ್ಬಿಬ್ಬರು, ಮೂವರು ಜೊತೆ ಜೊತೆಯಾಗಿ ದಾರಿತಪ್ಪಿದ ಆತ್ಮಗಳಂತೆ ಅಲೆದಾಡುತ್ತಿದ್ದರು. ಗಂಭೀರವಾಗಿ ಅವರನ್ನು ಗಮನಿಸಿದಾಗ, ಅವರಲ್ಲಿ ಅಂತಹ ವಿಚಿತ್ರವಾದ್ದೇನೂ ಇರಲಿಲ್ಲ.

ಸದ್ಯಕ್ಕೆ ಒಂದಷ್ಟು ಮಂದಿ ಸೈನಿಕರು ಅಡ್ಡಾಡುತ್ತಿದ್ದರು. ಅವರು ಧರಿಸಿದ್ದ ಸಮ ವಸ್ತ್ರಗಳ ಮೇಲೆ ಮುಂದೆ ಮತ್ತು ಹಿಂದೆ ಇದ್ದ ಬಿಳಿ ವೃತ್ತಗಳು ಸ್ಪಷ್ಟವಾಗಿ ಕಾಣಿಸುತ್ತಿದ್ದವು. ತೀರಾ ಹತ್ತಿರ ಬಂದಾಗ ದಟ್ಟ ಕೆಂಪಿನ ಅಂಚುಗಳೂ ಕಾಣಿಸಿದವು. ಮರುಕ್ಷಣದಲ್ಲಿ ಕಾಲಿನ ಹೆಜ್ಜೆ ಸಪ್ಪಳದೊಂದಿಗೆ ಒಂದು ಗುಂಪು ಹಾದು ಹೋಯಿತು. ಇದಾದ ನಂತರ ಸಣ್ಣಸಣ್ಣ ಗುಂಪುಗಳಲ್ಲಿ ಇದ್ದವರೆಲ್ಲ ಒಂದು ಕಡೆ ಒಟ್ಟಾಗಿ ಸೇರಿದರು. ಮತ್ತು ಮುಂದಕ್ಕೆ ಹೆಜ್ಜೆ ಹಾಕಿದರು. ಅಡ್ಡರಸ್ತೆಗೆ ಸ್ವಲ್ಪ ಮೊದಲು ಅವರೆಲ್ಲ ನಿಲುಗಡೆಗೆ ಬಂದರು ಮತ್ತು ಅರ್ಧವೃತ್ತಗಳಲ್ಲಿ ಗುಂಪುಗಳಾದರು. ಮುದುಕ ಚುವಾನ್ ಆ ದಿಕ್ಕಿಗೆ ನೋಡಿದರೂ, ಮುಖಗಳು ಕಾಣಿಸದೇ ಕೇವಲ ಅವರ ಬೆನ್ನು ಕಾಣುತ್ತಿತ್ತು. ಕೊಕ್ಕರೆಗಳಂತೆ ತಮ್ಮ ಕೊಕ್ಕುಗಳನ್ನು ಎಷ್ಟು ಎತ್ತರಕ್ಕೆ ಸಾಧ್ಯವೋ ಅಷ್ಟು ಎತ್ತರಕ್ಕೆ, ಯಾರದೋ ಅದೃಶ್ಯ ಕೈಯೊಂದು ಕೆಳಗಿನಿಂದ ಮೇಲಕ್ಕೆ ಎತ್ತಿದಂತೆ, ಎತ್ತಿದರು. ಒಂದು ಕ್ಷಣ ಎಲ್ಲವೂ ನಿಸ್ತಬ್ಧ. ನಂತರ ಸದ್ದೊಂದು ಕೇಳಿಸಿತು. ನೋಡುತ್ತಿದ್ದವರಲ್ಲಿ ಸ್ವಲ್ಪ ಸಂಚಲನ ಕಾಣಿಸಿತು. ಅವರೆಲ್ಲ ಒಂದಕ್ಕೆ ಸರಿಯುತ್ತಿದ್ದಂತೆ ಗಡಗಡ ಸದ್ದೊಂದು ಕೇಳಿಸಿತು. ಒಂದು ಒಂದಕ್ಕೆ ಸರಿಯುತ್ತಿದಂತೆ ಮುದುಕನನ್ನು ಇನ್ನೇನು ಬೀಳಿಸಿಯೇ ಬಿಡುವಂತಾಯಿತು.

"ಹೇ, ನನಗೆ ಹಣ ಕೊಟ್ಟು ಸಾಮಾನು ತೆಗೆದುಕೊಂಡು ಹೋಗು." ಕಪ್ಪು ಉಡುಪು ಧರಿಸಿದ್ದ ವ್ಯಕ್ತಿಯೊಬ್ಬ ಚುವಾನ್‌ನ ಮುಂದೆ ನಿಂತಿದ್ದ. ಬಾಕುವಿನಂತೆ ಹೊಳೆಯುತ್ತಿದ್ದ ಅವನ ಕಣ್ಣುಗಳನ್ನು ನೋಡಿ ಅರ್ಧಕ್ಕೆ ಕುಸಿದು ಹೋದ. ದಪ್ಪನೆಯ ಕೈಯೊಂದನ್ನು ಆ ವ್ಯಕ್ತಿ ಚುವಾನ್‌ನತ್ತ ಚಾಚಿದ. ಇನ್ನೊಂದು ಕೈಯಲ್ಲಿ ಬೇಯಿಸಿದ ರೊಟ್ಟಿ ಇತ್ತು. ಅದರಿಂದ ಕೆಂಪು ಬಣ್ಣದ ದ್ರವ ತೊಟ್ಟಿಡುತ್ತಿತ್ತು.

ಆತುರವಾಗಿ ಚುವಾನ್ ಜೇಬಿನಲ್ಲಿ ಡಾಲರ್‌ಗಳಿಗಾಗಿ ತಡಕಾಡಿದ. ನಡುಗುತ್ತಲೇ ಇನ್ನೇನು ಆ ಹಣವನ್ನು ವ್ಯಕ್ತಿಗೆ ಕೊಟ್ಟು ಬಿಡುವುದರಲ್ಲಿದ್ದ. ಆದರೆ ಆ ಪೊಟ್ಟಣವನ್ನು ಹೊರಗೆ ತೆಗೆಯಲು ಧೈರ್ಯವಾಗಲಿಲ್ಲ. ವ್ಯಕ್ತಿ ಅಸಹನೆಯಿಂದ ಗದರಿಸಿದ, "ಯಾಕೆ ಅಷ್ಟು ಹೆದರ್‍ತಾ ಇದ್ದೀ? ತೆಗೆಯಬಾರದೇನು?" ಚುವಾನ್ ಇನ್ನೂ ಹಿಂಜರಿಯುತ್ತಲೇ ಇದ್ದ. ಅಷ್ಟರಲ್ಲಿ ಆ ವ್ಯಕ್ತಿ, ಲಾಟೀನ್‌ನ್ನು ಕಸಿದುಕೊಂಡು, ಅದರಿಂದ ಕಾಗದವನ್ನು ಕಿತ್ತೆಳೆದು, ತನ್ನಲ್ಲಿದ್ದ ರೊಟ್ಟಿಯನ್ನು ಸುತ್ತಿ, ರೊಟ್ಟಿ ಪೊಟ್ಟಣವನ್ನು ಮುದುಕನ ಕೈಗೆ ತುರುಕಿದ. ಅವನಿಂದ ಬೆಳ್ಳಿಯನ್ನು ಕಸಿದುಕೊಂಡು ಓರೆನೋಟ ಬೀರಿದ. 'ಒಳ್ಳೆ ಮುದುಕ' ಎಂದು ಗೊಣಗುಟ್ಟುತ್ತ ಅಲ್ಲಿಂದ ಹೊರಟ.

"ಯಾರ ಖಾಯಿಲೆಗೋಸ್ಕರ ಇದು?" ಚುವಾನ್‌ಗೆ ಯಾರೋ ಈ ಪ್ರಶ್ನೆ ಕೇಳಿದ ಹಾಗಾಯಿತು. ಆದರೆ ಉತ್ತರ ಕೊಡಲಿಲ್ಲ. ಅವನ ಜ್ಞಾನವೆಲ್ಲ ಜೇಬಿನಲ್ಲಿದ್ದ ಪೊಟ್ಟಣದ ಮೇಲಿತ್ತು. ಅವನಿಗೆ ಅದರ ಬಗ್ಗೆ ಎಷ್ಟು ಕಾಳಜಿ ಇತ್ತೂಂದ್ರೆ, ತನ್ನ ಹಳೆ ಮನೆಗೆ ಇರುವ ಏಕೈಕ ವಾರಸುದಾರ ಅನ್ನೋ ಹಾಗೆ!

ಅದು ಬಿಟ್ಟು, ಬೇರೆಯವರ ಕಡೆ ಗಮನವೇ ಇರಲಿಲ್ಲ. ಈ ಹೊಸ ಜೀವವನ್ನು ತನ್ನ ಸ್ವಂತ ಮನೆಯಲ್ಲಿ ನೆಟ್ಟು, ಸುಖ, ಸಂತೋಷದ ಫಸಲನ್ನು ತೆಗೆಯುವುದಕ್ಕೆ ಹೊರಟಿದ್ದ. ಸೂರ್ಯ ಮೇಲೇರಿ ಬಂದಿದ್ದ. ಅವನ ಮುಂದಿದ್ದ ರಸ್ತೆಯೆಲ್ಲ ಆಲೋಕಿತವಾಗಿತ್ತು. ಈ ರಸ್ತೆ ನೇರವಾಗಿ ಮನೆಕಡೆಗೆ ಸಾಗಿತ್ತು. ಅವನ ಹಿಂದೆ ಒಂದು ಸಣ್ಣ ಫಲಕವಿತ್ತು. ಅದರಲ್ಲಿ ಪ್ರಾಚೀನ ಕ್ರೀಡಾ ಮೈದಾನ ಎಂದು ಬರೆದಿತ್ತು.

* * *

ಮುದುಕ ಚುವಾನ್ ಮನೆ ತಲುಪಿದಾಗ ಚಹದಂಗಡಿ ಬಾಗಿಲು ತೆಗೆದು ಶುಭ್ರಮಾಡಿ, ಚಹದ ಮೇಜುಗಳನ್ನು ಹಾಕಲಾಗಿತ್ತು. ಆದರೆ ಇನ್ನೂ ಗಿರಾಕಿಗಳು ಯಾರೂ ಬಂದಿರಲಿಲ್ಲ. ಗೋಡೆಗಿದ್ದ ಮೇಜಿನ ಬಳಿಯಲ್ಲಿ ಮಗನೊಬ್ಬನೇ ತಿನ್ನುತ್ತಾ ಕುಳಿತಿದ್ದ. ಬೆವರಿದ ಹನಿಗಳು ಹಣೆಯ ಮೇಲೆ ಕಾಣಿಸುತ್ತಿದ್ದವು. ಅವನ ಜಾಕೆಟ್ ಚೆನ್ನಾಗಿ ಅಂಟಿಕೊಂಡ ಹಾಗಿತ್ತು. ಭುಜಗಳು ಆಕಾರದಲ್ಲಿ, 'v' ಆದರೆ ಮೇಲು ಕೆಳಗಾಗಿದ್ದವು. ಇದನ್ನು ನೋಡಿದಾಗ, ಮುದುಕನ ಹುಬ್ಬು ಗಂಟಿಕ್ಕಿತು. ಆತನ

ಹೆಂಡತಿ ಅಡಿಗೆ ಮನೆಯಿಂದ ವೇಗವಾಗಿ ಬಂದಳು. ನಿರೀಕ್ಷೆ, ತಲ್ಲಣ ತುಂಬಿಕೊಂಡಿದ್ದ ನೋಟದೊಂದಿಗೆ ತುಟಿ ಬಿಗಿ ಹಿಡಿದು ಕೇಳಿದಳು.

"ಸಿಕ್ತಾ?"

"ಹೌದು".

ಜೊತೆಯಾಗಿ ಇಬ್ಬರೂ ಅಡಿಗೆ ಕೋಣೆಯೊಳಕ್ಕೆ ಹೊರಟರು. ಸ್ವಲ್ಪ ಹೊತ್ತು ಚರ್ಚೆಯಾದ ನಂತರ, ಮುದುಕಿ ಹೊರಗೆ ಹೋಗಿ ಒಂದು ತಾವರೆ ಎಲೆಯನ್ನು ಮೇಜಿನ ಮೇಲೆ ಹರಡಿದಳು. ಮುದುಕ ಕಂದು ಕೆಂಪಿನ ಕಲೆಯೊಂದಿಗಿದ್ದ ಪೊಟ್ಟಣ ಬಿಡಿಸಿ, ಲಾಟೀನಿನ ಕಾಗದವನ್ನು ಎಸೆದು, ತಾವರೆ ಎಲೆ ಮೇಲೆ ಆ ರೊಟ್ಟಿಯನ್ನು ಇರಿಸಿದ. ಕಿರಿ ಚುವಾನ್ ತನ್ನ ತಿಂಡಿ ಮುಗಿಸಿದ್ದ. ಆದರೆ ಮುದುಕಿ ಕೂಗಿ ಹೇಳಿದಳು. "ಕೂತುಕೋ ಮರಿ ಚುವಾನ್, ಇಲ್ಲಿಗೆ ಬರಬೇಡ."

ಒಲೆಯನ್ನು ಸರಿಯಾಗಿ ಉರಿಸಲು ಪ್ರಯತ್ನಿಸುತ್ತಾ ಮುದಿ ಚುವಾನ್ ಹಸಿರು, ಕೆಂಪು, ಬಿಳಿ ಕಾಗದಗಳನ್ನೆಲ್ಲ ಒಲೆ ಒಳಗೆ ದೂಡಿದ. ಕೆಂಪು ಕಪ್ಪು ಮಿಶ್ರಿತ ಜ್ವಾಲೆಗಳು ಭುಗಿಲೆದ್ದವು. ಒಂದು ವಿಧವಾದ ವಿಚಿತ್ರ ವಾಸನೆ ಅಂಗಡಿಯಲ್ಲೆಲ್ಲ ತುಂಬಿತು.

"ತುಂಬಾ ಚೆನ್ನಾಗಿದೆ ವಾಸನೆ." "ಏನು ನೀನು ತಿನ್ನುತ್ತಿರೋದು?"–ಗೂನು ಬೆನ್ನಿನ ವ್ಯಕ್ತಿ ಕೇಳಿದ. ಚಹದಂಗಡಿಗೆ ಬರುವ ಗಿರಾಕಿಗಳಲ್ಲಿ ಎಲ್ಲರಿಗಿಂತ ಮೊದಲು ಬಂದು, ಎಲ್ಲರಿಗಿಂತ ಕೊನೆಗೆ ಹೋಗುವವನು ಇವನಾಗಿದ್ದ. ರಸ್ತೆಯ ಕಡೆಗಿದ್ದ ಮೂಲೆಯ ಮೇಜಿನ ಮುಂದೆ ಹೋಗಿ ಕೂತ. ಅವನ ಪ್ರಶ್ನೆಗೆ ಯಾರೂ ಉತ್ತರಿಸಲಿಲ್ಲ.

"ಹುರಿದ ಅಕ್ಕಿ ಗಂಜಿ."

ಮತ್ತೆ ಯಾರಿಂದಲೂ ಉತ್ತರವಿಲ್ಲ. ಚುವಾನ್ ಆತುರವಾಗಿ, ಅವನಿಗೆ ಚಹಾ ಮಾಡಿ ಕೊಡಲು ಒಳಗೆ ಹೋದ.

"ಮಗು ಚುವಾನ್ ಬಾ ಇಲ್ಲಿ ಒಳಗೆ." ಎಂದು ಕರೆದು ಅವನಿಗಾಗಿ ಒಳಗಿನ ಕೋಣೆಯ ಮಧ್ಯದಲ್ಲಿ ಒಂದು ಸ್ಟೂಲು ಹಾಕಿ ಮಗುವನ್ನು ಕೂರಿಸಿದಳು. ಒಂದು ತಟ್ಟೆಯಲ್ಲಿ ದುಂಡಗೆ, ಕಪ್ಪಾಗಿದ್ದ ವಸ್ತುವನ್ನು ಇರಿಸಿಕೊಂಡು ಬಂದು ಮೆದುವಾಗಿ ಹೇಳಿದಳು.

"ತಿಂದು ಬಿಡು......ಆಮೇಲೆ ಎಲ್ಲಾ ಸರಿ ಹೋಗುತ್ತೆ."

ಚಿಕ್ಕ ಚುವಾನ್ ತಟ್ಟೆಯಲ್ಲಿದ್ದುದನ್ನು ಕೈಗೆತ್ತಿಕೊಂಡು ನೋಡಿದ. ತನ್ನ ಪ್ರಾಣಾನೇ ಕೈಯಲ್ಲಿರಿಸಿಕೊಂಡಿದ್ದಾನೋ ಎಂಬಂತೆ ಒಂದು ಥರಾ ಅದನ್ನು ನೋಡಿದ. ಈಗ ಅದನ್ನು ಎರಡು ಹೋಳಾಗಿಸಿದ. ಅದರಲ್ಲಿ ಮಧ್ಯದಲ್ಲಿ ಸೀದು ಹೋದಂತಿದ್ದ

ಭಾಗದಿಂದ ಒಂದು ಬಗೆಯ ಹೊಗೆ ಹೊರಗೆ ಬಂತು. ಎಲ್ಲ ಕಡೆ ಆ ಹೊಗೆ ಹಬ್ಬಿತು. ಹಬೆಯಲ್ಲಿ ಬೇಯಿಸಿದ ರೊಟ್ಟಿಯ ಎರಡು ತುಂಡುಗಳು ಮಾತ್ರವೇ ಉಳಿದವು. ಪೂರ್ತಿ ತಿಂದು ಮುಗಿಸಿದ್ದಾಯಿತು. ಅದರ ವಾಸನೆ ಪೂರ್ತಿಯಾಗಿ ಮರೆತು ಹೋಯಿತು. ಖಾಲಿ ತಟ್ಟೆ ಮಾತ್ರವೇ ಉಳಿಯಿತು. ಅವನ ತಂದೆ ತಾಯಿ ಅವನ ಎರಡೂ ಪಕ್ಕಗಳಲ್ಲಿ ನಿಂತಿದ್ದರು. ಅವನ ಕಣ್ಣುಗಳೊಳಗೆ ಏನನ್ನೋ ಇಳಿಸುತ್ತಾ, ಮತ್ತೇನನ್ನೋ ಅವನಿಂದ ಹೊರಗೆ ತೆಗೆಯುತ್ತಿದ್ದಂತೆ, ಅವರ ಕಣ್ಣುಗಳು ಕಾಣುತ್ತಿದ್ದವು. ಅವನ ಪುಟ್ಟ ಎದೆ ಹೊಡೆದುಕೊಳ್ಳಲಾರಂಭಿಸಿತು. ತನ್ನೆರಡೂ ಕೈಗಳನ್ನು ಎದೆ ಮೇಲೆ ಇರಿಸಿಕೊಂಡು ಮತ್ತೆ ಕೆಮ್ಮುವುದಕ್ಕೆ ಆರಂಭಿಸಿದ.

"ಸ್ವಲ್ಪ ಮಲಗು. ಆಮೇಲೆ ಎಲ್ಲಾ ಸರಿ ಹೋಗುತ್ತೆ." ಅವನ ತಾಯಿ ಹೇಳಿದಳು.

ಬಹಳ ವಿಧೇಯನಾಗಿ ಕಿರಿಯ ಚುವಾನ ಕೆಮ್ಮುತ್ತ ನಿದ್ದೆಗಿಳಿದ. ಅವನ ಉಸಿರಾಟ ಕ್ರಮಬದ್ಧವಾಗುವವರೆಗೆ ಅಲ್ಲಿಯೇ ಇದ್ದು ನಂತರ ಹಲವಾರು ತೇಪೆಗಳಿಂದ ಕೂಡಿದ ಹೊದಿಕೆ ಹೊದಿಸಿದಳು.

ಅಂಗಡಿಯಲ್ಲಿ ಜನ ತುಂಬಿದ್ದರು. ಹಿರಿಯ ಚುವಾನ್ ದೊಡ್ಡ ತಾಮ್ರದ ಕೆಟಲ್‌ನಲ್ಲಿ ಟೀ ಮಾಡಲು ಕಾರ್ಯನಿರತನಾಗಿದ್ದ. ಅವನ ಕಣ್ಣುಗಳ ಸುತ್ತ ಕಪ್ಪು ಉಂಗುರಗಳಿದ್ದವು.

"ಹುಷಾರಿಲ್ವೆ ಚುವಾನ್? ಏನಾಗಿದೆ" ಎಂದು ಬೂದು ಬಣ್ಣದ ಗಡ್ಡದವ ಕೇಳಿದ.

"ಏನಾಗಿಲ್ಲ, ಚೆನ್ನಾಗಿದ್ದೇನೆ."

"ಏನಾಗಿಲ್ವ?..........ಇಲ್ಲ. ನಿನ್ನ ಮುಗುಳ್ನಗೆಯಿಂದ ನನಗೆ ಅನಿಸಿದ್ದು......" ಮುದುಕ ತನ್ನ ಮಾತನ್ನು ತಿದ್ದಿಕೊಂಡ.

"ಏನಿಲ್ಲ. ಚುವಾನ್‌ಗೆ ಬಹಳ ಕೆಲಸ." ಗೂನು ಬೆನ್ನಿನವ ಹೇಳಿದ. "ಅವನ ಮಗನೇನಾದರೂ.........." ಅವನು ಮಾತು ಮುಂದುವರೆಸುತ್ತಿದ್ದಂತೆ, ಉಬ್ಬಿದ ಕೆನ್ನೆಯ ವ್ಯಕ್ತಿಯೊಬ್ಬ ಒಳಗೆ ನುಗ್ಗಿದ. ದಟ್ಟ ಕಂದು ಬಣ್ಣದ ಅಂಗಿಯನ್ನು ಹೆಗಲ ಮೇಲೆ ಹಾಕಿಕೊಂಡಿದ್ದನ್ನು ತೆಗೆದು ಆತುರಾತುರವಾಗಿ, ಗುಂಡಿಗಳನ್ನೂ ಹಾಕಿಕೊಳ್ಳದೆ, ತೊಟ್ಟು ಮುಗಿಸಿದ. ಅವನು ಒಳಗೆ ಬರುತ್ತಿದ್ದಂತೆ, ಹಿರಿಯ ಚುವಾನ್‌ಗೆ ಜೋರಾಗಿ ಕೇಳಿದ.

"ಅವನು ತಿಂದಾಯಿತಾ?......ಏನಾದರೂ ವಾಸೀನಾ ಹೇಗೆ? ನಿನ್ನ ಅದೃಷ್ಟ ಚುವಾನ್'. ಅದೃಷ್ಟ. ಇಷ್ಟು ಬೇಗ ನನ್ನ ಕಿವಿಗೆ ಬೀಳದೆ ಇರೋದು....."

ಒಂದು ಕೈಯಲ್ಲಿ ಕೆಟಲ್ ಹಿಡಿದು, ಇನ್ನೊಂದನ್ನು ತನ್ನ ಪಕ್ಕಕ್ಕೆ ನೇರಾಗಿ ಇಳಿಬಿಟ್ಟು, ಗೌರವದಿಂದ ಆತನ ಮಾತುಗಳನ್ನು ಮುಗುಳು ನಗುತ್ತಾ ಕೇಳಿಸಿಕೊಂಡ.

ಅವನು ಮಾತ್ರ ಅಲ್ಲ, ಅಲ್ಲಿದ್ದವರೆಲ್ಲರೂ ಗೌರವ ಪೂರ್ವಕವಾಗಿ ಮಾತನ್ನು ಕೇಳಿಸಿಕೊಂಡರು. ಮುದುಕಿಯೂ ಮುಂದೆ ಬಂದು, ಮುಗುಳು ನಗುತ್ತ ಟೀ ಸೊಪ್ಪಿದ್ದ ಒಂದು ಪಾತ್ರೆಯನ್ನು ತಂದು ಅದರೊಳಕ್ಕೆ ಆಲೀವ್ ಸೊಪ್ಪನ್ನು ಸೇರಿಸಿದಳು. ಚುವಾನ್ ಅದರ ಮೇಲೆ ಕುದಿಯುತ್ತಿದ್ದ ನೀರನ್ನು ಸುರಿದ. ಇದು ಹೊಸದಾಗಿ ಬಂದ ವ್ಯಕ್ತಿಗಾಗಿ ತಯಾರಿಸಿದ್ದಾಗಿತ್ತು.

"ಖಂಡಿತ ಇದರಿಂದ ವಾಸಿಯಾಗುತ್ತೆ. ಇದು ಬೇರೆಲ್ಲದರ ಥರ ಅಲ್ಲ!" ಉಬ್ಬು ಕೆನ್ನೆಯ ವ್ಯಕ್ತಿ ಉತ್ತರಿಸಿದ. "ಬಿಸಿಮಾಡಿ, ಬಿಸಿಯಾಗಿ ತಿನ್ನಿಸಿದೆ ತಾನೇ?"

"ಹೌದು ಹಾಗೇ ಮಾಡಿದ್ದೀವಿ. ಅಂಕಲ್ ಕಾಂಗ್‌ನ ಸಹಾಯ ಇಲ್ಲದಿದ್ದರೆ ಆಗ್ತಾನೆ ಇರಲಿಲ್ಲ." ಮುದುಕಿ ಹೃತ್ಪೂರ್ವಕವಾಗಿ ಕೃತಜ್ಞತೆ ಹೇಳಿದಳು.

"ಇದಂತೂ ನೂರಕ್ಕೆ ನೂರು ಖಾತ್ರಿಯಾಗಿ ವಾಸಿಯಾಗುತ್ತೆ. ಆ ಸುರುಳಿಯನ್ನು ಮನುಷ್ಯ ರಕ್ತದಲ್ಲಿ ಅದ್ದಿ ತಿಂದರೆ ಕ್ಷಯದಂತಹ ಜಾಡ್ಯ ಕೂಡ ವಾಸಿಯಾಗುತ್ತೆ!"

'ಕ್ಷಯ' ಎನ್ನುವ ಶಬ್ದ ಕಿವಿಗೆ ಬಿದ್ದದ್ದೇ, ಮುದುಕಿಗೆ ಒಂದು ಥರಾ ಆಯ್ತು. ಮುಖ ಬಿಳುಚಿಕೊಂಡಿತು. ಆದರೂ ಹೇಗೋ ಬಲವಂತದಿಂದ ಮುಖದ ಮೇಲೆ ನಗು ತಂದುಕೊಂಡಳು. ಒಳಗೆ ಹೋಗಲು ಒಂದು ನೆಪವೂ ಸಿಕ್ಕಿತು. ಈ ವ್ಯಕ್ತಿ ಮಾತ್ರ ಮಾತಾಡುವುದನ್ನು ನಿಲ್ಲಿಸಲೇ ಇಲ್ಲ. ಉತ್ತರದ ದನಿಯಲ್ಲಿ ಮಾತು ಮುಂದುವರೆಸಿದ. ಮಗು ಎದ್ದು ಕೆಮ್ಮುವುದಕ್ಕೆ ಶುರು ಮಾಡುವವರೆಗೆ ಮಾತು ಮುಂದುವರೆಯುತ್ತಲೇ ಹೋಯಿತು.

"ಹಾಗಾದರೆ, ನಿನ್ನ ಮಗನ ವಿಚಾರದಲ್ಲಿ ನಿನ್ನ ಅದೃಷ್ಟದ ಬಾಗಿಲು ತೆರೆಯಿತು. ಅವನ ಖಾಯಿಲೆ ಸಂಪೂರ್ಣ ವಾಸಿಯಾಗುತ್ತೆ. ನೀನು ನಗುತ್ತ ಇರೋದ್ರಲ್ಲಿ ಆಶ್ಚರ್ಯವಿಲ್ಲ." ಅವನು ಮಾತಾಡುತ್ತಿರುವಾಗ ಬೂದು ಗಡ್ಡದವನು, ಕಂದು ಬಣ್ಣದ ಬಟ್ಟೆ ತೊಟ್ಟಿದ್ದ ವ್ಯಕ್ತಿಯ ಬಳಿ ಬಂದು, ತಗ್ಗಿದ ದನಿಯಲ್ಲಿ ಕೇಳಿದ. "ಮಿಸ್ಟರ್ ಕಾಂಗ್, ಇವತ್ತು ಗಲ್ಲಿಗೇರಿಸಿದ ಅಪರಾಧಿ ಷಿಯಾ ವಂಶದವನಂತೆ ಹೌದಾ? ಯಾರು ಅವನು? ಯಾಕೆ ಅವನನ್ನು ಗಲ್ಲಿಗೇರಿಸಿದ್ದು?"

"ಯಾರೂಂತಲೇ, ಷಿಯಾ ವಿಧವೆಯ ಮಗ! ಬಡ್ಡಿ ರ್‍ಯಾಸ್ಕಲ್!"

ತನ್ನ ಮಾತಿನ ಬಗ್ಗೆ ಜನ ತೋರಿಸುತ್ತಿದ್ದ ಕುತೂಹಲ ಗಮನಿಸಿ ಇನ್ನಷ್ಟು ಜೋರಾಗಿ ಮಾತಾಡಿದ. ಅವನ ಕೆನ್ನೆಗಳು ಅಲುಗಿದವು. ಎಷ್ಟು ಎತ್ತರಕ್ಕೆ ಸಾಧ್ಯವೋ ಅಷ್ಟು ಎತ್ತರಕ್ಕೇರಿಸಿದ ದನಿಯನ್ನು.

"ಆ ಬಡ್ಡಿಮಗ ಬದುಕುವುದನ್ನು ಬಯಸಲಿಲ್ಲ. ಅವನಿಗೆ ಬದುಕು ಬೇಡವಾಯಿತು. ಈ ಸಾರಿ ಇದರಲ್ಲಿ ನನಗೇನೂ ಇಲ್ಲ. ಅವನಿಂದ ಕಳಚಿದ ಬಟ್ಟೆಗಳನ್ನೂ ಕೂಡಾ ಆ

ಕೆಂಪು ಕಣ್ಣಿನ ಜೈಲರ್ ತೆಗೆದುಕೊಂಡು ಬಿಟ್ಟ. ನಮ್ಮ ಹಿರಿಯ ಚುವಾನ್ ಅದೃಷ್ಟವಂತ; ನಂತರ ಮೂರನೆ ಅಂಕಲ್ ಷಿಯಾ. ಬಹುಮಾನವಾಗಿ ಬಂದದ್ದನ್ನೆಲ್ಲಾ ಜೇಬಿಗಿಳಿಸಿದ. ಇಪ್ಪತ್ತೈದು ಬೆಳ್ಳಿಯ ಹೊಳೆಹೊಳೆವ ನಾಣ್ಯಗಳು!.....ಅವನಿಗಂತೂ ಒಂದು ಕಾಸಿನ ಖರ್ಚೂ ಇರಲಿಲ್ಲ!"

ಕಿರಿಯ ಚುವಾನ್ ಒಳಕೋಣೆಯಿಂದ ಎದೆಯ ಮೇಲೆ ಕೈಯಿರಿಸಿಕೊಂಡು ಕೆಮ್ಮುತ್ತಲೇ ಹೊರಗೆ ಬಂದ. ಅಡಿಗೆಮನೆ ಒಳಗೆ ಹೋಗಿ ಒಂದು ತಟ್ಟೆಯಲ್ಲಿ ತಣ್ಣಗಿದ್ದ ಅನ್ನವನ್ನು ಇಟ್ಟುಕೊಂಡು, ಅದರ ಮೇಲೆ ಬಿಸಿ ನೀರು ಸುರಿದು, ಕೆಳಗೆ ಕುಳಿತು ಮೆಲ್ಲತೊಡಗಿದ. ತಾಯಿ ಮೃದುವಾಗಿ ಅವನೆಡೆ ಬಗ್ಗಿ ಕೇಳಿದಳು.

"ಏನಾದರೂ ವಾಸೀನಾ ಮರಿ? ಮೊದಲಿದ್ದ ಹಾಗೇ ಇದೆಯೇನು ನಿನ್ನ ಹಸಿವು?"

"ಖಂಡಿತಾ ವಾಸಿಯಾಗುತ್ತೆ!" ಹುಡುಗನ ಕಡೆ ನೋಡಿ, ಮತ್ತೆ ಜನರತ್ತ ತಿರುಗಿದ. "ಮೂರನೇ ಅಂಕಲ್ ಷಿಯಾ ಬಹಳ ಬುದ್ಧಿವಂತ! ಆತ ತಿಳಿಸದೆ ಇದ್ದಿದ್ದರೆ, ಅವನ ಕುಟುಂಬವನ್ನೇ ಗಲ್ಲಿಗೇರಿಸುತ್ತಿದ್ದರು, ಅವರ ಆಸ್ತಿ ಪಾಸ್ತೀನೆಲ್ಲ ಕಸಿದುಕೊಳ್ಳುತ್ತಿದ್ದರು. ಆದರೆ, ಬದಲಾಗಿ? ಬೆಳ್ಳಿ! ಆ ಯುವಕ ಸ್ಕೌಂಡ್ರಲ್! ಜೈಲರ್ ಕೂಡಾ ಬಂಡೇಳುವ ಹಾಗೆ ಪ್ರಚೋದಿಸಿದ!"

"ಇಲ್ಲ! ನಿಜವಾಗಲೂ ಹೇಳೋದಾದ್ರೆ!" ಹಿಂದಿನ ಸಾಲಿನಲ್ಲಿ ಕುಳಿತಿದ್ದ ಇಪ್ಪತ್ತು ವರುಷದ ಯುವಕ ಸಿಟ್ಟಿನಿಂದ ಹೇಳಿದ.

"ನಿಮಗೆ ಗೊತ್ತಾ. ಕೆಂಗಣ್ಣ ಅವನನ್ನು ಎಚ್ಚರಿಸಲು ಹೋದವನು ಹರಟೆ ಹೊಡೀತಾ ಕೂತ. ಚಿಂಗ್ ಸಾಮ್ರಾಜ್ಯ ನಮಗೆ ಸೇರಿದ್ದು ಎಂದ. ಇಂಥಾದ್ದನ್ನೆಲ್ಲ ಮಾತಾಡೋದು ಸರೀನಾ. ಯೋಚನೆ ಮಾಡಿ. ಕೆಂಗಣ್ಣನಿಗೆ ಗೊತ್ತಿತ್ತು, ಅವನಿಗೆ ಒಬ್ಬಳು ವಯಸ್ಸಾದ ತಾಯಿ ಇದ್ದಾಳೇಂತ. ಆದರೆ ಅಷ್ಟೊಂದು ಬಡವನಾಗಿದ್ದಾನೆ ಅನ್ನೋದನ್ನು ಊಹಿಸಿಕೊಂಡೇ ಇರಲಿಲ್ಲ. ಅವನಿಂದ ಏನೂ ಪಡೆಯೋಕೆ ಆಗಲಿಲ್ಲ. ಅವನು ಅಲ್ಲಿವರೆಗೆ ಒಳ್ಳೆಯವನಾಗಿದ್ದ. ಕೋಪಾನೂ ಬಂದಿತ್ತು. ಆಗ ಮೂರ್ಖ ಯುವಕ ಸುಮ್ಮನಿರಲಾರದೆ ಕಪಾಳಕ್ಕೆ ಒಂದೆರಡು ಬಿಟ್ಟ.

"ಕೆಂಗಣ್ಣ ಒಳ್ಳೇ ಬಾಕ್ಸರ್. ಆ ಏಟುಗಳು ಅವನಿಗೆ ನೋವುಂಟು ಮಾಡಿರಬೇಕು!" ಗೂನು ಬೆನ್ನಿನವ ತಾನು ಕೂತಿದ್ದ ಮೂಲೆಯಿಂದ, ಗೆದ್ದವನಂತೆ ಎದ್ದ.

"ಹಾಳಾದ ಆ ಯುವಕ ತನಗೆ ಒದೆ ಬೀಳುತ್ತೆ ಅನ್ನೋದು ತಿಳಿದಿದ್ದೂ ಹೆದರಲಿಲ್ಲ. ಅವನು ಹೊಡೆದದ್ದಕ್ಕೆ ಕ್ಷಮೆ ಕೇಳಿದ.

"ಅಂಥ ಪಿಶಾಚಿನ ಹೊಡೆಯೋದಕ್ಕೆ, ಕ್ಷಮೆ ಯಾಕೆ ಕೇಳಬೇಕು?" ಬೂದು ಗಡ್ಡದವನು ಹೇಳಿದ.

ಕಾಂಗ್ ತಿರಸ್ಕಾರದಿಂದ ನೋಡುತ್ತಾ ಹೇಳಿದ. ನೀನು ತಪ್ಪು ತಿಳಿದುಕೊಂಡಿದ್ದಿ. ಅವನು ಹೇಳಿದ ರೀತಿಯಿಂದ ಕೆಂಗಣ್ಣನಿಗೆ 'ಸಾರಿ' ಹೇಳಿರಬೇಕು ಅನಿಸಿತು.

ಅವನನ್ನು ಕೇಳಿಸಿಕೊಳ್ಳುತ್ತಿದ್ದವರ ಕಣ್ಣುಗಳು ಹೊಳೆದವು. ಆದರೆ ಯಾರೊಬ್ಬರೂ ಉತ್ತರಿಸಲಿಲ್ಲ. ಚಿಕ್ಕ ಚುವಾನ್ ಊಟ ಮುಗಿಸಿದ್ದ. ವಿಪರೀತ ಬೆವರುತ್ತಿದ್ದ. ತಲೆಯಲ್ಲಿ ಏನೋ ಒಂದು ಥರಾ ಅನಿಸುತ್ತಿತ್ತು

"ಕೆಂಗಣ್ಣನಿಗೆ 'ಸಾರಿ' ಹೇಳೋದೇ..... ಎಲ್ಲೋ ತಲೆ ಕೆಟ್ಟಿರಬೇಕು. ನಿಜವಾಗಿಯೂ ತಲೆ ಕೆಟ್ಟಿರಬೇಕು." ಬೂದು ಗಡ್ಡದವ ತನಗೆ ಥಟ್ಟನೆ ಏನೋ ನೆನಪಾದಂತೆ ಹೇಳಿದ.

"ನಿಜವಾಗಿಯೂ ತಲೆ ಕೆಟ್ಟಿರಬೇಕು!" – ಇಪ್ಪತ್ತರ ಯುವಕನೂ ದನಿಗೂಡಿಸಿದ.

ಮತ್ತೊಮ್ಮೆ ಗಿರಾಕಿಗಳಲ್ಲಿ ಚಲನವಲನ ಉಂಟಾಯಿತು. ಮಾತೂ ಆರಂಭವಾಯಿತು. ಈ ಗದ್ದಲದಲ್ಲಿ ಹುಡುಗನ ಕೆಮ್ಮು ವಿಪರೀತವಾಯಿತು. ಕಾಂಗ್ ಅವನ ಬಳಿಗೆ ಹೋಗಿ, ಅವನ ಭುಜ ಹಿಡಿದು ಹೇಳಿದ–

"ಖಂಡಿತ ವಾಸಿ ಆಗುತ್ತೆ ಚುವಾನ್, ಖಂಡಿತ. ಈ ರೀತಿ ಕೆಮ್ಮಬೇಡ. ಖಂಡಿತ ವಾಸಿ ಆಗುತ್ತೆ."

"ಹುಚ್ಚು!" – ಗೂನು ಬೆನ್ನಿನವ ತಲೆಯಾಡಿಸುತ್ತ ಒಪ್ಪಿಗೆ ಸೂಚಿಸಿದ.

* * *

ಪಶ್ಚಿಮ ಗೇಟಿನ ಹೊರಗೆ ಊರಿನ ಗೋಡೆ ಪಕ್ಕಕ್ಕೆ ಇದ್ದ ಜಮೀನು ಅಥವಾ ಭೂಮಿ, ಸಾರ್ವಜನಿಕರಿಗೆ ಸೇರಿದ್ದಾಗಿತ್ತು. ಅಂಕುಡೊಂಕಾಗಿ ಸಾಗಿದ್ದ ಆ ರಸ್ತೆ ಹೋಗಿ ಬರುವವರ ಕಾಲು ಹಾದಿಯಾಗಿತ್ತು. ಹತ್ತಿರದ ದಾರಿ ಇದಾಗಿದ್ದರಿಂದ ಹೋಗಿ ಬರುವ ಜನರ ಹೆಜ್ಜೆಗಳು ಮೂಡಿದ್ದವು. ಹಾಗೆ ನೋಡಿದರೆ ಇದೇ ಗಡಿ ರೇಖೆಯಾಗಿತ್ತು. ರಸ್ತೆಯ ಎಡಬದಿಯಲ್ಲಿ ಮರಣ ದಂಡನೆಗೆ ಒಳಗಾಗಿದ್ದವರ ಹೆಣಗಳನ್ನು ಕೇಳುವವರಿಲ್ಲದೆ, ಸೆರೆಮನೆಯಲ್ಲಿಯೇ ಸತ್ತವರ ಹೆಣಗಳನ್ನು ಹೂಳಲಾಗಿತ್ತು. ಬಲಬದಿಗೆ ನಿರ್ಗತಿಕರ ಸಮಾಧಿಗಳಿದ್ದವು. ಅವುಗಳ ಮೇಲಿದ್ದ ಮಣ್ಣಿನ ದಿಬ್ಬಗಳ ಸಾಲು ಶ್ರೀಮಂತನೊಬ್ಬನ ಹುಟ್ಟುಹಬ್ಬಕ್ಕೆ ಹಾಸಿದ ಸುರುಳಿಗಳಂತಿದ್ದವು.

ಚಿಂಗ್ ಮಿಂಗ್ ಹಬ್ಬ. ಆ ವರ್ಷ ಎಂದಿಗಿಂತಲೂ ತಣ್ಣಗಿತ್ತು. ವಿಲ್ಲೋ ಮರಗಳಲ್ಲಿ ಆಗತಾನೇ ಕಾಳಿನಷ್ಟು ಚಿಕ್ಕದಾದ ಎಲೆಗಳು ಮೂಡುತ್ತಿದ್ದವು. ಬೆಳಗಾದ ಸ್ವಲ್ಪ ಹೊತ್ತಿಗೆ ಹಿರಿಯ ಚುವಾನ್‌ನ ಹೆಂಡತಿ, ನಾಲ್ಕು ಬಗೆಯ ತಿಂಡಿಗಳು, ಒಂದು ಬಟ್ಟಲು ಅನ್ನ ತಂದು ಒಂದು ಸಮಾಧಿ ಮುಂದೆ ಇಟ್ಟು ದುಃಖಿಸತೊಡಗಿದಳು. ಕಾಗದ ರೂಪದ ಹಣವನ್ನು ಸುಟ್ಟು ಯಾವುದೋ ಲೋಕದಲ್ಲಿ ಕಳೆದು ಹೋಗಿ,

ಯಾರಿಗೋ ಕಾಯುತ್ತಿರುವಂತೆ ಕುಳಿತಿದ್ದಳು. ಯಾತಕ್ಕೆ ಎನ್ನುವುದು ಅವಳಿಗೂ ತಿಳಿದಿರಲಿಲ್ಲ. ದೊಡ್ಡದಾಗಿ ಗಾಳಿ ಬೀಸಿ, ಗಿಡ್ಡಾಗಿದ್ದ ಅವಳ ಕೂದಲು ಚದುರಿತು. ಹೋದ ವರುಷಕ್ಕಿಂತ ಈ ಕೂದಲು ಇನ್ನೂ ಬೆಳ್ಳಗಾಗಿತ್ತು. ಅದೇ ಹಾದಿಯಿಂದ ಇನ್ನೂ ಒಬ್ಬ ಹೆಂಗಸು ಬಂದಳು. ಅವಳ ಕೂದಲು ಬೆಳ್ಳಗಾಗಿತ್ತು. ಚಿಂದಿ ಧರಿಸಿದ್ದಳು. ಅವಳು ಒಂದು ಹಳೇ ಕೆಂಪು ದುಂಡನೆಯ ಬುಟ್ಟಿ ಹಿಡಿದಿದ್ದಳು. ಅದರಿಂದ ಕಾಗದದ ಹಣದ ಸರ ಇಳಿಬಿದ್ದಿತ್ತು. ತಡವರಿಸುತ್ತ ನಡೆದಳು. ಮುದುಕ ಚುವಾನ್‌ನ ಹೆಂಡತಿ ಕೆಳಗಡೆ ನೆಲದ ಮೇಲೆ ಕುಳಿತು ಅವಳನ್ನು ಗಮನಿಸುತ್ತಿದ್ದಳು. ಅವಳಿಗೆ ಒಂದು ಥರ ಸಂಕೋಚವಾಯಿತು. ಬಿಳಿಚಿಕೊಂಡಿದ್ದ ಆ ಮುಖದಲ್ಲೆಲ್ಲ ನಾಚಿಕೆ ಕಾಣಿಸಿಕೊಂಡಿತು. ಹಾಗೂ ಹೀಗೂ ಧೈರ್ಯ ತಂದುಕೊಂಡು, ಎಡಗಡೆಯಿದ್ದ ಸಮಾಧಿಯ ಬಳಿಗೆ ಬುಟ್ಟಿ ಇಟ್ಟೆದ್ದೆಡೆಗೆ ದಾಟಿ ಹೋದಳು.

ಸಮಾಧಿ ಕಿರಿಯ ಚುವಾನ್‌ನ ಸಮಾಧಿಗೆ ಎದುರಾಗಿತ್ತು. ಎರಡು ಸಮಾಧಿಗಳು ರಸ್ತೆಯಿಂದ ಬೇರ್ಪಡಿಸಲಾಗಿತ್ತು, ಅಷ್ಟೆ. ಹಿರಿಯ ಚುವಾನ್‌ನ ಹೆಂಡತಿ, ಆ ಇನ್ನೊಬ್ಬ ಹೆಂಗಸೂ ನಾಲ್ಕು ಬಗೆಯ ತಿಂಡಿಗಳನ್ನು, ಒಂದು ಬಟ್ಟಲು ಅನ್ನವನ್ನು ಇರಿಸಿ, ಗೋಳಾಡುವುದನ್ನು ಮತ್ತು ಕಾಗದದ ಹಣವನ್ನು ಸುಡುವುದನ್ನೂ ನೋಡಿದಳು. ಮುದುಕಿಗೆ, ಅದು ಅವಳ ಮಗನ ಸಮಾಧಿಯೇ ಇರಬೇಕೆನ್ನಿಸಿತು. ಇಬ್ಬರು ಹೆಂಗಸರಲ್ಲಿ ಹಿರಿಯ ಹೆಂಗಸು ಗುರಿಯಿಲ್ಲದೆ ಒಂದೆರಡು ಹೆಜ್ಜೆ ಶತಪಥ ಹಾಕಿದಳು. ಮತ್ತು ಶೂನ್ಯ ದೃಷ್ಟಿಯಿಂದ ಸುತ್ತಲೂ ಒಮ್ಮೆ ಕಣ್ಣು ಹಾಯಿಸಿದಳು. ಇದ್ದಕ್ಕಿದ್ದಂತೆ ನಡುಗುವುದಕ್ಕೆ ಪ್ರಾರಂಭಿಸಿದಳು. ಸ್ವಲ್ಪದರಲ್ಲಿಯೇ ತಡವರಿಸಿ, ತಲೆಸುತ್ತಿ ಬೀಳುತ್ತಿರುವಳೇನೋ ಎನಿಸಿತು.

ಮಗನ ಅಗಲಿಕೆಯ ದುಃಖದಿಂದ ಹೀಗಾಗಿರಬಹುದೆಂದೆನಿಸಿ, ಮುದುಕ ಚುವಾನ್‌ನ ಹೆಂಡತಿ ಎದ್ದು ಒಂದೆರಡು ಹೆಜ್ಜೆ ನಡೆದು ರಸ್ತೆ ದಾಟಿ ಬಂದು ಅವಳಿಗೆ ಮೆಲ್ಲಗೆ ಹೇಳಿದಳು– "ದುಃಖಿಸಬೇಡ, ಮನೆಗೆ ಹೋಗೋಣ."

ಆ ಹೆಂಗಸು ತಲೆಯಾಡಿಸಿದಳು. ಆದರೆ ಇನ್ನೂ ಅವಳು ಒಂದೇ ಸಮನೆ ನೋಡುವುದನ್ನು ಮುಂದುವರೆಸಿದ್ದಳು. ಅವಳು ಗೊಣಗಿದಳು, "ನೋಡು, ಅದೇನದು?"

ಚುವಾನ್‌ನ ಹೆಂಡತಿ, ಆ ಹೆಂಗಸು ತೋರಿದ ದಿಕ್ಕಿನ ಕಡೆ ನೋಡಿದಾಗ ಇನ್ನೂ ಹುಲ್ಲು ಬೆಳೆದಿರದಿದ್ದ ಸಮಾಧಿ ಕಾಣಿಸಿತು. ಅಲ್ಲಲ್ಲಿ ಮಣ್ಣಿನ ಅಸಹ್ಯವಾದ ತೇಪೆಗಳು ಕಾಣಿಸಿದವು. ಸ್ವಲ್ಪ ಗಮನವಿರಿಸಿ ನೋಡಿದಾಗ ಒಂದು ಕಡೆ ಮಣ್ಣಿನ ದಿಬ್ಬದ ಮೇಲೆ ಕೆಂಪು ಮತ್ತು ಬಿಳಿ ಹೂಗಳ ದಂಡೆ ನೋಡಿ ಆಶ್ಚರ್ಯಪಟ್ಟಳು.

ಇಬ್ಬರ ಕಣ್ಣೂ ಮಂಜಾಗಿದ್ದರೂ, ಈ ಕೆಂಪು ಮತ್ತು ಬಿಳಿ ಹೂಗಳನ್ನು ಸ್ಪಷ್ಟವಾಗಿ ನೋಡಲು ಸಾಧ್ಯವಾಯಿತು. ಹೂಗಳು ಹೆಚ್ಚಾಗಿ ಇಲ್ಲದಿದ್ದರೂ. ಅವುಗಳನ್ನು

ವೃತ್ತಾಕಾರದಲ್ಲಿ ಪೇರಿಸಲಾಗಿತ್ತು. ತಾಜಾ ಹೂಗಳಾಗಿಲ್ಲದಿದ್ದರೂ ಅಚ್ಚುಕಟ್ಟಾಗಿ ಪೇರಿಸಲಾಗಿತ್ತು. ಕಿರಿಯ ಚುವಾಸ್‌ನ ತಾಯಿ ಸುತ್ತಲೂ ನೋಡಿ ತನ್ನ ಮಗನ ಸಮಾಧಿಯನ್ನು ಗುರುತಿಸಿದಳು. ಅದರ ಮೇಲೆ ಸಾಮಾನ್ಯವಾಗಿ ಎಲ್ಲ ಸಮಾಧಿಗಳ ಮೇಲೆ ಕಾಣುವಂತೆ ಅಲ್ಲಲ್ಲಿ ಒಂದೊಂದು ಹೂವು ಕಾಣಿಸಿತು. ಅವು ನಡುಗುತ್ತಿದ್ದಂತಿತ್ತು. ಏನೋ ಕಳೆದುಕೊಂಡಂತೆನಿಸಿದರೂ, ತಾನಿಟ್ಟ ಹೂವಿನ ದಂಡೆ ಎಲ್ಲಿ ಹೋಯಿತೆಂಬುದರ ಬಗ್ಗೆ ಇದ್ದ ಕುತೂಹಲವನ್ನು ಮರೆತಳು.

ಅಷ್ಟರಲ್ಲಿ ಆ ವಯಸ್ಸಾದ ಹೆಂಗಸು, ಸಮಾಧಿಯ ತೀರಾ ಹತ್ತಿರಕ್ಕೆ ಹೋಗಿ ನೋಡಿದಳು. "ಅವುಗಳಿಗೆ ಬೇರುಗಳೇ ಇಲ್ಲ". ತನ್ನಲ್ಲೇ ಹೇಳಿಕೊಂಡಳು. ಅವು ಇಲ್ಲಿ ಬೆಳೆದಿರಲು ಸಾಧ್ಯವಿಲ್ಲ. "ಯಾರು ಇಲ್ಲಿಗೆ ಬಂದಿರಬಹುದು? ಮಕ್ಕಳು ಇಲ್ಲಿಗೆ ಆಡೋಕೂ ಬರೊಲ್ಲ. ನಮ್ಮ ಬಂಧುಗಳು ಯಾರೂ ಇಲ್ಲಿಗೆ ಬರೊಲ್ಲ. ಏನಾಗಿರಬಹುದು?" ಆವಳಿಗೆ ಏನೂ ಅರ್ಥವಾಗಲಿಲ್ಲ. ದಿಕ್ಕು ತೋಚದಂತೆ, ಕಣ್ಣೀರು ಬರುವವರೆಗೂ ನಿಂತಳು. ನಂತರ ಎತ್ತರದ ದನಿಯಲ್ಲಿ ಹೇಳಿದಳು.

"ಮಗು ನಿನಗೆ ಎಲ್ಲರಿಂದ ಅನ್ಯಾಯ ಆಗಿದೆ. ನೀನದನ್ನು ಮರೆತಿಲ್ಲ. ನಿನ್ನ ದುಃಖ ಮರೆಯಲು ಸಾಧ್ಯವಿಲ್ಲದಷ್ಟು ದೊಡ್ಡದು ಅನ್ನುವುದನ್ನು ತೋರಿಸಲೆಂದೇ ಈ ಅದ್ಭುತ ಮಾಡಿದೆಯಾ?"

ಸುತ್ತಲೂ ನೋಡಿದಾಗ, ಒಂದೂ ಎಲೆಗಳಿಲ್ಲದ ಕೊಂಬೆಯ ಮೇಲೆ ಕಾಗೆಯೊಂದು ಕುಳಿತಿರುವುದು ಮಾತ್ರ ಕಾಣಿಸಿತು.

"ನನಗೆ ಗೊತ್ತಿದೆ. ಅವರು ನಿನ್ನ ಕೊಲೆ ಮಾಡಿದ್ದಾರೆ" ಮಾತು ಮುಂದುವರೆಸಿದಳು. ವಿಚಾರಣೆಯ ದಿನ ಬಂದೇ ಬರುತ್ತೆ. ದೇವರು ನೋಡಿಕೊಳ್ಳುತ್ತಾನೆ. ಶಾಂತಿಯಿಂದ, ನೆಮ್ಮದಿಯಿಂದ ಕಣ್ಣು ಮುಚ್ಚು. ನೀನು ನಿಜವಾಗಿಯೂ ಇಲ್ಲಿ ಉಪಸ್ಥಿತನಿದ್ದರೆ, ಈ ಕಾಗೆ ಬಂದು ನಿನ್ನ ಗೋರಿಯ ಮೇಲೆ ಕುಳಿತುಕೊಳ್ಳಲಿ. ಅದೇ ನನಗೆ ಸಂಕೇತ!"

ಗಾಳಿ ಬೀಸುವುದು ನಿಂತಿತ್ತು. ಒಣ ಹುಲ್ಲಿನ ಕಡ್ಡಿಗಳು ತಾಮ್ರದ ತಂತಿಗಳಂತೆ ಬಾಗದೆ ಸೆಟೆದು ನಿಂತಿದ್ದವು. ಕ್ಷೀಣವಾದ ನಡುಗುವ ದನಿಯೊಂದು ಗಾಳಿಯಲ್ಲಿ ಅನುರಣಿತವಾಯಿತು. ಮತ್ತು ಹಾಗೆಯೇ ಕರಗಿ ಹೋಯಿತು. ಸುತ್ತಲೂ ಭಯಂಕರ ಮೌನ ಕವಿದಿತ್ತು. ಒಣ ಹುಲ್ಲಿನ ಮೇಲೆ ಇಬ್ಬರೂ ನಿಂತಿದ್ದರು. ಕಾಗೆಯನ್ನು ಗಮನಿಸುತ್ತಿದ್ದರು. ಕಾಗೆಯೂ ಕೂಡ ಮರದ ಎಲೆಯಿಲ್ಲದ ಕೊಂಬೆಯ ಮೇಲೆ ಚಲನವಿಲ್ಲದೆ ಕಲ್ಲಿನಂತೆ ಕೂತಿತ್ತು.

ಕಾಲ ಸರಿಯಿತು. ದೊಡ್ಡವರು, ಚಿಕ್ಕವರು, ವಯಸ್ಸಾದವರು. ಯುವಕರು ಎಲ್ಲರೂ ಸಮಾಧಿಗಳನ್ನು ದರ್ಶಿಸಲು ಬಂದರು.

ಚುವಾನ್‌ನ ಮಡದಿಗೆ ಏನೋ ಭಾರ ಇಳಿದು ಹಗುರವಾದಂತೆ ಎನಿಸಿತು. ಅಲ್ಲಿಂದ ಹೊರಡೋಣವೆನಿಸಿ, ಮತ್ತೊಬ್ಬ ಹೆಂಗಸನ್ನು "ಹೋಗೋಣ ಬಾ" ಎಂದು ಕರೆದಳು.

ಆ ಮುದಿ ಹೆಂಗಸು ನಿಟ್ಟುಸಿರಿನೊಂದಿಗೆ ಎದ್ದು ಅಸಮಾಧಾನದಿಂದ ಅನ್ನ ಮತ್ತು ಇತರ ಪದಾರ್ಥಗಳನ್ನು ಕೈಗೆತ್ತಿಕೊಂಡಳು. ಒಂದು ನಿಮಿಷ ಹಿಂಜರಿದು, ಹೆಜ್ಜೆ ಹಾಕತೊಡಗಿದಳು. ಇನ್ನೂ ತನ್ನೊಳಗೇ 'ಇದರ ಅರ್ಥ ಏನು?' ಎಂದು ಪ್ರಶ್ನಿಸಿಕೊಳ್ಳುತ್ತಿದ್ದಳು.

ಇನ್ನೂ ಒಂದು ಮೂವತ್ತು ಹೆಜ್ಜೆ ಮುಂದೆ ಹೋಗಿದ್ದರೋ ಇಲ್ಲವೋ, ಹಿಂದಿನಿಂದ ಜೋರಾಗಿ ಕಾಗೆ ಕೂಗು ಕೇಳಿಸಿತು. ಅಚ್ಚರಿಯಿಂದ ನೋಡಲು, ಕಾಗೆ ತನ್ನ ರೆಕ್ಕೆಗಳನ್ನು ಬಿಚ್ಚಿ ಹರಡಿ ಹಾರುವುದಕ್ಕೆ ಸಿದ್ಧವಾಗಿ ನಿಂತದ್ದು ಕಾಣಿಸಿತು. ನಂತರ ಅದು ಬಾಣದಂತೆ ಕ್ಷಿತಿಜದಾಚೆಗೆ ನೆಗೆಯಿತು.

ನಾಳೆ

"ಸ್ವಲ್ಪಾನೂ ಸದ್ದಿಲ್ಲ. ಮಗೂಗೆ ಏನಾಗಿದೆ?"

ಕೈಯಲ್ಲಿ ಹಳದಿ ಹೆಂಡದ ಬಟ್ಟಲು ಹಿಡಿದು, ಕೆಂಪು ಮೂಗಿನ ಕುಂಗ್ ಮಾತಾಡುತ್ತಲೇ, ಮುಂದಿನ ಮನೆ ಕಡೆ ತನ್ನ ತಲೆ ತಿರುಗಿಸಿದ. ಆಹ್–ವೋ ತನ್ನ ಕೈಲಿದ್ದ ಬಟ್ಟಲನ್ನು ಕೆಳಗಿರಿಸಿ, ಎದುರಿಗಿದ್ದವನ ಬೆನ್ನಿಗೆ ಒಂದು ಗುದ್ದು ಗುದ್ದಿದ.

"ಬಾಹ್" ತಿರಸ್ಕಾರದಿಂದ ನುಲಿದ. "ಮತ್ತೆ ಭಾವುಕನಾಗುತ್ತಿದ್ದೀಯ?" ಲುಷನ್ ಸ್ವಲ್ಪ ಬೇರೆಯವರಿಗಿಂತ ಹಳೆ ಕಾಲದವನಾಗಿದ್ದ. ಮೊದಲ ಗಂಟೆ ಹೊಡೆಯುವುದಕ್ಕೆ ಮುಂಚೆಯೇ ಜನ ಮನೆ ಬಾಗಿಲುಗಳನ್ನು ಮುಚ್ಚಿಕೊಂಡು ಮಲಗಲು ಹೊರಡುತ್ತಿದ್ದರು. ಮಧ್ಯರಾತ್ರಿವರೆಗೆ ಎದ್ದಿರುತ್ತಿದ್ದ ಕುಟುಂಬಗಳು ಎರಡು ಮಾತ್ರವೇ ಆಗಿದ್ದವು. ಪ್ರಾಸ್ ಪರೆಟಿ ಟ್ಯಾವರ್ನ್‌ನ್ನಲ್ಲಿ ಒಂದಿಬ್ಬರು ಹೊಟ್ಟೆಬಾಕರು ತಿನ್ನುತ್ತಾ, ಕುಡಿಯುತ್ತಾ ಬಾರ್‌ನ ಸುತ್ತ ತಿರುಗುತ್ತಿದ್ದರು. ಇನ್ನೊಂದು ಪಕ್ಕದ ಮನೆ. ಇದರಲ್ಲಿ ನಾಲ್ಕನೇ ಷಾನ್‌ನ ಹೆಂಡತಿ ವಾಸಿಸುತ್ತಿದ್ದಾಳೆ. ಎರಡು ವರ್ಷಗಳ ಹಿಂದೆ ವಿಧವೆಯಾದವಳು. ಹತ್ತಿಯಿಂದ ದಾರ ತೆಗೆದು ಜೀವಿಸುತ್ತಿದ್ದಳು. ಇದರ ಹೊರತು ಅವಳಿಗೆ ಬೇರೆ ಆದಾಯವಿರಲಿಲ್ಲ. ಅವಳಿಗೆ ಮೂರು ವರ್ಷದ ಮಗನಿದ್ದ. ಆದ್ದರಿಂದಲೇ ಅವಳು ಮಲಗುವುದು ತಡವಾಗುತ್ತಿತ್ತು.

ಇತ್ತೀಚೆಗೆ ಕೆಲವು ದಿನಗಳಿಂದ ಯಾಕೋ ಏನೋ ನೂಲುವ ಸದ್ದು ಕೇಳಿಸುತ್ತಿರಲಿಲ್ಲ. ತಡವಾಗಿ ಮಲಗುತ್ತಿದ್ದ ಕುಟುಂಬಗಳು ಎರಡೇ ಆಗಿದ್ದ ಕಾರಣ, ಈ ಇಬ್ಬರಿಗೆ ಯಾರ ಮನೇಲಿ ಏನಾಗುತ್ತಿದೆ? ಸದ್ದು ಕೇಳಿಸುವುದೇ? ಇಲ್ಲವೇ? ಎನ್ನುವುದನ್ನೆಲ್ಲ ಗಮನಿಸುವುದಕ್ಕೆ ಸಾಧ್ಯವಾಗುತ್ತಿತ್ತು.

ಬೆನ್ನಿನ ಮೇಲೆ ಗುದ್ದು ತಿಂದ ಮೇಲೆ, ಮುದಿ ಕುಂಗ್ ನಿರಾಳವಾಗಿ ನೋಡುತ್ತಾ, ಒಂದೆರಡು ಗುಟುಕು ಹೆಂಡ ಕುಡಿದು ಜನಪದ ಹಾಡನ್ನು ಗುಣುಗುಣಿಸಿದ.

ಅದೇ ಸಮಯದಲ್ಲಿ ನಾಲ್ಕನೇ ಷಾನ್‌ನ ಹೆಂಡತಿ ಹಾಸಿಗೆಯ ಅಂಚಿನಲ್ಲಿ ಕುಳಿತಿದ್ದಳು. ಮಗನನ್ನು ತೋಳಲ್ಲಿರಿಸಿಕೊಂಡಿದ್ದಳು. ಅವಳ ಲಾಳ ಮೌನವಾಗಿ ಕುಳಿತಿತ್ತು. ಮಂದವಾದ ದೀಪದ ಬೆಳಕು ಮಗು ಪಾವ್ಹೋಎರ್ಹ್‌ನ ಮೇಲೆ ಬಿತ್ತು. ಆ ಬೆಳಕಲ್ಲಿ ಜ್ವರದ ಮುಖ ಸ್ಪಷ್ಟವಾಗಿ ಕಾಣಿಸಿತು.

“ದೇವರ ಮುಂದೆ ತುಂಬಾ ಕೇಳಿಕೊಂಡಿದ್ದೇನೆ” ಅನಿಸಿತು. ಅವನಿಗೆ ಎಷ್ಟೊಂದು ಹರಕೆ ಹೊತ್ತಿದ್ದೇನೆ. ಖಂಡಿತ ವಾಸಿಯಾಗುತ್ತೆ ಅನ್ನೋ ಭರವಸೆ ಇತ್ತು. ಆದರೂ ಇನ್ನೂ ಸರಿ ಹೋಗಿಲ್ಲ ಅಂದರೆ ನಾನು ಏನು ಮಾಡಲಿ? ಅವನನ್ನು ಡಾಕ್ಟರ್ ಹೋ ಸಿಯಾವ್ಹೋ ಸಿಯೆನ್ ಬಳಿ ಕರೆದೊಯ್ಯಬೇಕಾಗುತ್ತೆ. ಬಹುಶಃ ರಾತ್ರಿಗಳಲ್ಲಿ ಮಾತ್ರ ಹೆಚ್ಚಾಗುತ್ತಾ, ಬೆಳಗಾಗುತ್ತಿದ್ದಂತೆ ಕಡಿಮೆಯಾಗಿ ಅವನು ಸರಿ ಹೋಗಬಹುದು. ಕೆಲವು ಜ್ವರಗಳು ಹಾಗೇ ಇರೋದು.”

ನಾಲ್ಕನೆ ಷಾನ್‌ನ ಹೆಂಡತಿ ಏನೂ ತಿಳಿದವಳಲ್ಲ. ‘ಆದರೆ; ಅನ್ನುವುದರಲ್ಲಿ ಇರಬಹುದಾದ ಭಯ ಅವಳಿಗೆ ಗೊತ್ತಾಗೊಲ್ಲ. ಈ ‘ಆದರೆ’ ಅನ್ನೋ ಪದಕ್ಕೆ ಧನ್ಯವಾದ ಹೇಳಬೇಕು. ಯಾಕೇಂದ್ರೆ ಎಷ್ಟೋ ಸಲ 'ಆದರೆ’ ಅಂದಾಗ ಒಳ್ಳೇದೂ ಆಗಿದೆ, ಕೆಟ್ಟದ್ದೂ ಆಗಿದೆ. ಬೇಸಿಗೆಯ ರಾತ್ರಿಗಳು ಕಿರಿದು. ಮುದಿ ಕುಂಗ್ ಮತ್ತು ಇತರರು ಹಾಡನ್ನು ನಿಲ್ಲಿಸಿದಾಗ ಆಕಾಶದಲ್ಲಿ ಬೆಳಕು ಮೂಡಿತ್ತು. ಕಿಟಕಿಗಳ ಸಂದುಗಳ ಮೂಲಕವಾಗಿ ಬೆಳ್ಳಿ ಬೆಳಕಿನ ಕಿರಣಗಳು ಹಾದು ಬರುತ್ತಿದ್ದವು.

ನಾಲ್ಕನೇ ಷಾನ್‌ನ ಹೆಂಡತಿಗೆ ಬೆಳಗಿನ ನಿರೀಕ್ಷೆ, ಬೇರೆಯವರಿಗೆ ಸಾಮಾನ್ಯವೆನಿಸಿದ ಹಾಗೆ ಅನ್ನಿಸಲಿಲ್ಲ. ಅವಳಿಗೆ ಕ್ಷಣಗಳನ್ನು ಕಳೆಯುವುದೂ ಕಷ್ಟವಾಗಿತ್ತು. ಪಾವ್ಹೊ ಎರ್ಹ್ ತೆಗೆದುಕೊಳ್ಳುವ ಉಸಿರು ಒಂದು ವರ್ಷದಷ್ಟು ದೀರ್ಘವೋ ಎನಿಸುವಂತಿತ್ತು. ಈಗ ಸ್ವಲ್ಪ ಆಶಾದಾಯಕವೆನಿಸಿತು. ಹಗಲಿನ ಬೆಳಕು ದೀಪದ ಬೆಳಕನ್ನು ನುಂಗಿ ಬಿಟ್ಟಿತು. ಪಾವ್ಹೊ ಎರ್‌ನ ಹೊಳ್ಳೆಗಳು ಕಂಪಿಸಿದವು. ಉಸಿರಾಡಲು ಹೆಣಗುತ್ತಿದ್ದ.

ನಾಲ್ಕನೇ ಷಾನ್‌ನ ಹೆಂಡತಿ ಗಟ್ಟಿಯಾಗಿ ಕಿರುಚಿದಳು. ಇದು ಖಾಯಿಲೆಯ ಲಕ್ಷಣವಾಗಿತ್ತು. ಆದರೆ ಅವಳಿಗೆ ಏನು ಮಾಡುವ ಹಾಗಿದೆ? ಅವಳಿಗೆ ಅಚ್ಚರಿ ಎನಿಸಿತು. ಈಗ ಉಳಿದಿದ್ದ ದಾರಿಯೆಂದರೆ, ಡಾಕ್ಟರ್ ಬಳಿಗೆ ಹೋಗುವುದು.

ಅವಳು ಸಾಧಾರಣ ಹೆಣ್ಣಿರಬಹುದು. ಆದರೆ ಅವಳಿಗೆ ಅವಳದೇ ಆದ ಮನಸ್ಸಿತ್ತು. ಎದ್ದು ಕಪಾಟಿನ ಬಳಿ ಹೋದಳು. ತಾನು ಉಳಿಸಿದ್ದ ಹಣವನ್ನೆಲ್ಲ ತೆಗೆದುಕೊಂಡಳು. ಹದಿಮೂರು ಹೊಳೆವ ಬೆಳ್ಳಿ ನಾಣ್ಯಗಳು ನೂರ ಎಂಭತ್ತು ತಾಮ್ರದ್ದು. ಅಷ್ಟೂ ಹಣವನ್ನು ತನ್ನ ಜೇಬಿನಲ್ಲಿ ಇರಿಸಿಕೊಂಡಳು. ಬಾಗಿಲಿನ ಬೀಗ ಹಾಕಿದಳು. ಪಾವ್ಹೋ ಎರ್ಹ್‌ನನ್ನು ಕಂಕುಳಿಗೇರಿಸಿಕೊಂಡು ಡಾ. ‘ಹೋ’ ಬಳಿಗೆ ನಡೆದಳು.

ಹೊತ್ತಿಗೇ ಮುಂಚೆಯೇ ಆಗಿದ್ದರೂ ಆಗಲೇ ನಾಲ್ಕು ಜನ ರೋಗಿಗಳು ಕುಳಿತಿದ್ದರು. ರಿಜಿಸ್ಟ್ರೇಷನ್‌ಗೆ ನಲ್ವತ್ತು ನಾಣ್ಯಗಳನ್ನು ನೀಡಿದಳು. ಪರೀಕ್ಷೆಗೆ ಒಳಗಾದವರಲ್ಲಿ ಪಾವ್ಹೊ

ಎರ್ಪ್ ಐದನೆಯ ರೋಗಿಯಾಗಿದ್ದ. ಡಾಕ್ಟರ್ ಹೋ ಮಗುವಿನ ಪಲ್ಸ್ ನೋಡಿದರು. ಆತನ ಬೆರಳುಗಳಲ್ಲಿನ ಉಗುರು ನಾಲ್ಕು ಅಂಗುಲ ಉದ್ದವಿದ್ದುದನ್ನು ನೋಡಿ ಅವಳಿಗೆ ಆಶ್ಚರ್ಯವಾಯಿತು. "ನಿಜವಾಗಿಯೂ ನನ್ನ ಪಾವೋ ಎರ್ಪ್ ಬದುಕುತ್ತಾನೆ" ಎಂದು ಒಳಗೇ ಯೋಚಿಸಿದಳು. ಉದ್ದಕ್ಕೂ ಅವಳಲ್ಲಿ ಕಾತುರತೆ ಹೆಚ್ಚಾಯಿತು. ಭಯದಿಂದಲೇ ವಿಚಾರಿಸಿದಳು– "ನನ್ನ ಮಗುವಿಗೆ ಏನಾಗಿದೆ ಡಾಕ್ಟರ್?"

"ಅನ್ನ ನಾಳದಲ್ಲಿ ಸ್ವಲ್ಪ ತೊಂದರೆ ಇದೆ."

"ಅದೇನಾದರೂ ಸೀರಿಯಸ್ಸೇ?.......ಅವನು.....?"

"ಸದ್ಯಕ್ಕೆ ಈ ಔಷಧಿ ಬರೆದು ಕೊಡುತ್ತೇನೆ."

"ಉಸಿರಾಡೋಕೆ ಆಗ್ತಿಲ್ಲ. ಅವನ ಮೂಗಿನ ಹೊಳ್ಳೆಗಳು ಬಡಿದುಕೊಳ್ಳುತ್ತಿವೆ."

"ಲೋಹಕ್ಕಿಂತ ಬೆಂಕಿಯ ಶಕ್ತಿ ಜಾಸ್ತಿ....."

ಈ ಮಾತನ್ನು ಪೂರ್ತಿಯಾಗಿಸದೆ, ಡಾ. ಹೋ, ಕಣ್ಣುಮುಚ್ಚಿಕೊಂಡರು. ಷಾನ್‌ನ ಹೆಂಡತಿ ಮುಂದೆ ಮಾತಾಡಲು ಇಷ್ಟಪಡಲಿಲ್ಲ. ಡಾಕ್ಟರ್‌ಗೆ ಎದುರಾಗಿ ಮೂವತ್ತು ವಯಸ್ಸಿನ ವ್ಯಕ್ತಿಯೊಬ್ಬ ಕುಳಿತಿದ್ದು ಪ್ರಿಸ್‌ಕ್ರಪ್ಷನ್ ಮುಗಿಸಿದ್ದ.

ಕಾಗದದ ಒಂದು ತುದಿಗೆ ಬರೆದಿದ್ದುದರ ಕಡೆಗೆ ತೋರಿಸುತ್ತಾ, "ಇನ್‌ಫ್ಯಾಂಟ್ ಪ್ರಿಸರ್‌ವರ್ ಪಿಲ್ಸ್, ಇದು ಜೈನಾ ಫ್ಯಾಮಿಲಿ ಸಾಲ್ವೇಷನ್ ಅಂಗಡೀಲಿ ಸಿಗುತ್ತೆ" ಎಂದ.

ನಾಲ್ಕನೆ ಷಾನ್‌ನ ಹೆಂಡತಿ ಕಾಗದವನ್ನು ತೆಗದುಕೊಂಡು, ಯೋಚಿಸುತ್ತಾ ಹೊರಟಳು. ಸಾಮಾನ್ಯ ಸರಳ ಹೆಂಗಸರು ಅವಳಾಗಿದ್ದರೂ ಅವಳಿಗೆ ಡಾ. ಹೋನಮನೆ, ಸಾಲ್ವೇಷನ್ ಷಾಪ್, ಎಲ್ಲವೂ ಗೊತ್ತಿತ್ತು. ಅವೆರಡರ ಜೊತೆಗೆ ತನ್ನ ಮನೇನೂ ಸೇರಿ ತ್ರಿಕೋನದ ರೀತಿ ಕಾಣುತ್ತಿತ್ತು. ಅದಕ್ಕಾಗಿಯೇ ಮನೆಗೆ ಹೋಗೋಕೆ ಮೊದಲೇ ಔಷಧಿಗಳನ್ನು ಕೊಳ್ಳೋದು ಸುಲಭ ಎನಿಸಿ, ವೇಗವಾಗಿ ಹೆಜ್ಜೆ ಹಾಕಿದಳು ಮತ್ತು ಔಷಧಿ ಅಂಗಡಿ ತಲುಪಿದಳು. ಅಂಗಡಿಯ ಸಹಾಯಕ ಪ್ರಿಸ್ಕ್ರಿಪ್ಷನ್ ನೋಡಿ ಔಷಧಿಗಳನ್ನು ತೆಗೆದಿರಿಸಿ, ಅವುಗಳನ್ನು ಪೊಟ್ಟಣ ಕಟ್ಟಿದ. ಷಾನ್‌ನ ಹೆಂಡತಿ ಮಗುವನ್ನು ಕಂಕುಳಲ್ಲಿ ಇರಿಸಿಕೊಂಡು ಕಾದಳು. ಇದ್ದಕ್ಕಿದ್ದಂತೆ ಪಾವೋ ಎರ್ಪ್ ತನ್ನ ಪುಟ್ಟ ಕೈಗಳನ್ನು ಚಾಚಿ ಸಡಿಲವಾಗಿದ್ದ ತನ್ನ ಕೂದಲನ್ನು ಮುಷ್ಟಿಯಲ್ಲಿ ಹಿಡಿದ. ಅವನು ಯಾವಾಗಲೂ ಈ ರೀತಿ ಮಾಡಿರಲಿಲ್ಲ. ಅವನ ತಾಯಿಗೆ ಇದರಿಂದ ಹೆದರಿಕೆಯಾಯಿತು.

ಸೂರ್ಯ ಸಾಕಷ್ಟು ಏರಿದ್ದ. ಮಗುವನ್ನು ಕಂಕುಳಲ್ಲಿ ಇರಿಸಿಕೊಂಡು. ಔಷಧಿಯ ಪೊಟ್ಟಣವನ್ನೂ ಹಿಡಿದು ಹೆಜ್ಜೆ ಹಾಕುತ್ತಿದ್ದಂತೆ ತಾನು ಹೊತ್ತಿದ್ದ ಭಾರ ಇನ್ನಷ್ಟು ಭಾರವಾಗುತ್ತಿದ್ದಂತೆನಿಸಿತು. ಮಗು ಚಡಪಡಿಸುತ್ತಿತ್ತು. ಇದರಿಂದ ಅವಳು ನಡೆಯುತ್ತಿದ್ದ

ಹಾದಿ ಇನ್ನಷ್ಟು ದೂರವೆನಿಸಿತು. ದಾರಿಯಲ್ಲಿ ಕಾಣಿಸಿದ ಒಂದು ದೊಡ್ಡ ಮನೆಯ ಬಾಗಿಲಲ್ಲಿ ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಲು ಯೋಚಿಸಿ ಕುಳಿತಳು. ಈಗ ಅವಳಿಗೆ ಉಟ್ಟ ಬಟ್ಟೆಯೆಲ್ಲ ಮೈಗೆ ಮೆತ್ತಿಕೊಂಡಂತೆನಿಸಿತು. ಮತ್ತೆ ಹೆಜ್ಜೆ ಹಾಕತೊಡಗಿದಾಗ, ಅವಳಿಗೆ ಮಗು ಇನ್ನೂ ಭಾರವೆನಿಸಿತು. ತನ್ನ ಪಕ್ಕದಿಂದ ಯಾರೋ ಮಾತಾಡಿದ್ದು ಕೇಳಿಸಿತು.

"ಅಮ್ಮಾ ನಿನ್ನ ಮಗುವನ್ನು ಎತ್ತಿಕೊಳ್ಳಲೇ?" ನೀಲಿ ಚರ್ಮದ ಆಹ್-ವೂನ ಧ್ವನಿಯಂತೆ ಕೇಳಿಸಿತು. ನೋಡಿದಾಗ ನಿಜವಾಗಿಯೂ ಅವನೇ ಆಗಿದ್ದ. ನಿದ್ದೆಯಿಂದ ಇನ್ನೂ ಭಾರವಾಗಿದ್ದ ಕಣ್ಣುಗಳಿಂದ ಅವಳನ್ನು ಹಿಂಬಾಲಿಸುತ್ತಿದ್ದ.

ಯಾರಾದರೂ ತನ್ನ ಸಹಾಯಕ್ಕೆ ಬರಬಾರದೇ ಎಂದು ಹಾರೈಸುತ್ತಿದ್ದರೂ, ಆಹ್-ವೂ ಮಾತ್ರ ಬೇಡವೆನಿಸಿತ್ತು. ಆದರೆ ಆಹ್-ವೂ ಮೇಲಿಂದ ಮೇಲೆ ಒತ್ತಾಯಿಸಿದ. ಅವಳೂ ಅವನ ಸಹಾಯವನ್ನು ಅನೇಕ ಸಲ ತಿರಸ್ಕರಿಸಿದರೂ ಕಡೆಗೆ ಒಪ್ಪಿಗೆ ಕೊಟ್ಟಳು. ಮಗುವನ್ನು ಅವಳಿಂದ ಎತ್ತಿಕೊಳ್ಳಲು ಕೈ ಚಾಚಿದಾಗ, ಅವನ ಕೈ ಅವಳೆದೆಯನ್ನು ಸ್ಪರ್ಷಿಸಿತು. ಅವಳಿಗೆ ಏನೋ ಬಿಸಿ ತಟ್ಟಿದೆಂತೆನಿಸಿತು. ಅವಳಿಗೆ ನಾಚಿಕೆಯಾಯಿತು.

ಎರಡೂವರೆ ಅಡಿಗಳ ಅಂತರದಲ್ಲಿ ಅವರು ನಡೆದರು. ಆಹ್-ಕ್ಯೂ ಒಂದಷ್ಟು ಅಭಿಪ್ರಾಯಗಳನ್ನು ಹೇಳಿದ. ಆದರೆ ಅವಳು ಯಾವೊಂದಕ್ಕೂ ಉತ್ತರಿಸಲಿಲ್ಲ. ತುಂಬ ದೂರವೇನೂ ಹೋಗಿರಲಿಲ್ಲ. ಅಷ್ಟರಲ್ಲಿ ಅವನು ಮಗುವನ್ನು ಹಿಂತಿರುಗಿಸಿದ. ಇಷ್ಟು ಹೊತ್ತಿಗೆ ಗೆಳೆಯನನ್ನು ಊಟಕ್ಕೆ ಬರುವಂತೆ ನೆನ್ನೆ ಹೇಳಿದ್ದೇನೆಂದು ಕಾರಣ ತಿಳಿಸಿದ.

ಷಾನ್‌ನ ಹೆಂಡತಿ ಮಗುವನ್ನು ಹಿಂದಕ್ಕೆ ಪಡೆದಳು. ಈಗ ಅಷ್ಟು ದೂರವೇನೂ ಇರಲಿಲ್ಲ. ರಸ್ತೆಯ ಪಕ್ಕಕ್ಕೆ ಒಂಬತ್ತನೇ ಆಂಟಿ ಕುಳಿತ್ತಿದ್ದನ್ನು ನೋಡಬಹುದಾಗಿತ್ತು. ಆಂಟಿ ಅಲ್ಲಿಂದಲೇ ಕೂಗಿ ಕೇಳಿದಳು-

"ಏನಮ್ಮಾ, ಮಗೂಗೆ ಈಗ ಹೇಗಿದೆ?" ಡಾಕ್ಟರ್ ಹತ್ತಿರ ಹೋಗಿದ್ದೆಯಾ ಹೇಗೆ?"

"ಹೋಗಿ ನೋಡಿದೆ ವ್ಯಾಂಗ್ ಆಂಟಿ. ಆಂಟಿ ನೀವು ದೊಡ್ಡವರು. ನಿಮಗೆಲ್ಲ ಗೊತ್ತಿರುತ್ತೆ. ನನಗೋಸ್ಕರ ನನ್ನ ಮಗುವನ್ನು ನೋಡಿ, ನಿಮಗೆ ಏನನ್ನುಸ್ತೇಂತ?"

"ಊಂ"

"ಪರವಾಗಿಲ್ಲ?"

"ಊಂ"

ಆಂಟ್ ವ್ಯಾಂಗ್ ಮಗುವನ್ನು ಪರೀಕ್ಷಿಸಿ, ಎರಡೆರಡು ಸಲ ತಲೆಯಾಡಿಸಿದಳು.

ಪಾವೊ ಎರ್ಹ್ ಔಷಧಿ ತೆಗೆದುಕೊಳ್ಳುವಷ್ಟು ಹೊತ್ತಿಗೆ ಮಧ್ಯಾಹ್ನ ಆಗಿತ್ತು. ಷಾನ್‌ನ ಹೆಂಡತಿ ಅವನನ್ನು ಸೂಕ್ಷ್ಮವಾಗಿ ಗಮನಿಸಿದಳು. ಸ್ವಲ್ಪ ಚೆನ್ನಾಗಿದ್ದಂತೆನಿಸಿತು. ಮಧ್ಯಾಹ್ನದಲ್ಲಿ, ಇದ್ದಕ್ಕಿದ್ದಂತೆ ಕಣ್ಣು ತೆರೆದು 'ಅಮ್ಮ!' ಎಂದ. ಮತ್ತೆ ಕಣ್ಣು ಮುಚ್ಚಿ ನಿದ್ದೆ ತೆಗೆದ. ಹೆಚ್ಚು ಹೊತ್ತು ಮಲಗುವುದಕ್ಕೆ ಮೊದಲೇ ಹಣೆ ಮತ್ತು ಮೂಗಿನ ತುದಿಯಲ್ಲಿ ಬೆವರು ಹನಿಗಳು ಕಾಣಿಸಿದವು. ಅವಳು ಮುಟ್ಟಿ ನೋಡಿದಾಗ, ಬೆವರು ಅವಳ ಬೆರಳಿಗೆ ಅಂಟಿತು. ಭಯದಿಂದ ಅವನ ಎದೆ ಮೇಲೆ ಕೈಯಿರಿಸಿ ನೋಡಿ, ಬಿಕ್ಕಿ ಬಿಕ್ಕಿ ಅಳುವುದಕ್ಕೆ ಆರಂಭಿಸಿದಳು.

ನಿಧಾನವಾಗಿ ಕಮ್ಮಿಯಾಗುತ್ತಾ, ಅವನ ಉಸಿರಾಟ ಪೂರ್ತಿಯಾಗಿ ನಿಂತು ಹೋಯಿತು. ಬಿಕ್ಕಿ ಬಿಕ್ಕಿ ಅಳುತ್ತಿದ್ದವಳು ಈಗ ಜೋರಾಗಿ ಅಳುವುದಕ್ಕೆ ಆರಂಭಿಸಿಳು. ತಕ್ಷಣ ಗುಂಪು ಗುಂಪಾಗಿ ಜನ ಸೇರಿದರು. ಒಂಬತ್ತನೇ ಆಂಟ್ ವ್ಯಾಂಗ್, ಆಹ್–ಕ್ಯೂ ಮತ್ತಿತ್ತರರು ಒಳಗಿದ್ದರೆ ಪ್ರಾಸ್ಪೆರಿಟಿ ಟ್ಯಾವರ್ನ್ ನ ಯಜಮಾನ, ಕೆಂಪು ಮೂಗಿನ ಕುಂಗ್ ಮೊದಲಾದವರು ಹೊರಗಿದ್ದರು. ಆಂಟ್ ವ್ಯಾಂಗ್ ನೋಟುಗಳ ಸರವನ್ನು ಸುಡಬೇಕೆಂದು ಆದೇಶಿಸಿದಳು. ಎರಡು ಸ್ಟೂಲುಗಳನ್ನು ಮತ್ತು ಐದು ಬಟ್ಟೆಯ ವಸ್ತುಗಳನ್ನು ಭದ್ರತೆಗಾಗಿ ತೆಗೆದುಕೊಂಡಳು. ಅಲ್ಲಿ ತಮಗೆ ಸಹಕರಿಸಿದವರೆಲ್ಲರಿಗೂ ಊಟ ನೀಡಲು ಷಾನ್‌ನ ಹೆಂಡತಿಯ ಪರವಾಗಿ ಎರಡು ಡಾಲರ್‌ಗಳನ್ನು ಸಾಲ ಮಾಡಿದಳು.

ಅವಳಿಗೆ ಮೊದಲನೆ ಸಮಸ್ಯೆಯೆಂದರೆ ಶವದ ಪೆಟ್ಟಿಗೆ. ಅವಳ ಬಳಿ ಬೆಳ್ಳಿ ಓಲೆ ಮತ್ತು ಹೇರ್ ಪಿನ್‌ಗಳು ಇದ್ದವು. ಅವುಗಳನ್ನು ಪ್ರಾಸ್ಪೆರಿಟಿ ಟ್ಯಾವರ್ನ್‌ನ ಮಾಲಿಕನಿಗೆ ಭದ್ರತೆ ಅಥವಾ ಅಡವಾಗಿಟ್ಟು ಶವದ ಪೆಟ್ಟಿಗೆಯನ್ನು ಅರ್ಧ ಹಣಕೊಟ್ಟು, ಅರ್ಧ ಸಾಲವಾಗಿ ತರಲು ಹೇಳಿದಳು. ನೀಲಿ ಚರ್ಮದ ಆಹ್–ವು ತಾನೇ ಸ್ವತಃ ಸಹಾಯ ಮಾಡಲು ಮುಂದಾದ. ಆದರೆ ಆಂಟ್ ವ್ಯಾಂಗ್ ಕೇಳಲಿಲ್ಲ. ಬೇಕಾದರೆ ಮರು ದಿವಸ ಶವದ ಪೆಟ್ಟಿಗೆಯನ್ನು ಹೊರಬಹುದೆಂದಳು. "ಮುದಿ ಗೂಬೆ" ಶಾಪ ಹಾಕಿದ. ತುಟಿ ಕಚ್ಚಿಕೊಂಡು ಅಲ್ಲಿಯೇ ನಿಂತ. ಮಾಲಿಕ ಹಿಂತಿರುಗಿ ಬಂದು, ಪೆಟ್ಟಿಗೆಯನ್ನು ವಿಶೇಷವಾಗಿ ತಯಾರಿಸಬೇಕಾಗಿರುವುದರಿಂದ ನಾಳೆ ಬೆಳಿಗ್ಗೆವರೆಗೂ ಆಗುವುದಿಲ್ಲವೆಂಬುದನ್ನು ತಿಳಿಸಿದ.

ಮಾಲಿಕ ಬರುವಷ್ಟು ಹೊತ್ತಿಗೆ ಮಿಕ್ಕವರೆಲ್ಲರದೂ ಊಟ ಮುಗಿದಿತ್ತು. ಲುಷನ್ ಹಳೆ ಕಾಲದವನಾಗಿದ್ದರಿಂದ ಅವರೆಲ್ಲ ಮೊದಲ ಗಂಟೆ ಹೊಡೆಯುವ ಮುಂಚೆ ಮಲಗಬೇಕೆಂದು, ಮನೆಯತ್ತ ನಡೆದರು. ಆಹ್–ವ್ಹೂ ಬಾರ್‌ನಲ್ಲಿ ಕುಡಿಯುತ್ತಾ ಹಾಗೆ ಒರಗಿದ. ಮುದುಕ ಕುಂಗ್ ಹಾಡೊಂದನ್ನು ಪಟಪಟಿಸಿದ.

ಷಾನ್‌ನ ಮಡದಿ ಹಾಸಿಗೆಯ ತುದಿಯಲ್ಲಿ ಕುಳಿತು ಅಳುತ್ತಿದ್ದಳು. ಪಾವೋ ಎರ್ಹ್ ಹಾಸಿಗೆಯಲ್ಲಿ ಮಲಗಿದ್ದ. ಲಾಳ ಮೌನವಾಗಿತ್ತು. ಸಾಕಷ್ಟು ಹೊತ್ತು ಅತ್ತಾದ ಮೇಲೆ ನೀರೆಲ್ಲ ಬತ್ತಿದ ಮೇಲೆ, ಕಣ್ಣು ಬಿಟ್ಟು ಸುತ್ತಲೂ ಆಶ್ಚರ್ಯದಿಂದ ನೋಡಿದಳು. "ಇದು ಅಸಾಧ್ಯ! ಇದೆಲ್ಲ ಕನಸು!......... ಇದೆಲ್ಲ ಕನಸು!" ಎಂದು ಯೋಚಿಸಿದಳು. ಹಾಸಿಗೆಯಲ್ಲಿ ಚೆನ್ನಾಗಿ ಬೆಚ್ಚಗೆ ಮಲಗಿ, ನಾಳೆ ಪಾವೊ ಎರ್ಹ್‌ನೊಂದಿಗೆ ಏಳುತ್ತೇನೆ. ಅವನೂ ನನ್ನೊಂದಿಗೆ ಬೆಚ್ಚಗೆ ಮಲಗಿರುತ್ತಾನೆ. ಅವನು ಎದ್ದು ಅಮ್ಮ! ಎಂದು ಕರೆಯುತ್ತಾನೆ. ಹುಲಿ ಮರಿಯಂತೆ ಜಿಗಿದು ಆಡುತ್ತಾನೆ.

ಕುಂಗ್ ಹಾಡುವುದನ್ನು ನಿಲ್ಲಿಸಿ ಬಿಟ್ಟಿದ್ದ. ಪ್ರಾಸ್ಪೆರಿಟ ಟ್ಯಾವರ್ನ್‌ನಲ್ಲಿ ದೀಪಗಳು ಆರಿ ಹೋಗಿದ್ದವು. ಷಾನ್‌ನ ಹೆಂಡತಿ ಒಂದೇ ಸಮನೆ ದಿಟ್ಟಿಸುತ್ತಾ ಕುಳಿತಿದ್ದಳು. ಇಷ್ಟೆಲ್ಲ ಆದದ್ದು ಹೇಗೆ ಎಂದು ಅವಳಿಗೆ ನಂಬುವುದಕ್ಕೆ ಆಗಿರಲಿಲ್ಲ. ಅಷ್ಟರಲ್ಲಿ ಹುಂಜ ಕೂಗಿದ್ದು ಕೇಳಿಸಿತು. ಪೂರ್ವದಲ್ಲಿ ಬೆಳಕಾಯಿತು. ಕಿಟಕಿಗಳ ಸಂದುಗಳಿಂದ ಬೆಳಗಿನ ಕಿರಣಗಳೂ ತೂರಿ ಬಂದವು.

ಬೆಳ್ಳಿ ಬೆಳಕು ಕ್ರಮೇಣ ಕೆಂಪಾಗ ತೊಡಗಿತು. ಸೂರ್ಯ ಛಾವಣಿಯ ಮೇಲೆ ಬೆಳಗಿದ. ಷಾನ್‌ನ ಹೆಂಡತಿ ಅದನ್ನೇ ನೋಡುತ್ತಾ ಕುಳಿತಳು. ಯಾರೋ ಬಾಗಿಲು ತಟ್ಟುವ ಸದ್ದು ಕೇಳಿಸುವವರೆಗೆ ಹಾಗೆಯೇ ನೋಡುತ್ತಿದ್ದವಳು ಒಮ್ಮೆಲೇ ಬೆಚ್ಚಿ, ಎದ್ದು ಹೋಗಿ ಬಾಗಿಲು ತೆರೆದಳು. ಅಪರಿಚಿತ ವ್ಯಕ್ತಿಯೊಬ್ಬ ನಿಂತಿದ್ದ. ಅವನ ಬೆನ್ನಿಗೆ ಭಾರವಾದ್ದು ಏನೋ ಇತ್ತು. ಅವನ ಹಿಂದೆ ಆಂಟ್‌ವಾಂಗ್ ನಿಂತಿದ್ದಳು. ಅರೆ! ಅದು ಶವದ ಪೆಟ್ಟಿಗೆಯಾಗಿತ್ತು!

ಆ ದಿನ ಮಧ್ಯಾಹ್ನದ ವರೆಗೆ ಶವದ ಪೆಟ್ಟಿಗೆಯ ಮುಚ್ಚಳ ಹಾಕಲಿಲ್ಲ. ಅವನ ತಾಯಿ ಅಳುತ್ತಲೇ ಇದ್ದಳು. ನೋಡಿ ಸಹಿಸಿಕೊಳ್ಳುವುದು ಅವಳಿಗೆ ಸಾಧ್ಯವಾಗಿರಲಿಲ್ಲ. ಆಂಟ್ ವಾಂಗ್‌ಗೆ ಇನ್ನು ತಡೆದುಕೊಳ್ಳುವುದು ಅಸಾಧ್ಯವೆನಿಸಿ, ಎದ್ದು ಬಲವಂತದಿಂದ ಅವಳನ್ನು ಅಲ್ಲಿಂದ ಎಬ್ಬಿಸಿ ಪಕ್ಕಕ್ಕೆ ಕರೆ ತಂದಳು. ಆಗ ತಕ್ಷಣ ಮುಚ್ಚಳ ಮುಚ್ಚಿ ಬಿಟ್ಟರು.

ಷಾನ್‌ನ ಹೆಂಡತಿ, ತನ್ನ ಮಗ ಪಾವೋ ಎರ್ಹ್‌ಗೆ ಏನೇನು ಮಾಡಬೇಕಾಗಿತ್ತೋ ಎಲ್ಲವನ್ನೂ ಮರೆಯದೆ ಮಾಡಿದ್ದಳು. ಹಿಂದಿನ ದಿನ ನೋಟುಗಳ ಸರವನ್ನು ಸುಟ್ಟಿದ್ದಳು. ಈ ದಿನ ಬೆಳಿಗ್ಗೆ ಬುದ್ಧನ ಪ್ರಾರ್ಥನೆಯ ನಲ್ವತ್ತೊಂಬತ್ತು ಪುಸ್ತಕಗಳನ್ನು ಸುಟ್ಟಳು. ಶವದ ಪೆಟ್ಟಿಗೆಯಲ್ಲಿ ಇರಿಸುವ ಮೊದಲು ಶವಕ್ಕೆ ಹೊಸ ಬಟ್ಟೆಗಳನ್ನು ತೊಡಿಸಿದ್ದಳು. ಚೀಲದಲ್ಲಿ ಇರಿಸಿದ್ದಳು. ಒಂದು ಪುಟ್ಟ ಜೇಡಿಮಣ್ಣಿನ ಆಕೃತಿ. ಎರಡು ಮರದ ಬಟ್ಟಲುಗಳು, ಎರಡು ಗಾಜಿನ ಲೋಟಗಳು. ಆಂಟ್‌ವ್ಯಾಂಗ್ ಒಂದೊಂದೇ ಬೆರಳುಗಳ ಮೇಲೆ ಎಣಿಸುತ್ತಿದ್ದರೂ, ಏನನ್ನು ಮರೆತಿದ್ದೇವೆಂಬುದು ಮಾತ್ರ ತಿಳಿಯಲಾಗಲಿಲ್ಲ.

ಇಡೀ ದಿನ ಆಹ್-ಕ್ಯೂ ಪತ್ತೇನೇ ಇರಲಿಲ್ಲ. ಆದ್ದರಿಂದ ಟಾವೆರ್ನ್ ಮೂಲಕ ೨೧೦ ದೊಡ್ಡ ತಾಮ್ರದ ನಾಣ್ಯಗಳಿಗೆ ಇಬ್ಬರು ಪೋರ್ಟರ್‌ಗಳನ್ನು ಶವ ಹೊರಲು, ಗೋರಿ ಅಗೆಯಲು ಗೊತ್ತು ಮಾಡಿ ಕರೆತಂದ. ಸಾರ್ವಜನಿಕ ಸಮಾಧಿಗಳಿದ್ದ ಜಾಗಕ್ಕೆ ತರಬೇಕಿತ್ತು. ವ್ಯಾಂಗ್ ಆಂಟ್ ಅಡಿಗೆ ಸಿದ್ಧಮಾಡಿ, ಒಂದಿಷ್ಟು ಸಹಾಯ ಮಾಡಿದವರನ್ನೂ ಬಿಡದೆ, ಎಲ್ಲರನ್ನೂ ಊಟಕ್ಕೆ ಆಹ್ವಾನಿಸಿದಳು. ಸೂರ್ಯ ಇನ್ನೇನು ಮುಳುಗುವುದರಲ್ಲಿದ್ದ. ಬಂದಿದ್ದವರೂ ಮನಸ್ಸಿನಲ್ಲದ ಮನಸ್ಸಿನಿಂದ ಅಲ್ಲಿಂದ ಹೊರಟರು.

ಷಾನ್‌ನ ಮಡದಿಗೆ ತಲೆ ಸುತ್ತಿದಂತಾದರೂ ನಂತರ ಚೇತರಿಸಿಕೊಂಡಳು. ಮೊದಲಿಗೆ ಅವಳಿಗೆ ಎಲ್ಲವೂ ಹೊಸದಾಗಿ, ಅಪರಿಚಿತವಾಗಿ ಕಾಣಿಸಿತು. ಹಿಂದೆಂದೂ ಆಗದ್ದು, ಅವಳಿಗೆ ಅಂಥಾದ್ದೆಲ್ಲ ಆಗುವುದು ಸಾಧ್ಯವೇ ಇಲ್ಲ ಎನಿಸಿದ್ದು, ಆಗಿ ಹೋಗಿತ್ತು. ಯೋಚಿಸಿದಷ್ಟೂ ಅವಳಿಗೆ ಆಶ್ಚರ್ಯವೆನಿಸುತ್ತಿತ್ತು. ಇನ್ನೊಂದು ವಿಚಿತ್ರವಾಗಿ ಅವಳಿಗೆ ಅನಿಸಿದ್ದೆಂದರೆ, ಆ ಕೋಣೆ ಎಂದಿಗಿಂತ ಶಾಂತವಾಗಿತ್ತು. ಹಾಗೂ ಹೀಗೂ ಹೋಗಿ ಬಾಗಿಲು ಹಾಕಿ ಬಂದು ಹಾಸಿಗೆಯ ಮೇಲೆ ಕುಳಿತಳು. ಲಾಳ ಮಾತ್ರ ಎಂದಿನಂತೆ ಮೌನವಾಗಿ ನೆಲದ ಮೇಲಿತ್ತು. ಧೈರ್ಯ ತಂದುಕೊಂಡು ಸುತ್ತಲೂ ನೋಡಿದಳು. ಅವಳಿಗೆ ಕುಳಿತುಕೊಳ್ಳಲೂ ಆಗಲಿಲ್ಲ. ನಿಂತುಕೊಳ್ಳಲೂ ಆಗಲಿಲ್ಲ. ಕೋಣೆ ಸದ್ದಿಲ್ಲದೆ ಇದ್ದುದರ ಜೊತೆಗೆ, ಸಾಕಷ್ಟು ದೊಡ್ಡದೇನೋ ಎನಿಸಿತು. ಅದರಲ್ಲಿದ್ದ ವಸ್ತುಗಳೂ ಕಾಣದೆ ಎಲ್ಲವೂ ಖಾಲಿ ಖಾಲಿ ಎನಿಸಿತು. ಅತಿ ದೊಡ್ಡದೆನಿಸಿದ್ದ ಕೊಠಡಿ. ಅದರೊಳಗಿನ ಖಾಲಿತನ, ಸುತ್ತಲಿನ ಮೌನ ಎಲ್ಲವೂ ಸೇರಿ ಅವಳಿಗೆ ಉಸಿರಾಡುವುದೂ ಕಷ್ಟವೆನಿಸಿತು. ತನ್ನ ಮಗ ಪಾವೊ ಸತ್ತಿದ್ದಾನೆಂಬುದು ಅವಳಿಗೆ ಗೊತ್ತಾಗಿತ್ತು. ಆ ಕೋಣೆ ನೋಡುವುದನ್ನು ಇಷ್ಟಪಡಲಿಲ್ಲ. ದೀಪ ಆರಿಸಿ ಹಾಸಿಗೆ ಮೇಲೆ ಬಿದ್ದುಕೊಂಡು ಅಳುವುದಕ್ಕೆ ತೊಡಗಿದಳು. ಯೋಚಿಸತೊಡಗಿದಳು. ಪಾವೊ ತನ್ನ ಜೊತೆ ನೂಲು ತೆಗೆಯುತ್ತಿದ್ದಾಗ, ಕೂತು ಕಡಲೆ ಬೀಜ ತಿನ್ನುತ್ತಿದ್ದುದು ನೆನಪಿಸಿಕೊಂಡಳು. ಅವಳನ್ನು ತನ್ನ ಪುಟ್ಟ ಕಪ್ಪು ಕಣ್ಣುಗಳಿಂದ ಒಂದೇ ಸಮನೆ ಗಮನಿಸುತ್ತಾ, ಯೋಚಿಸುತ್ತಾ ಇದ್ದಕ್ಕಿದ್ದಂತೆ ಅಮ್ಮ ಎಂದದ್ದು, ಅಪ್ಪ ಬನ್ ತುನ್ ಮಾರುತ್ತಾನೆ, ನಾನೂ ದೊಡ್ಡವನಾದ ಮೇಲೆ ಬನ್ ತುನ್ ಮಾರುತ್ತೇನೆ. ಎಷ್ಟೊಂದು ಹಣ ಸಂಪಾದಿಸುತ್ತೇನೆ, ಅದೆಲ್ಲವನ್ನೂ ನಿನಗೆ ಕೊಡುತ್ತೇನೆ–ಎಂದದ್ದೆಲ್ಲ ಅವಳಿಗೆ ನೆನಪಾಯಿತು.

ಅಂತಹ ಕ್ಷಣಗಳಲ್ಲಿ ತಾನು ನೂತ ನೂಲಿನ ಒಂದೊಂದು ಅಂಗುಲವೂ ಅಮೂಲ್ಯ, ಬದುಕಿದ್ದಕ್ಕೆ ಸಾರ್ಥಕ ಎನಿಸುತ್ತಿತ್ತು. ಆದರೆ ಈಗ? ವರ್ತಮಾನದ ಬಗ್ಗೆ ಅವಳು ಆಲೋಚಿಸಿರಲಿಲ್ಲ. ಅವಳು ಬಹಳ ಮುಗ್ಧೆ. ಇದಕ್ಕೆ ಪರಿಹಾರ ಏನೆಂದು ತಾನೇ ಯೋಚಿಸಿಯಾಳು? ಅವಳಿಗೆ ಗೊತ್ತಿದ್ದದ್ದು 'ಕೋಣೆ ಗಂಭೀರ ಮೌನದಲ್ಲಿದೆ. ದೊಡ್ಡದಾಗಿದೆ. ಖಾಲಿಯಾಗಿದೆ' ಎನ್ನುವುದಷ್ಟೇ!!

ಅವಳು ಏನೂ ಅರಿಯದವಳೆಂದರೂ ಸತ್ತವರು ಮತ್ತೆ ಬದುಕಿ ಬರಲಾರರು, ತಾನೆಂದಿಗೂ ಅವರನ್ನು ನೋಡಲು ಸಾಧ್ಯವಿಲ್ಲ ಎನ್ನುವುದನ್ನು ಮಾತ್ರ ತಿಳಿದಿದ್ದಳು. ನಿರಾಶೆಯ ನಿಟ್ಟುಸಿರು ಬಿಟ್ಟು ಹೇಳಿದಳು, "ಪಾವೊ ಎರ್ಹ್, ಇನ್ನೂ ನೀನು ಇಲ್ಲಿಯೇ ಇರಬೇಕಲ್ಲವೇ? ಹೋಗಲಿ ನನ್ನ ಕನಸಿನಲ್ಲಾದರೂ ಬರುವೆಯಾ?" ಕಣ್ಣು ಮುಚ್ಚಿ ಗಾಢ ನಿದ್ದೆ ಮಾಡಬೇಕೆಂದುಕೊಂಡಳು. ನಿದ್ದೆ ಮಾಡಿದ್ದರೆ, ನಿದ್ದೆಯಲ್ಲಾದರೂ ಅವನು ಕಾಣಿಸಿಕೊಂಡಾನು ಎಂಬ ಆಸೆ. ತನ್ನ ಉಸಿರಾಟದ ಸದ್ದನ್ನು ಮೌನ, ವಿಸ್ತಾರ, ಖಾಲಿತನದಲ್ಲಿ ತಾನೇ ಕೇಳಿಸಿಕೊಂಡಳು.

ಕಡೆಗೆ ನಿದ್ದೆ ಮಾಡಿದಳು. ಇಡೀ ಕೋಣೆ ನಿಶ್ಯಬ್ದವಾಗಿತ್ತು. ಕೆಂಪು ಮೂಗಿನ ಕುಂಗ್‌ನ ಜನಪದ ಹಾಡು ನಿಂತಿತ್ತು. ಪ್ರಾಸ್ಪೆರಿಟಿ ಟ್ಯಾವೆರ್ನ್‌ನಿಂದ ಕಳ್ಳದನಿಯಲ್ಲಿ ಹಾಡಲು ತಡವರಿಸುತ್ತಾ ಹೊರಗೆ ಬಂದ. "ನೀನೊಬ್ಬಳೇ ಇರುವುದು ಅಯ್ಯೋ ಎನಿಸುತ್ತೆ!.......... ಒಬ್ಬೊಂಟಿ............"

ನೀಲಿ ಬಣ್ಣದ ಚರ್ಮದವ ಮುದಿ ಕುಂಗ್‌ನ ಭುಜಗಳನ್ನು ಹಿಡಿದುಕೊಂಡು ತೂಗಾಡುತ್ತ ಇಬ್ಬರೂ ಒಟ್ಟಿಗೆ ನಡೆದು ಹೋದರು. ನಾಲ್ಕನೇ ಷಾನ್‌ನ ಹೆಂಡತಿ ಇನ್ನೂ ನಿದ್ದೆಯಲ್ಲಿದ್ದಳು. ಕುಂಗ್ ಮತ್ತು ಇತರರು ಹೊರಟು ಹೋಗಿದ್ದರು. ಪ್ರಾಸ್ಪೆರಿಟಿ ಟ್ಯಾವೆರ್ನ್‌ನ ಬಾಗಿಲು ಮುಚ್ಚಿತ್ತು. ಲುಷೆನ್ ಚೆನ್ನಾಗಿ ಕುಡಿದು, ಶಾಂತವಾಗಿದ್ದ. ನಾಳೆಯ ಕಡೆಗೆ ಹೊರಳುವ ಆತುರದಲ್ಲಿ ರಾತ್ರಿ ಮಾತ್ರ ಮೌನವಾಗಿ ಪಯಣಿಸುತ್ತಿತ್ತು. ಕತ್ತಲಲ್ಲಿ ಮರೆಯಾಗಿ ಕುಳಿತಿದ್ದ ಕೆಲವು ನಾಯಿಗಳು ಮಾತ್ರ ಬೊಗಳುತ್ತಿದ್ದವು.

ಒಂದು ಘಟನೆ

ನಾನು ಊರಿಂದ ರಾಜಧಾನಿಗೆ ಬಂದು ಆರು ವರ್ಷವಾಯಿತು. ಆ ಅವಧಿಯಲ್ಲಿ ರಾಜ್ಯದಲ್ಲಿ ಏನೇನು ನಡೆಯುತ್ತಿದೆ ಅನ್ನುವುದನ್ನು ನೋಡಿಯೂ ನೋಡಿದೆ, ಕೇಳಿದೆ ಕೂಡ! ಆದರೆ ಯಾವುದೂ ನನ್ನ ಮೇಲೆ ಪ್ರಭಾವ ಬೀರಲಿಲ್ಲ. ನಿಜವಾಗಿಯೂ ಪ್ರಭಾವದ ಬಗ್ಗೆ ಹೇಳಬೇಕಾದರೆ, ನನ್ನ ಸಿಟ್ಟು ಆಕ್ರೋಶಗಳನ್ನು ಇನ್ನಷ್ಟು ಹೆಚ್ಚಿಸಿದವು ಅಷ್ಟೆ. ಜೊತೆಗೆ ಮಾನವ ದ್ವೇಷಿಯೂ ಆದೆ.

ಆದರೆ, ನಡೆದ ಒಂದೇ ಒಂದು ಘಟನೆ ಮಾತ್ರ ನನ್ನ ಆಕ್ರೋಶವನ್ನು ದೂರ ಮಾಡಿ ಅದರಿಂದ ಆಚೆ ಬರುವಂತೆ ಮಾಡಿತು. ಈಗಲೂ ಅದನ್ನು ಮರೆಯುವುದು ಸಾಧ್ಯವಿಲ್ಲ.

೧೯೧೭ ರ ಛಳಿಗಾಲದಲ್ಲಿ ಇದು ನಡೆಯಿತು. ಭಯಂಕರ ಶೀತಗಾಳಿ ಉತ್ತರದ ಕಡೆಯಿಂದ ಬೀಸುತ್ತಿತ್ತು. ಆದರೂ ಜೀವನೋಪಾಯಕ್ಕೆ ನನಗೆ ಒಳಗೆ ಹೊರಗೆ ಹೋಗಿ ಬರಲೇ ಬೇಕಾಗುತ್ತಿತ್ತು. ನನ್ನ ಹೊರತು ಮತ್ತೊಂದು ಜೀವ ಓಡಾಡುವುದೂ ಕಾಣಿಸುತ್ತಿರಲಿಲ್ಲ. ಆದ್ದರಿಂದ ಆ ಗೇಟ್‌ಗೆ ಹೋಗಲು ಒಂದು ರಿಕ್ಷಾ ಸಿಗುವುದೂ ಕಷ್ಟವಾಗುತ್ತಿತ್ತು. ಸದ್ಯಕ್ಕೆ ಗಾಳಿ ಸ್ವಲ್ಪ ನಿಂತಿತ್ತು. ಇಷ್ಟು ಹೊತ್ತಿಗೆ ಧೂಳು ಗೀಳು ಎಲ್ಲಾ ಹಾರಿ ಹೋಗಿತ್ತು. ರಸ್ತೆಗಳು ಶುಭ್ರವಾಗಿದ್ದವು. ರಿಕ್ಷಾವಾಲ ಬೇಗ ಬೇಗ ನಡೆದ. ನಾವು ಇನ್ನೇನು ಗೇಟ್ ತಲುಪುವುದರಲ್ಲಿ ಇದ್ದೆವು. ಆಗ ಯಾರೋ ಒಬ್ಬ ವ್ಯಕ್ತಿ ಬರುತ್ತಿರುವುದು ಕಾಣಿಸಿದ್ದೇ. ಅಲ್ಲಿ ನಮ್ಮ ರಿಕ್ಷಾಗೆ ಡಿಕ್ಕಿ ಹೊಡೆದು ಕೆಳಗೆ ಬಿದ್ದ.

ಆ ವ್ಯಕ್ತಿ ಹೆಂಗಸಾಗಿದ್ದಳು. ಅಲ್ಲಲ್ಲಿ ಬಿಳಿ ಕೂದಲು. ಚಿಂದಿ ಉಟ್ಟಿದ್ದಳು. ಪೇವ್‌ಮೆಂಟ್ ಬಿಡುವಾಗ, ದಾಟುವ ಸೂಚನೆ ಕೊಡದಿದ್ದುದು ಒಂದಾದರೆ ಅವಳು ಧರಿಸಿದ್ದ ಜಾಕೆಟ್ ಜಾಳು ಜಾಳಾಗಿ, ಗುಂಡಿಗಳನ್ನೂ ಹಾಕಿಲ್ಲದಿದ್ದ ಕಾರಣ ಗಾಳಿಗೆ ಫಡಫಡಿಸುತ್ತಾ, ರಿಕ್ಷಾದವನು ದಾರಿ ಮಾಡಿಕೊಟ್ಟರೂ, ಅದರ ಒಂದು ತುದಿ ಷಾಫ್ಟ್‌ಗೆ ಸಿಕ್ಕಿ ಹಾಕಿಕೊಂಡಿತು. ಅದೃಷ್ಟಕ್ಕೆ ರಿಕ್ಷಾದವನು ಸಮಯ ಸ್ಫೂರ್ತಿಯಿಂದ ರಿಕ್ಷಾವನ್ನು

ಹಿಂದಕ್ಕೆಳೆದುಕೊಂಡ. ಇಲ್ಲದಿದ್ದರೆ ಅವಳು ಜೋರಾಗಿ ಬಿದ್ದು, ಸಾಕಷ್ಟು ಗಂಭೀರವಾಗಿಯೇ ಗಾಯ ಮಾಡಿಸಿಕೊಳ್ಳುತ್ತಿದ್ದಳು.

ಅವಳು ನೆಲದ ಮೇಲೆ ಬಿದ್ದಿದ್ದಳು. ರಿಕ್ಷಾದವನು ನಿಂತುಕೊಂಡ. ಮುದಿ ಹೆಂಗಸಿಗೆ ಗಾಯವೇನೂ ಆಗಿರಲಿಲ್ಲವೆನಿಸಿತು. ಈ ಅಪಘಾತಕ್ಕೆ ಯಾರೂ ಸಾಕ್ಷಿಯಿರಲಿಲ್ಲ. ಆದರೆ ಈ ರಿಕ್ಷಾದವನು ಹೀಗೆ ನಿಂತು ತಾನೂ ಸಿಕ್ಕಿ ಹಾಕಿಕೊಂಡು ನನ್ನನ್ನೂ ಸಿಕ್ಕಿಸುತ್ತಾನೇನೋ ಎಂದು ಹೆದರಿದೆ.

"ಆಯ್ತು, ನಡಿ ಎಂದೆ."

ನನ್ನ ಮಾತಿನ ಕಡೆ ಅವನು ಲಕ್ಷ್ಯ ಕೊಡಲಿಲ್ಲ. ಬಹುಶಃ ಕೇಳಿಸಿಕೊಳ್ಳಲಿಲ್ಲವೇನೋ! ಇಳಿದು ಷಾಫ್ಟ್‌ನಿಂದ ಆ ಮುದುಕಿಯ ಬಟ್ಟೆ ಬಿಡಿಸಿ, ಅವಳು ಏಳಲು ಅವನು ಸಹಕರಿಸಿದ. ಅವಳನ್ನು ಎಬ್ಬಿಸುತ್ತಾ ಕೇಳಿದ, "ಪರವಾಗಿಲ್ಲವಾ?"

"ಇಲ್ಲ, ನನಗೆ ಗಾಯ ಆಗಿದೆ."

ಅವಳು ಎಷ್ಟು ನಿಧಾನವಾಗಿ ಬಿದ್ದಳು! ಗಾಯ ಆಗಿರಲು ಸಾಧ್ಯವೇ ಇರಲಿಲ್ಲ. ಬಹುಶಃ ಅವಳು ನಾಟಕ ಆಡುತ್ತಿರಬೇಕು. ಎಷ್ಟು ಅಸಹ್ಯ. ರಿಕ್ಷಾದವನು ಸುಮ್ಮನೆ ತೊಂದರೆ ತಂದುಕೊಂಡೆ. ಅವನ ಹಣೆಬರಹ. ಅವನೇ ನೋಡಿಕೊಳ್ಳಲಿ.

ಆದರೆ, ಆ ಹೆಂಗಸು ಗಾಯಗೊಂಡಿದ್ದೇನೆ ಎಂದು ಹೇಳಿದ್ದೇ, ರಿಕ್ಷಾದವನು ಒಂದು ಚೂರೂ ತಡಮಾಡಲಿಲ್ಲ. ಇನ್ನೂ ಅವಳ ಕೈ ಹಿಡಿದುಕೊಂಡು ಮುಂದಕ್ಕೆ ನಡೆಸಿದ. ನನಗೆ ಆಶ್ಚರ್ಯವಾಯಿತು. ನಾನು ಮುಂದೆ ನೋಡಿದೆ. ಒಂದು ಪೋಲಿಸ್ ಸ್ಟೇಷನ್ ಇತ್ತು. ಜೋರಾಗಿ ಗಾಳಿ ಬೀಸುತ್ತಿದ್ದುದರಿಂದ ಹೊರಗಡೆ ಯಾರೂ ಇರಲಿಲ್ಲ. ರಿಕ್ಷಾದವನು ಆ ಹೆಂಗಸನ್ನು ನಡೆಸಿಕೊಂಡು ಗೇಟಿನ ಬಳಿಗೆ ಕರೆದೊಯ್ದ.

ನನಗೇನೋ ಒಂದು ಥರಾ ವಿಚಿತ್ರ ಎನಿಸಿತು. ಧೂಳಿನಿಂದ ಮತ್ತು ಸುಸ್ತಾಗಿ ಸಣ್ಣದಾಗಿದ್ದ ಅವನ ಆಕಾರ ಆ ಕ್ಷಣಕ್ಕೆ ದೊಡ್ಡದಾದಂತೆನಿಸಿತು. ಅವನು ಮುಂದೆ ಮುಂದೆ ಹೋದಷ್ಟೂ ಅವನು ಇನ್ನಷ್ಟು ದೊಡ್ಡದಾಗಿ ಬೆಳೆಯುತ್ತಿದ್ದ. ನಾನು ನೋಡುವಷ್ಟರವರೆಗೆ. ಅದೇ ಸಮಯಕ್ಕೆ ನನ್ನ ಮೇಲೆ ಅವನ ಒತ್ತಡವೂ ಬೀಳುತ್ತಿದ್ದಂತೆನಿಸಿತು. ಎಷ್ಟರಮಟ್ಟಿಗೆ ಅವನ ಒತ್ತಡದ ಪ್ರಭಾವ ನನ್ನ ಮೇಲೆ ಆಗುತ್ತಿತ್ತೆಂದರೆ. (ಎಲ್ಲಿ ನನ್ನ ಸಣ್ಣ ವ್ಯಕ್ತಿತ್ವ) ಉಣ್ಣೆಯ ಕೋಟಿನಡಿಯಿದ್ದ ನನ್ನ ವ್ಯಕ್ತಿತ್ವವನ್ನು ಎಲ್ಲಿ ನುಂಗಿ ಬಿಡುತ್ತಾನೋ ಎಂದು ಭಯವಾಯಿತು.

ನನ್ನ ಚೈತನ್ಯವೆಲ್ಲ ಸೋರಿ ಹೋಗಿ, ನಿಶ್ಚಲವಾಗಿ ಕುಳಿತೆ. ತಲೆಯೆಲ್ಲ ಖಾಲಿ. ಪೋಲೀಸಿನವನು ಹೊರಗೆ ಬರುವವರೆಗೆ ಹಾಗೆಯೇ ಇದ್ದೆ. ನಂತರ ರಿಕ್ಷಾದಿಂದ ಇಳಿದೆ.

ಪೋಲೀಸಿನವನು ನನ್ನ ಬಳಿಗೆ ಬಂದು, "ಬೇರೆ ರಿಕ್ಷಾ ಹಿಡಿ. ಇವನು ನಿನ್ನ ಜೊತೆ ಬರಲು ಆಗುವುದಿಲ್ಲ" ಎಂದ.

ಒಂದು ಕ್ಷಣವೂ ಯೋಚಿಸದೆ. ಜೇಬಿನೊಳಗಿಂದ ಒಂದಷ್ಟು ತಾಮ್ರದ ನಾಣ್ಯಗಳನ್ನು ಹೊರತೆಗೆದು ಪೋಲೀಸಿನವರ ಕೈಗೆ ಇರಿಸಿ, "ಇದನ್ನು ರಿಕ್ಷಾದವನಿಗೆ ಕೊಟ್ಟು ಬಿಡು" ಎಂದೆ.

ಗಾಳಿ ಪೂರ್ತಿಯಾಗಿ ನಿಂತಿತ್ತು ರಸ್ತೆಗಳು ಇನ್ನೂ ನಿಸ್ತಬ್ಧವಾಗಿದ್ದವು. ನಾನು ಯೋಚಿಸುತ್ತ ನಡೆದೆ. ಆದರೆ ನನ್ನನ್ನು ಕುರಿತು ಯೋಚಿಸಲು ಹೆದರಿದೆ. ಮೊದಲು ಏನಾಯಿತು? ನಾನು ಕೊಟ್ಟ ತಾಮ್ರದ ನಾಣ್ಯಗಳ ಅರ್ಥ ಏನು? ಅದೇನು ಬಹುಮಾನವೇ? ರಿಕ್ಷಾದವನು ಎಂಥವನೆಂದು ನಿರ್ಧರಿಸಲು ನಾನು ಯಾರು?....ಇವುಗಳಿಗೆ ಉತ್ತರ ನನ್ನಿಂದ ಸಾಧ್ಯವಾಗಲಿಲ್ಲ.

ಇದು ಈಗಲೂ ನನ್ನ ತಲೆಯಲ್ಲಿ ಹೊಚ್ಚ ಹೊಸದಾಗಿದೆ. ಒಂದೊಂದು ಸಲ ಹಿಂಸೆ ಎನಿಸುತ್ತೆ. ನನ್ನ ಬಗ್ಗೆ ಯೋಚಿಸುವಂತೆ ಮಾಡುತ್ತದೆ. ದೇಶಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ಮರೆತಿದ್ದೇನೆ. ಬಾಲ್ಯದಲ್ಲಿ ನಾನು ಓದಿದ್ದ ಕ್ಲಾಸಿಕ್‌ಗಳನ್ನು ಮರೆತಿದ್ದೇನೆ. ಆದರೆ ಈ ಘಟನೆ ಮಾತ್ರ ಮೇಲಿಂದ ಮೇಲೆ ನನ್ನ ಕಣ್ಮುಂದೆ ನಡೆದದ್ದಕ್ಕಿಂತ ಸ್ಪಷ್ಟವಾಗಿ ಗೋಚರಿಸುತ್ತದೆ. ನಾಚಿಕೆಯಾದಂತೆನಿಸುತ್ತದೆ. ನನ್ನನ್ನು ತಿದ್ದಿಕೊಳ್ಳುವಂತೆ ಪ್ರಚೋದಿಸುತ್ತದೆ; ನನ್ನಲ್ಲಿ ಹೊಸದಾಗಿ ಧೈರ್ಯ, ಭರವಸೆಗಳನ್ನು ಮೂಡಿಸುತ್ತದೆ.

❖ ❖ ❖

ಚಹದ ಬಟ್ಟಲಲ್ಲಿ ಬಿರುಗಾಳಿ

ನದಿಯ ಬದಿಗಿದ್ದ ಮನೆಯ ಮೇಲೆ ಬಿದ್ದಿದ್ದ ಹಳದಿ ಸೂರ್ಯಕಿರಣಗಳು ಮರೆಯಾದವು. ನದಿಯ ದಡದಲ್ಲಿ ಬೆಳೆದಿದ್ದ ಮೇಣದ ಮರಗಳ (Tallow trees) ಎಲೆಗಳು ಉಸಿರಾಡಲು ಈಗ ಸಾಧ್ಯವಾಯಿತು. ಪಟ್ಟೆ ನೊಣಗಳು ಗುಂಯ್ ಗುಡುತ್ತಾ, ಆ ಎಲೆಗಳು ಕೆಳಗೆ ನರ್ತಿಸಿದವು. ನದಿಯ ದಡದ ಉದ್ದಕ್ಕೂ ಸಾಲಾಗಿ ಇದ್ದ ರೈತರ ಮನೆಗಳ ಅಡಿಗೆ ಕೋಣೆಗಳಿಂದ ಹೊರಟ ಹೊಗೆ ಚಿಮ್ನಿಗಳ ಮೂಲಕ ಹೊರಗೆ ಬರುತ್ತಿತ್ತು. ಹೆಂಗಸರು ಮಕ್ಕಳು ತಮ್ಮ ಮನೆಗಳ ಮುಂದೆ ನೀರು ಚಿಮುಕಿಸಿ ಸಣ್ಣ ಮೇಜುಗಳನ್ನು ಸ್ಟೂಲುಗಳನ್ನು ಇರಿಸಿದರು. ಸಂಜೆ ಊಟದ ಸಮಯ ಅದಾಗಿತ್ತು ಎನ್ನುವುದಕ್ಕೆ ಅದು ಗುರುತಾಗಿತ್ತು.

ಮುದುಕರು, ಗಂಡಸರು ತಗ್ಗಾಗಿದ್ದ ಸ್ಟೂಲ್‌ಗಳ ಮೇಲೆ ಕುಳಿತು ಬಾಳೆ ಎಲೆಗಳಿಂದ ಗಾಳಿ ಹಾಕಿಕೊಳ್ಳುತ್ತಾ ಹರಟಲು ತೊಡಗಿದರು. ಮಕ್ಕಳು ಓದುವುದೋ ಇಲ್ಲ ಕುಳಿತುಕೊಳ್ಳುವುದೋ ಮಾಡುವುದರ ಜೊತೆಗೆ ಮೇಣದ ಮರಗಳಡಿಯಲ್ಲಿ ಸಣ್ಣ ಸಣ್ಣ ಕಲ್ಲುಗಳ ಜೊತೆ ಆಟವಾಡುತ್ತಿದ್ದರು. ಚೆನ್ನಾಗಿ ಬಿಸಿ ಬಿಸಿಯಾಗಿ ಕಪ್ಪಗೆ, ಒಣಗಿಸಿದ್ದ ತರಕಾರಿ ಪಲ್ಲೆ ಮತ್ತು ಹಳದಿಯಾಗಿದ್ದ, ಹೊಗೆಯಾಡುತ್ತಿದ್ದ ಅನ್ನವನ್ನು ಹೆಂಗಸರು ಹೊತ್ತು ತಂದರು. ಕೆಲವರು ಓದಿದವರು ದೋಣಿ ವಿಹಾರ ಮಾಡುತ್ತಿದ್ದವರು ಈ ದೃಶ್ಯ ನೋಡಿ ಭಾವುಕರಾಗಿ, "ಎಷ್ಟು ನಿರಾಳವಾಗಿದ್ದಾರೆ!" ಎಂದು ಆಶ್ಚರ್ಯದಿಂದ ಉದ್ಗರಿಸಿದರು. ನಿಜವಾದ ಪ್ರಾಕೃತಿಕ ಸೌಂದರ್ಯವೆಂದರೆ ಇದೇ!

ಅವರು ಅಂದದ್ದು ಸ್ವಲ್ಪ ಅತಿರೇಕವೆನಿಸಿತು. ಅವರಿಗೆ ಮುದುಕಿ ನೈನ್‌ಪೌಂಡರ್ ಏನು ಹೇಳುತ್ತಾಳೆ ಅನ್ನುವುದು ಕೇಳಿಸಿಕೊಂಡಿರಲಿಲ್ಲ. ಅವಳು ಕೆಟ್ಟ ಕೋಪದ ಶಿಖರದಲ್ಲಿದ್ದಳು. ಸ್ಟೂಲ್‌ನ ಕಾಲುಗಳನ್ನು ಹರಿದ ಬಾಳೆ ಎಲೆಗಳಿಂದ ಝಾಡಿಸಿದಳು. "ನಾನು ಎಪ್ಪತ್ತೊಂಬತ್ತು ವರ್ಷಗಳ ದೀರ್ಘಕಾಲ ಬಾಳಿದ್ದೇನೆ. ಇನ್ನು ಸಾಕಾಗಿದೆ. ಎಲ್ಲಾ ಹಾಳಾಗಿ ಹೋಗ್ತೀರೋದನ್ನು ನೋಡಲು ನನ್ನಿಂದ ಸಾಧ್ಯವಿಲ್ಲ. ಅದಕ್ಕಿಂತ ಸಾಯೋದೇ ವಾಸಿ. ಈಗಿಂದೀಗಲೇ ಭೋಜನ ಮಾಡಲು ಹೊರಟಿದ್ದೇವೆ ಆದರೂ ಹುರಿದ ಬೀಜ ತಿನ್ನುತ್ತಿದ್ದಾರೆ. ಎಂದು ತನ್ನಲ್ಲೇ ಗೊಣಗಿಕೊಂಡಳು.

ಅವಳ ಮರಿಮಗಳು ಸಿಕ್ಸ್‌ಪೌಂಡರ್, ಕೈ ತುಂಬಾ ಬೀಜ ತುಂಬಿಸಿಕೊಂಡು ಅವಳೆಡೆಗೆ ಓಡಿ ಬಂದಳು. ಪರಿಸ್ಥಿತಿಯ ವಾಸನೆ ಹತ್ತಿದ್ದೇ ನದೀ ಕಡೆಗೆ ಓಡಿ ಹೋಗಿ ಮೇಣದ ಮರದ ಹಿಂದೆ ಅವಿತುಕೊಂಡಳು. ಮೆಲ್ಲಗೆ ಅಲ್ಲಿಂದ ಪುಟ್ಟ ಪುಟ್ಟ ಎರಡು ಜುಟ್ಟುಗಳಿದ್ದ ತಲೆಯನ್ನು ಹೊರಗೆ ಹಾಕಿ, ಜೋರಾಗಿ, “ಮುದುಕರು ಯಾವಾಗಲೂ ಸಾಯೋದೇ ಇಲ್ಲ” ಎಂದು ಕಿರುಚಿದಳು.

ನೈನ್‌ಪೌಂಡರ್ ಬಹಳ ವಯಸ್ಸಾಗೋವರೆಗೂ ಬದುಕಿದ್ದರೂ, ಕಿವಿ ಚೆನ್ನಾಗಿ ಕೇಳಿಸುತ್ತಿತ್ತು. ಆದರೂ ಆ ಹುಡುಗಿ ಹೇಳಿದ್ದು ಅವಳಿಗೆ ಕೇಳಿಸಲಿಲ್ಲ. ತನ್ನೊಳಗೇ ಏನನ್ನೋ ಗೊಣಗಿಕೊಳ್ಳುತ್ತಿದ್ದಳು. “ನಿಜ. ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರು ಹಾಳಾಗುತ್ತಲೇ ಹೋಗುತ್ತಿದೆ!”

ಈ ಹಳ್ಳೀಲಿ ಒಂದು ವಿಚಿತ್ರ ಪದ್ಧತಿ ಇತ್ತು. ಮಗು ಹುಟ್ಟಿದ ಕೂಡಲೇ ತೂಕ ಮಾಡಿ, ಹೆಸರಿನ ಜೊತೆ ಅದನ್ನು ಸೇರಿಸಿಕೊಳ್ಳುತ್ತಿದ್ದರು. ಮುದಿ ನೈನ್ ಪೌಂಡರ್ ತನ್ನ ಐವತ್ತನೇ ಹುಟ್ಟು ಹಬ್ಬದ ದಿನದಿಂದ ತಪ್ಪು ಹುಡುಕುವುದನ್ನೇ ರೂಢಿಸಿಕೊಂಡಳು. ನಾನು ಸಣ್ಣವಳಿದ್ದಾಗ ಇಷ್ಟೊಂದು ಬಿಸಿಲು ಇರ್ತಿರಲಿಲ್ಲ. ಬೀಜ ಇಷ್ಟು ಗಟ್ಟಿಯಾಗಿ ಇರ್ತಿರಲಿಲ್ಲ. ಹೇಳಬೇಕೂಂದ್ರೆ, ಈ ಕಾಲಕ್ಕೆ ಏನೋ ಆಗೋಗ್ತಾ ಇದೆ. ಇಲ್ದೆ ಇದ್ರೆ ಸಿಕ್ಸ್ ಪೌಂಡರ್ ಅವರ ತಾತನಿಗಿಂತ ಮೂರು ಪೌಂಡ್ ಕಡಿಮೆ, ಅವರಪ್ಪನಿಗಿಂತ ಒಂದು ಪೌಂಡ್ ಕಡಮೆಯಾಕಿರ್ತಿದ್ದಳು? ಇದಕ್ಕಿಂತ ಸಾಕ್ಷಿ ಬೇಕೇ? ದೃಢವಾದ ದನಿಯಲ್ಲಿ ಮತ್ತೆ ಹೇಳಿದಳು. “ಹೌದು ನಿಜ ಒಂದು ತಲೆಮಾರು ಮತ್ತೊಂದಕ್ಕಿಂತ ಬಹಳ ಹಾಳಾಗ್ತಾ ಇದೆ.”

ಆಕೆಯ ಮೊಮ್ಮಗ–ಸೊಸೆ, ಸೆವೆನ್ ಪೌಂಡರ್. ಆಗತಾನೇ ಒಂದು ಬುಟ್ಟಿಯಲ್ಲಿ ಅನ್ನವಿರಿಸಿಕೊಂಡು ಟೇಬಲ್ ಸಮೀಪಿಸಿದಳು. ಅದನ್ನು ಮೇಜಿನ ಮೇಲೆ ಕುಕ್ಕುತ್ತಾ ಕೋಪದಿಂದ ಹೇಳಿದಳು, “ಮತ್ತೆ ಶುರುಮಾಡಿದೆಯಾ? ನಿನ್ನ ಮರಿಮಗಳು ಸಿಕ್ಸ್ ಪೌಂಡರ್ ಹುಟ್ಟಿದಾಗ ಬರಿ ಸಿಕ್ಸ್‌ಪೌಂಡ್ ಅಲ್ಲ, ಸಿಕ್ಸ್‌ಪೌಂಡ್ ಫೈವ್ ಔನ್ಸ್ ಇದ್ದಳು. ನಿಮ್ಮ ಕುಟುಂಬದ ತೂಕದ ಯಂತ್ರ ಸರಿಯಾಗಿ ತೂಗೊಲ್ಲ. ಕಡಿಮೆ ತೂಗುತ್ತೆ. ಒಂದು ಪೌಂಡಿಗೆ ಹದಿನೆಂಟು ಔನ್ಸ್‌ಗಳು. ಹದಿನಾರು ಔನ್ಸ್‌ನ ಸ್ಕೇಲ್ ಅಥವಾ ಅಳತೆಯುದಾಗಿದ್ದರೆ, ಅವಳು ಏಳು ಪೌಂಡ್ ತೂಗುತ್ತಿದ್ದಳು. ಅಜ್ಜ, ಅಪ್ಪ, ಒಂಬತ್ತು ಎಂಟು ಪೌಂಡ್ ತೂಗಿದರು ಅನ್ನೋದ್ರಲ್ಲಿ ನನಗೆ ನಂಬಿಕೆ ಇಲ್ಲ. ಬಹುಶಃ ಹದಿನಾಲ್ಕು ಔನ್ಸ್ ಅಳತೆ ಸ್ಕೇಲು ಬಳಸಿರಬೇಕು, ಆ ದಿನಗಳಲ್ಲಿ!”

“ಒಂದಿನ ತಲೆಮಾರಿಗಿಂತ ಮುಂದಿನ ತಲೆಮಾರು ಹಾಳಾಗಿ ಹೋಯ್ತು!”

ಸೆವೆನ್ ಪೌಂಡರ್ ಉತ್ತರ ಕೊಡಬೇಕು ಅಂದುಕೊಳ್ಳುವಷ್ಟರಲ್ಲಿ, ರಸ್ತೆ ಕಡೆಯಿಂದ ಗಂಡ ಬರುತ್ತಿರುವುದು ಕಾಣಿಸಿದ್ದೇ, ಅವನ ಮೇಲೆ ಹಾರಿದಳು– “ಯಾಕೆ ಇಷ್ಟು

ತಡವಾಗಿ ಹಿಂತಿರುಗಿ ಬರುತ್ತಿದ್ದೀ? ನಿನಗಾಗಿ ಊಟಕ್ಕೆ ಎಷ್ಟು ಹೊತ್ತು ಕಾಯಬೇಕಾಗುತ್ತೆ ಅನ್ನೋ ಪ್ರಜ್ಞೆ ಇರಲಿಲ್ಲವೇ?"

ಸೆವೆನ್ ಪೌಂಡರ್ ಹಳ್ಳೀಲೇ ಇದ್ದರೂ, ತಾನು ಸುಧಾರಿಸಬೇಕು ಎಂದುಕೊಳ್ಳುತ್ತಿದ್ದ. ತಾತನ ಕಾಲದಿಂದ ತನ್ನವರೆಗೆ ಮೂರೂ ತಲೆಮಾರಿನಲ್ಲಿ ಯಾರೊಬ್ಬರಿಗೂ ಗುದ್ದಲಿಯನ್ನು ಹೇಗೆ ಉಪಯೋಗಿಸಬೇಕು ಎನ್ನುವುದು ಗೊತ್ತಿರಲಿಲ್ಲ. ತನ್ನ ತಂದೆಯ ಹಾಗೆ, ಮೊದಲು ಥಾನೂ ದೋಣಿಯಲ್ಲಿ ಕೆಲಸಮಾಡಿದ. ಪ್ರತಿದಿನ ಬೆಳಿಗ್ಗೆ ಲುಚೆನ್‌ನಿಂದ ಪಟ್ಟಣಕ್ಕೆ ಹೋಗಿ ಸಂಜೆ ಹಿಂತಿರುಗುತ್ತಿದ್ದ. ಪರಿಣಾಮವಾಗಿ ಏನೇನು ನಡೀತಿದೆ ಅನ್ನೋದೆಲ್ಲ ಅವನಿಗೆ ಗೊತ್ತಾಗುತ್ತಿತ್ತು. ಉದಾಹರಣೆಗೆ ಗುಡುಗಿನ ದೇವರು ಸೆಂಟಪೀಡ್‌ನ ಆತ್ಮವನ್ನು ಎಲ್ಲಿ ಸಂಹಾರ ಮಾಡಿದ, ಕುಮಾರಿಯಾಗಿದ್ದವಳು ರಾಕ್ಷಸನಿಗೆ ಎಲ್ಲಿ ಜನ್ಮ ಕೊಟ್ಟಳು, ಅನ್ನೋದೆಲ್ಲ ತಿಳಿದಿತ್ತು. ಹಳ್ಳಿಯಲ್ಲೆಲ್ಲ ಹೆಸರಾಗಿದ್ದರೂ ತನ್ನ ಕುಟುಂಬ ಮಾತ್ರ ಹಳೆ ಸಂಪ್ರದಾಯಕ್ಕೆ ಅಂಟಿಕೊಂಡಿದ್ದು, ಬೇಸಿಗೆಯಲ್ಲಿ ರಾತ್ರಿ ಊಟದ ಸಮಯದಲ್ಲಿ ದೀಪ ಹಚ್ಚಿಡುತ್ತಿರಲಿಲ್ಲವಾಗಿ, ಅವನು ತಡವಾಗಿ ಬಂದಾಗ ಈ ರೀತಿ ಬೈಗಳು ಸಿಗುತ್ತಿದ್ದವು.

ಶ್ರೀಮತಿ ಸೆವೆನ್ ಪೌಂಡರ್ ಒಂದು ಕೈಯಲ್ಲಿ ಆರಡಿ ಉದ್ದದ ಬೊಂಬಿನ ಕೊಳವೆ ಇಟ್ಟುಕೊಂಡಿದ್ದಳು. ಆ ಕೊಳವೆಯ ಮೈ ತುಂಬ ಕಲೆಗಳಿದ್ದವು. ತುದಿಯಲ್ಲಿ ಒಂದು ಮುಖ ಮತ್ತು ಸೀಸದ ಬಟ್ಟಲು ಇದ್ದವು. ತಲೆ ತಗ್ಗಿಸಿ ನಡೆದುಹೋದ. ಮತ್ತು ತಗ್ಗಾಗಿದ್ದ ಒಂದು ಸ್ಟೂಲಿನ ಮೇಲೆ ಕುಳಿತುಕೊಂಡ. ಸಿಕ್ಸ್ ಪೌಂಡರ್ ಈ ಅವಕಾಶ ಉಪಯೋಗಿಸಿಕೊಂಡು ಮೆಲ್ಲಗೆ ಎದ್ದು ಹೋಗಿ ಅವನ ಪಕ್ಕದಲ್ಲಿ ಕುಳಿತಳು. ಅವಳು ಮಾತನಾಡಿಸಿದರೂ ಅವನು ಮಾತಾಡಲಿಲ್ಲ.

"ಪ್ರತಿಯೊಂದು ತಲೆಮಾರು ಹಿಂದಿನ ತಲೆಮಾರಿಗಿಂತ ಹೆಚ್ಚು ಕೆಟ್ಟು ಹೋಗಿದೆ!" ಗೊಣಗಿದಳು.

ಸೆವೆನ್ ಪೌಂಡರ್ ನಿಧಾನವಾಗಿ ತಲೆ ಎತ್ತಿ ನಿಟ್ಟುಸಿರು ಬಿಟ್ಟು ಹೇಳಿದ. "ಚಕ್ರವರ್ತಿ ಮತ್ತೆ ಸಿಂಹಾಸನ ಏರಿದ್ದಾನೆ."

ಒಂದು ಕ್ಷಣ ಶ್ರೀಮತಿ ಸೆವೆನ್ ಪೌಂಡರ್ ಮೂಕವಿಸ್ಮಿತಳಾದಳು. ಅವನಿಂದ ಸುದ್ದಿ ಕೇಳಿದ ಮೇಲೆ ಭಾವಾವೇಶದಿಂದ ಹೇಳಿದಳು, "ಒಳ್ಳೇದು. ಹಾಗಾದರೆ ಚಕ್ರವರ್ತಿ ಮತ್ತೊಮ್ಮೆ ಕ್ಷಮಾದಾನವನ್ನು ಘೋಷಿಸುತ್ತಾನೆ, ಅಲ್ಲವೇ?"

"ನನಗೆ ಸೂಚನೆ ಏನೂ ಸಿಗಲಿಲ್ಲ." ಮತ್ತೊಮ್ಮೆ ನೀಳವಾಗಿ ಉಸಿರೆಳೆದ.

"ಚಕ್ರವರ್ತಿಗಳು ಇಳಿಬಿಟ್ಟ ಕೂದಲಿಗಾಗಿ ಒತ್ತಾಯಿಸುತ್ತಾರೇನು?"

"ಇರಬಹುದು."

ಶ್ರೀಮತಿ ಸೆವೆನ್ ಪೌಂಡರ್‌ಗೆ ಬೇಸರವಾದಂತೆನಿಸಿತು. ನಿನಗೆ ಹೇಗೆ ಗೊತ್ತು?" ಪ್ರಶ್ನಿಸಿದಳು.

"ಪ್ರಾಸ್ಪೆರಿಟಿ ಟ್ಯಾವೆರ್ನ್‌ನಲ್ಲಿ ಇರುವ ಪ್ರತಿಯೊಬ್ಬರೂ ಹೇಳುತ್ತಿದ್ದಾರೆ."

ಶ್ರೀಮತಿ ಸೆವೆನ್ ಪೌಂಡರ್‌ಗೆ ತಕ್ಷಣ ಅರ್ಥವಾಯಿತು. ಪರಿಸ್ಥಿತಿ ಅಷ್ಟು ಚೆನ್ನಾಗಿರೊಲ್ಲಾಂತ. ಯಾಕೇಂದ್ರೆ ಪ್ರಾಸ್ಪೆರಿಟಿ ಟ್ಯಾವರ್ನ್ ಸುದ್ದಿ ಕೇಂದ್ರವಾಗಿತ್ತು. ಸೆವೆನ್ ಪೌಂಡರ್‌ನ ಬೋಳಾದ ತಲೆಯತ್ತ ಕೋಪದಿಂದ ನೋಡಿದಳು. ಆ ನೋಟದಲ್ಲಿ ತಿರಸ್ಕಾರ ಮತ್ತು ಅಸಮಾಧಾನಗಳಿದ್ದವು. ಬಟ್ಟಲಲ್ಲಿ ಅನ್ನ ತುಂಬಿ ಕೋಪ ಮತ್ತು ರಭಸದಿಂದ ಮೇಜಿನ ಮೇಲೆ ಅವನ ಮುಂದೆ ಕುಕ್ಕಿದಳು. "ಬೇಗ ತಿನ್ನು. ಅಳುವುದರಿಂದ ಜುಟ್ಟು ಬೆಳೆಯೊಲ್ಲ. ಬೆಳೆಯುತ್ತೇನು?"

ಸೂರ್ಯ ಕಿರಣಗಳು ಮರೆಯಾಗುತ್ತಿದ್ದವು. ಕಪ್ಪಾಗುತ್ತಿದ್ದ ನೀರು ತಣ್ಣಗಾಗುತ್ತಿತ್ತು. ಮಣ್ಣಿನ ಮನೆಯಲ್ಲಿ ಅನ್ನದ ಬಟ್ಟಲುಗಳ ಮತ್ತು ಕಡ್ಡಿಗಳ ಸದ್ದು ಕೇಳಿಸುತ್ತಿತ್ತು. ಅಲ್ಲಿದ್ದ ಜನರ ಬೆನ್ನಲ್ಲಿ ಬೆವರಿಳಿಯುತ್ತಿತ್ತು. ಶ್ರೀಮತಿ ಸೆವೆನ್ ಪೌಂಡರ್ ಮೂರು ಬಟ್ಟಲು ಹೊಡೆದುಕೊಳ್ಳುತ್ತಿತ್ತು. ಮೇಣದ ಮರದ ಎಲೆಗಳ ಮಧ್ಯದಿಂದ ಚಾವೋನ ದಪ್ಪ ಆಕೃತಿ, ಮರದ ಸೇತುವೆಯನ್ನು ದಾಟಿ ಹತ್ತಿರ ಬರುತ್ತಿದ್ದುದು ಕಾಣಿಸಿತು. ಆತ ತಿಳಿ ನೀಲಿ ಬಣ್ಣದ ಹತ್ತಿಯ ಗೌನ್ ಧರಿಸಿದ್ದ. ಆತ ಪಕ್ಕದ ಹಳ್ಳಿಯಲ್ಲಿದ್ದ ಅಬನ್‌ಡೆನ್ಸ್ ಟ್ಯಾವರ್ನ್‌ನ ಮಾಲಿಕನಾಗಿದ್ದ. ಹತ್ತು ಮೈಲಿಗಳ ಸುತ್ತಲ ವಿಸ್ತೀರ್ಣದಲ್ಲಿ ಆತನೊಬ್ಬ ಮಾತ್ರ ವಿದ್ಯಾವಂತನಾಗಿದ್ದ.

ಕಲಿಕೆಯಿಂದ ಸ್ವಲ್ಪ ವಯಸ್ಸಾದಂತೆ ಕಾಣುತ್ತಿದ್ದ. ಅವನ ಬಳಿ ಜಿನ್‌ಷೆನ್ಗ್‌ಟಾನ್‌ನ ವಿವರಣೆಯಿಂದ ಕೂಡಿದ 'Romance of the three Kingdoms' ಎಂಬುದರ ಹನ್ನೆರಡು ಸಂಪುಟಗಳಿದ್ದವು. ಅವುಗಳನ್ನಂತು ಓದಿ ಓದಿ ಓದುತ್ತಲೇ ಇದ್ದ. ಒಂದೊಂದು ಪಾತ್ರವನ್ನೂ ಬಿಡದೆ ಓದುತ್ತಿದ್ದ. ಅವುಗಳಲ್ಲಿ ಬರುವ ಐದು ಸೈನ್ಯಾಧಿಕಾರಿಗಳ ಹೆಸರನ್ನು ಹೇಳುತ್ತಿದ್ದ. ಅಲ್ಲದೆ ಹುವಾಂಗ್ ಚುಂಗನ್ನು ಹ್ಯಾಂಗ್‌ಷಂಗ್ ಎಂದೂ, ಮಾಚಾವೋನನ್ನು ಮೆಂಗ್‌ಚಿ ಎಂದೂ ಕರೆಯುತ್ತಿದ್ದ ವಿಚಾರವನ್ನೂ ಹೇಳುತ್ತಿದ್ದ. ಕ್ರಾಂತಿಯ ನಂತರ, ತಾವೋ ಪೂಜಾರಿಯಂತೆ ತಲೆಯ ಮೇಲೆ ಕೂದಲ ಸುರುಳಿಯನ್ನು ಇರಿಸಿಕೊಂಡಿದ್ದ. ಆಗಾಗ ನಿಟ್ಟುಸಿರಿನೊಂದಿಗೆ, ಚಾವೋಯುನ್ ಬದುಕಿದ್ದರೆ ಪರಿಸ್ಥಿತಿ ಹೀಗೆ ಹದಗೆಡುತ್ತಿರಲಿಲ್ಲ ಎಂದೂ ಸ್ಮರಿಸಿಕೊಳ್ಳುತ್ತಿದ್ದ. ಶ್ರೀಮತಿ ಸೆವೆನ್ ಪೌಂಡರ್ ದೃಷ್ಟಿ ಚೆನ್ನಾಗಿತ್ತು. ಈ ದಿನ ಅವನ ತಲೆಮೇಲೆ ಕೂದಲು ಚಾವೋ ಪೂಜಾರಿಯಂತೆ ಇರಲಿಲ್ಲ ಎಂಬುದನ್ನೂ ಗಮನಿಸಿದಳು. ತಲೆಯ ಮುಂದಿನ ಭಾಗವನ್ನು ನೀಟಾಗಿ ಕ್ಷೌರ ಮಾಡಲಾಗಿತ್ತು. ಕೂದಲ ಸುರುಳಿ ಕೆಳಗೆ ಇಳಿದಿತ್ತು. ಚಕ್ರವರ್ತಿ ಮತ್ತೆ ಸಿಂಹಾಸನಾರೋಹಣ ಮಾಡಿರಬೇಕೆನಿಸಿತು. ಕೂದಲಿನ ಎಳೆಗಳು ಮತ್ತೆ ಅನಿವಾರ್ಯವಾಗಿರಬೇಕು. ಸೆವೆನ್ ಪೌಂಡರ್‌ಗೆ ಅಪಾಯ ಕಾದಿರಬೇಕು. ಇಲ್ಲದೆ

ಇದ್ದರೆ ಚಾವೋ ಉದ್ದನೆಯ ಹತ್ತಿ ನಿಲುವಂಗಿಯನ್ನು ಧರಿಸುತ್ತಿರಲಿಲ್ಲ. ಮೂರು ವರ್ಷಗಳಲ್ಲಿ ಹೆಚ್ಚೆಂದರೆ ಎರಡು ಬಾರಿ ಮಾತ್ರ ತೊಟ್ಟಿದ್ದ. ಅದೂ ಅವನ ಬದ್ಧ ವೈರಿಯಾಗಿದ್ದ ಕಲೆ ಮುಖದ ಆಹ್ ಷು ಖಾಯಿಲೆ ಬಿದ್ದಾಗ ಒಂದು ಸಲ, ಮತ್ತು ಅವನ ಹೆಂಡದಂಗಡಿಯನ್ನು ನಜ್ಜು ಗುಜ್ಜು ಮಾಡಿದ್ದ 'ಲ್ರು' ಸತ್ತಾಗ ಮತ್ತೊಂದು ಸಲ, ಅಷ್ಟೆ. ಇದು ಮೂರನೇ ಸಲವಾಗಿತ್ತು. ಇದನ್ನು ಧರಿಸಿದನೆಂದರೆ ಅವನಿಗೆ ಸಂತೋಷ ಪಡುವ ಮತ್ತು ಅವನ ಶತ್ರುಗಳಿಗೆ ಕೆಟ್ಟದ್ದಾಗಿರುವ ಸಂಗತಿ ಏನಾದರೂ ಇದ್ದಿರಬೇಕು. ಎರಡು ವರ್ಷಗಳ ಹಿಂದೆ, ಚಾವೋನನ್ನು ಸೂಳೆಮಗ ಅಂತ ಕುಡಿದು ಬಂದಿದ್ದ ತನ್ನ ಗಂಡ ಬೈದದ್ದನ್ನು ಶ್ರೀಮತಿ ಸೆವೆನ್ ಪೌಂಡರ್ ನೆನಪಿಸಿಕೊಂಡಳು. ತನ್ನ ಗಂಡನಿಗೆ ಕಾದಿರುವ ಅಪಾಯದ ಕಲ್ಪನೆ ತಕ್ಷಣ ಅವಳಿಗಾಯಿತು. ಅವಳೆದೆ ಹೊಡೆದುಕೊಳ್ಳಲಾರಂಭಿಸಿತು.

ರಾತ್ರಿ ಊಟ ಮಾಡುತ್ತಿದ್ದವರೆಲ್ಲ ಹಾದು ಹೋಗುತ್ತಿದ್ದ ಚಾವೋನನ್ನು ಗಮನಿಸಿದರು. ಊಟದ ಕಡ್ಡಿಗಳನ್ನು ಅನ್ನದ ಬಟ್ಟಲುಗಳಿಂದ ಮೇಲೆತ್ತಿ ಚಾವೋನ ಕಡೆ ತಿರುಗಿ "ಬನ್ನಿ ಚಾವೋರವರೆ. ನೀವೂ ನಮ್ಮ ಜೊತೆ ಊಟ ಮಾಡಿ."

ಚಾವೋ ಎಲ್ಲರ ಗೌರವವನ್ನು ಸ್ವೀಕರಿಸಿ ಮುಂದುವರೆಯುತ್ತಾ. "ಇಲ್ಲ ನೀವು ಊಟಮಾಡಿ, ದಯವಿಟ್ಟು." ಎಂದು ಹೇಳಿ, ನೇರವಾಗಿ ಸೆವೆನ್ ಪೌಂಡರ್ ಕುಳಿತಿದ್ದ ಮೇಜಿನ ಬಳಿ ಹೋದ. ತಕ್ಷಣ ಎಲ್ಲರೂ ಎದ್ದು ನಿಂತು ನಮಸ್ಕಾರ ಹೇಳಿದರು. "ದಯವಿಟ್ಟು ನೀವು ಊಟ ಮುಂದುವರೆಸಿ.." ಎಂದು ಮೇಜಿನ ಮೇಲಿದ್ದ ಊಟವನ್ನು ನೋಡಿದ.

"ಒಣಗಿಸಿದ ಆ ತರಕಾರಿ ತುಂಬಾ ಚೆನ್ನಾಗಿದೆ.....ನೀನೇನಾದರೂ ಸುದ್ದಿ ಕೇಳಿದೆಯಾ?" ಚಾವೋ ಸೆವೆನ್ ಪೌಂಡರ್‌ನ ಹಿಂದೆ ಶ್ರೀಮತಿ ಸೆವೆನ್ ಪೌಂಡರ್‌ಗೆ ಎದುರಾಗಿ ನಿಂತಿದ್ದು ಮಾತಾಡಿದ.

"ಚಕ್ರವರ್ತಿಗಳು ಸಿಂಹಾಸನವೇರಿದ್ದಾರೆ." ಸೆವೆನ್ ಪೌಂಡರ್ ಉತ್ತರಿಸಿದ.

ಚಾವೋ ಮುಖಭಾವವನ್ನು ಗಮನಿಸುತ್ತಿದ್ದ ಶ್ರೀಮತಿ ಸೆವೆನ್ ಪೌಂಡರ್ ಮುಗುಳು ನಗುತ್ತ, ಈಗ ಚಕ್ರವರ್ತಿಗಳು ಸಿಂಹಾಸನ ಏರಿರುವುದರಿಂದ, ಕ್ಷಮಾದಾನ ಸಮಾರಂಭ ಯಾವಾಗಿರಬಹುದು?" ಎಂದು ಕೇಳಿದಳು.

"ಸಾರ್ವತ್ರಿಕ ಕ್ಷಮಾದಾನ? ಒಳ್ಳೇ ದಿನಗಳಲ್ಲಿ ಕ್ಷಮಾದಾನ ಇರುತ್ತೆ."

ಚಾವೋನ ದನಿ ಗಡುಸಾಗಿತ್ತು. "ಸೆವೆನ್ ಪೌಂಡರ್‌ನ ಗತಿ ಏನಾಗುತ್ತೇಂತ ಹೌದಲ್ಲ? ಅದೇ ಮುಖ್ಯವಾದ ವಿಚಾರ. ಉದ್ದನೆಯ ಕೂದಲು ಇರಬೇಕೆಂಬ ಶಾಸನ ಕಾಲದಲ್ಲಿ ಏನಾಗಿತ್ತು ಅಂತ ನಿನಗೆ ಗೊತ್ತಿರಬೇಕು. ಕೂದಲುಳಿಸಿಕೊಂಡು ತಲೆ ಕಳೆದುಕೊಳ್ಳುವುದು, ತಲೆ ಉಳಿಸಿಕೊಂಡು ಕೂದಲು ಕಳೆದುಕೊಳ್ಳುವುದು....."

ಸೆವೆನ್ ಪೌಂಡರ್, ಶ್ರೀಮತಿ ಸೆವೆನ್ ಪೌಂಡರ್ ಎಂದೂ ಪುಸ್ತಕಗಳನ್ನು ಓದಿದವರಲ್ಲ. ಆದ್ದರಿಂದ ಚಾವೋ ಹೇಳಿದ ಮಾತಿನ ಅರ್ಥ ಅವರಿಗಾಗಲಿಲ್ಲ. ಆದರೆ ಚಾವೋ ಹೇಳಿದ ರೀತಿಯಿಂದ ಪರಿಸ್ಥಿತಿ ಬಹಳ ಗಂಭೀರವಾಗಿ ಇರಬೇಕೆಂದು ಮಾತ್ರ ಊಹಿಸಿದರು. ತಮ್ಮ ಮೇಲೆ ಮರಣ ದಂಡನೆಯ ಆದೇಶ ಹೊರಬಿದ್ದಿದೆಯೋ ಎಂಬಂತೆ ಭಾವಿಸಿದರು. ಕಿವಿಯಲ್ಲಿ ಏನೋ ಗುಂಯ್ ಗುಡುತ್ತಿರುವಂತೆನಿಸಿತು. ಇನ್ನೊಂದು ಮಾತೂ ಅವರಿಂದ ಹೊರಡಲಿಲ್ಲ.

ಪ್ರತಿಯೊಂದು ತಲೆಮಾರು ಒಂದಕ್ಕಿಂತ ಒಂದು ಹಾಳಾಗಿ ಹೋಗ್ತಿದೆ ಎನ್ನುವ ಮುದುಕಿ ನೈನ್ ಪೌಂಡರ್ ಬಾಯಿ ಬಡಿಸಿಕೊಂಡು ಸುಮ್ಮನೆ ಕೂತಿದ್ದವಳಿಗೆ ಚಾವೋ ಜೊತೆ ಮಾತಾಡಲು ಈಗ ಒಂದು ಅವಕಾಶ ಸಿಕ್ಕಿತು. "ಕ್ರಾಂತಿಕಾರಿಗಳು ಇತ್ತೀಚೆಗೆ ಜನಗಳ ಜುಟ್ಟು ಕತ್ತರಿಸುತ್ತಾ ಹೋಗಿದ್ದಾರೆ. ಇದರಿಂದ ತಾವೋ ಪಂಥೀಯನಾಗಿಯೂ, ಬುದ್ಧ ಪಂಥೀಯನಾಗಿಯೂ ಕಾಣುವುದಿಲ್ಲ. ಹಿಂದೇನೂ ಈ ಕ್ರಾಂತಿಕಾರಿಗಳು ಹೀಗೇ ಇದ್ದರೇನು? ನಾನು ಎಪ್ಪತ್ತೊಂಬತ್ತು ವರ್ಷ ಬದುಕಿದ್ದೇನೆ. ಇನ್ನು ಸಾಕಾಯಿತು. ಹಿಂದಿನ ಕಾಲದಲ್ಲಿ ಈ ಕ್ರಾಂತಿಕಾರಿಗಳು, ಕೆಂಪು ಬಣ್ಣದ ಸ್ಯಾಟಿನ್ ಬಟ್ಟೆಯಿಂದ ತಲೆಕಟ್ಟಿಕೊಂಡು, ಅದರ ಬಾಲವನ್ನು ಹಿಂದೆ ಕಾಲಿನವರೆಗೆ ಇಳಿಬಿಟ್ಟಿರುತ್ತಿದ್ದರು. ರಾಜಕುಮಾರ ಹಳದಿ ಸ್ಯಾಟಿನ್‌ನನ್ನು ಕಟ್ಟಿಕೊಂಡಿರುತ್ತಿದ್ದ. ಹಳದಿ ಸ್ಯಾಟಿನ್.......ಕೆಂಪು ಸ್ಯಾಟಿನ್......ಹಳದಿ ಸ್ಯಾಟಿನ್.......ಸಾಕಪ್ಪಾ ಸಾಕು. ಎಪ್ಪತ್ತೊಂಬತ್ತು ವರ್ಷಗಳಷ್ಟು ದೀರ್ಘಕಾಲ ಬದುಕಿದ್ದೇನೆ."

"ಹಾಗಾದರೆ ಏನು ಮಾಡಬೇಕು?" ಶ್ರೀಮತಿ ಸೆವೆನ್ ಪೌಂಡರ್ ನಿಂತುಕೊಳ್ಳುತ್ತಾ ಕೇಳಿದಳು. ನಮ್ಮದೋ ದೊಡ್ಡ ಕುಟುಂಬ. ಚಿಕ್ಕವರು, ದೊಡ್ಡವರು ಎಲ್ಲ ಅವರನ್ನೇ ನಂಬಿಕೊಂಡಿದ್ದಾರೆ."

"ನೀನು ಮಾಡುವಂಥಾದ್ದೇನೂ ಇಲ್ಲ." ಚಾವೋ ಹೇಳಿದ. ಕ್ಯೂ (ಇಳಿಬಿದ್ದ ಕೂದಲು) ಇಲ್ಲದ್ದಕ್ಕಾಗಿ ಶಿಕ್ಷೆ ಏನೂಂತ ಒಂದೊಂದು ವಾಕ್ಯದಲ್ಲೂ, ಪುಸ್ತಕದಲ್ಲಿ ಸ್ಪಷ್ಟವಾಗಿ ಬರೆದಿರಿಸಿದೆ. ನಿನ್ನ ಕುಟುಂಬ ದೊಡ್ಡದೆಂದ ಮಾತ್ರಕ್ಕೆ ಏನು ಮಾಡಲು ಸಾಧ್ಯವಿಲ್ಲ.

ಶ್ರೀಮತಿ ಸೆವೆನ್ ಪೌಂಡರ್, ಪುಸ್ತಕದಲ್ಲೇ ಇದನ್ನು ಬರೆದು ಬಿಟ್ಟಿದೆ ಎಂದ ಮೇಲೆ ಯಾವ ಭರವಸೆಯೂ ಸಾಧ್ಯವಿಲ್ಲ ಎಂದುಕೊಂಡಳು. ಜೊತೆಗೆ ಏನೋ ಒಂದು ಬಗೆಯ ಉದ್ವೇಗದಲ್ಲಿ, ಸೆವೆನ್ ಪೌಂಡರ್‌ನನ್ನು ದ್ವೇಷಿಸಲು ತೊಡಗಿದಳು. ತನ್ನ ಚಾಪ್ ಕಡ್ಡಿಗಳನ್ನು ಅವನ ಮೂಗಿನ ತುದಿಯೆಡೆಗೆ ಗುರುತು ಮಾಡಿ, "ನೀನು ಮಾಡಿದ್ದನ್ನು ನೀನೇ ಅನುಭವಿಸು. ಕ್ರಾಂತಿಯ ದಿನಗಳಲ್ಲಿ ದೋಣಿ ಜೊತೆ ಪಟ್ಟಣಕ್ಕೆ ಹೋಗಬೇಡ ಅಂತ ಬಡ್ಕೊಂಡೆ. ಆದರೂ ಹೋದ. ಪಟ್ಟಣಕ್ಕೆ ಹೋದ. ಅಲ್ಲಿ ಅವರು ಅವನ ಕೂದಲನ್ನು ಕತ್ತರಿಸಿಬಿಟ್ಟರು. ಹೊಳೆಯುವ ಕಪ್ಪು ರೇಶಿಮೆಯಂತಿತ್ತು.

ಈಗ ಅವನು ತಾವೋ ಪಂಥೀಯನಂತೆಯೂ ಕಾಣೊಲ್ಲ. ಬುದ್ಧ ಪಂಥೀಯನಂತೆಯೂ ಕಾಣೊಲ್ಲ. ಅವನು ಮಾಡಿದ್ದನ್ನು ಅವನೇ ಉಣ್ಣಬೇಕು. ನಮ್ಮನ್ನೂ ಅದರಲ್ಲಿ ಎಳೆಯೋ ಅಧಿಕಾರ ಅವನಿಗೇನಿತ್ತು? ಜೀವಂತ ಹೆಣದ ಹಾಗೆ....."

ಚಾವೋ ಬಂದದ್ದರಿಂದ ಊರಿನ ಜನ ಬೇಗ ಬೇಗ ಊಟ ಮುಗಿಸಿ ಸೆವೆನ್ ಪೌಂಡರ್‌ನ ಮೇಜಿನ ಸುತ್ತ ಸೇರಿದರು. ಊರಿನಲ್ಲಿ ಪ್ರಮುಖ ವ್ಯಕ್ತಿಯಾಗಿದ್ದ ತನ್ನ ಹೆಂಡತಿ ಎಲ್ಲರ ಮುಂದೆ ಹೀಗೆ ತನ್ನನ್ನು ಬೈದದ್ದು ತೀರಾ ಕೆಡುಕೆನಿಸಿತು. ಅದಕ್ಕೆಂದೇ ತಲೆ ಎತ್ತಿ ನಿಧಾನವಾಗಿ ಮಾತು ತೆಗೆದ–

"ಮನೇಲಿ ಬೇಕಾದಷ್ಟು ಹೇಳೋಕೆ ಇಟ್ಕೋ. ಆದರೆ ಈ ಹೊತ್ತಲ್ಲಿ....."

"ಜೈಲು ಹಕ್ಕಿಯ ಜೀವಂತ ಹೆಣ!"

ಅಲ್ಲಿ ನೆರೆದಿದ್ದ ಎಲ್ಲರ ಪೈಕಿ ವಿಧವೆಯಾದ ಪಾ–ಯಿ ಬಹಳ ದಯಾವಂತೆ. ಗಂಡ ತೀರಿಕೊಂಡ ಮೇಲೆ ಹುಟ್ಟಿದ ಎರಡು ವರ್ಷದ ಹಸುಗೂಸನ್ನು ಎತ್ತಿಕೊಂಡು ಶ್ರೀಮತಿ ಸೆವೆನ್‌ಪೌಂಡರ್ ಪಕ್ಕದಲ್ಲಿ ನಿಂತಿದ್ದಳು. ನಡೆಯುವ ತಮಾಷೇನ ಗಮನಿಸುತ್ತಿದ್ದಳು. ಈಗ ಅವಳಿಗೆ ಯಾಕೋ ವಿಷಯ ಅತಿರೇಕಕ್ಕೆ ಹೋಗ್ತಿದೆ ಅನ್ನಿಸ್ತು. ಸಮಾಧಾನ ಮಾಡೋಕೆ ಮುಂದಾದಳು. "ಹೋಗಲಿ ಬಿಡು ಸೆವೆನ್ ಪೌಂಡರ್. ಮನುಷ್ಯರು ದೇವತೆಗಳಲ್ಲ. ಮುಂದಾಗುವುದನ್ನು ಹೇಗೆ ತಾನೇ ಹೇಳೋಕೆ ಸಾಧ್ಯ? ಆಗ ಶ್ರೀಮತಿ ಸೆವೆನ್‌ಪೌಂಡರ್, ಜುಟ್ಟು ಇಲ್ಲದಿದ್ದರೆ ಏನಂತೆ? ನಾಚಿಕೆಪಡೋ ಅಗತ್ಯ ಇಲ್ಲ ಅಂತ ಹೇಳಿರಲಿಲ್ಲವೇ? ಅಲ್ಲದೆ ಸರಕಾರಿ ಕಛೇರಿಯಿಂದ ಮುಖ್ಯ ಅಧಿಕಾರಿಯಾದವರು ಇನ್ನೂ ಯಾವುದೇ ಆದೇಶ ಕಳಿಸಿಲ್ಲ....."

ಅವಳು ಮಾತು ಮುಗಿಸುವ ಮುನ್ನವೇ ಶ್ರೀಮತಿ ಸೆವೆನ್‌ಪೌಂಡರ್ ಕಿವಿಗಳು ಕೆಂಪಾದವು. ಚಾಪ್‌ಸ್ಟಿಕ್‌ಗಳನ್ನು ಅವಳೆಡೆಗೆ ತಿರುಗಿಸಿ, "ಇಲ್ಲ ನಾನು ಹಾಗೆ ಎಂದೂ......" ಪ್ರತಿಭಟಿಸಿ ಹೇಳಿದಳು. "ಏನು ಹೇಳ್ತಿದ್ದೀ ಪಾ–ಯಿ. ನಾನಿನ್ನೂ ಮನುಷ್ಯಳಾಗಿಯೇ ಇದ್ದೇನೆ. ಹೌದೋ ಅಲ್ವೋ? ಇಂಥ ದರಿದ್ರವಾದದ್ದನ್ನು ನಾನ್ಯಾಕೆ ಹೇಳ್ಲಿ? ಆ ಥರಾ ಆದಾಗ ನಾನು ಮೂರು ದಿವಸ ಅಳ್ತಾ ಕೂತಿದ್ದೆ. ಎಲ್ಲರೂ ನೋಡಿದ್ದಾರೆ ನನ್ನನ್ನು. ಆ ಮರಿ ಪಿಶಾಚಿ ಸಿಕ್ಸ್‌ಪೌಂಡರ್ ಕೂಡಾ ಅತ್ತಿದ್ದಾಳೆ." ಸಿಕ್ಸ್‌ಪೌಂಡರ್ ಆಗತಾನೆ ಅನ್ನದ ಬಟ್ಟಲು ಖಾಲಿ ಮಾಡಿ, ಮತ್ತೊಮ್ಮೆ ಅನ್ನ ಹಾಕಿಸಿಕೊಳ್ಳಲು ಆತುರ ಪಡುತ್ತಿದ್ದಳು. ಶ್ರೀಮತಿ ಸೆವೆನ್‌ಪೌಂಡರ್ ಕೋಪದಿಂದ ಕುದಿಯುತ್ತಿದ್ದಳು. ತನ್ನ ಚಾಪ್‌ಸ್ಟಿಕ್ಸ್‌ಗಳನ್ನು ಸಿಕ್ಸ್‌ಪೌಂಡರ್ ತಲೆ ಮೇಲೆ, ಎರಡು ಜುಟ್ಟುಗಳ ಮಧ್ಯೆ ಕುಕ್ಕಿ, "ದರಿದ್ರ ಮುಂಡೇದೆ, ಸದ್ದು ಮಾಡೋದನ್ನ ನಿಲ್ಲಿಸು!"

ಸಿಕ್ಸ್‌ಪೌಂಡರ್ ಕೈಲಿದ್ದ ಗಾಜಿನ ಬಟ್ಟಲು ಕೆಳಗೆ ಬಿದ್ದಿದ್ದರಿಂದ ಬಿರುಕುಂಟಾಯಿತು. ಮೂಲೆಯ ಹೆಂಚಿಗೆ ತಗುಲಿ, ಬಟ್ಟಲಿನ ಒಂದು ತುದಿಯಲ್ಲಿ ಚಕ್ಕೆ ಎದ್ದಿತು.

ಸೆವೆನ್‌ಪೌಂಡರ್ ತಕ್ಷಣ ಎದ್ದು ನೆಲದ ಮೇಲೆ ಬಿದ್ದಿದ್ದ ಬಟ್ಟಲನ್ನು ಎತ್ತಿಕೊಂಡು ಕೆಳಗೆ ಬಿದ್ದಿದ್ದ ಚಕ್ಕೆಯನ್ನು ಅದರ ಜೊತೆ ಸೇರಿಸಲು ಆಗುವುದೇನೋ ಎಂದು ಪರೀಕ್ಷಿಸುತ್ತಿದ್ದ. "ಹಾಳಾದವಳೇ" ಎಂದು ಬೈಯುತ್ತಾ ಅವಳ ಕೆನ್ನೆಗೆ ಎರಡು ಬಿಟ್ಟ. ಸಿಕ್ಸ್‌ಪೌಂಡರ್ ಅಳತೊಡಗಿದಳು. ಅಷ್ಟರಲ್ಲಿ ನೈನ್‌ಪೌಂಡರ್ ಬಂದು ಅವಳ ಕೈ ಹಿಡಿದು ಎಳೆದುಕೊಂಡು ಹೋಗುತ್ತಾ "ಒಂದು ತಲೆಮಾರಿಗಿಂತ ಇನ್ನೊಂದು ತಲೆಮಾರು ಹಾಳಾಗಿ ಹೋಯ್ತು." ಎಂದು ತನ್ನಲ್ಲೇ ಗೊಣಗಿದಳು.

ಕೋಪ ಮಾಡಿಕೊಳ್ಳುವ ಸರದಿ ಈಗ ಪಾ–ಯಿದಾಯಿತು. "ಮಗೂನ ಹೊಡೆಯುವುದೇ, ಶ್ರೀಮತಿ ಸೆವೆನ್‌ಪೌಂಡರ್?" ಕಿರುಚಿ ಹೇಳಿದಳು.

ಚಾವೋ ಆಗುತ್ತಿದ್ದುದನ್ನೆಲ್ಲ ನೋಡುತ್ತಾ ನಗುತ್ತಿದ್ದ. ವಿಧವೆ ಪಾ–ಯಿ, ಮೇಲಿನ ಅಧಿಕಾರಿ ಇನ್ನೂ ಆದೇಶ ನೀಡಿಲ್ಲ ಎಂದು ಹೇಳಿದ್ದನ್ನು ಕೇಳಿ ಸಿಟ್ಟಾದ. ನೇರವಾಗಿ ಮೇಜಿನ ಬಳಿ ಬಂದ. "ಮಗೂನ ಹೊಡೆದರೆ ಏನಾಗುತ್ತೆ? ಚಕ್ರವರ್ತಿ ಸೈನ್ಯ ಯಾವಾಗ ಬೇಕಾದರೂ ಬರಬಹುದು. ಸಾಮ್ರಾಜ್ಯದ ರಕ್ಷಕ ಸೈನ್ಯಾಧಿಕಾರಿ ಷಾಂಗ್ ಅನ್ನೋದು ಗೊತ್ತಿರಬೇಕಲ್ಲ. ಮೂರು ಸಾಮ್ರಾಜ್ಯಗಳ ಕಾಲದಲ್ಲಿದ್ದ ಷಾಂಗ್–ಫೀ ವಂಶದವನು. ಅವನ ಹತ್ತಿರ ಹದಿನೆಂಟು ಅಡಿ ಉದ್ದದ ಭರ್ಜಿ ಇದೆ. ಒಂದು ಸಲಕ್ಕೆ ಹತ್ತು ಸಾವಿರ ಮಂದಿಯನ್ನು ಬಲಿ ತೆಗೆದುಕೊಳ್ಳುತೆ. ಅವನಿಗೆ ವಿರುದ್ಧವಾಗಿ ಯಾರಿಗೂ ನಿಲ್ಲೋಕೆ ಆಗುವುದಿಲ್ಲ." ಎಂದು ತನ್ನ ಕೈಯಲ್ಲಿಯೇ, ಭರ್ಜಿ ಇರುವಂತೆ ಕೈಯನ್ನು ಮೇಲೆತ್ತಿದ. ಒಂದೆರಡು ಹೆಜ್ಜೆ ಮುಂದೆ ಬಂದು ಪಾ–ಯಿಗೆ ಹೇಳಿದ, "ಅವನ ಮುಂದೆ ನೀನೆಷ್ಟರವಳು?"

ಮಗುವನ್ನು ಎತ್ತಿಕೊಂಡೇ ಕೋಪದಿಂದ ಕಂಪಿಸಿದಳು. ಇದ್ದಕ್ಕಿದ್ದಂತೆ ಚಾವೋ ತನ್ನ ಮೇಲೇರಿ ಬರುತ್ತ, ಬೆವರಿದ ಮುಖ, ತಿವಿಯುವಂತೆ ನೋಡುತ್ತಿದ್ದ ಕಣ್ಣುಗಳು, ತನ್ನ ಕತೆ ಮುಗಿಯಿತೆಂಬ ಭಾವನೆಯನ್ನು ಬರಿಸಿದವು. ತಾನು ಹೇಳಬೇಕೆಂದುಕೊಂಡದ್ದನ್ನು ಪೂರ್ತಿಯಾಗಿ ಹೇಳದೆ ಅಲ್ಲಿಂದ ಕಾಲ್ತೆಗೆದಳು. ಚಾವೋ ಕೂಡ ಅಲ್ಲಿಂದ ಜಾಗ ಬಿಟ್ಟ. ಅವರಿಬ್ಬರೂ ಹೊರಡುತ್ತಿದ್ದಾಗ, ಅಲ್ಲಿದ್ದ ಜನ ಪಾ–ಯಿ ಮಧ್ಯೆ ತಲೆ ಹಾಕಿದ್ದನ್ನು ಖಂಡಿಸಿದರು. ಮತ್ತೆ ಕೆಲವರು ಜುಟ್ಟು ಕತ್ತರಿಸಿಕೊಂಡಿದ್ದವರು, ಈಗ ಅದನ್ನು ಬೆಳೆಸುತ್ತಿದ್ದರಾದರೂ ಚಾವೋನ ಕಣ್ಣಿಗೆ ಬೀಳಬಾರದೆಂದು ಗುಂಪಿನ ಹಿಂದೆ ತಲೆ ಮರೆಸಿಕೊಂಡು ನಿಂತಿದ್ದರು. ಆದರೆ ಚಾವೋ ಅಷ್ಟಾಗಿ ಎಲ್ಲರನ್ನೂ ಪರೀಕ್ಷೆ ಮಾಡದೆ ಹೊರಟು ಹೋದ. ಮತ್ತೆ ಮೇಣದ ಮರಗಳ ಮಧ್ಯೆ, ಅವಳಿಂದ ಸರಿದು ಮರೆಯಾದ. "ನೀನು ಅವನಿಗೆ ಸಾಟಿ!" ಎಂದುಕೊಳ್ಳುತ್ತಾ ಹಲಗೆ ಸೇತುವೆಯನ್ನು ಹತ್ತಿ ಹೋದ.

ನಡೆದದ್ದನ್ನೆಲ್ಲ ಯೋಚಿಸುತ್ತಾ ಜನ ನಿಂತಿದ್ದರು. ಷಾಂಗ್ ಫೀಗೆ ನಿಜವಾಗಿಯೂ ತಾವು ಸಮನಲ್ಲ ಅಂದುಕೊಂಡರು. ಸೆವೆನ್‌ಪೌಂಡರ್‌ನ ಕತೆ ಇನ್ನು ಮುಗಿದಂತೆಯೇ! ರಾಜಶಾಸನವನ್ನು ಮುರಿದು ಧಿಮಾಕಿನಿಂದ ಆ ಉದ್ದನೆಯ ಪೈಪ್ ಸೇದುತ್ತ,

ಪಟ್ಟಣದಲ್ಲಿ ಸುದ್ದೀನ ಹೇಳಬಾರದಾಗಿತ್ತು. ಆದ್ದರಿಂದ ಅವರೆಲ್ಲರಿಗೂ ಸೆವೆನ್‌ಪೌಂಡರ್‌ಗೆ ಆಗುವ ಶಿಕ್ಷೆಯಿಂದ ಸ್ವಲ್ಪ ಸಂತೋಷವೇ ಆಗಿತ್ತು. ಆ ವಿಷಯವನ್ನು ಚರ್ಚಿಸಬೇಕು ಅನ್ನಿಸಿದರೂ, ಏನು ಮಾತಾಡಬೇಕು ಅನ್ನೋದು ಗೊತ್ತಿರಲಿಲ್ಲ. ಗುಂಯ್ ಗುಡುತ್ತಿದ್ದ ಸೊಳ್ಳೆಗಳು ಅವರ ತೋಳುಗಳನ್ನು ಹಾದು ಹೋದವು. ಅವುಗಳೆಲ್ಲ ಮೇಣದ ಮರದಡಿಯಲ್ಲಿ ಗುಂಪುಗೂಡಿದವು. ಊರಿನವರೆಲ್ಲ ಅಲ್ಲಿಂದ ಚದುರಿ ಹೋಗಿ ತಮ್ಮ ತಮ್ಮ ಮನೆ ಸೇರಿ ನಿದ್ದೆಗೆ ಇಳಿದರು. ಗೊಣಗುಟ್ಟುತ್ತಲೇ ಶ್ರೀಮತಿ ಸೆವೆನ್‌ಪೌಂಡರ್, ಮೇಜಿನ ಮೇಲಿದ್ದ ಪಾತ್ರೆ ಪರಡಿಗಳು, ಮೇಜು, ಸ್ಟೂಲುಗಳನ್ನೆಲ್ಲ ಎತ್ತಿ ಶುಭ್ರ ಮಾಡಿದರು. ಒಳಗೆ ಹೋಗಿ, ಬಾಗಿಲು ಬಿಗಿದು, ನಿದ್ದೆ ಮಾಡಲು ಅಣಿಯಾದಳು. ಸೆವೆನ್‌ಪೌಂಡರ್ ಮುರಿದ ಬಟ್ಟಲನ್ನು ಒಳಗೆ ತೆಗೆದುಕೊಂಡು ಹೋಗಿ ಹೊಸ್ತಿಲ ಮೇಲೆ ಹೊಗೆ ಸೇವಿಸುತ್ತಾ ಕುಳಿತ. ಹೊಗೆ ಸೇದುವುದನ್ನೂ ಮರೆತು ಯೋಚಿಸುತ್ತಿದ್ದ. ಆರಡಿ ಉದ್ದದ ದಂತದ ಮುಖವಿದ್ದ ಬೊಂಬಿನ ಕೊಳವೆಯ ತುದಿಯಲ್ಲಿದ್ದ ದೀಪ ಕಪ್ಪಾಯಿತು. ವಿಷಯ ಬಹಳ ಗಂಭೀರವಾಗಿ ಪರಿಣಮಿಸಿರುವುದು ಸ್ಪಷ್ಟವಾಯಿತು. ಈ ಪರಿಸ್ಥಿತಿಯಿಂದ ತಪ್ಪಿಸಿಕೊಳ್ಳುವ ದಾರಿ ಯಾವುದೆಂದು ಯೋಚಿಸತೊಡಗಿದ. ಆಲೋಚನೆಗಳು ಸುಳಿಯಲ್ಲಿದ್ದವು. ಹೇಗೆ ನೇರ ಮಾಡುವುದೋ ಅವನಿಗೆ ತಿಳಿಯಲಿಲ್ಲ. ಜುಟ್ಟು, ಸರದಿ......ಹದಿನೆಂಟಡಿ ಉದ್ದದ ಭರ್ಜಿ. ಪ್ರತಿಯೊಂದು ತಲೆಮಾರೂ ಹಿಂದಿನ ತಲೆಮಾರಿಗಿಂತ ಹಾಳಾಗಿ ಹೋಗಿದೆ.....ಚಕ್ರವರ್ತಿ ಸಿಂಹಾಸನ ಆರೋಹಣ ಮಾಡಿದ್ದಾರೆ.....ಮುರಿದ ಬಟ್ಟಲನ್ನು ಪಟ್ಟಣಕ್ಕೆ ತೆಗೆದುಕೊಂಡು ಹೋಗಿ ಸರಿ ಮಾಡಿಸಬೇಕು......ಅವನಿಗೆ ಯಾರು ತಾನೇ ಸಮ. ಪುಸ್ತಕದಲ್ಲಿ ಇದನ್ನು ಬರೆದಿದ್ದಾರೆ.....ನೆಗೆದು ಬೀಳಲಿ!"

ಮಾರನೆಯ ದಿನ ಎಂದಿನಂತೆ ದೋಣಿ ತೆಗೆದುಕೊಂಡು ಪಟ್ಟಣಕ್ಕೆ ಹೋದ. ಸಂಜೆ ಹೊತ್ತಿಗೆ ತನ್ನ ಆರಡಿ ಪೈಪನ್ನು ಅನ್ನದ ಬಟ್ಟಲನ್ನು ಪಟ್ಟಣದಲ್ಲಿ ರಿಪೇರಿ ಮಾಡಿಸಿಕೊಂಡು ಬಂದುದನ್ನು ನೈನ್‌ಪೌಂಡರ್‌ಗೆ ತಿಳಿಸಿದ. ಬಿರುಕು ತುಂಬ ದೊಡ್ಡದಾಗಿದ್ದು, ಹದಿನಾರು ಕಡೆ ರಿವೆಟ್ಟುಗಳನ್ನು ಹಾಕಬೇಕಾಗಿ ಬಂದದ್ದರಿಂದ, ಒಟ್ಟು ಒಂದೊಂದಕ್ಕೆ ಮೂರು ನಾಣ್ಯಗಳ ಲೆಕ್ಕದಂತೆ, ನಲ್ವತ್ತೆಂಟು ನಾಣ್ಯಗಳನ್ನು ನೀಡಬೇಕಾಗಿ ಬಂದಿತ್ತು.

ಪ್ರತಿಯೊಂದು ತಲೆಮಾರು ತನ್ನ ಹಿಂದಿನ ತಲೆಮಾರಿಗಿಂತ ಹಾಳಾಗಿ ಹೋಗಿದೆ" ಸಿಡುಕಿನಿಂದ ಹೇಳಿದಳು. ಸಾಕಷ್ಟು ದಿವಸ ಬದುಕಿದ್ದೇನೆ. ಒಂದೊಂದು ಜಾಯಿಂಟ್‌ಗೆ ಮೂರು!.....ನಮ್ಮ ಕಾಲದಲ್ಲಿ ಹೀಗೆ ಇರಲಿಲ್ಲ. ಹಿಂದಿನ ಕಾಲದಲ್ಲಿ,......ನಾನು ಎಪ್ಪತ್ತೊಂಬತ್ತು ವರ್ಷ ಬದುಕಿದ್ದೇನೆ...."

ಸೆವೆನ್ ಪೌಂಡರ್ ದಿನಾ ಪಟ್ಟಣಕ್ಕೆ ಮಾಮೂಲಿನಂತೆ ಹೋಗಿ ಬರುತ್ತಿದ್ದರೂ ಮನೆಯಲ್ಲಿ ಮಾತ್ರ ಮೋಡ ಕವಿದಂತಿತ್ತು. ತುಂಬ ಜನ ಅವನಿಂದ ದೂರ ಇರೋಕೆ

ಪ್ರಯತ್ನಿಸಿದರು. ಪಟ್ಟಣದ ಸುದ್ದಿ ಕೇಳೋಕೆ ಬರುತ್ತಿದ್ದುದನ್ನೂ ನಿಲ್ಲಿಸಿದರು. ಶ್ರೀಮತಿ ಸೆವೆನ್‌ಪೌಂಡರ್ ಯಾವಾಗಲೂ ಕೋಪದಲ್ಲಿಯೇ ಇರುತ್ತಿದ್ದಳು. ಗಂಡನನ್ನು ಜೈಲು ಹಕ್ಕಿ ಎಂದೇ ಕರೆಯುತ್ತಿದ್ದರು.

ಹದಿನೈದು ದಿನ ಕಳೆದ ಮೇಲೆ ಒಂದು ದಿನ ಸೆವೆನ್‌ಪೌಂಡರ್ ಪಟ್ಟಣದಿಂದ ಹಿಂದಿರುಗುವಾಗ, ಶ್ರೀಮತಿ ಸೆವೆನ್‌ಪೌಂಡರ್ ಬಹಳ ಖುಷಿಯಲ್ಲಿದ್ದಂತೆ ಕಾಣಿಸಿದಳು. "ಪಟ್ಟಣದಲ್ಲಿ ಏನಾದರೂ ಸುದ್ದಿ ಕೇಳಿದೆಯಾ?" ಎಂದಳು.

"ಇಲ್ಲ, ಏನೂ ಇಲ್ಲ."

"ಚಕ್ರವರ್ತಿ ಸಿಂಹಾಸನ ಏರಿದ್ದಾನೇನು?"

"ಅವರೇನೂ ಹೇಳಿಲ್ಲ."

"ಪ್ರಾಸ್ಪೆರಿಟಿ ಟ್ಯಾವೆರ್ನ್‌ನಲ್ಲಿದ್ದ ಯಾರೊಬ್ಬರೂ ಏನನ್ನೂ ಹೇಳಲಿಲ್ಲವೇ?"

"ಇಲ್ಲ. ಏನೂ ಹೇಳಿಲ್ಲ."

"ಚಕ್ರವರ್ತಿ ಸಿಂಹಾಸನದ ಮೇಲೆ ಕುಳಿತುಕೊಳ್ಳುತ್ತಾನಂತೆ ಅಂತ ನನಗನಿಸೊಲ್ಲ. ನಾನು ಚಾವೋನ ಹೆಂಡದಂಗಡಿ ಮುಂದಿಂದ ಹಾದು ಹೋದೆ. ಚಾವೋ ಎಂದಿನಂತೆ ಪುಸ್ತಕ ಓದುತ್ತಾ ಕುಳಿತಿದ್ದ. ತನ್ನ ಕೂದಲನ್ನು ಸುರುಳಿ ಸುತ್ತಿ ಮೇಲೆ ಕಟ್ಟಿದ್ದ. ತನ್ನ ಉದ್ದನೆಯ ಅಂಗಿಯನ್ನೂ ಹಾಕಿಕೊಂಡಿರಲಿಲ್ಲ."

"........................"

"ಸಿಂಹಾಸನ ಏರೋದಿಲ್ಲ ಅಂತಾ ನಿನಗೆ ಅನಿಸುತ್ತಾ?"

"ಏರೊಲ್ಲ, ಬಹುಶಃ!"

ಈ ದಿನ ಸೆವೆನ್‌ಪೌಂಡರ್‌ನನ್ನು ಊರಿನ ಜನ, ಹೆಂಡತಿ ಎಲ್ಲರೂ ಮೊದಲಿನಂತೆ ಎಲ್ಲದರ ಬಗ್ಗೆ ದೂರುವುದನ್ನು ಮುಂದುವರೆಸಿದ್ದಾಳೆ. ಸಿಕ್ಸ್ ಪೌಂಡರ್‌ಳ ಎರಡು ಪುಟ್ಟ ಜುಟ್ಟುಗಳು ಜಡೆಗಳಾಗಿ ಹೆಣೆದಿವೆ. ಅವಳ ಕಾಲುಗಳನ್ನು ಸರಿಪಡಿಸಿದ್ದರಾದರೂ, ಸಣ್ಣ ಪುಟ್ಟ ಕೆಲಸಗಳಲ್ಲಿ ತಾಯಿಗೆ ಸಹಾಯ ಮಾಡುತ್ತಾಳೆ. ಹದಿನಾರು ರಿವೆಟ್ಟುಗಳನ್ನು ಹಾಕಿಸಿರುವ ಊಟದ ಬಟ್ಟಲನ್ನು ಹಿಡಿದು ಮಣ್ಣಿನ ಮನೆಯ ತುಂಬಾ ಕುಂಟುತ್ತಾ ಓಡಾಡುತ್ತಾಳೆ.

* * *

ಸುಖೀ ಸಂಸಾರ

"ಒಬ್ಬನಿಗೆ ಹೇಗೆ ಅನ್ನಿಸುತ್ತೋ ಹಾಗೆ ಬರೀತಾನೆ. ಹೀಗೆ ಬರೆದದ್ದು ಅನಂತ ಪ್ರಕಾಶದ ಮೂಲದಿಂದ ಬಂದ ಸೂರ್ಯ ಬೆಳಕಿನಂತೆ; ಯಾವುದೋ ಒಂದು ಕಬ್ಬಿಣದ ತುಂಡಿನ ಅಥವಾ ಕಲ್ಲಿನ ಘರ್ಷಣೆಯಿಂದ ಹೊರಟ ಕಿಡಿಯಿಂದ ಬಂದ ಬೆಳಕಿನಂತಲ್ಲ. ನಿಜವಾದ ಕಲೆಯೆಂದರೆ ಇದೇ. ಇಂತಹ ಬರಹಗಾರನೇ ನಿಜವಾದ ಕಲಾವಿದ.....ಆದರೆ ನಾನು....ನಾನೆಲ್ಲಿ ನಿಲ್ಲುತ್ತೇನೆ?"

–ಹೀಗೆಂದು ಯೋಚಿಸಿದ್ದೇ, ತಕ್ಷಣ ಹಾಸಿಗೆಯಿಂದ ಜಿಗಿದ. ಕುಟುಂಬದ ಪೋಷಣೆಗೆ ಬೇಕಾಗುವ ಹಣವನ್ನು ಈ ರೀತಿ ಬರೆದು ಸಂಪಾದಿಸಬೇಕು ಎನಿಸಿ, ತಾನಾಗಲೇ ಬರೆದಿದ್ದ ಹಸ್ತಪ್ರತಿಯನ್ನು 'ಹ್ಯಾಪಿ ಮಂತ್ಲಿ' ಪ್ರಕಾಶಕರಿಗೆ ಕಳಿಸಲು ನಿರ್ಧರಿಸಿದ. ಇವರು ಸಾಕಷ್ಟು ಸಂಭಾವನೆ ಕೊಡುತ್ತಾರೆ. ಆದರೆ ಆಗ ವಸ್ತುವಿನ ಆಯ್ಕೆಗೆ ಮಿತಿ ಇರುತ್ತದೆ. ಇಲ್ಲವಾದರೆ ಅವರು ಒಪ್ಪಿಕೊಳ್ಳುವುದಿಲ್ಲ. ಇದ್ದರೆ ಇರಲಿ. ವಿಷಯಗಳ ಮಿತಿ ಇದ್ದರೇನಾಯಿತು, ಯುವ ಪೀಳಿಗೆಯ ಮುಂದಿರುವ ಸಮಸ್ಯೆಗಳೇನು? ಸಮಸ್ಯೆಗಳ ಕೊರತೆಯಿರಲಾರದು. ಅಸಂಖ್ಯಾತ ಸಮಸ್ಯೆಗಳಿರಲು ಸಾಧ್ಯ. ಪ್ರೀತಿ, ಮದುವೆ, ಕುಟುಂಬ.....ನಿಜವಾಗಿಯೂ ಜನ ಇಂಥದ್ದನ್ನೆಲ್ಲ ತಲೆಕೆಡಿಸಿಕೊಂಡು ಚರ್ಚಿಸುತ್ತಾರೆ. ಹೀಗಿರುವಾಗ ಸಂಸಾರದ ಅಥವಾ ಕುಟುಂಬದ ಬಗ್ಗೆ ಯಾಕಾಗಬಾರದು? ಆದರೆ ಹೇಗೆ?.....ಅವರು ಒಪ್ಪಿಕೊಳ್ಳುತ್ತಾರೋ ಇಲ್ಲವೋ ಸುಮ್ಮನೆ, ಯಾಕೆ ಆಗೋದಿಲ್ಲ, ಒಪ್ಪಿಕೊಳ್ಳೊಲ್ಲ ಅಂತ ಯೋಚಿಸಬೇಕು? ಆದರೂ......

ಹಾಸಿಗೆಯಿಂದ ಜಿಗಿದು ನಾಲ್ಕೈದು ಹೆಜ್ಜೆಗಳಲ್ಲಿ ತನ್ನ ಡೆಸ್ಕ್ ಬಳಿಗೆ ಹೋಗಿ ಬರೆಯಲು ಕುಳಿತ. ಹಸಿರು ಗೆರೆಗಳಿದ್ದ ಕಾಗದವನ್ನೆಳೆದುಕೊಂಡು, ಸಂಕೋಚದಿಂದಲೇ ಬರೆಯಲು ತೊಡಗಿದ. ಶೀರ್ಷಿಕೆಯನ್ನು 'ಸುಖೀ ಸಂಸಾರ' ಎಂದು ನಮೂದಿಸಿ. ಲೇಖನಿ ತಟಸ್ಥವಾಯಿತು. ತಲೆ ಎತ್ತಿ ಮೇಲೆ ಸೀಲಿಂಗ್ ನೋಡುತ್ತಾ ಸುಖೀ ಸಂಸಾರದ ಪರಿಸರವನ್ನು ಕಲ್ಪಿಸಿಕೊಳ್ಳತೊಡಗಿದ.

"ಪೀಕಿಂಗ್? ಬೇಡ. ಅದು ಸತ್ತು ಹೋಗಿದೆ. ವಾತಾವರಣವೇ ನಿರ್ಜೀವವಾಗಿದೆ. ಎತ್ತರದ ಗೋಡೆ ನಿರ್ಮಿಸಿದರೂ ಕೂಡಾ ಗಾಳಿಯನ್ನು ಈ ಸಂಸಾರದಿಂದ ಬೇರೆಯಾಗಿಸಲು ಸಾಧ್ಯವಿಲ್ಲ. ಅದು ಖಂಡಿತ ಬೇಡ. ಶಿಯಾಂಗ್ ಷು ಮತ್ತು ಚೆಕಿಯಾಂಗ್ ಎಂದಾದರೂ ಹೊಡೆದಾಟಕ್ಕೆ ನಿಂತಾರು, ಫುಕಿಯನ್ ಬಗ್ಗೆ ಆಲೋಚನೆ ಮಾಡೋದೂ ಸಾಧ್ಯವಿಲ್ಲ. ಷಾಂತುಂಗ್ ಅಥವಾ ಹೊನಾನ್ ಯಾಕಾಗಬಾರದು?..... ಎರಡರಲ್ಲಿ ಯಾವುದನ್ನಾದರೂ ಒಂದನ್ನು ಅಪಹರಿಸಿಬಿಡುತ್ತಾರೆ. ಮತ್ತೆ ಸುಖೀ ಸಂಸಾರಕ್ಕೆ ಬದಲಾಗಿ ಅಸುಖೀ ಸಂಸಾರ ಆಗಿಬಿಡುತ್ತೆ. ವಿದೇಶಿಗಳಿಗೆಂದಿರುವ ಷಾಂಗಾಯ್ ಮತ್ತು ಟಿಯೆಂಟ್ಸಿನ್‌ನಲ್ಲಿ ಬಾಡಿಗೆ ದುಬಾರಿ. ಮತ್ತೆಲ್ಲಿಯಾದರೂ ಹೊರದೇಶದಲ್ಲಿ.....?.... ಮೂರ್ಖತನ! ಮುನ್ನಾನ್ ಮತ್ತು ಕ್ವಿಚೌ ಹೇಗಿವೆಯೋ ಗೊತ್ತಿಲ್ಲ. ಆದರೆ ಸಂಪರ್ಕ ವ್ಯವಸ್ಥೆ ಅಷ್ಟು ಚೆನ್ನಾಗಿಲ್ಲ.

ಸರಿಯಾದ ಪ್ರದೇಶವೊಂದನ್ನು ಹುಡುಕಲು ತಲೆಕೆಡಿಸಿಕೊಂಡ. 'ಎ' ಅನ್ನುವ ಅಕ್ಷರದ ಬಗ್ಗೆ ಯೋಚಿಸಿದ– ಇತ್ತೀಚೆಗೆ ವಿದೇಶಿ ಅಕ್ಷರ ಬಳಸುವುದನ್ನು ಜನ ಒಪ್ಪುವುದಿಲ್ಲ. ಪ್ರದೇಶವನ್ನು, ವ್ಯಕ್ತಿಯನ್ನು ಪ್ರತಿನಿಧಿಸಲು ಬಳಸಿದರೆ ಜನ ಆಸಕ್ತಿ ಕಳೆದುಕೊಳ್ಳುತ್ತಾರೆ. ಅದಕ್ಕೇ ಸದ್ಯಕ್ಕೆ ನನ್ನ ಕತೆಯಲ್ಲಿ ಅದನ್ನು ಬಳಸುವುದು ಒಳ್ಳೆಯದಲ್ಲ. ಹಾಗಾದರೆ ಒಳ್ಳೆಯ ಜಾಗ ಯಾವುದು? ಹುನ್ನಾನ್‌ನಲ್ಲಿ ಜಗಳ ನಡೀತಿದೆ. ಡೈರೆನ್‌ನಲ್ಲಿ ಬಾಡಿಗೆ ಜಾಸ್ತಿಯಾಗಿದೆ. ಇನ್ನು ಚಗಾರ್, ಕಿನಿನ್, ಹೀಲಂಗ್, ಕಿಯಾಂಗ್.....? ಅಲ್ಲಿ ಕಳ್ಳಕಾಕರು ಜಾಸ್ತಿಯಾಗಿದ್ದಾರೇಂತ ಕೇಳಿದ್ದೀನಿ......ಹಾಗಾಗಿ ಅದೂ ಬೇಡ. ಮತ್ತೆ ಸ್ಥಳದ ಹೆಸರಿಗಾಗಿ ತಲೆ ಕೆಡಿಸಿಕೊಂಡೂ ಸೋತ. ಕಡೆಗೆ 'ಎ' ಅಕ್ಷರವನ್ನೇ ಸದ್ಯಕ್ಕೆ ಸ್ಥಳ ನಿರ್ದೇಶನಕ್ಕೆ ಇರಲೆಂದು ನಿರ್ಧರಿಸಿದ. ಇಲ್ಲಿಯೇ ಅವನ ಸುಖೀ ಸಂಸಾರವೆಂದು ತೀರ್ಮಾನಿಸಲಾಯಿತು.

ಈ ಸುಖೀ ಸಂಸಾರವಂತೂ 'ಎ' ಎಂಬ ಜಾಗದಲ್ಲಿ ಇರುವುದರಿಂದ ಅನುಮಾನ ಉಳಿಯಲಿಲ್ಲ. ಆ ಸಂಸಾರದಲ್ಲಿ ಗಂಡ, ಹೆಂಡತಿ ಅಥವಾ ಯಜಮಾನ–ಯಜಮಾನಿತಿ. ಅವರಿಬ್ಬರೂ ಪ್ರೀತಿಗಾಗಿ ಮದುವೆಯಾಗಿರುತ್ತಾರೆ. ಅವರ ಮದುವೆಯ ಒಪ್ಪಂದ ನಲವತ್ತು ಷರತ್ತುಗಳ ಮೇಲೆ ನಿಂತಿರುತ್ತದೆ. ಆದ್ದರಿಂದ ಅವರಿಬ್ಬರ ನಡುವೆ ಪೂರ್ತಿಯಾದ ಸಮಾನತೆ, ಸ್ವಾತಂತ್ರ್ಯಗಳಿವೆ. ಇಬ್ಬರೂ ಬಹಳ ವಿದ್ಯಾವಂತರು ಸುಸಂಸ್ಕೃತರು. ಪ್ರತಿಷ್ಠಿತ ಕುಟುಂಬಗಳಿಗೆ ಸೇರಿದವರು. ಜಪಾನಿನಿಂದ ಹಿಂತಿರುಗಿದವರು ಈಗ ಅಷ್ಟು ಫ್ಯಾಷನ್‌ನಲ್ಲಿ ಇಲ್ಲ. ಆದ್ದರಿಂದ ವಿದೇಶದಿಂದ ಹಿಂತಿರುಗಿದ ವಿದ್ಯಾರ್ಥಿಗಳೆಂದಿರಲಿ. ಮನೆಯ ಯಜಮಾನ ಯಾವಾಗಲೂ ಸೂಟಿನಲ್ಲಿರುತ್ತಾನೆ. ಅವನ ಕಾಲರ್ ಬೆಳ್ಳಗಿದೆ. ಅವನ ಹೆಂಡತಿಯ ಕೂದಲು ಗುಬ್ಬಚ್ಚಿ ಗೂಡಿನಂತೆ ಯಾವಾಗಲೂ ಮೇಲೆ ಸುತ್ತಿರುತ್ತದೆ. ಮುತ್ತಿನಂತಹ ಅವಳ ಹಲ್ಲುಗಳು ಯಾವಾಗಲೂ ಹೊರಗೆ ಕಾಣುತ್ತಿರುತ್ತವೆ. ಆದರೆ ಅವಳು ಚೀನೀಯರಂತೆಯೇ ಬಟ್ಟೆ ಧರಿಸಿದ್ದಾಳೆ.....

"ಅದು ಬೇಡ! ಅದು ಬೇಡ!.....ಇಪ್ಪತ್ತೊಂದು ಕ್ಯಾಟೀಸ್! ವ್ಯಕ್ತಿಯೊಬ್ಬರ ಧ್ವನಿ ಕೇಳಿ ಹಿಂತಿರುಗಿ ನೋಡಿದ. ಕಿಟಕಿಗೆ ಇಳಿಬಿಟ್ಟಿದ್ದ ಪರದೆಗಳೊಳಗಿಂದ ಸೂರ್ಯ ಇಣುಕಿದ. ಬೆಳಕು ಕಣ್ಣಿಗೆ ಹೊಡೆಯುತ್ತಿತ್ತು. ಅವನಿಗೆ ಕೇಳಿಸಿದ ಧ್ವನಿ ಸೌದೆ ಹೊರೆಗಳನ್ನು ನೆಲಕ್ಕೆ ಅಪ್ಪಳಿಸಿದಂತಿತ್ತು. "ಪರವಾಗಿಲ್ಲ" ಎಂದು ಮತ್ತೆ ತಿರುಗಿದ. "ಇಪ್ಪತ್ತೈದು ಕ್ಯಾಟೀಸ್....ಯಾವುದರದು? ಅವರು ಸುಸಂಸ್ಕೃತರು. ಕಲೆಗಾಗಿ ಮುಡಿಪಾಗಿರುವವರು. ಒಳ್ಳೆಯ ಪರಿಸರದಲ್ಲಿ ಇಬ್ಬರೂ ಬೆಳೆದವರಾದ್ದರಿಂದ ರಷ್ಯನ್ ಕಾದಂಬರಿಗಳು ಅವರಿಗೆ ಇಷ್ಟವಾಗುವುದಿಲ್ಲ. ಸಾಮಾನ್ಯವಾಗಿ ರಷ್ಯನ್ ಕಾದಂಬರಿಗಳು ಕೆಳವರ್ಗದವರ ಬದುಕನ್ನೇ ಚಿತ್ರಿಸುತ್ತವೆ. ಆದ್ದರಿಂದ ಅಂತಹವು ಅವರ ತಲೆಗೆ ಬರೋದೇ ಇಲ್ಲ. ಹಾಗಿದ್ದ ಮೇಲೆ ಅವರು ಎಂತಹ ಪುಸ್ತಕ ಓದುತ್ತಾರೆ? ಬೈರನ್ ಕಾವ್ಯ......? ಕಿಟ್ಸ್? ಅದೂ ಆಗೊಲ್ಲ. ಅವೆರಡೂ ಸುರಕ್ಷಿತವಲ್ಲ......ಆಹಾ! ಈಗ ಹೊಳೀತು! ಅವರಿಬ್ಬರೂ 'ಆದರ್ಶ ಪತಿ' (An ideal husband) ಎಂಬ ಪುಸ್ತಕವನ್ನು ಓದುತ್ತಾರೆ. ನಾನಂತೂ ಓದಿಲ್ಲ. ಆದರೆ ಯೂನಿವರ್ಸಿಟಿ ಪ್ರೊಫೆಸರುಗಳು ಅದನ್ನು ತುಂಬ ಹೊಗಳ್ತಿರೋದನ್ನು ನೋಡಿದರೆ ಅವರಿಬ್ಬರಿಗೂ ಅದು ಇಷ್ಟವಾಗಬಹುದು. ನೀನು ಓದು, ನಾನು ಓದ್ತೀನಿ.....ಅವರಿಬ್ಬರ ಹತ್ತಿರ ಒಂದೊಂದು ಪ್ರತಿ ಇದೆ.

ಹೊಟ್ಟೆ ಖಾಲಿಯಾದ ಅನುಭವವಾಗುತ್ತಿದ್ದಂತೆ ಪೆನ್ನು ಕೆಳಗಿಟ್ಟು, ಎರಡು ಆಕ್ಸೆಲ್‌ಗಳ ಮೇಲೆ ನಿಂತ ಗ್ಲೋಬಿನಂತೆ, ತನ್ನೆರಡೂ ಕೈಗಳ ಮಧ್ಯೆ ತಲೆ ಎತ್ತಿ ನಿಲ್ಲಿಸಿ ಕುಳಿತ.

"ಇಬ್ಬರೂ ಊಟ ಮಾಡುತ್ತಿದ್ದಾರೆ" ಅವನು ಯೋಚಿಸಿದ.

"ಮೇಜಿನ ಮೇಲೆ ಮಂಜು ಬಿಳುಪಿನ ಬಟ್ಟೆ ಹೊದಿಸಿದೆ. ಅಡಿಗೆಯವನು ಮಾಡಿದ ಅಡಿಗೆ ಪದಾರ್ಥಗಳನ್ನು ತಂದಿರಿಸಿದ. ಅದು ಚೀನೀ ಅಡಿಗೆ. ಇಪ್ಪತ್ತೈದು ಕ್ಯಾಟೀಸ್! ಯಾತರದು?,........ಇರಲಿ ಬಿಡು. ಅದು ಚೀನಿ ಆಹಾರ ಯಾಕಾಗಬೇಕು. ಚೀನೀ ಅಡಿಗೆ ಬಹಳ ಚೆನ್ನಾಗಿರುತ್ತೆ. ಆರೋಗ್ಯವಂತವಾಗಿರುತ್ತೆ. ಶುಭ್ರವಾಗಿರುತ್ತೆ. ರುಚಿಯಾಗಿರುತ್ತೆ ಅಂತ ಪರದೇಶದವರೆಲ್ಲ ಹೇಳ್ತಾರೆ. ಮೊದಲು ತಂದ ಪದಾರ್ಥ ಏನದು?"

"ಸೌದೆ" (ಕ್ಯಾಟೀಸ್)

ಬೆಚ್ಚಿ ಬಿದ್ದು ತಿರುಗಿ ನೋಡಿದ. ತನ್ನ ಕುಟುಂಬದ ಯಜಮಾನಿ ತನಗೆ ಎಡಗಡೆ ನಿಂತು, ದುಃಖ ಪೂರಿತ ಕಣ್ಣುಗಳನ್ನು ಅವನ ಮುಖದ ಮೇಲೆ ಕೀಲಿಸಿದ್ದಳು.

"ಏನಾಗಬೇಕಿತ್ತು?" ತನ್ನ ಕೆಲಸಕ್ಕೆ ಅಡ್ಡಿಯಾದಳೆಂಬ ಕಾರಣಕ್ಕೆ ಸ್ವಲ್ಪ ಸಿಡುಕಿನಿಂದ ಕೇಳಿದ.

"ಸೌದೆಯೆಲ್ಲ ಮುಗಿದು ಹೋಗಿದೆ. ಇವತ್ತು ಇನ್ನೂ ಸ್ವಲ್ಪ ತಂದುಕೊಂಡೆ. ಹೋದ ಸಲ ೧೦ ಸೌದೆ ಹೊರಗೆ ಇನ್ನೂರ ನಲವತ್ತು ನಾಣ್ಯ ಕೊಟ್ಟಿದ್ದೆ. ಆದರೆ ಈ ಸಲ ಇನ್ನೂರ ಅರವತ್ತು ಬೇಕೂಂತ ಕೇಳ್ತಿದ್ದಾನೆ. ನಾನು ಇನ್ನೂರ ಐವತ್ತು ಕೊಡಲೇನು?

"ಸರಿ ಸರಿ. ಇನ್ನೂರ ಐವತ್ತು ಇರಲಿ."

"ಅವನು ತೂಕ ಸರಿಯಾಗಿ ಕೊಟ್ಟಿಲ್ಲ. ಅವನು ಇಪ್ಪತ್ನಾಲ್ಕೂವರೆ ಅಂತಾನೆ. ಆದರೆ ನಾನು ನೋಡಿದರೆ ಇಪ್ಪತ್ಮೂರೂವರೇನೇ ಇದೆ."

"ಸರಿ ಹಾಗಾದರೆ ಇಪ್ಪತ್ಮೂರುವರೇಂತಲೇ ಲೆಕ್ಕ ಹಾಕ್ಕೋ."

"ಓಹ್. ಐದೈದ್ಲಿ ಇಪ್ಪತ್ತೈದು. ಐದ್ಮೂರ್ಲಿ ಹದಿನೈದು......."

ಅವನಿಗೆ ಮುಂದೆ ಬರೆಯೋಕೇ ಆಗ್ಲಿಲ್ಲ. ಒಂದೆರಡು ನಿಮಿಷ ಸುಮ್ಮನಿದ್ದು, ಮತ್ತೆ ಪೆನ್ನನ್ನು ಕೈಗೆತ್ತಿಕೊಂಡು ತಾನು ಬರೆಯುತ್ತಿದ್ದ ಕಾಗದ ಮೇಲೆ ಲೆಕ್ಕಾಚಾರ ಹಾಕ ತೊಡಗಿದ. "ಸುಖೀ ಸಂಸಾರ" ಅದನ್ನು ಸ್ವಲ್ಪ ಮುಂದುವರೆಸಿ, ತಲೆ ಎತ್ತಿ.

"ಐನೂರ ಎಂಬತ್ತು ನಗದು."

"ಹಾಗಿದ್ದ ಮೇಲೆ ನನ್ನ ಹತ್ತಿರ ಅಷ್ಟೊಂದು ಹಣ ಇಲ್ಲ. ಇನ್ನೂ ಎಂಬತ್ತೋ ತೊಂಬತ್ತೋ ಕಡಿಮೆ ಬೀಳುತ್ತೆ....."

ತನ್ನ ಮೇಜಿನ ಡ್ರಾಯರ್ ಎಳೆದು ಅದರಲ್ಲಿದ್ದ ಹಣವನ್ನೆಲ್ಲ ಹೊರತೆಗೆದ. ಇಪ್ಪತ್ತೋ ಮೂವತ್ತೋ ತಾಮ್ರದ ನಾಣ್ಯಗಳಿದ್ದವು. ಅವುಗಳನ್ನು ಅವಳು ಚಾಚಿದ್ದ ಕೈಗಳಲ್ಲಿರಿಸಿದ. ಅವಳು ಹೋಗುವುದನ್ನು ಗಮನಿಸಿದ. ನಂತರ ಡೆಸ್ಕಿನ ಕೆಲಸಕ್ಕೆ ಮರಳಿದ. ತನ್ನ ತಲೆ ತೀಕ್ಷ್ಣವಾದ ಸೌದೆ ಕಂತುಗಳಿಂದ ತುಂಬಿ ಸ್ಫೋಟಿಸುವಂತೆನಿಸುತ್ತಿತ್ತು. ಐದೈದ್ಲಿ ಇಪ್ಪತ್ತೈದು....... ಚಲ್ಲಾಪಿಲ್ಲಿಯಾಗಿದ್ದ ಈ ಅರೇಬಿಕ್ ಅಂಕಿಗಳೇ ಅವನ ತಲೆಯಲ್ಲಿ ಅಚ್ಚೊತ್ತಿದ್ದವು. ಒಂದು ಧೀರ್ಘವಾದ ಉಸಿರೆಳೆದುಕೊಂಡು ಮತ್ತೆ ಉಸಿರು ಬಿಟ್ಟ. ಹೀಗೆ ಮಾಡುವುದರಿಂದ ಐದೈದ್ಲಿ ಇಪ್ಪತ್ತೈದು ಸೌದೆ. ಅರೇಬಿಕ್ ಅಂಕಿಗಳು – ಇವೆಲ್ಲವನ್ನು ಹೊರಗೆ ಹಾಕಬಹುದೆಂದುಕೊಂಡ. ನಿಜವಾಗಿಯೂ ಅವನು ಊಹಿಸಿದಂತೆ ಈಗ ಅವನಿಗೆ ಸ್ವಲ್ಪ ಹಗುರವೆನಿಸಿತು. ಮತ್ತೆ ಕತೆಯನ್ನು ಕಲ್ಪಿಸತೊಡಗಿದ.

"ಏನಡಿಗೆ?" ಏನಾದರೂ ಸರಿ. ಮಾಮೂಲಿಗಿಂತ ಬೇರೆಯಾಗಿದ್ದರೆ ಸರಿ. ಹುರಿದ ಹಂದಿ ಮಾಂಸ ಅಥವಾ ಸೀಗಡಿ (ಬಸವನ ಹುಳದ ರೀತಿಯದು) ಅಂತೂ ಮಾಮೂಲಿ. ಅವರು ಡ್ರ್ಯಾಗನ್ ಮತ್ತು ಟೈಗರ್ ತಿನ್ನುತ್ತಿರುವಂತಿರಬೇಕು. ಆದರೆ ವಾಸ್ತವವಾಗಿ ಅದೆಂಥದ್ದು? ಕೆಲವರು ಹೇಳ್ತಾರೆ ಅದನ್ನು ಹಾವು ಮತ್ತು ಬೆಕ್ಕುಗಳಿಂದ ಮಾಡಿರುತ್ತಾರೆ ಅಂತ. ಅದು ಮೇಲು ವರ್ಗದ ಜನರ ತಿಂಡಿಯಂತೆ. ಜೋರಾಗಿ ದುಡ್ಡು ಗಿಟ್ಟು ಮಾಡಿದಾಗ ಅದನ್ನು ಮಾಡ್ತಾರಂತೆ. ಕಿಯಾಂಗ್‌ಸು ರೆಸ್ಟೋರೆಂಟ್‌ನಲ್ಲಿ

ಮೆನು ಕಾರ್ಡಿನಲ್ಲಿ ಅದರ ಹೆಸರು ಬರೆದಿರುವುದನ್ನು ನೋಡಿದ್ದೇವೆ. ಆದರೆ ಕಿಯಾಂಗ್‌ಸು ಜನ ಹಾವು ಮತ್ತು ಬೆಕ್ಕುಗಳನ್ನು ತಿನ್ನಬಾರದಂತೆ. ಆದ್ದರಿಂದ ಕೆಲವರು ಹೇಳುವ ಹಾಗೆ ಎಲ್ಲೋ ಅದನ್ನು ಕಪ್ಪೆಗಳು ಮತ್ತು ಹಾವು ಮೀನುಗಳಿಂದ ಮಾಡಿರಬೇಕು. ಈಗ ಹಾಗಾದರೆ ಈ ದಂಪತಿಗಳು ದೇಶದ ಯಾವ ಭಾಗದಿಂದ ಬಂದಿರಬೇಕು? ಪರವಾಗಿಲ್ಲ ಜನ ಯಾವ ಭಾಗದಿಂದ ಬಂದಿದ್ದರೆ ತಾನೇ ಏನು. ಹಾವು ಬೆಕ್ಕಿನಿಂದ ಅಥವಾ ಕಪ್ಪೆ ಮತ್ತು ಹಾವು ಮೀನಿನಿಂದ ಮಾಡಿರುವ ಪದಾರ್ಥ ತಿಂದೇ ತಿಂತಾರೆ. ಅದೂ ತಮ್ಮ ಸುಖೀ ಸಂಸಾರಕ್ಕೆ ತೊಂದರೆ ಆಗದಂತೆ! ಏನಾದರಾಗಲಿ ಮೊದಲು ಬರುವ ಪದಾರ್ಥ ಡ್ರ್ಯಾಗನ್ ಮತ್ತು ಟೈಗರ್ ಇನ್ನು ಇದರ ಬಗ್ಗೆ ಎರಡಿಲ್ಲ.

"ಈಗ ಈ ಡ್ರ್ಯಾಗನ್ ಮತ್ತು ಟೈಗರ್ ಅನ್ನೋ ತಿಂಡಿ ಪದಾರ್ಥಾನ ಮೇಜಿನ ಮಧ್ಯದಲ್ಲಿ ಇರಿಸಿದೆ. ಇಬ್ಬರೂ ಒಂದೇ ಸಮಯಕ್ಕೆ ಊಟದ ಕಡ್ಡಿಗಳನ್ನು (ಚಾಪ್‌ಸ್ಟಿಕ್ಸ್) ತೆಗೆದುಕೊಂಡು ತಿಂಡಿ ಪದಾರ್ಥದ ಕಡೆಗೆ ತಿರುಗಿಸಿ, ಪರಸ್ಪರ ಹಿತವಾಗಿ ನಗುತ್ತಾರೆ. ಮತ್ತು ಫ್ರೆಂಚ್ ಭಾಷೆಯಲ್ಲಿ ಮಾತನಾಡುತ್ತಾರೆ.

"ಷೆರಿ, ಸಿಲ್‌ವು ಪ್ಲೇ! (ಪ್ರಿಯೆ ದಯವಿಟ್ಟು!)"

"ವು ಲೆ ವು ಕಮಾನ್ಸ್, ಷೆರಿ! (ಪ್ರಿಯ ನೀವು ಮೊದಲು ಪ್ರಾರಂಭಿಸಿ)"

"ಮೈ ನ, ಅಪ್ರೆ ವು! (ನಾನಲ್ಲ, ನೀನು ಮೊದಲು)"

"ಆಗ ಅವರಿಬ್ಬರೂ ಒಟ್ಟಿಗೆ ಚಾಪ್ ಸ್ಟಿಕ್‌ಗಳಿಂದ ಒಂದು ತುಂಡು ಹಾವನ್ನು....ಇಲ್ಲ! ಇಲ್ಲ! ಹಾವಿನ ಮಾಂಸವನ್ನು (ಅಂದರೆ ಒಂದು ಥರಾ ವಿಚಿತ್ರವಾಗಿ ಕಾಣುತ್ತೆ. ಅದಕ್ಕಿಂತ ಒಂದು ತುಂಡು ಮೀನನ್ನು ತೆಗೆದುಕೊಂಡರು ಎಂದರೇನೇ ಸರಿ. ಒಟ್ನಲ್ಲಿ ಡ್ರ್ಯಾಗನ್ ಮತ್ತು ಟೈಗರ್ ಅನ್ನೋ ತಿಂಡೀನ ಕಪ್ಪೆ ಮತ್ತು ಮೀನುಗಳಿಂದ ಮಾಡಿದ್ದು ಅನ್ನೋದು ಸ್ಪಷ್ಟವಾಯಿತು. ಇಬ್ಬರೂ ಒಂದೇ ಅಳತೆಯ ತುಂಡುಗಳನ್ನು ಒಂದೇ ಸಲಕ್ಕೆ ತೆಗೆದುಕೊಳ್ಳುತ್ತಾರೆ. ಐದೈದ್ಲಿ ಇಪ್ಪತ್ತೈದು, ಮೂರೈದ್ಲಿ ಹದಿನೈದು........ಪರವಾಗಿಲ್ಲ. ಒಂದೇ ಸಮಯಕ್ಕೆ ಇಬ್ಬರೂ ಅದನ್ನು ಬಾಯಿಗಿರಿಸಿಕೊಳ್ಳುತ್ತಾರೆ....." ತನ್ನ ಮನಸ್ಸಿಗೆ ವಿರುದ್ಧವಾಗಿ ಹಿಂದೆ ತಿರುಗಿ ನೋಡಬೇಕೆನಿಸಿತು. ಹೋಗುವ ಬರುವ ಸದ್ದುಗಳಿಂದ ಸಾಕಷ್ಟು ರೋಮಾಂಚನದ ಸಾಧ್ಯತೆ ಇತ್ತು. ಆದರೆ ತನ್ನನ್ನು ತಡೆದುಕೊಂಡು ಆಲೋಚನೆಗಳ ಬೆನ್ನಿಗೆ ಬಿದ್ದ.

"ಅತಿ ಭಾವುಕತೆಯಾಗಿ ಕಾಣಿಸುತ್ತೆ ಇದು. ಯಾವ ಕುಟುಂಬದಲ್ಲಿಯೂ ಹೀಗಿರುವುದಿಲ್ಲ. ನನಗ್ಯಾಕೆ ಇಂಥ ಆಲೋಚನೆಗಳು? ಇಂಥ ಒಳ್ಳೆ ವಿಷಯವನ್ನು ಬಹುಶಃ ನನಗೆ ಬರೆಯುವುದಕ್ಕೆ ಆಗುವುದಿಲ್ಲವೇನೋ.............ಇಲ್ಲ ಅವರು ವಿದೇಶದಿಂದ ಹಿಂತಿರುಗಿದ ವಿದ್ಯಾರ್ಥಿಗಳಾಗಿರಬೇಕಿಲ್ಲ. ಚೀನಾದಲ್ಲಿಯೇ ಓದಿದವರೂ

ಕೂಡಾ ಹೀಗೆ ಇರಬಹುದಲ್ಲ. ಇಬ್ಬರೂ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು, ಪ್ರತಿಷ್ಠಿತರು, ಸುಸಂಸ್ಕೃತರು.....ಆತ ಬರಹಗಾರ, ಹೆಂಡತಿಯೂ ಬರಹಗಾರ್ತಿ. ಇಲ್ಲವೇ ಸಾಹಿತ್ಯ ಪ್ರೇಮಿ. ಅದೂ ಅಲ್ಲಾಂದ್ರೆ ಆಕೆ ಕವಯಿತ್ರಿ. ಆತ ಕಾವ್ಯ ಪ್ರೇಮಿ. ಸ್ತ್ರೀತನವನ್ನು ಗೌರವಿಸುವವನು.....ಇಲ್ಲವಾದಲ್ಲಿ....."

ಕಡೆಗೆ ಅವನಿಗೆ ತಡೆದುಕೊಳ್ಳಲಾಗಲಿಲ್ಲ. ತಿರುಗಿದ. ತನ್ನ ಹಿಂದಿದ್ದ ಪುಸ್ತಕ ಬೀರುವಿನ ಪಕ್ಕದಲ್ಲಿ ಕೋಸಿನ ರಾಶಿ ಇತ್ತು. ಮೂರು ಕೆಳಗೆ ಎರಡು ಮಧ್ಯೆ ಮತ್ತೆ ಮೇಲೆ ಒಂದು. ಇಂಗ್ಲೀಷ್ ಅಕ್ಷರವಾದನ 'A' ನಂತೆ ಕಾಣುತ್ತಿತ್ತು.

"ಓಹ್!" ಬೆಚ್ಚಿದ. ನಿಟ್ಟುಸಿರಿಟ್ಟ. ಕೆನ್ನೆಗಳಲ್ಲಿ ಉರಿ ಕಾಣಿಸಿತು. ಬೆನ್ನ ಹುರಿಯಲ್ಲಿ ಚಳಕ್ ಎಂದಿತು. ಆಹ್! ಎಂದು ನೋವನ್ನು ಇಳಿಸಿಕೊಳ್ಳುವುದಕ್ಕಾಗಿ ನೀಳವಾದ ಉಸಿರು ತೆಗೆದುಕೊಂಡ. ಮತ್ತೆ ಆಲೋಚನೆಯಲ್ಲಿ ತೊಡಗಿದ. "ಸುಖೀ ಸಂಸಾರದಲ್ಲಿ ಸಾಕಷ್ಟು ಕೋಣೆಗಳಿರಬೇಕು. ಒಂದು ಸ್ಟೋರ್ ರೂಂ. ಅಲ್ಲಿ ಹೀಗೆ ಕೋಸುಗಳನ್ನು ಪೇರಿಸಿಡಬಹುದು. ಯಜಮಾನನ ಸ್ಟಡಿ ರೂಂ (ಓದುವ ಕೋಣೆ) ಪ್ರತ್ಯೇಕವಾಗಿರಬೇಕು. ಗೋಡೆಗಳಲ್ಲಿ ಪುಸ್ತಕದ ಕಪಾಟುಗಳಿರಬೇಕು. ಅವುಗಳಲ್ಲಿ ಚೀನೀ ಪುಸ್ತಕಗಳು, ಇಂಗ್ಲೀಷ್ ಪುಸ್ತಕಗಳು, 'An idial husband' ಪುಸ್ತಕದ ಎರಡೂ ಪ್ರತಿಗಳೂ ಸೇರಿದಂತೆ ತುಂಬಿರಬೇಕು. ಪ್ರತ್ಯೇಕವಾದ ಬೆಡ್‌ರೂಂ, ಕಂಚಿನ ಮಂಚ ಇಲ್ಲವೆ ಸುಮಾರಾಗಿರುವ ಎಲ್ಮ್ ಮರದ ಹಾಸಿಗೆ, ಅದೂ ನಂ.೧, ಸೆರೆಮನೆಯಲ್ಲಿ ಕೈದಿಗಳು ಮಾಡಿರುವಂಥಾದ್ದು. ಯಾಕೆಂದರೆ ಅವು ಸಾಕಷ್ಟು ಚೆನ್ನಾಗಿರುತ್ತವೆ. ಹಾಸಿಗೆ ಕೆಳಗೂ ಶುಭ್ರವಾಗಿರುತ್ತವೆ...." ತನ್ನ ಹಾಸಿಗೆ ಕೆಳಗೆ ನೋಡಿದ. ಸೌದೆ ಎಲ್ಲ ಖರ್ಚಾಗಿ ಬಿಟ್ಟಿತ್ತು. ಏನಿದ್ದರೂ ಹಗ್ಗದ ಒಂದು ತುಂಡು ಮಾತ್ರವೇ ಇತ್ತು. ಸತ್ತ ಹಾವಿನಂತೆ ಸುರುಳಿ ಸುತ್ತಿಕೊಂಡು ಬಿದ್ದಿತ್ತು.

"ಇಪ್ಪತ್ತೂರೂವರೆ ಸೌದೆ ಹೊರೆಗಳು....." ತನ್ನ ಹಾಸಿಗೆ ಕೆಳಗೆ ಸೌದೆಗಳು ಒಂದೇ ಸಮನೆ ಧಾರೆಯಾಗಿ ಬೀಳುತ್ತಿರುವಂತೆ ಭಾಸವಾಯಿತು. ಮತ್ತೆ ತಲೆಯಲ್ಲಿ ನೋವು ಕಾಣಿಸಿತು. ಎದ್ದು ಬಾಗಿಲು ಮುಚ್ಚಬೇಕೆಂದು ಹೊರಟ. ಇನ್ನೇನು ಮುಚ್ಚಬೇಕು ಎಂದುಕೊಳ್ಳುತ್ತಿರುವಲ್ಲಿ, ಯಾಕೋ ಅದು ಸರಿ ಎನಿಸಿಲ್ಲವಾಗಿ ಹಾಗೆಯೇ ಬಿಟ್ಟ. ಆದರೆ ಬಾಗಿಲಿಗಿದ್ದ ಪರದೆಯನ್ನು ಇಳಿಬಿಟ್ಟ. ಅದು ದಪ್ಪನಾಗಿ ಧೂಳಿನಿಂದ ತುಂಬಿತ್ತು. ಹಾಗೆಯೇ ಯೋಚಿಸಿದ. ಈ ರೀತಿ ಮಾಡುವುದರಿಂದ ಬಾಗಿಲು ಮುಚ್ಚುವುದರಿಂದ ಆಗುವ ತೊಂದರೆ ಅಥವಾ ಬಾಗಿಲು ತೆರೆದಿರಿಸಿದರೆ ಆಗುವ ಮುಜುಗರ ಎರಡರಿಂದಲೂ ಪಾರಾಗಬಹುದೆನಿಸಿತು. ಜೊತೆಗೆ ಕನ್ಫೂಸಿಯಸ್‌ನ (Doctrine of the mean) ಸರಳ, ಸಾಮಾನ್ಯ ಸಿದ್ಧಾಂತ ಅನ್ವಯಿಸಿಕೊಂಡಂತೆಯೂ ಆಗುತ್ತದೆ.

"ಹಾಗಾಗಿ ಯಜಮಾನನ ಅಧ್ಯಯನದ ಕೋಣೆಯ ಬಾಗಿಲು ಯಾವಾಗಲೂ ಮುಚ್ಚಿರುತ್ತದೆ." ಮರಳಿ ಹೋಗಿ ತನ್ನ ಜಾಗದಲ್ಲಿ ಕುಳಿತು ಯೋಚಿಸಿದ. "ಯಾರಿಗೇ ಆಗಲಿ ಏನಾದರೂ ಕೆಲಸವಿದ್ದರೆ, ಬಾಗಿಲು ತಟ್ಟಿ, ಅಪ್ಪಣೆ ಪಡೆದು ಒಳಗೆ ಬರಬೇಕು.

ಹೀಗಂತೂ ಮಾಡಲೇಬೇಕಾಗುತ್ತದೆ. ಒಂದು ವೇಳೆ ಆತನ ಸಾಹಿತ್ಯದ ಬಗ್ಗೆ ಚರ್ಚೆ ಮಾಡಬೇಕೆಂದುಕೊಂಡರೆ, ಆಕೆಯೂ ಬಾಗಿಲು ಸದ್ದು ಮಾಡಬೇಕು. ಆದರೆ ಕ್ಯಾಬೇಜ್ (ಕೋಸು) ತರುತ್ತಾಳೇಂತ ಭಾವಿಸುವುದು ಮಾತ್ರ ಬೇಡ.

"ಡಿಯರ್, ದಯವಿಟ್ಟು ಒಳಗೆ ಬಾ."

"ಯಜಮಾನನಿಗೆ ಸಾಹಿತ್ಯ ಚರ್ಚೆ ಮಾಡೋಕೆ ಪುರುಸೊತ್ತು ಇಲ್ಲದಿದ್ದರೆ ಏನು ಮಾಡುವುದು? ಹೊರಗೆ ನಿಂತು ಬಾಗಿಲ ಮೇಲೆ ಮೆಲ್ಲಗೆ ಸದ್ದು ಮಾಡುತ್ತಿದ್ದರೆ, ಆತ ಅದನ್ನು ನಿರ್ಲಕ್ಷಿಸುವನೇನು? ಅದು ಸರಿ ಹೋಗೊಲ್ಲ. 'An ideal husband) ಎಂಬ ಕಾದಂಬರಿಯಲ್ಲಿ ಇದನ್ನೆಲ್ಲ ಹೇಳಿರಬೇಕು. ಅದಕ್ಕೇ ಅದೊಂದು ಅದ್ಭುತವಾದ ಕಾದಂಬರಿ. ಇದಕ್ಕೇನಾದರೂ ಸಂಭಾವನೆ ಸಿಕ್ಕರೆ ನಾನು ಆ ಕಾದಂಬರೀನ ಕೊಳ್ಳಲೇಬೇಕು!"

'ದಬ್ ಹೊಡೆದ ಸದ್ದು!' ನೆಟ್ಟಗೆ ಕುಳಿತ. ಅವನಿಗೆ ಗೊತ್ತಾಯಿತು. ಇದು ತನ್ನ ಹೆಂಡತಿ ಮೂರು ವರ್ಷದ ತನ್ನ ಮಗಳ ತಲೆಯನ್ನು ದಟ್ಟಿಸಿದ್ದಾಳೆ ಎಂದು.

"ಸುಖೀ ಸಂಸಾರದಲ್ಲಿ......" ಇನ್ನೂ ಅವನ ಬೆನ್ನು ಸೆಡೆತಿತ್ತು. ಮಗಳು ಬಿಕ್ಕುವುದನ್ನು ಕೇಳಿಸಿಕೊಂಡ. "ತಡವಾಗಿ ಮಕ್ಕಳಾದರು. ಹೌದು, ತಡವಾಗಿ ಆದರು.........ಬೇಡ. ಇದಕ್ಕಿಂತ ಮಕ್ಕಳೇ ಇರೋದು ಬೇಡ. ಯಾವುದೇ ಬೇರೆ ನಂಟುಗಳಿಲ್ಲದೆ, ಕೇವಲ ಇಬ್ಬರೇ ಇಬ್ಬರು!...... ಇನ್ನೂ ಹೇಳುವುದೇ ಆದರೆ ಹೋಟೆಲಿನಲ್ಲಿ ಇರೋದೇ ವಾಸಿ. ಯಾಕೇಂದ್ರೆ ಎಲ್ಲಾ ಅವರೇ ನೋಡಿಕೊಳ್ತಾರೆ. ಯಾರೂ ಇಲ್ಲದೆ ಒಬ್ಬರೇ....." ಬಿಕ್ಕುವುದು ಇನ್ನೂ ಕೇಳಿಸುತ್ತಲೇ ಇತ್ತು. ನಿಂತುಕೊಂಡು ಪರದೆ ಸರಿಸಿದ, ಯೋಚನೆಗೆ ತೊಡಗಿದ......." ಕಾರ್ಲ್ ಮಾರ್ಕ್ಸ್ ತನ್ನ ದಾಸ್ ಕ್ಯಾಪಿಟಲ್ ಅನ್ನು ಬರೆದದ್ದು, ಅವನ ಸುತ್ತ ಮಕ್ಕಳು ಅಳುತ್ತಿದ್ದಾಗಲೇ! ಆತ ನಿಜವಾಗಿಯೂ ದೊಡ್ಡ ವ್ಯಕ್ತಿಯೇ ಆಗಿರಬೇಕು....." ಹೊರಗೆ ನಡೆದ. ಹೊರಗಿದ್ದ ಬಾಗಿಲನ್ನು ತೆಗೆದ. ಪ್ಯಾರಾಫಿನ್‌ನ ವಾಸನೆಯ ಘಾಟು ಮೂಗಿಗೆ ತಗುಲಿತು. ಮಗು ಬಾಗಿಲಿನ ಬಲ ಭಾಗದಲ್ಲಿ ಮುಖ ಕೆಳಗೆ ಮಾಡಿಕೊಂಡು ಬಿದ್ದಿತ್ತು. ಅವನನ್ನು ನೋಡಿದ ಕೂಡಲೇ ಜೋರಾಗಿ ಅಳಲು ಆರಂಭಿಸಿದಳು.

"ನೋಡು, ನೋಡು, ಆಯ್ತು! ಇನ್ನು ಅಳಬೇಡ. ಒಳ್ಳೆ ಹುಡುಗಿ ಅಲ್ವಾ!" ಅವಳನ್ನು ಎತ್ತಿಕೊಳ್ಳಲು ಬಾಗಿದ. ಎತ್ತಿಕೊಂಡ ಮೇಲೆ ತಿರುಗಿ ನೋಡಿದರೆ, ಬಾಗಿಲಿನ ಎಡಕ್ಕೆ ಹೆಂಡತಿ ಕೋಪದಿಂದ ನಿಂತಿರುವುದು ಕಾಣಿಸಿತು. ಬೆನ್ನು ಸೆಟೆಸಿ, ಕೈಗಳನ್ನು ಸೊಂಟದ ಮೇಲಿರಿಸಿಕೊಂಡು ಕಸರತ್ತು ಮಾಡುವ ಭಂಗಿಯಲ್ಲಿ ನಿಂತಿದ್ದಳು.

"ನನ್ನನ್ನು ಲೇವಡಿ ಮಾಡೋಕೆ ನೀನೂ ಬರಬೇಕಾಯ್ತಾ? ನೀನು ಸಹಾಯಾನೂ ಮಾಡೊಲ್ಲ. ಜೊತೆಗೆ ಹೀಗೆ ಹಿಂಸೆ ಕೊಡ್ತೀಯ.....ಪ್ಯಾರಾಫಿನ್ ದೀಪಾನೂ ಆರಿಹೋಯ್ತು. ಸಂಜೆಗೆ ಹೇಗೆ ದೀಪ ಹಚ್ಚೋದು?"

"ನೋಡು, ನೋಡು ಮರಿ ಅಳಬಾರದು!" ಕೋಪದಿಂದ ಕಂಪಿಸುವ ದನಿಯಲ್ಲಿ ಹೆಂಡತಿ ಹೇಳುತ್ತಿದ್ದರೂ ಅದರ ಕಡೆ ಲಕ್ಷ್ಯವಿಲ್ಲದೆ ಮಗುವನ್ನು ಎತ್ತಿಕೊಂಡು ಮನೆಯ ಒಳಗಡೆ ಹೋದ. ಮೆಲ್ಲಗೆ ನೇವರಿಸಿ, "ನನ್ನ ಜಾಣ ಮರಿ: ಎಂದು ಮತ್ತೆ ಹೇಳಿದ. ಅವಳನ್ನು ಕೆಳಗಿಳಿಸಿ ಒಂದು ಕುರ್ಚಿ ಎಳೆದುಕೊಂಡು ಕುಳಿತ. ತನ್ನೆರಡು ಕಾಲುಗಳ ಮಧ್ಯೆ ಅವಳನ್ನು ನಿಲ್ಲಿಸಿಕೊಂಡು ಕೈಯೆತ್ತಿ ಹೇಳಿದ, "ನೋಡು ಆಳಬಾರದು, ಮರಿ. ನೀ ಒಳ್ಳೆ ಹುಡುಗಿ ಅಲ್ವಾ? ಬೆಕ್ಕೇ, ನಮ್ಮಪ್ಪ ನಿನಗೆ ಸ್ನಾನ ಮಾಡಿಸ್ತಾರೆ." ಅದೇ ಸಮಯಕ್ಕೆ ಅವನು ತನ್ನ ಅಂಗೈಗಳನ್ನು ದೂರದಿಂದಲೇ ನೆಕ್ಕಿ ತನ್ನ ಮುಖದ ಸುತ್ತ ವೃತ್ತಾಕಾರವಾಗಿ ಕೈಯಾಡಿಸಿದ.

"ಆಹಾ! ಬೆಕ್ಕು!" ಅವಳು ನಗುವುದಕ್ಕೆ ಆರಂಭಿಸಿದಳು.

"ಅದು ಸರಿ, ಅದು ಸರಿ. ಬೆಕ್ಕು" ಇನ್ನೂ ಕೆಲವು ಸಲ ಅಂಗೈಗಳಿಂದ ವೃತ್ತಗಳನ್ನು ಮಾಡಿದ. ನಂತರ ಅವಳು ತನ್ನತ್ತ ನೋಡಿ ನಗುತ್ತಿದ್ದುದ್ದನ್ನು ಗಮನಿಸಿ ನಿಲ್ಲಿಸಿದ. ಇನ್ನೂ ಅವಳ ಕಣ್ಣಲ್ಲಿ ನೀರಿತ್ತು. ಅವಳನ್ನು ನೋಡಿದಾಗ ಅವನ ಹೆಂಡತಿ, ಐದು ವರ್ಷಗಳ ಹಿಂದೆ ಹೀಗೇ ಮುದ್ದಾಗಿ, ಮುಗ್ಧವಾಗಿ ಇದ್ದುದನ್ನು ನೆನಪಿಸಿಕೊಂಡ. ಥೇಟ್ ಇದೇ ಥರ. ಹೊಳೆವ ಕೆಂದುಟಿಗಳು. ಆಕಾರ ಚಿಕ್ಕದಾಗಿತ್ತು ಅಷ್ಟೇ. ಅದೊಂದು ಚಳಿಗಾಲದ ದಿನ. ತಾನು ಅವಳಿಗಾಗಿ ಎಲ್ಲ ತೊಂದರೆಗಳನ್ನು ಸಹಿಸಿಕೊಂಡು ಅವಳಿಗಾಗಿ ಏನನ್ನಾದರೂ ತ್ಯಾಗ ಮಾಡುತ್ತೇನೆಂದು ಹೇಳಿದಾಗ, ಅವಳೂ ಇದೇ ರೀತಿಯಲ್ಲಿ ಕಣ್ಣಲ್ಲಿ ನೀರು ತುಂಬಿಕೊಂಡು, ಮುಗುಳು ನಗುತ್ತಲೇ ತನ್ನತ್ತ ನೋಡಿದ್ದಳು. ಅವನು ಸ್ವಲ್ಪ ಕುಡಿದವನಂತೆ ತಡವರಿಸುತ್ತಾ ಕುಳಿತ.

"ಎಂಥ ಸುಂದರ ತುಟಿಗಳು" – ಯೋಚಿಸಿದ.

ಬಾಗಿಲಿನ ಪರದೆಯನ್ನು ಮತ್ತೆ ಇಳಿಸಿ, ಸೌದೆಯನ್ನು ತರಲಾಯಿತು. ಮತ್ತೆ ಎಚ್ಚೆತ್ತುಕೊಂಡು ಮಗುವಿನತ್ತ ನೋಡಿದ. ಮಗುವಿನ ಕಣ್ಣಲ್ಲಿ ಇನ್ನೂ ನೀರಿತ್ತು. ಹೊಳೆವ ತುಟಿಗಳ ಆ ಮಗು ಅವನನ್ನೇ ದಿಟ್ಟಿಸುತ್ತಿತ್ತು. "ತುಟಿಗಳು" ಸೌದೆಯನ್ನು ತಂದಿದ್ದ ಕಡೆ ನೋಡಿದ.......ಸರಿ ಐದ್ಯೆದಲಿ ಇಪ್ಪತ್ತೈದು......ಒಂಬತ್ತೊಂಬತ್ಲಿ ಎಂಬತ್ತೊಂದು.......ಅಷ್ಟೇ ಅಲ್ದೆ ಇನ್ನೇನಿದ್ದೀತು!.....ನಿರಾಶೆಯಿಂದ ಕೂಡಿದ ಎರಡು ಕಣ್ಣುಗಳು....." ಯೋಚಿಸುತ್ತಲೇ, ಹಸಿರು ಗೆರೆಗಳಿಂದ ಕೂಡಿದ ಕಾಗದವನ್ನು ಎಳೆದುಕೊಂಡು ಉಂಡೆ ಮಾಡಿದ, ಮತ್ತೆ ಬಿಡಿಸಿದ. ನಂತರ ಅದರಲ್ಲಿ ಮಗುವಿನ ಕಣ್ಣು ಮೂಗು ಒರೆಸಿದ.

"ಜಾಣ ಮರಿ, ಹೋಗಿ ನಿನ್ನ ಪಾಡಿಗೆ ನೀನು ಆಡ್ಕೋ." ಅವಳನ್ನು ಕಳಿಸಿ ಕೊಡುತ್ತಲೇ ಕಾಗದವನ್ನು ಉಂಡೆ ಮಾಡಿ ಕಸದ ಬುಟ್ಟಿಗೆ ಎಸೆದ.

ಇದ್ದಕ್ಕಿದ್ದಂತೆ ಅವನಿಗೆ ಮಗುವಿನ ಬಗ್ಗೆ ಪಾಪ! ಎನಿಸಿತು. ಅವಳು ಹೋದ ದಿಕ್ಕಿಗೆ ತಿರುಗಿ, ಅವಳು ಹೋದಷ್ಟು ದೂರ ಕಣ್ಣುಗಳಿಂದಲೇ ಹಿಂಬಾಲಿಸಿದ. ಕಿವಿಗಳಲ್ಲಿ ಸೌದೆ ಶಬ್ದವೇ ತುಂಬಿತ್ತು. ಇನ್ನಾದರೂ ಏಕಾಗ್ರತೆಯಿಂದ ಇರಬೇಕೆಂದುಕೊಂಡು ತನ್ನನ್ನು ಕಾಡುವ ವಿಚಾರಗಳನ್ನು ದೂರವಿರಿಸಿ. ಬಿಗಿಯಾಗಿ ಕಣ್ಣು ಮುಚ್ಚಿದ ಮೌನವಾಗಿ ನೆಮ್ಮದಿಯಾಗಿ ಕುಳಿತುಕೊಂಡ.

ಅವನ ಕಣ್ಣ ಮುಂದೆ ಫ್ಲಾಟ್, ದುಂಡಗೆ ಕಂದು ಬಣ್ಣದ ಮಚ್ಚೆಗಳು ಮತ್ತು ಮಧ್ಯದಲ್ಲಿ ಕಿತ್ತಲೆ ಬಣ್ಣವಿದ್ದ ಹೂವು ಅವನ ಎಡಗಣ್ಣಿಂದ ಬಲಗಣ್ಣಿಗೆ, ಬಲಗಣ್ಣಿಂದ ಎಡಗಣ್ಣಿಗೆ ತೇಲುತ್ತ ಅವನಿಗೆದುರಾಗಿ ಹೋಗಿ ಕಣ್ಮರೆಯಾದವು. ನಂತರ ಪ್ರಕಾಶಮಾನವಾದ ಹಸಿರಿನ ಹೂವು, ಮಧ್ಯದಲ್ಲಿ ದಟ್ಟ ಹಸಿರು ಇದ್ದದ್ದು, ಹೀಗೆಯೇ ತೇಲಿ ಮರೆಯಾಯಿತು. ಕಡೆಯಲ್ಲಿ ಕೋಸಿನ ರಾಶಿ. ಇಂಗ್ಲೀಷ್ 'A' ಅಕ್ಷರ ಅವನ ಮುಂದೆ ಬೃಹದಾಕಾರವಾಗಿ ನಿಂತಿತು.

* * *

ನನ್ನ ಹಳೇಮನೆ

ಕೊರೆಯುವ ಚಳಿಯನ್ನೂ ಲೆಕ್ಕಿಸದೆ ಏಳುನೂರು ಮೈಲಿ ದೂರ ಕ್ರಮಿಸಿ ಇಪ್ಪತ್ತು ವರ್ಷಗಳ ಹಿಂದೆ ಬಿಟ್ಟಿದ್ದ ನನ್ನ ಹಳೆ ಮನೆಗೆ ಹಿಂತಿರುಗಿದೆ.

ಚಳಿಗಾಲದ ಕಡೆಯ ದಿನಗಳು. ಹಿಂದಿನ ಮನೆಯತ್ತ ಸಾಗುತ್ತಿದ್ದಂತೆ ಆಕಾಶ ಮೋಡಗಳಿಂದ ಕವಿದಿತ್ತು. ನಮ್ಮ ದೋಣಿಯ ಕ್ಯಾಬಿನ್ ಒಳಕ್ಕೆ ತಣ್ಣನೆಯ ಗಾಳಿ ಬೀಸಿತು. ಬಿದಿರಿನ ಛಾವಣಿಯ ಬಿರುಕುಗಳ ಮೂಲಕ ನಿರ್ಜನವಾದ ಊರುಗಳು ಕಾಣಿಸುತ್ತಿದ್ದವು. ಅಲ್ಲೊಂದು ಇಲ್ಲೊಂದು ಎಂಬಂತೆ ಹಳದಿ ಆಕಾಶದಲ್ಲಿ ದೂರದೂರಕ್ಕೆ ಚದುರಿ ನಿಂತಿದ್ದವುಗಳನ್ನು ನೋಡಿ ಮನಸ್ಸಿಗೆ ಆದ ಬೇಸರವನ್ನು ತಡೆಯಲಾಗಲಿಲ್ಲ.

ಇಪ್ಪತ್ತು ವರ್ಷಗಳಿಂದ ನೆನಪಿನಲ್ಲಿ ಇರಿಸಿಕೊಂಡಿದ್ದ ನನ್ ಹಳೆಮನೆ ಇದೇ ಏನು? ನನ್ನ ನೆನಪಿನಲ್ಲಿದ್ದ ಹಳೆಮನೆಯನ್ನು ಇದು ಒಂದಿಷ್ಟೂ ಹೋಲುವುದಿಲ್ಲ. ಅದು ಇದಕ್ಕಿಂತ ತುಂಬ ಉತ್ತಮವಾಗಿತ್ತು. ಆದರೆ ಯಾರಾದರೂ ನನ್ನ ಆ ಮನೆಯ ಚೆಲುವು ವಿಶೇಷತೆಗಳನ್ನು ವಿವರಿಸಲು ಹೇಳಿದರೆ ಮಾತ್ರ ಅದರ ಸ್ಪಷ್ಟ ಚಿತ್ರವಾಗಲೀ, ವರ್ಣಿಸಲು ಸರಿಯಾದ ಪದಗಳಾಗಲಿ ನನ್ನಲ್ಲಿ ಇಲ್ಲ. ಈಗ ಇರುವುದೆಲ್ಲ ಆಗ ಅದಕ್ಕಿತ್ತು ಎನ್ನುವುದಂತೂ ನಿಶ್ಚಿತ. ವಿಷಯವನ್ನು ತರ್ಕೈಸಲು ತೊಡಗಿದೆ.....ಮನೆ ಎನ್ನುವುದು ಯಾವಾಗಲೂ ಈಗ ಇದ್ದಂತೆಯೇ ಇತ್ತು. ಹೆಚ್ಚಿನ ಅಭಿವೃದ್ಧಿ ಕಾಣಿಸದಿದ್ದರೂ ಈಗ ಇರುವ ಸ್ಥಿತಿ ಹಾಗೇನು ನಿರಾಶಾದಾಯಕವಾಗಿಲ್ಲ. ಕೇವಲ ನನ್ನ ಭಾವನೆಯಷ್ಟೇ ಬದಲಾಗಿದೆ. ಯಾಕೆಂದರೆ ಈ ಬಾರಿ ನಾನು ನನ್ನ ದೇಶಕ್ಕೆ ಯಾವುದೇ ಭ್ರಮೆಗಳನ್ನು ಇರಿಸಿಕೊಳ್ಳದೆ ಬಂದಿದ್ದೇನೆ.

ಗುಡ್ ಬೈ ಹೇಳುವ ಉದ್ದೇಶದಿಂದಷ್ಟೇ ಈ ಬಾರಿ ಬಂದಿದ್ದೇನೆ. ನನ್ನ ಸಂಬಂಧಿಯೊಬ್ಬ ನನ್ನ ಹಳೆ ಮನೆಯಲ್ಲಿ ಬಹಳ ದಿವಸದಿಂದ ಇದ್ದವನು ಈಗ ಆ ಮನೇನ ಬೇರೆಯವರಿಗೆ ಮಾರಿ ಬಿಟ್ಟಿದ್ದ. ಹೊಸ ವರುಷದ ಆರಂಭಕ್ಕೆ ಮೊದಲೇ ಅವರಿಗೆ ವಹಿಸಿಕೊಡಬೇಕಾಗಿತ್ತು. ಹೊಸ ವರುಷಕ್ಕೆ ಮೊದಲೇ ಹೋಗಿ ಮನೆಗೆ

ಗುಡ್ ಬೈ ಹೇಳಿ ಬೀಳ್ಕೊಡಬೇಕಾಗಿದ್ದರಿಂದ ಬೇಗ ಹೋಗಬೇಕಾಗಿತ್ತು. ನನ್ನ ಹಳೆಮನೆ ಇದ್ದ ಜಾಗದಿಂದ ದೂರವಿದ್ದ ನನ್ನ ಕೆಲಸದ ಪ್ರದೇಶಕ್ಕೆ ಮನೆಯವರನ್ನು ಸ್ಥಳಾಂತರಿಸಬೇಕಾಗಿತ್ತು.

ಮಾರನೇ ದಿನ ಬೆಳಿಗ್ಗೆ ನಾನು ಮನೆಯ ಬಾಗಿಲಲ್ಲಿದ್ದ ಮುರಿದ ಕಾಂಡಗಳು ಛಾವಣಿ ಮೇಲಿನ ಹುಲ್ಲು ಇವೆಲ್ಲವೂ ಮನೆಯನ್ನು ಯಾಕೆ ಮಾರಬೇಕಾಯಿತು ಎನ್ನುವುದಕ್ಕೆ ಸಮರ್ಥನೆಯಾಗಿತ್ತು. ನಮ್ಮ ವಂಶದ ಅನೇಕ ಪೀಳಿಗೆಗಳು ಯಾವಾಗಲೋ ದೂರ ಹೋಗಿದ್ದವು. ಆದ್ದರಿಂದ ವಿಶೇಷವಾದ ಮೌನ ಕವಿದಿತ್ತು. ನಾನು ಮನೆ ತಲುಪಿದ್ದಂತೆಯೇ ನನ್ನ ತಾಯಿ ಬಾಗಿಲಲ್ಲಿ ನಿಂತಿದ್ದಳು. ಮತ್ತು ನನ್ನ ಎಂಟು ವರುಷದ ಸೋದರಳಿಯ ಹೂಂಗೆರ್ಹ್ ಅವಳ ಹಿಂದಿನಿಂದ ಓಡಿ ಬಂದ.

ತಾಯಿಗೆ ಸಂಕೋಚವಾಗಿದ್ದಂತೆ ಕಾಣಿಸಿದರೂ, ಏನೋ ನೋವನ್ನು ಮರೆಮಾಚುತ್ತಿದ್ದಂತೆ ಎನಿಸಿತು. ನನಗೆ ಕುಳಿತುಕೊಳ್ಳಲು ಹೇಳಿ ಸ್ವಲ್ಪ ಚಹವನ್ನು ತೆಗೆದುಕೊಳ್ಳಲು ಸೂಚಿಸಿದಳು. ಮನೆಯ ವಸ್ತುಗಳನ್ನು ತೆಗೆದಿರಿಸುತ್ತಿದ್ದ ಕೆಲಸವನ್ನು ಸದ್ಯಕ್ಕೆ ನಿಲ್ಲಿಸಿದಳು. ನನ್ನನ್ನು ಎಂದೂ ನೋಡಿರದಿದ್ದ ಹೂಂಗೆರ್ಹ್ ದೂರದಿಂದಲೇ ನನ್ನನ್ನು ಗಮನಿಸುತ್ತಿದ್ದ.

ಕಡೆಯದಾಗಿ ಮನೆ ಖಾಲಿ ಮಾಡುವ ವಿಚಾರ ಮಾತಾಡಿದೆವು. ಈಗಾಗಲೇ ಕೆಲವು ಕೊಠಡಿಗಳನ್ನು ಬಾಡಿಗೆಗೆ ಪಡೆದಿರುವ ಮತ್ತು ಒಂದಷ್ಟು ಪೀಠೋಪಕರಣಗಳನ್ನು ಕೊಂಡಿರುವ ವಿಷಯ ತಿಳಿಸಿದೆ. ಜೊತೆಗೆ ಇನ್ನಷ್ಟು ಕೊಂಡುಕೊಳ್ಳಬೇಕಾಗಿರುವುದರಿಂದ ಇಲ್ಲಿನ ಪೀಠೋಪಕರಣಗಳನ್ನು ಮಾರುವ ಅಗತ್ಯವನ್ನೂ ತಿಳಿಸಿದೆ. ತಾಯಿ ಒಪ್ಪಿದರು. ಈಗ ಅರ್ಧದಷ್ಟು ಸಾಮಾನುಗಳನ್ನು ಪ್ಯಾಕ್ ಮಾಡಿದ್ದು, ಒಯ್ಯಲಾಗದ ಭಾರದ ಪೀಠೋಪಕರಣಗಳನ್ನು ಈಗಾಗಲೇ ಮಾರಿಬಿಟ್ಟಾಗಿದೆ ಎಂಬುದನ್ನು ತಿಳಿಸಿದಳು. ಕೊಂಡು ಕೊಳ್ಳುವವರನ್ನು ಹುಡುಕುವುದೇ ಸ್ವಲ್ಪ ತ್ರಾಸದ ಕೆಲಸವಾಗಿತ್ತೆಂದು ಹೇಳಿದಳು.

"ನೀನು ಒಂದೆರಡು ದಿನ ವಿಶ್ರಾಂತಿ ತಗೋ. ಬಂಧುಗಳನ್ನೆಲ್ಲ ಕರೆಸೋಣ ಆಮೇಲೆ ಇಲ್ಲಿಂದ ಹೋಗೋಣ" ಎಂದು ತಾಯಿ ಹೇಳಿದಳು.

"ಆಯ್ತು ಹಾಗೇ ಆಗಲಿ."

"ಯೂನ್ ತೂ ಗೊತ್ತಲ್ಲ. ಪ್ರತಿಸಾರಿ ಬಂದಾಗಲೂ ನಿನ್ನ ಬಗ್ಗೆ ವಿಚಾರಿಸುತ್ತಾನೆ. ನಿನ್ನನ್ನು ತುಂಬಾ ನೋಡಬೇಕೂಂತ ಇದ್ದಾನೆ. ನೀನು ಬರಬಹುದಾದ ದಿನವನ್ನು ಸುಮಾರಾಗಿ ತಿಳಿಸಿದ್ದೆ. ಅವನು ಯಾವ ಕ್ಷಣದಲ್ಲಾದರೂ ಬರಬಹುದು."

ಇದನ್ನು ಕೇಳಿದಾಗ ನನ್ನ ಕಣ್ಮುಂದೆ ಒಂದು ಚಿತ್ರ ಮೂಡಿತು. ದಟ್ಟ ನೀಲಿಯ ಆಕಾಶದಿಂದ ಇಳಿಜಿದ್ದ ಹೊಂಬಣ್ಣದ ಚಂದಿರ, ಕೆಳಗೆ ಸಮುದ್ರ ದಂಡೆ. ಕಣ್ಣಳತೆಗೆ ಸಿಗುವಷ್ಟು ದೂರಕ್ಕೆ ತಿಳಿನೀಲಿ ಬಣ್ಣದ ಕಲ್ಲಂಗಡಿಗಳನ್ನು ಕಾಣಬಹುದಾಗಿತ್ತು. ಅವುಗಳ

ನಡುವೆ ಹನ್ನೊಂದು ಹನ್ನೆರಡು ವರ್ಷ ಪ್ರಾಯದ ಹುಡುಗನೊಬ್ಬ ನಿಂತಿದ್ದು ಕೈಯಲ್ಲಿ ಹೊಳೆವ ಮುಳ್ಳು ಚಾಕು ಹಿಡಿದು ತನ್ನ ಬಲವನ್ನೆಲ್ಲ ಪ್ರಯೋಗಿಸಿ ಜೋರಾಗಿ 'ಝಾ' ಮೇಲೆ ಚುಚ್ಚಿದನಾದರೂ ಅದು ಜಾರಿ ತಪ್ಪಿಸಿಕೊಂಡು ಅವನ ಕಾಲುಗಳ ನಡುವೆ ಬಿತ್ತು.

ಇವನೆ ಯಾನ್-ತು. ಮೊದಲ ಸಲ ಅವನನ್ನು ನೋಡಿದಾಗ ಸುಮಾರು ಹತ್ತು ವರುಷದವನಾಗಿದ್ದ. ಅದೂ ಮೂವತ್ತು ವರ್ಷಗಳ ಕೆಳಗೆ. ಆಗ ನಮ್ಮ ತಂದೆ ಬದುಕಿದ್ದರು. ನಮ್ಮ ಸ್ಥಿತೀನೂ ಚೆನ್ನಾಗಿತ್ತು. ಹಾಗಾಗಿ ನಾನು ಅತಿ ಮುದ್ದಿನವನಾಗಿದ್ದೆ. ಬಹಳ ಬೇಕಾದವನೂ ಆಗಿದ್ದೆ. ಆ ವರ್ಷ ಪಿತೃಬಲಿ ನೀಡುವ ಸರದಿ ನಮ್ಮ ಪಾಲಿಗೆ ಬಂದಿತ್ತು. ಮೂವತ್ತು ವರುಷಗಳಿಗೊಮ್ಮೆ ಬಂದ ಸರದಿ ಅದಾಗಿತ್ತು. ಅದಕ್ಕೆಂದೇ ಅದು ಬಹಳ ಮುಖ್ಯ ಸಂದರ್ಭವಾಗಿತ್ತು. ಮೊದಲ ತಿಂಗಳಲ್ಲಿ ಪಿತೃಮೂರ್ತಿಗಳಿಗೆ ನೈವೇದ್ಯ ಇಡಬೇಕಾಗಿತ್ತು. ಬಲಿ ಪಾತ್ರೆಗಳು ಬಹಳ ಸುಂದರವಾಗಿದ್ದವು. ಪೂಜಿಸುವವರು ಬಹಳ ಮಂದಿ ಇದ್ದುದರಿಂದ ಆ ಪಾತ್ರೆಗಳನ್ನು ಕಳ್ಳತನದಿಂದ ರಕ್ಷಿಸಬೇಕಾಗಿತ್ತು. ನಮ್ಮ ಮನೆಯಲ್ಲಿದ್ದವನು ಅರೆಕಾಲಿಕ ಸೇವಕ. (ನಮ್ಮ ಜಿಲ್ಲೆಯಲ್ಲಿ ಕೆಲಸದವರನ್ನು ಮೂರು ಗುಂಪು ಮಾಡುತ್ತೇವೆ ಒಂದು ಕುಟುಂಬದಲ್ಲಿದ್ದು ಇಡೀ ವರ್ಷ ಆ ಕುಟುಂಬದ ಸೇವೆ ಮಾಡಿದವರು ಪೂರ್ಣಕಾಲಿಕರು; ದಿನಕ್ಕೆ ಮಾತ್ರ ಕೆಲಸ ಮಾಡಿದರೆ ದಿನಗೂಲಿಗಳು; ಇನ್ನೊಂದು ಗುಂಪು ಅಥವಾ ವರ್ಗದವರು, ತಮ್ಮದೇ ಭೂಮಿಯಲ್ಲಿ ವ್ಯವಸಾಯ ಮಾಡಿಕೊಂಡು, ಹೊಸ ವರುಷ ಅಥವಾ ಬೇರೆ ಬೇರೆ ಹಬ್ಬ ಹರಿದಿನಗಳಲ್ಲಿ ಕೆಲಸ ಮಾಡಿಕೊಡುವವರು ಅರೆಕಾಲಿಕರು) ಇನ್ನೂ ಮಾಡಬೇಕಾದ ಕೆಲಸಗಳೆಲ್ಲ ಬಹಳ ಇದ್ದುದರಿಂದ, ಅವನು ತನ್ನ ಮಗ ಯೂನ್-ತು ನನ್ನು, ಪಾತ್ರೆಗಳನ್ನು ನೋಡಿಕೊಂಡಿರಲು ಕಳಿಸುವುದಾಗಿ ಹೇಳಿದ.

ನನ್ನ ತಂದೆ ಇದಕ್ಕೆ ಒಪ್ಪಿದಾಗ ನನ್ನ ಸಂತೋಷಕ್ಕೆ ಪಾರವೇ ಇರಲಿಲ್ಲ. ಯೂನ್-ತು ಬಗ್ಗೆ ಕೇಳಿ ಬಹಳ ದಿವಸವಾಗಿತ್ತು. ಅಲ್ದೆ ಅವನೂ ಕೂಡಾ ನಾನು ಹುಟ್ಟಿದ ತಿಂಗಳೇ ಹುಟ್ಟಿದ್ದು, ಹೆಚ್ಚು ಕಡಿಮೆ ನನ್ನದೇ ವಯಸ್ಸಿನವನಾಗಿದ್ದ. ಅವನ ಜಾತಕ ನೋಡಿದವರು ಐದು ತತ್ವಗಳಲ್ಲಿ, ಭೂಮಿ ತತ್ವದ ಕೊರತೆ ಇತ್ತೆಂದು ಹೇಳಿದ್ದರಿಂದ ಅವನಿಗೆ ಯೂನ್-ತು ಅಂತ ಹೆಸರಿಟ್ಟಿದ್ದರಂತೆ. ಅವನು ಬಲೆಹಾಕಿ ಸಣ್ಣ ಹಕ್ಕಿಗಳನ್ನು ಒಡೀತಿದ್ದ ಪ್ರತಿದಿನವೂ ಹೊಸ ವರ್ಷಾಗಮನಕ್ಕಾಗಿ ಕಾಯುತ್ತಿದ್ದ. ಏಕೆಂದರೆ ಯೂನ್‌ತು ಬರುತ್ತಿದ್ದದ್ದು ಹೊಸ ವರ್ಷಕ್ಕೆ! ಕಡೆಗೆ ವರ್ಷದ ಕೊನೇ ದಿನ ಬರುತ್ತಿದ್ದಂತೆ ತಾಯಿ ಯೂನ್-ತು ಬಂದ ವಿಷಯವನ್ನು ತಿಳಿಸಿದಳು. ಅವನನ್ನು ನೋಡಲು ಒಮ್ಮೆಲೇ ಓಡಿದೆ. ಅವನು ಅಡಿಗೆಮನೆಯಲ್ಲಿ ನಿಂತಿದ್ದ. ಕೆಂಪಾದ ದುಂಡನೆಯ ಮುಖ. ತಲೆ ಮೇಲೆ ಒಂದು ಫೆಲ್ಟ್ ಕ್ಯಾಪ್ ಹಾಕಿದ್ದ. ಕೊರಳಿನ ಸುತ್ತ ಒಂದು ಪಟ್ಟಿ ಇತ್ತು. ಅವನ ತಂದೆಗೆ ಅವನ ಮೇಲೆ ತುಂಬಾ ಪ್ರೀತಿ ಇತ್ತು. ಅವನಿಗೆ ಏನಾದರೂ

ಕೆಟ್ಟದ್ದಾಗಿ ಸಾಯಬಹುದೆಂದು ಹೆದರಿ, ಯಂತ್ರದಂತೆ ಪಟ್ಟಿಯನ್ನು ಕೊರಳಲ್ಲಿ ಧರಿಸಿದ್ದ. ಅವನಿಗೆ ಬಹಳ ಸಂಕೋಚ. ನನ್ನೊಬ್ಬನ ಜೊತೆ ಬಿಟ್ಟು ಬೇರೆಯವರೊಟ್ಟಿಗೆ ಸೇರಲು ಹೆದರುತ್ತಿದ್ದ. ಬೇರೆ ಯಾರೂ ಇಲ್ಲದಿದ್ದಾಗ ಅವನು ನನ್ನ ಜೊತೆ ತುಂಬ ಮಾತಾಡುತ್ತಿದ್ದ. ಹಾಗಾಗಿ ನಾವು ಬಹಳ ಹತ್ತಿರದ ಸ್ನೇಹಿತರಾಗಿ ಬಿಟ್ಟಿದ್ದೆವು.

ಆಗ ನಾವು ಏನು ಮಾತಾಡಿದೆವು ಎನ್ನುವುದು ನೆನಪಿಲ್ಲದೆ ಹೋದರೂ ಯೂನ್-ತು ಬಹಳ ಉತ್ಸಾಹದಲ್ಲಿದ್ದ. ಪಟ್ಟಣಕ್ಕೆ ಬಂದುದರಿಂದ ಏನೆಲ್ಲವನ್ನೂ ನೋಡಲು ಸಾಧ್ಯವಾಯಿತು ಎಂಬುದೇ ಅವನ ಸಂತೋಷಕ್ಕೆ ಕಾರಣವಾಗಿತ್ತು.

ಮಾರನೇ ದಿನ ಅವನು ಹಕ್ಕಿಗಳನ್ನು ಹಿಡಿಯಲೆಂದು ಆಶಿಸಿದೆ.

"ಅದು ಸಾಧ್ಯವಿಲ್ಲ".....ದಟ್ಟ ಮಂಜು ಬಿದ್ದ ಮೇಲೆ ಮಾತ್ರವೇ ಸಾಧ್ಯ. ಮಂಜು ಬಿದ್ದ ನಂತರ ಮರಳಿನ ಮೇಲೆ ಒಂದಷ್ಟು ಜಾಗವನ್ನು ಖಾಲಿ ಮಾಡುತ್ತೇನೆ. ಒಂದು ಸಣ್ಣ ಕೋಲಿನ ಮೇಲೆ ಬಿದಿರ ಬುಟ್ಟಿಯನ್ನು ಜೋರಲು ಇರಿಸುತ್ತೇನೆ. ಅದರ ಕೆಳಗೆ ಕಾಳು ಹೊಟ್ಟು ಹರವುತ್ತೇನೆ. ಹಕ್ಕಿಗಳು ಕಾಳು ತಿನ್ನಲು ಬಂದಾಗ ಕೋಲಿಗೆ ಕಟ್ಟಿದ ದಾರವನ್ನು ಎಳೆಯುತ್ತೇನೆ. ಹಕ್ಕಿಗಳು ಬುಟ್ಟಿಯಲ್ಲಿ ಜೀಳುತ್ತವೆ. ಎಲ್ಲ ಜಾತಿಯ ಹಕ್ಕಿಗಳು ಬೇಟೆ ಹಕ್ಕಿ, ಕಾಡುಕೋಳಿ, ಕಾಡು ಪಾರಿವಾಳ, ನೀಲಿ ಬೆನ್ನಿನ ಹಕ್ಕಿ ಇತ್ಯಾದಿ!" ಎಂದು ಹೇಳಿದ.

ಅಂದುಕೊಂಡಂತೆ, ಮಂಜು ಬೀಳುವುದನ್ನೇ ಕಾದೆ.

"ಈಗ ಸದ್ಯಕ್ಕೆ ತುಂಬ ಛಳಿ." ಅಂತ ಒಮ್ಮೆ ಹೇಳಿದ.

"ಬೇಸಿಗೆ ಕಾಲದಲ್ಲಿ ನೀನು ನಮ್ಮನೆಗೆ ಬರಬೇಕು. ಬೆಳಗಿನ ಹೊತ್ತು ಸಮುದ್ರ ತೀರಕ್ಕೆ ಹೋಗಬೇಕು. ಅಲ್ಲಿ ಕೆಂಪು, ಹಸಿರು ಕಪ್ಪೆಚಿಪ್ಪುಗಳನ್ನು ನೋಡಬಹುದು. ಜೊತೆಗೆ ಸ್ಕೇರ್ ಡೆವಿಲ್ ಬುದ್ಧನ ಕೈಗಳು ಮುಂತಾದವುಗಳನ್ನೆಲ್ಲ ನೋಡಬಹುದು. ಸಂಜೆ ನಾನು ನಮ್ಮಪ್ಪ ಕಲ್ಲಂಗಡಿ ನೋಡೋಕೆ ಹೋದಾಗ ನೀನೂ ಬರಬಹುದು."

"ಕಳ್ಳರಿದ್ದರೇಂತ ನೋಡೋಕೇನು?"

"ಇಲ್ಲ. ದಾರಿ ಹೋಕರು ಯಾರಾದರೂ ಬಾಯಾರಿಕೆ ಅಂತ, ಕಲ್ಲಂಗಡಿ ಕಿತ್ತು ತಿಂದರೆ, ನಮ್ಮ ಕಡೆ ಜನ ಅದನ್ನು ಕಳ್ಳನತನ ಅಂತ ತಿಳಿಯೊಲ್ಲ. ನಾವು ಗಮನಿಸೋದು ಬೀದಿಹೋಕರು, ಹಕ್ಕಿಗಳು, ಅವು ಇವು ಪ್ರಾಣಿಗಳನ್ನು ಮಾತ್ರ . 'ಝಾ' ಕಲ್ಲಂಗಡಿಯನ್ನು ಬೆಳ್ದಿಂಗಳ ರಾತ್ರಿಯಲ್ಲಿ ಕುಟುಕುವ ಸದ್ದು ಕೇಳಿದಾಗ ಪಿಚ್ ಫೋರ್ಕ್ ತೆಗೆದುಕೊಂಡು ಸದ್ದಿಲ್ಲದೆ ಮೆಲ್ಲನೆ ಅದರ......"

'ಝೂ' ಅಂತ ಅವನು ಹೇಳಿದ್ದು, ನನಗೆ ಅದೇನೂ ಅರ್ಥವಾಗಿರಲಿಲ್ಲ. ಈಗ ಅದಂತೂ ಮರೆತೇ ಹೋಗಿದೆ. ಆದರೆ ಅದೊಂದು ಜಾತಿಯ ಪುಟ್ಟ ಆದರೆ ಭಯಂಕರ ಪ್ರಾಣಿ ಆಗಿರಬೇಕೆಂಬುದು ನನ್ನ ಊಹೆ.

"ಜನಾನಾ ಕಚ್ಚುವುದಿಲ್ಲವೇ?"

"ನಿನ್ನ ಹತ್ತಿರ ಪಿಚ್‌ಫೋರ್ಕ್ ಇರುತ್ತಲ್ಲ. ಅದು ಹಾರಿದಾಗ ಅದಕ್ಕೆ ಚುಚ್ಚಿಬಿಟ್ಟರೆ ಆಯಿತು. ಆದರೆ ಅದು ಬಹಳ ತಂತ್ರಗಾರ ಪ್ರಾಣಿ. ನಿನಗೆ ಎದುರಾಗಿ ಬಂದು ಕಾಲಿನಡಿಯಿಂದ ಜಾರಿ ಹೋಗಿ ಬಿಡುತ್ತದೆ. ಅದರ ತುಪ್ಪಳ ಬಹಳ ನುಣುಪು. ಎಣ್ಣೆ ಹಾಗೆ ಜಾರುತ್ತದೆ....."

ಇಂತಹ ವಿಚಿತ್ರವಾದ ವಸ್ತುಗಳೆಲ್ಲ ಇರುತ್ತವೆ ಅನ್ನೋದು ನನಗೆ ತಿಳಿದಿರಲಿಲ್ಲ. ಸಮುದ್ರ ದಂಡೆಯಲ್ಲಿ ಕಾಮನ ಬಿಲ್ಲಿನ ಎಲ್ಲ ಬಣ್ಣಗಳ ಕಪ್ಪೆಚಿಪ್ಪುಗಳು ಇದ್ದದ್ದು, ಕಲ್ಲಂಗಡಿ ಬೆಳೆಗಳಿಗೆ ಇಷ್ಟೆಲ್ಲ ಅಪಾಯಗಳಿರೋದು ಇತ್ಯಾದಿ. ನನಗೇನಿದ್ದರೂ ಅವುಗಳ ಬಗ್ಗೆ ತಿಳಿದಿದ್ದ ವಿಷಯ, ಅವು ಪೇಟೆಯಲ್ಲಿ ತರಕಾರಿ ಅಂಗಡಿಗಳಲ್ಲಿ ಸಿಗುತ್ತವೆ ಎಂಬುದು.

"ನಮ್ಮ ಸಮುದ್ರ ದಂಡೆಯಲ್ಲಿ ಅಲೆ ಬಂದು ಹೋದ ಮೇಲೆ ಕಪ್ಪೆ ಹಾಗೆ ಎರಡು ಕಾಲುಗಳಿರುವ ಜಿಗಿಯುವ ಮೀನುಗಳ ರಾಶೀನೆ ಬಿದ್ದಿರುತ್ತೆ......"

ಯೂನ್-ತು ತಲೆಯಲ್ಲಿ ಇಂತಹ ಎಷ್ಟೊಂದು ವಿಚಿತ್ರ ಸಂಗತಿಗಳು ತುಂಬಿರುತ್ತಿದ್ದವು. ನನ್ನ ಹಳೆಯ ಸ್ನೇಹಿತರ ದೃಷ್ಟಿಗೆ ಮೀರಿದಂತಹ ವಿಷಯಗಳಾಗಿದ್ದವು ಇವು. ಅವರಿಗೆ ಇಂಥದ್ದೆಲ್ಲ ಗೊತ್ತಿರಲೇ ಇಲ್ಲ. ಆದರೆ ಯೂನ್-ತು ಸಮುದ್ರ ದಂಡೆಯಲ್ಲಿಯೇ ವಾಸಮಾಡುತ್ತಿದ್ದ. ನನ್ನ ಹಾಗೆ ನನ್ನ ಗೆಳೆಯರಿಗೆ ಗೊತ್ತಿದ್ದದ್ದು, ಅಂಗಳದ ಮೇಲಿನ ಆಕಾಶದ ನಾಲ್ಕು ದಿಕ್ಕುಗಳು ಮಾತ್ರ.

ದುರದೃಷ್ಟವಶಾತ್ ಹೊಸವರ್ಷದ ಒಂದು ತಿಂಗಳ ನಂತರ ಯೂನ್-ತುಗೆ ಮನೆಗೆ ಹೋಗಬೇಕಾಗಿ ಬಂತು. ನನಗೆ ಅಳು ತಡೆಯಲಾಗಲಿಲ್ಲ. ಅವನು ಅಡಿಗೆ ಮನೆಯಲ್ಲಿ ತಲೆಮರೆಸಿಕೊಂಡು, ಹೊರಗೆ ಬರಲು ಹಠಮಾಡಿ ನಿರಾಕರಿಸಿದ. ಅವನ ಅಪ್ಪ ಬಲವಂತದಿಂದ ಅವನನ್ನು ಹೊತ್ತುಕೊಂಡು ಹೋಗಬೇಕಾಯಿತು. ಆಮೇಲೆ ಅವನು ನನಗಾಗಿ ಬಣ್ಣ ಬಣ್ಣದ ಕಪ್ಪೆಚಿಪ್ಪುಗಳನ್ನು ಅವನ ತಂದೆ ಕೈಯಲ್ಲಿ ಕಳಿಸಿದ್ದ ನಾನೂ ಒಂದೆರಡು ಸಲ ಅವನಿಗೆಂದು ಉಡುಗೊರೆ ಕಳಿಸಿದ್ದೆ. ಆದರೆ ಒಬ್ಬರನ್ನು ಒಬ್ಬರು ಮತ್ತೆ ಬಹಳಕಾಲ ನೋಡಿಯೇ ಇರಲಿಲ್ಲ.

ಈಗ ತಾಯಿ ಅವನ ಬಗ್ಗೆ ಹೇಳಿದಾಗ ಬಾಲ್ಯದ ನೆನಪುಗಳೆಲ್ಲ ಮಿಂಚಿನಂತೆ ಸುಳಿದು ಹೋದವು. ನಾನು ನನ್ನ ಸುಂದರವಾದ ಹಳೆಯ ಮನೆಯನ್ನು ನೋಡುವಂತಾಗಿತ್ತು.

"ತುಂಬಾ ಒಳ್ಳೇದು. ಅವನು.......ಅವನು ಈಗ ಹೇಗಿದ್ದಾನೆ?" ಎಂದೆ.

"ಅವನೇ?........ಈಗ ಅವನ ಸ್ಥಿತಿ ಚೆನ್ನಾಗಿಲ್ಲ" ಎಂದು ತಾಯಿ ಹೇಳಿದಳು. ಹೊರಗೆ ಕಿಟಕಿಯಿಂದ ನೋಡಿ..... "ಮತ್ತೆ ಅವರೆಲ್ಲ ಬರ್‍ತಿದ್ದಾರೆ. ನಮ್ಮ ಹಳೆ ಪೀಠೋಪಕರಣವನ್ನು ಕೊಳ್ಳಬೇಕೆಂದಿದ್ದಾರೆ. ಆದರೆ ಅದಕ್ಕೂ ಮೊದಲು ತಮಗೆ ಏನು ಬೇಕಾಗಿದೆ ಅನ್ನೋದನ್ನು ನೋಡಿ ಆರಿಸಿಕೊಳ್ಳಬೇಕೆಂದಿದ್ದಾರೆ. ನಾನು ಹೋಗಿ ಅವರನ್ನು ಗಮನಿಸಬೇಕಾಗಿದೆ......"

ತಾಯಿ ಎದ್ದು ಹೋದರು. ತುಂಬ ಜನ ಹೆಂಗಸರ ಧ್ವನಿಗಳು ಕೇಳಿಸುತ್ತಿದ್ದವು. ನಾನು ಹೂಂಗ್-ರ್‍ಹನನ್ನು ಕರೆದು ಮಾತನಾಡಿದೆ. ಅವನಿಗೆ ಓದೋಕೆ, ಬರೆಯೋಕೆ ಬರುತ್ತಾ? ಇಲ್ಲಿಂದ ಹೋಗೋಕೆ ಅವನಿಗೆ ಇಷ್ಟ ಇದೆಯಾ?-ಎಂದೆಲ್ಲ ಕೇಳಿ ವಿಚಾರಿಸಿದೆ.

"ನಾವು ಟ್ರೈನ್‌ನಲ್ಲಿ ಹೋಗ್ತಿದ್ದೀವಾ?"

"ಹೌದು. ಟ್ರೈನ್‌ನಲ್ಲಿಯೇ ಹೋಗೋಣ."

"ದೋಣೀಲಿ?"

"ಮೊದಲು ದೋಣೀಲಿ ಹೋಗೋಣ."

"ಓಹ್ ಅದೆ ಇಷ್ಟು ಉದ್ದದ ಮೀಸೆಯ ಹಾಗೆ!"- ಒಂದು ಕೀರಲು ಧ್ವನಿ ಕೇಳಿ ಬಂತು. ಬೆಚ್ಚಿ ಬಿದ್ದು ತಿರುಗಿ ನೋಡಿದೆ. ಐವತ್ತರ ಪ್ರಾಯದ, ಎದ್ದು ಕಾಣುತ್ತಿದ್ದ ದವಡೆ ಮೂಳೆಯ, ತೆಳ್ಳನೆಯ ತುಟಿಗಳ ಹೆಂಗಸೊಬ್ಬಳು ನಿಂತಿದ್ದಳು. ಕೈಗಳನ್ನು ಸೊಂಟದ ಮೇಲಿರಿಸಿದ್ದಳು. ಸ್ಕರ್ಟ್‌ಗೆ ಬದಲಾಗಿ ಪ್ಯಾಂಟ್ ಹಾಕಿಕೊಂಡಿದ್ದವಳು. ಜಾಮಿಟ್ರಿ ಬಾಕ್ಸಿನಲ್ಲಿರುವ ಕಂಪಾಸಿನಂತೆ ತನ್ನೆರಡು ಕಾಲುಗಳನ್ನು ಅಗಲಿಸಿ ನಿಂತಿದ್ದರು.

ನನಗೆ ದಿಗ್ಭ್ರಮೆಯಾಯಿತು.

"ನಾನು, ಗೊತ್ತಿಲ್ಲವೇನು? ನೀನು ಮಗುವಾಗಿದ್ದಾಗ ನಾನು ನಿನ್ನನ್ನು ಎತ್ತಿ ಆಡಿಸಿದ್ದೆ!"

ನನಗೆ ಇನ್ನಷ್ಟು ಆಶ್ಚರ್ಯವಾಯಿತು. ಅದೃಷ್ಟಕ್ಕೆ ತಾಯಿ ಅಷ್ಟು ಹೊತ್ತಿಗೆ ಅಲ್ಲಿಗೆ ಬಂದು, ಹೇಳಿದಳು.

"ಬಹಳ ವರ್ಷ ಅವನು ಇಲ್ಲಿ ಇರಲೇ ಇಲ್ಲ. ಅದಕ್ಕೇ ಅವನು ಮರೆತಿದ್ದಾನೆ. ದಯವಿಟ್ಟು ಕ್ಷಮಿಸಿ."

"ಇಲ್ಲೇ ಪಕ್ಕದ ಬೀದೀಲಿದ್ದಾರೆ. ಇವರು ಶ್ರೀಮತಿ ಯಾಂಗ್......ಆಕೆಗೆ ಒಂದು 'ಬೀನ್‌ಕರ್ಡ್' ಅಂಗಡಿ ಕೂಡಾ ಇದೆ" ಎಂದು ಹೇಳಿದಳು.

ನನಗೆ ಸ್ವಲ್ಪ ನೆನಪಿಗೆ ಬಂತು. ನಾನು ಮಗುವಾಗಿದ್ದಾಗ, ಶ್ರೀಮತಿ ಯಾಂಗ್ ಮೂರು ಹೊತ್ತೂ ಅಂಗಡೀಲಿ ಚೆನ್ನಾಗಿ ಅಲಂಕಾರ ಮಾಡಿಕೊಂಡು ಕೂತಿರುತ್ತಿದ್ದಳು. ಆಗ ಮೂಳೆಗಳು ಈಗಿನಂತೆ ಎದ್ದು ಕಾಣುತ್ತಿರಲಿಲ್ಲ. ಅವಳ ತುಟಿಗಳೂ ಕೂಡಾ ಇಷ್ಟು ತೆಳ್ಳಗೆ ಇರಲಿಲ್ಲ. ಈಗಿನ ಹಾಗೆ ಕಂಪಾಸಿನಂತೆ ಕಾಲುಗಳನ್ನು ಅಗಲಿಸಿ ನಿಂತಿರದೆ, ಯಾವಾಗಲೂ ಕುಳಿತಿರುತ್ತಿದ್ದಳು. ವ್ಯಾಪಾರವೂ ಚೆನ್ನಾಗಿ ಆಗುತ್ತಿತ್ತು. 'ಬೀನ್‌ಕರ್ಡ್' ಅಂಗಡಿ ಅದಾಗಿದ್ದರಿಂದ, ಜನ ಅವಳನ್ನು ಅಲ್ಲಿ ಕಂಡಾಗಲೆಲ್ಲ 'ಬೀನ್‌ಕರ್ಡ್‌ಬ್ಯೂಟಿ' ಅಂತ ಹೆಸರಿಟ್ಟು ಕರೆಯುತ್ತಿದ್ದರು. ಬಹುಶಃ ನನ್ನ ವಯಸ್ಸಿನ ಕಾರಣದಿಂದ ಆಕೆಯ ಪ್ರಭಾವ ನನ್ನ ಮೇಲೆ ಅಷ್ಟಾಗಿ ಆಗಿರಲಿಲ್ಲ. ಆದ್ದರಿಂದಲೇ ಅವಳ ನೆನಪು ನನಗಿಲ್ಲದೆ ಹೋಗಿತ್ತು. ಆದರೆ ಅವಳು ಮಾತ್ರ ನನ್ನ ಕಡೆ ಒಂಥರಾ ತಿರಸ್ಕಾರದಿಂದ ನೋಡಿದಳು. ಫ್ರೆಂಚ್ ಜನ ನೆಪೋಲಿಯನ್‌ನನ್ನು ನೋಡಿಲ್ಲವೆಂದರೆ ಹೇಗೋ, ಅಮೆರಿಕನ್ ಆದವನು ವಾಷಿಂಗ್‌ಟನ್ ನೋಡಿಲ್ಲವೆಂದರೆ ಹೇಗೋ ಹಾಗೆ ನಾನು ಎಂದು ಅವಳಿಗೆ ಅನಿಸಿರಬೇಕು. ವ್ಯಂಗ್ಯವಾಗಿ ನಗುತ್ತ ಹೇಳಿದಳು.

"ನನ್ನ ನೆನಪಿಲ್ಲ?...... ಹೌದು ನಿನ್ನ ನೆನಪಿನಲ್ಲಿ ಉಳಿಯುವಷ್ಟು ದೊಡ್ಡವಳಲ್ಲ. ನಾನು!....."

"ಹಾಗೇನಿಲ್ಲ......... ನಾನು........... ನಾನು............" ಹೆದರಿಕೆಯಿಂದ ಎದ್ದು ನಿಂತೆ.

"ಹಾಗಾದರೆ ಕೇಳಿಸಿಕೋ ಷುನ್, ನೀನು ಬಹಳ ಶ್ರೀಮಂತನಾಗಿದ್ದೀಯ, ಅಲ್ದೆ ಇವು ಸಾಗಿಸುವುದಕ್ಕೆ ಬಹಳ ಭಾರವಾಗಿವೆ. ಅದಕ್ಕೆ ಬಹುಶಃ ಇವು ಈ ಹಳೆ ಪೀಠೋಪಕರಣಗಳು ನಿನಗೆ ಬೇಕಾಗೋದು ಇಲ್ಲ. ನಾನೇ ಇವುಗಳನ್ನು ತೆಗೆದುಕೊಂಡು ಹೋಗಲು ಬಿಡು. ನಮ್ಮಂಥ ಬಡವರಿಗೆ ಏನಾದರೂ ಇದರಿಂದ ಮಾಡಿಕೊಳ್ಳೋಕೆ ಆಗುತ್ತೆ."

"ನಾನೇನೂ ಶ್ರೀಮಂತನಾಗಿಲ್ಲ. ಇವುಗಳನ್ನೆಲ್ಲ ಮಾರುವುದರಿಂದ ನನಗೆ ಉಳಿದವುಗಳನ್ನು ಕೊಳ್ಳಲು....."

"ಆಹ್, ಸಾಕು ಸುಮ್ಮನಿರು. ನೀನು ಸರ್ಕೀಟನ ಮೇಲ್ವಿಚಾರಕನಾಗಿರುವಾಗ ಶ್ರೀಮಂತ ಅಲ್ಲ ಅಂದರೆ ಹೇಗೆ ನಂಬೋದು? ನೀನು ಈಗಾಗಲೇ ಮೂರು ಜನರನ್ನು ಇಟ್ಕೊಂಡಿದ್ದೀಯ. ಎಲ್ಲಿಯಾದರೂ ಹೋಗಬೇಕೆಂದರೆ ಎಂಟು ಜನ ಹೊರುವ ಪಲ್ಲಕ್ಕಿ ಕುರ್ಚಿ ಇದೆ. ಅಂಥಾದ್ದರಲ್ಲಿ ನೀನು ಶ್ರೀಮಂತ ಅಲ್ಲ ಅಂತೀಯ? ಬಿಡು,.....ನನ್ನಿಂದ ಏನೂ ಮುಚ್ಚಿಡೋಕೆ ನಿನಗೆ ಸಾಧ್ಯವಾಗೋದಿಲ್ಲ."

ಇದಕ್ಕೆ ಉತ್ತರ ಹೇಳೋಕೆ ಏನೂ ಇಲ್ಲದಿದ್ದ ಕಾರಣ ಸುಮ್ಮನಾದೆ.

"ಅದಿರಲಿ ಈಗ ಹಣ ಜಾಸ್ತಿ ಇದ್ದಷ್ಟೂ ಜನ ಜಿಪುಣರಾಗುತ್ತಾರೆ. ಜಿಪುಣರಾದಷ್ಟೂ ಹಣ ಹೆಚ್ಚಾಗುತ್ತೆ." ಅಂತ ಹೇಳುತ್ತಾ ಕಂಪಾಸ್, ತಿರಸ್ಕಾರದಿಂದ ಅಲ್ಲಿಂದ ನಿಧಾನವಾಗಿ ಹೆಜ್ಜೆ ಹಾಕುತ್ತ ಹೊರಟಳು. ಹಾಗೇನೆ ಮೆಲ್ಲಗೆ ತಾಯಿಯ 'ಗ್ಲೌವ್ಸ್' ಎರಡನ್ನು ಎತ್ತಿ ಜೇಬಿನೊಳಕ್ಕೆ ಜಾರಿಸಿ ನಡೆದಳು.

ಇದಾದ ಮೇಲೆ ನೆರೆಹೊರೆಯಲ್ಲಿದ್ದ ನನ್ನ ಅನೇಕ ಬಂಧುಗಳು ನಮ್ಮನ್ನು ಕರೆಯುವುದಕ್ಕಾಗಿ ಬಂದರು. ಅವರ ಜೊತೆ ಮಾತಾಡುತ್ತಲೇ ಮಧ್ಯೆ ಮಧ್ಯೆ ಪ್ಯಾಕಿಂಗ್ ಕೂಡ ಮಾಡುತ್ತಿದ್ದೆ. ಹೀಗೇ ಮೂರು ನಾಲ್ಕು ದಿನಗಳು ಸರಿದು ಹೋದವು.

ಚಳಿಗಾಲದ ಒಂದು ಮಧ್ಯಾಹ್ನ, ಊಟ ಆದ ಮೇಲೆ ಚಹಾ ಕುಡಿಯುತ್ತ ಕುಳಿತಿದ್ದಾಗ, ಯಾರೋ ಬಂದ ಹಾಗೆ ಆಯಿತು. ಯಾರೂಂತ ನೋಡಲು ತಿರುಗಿದೆ. ನೋಡಿದ ಕೂಡಲೇ ಎದ್ದು ನಿಂತು ನನಗೆ ತಿಳಿಯದಂತೆಯೇ ಆತುರಾತುರವಾಗಿ ನಡೆದು ವ್ಯಕ್ತಿಯನ್ನು ಸ್ವಾಗತಿಸಲು ಮುಂದಾದೆ.

ಬಂದ ಅಪರಿಚಿತ ವ್ಯಕ್ತಿ ಬೇರೆ ಯಾರೂ ಆಗದೆ ಯೂನ್-ತು ಆಗಿದ್ದ. ಅವನು ಯೂನ್-ತು ಅಂತ ಅನಿಸಿದರೂ, ಹಿಂದೆ ನೋಡಿದ್ದ ಯೂನ್-ತು ಆಗಿರಲಿಲ್ಲ. ಮೊದಲಿದ್ದುದಕ್ಕಿಂತ ಎರಡು ಪಟ್ಟು ಊದಿದ್ದ. ಅವನ ದುಂಡು ಮುಖ ಈಗ ಕೆಂಪಾಗಿರಲಿಲ್ಲ. ಸೊರಗಿ ಪಾಂಡು ವರ್ಣಕ್ಕೆ ತಿರುಗಿತ್ತು. ಮುಖದ ಮೇಲೆಲ್ಲ ವಯಸ್ಸನ್ನು ಸೂಚಿಸುವ ಸುಕ್ಕುಗಳು ಕಾಣಿಸುತ್ತಿದ್ದವು. ಅವನ ಕಣ್ಣುಗಳೂ ಅವನ ತಂದೆಯ ಕಣ್ಣುಗಳಂತೆ ಆಗಿದ್ದವು. ಕಣ್ಣಿನ ಸುತ್ತ ಸ್ವಲ್ಪ ಊದಿಕೊಂಡಂತಿತ್ತು. ಸಾಮಾನ್ಯವಾಗಿ ಸಮುದ್ರ ದಂಡೆಯಲ್ಲಿದ್ದು, ಕೃಷಿ ಮಾಡುತ್ತ, ಗಾಳಿ, ಮಳೆ, ಚಳಿ, ಬಿಸಿಲಿಗೆ ಒಡ್ಡಿಕೊಂಡಿರುತ್ತಿದ್ದ ರೈತರೆಲ್ಲರಲ್ಲೂ ಕಾಣಿಸುತ್ತಿದ್ದ ಲಕ್ಷಣಗಳು ಇವಾಗಿದ್ದವು. ಕೊಳಕಾದ ಒಂದು ಫೆಲ್ಟ್ ಟೋಪಿಯನ್ನೂ ಜಾಕೆಟ್ಟನ್ನೂ ಧರಿಸಿದ್ದ. ಇದರಿಂದಾಗಿ ಅಡಿಯಿಂದ ಮುಡಿವರೆಗೆ ಒಂದು ಥರ ನಡುಗುತ್ತಿದ್ದ. ಒಂದು ಕೈಯಲ್ಲಿ ಕಾಗದದ ಪೊಟ್ಟಣ ಮತ್ತು ಉದ್ದನೆಯ ಪೈಪ್ ಹಿಡಿದುಕೊಂಡಿದ್ದ ಹಿಂದಿನ ದುಂಡನೆಯ, ದಪ್ಪನೆಯ ಕೈಗಳು ಅವಾಗಿರಲಿಲ್ಲ. ಈಗ ಆ ಕೈಗಳು ಒರಟೊರಟಾಗಿ ಕತ್ತರಿಸಿದ ಪೈನ್ ಮರದ ತೊಗಟೆಯಂತೆ ಕಾಣುತ್ತಿದ್ದವು.

ನನಗಾದ ಸಂತೋಷವನ್ನು ಹೇಗೆ ತೋರಿಸಿಕೊಳ್ಳಬೇಕು ಅನ್ನೋದು ಗೊತ್ತಾಗಲೇ ಇಲ್ಲ.

"ಓಹ್! ಯೂನ್-ತು! ನೀನಾ?" ಎಂದು ಅಚ್ಚರಿಯಿಂದ ಕೇಳಿದೆ.

ಇದಾದ ಮೇಲೆ ಅವನ ಜೊತೆ ಎಷ್ಟೊಂದೆಲ್ಲ ಮಾತಾಡಬೇಕೆಂದಿದ್ದೆ. ಒಂದೇ ಸಮನೆ ಸರಗಳಿಂದ ಉದುರಿದ ಮುತ್ತುಗಳಂತೆ ಉದುರುವ ಸಾಧ್ಯತೆಯಿತ್ತು. ಕಾಡುಕೋಳಿಗಳು, ಕಪ್ಪೆಚಿಪ್ಪುಗಳು, ಝಾ, ಜಿಗಿಯುವ ಮೀನು, ಹೀಗೆ ಎಷ್ಟೊಂದು!!

ಆದರೆ ಅವೆಲ್ಲವನ್ನು ಹೇಳಲು ನನ್ನ ನಾಲಿಗೆ ಹೊರಳಲೇ ಇಲ್ಲ. ಅದನ್ನೆಲ್ಲ ಯಾವ ರೀತಿ ಶಬ್ದಗಳಲ್ಲಿ ಅಭಿವ್ಯಕ್ತಿಸಬೇಕೆಂದೇ ತಿಳಿಯಲಿಲ್ಲ.

ಅವನು ನನ್ನೆದುರು ನಿಂತ. ಅವನ ಮುಖದಲ್ಲಿ ಸಂತೋಷ ದುಃಖಗಳು ಬೆರೆತ ಭಾವ ಕಾಣಿಸುತ್ತಿತ್ತು. ತುಟಿಗಳು ಅಲುಗಾಡಿದವೇ ಹೊರತು ಧ್ವನಿ ಹೊರಡಲಿಲ್ಲ. ಕಡೆಗೆ ಗೌರವ ಬೆರೆತ ಧ್ವನಿಯಲ್ಲಿ ಸ್ಪಷ್ಟವಾಗಿ,

"ಮಾಸ್ಟರ್" ಎಂದ.

ಸಣ್ಣದಾಗಿ ನಡುಕದ ಅನುಭವವಾಯಿತು. ನಮ್ಮಿಬ್ಬರ ನಡುವೆ ಭಯಂಕರ ಅಂತರದ ದಪ್ಪಗೋಡೆ ಎದ್ದಿರುವುದು ನನಗೆ ಗೋಚರಿಸಿತು. ಆದರೂ ನನಗೆ ಏನೂ ಹೇಳಲಾಗಲಿಲ್ಲ.

ಅವನು ತಿರುಗಿ ಹೇಳಿದ:

"ಷ್ವಿ ಷೆಂಗ್ ಮಾಸ್ಟರ್‌ಗೆ ನಮಸ್ಕರಿಸುತ್ತಿದ್ದಾನೆ" ಎಂದು. ಅವನು ತನ್ನ ಹಿಂದೆ ಅಡಗಿ ನಿಂತಿದ್ದ ಹುಡುಗನನ್ನು ಮುಂದಕ್ಕೆ ಎಳೆದು ನಿಲ್ಲಿಸಿದ. ಇಪ್ಪತ್ತು ವರ್ಷಗಳ ಹಿಂದೆ ಯೂನ್‌ತು ಹೇಗಿದ್ದನೋ ಹಾಗೆ ಇದ್ದ. ಆದರೆ ಸ್ವಲ್ಪ ಪೇಲವವಾಗಿ ಸಪೂರವಾಗಿದ್ದ. ಕತ್ತಿನಲ್ಲಿ ಬೆಳ್ಳಿಯ ಯಾವುದೇ ಅಡ್ಡಿಗೆಯಂಥಾದ್ದು ಇರಲಿಲ್ಲ.

"ಇವನು ನನ್ನ ಐದನೆಯವನು.....ಅವನಿಗೆ ಯಾರ ಜೊತೆಗೂ ಬೆರೆತು ಅಭ್ಯಾಸ ಇಲ್ಲ. ಅದಕ್ಕೇ ಸ್ವಲ್ಪ ಸಂಕೋಚ, ಹಿಂಜರಿಕೆ." ಎಂದು ವಿವರಿಸಿದ.

ತಾಯಿ ಹೂಂಗ್‌ರ್ಹನನ್ನು ಜೊತೆಯಲ್ಲಿರಿಸಿಕೊಂಡು ಕೆಳಗೆ ಬಂದಳು. ಬಹುಶಃ ನಮ್ಮ ಮಾತುಗಳು ಕೇಳಿಸಿರಬೇಕು.

"ಸ್ವಲ್ಪ ದಿವಸದ ಹಿಂದೆ ನಿಮ್ಮ ಪತ್ರ ಬಂತು ಮೇಡಂ. ಮಾಸ್ಟರ್ ಬರ್ತದ್ದಾರೇಂತ ತಿಳಿದು ನನಗೆ ಬಹಳ ಸಂತೋಷವಾಯಿತು......"

"ನೀನ್ಯಾಕೆ ಇಷ್ಟೊಂದು ವಿನಯವಾಗಿದ್ದೀಯಾ? ಹಿಂದೆ ನೀವಿಬ್ಬರೂ ಜೊತೆಗಾರರಾಗಿರಲಿಲ್ಲವೇ?" ತಾಯಿ ನಗುತ್ತಾ ಕೇಳಿದಳು. "ಮೊದಲಿನ ಹಾಗೆ ಸಲುಗೆಯಿಂದ ಸೋದರ ಷುನ್ ಅಂತ ಕರೆಯೋದೇ ಒಳ್ಳೆಯದು."

"ಓಹ್...ನೀವು......ಹಾಗೆ ಮಾಡೋದು ಸರಿಯಾದ ನಡವಳಿಕೆ ಆಗಲಾರದು. ಒಂದೆ ಅಂದ್ರೆ ಗೊತ್ತಿರಲಿಲ್ಲ. ಚಿಕ್ಕವನಾಗಿದ್ದೆ ಬೇರೆ." ಇದನ್ನು ಹೇಳುತ್ತ ಯೂನ್–ತು ಷ್ವಿ–ಷೆಂಗ್‌ನನ್ನು ಮುಂದಕ್ಕೆ ಬಂದು ನಮಸ್ಕರಿಸಲು ಸೂಚಿಸಿದ. ಆದರೆ ಮಗು ನಾಚಿಕೆ ಸಂಕೋಚಗಳಿಂದ, ತಂದೆಯ ಹಿಂದೆ ನಿಂತಲ್ಲಿಯೇ ಕಂಬದ ಹಾಗೆ ನಿಂತಿದ್ದ.

"ಹೂಂ! ಹಾಗಾದರೆ ಇದು ಐದನೆಯದು? ಇವನೇ ಷ್ವಿ-ಷೆಂಗ್ ಹೌದಲ್ಲ? ತಾಯಿ ಕೇಳಿದಳು.

"ನಾವೆಲ್ಲ ಅಪರಿಚಿತರು. ಅವನಿಗೆ ಸಂಕೋಚ. ಆದರೆ ಅವನನ್ನೇಕೆ ಬೈಬೇಕು ಹೂಂಗ್‌ರ್ಥೆ ಜೊತೆ ಹೊರಗೆ ಆಟ ಆಡಿಕೊಳ್ಳಲಿ."

ಹೂಂಗ್-ರ್ಥೆ ಇದನ್ನು ಕೇಳಿದ್ದೇ ತಡ ಷ್ವಿ-ಷೆಂಗ್ ಬಳಿಗೆ ಹೋದ. ಷ್ವಿ-ಷೆಂಗ್ ಅವನ ಜೊತೆ ಸೇರಿ ಸಲೀಸಾಗಿ, ಸಂಕೋಚವಿಲ್ಲದೆ ಹೊರಗೆ ಹೋದ. ತಾಯಿ ಅವನಿಗೆ ಕುಳಿತುಕೊಳ್ಳಲು ಹೇಳಿದಳು. ಸ್ವಲ್ಪ ಸಂಕೋಚದಿಂದಲೇ ಕುಳಿತುಕೊಂಡ. ಉದ್ದನೆಯ ಪೈಪನ್ನು ಮೇಜಿಗೆ ಆನಿಸಿಟ್ಟು, ಕಾಗದದ ಪೊಟ್ಟಣವನ್ನು ನೀಡಿದ ಮತ್ತು ಹೇಳಿದ:

"ಚಳಿಗಾಲದಲ್ಲಿ ತರೋದಕ್ಕೆ ಯೋಗ್ಯವಾದದ್ದು ಏನೂ ಸಿಕ್ಕುವುದಿಲ್ಲ. ಆದರೂ ಈ ಬೀನ್ಸ್ ಒಣಗಿಸಿರೋದನ್ನು ತಂದಿದ್ದೇನೆ. ತಾವು ಅನ್ಯಥಾ ಭಾವಿಸಬಾರದು. ಈ ರೀತಿ ಸಲುಗೆ ತೆಗೆದುಕೊಂಡಿದ್ದಕ್ಕೆ."

ಮನೆಯಲ್ಲಿ ಎಲ್ಲ ಹೇಗಿದೆ ಅಂತ ವಿಚಾರಿಸಿದ್ದಕ್ಕೆ ಅವನು ತಲೆಯಾಡಿಸಿದ.

"ಬಹಳ ಕಷ್ಟವಾಗಿದೆ. ಆರನೇದೂ ದುಡಿಯುತ್ತೆ. ಆದರೂ ತಿನ್ನೋಕೆ ಏನೇನೂ ಸಾಲದು. ಜೊತೆಗೆ ಸುಭದ್ರತೆ ಕೂಡಾ ಇಲ್ಲ. ಎಲ್ಲ ಥರದ ಜನಕ್ಕೂ ಹಣ ಬೇಕು. ಯಾವುದೇ ಸರಿಯಾದ ನೀತಿ ನಿಯಮ ಇಲ್ಲ....ಬೆಳೆ ಸರಿಯಾಗಿಲ್ಲ. ಕಷ್ಟಪಟ್ಟು ಬೆಳೆದದ್ದನ್ನು ಮಾರಲು ತೆಗೆದುಕೊಂಡು ಹೋದರೆ ಆ ತೆರಿಗೆ ಈ ತೆರಿಗೆ ಅಂತ ಒಂದಷ್ಟು ಹಣ ನಷ್ಟ. ಮಾರೋದು ಬೇಡ ಅಂದುಕೊಂಡು ಇಟ್ಟುಕೊಂಡರೆ ಎಲ್ಲ ಹಾಳಾಗುತ್ತೆ....."

ಅವನು ನಿರಾಶೆ, ಹತಾಶೆಯಿಂದ ತಲೆಯಾಡಿಸುತ್ತಿದ್ದ. ಆದರೆ ಅವನ ಮುಖದಲ್ಲಿನ ಸುಕ್ಕುಗಳೊಂದೂ ಅಲುಗಾಡಲಿಲ್ಲ. ಬಹುಶಃ ಅವನು ಕಲ್ಲಿನ ಮೂರ್ತಿಯೋ ಎಂಬಂತೆ ಇದ್ದ. ಅವನ ಮನಸ್ಸಿಗೆ ತೀರ ಕಹಿ ಎನಿಸುತ್ತಿದ್ದರೂ ಅದನ್ನು ಅವನಿಗೆ ತೋರಿಸಿಕೊಳ್ಳಾಗುತ್ತಿರಲಿಲ್ಲ. ಸ್ವಲ್ಪ ಹೊತ್ತಿನ ನಂತರ, ತನ್ನ ಪೈಪನ್ನು ಕೈಗೆತ್ತಿಕೊಂಡು, ಮೌನವಾಗಿ ಧೂಮಸೇವನೆಗೆ ತೊಡಗಿದ.

ತಾಯಿ ಜೊತೆಗಿನ ಹರಟೆಯಿಂದ, ಮನೆಯಲ್ಲಿ ತುಂಬ ಕೆಲಸ ಕಾರ್ಯ ಇರೋದ್ರಿಂದ, ಮರುದಿವಸವೇ ಹೋಗಬೇಕಾಗಿದೆ ಅನ್ನೋ ವಿಷಯ ತಿಳಿದು ಬಂತು. ಅವನದು ಇನ್ನೂ ಊಟವಾಗಿರಲಿಲ್ಲವಾದ ಕಾರಣ ಅವನನ್ನು ಅಡಿಗೆ ಮನೆಗೆ ಹೋಗಿ ತಾನೇ ಒಂದಷ್ಟು ಅನ್ನ ಬೇಯಿಸಿಕೊಂಡು ತಿನ್ನಲು ಸೂಚಿಸಿದಳು.

ಅವನು ಹೊರಗೆ ಹೋದ ಮೇಲೆ, ನಾನು ಮತ್ತು ನನ್ನ ತಾಯಿ ಅವನ ಕಷ್ಟಕ್ಕಾಗಿ ಮರುಗಿದೆವು. 'ಎಷ್ಟೊಂದು ಮಕ್ಕಳು, ತೆರಿಗೆಗಳು, ಕ್ಷಾಮ, ಸಿಪಾಹಿಗಳು, ಕಳ್ಳಕಾಕರು, ಅಧಿಕಾರಿಗಳು, ಜಮೀನುಗಳ್ಳವರು, ಎಲ್ಲರೂ ಅವನನ್ನು ಹೇಗೆ ಸುಲಿಗೆ ಮಾಡಿದ್ದಾರೆ' ಎಂದುಕೊಂಡೆವು. "ನಮಗೆ ತೆಗೆದುಕೊಂಡು ಹೋಗಲು ಆಗದಿರುವ ವಸ್ತುಗಳನ್ನು ಅವನಿಗೆ ಕೊಟ್ಟು ಹೋಗಬೇಕು. ಅವನೇ ತನಗೆ ಬೇಕಾದ್ದನ್ನು ಆರಿಸಿಕೊಳ್ಳಲಿ." ಎಂದು ತಾಯಿ ಸೂಚಿಸಿದಳು.

ಮಧ್ಯಾಹ್ನ, ಅವನು ತನಗೆ ಬೇಕೆನಿಸಿದ ವಸ್ತುಗಳನ್ನು ಆರಿಸಿಕೊಂಡ. ಎರಡು ಉದ್ದನೆಯ ಮೇಜುಗಳು, ಧೂಪದ ಬಟ್ಟಲು, ಮೊಂಬತ್ತಿ ಕಂಬಗಳು, ತಕ್ಕಡಿ, ಹೀಗೆಲ್ಲ ಆರಿಸಿಕೊಂಡ. ಜೊತೆಗೆ ಉರಿಸಿ ಬಿಟ್ಟ ಒಲೆ ಬೂದಿಯನ್ನೂ (ಗೊಬ್ಬರವಾಗಿ ಉಪಯೋಗಿಸಲು) ಕೇಳಿ ಪಡೆದುಕೊಂಡ. ನಾವು ಖಾಲಿ ಮಾಡಿ ಹೋದ ಮೇಲೆ ತಾನು ಬಂದು ಇವೆಲ್ಲವನ್ನೂ ದೋಣಿಯಲ್ಲಿ ಸಾಗಿಸುವುದಾಗಿ ಹೇಳಿದ.

ಆ ದಿನ ರಾತ್ರಿಯೆಲ್ಲ ಮಾತಾಡುತ್ತಿದ್ದೆವಾದರೂ ನಮ್ಮ ಮಾತು ಅಷ್ಟೊಂದು ಗಂಭೀರವಾದ್ದಾಗಿರಲಿಲ್ಲ. ಮರುದಿವಸ ಬೆಳಿಗ್ಗೆ ಷ್ವಿ-ಷೆಂಗ್‌ನೊಂದಿಗೆ ಅವನು ನಮ್ಮ ಮನೆಯಿಂದ ಹೊರಟ.

ಇನ್ನೊಂದು ಒಂಬತ್ತು ದಿವಸಗಳ ನಂತರ ನಮಗೂ ಹೊರಡುವ ಸಮಯ ಬಂತು. ಯೂನ್-ತು ಬೆಳಿಗ್ಗೆ ಬಂದ. ಷ್ವಿ-ಷೆಂಗ್ ಜೊತೆಗೆ ಇರಲಿಲ್ಲ. ದೋಣಿಯನ್ನು ತೋರಿಸಲೆಂದು ಐದು ವರುಷದ ಪುಟ್ಟ ಹುಡುಗಿಯನ್ನು ಕರೆತಂದಿದ್ದ. ನಾವೆಲ್ಲ ಬಹಳ ಕೆಲಸದಲ್ಲಿದ್ದುದರಿಂದ ಮಾತಾಡಲು ಬಿಡುವಿರಲಿಲ್ಲ. ಮನೆಯಲ್ಲಿ ತುಂಬ ಜನ ಅತಿಥಿಗಳಿದ್ದರು. ಕೆಲವರು ಬೀಳ್ಕೊಡಲು ಬಂದಿದ್ದರು. ಮತ್ತೆ ಕೆಲವು ವಸ್ತುಗಳನ್ನು ತೆಗೆದುಕೊಂಡು ಹೋಗಲು, ಇನ್ನುಳಿದವರು ನಮ್ಮನ್ನು ಭೇಟಿ ಮಾಡಲು ಮತ್ತು ವಸ್ತುಗಳನ್ನು ಒಯ್ಯಲು ಬಂದವರಾಗಿದ್ದರು. ನಾವು ದೋಣಿಯಲ್ಲಿ ಹೊರಟಾಗ ಸಂಜೆಯಾಗಿತ್ತು. ಅಷ್ಟು ಹೊತ್ತಿಗೆ ಮನೆಯಲ್ಲಿದ್ದ ಹಳೆ ಪಳೆ ಸಾಮಾನು, ಚಿಕ್ಕದು ದೊಡ್ಡದು ಎಲ್ಲಾ ಖಾಲಿಯಾಗಿತ್ತು.

ನಾವು ಹೊರಟಾಗ ಮುಸ್ಸಂಜೆ ಆಗಿದ್ದುದರಿಂದ ನದಿಯ ಆಚೀಚೆಯ ಹಸಿರು ಬೆಟ್ಟಗಳು ದಟ್ಟ ನೀಲಿಯಾಗಿ ಕಾಣಿಸುತ್ತಾ, ದೂರ ಸರಿದಂತೆ ಕರಗುತ್ತಿದ್ದವು.

ಹೂಂಗ್-ರ್ಹೆ ಮತ್ತು ನಾನು ಕ್ಯಾಬಿನ್ನಿನ ಕಿಟಕಿಗೆ ಒರಗಿ ಕುಳಿತಿದ್ದು, ದೂರದಲ್ಲಿನ ಅಸ್ಪಷ್ಟ ದೃಶ್ಯವನ್ನು ನೋಡುತ್ತಿದ್ದೆವು. ಮಧ್ಯೆ ಇದ್ದಕ್ಕಿದ್ದಂತೆ ಹೂಂಗ್‌ರ್ಹೆ ಕೇಳಿದ, "ಅಂಕಲ್, ಮತ್ತೆ ನಾವು ಯಾವಾಗ ವಾಪಸ್ಸು ಹೋಗೋದು?"

"ವಾಪಸ್ಸು ಹೋಗೋದೇ? ಅಂದ್ರೆ ನಾವು ಇನ್ನೂ ಬಿಡೋಕೆ ಮುಂಚೇನೇ ವಾಪಸ್ಸು ಹೋಗಬೇಕೆ?"

"ಏನಿಲ್ಲ. ಷ್ವಿ-ಷೆಂಗ್ ನನ್ನನ್ನು ಅವರ ಮನೆಗೆ ಕರೆದಿದ್ದಾನೆ." ಹೇಳುತ್ತಾ ವಿಶಾಲವಾದ ಕಪ್ಪು ಕಣ್ಣುಗಳನ್ನು ಅರಳಿಸಿ ಕಾತರತೆಯಿಂದ ಕೂಡಿರುವಂತೆ ಕಾಣಿಸಿದ.

ನನಗೂ ನನ್ನ ತಾಯಿಗೂ ತುಂಬ ದುಃಖವೆನಿಸಿತು. ಮತ್ತೆ ಯೂನ್-ತು ಪ್ರಸ್ತಾಪ ಬಂತು. ತಾಯಿ ಹೇಳಿದಳು. ತಾವು ಹೊರಡಬೇಕೂಂತ ಅಂದುಕೊಂಡು ಸಾಮಾನೆಲ್ಲ ಪ್ಯಾಕ್ ಮಾಡೋಕೆ ಶುರುಮಾಡಿದ ದಿನದಿಂದ, ಪ್ರತಿದಿನ ಶ್ರೀಮತಿ ಯಾಂಗ್ ಬಂದು ಬಂದು ಹೋಗುತ್ತಿದ್ದವಳು, ಹಿಂದಿನ ದಿನವಷ್ಟೇ ಬಂದು ಬೂದಿರಾಶಿಯಿಂದ ಒಂದಷ್ಟು ಪಾತ್ರೆಗಳು, ತಟ್ಟೆಗಳು ಮೊದಲಾದವನ್ನು ಹುಡುಕಿ ತೆಗೆದದ್ದು, ನಾವೆಲ್ಲ ಹೋದ ಮೇಲೆ ತೆಗೆದುಕೊಂಡು ಹೋಗಬೇಕೂಂತ ಯೂನ್-ತುನೇ ಹೀಗೆಲ್ಲ ಬಚ್ಚಿಟ್ಟಿರಬೇಕೆಂದು ವಾದಿಸಿದ್ದು, ಇದನ್ನು ಪತ್ತೆ ಹಚ್ಚಿದ ಮೇಲೆ ಯಾಂಗ್‌ಗೆ ಬಹಳ ಖುಷಿ ಎನಿಸಿದ್ದು, ಹಾಗೂ ಹೀಗೂ ಡಾಗ್‌ಟೀಸರ್ ತಮ್ಮಲ್ಲಿ ಇರಿಸಿಕೊಳ್ಳುತ್ತಿದ್ದರು. ಇದು ಒಂದು ರೀತಿಯ ಮರದ ಬೋನು ಇದ್ದ ಹಾಗೆ. ಇದರಲ್ಲಿ ಆಹಾರ, ಕಾಳು ಗೀಳು ಹಾಕಿ. ಕೋಳಿಗಳನ್ನು ಹಿಡೀತಿದ್ದರು. ಅದನ್ನು ತೆಗೆದುಕೊಂಡು ಎಷ್ಟು ಜೋರಾಗಿ ಹೆಜ್ಜೆ ಹಾಕಿದಳೆಂದರೆ, ಆಶ್ಚರ್ಯವಾಗುತ್ತಿತ್ತು ಎಂದು ತಿಳಿಸಿದಳು.

ಹಳೆ ಮನೆಯಿಂದ ದೂರ ದೂರ ಸಾಗುತ್ತಿದ್ದೆ. ಅದರೊಂದಿಗೆ ಬೆಟ್ಟ ಗುಡ್ಡಗಳು, ನದಿಗಳು ಕೂಡಾ ದೂರ ಸಾಗಿದಂತೆ ಕಣ್ಮರೆಯಾಗುತ್ತಿದ್ದವು. ಯಾವುದೋ ಒಂದು ಅದೃಶ್ಯ ಗೋಡೆಯೆದ್ದು ನನ್ನವರಿಂದ ನನ್ನನ್ನು ದೂರಮಾಡುತ್ತಿದೆ ಎನಿಸಿ ಮನಸ್ಸಿಗೆ ದುಃಖವಾಯಿತು. ತನ್ನ ಕತ್ತಿನ ಸುತ್ತ ಇರಿಸಿಕೊಂಡಿದ್ದ ಬೆಳ್ಳಿ ಪಟ್ಟಿಯ ಆ ಹೀರೋ ಕಲ್ಲಂಗಡಿ ರಾಶಿಯ ಮಧ್ಯೆ ನಿಂತಿದ್ದ ದೃಶ್ಯ ಸ್ಪಷ್ಟವಾಗಿ ಕಣ್ಮುಂದೆ ಹಾದು ಹೋಯಿತು. ಆದರೆ ಈಗ ಆ ದೃಶ್ಯ ಮಸುಕಾಗಿ, ನನ್ನೆದೆಯೊಳಗಿನ ಭಾರ ಮತ್ತಷ್ಟು ಹೆಚ್ಚಾಯಿತು.

ತಾಯಿ ಮತ್ತು ಹೂಂಗ್-ರ್ಹೆ ನಿದ್ದೆಗಿಳಿದಿದ್ದರು. ನಾನೂ ಹಾಗೇ ಮೈ ಚಾಚಿದೆ. ದೋಣಿಗೆ ಬಡಿಯುತ್ತಿದ್ದ ನೀರಿನ ಅಲೆಗಳ ಸದ್ದು ಕೇಳಿಸುತ್ತಿತ್ತು. ನಾನು ನನ್ನ ದಾರಿಗೆ ಹೋಗುತ್ತಿದ್ದೇನೆ ಎನಿಸಿತು. ನನ್ನ ಮತ್ತು ಯೂನ್-ತು ನಡುವೆ ಅಂತರವಿದ್ದರೂ ಮಕ್ಕಳಲ್ಲಿ ಮಾತ್ರ ಸಮಾನತೆಯಿತ್ತು. ಈ ಕ್ಷಣವೂ ಹೂಂಗ್-ರ್ಹೆ ಷ್ವಿ-ಷೆಂಗ್ ಬಗ್ಗೆ ಯೋಚಿಸುತ್ತಿಲ್ಲವೇ? ಅವರಿಬ್ಬರ ನಡುವೆ ನಮ್ಮಂತೆ ಆಗದೆ ಹೋಗಲಿ. ಯಾರದೇ ಅಂತರದ ಗೋಡೆಗಳು ಎದ್ದು ನಿಲ್ಲದಿರಲಿ. ಅವರಿಬ್ಬರೂ ಒಂದೇ ಥರ ಇರೋದು ನನಗೆ ಇಷ್ಟವಿಲ್ಲ. ಅವರು ನನ್ನ ಹಾಗೆ ಯಾಂತ್ರಿಕ ಬದುಕು ಬದುಕುವುದಾಗಲೀ ಯೂನ್-ತು ನಂತೆ ಕಷ್ಟ ಅನುಭವಿಸುತ್ತ ಜಡಗಟ್ಟಿ ಹೋಗುವುದಾಗಲೀ ಬೇಕಾಗಿಲ್ಲ. ಜೊತೆಗೆ ತಮ್ಮೆಲ್ಲ ಶಕ್ತಿ ಸಾಮರ್ಥ್ಯಗಳನ್ನು ಎಲ್ಲರಂತೆ ಹಾಳು ಮಾಡಿಕೊಳ್ಳುವುದೂ ನನಗಿಷ್ಟವಿಲ್ಲ. ನಮ್ಮ ಅನುಭವಕ್ಕೆ ಬರಿಸಿಕೊಳ್ಳಲಾಗದ ಹೊಸ ಬದುಕು ಅವರದಾಗಬೇಕು.

ಭರವಸೆ ಬಗ್ಗೆ ಯೋಚಿಸಿದಾಗ ಸ್ವಲ್ಪ ಭಯವಾಯಿತು. ಅವನು ಧೂಪ ಪಾತ್ರೆ, ಮೋಂಬತ್ತಿ ಕಂಬಗಳಿಗಾಗಿ ಕೇಳಿದಾಗ ನನಗೆ ನಗು ಬಂದಿತ್ತು. ಅವನು ಇನ್ನೂ ದೇವರ ಬಗ್ಗೆ ಯೋಚಿಸುತ್ತಿದ್ದಾನೆ ಎನ್ನುವ ವಿಚಾರ ಹೊಳೆದು ನಕ್ಕಿದ್ದೆ. ಈಗ ನಾನು ಯೋಚಿಸಿದೆ. ಭರವಸೆ, ಆಸೆ ಎಂಬುದಾದರೂ ಏನು? ಅದೂ ಕೂಡ ನಾನು ಸೃಷ್ಟಿಸಿಕೊಂಡ ಒಂದು ಮೂರ್ತಿ, ವಿಗ್ರಹವೇ ಆಗಿತ್ತು. ವ್ಯತ್ಯಾಸ ಏನೆಂದರೆ, ಅವನ ನಂಬಿಕೆಯ ಮೂರ್ತಿ ಅವನ ಕೈಗೆಟುಕುವ ಹಾಗಿತ್ತು. ನನ್ನದು, ನಾನು ಬಯಸಿದ್ದು ಮಾತ್ರ ಊಹಿಸಿಕೊಳ್ಳಲು ಕಷ್ಟವಾಗಿತ್ತು.

ಜೋಂಪು ಹತ್ತಿದ್ದೇ, ಒಂದು ಬಗೆಯ ತೆಳು ಹಸಿರಿನ ಸಮುದ್ರ ದಂಡೆ ನನ್ನ ಕಣ್ಣ ಮುಂದೆ ಚಾಚಿತ್ತು. ಮೇಲೆ ಹೊಂಬೆಳಕಿನ ಚಂದ್ರ ದಟ್ಟ ನೀಲಿ ಆಕಾಶದಿಂದ ಇಳಿಬಿದ್ದಿದ್ದ. ನಾನು ಯೋಚಿಸಿದೆ – ವಿಶ್ವಾಸ, ಭರವಸೆ ಎನ್ನುವುದು 'ಇದೆ' ಎಂದಾಗಲೀ 'ಇಲ್ಲ' ಎಂದಾಗಲೀ ಹೇಳುವುದು ಸಾಧ್ಯವಿಲ್ಲ. ಇದು ಭೂಮಿಯ ಮೇಲಿನ ರಸ್ತೆಯಂತೆ. ಮೊದಲಿಗೆ ಭೂಮಿ ಮೇಲೆ ರಸ್ತೆಗಳೆಂಬುದು ಇರಲೇ ಇಲ್ಲ. ಜನ ಓಡಾಡಲು ಪ್ರಾರಂಭಿಸಿದಾಗ 'ರಸ್ತೆ' ಹುಟ್ಟಿಕೊಂಡಿತು.

❖ ❖ ❖

ಇದೇ ಲೇಖಕಿಯ ಇತರ ಕೃತಿಗಳು

ಕವನ ಸಂಕಲನಗಳು

೧) ತ್ರಿಶಂಕು
೨) ಏನು ಹೇಳಲಿ ಗೆಳೆಯಾ
೩) ಹಾಡೇನ ಪಾಡೇನ
೪) ಈ ತೆರದ ನಿರೀಕ್ಷೆಯಲ್ಲಿ
೫) ವಸುಂಧರೆಯ ಪ್ರಾಯ
೬) ಸಖ ಬಾ ಸಂಚಾರಕೆ
೭) ಅಕ್ಕನ ವಚನಗಳು (ಇಂಗ್ಲಿಷಿಗೆ ಅನುವಾದ)
೮) ಅಂಬಿಗರ ಚೌಡಯ್ಯ (ಇಂಗ್ಲಿಷಿಗೆ ಅನುವಾದ)
೯) ಪರ್ಷಿಯನ್ ಕವಿತೆಗಳು (ಅಚ್ಚಿನಲ್ಲಿ)

ಕಾದಂಬರಿಗಳು

೧) ಸೌರಭಸೇತು/ಬುವಿಯಿಂದ ಬಾನಿಗೆ
೨) ಹರಿದತ್ತ ಹರಿವ ಚಿತ್ತ
೩) ತಪ್ಪಿದ ಹೆಜ್ಜೆಗಳು
೪) ನಡುವಯಸ್ಸಿನಲ್ಲಿ (ಚೀನೀ ಭಾಷೆಯಿಂದ ಕನ್ನಡಕ್ಕೆ)
೫) ಶಾಲ್ಮಲಿ (ಹಿಂದಿಯಿಂದ ಕನ್ನಡಕ್ಕೆ)
೬) ಸೂರ್ಯಕಾಂತಿಗಳ ಮಡಿಲಲ್ಲಿ (ಇಂಗ್ಲೀಷಿನಿಂದ)
೭) ಪ್ರಾಣಿಗಳ ಪ್ರಭುತ್ವ (ಇಂಗ್ಲೀಷಿನಿಂದ)

ಕಥಾ ಸಂಕಲನಗಳು

೧) ಮಾ ನಿಷಾದ
೨) ಅದೇ ಮುಖ
೩) ಕಾಣದ ದಿಕ್ಕಿನತ್ತ
೪) ಲುಷುನ್‌ರ ಎರಡು ನೀಳ್ಗತೆಗಳು (ಚೀನೀ ಭಾಷೆಯಿಂದ ಕನ್ನಡಕ್ಕೆ)
೫) ಹುಚ್ಚನ ದಿನಚರಿ ಮತ್ತು ಇತರ ಕತೆಗಳು (ಚೀನೀ ಭಾಷೆಯಿಂದ ಕನ್ನಡಕ್ಕೆ)
೬) ಕನ್ನಡ ಕಾವ್ಯ ಪರಂಪರೆಯಲ್ಲಿ ಪ್ರೀತಿಯ ನೆಲೆಗಳು
(ಕನ್ನಡ ಕಾವ್ಯಗಳಲ್ಲಿನ ಪ್ರೀತಿ ಸಂದರ್ಭಗಳ ಕಥಾರೂಪಗಳು)

ಜೀವನ ಚರಿತ್ರೆ

೧) ಮಹಾದೇವಿ ವರ್ಮಾ
೨) ಅಕ್ಕಮಹಾದೇವಿ (ಕನ್ನಡದಿಂದ ಇಂಗ್ಲಿಷ್‌ಗೆ)
೩) ಹರಿಹರನ ಕಾವ್ಯದಲ್ಲಿ ಬಸವಣ್ಣ
೪) ರಾಘವಾಂಕನ ಚಿತ್ರಿಸಿದ ಸಿದ್ಧರಾಮ
೫) ಚಾಮರಸನ ಪ್ರಭುಲಿಂಗ ಲೀಲೆಯಲ್ಲಿ ಅಲ್ಲಮಪ್ರಭು
೬) ನಿಜಗುಣ ಶಿವಯೋಗಿ
೭) ಬಾಲಲೀಲಾ ಮಹಾಂತ ಶಿವಯೋಗಿ
೮) ಮಿನುಗಿ ನಲುಗಿದ ಕಲ್ಪನಾ
೯) ಪೊಟ್ಟಿ ಶ್ರೀರಾಮುಲು (ಇಂಗ್ಲಿಷಿನಲ್ಲಿ)

ನಾಟಕಗಳು

೧) ಪಾಂಚಾಲಿ
೨) ಪಾದ್ರಿಯೊಬ್ಬನ ಕತೆ
೩) ನಗರ ವಧು ಸಾಲವತಿ
೪) ಮತ್ತೊಂದು ಮಹಾಭಾರತ
೫) ಮಿಲನ
೬) ದಂಗೆಯೆದ್ದವಳು
೭) ಪ್ರೇಮ ಸಮಾಧಿ
೮) ಕಟಕಟೆಯಲ್ಲಿ ನಿಂತು (ಅನುವಾದ)
೯) ರಂಗದಂಗಳ (ಸಮಗ್ರ ನಾಟಕಗಳು)

ಪ್ರವಾಸ ಕಥನ

೧) ಸ್ವರ್ಗ ದ್ವೀಪದ ಕನಸಿನ ಬೆನ್ನೇರಿ

ಸಂಶೋಧನೆ – ವಿಮರ್ಶೆ

೧) ಕನ್ನಡದಲ್ಲಿ ಗೀತನಾಟಕಗಳ ಅಧ್ಯಯನ (ಸಂಶೋಧನೆ)
೨) ಸ್ಪಂದನ
೩) ಸಮಾಲೋಚನ
೪) ಅಕ್ಕನ ವಚನಗಳಲ್ಲಿ ಪ್ರತಿಭಟನೆ ಮತ್ತು ಅನುಭಾವ
೫) ಪು.ತಿ.ನ. ಗೀತನಾಟಕಗಳಲ್ಲಿ ತಾತ್ವಿಕ ಚಿಂತನೆಗಳು
೬) ಮಂಥನ
೭) ಸಂಸ್ಕೃತಿ ದನಿಗಳು (ಅಂಕಣ ವಿಮರ್ಶೆ)

ಮಕ್ಕಳ ಸಾಹಿತ್ಯ

೧) ರಾಮಾಯಣ – ಕನ್ನಡ
೨) ರಾಮಾಯಣ – ಕನ್ನಡದಿಂದ ಇಂಗ್ಲಿಷಿಗೆ
೩) ಮಹಾಭಾರತ – ಕನ್ನಡ
೪) ಮಹಾಭಾರತ – ಕನ್ನಡದಿಂದ ಇಂಗ್ಲಿಷಿಗೆ
೫) ಹನುಮಾನ್ (ಅಚ್ಚಿನಲ್ಲಿ)
೬) ಶ್ರೀಕೃಷ್ಣ (ಅಚ್ಚಿನಲ್ಲಿ)
೭) ಪೌರಾಣಿಕ ಏಕಾಂಕಗಳು (ಅಚ್ಚಿನಲ್ಲಿ)
೮) ಬಸವಣ್ಣ
೯) ಪಂಚತಂತ್ರ (ನಾಟಕ ರೂಪಾಂತರ) (ಕನ್ನಡದಲ್ಲಿ)
೧೦) ಪಂಚತಂತ್ರ (ನಾಟಕ ರೂಪಾಂತರ) (ಇಂಗ್ಲಿಷಿನಲ್ಲಿ)
೧೧) ಪುಣ್ಯಕೋಟಿ (ನಾಟಕ)
೧೨) ಕಿಂದರಿಜೋಗಿ (ನಾಟಕ)
೧೩) ಕಾಗಾಯಣ (ನಾಟಕ)



ಡಾ॥ ವಿಜಯಾ ಸುಬ್ಬರಾಜ್ ಸಂಪೂರ್ಣವಾಗಿ ಅಂತರ್ಮುಖಿಗಳು. ಈ ಕಾರಣದಿಂದ ಅವರ ಕನಸುಗಳು, ಅನಿಸಿಕೆಗಳು, ಆಸೆಗಳು ಕವಲು ಕವಲಾಗಿ ಹರಿದು ಬರುತ್ತವೆ. ಇದರಲ್ಲಿ ಭಯವಿದೆ; ನೋವಿದೆ; ಹೆಣ್ಣಿನ ದೌರ್ಬಲ್ಯ ಸಹಿತವಾದ ಬದುಕಿನ ಬಯಕೆಯಿದೆ. ನಾಟಕೀಯತೆ ಕೂಡ ಸ್ವಗತದ ರೀತಿಯಲ್ಲಿ ಸೇರಿಕೊಂಡಿದೆ. ಹೀಗಾದಾಗ ಶೈಲಿಯೂ ಪ್ಯಾಶನೇಟ್ ಆಗಿ ಬರುವುದು ಸಹಜ. ಭಾಷೆಯು ಭಾವನೆಗಳಿಗೆ ಒಗ್ಗುತ್ತಾ ರೂಪ ತಾಳುತ್ತದೆ... ಆದರೂ ನವ್ಯ ಕತೆಗಳಲ್ಲಿ ಕಾಣುವ ಲೈಂಗಿಕ ಸಂಕೇತಗಳಾಗಲಿ, ಸಂದರ್ಭಗಳಾಗಲಿ ಬರುವುದಿಲ್ಲ. ಅಂಥದಕ್ಕೆ ಇವರು ಎಚ್ಚರಿಕೆಯಿಂದ ಅವಕಾಶ ಕೊಡುವುದಿಲ್ಲ. ಆದರೆ ಇವರ ಮಾನಸಿಕ ಸುಪ್ತತೆಯಿಂದ ಸೂಕ್ಷ್ಮವಾದ ಮತ್ತು ಹೆಣ್ಣು ಗಂಡನ್ನು ಬಯಸುವ ನಿರಾಶೆಯಿಂದ ತೊಳಲುವ ಮುಖ್ಯವಾಗಿ ತಾಯಿತನದ ಆಶಯಗಳು ಇಡೀ ಕೃತಿಯಲ್ಲಿಯೇ ಅಂದರೆ ಎಲ್ಲಾ ಕತೆಗಳಲ್ಲೂ ಹಾಸು ಹೊಕ್ಕಾಗಿದೆ. ನನಗೆ ತಿಳಿದ ಮಟ್ಟಿಗೆ ಕನ್ನಡದ ಯಾವುದೇ ಹೆಣ್ಣು ಹೃದಯ ಹೀಗೆ ತೀವ್ರತೆಯಿಂದ ತನ್ನ ಅನುಭವಗಳಿಗೆ ಸ್ವರೂಪವನ್ನು ಕೊಟ್ಟಿರುವ ನೆನಪಿಲ್ಲ. ಇಂತಹ ಶೈಲಿಯಂತೂ ಬೇರೆ ಯಾವ ಸ್ತ್ರೀ ಬರಹಗಾರರಲ್ಲೂ ಇರುವುದಿಲ್ಲ ಎನ್ನಿಸಿದೆ. ಅವರೆಲ್ಲಾ ಸಾಮಾನ್ಯವಾಗಿ ಪೂರ್ಣ ಜಾಗೃತ ಮನಸ್ಸಿನಿಂದ ಕಾರ್ಯನಿರತರಾದವರು. ಈ ವಿಷಯದಲ್ಲಿ ಜಾಗೃತಿ ಮತ್ತು ಆಂತರಂಗಿಕತೆ ಎರಡನ್ನೂ ಅಚ್ಚುಕಟ್ಟಾಗಿ ಬಳಸುವ ಏಕಮಾತ್ರ ಲೇಖಕಿ ಶ್ರೀಮತಿ ವೀಣಾ ಎಲಬುರ್ಗಿಯವರನ್ನು ಬಿಟ್ಟರೆ, ಇನ್ನೂ ಜಾಗೃತಿಯನ್ನು ಸರಿಯಾಗಿ ಬಳಸಿಕೊಳ್ಳಬೇಕಾದವರು ವಿಜಯಾ ಸುಬ್ಬರಾಜ್ ಒಬ್ಬರೇ.

ವಿಜಯಾ ಸುಬ್ಬರಾಜ್‌ರವರು ಮಾನಿಷಾದ, ಬೀಳ್ಕೊಡುಗೆ, ಗಂಟುಗಳು, ನೊಣ ಈ ನಾಲ್ಕು ಘಟನೆಗಳಲ್ಲಿ ಓದುಗರ ಆತ್ಮೀಯತೆಯನ್ನು ಪಡೆದುಕೊಳ್ಳುತ್ತಾರೆ ಎನ್ನಿಸಿದೆ. ಇವುಗಳಲ್ಲಿ ಒಂದೊಂದು ಉದ್ದಿಶ್ಯವೂ ಹೊಳೆಯುವುದರಿಂದ ಈಕೆ ಮನಸ್ಸು ಮಾಡಿದರೆ ಅಂದರೆ ವಿಮರ್ಶಾ ಪ್ರಜ್ಞೆಯನ್ನು ಹರಿತ ಮಾಡಿಕೊಂಡರೆ ಒಳ್ಳೆಯ ಹೊಸ ರೀತಿಯ ಸಣ್ಣ ಕತೆಗಳನ್ನು ರಚಿಸಬಲ್ಲರು ಎನ್ನಿಸುತ್ತದೆ. "ಗಂಟುಗಳು" ನಿಜಕ್ಕೂ ಗಮನಿಸಬೇಕಾದ ಕೃತಿ. ಯುವತಿಯೊಬ್ಬಳಿಗೆ ಬದುಕು ಇಂದಿನ ಪರಿಸರದಲ್ಲಿ ಅದರ ಅಸ್ಪಷ್ಟ ಆಶಯಗಳಲ್ಲಿ ಹಲವು ಬಗೆಯ ಗೋಜಲಿನಲ್ಲಿ ಅರ್ಥವಾಗದ (ಕತೆಯ ಉದ್ದೇಶವೇ ಅದು) ಒಂದು ಮಾಲೆಯಾಗಿ ಕಣ್ಣೆದುರಿಗೆ ತೂಗುತ್ತದೆ. ಈ ಕತೆಯ ವಿಶೇಷವೇ ಇಂಥ ವಸ್ತುವಿನಲ್ಲಿದೆ.

ಕ. ವೆಂ. ರಾಜಗೋಪಾಲ

ಕಣ್ವ ಪಬ್ಲಿಕೇಷನ್ಸ್ ಪ್ರೈವೇಟ್ ಲಿ.
ಬೆಂಗಳೂರು